ಆದಿಲಶಾಹಿ ಸಾಹಿತ್ಯ ಸಂಪುಟ : ೧೦

ರಫೀಯುದ್ದೀನ್ ಇಬ್ರಾಹಿಂ ಶಿರಾಜ ವಿರಚಿತ

# ತಝ್ಕೀರತುಲ್ ಮುಲೂಕ್

ವಚನಪಿತಾಮಹ ಡಾ॥ ಫ.ಗು. ಹಳಕಟ್ಟಿ ಸಂಶೋಧನ ಕೇಂದ್ರ
ಬಿ.ಎಲ್.ಡಿ.ಇ. ಸಂಸ್ಥೆ, ವಿಜಯಪುರ

ಆದಿಲಶಾಹಿ ಸಾಹಿತ್ಯ ಸಂಪುಟ : ೧೦

ರಫೀಯುದ್ದೀನ್ ಇಬ್ರಾಹಿಂ ಶಿರಾಜಿ
ವಿರಚಿತ

# ತಝ್ಕಿರತುಲ್ ಮುಲೂಕ್

ಆದಿಲಶಾಹಿ ಸಾಹಿತ್ಯ ಸಂಪುಟ : ೧೦

ರಫೀಯುದ್ದೀನ್ ಇಬ್ರಾಹಿಂ ಶಿರಾಜಿ
ವಿರಚಿತ

# ತಝ್ಕೀರತುಲ್ ಮುಲೂಕ್

ಅನುವಾದಕರು
ಫಕೀರ್ ಮುಹಮ್ಮದ್ ಕಟ್ಪಾಡಿ

ವಚನಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ
ಬಿ.ಎಲ್.ಡಿ.ಇ. ಸಂಸ್ಥೆ, ವಿಜಯಪುರ

**Tajkiratul-Muluk – Persian :** work of Rafiyuddin Ibrahim Shiraji
Kannada translation by **Fakir Muhammad Katpadi**

Published by : **Dr. P.G.Halakatti Research Centre,**
B.L.D.E. Association, Vijayapur, Karnataka

Edition : **2015**

Pages : **xxvi + 430 = 456**

Copies : **1000**

Price : **Rs. 200.00**

Typeset : **Dr. P. G. Halakatti Research Centre,** Vijayapur

Printed : **Print Point,** Bengaluru. Mob : 9739067359

ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆರ್ಥಿಕ
ಅನುದಾನದ ನೆರವಿನಿಂದ ಈ ಪುಸ್ತಕ ಪ್ರಕಟವಾಗಿದೆ.

**ತಝ್ಕಿರತುಲ್ ಮುಲೂಕ್ : ಪರ್ಶಿಯನ್ ಕೃತಿಗಳು**
ಅನುವಾದಕರು : **ಫಕೀರ್ ಮುಹಮ್ಮದ್ ಕಟ್ಪಾಡಿ**

ಪ್ರಕಾಶಕರು : **ವಚನಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ,**
ಬಿ.ಎಲ್.ಡಿ.ಇ. ಸಂಸ್ಥೆ, ವಿಜಯಪುರ

ಹಕ್ಕುಗಳು : **ಪ್ರಕಾಶಕರು**

ಆವೃತ್ತಿ : **ಪ್ರಥಮ ೨೦೧೫**

ಪುಟಗಳು : **xxvi + ೪೩೦ = ೪೫೬**

ಪ್ರತಿಗಳು : ೧೦೦೦

ಬೆಲೆ : ರೂ. ೨೦೦.೦೦

ಡಿ.ಟಿ.ಪಿ. : **ವಚನಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ, ವಿಜಯಪುರ**

ಮುದ್ರಣ : **ಪ್ರಿಂಟ್ ಪಾಯಿಂಟ್,** ಬೆಂಗಳೂರು.
ಮೊ. ೯೭೩೯೦೬೭೩೫೯

*

# ಆದಿಲ್‌ಶಾಹಿ ಸಾಹಿತ್ಯ ಅನುವಾದ ಸಮಿತಿ

**ಅಧ್ಯಕ್ಷರು**

ಡಾ. ಎಂ.ಎಂ. ಕಲಬುರ್ಗಿ

**ನಿರ್ದೇಶಕರು**

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ

**ಸದಸ್ಯರು**

ಡಾ. ಬಿ.ಜಿ. ಮೂಲಿಮನಿ

ಡಾ. ರಹಮತ್ ತರೀಕೆರೆ

ಶ್ರೀ ರಂಜಾನ್ ದರ್ಗಾ

ಡಾ. ಎಚ್. ಜಿ. ದಡ್ಡಿ

**ವಿಶೇಷ ಆಮಂತ್ರಿತ ಸದಸ್ಯರು**

ಶ್ರೀ ಶಿವಯೋಗಿ ಎಸ್. ತಂಬಾಕೆ

ಡಾ. ಎಂ. ಎಸ್. ಮದಭಾವಿ

ಮೌಲಾನಾ ಮಹಬೂಬುರ್ ರಹಮಾನ ಮದನಿ

**ಪದನಿಮಿತ್ತ ಸದಸ್ಯರು**

ಜಿಲ್ಲಾಧಿಕಾರಿಗಳು, ಬಿಜಾಪುರ

ಸಹಾಯಕ ನಿರ್ದೇಶಕರು,
ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬಿಜಾಪುರ

*

# ಅಧ್ಯಕ್ಷರ ಮಾತು

ಎಂ. ಎಂ. ಕಲಬುರ್ಗಿ

ವಿಜಾಪುರದ ಬಿ.ಎಲ್.ಡಿ. ಶಿಕ್ಷಣಸಂಸ್ಥೆ ಇತ್ತೀಚಿನ ದಿನಗಳಲ್ಲಿ ಸಾಂಸ್ಕೃತಿಕ ಸಂಸ್ಥೆಯಾಗಿಯೂ ಬೆಳೆಯುತ್ತಲಿದೆ. ಈ ಸಂಸ್ಥೆಯ ಭಾಗವಾಗಿರುವ 'ವಚನಪಿತಾಮಹ ಡಾ॥ ಫ.ಗು. ಹಳಕಟ್ಟಿ ಸಂಶೋಧನ ಸಂಸ್ಥೆ'ಯ ಇಂದಿನ ಕಾರ್ಯ ಮತ್ತು ಕಾರ್ಯಕ್ರಮಗಳು ಇದಕ್ಕೆ ಉದಾಹರಣೆಯೆನಿಸಿವೆ.

ಡಾ॥ ಫ.ಗು. ಹಳಕಟ್ಟಿಯವರದು ಕೇವಲ ವ್ಯಕ್ತಿಕಲ್ಯಾಣಕೇಂದ್ರಿತ ವ್ಯಕ್ತಿತ್ವವಲ್ಲ, ಸಮಾಜಕಲ್ಯಾಣ ಕೇಂದ್ರಿತ ವ್ಯಕ್ತಿತ್ವ. ಇದಕ್ಕೆ ತಕ್ಕಂತೆ ಅವರ ಹೆಸರಿನ ಈ ಸಂಸ್ಥೆ ಎಲ್ಲ ಸಮಾಜಗಳನ್ನು-ಸಾಮಾಜಿಕರನ್ನು 'ಇವ ನಮ್ಮವ, ಇವ ನಮ್ಮವ, ಇವ ನಮ್ಮವ' ಎಂಬ ಆದರ್ಶದಲ್ಲಿ ಬೆಳೆಯುತ್ತಲಿದೆ. ಇದಕ್ಕೆ ಸಾಕ್ಷಿಯಾಗಿದೆ, ಈ ಸಂಸ್ಥೆ ಕೈಗೆತ್ತಿಕೊಂಡಿರುವ 'ಆದಿಲ್‌ಶಾಹಿ ಸಾಹಿತ್ಯ ಅನುವಾದ ಯೋಜನೆ'.

ಮಧ್ಯಕಾಲೀನ ಭಾರತೀಯ ಇತಿಹಾಸದಲ್ಲಿ ವಿಜಾಪುರದ ಆದಿಲ್‌ಶಾಹಿಗಳ ಹೆಸರು ಪ್ರಸಿದ್ಧವಾದುದು, ಸುಪ್ರಸಿದ್ಧವಾದುದು. ಏಕಕಾಲಕ್ಕೆ ಉತ್ತರದ ಮೊಗಲರೊಂದಿಗೆ, ದಕ್ಷಿಣದ ವಿಜಯನಗರದವರೊಂದಿಗೆ ಸಂಘರ್ಷ-ಸಮನ್ವಯದಿಂದ ೧೪೮೯-೧೬೮೬ರ ವರೆಗೆ ರಾಜ್ಯಭಾರಮಾಡಿದ ರಾಜಮನೆತನವಿದು. 'ದಿನೇ ಇಲಾಹಿ' ಖ್ಯಾತಿಯ ಮೊಗಲ್ ಮನೆತನದ ಅಕಬರನಂತೆ 'ದಾದೇ ಇಲಾಹಿ' ಖ್ಯಾತಿಯ ಆದಿಲ್‌ಶಾಹಿ ಮನೆತನದ ಜಗದ್ಗುರು ೨ನೆಯ ಇಬ್ರಾಹಿಮ್ ಬಾದಶಹನು ಸಮನ್ವಯಸಮಾಜ ಸ್ಥಾಪಿಸಲು ನಿರತನಾದುದು ಗಮನಾರ್ಹವೆನಿಸಿದೆ.

ಈ ಮನೆತನದ ಎಂಟು ಜನ ಅರಸರು ಸಾಹಿತಿಗಳು-ಸಾಹಿತ್ಯಪ್ರೇಮಿಗಳು. ಈ ಸಾಹಿತ್ಯ ಲೌಕಿಕ-ಧಾರ್ಮಿಕ ಎರಡೂ ಆಯಾಮಗಳಲ್ಲಿ ಬಿಚ್ಚಿ ಬೆಳೆದಿದೆ. ಹಿಂದೂಗಳದು ಪುರಾಣಪ್ರಜ್ಞೆಯಾದರೆ, ಮುಸಲ್ಮಾನರದು ಇತಿಹಾಸಪ್ರಜ್ಞೆ, ಈ ಪ್ರಜ್ಞೆಗೆ ಅನುಗುಣವಾಗಿ ಇವರ ಆಸ್ಥಾನದಲ್ಲಿ-ಇವರ ರಾಜ್ಯದಲ್ಲಿ ಸುಮಾರು ೨೦ ಕೃತಿಗಳು ಹುಟ್ಟಿಕೊಂಡಿವೆ.

ಆಗಬೇಕಾದಷ್ಟು ಆಗಲಿಲ್ಲ. ಅದಕ್ಕೆ ಮೂಲ ಕಾರಣ, ಬಹುಶಃ ಅಧ್ಯಯನಕ್ಕೆ ಬೇಕಾಗುವ ಮೂಲ ಆಕರಗಳು ವಿಶ್ವದಾದ್ಯಂತ ಚದುರಿ ಹೋಗಿರುವುದು ಮತ್ತು ಅವು ಪರ್ಶಿಯನ್, ದಖಣಿ ಭಾಷೆಗಳಲ್ಲಿರುವುದು. ಈ ಕೊರತೆಯನ್ನು ಗಮನಿಸಿ ಬಿಜಾಪುರ ಆದಿಲಶಾಹಿ ಕಾಲದ ಸಾಹಿತ್ಯವನ್ನು ಕನ್ನಡದ ಮೂಲಕ ಪ್ರಕಟಿಸುವ ಪ್ರಯತ್ನವಾಗಿದೆ. 'ಆದಿಲಶಾಹಿ ಸಾಹಿತ್ಯ ಅನುವಾದ ಯೋಜನೆ'.

ಹಂಪಿಯ ಕನ್ನಡ ವಿಶ್ವವಿದ್ಯಾಲಯಕ್ಕೆ ಸಂಲಗ್ನವಾಗಿರುವ ಬಿಜಾಪುರ ಬಿ.ಎಲ್.ಡಿ.ಇ. ಸಂಸ್ಥೆಯ ವಚನಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರವು ಕಳೆದ ದಶಕದಿಂದ ಸಂಶೋಧನಕ್ಷೇತ್ರದಲ್ಲಿ ಅಪರೂಪದ ಕೆಲಸವನ್ನು ಮಾಡುತ್ತಿದೆ. ಡಾ. ಫ ಗು ಹಳಕಟ್ಟಿ ಅವರ ಸಮಗ್ರಸಾಹಿತ್ಯವನ್ನು ೧೫ ಸಂಪುಟಗಳಲ್ಲಿ ಸಂಪಾದಿಸಿ ಪ್ರಕಟಿಸಿದೆ. ೮ ವಿದ್ಯಾರ್ಥಿಗಳು ವಿವಿಧ ವಿಷಯಗಳಲ್ಲಿ ಪಿಚ್.ಡಿ ಪದವಿಗಳನ್ನು ಪಡೆದಿದ್ದಾರೆ. ಇನ್ನು ಹಲವರು ಪದವಿ ಪಡೆಯುವ ದಾರಿಯಲ್ಲಿದ್ದಾರೆ. ಇದಕ್ಕೆಲ್ಲ ಬಿ.ಎಲ್.ಡಿ.ಇ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಎಂ.ಬಿ.ಪಾಟೀಲ ಅವರ ನಿರಂತರ ಬೆಂಬಲವೇ ಕಾರಣವಾಗಿದೆ. ಅವರ ಆಸಕ್ತಿಯಂತೆ ಸಂಶೋಧನ ಕೇಂದ್ರವು 'ಆದಿಲಶಾಹಿ ಸಾಹಿತ್ಯ ಅನುವಾದ ಯೋಜನೆ'ಯ ಕರಡು ಪ್ರತಿಯನ್ನು ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಕಳಿಸಿತು. ಯೋಜನೆಯ ಮಹತ್ವವನ್ನು ಗುರುತಿಸಿ ಕರ್ನಾಟಕ ಸರಕಾರವು, ಡಾ. ಎಂ.ಎಂ. ಕಲಬುರ್ಗಿ ಅವರ ಅಧ್ಯಕ್ಷತೆಯಲ್ಲಿ ಡಾ. ಬಿ.ಜಿ.ಮೂಲಿಮನಿ, ಡಾ. ರಹಮತ ತರೀಕೆರೆ. ಶ್ರೀ ರಂಜಾನ್ ದರ್ಗಾ. ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಮತ್ತು ಡಾ. ಎಚ್.ಜಿ.ದಡ್ಡಿ, ಈ ಸದಸ್ಯರನ್ನೊಳಗೊಂಡ ಒಂದು ಸಮಿತಿಯನ್ನು ರಚಿಸಿ ಯೋಜನೆಗೆ ಅನುಮತಿ ನೀಡಿತು.

ಇದು ಭಾರತದಲ್ಲಿಯೇ ಒಂದು ಅಪರೂಪದ ಯೋಜನೆ. ಮಧ್ಯಯುಗೀನ ಕಾಲದ ಬಿಜಾಪುರ ಆದಿಲಶಾಹಿಗಳ ಕಾಲದಲ್ಲಿ ರಚಿತಗೊಂಡ ಎಲ್ಲ ಸಾಹಿತ್ಯವನ್ನು ಕನ್ನಡಕ್ಕೆ ತರುವುದು ಯೋಜನೆಯ ಮುಖ್ಯ ಉದ್ದೇಶ.

ಪ್ರಾರಂಭದಲ್ಲಿ ಆದಿಲಶಾಹಿ ಚರಿತ್ರೆಗೆ ಸಂಭಂಧಪಟ್ಟ ಈ ಕೆಳಗಿನ ಸಮಕಾಲೀನ ಕೆಲವು ಚರಿತ್ರ ಗ್ರಂಥಗಳ ಪಟ್ಟಿಯನ್ನು ಮಾಡಲಾಯಿತು. ಅವು ದೊರೆಯುವ ಸಂಭಾವ್ಯ ಸ್ಥಳಗಳನ್ನೂ ಗುರುತಿಸಲಾಯಿತು.

೧. **ಮುಹಮ್ಮದ ಕಾಸೀಮ ಫರಿಶ್ತಾ** : ತಾರೀಖೆ ಫರಿಶ್ತಾ [ಪರ್ಶಿಯನ್].
ಇಂಗ್ಲಿಷ್‌ಗೆ ಅನುವಾದ ಕ್ಯಾಪ್ಟನ್ ಬ್ರಿಗ್ಸ [ಕ್ರಿ.ಶ. ೧೮೭೯], ಮೂಲ ಪರ್ಶಿಯನ್ ಹಸ್ತಪ್ರತಿ ಮುಂಬಯಿ ಅರ್ಕೀವ್ಸ, ಸಾಲಾರ ಜಂಗ ವಸ್ತುಸಂಗ್ರಹಾಲಯ ಹೈದರಾಬಾದ ಇತ್ಯಾದಿಗಳಲ್ಲಿ ಲಭ್ಯ.

೨. **ಅಬ್ದುಲ್ಲಾ ದೆಹಲವಿ** : ಇಬ್ರಾಹಿಮನಾಮಾ [ದಖನಿ].
ಪ್ರಕಟವಾಗಿದೆ. ಮೂಲ ದಖನಿ ಹಸ್ತಪ್ರತಿ ಮುಂಬಯಿ ಅರ್ಕೀವ್ಸ ಮತ್ತು ಸಾತಾರಾದ ಔಂಧ ಅರ್ಕೀವ್ಸದಲ್ಲಿವೆ.

೩. **ಅಸದಬೇಗ** : ವಾಕಿಯಾತೆ ಅಸದಬೇಗ [ಪರ್ಶಿಯನ್].
ಚಾಪ್‌ಮನ್‌ನಿಂದ ಅನುವಾದವಾಗಿದೆ [೧೮ನೇ ಶತ]. ನಂತರ ಪಿ.ಎಂ.ಜೋಶಿ ಅವರಿಂದಲೂ, ಜೊತೆಗೆ ಇಲಿಯಟ್ ಮತ್ತು ಡೌಸನ್ ಸಂಪುಟ ೬ರಲ್ಲಿಯೂ ಭಾಗಶಃ ಅನುವಾದ. ಇದರ ಹಸ್ತಪ್ರತಿಯು ಆಂಧ್ರಪ್ರದೇಶ ಪ್ರಾಚೀನ ಹಸ್ತಪ್ರತಿಗಳ ಸಂಗ್ರಹ ಹೈದರಾಬಾದಿನಲ್ಲಿ ಲಭ್ಯ.

೪. **ಕಾಜಿ ನೂರುಲ್ಲಾ** : ತಾರೀಖೆ ಅಲಿ ಆದಿಲಶಹ [ಪರ್ಶಿಯನ್].
ಮೂಲ ಹಸ್ತಪ್ರತಿಗಳು ಮುಂಬಯಿ ಅರ್ಕೀವ್ಸ, ಇಂಡಿಯಾ ಆಫೀಸ ಲಾಯಬ್ರರಿ ಲಂಡನ್ ಮತ್ತು ಬ್ರಿಟಿಶ್ ಮ್ಯುಜಿಯಮ್ ಲಾಯಬ್ರರಿ ಲಂಡನ್, ಸಾಲಾರಜಂಗ ವಸ್ತುಸಂಗ್ರಹಾಲಯ(ಹೈದರಾಬಾದ್)ಗಳಲ್ಲಿ ಲಭ್ಯ.

೫. **ಜುಹೂರ್ ಬಿನ್ ಜುಹೂರಿ** : ಮುಹಮ್ಮದನಾಮಾ [ಪರ್ಶಿಯನ್].
ಹಸ್ತಪ್ರತಿಯು ಪ್ರಾಚ್ಯ ವಸ್ತುಸಂಗ್ರಹಾಲಯ ವಿಜಯಪುರದಲ್ಲಿ ಲಭ್ಯ ಭಾಗಶಃ ಬಿ.ಡಿ. ವರ್ಮಾರಿಂದ ಇಂಗ್ಲಿಷನಲ್ಲಿ ಅನುವಾದ.

೬. **ನುಸ್ರತಿ** : ಅಲಿನಾಮಾ [ದಖನಿ].
ಪ್ರಕಟವಾಗಿದೆ. ಪ್ರತಿ ದುರ್ಲಭ.

೭. **ಮೌಲ್ವಿ ಬಶೀರುದ್ದೀನ ಅಹ್ಮದ** : ವಾಕಿಯಾತೆ ಮಮಲಿಕತ್ ವಿಜಯಪುರ [ಉರ್ದು].
ಕರ್ನಾಟಕ ಉರ್ದು ಅಕಡೆಮಿಯಿಂದ ಪ್ರಕಟ. ಮೂಲಪ್ರತಿ ಸಾಲಾರಜಂಗ ಮ್ಯುಜಿಯಮ್ ಹೈದರಾಬಾದದಲ್ಲಿ ಲಭ್ಯ.

೮. **ಮುಹಮ್ಮದ ಹಾಶೀಮ ಘುಜೂನಿ**: ಘುತುಹತೆ ಆದಿಲಶಾಹಿ [ಪರ್ಶಿಯನ್].
ಮುಂಬಯಿ ಅರ್ಕೀವ್ಸ ಬ್ರಿಟಿಶ್ ಇಂಡಿಯಾ ಲಾಯಬ್ರರಿ ಲಂಡನ್‌ಗಳಲ್ಲಿ ಹಸ್ತಪ್ರತಿಗಳಿವೆ.

೯. **ಮೀರ್ ರಫೀಯುದ್ದೀನ ಶಿರಾಜಿ** : ತಜ್ಕಿದತುಲ್ ಮುಲೂಕ [ಪರ್ಶಿಯನ್].
ಸಾಲಾರಜಂಗ ವಸ್ತುಸಂಗ್ರಹಾಲಯ ಹೈದರಾಬಾದದಲ್ಲಿ ಹಸ್ತಪ್ರತಿ ಲಭ್ಯ.

೧೦. **ಶೇಖ್ ಜೈನುದ್ದೀನ ಅಲ್ ಮಾಬಾರಿ** : ತುಹಫತುಲ್ ಮುಜಾಹಿದೀನ [ಅರೇಬಿಕ್].
ಇಂಗ್ಲಿಷ್ ಅನುವಾದ ಪ್ರಕಟವಾಗಿದೆ.

೧೧. **ಸೈಯದ ಅಲಿ ಬಿಲಗ್ರಾಮಿ** : ತಾರೀಖೆ ದಖನ್ ೪ ಸಂಪುಟಗಳು [ಉರ್ದು].

**೧೨. ಸಯ್ಯದ ಮೊಹಿಯುದ್ದೀನ ಪೀರಜಾದಾ:** ಅಹವಾಲೆ ಸಲಾತೀನ ವಿಜಯಪುರ [ಪರ್ಶಿಯನ್].

ಬ್ರಿಟಿಶ್ ವಸ್ತುಸಂಗ್ರಹಾಲಯ ಲಂಡನ್, ಹಸ್ತಪ್ರತಿ ಸಂಖ್ಯೆ ೨೬೨೭೦.

**೧೩. ಫಿತೂರಖಾನ ವಲ್ಲದ ಅಸದಖಾನ ಲ್ಯಾರಿ :** ತಾರೀಖೆ ಹಪ್ತಕುರ್ಸೀ [ಪರ್ಶಿಯನ್].

ಸಾಲಾರಜಂಗ ವಸ್ತು ಸಂಗ್ರಹಾಲಯ, ಹೈದರಾಬಾದ. ಇಂಡಿಯಾ ಆಫೀಸ ಲಾಯಬ್ರರಿ ಲಂಡನ್‌ಗಳಲ್ಲಿ ಹಸ್ತಪ್ರತಿ ಲಭ್ಯ.

**೧೪. ೨ನೆಯ ಇಬ್ರಾಹಿಮ ಆದಿಲಶಹ :** ಕಿತಾಬೆ ನವರಸ [ದಖನಿ].

ಪ್ರಕಟವಾಗಿದೆ.

**೧೫. ಮುಹಮ್ಮದ್ ಇಬ್ರಾಹಿಮ್ ಜುಬೇರಿ :** ರೌಜತುಲ್ ಔಲಿಯಾ ಎ ವಿಜಯಪುರ [ಪರ್ಶಿಯನ್].

ಆಂಧ್ರಪ್ರದೇಶ ಪ್ರಾಚ್ಯ ಹಸ್ತಪ್ರತಿ ಸಂಗ್ರಹ ಹೈದರಾಬಾದದಲ್ಲಿ ಹಸ್ತಪ್ರತಿ ಲಭ್ಯ. ಸಂಖ್ಯೆ ೧೪೮೧೩.

**೧೬. ಮುಹಮ್ಮದ್ ಇಬ್ರಾಹಿಮ್ ಜುಬೇರಿ :** ಬಸಾತೀನೆ ಸಲಾತೀನ [ಪರ್ಶಿಯನ್].

ಮರಾಠೀ ಅನುವಾದದಿಂದ ಕನ್ನಡಕ್ಕೆ ಅನುವಾದ ಆಗಿದೆ. ಪರ್ಶಿಯನ್ ಹಸ್ತಪ್ರತಿ ಸಾಲಾರಜಂಗ ವಸ್ತುಸಂಗ್ರಹಾಲಯ ಹೈದರಾಬಾದದಲ್ಲಿ ಲಭ್ಯ.

**೧೭. ಮೀರ ಅಹಮದ ಅಲಿಖಾನ :** ಗುಲದಸ್ತಾ ಎ ವಿಜಯಪುರ [ದಖನಿ].

ಆಂಧ್ರಪ್ರದೇಶ ಆರ್ಕೀವ್ಸದಲ್ಲಿ ಹಸ್ತಪ್ರತಿ ಲಭ್ಯ. ಸಂಖ್ಯೆ ೧೯೩.

**೧೮. ಅಬುಲ ಹಸನ ಕಾದಿರಿ :** ಶಾಹಿಪತ್ ಇ ಹುದಾ [ಪರ್ಶಿಯನ್].

ಸಾಲಾರಜಂಗ ವಸ್ತುಸಂಗ್ರಹಾಲಯ ಹೈದರಾಬಾದದಲ್ಲಿ ಹಸ್ತಪ್ರತಿ ಲಭ್ಯ.

**೧೯. ಆದಿಲಶಾಹಿಕಾಲದ ಫರ್ಮಾನುಗಳು ಮತ್ತು ಸನದುಗಳು :** ಭಾರತ ಇತಿಹಾಸ ಸಂಶೋಧಕ ಮಂಡಳ ಪುಣೆ, ವಿಜಯಪುರ ವಸ್ತುಸಂಗ್ರಹಾಲಯ ಮತ್ತು ಇತರ ಸ್ಥಳಗಳಲ್ಲಿ ಲಭ್ಯ

ಹೀಗೆ ಪಟ್ಟಿಮಾಡಿ, ಹಸ್ತಪ್ರತಿಗಳ ಶೋಧಕ್ಕೆ ತೊಡಗಲಾಯಿತು. ಸಾಲಾರಜಂಗ ವಸ್ತುಸಂಗ್ರಹಾಲಯ, ಆಂಧ್ರಪ್ರದೇಶ ಆರ್ಕೀವ್ಸ ಹೈದರಾಬಾದ, ಭಾರತೀಯ ಪುರಾತತ್ವ ಇಲಾಖೆ ವಸ್ತುಸಂಗ್ರಹಾಲಯ, ಗೋಳಗುಮ್ಮಟ ವಿಜಯಪುರ– ಈ ಕೇಂದ್ರಗಳಿಂದ ಕೆಳಗಿನ ಹಸ್ತಪ್ರತಿಗಳು ದೊರೆತವು.

೧. ಕಾಜಿ ನೂರುಲ್ಲಾ : ತಾರೀಖೆ ಅಲಿ ಆದಿಲಶಹ [ಪರ್ಶಿಯನ್]

೨. ಮೀರ್ ರಫೀಯುದ್ದೀನ ಶಿರಾಜಿ : ತಜ್ಕಿದತುಲ್ ಮುಲೂಕ [ಪರ್ಶಿಯನ್]

೩. ಫಿತೂರಖಾನ ವಲ್ಲದ ಅಸದಖಾನ ಲ್ಯಾರಿ : ತಾರೀಖೆ ಹಪ್ತಕುರ್ಸೀ [ಪರ್ಶಿಯನ್]

೪. ಮೀರ ಅಹಮದ ಅಲಿಖಾನ : ಗುಲದಸ್ತಾ ಎ ವಿಜಯಪುರ [ದಖನಿ]

೫. ಜುಹೂರ್ ಬಿನ್ ಜುಹೂರಿ : ಮುಹಮ್ಮದನಾಮಾ [ಪರ್ಶಿಯನ್]

ಹಸ್ತಪ್ರತಿಗಳನ್ನು ಒದಗಿಸಿದ ಮೇಲೆ ಕಾಣಿಸಿದ ಎಲ್ಲ ಸಂಸ್ಥೆಗಳ ಮುಖ್ಯಸ್ಥರಿಗೆ ನಮ್ಮ ಕೃತಜ್ಞತೆಗಳು. ಇದಲ್ಲದೆ, ಫರಿಶ್ತಾನ ತಾರೀಖೆ ಫರಿಶ್ತಾದ ಇಂಗ್ಲಿಷ್ ಮತ್ತು ಉರ್ದು ಅನುವಾದಗಳು, ಅಬ್ದುಲ್ಲಾ ದೇಹಲವಿಯ ಇಬ್ರಾಹೀಮನಾಮಾದ ಹಿಂದಿ ಮತ್ತು ಉರ್ದು ಅನುವಾದಗಳು, ಕವಿ ನುಸ್ರತಿಯ ಅಲಿನಾಮಾ, ಈಶ್ವರದಾಸ ನಗರ್‌ನ ಫುತೂಹತ್ ಅಲಂಗೀರ ಕೃತಿಯ ಇಂಗ್ಲಿಷ್ ಅನುವಾದ ಮತ್ತು ನೂರಾರು ಪರ್ಶಿಯನ್ ಮೂಲ ಮತ್ತು ಮರಾಠಿ ಅನುವಾದದ ಆದಿಲಶಾಹಿ ಫರ್ಮಾನುಗಳು ದೊರೆತವು. ಉಳಿದ ಹಸ್ತಪ್ರತಿಗಳನ್ನು ದೊರಕಿಸಬೇಕಾಗಿದೆ.

ಹೀಗೆ ಸಾಮಗ್ರಿಯನ್ನು ಸಂಗ್ರಹಿಸಿ ಅನುವಾದ ಕೆಲಸ ಪ್ರಾರಂಭ ಮಾಡಲಾಯಿತು. ಪರ್ಶಿಯನ್, ದಖನಿ ಮತ್ತು ಉರ್ದು ಭಾಷೆಗಳ ಈ ವಿದ್ವಾಂಸರನ್ನು ಕನ್ನಡ ಅನುವಾದ ಕಾರ್ಯದಲ್ಲಿ ತೊಡಗಿಸಿಕೊಳ್ಳಲಾಯಿತು.

೧. ಮೌಲಾನಾ ಮಹಬೂಬುರ್ ರಹಮಾನ ಮದನಿ, ವಿಜಯಪುರ.

೨. ಶ್ರೀ ಬಿ. ಜಯಾಚಾರ್ಯ, ಯಾದಗಿರಿ.

೩. ಶ್ರೀಮತಿ ಬಾನು ಮುಷ್ತಾಕ್, ಹಾಸನ.

೪. ಡಾ. ಅಬ್ದುಲ್ ಹಮೀದ, ತಿಪಟೂರು.

೫. ಶ್ರೀ ಎಂ.ಎನ್ ನದಾಫ, ವಿಜಯಪುರ

೬. ಪ್ರೊ. ವಸಂತ ಕುಷ್ಟಗಿ, ಗುಲಬರ್ಗಾ.

೭. ಶ್ರೀಮತಿ ರತ್ನಾ ಮಣ್ಣೂರ, ಗುಲಬರ್ಗಾ.

೮. ಡಾ. ಅಮೀರುದ್ದೀನ್ ಖಾಜಿ, ವಿಜಯಪುರ.

೯. ಶ್ರೀ ಹಸನ ನಯೀಮ ಸುರಕೋಡ, ರಾಮದುರ್ಗ.

೧೦. ಡಾ. ಬಿ ರಘೋತ್ತಮರಾವ ದೇಸಾಯಿ, ಬೆಂಗಳೂರು.

೧೧. ಶ್ರೀಮತಿ ವಿದ್ಯಾ ಗುಮಾಸ್ತೆ, ವಿಜಯಪುರ

೧೨. ಡಾ. ಆರ್.ಕೆ. ಕುಲಕರ್ಣಿ, ವಿಜಯಪುರ

೧೩. ಡಾ. ಮುಹಮ್ಮದ್ ಸಿಬ್ಗತ್‌ಉಲ್ಲಾಹ್

ಇವರ ಸಹಕಾರದಿಂದ ಮೊದಲ ಹಂತದ ೬ ಸಂಪುಟಗಳು,

೧. ತಾರೀಖೆ ಫರಿಶ್ತಾ: ೪ ಸಂಪುಟಗಳು.

೨. ಬಸಾತೀನೆ ಸಲಾತೀನ: ೫ನೆಯ ಸಂಪುಟ.

೩. ಇಬ್ರಾಹೀಮ ನಾಮಾ [ದಖನಿ], ಗುಲದಸ್ತಾಯೆ ವಿಜಯಪುರ [ದಖನಿ], ತಾರೀಖೆ ಹಪ್ತಕುರ್ಸಿ [ಪರ್ಶಿಯನ್], ಫುತುಹತೆ ಅಲಂಗೀರ (ಭಾಗಶಃ) [ಪರ್ಶಿಯನ್]– ಇವೆಲ್ಲ ಸೇರಿ ೬ನೆಯ ಸಂಪುಟ.

೪. ಮೊಹಮ್ಮದನಾಮಾ, ೭ ನೆಯ ಸಂಪುಟ

೫. ಅಲಿನಾಮಾ–ತಾರೀಖೇ ಸಿಕಂದರಿ ೮ ನೆಯ ಸಂಪುಟ

೬. ಊರುಸೇ–ಇರ್ಫಾನ್ (ಮನ್ ಲಗನ್) ೯ನೆಯ ಸಂಪುಟ

ಹೀಗೆ ೯ ಸಂಪುಟಗಳು ಪ್ರಕಟವಾಗಿವೆ. ಇದೀಗ ೧೦ ನೆಯ ಸಂಪುಟವಾಗಿ ರಫಿಯುದ್ದೀನ ಶಿರಾಜಿ ವಿರಚಿತ 'ತಝ್ಕಿರತುಲ್ ಮುಲೂಕ್(ಬಾದಶಾಹರ ಚರಿತ್ರೆ)' ಪ್ರಕಟವಾಗುತ್ತಿದೆ. ಇದನ್ನು ಬೆಂಗಳೂರಿನ ಫಕೀರ ಮುಹಮ್ಮದ ಕಟ್ಪಾಡಿ ಅವರು ಕನ್ನಡಕ್ಕೆ ಅನುವದಿಸಿದ್ದಾರೆ. ಅವರಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

'ಆದಿಲಶಾಹಿ ಸಾಹಿತ್ಯ ಅನುವಾದ ಯೋಜನೆ'ಗೆ ಅನುದಾನ ನೀಡಿದ ಕರ್ನಾಟಕ ಸರ್ಕಾರಕ್ಕೆ, ಯೋಜನೆಯನ್ನು ಯಶಸ್ವಿಯಾಗಿ ಕಾರ್ಯಗತಗೊಳಿಸುವಲ್ಲಿ ಸಹಕರಿಸುತ್ತಿರುವ ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಎಲ್ಲ ಅಧಿಕಾರಿಗಳಿಗೆ ಮತ್ತು ಈ ದಿಶೆಯಲ್ಲಿ ನಿರಂತರ ಸಹಾಯಹಸ್ತ ನೀಡುತ್ತಿರುವ ಬಿ.ಎಲ್.ಡಿ.ಇ. ಸಂಸ್ಥೆಯ ಅಧ್ಯಕ್ಷರಾದ ಶ್ರೀ ಎಂ.ಬಿ.ಪಾಟೀಲ ಅವರಿಗೆ, ಸಂಶೋಧನ ಕೇಂದ್ರದ ಅಧ್ಯಕ್ಷರಾದ ಶ್ರೀ ಶಿವಯೋಗಿ ತಂಬಾಕೆ ಅವರಿಗೆ ಕೃತಜ್ಞತೆಗಳು.

ಸಂಪುಟಗಳು ಪ್ರಕಟವಾಗುವ ಪ್ರತಿ ಹಂತದಲ್ಲಿ ಸಹಕಾರ ನೀಡಿದ, ಈ ಹಿಂದೆ ವಿಜಯಪುರ ಜಿಲ್ಲಾಧಿಕಾರಿಗಳಾಗಿದ್ದ ಶ್ರೀ ಶಿವಯೋಗಿ ಕಳಸದ, ಶ್ರೀ ರಿತ್ವಿಕ್ ರಂಜನ್ ಪಾಂಡೆ ಮತ್ತು ಇಂದಿನ ಜಿಲ್ಲಾಧಿಕಾರಿಗಳಾದ ಶ್ರೀ ಡಿ. ರಂದೀಪ ಅವರನ್ನು, ಈ ಯೋಜನೆಯ ಸಮಿತಿಯ ಅಧ್ಯಕ್ಷರ ಮಾರ್ಗದರ್ಶನವನ್ನು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಡಾ. ಸೋಮಶೇಖರ ವಾಲಿ ಹಾಗೂ ಬಿ.ಎಲ್.ಡಿ.ಇ.ಸಂಸ್ಥೆಯ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರದ ಕಾರ್ಯದರ್ಶಿಗಳಾದ ಡಾ. ಎಂ.ಎಸ್. ಮದಭಾವಿ ಅವರ ಶ್ರಮವನ್ನು ಪ್ರೀತಿಯಿಂದ ನೆನೆಯುತ್ತೇವೆ.

ಮುಖಪುಟ ವಿನ್ಯಾಸಗೊಳಿಸಿದ ಶ್ರೀ ಕೆ.ಕೆ. ಮಕಾಳಿ ಹಾಗೂ ಅಂದವಾಗಿ ಮುದ್ರಿಸಿದ ಬೆಂಗಳೂರಿನ ಸ್ಯಾಬ್‌ಟೆಕ್ ಪ್ರಿಂಟರ್ಸ್‌ದ ಶ್ರೀ ಬಿ.ಸಿ.ಪಾಟೀಲ (ಹೆಬ್ಬಾಳ) ಮತ್ತು ಅವರ ಸಿಬ್ಬಂದಿಯನ್ನು ನೆನೆಯುತ್ತೇವೆ.

■

*

# ನಿರ್ದೇಶಕರ ಮಾತು

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ

ರಫೀಯುದ್ದೀನ ಇಬ್ರಾಹಿಮ ಶಿರಾಜಿ ಬರೆದ 'ತಝ್ಕಿರತುಲ್ ಮುಲೂಕ್' (ಬಾದಶಾಹರ ಚರಿತ್ರೆ) ಇತಿಹಾಸ ಗ್ರಂಥವು ಎರಡನೆಯ ಇಬ್ರಾಹೀಮ ಆದಿಲಶಹನ ಆಸ್ಥಾನದಲ್ಲಿ ಕ್ರಿ. ಶ. ೧೬೦೯–೨೦ ಮಧ್ಯ ರಚಿತವಾಯಿತು.

ಮೂಲತಃ ವ್ಯಾಪಾರಿಯಾಗಿ ಭಾರತಕ್ಕೆ ಬಂದ ರಫೀಯುದ್ದೀನ ಶಿರಾಜಿ ೧೫೫೯–೬೦ರಲ್ಲಿ ಮೊದಲು ದೆಹಲಿಗೆ ಅನಂತರ ಇಂದಿನ ಯಾದಗಿರಿ ಜಿಲ್ಲೆಯ ಸಾಗರಕ್ಕೆ ಬಂದನು. ನಂತರದ ದಿನಗಳಲ್ಲಿ ವಿಜಯಪುರದ ಮೊದಲ ಅಲಿ ಆದಿಲಶಹನ ಉಗ್ರಾಣದ ಪಾರುಪತ್ಯಗಾರನಾಗಿ ಕೆಲಸಕ್ಕೆ ಸೇರಿದನು. ಕೆಲವು ಕಾಲ ಬಾದಶಹನ ಆಪ್ತ ಕಾರ್ಯದರ್ಶಿಯಾಗಿಯೂ ಕೆಲಸ ಮಾಡಿದನೆಂದು ಅವನೆ ಹೇಳಿಕೊಂಡಿದ್ದಾನೆ. ಕ್ರಿ. ಶ. ೧೫೬೫ರ ರಕ್ಕಸಗಿ ತಂಗಡಗಿ ಕಾಳಗದಲ್ಲಿ ಬಾದಶಹನ ಜೊತೆಗೆಯೇ ರಣರಂಗದಲ್ಲಿ ಇದ್ದನು. ಅನಂತರ ಎರಡನೆಯ ಇಬ್ರಾಹೀಮ ಆದಿಲಶಹನ ಪ್ರಾರಂಭದ ದಿನಗಳಲ್ಲಿ ಅವನ ಅಣ್ಣ ಅಫಜಲಖಾನ ಶಿರಾಜಿಯೊಂದಿಗೆ ಸೆರೆಮನೆಯಲ್ಲಿದ್ದನು. ಅಲ್ಲಿಂದ ಬಿಡುಗಡೆಯಾಗಿ ೧೫೯೭ರಲ್ಲಿ ಒಂದು ಮುಖ್ಯ ಕಾರ್ಯ ನಿಮಿತ್ತವಾಗಿ ಅಹ್ಮದನಗರಕ್ಕೆ ಬಂದನು. ತಿರುಗಿ ಬಂದಮೇಲೆ ಕೆಲವು ಕಾಲ ವಿಜಯಪುರ ನಗರದ ರಾಜ್ಯಪಾಲನಾಗಿದ್ದನು. ಮೊಗಲರೊಂದಿಗೆ ವಿಜಯಪುರದ ರಾಯಭಾರಿಯಾಗಿ, ಫತೇಖಾನನ ಪಾರಪತ್ಯಗಾರನಾಗಿ, ನಾಣ್ಯಶಾಲೆಯ ಮುಖ್ಯಸ್ಥನಾಗಿಯೂ ಕೆಲಸ ಮಾಡಿದ್ದನು.

ಎರಡನೆಯ ಇಬ್ರಾಹೀಮ ಆದಿಲಶಹನ ಆಣತಿಯಂತೆ ಈ ಗ್ರಂಥವನ್ನು ಬರೆಯಲಾಗಿದೆ ಎಂದು ಅವನೇ ತನ್ನ ಗ್ರಂಥದಲ್ಲಿ ಹೇಳಿಕೊಂಡಿದ್ದಾನೆ. ಅವನ ಈ ಗ್ರಂಥದಲ್ಲಿ ಪ್ರಮುಖವಾಗಿ ಆದಿಲಶಾಹಿಗಳ ಪ್ರಾರಂಭದ ಇತಿಹಾಸದಿಂದ ಕ್ರಿ. ಶ.

೧೬೧೨ರ ವರೆಗಿನ ವಿವರಗಳು ದಾಖಲುಗೊಂಡಿವೆ. ಜೊತೆಗೆ ಸಮಕಾಲೀನ ದಕ್ಷಿಣ ಭಾರತ, ಉತ್ತರ ಭಾರತ ವಿಶೇಷವಾಗಿ ಮೊಗಲರ ಹಾಗೂ ಪರ್ಶಿಯಾಗಳ ಚರಿತ್ರೆಯೂ ಬಂದಿದೆ. ಕೆಲವು ವಿಷಯಗಳನ್ನು ಪ್ರತ್ಯಕ್ಷದರ್ಶಿಯಾಗಿ ವರದಿ ಮಾಡಿದ್ದಾನೆ.

ಮೊದಲನೆಯ ಅಲಿ ಆದಿಲಶಹನ ಕಾಲದಲ್ಲಿ ನಡೆದ ಕ್ರಿ. ಶ. ೧೫೬೫ರ ರಕ್ಕಸಗಿ ತಂಗಡಗಿ ಕಾಳಗದಲ್ಲಿ ಬಾದಶಹನ ಜೊತೆಗೆ ರಣರಂಗದಲ್ಲಿ ಇದ್ದನಾದ್ದರಿಂದ ವಿಜಯನಗರ ಕಾಳಗದ ಕುರಿತಾದ ಅವನ ವಿವರಗಳಿಗೆ ಅಧಿಕ ಮಹತ್ವವಿದೆ. ಒಂದು ಉದಾಹರಣೆಯನ್ನು ನೋಡುವುದಾದರೆ,

'ರಾಮರಾಯನ ಮಗ ಯುದ್ಧದಲ್ಲಿ ಹೇಗೋ ಬದುಕಿ ಉಳಿದು ಅಲ್ಲಿಯ ಗುಹೆಗಳೊಂದರಲ್ಲಿ ವಾಸಿಸುತ್ತಿದ್ದನು. ಆ ಗುಹೆ ಕೋಟೆಯಿಂದ ಸುಮಾರು ಏಳೆಂಟು ಕೋಸು ದೂರವಿದ್ದು ಅದು ಪ್ರಸಿದ್ಧವೂ ಆಗಿದೆ. ಆ ಗುಹೆಯಲ್ಲಿ ತನ್ನ ಪರಿವಾರದೊಂದಿಗೆ ಜೀವಿಸುತ್ತಿದ್ದನು. ಅನಂತರ ಮೂರು ವರುಷಗಳಾದ ಮೇಲೆ ಒಂದು ದಿನ ಗುಹೆಯಿಂದ ಹೊರಗೆ ಬಂದು ಆದಿಲಶಾಹಿ ಪಾರುಪತ್ಯಗಾರರನ್ನು ಹೊರಗೆ ಹಾಕಿದನು'

ಶಿರಾಜಿ ದೆಹಲಿಗೆ ಹಲವಾರು ಬಾರಿ ಹೋಗಿದ್ದನು. ಅಕ್ಬರ ಬಾದಶಹ, ಆತನ ಮಕ್ಕಳಾದ ಸಲೀಮ [ಜಹಾಂಗೀರ], ಡ್ಯಾನಿಯಲ್ ಜೊತೆಗೆ ಸಂಪರ್ಕವೂ ಬಂದಿತ್ತು. ಅಕ್ಬರ ಬಾದಶಹನ ಕುರಿತು ಹೇಳುವಾಗ ಒಂದೆಡೆ ಹೀಗೆ ಹೇಳಿದ್ದಾನೆ.

'ಅಕ್ಬರ್ ಬಾದಶಾಹ ತನ್ನ ಆಳ್ವಿಕೆಯ ಪ್ರಾರಂಭದಲ್ಲಿ ಸ್ವೇಚ್ಛಾಚಾರದಲ್ಲಿರುವ ಶೋಕಿ ಯುವಕನಾಗಿದ್ದ. ಕೆಲವು ವರ್ಷ ಬ್ರಾಹ್ಮಣನೊಬ್ಬನ ಮಗಳನ್ನು ಪ್ರೀತಿಸಿ, ಅವಳನ್ನು ಕರೆತಂದು ತನ್ನ ಖಾಸಗಿ ಮಹಲಿನಲ್ಲಿ ಇರಿಸಿಕೊಂಡಿದ್ದ. ತನ್ನ ಅಧಿಕ ಸಮಯವನ್ನು ಅವಳೊಂದಿಗೆ ಕಳೆಯುತ್ತಿದ್ದ. ಅವಳನ್ನು ಅತ್ಯಂತ ಗಾಢವಾಗಿ ಪ್ರೀತಿಸುತ್ತಿದ್ದ. ಈ ಯುವತಿ ಬಹಳ ಜಾಣೆ ಮತ್ತು ಬುದ್ಧಿವಂತಳಾಗಿದ್ದಳು. ಬಾದಶಾಹನನ್ನು ಸದಾ ತನ್ನ ಬಳಿಯಲ್ಲೇ ಇರುವಂತೆ ಆಕರ್ಷಿಸಿದ್ದಳು. ಆದರೆ ಬಾದಶಾಹ ಸಾಮ್ರಾಜ್ಯ ವಿಸ್ತರಣೆಯಲ್ಲಿ ಆಸಕ್ತಿ ಹೊಂದಿದ್ದನಾದುದರಿಂದ ದಂಡ ಯಾತ್ರೆಗೆ ತೆರಳಿ ವಿಜಯವಾದ ನಂತರ ಸೆರೆ ಹಿಡಿಯಲಾದವರನ್ನು ಗುಲಾಮರನ್ನಾಗಿ, ಸೇವೆಯಲ್ಲಿರಿಸಿಕೊಳ್ಳುವುದು ರೂಢಿಯಾಗಿತ್ತು. ಈ ಬ್ರಾಹ್ಮಣ ಹುಡುಗಿ ಬಾದಶಾಹನಿಗೆ 'ಹೀಗೆ ಕೆಲಸಗಾರರ ಸಂಖ್ಯೆ ಹೆಚ್ಚುತ್ತ ಹೋಗಿ ನಿಮ್ಮ ಪ್ರಜೆಗಳಾಗಿ ನಿಮ್ಮಿಂದ ಹಕ್ಕುಗಳನ್ನು ಕೇಳಬಹುದು' ಎಂದು ಹೇಳಿದಳು. ಅಕ್ಬರ್ ಬಾದಶಾಹ ಇವಳ ಮಾತನ್ನು ಗಾಢವಾಗಿ ಯೋಚಿಸಿದಾಗ ಸರಿಯೆನಿಸಿತು. ಮುಂದೆ ತನ್ನ ಬಳಿಗೆ ಈ ಗುಲಾಮರ ದಂಡನ್ನು ಕರೆದುತರಕೂಡದೆಂದು ತನ್ನ ಸರದಾರರಿಗೆ ತಾಕೀತು ಮಾಡಿದ. ಹೀಗೆ ತನ್ನ ವಿಚಾರಗಳ ಮೂಲಕ ಈ ಬ್ರಾಹ್ಮಣ ಹೆಣ್ಣು ಬಾದಶಾಹನನ್ನು ಹೆಚ್ಚು ಆಕರ್ಷಿಸಿದಳು. ಬಾದಶಾಹ

ಈ ಬ್ರಾಹ್ಮಣ ಹೆಣ್ಣಿನ ಪ್ರೇಮದಲ್ಲಿ ಮುಳುಗಿರತೊಡಗಿದ. ಎಲ್ಲಿಯವರೆಗೆಂದರೆ ಈ ಬ್ರಾಹ್ಮಣ ಹೆಣ್ಣು ಬಾದಶಾಹ ತನ್ನ ಬಾಯಿಗೆ ತುತ್ತು ನೀಡುವ ತನಕ ಊಟ ಮಾಡುತ್ತಿರಲಿಲ್ಲ. ಬ್ರಾಹ್ಮಣರ ರಿವಾಜಿನಂತೆ ಮೊದಲು ಸ್ನಾನ ಮಾಡಿ ನಂತರ ಊಟ ಮಾಡುವುದು ರೂಢಿ. ತಮ್ಮ ಮನೆಯ ಒಂದು ಮೂಲೆಯಲ್ಲಿ ಒಂದು ಚಿಕ್ಕ ದೇವರ ಕೋಣೆ ಮಾಡಿರುತ್ತಾರೆ. ಊಟಕ್ಕಿಂತ ಮುಂಚೆ ದೇವರ ಮೂರ್ತಿಯ ಮುಂದೆ ಊಟ ಬಡಿಸಿಟ್ಟು ಒಂದು ದೀಪವನ್ನು ಬೆಳಗಿಸಿಡುತ್ತಾರೆ. ಈ ಮೂರ್ತಿಯನ್ನು ಸಿಂಗರಿಸುತ್ತಾರೆ. ಅದನ್ನು ಪೂಜಿಸುತ್ತಾರೆ. ಹೀಗೆ ಈ ರಿವಾಜಿನ ಹೆಣ್ಣಿನೊಂದಿಗೆ ವಾಸವಾಗಿದ್ದರಿಂದ ಬಾದಶಾಹ ಅವಳ ಪ್ರಭಾವಕ್ಕೊಳಗಾಗಿದ್ದ. ಅವಳ ಆಕರ್ಷಣೆಗೆ ಎಷ್ಟೊಂದು ಒಳಗಾಗಿದ್ದನೆಂದರೆ ತನ್ನ ಪೂರ್ವಜರ ಧರ್ಮ ಮತ್ತು ಅದರ ಆಚರಣೆಗಳಿಂದ ದೂರವಾಗತೊಡಗಿದ. ಬರಬರುತ್ತ ತನ್ನ ಧರ್ಮಕ್ಕೆ ವಿರೋಧವಾದ ಮೂರ್ತಿಪೂಜೆಯನ್ನು ಮಾಡತೊಡಗಿದ. ಅವರ ಬಟ್ಟೆಬರೆ, ಆಹಾರ ಪದ್ಧತಿಯಂತೆ ನಡೆಯತೊಡಗಿದ. ಹೆಚ್ಚುಕಮ್ಮಿ ಬ್ರಾಹ್ಮಣರಂತೆಯೇ ನಡವಳಿಕೆಯನ್ನು ಪಾಲಿಸತೊಡಗಿದ.'

ಪರ್ಶಿಯನ್ ಭಾಷೆಯಲ್ಲಿದ್ದ ಶಿರಾಜಿಯ ಈ ಗ್ರಂಥ ಈ ವರೆಗೆ ಪ್ರಪಂಚದ ಯಾವ ಭಾಷೆಯಲ್ಲೂ ಅನುವಾದಗೊಂಡಿಲ್ಲ. ಪ್ರ-ಪ್ರಥಮಬಾರಿಗೆ ಕನ್ನಡದಲ್ಲಿ ಬರುತ್ತಿರುವುದು ಇದರ ವಿಶೇಷವಾಗಿದೆ. ಈ ಗ್ರಂಥವನ್ನು ಖ್ಯಾತ ಕಥೆಗಾರ ಫಕೀರ ಮುಹಮ್ಮದ ಕಟ್ಪಾಡಿಯವರು ಸುಂದರವಾಗಿ ಕನ್ನಡಕ್ಕೆ ತಂದಿದ್ದಾರೆ. ಅವರಿಗೆ ಸಹಾಯಕರಾಗಿ ಮೌಲಾನಾ ಸಯ್ಯದ್ ರಶೀದ್ ಅಲಿ ಅಲ್ ಖಾಸಿಮಿ ಅವರು ನೆರವಾಗಿದ್ದಾರೆ. ಉಭಯತರಿಗೂ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

ಈ ಯೋಜನೆಯನ್ನು ರೂಪಿಸುವಲ್ಲಿ, ಮುನ್ನಡೆಸುವಲ್ಲಿ ಉದ್ದಕ್ಕೂ ಮಾರ್ಗದರ್ಶನ ನೀಡಿದ ಸಮಿತಿಯ ಅಧ್ಯಕ್ಷರಾದ ಡಾ. ಎಂ.ಎಂ. ಕಲಬುರ್ಗಿ ಮತ್ತು ಸಹಕಾರವಿತ್ತ ಸಮಿತಿಯ ಸದಸ್ಯರಿಗೆ ಕೃತಜ್ಞತೆಗಳು.

ಮುಖಪುಟ ವಿನ್ಯಾಸಗೊಳಿಸಿದ ಶ್ರೀ ಕೆ.ಕೆ. ಮಕಾಳಿ ಹಾಗೂ ಅಂದವಾಗಿ ಮುದ್ರಿಸಿದ ಬೆಂಗಳೂರಿನ ಪ್ರಿಂಟ್ ಪಾಯಿಂಟ್‌ನ ಶ್ರೀ ಬಿ.ಸಿ. ಪಾಟೀಲ (ಹೆಬ್ಬಾಳ) ಮತ್ತು ಅವರ ಸಿಬ್ಬಂದಿಯನ್ನು ನೆನೆಯುತ್ತೇವೆ.

■

*

# ಪ್ರಾರ್ಥನೆ

## ತರ್ಖೀರತುಲ್ ಮುಲೂಕ್
## (ಬಾದಶಾಹರ ಚರಿತ್ರೆ)

ದಯಾಮಯನೂ ಕರುಣಾಳುವೂ ಆದ ಅಲ್ಲಾಹನ ಕೃಪೆಯಿಂದ.

ಸರ್ವ ಸ್ತುತಿಯೂ ಅವನಿಗಾಗಿ, ಅವನು ಈ ತೃಣಸಮಾನ ಮನುಷ್ಯನಿಗೆ ತನ್ನ ಅದ್ವಿತೀಯ ಪ್ರಕಾಶವನ್ನು ನೀಡಿ ಬೆಳಗಿದ.

ಅವನ ಕೃಪಾಸಾಗರದಿಂದ ಹುಟ್ಟಿದ ಮೋಡಗಳಿಂದ ಸಿಂಪಡಿಸಲಾದ ಹನಿಗಳಿಂದಾಗಿ ನನ್ನ ಕೃತಿಯ ಮೇಲೆ ಸ್ವರ್ಗದ ಸುಗಂಧ ತುಂಬಿದ ಗಾಳಿ ಹರಿದುಬಂತು. ನನ್ನ ಈ ಕೃತಿಯೆಂಬ 'ಊದ್‌ದಾನಿ' ಯಾ ಲೋಬಾನದ ಕುಂಡದಿಂದ ಹರಡಿದ ಹಿತವಾದ ಸುಗಂಧ ಭರಿತ ಹೊಗೆಯು ಅಲ್ಲಾಹನ ದಯೆ ಹಾಗೂ ಕೃಪೆಯು ಸೇರಿಕೊಂಡು ಎಲ್ಲರ ಮನಸ್ಸು ಪ್ರಫುಲ್ಲಗೊಂಡು ಅರಳುವಂತಾಯಿತು. ಈ ಸುವಾಸನೆಯ ವಾತಾವರಣದಿಂದ ರಕ್ತಮಾಂಸ ತುಂಬಿದ ಎದೆಯನ್ನು ಕಸ್ತೂರಿಯ ಪರಿಮಳದಿಂದ ಪುಳಕಗೊಳಿಸಿದ. ಈ ಕೃತಿಯನ್ನು ಸಂಪೂರ್ಣಗೊಳಿಸಿ ಸುಲ್ತಾನರ ದರ್ಬಾರಿನಲ್ಲಿ ಸರ್ವರ ಮುಂದೆ ಪ್ರಸ್ತುತಪಡಿಸಿದೆ. ಇದರಿಂದಾಗಿ ನನ್ನ ಕಾಲದ ಬಾದಶಾಹರ ಸಾಧನೆಗಳ ಬಗ್ಗೆ ಮುಂದಿನ ಜನಾಂಗಕ್ಕೆ ತಿಳುವಳಿಕೆ ಮೂಡಲಿ! ಬಾದಶಾಹರ ತೋಳುಗಳ ಶಕ್ತಿಯ ರಕ್ಷಣೆಗಾಗಿ ನನ್ನ ಈ ಕೃತಿಯು 'ತಾವೀಜು' ಆಗಿ ಪರಿಣಮಿಸಲಿ! ಯುದ್ಧರಂಗದಲ್ಲಿ ವಿರೋಧಿಗಳನ್ನು ಎದುರಿಸುವಾಗ ಅವರ ಶೌರ್ಯಕ್ಕೆ ನಿಶಾನೆಯಾಗಲಿ! ಅವರ ವೈಭವಪೂರ್ಣ ಆಳ್ವಿಕೆಯನ್ನು ಶಕ್ತಿಶಾಲಿಯಾಗಿಸಲಿ! ಜಗತ್ರಕ್ಷಕನಾದ ಅಲ್ಲಾಹ ತನ್ನ ಕೃಪೆಯಿಂದ (ಕಾಬಾವನ್ನು ವಿದ್ರೋಹಿಗಳಿಂದ

ರಕ್ಷಿಸುವುದಕ್ಕಾಗಿ) ಸಾಮಾನ್ಯ ಹಕ್ಕಿಗಳ ಕೊಕ್ಕಿನಿಂದ ಕಲ್ಲುಗಳನ್ನು ಉದುರಿಸಿ ವೈರಿಗಳನ್ನು ಸೋಲಿಸಿದಂತೆ, ದಯಾಮಯನಾದ ಅಲ್ಲಾಹ ನನಗಾಗಿ ರಹಸ್ಯಗಳ ಪರದೆಯನ್ನು ಸರಿಸಿ, ತನ್ನ ಜ್ಞಾನಭಂಡಾರವನ್ನು ಕರುಣಿಸಿದ್ದರಿಂದ ಅತ್ಯಂತ ದೂರದ ಸಂಗತಿಗಳು ನನಗೆ ಕಾಣಿಸತೊಡಗಿದವು. ಅವನು ನನ್ನ ಎಂತಹ ಒಡೆಯನೆಂದರೆ ನನ್ನ ನಾಲಿಗೆಯನ್ನು ಅವನ ಸ್ಮರಣೆಯ ಜಪಮಾಲೆ(ತಸ್ಬೀಹ್)ಯಾಗಿಸಿದ. ಅವನ ಸ್ಮರಣೆಯ ಬೃಹತ್ ಸಾಗರದಲ್ಲಿ ನನ್ನ ನಾಲಗೆಯನ್ನು ಮುಳುಗಿಸಿ ಒದ್ದೆಗೊಳಿಸಿದ.

ಜಗತ್ರಕ್ಷಕನಾದ ಅಲ್ಲಾಹ ಎಂತಹ ಅಪ್ರತಿಮ ವೈದ್ಯನೆಂದರೆ ಅವನು ನೀಡಿದ ವಿಷವೂ ಕೂಡ ನನಗೆ ದಿವ್ಯ ಔಷಧಿಯಾಗಿ ಪರಿಣಮಿಸಿದೆ. ಭೂಮಿಯ ಮೇಲೆ ಎಲ್ಲ ದೀಪಗಳ ಬೆಳಕು ಅವನ ದಿವ್ಯ ಪ್ರಕಾಶದ ಸಂಕೇತವಾಗಿದೆ. ಅವನು ತನ್ನ ದಿವ್ಯ ಸ್ವರೂಪದ ಅಪ್ರತಿಮ ಸೌಂದರ್ಯವನ್ನು ಪ್ರಕಟಿಸಲು ಈ ದೀಪಗಳನ್ನು ಸಂಕೇತವನ್ನಾಗಿಸಿದ್ದಾನೆ. ಅವನ ಏಕರೂಪಿ ಸಿದ್ಧಿ ಸೌಂದರ್ಯವನ್ನು ನಮ್ಮ ಬುದ್ಧಿಯ ಪರಿಧಿಯೊಳಗೆ ತಂದು ಬೆಳಗಿಸಲು ಉಪಯೋಗಿಸಿಕೊಂಡಿದ್ದಾನೆ. ಕುರಾನಿನಲ್ಲಿ **'ಹುವಲ್ ಅವ್ವಲು, ವಲ್ ಆಖಿರು, ವಝ್ಝಾಹಿರು ವಲ್ ಬಾತಿನು, ವಹುವ ಬಿಕುಲ್ಲಿ ಶೈಯಿನ್ ಅಲೀಮ್'** ಅವನು ಆದಿಯೂ ಅಂತ್ಯವೂ, ಪ್ರಕಟವಾಗುವವನೂ, ಅಪ್ರತ್ಯಕ್ಷನಾಗಿರುವವನೂ, ಎಲ್ಲವನ್ನೂ ಬಲ್ಲವನೂ ಅರಿತಿರುವವನೂ ಆಗಿದ್ದಾನೆ.

ಅವನ ಕೃಪಾಕಟಾಕ್ಷವಿಲ್ಲದೆ ಮನುಷ್ಯ ಒಂದು ಕ್ಷಣವೂ ಜೀವಿಸಿರಲಾರ. ಜ್ಞಾನವೂ ಇದನ್ನೇ ಹೇಳುತ್ತಿದೆಯೇನೆಂದರೆ ಅವನ ದಯೆಯನ್ನು ಕ್ಷಣಕ್ಷಣವೂ ಯಾಚಿಸದೆ ಹೋದರೆ ಅವನಿಗೆ ಅಗೌರವ ಸೂಚಿಸಿದಂತೆ ಆಗುತ್ತದೆ. ಅವನ ಕೃಪೆಯಿಂದ ಈ ತಣ್ಣಗಿನ ಗಾಳಿ ಚಲಿಸುತ್ತಿರುತ್ತದೆ.

ಅವನ ಕೋಪತಾಪಕ್ಕೆ ಬಲಿಯಾದ ಸೈತಾನನ್ನು ತನ್ನ ದರ್ಬಾರಿನಿಂದ ಹೊರಗಟ್ಟಿದ. ಅವನ ಮುಖದಲ್ಲಿ ಲಾನತ್(ಧಿಕ್ಕಾರ)ನ ಛಾಯೆಯನ್ನು ಮೂಡಿಸಿದ. ದೇವರ ಪರಿವಾರದಿಂದ ಶಾಶ್ವತವಾಗಿ ಅವನನ್ನು ದೂರವಿರಿಸಿ ಯಾರಿಗೂ ಸಂಬಂಧಿಸದಂತೆ ಮಾಡಿದ. ಉದಾ: ಹಜ್ರತ್ ನೂಹ್(ಅಲೈಹಿಸ್ಸಲಾಂ)ರ ಕಾಲದಲ್ಲಿ ಜಗತ್ಪ್ರಳಯವಾಗುವಾಗ ತನ್ನ ಮಗನನ್ನು ಕರೆದು ದೇವರು ಕರುಣಿಸಿದ ಹಡಗಿನಲ್ಲಿ ಕೂರಲು ಕರೆದಾಗ ಅವನು ತಾನು ಪರ್ವತದ ಮೇಲೆ ಕೂತು ಪ್ರಳಯದ ಪ್ರವಾಹದಿಂದ ಪಾರಾಗುತ್ತೇನೆಂದು ಉತ್ತರಿಸಿದ್ದ. ಸೈತಾನನ ಪಿತೂರಿಯಿಂದ ಹಜ್ರತ್ ನೂಹ್‌ರ ಮಗನಿಗೂ ಯಾವ ಪ್ರಯೋಜನವಾಗಲಿಲ್ಲ. ಜಗತ್ಪ್ರಳಯದಲ್ಲಿ ಪರ್ವತವೂ ಮುಳುಗಿತು, ನೂಹರ ಮಗನೂ ಮುಳುಗಿ ನಾಶವಾದ!

ಸೃಷ್ಟಿಕರ್ತನ ಕೃಪಾ ಕಟಾಕ್ಷ ತೆರೆದಾಗ ಅತ್ಯಂತ ಕ್ರೂರಿಯೆನಿಸಿದ ರಾಜ ಫಿರಾವೂನನ ಪತ್ನಿಗೆ ಕೂಡ ದಯಾಮಯನಾಗುತ್ತಾನೆ.( ಹಜ್ರತ್ ಮೂಸಾ(ಮೋಸೆಸ್) ಕಾಲದಲ್ಲಿ ಆಳುತ್ತಿದ್ದ ಫರೋಹಾ ಅಥವಾ ಫಿರಾವೂನನೆಂಬ ಕ್ರೂರಿ ಅರಸ ತನ್ನ ಸಾವು ಇಲ್ಲಿ ಹುಟ್ಟುವ ಮಗುವಿನಿಂದ ಎಂದು ತಿಳಿದಾಗ ಎಲ್ಲ ಮಕ್ಕಳನ್ನೂ ಕೊಂದು ಹಾಕಲು ಆಜ್ಞಾಪಿಸಿದ. ಇದನ್ನು ತಿಳಿದ ಮೂಸಾರ ತಾಯಿ ಮಗು ಮೂಸಾರನ್ನು ಬುಟ್ಟಿಯಲ್ಲಿಟ್ಟು ನೈಲ್ ನದಿಯಲ್ಲಿ ತೇಲಿ ಬಿಡುತ್ತಾಳೆ. ಈ ಮಗು ಫಿರಾವೂನನ ಪತ್ನಿ ಆಸಿಯಾರ ಕಣ್ಣಿಗೆ ಬಿದ್ದು ಅರಮನೆಗೆ ತಂದು ಸಾಕುತ್ತಾರೆ. ಈ ಕರುಣಾಮಯಿ ಮಾತೃ ಹೃದಯವನ್ನು ಮಗು ಮೂಸಾರು ಬೆಳೆದು ದೊಡ್ಡವರಾಗುವ ತನಕ ಕ್ರೂರ ಫಿರಾವೂನನ ಕ್ರೌರ್ಯದಿಂದ ಅಲ್ಲಾಹ ಕಾಪಾಡುತ್ತಾನೆ).

ಯಾರನ್ನಾದರೂ ರಕ್ಷಿಸಲು ಬಯಸಿದರೆ ದಯಾಮಯನಾದ ಪರಮಾತ್ಮ ಹಜ್ರತ್ ಯೂನಸರನ್ನು ಮೀನಿನ ಹೊಟ್ಟೆಯಲ್ಲಿಟ್ಟು ರಕ್ಷಿಸಿದಂತೆ ರಕ್ಷಿಸಬಲ್ಲವನಾಗಿದ್ದಾನೆ. (ಹಜ್ರತ್ ಯೂನೂಸರನ್ನು ವೈರಿಗಳು ಸಂಹರಿಸುವ ಉದ್ದೇಶದಿಂದ ಬೆನ್ನು ಹತ್ತುತ್ತಾರೆ. ಯೂನುಸ್ ಸಮುದ್ರಕ್ಕೆ ಹಾರುತ್ತಾರೆ. ಸಮುದ್ರದಲ್ಲಿ ದೊಡ್ಡ ಮೀನೊಂದು ಹಜ್ರತ್ ಯೂನುಸರನ್ನು ನುಂಗುತ್ತದೆ. ಅಲ್ಲಾಹ ಮೀನಿನ ಹೊಟ್ಟೆಯಲ್ಲಿ ಯೂನುಸರನ್ನು ರಕ್ಷಿಸಿ ಹೊರ ಬರುವಂತೆ ಮಾಡುತ್ತಾನೆ).

ಅವನ ಕೃಪೆಯಿಂದ ಹಜ್ರತ್ ಝಕರಿಯ್ಯಾರನ್ನು ವೈರಿಗಳಿಂದ ರಕ್ಷಿಸಲು ಭಾರಿ ವೃಕ್ಷದೊಳಗೆ ಅಡಗಿಸಿದ. ಹುಡುಕುತ್ತ ಬಂದ ವೈರಿಗಳ ಕೈಸಿಗದಂತೆ ಅವರನ್ನು ಅಲ್ಲಾಹ ರಕ್ಷಿಸಿದಂತೆ ಪೊರೆಯುವವನಾಗಿದ್ದಾನೆ.

ಬೀಬಿ ಮರಿಯಮಳ(ಮೇರಿ) ನಿರಪರಾಧಿತ್ವವನ್ನು ಸಾಬೀತು ಪಡಿಸಲು ಮಾತುಬಾರದ ಮಗುವಿನ ಬಾಯಿಯಿಂದ ಮಾತುಬರಿಸಿದ. (ಕನ್ಯೆಯಾಗಿದ್ದ ಮರಿಯಂ ಮಗುವನ್ನು ಹೆತ್ತಾಗ ಊರಿನ ಹಿರಿಯರು ಮಗುವಿನ ತಂದೆ ಯಾರೆಂದು ಕಿರುಕುಳ ನೀಡಿ ವಿಚಾರಿಸಿದಾಗ ಮರಿಯಂ ತನ್ನ ಮಗುವೇ ಸಾಕ್ಷಿ ಹೇಳುತ್ತದೆಯೆಂದು ತೋರಿಸಿದಾಗ. ಪುಟ್ಟ ಮಗು ಈಸಾ(ಜೀಸಸ್) ಸಾಕ್ಷಿ ಹೇಳುತ್ತದೆ. ಹೀಗೆ ಮರಿಯಮಳ ಮರ್ಯಾದೆಯನ್ನು ಅಲ್ಲಾಹ ರಕ್ಷಿಸುತ್ತಾನೆ).

ಹಜ್ರತ್ ನೂಹರ ಪ್ರಾರ್ಥನೆಯ ಮೇರೆಗೆ ಭೂಮಿಯಲ್ಲಿ ಸಮುದ್ರವನ್ನು ಹರಿಸಿದ.

ಅವನ ಕೃಪೆಯಿಂದ ಭಯಭೀತರಾದ ಹಜ್ರತ್ ಮೂಸಾರವರಿಗೆ ಸಮುದ್ರವನ್ನು ಸೀಳಿ ಮಾರ್ಗ ತೋರಿದ.

ಅವನೇ ಮುಗಿಲನ್ನು ಗಾಳಿಯ ಮೇಲೆ ತೇಲಿಸುತ್ತಾನೆ, ಮಳೆಯನ್ನು ಸುರಿಸುತ್ತಾನೆ. ಅದೇ ಮಳೆಯ ಹನಿಗಳಿಂದ ಸಮುದ್ರದಲ್ಲಿ ಮುತ್ತು ಹವಳಗಳನ್ನು ಸೃಷ್ಟಿಸುತ್ತಾನೆ.

ಓ ಸೃಷ್ಟಿಕರ್ತನಾದ ಒಡೆಯನೇ ನಿನ್ನ ಮುಂದೆ ಈ ತೃಣಸಮಾನನಾದ ನಿನ್ನ ಸೃಷ್ಟಿಯಾದ ನಾನು ಏನು ಹೇಳಬಲ್ಲೆ!

**"ಮಾ ಅರ್‌ರ್ಫ್‌ನಾಕ ಹಕ್ಕ ಮಾರಿಫತಿಕ'** (ಓ ದೇವರೆ! ನಾವು ನಿನ್ನನ್ನು ಯಾವ ರೀತಿಯಲ್ಲಿ ಅರ್ಥಮಾಡಿಕೊಳ್ಳಬೇಕೋ ಆ ರೀತಿಯಲ್ಲಿ ಅರ್ಥಮಾಡಿಕೊಂಡಿಲ್ಲ). ಈ ನಿನ್ನ ತೃಣಸಮಾನನಾದ ಭಕ್ತ ನಿನ್ನ ಅರಾಧನೆಯನ್ನು ಯಾವ ರೀತಿಯಲ್ಲಿ ಮಾಡಲು ಸಾಧ್ಯ! **'ಮಾ ಅಬದ್‌ನಾಕ ಹಕ್ಕ ಇಬಾದತಿಕ'** (ನಾವು ನಿನ್ನ ಆರಾಧನೆಯನ್ನು ಯಾವ ರೀತಿಯಲ್ಲಿ ಮಾಡಬೇಕೋ ಆ ರೀತಿಯಲ್ಲಿ ಮಾಡಿಲ್ಲ)

ಅದೇ ನನ್ನ ಸೃಷ್ಟಿಕರ್ತನು ಈ ಮಣ್ಣಿನ ದೇಹಕ್ಕೆ ಅಪೂರ್ವ ಗೌರವವನ್ನು ಕರುಣಿಸಿದ ಹಾಗೂ ಇತರ ಸೃಷ್ಟಿಗಳಿಂದ(ದೇವದೂತರು, ಆಕಾಶಕಾಯ ಜಿನ್ನ್‌ಗಳಿಂದ) ಗೌರವಿಸಲ್ಪಡುವಂತೆ ಮಾಡಿದ. ಮನುಷ್ಯನಿಗೆ ಹಲವಾರು ವಿಶಿಷ್ಟ ಇನಾಮುಗಳನ್ನು ಕರುಣಿಸಿದ. ಯಾಕೆಂದರೆ ಎಂದೆಂದಿಗೂ ಈ ಗೌರವಗಳನ್ನು ಕೃತಜ್ಞತೆಗಳೊಂದಿಗೆ ನೆನೆದುಕೊಂಡಿರಲಿ ಮತ್ತು ಯಾವಾಗಲೂ ಇದೇರೀತಿ ಕೃಪಾಕಟಾಕ್ಷವನ್ನು ತೋರಲೆಂದು ಆರಾಧಿಸುತ್ತಿರಲಿ ಎಂಬ ಉದ್ದೇಶ ಅವನಿಗಿತ್ತು.

ದೇವರ ಕೃಪೆಯಿಂದ ಮನುಷ್ಯನ ಜ್ಞಾನಕ್ಕೆ ಬೆಳಕು ಮೂಡುವಂತಾಯಿತು. ಜ್ಞಾನದ ಪರಿಧಿ ಕಮ್ಮಿ ಇರುವವರಿಗೆ ಫಿರ್ಯಾದು ಮಾಡಿದರೂ ಪ್ರಾಪ್ತಿಯಾಗುವಷ್ಟು ಸಾಧಿಸಲು ಅರ್ಹರಾಗಿರುವುದಿಲ್ಲ.

ಓ ವಿಶಾಲ ಹೃದಯದ (ಕರೀಮ್) ಒಡೆಯನೇ! ನೀನು ನಮ್ಮನ್ನು ಪೊರೆದು ಕಾಪಾಡು. ನನ್ನ ಕಡೆಯಿಂದ ದಯಾಮಯನಾದ ನಿನ್ನ ಆರಾಧನೆ ಮತ್ತು ಸಲಾಮನ್ನು ಸ್ವೀಕರಿಸು. ನಿನ್ನ ಕೃಪಾಕಟಾಕ್ಷದ ಪವಿತ್ರ ದೃಷ್ಟಿ ಆಮಿನಾ ಬೀಬಿಯವರ (ಪ್ರವಾದಿಯವರ ತಾಯಿ) ಮಗನಿಗಾಗಿ ಭೂಮಿ ಆಕಾಶಗಳನ್ನು ಸಿಂಗರಿಸಲಾದಂತೆ, ಕುರಾನಿನ ಸಂದೇಶದಲ್ಲಿ ವ್ಯಕ್ತವಾದಂತೆ 'ಇನ್ನಲ್ಲಾಹ ವ ಮಾಲಾಯಿಕತುಹು ಯುಸಲ್ಲೂನ ಅಲನ್ನಬೀಹಿ...(ಖಂಡಿತವಾಗಿಯೂ ಅಲ್ಲಾಹನ ದೇವದೂತರಾದದ 'ಮಲಾಯಿಕ್' ತಂಡ ಸ್ತುತಿಯ ಸಲಾಮ್ ಪ್ರವಾದಿಯವರಿಗಾಗಿ ಹೇಳುತ್ತಾರೆ) ನಮ್ಮನ್ನೂ ಹರಸು.

ಪ್ರತೀ ಕ್ಷಣವೂ, ಪ್ರತೀ ದಿನವೂ ಸರ್ವ ವಿಶ್ವದ ಜನರ ಸಲಾಮ್ ಪ್ರವಾದಿಯವರಿಗೆ ಸಲ್ಲುತ್ತಿರಲಿ! ಪ್ರವಾದಿಯ ಪವಿತ್ರ ಸಂದೇಶಗಳು ಹಾದಿತಪ್ಪಿದ ಜನರಿಗೆ ಸರಿಯಾದ ನೇರ ಹಾದಿಯನ್ನು ತೋರಿತು. ಇವರು ತಮ್ಮ ಪವಿತ್ರ ಹಾಗೂ ಪ್ರಭಾವಿ ಚರ್ಯೆಯ ಮೂಲಕ ಶ್ರೇಷ್ಠ ಧರ್ಮವನ್ನು ಸಂಪೂರ್ಣ ಗೊಳಿಸಿದರು. ಈ ವಿಷಯದಲ್ಲಿ ಕುರಾನ್ ಸಂದೇಶವೂ ಇದೆ: 'ಅಲ್ ಯೌಮ ಅಕ್ಮಲ್‌ತು ಲೆಕುಂ ದೀನಕುಂ ವ ರಝೀತು ಲಕುಮುಲ್ ಇಸ್ಲಾಮ ದೀನ' (ಇಂದು ನಾನು ನಿಮ್ಮ ಇಸ್ಲಾಂ ಧರ್ಮವನ್ನು

ಸಂಪೂರ್ಣ ಗೊಳಿಸಿದೆ). ಇಸ್ಲಾಮ್ ಧರ್ಮವನ್ನು ನಮಗೆ ಉಪದೇಶಿಸಿದ್ದಕ್ಕೆ ನಾವೆಲ್ಲ ಅವರಿಗೆ ಕೃತಜ್ಞರಾಗಿದ್ದೇವೆ. ಹಾಗೂ ಈ ಇಸ್ಲಾಮ್ ಧರ್ಮ ಕೊನೆಯ ಧರ್ಮವಾಗಿದೆ. ವಿಶ್ವದಲ್ಲಿ ತಮ್ಮ ಆಗಮನವು ಈ ಜಗತ್ತಿಗೆ ತುಂಬ ಸುಖದಾಯಕವಾಗಿದೆ. ತಾವು ಅಲ್ಲಾಹನ ಕೊನೆಯ ಪ್ರವಾದಿಯಾಗಿದ್ದೀರಿ. ಅವರಿಗೆ ಉಪದೇಶಿಸಲ್ಪಟ್ಟ ಅಲ್ಲಾಹನ ಸಂದೇಶ ಗ್ರಂಥ 'ಕುರಾನ್' ಕೊನೆಯ ಪವಿತ್ರ ಗ್ರಂಥವಾಗಿದೆ, ಇಸ್ಲಾಮಿನ ಕೊನೆಯ ಷರೀಯತ್ ಕಾನೂನಾಗಿರುತ್ತದೆ. ಸಹಸ್ರಾರು ಸಲಾಮ್ ಶುಭಕಾಮನೆಗಳು ಈ ಪವಿತ್ರ ಪ್ರವಾದಿಯ ಆತ್ಮಕ್ಕೆ. ಮೆಅರಾಜ್‌ನ ಸ್ವರ್ಗಾರೋಹಣ ಮಾಡಿದ ಪವಿತ್ರ ಪ್ರವಾದಿಗೆ ಸಲಾಂ ಸಲ್ಲುತ್ತದೆ.

ಸೃಷ್ಟಿಕರ್ತನಾದ ಅಲ್ಲಾಹನು ಒಂದು ಪವಿತ್ರ ರಾತ್ರಿಯಲ್ಲಿ ಮಿಂಚಿನ ವೇಗದ 'ಬುರಾಖ್' ಎಂಬ ಪವಿತ್ರ ಸವಾರಿಯನ್ನು ಒದಗಿಸಿ ಪ್ರವಾದಿಯನ್ನು ಸ್ವರ್ಗಾರೋಹಣಕ್ಕೆ ಆಹ್ವಾನಿಸಿ ತನ್ನ ವೈಭವಪೂರ್ಣ 'ಅರ್ಷ್' ಎಂಬ ಪವಿತ್ರ ಆಸ್ಥಾನಕ್ಕೆ ಕರೆದು ಅಲ್ಲಾಹ ಗೌರವಿಸಿದ. ಅವರ ಮುಖಾರವಿಂದದ ಸೌಂದರ್ಯವನ್ನು ವೀಕ್ಷಿಸಿದ ದೀನರ ದುಃಖದಾಯಕ ಕ್ಷಣಗಳು ಮರೆಯಾಗುವ ಮದೀನಾದ (ಬತ್ಹಾ) ರಾಜನಿಗೆ ಸಲಾಂ ಸಲ್ಲಿಸುತ್ತೇನೆ, ಮಕ್ಕಾ ನಗರದ ಒಡೆಯನಿಗೆ ಸಲಾಂ ಸಲ್ಲಿಸುತ್ತೇನೆ. 'ಅತಾರಿದ್' ಎಂಬ ಹೆಸರಿನ ಆಕಾಶದಲ್ಲಿ ಮಿನುಗುತ್ತಿರುವ ಹೆಸರಾಂತ ನಕ್ಷತ್ರದ ಪ್ರಭಾವವಿರುವ ಪ್ರವಾದಿಗೆ ಸಲಾಂ. ನಿರ್ದಿಷ್ಟ ದಿಕ್ಕಿನ ಗುರಿತಲಪುವುದಕ್ಕೆ ಸಮುದ್ರ ಯಾನದಲ್ಲಿರುವ ಪ್ರಯಾಣಿಕರಿಗೆ ಸಹಕಾರಿಯಾಗುವ ನಕ್ಷತ್ರ 'ಝೊಹರಾ'ದಂತೆ ಹೊಳೆಯುವ ಪ್ರವಾದಿಗೆ ಸಲಾಂ. ಜಗತ್ತನ್ನು ರಕ್ಷಣೆ ಮಾಡುವ ಹೊಣೆಗಾತ್ವ ಹೊಂದಿರುವ 'ಮಿರ್ರೀಖ್' ನಕ್ಷತ್ರದಂತೆ ಇರುವ ಪ್ರವಾದಿಗೆ ಸಲಾಂ. ವಿಶ್ವದ ಜನರಿಗೆ ಸಹಾಯ ಮಾಡುವ 'ಮುಶ್ತರಿ' ನಕ್ಷತ್ರದಂತಿರುವ ಪವಿತ್ರ ಪ್ರವಾದಿಗೆ ಸಲಾಂ. ವೈಭವ ಪೂರ್ಣ ಗೌರವ ಪ್ರಾಪ್ತಿಯಾಗಿರುವ ಧರ್ಮ ರಕ್ಷಕರೂ ಆಗಿರುವ ಪ್ರವಾದಿಗೆ ಸಲಾಂ. ವೈಭವಪೂರ್ಣ ಆಸನ 'ಸಿದ್ರತುಲ್ ಮುನ್ತಹ' ಎಂಬ ಸ್ವರ್ಗದ ಪವಿತ್ರ ವೃಕ್ಷದಂತಿರುವ ಪವಿತ್ರ ಪ್ರವಾದಿಗೆ ಸಲಾಂ ಸಲ್ಲಿಸುತ್ತೇನೆ. ಹಣೆಯ ಮೇಲೆ ಅಲ್ಲಾಹ 'ಲೌಲಾಕ ಲಮಾ ಖಲಕ್ತ...' ಅರ್ಥಾತ್ 'ನೀವಲ್ಲದಿರೆ ಈ ವಿಶ್ವದ ಸೃಷ್ಟಿಯನ್ನು ನಾನು ಮಾಡುತ್ತಿರಲಿಲ್ಲ' ಎಂಬ ಸಂದೇಶ ಬರೆಯಲಾದ ಶುಭ ಹಣೆಯ ಪವಿತ್ರಾತ್ಮರೆನಿಸಲ್ಪಟ್ಟ ಪ್ರವಾದಿಗೆ ಸಲಾಂ. ಸೊಂಟದ ಪಟ್ಟಿಯಲ್ಲಿ 'ರೂಹಿ ಫಿದಾ' ಎಂಬ ಸಂದೇಶ(ನನ್ನ ಜೀವ ನಿನಗಾಗಿ) ಬರೆಯಲಾದ ಅಮೂಲ್ಯ ರತ್ನವನ್ನು ಹೊಂದಿರುವ ಪವಿತ್ರ ಪೈಗಂಬರರಿಗೆ ಸಲಾಂ ಸಲ್ಲಿಸುತ್ತೇನೆ. ತಮ್ಮ ಪವಿತ್ರ ಪಾದದ ಧೂಳು ಕಣ್ಣುಗಳಿಗೆ ಕಾಡಿಗೆಯಾಗಲಿ, ಹಾಗೂ ಶುಭದಾಯಕವಾಗಲಿ! ಪ್ರವಾದಿ ಪವಿತ್ರಾತ್ಮರ ಮುಖಾರವಿಂದವೆಂದರೆ ಶುಭದಾಯಕ ಹುಣ್ಣಿಮೆಯ ಅರಳುತ್ತಿರುವ ಚಂದ್ರನಂತೆ!

ಓ ವಿಶ್ವದ ಒಡೆಯನೇ! ನಿನ್ನ ಸಾಮಾನ್ಯ ಭಕ್ತನಾದ ನನ್ನ ಸಲಾಂ, ಶುಭಕಾಮನೆಗಳನ್ನು ಸ್ವೀಕರಿಸಿ ಕೃತಾರ್ಥನಾಗಿಸು. ನಿನ್ನ ಅತ್ಯಂತ ನಿಕಟ ಮಿತ್ರನೆನಿಸಲ್ಪಟ್ಟ ಪ್ರವಾದಿಗೆ ನಾನು ಸಲ್ಲಿಸಿದ ಸಲಾಂಗಳಿಗಾಗಿ ನನಗೆ ವರವ ಕರುಣಿಸು. ನನ್ನ ನಾಲಗೆಯಲ್ಲಿ ಸದಾ ಪವಿತ್ರ ಪ್ರವಾದಿಗೆ ಸಲಾಂ ಸಲ್ಲಿಸುವ ಅವಕಾಶ ಕಲ್ಪಿಸು! ಈ ಎಲ್ಲ ನನ್ನ ಪವಿತ್ರ ಸಲಾಂಗಳನ್ನು ಅವರ ಮುಂದೆ ಹಾಜರಿಪಡಿಸು! ಸಲಾಂ ಇರಲಿ ಅವರ ಸನ್ನಿಧಾನದಲ್ಲಿ ಮತ್ತು ಅವರನ್ನು ನೆನಪು ಮಾಡುವವರು ಹಾಗೂ ನೆನಪು ಮಾಡದಿರುವವರ ಪರವಾಗಿ ಸರ್ವರ ಸಲಾಂ ಅವರಿಗೆ ಸಲ್ಲಲಿ! ಅವರ ಪ್ರಾಮಾಣಿಕ ಅನುಯಾಯಿಗಳಿಗೂ ನಮ್ಮ ಸಲಾಂಗಳು ಸಲ್ಲಲಿ! ಯಾಕೆಂದರೆ ಇವರು ಮುಹಮ್ಮದ್ ಪೈಗಂಬರರು ಉಪದೇಶಿಸಿದ ಧರ್ಮದ ಬುನಾದಿಯಾಗಿದ್ದವರು! ಸಂದೇಶಗಳ ದಾರಿದೀಪಗಳು, ಕಗ್ಗತ್ತಲೆಯ ಬೆಳಗುವ ಪ್ರಕಾಶಗಳಾಗಿದ್ದಾರೆ!

**ವಲ್ ಹಂದುಲಿಲ್ಲಾಹಿ ರಬ್ಬಿಲ್ ಆಲಮೀನ್!**

(ಎಲ್ಲ ಸ್ತುತಿಗಳೂ, ಸೃಷ್ಟಿಕರ್ತನೇ ನಿನಗಾಗಿ!).

■

*

# ಅಧ್ಯಾಯ – ೧

ಈ ನಿನ್ನ ತೃಣಸಮಾನ ಭಕ್ತ ರಫಿಯುದ್ದೀನ್ ಶಿರಾಜಿ, ಮಾಡಿದ ತಪ್ಪುಗಳಿಗೆ ಕ್ಷಮದಾನ ಮಾಡಿ ನನಗೆ ನಿನ್ನ ಒಳಿತನ್ನು ದಯಪಾಲಿಸು, ನನ್ನ ನಾಲಗೆಯಲ್ಲಿ ಸತ್ಯ ಹೇಳುವ ಶಕ್ತಿಯ ಕರುಣಿಸು!

ತಿಳಿದಿರಬೇಕಾದ ವಿಷಯವೇನೆಂದರೆ ಪ್ರತಿಯೊಂದು ಕಾಲದಲ್ಲೂ, ತಮ್ಮ ವೈಯಕ್ತಿಕ ಅನುಭವಕ್ಕೆ ತಕ್ಕಂತೆ ಬರಹಗಾರರು ತಮ್ಮ ಕೃತಿಗಳನ್ನು ರಚಿಸಿದರು. ನಾನು ಈ ಪುಸ್ತಕವನ್ನು ಅಲ್ಲಾಹನ ನಾಮಸ್ಮರಣೆ ಮತ್ತು ಅವನ ಪ್ರವಾದಿಯನ್ನು ನೆನೆಯುವುದರೊಂದಿಗೆ ಶುರುಮಾಡಿದ್ದೇನೆ. ನಾನು ಇಲ್ಲಿ ವೈಭವಪೂರ್ಣ ಪರಿಸರದಲ್ಲಿ ಬದುಕಿದ ಮಹನೀಯರು ಹಾಗೂ ಅವರ ಒಳ್ಳೆಯ, ಗೌರವಾನ್ವಿತ ಗುಣನಡತೆಗಳ ಸಂಗತಿಗಳನ್ನು ಸಂಗ್ರಹಿಸಿದ್ದೇನೆ. ಮುಖ್ಯವಾಗಿ ದಿವಂಗತರಾದ ದೊಡ್ಡ ದೊಡ್ಡ ಬಾದಶಾಹರ ಆಳ್ವಿಕೆಯ ಸಂದರ್ಭದ ಘಟನೆಗಳು, ಸಂಗತಿಗಳು, ವಿದ್ಯಮಾನಗಳನ್ನು ಇಲ್ಲಿ ದಾಖಲೆ ಮಾಡುತ್ತಿದ್ದೇನೆ. ಇದರಿಂದಾಗಿ ವಿಶ್ವದ ಪ್ರಮುಖರಿಗೆ ಅವರ ಹಳೆಯ ತಲೆಮಾರಿನ ಬಾದಶಾಹರ ವಿವರಗಳು, ನಡೆದ ಸಂಗತಿಗಳು ತಿಳಿಯಲಿ, ಸಂಬಂಧಪಟ್ಟ ಪ್ರಾಮಾಣಿಕ ಹಾಗೂ ಅವರು ಕೈಗೊಂಡ ಒಳ್ಳೆಯ ಕೆಲಸ ಕಾರ್ಯಗಳ ಮಾಹಿತಿ ದೊರೆಯಲಿ, ತಮ್ಮ ಸಭೆ, ಕಾರ್ಯಕ್ರಮಗಳಲ್ಲಿ ಈ ವಿಷಯಗಳ ವಿವರಗಳನ್ನು ಹಂಚಿಕೊಳ್ಳಲಿ ಎಂಬ ಉದ್ದೇಶದೊಂದಿಗೆ ಈ ಪುಸ್ತಕವನ್ನು ರಚಿಸಿದ್ದೇನೆ.

ಅವರು ತಮ್ಮ ಆಳ್ವಿಕೆಯಲ್ಲಿ ಮೊದಲಿಂದ ಕೊನೆಯತನಕವೂ ಕಾರ್ಯಕ್ರಮಗಳನ್ನು ಕೈಗೊಂಡ ವಿವರಗಳನ್ನು ನಾನು ಸಂಗ್ರಹಿಸಿದ್ದೇನೆ. ಇದರಿಂದ ನಮಗೆ ಸಾಕಷ್ಟು ಮಾಹಿತಿ, ಪಾಠಗಳು ದೊರೆಯಲಿ! ಅವರಿಗೆ ತಮ್ಮ ಈ ಮಾಹಿತಿಯಿಂದ ಇತಿಹಾಸದುದ್ದಕ್ಕೂ ಗೌರವ ಲಭಿಸಲಿ. **‘ಅಲ್ ಮರ್‌ವು ಎಫ್‌ನ, ಎಫ್‌ಕ ಝಿಕ್ರ್ ಹೂ**

ಅಬದನ್' ಮನುಷ್ಯನಿಗೆ ಅಳಿವು ಇದೆ, ಆದರೆ ಅವನ ನೆನಪು ಮಾತ್ರ ಚಿರಾಯುವಾಗಿರುತ್ತದೆ ಎಂಬ ಜನಜನಿತ ಮಾತು ಇದೆ. ಯಾಕೆಂದರೆ ಇತಿಹಾಸದ ವಿವರಗಳನ್ನು ಬರೆದಿಡುವುದರಿಂದ ಬಹಳಷ್ಟು ಲಾಭವಿದೆ. ಆದರೆ ನಾನು ಈ ಕೃತಿಯಲ್ಲಿ ಮಹತ್ವ ಪೂರ್ಣವಾದ ಗೌರವಾನ್ವಿತರ ಬಗ್ಗೆ ಬರೆದ ಇತಿಹಾಸದಲ್ಲಿ ಅವರ ಸಾಹಸ ಕಾರ್ಯಗಳು, ಉನ್ನತ ಜನೋಪಯೋಗಿ ಕಾರ್ಯಗಳ ವಿವರಗಳನ್ನು ನಮೂದಿಸುವ ಮೂಲಕ ಈ ಗ್ರಂಥವನ್ನು ಬರೆಯ ತೊಡಗಿದ್ದೇನೆ. ಇದು ಮುಂದಿನ ಜನಾಂಗಕ್ಕೆ ನೆನಪಿನ ಭಂಡಾರವಾಗಲಿ ಎಂಬುದು ನನ್ನ ಉದ್ದೇಶವಾಗಿದೆ.

ಸರ್ವ ಪ್ರಥಮವಾಗಿ ಬಾದಶಾಹರ ಗುಣ ನಡತೆಯ ಕುರಿತು, ಅವರ ಆಳ್ವಿಕೆಯ ಕಾರ್ಯವೈಖರಿ, ದರಬಾರು ನಡೆಸುವ ರೀತಿ ನೀತಿಯ, ನ್ಯಾಯ ಪರಿಪಾಲನೆಯ ಕ್ರಮದ ಬಗ್ಗೆ ನಾನು ಪುಸ್ತಕದಲ್ಲಿ ಬರೆದಿದ್ದೇನೆ. ನಂತರ ಅವರ ಗೆಳೆತನ, ವೈಯಕ್ತಿಕ ಸಂಬಂಧಗಳನ್ನು ಬೆಳೆಸುವ ರೀತಿ ಹಾಗೂ ಈ ಎತ್ತರದ ಶ್ರೇಣಿಗೆ ತಲುಪಲು ಅವರು ಬದುಕಿನಲ್ಲಿ ಪಟ್ಟ ಶ್ರಮ ಮತ್ತು ತಲುಪಿದ ಹಾದಿಯ ಬಗ್ಗೆ ವಿವರಗಗಳನ್ನು ನೀಡಿದ್ದೇನೆ. ಯಾವ ಯಾವ ಘಟನೆಗಳು ಅವರ ಮೇಲೆ ಎಂತಹ ಪರಿಣಾಮ ಬೀರಿತು ಎಂಬುದನ್ನು ವಿವರಿಸಿದ್ದೇನೆ. ಸಂಕಷ್ಟಗಳ ಸಮಯದಲ್ಲಿ ತಮ್ಮ ಯೋಚನಾ ಕ್ರಮಗಳನ್ನು ಯಾವ ರೀತಿಯಲ್ಲಿ ಉಪಯೋಗಿಸಿದರು ಎಂಬುದನ್ನು ಉಲ್ಲೇಖಿಸಿದ್ದೇನೆ. ತನ್ನ ಆಳ್ವಿಕೆಯಲ್ಲಿ ಪಾಲಿಸಿದ ನಿಯಮಾವಳಿಗಳ ಮಹತ್ವ ಮತ್ತು ಅಳವಡಿಸಿದ ನೀತಿ ನಿಯಮಗಳ ಬಗ್ಗೆ ವಿವರಗಳು ಹಾಗೂ ಹೇಗೆ ಪ್ರಜೆಗಳ ಗೌರವವನ್ನು ಗಳಿಸಿದ ಎಂಬ ಬಗ್ಗೆ ಚರ್ಚಿಸಿದ್ದೇನೆ. ಅವರ ಭಾಗ್ಯ ಬೆಳಗುವುದು ಹೇಗೆ ಸಾಧ್ಯವಾಯಿತು ಎಂಬ ವಿವರಗಳನ್ನು ನೀಡಿದ್ದೇನೆ.

ಇಲ್ಲಿ ಅವರ ಬದುಕು, ಆಳ್ವಿಕೆಯ ಸಂದರ್ಭದಲ್ಲಿ ನಡೆದ ವಿಚಿತ್ರವೆನಿಸುವ ಸನ್ನಿವೇಶಗಳ ಬಗ್ಗೆಯೂ ವಿವರಗಳನ್ನು ನೀಡಿದ್ದೇನೆ. ಅವರ ಬದುಕಿನಲ್ಲಿ ಎದುರಾದ ಅಪಾಯ, ಅಪಘಾತ ಮತ್ತು ಕುತಂತ್ರ ನಡೆದುದರ ಉಲ್ಲೇಖವನ್ನು ಮಾಡಿದ್ದೇನೆ. ಇಂತಹ ಸಂದರ್ಭದಲ್ಲಿ ಧೃತಿಗೆಡದೆ ಅವರ ಬದುಕಿನ ಹಡಗವನ್ನು ಬಿರುಗಾಳಿಯಿಂದ ಪಾರುಮಾಡಿದ ಪರಿಯನ್ನು ಕೂಡ ನಮೂದಿಸಿದ್ದೇನೆ.

ಮುಂದೆ ನಾನು ವಿವರ ಯಾ ಚರಿತ್ರೆಯನ್ನು ನೀಡಲಿರುವ ಬಾದಶಾಹರ ಗಮನ ಸರ್ವ ದೇಶಗಳ ಮತ್ತು ವಿಶ್ವದ ಸರಹದ್ದುಗಳಲ್ಲಿ ನಡೆಯುವ ವಿದ್ಯಮಾನಗಳ ಬಗ್ಗೆಯೂ ಕೇಂದ್ರೀಕರಿಸಿತ್ತು. ಅವರು ವಿಶ್ವದ ಬಾದಶಾಹರಾಗಿಯೂ ಸಕಲ ಕಾರ್ಯಸಿದ್ಧಿಯ ಚತುರರಾಗಿಯೂ, ಮುಸಲ್ಮಾನರಿಗೆ ಒಂದು ಮಾದರಿಯಾಗಿದ್ದರು. ತಮ್ಮ ಕಾಲದ ವೀರಾಧಿವೀರರೆನಿಸಲ್ಪಟ್ಟಿದ್ದರು. ಮಿಸ್ತರಿ ಮತ್ತು ಮಿರ್ರೀಖ್ ನಕ್ಷತ್ರಗಳು ಮಿನುಗುವಂತೆ ಭೂಮಿಯಲ್ಲಿ ಮಿನುಗುತ್ತಿದ್ದರು, ಸೂರ್ಯನ ಪ್ರಕಾಶವೂ ಅವರಲ್ಲಿತ್ತು. ಅತ್ಯಂತ ಶಕ್ತಿಶಾಲಿ ಬಾದಶಾಹರಾಗಿದ್ದರು. ನಕ್ಷತ್ರ ಪುಂಜದ ಬೆಳಕಾಗಿದ್ದರು. ಚಕ್ರವರ್ತಿ

ಹಜ್ರತ್ ಸುಲೇಮಾನ್ ಪೈಗಂಬರರು ತಾಳಿದಂತಹ ದೃಢಸಂಕಲ್ಪವನ್ನು ಹೊಂದಿದವರಾಗಿದ್ದರು. ಪೈಗಂಬರರಾದ ಹಜ್ರತ್ ಯೂಸುಫ್‌ರಂತೆ ತಿಳುವಳಿಕೆ ಉಳ್ಳವರಾಗಿದ್ದರು. ಅತ್ಯಂತ ಬುದ್ಧಿವಂತರೂ, ಚಾಣಾಕ್ಷರೂ ಆಗಿ, ವಿಶ್ವದ ದೇಶಗಳನ್ನು ಜಯಿಸುವ ಪರಾಕ್ರಮಿಯಾಗಿದ್ದರು. ಇವರು ಭೂಮಿ ಆಕಾಶದಲ್ಲಿ ಅಲ್ಲಾಹನ ಅನುಮತಿಪಡೆದು ಒಡೆಯನಾಗಿ ಮೆರೆವ ಸತ್ಯ ಧರ್ಮ ಪಾಲಕನಾದ ಷಾ ಇಬ್ರಾಹೀಮ್ ಆದಿಲ್‌ಷಾ ಬಿನ್ ಷಾ ತಹ್‌ಮಾಸ್ಫ್ ಬಿನ್ ಷಾ ಇಬ್ರಾಹಿಂ ಆಗಿದ್ದಾರೆ.

ಅಲ್ಲಾಹ ಈ ಬಾದಶಾಹನ ರಾಜ್ಯವನ್ನು ಮತ್ತು ದರ್ಬಾರನ್ನು ಕಾಪಾಡಲಿ. ವಿಶ್ವದಲ್ಲಿ ಅವರ ಪ್ರಾಮಾಣಿಕತೆ, ದಯಾಪರತೆ ಜಾರಿಯಲ್ಲಿರುವಂತೆ ಮಾಡಲಿ!

ಇವರು ತಮ್ಮ ಕಾಲದಲ್ಲಿ ಸರ್ವಶ್ರೇಷ್ಠ ಹಾಗೂ ಎತ್ತರದಲ್ಲಿ ಉರಿಯುವ ಸೂರ್ಯನಂತೆ ಮತ್ತು ಬೆಳಗುವ ಚಂದ್ರನಂತೆ ವಿಶ್ವದಲ್ಲಿ ಹೆಸರು ಪಡೆದಿದ್ದರು. ಇವರ ಶ್ರೇಷ್ಠತೆಯ ಎತ್ತರ ಆಕಾಶವನ್ನು ಮುಟ್ಟುವಂತಿತ್ತು. ಇವರ ಯೋಚನೆಗಳು ಮತ್ತು ಜ್ಞಾನದ ಹಾಸಿಗೆ ಎಲ್ಲೆಡೆಗಳಲ್ಲೂ ಹರಡಿತ್ತು. ಅವರ ದಯಾಪರತೆಯ ಮುಗಿಲು ಭರಪೂರವಾಗಿ ಮಳೆಗೆರೆಯುತ್ತಿತ್ತು. ರಾಜ್ಯದ ಪ್ರತಿಯೊಬ್ಬ ಪ್ರಜೆಯೂ ಒಂದಲ್ಲ ಒಂದು ರೀತಿಯಲ್ಲಿ ಅವರ ಸಹಾಯವನ್ನು ಪಡೆಯುತ್ತಲೇ ಇದ್ದ. ಅವರ ಯಶಸ್ಸಿನ ತಂಗಾಳಿ ಹೂಗಳನ್ನು ತಡವಿ ಉಣಿಸುತ್ತಿತ್ತು. ಅವುಗಳಿರುವ ವಾತಾವರಣದಲ್ಲಿ ಬುಲ್‌ಬುಲ್ ಹಕ್ಕಿಗಳು ಹಾರುತ್ತ ಹಾಡುತ್ತಿದ್ದವು. ಇವರ ಆಳ್ವಿಕೆಯ ಮಸ್ಕ್ ಸುಗಂಧಕ್ಕೆ ಎಲ್ಲರೂ ಮತ್ತೇರಿ ತಮ್ಮ ಇರವನ್ನು ಮರೆತು ಆನಂದದಲ್ಲಿ ತೇಲಾಡುತ್ತಿದ್ದರು. ಅವರ ಆಳ್ವಿಕೆ ಅತ್ಯಂತ ಶಕ್ತಿಶಾಲಿಯೆನಿಸಿ, ಮಜಬೂತಾಗಿತ್ತು. ಜಯಮಾಲೆಯು ಅವರನ್ನು ನೆರಳಿನಂತೆ ಹಿಂಬಾಲಿಸುತ್ತಿತ್ತು. ಅವರ ಆಳ್ವಿಕೆಯ ದರ್ಬಾರು ದೊಡ್ಡ ಮತ್ತು ವಿಶಾಲವಾದ ಆವರಣದಲ್ಲಿನ ವೈಭವದ ಡೇರೆಯಲ್ಲಿ ಎಲ್ಲರಿಗೂ ಪಾಲ್ಗೊಳ್ಳುವ ಸಮಾನ ಅವಕಾಶ ಸಿಗುವಂತಹ ರೀತಿಯಲ್ಲಿ ನಡೆಯುತ್ತಿತ್ತು.

ಅವರು ನಸುನಗೆ ಬೀರಿದಾಗಲೆಲ್ಲ ಆಕಾಂಕ್ಷಿಗಳಿಗೆ ಇನಾಮುಗಳ ಸುರಿಮಳೆಯಾಗುತ್ತಿತ್ತು. ಅವರ ಹೊಳೆಯುವ ಹಣೆಯಲ್ಲಿ ಜೊತೆಗಾರರಿಗೆ ಸಂತೋಷ ಉಲ್ಲಾಸ ಮೂಡುವಂತಹ ಲಕ್ಷಣವು ಕಂಡು ಬರುತ್ತಿತ್ತು. ಅವರು ಸದಾ ಶಾಂತಿ ಬಯಸುವ ಕುದುರೆಯ ಸವಾರಿಮಾಡುತ್ತಿದ್ದರು. ಅವರಲ್ಲಿ ಸಲಹೆ ಯಾ ತೀರ್ಮಾನ ಯಾಚಿಸಿ ಬರುವವರು ಸಿಕ್ಕ ತೀರ್ಪಿನಿಂದ ಮತ್ತು ಸಲಹೆಯಿಂದ ಸದಾ ಸಂತೃಪ್ತರಾಗಿ ಹಿಂತಿರುಗುತ್ತಿದ್ದರು. ಸಹಾಯ ಪಡೆದವರ ಬದುಕು ನೆಮ್ಮದಿಯಲ್ಲಿ ಕಳೆಯುತ್ತಿತ್ತು.

ಅವರು ಶಾಂತಿ(ಅಮನ್) ಸಮೃದ್ಧಿಯನ್ನು ಕಾಪಾಡುವವರೂ, ಸಹಾಯಹಸ್ತರೂ ಆಗಿದ್ದರು. ಅವರ ಅರಮನೆಯ ಬಾಗಿಲು ಸರ್ವರಿಗೂ ತೆರೆದಿರುತ್ತಿತ್ತು. ಅವರ

ವ್ಯಕ್ತಿತ್ವ ಎಲ್ಲರಿಗಿಂತ ಭಿನ್ನವಾಗಿತ್ತು. ಮುತ್ತುಗಳನ್ನು ಉದುರಿಸುವ ಅವರ ಹಸ್ತ ಸದಾ ದೀನರಿಗೆ ಸಹಾಯ ಮಾಡಲು ಕಾತರಿಸುವಂತಿತ್ತು. ಅವರ ವಿಶಾಲವಾದ ದರ್ಬಾರು ಭೂಮಿಯ ನಾಲ್ಕು ಮೂಲೆಗಳಿಗೂ ಹರಡಿತ್ತು. ಈ ಭೂಮಿಯ ಉದ್ದಗಲದಲ್ಲೂ ಸುಗಂಧದ ಸುವಾಸನೆ ಹರಡಿತ್ತು. ಅವರ ಶಕ್ತಿಶಾಲಿ ವೈಭವಪೂರ್ಣ ಕೋಟೆಯ ಕಮಾನುಗಳು ಆಕಾಶದಲ್ಲಿ ಮೂಡುವ ಕಾಮನಬಿಲ್ಲಿನ ಎತ್ತರಕ್ಕೆ ಏರುವಂತಹ ವೈಭವಪೂರ್ಣ ವೈಶಿಷ್ಟ್ಯವನ್ನು ಪಡೆದಿತ್ತು! ಅವರ ಅರಮನೆ ಮಹಲಿನ ಪರದೆಗಳು ಏಳು ದಿಕ್ಕಿನ ಹಾದಿಯನ್ನು ಆವರಿಸಿ ಹರಡುವಂತಿದ್ದವು. ಅವರ ಕೈಯಲ್ಲಿ ರಾರಾಜಿಸುತ್ತಿರುವ ಖಡ್ಗವು ಒಂಭತ್ತು ಗುರಿಗಳನ್ನು ಒಂದೇ ಹೊಡೆತದಲ್ಲಿ ಮುಟ್ಟುವಂತಿತ್ತು. ಅವರ ನೋಟವು ಏಳು ನಕ್ಷತ್ರಗಳ ಹೊಳಪನ್ನು ಒಳಗೊಂಡಿದ್ದವು. ಅವರು ಅತ್ಯಂತ ಶೂರವೀರರಾಗಿದ್ದರು. ಬಾದಶಾಹ ಹಜ್ರತ್ ಸುಲೇಮಾನರ ಆಳ್ವಿಕೆಯಲ್ಲಿ ಶಾಂತಿ ಸಮೃದ್ಧಿಯು ತುಂಬಿದ್ದಂತೆ ತನ್ನ ರಾಜ್ಯದಲ್ಲಿ ಸದಾ ನೆಮ್ಮದಿ, ಸಮೃದ್ಧಿ ತುಂಬಿ ತುಳುಕುತ್ತಿರುವಂತೆ ಮಾಡುವ ಸಾಮರ್ಥ್ಯ ಇಟ್ಟುಕೊಂಡವರಾಗಿದ್ದರು.

ಅವರ ರಾಜ್ಯದಲ್ಲಿ ಅಂಧಕಾರದಲ್ಲಿ ಬದುಕುತ್ತಿರುವ ದೀನ ದರಿದ್ರ ಪ್ರಜೆಗಳಿಗೆ ಅವರು ಆಶಾಕಿರಣವಾಗಿದ್ದರು. ಅವರ ವಿರುದ್ಧ ಕಪಟ, ಕುತಂತ್ರ ಮಾಡುವ ವೈರಿಗಳು ನಾಮಾವಶೇಷ ಉಳಿಯದಂತೆ ನಾಶವಾಗುತ್ತಿದ್ದರು. ನ್ಯಾಯ ತೀರ್ಮಾನ ಮಾಡುವ ದರ್ಬಾರಿನಲ್ಲಿ ತಿಲಮಾತ್ರದಷ್ಟು ಕೂಡ ಕುಂದುಕೊರತೆಗಳು ಉಂಟಾಗದಂತೆ ನೋಡಿಕೊಳ್ಳುತ್ತಿದ್ದರು. ಅವರ ಲೇಖನಿಯು ಪ್ರಶಾಂತತೆಯ ಕಡೆಗೆ ಮುಖಮಾಡಿರುತ್ತಿತ್ತು! ಎಂತಹ ಯೋಜನೆಗಳನ್ನು ಅವರು ರೂಪಿಸುತ್ತಿದ್ದರೆಂದರೆ ಪೂರ್ಣಗೊಂಡು ಕಾರ್ಯರೂಪಕ್ಕೆ ಬಂದಾಗ ಅದರ ಮೂಲಕ ಸರ್ವರಿಗೂ ಹಿತವಾಗುವಂತೆ ಫಲಕಾರಿಯಾಗಿರುತ್ತಿತ್ತು. ಇನಾಮುಗಳನ್ನು ನೀಡುವ ಅವರ ಸಹಾಯ ಹಸ್ತವು 'ಅಮ್ಮಾನ್' ಎಂಬ ಶಾಂತಿ ಸಮುದ್ರದಂತೆ ವಿಶಾಲ ಮತ್ತು ಆಳವಾಗಿ ಭವ್ಯವಾಗಿತ್ತು. ತಮ್ಮ ದರ್ಬಾರಿಗೆ ಸಹಾಯ ಅಪೇಕ್ಷಿಸಿ ಆಗಮಿಸಿ ಬರುವ ದೀನ ದಲಿತರಾದ ಸಾಮಾನ್ಯ ಪ್ರಜೆಗಳು ಖಾಲಿ ಕೈಯಲ್ಲಿ ಹಿಂತಿರುಗದಂತೆ ವ್ಯವಸ್ಥೆಮಾಡಿದ್ದರು. ನಿಯಮಿತವಾಗಿ ನಿರ್ಧರಿಸಲಾದ ಇನಾಮು ಭಕ್ಷೀಸುಗಳನ್ನು ನೀಡುವಾಗ ಒಂದಿನಿತೂ ಕಮ್ಮಿಯಾಗದಂತೆ ವ್ಯವಸ್ಥೆ ಮಾಡುತ್ತಿದ್ದರು. ಈ ವಿವರಗಳ ಮೂಲಕ ಅವರ ವೈಭವಪೂರ್ಣ ಆಳ್ವಿಕೆಯ ಮೇಲೆ ಕಿಂಚಿತ್ ರೂಪದ ಕ್ಷ-ಕಿರಣ ಮೂಡಿಸಲು ಯತ್ನಿಸಿದ್ದೇನೆ.

ಇಂತಹ ಬಾದಶಾಹರ ಇತಿಹಾಸ(ತಝ್ಕಿರತುಲ್ ಮುಲೂಕ್)ಗಳು ಕೂಡ ಸಹಸ್ರಾರು ಇವೆ. ಬಹಳ ವಿವರವಾಗಿಯೂ ಇವೆ. ನಾನು ನನ್ನ ಶಕ್ತ್ಯಾನುಸಾರ ಎಲ್ಲ ವಿವರಗಳನ್ನೂ ಒಳಗೊಂಡಿರುವಂತೆ ಚುಟುಕಾಗಿ ಮೂಡಿಸುವ ಕೆಲಸ ಮಾಡಿದ್ದೇನೆ. ದಯಾಮಯನಾದ

ಪರಮಾತ್ಮನಿಂದ ನನಗೆ ಏನೆಲ್ಲ ಲಭಿಸಿತೋ ಮತ್ತು ಸರ್ವರ ಪ್ರೀತಿಪಾತ್ರರಾದ ಪ್ರವಾದಿಯವರ ಕೃಪೆಯಿಂದ ಜ್ಞಾನ ಲಭಿಸಿತೋ ಅದನ್ನು ಇಲ್ಲಿ ಮೂಡಿಸಲು ಪ್ರಯತ್ನಿಸಿದ್ದೇನೆ. ಹಿಂದಿನ ಕಾಲದ ಇತಿಹಾಸದ ಹಲವು ವಿವರಗಳನ್ನು ಬಿಟ್ಟು ಈ ಬಾದಶಾಹರ ಕುಟುಂಬ, ಬದುಕು, ಆಳ್ವಿಕೆಯ ವಿವರಗಳಿಗೆ ಮಾತ್ರ ಈ ಪುಸ್ತಕದಲ್ಲಿ ಸೀಮಿತಗೊಳಿಸಿ, ಮಹತ್ವ ನೀಡಿದ್ದೇನೆ. ಈ ವಿವರಗಳಿಗೆ ಸಂಬಂಧಿಸಿದ ದಿನ, ಕಾಲ, ತಖ್ತೆಗಳ ಸಮೇತ ವಿವರಗಳನ್ನು ಅರ್ಥೈಸಿಕೊಂಡು ಸಂಗ್ರಹ ಮಾಡಿದ್ದೇನೆ. ಅವರ ಆಳ್ವಿಕೆಯ ಕಾಲ ಎಲ್ಲಿಂದ ಶುರುವಾಗುತ್ತದೆ ಎಂಬುದನ್ನೂ ನಮೂದಿಸಿದ್ದೇನೆ. ಅವುಗಳಲ್ಲಿ ಹೆಜ್ಜೆಹೆಜ್ಜೆಗೂ ಅವಲೋಕಿಸಿದಾಗ ಮೊದಲ ಸ್ತರದಲ್ಲಿ ಈ ಬಾದಶಾಹರ ಚಿಕ್ಕಪ್ಪ ಹಜ್ರತ್ ಸುಲ್ತಾನ ಬಾದಶಾಹ ಅಲಿ ಆದಿಲ್ ಷಾರ ಆಳ್ವಿಕೆಯ ವಿವರಗಳೊಂದಿಗೆ ಶುರುಮಾಡುತ್ತೇನೆ. ಈ ವಿವರಗಳಲ್ಲಿ ಇವರಿಗೆ ಸಂಬಂಧಿಸಿದಂತೆ ಬರುವಾಗ ಅವರನ್ನು 'ಜಹಾಂಪನಾ'(ಆಶ್ರಯದಾತ) ಎಂಬ ಗೌರವಾನ್ವಿತ ಹೆಸರಿನಲ್ಲಿ ಮುಂದೆ ಸಂಬೋಧಿಸಲಿದ್ದೇನೆ. ಯಾಕೆಂದರೆ ಈ ಸುಲ್ತಾನ ಕುಟುಂಬದ ಕೃಪೆಗೆ ಒಳಗಾದವನಾಗಿರುವುದರಿಂದ ಅವರ ಇತಿಹಾಸದ ವಿವರಗಳನ್ನು ಮೊದಲು ನೀಡುತ್ತೇನೆ. ನನಗೆ ಈ ಕೃತಿಯನ್ನು ಬರೆಯಲು ಸಮಯ ಸಿಕ್ಕಾಗಲೆಲ್ಲ ಇತಿಹಾಸದ ಗ್ರಂಥಗಳನ್ನು ಅಧ್ಯಯನ ಮಾಡುತ್ತಿದ್ದೆ. ಇದರಿಂದ ನನಗೆ ಈ ಪುಸ್ತಕ ಬರೆಯುವ ಉದ್ದೇಶ ನನ್ನಲ್ಲಿ ಸ್ಪಷ್ಟವಾದ ರೀತಿಯಲ್ಲಿ ಮೂಡಿಬರಲಿ ಎಂಬುದಾಗಿತ್ತು. ಈ ಗ್ರಂಥಗಳಲ್ಲಿ ಮುಖ್ಯವಾಗಿ 'ರೌಝುತುಲ್ ಸಫ್ಘಾರ್' ಗ್ರಂಥದ ಆರು ಸಂಪುಟಗಳು ಮತ್ತು 'ಹಬೀಬು ಸ್ಸಿಯರ್' ಗ್ರಂಥದ ಏಳನೆಯ ಸಂಪುಟ ಮಾತ್ರ ನನ್ನ ಗಮನಕ್ಕೆ ಬಂದಿತ್ತು. ನಾನು ಮೊದಲ ಗ್ರಂಥದ ಆರು ಸಂಪುಟಗಳನ್ನು ಸಮಗ್ರವಾಗಿ ಹಲವಾರು ಬಾರಿ ಅಧ್ಯಯನ ಮಾಡಿದ್ದೇನೆ. ಆದರೆ ಏಳನೆಯ ಸಂಪುಟ ನನಗೆ ಲಭ್ಯವಾಗಲಿಲ್ಲ. ಎರಡನೆಯ ಗ್ರಂಥ 'ಹಬೀಬು ಸ್ಸಿಯರ್'ನ ಏಳನೆಯ ಸಂಪುಟವನ್ನು ಮಾತ್ರ ಅಧ್ಯಯನ ಮಾಡಲು ಸಾಧ್ಯವಾಯಿತು. ಬಾದಶಾಹರ ಆಳ್ವಿಕೆಯ ಹಲವು ಪ್ರಾರಂಭಿಕ ವಿವರಗಳನ್ನು 'ರೌಝುತುಲ್ ಸಫ್ಘಾರ್' ಗ್ರಂಥದಿಂದ ಪಡೆದೆ.

**ಮುಖದ್ದಮಾ (ಪ್ರಸ್ತಾವನೆ)**

(ಈ ಗ್ರಂಥವನ್ನು ಬರೆಯುವ ಉದ್ದೇಶ ಮತ್ತು ರೌಝುತುಲ್ ಸಫ್ಘಾರ್ ಗ್ರಂಥದ ಆರು ಸಂಪುಟಗಳು ಮತ್ತು ಹಬೀಬು ಸ್ಸಿಯರ್ ಗ್ರಂಥದ ಏಳನೆಯ ಸಂಪುಟಗಳಲ್ಲಿ ದೊರೆತ ಮಾಹಿತಿಗಳು)

ಈ ಎಲ್ಲ ಮಾಹಿತಿಗಳು ನನಗೆ ದೊರೆತ ನಂತರ ನಾನು ಇಸ್ಲಾಮಿನ ಆಗಮನದ ನಂತರ ದಕ್ಷಿಣ ಭಾರತಕ್ಕೆ ಬಂದ ಎಲ್ಲ ಬಾದಶಾಹರು ಮತ್ತು ಅದಕ್ಕಿಂತ ಮೊದಲು

ಈ ಪ್ರದೇಶವನ್ನು ಆಳಿದ ರಾಜಮನೆತನಗಳ ವಿವರಗಳನ್ನು ನನಗೆ ಈ ಪುಸ್ತಕದಲ್ಲಿ ಮೂಡಿಸಲು ಸಾಧ್ಯವಾಯಿತು.

**ಬಾದಶಾಹರ ಬದುಕಿನ ವಿವರಗಳು**

ಬಾದಶಾಹರ ಬದುಕಿನ ಬಗ್ಗೆ ಇಲ್ಲಿ ನೀಡಲಾದ ಚಾರಿತ್ರಿಕ ವಿವರಗಳಲ್ಲಿ ಕೆಲವು ನನ್ನ ಅನುಭವಕ್ಕೆ ಬಂದವು, ಇನ್ನು ಕೆಲವು ಇನ್ನಿತರರಿಂದ ಕೇಳಿ ತಿಳಿದುಕೊಂಡವುಗಳಾಗಿವೆ. ಇವುಗಳಲ್ಲಿ ಕೆಲವು ವಿವರವಾಗಿವೆ ಇನ್ನು ಕೆಲವು ಸಂಕ್ಷಿಪ್ತವಾಗಿವೆ. ಇಲ್ಲಿ ಈ ಕೆಲಸದಲ್ಲಿ ಏನಾದರೂ ಅರಿಯದೆ ಚ್ಯುತಿಯುಂಟಾಗಿದ್ದಲ್ಲಿ ಅರ್ಥೈಸುವಲ್ಲಿ, ವಿವರ ನೀಡುವಲ್ಲಿ, ತಪ್ಪುಗಳುಂಟಾದಲ್ಲಿ ಎಲ್ಲ ಬಲ್ಲ ತಾವುಗಳು ದುವಾ ಪ್ರಾರ್ಥನೆಯೊಂದಿಗೆ ಕ್ಷಮಿಸಬೇಕೆಂದು ಕೇಳಿಕೊಳ್ಳುತ್ತೇನೆ. ನನ್ನ ಪರವಾಗಿ ಪ್ರಾರ್ಥಿಸುವ ಮೂಲಕ ನನ್ನ ಪಾರಮಾರ್ಥಿಕ ಬದುಕಿನಲ್ಲಿ ಕುಂದುಕೊರತೆಗಳು ಉಂಟಾದಲ್ಲಿ ದೇವರು ಮನ್ನಿಸಿ ಪೊರೆಯುವಂತೆ ಆಗಲೆಂದು ಹಾರೈಸುತ್ತೇನೆ.

೧೦೧೭ ಹಿಜರಿ ಶಕೆಯಲ್ಲಿ ಪವಿತ್ರ ರಮಝಾನ್ ತಿಂಗಳಲ್ಲಿ ಬಿಜಾಪುರ ರಾಜಧಾನಿಯಲ್ಲಿ (ಹಿಂದೂಪುರವೆಂಬ ಹೆಸರಲ್ಲಿ ಇಂದು ಪ್ರಖ್ಯಾತವಾಗಿದೆ) ಈ ಪುಸ್ತಕವನ್ನು ಬರೆಯಲು ತೊಡಗಿದೆ. ಅಲ್ಲಾಹನು ನನಗೆ ಶಕ್ತಿಯನ್ನು ಕರುಣಿಸಲಿ.

■

*

# ಅಧ್ಯಾಯ-೨

## ದಖ್ಖನಿನ ಬಹಮನಿ ಸುಲ್ತಾನರ ಆಳ್ವಿಕೆ ಮತ್ತು ಅವರ ವಂಶಾವಳಿ

ಚರಿತ್ರೆಯ ವಿವರಗಳನ್ನು ನಾನು ಕಲೆಹಾಕುವಾಗ ಹಲವು ರೀತಿಯ ಸಂಗತಿಗಳು ನನಗೆ ಸಿಕ್ಕಿವೆ. ಕೆಲವು ಜನರ ಪ್ರಕಾರ ಕುಟುಂಬ ಚರಿತ್ರೆಯ ವಿವರಗಳು ಮೂಲದಲ್ಲಿ (ಇರಾನಿನ) ಬಹಮನ್ ಅಸ್ಫಂದ್‌ಯಾರ್ ವಂಶಕ್ಕೆ ಸಂಬಂಧಿಸಿದೆ ಎನ್ನುತ್ತಾರೆ. ಈ ಬಹಮನ್ ಅಸ್ಫಂದಿಯಾರ್ ಇರಾನಿನ ಪ್ರಖ್ಯಾತ ಬಾದಶಾಹ ವಂಶಜರಲ್ಲಿ ಒಬ್ಬನಾಗಿದ್ದ. ಇವನು ಜೊರಾಸ್ಟ್ರಿಯನ್ ಧರ್ಮದವನಾಗಿದ್ದ. ಈ ವಂಶ ವಿಶ್ವದ ಹಲವೆಡೆ ಹಬ್ಬಿಕೊಂಡಿತ್ತು. ಅಸ್ಫಂದಿಯಾರ್ ಭಾರತಕ್ಕೆ ಬಂದಿದ್ದ. ಇವನು ಭಾರತದಲ್ಲಿ ತನ್ನ ವಂಶ ಮತ್ತು ಜೊರಾಸ್ಟ್ರಿಯ ಧರ್ಮವನ್ನು ಪ್ರಚಾರ ಮಾಡಿದ್ದ. ಇನ್ನೊಂದು ಅಭಿಪ್ರಾಯದಂತೆ ಮುಸ್ಲಿಮ್ ಸುಲ್ತಾನರ ವಂಶ ಹಸನ್ ಕಂಗೋರ ಬದುಕಿನ ಅವಧಿಗಿಂತ ಮುಂಚಿನದ್ದಾಗಿದೆ. ಹಸನ್ ಮತ್ತು ಕಂಗೋ ಯುವಕರಾಗಿದ್ದರು. ಇವನ ಹಿಂದಿನ ವಂಶಜರು ಇಲ್ಲಿ ಭಾರತದಲ್ಲಿ ತಮ್ಮ ಸಂಕಷ್ಟಕರ ಬದುಕಿನಲ್ಲಿ ಆಹಾರ, ಆದಾಯಗಳನ್ನು ಅರಸುತ್ತಾ ಬಂದಿದ್ದರು. ಹೀಗೊಂದು ಕತೆ ಪ್ರಚಲಿತದಲ್ಲಿದ್ದಂತೆ ಕಂಗೂ (ಗಂಗೂ) ಒಬ್ಬ ಬ್ರಾಹ್ಮಣ ಪಂಡಿತನಾಗಿದ್ದ. ಒಂದು ಕಾಡಿನಲ್ಲಿ ನಡೆಯುತ್ತ ಹೋಗುತ್ತಿರುವಾಗ ಬೃಹತ್ತಾಕಾರದ ಮರವೊಂದರ ಅಡಿಯಲ್ಲಿ ಯುವಕನೊಬ್ಬ ಮಲಗಿದ್ದುದನ್ನು ಕಂಡ. ಒಂದು ದೊಡ್ಡ ಘಟಸರ್ಪವೊಂದು ಮರದ ಗೆಲ್ಲೊಂದರಲ್ಲಿ ಹೆಡೆಬಿಚ್ಚಿ ನಿಂತು ಈ ಯುವಕನ ಮುಖದ ಮೇಲೆ ನೆರಳು ಬೀಳುವಂತೆ ಸೂರ್ಯನ ಬಿಸಿಲಿನ ಕಿರಣಗಳಿಂದ ರಕ್ಷಿಸಿತ್ತು. ಕಂಗೂ ಈ ಆಶ್ಚರ್ಯಕರ ದೃಶ್ಯವನ್ನು ಕಂಡು ಈ

ಯುವಕ ಯಾರೋ ದೊಡ್ಡ ಮಹಾತ್ಮನಾಗಿರಬೇಕೆಂದುಕೊಂಡ. ಈ ಮಧ್ಯೆ ಹಸನ್ ನಿದ್ದೆಯಿಂದ ಎಚ್ಚತ್ತ. ಕೂಡಲೇ ಸರ್ಪ ಮೌನವಾಗಿ ಅಲ್ಲಿಂದ ಹರಿದು ಮಾಯವಾಯಿತು.

ಕಂಗೂ ಬ್ರಾಹ್ಮಣ ಅವನ ಹತ್ತಿರ ಬಂದ. ಅವನ ಯೋಗಕ್ಷೇಮವನ್ನು ಮತ್ತು ಯಾರು ಎಂತು ಎಂಬ ವಿವರಗಳನ್ನು ತಿಳಿಯುವ ಪ್ರಯತ್ನಮಾಡಿದ. ನಿನಗೆ ಮುಂದೆ ಮಹತ್ವದ ಭಾಗ್ಯ ಲಭಿಸಲಿದೆ ಎಂದು ಹೇಳಿದ. ಆಗ ಹಸನ್ 'ಅದು ನಿನಗೆ ಹೇಗೆ ಗೊತ್ತು? ಅದು ಹೇಗೆ ಸಾಧ್ಯ?' ಎಂದು ಕೇಳಿದ. ಅದಕ್ಕೆ ಉತ್ತರವಾಗಿ ಕಂಗೂ ಬ್ರಾಹ್ಮಣ ತಾನು ಕಂಡ ಆಶ್ಚರ್ಯಕರ ಸಂಗತಿಗಳನ್ನು ತಿಳಿಸಿದ. ಒಂದು ಅಪಾಯಕಾರಿ ಜಂತು ನಿನ್ನನ್ನು ರಕ್ಷಿಸುತ್ತಿರುವುದು ಕಂಡದ್ದರಿಂದ ನನಗೆ ಹೀಗನಿಸಿತು ಎಂದ. ಇದರಿಂದ ನನಗೆ ಅನಿಸುತ್ತದೆ ನೀನು ಖಂಡಿತವಾಗಿಯೂ ಏನೋ ಬಹಳ ಮಹತ್ವದ ಪದವಿ ಲಭಿಸುವ ಉಜ್ವಲ ಭವಿಷ್ಯವನ್ನು ನಾನು ಕಂಡಿದ್ದೇನೆ. ಎಂದಿದ್ದ. ನಾನು ಇನ್ನು ಮುಂದೆ ನಿನ್ನ ಸೇವೆಯನ್ನು ಮಾಡುತ್ತಿರುತ್ತೇನೆ. ಇದರಿಂದ ನನಗೆ ಕೂಡ ಬಹುದೊಡ್ಡ ಭಾಗ್ಯ ಬಂದೊದಗಬಹುದು. ನಂತರ ಅವನೊಂದಿಗೆ ಕಂಗೂ ಬ್ರಾಹ್ಮಣ ಅವನನ್ನು ಕೇಳಿಕೊಂಡ. ನನಗೆ ನಿಮ್ಮಿಂದ ಒಂದು ಕೆಲಸವನ್ನು ಅಪೇಕ್ಷಿಸುತ್ತೇನೆ ಅದೇನೆಂದರೆ ನಿಮ್ಮ ಹೆಸರಿನೊಂದಿಗೆ ನನ್ನ ಹೆಸರು ಕೂಡ ಜೋಡಿಸಿ ಇಟ್ಟುಕೊಳ್ಳುವಂತಾಗಲಿ ಎಂದು ಹಾರೈಸಿದ. ನಿಮ್ಮ ವಂಶದ ಜನರು ಕೂಡ ತಮ್ಮ ಹೆಸರಲ್ಲಿ ನನ್ನ ಹೆಸರನ್ನು ಜೋಡಿಸಿಕೊಳ್ಳುವಂತಾಗಲೆಂದು ಹಾರೈಸಿದ. ಹಸನ್ ಈ ಬ್ರಾಹ್ಮಣನ ಮಾತಿಗೆ ಗೌರವವನ್ನು ನೀಡಿ ತನ್ನ ಹೆಸರಿನ ಜೊತೆಗೆ 'ಬಹಮನ್' ಎಂದು ಬರೆಯತೊಡಗಿದ. ಹೀಗೆ ಅವನ ವಂಶದ ಕೊನೆಯ ಎಂಟನೆಯ ಪೀಳಿಗೆಯ ತನಕ ತಮ್ಮ ಹೆಸರಿನ ಜೊತೆ ಬಹಮನ್ ಎಂಬ ಹೆಸರನ್ನು ಸೇರಿಸಿಕೊಂಡು ದಕ್ಷಿಣ ಭಾರತವನ್ನು ಆಳಿದರು ಮತ್ತು ಹೀಗೆಯೇ ಈ ಹೆಸರು ಚಿರಕಾಲ ಉಳಿಯುವಂತಾಯಿತು.

ಹಸನ್ ಗಂಗೂರಿಗೆ ಷೇಖುಲ್ ಅಖ್ತಾಬ್ ಷೇಖ್ ಮುಹಮ್ಮದ್ ಸಿರಾಜ್ ಜುನೈದಿ (ಖ್ಯಾತ ಸೂಫಿ ಸಂತ)ಯವರ ಬಗ್ಗೆ ಕೇಳಿ ತಿಳಿದಾಗ ಅವರ ಸನ್ನಿಧಾನದಲ್ಲಿ ಮೀರಜ್ ಬಳಿಯ ಕೋತ್‌ಜಿ ಎಂಬ ಹಳ್ಳಿಯಲ್ಲಿ ಭೇಟಿಯಾದರು. ಮೀರಜನ್ನು ಆಗ ಮುರ್ತಜಾಬಾದ್ ಎಂಬ ಹೆಸರಿನಲ್ಲೂ ಕರೆಯಲಾಗುತ್ತಿತ್ತು. ಅವರ ಸಮ್ಮುಖದಲ್ಲಿ ಹಸನ್ ಗಂಗೂ ಆಗಾಗ ಆಶ್ರಮದಲ್ಲಿ ಹಾಜರಾಗುತ್ತಿದ್ದರು. ಒಂದು ದಿನ ಹೀಗೊಂದು ಘಟನೆ ನಡೆಯಿತು. ಜುನೈದಿಯವರು ವಜೂ(ನಮಾಜಿನ ಮುಂಚೆ ಶಾಸ್ತ್ರೋಕ್ತವಾಗಿ ಕೈಕಾಲು ತೊಳೆಯುವ ಕ್ರಮ) ಮಾಡುತ್ತಿದ್ದಾಗ ತಮ್ಮ ತಲೆಯ ಪಗಡಿಯನ್ನು ತೆಗೆದು ಹಿಡಿದಿರಲು ಹಸನ್‌ನ ಕೈಗೆ ನೀಡಿದರು. ಹಸನ್ ಪಗಡಿಯನ್ನು ತನ್ನ ತಲೆಯ ಮೇಲೆ ಇಟ್ಟುಕೊಂಡರು. ಇದನ್ನು ಕಂಡು ಜುನೈದಿಯವರು 'ಓ ಹಸನ್

ನೀವು ನನ್ನಿಂದ ನನ್ನ ಕಿರೀಟವನ್ನು ಕೇಳುತ್ತಿದ್ದೀರಿ' ಎಂದರು. ಕೆಲವು ದಿನಗಳ ತನಕ ಅವರ ಸೇವೆ ಮಾಡುತ್ತ ಹಸನ್ ಕಳೆದರು. ಒಂದು ದಿನ ತನ್ನಲ್ಲಿ ಉಂಟಾದ ಕ್ಷೋಭೆಯ ಬಗ್ಗೆ ಜುನ್ಯೆದಿಯವರ ಬಳಿ ಹೇಳಿಕೊಂಡು ಪರಿಹಾರ ಮಾರ್ಗವನ್ನು ಸೂಚಿಸಲು ಬೇಡಿಕೊಂಡರು. ಷೇಖ್ ಜುನ್ಯೆದಿ ಅವರ ಸಂಕಷ್ಟಗಳ ಬಗ್ಗೆ ಕೇಳಿ ಉತ್ತರವಾಗಿ 'ತಾಳ್ಮೆ ಇರಲಿ, ಸಮಾಧಾನ ಮಾಡಿಕೊಳ್ಳಿ. ಅಲ್ಲಾಹ ಪ್ರತಿಯೊಂದು ಕೆಲಸಗಳನ್ನು ನೆರವೇರಿಸಲು ಸಮಯವನ್ನು ನಿಗದಿಪಡಿಸಿರುತ್ತಾನೆ' ಎಂದು ಹೇಳಿದರು. ಈ ಕಾಲದಲ್ಲಿ ಆ ಪ್ರದೇಶದಲ್ಲಿ ಇಸ್ಲಾಮ್ ಹರಡಿರದೆ ಮುಸ್ಲಿಮರ ಸಂಖ್ಯೆ ಅತ್ಯಂತ ಕಮ್ಮಿ ಇತ್ತು. ಅಲ್ಲಿ ಒಂದು ಮಸೀದಿಯೂ ಕೂಡ ಇರಲಿಲ್ಲ. ಅಲ್ಲಿರುವ ಕೆಲವೇ ಕೆಲವು ಮುಸ್ಲಿಮರು ಸೇರಿ ಷೇಖ್ ಜುನ್ಯೆದಿಯವರ ಪ್ರಾರ್ಥನೆಯ ಸಲುವಾಗಿ ಒಂದು ಮಸೀದಿ ಕಟ್ಟುವ ನಿರ್ಣಯ ಮಾಡಿದರು. ಒಂದು ದಿನ ಹಸನ್ ದೊಡ್ಡದೊಂದು ಮಡಕೆಯಲ್ಲಿ ಮಣ್ಣನ್ನು ತುಂಬಿಕೊಂಡು ಷೇಖ್ ಜುನ್ಯೆದಿಯವರ ಬಳಿಗೆ ಹೋದರು. ಷೇಖ್ ಹೇಳಿದರು, 'ಹಸನ್ ನನ್ನನ್ನು ಲೌಕಿಕವಾದ ಕೆಲಸವನ್ನೂ ಮಾಡಿಯೆಂದು ಸೂಚಿಸುತ್ತಿದ್ದಾರೆ'. ಇದೇ ರೀತಿಯಲ್ಲಿ ಇನ್ನೊಂದು ಘಟನೆಯಂತೆ ಒಂದು ದಿನ ಷೇಖ್‌ರವರು ಮಲಗಿದ್ದಾಗ ಸೂರ್ಯನ ಬಿಸಿಲು ನೇರವಾಗಿ ಅವರ ಮೈಮೇಲೆ ಬೀಳುತ್ತಿರುವುದನ್ನು ಕಂಡು ತನ್ನ ಶಾಲನ್ನು ಅಡ್ಡಹಿಡಿದು ನೆರಳು ಮೂಡುವಂತೆ ಹಸನ್ ನಿಂತರು. ಷೇಖ್ ನಿದ್ದೆಯಿಂದ ಎಚ್ಚತ್ತಾಗ ಇದನ್ನು ನೋಡಿ 'ಹಸನ್ ನನ್ನಿಂದ ಅರಸೊತ್ತಿಗೆಯನ್ನು ಕೇಳುತ್ತಿದ್ದಾರೆ' ಎಂದು ಉದ್ಗಾರ ಮಾಡಿದರು.

ಒಂದು ದಿನ ಹಸನರ ತಾಯಿ ಷೇಖರ ಸಮ್ಮುಖಕ್ಕೆ ಬಂದು ತನ್ನ ಮಗನ ಪರಿಸ್ಥಿತಿಯನ್ನು ತಿಳಿಸಿದಳು. ಷೇಖ್ ಇದಕ್ಕೆ ಉತ್ತರವಾಗಿ ಹತ್ತಿರದ ಒಂದು ಗ್ರಾಮದ ಹೆಸರು ಹೇಳಿ ಅಲ್ಲಿಗೆ ಹೋಗಿ ಕೃಷಿ ಕೆಲಸಮಾಡಿ. ನಿಮ್ಮ ಅಭಿಲಾಷೆಗಳು ಕೈಗೂಡಲಿವೆ ಎಂದು ಹೇಳಿದರು. ಅವರು ಷೇಖ್ ನೀಡಿದ ಸಲಹೆಯಂತೆ ಗ್ರಾಮಕ್ಕೆ ತೆರಳಿ ಕೃಷಿ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಅಲ್ಲಿ ಹೊಲವನ್ನು ಉಳುವಾಗ ಅವರಿಗೆ ಕೆಲವು ತುಂಡಾದ ಮೂರ್ತಿಗಳು ಮತ್ತು ಕಲ್ಲು ಚೂರುಗಳು ದೊರೆತವು. ಈ ಸಂಗತಿಯನ್ನು ಹಸನ್ ತನ್ನ ಷೇಖರಿಗೆ ತಿಳಿಸಿದರು. 'ಅಲ್ಲಾಹನಿಗೆ ತುಂಬ ಧನ್ಯವಾದಗಳು. ನನ್ನ ಉದ್ದೇಶ ಕೂಡಿ ಬರುವ ಸಮಯ ಸನಿಹವಾಗಿದೆ' ಎಂದರು. ಮರುಕ್ಷಣವೇ 'ಓ ಸುಲ್ತಾನ್ ಹಸನ್ ಈಗ ನೀನು ಸೈನ್ಯವನ್ನು ಕಟ್ಟಿ ಯುದ್ಧಕ್ಕೆ ತಯಾರಾಗು' ಎಂದು ಹೇಳಿದರು. ಈ ಹಾದಿ ತಪ್ಪಿದ ಜನರು ವಾಸಿಸುವ ಪ್ರದೇಶದಲ್ಲಿ ಇಸ್ಲಾಮಿನ ಧರ್ಮದ ಆಳ್ವಿಕೆಯ ಸಂಸ್ಥಾಪನೆ ಮಾಡು' ಎಂದೂ ಆದೇಶಿಸಿದರು. ಆಗ ಹಸನ್ 'ಯುದ್ಧಕ್ಕೆ ತಯಾರಿ ಮಾಡಲು ಧನ ಸಂಪತ್ತು ಬೇಕಾಗುತ್ತದೆ. ನಾನಾದರೋ ಕಡು ಬಡವನಾಗಿದ್ದೇನೆ' ಎಂದು ಬಿನ್ನೈಸಿಕೊಂಡರು. ಷೇಖರು ಇದಕ್ಕೆ ಉತ್ತರವಾಗಿ

‘ಭಯಪಡದಿರು! ಅಲ್ಲಾಹ ನಿನಗೆ ತನ್ನದೇ ಆದ ರೀತಿಯಲ್ಲಿ ಧನಸಂಪತ್ತನ್ನು ಕರುಣಿಸುತ್ತಾನೆ ’ ಎನ್ನುತ್ತ ಹಸನ್‌ರ ಕೈಹಿಡಿದು ಕೃಷಿ ಮಾಡಲು ಹೇಳಿದ ಸ್ಥಳಕ್ಕೆ ಕರೆದೊಯ್ದು ‘ಇಲ್ಲಿದೆ ನಿನಗಾಗಿ ಇರಿಸಲಾದ ಖಜಾನೆ’ ಎಂದು ಷೇಖ್ ತೋರಿಸಿದರು.

ಷೇಖ್ ಜುನ್ಯೆದಿಯವರ ಆದೇಶದಂತೆ ಅಲ್ಲಿ ದೊರೆತ ಚಿನ್ನಾಭರಣಗಳ ಕೊಪ್ಪರಿಗೆಯಿಂದ ಸೈನ್ಯಕ್ಕೆ ಬೇಕಾದ ತಯಾರಿಯ ಖರ್ಚು ಭರಿಸಿದರು. ತನ್ನ ಷೇಖರಿಗೂ ಈ ವಿವರಗಳನ್ನು ನೀಡಿದರು. ಗಂಗೂ ಕೂಡ ಈ ಕೆಲಸದಲ್ಲಿ ಹಸನರಿಗೆ ಸಹಕಾರಿಯಾಗಿದ್ದರು. ಷೇಖ್‌ರು ತನ್ನ ಬಳಿ ಗುರುವಾರ ರಾತ್ರಿ ತನ್ನ ಬಳಿ ಬರುವಂತೆ ಹಸನರಿಗೆ ಸೂಚಿಸಿದರು. ಅವರ ಸಲಹೆಯಂತೆ ತನ್ನ ಸಮಸ್ತ ಸೈನ್ಯವನ್ನು ಸೇರಿಸಿಕೊಂಡು ಷೇಖರ ಬಳಿಗೆ ಗುರುವಾರದಂದು ಬಂದು ಸೇರಿದರು. ಷೇಖರು ಫಾತಿಹಾ ಓದಿ ಒಂದು ತಾಯಿತವನ್ನು ಹಸನ್‌ನ ಸೊಂಟಕ್ಕೆ ಕಟ್ಟಿದರು. ನಂತರ ಮೀರಜ್‌ನತ್ತ ಪ್ರಯಾಣ ಬೆಳೆಸಲು ಸೂಚಿಸಿದರು. ಮೀರಜ್ ಬಳಿ ಹಸನ್ ಮತ್ತು ಸಂಗಡಿಗರು ತಲಪಿದಾಗ ಅಲ್ಲಿನ ಕೋಟೆಯ ಸರದಾರಿಣಿ ರಾಣಿ ದುರ್ಗಾವತಿ ಎಂಬ ಹಿಂದೂ ಮಹಿಳೆಯಾಗಿದ್ದು, ಕೋಟೆಯ ಹೊರಗೆ ಸುತ್ತಾಡಲು ಬಂದಿದ್ದಳು. ಇವರನ್ನು ಕಂಡಾಗ ರಾಣಿ ತನ್ನ ಸೈನಿಕರಿಗೆ ತಡೆದು ಯುದ್ಧಹೂಡಲು ಆಜ್ಞೆ ನೀಡಿದಳು. ಎರಡೂ ಕಡೆಯಲ್ಲಿ ಭೀಕರ ಯುದ್ಧ ನಡೆಯಿತು. ಈ ಯುದ್ಧದಲ್ಲಿ ವೀರ ಮುಸಲ್ಮಾನರು ಗೆದ್ದರು. ರಾಣಿ ದುರ್ಗಾವತಿಯನ್ನು ಸೆರೆಹಿಡಿಯಲಾಯಿತು. ಬಹದ್ದೂರ ಮುಸ್ಲಿಂ ಸೈನಿಕರು ಕೋಟೆಯೊಳಗೆ ಪ್ರವೇಶಿಸಿದರು. ಈ ವಿಜಯದ ವಾರ್ತೆಯನ್ನು ಷೇಖ್‌ರವರಿಗೆ ಪತ್ರಮುಖೇನ ಕಳುಹಿಸಲಾಯಿತು. ಷೇಖರು ಈ ಪತ್ರವನ್ನು ಓದಿ ಸಂತಸಪಟ್ಟರು. ಇದಕ್ಕೆ ಉತ್ತರಿಸಿ ಈ ಕೋಟೆಗೆ ಮುಬಾರಕಾಬಾದ್ ಎಂಬ ಹೆಸರಿಡಿ. ಯಾಕೆಂದರೆ ಈ ವಿಜಯ ನಿಮಗೆ ಶುಭದಾಯಕವಾಗಿದೆ ಎಂದು ತಿಳಿಸಿದರು.

ಈ ಎಲ್ಲ ಸಂಗತಿಗಳು ಹಿಜರಿ ೭೪೮ರಲ್ಲಿ ನಡೆದವು. ಇಲ್ಲಿನ ಸಂಪೂರ್ಣ ಇಲಾಖೆ ಈ ಕೋಟೆಯ ಸುಪರ್ದಿಗೆ ಸೇರಿತು. ದಿನೇದಿನೇ ಇಸ್ಲಾಮಿನ ಆಳ್ವಿಕೆಯ ವೈಭವ ಬೆಳಗತೊಡಗಿತು. ನಾಲ್ಕೂ ದಿಕ್ಕಿನಲ್ಲಿ ವಾಸಿಸಿದ್ದ ಜಗಳಗಂಟಿ ಜನರು ಇಲ್ಲಿಂದ ಕಂಬಿಕಿತ್ತರು. ಷೇಖರ ಸಲಹೆಯ ಮೇರೆಗೆ ಹಸನ್ ಗುಲ್ಬರ್ಗಾದ ಕಡೆ ಪ್ರಯಾಣ ಬೆಳೆಸಿದರು. ಗುಲ್ಬರ್ಗಾಕ್ಕೆ ಸಮೀಪಿಸುತ್ತಿದ್ದಂತೆ ಕೋಟೆಯ ಜನಗಳು ಅತ್ಯಂತ ಹೆಚ್ಚಿನ ಮರ್ಯಾದೆ ಗೌರವನೀಡಿ ಸ್ವಾಗತಮಾಡಿದರು. ಇದರಿಂದಾಗಿ ಇಲ್ಲಿ ಯುದ್ಧ ನಡೆಸುವ ಅಗತ್ಯ ಕಂಡುಬರಲಿಲ್ಲ. ಇವೆಲ್ಲ ಸಂಗತಿಗಳ ವಿವರಗಳನ್ನು ಷೇಖರಿಗೆ ದೂತರ ಮೂಲಕ ವರ್ತಮಾನ ತಲಪಿಸಿದರು. ಷೇಖರು ತಮ್ಮ ಉತ್ತರದಲ್ಲಿ ‘ನೀವು ಬುಧವಾರ ರಾತ್ರಿ ಕೋಟೆಯ ಕಡೆ ತೆರಳಿ, ಯಾಕೆಂದರೆ ಆ ದಿನ ಕೋಟೆಯ ಸರದಾರ ಪರಲ್ ರಾವತಯ್ಯ ಕೋಟೆಯಿಂದ ಮೂರು ಮೈಲಿ ದೂರದ ದೇವಾಲಯಕ್ಕೆ ಪೂಜೆಗಾಗಿ

ಈ ಕೋಟೆಯ ಸರದಾರ ಪೂಜೆಗಾಗಿ ಹೋಗುತ್ತಾನೆ. ಆ ಸಂದರ್ಭದಲ್ಲಿ ಕೋಟೆಯನ್ನು ನೀವು ಆಕ್ರಮಿಸಿ' ಎಂದು ಸಲಹೆಯನ್ನು ನೀಡುತ್ತಾರೆ. ಹಸನ್ ಮತ್ತು ಗಂಗೂ ತಮ್ಮ ಸಂಗಡಿಗರೊಂದಿಗೆ ಕೋಟೆಯ ಬಳಿ ಹೋದಾಗ ತಮ್ಮ ಸರದಾರ ಪರಲ್ ರಾವತಯ್ಯ ಬಂದಿದ್ದಾನೆಂದು ತಿಳಿದು ಅಲ್ಲಿನ ಕಾವಲುಗಾರರು ಕೋಟೆಯ ಬಾಗಿಲನ್ನು ತೆರೆದರು. ಹೀಗೆ ಸುಲಭವಾಗಿ ಹಸನ್ ತನ್ನ ಸೈನ್ಯದೊಂದಿಗೆ ಕೋಟೆಯನ್ನು ಪ್ರವೇಶಿಸಿ ತನ್ನ ವಶಕ್ಕೆ ಪಡೆದುಕೊಂಡರು. ಈ ಸುದ್ದಿ ತಿಳಿದಾಗ ಸರದಾರ ಪರಲ್ ರಾವತಯ್ಯ ದೇವಸ್ಥಾನದಿಂದ ಹಿಂದಿರುಗಿ ಆತಂಕಗೊಂಡು ಕೋಟೆಯ ಸನಿಹಕ್ಕೆ ಬಂದ. ಇಬ್ಬರಲ್ಲಿ ತಿಕ್ಕಾಟ ನಡೆದು ಯುದ್ಧ ನಡೆಯಿತು. ಈ ಯುದ್ಧದಲ್ಲಿ ಪರಲ್ ರಾವತಯ್ಯ ಮರಣಗೊಂಡ. ಅವನನ್ನು ಆ ಕೋಟೆಯ ದ್ವಾರದ ಬಳಿ ಅಂತ್ಯ ಸಂಸ್ಕಾರ ಮಾಡಲಾಯಿತು. ಇದರ ಕುರುಹು ಈಗಲೂ ಅಲ್ಲಿ ಕಾಣಬಹುದು. ಈ ವಿಜಯ ಯಾತ್ರೆಯ ಬಳಿಕ ಗುಲ್ಬರ್ಗಾಕ್ಕೆ ಹಸನಾಬಾದ್ ಎಂದು ಹೆಸರಿಡಲಾಯಿ. ಹೀಗೆ ಹಸನ್ ಗಂಗೂವಿನ ಆಳ್ವಿಕೆ ಶುರುವಾಯಿತು. ಇವರಿಗೆ ಸುಲ್ತಾನ್ ಅಲಾವುದ್ದೀನ್ ಬಹಮನ್ ಷಾ ಎಂಬ ಬಿರುದು ಕೂಡ ಸಿಕ್ಕಿತು. ಗಂಗೂ ಪಂಡಿತನಿಗೆ ತನ್ನ ಆಸ್ಥಾನದಲ್ಲಿ ಮುಖ್ಯಮಂತ್ರಿಯನ್ನಾಗಿ ನೇಮಿಸಿದ. ಮುಂದಿನ ಎಲ್ಲ ಪೀಳಿಗೆಯ ಸುಲ್ತಾನರ ಹೆಸರು ಬಹಮನ್ ಷಾ ಎಂದಾಗಬೇಕೆಂದು ಇವರಿಬ್ಬರ ನಡುವೆ ಕರಾರೊಂದು ಮಾಡಿಕೊಳ್ಳಲಾಯಿತು.

ಹೀಗೆ ಇವರ ಎಂಟನೆಯ ಪೀಳಿಗೆಯ ಷಾ ವಲಿಯುಲ್ಲಾಹರ ತನಕವೂ ಬಹಮನ್ ಷಾ ಎಂಬ ಹೆಸರಲ್ಲಿಯೇ ಕರೆಯಲಾಯಿತು. ಇವೆಲ್ಲ ಚರಿತ್ರೆಯ ವಿವರಗಳು ಹಿಜರಿ ಸನ್ ೭೪೮ರ ವರ್ಷಕ್ಕೆ ಸಂಬಂಧಿಸಿದವಾಗಿವೆ. ಅವರ ಆಳ್ವಿಕೆಯ ಕಾಲ ೧೩ವರ್ಷ ಎರಡು ತಿಂಗಳು ೨೭ ದಿನಗಳು ನಡೆದಿತ್ತು. ಈ ಕಾಲಾವಧಿಯಲ್ಲಿ ಹಸನ್ ತನ್ನ ವೈಭವ ಪೂರ್ಣ, ಶಕ್ತಿಯುತ, ಸುಖ ಸಮೃದ್ಧ ಆಳ್ವಿಕೆಯನ್ನು ನಡೆಸಿದರು. ಹಸನ್ ಬಹಮನ್ ಷಾ, ಹಿಜರಿ ೭೬೧ನೇ ವರ್ಷದಲ್ಲಿ ನಿಧನರಾದರು. ಇವರ ವಂಶಜ ಸುಲ್ತಾನರು ಇವರು ಮತ್ತು ಷೇಖರ ಮಾರ್ಗದರ್ಶನದಂತೆ ಮುಂದಿನ ಆಳ್ವಿಕೆಯನ್ನು ನಡೆಸಿದರು. ಅವರ ಮಗ ಸುಲ್ತಾನ್ ಮುಹಮ್ಮದ್ ಷಾನನ್ನು ತನ್ನ ಪಟ್ಟದ ವಾರೀಸುದಾರನನ್ನಾಗಿ ನೇಮಿಸಿದರು.

**ಬಾದಶಾಹ ಸುಲ್ತಾನ್ ಮುಹಮ್ಮದ್ ಷಾ ಬಹಮನಿಯ ಚರಿತ್ರೆ**

ತನ್ನ ತಂದೆಯ ನಿಧನಾ ನಂತರ ಸುಲ್ತಾನ್ ಮುಹಮ್ಮದ್ ಷಾ ಪಟ್ಟಕ್ಕೆ ಬಂದು ತನ್ನ ಆಳ್ವಿಕೆಯಲ್ಲಿ ಅತ್ಯಂತ ಹೆಚ್ಚು ಪ್ರಜೆಗಳ ಗೌರವಕ್ಕೆ ಪಾತ್ರನಾದ. ತನ್ನ ರಾಜ್ಯದ ಪ್ರಜೆಗಳು ಮತ್ತು ಸೈನಿಕರ ಜೊತೆಯಲ್ಲಿ ಸ್ನೇಹ ಹಾಗೂ ಕರುಣಾಮಯ ಗುಣದಿಂದ

ನಡೆದುಕೊಳ್ಳುತ್ತಿದ್ದ. ಈ ಮಾತಿಗೆ ಪುಷ್ಠಿ ನೀಡುವ ಅನೇಕ ಕುರುಹುಗಳು ಈಗಲೂ ನಮಗೆ ಕಾಣಸಿಗುತ್ತವೆ. ತನ್ನ ತಂದೆಯಂತೆ ಮತ್ತು ತಂದೆಯ ಷೇಖ್ ತೋರಿದ ಹಾದಿಯಲ್ಲಿ ಸಾಗುತ್ತ ತನ್ನ ಜೀವಿತ ಕಾಲವನ್ನು ಚರಿತ್ರೆ ಸದಾ ನೆನೆಯುವಂತೆ ಆಡಳಿತವನ್ನು ನಡೆಸಿದ್ದ. ಇವನ ಆಳ್ವಿಕೆಯ ಅವಧಿ ೧೯ ವರ್ಷ, ಏಳು ತಿಂಗಳು ಹಾಗೂ ೯ ದಿನಗಳಾಗಿದ್ದವು. ಸನ್ ಹಿಜರಿ ೭೭೦ರಲ್ಲಿ ಇವರು ನಿಧನರಾದರು. ತೀರಿಕೊಳ್ಳುವ ಮುಂಚೆ ತನ್ನ ಪಟ್ಟದ ವಾರೀಸುದಾರನಾಗಿ ಮುಜಾಹಿದ್ ಷಾನನ್ನು ನೇಮಕ ಮಾಡಿದ್ದ.

**ಮುಜಾಹಿದ್ ಷಾ ಬಲೋಂದ್ ಬಹಮನಿಯ ಆಳ್ವಿಕೆ**

ತನ್ನ ತಂದೆಯ ಕಾಲಾನಂತರ ಮುಜಾಹಿದ್ ಷಾ ಬಲೋಂದ್ ಬಹಮನಿ ರಾಜ್ಯದ ಆಳ್ವಿಕೆಯ ಚುಕ್ಕಾಣಿಯನ್ನು ಹಿಡಿದ. 'ಬಲೋಂದ್' ಎಂಬ ಹೆಸರು ಅತ್ಯಂತ ಧೈರ್ಯಶಾಲಿ ಹಾಗೂ ಶಕ್ತಿಶಾಲಿ ಎಂಬರ್ಥದಲ್ಲಿ ಬಳಕೆಯಾಗುತ್ತಿತ್ತು. ಇವನು ತನ್ನ ಆಹಾರವನ್ನು ಇಸ್ಲಾಮಿ ಕಾನೂನು ಷರೀಯಾದ ನಿಯಮದಂತೆ ಕಮ್ಮಿ ಪ್ರಮಾಣದಲ್ಲಿ ಸೇವಿಸುತ್ತಿದ್ದ. ಕೆಲವು ದಿನಗಳು ಆಹಾರವನ್ನು ಸೇವಿಸದೆಯೇ ಇರುತ್ತಿದ್ದ. ಅವನ ಆಹಾರದ ಖರ್ಚು ತಿಂಗಳಿಗೆ ೧೭ ದಿರ್ಹಮ್‌ನಷ್ಟು ಮಾತ್ರ ಆಗುತ್ತಿತ್ತೆಂದು ಹೇಳಲಾಗುತ್ತದೆ. ಇವನು ತನ್ನ ಕಾಲದ ಅತ್ಯಂತ ಸಮರ್ಥ ಹಾಗೂ ಭರವಸೆ ಹುಟ್ಟಿಸುವ ಸುಲ್ತಾನನಾಗಿದ್ದ. ಪಟ್ಟದ ಸಿಂಹಾಸನದಲ್ಲಿ ಕೂತುಕೊಳ್ಳುವ ಮೊದಲು ತಮ್ಮ ಕುಟುಂಬದ ಮೂಲ ಗುರು ಷೇಖ್ ಜುನ್ಯೆದಿಯವರ ಪಗಡಿಯನ್ನು ಮುಟ್ಟಿ ಗೌರವ ಸೂಚಿಸುತ್ತಿದ್ದ. ಪ್ರತೀ ದಿನವೂ ಷೇಖರ ಖಾನಕಾ(ಆಶ್ರಮ)ಕ್ಕೆ ಭೇಟಿ ನೀಡಿ ಆಸ್ಥಾನದ ಕೆಲವು ವಿಷಯಗಳಲ್ಲಿ ಸಲಹೆಯನ್ನು ಕೂಡ ಪಡೆಯುತ್ತಿದ್ದ. ಒಂದು ದಿನ ಯುದ್ಧಕ್ಕೆ ಹೊರಡುವ ತನ್ನ ಅಭಿಲಾಷೆಯನ್ನು ಷೇಖರೊಂದಿಗೆ ವ್ಯಕ್ತಪಡಿಸಿದ. ಯಾಕೆಂದರೆ ಇದರಿಂದ ಇಸ್ಲಾಮ್ ಧರ್ಮದ ವೈಭವವನ್ನು ಮೆರೆಯುವುದು ಸಾಧ್ಯವಾಗಲೆಂಬುದು ತನ್ನಿಚ್ಛೆಯಾಗಿದೆ ಎಂದ.

ಷೇಖ್‌ರವರು ಫಾತಿಹಾ ಓದಿ ದೇವರಿಗೆ ದುವಾ ಪ್ರಾರ್ಥನೆ ಸಲ್ಲಿಸುವ ಮೂಲಕ ಸುಲ್ತಾನನಿಗೆ ಯುದ್ಧಕ್ಕೆ ಹೊರಡಲು ಅನುಮತಿ ನೀಡಿದರು. ಸುಲ್ತಾನರ ಸೈನಿಕರು ಸಹಸ್ರಾರು ಸಂಖ್ಯೆಯಲ್ಲಿ ಅದೋನಿಯ ಕೋಟೆಗೆ ಮುತ್ತಿಗೆ ಹಾಕಿದರು. ಹದಿನೈದು ತಿಂಗಳುಗಳ ಕಾಲ ಕೋಟೆಗೆ ಮುತ್ತಿಗೆ ಹಾಕಿದರು. ಕೋಟೆಯ ಒಳಗಿರುವವರಿಗೆ ನೀರಿನ ಕೊರತೆಯುಂಟಾಯಿತು. ತೀವ್ರ ಆತಂಕಕ್ಕೊಳಗಾದ ಜನರು ಶಾಂತಿ ಶಾಂತಿ ಎಂದು ಕೂಗಿ ಪರಿತಪಿಸಿದರು. ಕೋಟೆಯ ಸರದಾರ ಹೊರಗೆ ಬಂದು ಒಂದು ವಿಶೇಷ ಕರಾರನ್ನು ಬರೆದು ಸುಲ್ತಾನನ ಸೈನ್ಯದ ನಾಯಕನಿಗೆ ನೀಡಿದ. ಇದರಲ್ಲಿ ನಾವು ಕೋಟೆಯಿಂದ ಹೊರಗೆ ಹೋಗಲು ತಯಾರಾಗಿಲ್ಲವೆಂದು ಸೂಚಿಸಲಾಗಿತ್ತು.

ಷೇಖರು ಫಾತಿಹಾ ಓದಿ ವಿಜಯದ ಆಶೀರ್ವಾದವನ್ನು ನೀಡಿದ್ದರಾದರೂ ಇಲ್ಲಿ ಅದಕ್ಕೆ ವ್ಯತಿರಿಕ್ತವಾದ ಸಂದರ್ಭ ಉಂಟಾಗಿದೆ ಎಂಬ ವರ್ತಮಾನವನ್ನು ಷೇಖರಿಗೆ ಶಿಷ್ಯನೊಬ್ಬ ತಲಪಿಸಿದ. 'ನನ್ನ ಭಾಗದ ವಿಜಯ ಇನ್ನೂ ಬಾಕಿಯಿದೆ' ಎಂದು ಷೇಖರು ಹೇಳಿದರು. ಈ ಸಂದೇಶವನ್ನು ಸುಲ್ತಾನರಿಗೆ ತಲಪಿಸಲಾಯಿತು. ಕಾಕತಾಳೀಯವೆಂಬಂತೆ ಒಂದು ರಾತ್ರಿ ಇದ್ದಕ್ಕಿದ್ದಂತೆ ಭೀಕರ ಮಳೆ ಸುರಿದು ಕೋಟೆ ತುಂಬ ನೀರು ತುಂಬಿ ಹರಿಯತೊಡಗಿತು. ಕೋಟೆಯ ಒಳಗೆ ವಾಸಿಸುವ ಜನರು ಕೋಟೆಯ ಬಿರುಕು ಬಿಟ್ಟ ಗೋಡೆಗಳನ್ನು ಸರಿಪಡಿಸುವ ಕೆಲಸದಲ್ಲಿ ತೊಡಗಿದರು. ಈ ಮಧ್ಯೆ ಸುಲ್ತಾನರ ಸೈನ್ಯದ ಸರದಾರನೊಬ್ಬನನ್ನು ತೋಪಿನ ಒಳಗೆ ಅಡಗಿಸಿ ಕೋಟೆಯೊಳಗೆ ಇರುವವರಿಗೆ ತಿಳಿಯದಂತೆ ಕಳುಹಿಸಲಾಯಿತು. ಅವನು ಹಸನಾಬಾದಿನ ಕಡೆ ಹಿಂತಿರುಗಿ ಹೋದ. ಒಂದು ಒಳ್ಳೆಯ ಮುಹೂರ್ತದಲ್ಲಿ ಹಸನಾಬಾದ್ ಪಟ್ಟಣದೊಳಗೆ ಪ್ರವೇಶಿಸಲು ಸ್ವಲ್ಪ ಹೊತ್ತು ಕಾದು ನಿಂತ. ರಾಜಧಾನಿ ಪ್ರವೇಶಿಸಿ ಸಾಕಷ್ಟು ಸಂಖ್ಯೆಯ ಸೈನಿಕರನ್ನು ಒಟ್ಟು ಮಾಡಿ ಕೋಟೆಯ ಮೇಲಿನ ದಾಳಿಯನ್ನು ತೀವ್ರಗೊಳಿಸುವುದಕ್ಕೆ ಹೊರಟರು. ಇದರಿಂದಾಗಿ ವೈರಿ ಸೈನಿಕರು ಕೋಟೆಯೊಳಗೆ ತೀವ್ರವಾದ ಆತಂಕಕ್ಕೆ ಒಳಗಾದರು. ಸುಲ್ತಾನರ ಸೈನಿಕರು ಬಲಶಾಲಿಗಳಾಗಿ ಮೆರೆದರು. ಮುಜಾಹಿದ್ ಷಾ ಆಳ್ವಿಕೆ ಅತ್ಯಂತ ಪ್ರಭಾವಶಾಲಿಯಾಗಿತ್ತು. ಇವರ ನಿಧನಾ ನಂತರ ದೇಹವನ್ನು ಬಹಮನಿ ಸುಲ್ತಾನರನ್ನು ದಫನ ಮಾಡುವ ಸ್ಥಳದಲ್ಲೆ ಹೂತು ಗೋರಿ ಮಾಡಲಾಯಿತು.

### ದಾವೂದ್ ಷಾ ಬಿನ್ ಮಹಮೂದ್ ಖಾನ್ ಬಹಮನಿಯ ಆಳ್ವಿಕೆ

ದಾವೂದ್ ಷಾನ ಆಳ್ವಿಕೆಯು ಬಹಳ ಪ್ರಭಾವಶಾಲಿಯಾಗಿತ್ತಾದರೂ ಇವನ ಆಳ್ವಿಕೆಯ ಕಾಲಾವಧಿ ಅತ್ಯಂತ ಕಿರಿದಾಗಿತ್ತು. ಒಂದು ವರ್ಷ ಒಂದು ತಿಂಗಳು ಮೂರು ದಿನಗಳ ಕಾಲ ಇವನು ಆಳ್ವಿಕೆ ನಡೆಸಿದ. ಸುಲ್ತಾನನಾಗಿ ಹೆಚ್ಚು ಕಾಲ ಪಟ್ಟದಲ್ಲಿ ಕೂರುವ ಭಾಗ್ಯ ಇವನಿಗಿರಲಿಲ್ಲ. ರಭಸದಲ್ಲಿ ಹರಿಯುವ ನದಿಯ ಧಾರೆಯಲ್ಲಿ ತನ್ನ ಅಸೆ ಅಭಿಲಾಷೆಯೊಂದಿಗೆ ಹರಿದು ಹಿಮ್ಮೇಳಕ್ಕೆ ಸರಿದರು. ಇವನ ನಿಧನಾ ನಂತರ ತನ್ನ ಸಹೋದರ ಮುಹಮ್ಮದ್ ಷಾ ಬಿನ್ ಮಹಮೂದ್ ಖಾನ್ ಪಟ್ಟವನ್ನು ಏರಿದ.

### ಮುಹಮ್ಮದ್ ಷಾ ಬಿನ್ ಮಹಮೂದ್ ಖಾನ್ ಬಹಮನಿಯ ಆಳ್ವಿಕೆ

ಮುಹಮ್ಮದ್ ಷಾ ಪಟ್ಟವೇರಿ ತನ್ನ ರಾಜ್ಯದ ಆಳ್ವಿಕೆಯನ್ನು ನಡೆಸತೊಡಗಿದ. ಈ ಆಳ್ವಿಕೆ ಬಹಳ ದೊಡ್ಡ ಅವಧಿಯ ತನಕ ಮುಂದುವರಿದು ರಾಜ್ಯದಲ್ಲಿ ಸುಖ ಸಂತಸ ಮೂಡುವಂತಾಯಿತು. ತಮ್ಮ ಆಳ್ವಿಕೆಯಲ್ಲಿ ಹಲವು ವೈಭವಪೂರ್ಣ

ಕಾರ್ಯಗಳಿಗೆ ಸಾಕ್ಷಾತ್ಕಾರ ಉಂಟಾಯಿತು. ನ್ಯಾಯ ನೀತಿಯನ್ನು ಪರಿಪಾಲಿಸುವ ಸರಿಯಾದ ಆಳ್ವಿಕೆ ನಡೆಸಿ ಪ್ರಜೆಗಳು ಸುಖ ಸಂತೋಷದಿಂದ ಬಾಳುವಂತೆ ಅವಕಾಶ ಕಲ್ಪಿಸಿದ. ಇವನು ಹಿಜರಿ ವರ್ಷ ಸನ್ ೮೦೦ರಲ್ಲಿ ಇಹಲೋಕವನ್ನು ತ್ಯಜಿಸಿದ. ಇವನ ಆಳ್ವಿಕೆಯ ಅವಧಿ ೧೯ ವರ್ಷ ಆರು ತಿಂಗಳು ಐದು ದಿನಗಳ ಕಾಲವಾಗಿತ್ತು. ಇದರ ನಂತರ ಸುಲ್ತಾನ್ ಘಯಾಸುದ್ದೀನ್ ಪಟ್ಟವನ್ನು ಅಲಂಕರಿಸಿದ. ಇವನು ೧ ತಿಂಗಳು ೨೦ ದಿನಗಳ ಕಾಲ ಮಾತ್ರ ಆಳ್ವಿಕೆ ನಡೆಸಿ ನಂತರ ನಿಧನವಾದನು.

ಇವನ ಕಾಲಾನಂತರ ಸುಲ್ತಾನ್ ಶಂಸುದ್ದೀನ್ ಬಿನ್ ಸುಲ್ತಾನ್ ಮಹಮ್ಮದ್ ಬಿನ್ ಮಹಮೂದ್ ಪಟ್ಟವೇರಿ ರಾಜ್ಯಭಾರ ನಡೆಸಿದ. ಇವನು ೨೫ ವರ್ಷ ಆರು ದಿನಗಳ ಕಾಲ ರಾಜ್ಯದ ಆಳ್ವಿಕೆಯನ್ನು ಉನ್ನತ ರೀತಿಯಲ್ಲಿ ಜಯಶಾಲಿಯಾಗಿ ನಡೆಸಿದ. ನಂತರ ನಿಧನವಾದ.

**ಫಿರೋಜ್ ಷಾ ಬಿನ್ ಅಹ್ಮದ್ ಖಾನ್ ಬಹಮನಿಯ ಆಳ್ವಿಕೆ**

ಇವನು ಆಳ್ವಿಕೆಯನ್ನು ಪ್ರಾರಂಭಿಸಿದ ನಂತರದಲ್ಲಿ ತನ್ನ ನ್ಯಾಯೋಚಿತ ಆಡಳಿತ, ಸೌಮ್ಯ, ಕರುಣಾ ಹೃದಯಿ ನಡವಳಿಕೆಗಳು ಜನರನ್ನು ಆಕರ್ಷಿಸಿತ್ತು. ಇವನು ಅತ್ಯಂತ ನ್ಯಾಯ, ಸಮರ್ಥ ಆಡಳಿತಗಾರನಾಗಿ ಆಳ್ವಿಕೆ ನಡೆಸಿ ಜನರ ಗೌರವಕ್ಕೆ ಪಾತ್ರನಾದ. ಇವನು ತನ್ನ ಕುಟುಂಬದ ಖರ್ಚುವೆಚ್ಚಗಳನ್ನು ಭರಿಸಲು ಕುರಾನ್ ಪುಸ್ತಕಗಳನ್ನು ಬರೆದು ಮಾರಾಟ ಮಾಡಿದ ಆದಾಯವನ್ನು ಉಪಯೋಗಿಸುತ್ತಿದ್ದನಲ್ಲದೆ ರಾಜ್ಯದ ಖಜಾನೆಯ ಹಣವನ್ನು ಉಪಯೋಗಿಸುತ್ತಿರಲಿಲ್ಲ. ಇವನ ಪತ್ನಿ ಬಟ್ಟೆಯ ಕಸೂತಿ, ಕುಸುರಿ ಕೆಲಸಗಳನ್ನು ಮಾಡಿ ಆದಾಯಗಳಿಸುತ್ತಿದ್ದಳು.

ಈ ಬಾದಶಾಹ ತನ್ನ ಆಳ್ವಿಕೆಯ ಅವಧಿಯಲ್ಲಿ ಅತ್ಯಂತ ಹೆಸರುವಾಸಿಯಾಗಿದ್ದ. ಇವನ ಆಳ್ವಿಕೆಯ ಕಂಪು ಇಡೀ ವಿಶ್ವದಲ್ಲಿ ಹರಡಿತ್ತು. ಇವನ ಆಡಳಿತದ ವೈಭವಪೂರ್ಣ ನಿಶಾನೆಗಳು ಇಂದಿಗೂ ಹೆಸರಾಂತವಾಗಿವೆ. ಅವುಗಳಲ್ಲಿ ಕೃಷ್ಣಾ ನದಿಯ ತಟದಲ್ಲಿ ಕಟ್ಟಿದ ಪಟ್ಟಣ, ಈ ಪಟ್ಟಣದ ಕಲ್ಲುಗಳನ್ನು ಕೆತ್ತಿಸಿ ಆವರಣಗಳನ್ನು ಕಟ್ಟಿರುವುದು ಮುಂತಾದವು ಇವನ ಆಳ್ವಿಕೆಯ ವೈಭವವನ್ನು ಇಂದಿಗೂ ಕೊಂಡಾಡುತ್ತಿವೆ.

ಯಶಸ್ವಿ ಕಾರ್ಯ ಕಲಾಪಗಳ ಮೂಲಕ ಆಸ್ಥಾನದ ಗೌರವ, ಘನತೆಯನ್ನು ಎತ್ತರಕ್ಕೇರಿಸಿದ. ರಾಜ್ಯದೆಲ್ಲೆಡೆಯಲ್ಲಿ ತನ್ನ ಘನತೆ ಗೌರವಗಳನ್ನು ಹೆಚ್ಚಿಸುವ ಯಶಸ್ವಿ ಜನಪರ ಕಾರ್ಯಕ್ರಮಗಳನ್ನು ಜಾರಿಗೆ ತಂದಿದ್ದ. ಒಮ್ಮೆ ನೆರೆಹೊರೆಯ ಇಲಾಖೆಯಲ್ಲಿ ಭೀಕರ ಮಳೆಯಾಗಿ ನೀರು ರಭಸದಿಂದ ಉಕ್ಕಿ ಹರಿದು ಇವನ ರಾಜ್ಯಕ್ಕೆ ಹರಿದು ಬಂದಿತ್ತು. ಮೂರು ನಾಲ್ಕು ಮೈಲುಗಳಷ್ಟು ವ್ಯಾಪ್ತಿಯಲ್ಲಿ ನೀರು ತುಂಬಿ, ಇಲ್ಲಿನ ಪಟ್ಟಣ, ಕೇರಿ, ಮಾರುಕಟ್ಟೆಯ ಪ್ರದೇಶಗಳು ಮುಳುಗಡೆಯಾದವು. ಸುಲ್ತಾನ್ ಫಿರೋಜ್

ಷಾ ತನ್ನ ಏಳು ಯುವ ಪುತ್ರರನ್ನು ಸೇರಿಸಿಕೊಂಡು ಜಲಾವೃತ ಪ್ರದೇಶಗಳನ್ನು ಮತ್ತು ಅಲ್ಲಿನ ಜನರ ಬವಣೆಯನ್ನು ಅರಿಯಲು ಪರಿಹಾರ ಕಾರ್ಯಗಳನ್ನು ಆಯೋಜಿಸಲು ಅರಮನೆಯನ್ನು ತೊರೆದು ಎತ್ತರದ ಪರ್ವತ ಪ್ರದೇಶದಲ್ಲಿ ಹಲವು ದಿನಗಳ ಕಾಲ ತಂಗಿದ್ದ. ತಂಗಿದ ಈ ಎತ್ತರದ ಸ್ಥಳ ಈಗಲೂ ಅವಶೇಷವಾಗಿ ನಿಂತಿದೆ. ಈ ಪ್ರದೇಶವನ್ನು ಫಿರೋಜಾಬಾದ್ ಎಂದು ಕರೆಯಲಾಗುತ್ತದೆ.

ಈ ಬಾದಶಾಹರ ಬಗ್ಗೆ ಒಂದು ಐತಿಹ್ಯ ಹೀಗೂ ಇದೆ: ಒಂದು ದಿನ ಅವರು ತನ್ನ ಪತ್ನಿಯ ಜೊತೆಗೆ ತನ್ನ ಆಸ್ಥಾನದ ದರ್ಬಾರಿನಲ್ಲಿ ಉಪಸ್ಥಿತರಿದ್ದರು. ಅವರ ಶಾಲು ಜನರು ನಡೆದಾಡುವ ಹಾದಿಯಲ್ಲಿ ಹರಡಿತ್ತು. ಒಬ್ಬ ಬಡ ಫಕೀರ ರಸ್ತೆಯಲ್ಲಿ ನಡೆಯುತ್ತಿರುವವನು ಅದರ ಮೇಲೆ ಒಂದು ರೊಟ್ಟಿಯನ್ನು ಇಟ್ಟ. ಹಿಂತಿರುಗಿ ನೋಡಿದಾಗ ತನ್ನ ಶಾಲಿನ ಮೇಲೆ ಯಾರೋ ಒಂದು ರೊಟ್ಟಿ ಇಟ್ಟಿರುವುದನ್ನು ಕಂಡ. ಸುಲ್ತಾನ ಇದನ್ನು ಯಾವುದೋ ಒಂದು ವಿಷಯದ ಸಂಕೇತ ಯಾ ಮುನ್ಸೂಚನೆ ಎಂದುಕೊಂಡ. ಆ ದಿನದಿಂದ ತಾನೊಂದು ತೀರ್ಮಾನ ಮಾಡಿಕೊಂಡ. ಏನೆಂದರೆ ರಾಜಧಾನಿಯಲ್ಲಿ ಇಲ್ಲಿನ ಬಡವರು ಫಕೀರರು ರೊಟ್ಟಿ ತಿನ್ನುವ ತನಕ ನಾನು ರೊಟ್ಟಿ ಪಲ್ಯವನ್ನು ತಿನ್ನುವುದಿಲ್ಲವೆಂದು ಶಪಥ ಮಾಡಿಕೊಂಡ. ಇದಲ್ಲದೆ ನನ್ನ ರಾಜ್ಯದಲ್ಲಿ ಯಾರು ಕೂಡ ಹಸಿದ ಹೊಟ್ಟೆಯಲ್ಲಿ ಇರುವಂತಾಗ ಕೂಡದು ಎಂದು ಡಂಗುರ ಸಾರಿ, ಎಲ್ಲ ಬಡಬಗ್ಗರಿಗೆ, ಫಕೀರರಿಗೆ ಆಹಾರ ನೀಡುವ ಏರ್ಪಾಡು ಮಾಡಿದ. ಸುಲ್ತಾನ ಫಿರೋಜ್ ಷಾಹನ ಇಂತಹ ಅನೇಕ ಉತ್ತಮ ಗುಣ ನಡತೆಗಳ ಬಗ್ಗೆ ಜನರು ಮಾತಾಡಿಕೊಳ್ಳುತ್ತಿದ್ದರು. ಅವನ ಗುಣ ನಡತೆಗಳ ಗುಣಗಾನ ಮಾತ್ರವಲ್ಲ ಅವನ್ನು ತಮ್ಮ ಬದುಕಿನಲ್ಲೂ ಅಳವಡಿಸಿಕೊಳ್ಳಲು ಜನ ಪ್ರಯತ್ನಪಡುತ್ತಿದ್ದರು. ಸುಲ್ತಾನ ತಮಗೆ ದೊರೆತ ವಿರಾಮದ ಸಮಯದಲ್ಲಿ ಕುರಾನಿನ ಹಸ್ತಪ್ರತಿ ತಯಾರಿಸುವುದರಲ್ಲಿ ಮಗ್ನನಾಗಿರುತ್ತಿದ್ದ. ರಾತ್ರಿಯ ಹೆಚ್ಚಿನ ಸಮಯ ಕುರಾನ್ ಬರೆಯುವುದರಲ್ಲಿ ಮಗ್ನನಾಗಿರುತ್ತಿದ್ದ. ಪುಸ್ತಕದ ಒಂದೊಂದು ಅಧ್ಯಾಯವನ್ನು ಬಿಡದೆ ಬರೆಯುತ್ತಿದ್ದ. ಈ ಕಾರ್ಯವನ್ನು ತನ್ನ ಗುರುಗಳ ಪಡಿಯಚ್ಚಿನಂತೆ ಪಾಲಿಸುತ್ತಿದ್ದ. ಏಕಾಂತದಲ್ಲಿ ಸೂಫಿ ಸಂತರ ಸರಳ ಉಡುಪನ್ನು ಧರಿಸಿಕೊಳ್ಳುತ್ತಿದ್ದ. ಪ್ರಖ್ಯಾತ ಸೂಫಿ ಸಂತ ಬಾಬಾ ಕಮಾಲರ ಜೊತೆಗೆ ಗುರು ಶಿಷ್ಯ ಸಂಬಂಧವಿತ್ತೆಂಬುದು ಸಾಬೀತಾಗಿತ್ತು. ತನ್ನ ಗೋರಿಯ ಗುಂಬಜಕ್ಕೆ ಸರಿಸಮನಾದ ಗುಂಬಜನ್ನು ಬಾಬಾ ಕಮಾಲರಿಗೂ ಕಟ್ಟಿಸಿದ. ಅದರ ಪಕ್ಕದಲ್ಲಿ ಒಂದು ಉತ್ತಮವಾದ ಹೌಜ್ (ಕೊಳ) ಕೂಡ ಕಟ್ಟಿಸಿದ. ಈ ಹೌಜ್ ಮತ್ತು ಗುಂಬಜ್ ಈಗಲೂ ನಿಶಾನೆಯ ರೀತಿಯಲ್ಲಿ ಕಂಡುಬರುತ್ತಿವೆ. ಅವನ ಆಸ್ಥಾನದ ಆಡಳಿತದ ಘನತೆ ಗಾಂಭೀರ್ಯ ಹೇಗಿತ್ತೆಂದರೆ ಅವನ ಸುತ್ತಲೂ ೪ ಸಾವಿರ ಕುದುರೆಯಾಳು ೮ ಸಾವಿರ ಕಾಲಾಳುಗಳು, ೪ ನೂರು ಆನೆಗಳು ಕಾವಲಿದ್ದವು.

ಈ ಎಲ್ಲ ಸೈನ್ಯದ ಸರ್ಪಗಾವಲು ತನ್ನ ಪ್ರಜೆಗಳ ರಕ್ಷಣೆಯ ಸೇವೆಗಾಗಿ ನೇಮಿಸಲ್ಪಟ್ಟಿತ್ತು. ತನ್ನಿಂದಾಗಿ ತನ್ನ ಪ್ರಜೆಗಳ ಪೈಕಿ ಅತ್ಯಂತ ದುರ್ಬಲ ವ್ಯಕ್ತಿಗೂ ಕೂಡ ಯಾವುದೇ ರೀತಿಯಲ್ಲಿ ತೊಂದರೆಯಾಗಕೂಡದೆಂಬ ಉದ್ದೇಶ ಇದರ ಹಿನ್ನೆಲೆಯಲ್ಲಿತ್ತು. ಇದಲ್ಲದೆ ತನ್ನನ್ನು ಅತ್ಯಂತ ಕಿರಿದಾದ ವ್ಯಕ್ತಿಯೆಂದು ಪರಿಗಣಿಸುವ ವಿನಯ ಸೌಜನ್ಯತೆ ಅವನಲ್ಲಿತ್ತು. ಮಾತ್ರವಲ್ಲ ತನ್ನ ಬಹುಪಾಲು ಸಮಯವನ್ನು ದೇವರ ಧ್ಯಾನದಲ್ಲಿ ವಿನಿಯೋಗಿಸಿಕೊಳ್ಳುತ್ತಿದ್ದ. ತನ್ನ ಆಸ್ಥಾನದ ಹಿರಿಕಿರಿ ಕೆಲಸ ಕಾರ್ಯಗಳನ್ನು ಸುಲ್ತಾನ್ ಅಹ್ಮದನ ವಶಕ್ಕೊಪ್ಪಿಸಿ ತಾನು ದೇವರ ಧ್ಯಾನದಲ್ಲಿ ನಿರತರಾಗಿರುತ್ತಿದ್ದ. ಸುಲ್ತಾನ್ ಅಹ್ಮದ್ ತುಂಬ ನಿಯತ್ತಿನಿಂದ ಈ ಕೆಲಸ ಕಾರ್ಯಗಳನ್ನು ನಡೆಸಿಕೊಡುತ್ತಿದ್ದ. ಸುಲ್ತಾನ್ ಅಹ್ಮದ್ ಆಸ್ಥಾನದ ಅಧಿಕಾರಿಗಳು ಮತ್ತು ಸೈನ್ಯವನ್ನು ತನ್ನ ಅಧಿಕಾರದಲ್ಲಿ ಸೇರಿಸಿಕೊಂಡ. ಇದರಿಂದ ಅವನು ದಂಗೆಯೇಳುವ ಹಾದಿಯ ಕುರುಹುಗಳು ಕಂಡುಬಂದವು. ಒಂದು ದಿನ ಯಾರೋ ಒಬ್ಬ ವ್ಯಕ್ತಿ ಸುಲ್ತಾನ್ ಫೀರೋಜ್ ಷಾಗೆ ಸುಲ್ತಾನ್ ಅಹ್ಮದ್ ದಂಗೆಯೇಳಲು ತಯಾರಿ ಮಾಡುತ್ತಿದ್ದಾನೆಂಬ ಸುದ್ದಿ ನೀಡಿದ. ಅವನು ತಮ್ಮನ್ನು ಕೊಲ್ಲಲು ಹವಣಿಸುತ್ತಿದ್ದಾನೆ ಮಾತ್ರವಲ್ಲ, ತಾನು ಪಟ್ಟಕ್ಕೇರಲು ತಯಾರಿ ಮಾಡುತ್ತಿದ್ದಾನೆಂದು ಕೂಡ ಸುದ್ದಿ ನೀಡಿದ. ತಾವು ತುಂಬ ಜಾಗರೂಕರಾಗಿರಬೇಕು ಎಂಬ ಸಲಹೆಯನ್ನು ಆ ವ್ಯಕ್ತಿ ಸುಲ್ತಾನನಿಗೆ ನೀಡಿದ. ಇದಕ್ಕೆ 'ನನ್ನ ಹಣೆಯಲ್ಲಿ ಏನು ಬರೆದಿದೆಯೋ ಹಾಗಾಗುತ್ತದೆ. ತಕದೀರನ್ನು ಸರಿಪಡಿಸಲಾಗದು' ಎಂದು ಸುಲ್ತಾನರು ಪ್ರತಿಕ್ರಿಯೆ ನೀಡಿದ. ಹೀಗೂ ಒಂದು ಸುದ್ದಿಯಿದೆ ಏನೆಂದರೆ ಸೈನಿಕರಲ್ಲಿ ಏಳುಜನ ಪ್ರಮುಖರು ಫಿರೋಜ್ ಷಾಹನಲ್ಲಿ ಅತೃಪ್ತರಾಗಿದ್ದವರ ಮೂಲಕ ಸುಲ್ತಾನ ಅಹ್ಮದ್ ಕೊಲೆಮಾಡಲು ಆಜ್ಞೆನೀಡಿದ್ದನೆಂದು ಹೇಳುವ ಐತಿಹ್ಯ ಜನಜನಿತವಾಗಿ ಪ್ರಸಿದ್ಧವಾಗಿದೆ. ಈ ಏಳು ಜನ ಅತೃಪ್ತ ಸೈನಿಕರನ್ನು ಸುಲ್ತಾನ್ ಅಹ್ಮದ್ ತನ್ನ ಜೊತೆಗೆ ಸೇರಿಸಿಕೊಂಡು ಅವರನ್ನು ಫಿರೋಜ್ ಷಾನ ಆರೈಕೆಗೆ ಕಳುಹಿಸುತ್ತಿದ್ದನೆಂದು ಹೇಳುತ್ತಾರೆ. ಒಂದು ದಿನ ಸುಲ್ತಾನ್ ಅಹ್ಮದ್ ಇವರೊಂದಿಗೆ ಸೇರಿ ಸುಲ್ತಾನ್ ಫಿರೋಜನನ್ನು ಕೊಲೆಮಾಡುವ ಉದ್ದೇಶದಿಂದ ಅವರಿರುವ ಸ್ಥಳಕ್ಕೆ ತೆರಳಿದರು. ಸುಲ್ತಾನ್ ಫಿರೋಜನ ಅಂಗರಕ್ಷಕರು ಇದನ್ನು ತಿಳಿದಾಗ ಎರಡೂ ಕಡೆಯಲ್ಲಿ ಜಟಾಪಟಿಯಾಗಿ ಕಾಳಗನಡೆಯಿತು.

ಸುಲ್ತಾನ್ ಅಹ್ಮದ್ ಈ ಘಟನೆಯ ಲಾಭ ಪಡೆದು ಸುಲ್ತಾನ್ ಫಿರೋಜ್ ಷಾ ಕೂತಿದ್ದ ಏಕಾಂತ ಸ್ಥಳಕ್ಕೆ ಹೋದ. ಆ ಸಂದರ್ಭದಲ್ಲಿ ಸುಲ್ತಾನ್ ಫಿರೋಜ್ ಷಾ ಕುರಾನ್ ಪಠಣ ಮಾಡುತ್ತಿದ್ದರೆಂದೂ ಈ ಸಂದರ್ಭದಲ್ಲಿ ಸುಲ್ತಾನ್ ಅಹ್ಮದ್ ಅವರನ್ನು ಇರಿದುಕೊಂದನೆಂದೂ ಹೇಳಲಾಗುತ್ತದೆ. ಸುಲ್ತಾನನ ಕೊಲೆಯ ಬಗ್ಗೆ ರಾಜ್ಯದ ಪ್ರಜೆಗಳಿಗೆ ತಿಳಿದಾಗ ಮೂಲೆಮೂಲೆಗಳಲ್ಲಿ ಆತಂಕದ ವಾತಾವರಣ

ಮೂಡಿತ್ತಲ್ಲದೆ ಅಲ್ಲಲ್ಲಿ ದೊಂಬಿಗಳೆದ್ದವು. ಸುಲ್ತಾನ್ ಅಹ್ಮದ್ ತನ್ನ ಮಗನಿಗೆ ಪಟ್ಟಾಭಿಷೇಕ ಮಾಡಲು ಏರ್ಪಾಡು ಮಾಡಿದ. ಹೀಗೆ ಹುತಾತ್ಮರಾದ ದಿವಂಗತ ಸುಲ್ತಾನ ಫಿರೋಜ್ ಷಾನ ಆಳ್ವಿಕೆಯು ೨೫ ವರ್ಷ, ೭ ತಿಂಗಳು ಹನ್ನೊಂದು ದಿನಗಳ ಕಾಲ ನಡೆದಿತ್ತು. ಇವನು ಬಹಮನಿ ಸುಲ್ತಾನ ವಂಶದ ೮ನೆಯ ಪೀಳಿಗೆಯವರಾಗಿದ್ದು ಹಸನಾಬಾದಿನ ಪಟ್ಟದ ಬಾದಶಾಹರಾಗಿ ಆಳ್ವಿಕೆ ನಡೆಸಿದ್ದ.

### ಸುಲ್ತಾನ್ ಅಹ್ಮದ್ ವಲೀ ಷಾ ಬಹಮನಿ ಆಳ್ವಿಕೆ

ಸುಲ್ತಾನ್ ಅಹ್ಮದ್ ವಲೀ ಷಾ ಬಹಮನಿಯ ಆಳ್ವಿಕೆಯ ಕಾಲದಲ್ಲಿ ರಾಜಧಾನಿಯಾದ ಬೀದರ್ ಬಹಳ ಪ್ರಖ್ಯಾತವಾಯಿತು. ಸುಲ್ತಾನನ ಕೊಲೆಯಾದ ನಂತರ ಮರ್‌ವರ್ ಸುಲ್ತಾನ್ ಅಹ್ಮದ್ ಬಾದಶಾಹಿ ಪಟ್ಟವನ್ನು ಅಲಂಕರಿಸಿದ. ರಾಜ್ಯದ ಸಮಸ್ತ ಆಡಳಿತ ವ್ಯವಸ್ಥೆಯನ್ನು ಹಿಂದಿನಂತೆ ಮುಂದುವರಿಯುವ ಹಾಗೆ ರಾಜ್ಯಭಾರ ನಡೆಸಿದ. ಒಂದು ದಿನ ಅವನು ಮುಹಮ್ಮದಾಬಾದ್ ಪಟ್ಟಣದ ಬಳಿಯ ಕಾಡಿನಲ್ಲಿ ಶಿಕಾರಿ ಮಾಡಲು ಹೋದ. ಅಲ್ಲಿ ಒಂದು ನಾಯಿಯ ಮೇಲೆ ಮೊಲವೊಂದು ಕೂತಿತ್ತು. ಮೊಲದ ಹತೋಟಿಯಲ್ಲಿ ನಾಯಿ ಇತ್ತು. ಸುಲ್ತಾನ ಈ ದೃಶ್ಯವನ್ನು ನೋಡಿದಾಗ ಖಂಡಿತವಾಗಿಯೂ ಈ ಪ್ರದೇಶದ ಜನರು ಬಹಳ ಬಲಶಾಲಿಗಳಾಗಿರ ಬೇಕೆಂಬ ಯೋಚನೆ ಬಂತು. ಮೊಲದಂತಹ ದುರ್ಬಲ ಸೌಮ್ಯ ಪ್ರಾಣಿಯೊಂದು ನಾಯಿಯನ್ನು ಹತೋಟಿಯಲ್ಲಿಟ್ಟುಕೊಂಡಿರಬೇಕಾದರೆ ಇಲ್ಲಿನ ನೆಲದಲ್ಲಿ ಅದೇನೋ ವಿಶೇಷ ಶಕ್ತಿ ಇರಬೇಕೆಂದು ಅವನಿಗೆ ಹೊಳೆಯಿತು. ಇಲ್ಲಿ ನಾನು ಒಂದು ಪಟ್ಟಣವನ್ನು ಕಟ್ಟಿ ಆಸ್ಥಾನವನ್ನಾಗಿ ಮಾಡಿಕೊಂಡರೆ ಇಲ್ಲಿನ ಜನರ ವಂಶಾವಳಿ ಅತ್ಯಂತ ಬಲಶಾಲಿಯಾಗಿರುವುದರಿಂದ ರಾಜ್ಯವನ್ನು ಶಕ್ತಿಶಾಲಿಯಾಗಿ ಕಟ್ಟಬಹುದು ಎಂದುಕೊಂಡ. ಹಸನಾಬಾದಿನಲ್ಲಿ(ಗುಲ್ಬರ್ಗಾ) ಸುಲ್ತಾನ ಫಿರೋಜ್ ಷಾನ ಕೊಲೆಯಿಂದಾದ ಆತಂಕ ಜನರಲ್ಲಿ ಶಮನಗೊಂಡಿಲ್ಲವಾದುದರಿಂದ ತನ್ನ ರಾಜಧಾನಿಯನ್ನು ಅಲ್ಲಿಗೆ ಬದಲಾಯಿಸಿದಲ್ಲಿ ಪರಿಸ್ಥಿತಿ ಸುಧಾರಣೆಯಾಗಬಹುದು ಎಂದು ಯೋಚಿಸಿದ. ಹೀಗೆ ತೀರ್ಮಾನಕ್ಕೆ ಬಂದ ನಂತರ ಒಳ್ಳೆಯ ಮುಹೂರ್ತವನ್ನು ನೋಡಿಕೊಂಡು ಮುಹಮ್ಮದಾಬಾದ್ (ಬೀದರ್)ಪಟ್ಟಣವನ್ನು ಕಟ್ಟುವುದಕ್ಕೆ ಶುರುಮಾಡಿದ. ಈ ನಗರದಲ್ಲಿ ತನ್ನ ಸಂಪೂರ್ಣ ಜೀವಿತ ಕಾಲದ ಅವಧಿಯನ್ನು ಆರಾಮವಾಗಿ ಶಾಂತಿಯುತವಾಗಿ ಕಳೆದ.

ಇವರ ಆಳ್ವಿಕೆಯ ಕಾಲದಲ್ಲಿ ಮಖ್ದೂಮ್ ಖ್ವಾಜಾ ಜಹಾನ್ ವ್ಯಾಪಾರದ ನಿಮಿತ್ತ ಖೊರಾಸಾನ್(ಇರಾನ್)ನಿಂದ ಭಾರತಕ್ಕೆ ಬಂದಿದ್ದರು. ತನ್ನ ಜ್ಞಾನ ಮತ್ತು ಒಳ್ಳೆಯ ನಡತೆಯಿಂದ ಇಲ್ಲಿ ಜನಪ್ರಿಯರಾದರು. ಆಸ್ಥಾನದಲ್ಲಿ ಅಗತ್ಯ ಬಿದ್ದಾಗ

ಅವರ ಸಲಹೆ ಕೇಳಲಾಗುತ್ತಿತ್ತು, ಕಾರ್ಯಗಳಲ್ಲಿ ಭಾಗವಹಿಸುವ ಅವಕಾಶವನ್ನು ಕೂಡ ನೀಡಲಾಗಿತ್ತು. ನಾಲ್ಕು ಪೀಳಿಗೆಯ ತನಕವೂ ಆಳ್ವಿಕೆಯಲ್ಲಿ ಅವರ ಸಹಕಾರವನ್ನು ಪಡೆಯಲಾಗಿತ್ತು. ಈ ಕೆಲಸ ಕಾರ್ಯಗಳಲ್ಲಿ ಯಾವುದೇ ರೀತಿಯ ಅಸಡ್ಡೆ ತೋರದೆ ನಿಯತ್ತಿನಿಂದ ಅವರು ಕೆಲಸ ಮಾಡುತ್ತಿದ್ದರು. ಸುಲ್ತಾನ ಮುಹಮ್ಮದ್ ಷಾ ಬಿನ್ ಹುಮಾಯುನ್ ಷಾನ ಆಳ್ವಿಕೆಯಲ್ಲಿ ಇವರು ಹುತಾತ್ಮರಾದರು. ಜಹಾನಾ ಬಾದ್‌ನಲ್ಲಿ ಇವರು ಕೈಗೊಂಡ ಉತ್ತಮ ಕಾರ್ಯಗಳಿಂದಾಗಿ ಹೆಸರು ಅಜರಾಮರವಾಯಿತು. ಹೀಗೆ ಅಹ್ಮದ್ ಷಾನ ಆಳ್ವಿಕೆಯು ಹಿಜರಿ ವರ್ಷ ಸನ್ ೮೦೩೮ ತನಕ ನಡೆಯಿತು. ಈ ಕಾಲಘಟ್ಟದಲ್ಲಿ ಮುಹಮ್ಮದಾಬಾದ್ (ಬೀದರ್)ಪಟ್ಟಣವು ಹೆಸರುವಾಸಿಯಾಯಿತು. ಮುಂದೆ ಹಿಜರಿ ೮೩೨ನೇ (?)ವರ್ಷದಲ್ಲಿ ತೀರಿಕೊಂಡರು.

**ಮಖ್ದೂಮ್ ಖ್ವಾಜಾ ಜಹಾನರ ದಕ್ಷಿಣ ಭಾರತಕ್ಕೆ ಆಗಮನ, ಬಾದಶಾಹರ ಆಸ್ಥಾನದಲ್ಲಿ ಕೈಂಕರ್ಯ ಮತ್ತು ಉನ್ನತ ಸ್ಥಾನಗಳನ್ನು ಗಳಿಸಿದ ವಿವರಗಳು**

ಮಖ್ದೂಮ್ ಖ್ವಾಜಾ ಜಹಾನರ ಬಗೆಗೆ ಇರುವ ಪ್ರಚಲಿತ ವಿವರಗಳಂತೆ ಇವರು ಬಹುದೊಡ್ಡ ಜ್ಞಾನಿಯೂ, ಶಿಕ್ಷಣ ತಜ್ಞರೂ, ಗೌರವ ಘನತೆವೆತ್ತ ಪಾಂಡಿತ್ಯ ಹೊಂದಿದವರೂ ಆಗಿದ್ದರು. ಒಂದು ದಿನ ಅವರು ಮುಸ್ತಫಾಬಾದ್ ಎಂದು ಕರೆಯಲ್ಪಡುತ್ತಿದ್ದ ತುಂಗಭದ್ರಾ ನದಿ ತಟದ ಪ್ರದೇಶಕ್ಕೆ ಹೋಗಿದ್ದರು. ಈ ಗ್ರಾಮದ ಜನರ ಸ್ಥಿತಿಗತಿಗಳು ಮತ್ತು ನಡತೆಗಳು ಬಹಳ ವಿಶೇಷವಾಗಿ ಕಂಡುಬಂದು ಚಕಿತರಾದರು. ಒಮ್ಮೆ ಪೇಟೆಯಲ್ಲಿ ಒಂದು ಅಂಗಡಿಯಲ್ಲಿ ಕೂತಿದ್ದಾಗ ಅಲ್ಲಿನ ರಾಜ ತನ್ನ ದಂಡಿಗೆಯಲ್ಲಿ ಕೂತು ಹೋಗುತ್ತಿದ್ದ. ಅವನ ಕೈಯಲ್ಲಿ ಒಂದು ಬುಲ್‌ಬುಲ್ ಹಕ್ಕಿಯನ್ನು ಕೂರಿಸಿದ್ದ. ಅವನು ಈ ಹಕ್ಕಿಯನ್ನು ನೋಡುತ್ತ ಮಾತಾಡುತ್ತ ಸಾಗಿದ್ದ. ಖ್ವಾಜಾರಿಗೆ ಈ ದೃಶ್ಯ ಕಂಡು ಆಶ್ಚರ್ಯ ಚಕಿತರಾದರು. ಈ ರಾಜ್ಯದ ಜನ ಬಹಳ ಸರಳವಾಗಿ ಬದುಕುತ್ತಿದ್ದವರು, ತುಂಬ ಮುಗ್ಧರಾಗಿದ್ದವರು, ಲೌಕಿಕ ಪಾರಮಾರ್ಥಿಕ ಜ್ಞಾನವೂ ಅವರಿಗೆ ಇರಲಿಲ್ಲ. ಇವರ ಜೊತೆಯಲ್ಲಿ ಇದ್ದು ತನ್ನ ಜ್ಞಾನವನ್ನು ಇವರಿಗೆ ನೀಡುವ ಬಗ್ಗೆ ಯೋಚಿಸಿದರು. ಹೀಗೆ ನಾನು ಸುಲ್ತಾನರ ಆಸ್ಥಾನದ ಆಗುಹೋಗುಗಳನ್ನು ಅರಿತು ಸಹಾಯ ಮಾಡುವ ಬಗ್ಗೆ ಚಿಂತಿಸಿದರು. ಇವರ ಜೊತೆಯಲ್ಲಿ ಸಂಬಂಧಗಳನ್ನು ಬೆಳೆಸುವ ಮೂಲಕ ರಾಜರ ಆಸ್ಥಾನಕ್ಕೆ ಸಂಪರ್ಕ ಪಡೆಯುವ ಯೋಚನೆಯನ್ನು ಮಾಡಿದರು. ಈ ಮಧ್ಯೆ ಸುಲ್ತಾನ ಅಹ್ಮದ್ ಷಾ ವಿದೇಶೀಯ ಆಗಂತುಕರ ಬಗ್ಗೆ ಫರ್ಮಾನು ಹೊರಡಿಸಿದ್ದ. ಎಲ್ಲ ವಿದೇಶಿ ಯಾತ್ರಿಕರು, ವ್ಯಾಪಾರಸ್ಥರು ತಮ್ಮ ಸಾಮಾನು ಸರಂಜಾಮುಗಳನ್ನು ಬಂದರಿನಲ್ಲೇ ಇಟ್ಟುಬಿಡಬೇಕು, ಇದನ್ನು ನೋಡಲು ಆಸ್ಥಾನದ ಅಧಿಕಾರಿಗಳು ಬಂದು ತಪಾಸಣೆ ನಡೆಸಬೇಕು ಎಂದು ಫರ್ಮಾನು ಹೇಳಿತು. ಬಂದರಿನ ಅಧಿಕಾರಿಗಳು

ವಿದೇಶಿಗಳ ಮಾಲುಗಳನ್ನು ಹಿಡಿದಿಟ್ಟು ಸುಲ್ತಾನನಿಗೆ ವರ್ತಮಾನ ನೀಡಿದರು.

ಖ್ವಾಜಾರವರು ಅಧಿಕಾರಿಗಳ ಈ ನಡತೆಯನ್ನು ಕಂಡು ಆಶ್ಚರ್ಯಪಟ್ಟುಕೊಂಡರು. 'ನಾನು ರೋಮ್, ಶಾಮ್, ಮಿಸ್ರ್, ಖೊರಾಸಾನ್ ಮತ್ತು ತುರ್ಕಿಸ್ಥಾನಗಳಿಗೆ ವ್ಯಾಪಾರ ನಿಮಿತ್ತ ಭೇಟಿಮಾಡಿದ್ದೆ, ಅಲ್ಲಿ ವ್ಯಾಪಾರ ವಹಿವಾಟುಗಳನ್ನು ಮಾಡಿದ್ದೆ. ಅಲ್ಲಿನ ರಾಜರ ಆಸ್ಥಾನಗಳಿಗೆ ಭೇಟಿ ನೀಡಿ ಕಾಣಿಕೆಗಳನ್ನು ನೀಡಿದ್ದೆ. ಅಲ್ಲೆಲ್ಲೂ ನನಗೆ ಈ ರೀತಿಯ ತೊಂದರೆ ಆಗಲಿಲ್ಲ. ನಿಮ್ಮ ಸುಲ್ತಾನರಿಗೆ ನಾನೊಂದು ಪತ್ರವನ್ನು ಬರೆದು ಕೊಡುತ್ತೇನೆ. ಇದನ್ನು ಅವರಿಗೆ ತಲಪಿಸಿ' ಎಂದು ಖ್ವಾಜಾರು ಒಂದು ಪತ್ರವನ್ನು ಬರೆದು ಬಂದರಿನ ಅಧಿಕಾರಿಗಳಿಗೆ ಒಪ್ಪಿಸಿದರು.

ಬಂದರಿನ ಅಧಿಕಾರಿಗಳು ಆ ಪತ್ರವನ್ನು ನೇರವಾಗಿ ಬಾದಶಾಹನ ದರ್ಬಾರಿಗೆ ತಲುಪಿಸಿದರು. ಸುಲ್ತಾನ್ ಅಹ್ಮದ್ ಷಾ ತನ್ನ ದರ್ಬಾರಿನ ಮಂತ್ರಿಮಂಡಳದಲ್ಲಿ ಈ ಪತ್ರದ ಬಗ್ಗೆ ಸಮಾಲೋಚನೆ ನಡೆಸಿ ಚರ್ಚಿಸಿದ. ಮಂತ್ರಿ ಮಂಡಳಿಯ ಕೆಲವು ಸದಸ್ಯರು ಖ್ವಾಜಾರವರು ತಮ್ಮ ಸರಕು ಸಾಮಾಗ್ರಿಗಳೊಂದಿಗೆ ರಾಜ್ಯಕ್ಕೆ ಬರುವುದಕ್ಕೆ ಅಭ್ಯಂತರ ಮಾಡಕೂಡದು ಎಂದು ಅಭಿಪ್ರಾಯಪಟ್ಟರೆ ಇನ್ನಿತರರು ಸಾಮಾಗ್ರಿಗಳನ್ನು ಒಳಗೆ ತರುವುದಕ್ಕೆ ನಿರ್ಬಂಧಿಸುವುದರ ಪರವಾಗಿದ್ದರು. ಸ್ವತಃ ಬಾದಶಾಹನೇ ಖ್ವಾಜಾರವರು ತನ್ನ ಸರಕು ಸರಂಜಾಮುಗಳೊಂದಿಗೆ ತನ್ನ ರಾಜ್ಯವನ್ನು ಪ್ರವೇಶಿಸುವುದರ ಪರವಾಗಿರಲಿಲ್ಲ. ಬಾದಶಾಹ ಹೇಳಿದ 'ಹೀಗೆ ವಿದೇಶದಿಂದ ಆಗಮಿಸುವವರು ಸಾಧಾರಣವಾಗಿ ಬಹಳ ಚಾಲಾಕು ಮತ್ತು ಬುದ್ಧಿವಂತರಿರುತ್ತಾರೆ. ಬಹಳ ಬೇಗ ಇಲ್ಲಿನ ಜನರನ್ನು ಆಕರ್ಷಿಸುತ್ತಾರೆ. ಮುಂದೊಂದು ದಿನ ಅಧಿಕಾರ ಚಲಾಯಿಸಲು ತೊಡಗುತ್ತಾರೆ. ಆದರೆ ಇಷ್ಟಾಗಿಯೂ ನಾವು ಅವರನ್ನು ಮತ್ತು ವ್ಯಾಪಾರದ ವೈಖರಿಯನ್ನು ನೋಡ ಬಯಸುತ್ತೇವೆ. ಅವರಿಗೆ ಅಗತ್ಯವಾದ ಸಹಕಾರ ನೀಡಿ ಕೆಲವು ದಿನಗಳ ಕಾಲ ಇಲ್ಲಿ ತಂಗುವ ವ್ಯವಸ್ಥೆಯನ್ನು ಮಾಡಿಕೊಡುತ್ತೇವೆ. ಇಲ್ಲವೇ ಅವರನ್ನು ಹೊರಹಾಕಲಾಗುವುದು'. ಆದರೆ ಅಸ್ಥಾನದ ಮಂತ್ರಿಮಂಡಳದವರ ಒತ್ತಾಯದ ಮೇರೆಗೆ ಬಾದಶಾಹ ಖ್ವಾಜಾರಿಗೆ ವ್ಯಾಪಾರ ಮಾಡಲು ಅನುಮತಿ ನೀಡಬೇಕಾಯಿತು. ಹೀಗೆ ಖ್ವಾಜಾರವರು ರಾಜ್ಯಕ್ಕೆ ಪ್ರವೇಶ ಮಾಡಿದರು. ಅಲ್ಲಿ ತಂಗಿ ತನ್ನ ವ್ಯಾಪಾರ ವಹಿವಾಟಿನಲ್ಲಿ ಮಗ್ನರಾದರು.

ಒಂದು ದಿನ ಖ್ವಾಜಾ ತನ್ನ ವ್ಯಾಪಾರದ ಸರಕು ಸಾಮಾಗ್ರಿಗಳ ಜೊತೆಗೆ ಬೀದರ್ ಪಟ್ಟಣ ತಲಪಿದರು. ಬಾದಶಾಹರ ದರ್ಬಾರಿನ ಎಲ್ಲ ಮಂತ್ರಿಗಳು ಸದಸ್ಯ ಗಣ್ಯರನ್ನು ಕರೆದು ಅವರ ಘನತೆ ಗೌರವಕ್ಕೆ ತಕ್ಕಂತೆ ಆದರಿಸಿ ಕಾಣಿಕೆ ಕೊಡುಗೆಗಳನ್ನು ನೀಡಿ ಸತ್ಕರಿಸಿದರು. ಬಾದಶಾಹರ ಸನ್ನಿಧಾನಕ್ಕೆ ಹಲವು ಒಳ್ಳೆಯ ವಂಶದ ಕುದುರೆಗಳನ್ನು,

'ಖಿರ್ವಾರ್'(ಅಮೂಲ್ಯವಾದ) ಬಟ್ಟೆಬರೆ, ಕೆಲವು ಹಬ್ಶಿ ಮತ್ತು ತುರ್ಕಿ ನೌಕರರನ್ನು, ಮುತ್ತು ಮಾಣಿಕ್ಯ, ವಜ್ರ ವೈಢೂರ್ಯಗಳನ್ನು, ಕೆಲವು ಅಮೂಲ್ಯವಾದ ಸುಂದರ ಕಲಾಕಾರಿ ಹಸ್ತಾಕ್ಷರದ ಅಲಂಕಾರಿಕ ಕುರಾನ್ ಕೃತಿಗಳನ್ನು ಬಾದಶಾಹರ ದರ್ಬಾರಿಗೆ ತಲುಪಿಸಿದರು. ಖ್ವಾಜಾರವರು ಇಂತಹ ಒಂದು ಅಮೂಲ್ಯ ಕುರಾನ್ ಪುಸ್ತಕವನ್ನು ತಲೆಯ ಮೇಲೆ ಹೊತ್ತು ಗೌರವದಿಂದ ದರ್ಬಾರನ್ನು ಪ್ರವೇಶಿಸಿದರು. ಅವರ ಹಿಂದೆ ಸಾಲಾಗಿ ಅವರ ಸಂಗಡಿಗರು ಕೂಡ ಕುರಾನ್ ಪುಸ್ತಕವನ್ನು ತಲೆಯ ಮೇಲೆ ಇರಿಸಿಕೊಂಡು ಒಳಬಂದರು.

ಖ್ವಾಜಾರವರ ಆಗಮನದ ವೈಭವ ಬಾದಶಾಹ ಹಾಗೂ ದರ್ಬಾರಿನ ಸಮಸ್ತರನ್ನು ಬಹುವಾಗಿ ಆಕರ್ಷಿಸಿತು. ಅವರನ್ನು ಆಸ್ಥಾನದ ಘನತೆಗೆ ತಕ್ಕಂತೆ ಸ್ವಾಗತಿಸಿ ತಂಗುವ ವ್ಯವಸ್ಥೆ ಮಾಡಿದರು. ಬಾದಶಾಹರು ಅವರು ನೀಡಿದ ಗೌರವ ಕಾಣಿಕೆಯನ್ನು ಸಾದರದೊಂದಿಗೆ ಸ್ವೀಕರಿಸಿದರು. ಮತ್ತೆ ಬಾದಶಾಹರು ಅವರೊಂದಿಗೆ ಉಭಯಕುಶಲೋಪರಿ ಮಾತುಕತೆ ನಡೆಸಿ, ಅವರ ಬಗ್ಗೆ ಅವರು ಭೇಟಿ ಮಾಡಿ ಬಂದ ದೇಶಗಳ ಹಾಗೂ ದೇಶಗಳ ಬಾದಶಾಹರ ಬಗ್ಗೆ ತಿಳಿಯುವ ಕುತೂಹಲ ತೋರಿದರು. ಖ್ವಾಜಾರು ತನ್ನ ಘನತೆಗೆ ತಕ್ಕ ಆಕರ್ಷಕ ರೀತಿಯಲ್ಲಿ ಅವರಿಗೆ ಉತ್ತರ ನೀಡಿ ಬಾದಶಾಹರ ಮನಸ್ಸಿಗೆ ಉಲ್ಲಾಸ ಮೂಡಿಸಿದರು. ಬೇರೆ ದೇಶಗಳ ಪರಿಸ್ಥಿತಿ, ಅಲ್ಲಿನ ಸಂಸ್ಕೃತಿ, ನಡೆ ನುಡಿ ಆಚಾರ ವಿಚಾರಗಳ ಬಗ್ಗೆ ವಿವರವಾಗಿ ಬಾದಶಾಹರ ಸಮ್ಮುಖದಲ್ಲಿ ಅರುಹಿದರು.

ಖ್ವಾಜಾರ ಈ ವಿವರಗಳಿಂದ ಅವರು ನೀಡಿದ ವರ್ತಮಾನಗಳಿಂದ ಬಾದಶಾಹ ತುಂಬ ಪ್ರಫುಲ್ಲರಾದರು. ಹೀಗೆ ಖ್ವಾಜಾರವರೊಂದಿಗೆ ಭೇಟಿಯಾಗಿ, ಸಂತೋಷಚಿತ್ತರಾಗಿ ಬಾದಶಾಹರು ಅವರು ಯಾವಾಗಲೂ ತಮ್ಮ ದರ್ಬಾರಿಗೆ ಭೇಟಿಯಾಗಲು ಸ್ವತಂತ್ರರು ಎಂದು ಅನುಮತಿ ನೀಡಿದರು. ಇದಲ್ಲದೆ ಖ್ವಾಜಾರಿಗೆ ಇನಾಮು ಗೌರವವನ್ನು ನೀಡಿ ಅವರ ಘನತೆಯನ್ನು ಹೆಚ್ಚಿಸಿದರು. ಇನ್ನಿತರ ನೌಕರರಂತೆ ಖ್ವಾಜಾ ಬಾದಶಾಹರ ದರ್ಬಾರಿಗೆ ದಿನವೂ ಭೇಟಿ ನೀಡತೊಡಗಿದರು. ಜೊತೆಗೆ ಉಡುಗೊರೆಗಳನ್ನೂ ಬಾದಶಾಹರಿಗೆ ನೀಡತೊಡಗಿದರು. ಹೀಗೆ ಬರಬರುತ್ತಾ ಬಾದಶಾಹರ ಜೊತೆಗಿನ ಸಂಬಂಧ ನಿಕಟವಾಗ ತೊಡಗಿತು. ಬಾದಶಾಹರು ರಾಜ್ಯದ ಆಡಳಿತ ಸಂಬಂಧಿ ವಿಷಯಗಳನ್ನು ಖ್ವಾಜಾರೊಂದಿಗೆ ಚರ್ಚಿಸತೊಡಗಿದರು. ಖ್ವಾಜಾ ಸ್ವತಃ ಅಗತ್ಯವಿರುವ ಸಂಗತಿಗಳಲ್ಲಿ ತನ್ನ ಅಭಿಪ್ರಾಯವನ್ನು ಅವರೊಂದಿಗೆ ಹಂಚಿಕೊಳ್ಳತೊಡಗಿದರು. ಹೀಗೆ ಸಂಬಂಧ ನಿಕಟವಾಗಿ ಬೆಳೆಯತೊಡಗಿದಂತೆ ಒಂದು ದಿನ ಸುಲ್ತಾನ್ ಅಹ್ಮದ್ ತೀರಿಕೊಂಡರು.

## ಸುಲ್ತಾನ್ ಅಲಾವುದ್ದೀನ್ ಬಿನ್ ಸುಲ್ತಾನ್ ಅಹ್ಮದರ ರಾಜ್ಯಭಾರ

ಸುಲ್ತಾನ್ ಅಹ್ಮದರ ನಿಧನಾನಂತರ ಅವರ ಹಿರಿಯ ಮಗ ಸುಲ್ತಾನ್ ಅಲಾವುದ್ದೀನ್ ಷಾ ಬಹಮನಿ ಪಟ್ಟದ ಸಿಂಹಾಸನವನ್ನು ಏರಿದರು. ಈತ ತನ್ನ ತಂದೆಗಿಂತಲೂ ಹೆಚ್ಚು ಖ್ವಾಜಾರ ಮೇಲೆ ಗೌರವವನ್ನು ತೋರುತ್ತಿದ್ದ. ಖ್ವಾಜರವರು ಇವರ ಆಸ್ಥಾನದಲ್ಲಿ ರಾಜ್ಯದ ಆಡಳಿತ ಸಂಬಂಧಿ ವ್ಯವಹಾರಗಳಲ್ಲಿ ಅಮೂಲ್ಯ ಸಲಹೆಗಳನ್ನು ನೀಡಿ ಸರಕಾರಕ್ಕೆ ಅತ್ಯಂತ ಹೆಚ್ಚು ಫಾಯಿದೆ ಉಂಟುಮಾಡಿದ್ದರು. ಸರಕಾರದ ಖಜಾನೆಯ ಆದಾಯ ಹೆಚ್ಚುತ್ತ ಹೋಯಿತು. ಹಿಂದಿನ ಬಾದಶಾಹರ ಆಳ್ವಿಕೆಯಲ್ಲಿ ವ್ಯಾಪಾರ, ಕೃಷಿ ವ್ಯವಹಾರದ ತೆರಿಗೆ ಕಂದಾಯಗಳು ಸರಿಯಾಗಿ ವಸೂಲಾತಿಯಾಗಿ ಖಜಾನೆಯಲ್ಲಿ ಜಮಾ ಆಗುತ್ತಿರಲಿಲ್ಲ. ಇದನ್ನು ಸರಿಪಡಿಸಿ ನೇರ ವಸೂಲಾತಿಗೆ ಏರ್ಪಾಡು ಮಾಡಲಾಗಿತ್ತು. ಹೀಗೆಯೇ ಇತರ ರಾಜ್ಯಗಳಿಂದ ವಸೂಲಿ ಮಾಡಲಾಗುತ್ತಿದ್ದ ಜಿಜಿಯಾ ತೆರಿಗೆ ಯಾಗಲಿ, ಕಪ್ಪ ಕಾಣಿಕೆಯಾಗಲಿ ಸರಿಯಾಗಿ ಖಜಾನೆಯ ಲೆಕ್ಕದಲ್ಲಿ ಜಮಾ ಆಗುತ್ತಿರಲಿಲ್ಲ. ಇದು ಕೂಡ ಸರಿಯಾಗಿ ಖಜಾನೆಯ ಲೆಕ್ಕಕ್ಕೆ ಜಮಾ ಆಗುವಂತೆ ಏರ್ಪಾಡು ಮಾಡಿದರು. ಇದೇ ರೀತಿಯಲ್ಲಿ ವಿದೇಶೀಯರು ಹಲವಾರು ಉದ್ದೇಶಗಳನ್ನಿಟ್ಟು ಜಗತ್ತಿನ ಅನೇಕ ಕಡೆಗಳಿಂದ ರಾಜಧಾನಿ ಬೀದರಿಗೆ ಆಗಮಿಸುವವರು ಮಾಡುವ ವ್ಯಾಪಾರ ವಹಿವಾಟಿನಿಂದ ಬರುವ ಲಾಭದ ಒಂದಂಶವನ್ನು ವಸೂಲಿ ಮಾಡುವ ನಿಯಮ ಹಿಂದಿನ ಬಾದಶಾಹರ ಆಳ್ವಿಕೆಯಲ್ಲಿ ಸಂಪೂರ್ಣ ನಿಂತು ಹೋದದ್ದನ್ನು ಪುನರುಜ್ಜೀವನಗೊಳಿಸಿ, ವಸೂಲಿ ಮಾಡಿ ಖಜಾನೆಗೆ ಜಮಾ ಮಾಡುವ ಕ್ರಮವನ್ನು ಜಾರಿಗೊಳಿಸಿದರು. ಸುಲ್ತಾನ್ ಅಲಾವುದ್ದೀನ್ ಷಾ ಬಹಮನಿಯ ಆಳ್ವಿಕೆಯಲ್ಲಿ ರಾಜ್ಯದ ಆಡಳಿತ ಬಹಳ ಶಿಸ್ತುಬದ್ಧವಾಗಿ, ಸಂಪದ್ಭರಿತವಾಗಿ ಜನರು ಸುಖದಿಂದ ಬಾಳುವಂತಾಯಿತು. ರಾಜ್ಯದಲ್ಲಿ ಸೈನಿಕರು, ಪ್ರಜೆಗಳೆಲ್ಲರೂ ಸುಖವಾಗಿದ್ದು, ಬಡವರು, ದೀನರು, ನಿರ್ಗತಿಕರಿಗೂ ಸಹಾಯ ಹಸ್ತನೀಡಲಾಗುತ್ತಿತ್ತು. ಈ ಬಾದಶಾಹರ ಆಳ್ವಿಕೆಯ ಅವಧಿಯಲ್ಲಿ ಜ್ಞಾನಿಗಳು, ಪಂಡಿತರು, ಜ್ಞಾನದಾಹಿಗಳು, ಸಾಹಿತಿಗಳು ರಾಜ್ಯದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸೇರಿದ್ದರು. ಬಾದಶಾಹ ಇವರೆಲ್ಲರಿಗೂ ಅವರ ಪರಿಸ್ಥಿತಿ, ಅಗತ್ಯಕ್ಕೆ ತಕ್ಕಂತೆ ಗೌರವಧನ, ವಿದ್ಯಾರ್ಥಿವೇತನಗಳನ್ನು ನಿಗದಿ ಪಡಿಸಿ ಪಾವತಿ ಮಾಡುವ ಏರ್ಪಾಡು ಮಾಡಿದ.

ಬಾದಶಾಹರ ಕೊನೆಯದಿನಗಳು ಸಮೀಪಿಸಿದಾಗ ಹುಮಾಯುನ್ ಷಾನನ್ನು ತನ್ನ ಉತ್ತರಾಧಿಕಾರಿಯನ್ನಾಗಿ ನೇಮಿಸಿದರು. ಹಿಜರಿ ಸನ್ ೮೬೨ನಲ್ಲಿ ಸುಲ್ತಾನ್ ಅಲಾವುದ್ದೀನ್ ಷಾ ಬಹಮನಿ ನಿಧನರಾದರು.

**ಹುಮಾಯುನ್ ಷಾ ಬಹಮನಿಯ ರಾಜಧಾನಿ ಬೀದರಿನಲ್ಲಿ ರಾಜ್ಯ ಆಡಳಿತ**

ಹುಮಾಯುನ್ ಷಾನಿಗೆ ಪಟ್ಟಾಭಿಷೇಕ ನಡೆದು ರಾಜ್ಯಾಡಳಿತದ ಚುಕ್ಕಾಣಿ ಹಿಡಿದ ಬಳಿಕ ನ್ಯಾಯ ಮತ್ತು ಶಿಸ್ತಿನ ಆಡಳಿತ ನಡೆಸಿದ. ಪ್ರಜೆಗಳು ಮತ್ತು ಆಡಳಿತಾಧಿಕಾರಿಗಳ ನಡುವೆ ಉತ್ತಮ ಗೌರವಾನ್ವಿತ ಸಂಬಂಧ ಏರ್ಪಡುವಂತೆ ಮಾಡಿದ. ಒಂದು ವರ್ಷ ಒಂದು ತಿಂಗಳ ಆಳ್ವಿಕೆಯ ನಂತರ ಬಾದಶಾಹ ಅಕಾಲಿಕ ನಿಧನಹೊಂದಿದ. (ಉಮೇರಾ ಝೈನ್‌ರ ಟಿಪ್ಪಣಿ: ಹುಮಾಯುನ್ ಷಾ ಬಹಮನಿ ಓರ್ವ ಕ್ರೂರ ಬಾದಶಾಹನಾಗಿದ್ದ. ಓರ್ವ ಕವಿ ಈತನ ಸಾವಿನ ಬಗ್ಗೆ ಪದ್ಯ ಬರೆದಿದ್ದ **"ಹಮಾಯುನ್ ಷಾ ಮರ್ದೂದ್ ರುಕ್ಸತ್ ಆಲಮೇ ಗಶ್ತ್, ತಆಲಲ್ಲಾಹ್ ಜಹೇ ಮರ್ಗೇ ಹುಮಾಯುನ್ ಜಹಾಂ, ಘುರ್‌ಝೋಕ್ ಶುದ್ ತಾರೀಕ್ ಘ್ರೋ ಕುಶ್"**, ಹುಮಾಯುನ್ ಷಾ ಅತ್ಯಂತ ಕ್ರೂರಿಯಾಗಿದ್ದ, ಸತ್ತು ಭೂಮಿಯ ಭಾರ ಕಡಿಮೆ ಮಾಡಿದ, ಭೂಮಿ ಪರಿಶುದ್ಧವಾಯಿತು ಎಂದು ಬರೆದಿದ್ದಾನೆ)

**ಮುಹಮ್ಮದ್ ಷಾ ಬಹಮನಿಯ ಆಳ್ವಿಕೆ ಮತ್ತು ಕೋಟೆಗಳನ್ನು ವಶಪಡಿಸಿಕೊಂಡ ವಿವರಗಳು**

ತನ್ನ ತಂದೆಯ ನಂತರ ಯುವಕ ಮುಹಮ್ಮದ್ ಷಾ ಬಹಮನಿ ರಾಜ್ಯದ ಆಡಳಿತದ ಜವಾಬ್ದಾರಿಯನ್ನು ವಹಿಸಿಕೊಂಡು ಪಟ್ಟದ ಸಿಂಹಾಸನವನ್ನು ಅಲಂಕರಿಸಿದ. ಇವರ ತಾಯಿ ಬೀಬಿ ಮಗ್ದೂಮ ಜಹಾಂರವರು ಖ್ವಾಜಾ ಜಹಾಂರ ಸಲಹೆ ಸೂಚನೆಗಳನ್ನು ಪಡೆದು ಅದರಂತೆ ಆಳ್ವಿಕೆಯನ್ನು ನಡೆಸಿದರು. ಅನೇಕ ಸಂಗ್ರಾಮಗಳು ನಡೆದು ಅನೇಕ ವೈರಿ ಸಂಸ್ಥಾನಗಳನ್ನು ಈ ಬಾದಶಾಹ ಮಟ್ಟಹಾಕಿ ಗುಂಜಿ, ಕಾಸ್ತರಿ ಮತ್ತಿತರ ಕೋಟೆಕೊತ್ತಲಗಳು ಬಹಮನಿ ರಾಜ್ಯಕ್ಕೆ ಸೇರ್ಪಡೆಯಾದವು. ದಿನವೂ ಒಂದೊಂದು ಕೋಟೆಗಳು ವಶವಾಗುತ್ತ ಬಂದವು. ಬಹಳಷ್ಟು ಹಿಂದೂ ರಾಜರು ತಮ್ಮ ದುರ್ಬಲ ಆಡಳಿತವನ್ನು ಕೊನೆಗೊಳಿಸಿ ಸಾಮಂತರಾಗಿ ಪ್ರತೀವರ್ಷ ಕಪ್ಪಕಾಣಿಕೆಯನ್ನು ನೀಡುವ ಕರಾರು ಮಾಡಿಕೊಂಡರು. ಇವರು ನಗದು, ಚಿನ್ನಾಭರಣಗಳು, ಕುದುರೆಗಳು, ಯುದ್ಧ ಸಾಮಾಗ್ರಿಗಳು, ಆಹಾರ ದವಸಧಾನ್ಯಗಳನ್ನು ಪ್ರತೀ ವರ್ಷ ಕಪ್ಪ ಕಾಣಿಕೆಯನ್ನಾಗಿ ಬಾದಶಾಹನ ದರ್ಬಾರಿಗೆ ಒಪ್ಪಿಸುತ್ತಿದ್ದರು. ವೈರಿಗಳೊಂದಿಗೆ ಯುದ್ಧದ ವಿಜಯ ಯಾತ್ರೆಯ ಬಳಿಕ ತಾಯಿ ಬೀಬಿ ಮಗ್ದೂಮಾರ ಮನೆಗೆ ಭೇಟಿ ನೀಡಿದರು. ಅಲ್ಲಿ ಬೀಬಿ ಮಗ್ದೂಮ ಹಾಸಿಗೆ ಹಿಡಿದಿದ್ದರು. ಬಹಳಷ್ಟು ನಾಮಾಂತ ವೈದ್ಯರು ಅವರ ಆರೈಕೆ ಮಾಡಿದರೂ ಗುಣಮುಖರಾಗದೆ ಇಹಲೋಕವನ್ನು ತ್ಯಜಿಸಿದರು. ಅವರ ಕಾಲದಲ್ಲಿ ರಾಜ್ಯದಲ್ಲಿರುವ ಬಡವರಿಗೆ ಧರ್ಮ ಜಾತಿ ಮತಬೇಧವಿಲ್ಲದೆ ಸಹಾಯ ಮಾಡುತ್ತಿದ್ದರು. ಅವರ ನೆನಪಿನ ಅನೇಕ ಘಟನೆಗಳು ಇದ್ದರೂ ಇಲ್ಲಿ ಬರೆಯುವ ಅವಕಾಶ ಇಲ್ಲ. ಇವರ ಅಂತಿಮ ದಿನಗಳ ದಾಖಲೆಯನ್ನು ಕವಿಯೊಬ್ಬ ಅರಬಿ ಪದ್ಯದ ಮೂಲಕ ವ್ಯಕ್ತಪಡಿಸಿದ್ದಾನೆ.

ದುರ್ರತು ತಾಜಿ ಹರೀಮುಲ್ ಆಸಾರಿ
ಇದಾ ಅಜಾಬತ್ ನದಾ ರಾಯಿಹ
(ಮುಲ್ಹಮುಲ್ ಗೈಬ್)

ಕೀರೀಟದಲ್ಲಿ ಹೊಳೆಯುವ ನಕ್ಷತ್ರ, ಭೂಮಿಯಲಿ
ಕರೆಬಂದಾಗ ಸೃಷ್ಟಿಕರ್ತನ ಕರೆಗೆ ಓಗೊಟ್ಟರು.

ಮುಹಮ್ಮದ್ ಬಹಮನ್ ಷಾರ ತಾಯಿಯ ಅಂತ್ಯ ಸಂಸ್ಕಾರಗಳ ನಂತರ ರಾಜ್ಯಭಾರ ನಡೆಸುವುದರಲ್ಲಿ ಮತ್ತು ಪ್ರಜೆಗಳ ಹಿತರಕ್ಷಣೆಯ ಕಾರ್ಯಕ್ರಮಗಳಲ್ಲಿ ಹೆಚ್ಚು ಮನಸ್ಸು ಹರಿಸತೊಡಗಿದ. ಸೈನಿಕರ ಒಡನಾಟದಲ್ಲಿ ಹೆಚ್ಚು ಸಮಯ ಕಳೆದದ್ದು ಮಾತ್ರವಲ್ಲ, ಯುದ್ಧದ ಸಂದರ್ಭದಲ್ಲಿ ತಾನೇ ಖುದ್ದಾಗಿ ಭಾಗವಹಿಸುತ್ತಿದ್ದ. ಮಗ್ದೂಂ ಖ್ವಾಜಾ ಜಹಾಂರ ಸೇವೆಯನ್ನು ಅವರ ಪೂರ್ವಜರು ಮಾಡುತ್ತಿದ್ದಂತೆಯೇ ಮುಹಮ್ಮದ್ ಬಹಮನ್ ಷಾ ಅಸ್ಥೆಯಿಂದ ಮಾಡುತ್ತಿದ್ದ. ಖ್ವಾಜಾ ಮಗ್ದೂಮರು ಒಂದು ದಿನ ಬಾದಶಾಹರ ಮುಂದೆ ಒಂದು ಸಲಹೆಯನ್ನು ಇಟ್ಟರು. 'ಜಝೀರಯೆ ಕೋದ' ಅಂದರೆ ಕೋದ ಎಂಬ ಹೆಸರಿನ ಸರೋವರವು ಹಿಂದೂ ಅರಸರ ಕೈಯಲ್ಲಿದೆ. ಈ ಸರೋವರದಿಂದ ಬಾದಶಾಹರ ರಾಜ್ಯದ ಪ್ರಜೆಗಳಿಗೆ ನೀರು ಕೊಡದೆ ತಡೆಹಿಡಿದಿದ್ದರು. ಸುಲ್ತಾನರಿಗೆ ಕೂಡ ಈ ವಿಷಯ ತಿಳಿದಿತ್ತು. ಸುಲ್ತಾನ ಈ ಸರೋವರದಿಂದ ಕಾಲುವೆಯೊಂದನ್ನು ತೋಡಿ ಪ್ರಜೆಗಳಿಗೆ ಇಲ್ಲಿನ ನೀರನ್ನು ಉಪಯೋಗಿಸಲು ಅವಕಾಶ ಮಾಡಿಕೊಡಬೇಕೆಂದು ಯೋಚಿಸಿದ್ದರು. ಮಂತ್ರಿಗಳೊಂದಿಗೆ ಈ ವಿಷಯದಲ್ಲಿ ಚರ್ಚೆ ನಡೆಸಿದಾಗ ಇದು ನಮ್ಮಿಂದ ಸಾಧ್ಯವಿಲ್ಲವೆಂದು ಹೇಳಿದ್ದರು. ಖ್ವಾಜಾ ಮಗ್ದೂಂ ಜಹಾಂರು ಈ ವಿಷಯದಲ್ಲಿ ಆಸಕ್ತಿ ತೋರಿದಾಗ ಬಾದಶಾಹ ಈ ಕೆಲಸವನ್ನು ಅವರ ವಶಕ್ಕೆ ಒಪ್ಪಿಸಿದರು. ಮಗ್ದೂಂ ಜಹಾಂ ಸರೋವರದತ್ತ ಹೋಗಿ ನೀರನ್ನು ತಡೆಹಿಡಿದರು. ಅಲ್ಲಿನ ಜನರಿಗೆ ಈ ಸರೋವರದ ನೀರನ್ನು ಉಪಯೋಗಿಸಕೂಡದು. ಜಾನುವಾರುಗಳಿಗೆ ಈ ನೀರನ್ನು ಉಪಯೋಗಿಸಲಿಕ್ಕಾಗಲಿ, ಕೃಷಿಗಾಗಿಯೂ ಈ ನೀರನ್ನು ಉಪಯೋಗಿಸಕೂಡದು ಎಂದು ಹೇಳಿದರು. ನೀರು ತಡೆಹಿಡಿದದ್ದರಿಂದ ಕೆಳ ಭಾಗದ ಜನರ ಬವಣೆ ಹೆಚ್ಚಿತು. ಈ ಜನರು ಅನಿವಾರ್ಯವಾಗಿ ಸರೋವರವನ್ನು ವಾಪಾಸು ನೀಡಬೇಕಾಯಿತು. ಇದರ ಕೆಲಸಕಾರ್ಯಗಳನ್ನು ಪೂರೈಸಿ ಸುಲ್ತಾನರ ಸಮ್ಮುಖಕ್ಕೆ ಹೋದರು. ಅವರ ಧೈರ್ಯಕ್ಕೆ ಮೆಚ್ಚಿಕೊಂಡರು. ಪ್ರಜೆಗಳು ಸಹಕಾರ ನೀಡಿದ್ದಕ್ಕೆ ಕೃತಜ್ಞತೆಯನ್ನು ಸಲ್ಲಿಸಿ ಇನಾಮುಗಳನ್ನು ನೀಡಿದರು.

ಈ ಕಾಲಘಟ್ಟದಲ್ಲಿ ಖ್ವಾಜಾ ಮಗ್ದೂಂ ಜಹಾಂ ತಮ್ಮ ವೆಚ್ಚದಲ್ಲಿ ಒಂದು ಬೃಹತ್ತಾದ ಮದ್ರಸಾವನ್ನು(ಪಾಠಶಾಲೆ) ಕಟ್ಟಿಸಿದರು. ಇದರಲ್ಲಿ ಹೆಚ್ಚು ಕಮ್ಮಿ ಒಂದು

ಸಾವಿರ ಕೋಣೆಗಳಿದ್ದವು. ಈ ಕೋಣೆಗಳಲ್ಲಿ ಹಲವಾರು ಪಂಡಿತ ಉಲೇಮಾಗಳು ಇರುತ್ತಿದ್ದರು. ಜೊತೆಗೆ ಹಲವು ಉಸ್ತಾದ್‌ಗಳು (ಉಪಾಧ್ಯಾಯರು) ಪಾಠ ಹೇಳುವವರು ಇದ್ದರು. ಅವರಿಗೆ ಹಲವಾರು ಗಾದಿಗಳನ್ನು ಹಾಸಿ, ಸಣ್ಣರೀತಿಯ ಮೇಜುಗಳೆದುರಲ್ಲಿ ಕೂತು ವಿದ್ಯಾರ್ಥಿಗಳಿಗೆ ಪಾಠಗಳನ್ನು ಮಾಡಲಾಗುತ್ತಿತ್ತು. ಬಡ ಮತ್ತು ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ಹಲವು ರಿಯಾಯತಿಯನ್ನು ನೀಡಲಾಗುತ್ತಿತ್ತು.

ಆ ಕಾಲದ ಕವಿಯೋರ್ವರು ಈ ಮದ್ರಸಾ ಸ್ಥಾಪನೆಯಾದ ಕಾಲವನ್ನು ಪದ್ಯದ ಸಾಲುಗಳಲ್ಲಿ ಸೂಚಿಸಿದ್ದಾರೆ.

**ಈ ಮದ್‌ರಸ ಯೇ ರಫಿ ಮಹಮೂದ್ ಬಿನಾ**
**ಚ್ಯೂಂ ಕಾಬಾ ಶುದ್ ಅಸ್ತ್ ಖಿಬ್ಲಯೇ ಅಹ್ಲೆ ದುವಾ**
**ಆಸಾರೆ ಖುಬೂಲ್ ಬಿ ಕೆ ಶುದ್ ತಾರೀಖಶ್**
**ಅಝ್ ಆಯತೇ ರಬ್ಬನಾ ತಕಬ್ಬಲ್ ಮಿನ್ನಾ**

ಈ ವೈಭವದ ಮದ್ರಸಾವನ್ನು ಮಹಮೂದರು ಕಟ್ಟಿಸಿದರು
ದುವಾ ಪ್ರಾರ್ಥನೆ ಮಾಡುವವರಿಗೆ ಇದು ಖಿಬ್ಲ ಕಾಬಾ ಆಗಿದೆ.
ಅದರ ಸ್ಥಾಪನೆಯ ದಿನದಿಂದಲೇ ಈ ಮದ್‌ರಸಾದ ಹೆಸರು ಅಜರಾಮರ

ಈ ವಾಕ್ಯ 'ರಬ್ಬನಾ ತಕಬ್ಬಲ್ ಮಿನ್ನಾ' ಅದರ ಕಾಲ ನಿರ್ಣಯವಾಗಿದೆ.( ಹಿಜರಿ ವರ್ಷ ೮೭೬)

ಜನರ ಹೇಳಿಕೆಯಂತೆ ಮಗ್ದೂಂ ಖ್ವಾಜಾ ಜಹಾಂ ಆಗಾಗ ಸುಲ್ತಾನ್ ಹುಸೈನ್ ಮಿರ್ಜಾರಿಗೆ ಪತ್ರ ಬರೆಯುತ್ತಿದ್ದರು. ಅವರ ಕಡೆಯಿಂದ ಉತ್ತರವೂ ಬರುತ್ತಿತ್ತು. ಇವರ ಮೂಲಕ ಇರಾನಿನ ಬಾದಶಾಹರು, ಗೌರವಾನ್ವಿತ ವ್ಯಕ್ತಿಗಳ ಜೊತೆಗೆ ಪತ್ರವ್ಯವಹಾರ ನಡೆಯುತ್ತಿತ್ತು. ಇದರಿಂದಾಗಿ ಬಹಮನಿ ಬಾದಶಾಹರು ಮತ್ತು ಇರಾನಿನ ಬಾದಶಾಹರ ಮಧ್ಯೆ ಪತ್ರ ವ್ಯವಹಾರ ನಡೆದು ಈ ವಿದೇಶಿ ರಾಷ್ಟ್ರಗಳ ಮಧ್ಯೆ ಸ್ನೇಹ ಸಂಬಂಧ ಏರ್ಪಟ್ಟಿತ್ತು. ಖ್ವಾಜಾ ಜಹಾಂರು ಕೂಡ ಘನತೆವೆತ್ತ ಜ್ಞಾನಿಯಾಗಿದ್ದರು. ಅವರು ಹಲವು ವಿಷಯಗಳ ಬಗ್ಗೆ ಪುಸ್ತಕಗಳನ್ನು ಬರೆದಿದ್ದರು. ಇವರು ಬರೆದ ಎರಡು ಮೂರು ಕಿರು ಹೊತ್ತಿಗೆಗಳನ್ನು ಮಾತ್ರ ನನಗೆ ಓದುವ ಭಾಗ್ಯ ದೊರೆತಿತ್ತು. ಅವರ ಅನೇಕ ಕಿರುಹೊತ್ತಿಗಳು ಹಿಂದುಸ್ಥಾನದ ಉದ್ದಗಲಗಳಲ್ಲಿ ಪ್ರಖ್ಯಾತವಾದವು. ಸತತವಾದ ಅನ್ವೇಷಣೆಯ ಹೊರತಾಗಿಯೂ ಅವರ ಎಲ್ಲ ಕೃತಿಗಳು ಬೆಳಕಿಗೆ ಬರಲಿಲ್ಲ. ಬೆಳಕಿಗೆ ಬಂದವುಗಳು ಕೂಡ ಕಾಲಕ್ರಮೇಣ ಹಲವಾರು ಕಾರಣಗಳಿಂದಾಗಿ ಚೆಲ್ಲಾಪಿಲ್ಲಿಯಾಗಿ ಮಾಯವಾದವು. ಅನೇಕ ಕಾರ್ಯ ಕ್ಷೇತ್ರಗಳಲ್ಲಿ ಮಗ್ದೂಂ ಖ್ವಾಜಾ ಜಹಾಂರು ಘನತೆ ಗೌರವದಲ್ಲಿ ಅತ್ಯಂತ ಎತ್ತರ ಮಟ್ಟದವರಾಗಿದ್ದು ಬಹು ಪ್ರಸಿದ್ದರಾಗಿದ್ದರು.

ಸುಲ್ತಾನ್ ಮುಹಮ್ಮದ್ ಷಾ ಇವರ ಮೇಲೆ ತುಂಬ ಪ್ರೀತಿಯಿಟ್ಟುಕೊಂಡಿದ್ದರು. ತಮ್ಮ ಅತ್ಯಂತ ಸಮೀಪದವರನ್ನಾಗಿ ಮಾಡಿಕೊಂಡಿದ್ದರು. ಇದರಿಂದಾಗಿ ಬಾದಶಾಹರ ಆಸ್ಥಾನದ ಅಧಿಕಾರಿಗಳು, ಮಂತ್ರಿಗಳು, ದರ್ಬಾರಿನ ಕೆಲವರು ಅವರನ್ನು ಈರ್ಷೆಯಿಂದ ನೋಡುತ್ತಿದ್ದರು. ಆಗಾಗ ಸಮಯ ನೋಡಿ ಬಾದಶಾಹರ ಕಿವಿಯೂದುತ್ತಿದ್ದರು. ಬಾದಾಶಾಹರು ಅವರ ಮೇಲೆ ಅನುಮಾನ ಪಡುವಂತೆ ಪಿತೂರಿ ನಡೆಸಿ ಉತ್ತೇಜಿಸುತ್ತಿದ್ದರು. ಆಸ್ಥಾನದ ಹೊರಗಿನವರ ಮೂಲಕ ಕೂಡ ಬಾದಶಾಹನ ಮನಸ್ಸು ಅವರ ಮೇಲೆ ಸಂಶಯ ಪಡುವಂತೆ ಮಾಡುವಂತಹ ಅನೇಕ ವಿಧದ ಸುಳ್ಳು ಆರೋಪವನ್ನು ಹೊರಿಸುವ ಪಿತೂರಿ ನಡೆಯತೊಡಗಿತು. ಖ್ವಾಜಾರವರು ೧೫ ವರ್ಷಗಳ ತನಕ ಬಾದಶಾಹರ ನೆರಳಾಗಿ ನಿಂತು ಕೆಲಸಕಾರ್ಯಗಳಲ್ಲಿ ಪ್ರಾಮಾಣಿಕವಾಗಿ ಭಾಗಿಯಾಗಿದ್ದರು. ಆಡಳಿತ ಸಂಬಂಧಿ ಕಾರ್ಯಗಳಲ್ಲಿ ಸಲಹೆ ನೀಡಿ ನೆರವಾಗಿದ್ದರು. ಬಾದಶಾಹನ ಘನತೆ ಗೌರವಗಳನ್ನು ಹೆಚ್ಚಿಸಲು ಸಹಾಯಮಾಡಿದರು. ವಸ್ತುಸ್ಥಿತಿ ಹೀಗಿದ್ದರೂ, ಪಿತೂರಿಮಾಡುವವರು ಒಂದು ಕಪಟವ್ಯೂಹ ರಚಿಸಿ ಬಾದಶಾಹರ ಕೈಯಲ್ಲೇ ಅವರನ್ನು ಕೊಲೆಮಾಡಿಸುವ ಯೋಜನೆಮಾಡಿದರು. ಬಾದಶಾಹರ ಮೂಲಕ ಕೊಲೆಮಾಡುವುದರಲ್ಲಿ ವಿರೋಧಿಗಳು ಯಶಸ್ವಿಯಾದರು. ಹೀಗೆ ಖ್ವಾಜಾ ಮಗ್ದೂಂ ಜಹಾಂರು ಮಾಡದ ತಪ್ಪಿಗೆ ಅಪರಾಧಿಯಾಗಿಸಿ ಮರಣಶಿಕ್ಷೆಗೆ ಗುರಿಯಾಗಿ ಹುತಾತ್ಮರಾದರು.

ಸಾಮಯಿ ಎಂಬ ಹೆಸರಿನ ಕವಿಯೊಬ್ಬ ಅವರು ಹುತಾತ್ಮರಾದ ವರ್ಷವನ್ನು ತನ್ನ ಪದ್ಯವೊಂದರ ಸಾಲಿನಲ್ಲಿ ನಮೂದಿಸಿದ್ದಾನೆ:

**ಚ್ಯೊಂ ಖ್ವಾಜ ಯೇ ಜಹಾಂರಾ ಹರ್ಗಿಝ್ ಹರಾಮ್ ಖ್ವಾರಿ ದರ್ದಿಲ್ ನಬೂತ್ ವ ಮಿ ಗರ್ದ್**

**ಪೈವಸ್ತ ಜಾಂ ಸಿಪಾರಿ ಗಶ್ತ್ ವೂ ಶಹೀದ್ ಬ ಮರ್‌ಹೂಂ ಈಂ ತಾರೀಖ್ ಗಶ್ತ್ ವೂ ಜುವೇ ಅಝ್ ಹಲಾಲ್ ಖ್ವಾರಿ** (೮೮೬)

ಖ್ವಾಜಾ ಜಹಾಂರವರ ಹೃದಯದಲ್ಲಿ ಯಾವತ್ತೂ ಬಾದಶಾಹರ ವಿರುದ್ಧ ಕೇಡಿನ ಮಸಲತ್ತು ಇರಲಿಲ್ಲ, ಯಾಕೆಂದರೆ ಅವರು ತನ್ನ ಜೀವವನ್ನು ಅವರಿಗಾಗಿ ಮೀಸಲಿಟ್ಟಿದ್ದರು.

ಹೀಗೆ ಅವರು ಹುತಾತ್ಮರಾದರು ಪರಿಪೂರ್ಣರೂಪದಲ್ಲಿ, ಅವರ ತ್ಯಾಗವು ಪ್ರಾಮಾಣಿಕವಾಗಿತ್ತು.

ದಿವಂಗತ ಹುತಾತ್ಮ ಖ್ವಾಜಾ ಮಗ್ದೂಂ ಜಹಾಂ (ರಹ್ಮತುಲ್ಲಾಹಿ ಅಲೈಹಿ)ಯವರ

ಪಾರ್ಥಿವ ಶರೀರವನ್ನು ಅವರ ಮದ್ರಸಾ ಕಟ್ಟಡದ ಜಾಗದಲ್ಲಿ ದಫನಮಾಡಿದರು. ಇವರ ಘನತೆ, ಅಪಾರ ಜ್ಞಾನ, ಪಾಂಡಿತ್ಯ, ದಯಾಪರತೆ, ತ್ಯಾಗ ಬಲಿದಾನಗಳ ಬಗ್ಗೆ ಹಲವಾರು ಪುಸ್ತಕಗಳಲ್ಲಿ ದಾಖಲಾಗಿವೆ.

ಮಖ್ದೂಂ ಖ್ವಾಜಾ ಜಹಾಂರ ಸ್ವಯಂ ರಚಿತ ಕೃತಿಗಳು ಹಲವಾರು ಇವೆ. ಅವರು ಬರೆದ ಎರಡು ಭಾಗಗಳನ್ನೊಳಗೊಂಡ ಎರಡು ಗ್ರಂಥಗಳು ಆ ಕಾಲದ ಸಾಹಿತ್ಯಾಸಕ್ತರಲ್ಲಿ ಬಹಳ ಪ್ರಸಿದ್ಧಿ ಪಡೆದಿತ್ತು ಎಂದು ಹೇಳಲಾಗುತ್ತದೆ. ಅವರಂತಹ ಪಂಡಿತರು ಆ ಕಾಲದಲ್ಲಿ ಇದ್ದಿರಲಿಲ್ಲ. ಮುಹಮ್ಮದ್ ಷಾ ಬಹಮನಿಗೆ ಮಖ್ದೂಂ ಖ್ವಾಜಾ ಜಹಾಂರವರೇ ತಮ್ಮ ಜ್ಞಾನವನ್ನು ಧಾರೆಯೆರೆದ ಗುರುವಾಗಿದ್ದರು. ಮುಹಮ್ಮದ್ ಷಾ ಬಹಮನಿ ತಮ್ಮ ವಂಶದ ತಲೆಮಾರಿನ ಹಿರಿಯ ಬಾದಶಾಹರಿಗಿಂತ ಬುದ್ಧಿವಂತನಾಗಿದ್ದ. ರಾಜ್ಯದ ಆಡಳಿತ ವ್ಯವಹಾರದಲ್ಲಿ ಅತ್ಯಂತ ಚಾಣಾಕ್ಷನಾಗಿದ್ದ. ಪಿತೂರಿ ಮಾಡುವವರ, ಬದ್ಧ ದ್ವೇಷಿಗಳ ಮಾತುಗಳನ್ನು ಕೇಳಿ ಮಖ್ದೂಂ ಖ್ವಾಜಾ ಜಹಾಂರವರನ್ನು ಕೊಲೆ ಮಾಡುವ ಮೂಲಕ ಅತ್ಯಂತ ಬುದ್ಧಿಹೀನನೂ, ಅಪ್ರಿಯನೂ ಆದ. ತಾನು ಮಾಡಿದ ತಪ್ಪಿನ ಅರಿವಾಗಿ ಇದೇ ಕಾರಣದಿಂದ ವ್ಯಥಿತನಾಗಿ ಇಹಲೋಕವನ್ನು ಬಾದಶಾಹ ತ್ಯಜಿಸಿದ. ಬಾದಶಾಹ ತೀರಿಕೊಂಡದ್ದು ಹಿಜರಿ ವರ್ಷ ಸನ್ ೮೮೭ರಲ್ಲಿ.

**ಸುಲ್ತಾನ ಮಹಮೂದ್ ಷಾ ಬಹಮನಿಯ ಸಿಂಹಾಸನ ಸ್ವೀಕಾರ ಮತ್ತು ಆಳ್ವಿಕೆ**

ಸುಲ್ತಾನ್ ಮುಹಮ್ಮದ್ ಷಾ ಬಹಮನಿಯ ನಿಧನಾನಂತರ ಸುಲ್ತಾನ್ ಮಹಮೂದ್ ಷಾ ಬಹಮನಿ ರಾಜ್ಯದ ಆಳ್ವಿಕೆ ನಡೆಸಿದ. ಅವನು ಪ್ರಜೆಗಳನ್ನು ನ್ಯಾಯ ಮತ್ತು ದಯೆಯಿಂದ ಪರಿಪಾಲಿಸಿ ಆಳ್ವಿಕೆಯನ್ನು ನಡೆಸಿದ. ಈ ಬಾದಶಾಹ ತನ್ನ ಸಹಜಗುಣದಿಂದಲೇ ಪ್ರಾಮಾಣಿಕನಾಗಿದ್ದ. ಅವನ ಆಳ್ವಿಕೆಯಲ್ಲಿ ರಾಜ್ಯದಾದ್ಯಂತ ಸುಖ ಸಮೃದ್ಧಿ ಇತ್ತು. ಅವನ ಆಳ್ವಿಕೆಯ ಕಾಲದಲ್ಲಿ ವೈರಿಗಳ ತಾಕತ್ತು ಉಡುಗಿ ಇಸ್ಲಾಮಿನ ಆಳ್ವಿಕೆಯ ಶಕ್ತಿ ವೃದ್ಧಿಸಿತ್ತು. ವೈರಿಗಳ ವಿರುದ್ಧ ಮಾಡಿದ ಪ್ರತೀ ಯುದ್ಧಗಳಲ್ಲೂ ವಿಜಯಿಯಾಗುತ್ತಿದ್ದ. ಇವನ ಆಳ್ವಿಕೆಯಲ್ಲಿ ರಾಜ್ಯ ಅತ್ಯಂತ ಹೆಚ್ಚು ವಿಸ್ತಾರಗೊಂಡಿತ್ತು. ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಸೈನ್ಯವೂ ಅವನ ಬಳಿಯಿತ್ತು. ರಾಜ್ಯದ ಖಜಾನೆಯೂ ಕೂಡ ತುಂಬಿತ್ತು. ಪ್ರಜೆಗಳೆಲ್ಲರಿಗೂ ಉದ್ಯೋಗದ ಕೊರತೆಯಿರಲಿಲ್ಲ. ತನ್ನ ದೊಡ್ಡ ಅಧಿಕಾರಿಗಳಿಗೆ ಬೇಕಾದ ಮನೆ ನಿವೇಶನಗಳನ್ನು ನೀಡಿದ್ದ. ದೊಡ್ಡ ಸರದಾರರಿಗೆ ಅವರ ಘನತೆಗೆ ತಕ್ಕ ಮನೆಗಳನ್ನು ಕಟ್ಟಿಸಿದ್ದ. ಇಂತಹ ನಿವೇಶನಗಳಲ್ಲಿ ಹೂದೋಟಗಳನ್ನು ಮಾಡಿಸಿಕೊಟ್ಟಿದ್ದ. ಇವನು ಕಟ್ಟಿಸಿದ ಬೀದರ್ ನಗರ ಉದ್ದಗಲಗಳಲ್ಲಿ ೬೫ ಚದರ ಮೈಲಿ ವ್ಯಾಪಿಸಿತ್ತು. ನಗರವನ್ನು ಸುಂದರವಾಗಿ ಸಿಂಗರಿಸುವ ಒಳ್ಳೆಯ ಆಸಕ್ತಿಯೂ

ಇತ್ತು. ಇದರ ಕುರುಹು ಈಗಲೂ ನಾವು ಕಾಣಬಹುದಾಗಿದೆ. ಅವನ ಬಳಿ ಟರ್ಕಿ, ಹಬ್‌ಶಿ, ಲಾಹೋರಿ ಕೆಲಸಗಾರರು ಆಸ್ಥಾನದಲ್ಲಿ ಇದ್ದರು.

ಅವನು ಕೆಲವು ವಿದೇಶೀ ಕೆಲಸಗಾರರಿಗೆ ಉನ್ನತ ಅಧಿಕಾರವನ್ನು ಕೂಡ ಕೊಟ್ಟಿದ್ದ. ರಾಜ್ಯದ ಕಂದಾಯ, ತೆರಿಗೆ ವಸೂಲಿ ಮಾಡುವುದಕ್ಕೆ (ಆಮಿಲ್) ಕೆಲವರನ್ನು ನಿಯುಕ್ತಗೊಳಿಸಿದ್ದ. ಕೆಲವರು ದರ್ಬಾರಿನಲ್ಲಿ ಕೆಲಸ ಕಾರ್ಯಗಳನ್ನು ಮಾಡುವುದಕ್ಕೆ ನೇಮಿಸಿದ್ದ. ಇವರು ಬಾದಶಾಹನ ಆಸುಪಾಸಿನಲ್ಲಿ ಹೆಚ್ಚಾಗಿ ಇರುತ್ತಿದ್ದರು.

■

*

## ಅಧ್ಯಾಯ–೩

# ಯೂಸುಫ್ ಆದಿಲ್ ಷಾ ಬಿನ್ ಮಹಮೂದ್ ಬೇಗ್ ಸಾವುಜಿ ಆಳ್ವಿಕೆಯ ವಿವರಗಳು

ನಾನು ರಫಿಯುದ್ದೀನ್ ಇಬ್ರಾಹಿಂ ಶೀರಾಜಿ ಬಿನ್ ನೂರುದ್ದೀನ್ ತೌಫೀಕ್, ಹಿಜರಿ ವರ್ಷ ಸನ್ ೯೮೬ರಲ್ಲಿ ವ್ಯಾಪಾರದ ನಿಮಿತ್ತ ದಕ್ಷಿಣ ಭಾರತದ ಹೆಸರುವಾಸಿಯಾದ ಗ್ರಾಮ ಸಗರಕ್ಕೆ ಭೇಟಿ ನೀಡಿದ್ದೆ. ವ್ಯಾಪಾರದ ಉದ್ದೇಶದಿಂದ ಬಟ್ಟೆಗಳನ್ನು ಖರೀದಿಸುವ ಸಲುವಾಗಿ ಸಗರದಲ್ಲಿ ತಂಗಬೇಕಾಯಿತು. ಇಲ್ಲಿಂದ ಒಂದು ಮೈಲಿ ದೂರದಲ್ಲಿ ಕೋಕಿ(ಗೋಗಿ) ಎಂಬ ಹೆಸರಿನ ಹಳ್ಳಿಯಿದೆ. ಅಲ್ಲಿ ಯೂಸೂಫ್ ಆದಿಲ್ ಖಾನ್ ಮತ್ತು ಅವರ ಮಕ್ಕಳ ಗೋರಿಯಿದೆ ಎಂಬ ವರ್ತಮಾನ ಅಲ್ಲಿ ನನಗೆ ತಿಳಿಯಿತು. ಅಲ್ಲಿ ಹತ್ತು ಮಾರು ದೂರದಲ್ಲಿ ಒಂದು ಆಶೂರ ಖಾನಾ ಇದೆ. ಇಲ್ಲಿ ಹೆಚ್ಚು ಕಮ್ಮಿ ನೂರು ಹಾಫಿಜ್ (ಕುರಾನ್ ಬಾಯಿಪಾಠ ಓದಬಲ್ಲ ಧಾರ್ಮಿಕ ಪಂಡಿತರು) ತಂಗಿದ್ದರು ಮತ್ತು ಹಗಲೂ ರಾತ್ರಿ ಕುರಾನ್ ಪಠಣ ಮಾಡುತ್ತಿದ್ದರು. ಈ ಆಶೂರ ಖಾನಾದಲ್ಲಿ ಅವರಿಗೆ ಎರಡು ಹೊತ್ತಿನ ಊಟ ನೀಡಲಾಗುತ್ತಿತ್ತು. ದಕ್ಷಿಣದವರು(ದಖ್ಖಣಿ ಭಾಷೆಯುಲ್ಲಿ) ಇದನ್ನು ಲಂಗರ್(ಸಮುದಾಯದ ಅಡುಗೆ ಕೋಣೆ) ಎಂದು ಕರೆಯುತ್ತಿದ್ದರು. ಅವರಿಗೆ ಪ್ರತೀ ತಿಂಗಳು ವಜೀಫಾ(ಭತ್ಯೆ) ಧನ ಕೊಡಲಾಗುತ್ತದೆ. ಅಲ್ಲಿ ಹಾಫಿಜ್ ಶಂಶುದ್ದೀನ್ ಖಜ್ರಿ ಎಂಬ ಹೆಸರಿನ ೯೦ರ ವಯೋವೃದ್ಧರೂ ಇದ್ದರು. ಇವರು ವಿಶ್ವದ ಬಹಳಷ್ಟು ದೇಶಗಳನ್ನು ಸುತ್ತಾಡಿ ಬಂದಿದ್ದರು. ಇವರು ಈ ಹಾಫಿಜ್‌ಗಳ ನಡುವೆ ವಾಸಮಾಡುತ್ತಿದ್ದರು. ಅವರು ತಮ್ಮ ವಾಸಸ್ಥಾನವನ್ನು ವಲೀ ನಿಯಮತ್‌ರ ಗೋರಿಯ

ಬಳಿಯಲ್ಲಿ ಮಾಡಿಕೊಂಡಿದ್ದರು. ಸಮಯಸಿಕ್ಕಾಗಲೆಲ್ಲ ಲಂಗರ್ ಊಟದ ಮೇಜುವಾನಿಯ ಮುತವಲ್ಲಿಯರನ್ನು ಭೇಟಿಯಾಗುತ್ತಿದ್ದರು. ಇವರ ಹೆಸರು ಸಯ್ಯದ್ ಘಾಝಿಲ್ ಎಂದಾಗಿದ್ದು ಸೂಫಿ ಸಂತರ ದರ್ಜೆಗೆ ಸೇರಿದವರೆಂದು ಹೇಳಲಾಗುತ್ತಿತ್ತು. ಅವರನ್ನು ಭೇಟಿಯಾಗಿ ಮಾತಾಡಿಸುವುದರಿಂದ ನನಗೆ ಬಹಳ ಲಾಭವಾಗುತ್ತಿತ್ತು. ಈ ಹಾಫಿಜ್ ಶಂಶುದ್ದೀನ್ ತಮಗೆ ತಿಳಿದಿರುವ ಹಲವು ಚಾರಿತ್ರಿಕ ಸಂಗತಿಗಳನ್ನು ನನಗೆ ತಿಳಿಸುತ್ತಿದ್ದರು. ಹಸನ್ ಬೇಗ್‌ನ ಆಳ್ವಿಕೆಯ ಕಾಲದಲ್ಲಿ ತನಗಾಗಿ ಒಂದು ಸಮಾಧಿಯನ್ನು ನಿರ್ಮಿಸಿದ್ದನೆಂಬ ಸಂಗತಿಯನ್ನು ಅವರು ನನಗೆ ತಿಳಿಸಿದ್ದರು. ಇದರಿಂದಾಗಿ ಅವನ ರಾಜ್ಯದಲ್ಲಿ ದರ್ಬಾರಿನ ಸದಸ್ಯರ ಮಧ್ಯೆ ಖಾರವಾದ ವಾಗ್ವಾದ ನಡೆದಿತ್ತು. ಎಲ್ಲಿಯವರೆಗೆ ಇದರ ಪರಿಣಾಮವಾಯಿತೆಂದರೆ ಮುಂದುವರಿದು ಈ ಕಾರಣಕ್ಕೆ ಒಂದು ಯುದ್ಧ ಕೂಡ ನಡೆಯಿತು.

ಇದರಿಂದ ಹಲವಾರು ಮಂದಿ ಪ್ರಜೆಗಳಿಗೆ ಅನೇಕ ರೀತಿಯಲ್ಲಿ ಆರ್ಥಿಕ ನಷ್ಟಗಳುಂಟಾದವು. ಜನ ಚೆಲ್ಲಾಪಿಲ್ಲಿಯಾಗಿ ಓಡತೊಡಗಿದರು. ನಂತರ ಹಸನ್ ಬೇಗ್ ಒಂದು ಶಿಸ್ತು ಮತ್ತು ಘನತೆ ಗಾಂಭೀರ್ಯವೆತ್ತ ಸೈನ್ಯವನ್ನು ಹಿಡಿದುಕೊಂಡು ಬಂದು ಅಜರ್‌ಬೈಜಾನ್ ಕಡೆ ಪ್ರಯಾಣ ಬೆಳೆಸಿದ. ಅವನು ತಬ್ರೇಜಿಗೆ ತಲಪಿದಾಗ ಜಹಾಂ ಷಾ ಬಿನ್ ಘರಾ ಯೂಸುಫ್‌ನನ್ನು ಜೀವಂತವಾಗಿ ಕಾಣಲು ಸಾಧ್ಯವಾಗಲಿಲ್ಲ. ಆಜರ್ ಬೈಜಾನ್, ಖೊರಸಾನ್, ಇರಾಕ್, ಖಾರಿಶ್, ಕಿರ್ಮಾನ್ ವಶಪಡಿಸಿಕೊಂಡ. ತನ್ನ ಮಂತ್ರಿಗಳನ್ನು ಅಲ್ಲಿಗೆ ಕಳುಹಿಸಿದ. ಇಲ್ಲಿಂದ ತನ್ನ ಸಹೋದರನ ಪುತ್ರ ಅಹ್ಮದ್ ಬೇಗ್‌ನನ್ನು ಸಾವಾ ದೇಶಕ್ಕೆ ಮತ್ತು ದೇಶದ ಆಸುಪಾಸಿನ ಇಲಾಖೆ ಕಡೆ ಕಳುಹಿಸಿದ. ಅಹ್ಮದ್ ಬೇಗ್ ಸಂಪೂರ್ಣ ಸೈನಿಕ ತಯಾರಿಯೊಂದಿಗೆ ಆದೇಶಗಳತ್ತ ತೆರಳಿದ. ಅಲ್ಲಿ ಒಳ್ಳೆಯ ರೀತಿಯಲ್ಲಿ ಕಾರ್ಯಸಿದ್ಧಿ ಗಳಿಸಿದ. ಸಾವಾದ ದೊಡ್ಡ ತಲೆಮಾರಿನ ಕುಲೀನ ಕುಟುಂಬದ ಹೆಣ್ಣನ್ನು ಮದುವೆಯಾದ. ಇದರಿಂದ ಅವನಿಗೆ ಮಕ್ಕಳೂ ಹುಟ್ಟಿದವು. ಅಹ್ಮದ್ ಬೇಗನ ನಿಧನಾನಂತರ ಮಹಮೂದ್ ಬೇಗ್ ತಂದೆಯ ಸಿಂಹಾಸವನ್ನೇರಿದ. ತನ್ನ ತಂದೆಯು ಹಾಕಿಕೊಟ್ಟ ಹಾದಿಯಲ್ಲೇ ತನ್ನ ಆಳ್ವಿಕೆಯನ್ನು ಮುಂದುವರಿಸಿದ. ಹತ್ತಿರ ಹತ್ತಿರ ೨೦ ವರ್ಷಗಳ ಕಾಲ ತನ್ನ ಆಳ್ವಿಕೆಯನ್ನು ಮುಂದುವರಿಸಿದ. ಹಸನ್ ಬೇಗ್ ನಿಧನದ ನಂತರ ಅವನ ಹಿರಿಯ ಮಗ ಸುಲ್ತಾನ್ ಖಲೀಲ್ ಖಾನ್ ಸಿಂಹಾಸನವನ್ನೇರಿದ. ಅವನ ಮತ್ತು ಅವನ ತಮ್ಮ ಸುಲ್ತಾನ್ ಯಾಕುಬ್ ಮಿರ್ಜಾ ಮಧ್ಯೆ ರಾಜ್ಯಾಡಳಿತ ಸಂಬಂಧದಲ್ಲಿ ವಾಗ್ವಾದವಾಗಿ ಯುದ್ಧ ನಡೆಯಿತು. ಈ ಯುದ್ಧದಲ್ಲಿ ಸುಲ್ತಾನ್ ಖಲೀಲ್ ಅಸುನೀಗಿದ. ಹೀಗೆ ಸುಲ್ತಾನ್ ಯಾಕೂಬ್ ಮಿರ್ಜಾನಿಗೆ ರಾಜ್ಯದ ಸಿಂಹಾಸನ ಪ್ರಾಪ್ತಿಯಾಯಿತು. ಇವನು ಬಹಳ ಕಾಲ ಅನಾರೋಗ್ಯದಿಂದ ಹಾಸಿಗೆ ಹಿಡಿದಿದ್ದ. ಇವನ ಉಳಿದ ಆಯುಷ್ಯ ಕೂಡ

ಹೀಗೇ ಕಳೆಯಿತು. ಅವನ ದರ್ಬಾರಿನವರು ಅವನ ಮಗ ಸುಲ್ತಾನನನ್ನು ಸಿಂಹಾಸನದಲ್ಲಿ ಕೂರಿಸಿದರು. ಈ ಕಾಲಘಟ್ಟದಲ್ಲಿ ಸುಲ್ತಾನ ಮತ್ತು ದರ್ಬಾರಿನ ಅಧಿಕಾರಿಗಳ ಮಧ್ಯೆ ವಿವಾದವುಂಟಾಗಿ ಮತ್ತೆ ಯುದ್ಧ ನಡೆಯಿತು. ಈ ಯುದ್ಧದಲ್ಲಿ ಸುಲ್ತಾನ ತೀರಿಕೊಂಡ. ಅವನ ಮಕ್ಕಳು, ಮೊಮ್ಮಕ್ಕಳಲ್ಲಿ ಪಟ್ಟಕ್ಕಾಗಿ ಜಗಳವುಂಟಾದುದನ್ನು ಕಂಡು ಯೂಸುಫ್ ಬೇಗ್, ಅಸ್ಫಹಾನ್‌ಗೆ ಕಲಿಯಲು ಹೋದ ಬಾಲಕ ಮಹಮೂದ್ ಬೇಗನನ್ನು ಹಿಂದುಸ್ಥಾನಕ್ಕೆ ವಾಪಾಸು ಕರೆಯಲು ಏರ್ಪಾಡು ಮಾಡಿದ. ಇಲ್ಲಿನ ತಮ್ಮ ಜನರ ಸ್ವಾಮಿದ್ರೋಹವನ್ನು ಕಂಡು ಮಹಮೂದ್ ಬೇಗ್ ಹಿಂದುಸ್ಥಾನಕ್ಕೆ ಹಿಂತಿರುಗಲು ತೀರ್ಮಾನಿಸಿದ್ದ. ಈ ಕಾಲದಲ್ಲಿ ಬಾದಶಾಹರ ಪ್ರಾಮಾಣಿಕ ಸಲಹೆಗಾರ ಮತ್ತು ವಿದ್ವಾಂಸ ಹಾಫಿಜ್ ಶಂಶುದ್ದೀನ್ ಖಿಜರಿಯವರನ್ನು ಭೇಟಿಯಾದ.

ಯೂಸುಫ್ ಬೇಗ್ ಆ ಸಮಯದಲ್ಲಿ ತನ್ನ ಅತ್ಯಂತ ಜರೂರಿನ ಕೆಲಸದ ಕಾರಣ ನಿಮಿತ್ತ ಶಿರಾಜ್‌ನಲ್ಲಿ ತಂಗಿದ್ದ. ಅಲ್ಲಿಗೆ ಅವನು ತಲಪಿದಾಗ ಬಹಳ ನೊಂದುಕೊಂಡು ಇಳಿದುಹೋಗಿದ್ದ. ಹಲವುದಿನಗಳ ಕಾಲ ಒಂದು ಮಸೀದಿಯಲ್ಲಿ ಈ ಕಾರಣಕ್ಕಾಗಿ ತಂಗಿ ಆರಾಮ ಮಾಡುತ್ತಿದ್ದ. ಈ ಮಧ್ಯೆ, ಒಂದು ದಿನ ಓರ್ವ ಹಿರಿಯ ವ್ಯಕ್ತಿ ಅವನ ಬಳಿಗೆ ಬಂದಿದ್ದರು. ಅವರ ಕೈಯಲ್ಲಿದ್ದ ಕೆಲವು ಬಿಸಿರೊಟ್ಟಿಗಳನ್ನು ತಿನ್ನಲು ನೀಡಿದರು. "ನೀವು ದಕ್ಷಿಣ ಭಾರತಕ್ಕೆ ಆದಷ್ಟು ಬೇಗ ತಲಪಬೇಕು. ನಿಮ್ಮ ಪರಿಶ್ರಮಕ್ಕೆ ನಿತ್ಯದ ಆದಾಯ ಖಂಡಿತವಾಗಿ ದೊರೆಯುತ್ತದೆ" ಎಂದರು. ಈ ಕನಸಿನಿಂದ ಎಚ್ಚತ್ತಾಗ ತುಂಬ ಸಂತಸವಾಯಿತು. ಅವನಿಗೆ ಅದ್ವಿತೀಯವೆಂದೆನಿಸುವ ಆತ್ಮಸಂತೋಷ ಲಭಿಸಿತು. ಈ ರೀತಿಯ ವಿಚಾರಗಳನ್ನು ಕೇಳಿದ ಬಳಿಕ, ಅವನು ಜೆರೂನ್ ಬಂದರಿನತ್ತ ನಡೆದ. ಬಂದರಿಗೆ ತಲಪಿದಾಗ ಯಾರು ಕೂಡ ಪರಿಚಿತರೂ ಇರಲಿಲ್ಲ, ಹಾದಿಯೂ ತಿಳಿದಿರಲಿಲ್ಲ. ಆದರೆ ಧುತ್ತನೆಯೆಂಬಂತೆ ಖ್ವಾಜಾ ಜೈನುಲ್ ಆಬಿದೀನ್ ಸಮ್ನಾನಿ ವ್ಯಾಪಾರಿಯಾಗಿ ಬಾದಶಾಹ ಮಹಮೂದ್ ಬಹಮನಿಯ ಕಡೆಯಿಂದ ದಕ್ಷಿಣಕ್ಕೆ ಪ್ರಯಾಣ ಬೆಳೆಸಿದ್ದರು. ಹಾಗೆಯೇ ಸಾಕಷ್ಟು ಸರಕು ಸಾಮಾಗ್ರಿಗಳನ್ನು ಖರೀದಿಸಿದ್ದರು. ಈ ಮಾಲನ್ನು ಹಡಗಿನಲ್ಲಿ ಸಾಗಿಸಿ ದಕ್ಷಿಣದ ಕಡೆಗ ಹೋಗುವ ಆಲೋಚನೆಯಲ್ಲಿದ್ದರು. ಕೆಲವು ತುರ್ಕಿ ಗುಲಾಮ ಕೆಲಸಗಾರರನ್ನು ಸಮುದ್ರ ತೀರದಲ್ಲೇ ಇವರು ಬಿಟ್ಟುಬಂದಿದ್ದರು. ಆ ಅಜಾನುಬಾಹು ತುರ್ಕಿ ವ್ಯಕ್ತಿ ಯೂಸುಫ್ ಬೇಗರನ್ನು ಕಂಡಾಗ ಅವರ ಬಗ್ಗೆ ಕೇಳಿದ. ಇವರು ಒಂಟಿಯಾಗಿ ಮತ್ತು ಚಿಂತಾಕ್ರಾಂತರಾಗಿರುವುದನ್ನು ಕಂಡು ತನ್ನ ಮನೆಗೆ ಅತಿಥಿಯಾಗಿ ಕರೆದುಕೊಂಡು ಹೋದ. ಪರಸ್ಪರ ವಿಚಾರಗಳನ್ನು ಹಂಚಿಕೊಂಡ ಬಳಿಕ ಒಬ್ಬರನ್ನೊಬ್ಬರು ಅಗಲಿರಲಾರದಂತಹ ಗಾಢ ಸ್ನೇಹಿತರಾದರು. 'ನಿಮ್ಮನ್ನು ಬಾದಶಾಹರ ಮುಂದೆ ಹಾಜರುಪಡಿಸುತ್ತೇನೆ. ನಿಮ್ಮ ನಸೀಬಿನಲ್ಲಿ ಏನಿದೆಯೋ ಎಂಬುದನ್ನು ನೋಡೋಣ'

ಎಂದು ತುರ್ಕಿ ಗುಲಾಮ ಹೇಳಿದ. ಆಸ್ಥಾನದಲ್ಲಿದ್ದ ಖ್ವಾಜಾ ಜೈನುಲ್ ಆಬಿದೀನ್‌ರವರು ಇವರನ್ನು ನೋಡಿದಾಗ ಮತ್ತು ಇವರ ಪೂರ್ವಾಪರ ವಿಚಾರಗಳನ್ನೆಲ್ಲ ತಿಳಿದುಕೊಂಡು, ತನ್ನ ಬಳಿ ಇರಿಸಿಕೊಂಡರು.

ಈ ರೀತಿಯಲ್ಲಿ ಯೂಸುಫ್ ಬೇಗ್‌ನ ಪಾಲನೆಯ ಜವಾಬ್ದಾರಿಯನ್ನು ಖ್ವಾಜಾರವರು ವಹಿಸಿಕೊಂಡರು. ಸಮಯ ಸಿಕ್ಕಾಗ ಅವನು ಆಗಾಗ ಕಟ್ಟುಮಸ್ತಾದ ಗುಲಾಮರೊಂದಿಗೆ ವ್ಯಾಯಾಮ ಕುಸ್ತಿಗಳಲ್ಲಿ ಭಾಗವಹಿಸುತ್ತಿದ್ದ. ಹೀಗಿರುತ್ತಾ ಒಂದು ದಿನ ಸುಲ್ತಾನ್ ಮಹಮೂದ್ ಬಹಮನಿಯ ಗಮನಕ್ಕೆ ಬರುವ ಸಂದರ್ಭ ಮೂಡಿಬಂತು. ಖ್ವಾಜಾರವರ ವಶದಲ್ಲಿದ್ದ ಸಾಮಾನು ಸರಂಜಾಮುಗಳು ಯುದ್ಧ ಸಾಮಾಗ್ರಿಗಳನ್ನು ಬಾದಶಾಹರಿಗೆ ಒಪ್ಪಿಸಿದರು. ಸುಲ್ತಾನ ಅವರ ಬಳಿಯಿದ್ದ ಗುಲಾಮರನ್ನು ನೌಕರರನ್ನಾಗಿ ಸ್ವೀಕರಿಸಿದ. ಕೆಲವರನ್ನು ತನ್ನ ಆಸ್ಥಾನದ ನೌಕರರನ್ನಾಗಿ, ಕೆಲವರನ್ನು ಅಂಗ ರಕ್ಷಕರನ್ನಾಗಿ, ಜಮಾದಾರರನ್ನಾಗಿ, ಕೆಲವರನ್ನು ಅರಮನೆಯ ಸಹಾಯಕರನ್ನಾಗಿಯೂ, ತೋಟದಲ್ಲಿ ಗಿಡಗಳಿಗೆ ನೀರುಹಾಕಿ ಪೋಷಣೆಮಾಡುವ ಕೆಲಸದಲ್ಲಿ, ಕೆಲವರನ್ನು ಅರಮನೆಯ ಅಡುಗೆಯ ಕೆಲಸಕ್ಕೆ ನೇಮಿಸಿದ. ಯೂಸುಫ್ ಬೇಗನಿಗೆ ಅಡುಗೆ ಕೆಲಸಗಾರರ ನಾಯಕನನ್ನಾಗಿ ನೇಮಿಸಿದ. ಹೀಗೂ ಹೇಳಲಾಗುತ್ತದೆ, ಏನೆಂದರೆ, ಅವನಿಗೆ ಅಡುಗೆ ಮನೆಯ ಕೆಲಸಕ್ಕೆ ಸರಿಯಾಗಿ ಹೊಂದಿಕೊಳ್ಳಲಾಗಲಿಲ್ಲ. ಇದರಿಂದಾಗಿ ಅವನನ್ನು ದಕ್ಷಿಣಕ್ಕೆ ಕಳುಹಿಸುವ ಆಲೋಚನೆಯನ್ನು ಬಾದಶಾಹ ಮಾಡಿದರು. ಮುಂದೆ ಕುಸ್ತಿಯಲ್ಲಿರುವ ಅವನ ಪಟುತ್ವಕ್ಕೆ ಸರಿಯಾದ ತರಬೇತಿಯನ್ನು ಪಡೆಯತೊಡಗಿದ. ಕುಸ್ತಿಯ ಅಖಾಡದಲ್ಲಿ ಅಲ್ಲಿನ ಪಟುಗಳನ್ನು ಸೋಲಿಸಿ ಜಯಗಳಿಸತೊಡಗಿದ. ಭಾರತಕ್ಕೆ ಆಗಮಿಸಿದ್ದ ಖೊರಸಾನಿನ ಕುಸ್ತಿ ಪಟುಗಳು ಅವನಿಗೆ ತರಬೇತಿ ನೀಡುವಂತಹ ಅಪೂರ್ವ ಅವಕಾಶವನ್ನು ಪಡೆದ. ಈ ಪ್ರಸಿದ್ಧಿಯ ಜೊತೆಯಲ್ಲಿ ಅವನಿಗೆ ಸಾಕಷ್ಟು ಶಿಷ್ಯಂದಿರು ಬಂದು ಸೇರ ತೊಡಗಿದರು. ಶಿಷ್ಯಂದಿರಿಗೆ ತರಬೇತಿ ಮತ್ತು ಚಿಕ್ಕಪುಟ್ಟ ಕುಸ್ತಿಯ ಅಖಾಡಾವನ್ನು ಏರ್ಪಡಿಸತೊಡಗಿದ. ನಗರದ ಕುಸ್ತಿ ಕಲೆಯ ಪ್ರಿಯರು ಕುಸ್ತಿಯ ಏರ್ಪಾಡು ಮಾಡಿ ಇವನ ವಿರುದ್ಧ ಸೆಣಸಾಡಲು ಪಣತೊಡುತ್ತಿದ್ದರು. ಹೀಗೆ ಕುಸ್ತಿಯಲ್ಲಿ ಒಂದು ಪ್ರಮುಖ ಸ್ಥಾನ ಪಡೆದು ಜನಪ್ರಿಯನಾದ. ತನ್ನ ಕುಸ್ತಿಪಟುತ್ವದಲ್ಲಿ ಬಹದ್ದೂರನೆನಿಸಿ ಅತ್ಯುನ್ನತ ಪದವಿಯನ್ನು ಪಡೆದ.

**ಯೂಸುಫ್ ಬೇಗನ ಲಾಲನೆ ಪಾಲನೆ ಮತ್ತು ಮಹತ್ವದ ಸ್ಥಾನಕ್ಕೇರಿದ್ದಕ್ಕೆ ಸಂಬಂಧಿಸಿದ ವಿವರಗಳು**

ಆ ಕಾಲದಲ್ಲಿ ದೆಹಲಿಯ ಓರ್ವ ಅತ್ಯಂತ ಬಲಶಾಲಿಯೆನಿಸಿದ ಕುಸ್ತಿಯ ಹೆಸರಾಂತ ಪಹಿಲ್ವಾನ ಅಲ್ಲಿಗೆ ಆಗಮಿಸಿದ್ದ. ಈತ ಭಾರತದ ಅನೇಕ ಕಡೆಗಳಲ್ಲಿ ನಡೆದ ಕುಸ್ತಿಯ ಅಖಾಡದಲ್ಲಿ ತನ್ನ ಪಟುತ್ವ ಪ್ರದರ್ಶಿಸಿ ಅನೇಕ ಪ್ರಖ್ಯಾತ ಪಹಿಲ್ವಾನರನ್ನು

ಸೋಲಿಸಿದ್ದ. ಅವನಿಗೆ ಪ್ರೋತ್ಸಾಹ ನೀಡುವ ಬಹುಸಂಖ್ಯೆಯ ಶಿಷ್ಯಂದಿರು ಅವನ ಹಿಂದೆ ಇರುತ್ತಿದ್ದರು. ಅವನು ತನ್ನ ಶಿಷ್ಯರ ತಂಡದೊಂದಿಗೆ ಗುಜರಾತಿನ ಕಡೆಯಲ್ಲಿ ಸಂಚರಿಸಿದ್ದ. ಹೋದಲ್ಲೆಲ್ಲ ಅವನನ್ನು ಸೋಲಿಸುವವರು ಯಾರೂ ಇರಲಿಲ್ಲ.

ತನ್ನ ವಿರೋಧಿಗಳನ್ನು ಪ್ರತಿಯೊಂದು ಸ್ಥಳಗಳಲ್ಲೂ ಸೋಲಿಸಿ ಮಣ್ಣುಮುಕ್ಕಿಸುತ್ತಿದ್ದ. ಹೀಗೆ ಅವನ ಪ್ರಸಿದ್ಧಿ ಎಲ್ಲೆಡೆ ಹರಡಿತ್ತು. ಅವನು ದಕ್ಷಿಣದ ಕಡೆಗೆ ಹೋಗುವುದರ ಬಗ್ಗೆ ಯೋಚಿಸತೊಡಗಿ. ಅವನು ದಕ್ಷಿಣಕ್ಕೆ ಬರುವ ಸುದ್ದಿ ವ್ಯಾಪಕವಾಗಿ ಹರಡಿ ಎಲ್ಲರ ಬಾಯಲ್ಲೂ ಅದೇ ಮಾತಾಗಿಬಿಟ್ಟಿತು. ಅವನು ಬೀದರಕ್ಕೆ ಆಗಮಿಸುವ ವರ್ತಮಾನ ಸುಲ್ತಾನ್ ಮಹಮೂದನ ದರ್ಬಾರಿಗೆ ತಲಪಿದಾಗ ಶುಕ್ರವಾರದ ದಿನ ಎಲ್ಲ ಪಹಿಲ್ವಾನರು ಸೇರಬೇಕೆಂದೂ ತಮ್ಮ ಕುಸ್ತಿ ಪಟುತ್ವದ ಪ್ರದರ್ಶನ ನೀಡಬೇಕೆಂದು ಡಂಗುರ ಸಾರಿದರು. ರಾಜಧಾನಿಯವರಲ್ಲದೆ ರಾಜ್ಯದ ಇತರ ಕಡೆಯ ಪಹಿಲ್ವಾನರು ಕೂಡ ಈ ಶಕ್ತಿ ಪ್ರದರ್ಶನಕ್ಕೆ ಆಗಮಿಸತೊಡಗಿದರು. ಪ್ರತೀ ಶುಕ್ರವಾರದ ದಿನ ಈ ಪ್ರದರ್ಶನದ ಏರ್ಪಾಡು ನಡೆಯಿತು. ಈ ಪ್ರದರ್ಶನದಲ್ಲಿ ತನ್ನ ರಾಜ್ಯದ ಪಹಿಲ್ವಾನರ ಶಕ್ತಿ ಪರೀಕ್ಷೆಯಲ್ಲಿ ಸುಲ್ತಾನರು ಸ್ವತಃ ತನ್ನ ಆಸ್ಥಾನದ ಪ್ರಮುಖರ ಜೊತೆ ಆಗಮಿಸಿ ಆಯ್ಕೆಯನ್ನು ವೀಕ್ಷಿಸುತ್ತಿದ್ದ. ದೆಹಲಿಯ ಪಹಿಲ್ವಾನನ ಜೊತೆಗೆ ರಾಜ್ಯದ ಪಹಿಲ್ವಾನರು ಶಕ್ತಿಪ್ರದರ್ಶನದಲ್ಲಿ ತೊಡಗಿದರು. ಒಂದು ದಿನ ದೆಹಲಿಯ ಪಹಿಲ್ವಾನ ರಾಜ್ಯದ ಕುಸ್ತಿಪಟುಗಳ ಕಪಾಳಮೋಕ್ಷ ಮಾಡಿ ಅಖಾಡಾದಲ್ಲಿ ಕೆಟ್ಟದಾಗಿ ಬಯ್ಯತೊಡಗಿ ತನ್ನ ಅಹಂಕಾರವನ್ನು ಪ್ರದರ್ಶಿಸಿದ. ಸುಲ್ತಾನನಿಗೆ ಇದು ಇಷ್ಟವಾಗಲಿಲ್ಲ. ಯೂಸುಫ್ ಬೇಗ್ ತನ್ನ ಶಿಷ್ಯರೊಂದಿಗೆ ಆಗಾಗ ಅಖಾಡಾದ ಸನಿಹದಲ್ಲಿ ಸಿಪಾಯಿಗಳ ಸಮವಸ್ತ್ರ ಧರಿಸಿಕೊಂಡು ಪ್ರೇಕ್ಷಕರೊಂದಿಗೆ ಕೂತು ನೋಡುತ್ತಿದ್ದ. ದೆಹಲಿಯ ಪಹಿಲ್ವಾನ ಅಖಾಡದಲ್ಲಿ ಎದುರಾಳಿಗಳಿಗೆ ಬಯ್ಯುತ್ತ ಇತರ ಕುಸ್ತಿ ಪಟುಗಳಿಗೆ ಅವಮಾನ ಮಾಡುತ್ತಿರುವುದು, ಅಹಂಕಾರ ಪ್ರದರ್ಶಿಸುತ್ತಿರುವುದು ಮತ್ತು ಇದರಿಂದ ಸುಲ್ತಾನ ಬೇಸತ್ತುಕೊಂಡದ್ದನ್ನು ಗಮನಿಸುತ್ತಿದ್ದ. ಒಂದು ದಿನ ಸಾಲಾರ(ಮುಖ್ಯ ಸರದಾರ)ನೊಂದಿಗೆ ಯೂಸುಫ್ ಬೇಗ್ ಖಾನ್ 'ಸುಲ್ತಾನರ ಮುಂದೆ ಈ ಪಹಿಲ್ವಾನನ ಅಹಂಕಾರ ಪ್ರದರ್ಶನ ಮತ್ತು ದುರ್ವರ್ತನೆ ತೋರುತ್ತಿರುವುದು ನನಗೆ ಸಹಿಸಲಾಗುತ್ತಿಲ್ಲ, ನನಗೆ ಅವಕಾಶ ಸಿಕ್ಕಲ್ಲಿ ಅವನನ್ನು ಎದುರಿಸುವುದಕ್ಕೆ ಕುಸ್ತಿಯ ಅಖಾಡಾ ಪ್ರವೇಶಿಸಲು ತಯಾರಾಗಿದ್ದೇನೆ' ಎಂದು ಹೇಳಿದ. ಈ ಮಾತನ್ನು ಸರದಾರ ಸುಲ್ತಾನನಿಗೆ ಮುಟ್ಟಿಸಿದ. ಇದರಿಂದ ಸುಲ್ತಾನ ಸಂತಸಪಟ್ಟುಕೊಂಡು ಮುಂದಿನ ಕುಸ್ತಿ ಪ್ರದರ್ಶನದ ದಿನ ಹಾಜರಾಗುವಂತೆ ಯೂಸುಫ್ ಬೇಗನಿಗೆ ಅನುಮತಿ ನೀಡಲಾಯಿತು. ಶುಕ್ರವಾರದ ದಿನ ತನ್ನ ದರ್ಬಾರಿನ ಮಂತ್ರಿಗಳ ಜೊತೆಗೆ ಆಗಮಿಸಿದ. ಸಾರ್ವಜನಿಕರು ಕೂಡ ಈ ತಮಾಷೆಯನ್ನು ನೋಡಲು ಎಂದಿಗಿಂತ ಹೆಚ್ಚಿನ

ಸಂಖ್ಯೆಯಲ್ಲಿ ಸೇರಿದರು. ದೆಹಲಿಯ ಹೆಸರಾಂತ ಪಹಿಲ್ವಾನ ಅಖಾಡಾದೊಳಗೆ ಅದ್ದೂರಿಯ ಜಯಕಾರದೊಂದಿಗೆ ಪ್ರವೇಶಿಸಿದ. ಯೂಸುಫ್ ಬೇಗನ ಪ್ರವೇಶದೊಂದಿಗೆ ಕುಸ್ತಿ ಶುರುವಾಯಿತು.

'ದೆಹಲಿಯ ಪಹಿಲ್ವಾನ ತನ್ನನ್ನು ತಾನು 'ರುಸ್ತುಂ ಇಸ್ಪಂದರಿಯಾರ್' ಎಂದು ತಿಳಿದುಕೊಂಡು ಬಹಳ ಬೊಗಳೆ ಕೊಚ್ಚಿಕೊಳ್ಳುತ್ತಿದ್ದಾನೆ. ನಾನಾದರೋ ಖೊರಸಾನ್‌ನಲ್ಲಿ ಹುಟ್ಟಿದವನು. 'ಇವನನ್ನು ಮುಗಿಸಲು ನಾನೊಬ್ಬನೇ ಸಾಕು' ಎಂದು ಯೂಸುಫ್ ಬೇಗ್ ಹೇಳಿದ. ಕುಸ್ತಿಯ ಬಟ್ಟೆಯನ್ನು ತೊಟ್ಟು, ತನ್ನನ್ನು ತಾನು ಹುರಿದುಂಬಿಸಿ ಧೈರ್ಯತಂದುಕೊಳ್ಳುತ್ತಾ ಅಖಾಡಾಕ್ಕೆ ಪ್ರವೇಶಿಸಲು ಅನುವಾದ. ಮೊದಲು ಬಾದಶಾಹನಿಗೆ ತಸ್ಲೀಮ್ ಸಲಾಂ ಹೇಳಿ ಜೋರಾಗಿ ಕೂಗಿ ಜಯಕಾರ ಹಾಕಿ ಹೂಂಕರಿಸಿದ. ಅಲ್ಲಿದ್ದ ಅವನ ಬಳಿ ಕೂತಿದ್ದ ಸಾಧಾರಣ ಬಟ್ಟೆ, ಲುಂಗಿ ಮತ್ತು ಟವೆಲ್ ಹಾಕಿದ ಕುಸ್ತಿಯ ಉಸ್ತಾದ್‌ಗೆ ಸಲಾಂ ಮಾಡಿದ. ಅಖಾಡದಲ್ಲಿ ನಡೆಯುತ್ತ ಕುಸ್ತಿಯ ಪದಕಗಳನ್ನಿಟ್ಟದ್ದನ್ನು ವೀಕ್ಷಿಸಿ ಒಂದು ಸುತ್ತು ಬಂದ. ಉಸ್ತಾದರ ಸುತ್ತ ಬಹಳ ಶಿಸ್ತು ಗೌರವದಿಂದ ಅವರ ಶಿಷ್ಯಂದಿರ ಗುಂಪು ಕೂತಿತ್ತು. ಶಿಷ್ಯಂದಿರಲ್ಲಿ ಒಬ್ಬನ ಸನಿಹ ಬಾಗಿ ಕಿವಿಯಲ್ಲಿ ಏನೋ ಹೇಳಿ ಉಸ್ತಾದರಿಗೆ ತಲಪಿಸಿದ. ತನ್ನ ಮುಖವನ್ನು ಕಿಬ್ಲಾದತ್ತ ತಿರುಗಿಸಿ ಸಜ್ದಾ (ಸಾಷ್ಟಾಂಗ) ನಮಸ್ಕರಿಸಿ ಕುಸ್ತಿಮೈದಾನಿನ ಕಡೆ ನಡೆದ. ಸುಲ್ತಾನ ಮತ್ತು ಅವನ ಸಂಗಡಿಗರು ಈ ಅಜಾನುಬಾಹುವಿನ ಆಗಮನವನ್ನು ಕಂಡು ಉಲ್ಲಸಿತರಾದರು. ಮೊದಲಿನಿಂದ ಕೊನೆಯ ತನಕ ತದೇಕ ಚಿತ್ತದಿಂದ ಕುಸ್ತಿ ಪ್ರದರ್ಶನ ನಡೆಯುವುದನ್ನು ಆಸಕ್ತಿಯಿಂದ ನೋಡಿದರು. ಅಲ್ಲಿ ನೆರೆದವರಿಗೆ ಸುಲ್ತಾನ 'ಇದೊಂದು ಕುಸ್ತಿ ಪಟುಗಳ ಆಟದ ಪ್ರದರ್ಶನವೇ ಹೊರತು ಪರಸ್ಪರ ದ್ವೇಷ ತೀರಿಸಿಕೊಳ್ಳುವ ಉದ್ದೇಶದ ರಣರಂಗವಲ್ಲ' ಎಂದು ಜನರನ್ನು ಎಚ್ಚರಿಸಿದ. ಅಲ್ಲಿ ಕೂತ ಜನರಿಗೆ ಯೂಸೂಫನೇ ಜಯಶಾಲಿಯಾಗುತ್ತಾನೆಂಬ ಅಂದಾಜಾಗಿತ್ತು. ಈಗ ದೆಹಲಿಯ ಪಹಿಲ್ವಾನನಿಗೆ ಒಳಗೊಳಗೇ ಅಳುಕು ಮೂಡಿತು. ದೆಹಲಿಯ ಪಹಿಲ್ವಾನ ಮತ್ತು ಯೂಸುಫನ ಮಧ್ಯೆ ಕುಸ್ತಿ ಪಂದ್ಯಾಟ ಶುರುವಾಗಲಿ ಎಂದು ಸುಲ್ತಾನ ಅನುಮತಿ ನೀಡಿದ. ದೆಹಲಿಯ ಪಹಿಲ್ವಾನ ಹೊಸತೊಂದು ಕರಾರು ಹಾಕಿದ. 'ನನ್ನೊಂದಿಗೆ ಕುಸ್ತಿ ಮಾಡುವ ಮೊದಲು ನನ್ನ ಶಿಷ್ಯಂದಿರಲ್ಲಿ ಕೆಲವರನ್ನು ಅಖಾಡಕ್ಕಿಳಿಸುತ್ತೇನೆ ಅವರನ್ನು ಸೋಲಿಸಬೇಕು. ಅವರನ್ನು ಸೋಲಿಸಿದರೆ ಮುಂದಿನ ಶುಕ್ರವಾರ ನಾನು ನಿನ್ನೊಂದಿಗೆ ಕುಸ್ತಿ ಮಾಡಲು ಅಖಾಡಕ್ಕೆ ಇಳಿಯುತ್ತೇನೆ' ಎಂದು ಸವಾಲೆಸೆದ. ಇದಕ್ಕೆ ಯೂಸುಫನೂ ಒಪ್ಪಿಕೊಂಡ. ಯೂಸುಫ್ ತನ್ನ ಚಾಕಚಕ್ಯತೆಯ ಆಟದಿಂದ ಶಿಷ್ಯಂದಿರನ್ನು ಸೋಲಿಸಲು ಹೆಚ್ಚು ಸಮಯ ತಾಗಲಿಲ್ಲ. ಅವನು ಬಳಸಿದಂತಹ 'ಪಹಿಲ್ವಾನಿ ದಾವ್' ಪಟುತ್ವ ಆಕರ್ಷಕವಾಗಿದ್ದು ನೋಡುವ

ಪ್ರೇಕ್ಷಕರಿಗೆ ಹೊಸ ಅನುಭವವಾಗಿ ರೋಮಾಂಚನಗೊಂಡು 'ಯೂಸುಫ್ ಜಿಂದಾಬಾದ್' ಎಂಬ ಘೋಷಣೆಯನ್ನು ಕೂಗತೊಡಗಿದರು.

ಸುಲ್ತಾನರು 'ನೀನು ಶಿಷ್ಯಂದಿರಜೊತೆಗೆ ಕುಸ್ತಿ ಮಾಡಲು ಯಾಕೆ ಒಪ್ಪಿಕೊಂಡೆ?' ಎಂದು ಕೇಳಿದರು. 'ನಿಮ್ಮ ಖುಶಿಗಾಗಿ ನಾನು ಶರ್ತಕ್ಕೆ ಒಪ್ಪಿಕೊಂಡೆ' ಎಂದು ಯೂಸುಫ ವಿನಯಪೂರ್ವಕವಾಗಿ ಉತ್ತರಿಸಿದ. ಸುಲ್ತಾನ ಅವನ ಉತ್ತರದಿಂದ ಸಂತಸಪಟ್ಟುಕೊಂಡ. ಆದರೆ ಆ ದೆಹಲಿಯ ಪಹಿಲ್ವಾನನ್ನುದ್ದೇಶಿಸಿ, 'ನಿನ್ನೊಂದಿಗೆ ಕುಸ್ತಿ ಖಂಡಿತ ಆಗಬೇಕು' ಎಂದು ಹೇಳಿದ. ದೆಹಲಿಯ ಪಹಿಲ್ವಾನ ಯೂಸುಫನ ಠಿಕಾಣಿಯ ಸಮೀಪದಲ್ಲೆ ಡೇರೆಯಲ್ಲಿ ವಾಸಿಸಿದ್ದ. ಅವನು ಸಾವಿನ ದೂತ ಇಜ್ರಾಯಿಲ್‌ನನ್ನು ಕಂಡವನಂತೆ ಭಯದಿಂದ ಕಂಪಿಸತೊಡಗಿದ. ನಿಗದಿತ ದಿನದಂದು ಯೂಸುಫ್ ಮತ್ತು ದೆಹಲಿ ಪಹಿಲ್ವಾನನ ಮಧ್ಯೆ ಕುಸ್ತಿ ನಡೆಯಿತು. ಮೊದಲನೆಯ ಸುತ್ತಿನಲ್ಲೇ ಯೂಸುಫ್ ದೆಹಲಿ ಪಹಿಲ್ವಾನನ್ನು ಎಷ್ಟು ಜೋರಾಗಿ ನೆಲಕ್ಕೆ ಅಪ್ಪಳಿಸಿದನೆಂದರೆ ಅವನು ಜೋರಾಗಿ 'ಓ..ದೇವರೇ!' ಎಂದು ಕೂಗಿಬಿಟ್ಟ. ನೆಲದಿಂದ ಎಬ್ಬಿಸಿ ಸುಲ್ತಾನ ಕೂತಲ್ಲಿಗೆ ತಂದು ಅವರ ಸಮ್ಮುಖದಲ್ಲಿ ಮತ್ತೆ ಅವನನ್ನು ಎತ್ತಿ ನೆಲಕ್ಕೆ ಕುಕ್ಕಿದ. ಈಗ ಅವನು ನೆಲದಿಂದ ಏಳಲಾರದೆ ಅಲ್ಲೇ ಬಿದ್ದುಕೊಂಡ. ಸುಲ್ತಾನ್ ಈ ದೃಶ್ಯವನ್ನು ಕಂಡು ಹರ್ಷೋಲ್ಲಾಸದಿಂದ ಕೂತಲ್ಲಿಂದ ಎದ್ದು ಕುಣಿದಾಡಿದ. ಅಲ್ಲಿ ಸೇರಿದ ಪ್ರೇಕ್ಷಕ ಗಣವೂ ಕೂಡ ಸಂತಸದಿಂದ ಹುಚ್ಚೆದ್ದು ಕುಣಿಯತೊಡಗಿತು. ಸುಲ್ತಾನ, ಯೂಸುಫನಿಗೆ ಉತ್ತಮ ತಳಿಯ ಕುದುರೆಗಳು, ಒಂದು ವಿಶೇಷ ಉಡುಪು, ಒಂದು ಸಾವಿರ ದಿರ್ಹಮ್ ಉಡುಗೊರೆಯನ್ನು ನೀಡಿದ. ಸುಲ್ತಾನ ಯೂಸುಫನ ಜೊತೆಗಾರರಿಗೂ ಬಟ್ಟೆ, ಕುದುರೆಗಳು, ಹಣ ಮುಂತಾದ ಉಡುಗೊರೆಗಳನ್ನು ಭಕ್ಷೀಸು ನೀಡಿ ಖುಶಿಪಡಿಸಿದ. ಅಲ್ಲಿ ನೆರೆದ ಜನಸಮೂಹದ ಸಮ್ಮುಖದಲ್ಲಿ ಯೂಸುಫನನ್ನು ತನ್ನ ಆಸ್ಥಾನದಲ್ಲಿ ಸ್ಥಾನ ನೀಡಿ ಗೌರವಿಸುವುದಾಗಿ ಘೋಷಿಸಿದ, ಯೂಸುಫ ಬೇಗನನ್ನು ತನ್ನ ಹತ್ತಿರ ಸಿಂಹಾಸನದ ಬಳಿ ಸುಸಜ್ಜಿತ ದಂಡವನ್ನು ಹಿಡಿದು ನಿಲ್ಲುವ ಅಂಗರಕ್ಷನನ್ನಾಗಿ ಸುಲ್ತಾನ ನೇಮಿಸಿದ. ಹೀಗೆ ಯೂಸುಫ್ ಬೇಗನ ನಡತೆಯಿಂದ ಮತ್ತು ಅದೃಷ್ಟದಿಂದ ಅವನ ಭಾಗ್ಯ ಅರಳತೊಡಗಿತು. ಮುಂದೆ ಸುಲ್ತಾನ ಅವನನ್ನು ನಗರದ ಕಾವಲಿಗಾಗಿ ಕೋಟೆಯ ಕೋತುವಾಲನನ್ನಾಗಿ ನೇಮಿಸಿದ. ನಗರದ ಬಂದೋಬಸ್ತು, ಮಾರುಕಟ್ಟೆಯ ಕಾವಲು ಮತ್ತು ನಗರದ ಶಿಸ್ತನ್ನು ಕಾಪಾಡುವ ಕೆಲಸದಲ್ಲಿ ಯೂಸೂಫ ಮಗ್ನನಾದ. ಇವೆಲ್ಲದರೊಂದಿಗೆ ಎಷ್ಟರಮಟ್ಟಿಗೆ ಒಂದೊಂದೇ ಹೆಜ್ಜೆಯಲ್ಲಿ ಪದವಿಗಳನ್ನು ಪಡೆಯತೊಡಗಿ, ಎಷ್ಟು ಎತ್ತರದ ಗೌರವದ ಸ್ಥಾನ ಗಳಿಸಿದನೆಂದರೆ ದರ್ಬಾರಿನ ಪ್ರಮುಖರು ಕೆಲವರು ಅಸೂಯೆಪಡತೊಡಗಿದರು. ಆದರೆ ಸುಲ್ತಾನ ಇವನ್ನೆಲ್ಲ ಲೆಕ್ಕಿಸದೆ ದಿನೇದಿನೇ ಅವನು ಒಂದೊಂದೇ ಉತ್ತಮ ಕೆಲಸ ಮಾಡಿದಂತೆ ಪದವಿಯ

ಮೆಟ್ಟಲುಗಳಲ್ಲಿ ಏರಿಸುತ್ತ ಭಡ್ತಿ ನೀಡತೊಡಗಿದ. ಎಲ್ಲಿವರೆಗೆಂದರೆ ಅವನಿಗೆ ಅರಮನೆಯ ಮತ್ತು ದರ್ಬಾರಿಗೆ ಸಂಬಂಧಿಸಿದ ಸಾಮಾನು ಸರಂಜಾಮುಗಳನ್ನು ನೋಡಿಕೊಳ್ಳುವ ಮತ್ತು ಸೈನ್ಯದ ಜವಾಬ್ದಾರಿಯನ್ನು ವಹಿಸುವಷ್ಟು ವಿಶ್ವಾಸ ಬೆಳೆಸಿಕೊಂಡಿದ್ದ. ದರ್ಬಾರಿನ ಪ್ರಮುಖರಿಗೆ ಈ ಬೆಳವಣಿಗೆಯನ್ನು ಕಂಡು ಕಣ್ಣಿಗೆ ಕುಕ್ಕತೊಡಗಿತು. ಯೂಸುಫನನ್ನು ಬಾದಶಾಹನಿಂದ ದೂರಮಾಡಲು ಹಲವು ಮಸಲತ್ತುಗಳನ್ನು ಮಾಡತೊಡಗಿದರು. ಇಂತಹ ಸಮಯದಲ್ಲಿ ಬಹುದೊಡ್ಡ ಅಪಾಯಕಾರಿಯಾದ ಸೈನ್ಯದ ದಂಡೊಂದು ಮಚಲಿಪಟ್ಟಣಂ, ಕಥೇಲಿಯ ಕಡೆಯಿಂದ ದಂಡೆತ್ತಿ ಬರುತ್ತಿದೆಯೆಂಬ ಸುದ್ದಿ ಬಂತು.

ಹಾದಿಯಲ್ಲಿ ಎದುರಾದ ತೆಲಂಗಾಣದ ಗೋಲ್ಕೊಂಡ ಕೋಟೆಯಲ್ಲಿದ್ದ ಒಂದು ವ್ಯಾಪಾರಿ ತಂಡವನ್ನು ಈ ದಂಡೆತ್ತಿ ಬರುತ್ತಿದ್ದ ವಿರೋಧಿಗಳ ಆಕ್ರಮಣಕಾರಿ ಸೈನ್ಯ ಹೊಡೆದು ಬಡಿದು ವ್ಯಾಪಾರದ ಸಾಮಾನುಗಳನ್ನು ಲೂಟಿಮಾಡಿದರು. ರಸ್ತೆಯಲ್ಲಿ ವ್ಯಾಪಾರ ಮಾಡುತ್ತಿದ್ದ ಸಣ್ಣಪುಟ್ಟ ವ್ಯಾಪಾರಿಗಳ ಸರಕುಗಳನ್ನು ಕೂಡ ಲೂಟಿಮಾಡಿ ಧ್ವಂಸ ಮಾಡತೊಡಗಿದರು. ಆ ಕಾಲದಲ್ಲಿ ತೆಲಂಗಾಣ ಪ್ರದೇಶದಲ್ಲಿ ಶಕ್ತಿಶಾಲಿ ಸಾಮಂತ ಅರಸ ಇರಲಿಲ್ಲ. ಈ ಗೋಲ್ಕೊಂಡ ಕೋಟೆ ಮಹಮೂದ್ ಷಾನ ರಾಜ್ಯದ ವ್ಯಾಪ್ತಿಯಲ್ಲಿತ್ತು. ಈ ಇಲಾಖೆ ಪರ್ವತ, ಕಾಡುಮೇಡುಗಳ ಪ್ರದೇಶವಾಗಿತ್ತು. ಇವು ಹಿಂದೂ ತುಂಡರಸರ ಹಿಡಿತದಲ್ಲಿದ್ದವು. ಯಾರ ಹಂಗಿಗೂ ಒಳಗಾಗಿರಲಿಲ್ಲ. ಅಲ್ಲಿ ಯಾವಾಗಲೂ ಪರಸ್ಪರ ಜಗಳ, ಯುದ್ಧ ನಡೆಯುತ್ತಲೇ ಇದ್ದವು. ಇಂತಹ ಸಮಯದಲ್ಲಿ ಸುಲ್ತಾನನಿಗೆ ವಿರೋಧಿಗಳ ಆಕ್ರಮಣ ಲೂಟಿಯ ಸುದ್ದಿ ತಲಪಿದಾಗ ಅವರನ್ನು ಎದುರಿಸಲು ಸೈನಿಕ ತಂಡವೊಂದನ್ನು ಕಳುಹಿಸಿದ. ಈರ್ಷ್ಯೆಯನ್ನು ಹೊಂದಿದ್ದ ದರ್ಬಾರಿಗಳು ಇದೇ ಸರಿಯಾದ ಸಮಯವೆಂದು ಇದು ತುಂಬ ಅಪಾಯಕಾರಿ ಕೆಲಸ ಇದನ್ನು ಎದುರಿಸುವ ತಾಕತ್ತು ಶೂರ ಬಹದ್ದೂರ ಯೂಸುಫ್ ಬೇಗನಿಗೆ ಮಾತ್ರ ಇದೆ, ಅವನನ್ನೇ ಅಲ್ಲಿ ಕಳುಹಿಸಿ ಎಂದು ಸುಲ್ತಾನನಿಗೆ ಸಲಹೆ ನೀಡಿದರು.

**ಯೂಸುಫ್ ಬೇಗನನ್ನು ಆಕ್ರಮಣಕಾರಿಗಳನ್ನು ಓಡಿಸಲು ತೆಲಂಗಾಣಕ್ಕೆ ಕಳುಹಿಸುವುದು ಮತ್ತು ಈ ಇಲಾಖೆಯನ್ನು ವಶಪಡಿಸಿಕೊಂಡ ವಿವರಗಳು**

ಸುಲ್ತಾನನಿಗೆ ಯೂಸುಫ್ ಬೇಗನನ್ನು ಈ ಅಪಾಯಕಾರಿ ಕೆಲಸಕ್ಕೆ ಕಳಿಸುವುದಕ್ಕೆ ಒಪ್ಪಿಗೆ ಇರದಿದ್ದರೂ ಒಲ್ಲದ ಮನಸ್ಸಿನಿಂದ ದರ್ಬಾರಿನ ಪ್ರಮುಖರ ಒತ್ತಾಯಕ್ಕೆ ಮಣಿಯಬೇಕಾಗಿ ಬಂತು. ಯೂಸುಫ್ ಬೇಗನನ್ನು ಆಸ್ಥಾನದ ದರ್ಬಾರಿನಲ್ಲಿ ಬಾದಶಾಹನ ಮುಂದೆ ನಿಲ್ಲಿಸಲಾಗಿ ಸೈನ್ಯದ ಸರದಾರನ ಉಡುಪನ್ನು ಧರಿಸಿ ಆಕ್ರಮಣಕಾರಿಗಳನ್ನು ಎದುರಿಸುವ ಸಲುವಾಗಿ ಬೀಳ್ಕೊಡಲಾಯಿತು. ಯೂಸುಫ್ ಬೇಗ್ ಅಲ್ಲಿಗೆ ಪ್ರಯಾಣಿಸುತ್ತ ಒಂದು ಸ್ಥಳದಲ್ಲಿ ಠಿಕಾಣಿ ಹೂಡಿ ಯೋಜನೆಗಳನ್ನು

ರೂಪಿಸತೊಡಗಿದ. ಅವನ ಜೊತೆಯಲ್ಲಿ ೬೫ ಸಾವಿರ ಸೈನಿಕ ಕಾಲಾಳುಗಳು ತೆಲಂಗಾಣಕ್ಕೆ ಹೊರಟರು. ಯೂಸುಫ್ ಬೇಗ್ ಕೆಲವು ಸೈನಿಕರನ್ನು ವ್ಯಾಪಾರಿಗಳ ವೇಷಧರಿಸಿ ಮೊದಲು ಕಳುಹಿಸಿದ. ಅವನ ಲೆಕ್ಕಾಚಾರದಂತೆ ಈ ವ್ಯಾಪಾರಿಗಳನ್ನು ನೋಡಿ ವೈರಿಗಳು ಕೋಟೆಯಿಂದ ಹೊರಬರುವಂತೆ ಮಾಡಬೇಕಾಗಿತ್ತು. ಯೋಜನೆಯಂತೆ ವೈರಿ ಸೈನಿಕರು ಕೋಟೆಯ ಬಾಗಿಲು ತೆರೆದು ಹೊರ ಬಂದರು. ಧುತ್ತನೆಂದು ಈ ವೈರಿಗಳ ಮೇಲೆರಗಿ ಯೂಸುಫ್ ಬೇಗ್ ತನ್ನ ಸೈನಿಕರೊಂದಿಗೆ ಕೋಟೆಯೊಳಗೆ ನುಸುಳಿದ. ಭೀಕರ ಯುದ್ಧನಡೆದು ವೈರಿಗಳ ಸರದಾರ, ಕೋಟೆಯ ಯಜಮಾನ ಯುದ್ಧದಲ್ಲಿ ಮರಣಹೊಂದಿದ.

ಕೋಟೆಯೊಳಗೆ ಉಳಿದಿದ್ದ ಜನರು ಚೆಲ್ಲಾಪಿಲ್ಲಿಯಾಗಿ ಎತ್ತೆಂದರತ್ತ ಓಡಿಹೋಗ ತೊಡಗಿದರು. ಅಲ್ಲಿ ಉಳಿದ ಸ್ವಲ್ಪ ಮಂದಿ ಅನಿವಾರ್ಯವಾಗಿ ಯೂಸುಫ್ ಬೇಗನಿಗೆ ಶರಣಾಗತರಾದರು. ಹೀಗೆ ಯೂಸುಫ್ ಬೇಗ್ ಕೋಟೆಯನ್ನು ವಶಪಡಿಸಿಕೊಂಡು ಜಯಶಾಲಿಯಾಗಿದ್ದ. ಇಸ್ಲಾಮಿ ಸೈನ್ಯ ಈ ಪ್ರದೇಶದ ರಕ್ಷಣೆಯ ಜವಾಬ್ದಾರಿಯನ್ನು ವಹಿಸಿಕೊಂಡು ಜಯಕಾರ ಘೋಷಣೆಯೊಂದಿಗೆ ವಿಜಯೋತ್ಸವವನ್ನು ಆಚರಿಸಿತು. ಹೀಗೆ ಕೋಟೆಯನ್ನು ಜಯಿಸಿ ಸುಲ್ತಾನನ ಸೈನಿಕರು ಎರಡು ಮೂರು ವರ್ಷಗಳ ಕಾಲ ಒತ್ತೆಯಿರಿಸಿಕೊಂಡು ರಕ್ಷಣೆಯಲ್ಲಿ ನಿರತರಾದರು. ಹೀಗೆ ಯೂಸುಫ್ ಬೇಗ್ ತನ್ನ ಶಕ್ತಿ ಪರಿಶ್ರಮದಿಂದ ಬಾದಶಾಹನ ಘನತೆ, ಗೌರವ, ಮರ್ಯಾದೆಗಳನ್ನು ಎತ್ತರಕ್ಕೇರಿಸಿದ. ಬಾದಶಾಹನಿಗೆ ಮತ್ತು ದರ್ಬಾರಿನ ಮಂತ್ರಿ ಮಂಡಳದ ಸದಸ್ಯರಿಗೆ ಕೋಟೆಯನ್ನು ತನ್ನ ಸೈನಿಕರು ವಶಪಡಿಸಿಕೊಳ್ಳುವುದರಲ್ಲಿ ಜಯಶಾಲಿಯಾದುದರ ಬಗ್ಗೆ ಸುದ್ದಿ ತಿಳಿದಾಗ ಅತ್ಯಂತ ಸಂತಸಪಟ್ಟುಕೊಂಡ. ಈ ಕೋಟೆಯ ಮೇಲಿನ ವಿಜಯಕ್ಕೆ ಅಲ್ಲಾಹನ ಕೃಪೆಯನ್ನು ನೆನೆದು ಪ್ರಾರ್ಥಿಸಿದ. ಇದು ಇಸ್ಲಾಮಿನ ಧಾರ್ಮಿಕ ಜಯವೆಂದು ಪರಿಗಣಿಸಿ ಅರ್ಪಣೆ ಮಾಡಲಾಯಿತು. ಇದರ ಜೊತೆಗೆ ಆಸುಪಾಸಿನ ಅನೇಕ ಕೋಟೆಕೊತ್ತಲಗಳು, ಪ್ರದೇಶಗಳನ್ನು ಕೂಡ ಜಯಿಸಿ ಸುಲ್ತಾನನ ರಾಜ್ಯವಿಸ್ತರಣೆ ವ್ಯಾಪಕವಾಗಿ ನಡೆಯಿತು. ಅಲ್ಲಿನ ಪ್ರತೀ ಗ್ರಾಮಗಳಲ್ಲೂ ಮಸೀದಿಗಳನ್ನು ಕಟ್ಟಲಾಗಿ ಅಲ್ಲಾಹನ ಪ್ರಾರ್ಥನೆಗಾಗಿ ಜನರಿಗೆ ಅವಕಾಶಮಾಡಿಕೊಡಲಾಯಿತು.

ಯೂಸುಫ್ ಬೇಗನ ಈ ಪ್ರಚಂಡ ಜಯಭೇರಿಯನ್ನು ಕಂಡ ದರ್ಬಾರಿನ ವಿರೋಧಿ ಸದಸ್ಯರು ದಂಗಾದರು. 'ನಾವು ಈ ಯೂಸುಫ ಈ ಯುದ್ಧದಲ್ಲಿ ಸೋತು ಅಸುನೀಗುತ್ತಾನೆಂದು ಲೆಕ್ಕಹಾಕಿದ್ದೆಲ್ಲ ಸಂಪೂರ್ಣ ವ್ಯರ್ಥಗೊಂಡು, ಪರಿಪೂರ್ಣವಾದ ಜಯಶಾಲಿಯಾಗಿ ಶೌರ್ಯವನ್ನು ಮೆರೆದು ನಿಂತದ್ದರಿಂದ ಆಶ್ಚರ್ಯದಿಂದ ಮೂಕರಾದರು. ಯೂಸುಫ ದಿನೇದಿನೇ ಹೆಚ್ಚುಹೆಚ್ಚು ಉತ್ತಮ ಕೆಲಸಗಳನ್ನು ಮಾಡುತ್ತ ಜಯಿಸುತ್ತ ಪೂರ್ಣ ಚಂದ್ರನಂತೆ ಅರಳಿದ. ಇಷ್ಟಾಗಿಯೂ

ಈ ಮಂದಿ ಬಾದಶಾಹನ ಕಿವಿಯನ್ನು ಆಗಾಗ ಊದುತ್ತ ಅವನ ವಿರುದ್ಧ ಚಾಡಿಹೇಳುವುದನ್ನು ನಿಲ್ಲಿಸಿರಲಿಲ್ಲ. ಆದರೆ ಸುಲ್ತಾನ್ ಮಹಮೂದ್ ಷಾ ಯೂಸುಫನ ಬಗ್ಗೆ ಅತ್ಯಂತ ಒಳ್ಳೆಯ ಭಾವನೆಯನ್ನು ಬೆಳೆಸಿಕೊಂಡು ಈತ ಪ್ರಾಮಾಣಿಕನೂ ಬುದ್ಧಿವಂತನೂ ಸತ್ಯವಂತನೂ ಆಗಿದ್ದಾನೆಂಬ ವಿಶ್ವಾಸವನ್ನು ಇರಿಸಿಕೊಂಡಿದ್ದ. ಯೂಸುಫ್ ಬೇಗ್ ಕಾಡುಮೇಡುಗಳಲ್ಲಿ ಅಲೆದು ಅನೇಕ ಸಂಕಷ್ಟಗಳನ್ನು ಎದುರಿಸಿ, ಕಷ್ಟಪಟ್ಟು ದುಡಿದು ಈ ಹಂತಕ್ಕೆ ತಲಪಿದ್ದಾನೆನ್ನುವುದು ಬಾದಶಾಹನಿಗೆ ತಿಳಿದಿತ್ತು. ಸುಲ್ತಾನ ಈ ಸಂದರ್ಭದಲ್ಲಿ ಇವನ ವಿರುದ್ಧ ಅನೇಕ ಪಿತೂರಿ, ಚಾಡಿಯ ಮಾತುಗಳು ತನ್ನ ಕಿವಿಗೆ ಬಿದ್ದದ್ದನ್ನು ಗಮನಿಸಿದ್ದ.

ಸುಲ್ತಾನ ತನ್ನ ದರ್ಬಾರಿಗಳಲ್ಲಿ ಕೆಲವರು ಯೂಸುಫ್ ಬೇಗ್ ಬಗ್ಗೆ ದ್ವೇಷವನ್ನು ವಿನಾಕಾರಣ ಬೆಳೆಸಿಕೊಂಡಿದ್ದಾರೆಂದು ತಿಳಿಯಿತು. ಈ ಕಾರಣಕ್ಕೆ ಅವನನ್ನು ಗಡಿಪ್ರದೇಶದ ರಕ್ಷಣೆಯ ಜವಾಬ್ದಾರಿ ನೀಡಿ ಕಳುಹಿಸಿದ. ಬಾದಶಾಹರ ಹತ್ತಿರದ ದರ್ಬಾರಿಗಳಲ್ಲಿ ಒಬ್ಬರಾದ ಸುಬ್ಹಾನ್ ಕುಲಿಗೆ ಇವನ ಕೆಲಸಕಾರ್ಯಗಳನ್ನು ನೋಡಿಕೊಳ್ಳುವ ಮತ್ತು ಹತೋಟಿಯಲ್ಲಿಟ್ಟುಕೊಳ್ಳುವ ಜವಾಬ್ದಾರಿಯನ್ನು ವಹಿಸಿಕೊಟ್ಟ. ಮೌಲಾನಾ ಇಸ್ಮಾಯಿಲ್ ಎಂಬ ಪ್ರಸಿದ್ಧ ಜ್ಞಾನಿ ಮತ್ತು ಬುದ್ಧಿವಂತ ಮನುಷ್ಯನನ್ನು ಮುನ್ಶಿಯನ್ನಾಗಿ(ಬರಹಗಾರ) ನೇಮಿಸಿದ. ಹಾಫಿಜ್ ಶಂಸುದ್ದೀನ್ ಕಜ್ರಿ ಎಂಬ ಬಾದಶಾಹನ ಹಳೆಯ ತಲೆಮಾರಿನ ಕಾರ್ಯನಿರ್ವಾಹಕರನ್ನು ತನ್ನ ಬಳಿಯಲ್ಲಿ ನಿಕಟವರ್ತಿಯನ್ನಾಗಿ ನೇಮಿಸಿಕೊಂಡ. ಮೌಲಾನಾ ಇಸ್ಮಾಯಿಲ್ ಮುನ್ಶಿಯವರು ಬಾದಶಾಹರಿಗೆ ಒಂದು ಪತ್ರವನ್ನು ಬರೆದು ಸುಬ್ಹಾನ್ ಕುಲಿಯನ್ನು ಗೋಲ್ಕೊಂಡ ಕೋಟೆಯ ಕಡೆ ಕಳುಹಿಸುವುದಕ್ಕೆ ತಿಳಿಸಿದ. ಅಲ್ಲಿಯ ಸರದಾರರ ಆಳ್ವಿಕೆ ಬಹಳ ಕೆಟ್ಟದಾಗಿದೆ ಎಂದೂ ಪತ್ರದಲ್ಲಿ ತಿಳಿಸಿದ್ದ.

ಹಾಫಿಜ್ ಶಂಸುದ್ದೀನ್ ಕಜ್ರಿ ಸುಬ್ಹಾನ್ ಕುಲಿ ಬೇಗನನ್ನು ಭೇಟಿಯಾದಾಗ ಮೌಲಾನಾ ಇಸ್ಮಾಯಿಲ್ ನೀಡಿದ ಪತ್ರವನ್ನು ಓದಿದ. ಈ ಪತ್ರದ ಒಕ್ಕಣೆಯನ್ನು ನೋಡಿ ಭೇಟಿಯಾಗುವ ಇಚ್ಛೆಯನ್ನು ಪ್ರಕಟಿಸಿದ. ಸುಬ್ಹಾನ್ ಕುಲಿ ಬೇಗ್ ದರ್ಬಾರಿಗೆ ಪ್ರವೇಶಿಸಿದಾಗ ಒಂದು ಬದಿಯಲ್ಲಿ ಇಬ್ಬರು ಪ್ರಮುಖ ದರ್ಬಾರಿಗಳು ತಮ್ಮೊಳಗೆ ಗುಟ್ಟಾಗಿ ಮಾತುಕತೆಯಲ್ಲಿ ನಿರತರಾಗಿದ್ದರು. 'ದಕ್ಷಿಣದ ಆಳ್ವಿಕೆಯ ಬಾದಶಾಹರು ಯಾವಾಗಲೂ ಬಲಹೀನರನ್ನು ದಮನಿಸುವುದರಲ್ಲಿ ನಿರತರಾಗಿರುತ್ತಾರೆ. ಮಖ್ದೂಮ್ ಖ್ವಾಜಾ ಜಹಾಂರವರ ಕೊಲೆಯಲ್ಲೂ ಇದೇ ದರ್ಬಾರಿಗಳ ಪಿತೂರಿ ಇತ್ತು.' ಎಂಬ ಅವರ ಮಾತು ಕೇಳಿಬಂತು. ಬಾದಶಾಹನ ಆಳ್ವಿಕೆಯಲ್ಲಿ ವಿದೇಶೀಯರ ದೆಸೆಯಿಂದ ಸ್ಥಳೀಯರಿಗೆ ತೊಂದರೆಗಳು ಆಗುತ್ತಲೇ ಇವೆ. ತೆಲಂಗಾಣ ಪ್ರವೇಶಿಸಿದ ದರೋಡೆಕೋರರ ಸೈನ್ಯವೂ ಕೂಡ ಯೂಸೂಫ್ ಬೇಗನದ್ದೇ ಪಿತೂರಿಯ ಭಾಗವಾಗಿದೆ. ಅವರೊಂದಿಗೆ ಯುದ್ಧ ಹೂಡಿದ್ದು ಒಂದು ಕಣ್ಣುಕಟ್ಟಿನ ನಾಟಕವಾಗಿದೆ. ಯುಸುಫ್ ಬೇಗ್ ಇವನ್ನೆಲ್ಲ

ತನ್ನನ್ನು ತಾನು ಬಾದಶಾಹರ ಕಣ್ಣಿನಲ್ಲಿ ಬಹದ್ದೂರನಾಗುವುದನ್ನು ತೋರಿಸುವುದಕ್ಕೆ ಹೂಡಿದ ತಂತ್ರದ ಭಾಗವಾಗಿದೆ. ಎಂಬಿತ್ಯಾದಿ ಅರೋಪಗಳನ್ನು ಯೂಸುಫ್ ಬೇಗನ ಮೇಲೆ ವಿನಾಕಾರಣ ಹೊರಿಸಲಾಯಿತು.

ಯೂಸುಫ್ ಬೇಗ್ ಇದನ್ನು ಕೇಳಿ ತನಗೆ ಒಪ್ಪಿಸಿದ ಗೋಲ್ಕೊಂಡ ಕೋಟೆಯನ್ನು ಬಾದಶಾಹರ ಅನುಮತಿ ಪಡೆದು ಸುಬ್ಹಾನ್ ಕುಲಿ ಬೇಗನಿಗೆ ಒಪ್ಪಿಸಿದ. ನಂತರ ಯೂಸುಫ್ ಬೇಗ್ ತನ್ನನ್ನು ಸೈನ್ಯದ ಉಸ್ತುವಾರಿಯಲ್ಲಿ ತೊಡಗಿಸಿಕೊಂಡು ಇತರ ಕೋಟೆಗಳ ರಕ್ಷಣೆಯಲ್ಲಿ ಕಾಲ ಕಳೆಯುವುದಕ್ಕೆ ತೀರ್ಮಾನಿಸಿಕೊಳ್ಳುತ್ತಾನೆ. ಈ ಮೂಲಕ ಮತ್ತು ಬಿಡುವಿನ ಸಮಯದಲ್ಲಿ ಇಸ್ಲಾಮಿನ ಧಾರ್ಮಿಕ ಸೇವೆಯಲ್ಲಿ ನಿರತನಾಗುವ ಕೆಲಸವನ್ನೂ ಕೈಗೊಳ್ಳುವಂತಾಯಿತು. ಇದರಿಂದಾಗಿ ಹೊಸ ಹಗರಣ ಹುಟ್ಟಿಕೊಳ್ಳುವ ಹಾದಿಗಳು ಶಮನವಾಗಿ ಸುಲ್ತಾನ ಮಹಮೂದ್ ಷಾ ಬಾದಶಾಹರ ಆಳ್ವಿಕೆಯ ಘನತೆ ಹೆಚ್ಚುವಂತಾಯಿತು. ಸುಲ್ತಾನನ ಹೊಸ ನಾಣ್ಯಗಳು ಜಾರಿಗೆ ಬಂದವು. ಅಲ್ಲಲ್ಲಿ ಮಸೀದಿಗಳಿಲ್ಲದಲ್ಲಿ ಹೊಸತಾಗಿ ಕಟ್ಟಿಸಿ ಮುಸ್ಲಿಮ್ ಶವಗಳ ಸಂಸ್ಕಾರಕ್ಕಾಗಿ ದಫನ ಸ್ಥಳಗಳನ್ನು ಗುರುತಿಸಿ ಊರವರಿಗೆ ಸವಲತ್ತನ್ನು ಒದಗಿಸಲಾಯಿತು. ಜನರು ಬಾದಶಾಹನ ಈ ಸಾರ್ವಜನಿಕ ಹಿತದ ಕೆಲಸಗಳಿಂದಾಗಿ ಸಂತಸಗೊಂಡು ಬಾದಶಾಹನ ಆಳ್ವಿಕೆಗೆ ಹೆಚ್ಚು ನಿಷ್ಠರಾಗಿದ್ದರು.

ಸುಲ್ತಾನರ ರಾಜ್ಯವಿಸ್ತರಣೆ ಬಹಳ ಜೋರಾಗಿ ನಡೆಯುತ್ತಿತ್ತು. ರಾಜ್ಯವಿಸ್ತರಣೆಯ ಕೆಲಸದಲ್ಲಿ ಬಾದಶಾಹ ತೊಡಗಿ ಸಂಪೂರ್ಣ ನಿರತನಾಗಿ ತಲ್ಲೀನನಾದ ಸಂದರ್ಭದಲ್ಲಿ ಅವನ ನಾಲ್ಕೂ ದಿಕ್ಕಿನಲ್ಲಿ ವೈರಿ ರಾಜರ ಪಾಳ್ಯದಲ್ಲಿ ಅವನ ವಿರೋಧಿ ಚಟುವಟಿಕೆಗಳು ತೀವ್ರವಾಗತೊಡಗಿತು. ಸರಹದ್ದಿನಲ್ಲಿ ವೈರಿಗಳು ಸೇರಿ ಸಮಾಲೋಚನೆ ನಡೆಸಿಕೊಂಡು ಬಾದಶಾಹ ವಶಪಡಿಸಿಕೊಂಡಿರುವ ತಮ್ಮ ಪ್ರದೇಶಗಳನ್ನು ಹಿಂದಕ್ಕೆ ಪಡೆಯುವುದಕ್ಕೆ ಯುದ್ಧಹೂಡುವ ತಂತ್ರಮಾಡುತ್ತಿದ್ದರು. ಯುದ್ಧದಲ್ಲಿ ಜಯಶಾಲಿಗಳಾಗದಿದ್ದರೆ ಬಾದಶಾಹನೊಂದಿಗೆ ರಾಜಿಮಾಡಿಕೊಂಡು ತಮ್ಮ ಬಚಾವು ಮಾಡಿಕೊಳ್ಳೋಣವೆಂದು ತೀರ್ಮಾನಿಸಿಕೊಂಡರು. ಅವರ ಉದ್ದೇಶ ಬಾದಶಾಹ ವಶಪಡಿಸಿಕೊಂಡ ತಮ್ಮ ರಾಜ್ಯದ ಭಾಗಗಳನ್ನು ಮತ್ತೆ ತಮ್ಮದನ್ನಾಗಿಸಿಕೊಳ್ಳಲು ಈ ರಾಜರಗಳ ಕೂಟ ಪದೇಪದೇ ಪ್ರಯತ್ನದಲ್ಲಿ ಕಾರ್ಯತಂತ್ರಗಳನ್ನು ರೂಪಿಸುವುದಕ್ಕೆ ತೊಡಗಿಕೊಂಡಿದ್ದರು. ಆದರೆ ಮೇಲ್ನೋಟಕ್ಕೆ ಬಾದಶಾಹರೊಂದಿಗೆ ಸ್ನೇಹದಲ್ಲಿರುವ ನಾಟಕವಾಡುತ್ತಿದ್ದರು. ಈ ಕಾಲಘಟ್ಟದಲ್ಲಿ ಸುಲ್ತಾನರು ಈ ವೈರಿರಾಜ್ಯಗಳಿಗೆ ಸಾಕಷ್ಟು ಸಹಾಯ ಮತ್ತು ರಿಯಾಯತಿಗಳನ್ನು ನೀಡಿ ಸೌಹಾರ್ದ ವಾತಾವರಣವನ್ನು ಬೆಳೆಸಲು ಪ್ರಯತ್ನಿಸಿದ್ದರು. ವೈರಿ ರಾಜರು ಬಾದಶಾಹರ ಈ ಸವಲತ್ತುಗಳಿಗೆ ಕೃತಜ್ಞತೆ ಪ್ರಕಟಿಸಿ ಪ್ರತಿಕ್ರಿಯಿಸಿದ್ದರೂ ಸಹಕಾರದ ಆಶ್ವಾಸನೆಯನ್ನು ಮೇಲ್ನೋಟಕ್ಕೆ ನೀಡಿದ್ದರೂ ಅವರಲ್ಲಿ ಕೆಲವರ ನಿಯತ್ತಿನಲ್ಲಿ

ಭಂಡತನವಿತ್ತು. ಬಾದಶಾಹನಿಗೆ ಕಿರುಕುಳ ನೀಡುವ ಅವಕಾಶವನ್ನು ಹುಡುಕುತ್ತಿದ್ದರು. ಬಾದಶಾಹನಿಗೆ ಗೂಢಚಾರರು ಆಗಾಗ ಈ ವೈರಿಗಳ ಮಸಲತ್ತಿನ ಬಗ್ಗೆ ವರದಿಯನ್ನು ಒಪ್ಪಿಸಿದ್ದರು. ಸರಹದ್ದಿನಲ್ಲಿದ್ದ ಬಾದಶಾಹರ ಸಾಮಾನ್ಯ ದೂತರು ಈ ಬಗ್ಗೆ ಬಾದಶಾಹರನ್ನು ಎಚ್ಚರಿಸಿದ್ದರು. ಈ ದೂತರು ಮತ್ತೆ ತಮ್ಮ ವರದಿ, ಸಮಾಚಾರಗಳನ್ನು ತಂದಾಗ ಆ ವಿಷಯದ ಬಗ್ಗೆ ದರ್ಬಾರಿನಲ್ಲಿ ಚರ್ಚೆಮಾಡಲಾಯಿತು. ಇಷ್ಟರವರೆಗೆ ನೇರವಾಗಿ ನಮ್ಮ ವಿರುದ್ಧ ದಂಗೆಯೇಳುವ ಬಗ್ಗೆ ನಿಖರವಾದ ಪುರಾವೆ ಅಥವಾ ಸಬೂತು ಸಿಗದಿರುವ ಕಾರಣ ನಾವು ಜಾಗರೂಕರಾಗಿದ್ದು ಎಚ್ಚರಿಕೆಯ ಕ್ರಮಗಳನ್ನು ಕೈಗೊಳ್ಳಬೇಕೆಂದು ಬಾದಶಾಹ ಅಭಿಪ್ರಾಯ ಪಟ್ಟರು. ಬಾದಶಾಹರು ಪಹರೆದಾರರಿಗೆ ಮತ್ತು ಸುದ್ದಿತಂದ ದೂತರಿಗೆ ವಿಶೇಷವಾದ ಉಡುಗೊರೆಯನ್ನು ಕಾಣಿಕೆಗಳನ್ನು ನೀಡಿ ಖುಶಿಪಡಿಸಿದರು. ಅವರು ಸಲ್ಲಿಸಿದ ವರದಿಗೆ ಉತ್ತರವಾಗಿ ಒಂದು ಪತ್ರ ಆದಿಲ್ ಖಾನ್ ಸಾವುಜಿ, ಇನ್ನೊಂದು ಕುತುಬುಲ್ ಮುಲ್ಕಿಗೆ ಮೂರನೆಯದ್ದು ಸುಬ್ಹಾನ್ ಕುಲಿ ಬೇಗರಿಗೆ ನೀಡಲು ಮೂರು ಪತ್ರಗಳನ್ನು ನೀಡಿ ಬಾದಶಾಹ ಈ ದೂತರನ್ನು ಹಿಂತಿರುಗಿ ಕಳುಹಿಸಿದ.

ಇದರ ನಂತರ ವೈರಿಗಳ ದಂಗೆ ಮತ್ತು ವಿರೋಧಿ ಚಟುವಟಿಕೆಗಳು ಹತೋಟಿಗೆ ಬಂದವು. ತೆಲಂಗಾಣದ ಆಸುಪಾಸಿನ ಅನೇಕ ಕೋಟೆಗಳು ಮತ್ತು ವಿರೋಧಿಗಳು ರಹಸ್ಯವಾಗಿ ಸಂಗ್ರಹಿಸಿಟ್ಟಿದ್ದ ಯುದ್ಧ ಸಾಮಾಗ್ರಿಗಳು ಆಯುಧಗಳ ರಾಶಿ ಬಾದಶಾಹರ ಸೈನಿಕರ ವಶವಾಗಿ ಸುಲ್ತಾನರ ಸಂಗ್ರಹಾಲಯದಲ್ಲಿ ಜಮಾ ಆದವು.

ಹೀಗೆ ಹಲವಾರು ರೀತಿಯಲ್ಲಿ ಸಬೂತುಗಳು ಮತ್ತು ವೈರಿಬಣದ ಚಟುವಟಿಕೆಗಳ ಸಬೂತುಗಳು ದೊರೆತವು. ಬಾದಶಾಹರಿಗೆ ಸೈನ್ಯದ ಕೋಟೆಗಳು ಒಂದೊಂದಾಗಿ ಜಯಿಸಿದ ಸುದ್ದಿಗಳು ದೊರೆಯತೊಡಗಿದವು. ಬಾದಶಾಹ ಅತ್ಯಂತ ಸಂತಸಪಡುತ್ತಿದ್ದ. ಪ್ರತೀ ದಿನ ದರ್ಬಾರಿನಲ್ಲಿ ಸುದ್ದಿ ತರುತ್ತಿದ್ದ ದೂತರಿಗೆ ತಕ್ಕುದಾದ ಇನಾಮುಗಳನ್ನು ನೀಡಿ ಬೀಳ್ಕೊಡುತ್ತಿದ್ದ. ಸ್ವತಃ ಬಾದಶಾಹ ತನ್ನ ಎಂದಿನ ವೈಭವದ ಸವಾರಿಯೊಂದಿಗೆ ರಾಜಧಾನಿ ಬೀದರಿಗೆ ಸರ್ವ ಸಂಭ್ರಮದಿಂದ ಪ್ರಯಾಣಬೆಳೆಸಲು ತೀರ್ಮಾನಿಸಿದ. ಅವರ ಜೊತೆಗೆ ದಾರಿಯುದ್ದಕ್ಕೂ ಜನರ ದಂಡು ಸೇರಿ ನಡೆಯಿತು. ರಾಜಧಾನಿ ತಲಪುವ ಮೊದಲು ಒಂದು ಮೈಲಿನ ಅಂತರದಲ್ಲಿ ಅವರಿಗೆ ಅದ್ದೂರಿಯ ಸ್ವಾಗತ ನೀಡಲು ರಾಜಧಾನಿಯಲ್ಲಿ ತಯಾರಿ ಮಾಡಲಾಯಿತು.

**ಯೂಸುಫ್ ಆದಿಲ್ ಖಾನರ ಆಗಮನ ಮತ್ತು ಸುಲ್ತಾನ್ ಮಹಮೂದ್ ಷಾರನ್ನು ಸ್ವಾಗತಿಸಲು ಮಾಡಿದ ಅದ್ದೂರಿಯ ಏರ್ಪಾಡಿನ ವಿವರಗಳು:**

ಯೂಸುಫ್ ಆದಿಲ್ ಖಾನ ಅಗಮಿಸುವ ಸುದ್ದಿ ದರ್ಬಾರಿಗಳಿಗೆ ತಲಪಿದಾಗ

ಸುಲ್ತಾನ್‌ರನ್ನು ಸ್ವಾಗತಿಸುವುದಕ್ಕೆ ಅದ್ದೂರಿಯ ತಯಾರಿ ಮಾಡುವುದರಲ್ಲಿ ಮಗ್ನರಾಗಿದ್ದರು. ಸುಲ್ತಾನ್ ಆಗಮಿಸುವಾಗ ಹೇಗೆ ಅವರ ಸ್ವಾಗತ ಸವಾರಿ ಬಂತೋ ಅದೇರೀತಿ ರಾಜ ದರ್ಬಾರಿನ ಕುದುರೆಯನ್ನು ನೀಡಿ ರಾಜಮರ್ಯಾದೆಯೊಂದಿಗೆ ಗೌರವಿಸಿ ಸ್ವಾಗತಿಸಲಾಯಿತು. ಸುಲ್ತಾನ್ ದರ್ಬಾರಿಗೆ ಆಗಮಿಸಿದಾಗ ತೆಲಂಗಾಣ ಪ್ರದೇಶದ ವಿಜಯ ದಂಡಯಾತ್ರೆಯ, ಪ್ರದೇಶದ ಆಗುಹೋಗುಗಳ ಬಗ್ಗೆ ವಿಚಾರ ವಿವರಗಳನ್ನು ತಿಳಿಯುವ ಕುತೂಹಲ ವ್ಯಕ್ತಪಡಿಸಿದರು. ದರ್ಬಾರಿನ ಒಂದು ಬಾಗಿಲಿನಿಂದ ಇನ್ನೊಂದು ಬಾಗಿಲಿನ ತನಕ ಹಿಂದೆಂದೂ ಕಂಡಿರದಂತೆ ಬಹಳ ಸುಂದರ ರೀತಿಯಲ್ಲಿ ಸಿಂಗರಿಸಿದ್ದರು. ಬಾದಶಾಹನ ಅಪೇಕ್ಷೆಯ ಮೇರೆಗೆ ಯೂಸುಫ್ ಆದಿಲ್ ಖಾನ್ ತನ್ನ ಮಗಳನ್ನು ನಿಕಾಹ ಮಾಡಿಕೊಟ್ಟ. ವಧು ಬಹಳ ನಾಚಿಕೆಯ ಸ್ವಭಾವ ಹೊಂದಿ, ಉತ್ತಮ ನಡತೆಯ ಗುಣವಂತೆಯಾಗಿದ್ದಳು. ಹೀಗೆ, ಇದರಿಂದಾಗಿ ಇಬ್ಬರ ಸಂಬಂಧದ ಮೂಲಕ ಪರಸ್ಪರ ವಿಶ್ವಾಸ, ಹೆಚ್ಚು ಬೆಳೆದು ಮತ್ತಷ್ಟು ಮಜಬೂತಾಗಿ ಬೆಳೆಯಿತು. ಈ ಮದುವೆಯ ಕಾಲಾನಂತರದಲ್ಲಿ ಗಂಡು ಮಗು ಕೂಡ ಹುಟ್ಟಿದ. ಹಿರಿಯ ಮಗ ಸುಲ್ತಾನ್ ಅಲಾವುದ್ದೀನ್ ಆಗಿದ್ದ. ಮುಂದೆ ಅಲಾವುದ್ದೀನನಿಗೆ ಪಟ್ಟಾಭಿಷೇಕವಾಗಿ ಮುಂದಿನ ಪೀಳಿಗೆ ಸುಲ್ತಾನನಾದ. ಅವನ ಆಳ್ವಿಕೆ ಮುಂದೆ ಅತ್ಯಂತ ಪ್ರಮುಖ ಮತ್ತು ಪ್ರತಿಷ್ಠಿತವೆಂದು ಪರಿಗಣಿಸಲ್ಪಟ್ಟಿತು. ತನ್ನ ಜೀವಿತ ಕಾಲದಲ್ಲೇ ಸುಲ್ತಾನ್ ಮಹಮೂದ ತನ್ನ ಉಯಿಲು ಮಾಡಿ ಕೆಲಸಗಾರ, ನೌಕರರು, ಗುಲಾಮರಿಗೆ ನೀಡಬೇಕಾದ ಕೆಲಸ, ಸೊತ್ತುಗಳ ಬಗ್ಗೆ ಬರೆದಿಟ್ಟಿದ್ದ. ಯಾಕೆಂದರೆ ಅವರ ದರ್ಬಾರಿನಲ್ಲಿ ಕೆಲವರು ಮುಂದೆ ತಾವು ಸ್ವತಂತ್ರವಾಗಿ ಬದುಕುವ ಆಸೆಯನ್ನು ಇಟ್ಟುಕೊಂಡಿದ್ದರು.

ಆ ಕಾಲದಲ್ಲಿ ಬಾದಶಾಹರ ಘನತೆ ಆಳ್ವಿಕೆಯ ಪ್ರಸಿದ್ಧಿ ಎತ್ತರಕ್ಕೆ ಏರಿತು. ಅವರ ಈ ವೈಭವದ ಕುರುಹಾಗಿ ನಾಣ್ಯಗಳು ಕೂಡ ಜಾರಿಗೆ ಬಂದವು. ಹಿಜರಿ ವರ್ಷ ಸನ್ ೯೨೩ರಲ್ಲಿ ಸುಲ್ತಾನ್ ಮಹಮೂದ್ ಷಾ ನಿಧನರಾದರು. ಇವರು ಹೆಚ್ಚು ಕಮ್ಮಿ ೩೭ ವರ್ಷಗಳ ಕಾಲ ಆಳ್ವಿಕೆ ನಡೆಸಿದರು. ಇವರ ಆಳ್ವಿಕೆಯಲ್ಲಿ ರಾಜ್ಯದಲ್ಲಿ ಪ್ರಜೆಗಳು ಸುಖಸಂತೋಷದಲ್ಲಿ ಬಾಳಿದರು. ತನ್ನ ಆಳ್ವಿಕೆಯಲ್ಲಿ ಸತ್ಯ ನ್ಯಾಯವನ್ನು ಪರಿಪಾಲಿಸಿ ಯಾವುದೇ ಸಂಕಷ್ಟಗಳು ಎದುರಾಗದೆ ಶಾಂತಿಯುತವಾಗಿ ಕಳೆದರು. ನಂತರ ಸುಲ್ತಾನ್ ಅಹ್ಮದ್ ಒಂದು ವರ್ಷ ಏಳು ತಿಂಗಳ ಕಾಲ ಸಿಂಹಾಸನಾರೂಢನಾಗಿ ಆಳ್ವಿಕೆ ನಡೆಸಿ ನಂತರ ತೀರಿಕೊಂಡ.

**ಸುಲ್ತಾನ್ ಅಲಾವುದ್ದೀನ್ ಬಿನ್ ಮಹಮೂದ್ ಷಾ ಬಹಮನ್ ಆಳ್ವಿಕೆಯ ವಿವರಗಳು**

ಸುಲ್ತಾನ್ ಅಹ್ಮದ್ ನಿಧನರಾದ ನಂತರ ಯೂಸುಫ್ ಬೇಗ್ ಆದಿಲ್ ಖಾನರ ಮೊಮ್ಮಗ, ಮಹಮೂದ್ ಷಾ ಬಹಮನಿಯ ಮಗ ಸುಲ್ತಾನ್ ಅಲಾವುದ್ದೀನ್ ಸಿಂಹಾಸನವನ್ನೇರಿದ. ತನ್ನ ರಾಜ್ಯದಲ್ಲಿ ಬಾಕಿ ಉಳಿದಿದ್ದ ಆಡಳಿತದ ದೊಡ್ಡದೊಡ್ಡ

ಕೆಲಸಗಳನ್ನು ಕೈಗೆತ್ತಿಕೊಂಡ. ಈ ಕಾಲದಲ್ಲಿ ರಾಜ್ಯದ ಸರದಾರರು ದರ್ಬಾರಿಗಳ ಮಧ್ಯೆ ಆಡಳಿತದ ವಿಷಯದಲ್ಲಿ ವಾಗ್ವಾದಗಳು ಅತ್ಯಂತ ದೊಡ್ಡದಾಗಿ ಬೆಳೆಯಿತು. ಯೂಸುಫ್ ಆದಿಲ್ ಖಾನ್ ಇವನ್ನೆಲ್ಲವನ್ನೂ ಅಲ್ಲಾಹನ ಕೃಪೆಗೆ ಅರ್ಪಿಸಿ ಬಿಜಾಪುರದಲ್ಲಿದ್ದ ಖ್ವಾಜಾ ಜಹಾಂರ ವಶದಲ್ಲಿದ್ದ ಕೋಟೆಯ ಮೇಲ್ವಿಚಾರಣೆಯನ್ನು ನೋಡಿಕೊಳ್ಳಲು ಹೊರಟರು. ಇವರು ಅಲ್ಲಿಗೆ ಹೋಗಿ ೨೦ ದಿನಗಳ ಕಾಲ ತಂಗಿ ಅಲ್ಲಿನ ವಾತಾವರಣ ಮತ್ತು ಜನರ ಬಗ್ಗೆ ವಿಚಾರಣೆ ನಡೆಸಿ ತಿಳಿದುಕೊಂಡರು. ಈ ಹಿಂದೆ ಖ್ವಾಜಾ ಜಹಾಂರು ತನಗೆ ಕಷ್ಟಸಾಧ್ಯವಾದದ್ದು ಎಂದೆನಿಸಲ್ಪಟ್ಟದ್ದನ್ನು ಬೇರೆಯವರಿಗೆ ಒಪ್ಪಿಸಿ ಊರನ್ನು ತೊರೆದು ಮುನ್ನಡೆದಿದ್ದರು. ಖ್ವಾಜಾ ಜಹಾಂ ಬಿಜಾಪುರವನ್ನು ತೊರೆದು ಪರಂದಾ ಕೋಟೆಯ ಕಡೆ ನಡೆದರು. ಬಾದಶಾಹರ ದರ್ಬಾರಿಗಳು ಬಿಜಾಪುರಕ್ಕೆ ಆಗಮಿಸಿದಾಗ ಮಹಿಳೆಯರು, ಮಕ್ಕಳು ಎಲ್ಲರನ್ನೂ ಬಿಟ್ಟು, ಸಂಪತ್ತು ಸಾಮಾನುಗಳನ್ನು ಬಿಟ್ಟು ಖ್ವಾಜಾ ಜಹಾಂ ಊರನ್ನು ತೊರೆದುದನ್ನು ಕಂಡಿದ್ದರು. ಇವನ್ನೆಲ್ಲವನ್ನೂ ರಕ್ಷಿಸಿ ಬಹಳ ಜತನದಿಂದ ಸುರಕ್ಷಿತ ಸ್ಥಳಕ್ಕೆ ಕಳುಹಿಸಲಾಯಿತು. ಸೈನ್ಯ ನಿಂತಿದ್ದ ಸ್ಥಳಕ್ಕೆ ಪತೇಪುರ ಗ್ರಾಮವೆಂದು ಹೇಳಲಾಗಿತ್ತು. ಈಗಲೂ ಈ ಘಟನೆಯ ಕುರುಹು ಅಲ್ಲಿ ಕಾಣಸಿಗುತ್ತದೆ. ಇದಾದ ಕೆಲವೇ ದಿನಗಳಲ್ಲಿ ಅವರು ತೀರಿಕೊಂಡಿದ್ದರು. ಇವರು ಬಿಜಾಪುರವನ್ನು ೩೧ ವರ್ಷಗಳ ಕಾಲ ನೋಡಿಕೊಂಡಿದ್ದರು. ಇವರ ನಿಧನ ಹಿಜರಿ ವರ್ಷ ಸನ್ ೯೨೫ರಲ್ಲಿ ಎಂದು ಹೇಳಲಾಗುತ್ತದೆ.

■

*

# ಅಧ್ಯಾಯ–೪

## ಇಸ್ಮಾಯಿಲ್ ಆದಿಲ್ ಖಾನ್ ಸವಾಯಿಯವರ ಆಳ್ವಿಕೆಯ ಮತ್ತು ಬದುಕಿನ ಕೆಲವು ವಿವರಗಳು

ಇಸ್ಮಾಯಿಲ್ ಆದಿಲ್ ಖಾನ್ ಸಿಂಹಾಸನವನ್ನು ಏರಿ ಕೂತಾಗ ತನ್ನ ಅಳಿಯ ಅಲಾವುದ್ದೀನ್ ಬಹಮನಿಗೆ ಪಿತನ ಸ್ಥಾನದ ಆರೈಕೆಯನ್ನು ಒದಗಿಸಿದ್ದ. ಅವನನ್ನು ಬಹಳ ಪ್ರೀತಿಯಿಂದ ನೋಡಿಕೊಂಡಿದ್ದ. ಹೀಗೆ ಅಲಾವುದ್ದೀನ್ ಬಾದಶಾಹರ ಅತ್ಯಂತ ಪ್ರೀತಿಯ ನಿಕಟವರ್ತಿಯೆನಿಸಿದ್ದ. ಇದರಿಂದಾಗಿ ದರ್ಬಾರಿನ ಇತರ ಕೆಲವು ಪ್ರಮುಖರು ವಿದೇಶೀಯರ ಜೊತೆ ಸೇರಿ ಅವನ ಮೇಲೆ ಬಹಳ ಅಸೂಯೆಯಿಂದ ನೋಡುತ್ತಿದ್ದರು ಮಾತ್ರವಲ್ಲ ದ್ವೇಷಿಸುತ್ತಿದ್ದರು. ಅಲ್ಲಾವುದ್ದೀನ ದರ್ಬಾರಿನ ಆಡಳಿತ ಸಂಬಂಧಿ ವಿಷಯಗಳಲ್ಲಿ ಕೈಹಾಕುತ್ತಿದ್ದ. ಆಡಳಿತಾತ್ಮಕ ಸಂಗತಿಗಳ ಕೆಲಸಕಾರ್ಯಗಳಲ್ಲಿ ಸಹಾಯ ಮಾಡುತ್ತಿದ್ದ. ಆದರೆ ಬಾದಶಾಹರ ಕೆಲಸಕಾರ್ಯಗಳಲ್ಲಿ ಈ ದರ್ಬಾರಿಗಳು ಬಹಳ ತೊಂದರೆಕೊಡುತ್ತಿದ್ದರು. ಬಾದಶಾಹರು ಅಲಾವುದ್ದೀನನನ್ನು ಪ್ರೀತಿಯಿಂದ ನೋಡುತ್ತಿದ್ದಂತೆಯೇ ಅವನು ಕೂಡ ಪ್ರೀತಿಯಿಂದ ಅವರಿಗೆ ಆಡಳಿತದ ವ್ಯವಹಾರದಲ್ಲಿ ಸಹಾಯಮಾಡುತ್ತಿದ್ದ. ಅಸೂಯೆ ಪಡುತ್ತಿದ್ದ ದರ್ಬಾರಿನ ಪ್ರಮುಖರು ಇದನ್ನು ಇಷ್ಟಪಡುತ್ತಿರಲಿಲ್ಲ. ಬಾದಶಾಹ ಇಸ್ಮಾಯಿಲ್ ಆದಿಲ್ ಖಾನರಿಗೆ ದರ್ಬಾರಿಗಳ ಅಸೂಯೆ ಮತ್ತು ಅಲಾವುದ್ದೀನನ ವಿರುದ್ಧ ಪಿತೂರಿ ಷಡ್ಯಂತ್ರಗಳ ಬಗ್ಗೆ ತಿಳಿಯಿತು. ಇಸ್ಮಾಯಿಲ್ ಆದಿಲ್ ಖಾನರ ಆಡಳಿತ ಕಾರ್ಯಗಳಲ್ಲಿ ಅವನ ಪ್ರವೇಶವನ್ನು ವಿರೋಧಿಸುವ ಗುಂಪಿನ ಷಡ್ಯಂತ್ರಗಳನ್ನು ಕೊನೆಗಾಣಿಸುವ ಸಲುವಾಗಿ ಬೀದರ ನಗರದಿಂದ ಹೊರಬಂದು ಅವರ ವಿರುದ್ಧ ಯುದ್ಧ ಸಾರಿದರು. ಈ ವಿರೋಧಿಗಳಲ್ಲಿ ಓರ್ವ ನೀಚ ಪ್ರವೃತ್ತಿಯ ನೀಚ ಕುಲಕ್ಕೆ ಸೇರಿದ ಫತ್ಹುಲ್ಲಾ ಅಮಾದುಲ್ ಮುಲ್ಕ್

ಎಂಬಾತನಿದ್ದ. ಇವನು ಕೆಳಜಾತಿಯ ಹಿಂದುವಾಗಿ ಹುಟ್ಟಿದ್ದ. ಮುಂದೆ ಮುಸ್ಲಿಮನಾಗಿ ಮತಾಂತರ ಹೊಂದಿದ್ದ. ಕೆಲಸಮಯ ಈತ ದರ್ಬಾರಿನಲ್ಲಿ ಮಂತ್ರಿ ಮಂಡಳದಲ್ಲಿದ್ದ. ದಿಲ್ಜಾಪೂರ್, ಕಾವೇಲ್, ಬರ್ನಾಲತ್ ಮುಂತಾದ ಆಸುಪಾಸಿನ ಇಲಾಖೆ ಪ್ರದೇಶಗಳು ಅವನ ವಶದಲ್ಲಿತ್ತು. ಇವನು ಶ್ರೀಮಂತನಾಗಿದ್ದ. ಈತ ಅಹ್ಮದ್ ನಿಜಾಮುಲ್ ಮುಲ್ಕ್ ಎಂಬಾತ ತನ್ನನ್ನು ತಾನು ಬಹಮನಿ ವಂಶಜನೆಂದು ಹೇಳಿಕೊಂಡವನ ಜೊತೆಗೂಡಿದ್ದು ಸುಲ್ತಾನ್ ಅಲಾವುದ್ದೀನನ ವಿರುದ್ಧ ಪಿತೂರಿಯಲ್ಲಿ ಶಾಮೀಲಾಗಿದ್ದ. ಬಹಮನಿ ಸುಲ್ತಾನನ ಗುಲಾಮ ಸೇವಕಿಯ ಹೊಟ್ಟೆಯಲ್ಲಿ ಹುಟ್ಟಿದ ಬಾದಶಾಹನ ಮಗನೆಂದು ತನ್ನನ್ನು ತಾನು ಹೇಳಿಕೊಂಡು ತಾನು ಮುಂದೆ ಸಿಂಹಾಸನಕ್ಕೇರಲು ಅರ್ಹನೆಂದು ಹೇಳಿಕೊಂಡಿದ್ದ. ಇವನು ಅಮಾದುಲ್ ಮುಲ್ಕ್‌ನಿಗಿಂತಲೂ ಶ್ರೀಮಂತನಾಗಿದ್ದ. ಇವರಿಬ್ಬರೂ ಸೇರಿ ಬಂಡಾಯವೆದ್ದು ಇಸ್ಮಾಯಿಲ್ ಆದಿಲ್ ಖಾನನ್ನು ಹಾದಿಯಿಂದ ಕಿತ್ತು ಸುಲ್ತಾನ್ ಅಲಾವುದ್ದೀನನಿಗೆ ನೀಡಿದ ಮಹತ್ವವನ್ನು ಕೊನೆಗೊಳಿಸಬೇಕೆಂಬ ಬೇಡಿಕೆಯನ್ನು ಇಟ್ಟುಕೊಂಡಿದ್ದರು. ಇವರ ಜೊತೆ ಕಾಸಿಂ ಬರೀದ್ ಎಂಬಾತನೂ ಮೂರನೆಯವನಾಗಿ ಶಾಮೀಲಾಗಿದ್ದ.

ಸುಲ್ತಾನ್ ಅಲಾವುದ್ದೀನನಿಗೆ ಈ ಪಿತೂರಿಯ ಸುದ್ದಿ ತಲಪಿದಾಗ ಓರ್ವ ದೂತನನ್ನು ಕೂಡಲೇ ಕಳುಹಿಸಿ ಇಸ್ಮಾಯಿಲ್ ಆದಿಲ್ ಖಾನರಿಗೆ ಸುದ್ದಿ ಮುಟ್ಟಿಸಿದ. 'ಕೋಟೆಯಿಂದ ನಿಮ್ಮನ್ನು ಹೊರಹಾಕಲು ಪಿತೂರಿ ನಡೆಸುತ್ತಿದ್ದಾರೆ' ಎಂಬ ವರ್ತಮಾನವನ್ನು ದೂತನ ಮೂಲಕ ಕಳುಹಿಸಿದ್ದ. ಕೋಟೆಯಿಂದ ಹೊರಬರುವಾಗ ಮಲಿಕ್ ಖಾಸಿಂ ಬರೀದ್ ಕೋಟೆಯ ರಕ್ಷಕನಾಗಿ ಕಾರ್ಯನಿರ್ವಹಿಸುತ್ತಿದವನನ್ನು ಕಿತ್ತು ತೆಗೆದು ಅವನ ಸ್ಥಾನದಲ್ಲಿ ಷಾ ವಲಿಯುಲ್ಲಾನನ್ನು ನೇಮಿಸಿದ. ಇವನ ಸುಪರ್ದಿನಲ್ಲಿದ್ದ ಸಹಾಯಕರನ್ನು ಕಿತ್ತು ತೆಗೆದು ದೂರಮಾಡಲಾಯಿತು. ಇದರಿಂದಾಗಿ ಪಿತೂರಿ ನಿರತರ ತಂಡದ ಒಳಗೂ ಜಗಳ ಶುರುವಾಯಿತು. ಇಸ್ಮಾಯಿಲ್ ಆದಿಲ್ ಖಾನ್ ತನ್ನ ಅಳಿಯ ಅಲಾವುದ್ದೀನನಿಗೆ ರಾಜಕುಮಾರ ಪಟ್ಟವನ್ನು ಕೊಡುವುದನ್ನು ತಾತ್ಕಾಲಿಕವಾಗಿ ನಿಲ್ಲಿಸಿದ. ಅವನನ್ನು ಹಸನಾಬಾದ್ ಪ್ರದೇಶಕ್ಕೆ ಅವನಿಗೆ ಸವಲತ್ತುಗಳನ್ನು ನೀಡಿ ಕಳುಹಿಸಿಕೊಟ್ಟ. ಕೆಲವು ಸಮಯದ ತನಕ ಅಲಾವುದ್ದೀನನಿಗೆ ಈ ಸವಲತ್ತುಗಳು ಮುಂದುವರಿಯುವಂತಾಯಿತು. ಇಬ್ರಾಹಿಂ ಆದಿಲ್ ಖಾನ್ ತನ್ನ ತಂದೆಯ ಸಿಂಹಾಸನದಲ್ಲಿ ಕೂರುವ ತನಕವೂ ಅಲಾವುದ್ದೀನ ಹಸನಾಬಾದಿನಲ್ಲೇ ಇದ್ದ. ನಂತರ ಒಂದು ಸೈನ್ಯದೊಂದಿಗೆ ಗುಜರಾತಿನ ಕಡೆ ಪ್ರಯಾಣ ಬೆಳೆಸಿದ. ಅಲ್ಲಿ ಸುಲ್ತಾನ ಬಹದ್ದೂರ್ ಕಜಡಾ ತೀರಿಕೊಂಡಿದ್ದ. ಅಲಾವುದ್ದೀನ ಅಲ್ಲಿ ತಲಪಿ ಸುಲ್ತಾನ ಬಹದ್ದೂರ್ ಕಜಡಾನ ಗುಜರಾತಿನ ಇಲಾಖೆಯ ಆಳ್ವಿಕೆಯ ಜವಾಬ್ದಾರಿಯನ್ನು ಹೊತ್ತುಕೊಂಡ.

## ಸರದಾರ ಕಮಾಲ್ ಖಾನ ದುರ್ರಾಬ್ ಜುಡ್ಡಿಯ ಚರಿತ್ರೆ

ಇಸ್ಮಾಯಿಲ್ ಆದಿಲ್ ಖಾನ್ ತನ್ನ ತಂದೆಯ ಸಿಂಹಾಸನವನ್ನು ಏರಿ ಕೂತಾಗ ಅವನ ಸಹೋದರ ಮಿಯಾ ಅಲಿ ಸಂಧಾನ ಮಾಡಿಕೊಂಡು ಕೋದಾ ದ್ವೀಪಕ್ಕೆ ತೆರಳಿದರು. ಅಲ್ಲಿ ತನ್ನ ಬಾಕಿ ಜೀವಿತ ಕಾಲವನ್ನು ಸಂಕಷ್ಟಗಳನ್ನು ಎದುರಿಸಿ ಕಳೆದರು. ಅವರ ಕುಟುಂಬ, ವಂಶಸ್ಥರು ಇಂದು ಕೂಡ ಆ ದ್ವೀಪದಲ್ಲಿ [illegible]ಸಿದ್ದಾರೆಂದು ಹೇಳುತ್ತಾರೆ. ಕಮಾಲ್ ಖಾನ್ ದುರ್ರಾಬ್ ಜುಡ್ಡಿ ಪ್ರಮುಖ ಸರದಾರನ ಸ್ಥಾನದಲ್ಲಿ ಕೂತ. ಎಲ್ಲ ಹಿರಿಯ ಕಿರಿಯ ಸ್ಥಾನ ತನ್ನ ಕೈಯಲ್ಲಿರಿಸಿಕೊಂಡ. ಎಲ್ಲಿಯವರೆಗೆಂದರೆ ಇಸ್ಮಾಯಿಲ್ ಆದಿಲ್ ಖಾನ್ ಅವನ ಸಲಹೆ ಸಹಕಾರ ಸಹಾಯಗಳಿಲ್ಲದೆ ಏನೂ ಮಾಡುವಹಾಗಿರಲಿಲ್ಲ. ಆಳ್ವಿಕೆಗೆ ಸಂಬಂಧಿಸಿದ ತೀರ್ಮಾನಗಳನ್ನು ಅವನೇ ಕೈಗೊಳ್ಳುತ್ತಿದ್ದ.

ಇಸ್ಮಾಯಿಲ್ ಆದಿಲ್ ಖಾನ್ ಈ ರೀತಿ ಕಮಾಲ್ ಖಾನನ ಹತೋಟಿಯಿಂದ ಬೇಸತ್ತುಕೊಂಡಿದ್ದ. ಅವನು ಹಾಕುತ್ತಿದ್ದ ನಿರ್ಬಂಧಗಳನ್ನು ಸಹಿಸಿಕೊಳ್ಳುವುದು ಸಾಧ್ಯವಾಗುತ್ತಿರಲಿಲ್ಲ. ಇವನನ್ನು ಸ್ಥಾನದಿಂದ ಕಿತ್ತು ಹಾಕುವ ಬಗೆಯ ಬಗ್ಗೆ ಯೋಜನೆಯನ್ನು ಹಾಕಿಕೊಂಡಿದ್ದ. ಇದಕ್ಕೆ ಸರಿಯಾದ ಅವಕಾಶಕ್ಕಾಗಿ ಕಾಯುತ್ತಿದ್ದ. ಒಂದು ದಿನ ತುರ್ಕಿ ಗುಲಾಮನೊಬ್ಬ ಕಮಾಲ್ ಖಾನನ ಕೋಣೆಯಿಂದ ಬರುತ್ತಿರುವುದು ಕಂಡು ಅವನಿಗೆ ತನ್ನ ವ್ಯಥೆಯನ್ನು ಸುಲ್ತಾನ ಹೇಳಿಕೊಂಡು ಅದನ್ನು ಸರದಾರನಿಗೆ ತಲಪಿಸುವಂತೆ ಹೇಳಿದ. ನನಗೆ ನನ್ನ ಸುಲ್ತಾನ ಗಾದಿಯ ಹಕ್ಕುಗಳು ಸ್ಥಾಪಿಸಲಾಗದಿದ್ದರೆ ಅವನನ್ನು ಕೊಂದು ಹಾಕುತ್ತೇನೆಂದೂ ಹೇಳಿದ. ಹೀಗೆ ಒಂದು ಪತ್ರ ಬರೆದು ಈ ತುರ್ಕಿಯ ಗುಲಾಮನನ್ನು ಕಮಾಲ ಖಾನನ ಮನೆಗೆ ಈ ಸಂದೇಶದೊಂದಿಗೆ ರವಾನಿಸಿದ. ಈ ಪತ್ರ ತಲಪಿದಕ್ಕೆ ಅವನ ಸ್ವೀಕೃತಿ ಮೊಹರು ಕೊಡತಕ್ಕದ್ದೆಂದು ಹೇಳುವಂತೆ ಆಗ್ರಹಿಸಬೇಕೆಂದು ತಿಳಿಸಿದ್ದ. ಕಮಾಲ್ ಖಾನ್ ತುರ್ಕಿ ಗುಲಾಮನೊಂದಿಗೆ ಕಳುಹಿಸಲಾದ ಇಸ್ಮಾಯಿಲ್ ಆದಿಲ್ ಖಾನನ ಪತ್ರವನ್ನು ತೆಗೆದುಕೊಂಡ. ಗುಲಾಮ ಮೊಹರು ಹಾಕಿ ಸ್ವೀಕೃತಿಯ ಉತ್ತರವನ್ನು ಅಪೇಕ್ಷಿಸಿದ. ಕಮಾಲ್ ಖಾನ್ ಕೂತು ಸ್ವೀಕೃತಿಯ ಚಿಹ್ನೆಯಾಗಿ ಮೊಹರನ್ನು ಕಾಗದದ ಮೇಲೆ ಹಾಕಲು ಕೂತಾಗ ಫಕ್ಕನೆ ತುರ್ಕಿ ಗುಲಾಮ ತನ್ನ ಸೊಂಟದಲ್ಲಿದ್ದ ಹರಿತವಾದ ಚಾಕುವನ್ನು ಎತ್ತಿ ಜೋರಾಗಿ ಹೊಟ್ಟೆಗೆ ತಿವಿದ. ಹೀಗೆ ತಿವಿದು ಗುಲಾಮ ಅಲ್ಲಿಂದ ಓಡಿಹೋದ. ಕಮಾಲ್ ಖಾನನ ತಾಯಿ ಇದನ್ನು ಕಂಡು ಗಟ್ಟಿಯಾಗಿ ಚೀರಿ ಕೂಗುತ್ತ ಅವನನ್ನು ಹಿಂದಿನಿಂದ ಬಳಸಿ ಕೈಹಿಡಿದು ಹೊರಗೆ ಅಂಗಳಕ್ಕೆ ಕರೆತಂದು ನೆಲದ ಮೇಲೆ ಮಲಗಿಸಿದಳು. ಅವನ ದೇಹವನ್ನು ಅಲುಗಾಡಿಸಿದಳು, ಒಬ್ಬ ಸೇವಕನನ್ನು ಕರೆದು ಆ ಕೊಲೆಗಡುಕನನ್ನು ಬೆನ್ನು ಹತ್ತಿ ಹಿಡಿದು ಕೊಂದು ಹಾಕೆಂದು ಕೂಗಿ ಹೇಳುತ್ತಾಳೆ. ಹೀಗೆ ಕಮಾಲ್ ಖಾನನ ಅಂಗರಕ್ಷಕರು ಇಸ್ಮಾಯಿಲ್ ಆದಿಲ್ ಖಾನರ

ಸೈನಿಕರೊಂದಿಗೆ ಯುದ್ಧ ಶುರುಮಾಡಿದರು. ಈ ಸಂದರ್ಭದಲ್ಲಿ ಇಸ್ಮಾಯಿಲ್ ಆದಿಲ್ ಖಾನ್ ತನ್ನ ಶಾಹಿ ತಲ್ವಾರನ್ನು ಅಡಗಿಸಿಟ್ಟುಕೊಂಡು ಯುದ್ಧ ನಡೆಯುವಲ್ಲಿಗೆ ಪ್ರವೇಶಿಸಿದ. ಇಸ್ಮಾಯಿಲ್ ಖಾನರ ಸೈನ್ಯ ತುಂಬ ಶಕ್ತಿಶಾಲಿಯಾಗಿತ್ತು. ಕಮಾಲ್ ಖಾನರ ಸೈನಿಕರು ಚೆಲ್ಲಾಪಿಲ್ಲಿಯಾಗುವಂತೆ ಓಡಿಸಿದರು. ನಂತರ ಕಮಾಲ್ ಖಾನ್ ಆಗಲೇ ತೀರಿಕೊಂಡಿರುವುದು ಕಂಡುಬಂತು. ಇದರ ನಂತರ ಇಸ್ಮಾಯಿಲ್ ಆದಿಲ್ ಖಾನ್, ಕಮಾಲ್ ಖಾನನ ಹೆಂಡತಿ ಮಕ್ಕಳು ಕುಟುಂಬದವರನ್ನು ಸಮಾಧಾನಪಡಿಸಿ ಅವರಿಗೆ ಬೇಕಾದ ಸಕಲ ಸವಲತ್ತುಗಳನ್ನು ನೀಡಿ ಆಶ್ರಯ ನೀಡಿದ. ಬಳಿಕ ತನ್ನ ಎಂದಿನ ರಾಜ್ಯಾಡಳಿತದ ಕಲಾಪಗಳಲ್ಲಿ ತೊಡಗಿಸಿಕೊಂಡ.

**ಮುಹಮ್ಮದಾಬಾದ್ ಅಥವಾ ಬೀದರ್ ರಾಜ್ಯದ ಮೇಲಿನ ದಾಳಿಯ ವಿವರಗಳು**

ಖಾಸಿಂ ಬರೀದ್ ಬಹಳ ಬಲಶಾಲಿಯಾಗಿದ್ದನೆಂದು ಪ್ರಸಿದ್ಧನಾಗಿದ್ದ. ಅವನು ಸೈನಿಕರು ಮತ್ತು ಯೋಧರ ತರಬೇತಿಯಲ್ಲಿ ನಿಷ್ಣಾತನಾಗಿದ್ದ. ಅವನು ತನ್ನ ಯೋಚನೆಯಂತೆ ಷಾ ವಲಿಯುಲ್ಲಾರ ನಂತರ ಷಾ ಖಲೀಲುಲ್ಲಾ ಬಹಮನಿಯನ್ನು ಸಿಂಹಾಸನದಲ್ಲಿ ಸ್ಥಾಪಿಸಲು ಸಹಾಯಮಾಡಿದ್ದ. ಆದರೆ ಅವನಿಗೆ ಯಾವ ತರದ ಅಧಿಕಾರವನ್ನು ನೀಡದೆ ಬರೇ ನಾಮ್‌ಕಾವಾಸ್ತೇ ಸಿಂಹಾಸನದಲ್ಲಿ ಕೂರಿಸಿದ್ದ. ಇಸ್ಮಾಯಿಲ್ ಆದಿಲ್ ಖಾನ್, ತನ್ನ ಮಿತ್ರರಾದ ನಿಜಾಮುಲ್ ಮುಲ್ಕ್ ಮತ್ತು ಇಮಾದುಲ್ ಮುಲ್ಕ್‌ರನ್ನು ಸೇರಿಸಿ ಸೈನ್ಯವನ್ನು ಬೀದರ್ ಪಟ್ಟಣಕ್ಕೆ ಕಳುಹಿಸಿದ. ಅಲ್ಲಿ ಏಳು ತಿಂಗಳ ಕಾಲ ಪಟ್ಟಣದಲ್ಲಿ ಮುತ್ತಿಗೆ ಹಾಕಿದ್ದ. ಮಲಿಕ್ ಬರೀದ್, ಐನುಲ್ ಮುಲ್ಕ್‌ನೊಂದಿಗೆ ಸೇರಿ ಒಂದು ಬೃಹತ್ ಸೈನ್ಯವನ್ನು ತಯಾರಿಸಿ ಅವರ ಕಡೆ ಕಳುಹಿಸಿದ. ಪರಿಸ್ಥಿತಿ ಬಿಗಡಾಯಿಸಿದಾಗ ಐನುಲ್ ಮುಲ್ಕ್ ಪರಸ್ಪರ ಸಂಧಾನದ ಮಾತನ್ನು ಮುಂದಿಟ್ಟ. ಮಲಿಕ್ ಬರೀದ್ ಇದಕ್ಕೆ ಒಪ್ಪಲಿಲ್ಲ. ಇದರಿಂದ ಐನುಲ್ ಮುಲ್ಕ್, ಯಾರಿಗೂ ಹೇಳದೆ ಕೇಳದೆ ತನ್ನ ರಾಜ್ಯಕ್ಕೆ ಹೊರಟುಬಿಟ್ಟ.

ಅಮೀರ್ ಬರೀದನಿಗೆ ಈ ವಿಷಯ ತಿಳಿದಾಗ ಅವರ ಮಧ್ಯೆ ಸಂಧಾನ ಮಾಡಲಿಕ್ಕಾಗಿ ಅಲ್ಲಿಗೆ ಬರುತ್ತಾನೆ. ಅವರ ಕೋಟೆಯ ಬಳಿ ಸೈನ್ಯ ಜಮಾಯಿಸಲಾದದ್ದು ಕಂಡು ಬೀದರ್ ನಗರಕ್ಕೆ ಸೈನ್ಯ ಕಳುಹಿಸುವ ಬಗ್ಗೆ ಯೋಚಿಸಿದ. ನಿಜಾಮುಲ್ ಮುಲ್ಕ್ ಮತ್ತು ಇಮಾದುಲ್ ಮುಲ್ಕ್ ಇದನ್ನು ಕಂಡು ತಮ್ಮ ರಾಜ್ಯದ ಕಡೆ ಹೋದರು. ಇಸ್ಮಾಯಿಲ್ ಆದಿಲ್ ಖಾನರಿಗೆ ಮುಲ್ಕ್ ಬರೀದ್ ತನ್ನ ರಾಜ್ಯಕ್ಕೆ ಹಿಂತಿರುಗಿದ್ದು ಕಂಡು ಬೀದರ್ ನಗರಕ್ಕೆ ಮುತ್ತಿಗೆ ಹಾಕುವ ಯೋಜನೆ ತಯಾರಿಸಿದ. ಆದರೆ ಈ ಕೆಲಸ ಬಹಳ ಕಷ್ಟಸಾಧ್ಯವಾದದ್ದು ಎಂದು ಅವನಿಗೆ ಅನಿಸಿತು. ಸಗರ್‌ನಲ್ಲಿ ವಾಸಿಸಿರುವ ವೆಂಕಟೇಸಲು ಎಂಬ ದರೋಡೆ ಕೋರನನ್ನು ದರ್ಬಾರಿಗೆ ಕರೆಸಿದರು.

ಅವನು ಸುಲ್ತಾನನಿಗೆ 'ನಿಮ್ಮ ಅಪ್ಪಣೆಯಿದ್ದರೆ ಮುಲ್ಕ್ ಬರೀದನನ್ನು ಹಿಡಿದು ತರುತ್ತೇನೆ' ಎಂದು ಆಶ್ವಾಸನೆ ನೀಡಿದ. ದರ್ಬಾರಿಗಳು ಈ ಮಾತು ಕೇಳಿ 'ನೀನು ನೀಡುವ ಮಾತಿನಂತೆ ನಡೆದರೆ, ನಿನಗೆ ದೊಡ್ಡ ಸರದಾರನ ಸ್ಥಾನವನ್ನು ನೀಡಿ ಗೌರವಿಸುತ್ತೇವೆ' ಎಂದರು. ವೆಂಕಟೇಸಲು ಹಿರಿಯ ಸೂಫಿ ಖಲಂದರರನ ವೇಷ ಧರಿಸಿ ಮಲಿಕ್ ಬರೀದನ ಆಸ್ಥಾನಕ್ಕೆ ಹೋಗಲನುವಾದ. ಆಗ ಮಲೀಕ್ ಬರೀದ್ ಉದಯಗಿರಿ ಕೋಟೆಯ ಹೊರಗೆ ಬೀದರ್ ಪಟ್ಟಣಕ್ಕೆ ಕಳುಹಿಸುವ ಸಲುವಾಗಿ ಸೈನ್ಯವನ್ನು ಜಮಾಯಿಸುವ ಕೆಲಸದಲ್ಲಿ ಮಗ್ನನಾಗಿದ್ದ. ವೆಂಕಟೇಸಲು ಅವನಿಗೆ ಒಂದು ವಸ್ತುವನ್ನು ನೀಡಿ ಮುಂದಕ್ಕೆ ಹೋದ. ಮಲೀಕ್ ಬರೀದ್ ಆ ವಸ್ತುವನ್ನು ನೋಡಿ ಕೆಂಡಾಮಂಡಲವಾದ. ಕೂಡಲೇ ಅವನ ಬೆನ್ನು ಹತ್ತಿದ. ಮಲೀಕ್ ಬರೀದನ ನಿಕಟವರ್ತಿಗಳು ಅವನು ಒಮ್ಮಿಂದೊಮ್ಮೆಗೇ ಅವರನ್ನು ಬಿಟ್ಟು ಹೋದದ್ದು ಕಂಡು ಚಕಿತರಾಗಿದ್ದರು. ಮಲೀಕ್ ಬರೀದ್ ಸ್ವಲ್ಪ ದೂರದತನಕ ಹೋಗಿ ಸುರಪುರ ಹಳ್ಳಿಯ ಪಂಚಾಯತಿಯ ಹೊರಗೆ ನಿಂತಿದ್ದ. ವೆಂಕಟೇಸಲು ಇದಕ್ಕಿಂತ ಸ್ವಲ್ಪ ಮುಂಚೆಯೇ ಅಲ್ಲಿ ತಲಪಿ ಮಲಿಕ್ ಬರೀದ್ ಬರುವುದನ್ನು ಕಾಯುತ್ತಿದ್ದ. ಅಲ್ಲಿ ಮಲೀಕ್ ಬರೀದನ ಮೇಲೆ ಎಗರಿ ಬಂಧಿಸಿ ವೆಂಕಟೇಸುಲು ಪಂಚಾಯತಿಯ ಮುಂದೆ ತಂದು ನಿಲ್ಲಿಸಿದ. ಅಲ್ಲಿ ಒಂದು ಆಸನದಲ್ಲಿ ಕುಳ್ಳಿರಿಸಿದ. ಮಲಿಕ್ ಬರೀದನ ಜೊತೆಗಾರರನ್ನು ಸುರಪುರ ಹಳ್ಳಿಯ ಹೊರಗಿಂದ ಹೊರಗೆ ಲೂಟಿ ಮಾಡಿ ಓಡಿಸಿಬಿಟ್ಟ. ಮಲಿಕ್ ಬರೀದ್ ನೀರು ಕುಡಿಯಲು ನೋಡಿದರೆ ನೀರು ತರಲು ಯಾರೂ ಇರಲಿಲ್ಲ. ಅಲ್ಲಿದ್ದ ಚೌಕಿದಾರನನ್ನು ವಿಚಾರಿಸಿದಾಗ ಜೊತೆಗಾರರನ್ನು ಲೂಟಿ ಮಾಡಿ ಓಡಿಸಿದ್ದ ಸಂಗತಿಯನ್ನು ತಿಳಿಸಿದ.

ಮಲಿಕ್ ಬರೀದ್ ದಿಗ್ಭ್ರಾಂತನಾದ ಮತ್ತು ನನ್ನಿಂದಾಗಿಯೇ ಇದೆಲ್ಲ ಆಗಿ ಹೋಯಿತು ಎಂದು ಚಿಂತೆಯಲ್ಲಿ ಮುಳುಗಿದ. ಪರಿಸ್ಥಿತಿ ತನ್ನ ಹಿಡಿತ ತಪ್ಪಿತೆಂದು ಬಹಳ ನಾಚಿಕೊಂಡ. ಸುರಪುರದಲ್ಲಿ ಮಲಿಕ್ ಬರೀದನ ವಿರೋಧಿಗಳಲ್ಲಿ ಕೆಲವುಜನರ ತಂಡ ಗುಲ್ಲೆಬ್ಬಿಸಿದರು. ಒಂದು ತಂಡವನ್ನು ತಮ್ಮ ಪ್ರತಿನಿಧಿಯಾಗಿ ಸ್ಥಳೀಯ ಹತ್ತು ಸಮಸ್ತರ ಪಂಚಾಯತಿಗೆ ಕಳುಹಿಸಿ ಅಹವಾಲನ್ನು ಹೇಳಿದರು, "ಮಲಿಕ್ ಬರೀದ್ ತಾನು ಬದುಕಿರಲು ಬಯಸಿದರೆ ಬೀದರ್ ಕೋಟೆಯನ್ನು ತಮ್ಮ ವಶಕ್ಕೆ ಒಪ್ಪಿಸ ಬೇಕು. ಇದಕ್ಕೆ ತಪ್ಪಿದರೆ ತನ್ನ ಪ್ರಾಣವನ್ನು ಕಳೆದುಕೊಳ್ಳುತ್ತಾನೆ". ಆ ಕಾಲದಲ್ಲಿ ಬದುಕಿದ್ದ ಅಮೀರ್ ಬರೀದನ ತಾಯಿಗೆ ಈ ಸಂಗತಿ ತಿಳಿದಾಗ ಕೂಡಲೇ ಕೋಟೆಯನ್ನು ಒಪ್ಪಿಸಿಬಿಡಲು ಸಲಹೆ ನೀಡಿದಳು. ತನ್ನ ತಾಯಿಯ ಇಚ್ಛೆಯಂತೆ ಕೋಟೆಯನ್ನು ಅಮೀರ್ ಬರೀದ್ ಪಂಚಾಯತಿಯವರಿಗೆ ಒಪ್ಪಿಸಿದ. ಹೀಗೆ ಮಲಿಕ್ ಬರೀದನ ಅಹವಾಲು ಕೋಟೆಯ ಒಳಗೆ ತಲಪಿತು. ಹೀಗೆ ಅನೇಕಬಾರಿ ಆಗಾಗ ಪರಸ್ಪರ

ದ್ವೇಷ ಇರುತ್ತಿತ್ತು. ಮಲಿಕ್ ಬರೀದ್ ಇದರಿಂದ ತುಂಬ ಖಿನ್ನನಾಗಿರುತ್ತಿದ್ದ. ಅವನ ಜೊತೆಗಾರರು ಅವನ ಮನಸ್ಸನ್ನು ಹಗುರಾಗಿಸಲು ಮನಸ್ಸನ್ನು ಪ್ರಫುಲ್ಲಗೊಳಿಸಲು ಪ್ರಯತ್ನಿಸುತ್ತಿದ್ದರು. ತನಗೆ ರಾಯಚೂರು ಮತ್ತು ಮುದಗಲ್ ಕೋಟೆಗಳನ್ನು ವಶಪಡಿಸಿಕೊಳ್ಳಬೇಕೆಂಬ ಆಸೆಯಿದೆ, ನೀವು ಬೇಕಿದ್ದರೆ ಬೀದರ್ ಕೋಟೆಯನ್ನು ಇಟ್ಟುಕೊಳ್ಳಿ ಎಂದು ಅವನು ಆಗಾಗ ಹೇಳುತ್ತಿದ್ದ. ಹೀಗೆ ಈ ವಿಷಯದಲ್ಲಿ ಎರಡು ಬಣಗಳ ನಡುವೆ ಕರಾರು ಕೂಡ ಆಗಿತ್ತು. ವಸ್ತುಸ್ಥಿತಿ ಹೀಗಿದ್ದರೂ ಈ ಕೋಟೆಗಳ ಮೇಲೆ ದಾಳಿಯಿಟ್ಟು ಸೈನಿಕ ಕಾರ್ಯಾಚರಣೆ ಕೈಗೊಂಡರು. ಈ ಯುದ್ಧದಲ್ಲಿ ಇವರು ಜಯಶಾಲಿಗಳಾಗಿದ್ದರು. ಈ ಸಂದರ್ಭದಲ್ಲಿ ಮಲಿಕ್ ಬರೀದ್ ಅದರಲ್ಲಿ ಭಾಗವಹಿಸಿರದಿದ್ದರೂ ಅವನ ಜೊತೆಗಾರರ ಶೌರ್ಯದಿಂದಾಗಿ ಈ ಪ್ರಚಂಡ ವಿಜಯ ಪ್ರಾಪ್ತಿಯಾಗಿತ್ತು. ಇಸ್ಲಾಮೀ ಸೈನ್ಯದ ಧ್ವಜ ಎತ್ತರದಲ್ಲಿ ಹಾರಾಡಿತು. ವಿರೋಧಿಗಳ ಧ್ವಜ ನೆಲಕಚ್ಚಿತು. ಕೋಟೆಯ ಸಾಮಾನ್ಯ ಜನರು ತೊಂದರೆಗೊಳಗಾಗಿ ಮಧ್ಯರಾತ್ರಿಯಲ್ಲಿ ಭಯದಿಂದ ನಡುಗುತ್ತಾ ಕೋಟೆಯ ಹೊರಗೆ ಚೆಲ್ಲಾಪಿಲ್ಲಿಯಾಗಿ ಓಡಿಹೋದರು.

ಹೀಗೆ ಮುದ್ಗಲ್ ಕೋಟೆ ಇಸ್ಲಾಮಿ ರಾಜರ ವಶಕ್ಕೆ ಬಂತು. ಅದರೊಳಗಿದ್ದ ಸಾಮಾನು ಸರಂಜಾಮುಗಳು, ಯುದ್ಧಸಾಮಾಗ್ರಿಗಳು, ಸಂಪತ್ತನ್ನು ಇಸ್ಲಾಮಿ ಸೈನಿಕರು ಬಾದಶಾಹರ ವಶಕ್ಕೆ ಒಪ್ಪಿಸಿದರು. ಬಾದಶಾಹ ಇದರಿಂದ ಅತ್ಯಂತ ಸಂತಸಗೊಂಡ. ತನ್ನ ವಿಶ್ವಾಸಾರ್ಹ ಮಂತ್ರಿಯೋರ್ವನಿಗೆ ಈ ಕೋಟೆಯನ್ನು ಒಪ್ಪಿಸಿ, ಮುಂದೆ ತನ್ನ ಸೈನ್ಯವನ್ನು ಸೇರಿಕೊಂಡು ರಾಯಚೂರಿನತ್ತ ಪ್ರಯಾಣ ಬೆಳೆಸಿದ.

ರಾಯಚೂರಿನ ಕೋಟೆಗೆ ಸೇನೆ ಮುತ್ತಿಗೆ ಹಾಕಿದಾಗ ಇಲ್ಲಿನ ಜನಗಳು ತಮಗೆ ಯಾರೂ ಸಹಾಯ ಮಾಡುವವರಿಲ್ಲ ಬಾದಶಾಹನನ್ನು ಎದುರಿಸುವ ತಾಕತ್ತಾಗಲಿ, ಸಾಕಷ್ಟು ಸೈನಿಕರಾಗಿ ಇದ್ದಿರಲಿಲ್ಲ. ತನ್ನ ಜೀವ, ಸಂಪತ್ತನ್ನು ಉಳಿಸಿಕೊಳ್ಳುವ ಉದ್ದೇಶದಿಂದ ಕೋಟೆಯ ಮುಖ್ಯ ದ್ವಾರದ ಕೀಲಿ ಕೈಯನ್ನು ಪಂಚಾಯತಿಗೆ ಒಪ್ಪಿಸಿದರು. ಹೀಗೆ ಈ ಕೋಟೆ ಯಾವುದೇ ಯುದ್ಧ ರಕ್ತಪಾತವಿಲ್ಲದೆ ಇವರ ವಶಕ್ಕೆ ಬಂತು. ಕೋಟೆಯ ಜನರಿಗೆ ಹಲವು ವಿಧದಲ್ಲಿ ರಿಯಾಯತಿ ತೋರಿದರು. ಈ ಜನಗಳ ಮೂಲಭೂತ ಮತ್ತು ಇತರ ಅವಶ್ಯಕತೆಗಳನ್ನು ಪೂರೈಸಿ ಸೈನ್ಯದೊಂದಿಗೆ ಬಿಜಾಪುರದತ್ತ ಪ್ರಯಾಣ ಬೆಳೆಸಿದರು. ಅರಮನೆ ತಲಪಿದ ನಂತರ ಅಮೀರ್ ಬರೀದನಿಗೆ ಬಾದಶಾಹ ಕುದುರೆ, ಆನೆ, ಬೆಲೆಬಾಳುವ ವಸ್ತ್ರ ಆಭರಣಗಳನ್ನು ಉಡುಗೊರೆ ನೀಡಿದ. ತನ್ನ ವಿಶ್ವಾಸಾರ್ಹ ಮಂತ್ರಿಯೊಬ್ಬನನ್ನು ಗೌರವಪೂರ್ವಕ ಜೊತೆ ಸೇರಿಸಿ ಅಮೀರ್ ಬರೀದನನ್ನು ಬೀದರಕ್ಕೆ ಕಳುಹಿಸಿಕೊಟ್ಟರು. ಮಲಿಕ್ ಬರೀದ್ ಬಹಳಕಾಲದ ತನಕ ಸಂತೋಷದಿಂದ ಕಾಲ ಕಳೆದ. ಈ ಉಪಕಾರಕ್ಕೆ ಪ್ರತಿಯಾಗಿ ಬಾದಶಾಹರಿಗೆ ನಿಷ್ಠಾವಂತನಾಗಿ ಕಾರ್ಯನಿರ್ವಹಿಸಿದ. ದರ್ಬಾರಿಗಳು ಮತ್ತು ಪಂಚಾಯತಿಯೂ ಕೂಡ ಅಮೀರ್

ಬರೀದನಿಂದ ಪಡೆದ ಸಹಕಾರ, ಉಪಕಾರಗಳಿಗೆ ಕೃತಜ್ಞತೆಯನ್ನು ವ್ಯಕ್ತಪಡಿಸಿತು. ಮುಂದೆ ಅವರ ಮಧ್ಯೆ ಪ್ರೀತಿ ವಿಶ್ವಾಸಗಳು ನೆಲೆನಿಂತವು. ಮಲೀಕ್ ಬರೀದ ಕೂಡ ತನ್ನ ಈ ವಿಶ್ವಾಸಪೂರ್ಣ ನಡವಳಿಕೆಯನ್ನು ಕೊನೆಯ ತನಕವೂ ಖಾಯಮ್ಮಾಗಿ ಉಳಿಸಿಕೊಂಡ. ಇಸ್ಮಾಯಿಲ್ ಆದಿಲ್ ಖಾನರು ದರ್ಬಾರಿನಲ್ಲಿ ರಾಯಚೂರಿನ ಕೋಟೆಯನ್ನು ವಶಪಡಿಸಿಕೊಂಡು ಜಯಶೀಲರಾದ ನಂತರ ಸಂತೋಷದಿಂದ ಆಡಳಿತ ನಡೆಸಿದರು. ಕೋಟೆಯ ಆಡಳಿತವನ್ನು ನೋಡಿಕೊಳ್ಳುತ್ತಿದ್ದ ಅವರ ಪ್ರತಿನಿಧಿಯೂ ಕೂಡ ಸುಖ ಸಂತೋಷದಿಂದ ತನ್ನ ಜವಾಬ್ದಾರಿಯುತ ಕಾರ್ಯವನ್ನು ಕೊನೆಯ ತನಕವೂ ಯಾವುದೇ ಆತಂಕವಿಲ್ಲದೆ ನಿರ್ವಹಿಸಿದ.

## ಇಸ್ಮಾಯಿಲ್ ಆದಿಲ್ ಖಾನರ ಸಹಾಯಕನ ಬಗ್ಗೆ ಮತ್ತು ಅವನ ಅಂತ್ಯದ ವಿವರಗಳು

ಜೀವನ ಸಂತೋಷದಿಂದ ಕಳೆಯುತ್ತಿತ್ತು. ರಾಜ್ಯಗಳನ್ನು ವಶಪಡಿಸಿಕೊಳ್ಳುವ ಆಸೆ ಮತ್ತು ಇಸ್ಲಾಮ್ ಧರ್ಮವನ್ನು ಸಶಕ್ತಗೊಳಿಸುವ, ಅಭಿವೃದ್ಧಿ ಪಡಿಸುವ ಉದ್ದೇಶದಿಂದ ಹೊರದೇಶಗಳಿಂದ ಸೈನಿಕರನ್ನು ತರಿಸಿ ಶಾಹಿ ಸೈನ್ಯವನ್ನು ಸಜ್ಜುಗೊಳಿಸಿ ತೆಲಂಗಾಣದ ಕಡೆ ಪ್ರಯಾಣ ಬೆಳೆಸಿದ. ಆ ಕಾಲದಲ್ಲಿ ನಾಲ್ಕೂ ದಿಕ್ಕಿನಲ್ಲಿನ ಹೆಚ್ಚಿನ ಕೋಟೆಗಳು ಹಿಂದೂ ರಾಜರ ವಶದಲ್ಲಿತ್ತು. ಈ ರಾಜರು ಪರಸ್ಪರಲ್ಲಿ ಲೂಟಿ, ಯುದ್ಧ ಮಾಡುತ್ತಿದ್ದರು. ಒಂದು ಕೋಟೆಯನ್ನು ಹಿಂದೂ ರಾಜರು ಮುತ್ತಿಗೆ ಹಾಕಿದ್ದರು. ಬಹಳ ದಿರ್ಘಕಾಲದ ತನಕ ಅಲ್ಲೇ ಇದ್ದರು. ಇದರಿಂದಾಗಿ ಈ ರಾಜರ ಮಧ್ಯೆ ಮತ್ತೆ ಯುದ್ಧ ಶುರುವಾಯಿತು.

ಎರಡೂ ಕಡೆಯಿಂದ ಸೈನಿಕರು ಹೆಚ್ಚಿನ ಸಂಖ್ಯೆಯಲ್ಲಿ ಹತರಾಗಿದ್ದರು. ಬಾದಶಾಹರ ಸಹಾಯಕ ಅಲ್ಲಿಗೆ ತನ್ನ ದೂತನನ್ನು ಕಳುಹಿಸಿ ಅವರನ್ನು ಬೆದರಿಸಲು ಪ್ರಯತ್ನಿಸಿದ. ಈ ಸಮಯದಲ್ಲಿ ಅವನ ಆರೋಗ್ಯ ಕೆಟ್ಟುಹೋಗಿ, ಅನಾರೋಗ್ಯ ಹೆಚ್ಚುತ್ತ ಹೋಯಿತು. ವೈದ್ಯರು ಅವನನ್ನು ಗುಣಪಡಿಸಲು ಬಹಳ ಪ್ರಯತ್ನಪಟ್ಟರು. ಆದರೆ ಯಾವುದೇ ಔಷಧವೂ ಪರಿಣಾಮಕಾರಿಯಾಗಲಿಲ್ಲ. ಅಲ್ಲಿನ ಇಲಾಖೆಯ ವಾತಾವರಣವೂ ಕೂಡ ಅವರ ಆರೋಗ್ಯಕ್ಕೆ ಸಹಕಾರಿಯಾಗದೆ ಪ್ರತೀಕೂಲವಾಗಿ ಪರಿಣಮಿಸಿತು. ಇದರಿಂದಾಗಿ ಅವರ ಆರೋಗ್ಯ ದಿನೇದಿನೇ ಕೆಡುತ್ತ ಬಂತು. ಅವರಿಗೆ ತನ್ನ ಅನಾರೋಗ್ಯದ ಜೊತೆಗೆ ಸೈನ್ಯದ ಚಿಂತೆಯೂ ಸೇರಿಕೊಂಡಿತು. ಈ ಕಾರಣದಿಂದ ವಾಪಾಸಾಗುವ ಬಗ್ಗೆ ಯೋಚಿಸಿದರು. ಸಗರದ ಹತ್ತಿರ ತಲಪಿದಾಗ ಅವರು ಸ್ವರ್ಗಸ್ಥರಾದರು. ಅವರ ಪಾರಮಾರ್ಥಿಕ ಬದುಕಿನಲ್ಲಿ ಅಲ್ಲಾಹ ಅವರ ಆತ್ಮಕ್ಕೆ ಶಾಂತಿ ನೀಡಿ ಕಾಪಾಡಲಿ. ದರ್ಬಾರಿನ ಜೊತೆಗೆ ಅವರ ಸಂಬಂಧವು ೧೧ ವರ್ಷಗಳು ಇದ್ದವು. ಹಿಜರಿ ವರ್ಷ ಸನ್ ೯೪೧ರಲ್ಲಿ ಅವರು ತೀರಿಕೊಂಡರು.

ದಕ್ಷಿಣದ ಬಾದಶಾಹರ ಮರಣಾನಂತರ ವಂಶಜರಾದ ಮಲ್ಲೂ ಖಾನ್ ಸಿಂಹಾಸನವನ್ನೇರಿದರು. ಇವರು ಬರಿಯ ೬ ತಿಂಗಳ ಕಾಲ ಆಳ್ವಿಕೆಯನ್ನು ಮಾಡಲು ಸಾಧ್ಯವಾಯಿತು. ಇವರ ನಂತರ ಯೂಸುಫ್ ಕೋಚರನಿಗೆ ದಿವಾನ ಮತ್ತು ಅಮೀರ ಪದವಿ ನೀಡಲಾಯಿತು. ಬಾದಶಾಹರ ಆಜ್ಞೆಯ ಮೇರೆಗೆ ಮಲ್ಲೂ ಖಾನ್‌ರನ್ನು ಬಂಧಿಸಿ ಕಾರಗೃಹದಲ್ಲಿಡಲಾಯಿತು. ಅವನು ನಿಗೂಢವಾಗಿ ಕಾಣೆಯಾದ. ಇದಾದ ನಂತರ ಇಬ್ರಾಹಿಂ ಆದಿಲ್ ಖಾನನನ್ನು ಸಿಂಹಾಸನದಲ್ಲಿ ಕುಳ್ಳಿರಿಸಲಾಯಿತು.

■

*

## ಅಧ್ಯಾಯ-೫

# ಇಬ್ರಾಹಿಂ ಆದಿಲ್ ಖಾನನ ಆಳ್ವಿಕೆಯ ವಿವರಗಳು

ಇವರು ಸಿಂಹಾಸನದಲ್ಲಿ ಕೂತು ರಾಜ್ಯಭಾರ ಮಾಡಿದ ನಂತರ ರಾಜ್ಯದಲ್ಲಿ ತುಂಬ ರೀತಿಯಲ್ಲಿ ಅಭಿವೃದ್ಧಿಯಾಗಿ ಜನರಲ್ಲಿ ಸುಖಸಂತೋಷ ಮೂಡಿತು. ಇವರು ತಮ್ಮ ವಂಶದ ಇತರ ಬಾದಶಾಹರಿಗಿಂತ ಆರೋಗ್ಯವಂತರಾಗಿ, ಚುರುಕಾಗಿ, ಬಲಶಾಲಿಗಳಾಗಿ ಶೌರ್ಯವಂತರೂ ಆಗಿದ್ದರು. ಇವರ ಆಳ್ವಿಕೆಯ ಘನತೆ ವೈಭವದ ಬಗ್ಗೆ ಹೇಳುವುದಿದ್ದರೆ ಇವರ ಹೆಸರು ಹೇಳಿದರೆ ಸಾಕು ವೈರಿಗಳು ಗಡಗಡ ನಡುಗುತ್ತಿದ್ದರು. ಅವರು ಸ್ವತಃ ಕೆಲಸ ಕಾರ್ಯಗಳಲ್ಲಿ ಭಾಗವಹಿಸಿ ತಮ್ಮ ರಾಜ್ಯದ ಆಡಳಿತವನ್ನು ಸಶಕ್ತ ರಾಜ್ಯವನ್ನಾಗಿಸಿದ್ದರು. ಅವರು ವಿರೋಧಿಗಳು, ವೈರಿಗಳನ್ನು ಲೆಕ್ಕಿಸುತ್ತಲೇ ಇರಲಿಲ್ಲ. ಯಾವಾಗಲೂ ಯುದ್ಧದಲ್ಲಿ ಪ್ರಚಂಡ ವಿಜಯವನ್ನು ಗಳಿಸುತ್ತಿದ್ದರು. ಈ ಕಾರಣದಿಂದಾಗಿ ದಕ್ಷಿಣದ ಕೆಲವು ರಾಜರು ಪರಸ್ಪರ ಒಟ್ಟಾಗಿ, ಒಗ್ಗಟ್ಟಾಗಿ ಅವರನ್ನು ಸೋಲಿಸುವ ಪ್ರಯತ್ನ ಮಾಡುತ್ತಿದ್ದರು.

ಧರ್ಮಕ್ಕೆ ಆಶ್ರಯ ನೀಡಿ ಪೋಷಿಸುವ ಗುಣವಂತ ಷಾ ತಹಮಸ್ಫ್ ಬಿನ್ ಷಾ ಇಸ್ಮಾಯಿಲ್ ಇರಾನಿನ ಬಾದಶಾಹರ ಮಧ್ಯೆ ತುಂಬ ಪ್ರಖ್ಯಾತರಾದರು. ಅವರ ಹಾಗೆ ಸುಂದರ ವ್ಯಕ್ತಿತ್ವದವರು ಹಾಗೂ ಶೌರ್ಯವಂತರು ಇನ್ನೊಬ್ಬರಿರಲಿಲ್ಲ. ಇವರು ಮೂಲದಲ್ಲಿ ತುರ್ಕಿ ವಂಶಸ್ಥರಾಗಿದ್ದರು. ಇನ್ನೊಬ್ಬರು ಇಬ್ರಾಹಿಂ ಆದಿಲ್ ಖಾನ್ ದಖ್ಖಿಣಿ ತಮ್ಮ ಶಾಹಿ ತಲ್ವಾರನ್ನು ಸದಾ ಯದ್ಧದಲ್ಲಿ ಝಳಪಿಸುತ್ತಿದ್ದರು. ವೈರಿಯ ಸೈನ್ಯ ಚಿಕ್ಕದು ಯಾ ದೊಡ್ಡದು ಎಂಬ ವ್ಯತ್ಯಾಸ ಮಾಡಿ ನೋಡುತ್ತಿರಲಿಲ್ಲ. ವೈರಿಗಳ ಚಿಕ್ಕ ಸೈನ್ಯವೆಂದು ಕಡೆಗಣಿಸದೆ ತಮ್ಮಲ್ಲಿರುವ ಸಂಪೂರ್ಣ ಸೈನ್ಯವನ್ನು ತಯಾರು ಮಾಡುತ್ತಿದ್ದರು. ಒಬ್ಬರು ಐನುಲ್ ಮುಲ್ಕ್ ಎಂಬ ಅವರ ಹಿರಿಯ ಸರದಾರರಿದ್ದರು.

ಇವರಿಂದ ಬಾದಶಾಹರು ತರಬೇತಿ ಪಡೆದಿದ್ದರು. ಅವರು ಶೂರರೂ ಆಗಿದ್ದರು. ಅವರು ಮುಂದೆ ಇವರ ವಿರೋಧಿಯಾಗಿ ಮಾರ್ಪಟ್ಟರು. ಈತ ಒಂದು ಬೃಹತ್ ಸೈನ್ಯವನ್ನು ತಯಾರು ಮಾಡಿಕೊಂಡಿದ್ದ. ಒಂದು ಕೋಟೆಯನ್ನು ವಶಪಡಿಸಿಕೊಂಡು ಗಟ್ಟಿಯಾಗಿ ನೆಲೆಯೂರಿದ್ದ. ಪರ್ವತಗಳಿಂದ ನಾಲ್ಕು ದಿಕ್ಕಿನಲ್ಲೂ ಆವೃತ್ತವಾದ ತಾಕನಾಡ್(?) ಸಮುದ್ರ ತೀರದ ಪ್ರದೇಶವನ್ನು ವಶಪಡಿಸಿಕೊಳ್ಳಬೇಕೆಂಬುದು ಅವನ ಬಹುಕಾಲದ ಅಭಿಲಾಷೆಯಾಗಿತ್ತು. ಒಂದು ದೊಡ್ಡ ಸೈನ್ಯವನ್ನು ಸೇರಿಸಿಕೊಂಡು ಕತ್ತಲ್‌ಗಡಿ(?) ಎಂಬ ಊರಲ್ಲಿ ತನ್ನ ಠಿಕಾಣಿಯನ್ನು ಹೂಡಿದ. ಇಬ್ರಾಹಿಂ ಆದಿಲ್ ಖಾನ್ ಅದೇ ಹಾದಿಯಲ್ಲಿ ಒಂದು ಸೈನ್ಯವನ್ನು ನಿಲ್ಲಿಸಿದ್ದ. ಯಾಕೆಂದರೆ ಐನುಲ್ ಮುಲ್ಕ್ ಈ ಹಾದಿಯಲ್ಲಿ ಬಂದು ಅವನನ್ನು ಕೊಲೆ ಮಾಡುವ ಸಂಚು ಹೂಡಿದ್ದ. ಅವನು ತನ್ನ ಸೈನ್ಯದೊಂದಿಗೆ ಸನಿಹವಾದಾಗ ನೋಡಿದರೆ ಅವನು ನೇರ ಮುಖಾಮುಖಿಯಾಗಿ ಎದುರಿಸುವ ಸ್ಥಿತಿಯಲ್ಲಿರಲಿಲ್ಲವೆಂದು ಅನಿಸಿತ್ತು. ಅವನು ತನ್ನ ಸಂಪೂರ್ಣ ಅಸ್ತ್ರಗಳು, ಸಾಮಾನು ಸರಂಜಾಮುಗಳನ್ನು ಬಿಟ್ಟು ಹಿಂದೆ ನೀಡಿದ್ದ ಆಶ್ವಾಸನೆಯ ಭರವಸೆಯ ಮೇಲೆ ನಿಜಾಮುಲ್ ಮುಲ್ಕನ ರಾಜ್ಯಕ್ಕೆ ಓಡಿ ಹೋಗಿ ಆಶ್ರಯಕ್ಕೆ ಮೊರೆಹೋದ. ಅವರಿಬ್ಬರು ಪರಸ್ಪರ ಭೇಟಿಯಾದಾಗ ಪ್ರಥಮ ಭೇಟಿಯಲ್ಲೇ ಐನುಲ್ ಮುಲ್ಕನನ್ನು ನಿಜಾಮುಲ್ ಮುಲ್ಕ್ ಕೊಂದು ಹಾಕಿದ. ಯಾಕೆಂದರೆ ಅವನು ತನ್ನ ಶೌರ್ಯದ ಮೇಲೆ ಬಹಳ ಹೆಮ್ಮೆ ಪಟ್ಟುಕೊಂಡಿದ್ದ. ಮಾತ್ರವಲ್ಲ ತನ್ನ ದೇಶದ ರಾಜನಾಗಿ ಯಾವುದೇ ರೀತಿಯ ಅಪಾಯವಿಲ್ಲದೆ ವಿವಾದಗಳಿಗೆ ಒಳಗಾಗದಂತೆ ಆಳ್ವಿಕೆಯನ್ನು ನಡೆಸಲು ಬಯಸಿದ್ದ. ಇಬ್ರಾಹಿಮ್ ಆದಿಲ್ ಖಾನನಿಗೆ ಐನುಲ್ ಮುಲ್ಕ್ ಹಾದಿಯಿಂದ ಸರಿದು ಹೋದ ಘಟನೆಯು ತಿಳಿದಾಗ ತನ್ನ ಸ್ವಂತ ಆಳ್ವಿಕೆಯಲ್ಲಿರುವ ತೊಡಕುಗಳನ್ನು ನಿವಾರಿಸುವ ನಿಟ್ಟಿನಲ್ಲಿ ಕಾರ್ಯೋನ್ಮುಖನಾದ. ದಿನವೂ ತನ್ನ ಆಳ್ವಿಕೆಯ ರಕ್ಷಣಾತ್ಮಕ ತಯಾರಿಯಲ್ಲಿ ಮತ್ತು ಸರಹದ್ದಿನ ರಕ್ಷಣೆಯ ಕಾರ್ಯದಲ್ಲಿ ಸತತವಾಗಿ ನಿರತನಾದ. ಈ ಮಧ್ಯೆ, ಪಂಜಾನಗರ(ವಿಜಯನಗರ?)ದ ರಾಜ ಕಿಷನ್ ರಾವ್(ಕೃಷ್ಣ ದೇವರಾಯ) ತೀರಿಕೊಂಡ ವರ್ತಮಾನ ಬಂತು.

**ಪಂಜಾನಗರದ ರಾಜ ರಾವ್‌ರವರ ಆಳ್ವಿಕೆಯ ಬಗೆಗಿನ ಟಿಪ್ಪಣಿ**

ಆ ಕಾಲದಲ್ಲಿ ಆ ಪ್ರದೇಶವನ್ನು ಆಳುವ ರಾಜರನ್ನು 'ರಾವ್' ಯಾ 'ರಾಯ' ಎಂದು ಕರೆಯುತ್ತಿದ್ದರು. ಪಂಜಾ ನಗರದ ಇತಿಹಾಸದ ಬಗ್ಗೆ ಬಹಳಷ್ಟು ಐತಿಹ್ಯಗಳು ಪ್ರಚಲಿತದಲ್ಲಿದ್ದು ನನ್ನ ಗಮನಕ್ಕೆ ಬಂದವು. ಇತಿಹಾಸಕಾರರು ಹೇಳುವಂತೆ ಪಂಜ ಅನ್ನುವ ಪದ ಕುರ್ದಿ(ಇರಾನ್-ಇರಾಕ್ ಮಧ್ಯೆಯ ಇಲಾಖೆ) ಮೂಲದ್ದಾಗಿದೆ. ಹೆಚ್ಚು ಬಳಕೆಯಾದುದರಿಂದ ಅಪಭ್ರಂಶಗೊಂಡು ಪಂಸಾ ನಗರವೆಂದು ಬಳಕೆಯಲ್ಲಿದೆ.

ಈ ನಗರದ ಸಂಸ್ಥಾಪಕ 'ಪಿಂಜನ್ ಬಿನ್ ಕ್ಯೂವಾ ಬಿನ್ ಕೂದ್ರಸ್' ಎಂಬಾತನಾಗಿದ್ದ. ಇವನು ಗುಸ್ತುಂ ಬಿಸ್ತಾನನ ಸಹೋದರಿಯ ಮಗನಾಗಿದ್ದ. ಆ ಕಾಲದ ಯಾವುದೇ ಇತಿಹಾಸ ದಾಖಲೆಯನ್ನು ನೋಡಿದರೆ ಈ ಸ್ಥಳದ ಬಗ್ಗೆ ಯಾವ ವಿವರವೂ ಸಿಗುವುದಿಲ್ಲ. ಪಿಂಜನ್ ಹಿಂದುಸ್ಥಾನಕ್ಕೆ ಬರಲಿಲ್ಲ. ಹೀಗಿರುವಾಗ ಅವನ ಹೆಸರು ಈ ಪ್ರದೇಶಕ್ಕೆ ಹೇಗೆ ಬಂತು. ಪಿಂಜನ್ ಬಿನ್ ಕ್ಯೂವಾ ಬಿನ್ ಕೂದ್ರಸ್ ಎಂಬವನು ರುಸ್ತುಂ ದಸ್ತಾನನ ಸಹೋದರಿಯ ಮಗನಾಗಿದ್ದಾನೆ. ಫರಾಮನ್ ಝ್ಯೂನ್ ರುಸ್ತುಂ ಇದ್ದ ಕಾಲದಲ್ಲಿ ಬರ್ಜೇ ಎಂಬವನು ಹಿಂದುಸ್ಥಾನಕ್ಕೆ ಬಂದ ದಾಖಲೆ ಇದೆ. ಬಹಳಷ್ಟು ಇತಿಹಾಸಕಾರರು ಹೇಳುವ ಪ್ರಕಾರ ಹಿಂದುಸ್ಥಾನದ ರಾಯ್ (ರಾಜ) ಮನೆತನದವರು ಈ ಸ್ಥಳವನ್ನು ಕಟ್ಟಿಸಿದರು. ಪಿಂಜನ್‌ನ ತಂದೆಯಾರು ಯಾವಕುಲದವನು ಎಂಬ ಬಗ್ಗೆ ನಮಗೆ ಯಾವ ದಾಖಲೆಯೂ ಸಿಗುವುದಿಲ್ಲ. ಅವರ ವಂಶವು ಈ ರಾಯ ಕುಲದ ಜೊತೆಯ ಸಂಬಂಧಕ್ಕೆ ಯಾವ ಕುರುಹು ಕೂಡ ಸಿಗುತ್ತಿಲ್ಲ. ಬೀದರ್ ನಗರದ ಸಂಸ್ಥಾಪಕ ಸುಲ್ತಾನ್ ಅಹ್ಮದ್ ಷಾನ ಆಳ್ವಿಕೆಯ ಕೊನೆಯ ಕಾಲಘಟ್ಟದಲ್ಲಿ (ಹಿಜರಿ ೭೦೪) ಸೇವುರಾವ್ ಎಂಬವನು ಪಂಜಾ ನಗರದ ಆಳ್ವಿಕೆ ನಡೆಸುತ್ತಿದ್ದ. ಅವನು ೨೭ ವರ್ಷಗಳ ಕಾಲ ರಾಜ್ಯಭಾರ ಮಾಡಿದ್ದ. ಮುಸ್ಲಿಂ ಅರಸರ ಆಳ್ವಿಕೆಯು ಬಲಶಾಲಿಯಾಗಿದ್ದ ಸಂದರ್ಭದಲ್ಲಿ ಆಗಾಗ ಈ ಅರಸರ ಮಧ್ಯೆ ಯುದ್ಧಗಳು ನಡೆಯುತ್ತಿದ್ದವು. ಮುಸ್ಲಿಂ ಬಾದಶಾಹರು ಹೆಚ್ಚಿನ ಸಲ ಈ ಯುದ್ಧಗಳಲ್ಲಿ ಹಿಂದೂರಾಜರನ್ನು ಸೋಲಿಸುತ್ತಿದ್ದರು. ಹಲವು ಸಲ ಮುಸ್ಲಿಂ ಬಾದಶಾಹರ ಮಧ್ಯೆ ವಿರೋಧಿಗಳು ಪಿತೂರಿ ನಡೆಸಿ ಜಗಳಕ್ಕೆ ಕಾರಣವಾಗುತ್ತಿದ್ದರು. ಈ ಮೂಲಕ ರಾಜನ ರಾಜ್ಯಭಾರದ ಮಧ್ಯೆ ಸೇರಿಕೊಳ್ಳುವ ಅವಕಾಶವನ್ನು ಹುಡುಕುತ್ತಿದ್ದರು. ಸೇವು ರಾವ್ ಹಿಜರಿ ೭ನೆಯ ಶತಮಾನದಲ್ಲಿ ತೀರಿಕೊಂಡ. ಇವನ ಸ್ಥಾನದಲ್ಲಿ ಅಜಿತ್ ರಾವ್ ಸಿಂಹಾಸನಾರೂಢನಾದ. ಇವನು ತನ್ನ ಪ್ರಜೆಗಳನ್ನು ಒಳ್ಳೆಯರೀತಿಯಲ್ಲಿ ಪಾಲನೆ ಮಾಡುತ್ತ ರಾಜ್ಯಭಾರ ನಡೆಸಿದ. ಅವನ ದರ್ಬಾರಿಗೆ ಹೋಗಿ ಬರುವುದಕ್ಕೆ ಸಾರ್ವಜನಿಕರಿಗೆ ಮುಕ್ತವಾದ ವಾತಾವರಣ ಮಾಡಿಕೊಟ್ಟಿದ್ದ. ರಾಜ್ಯದಲ್ಲಿ ಪ್ರಜೆಗಳು ಸುಖಸಂತೋಷದಲ್ಲಿ ಬದುಕಿದ್ದರು. ಕೆಲವು ಸಲ ಇಸ್ಲಾಮಿ ರಾಜ್ಯದ ವಿರುದ್ಧ ಯುದ್ಧವನ್ನೂ ಹೂಡಿದ್ದ. ಸೇವುರಾವನ ಆಳ್ವಿಕೆಯಲ್ಲಿ ಮುಸ್ಲಿಮ್ ಅರಸರಿಂದ ವಶಪಡಿಸಿಕೊಂಡಿದ್ದ ಕೆಲವು ಸಂಸ್ಥಾನಗಳನ್ನು ಅವರಿಗೆ ಹಿಂತಿರುಗಿಸಿದ. ಅವನು ೪೦ ವರ್ಷಗಳ ಕಾಲ ಸುಖ ಸಂತೋಷಗಳ ಸುಖೀರಾಜ್ಯಭಾರ ನಡೆಸಿ ಹಿಜರಿ ವರ್ಷ ಸನ್ ೬೦೭ರಲ್ಲಿ ಇಹಲೋಕವನ್ನು ತ್ಯಜಿಸಿದ. ಸಾಯುವ ಮುಂಚೆ ಕಿಷನ್ ರಾವ್‌ನಿಗೆ ತನ್ನ ರಾಜ್ಯವನ್ನು ಒಪ್ಪಿಸಿದ್ದ. ಈ ರಾಜ ಬಹಳ ಬುದ್ಧಿವಂತ ಮತ್ತು ನ್ಯಾಯಪರಿಪಾಲನೆಯಲ್ಲಿ ಹೆಸರುವಾಸಿಯಾಗಿದ್ದ. ಅವನ ಕಾಲದಲ್ಲಿ ಹಲವು ಮುಸ್ಲಿಂ ಬಾದಶಾಹರ ಆಡಳಿತದಲ್ಲಿ ತರಬೇತಿ ಪಡೆದು ಅತೃಪ್ತರಾಗಿದ್ದ ಮತ್ತು ಅವರೊಂದಿಗೆ

ಸರಿಯಾದ ನಡತೆ ತೋರದೆ ಅಶಿಸ್ತಿನಿಂದ ಇದ್ದ ಕೆಲವು ಹೊರಹಾಕಲ್ಪಟ್ಟ ಮುಸ್ಲಿಂ ಸೈನಿಕರು ಹಾಗೂ ಅಪರಾಧ ಮಾಡಿ ಭಯದಿಂದ ಸೈನ್ಯವನ್ನು ತೊರೆದು ಈ ರಾಜ್ಯಕ್ಕೆ ಆಗಮಿಸಿ ಶರಣಾಗತರಾದ ಸೈನಿಕರಿಗೆ ತನ್ನ ಸೇನೆಯಲ್ಲಿ ಅವಕಾಶ ನೀಡಿ ರಕ್ಷಿಸಿದ್ದ.

ಈ ಮುಸ್ಲಿಂ ಸೈನಿಕರನ್ನು ಅವನು ಚೆನ್ನಾಗಿ ನೋಡಿಕೊಳ್ಳುತ್ತಿದ್ದ. ಈ ಸೈನಿಕರು ತಮ್ಮ ಬದುಕಿನ ಕೊನೆಯವರೆಗೂ ಕಿಷನ್ ರಾವ್‌ನಿಗೆ ನಿಷ್ಠಾವಂತರಾಗಿದ್ದರು ಮಾತ್ರವಲ್ಲ, ಅವನ ರಾಜ್ಯದ ರಕ್ಷಣೆಯಲ್ಲಿ, ಆಡಳಿತದ ಕಾರ್ಯದಲ್ಲಿ ತಮ್ಮ ಜೀವವನ್ನು ಬಲಿದಾನವಾಗಿ ನೀಡಲು ಕೂಡ ತಯಾರಾಗಿದ್ದರು. ಅವನ ರಾಜ್ಯಭಾರಕ್ಕೆ ಒಳಗೊಂಡಂತೆ, ರಾಜ್ಯದಲ್ಲಿ ಒಂದು ನದಿ ಎರಡು ಪರ್ವತಗಳ ಮಧ್ಯೆ ಹರಿಯುತ್ತಿತ್ತು. ಇದಕ್ಕೆ ಸರಿಯಾಗಿ ಪ್ರಕೃತಿಯ ಕೊಡುಗೆಯಂತೆ ಕಂಡು ಬರುವ ಪರ್ವತಗಳ ನಡುವೆ ಸಹಜವಾಗಿ ಒಂದು ಅಣೆಕಟ್ಟು ಕಟ್ಟುವುದಕ್ಕೆ ಅನುಕೂಲಕರವಾಗಿತ್ತು. ಇದನ್ನು ಕಟ್ಟುವ ಕೆಲಸ ನಡೆಯುತ್ತಿತ್ತು. ಈ ಅಣೆಕಟ್ಟು ಒಂದು ಮೈಲಿನಷ್ಟು ಉದ್ದಕ್ಕಿತ್ತು. ೬೦೦ ಗಜದಷ್ಟು ಅಗಲವಿತ್ತು. ೫೬ ಗಜದಷ್ಟು ಆಳವಾಗಿತ್ತು. ಈ ನದಿ ತುಂಬ ಆಗಾಧವಾಗಿ ಬಹಳ ಬಲಿಷ್ಠವಾಗಿ ತುಂಬಿ ಹರಿಯುತ್ತಿತ್ತು. ಮೂರು ಮೈಲುಗಳ ತನಕ ವ್ಯಾಪಿಸಿತ್ತು. ಈ ನದಿ ಏಳು ಪರ್ವತಗಳನ್ನು ದಾಟಿ ಹರಿಯುತ್ತಿತ್ತು. ಸದಾಕಾಲವೂ ತುಂಬಿ ಹರಿಯುತ್ತಿತ್ತು. ಯಾರಾದರೂ ಈ ನದಿಯಲ್ಲಿ ಬಿದ್ದು ಮುಳುಗಿದರೆಂದರೆ ಹೊರಬರುವುದು ಸಾಧ್ಯವಾಗುತ್ತಿರಲಿಲ್ಲ. ಈಗಲೂ ಇದರ ನೀರು ಶುದ್ಧ, ಪವಿತ್ರವಾಗಿ ಸಿಹಿಯಾಗಿದೆ. ಭೂಮಿಯ ದೊಡ್ಡ ಭಾಗವೊಂದನ್ನು ಈ ನದಿ ವ್ಯಾಪಿಸಿದೆ. ಇದರ ಸುತ್ತಲಿರುವ ಫಲವತ್ತಾದ ಭೂಮಿಯನ್ನು ಕೃಷಿಗಾಗಿ ಉಪಯೋಗಿಸಿದರೆ ಲಕ್ಷಾಂತರ ಬೆಲೆಬಾಳುವ ಆಹಾರ ಧಾನ್ಯ ಪದಾರ್ಥಗಳು ಇಲ್ಲಿ ಪಡೆಯುವುದು ಸಾಧ್ಯವಾಗಬಹುದು. ಈ ಅಣೆಕಟ್ಟನ್ನು ಕಟ್ಟುವ ಕೆಲಸ ಪೂರ್ಣಗೊಳ್ಳುವ ಮುಂಚೆಯೇ ಕಿಷನ್ ರಾವ್ ತೀರಿಕೊಂಡ. ಇವನ ನಂತರ ಪಟ್ಟಕ್ಕೆ ಬಂದ ರಾಮರಾವ್ ಇದನ್ನು ಪೂರ್ಣಗೊಳಿಸಿದ. ಕಿಷನ್ ರಾವ್ ೧೪ ವರ್ಷಗಳ ಕಾಲ ರಾಜ್ಯಭಾರ ನಡೆಸಿದ್ದ. ಹಿಜರಿ ಸನ್ ೯೪೦ರ ವರ್ಷದಲ್ಲಿ ರಾವ್ ಮನೆತನದ ಆಳ್ವಿಕೆಯ ಕಾಲಘಟ್ಟದಲ್ಲಿ ಅವನು ತೀರಿಕೊಂಡಿದ್ದ. ಇದಾದ ಒಂದು ವರ್ಷ ಖಾಲಿಯಾಗಿದ್ದ ಸಿಂಹಾಸನದಲ್ಲಿ ಒಂದು ವರ್ಷ ಕಳೆದ ನಂತರ ಅವನ ವಂಶಕ್ಕೆ ಸೇರಿದ ಹಂಸ ತಿರುಮಲರಾಜ ತನ್ನ ಒಂದು ವರ್ಷದ ಮಗುವನ್ನು ಕೂರಿಸಿ ಪಟ್ಟದ ಪ್ರತಿನಿಧಿಯಾಗಿ ರಾಜ್ಯಾಡಳಿತ ನಡೆಸಿದ. ಈ ರೀತಿ ವ್ಯವಸ್ಥೆಯನ್ನು ಖಾಯಂಗೊಳಿಸಿ ತನ್ನ ರಾಜ್ಯ ಭಾರದ ಅಹೋರಾಜ್ಯ ಪ್ರದೇಶಕ್ಕೆ ನಡೆದ. ಆದರೆ ಅಲ್ಲಿನ ತನ್ನ ರಾಜ್ಯದ ಆಡಳಿತದಲ್ಲಿ ಯಾರೂ ಕೂಡ ಅನಗತ್ಯವಾಗಿ ಕೈಹಾಕದಂತೆ ನೋಡಿಕೊಂಡ. ಹಿರಿಯ ಅಧಿಕಾರಿಗಳು ಮತ್ತು ಸರದಾರರನ್ನು ಆಡಳಿತ

ದರ್ಬಾರಿನ ಅಧಿಕಾರವ್ಯಾಪ್ತಿಯಿಂದ ತೆಗೆದು ಹಾಕಿದ. ತನ್ನ ಕುಟುಂಬ ಸಂಬಂಧಿಗಳಿಗೆ ತರಬೇತಿ ನೀಡಿ ಉನ್ನತ ಅಧಿಕಾರಸ್ಥಾನದಲ್ಲಿ ಕುಳ್ಳಿರಿಸಿದ. ಈ ವಿದ್ಯಮಾನಗಳ ಸುದ್ದಿ ಹಜ್ರತ್ ಸುಲ್ತಾನ ಇಬ್ರಾಹಿಂ ಆದಿಲ್ ಷಾಗೆ ತಲಪಿದಾಗ ಅವನು ತನ್ನ ಜೊತೆಗೆ ಅಸದ್ ಖಾನ್ ಎಂಬ ಶೌರ್ಯವಂತ ಸರದಾರನನ್ನು ಸೇರಿದಂತೆ ಬೃಹತ್ತಾದ ಸೈನ್ಯವನ್ನು ಕಟ್ಟಿಕೊಂಡು ಹಂಪಾ ನಗರದತ್ತ ನಡೆದ. ಹಂಸ ತಿರುಮಲರಾಜನಿಗೆ ಆದಿಲ್ ಷಾಹನ ಮುಸ್ಲಿಂ ಸೇನೆ ತನ್ನ ಕಡೆ ಬರುತ್ತಿರುವ ಸುದ್ದಿ ಕೇಳಿ ಹೆದರಿ ತನ್ನ ಭರವಸೆಯ ಖಾಸ ಆಪ್ತರನ್ನು ಸೇರಿಸಿಕೊಂಡು ಅರಮನೆಯಲ್ಲಿ ಸಮಾಲೋಚನೆ ನಡೆಸಿದ. ಕೆಲವು ಆಪ್ತರು ಯುದ್ಧವನ್ನು ನಡೆಸುವುದರ ಪರವಾಗಿದ್ದರೆ ಕೆಲವರು ಸಂಧಾನ ನಡೆಸುವುದನ್ನು ಬೆಂಬಲಿಸಿದರು. ಆದರೆ ಹಿರಿಯ ಸರದಾರರು ಸೇನೆಯ ಮುಖ್ಯಸ್ಥರು ರಾಜಿ ಸಂಧಾನದ ವಿರೋಧಿಗಳಾಗಿದ್ದರು. ಆದರೆ ಸ್ವತಃ ಹಂಸ ತಿರುಮಲ ರಾಯ ಸಂಧಾನ ಮಾಡಿಕೊಳ್ಳ ಬಯಸಿದ್ದ. ಯಾಕೆಂದರೆ ತನ್ನ ಸೈನಿಕರ ಮೇಲೆ ಭರವಸೆಯಿಟ್ಟುಕೊಂಡಿರಲಿಲ್ಲ. ತನ್ನ ಸೈನಿಕರು ಮುಸ್ಲಿಂ ಸೈನಿಕರನ್ನು ಸೋಲಿಸುವಷ್ಟು ಶಕ್ತಿಹೊಂದಿದ್ದಾರೆಂಬ ವಿಶ್ವಾಸವೂ ಅವನಿಗಿರಲಿಲ್ಲ.

ಅಸದ್ ಖಾನನ ಮೂಲಕ ಸಂಧಾನದ ಏರ್ಪಾಡು ಮಾಡಲಾಯಿತು. ಇದರ ಪ್ರಕಾರ ೮೦ ಲಕ್ಷ ಹವನ್(ಕಪ್ಪಕಾಣಿಕೆ) ಆದಿಲ್ ಷಾ ಸುಲ್ತಾನನಿಗೆ ನೀಡಬೇಕೆಂದು ತೀರ್ಮಾನಿಸಲಾಯಿತು. ಜೊತೆಗೆ ೧೨.೫ ಮಿಸ್ಕಾಲ್ ತೂಕದ(ಹೆಚ್ಚುಕಮ್ಮಿ ೪ ತೊಲ= ೨೦೦ ಕ್ಯಾರೆಟ್) ವಜ್ರವನ್ನು ನೀಡಲಾಯಿತು. ಈ ಕೊಡುಗೆಗಳನ್ನು ನೀಡುವ ಮೂಲಕ ತನ್ನ ಮೇಲೆ ಎಗರಿದ ಅಪಾಯದಿಂದ ಹಂಸ ತಿರುಮಲ ರಾಯ ತಪ್ಪಿಸಿಕೊಂಡ. ಆದರೆ ಅವನ ಚಲನವಲನ ಸಾರ್ವಜನಿಕ ಪ್ರಜೆಗಳ ಇಚ್ಛೆ ಮತ್ತು ಅಭಿಪ್ರಾಯಕ್ಕೆ ವಿರುದ್ಧವಾಗಿತ್ತು. ಬಹಳಷ್ಟು ಸೇನಾ ನಾಯಕರು, ಸರದಾರರು ಅತೃಪ್ತರಾಗಿದ್ದರು. ಕಿಷನ್ ರಾಯ (ಕೃಷ್ಣ ದೇವರಾಯ)ನ ಸಮೀಪ ಸಂಬಂಧಿಯಾಗಿದ್ದ(ಅಳಿಯ?) ರಾಮರಾಜ(ರಾಯ)ನಿಗೆ ತನ್ನ ರಾಜ್ಯದ ಸ್ವಲ್ಪಭಾಗವನ್ನು ನೀಡಬೇಕಾಯಿತು. ಇದರಿಂದ ಅವನ ಖರ್ಚುವೆಚ್ಚಗಳನ್ನು ಭರಿಸಿಕೊಳ್ಳುವ ಅವಕಾಶ ಸಿಗುವಂತಾಗಲಿ ಎನ್ನುವುದು ಅವನ ಲೆಕ್ಕಾಚಾರವಾಗಿತ್ತು. ಯಾಕೆಂದರೆ ಇದರಿಂದ ಅವನು ಮುಂದೆ ಪಟ್ಟದ ಸಿಂಹಾಸನದ ಆಸೆಯನ್ನು ಬಿಟ್ಟುಬಿಡಬೇಕೆಂಬುದು ಅವನ ಇಚ್ಛೆಯಾಗಿತ್ತು. ಇಷ್ಟಾಗಿಯೂ ತಿರುಮಲರಾಯ ಭಯಪಟ್ಟುಕೊಂಡು ಓಡಿಹೋಗಿ ತನ್ನ ರಾಜ್ಯದ(ಪೆನುಕೊಂಡ?) ಒಂದು ಮೂಲೆಯಲ್ಲಿ ಅಡಗಿಕೊಳ್ಳಬೇಕಾಯಿತು. ಅವನು ಮುಂದೆ ತನ್ನ ಮಾನಸಿಕ ಸಂತುಲನವನ್ನು ಕಳೆದುಕೊಂಡು ಹುಚ್ಚನಂತಾಗಿ ಬೆಂಕಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡ.

**ರಾಮರಾಜ(ರಾಯ)ನ ರಾಜ್ಯಭಾರ ಮತ್ತು ಹಿಜರಿ ವರ್ಷ ೯೪೨ರಲ್ಲಿ ಸ್ವತಂತ್ರ ಹಂಪಾ ನಗರ(ಹಂಪಿ) ಸ್ಥಾಪನೆಯ ವಿವರಗಳು:**

ಹಿಜರಿ ವರ್ಷ ಸನ್ ೯೪೨ರಲ್ಲಿ ರಾಮರಾಜ(ರಾಯ) ಹಿಂಪಾ (ಹಂಪೆ) ನಗರದ ಸಿಂಹಾಸನವನ್ನು ವೈಭವಪೂರ್ಣ ಸಮಾರಂಭವನ್ನು ಏರ್ಪಡಿಸುವ ಮೂಲಕ ಅಲಂಕರಿಸಿದ. ಪ್ರತೀ ದಿನವೂ ಕಿಷನ್ ರಾವ್(ಕೃಷ್ಣ ದೇವರಾಯ)ನ ಮಗನನ್ನು ದರ್ಬಾರಿನ ಮಧ್ಯೆ ಕೂರಿಸಿ ಎಲ್ಲರೂ ಗೌರವದಿಂದ ನೋಡುವಂತೆ ಮಾಡಿದ್ದ. ದರ್ಬಾರಿಗೆ ಪ್ರವೇಶ ಮಾಡುವವರು ಹಿಂದೂ ಪರಂಪರೆಯ ರಿವಾಜಿನಂತೆ ಒಂದು ವರ್ಷದ ಈ ಬಾಲಕನ ಮುಂದೆ ಕೈಜೋಡಿಸಿ ತಲೆತಗ್ಗಿಸಿ, ಬೆರಳುಗಳನ್ನು ಹಣೆಯ ಮೇಲಿರಿಸಿ ಗೌರವ ಸೂಚಿಸುವಂತೆ ಆಜ್ಞಾಪಿಸಿದ್ದ. ಸ್ವತಃ ರಾಜನೇ ನಂತರದಲ್ಲಿ ದರ್ಬಾರಿನಲ್ಲಿ ನಿಂತು ಎಲ್ಲರಿಗೂ ನಮಸ್ಕಾರ ಮಾಡುತ್ತಿದ್ದ.

ಎರಡು ವರ್ಷಗಳಲ್ಲಿ ಹಿರಿಯ ಸರದಾರರನ್ನು ತನ್ನ ಆಸ್ಥಾನದಿಂದ ಕಿತ್ತು ಹಾಕಿದ. ತನ್ನ ಸಹೋದರರು ಮತ್ತು ಸಂಬಂಧಿಗಳನ್ನು ತನ್ನ ಜೊತೆಗೆ ಸೇರಿಸಿಕೊಂಡು ಅಧಿಕಾರಸ್ಥಾನಗಳನ್ನು ನೀಡಿದ. ತಿರುಮಲರಾಜ್ ಎಂಬ ತನ್ನ ದೊಡ್ಡಣ್ಣನಿಗೆ ರಾಜ್ಯದ ದೊಡ್ಡ ಅಧಿಕಾರವನ್ನು ನೀಡಿದ್ದ. ಅವನು ತನಗೆ ನೀಡಲಾದ ಜವಾಬ್ದಾರಿಗಳನ್ನು ಚೆನ್ನಾಗಿ ನಿರ್ವಹಿಸುತ್ತಿದ್ದ. ಚಿಕ್ಕ ಸಹೋದರ ವೆಂಕಟರಾವ್‌ನಿಗೆ ಸೈನ್ಯದ ನಾಯಕತ್ವವನ್ನು ನೀಡಿ ನೋಡಿಕೊಳ್ಳುವ ಜವಾಬ್ದಾರಿ ವಹಿಸಿದ್ದ. ಇದಕ್ಕೆ ದಕ್ಷಿಣದ ಭಾರತದ ಭಾಷೆಯಲ್ಲಿ 'ಸರ್‌ಸರ್ ತೂಬತ' ಎಂದು ಕರೆಯುತ್ತಾರೆ. ಸಮಸ್ತ ರಾಜ್ಯದ ನಾಯಕನಾಗಿ ತನ್ನ ಅಧಿಕಾರದ ಮುಷ್ಠಿಯೊಳಗೆ ಇಟ್ಟುಕೊಂಡು ಇತರರು ತನ್ನ ಕಾರ್ಯವಿಧಾನದಲ್ಲಿ, ಆಡಳಿತದಲ್ಲಿ ಮಧ್ಯ ಪ್ರವೇಶಮಾಡುವುದನ್ನು ಸಂಪೂರ್ಣವಾಗಿ ನಿರ್ಬಂಧಿಸಿದ್ದ.

ತನ್ನ ಕುಟುಂಬ ಸಂಬಂಧಿಗಳಿಗೆ ಆಡಳಿತದ ಮುಖ್ಯ ಅಧಿಕಾರಿಗಳ ಹುದ್ದೆ ನೀಡಿ, ತನಗೆ ವಿಧೇಯರಾಗಿ ಸದಾಕಾಲ ಇರುವಂತಹ ರೀತಿಯಲ್ಲಿ ವ್ಯವಸ್ಥೆಯನ್ನು ಮಾಡಿದ್ದ. ಹೀಗೆ ರಾಮರಾಜ ಸುಖಸಂತೋಷದಲ್ಲಿ ರಾಜ್ಯ ಸಿಂಹಾಸನದಲ್ಲಿ ಗಟ್ಟಿಯಾಗಿ ಕೂತಿರುವಂತೆ ವ್ಯವಸ್ಥೆಯನ್ನು ಮಾಡಿಕೊಂಡಿದ್ದ. ಕಿಷನ್ ರಾಯನ ಮಗನನ್ನು ತನ್ನ ಕುಟುಂಬದವರ ಜೊತೆ ಅರಮನೆಯಲ್ಲಿ ಸದಾಕಾಲ ಸುರಕ್ಷಿತವಾಗಿರುವಂತೆ ವ್ಯವಸ್ಥೆ ಮಾಡಿದ. ಹೀಗೆ ೩೩ ವರ್ಷಗಳ ಕಾಲ ತನ್ನ ರಾಜ್ಯಭಾರವನ್ನು ಸುಭಿಕ್ಷೆಯೊಂದಿಗೆ ನಡೆಸಿದ. ಕಿಷನ್‌ರಾವನ ಆಳ್ವಿಕೆಯಲ್ಲಿ ಅರ್ಧದಲ್ಲಿ ನಿಂತು ಹೋಗಿದ್ದ ಅಣೆಕಟ್ಟನ್ನು ಬಹಳ ಶ್ರಮಪಟ್ಟು ಕಟ್ಟಿ ಮುಗಿಸಿದ. ಇದರಿಂದಾಗಿ ಈ ಸಾಮ್ರಾಜ್ಯ ತುಂಬ ಪ್ರಸಿದ್ಧಿಪಡೆಯಿತು. ರಾಜ್ಯದ ಜನರಿಗೆ ಸುಖಸಂತೋಷ, ಸುಭಿಕ್ಷೆ ಲಭಿಸಿತು. ಪ್ರಜೆಗಳ ಸುಖಶಾಂತಿಗಾಗಿ ಸಂತಸದ ಬದುಕಿಗಾಗಿ ಅನೇಕ ಕಾರ್ಯಗಳನ್ನು ಕೈಗೊಂಡಿದ್ದ. ಇವುಗಳನ್ನು ಇಲ್ಲಿ ವಿವರವಾಗಿ ನೀಡಲು ಸಾಧ್ಯವಾಗದು.

ಅವನ ಬಳಿ ಮುಸ್ಲಿಂ ಬಾದಶಾಹರಿಂದ ಅತೃಪ್ತಗೊಂಡ ಐದಾರು ಮುಸ್ಲಿಂ ಸರದಾರರು ಬಂದಿದ್ದರು. ದರ್ಬಾರಿಗೆ ಬಂದು ತಮ್ಮ ಬಗ್ಗೆ ಹೇಳಿಕೊಂಡು ತಮಗಾಗಿ ಜಾಗೀರು ಜಮೀನುಗಳನ್ನು ಕೇಳಿಕೊಂಡರು. ಅವರ ಬೇಡಿಕೆಯಂತೆ ರಾಮರಾಯ ಜಮೀನುಗಳನ್ನು ನೀಡಿ ಆಶ್ರಯ ನೀಡಿದ. ಹೀಗೆ ಅವನು ಮುಸ್ಲಿಮರಿಗೂ ಹಲವು ಬಾರಿ ಸಹಾಯ ಮಾಡಿದ್ದ. ತನ್ನ ದರ್ಬಾರಿನಲ್ಲಿ ದೊಡ್ಡ ವೇದಿಕೆಯಲ್ಲಿ ಆಸನವೊಂದರ ಮೇಲೆ ಕುರಾನ್ ಗ್ರಂಥವನ್ನು ತುಂಬ ಗೌರವದಿಂದ ಇರಿಸಿದ್ದ. ದರ್ಬಾರಿಗೆ ಬಂದ ಮುಸ್ಲಿಮರು ಮೊದಲು ತಮ್ಮ ಪವಿತ್ರ ಗ್ರಂಥಕ್ಕೆ ಸಲಾಮ್ ಸಲ್ಲಿಸಿ ನಂತರ ಇತರ ಕೆಲಸಕಾರ್ಯದಲ್ಲಿ ತೊಡಗಲಿ ಎನ್ನುವುದು ಅವನ ಉದ್ದೇಶವಾಗಿತ್ತು. ಮುಸ್ಲಿಮರಿಗಾಗಿ ಒಂದು ಪ್ರತ್ಯೇಕ ಪ್ರದೇಶವನ್ನು ವಾಸಕ್ಕಾಗಿ ಮಾಡಿಕೊಟ್ಟು, ಮನೆಗಳನ್ನು ಕಟ್ಟಿಕೊಟ್ಟಿದ್ದನಲ್ಲದೆ ಒಂದು ಮಾರುಕಟ್ಟೆ ಬಜಾರನ್ನೂ ನಿರ್ಮಿಸಿಕೊಟ್ಟಿದ್ದ. ಆ ಕಾಲದಲ್ಲಿ ಮುಸ್ಲಿಮರನ್ನು ತುರುಕರು ಎಂದು ಕರೆಯಲಾಗುತ್ತಿತ್ತು. ಈ ಮೊಹಲ್ಲಾವನ್ನು 'ತುರುಕುವಲ್ಲು' ಎಂದು ಕರೆಯುತ್ತಿದ್ದರು. ಅವರ ರಾಜ್ಯದಲ್ಲಿ ಮುಸ್ಲಿಮರ ಪ್ರಾರ್ಥನೆಗಾಗಿ ಅನೇಕ ಮಸೀದಿಗಳನ್ನೂ ಕಟ್ಟಿಸಿದ್ದ. ತಮ್ಮ ಧರ್ಮವನ್ನು ಸರಿಯಾಗಿ ಕಟ್ಟುನಿಟ್ಟಾಗಿ ಪಾಲಿಸಲು, ಮತ್ತು ದುರ್ವ್ಯವಹಾರ, ಕೆಟ್ಟ ವ್ಯಸನಗಳಿಂದ ದೂರವಿರಲು ಆಜ್ಞಾಪಿಸಿದ್ದ. ತಮ್ಮ ಧಾರ್ಮಿಕ ನಿಯಮಗಳನ್ನು ಪಾಲಿಸಲು ಆಜ್ಞಾಪಿಸಿದ್ದ. ಪ್ರಾಣಿಗಳನ್ನು ಮಾಂಸಕ್ಕಾಗಿ ಕೊಲ್ಲುವಾಗ ಧಾರ್ಮಿಕವಿಧಿಯನ್ನು ಪಾಲಿಸುವಂತಹ ವ್ಯವಸ್ಥೆಯನ್ನು ಮಾಡಿದ್ದ. ಒಮ್ಮೆ ಅವರ ಅಣ್ಣ ತನ್ನ ಜೊತೆಗಾರರೊಂದಿಗೆ ದರ್ಬಾರಿಗೆ ಬಂದು ಪ್ರಾಣಿವಧೆಯನ್ನು ನಿಲ್ಲಿಸುವಂತೆ ಆಜ್ಞೆಹೊರಡಿಸಲು ವಿನಂತಿ ಮಾಡಿಕೊಂಡರು. ಇದಕ್ಕೆ ಉತ್ತರವಾಗಿ ಅರಸ ರಾಮರಾಯ "ನಿಮ್ಮನ್ನು ನಾನು ಆಡಳಿತದ ಕೆಲಸಗಳಲ್ಲಿ ಸಹಾಯ ಮಾಡಲು ಕರೆತಂದಿದ್ದೇನೆಯೇ ಹೊರತು ಕಾನೂನಿಗೆ ತೊಡಕುಂಟು ಮಾಡಲು ಕರೆದುತರಲಿಲ್ಲ. ಕೆಲಸ ಮಾಡಲು ಇಚ್ಛೆಯಿದ್ದರೆ ಪ್ರಾಮಾಣಿಕತೆಯಿಂದ ಕೆಲಸಮಾಡಿ, ಇಷ್ಟವಿಲ್ಲದೆ, ಬೇಸರಪಟ್ಟುಕೊಂಡು ಕೆಲಸಮಾಡದಿರಿ" ಎಂದು ಹೇಳಿದ್ದ. ರಾಮರಾಯ ತನ್ನ ಹಿರಿಯ ತಲೆಮಾರಿನ ಅರಸರು ತೋರಿದ ಹಾದಿಯಲ್ಲೇ ಆಳ್ವಿಕೆಯನ್ನು ನಡೆಸಿದ್ದ. ತನ್ನ ರಾಜ್ಯದಲ್ಲಿ ದೊಡ್ಡ ದೊಡ್ಡ ಅತ್ಯಂತ ಸುಂದರವಾದ ದೇವಾಲಯಗಳನ್ನು ಕಟ್ಟಿಸಿದ್ದ. ದೊಡ್ಡ ಕಟ್ಟಡಗಳನ್ನು ಕಟ್ಟಿಸಿದ್ದ. ರಸ್ತೆಯ ಬದಿಗಳಲ್ಲಿ ನಾಲೆಗಳನ್ನು ತೋಡಿಸಿದ್ದ. ಅಲ್ಲಲ್ಲಿ ನೀರಿನ ತೊಟ್ಟಿಗಳನ್ನು ಮಾಡಿಸಿದ್ದ. ನಗರದ ಮಧ್ಯೆ ದೊಡ್ಡದೊಡ್ಡ ಕೊಳಗಳನ್ನು ಕಟ್ಟಿಸಿ ಅದರಲ್ಲಿ ೭೦ ಕಾರಂಜಿಗಳನ್ನು ಹಾರಿಸುವ ಸುಂದರ ವ್ಯವಸ್ಥೆಯನ್ನು ಮಾಡಿದ್ದ. ನಗರದಲ್ಲಿ ಸುಂದರ ಹೂದೋಟಗಳನ್ನೂ ನಿರ್ಮಿಸಿದ್ದ.

ಈ ತೋಟಗಳಲ್ಲಿ ಹಲವು ವಿಧದ ಹುಳಿಯಾದ, ಸಿಹಿಯಾದ, ರುಚಿಕರವಾದ ಹಣ್ಣುಗಳು ಬೆಳೆಯುತ್ತಿದ್ದವು. ಈ ಅರಸರ ತೋಟದಲ್ಲಿ ಬೆಳೆಯಲಾದ ಹಣ್ಣುಗಳು ತುಂಬ ಪ್ರಖ್ಯಾತವಾಗಿದ್ದವು. ಹೀಗೆ ಅವನು ತನ್ನ ರಾಜ್ಯಭಾರವನ್ನು ತುಂಬ

ಸಂತೋಷದಿಂದ, ಸಮೃದ್ಧವಾಗಿ, ನ್ಯಾಯಯುತವಾಗಿ ನಡೆಸಿದ್ದ. ಒಮ್ಮೆ ಇಂತಹ ರಾಜ್ಯಕ್ಕೆ ಕೆಡು ಕಾಲವೂ ಬಂತು. ಮುಸ್ಲಿಮ್ ರಾಜರು ಒಟ್ಟಾಗಿ ರಾಮರಾಯನ ರಾಜ್ಯವನ್ನು ಮುತ್ತಿಗೆ ಹಾಕಿದರು. ವೈಭವದ ಇವನ ರಾಜ್ಯವನ್ನು ಹಾಳುಗೆಡವಿದರು. ಅವನ ರಾಜ್ಯವನ್ನು ಹಾಳು ಕೊಂಪೆಯನ್ನಾಗಿ ಮಾಡಿದ್ದರು. ಇದಾದ ಹತ್ತು ವರ್ಷಗಳ ನಂತರ ಈ ಲೇಖಕ (ಶಿರಾಜಿ) ಭೇಟಿಯಾದಾಗ ಈ ಸ್ಥಳದಲ್ಲಿ ೨೦ ಮೈಲಿ ದೂರದ ತನಕ ದಟ್ಟ ಕಾಡುಗಳು ಆಕಾಶವನ್ನು ಚುಂಬಿಸುತ್ತಿರುವಂತಹ ದೊಡ್ಡ ಮರಗಳು ಕಾಣಿಸುತ್ತಿದ್ದವು. ಈ ಕಾಡಿನಲ್ಲಿ ಹಿಂಸಾ ಮೃಗಗಳು ತುಂಬಿದ್ದವು.

**ಹಿಂಪಾ(ಹಂಪೆ) ನಗರದಿಂದ ಇಬ್ರಾಹಿಂ ಆದಿಲ್ ಖಾನ ಹಿಂತಿರುಗಿದ್ದು ಮತ್ತು ಬಿಜಾಪುರದಲ್ಲಿ ಕೋಟೆ ನಿರ್ಮಿಸಿದ್ದು ಹಾಗೂ ಇತರ ವಿವರಗಳು**

ಇಬ್ರಾಹಿಂ ಆದಿಲ್ ಖಾನ್ ಹಿಂಪಾ ನಗರದಿಂದ ಹಿಂತಿರುಗಿ ಬಂದಾಗ ಬಿಜಾಪುರದಲ್ಲಿ ಅವನನ್ನು ಅದ್ದೂರಿಯಿಂದ ಪ್ರಜೆಗಳು ಸ್ವಾಗತಿಸಿದ್ದರು. ಈ ರಾಜಮರ್ಯಾದೆಯ ಸ್ವಾಗತ ಬಹಳ ವೈಭವಪೂರ್ಣವಾಗಿತ್ತು. ಆಗ ತನ್ನ ಬಿಜಾಪುರದ ಕೋಟೆ ಹೆಚ್ಚು ಬಲಿಷ್ಠವಾಗಿಲ್ಲವೆಂದು ಬಾದಶಾಹನಿಗೆ ಅನಿಸಿತು. ಕೋಟೆಯನ್ನು ಕೂಡಲೇ ದುರಸ್ತಿಮಾಡಬೇಕಾಗಿದೆ ಎಂದು ತೀರ್ಮಾನಿಸಿ ಕಲ್ಲು ಮತ್ತು ಗಚ್ಚಿ(ಸುಣ್ಣಮೂಲದ ಗಾರೆಯ ವಸ್ತು)ಯನ್ನು ತರಿಸಿ ಕೆಲಸ ಶುರು ಮಾಡಲು ವ್ಯವಸ್ಥೆ ಮಾಡಿದ. ಇದಕ್ಕಾಗಿ ತಂತ್ರಜ್ಞರನ್ನು ಮತ್ತು ಕಟ್ಟಡದ ಕೆಲಸಗಾರ ಪರಿಣಿತರನ್ನು ಕರೆಯಿಸಿ ಕೋಟೆಯ ನಕ್ಷೆಯನ್ನು ತಯಾರಿಸಿದ. ಎರಡು ಆವರಣಗಳು, ಎರಡು ಕಂದಕಗಳನ್ನು ಮಾಡಿಸಿದ. ಆವರಣಗಳ ಮಧ್ಯೆ ಒಂದು ದೊಡ್ಡ, ವಿಶಾಲವಾದ ತೋಟವನ್ನು ಇಡೀ ಕೋಟೆಯನ್ನು ವ್ಯಾಪಿಸುವಂತೆ ನಿರ್ಮಿಸಿದ. ದೊಡ್ಡದೊಡ್ಡ ಮತ್ತು ಬೃಹದಾಕಾರದ ಕಲ್ಲುಗಳು ತಜ್ಞರ ಸಲಹೆಯೊಂದಿಗೆ ಈ ಕೋಟೆಯ ಗೋಡೆಯನ್ನು ನಿರ್ಮಿಸಲಾಯಿತು. ಆವರಣದ ನಿರ್ಮಾಣದಲ್ಲೂ ತಜ್ಞರ ಇದೇರೀತಿಯ ನಿರ್ಮಾಣದ ಕೈಚಳಕವನ್ನು ಉಪಯೋಗಿಸಲಾಯಿತು. ಈ ಕೋಟೆಯ ನಿರ್ಮಾಣವು ಹಿಂದಿನ ಬಾದಶಾಹ ಅಲಿ ಆದಿಲ್ ಷಾ ನಿರ್ಮಿಸಿದ ಕಟ್ಟಗಳಂತೆ ಮಜಬೂತಾಗಬೇಕೆಂದು ಗಮನವಿರಿಸಲಾಗಿತ್ತು. ಈ ತೋಟದಲ್ಲಿ ದ್ರಾಕ್ಷಿ, ದಾಳಿಂಬೆ, ಮಾವು, ಅಂಜೂರ, ನಿಂಬೆ, ಕಿತ್ತಳೆ, ತೆಂಗು ಕಂಗುಗಳು ಕಂಗೊಳಿಸಲೆಂದು ನೆಡಲಾಯಿತು. ಬಣ್ಣ ಬಣ್ಣದ ಹೂಗಳ ಗಿಡಗಳನ್ನು ನೆಡಲಾಗಿತ್ತು. ತೋಟದ ನಾಲ್ಕೂದಿಕ್ಕಿನಲ್ಲಿ ಹಸಿರು ಹುಲ್ಲಿನ ಪುಟ್ಟ ಪಾತಿಗಳನ್ನು ಮಾಡಲಾಗಿತ್ತು. ಅಲ್ಲಿ ಒಂದು ಶುದ್ಧನೀರಿನ ಆಬೆ ಕೌಸರ್(ಸ್ವರ್ಗದ ಪವಿತ್ರ ಕೊಳ)ನಂತಹ ಕೊಳಗಳನ್ನು ನಿರ್ಮಿಸಲಾಯಿತು. ಅದರ ಮೇಲಿಂದ ಚಲಿಸಿ ಬರುವ ತಂಗಾಳಿ ಆಪ್ಯಾಯಮಾನವಾಗಿತ್ತು. ಅಲ್ಲಿ ಹರಿಯುವ ಕಾಲುವೆಗಳೂ ಇದ್ದವು.

ಕೋಟೆಯ ಗೋಡೆಗಳು ಆಕಾಶದ ಎತ್ತರಕ್ಕೆ ಇರುವಂತೆ ಅನಿಸಿತ್ತು. ಅದರ ಹೊಳಪು ರೇಶ್ಮೆಯ ಬಟ್ಟೆಯನ್ನು ಹರಡಿಂತೆ ಭಾಸವಾಗುತ್ತಿತ್ತು. ಕೋಟೆಯ ಒಳಗೆ ಬಾದಶಾಹ ಮತ್ತು ದರ್ಬಾರಿಗಳು, ವಿಶೇಷ ಗಣ್ಯರು, ಅತಿಥಿಗಳು ಈ ಕಟ್ಟಡದಲ್ಲಿ ಆರಾಮವಾಗಿರುವಂತೆ ವ್ಯವಸ್ಥೆ ಮಾಡಲಾಗಿತ್ತು. ಇದರ ಸೌಂದರ್ಯವು ಸ್ವರ್ಗ ಕನ್ನಿಕೆಯರು ಓಡಾಡುವ ಸ್ವರ್ಗಕ್ಕೆ ಸಮಾನವಾಗಿತ್ತು. ಈ ಕೋಟೆಯು ಈಗಲೂ ಸಾರ್ವಜನಿಕರ ಕಣ್ಣಿಗೆ ಹಿತವನ್ನು ನೀಡುವಂತಿದೆ. ಇದರ ಸೌಂದರ್ಯವನ್ನು ವರ್ಣಿಸುವುದು ಅಸಾಧ್ಯವೆನಿಸುತ್ತಿದೆ. ನಾನು ಇಷ್ಟೇ ಹೇಳಲಿಚ್ಛಿಸುತ್ತೇನೆ, "ದೇವರು ಸದಾಕಾಲ ಈ ಕೋಟೆಯ ಘನತೆ ಗೌರವ ಶಾಶ್ವತವಾಗಿಟ್ಟಿರಲಿ. ವಿಶ್ವದ ಎಲ್ಲ ಮಾನವರು ಇದನ್ನು ನೋಡಿ ಸಂತಸ ಪಡುವಂತಾಗಲಿ ಎಂಬ ಈ ದುವಾ ಪ್ರಾರ್ಥನೆಯನ್ನು ಮುಹಮ್ಮದ್ ಮತ್ತು ಅವರ ಅನುಯಾಯಿ ಜೊತೆಗಾರರ ಸಾಕ್ಷಿಯಾಗಿ ದೇವರು ಸ್ವೀಕರಿಸಲಿ. ದೇವರು ಈ ಬಾದಶಾಹನಿಗೆ ನೀಡಿದ ಸಂಪತ್ತು ಐಶ್ವರ್ಯದ ಮೂಲಕ ಸೈನಿಕರು, ಸರದಾರರು, ಅಧಿಕಾರಿಗಳು, ಪ್ರಜೆಗಳು, ಸಾಮಾನ್ಯರು ತಮ್ಮ ದೈನಂದಿನ ಆದಾಯವನ್ನು ಪಡೆಯುತ್ತಿರುವಂತೆ ಅವರ ಖಜಾನೆಯಲ್ಲಿ ಚಿನ್ನ, ಬೆಳ್ಳಿ, ವಜ್ರ, ವೈಢೂರ್ಯದೊಂದಿಗೆ ಬೆಲೆ ಬಾಳುವ ಬಟ್ಟೆಬರೆಗಳು, ಆಯುಧಗಳು ಶಸ್ತ್ರಾಸ್ತ್ರಗಳು ತುಂಬಿ ತುಳುಕಲಿ" ಎಂದು ಹಾರೈಸುತ್ತೇನೆ. ಈ ರೀತಿಯ ಸಂಪತ್ತು ಇವರ ಪರಂಪರೆಯ ಹಿಂದಿನ ಯಾವ ಬಾದಶಾಹರಲ್ಲೂ ಇರಲಿಲ್ಲ. ಇವರ ಮಗನೂ ಇದೇರೀತಿಯಲ್ಲಿ ರಾಜ್ಯಭಾರ ಮಾಡಿದ್ದ. ಈ ಬಾದಶಾಹರ ಆಳ್ವಿಕೆಯು ೩೬ ವರ್ಷಗಳ ಕಾಲ ಬಹಳ ವೈಭವದಿಂದ ನಡೆಯಿತು.

**ಇಬ್ರಾಹಿಂ ಆದಿಲ್ ಖಾನರ ಅಂತಿಮ ಕಾಲದ ವಿವರಗಳು ಮತ್ತು ಅದಕ್ಕೆ ಸಂಬಂಧಿಸಿದ ವಿಚಾರಗಳು**

ಇಬ್ರಾಹಿಂ ಆದಿಲ್ ಖಾನ್ ತನ್ನ ಕೊನೆಯ ದಿನಗಳಲ್ಲಿ ಮೂಲವ್ಯಾಧಿಯಿಂದ ನರಳುತ್ತಿದ್ದರು. ಈ ಅನಾರೋಗ್ಯ ಬಹಳ ಕಾಲದಿಂದ ಅವರನ್ನು ಕಾಡುತ್ತಿತ್ತು. ದೂರ ದೂರದಿಂದ ಪರಿಣಿತ ವೈದ್ಯರು ಅವರಿಗೆ ಚಿಕಿತ್ಸೆ ನೀಡಿದರು. ಇವರೆಲ್ಲರೂ ಅವರನ್ನು ಗುಣಪಡಿಸಲು ಬಹಳ ಪ್ರಯತ್ನಿಸಿದರು. ಆದರೆ ರೋಗ ಉಲ್ಬಣಿಸುತ್ತ ಹೋಗಿ ಕೊನೆಯಲ್ಲಿ ಹಿಜರಿ ವರ್ಷ ೯೬೦ರಲ್ಲಿ ತೀರಿಕೊಂಡರು. 'ಇನ್ನ ಲಿಲ್ಲಾಹಿ ವಿ ಇನ್ನ ಇಲೈಹಿ ರಾಜಿಊನ್' (ನಾವೆಲ್ಲರೂ ಅಲ್ಲಾಹನ ಕಡೆಯಿಂದ ಬಂದಿದ್ದೇವೆ, ಅವನ ಕಡೆಯೇ ಹಿಂತಿರುಗುತ್ತೇವೆ). ಈ ಬಾದಶಾಹ ಸ್ವ ಪ್ರತಿಷ್ಠೆಯನ್ನು ಹೊಂದಿದವನಾಗಿದ್ದ. ಸ್ವಲ್ಪ ಮಟ್ಟಿಗೆ ಅವಸರದ ಸ್ವಭಾವದವನೂ ಆಗಿದ್ದ. ತೀರ್ಪು, ಸಜೆಯ ತೀರ್ಮಾನಗಳನ್ನು ಯೋಚಿಸದೆ ಒಂದೇ ಪೆಟ್ಟಿಗೆ ನೀಡುತ್ತಿದ್ದ. ಆದರೆ ತನ್ನ ಸೈನಿಕರ ಒಳಿತನ್ನು ಹಾರೈಸುವ ಮೂಲಕ ಅವರನ್ನು ಬಹಳ ಜತನದಿಂದ ಕಾಪಾಡುತ್ತಿದ್ದ. ತನ್ನ ಹೆಚ್ಚಿನ

ಸಮಯವನ್ನು ತನ್ನ ಜನಾನಾದಲ್ಲಿನ ಪತ್ನಿಯರ ಸಂಗದಲ್ಲಿ ಸುಖಭೋಗದಲ್ಲಿ ಕಳೆಯುತ್ತಿದ್ದ.

ಇದರಿಂದಾಗಿ ಇವರಿಗೆ ಹಲವಾರು ಮಕ್ಕಳಾದುವು. ಇವರ ಪೈಕಿ ನಾಲ್ಕು ಗಂಡು ಮಕ್ಕಳು ದರ್ಬಾರಿನಲ್ಲಿ ಹೆಚ್ಚಿನ ಸಮಯ ಇರುತ್ತಿದ್ದರು. ದೊಡ್ಡ ಕೆಲಸಕಾರ್ಯಗಳನ್ನು ಶುರು ಮಾಡುವ ಸಂದರ್ಭದಲ್ಲಿ ತನ್ನ ನಾಲ್ಕು ಮಕ್ಕಳಲ್ಲಿ ಒಬ್ಬರ ಹೆಸರಲ್ಲಿ ತೊಡಗುತ್ತಿದ್ದ. ಇದರಿಂದ ಮಕ್ಕಳ ಭಾಗ್ಯದಲ್ಲಿ ಪುಣ್ಯವಿದೆಯೋ ಇಲ್ಲವೋ ಎಂಬುದು ಈ ಕೆಲಸಕಾರ್ಯದ ಪರಿಣಾಮಾನುಸಾರ ತೀರ್ಮಾನ ಮಾಡಿಕೊಳ್ಳುತ್ತಿದ್ದ. ತನ್ನ ಮಕ್ಕಳಲ್ಲಿ ಅವನಿಗೆ ಹಿರಿಯ ಮಗ ಷಾ ಇಸ್ಮಾಯಿಲ್‌ನ ಮೇಲೆ ಹೆಚ್ಚು ಅಸ್ಥೆ ಇತ್ತು. ಅವನು ಮುತ್ತು ಉದುರಿಸುವಂತಹ ತನ್ನ ಮಾತುಗಳ ಮೂಲಕ ಇಸ್ಮಾಯಿಲ್‌ನನ್ನು ತನ್ನ ವಾರೀಸುದಾರನನ್ನಾಗಿ ಮಾಡುವ ಹೇಳಿಕೆಯನ್ನು ನೀಡುತ್ತಿದ್ದ. ಒಂದು ಸಲ ಭವಿಷ್ಯಹೇಳುವ ಮುಸ್ಲಿಂ ಜ್ಯೋತಿಷಿ ಮೌಲಾನಾರೊಂದಿಗೆ ಸಮಾಲೋಚನೆ ನಡೆಸಿದಾಗ ಇನ್ನೋರ್ವ ಮಗ ಷಾ ಅಲಿಯ ಹೆಸರು ಎದ್ದು ಬಂದಿತ್ತು. ಇದರಿಂದಾಗಿ ಷಾ ಇಸ್ಮಾಯಿಲ್ ಮತ್ತು ಷಾ ಅಲಿಯ ಮಧ್ಯೆ ವಿರಸ ಉಂಟಾಗಿತ್ತು. ಒಮ್ಮೆ ಈ ವಿರಸ ಎಷ್ಟರ ಮಟ್ಟಿಗೆ ಉಂಟಾಯಿತೆಂದರೆ ಪರಸ್ಪರ ಕೀಟಲೆಯನ್ನು ಮಾಡಿಕೊಳ್ಳುತ್ತಿದ್ದವರು, ಈಗ ಮುರ್ತರ್ಝಾಬಾದ್ ಎಂದು ಕರೆಯಲಾಗುವ ಆಗಿನ ಮುಬಾರಕಾಬಾದಿನ ಕೋಟೆಯ ಕೋಣೆಯೊಳಗೆ ಹಾಕಿ, ಏಳು ವರ್ಷ ಪ್ರಾಯದ ತನ್ನ ತಮ್ಮ ಷಾ ಅಲಿಯನ್ನು ಷಾ ಇಸ್ಮಾಯಿಲ್ ಒಂಭತ್ತು ವರ್ಷಗಳ ಕಾಲ ಬಾದಶಾಹ ಸಾಯುವ ತನಕವೂ ಬಂಧಿಸಿಟ್ಟಿದ್ದ. ಬಾದಶಾಹ ಜೀವಂತವಾಗಿರುವತನಕವೂ ಹೀಗೆಯೇ ಪರಸ್ಪರ ಘರ್ಷಣೆಯಲ್ಲಿ ತೊಡಗಿದ್ದರು. ದರ್ಬಾರಿನ ಗಣ್ಯರು ಮೂರು ಮಕ್ಕಳನ್ನು ಷಾ ಇಸ್ಮಾಯಿಲ್, ಷಾ ತಹಮಸ್ಫ್, ಷಾ ಅಹ್ಮದ್ ದಿನವೂ ಆಸ್ಥಾನದಲ್ಲಿ ಹಾಜರಿರಬೇಕೆಂದು ತಾಕೀತು ಮಾಡಿದ್ದರು. ಈ ಮೂಲಕ ನಿಮ್ಮಲ್ಲೊಬ್ಬನನ್ನು ನಿಮ್ಮ ತಂದೆ ಬಿಟ್ಟುಹೋದ ಸಿಂಹಾಸನದಲ್ಲಿ ಕುಳ್ಳಿರಿಸಲು ತೀರ್ಮಾನಿಸಲು ಸಾಧ್ಯವಾಗುತ್ತದೆಂದು ಅವರಿಗೆ ತಿಳಿಸಿದ್ದರು.

ಇತರ ಕೆಲವು ಸರದಾರರು ಮತ್ತು ಅಧಿಕಾರಿಗಳು ಮುಬಾರಕಾಬಾದ್ ಕೋಟೆಯಲ್ಲಿರುವ ಷಾ ಅಲಿಗೆ ಸಿಂಹಾಸನವನ್ನು ಕೊಡಬೇಕೆಂದು ಸಲಹೆಯನ್ನು ನೀಡಿದ್ದರು. ಈ ರೀತಿಯ ಸಲಹೆಯನ್ನು ನೀಡಿದವರ ಪೈಕಿ ಖ್ವಾಜಾ ಕಮಾಲ್ ಝುರ್‌ಕೋಬ್ ಲಾರಿ ಎಂಬ ಖ್ಯಾತ ನಾಮರೂ ಸೇರಿದ್ದರು. ಇವರು ಬಹಳ ಕಾಲದ ತನಕ ಇರಾನಿನ ಶೀರಾಜಿಯಲ್ಲಿ ಚಿನ್ನಾಭರಣಗಳನ್ನು ತಯಾರಿಸುವ ಕೆಲಸದಲ್ಲಿದ್ದರು. ಇದರ ನಂತರ ದೀರ್ಘ ಕಾಲದ ತನಕ ಬಾದಶಾಹ ಅನಾರೋಗ್ಯದಿಂದ ನರಳುತ್ತಿದ್ದ ಸಂದರ್ಭದಲ್ಲಿ ದಕ್ಷಿಣದಲ್ಲಿದ್ದರು. ಆಗ ಇವರು ಬಾದಶಾಹರ ರಾಜ್ಯಾಡಳಿತದ ಕೆಲಸಗಳಲ್ಲಿ

ಸಹಾಯ ಮಾಡುತ್ತಿದ್ದರು. ಅವರ ಅಭಿಪ್ರಾಯವೂ ಕೂಡ ಷಾ ಅಲಿ ಆದಿಲ್ ಷಾನಿಗೆ ಪಟ್ಟಾಭಿಷೇಕ ನಡೆಸುವುದಕ್ಕೆ ಪರವಾಗಿತ್ತು. ಈ ಖ್ವಾಜಾ ಕಮಾಲ್ ತನ್ನ ಸಂಪೂರ್ಣ ಪ್ರಯತ್ನ ನಡೆಸಿದರು. ದರ್ಬಾರಿನ ಸಮಸ್ತ ಸರದಾರರು ಮತ್ತು ಅಧಿಕಾರಿಗಳನ್ನು ಒಟ್ಟಾಗಿ ಷಾ ಅಲಿಯ ಪರವಾಗಿ ಒಮ್ಮತದ ನಿರ್ಣಯಕ್ಕೆ ಬರಲು ಸಭೆ ಕರೆದಿದ್ದರು. ಕೆಲವರು ತಮ್ಮ ಅಭಿಪ್ರಾಯ ಇದರ ಪರವಾಗಿಲ್ಲದಿದ್ದರೂ ಪ್ರಾಮಾಣಿಕತೆಗೆ ಹೆಸರಾದ ಖ್ವಾಜಾ ಕಮಾಲರ ಮಾತಿಗೆ ಗೌರವ ನೀಡಿ ಅವರ ಪರವಾಗಿ ಬೆಂಬಲ ನೀಡಿದರು. ಕೆಲವರು ಮುಂದೇನಾಗುತ್ತದೆ ನೋಡುವ ಎನ್ನುವ ಕುತೂಹಲಕ್ಕೆ ಅಂತರ್ಯದಲ್ಲಿ ತೀರ್ಮಾನದ ಪರವಾಗಿಲ್ಲದಿದ್ದರೂ ಬೆಂಬಲವನ್ನು ನೀಡಿದರು. ಈ ಮಧ್ಯೆ ಅಲ್ಲಿಯ ತನಕ ಹಲವರಿಗೆ ರಹಸ್ಯವಾಗಿದ್ದ ಬಾದಶಾಹನ ಮರಣವಾರ್ತೆಯು ಪ್ರಸಾರವಾಯಿತು.

ಬಾದಶಾಹರ ಮರಣವಾರ್ತೆ ಎಲ್ಲರಿಗೂ ತಿಳಿದನಂತರ ಸಮಸ್ತರು ಮುಬಾರಕಾಬಾದ್ ಕೋಟೆಯ ಮುಂದೆ ಇರುವ ಶಮ್ಸ ಮೀರಾರ ರೌಜಾದ ಮುಂದೆ ಕೂತು ಸಭೆ ಸೇರಿದರು. ಈ ಸಭೆಯಲ್ಲಿ ಷಾ ಅಲಿ ಆದಿಲ್ ಷಾನನ್ನು ಸಿಂಹಾಸನದಲ್ಲಿ ಕೂರಿಸುವ ಶಪಥವನ್ನು(ಬೈತ್) ಮಾಡಲಾಯಿತು. ಎಲ್ಲ ತೀರ್ಮಾನ ಕೈಗೊಂಡ ನಂತರ ಎಲ್ಲರೂ ಸೇರಿ ಅರಮನೆಯಿಂದ ಬಾದಶಾಹರ ಶವವನ್ನು ಶಮ್ಸ ಮೀರಾರ ರೌಜಾದಲ್ಲಿರಿಸಿ ಇನ್ನು ಮುಂದೆ ಯಾರು ಕೂಡ ಅಲಿ ಆದಿಲ್ ಷಾನನ್ನು ಸಿಂಹಾಸನದಲ್ಲಿ ಕೂರಿಸುವುದಕ್ಕೆ ವಿರೋಧಿಸುವುದಿಲ್ಲವೆಂದು ಒಕ್ಕೊರಳಲ್ಲಿ ಶಪಥ ಕೈಗೊಂಡರು.

■

*

## ಅಧ್ಯಾಯ-೬

# ಜಹಾಂಪನಾ ಷಾ ಅಲಿ ಆದಿಲ್ ಷಾನ ರಾಜ್ಯಭಾರದ ವಿವರಗಳು

(ಮುಂದೆ 'ಜಹಾಂಪನಾ' ಎಂದು ಬಂದಲ್ಲಿ ಷಾ ಅಲಿ ಆದಿಲ್ ಷಾ ಎಂದು ಪರಿಗಣಿಸ ಬೇಕು)

ಸಮಸ್ತ ದರ್ಬಾರಿಗಳು ಶಮ್ತ ಮೀರಾ ರೌಜಾದಲ್ಲಿ ನಡೆದ ಸಭೆಯಲ್ಲಿ ಕೈಗೊಂಡ ತೀರ್ಮಾನದಂತೆ ಜಹಾಂಪನಾರ ತಲೆಯ ಮೇಲೆ ಬಾದಶಾಹ ಪಟ್ಟದ ಜವಾಬ್ದಾರಿಯನ್ನು ಹೊರಿಸಲಾಯಿತು. ಒಂದು ಒಳ್ಳೆಯ ಮುಹೂರ್ತವನ್ನು ನೋಡಿ ಶಾಹಿ ತಲ್ವಾರನ್ನು ಅವರ ಸೊಂಟಕ್ಕೆ ತೊಡಿಸಲಾಯಿತು. ಸಾರ್ವಜನಿಕರು ಬಹಳ ಸಂಖ್ಯೆಯಲ್ಲಿ ಸೇರಿ ತಮ್ಮ ಹಣೆಯನ್ನು ಭೂಮಿಗೆ ತಾಗಿಸಿ ಶುಭಕೋರಿದರು. ಮುಂದೆ ಎಲ್ಲರೂ ಅವರವರ ಊರಿಗೆ ನಿರ್ಗಮಿಸಿದರು. ದಿನ ನಿತ್ಯವೂ ನಾಲ್ಕೂ ದಿಕ್ಕಿನಿಂದ ಶುಭಾಶಯಗಳು, ಉಡುಗೊರೆಗಳು ಬರತೊಡಗಿದವು. ಒಬ್ಬ ಜವಾಬ್ದಾರಿಯುತ ಮನುಷ್ಯನನ್ನು ನಗರಕ್ಕೆ ಕಳುಹಿಸಲಾಯಿತು. ಇವನು ಅಲ್ಲಿನ ಗವರ್ನರ (ಹಾಕಿಮ್)ನನ್ನು ಕರೆದು ಆಸ್ಥಾನವನ್ನು ನಡೆಸಲು ಆದೇಶಿಸಲಾಯಿತು. ಈ ಗವರ್ನರ್ ಜೀತ್ ಖಾನ್ ಎಂಬ ಸ್ಥಳೀಯ (ಹಿಂದುಸ್ಥಾನದ) ಗುಲಾಮನಾಗಿದ್ದ. ಇವನು ಇತ್ನಾ ಅಶೀರಿ ಪಂಗಡಕ್ಕೆ(ಷಿಯಾ) ಸೇರಿದವನಾಗಿದ್ದ. ಇವನು ಆಸ್ಥಾನಕ್ಕೆ ಸಂಬಂಧಿಸಿದ ಕೆಲಸಗಳನ್ನು, ಕೋಟೆಯ ಗೋಡೆಗಳು ಆವರಣ ಮತ್ತು ಬಾಗಿಲುಗಳನ್ನು ಗಟ್ಟಿಗೊಳಿಸುವ ರಿಪೇರಿ ಕೆಲಸಗಳು, ಆಡಳಿತಕ್ಕೆ ಸಂಬಂಧಿಸಿದ ಕೆಲಸಗಳನ್ನು ನಿಯತ್ತಿನಿಂದ ಮಾಡುತ್ತಿದ್ದ. ಬಾದಶಹರ ಆಡಳಿತದಲ್ಲಿ ಪ್ರಾಮಾಣಿಕತೆಯಿಂದ ಕೆಲಸಮಾಡುತ್ತಿದ್ದ. ಅಂದಿನ ಕೆಲವು

ಸರದಾರರು, ಅಧಿಕಾರಿಗಳು ಇವನ ಜೊತೆಗೆ ಸೇರಿದ ಬೆಂಬಲಿಗರು ಈ ರಾಜಕುಮಾರರನ್ನು ಬಿಟ್ಟು ಬಾದಶಾಹರಿಗೆ, ರಾಜ್ಯಕ್ಕೆ ನಿಷ್ಠಾವಂತನಾಗಿರುವ ಈತನನ್ನು ಸಿಂಹಾಸನದಲ್ಲಿ ಕೂರಿಸಿದ್ದರೆ ಚೆನ್ನಾಗಿರುತ್ತಿತ್ತೆಂದು ಅಭಿಪ್ರಾಯಪಟ್ಟಿದ್ದರು. 'ಮುಬಾರಕಾಬಾದಿನಲ್ಲಿದ್ದ ರಾಜಕುಮಾರ ಷಾ ಅಲಿಯನ್ನು ಎಲ್ಲರ ಒಮ್ಮತದ ಅಭಿಪ್ರಾಯದೊಂದಿಗೆ ಬಾದಶಾಹನನ್ನಾಗಿ ನೇಮಿಸಲಾಗಿದೆ. ನಾನು ಈ ರೀತಿ ಯೋಚಿಸಿದರೂ ಕೂಡ ಬಂಡಾಯವೆದ್ದಂತೆ ಆಗುತ್ತದೆ. ಅಧಿಕಾರಿಗಳು ಮತ್ತು ಸರದಾರರ ಮಧ್ಯೆ ವಾದವಿವಾದ, ಘರ್ಷಣೆಯಾಗಿ ದರ್ಬಾರಿನ ಶಾಂತಿ ಭಂಗವಾಗಿ ಸೈನಿಕರ ಮಧ್ಯೆ, ಜನರ ಮಧ್ಯೆ ಬೀದಿ ಘರ್ಷಣೆಗಳಿಗೆ ಕಾರಣವಾಗಿ ರಾಜ್ಯದ ಹೊರಗಿನ ವೈರಿಗಳಿಗೆ ಯುದ್ಧ ಹೂಡಲು ಕೋಟೆಯ ಒಳಗೆ ಬರಲು ಒಳ್ಳೆಯ ಅವಕಾಶ ದೊರಕಿದಂತಾಗಬಹುದು' ಎಂದು ಅವನು ಅವರಿಗೆ ಉತ್ತರಿಸಿದ್ದ.

'ತಾಳ್ಮೆಯಿಂದ ಇರಿ. ದರ್ಬಾರಿನೊಳಗೆ ಅವರು ಪ್ರವೇಶಿಸಲಿ. ನಿಮ್ಮ ಮತ್ತು ನಮ್ಮ ಅಭಿಪ್ರಾಯವನ್ನು ಅವರ ಮುಂದೆ ಮುಕ್ತವಾಗಿ ಇಡೋಣ. ನಾನಂತೂ ಎಲ್ಲರಿಗೂ ವಿಧೇಯನಾದವನು. ಎಲ್ಲರ ಅಭಿಪ್ರಾಯಕ್ಕೆ ತಲೆ ಬಾಗುವವನಾಗಿದ್ದೇನೆ' ಎಂದು ಮಾತನ್ನು ಮುಂದುವರಿಸುತ್ತ ಜೀತ್ ಖಾನ್ ಹೇಳಿದ. ಅಲಿ ಅದಿಲ್ ಷಾನ ದೂತ ಮೊದಲು ದರ್ಬಾರನ್ನು ಪ್ರವೇಶಿಸಿದ. ಮಂತ್ರಿಗಳು, ಸರದಾರರು, ಅಧಿಕಾರಿಗಳು ಒಂದು ಗೂಡಿ ತಮ್ಮ ಅಭಿಪ್ರಾಯವನ್ನು ಅವನಿಗೆ ತಿಳಿಸಿದರು. ಎಲ್ಲರ ಮಾತಿನ ಒಟ್ಟು ಅಭಿಪ್ರಾಯವೆಂದರೆ, ಹಾಕಿಮ್(ಗವರ್ನರ್) ಜೀತ್ ಖಾನ್ ಈಗ ಸದ್ಯಕ್ಕೆ ಬಾದಶಾಹರ ಸಹೋದರರು, ಸೈನ್ಯ ಮತ್ತು ಕೋಟೆಯನ್ನು ನೋಡಿಕೊಳ್ಳುವ ಸಂಪೂರ್ಣ ಜವಾಬ್ದಾರಿಯನ್ನು ಹೊತ್ತವನಾಗಿದ್ದಾನೆ. ಅವನನ್ನು ಈಗ ದರ್ಬಾರಿಗೆ ಕರೆಸಬೇಕೆಂದು ಒತ್ತಾಯಿಸಿದರು. ಈ ವಿಷಯವನ್ನು ಜಹಾಂಪನಾರ ಸಮ್ಮುಖಕ್ಕೆ ತಲಪಿಸಲಾಯಿತು. ಜಹಾಂಪನಾರವರಿಗೆ ಈ ಸುದ್ದಿ ಮುಟ್ಟಿದಾಗ ನಗರದ ಸಮಸ್ತ ನಾಗರಿಕರು ಹೊರಗೆ ಬಂದು ಅವರ ಮುಂದೆ ತಮ್ಮ ಬೆಂಬಲವನ್ನು ವ್ಯಕ್ತಪಡಿಸಿದರು. ಮೂವರೂ ರಾಜಕುಮಾರರು ಮತ್ತು ಜೀತ್ ಖಾನ್, ಜಹಾಂಪನಾ ಕೋಟೆಯಲ್ಲಿ ಕೂತು ಸಭೆ ನಡೆಸಿದರು. ದಿವಂಗತ ಬಾದಶಾಹರ ವಿಧೇಯ ಪ್ರಾಮಾಣಿಕ ಸೇವಕನಾಗಿ ಅರಮನೆಯ ಕೆಲಸ ಕಾರ್ಯಗಳ ಅಧಿಕಾರಿಯಾಗಿದ್ದ ಅಮಾತ್ ಖಾನ್ ಕೋಟೆಯ ಹೊರಗಿದ್ದ ಜಹಾಂಪನಾನ ಮಗನನ್ನು ಒಳಗೆ ಕರೆದುಕೊಂಡು ಬಂದು ಅವರ ವಶಕ್ಕೆ ಒಪ್ಪಿಸಿದ. ನಿಶ್ಚಿತ ಶುಭವೇಳೆ ಬಂದಾಗ ದರ್ಬಾರಿನ ಕಡೆ ತೆರಳಿ ಆ ಮಗುವನ್ನು ಮತ್ತೆ ಎತ್ತಿಕೊಂಡು ಹೋಗಿ ಸಿಂಹಾಸನದಲ್ಲಿ ಕುಳ್ಳಿರಿಸಿಬಿಟ್ಟ.

ಸಮಸ್ತ ಜಗತ್ತು ಈ ಸೇವಕನ ಕಾರ್ಯದಿಂದ ಪುಳಕಿತಗೊಂಡಿತು! ಅವನ ಹೆಸರು ಹಾತಿಮನಂತೆ ಪ್ರಖ್ಯಾತವಾಯಿತು! ವಿಶ್ವದೆಲ್ಲೆಡೆ ಇವನ ನ್ಯಾಯ ತೀರ್ಮಾನದ

ಕಾರ್ಯದ ಸುದ್ದಿ ತಲಪಿತು. ಬಾದಶಾಹನ ದರ್ಬಾರಿಗಳು, ಅಧಿಕಾರಿಗಳು, ನಾಗರಿಕರು ದೊಡ್ಡ ರೀತಿಯ ಅಪಾಯವೊಂದರಿಂದ ಸುಲಭದಿಂದ ಪಾರಾದುದರಿಂದ ಸಂತಸಗೊಂಡರು. ಕೆಲವು ಸರದಾರರಿಗೆ ಅವರ ತಾಕತ್ತಿನ ಮೇರೆಗೆ ಮೇಲ್ದರ್ಜೆಯ ಅಧಿಕಾರದ ಜವಾಬ್ದಾರಿಯನ್ನು ನೀಡಲಾಯಿತು. ಖ್ವಾಜಾ ಕಮಾಲ್ ಝುರ್‌ಕೋಬ್ ಲಾರಿಗೆ 'ಕಿಶ್ವರ್ ಖಾನ್' ಎಂಬ ಬಿರುದು ನೀಡಿ ಪ್ರಧಾನ ಮಂತ್ರಿಯ ಸ್ಥಾನವನ್ನು ನೀಡಲಾಯಿತು. ಹೀಗೆ ಬಾದಶಾಹ ಅಲಿ ಆದಿಲ್ ಷಾನು ತನ್ನ ಈ ಪಟ್ಟಾಭಿಷೇಖದ ಸಂದರ್ಭದಲ್ಲಿ ಅರ್ಹರನ್ನು ಕರೆದು ಸನ್ಮಾನಿಸಿ ಉಡುಗೊರೆ ಕಾಣಿಕೆಗಳನ್ನು ನೀಡಿದ. ಈ ಬಾದಶಾಹ ತನ್ನ ಚಿಂತನೆ ಮತ್ತು ನಡತೆಯಲ್ಲಿ ಆರೋಗ್ಯವಂತ ವಿಚಾರಗಳನ್ನು ಹೊಂದಿದ್ದ. ಹೆಚ್ಚು ಅಲಂಕಾರ ಮಾಡಿಕೊಳ್ಳುವುದನ್ನು ಬಯಸುತ್ತಿರಲಿಲ್ಲ. ಬಹಳ ಸಾಮಾನ್ಯ ಮತ್ತು ಸಾದಾ ಮನುಷ್ಯನಂತೆ ವಿನೀತನಾಗಿದ್ದ. ತನ್ನನ್ನು ತನ್ನ ಗುಣ ನಡತೆಯನ್ನು ಮನಸ್ಸನ್ನು ಅರಿತು ಹಿಡಿತದಲ್ಲಿಟ್ಟು ಕೊಳ್ಳುವ ಸೂಫಿ ಸಂತರ ರೀತಿಯ ಮನುಷ್ಯನಾಗಿದ್ದ. ಸಾಧು ಸನ್ಯಾಸಿಗಳು ಫಕೀರರು, ದರ್ವೇಶ್‌ಗಳು ಹಿಂದುಗಳಾಗಲಿ, ಮುಸ್ಲಿಮರನ್ನಾಗಲಿ ಕಂಡಾಗ ಅವರ ಜೊತೆಗೆ ಕೂತುಬಿಡುತ್ತಿದ್ದ. ಅವರು ಎಲ್ಲಿ ಹೋದರೋ ಅಲ್ಲಿಗೆ ತಾನೂ ಒಂಟಿಯಾಗಿ ಅವರನ್ನು ಹಿಂಬಾಲಿಸುತ್ತಿದ್ದ. ಅವರ ಜೊತೆಗೆ ಏಕಾಂಗಿಯಾಗಿ ನಡೆಯುತ್ತಿದ್ದ. ಅವರ ಜೊತೆಗೆ ತಮಾಷೆಯ ಮಾತುಗಳನ್ನಾಡಿ ಅವರನ್ನು ಸಂತೋಷಗೊಳಿಸುತ್ತಿದ್ದ. ಯಾರಾದರೂ ಸಂಕಷ್ಟದಲ್ಲಿದ್ದರೆ ಅವರಿಗೆ ಸ್ವತಃ ಹೋಗಿ ಸಹಾಯಮಾಡುತ್ತಿದ್ದ. ತನ್ನನ್ನು ರಾಜ್ಯಭಾರ ಮತ್ತು ಸಂಪತ್ತಿನ ಹಿಡಿತದಲ್ಲಿ ಸಿಕ್ಕಿಸಿಕೊಳ್ಳಲು ಬಯಸುತ್ತಿರಲಿಲ್ಲ. ಲೌಕಿಕ ಮೋಹಕ್ಕೆ ಹೆಚ್ಚು ಮಹತ್ವ ನೀಡುತ್ತಿರಲಿಲ್ಲ. ಲೌಕಿಕ ಕೆಲಸಗಳಲ್ಲಿ ಆಸಕ್ತಿ ತೋರಿದವರಿಗೆ ತನ್ನ ಪಾಲಿನ ಲೌಕಿಕ ಜವಾಬ್ದಾರಿಯನ್ನು ಒಪ್ಪಿಸಿಬಿಡುತ್ತಿದ್ದ. ಅವನ ಜೊತೆಗಾರರು ಆಪ್ತರು ಸಂಕಷ್ಟದಲ್ಲಿದ್ದವರಿಗೆ ಎಷ್ಟೊಂದು ಭಕ್ಷೀಸುಕೊಡುತ್ತಿದ್ದನೆಂದರೆ ಹೃದಯ ತುಂಬಿ ಆನಂದಭಾಷ್ಪಗಳನ್ನು ಸುರಿಸುತ್ತಿದ್ದರು. 'ಬದುಕಿ ಉಳಿದರೆ ನಾನು ಹೇಳುತ್ತೇನೆ, ಕೇಳುತ್ತೇನೆ, ತೋರಿಸಿಕೊಡುತ್ತೇನೆ' ಎಂದು ತನಗೆ ಬುದ್ಧಿ ಹೇಳಲು, ಸಮಜಾಯಿಸಿ ಮಾಡಲು ಬರುವವರಿಗೆ ಅಧ್ಯಾತ್ಮದ ಮಾತುಗಳನ್ನು ಹೇಳುತ್ತಿದ್ದ. ಇನ್ನಿತರ ಬಾದಶಾಹರಿಗೆ ಈ ಮನುಷ್ಯನ ನಡತೆ, ಚಲನವಲನ, ಅಭ್ಯಾಸಗಳ ಬಗ್ಗೆ ತಿಳಿದಾಗ ಇವನೊಬ್ಬ ಹುಚ್ಚನೆಂದೂ, ನಿರುಪಯೋಗಿ ಮನುಷ್ಯನೆಂದು ಅಂದುಕೊಂಡರು. ಈ ಬಾದಶಾಹರುಗಳ ಆಸೆಬುರುಕ ಮನಸ್ಸು ಈ ರಾಜ್ಯವನ್ನು ಕಬಳಿಸುವ ಬಗ್ಗೆ ಯೋಚಿಸ ತೊಡಗಿದವು. ಇದಕ್ಕಾಗಿ ಸೈನ್ಯ ಹೊಂದಿಸಲು ತೊಡಗಿದರು.

ಮೊದಲನೆಯ ಬಾರಿ ಈ ಬಾದಶಾಹರು ಮಾಡಿದ ಪ್ರಯತ್ನದಲ್ಲಿ ಯಶಸ್ವಿಯಾಗಲಿಲ್ಲ. ಬರಿಯ ಮಾತುಕತೆಯಲ್ಲಿ ಮುಗಿದುಹೋಯಿತು. ಇದರ

ಪರಿಣಾಮದಿಂದ ಈ ಬಾದಶಾಹರು ನೆರೆ ಹಿಂಪಾನಗರದ (ಹಂಪೆಯ) ರಾಮರಾಜನ ಸಹಾಯಪಡೆದು ಆಕ್ರಮಣ ಮಾಡಲು ಹವಣಿಸಿದರು. ಈ ಯೋಜನೆಯಂತೆ ರಾಮರಾಜನ ಜೊತೆಗೆ ಸ್ನೇಹಮಾಡಲು ಪ್ರಯತ್ನಮಾಡಿದರು. ತಮ್ಮ ದೂತರನ್ನು ಒಬ್ಬರ ಹಿಂದೆ ಒಬ್ಬರಂತೆ ಪತ್ರಗಳನ್ನು ಕೊಟ್ಟು ರಾಮರಾಜನ ಆಸ್ಥಾನಕ್ಕೆ ಕಳುಹಿಸತೊಡಗಿದರು. ಈ ಬಾದಶಾಹರ ಮಧ್ಯೆ ಜಹಾಂಪನಾ ಹಿಂಪಾನಗರಕ್ಕೆ ಒಂಟಿಯಾಗಿ ಹೋಗಿ ರಾಮರಾಜನನ್ನು ಭೇಟಿಯಾಗಬೇಕೆಂಬ ಒಂದು ಕರಾರು ಕೂಡ ಆಯಿತು. ಇವರಿಬ್ಬರೂ ಸೇರಿ ನಿಜಾಂ ಷಾನ ಮೇಲೆ ಆಕ್ರಮಣ ಮಾಡಿ ಸೇಡು ತೀರಿಸಿಕೊಳ್ಳಬೇಕೆಂದು ತೀರ್ಮಾನಿಸಲಾಯಿತು.

**ಜಹಾಂಪನಾ ಹಿಂಪಾನಗರಕ್ಕೆ ರಾಮರಾಜರನ್ನು ಭೇಟಿಯಾಗಲು ಮಾಡಿದ ಪ್ರಯಾಣದ ವಿವರಗಳು**

ಜಹಾಂಪನಾರಿಗೆ ರಾಜ್ಯಾಡಳಿತಕ್ಕೆ ಸಂಬಂಧಿಸಿದ ಜವಾಬ್ದಾರಿಯುತ ಕೆಲಸಗಳ ಒತ್ತಡಗಳು ಬಹಳ ಇದ್ದರೂ, ಅಲ್ಲಾಹನ ಮೇಲೆ ಭರವಸೆಯಿಟ್ಟುಕೊಂಡು ಆಪ್ತರ ಸಲಹೆಯಂತೆ ಪರಿವಾರದವರು, ಅಂಗರಕ್ಷಕರು ಮತ್ತು ಸೈನ್ಯದ ತುಕುಡಿಯನ್ನು ಸೇರಿಸಿಕೊಂಡು ರಾಮರಾಜನನ್ನು ಭೇಟಿಮಾಡಲು ಹಿಂಪಾ ನಗರಕ್ಕೆ ಪ್ರಯಾಣ ಬೆಳೆಸಿದರು. ರಾಮರಾಜನಿಗೆ ಈ ವರ್ತಮಾನ ತಿಳಿದಾಗ ಅವರ ಸ್ವಾಗತಕ್ಕಾಗಿ ತನ್ನ ಹಿರಿಯ ಮಂತ್ರಿಗಳ ತಂಡವನ್ನು ಕೃಷ್ಣಾ ನದಿಯ ದಡಕ್ಕೆ ಕಳುಹಿಸಿದ. ಕೃಷ್ಣಾನದಿಯ ದಡದಿಂದ ಹಿಂಪಾ ನಗರಕ್ಕೆ ೨೨ ಮೈಲು ದೂರದಲ್ಲಿದೆ. ಇಲ್ಲಿಂದ ಬಿಜಾಪುರಕ್ಕೆ ೧೪ ಮೈಲು ದೂರದಲ್ಲಿದೆ. ಕೃಷ್ಣಾನದಿಯ ದಡಕ್ಕೆ ಪ್ರತೀದಿನ ರಾಮರಾಜನ ಸರದಾರರಲ್ಲಿ ಒಬ್ಬ ಬಂದು ಪ್ರಯಾಣದ ಮಧ್ಯೆ ಊಟ ಉಪಚಾರವನ್ನು ಮಾಡಲು ಬರುತ್ತಿದ್ದ. ಕುದುರೆ ಮತ್ತು ಆನೆಗಳಿಗೆ ಆಹಾರ, ಹುಲ್ಲುಗಳನ್ನು ಒದಗಿಸುತ್ತಿದ್ದರು. ಅವರಿಗೆ ಉಡುಗೊರೆಗಳನ್ನು ಕೂಡ ರಾಮರಾಜ ಕಳುಹಿಸಿಕೊಡುತ್ತಿದ್ದ. ತನ್ನ ಸರದಾರರೊಂದಿಗೆ ಅವರ ಘನತೆ ಗೌರವವನ್ನು ಕಾಪಾಡುವ ರೀತಿಯಲ್ಲಿ ನಡೆದುಕೊಳ್ಳುವಂತೆ ಆಜ್ಞಾಪಿಸಿದ್ದ.

ಜಹಾಂಪನಾ ಕೂಡ ತನ್ನ ಘನತೆಗೆ ತಕ್ಕಂತೆ ಮತ್ತು ಅದಕ್ಕೂ ಮೀರಿದ ಬೆಲೆಯ ಉಡುಗೊರೆಗಳನ್ನು ನೀಡಿದ. ಇಬ್ಬರು ಮಹಾರಾಜರು ಪರಸ್ಪರ ಪೈಪೋಟಿಯಲ್ಲಿರುವಂತೆ ತಮ್ಮ ಘನತೆ ಗೌರವಕ್ಕೆ ಮೀರಿದ ಉಡುಗೊರೆಗಳನ್ನು ನೀಡುವುದು ಪಡೆದುಕೊಳ್ಳುವ ಪ್ರಕ್ರಿಯೆ ನಡೆಯುತ್ತಲೇ ಇತ್ತು. ಇದರ ಮೂಲಕ ನಡೆದ ಒಂದು ಆರೋಗ್ಯವಂತ ಪೈಪೋಟಿಯು ಇತಿಹಾಸದಲ್ಲಿ ಎಂದೂ ನಡೆದಿರಲಿಕ್ಕಿಲ್ಲ. ಈ ನಡವಳಿಕೆಯ ವಿವರಗಳನ್ನು ಇಲ್ಲಿ ನಾನು ಶಬ್ಧಗಳಲ್ಲಿ ಹಿಡಿದಿಡಲು ಸಾಧ್ಯವಾಗುತ್ತಿಲ್ಲ. ರಾಮರಾಜನ ಆಜ್ಞೆಯಂತೆ ಅತಿಥಿಗಳು ಬರುವ ಹಾದಿಯಲ್ಲಿ ಬೆಲೆಬಾಳುವ ವಸ್ತ್ರಗಳನ್ನು ಹಾಸಲಾಯಿತು. ಮುತ್ತು ಹವಳಗಳು ರತ್ನ ಖಚಿತ ಶಸ್ತ್ರಾಸ್ತ್ರಗಳನ್ನು ಹಾದಿಯುದ್ದಕ್ಕೂ ಪ್ರದರ್ಶನ

ಮಾಡಲಾಯಿತು. ಗಲ್ಲಿಗಲ್ಲಿಗಳನ್ನು, ಮಾರುಕಟ್ಟೆಗಳನ್ನು ಸಿಂಗರಿಸಲಾಯಿತು. ರಾಮರಾಜ ತನ್ನ ದರ್ಬಾರಿಗಳು, ಸಹೋದರರರೊಂದಿಗೆ ೬ ಮೈಲಿ ದೂರದ ತನಕ ಬಂದು ಅತಿಥಿಗಳನ್ನು ಸ್ವೀಕರಿಸಿ ಸ್ವಾಗತಿಸಲು ಕಾದು ನಿಂತಿದ್ದ. ತನ್ನ ಜೊತೆಗೆ ಮೆರವಣಿಗೆಯಲ್ಲಿ ಸಿಂಗರಿಸಲಾದ ಕುದುರೆ, ಆನೆಗಳು, ಸೈನಿಕರು ಶಿಸ್ತು ಬದ್ಧರಾಗಿ ಸಾಲಾಗಿ ನಿಂತಿದ್ದರು. ಹೀಗೆ ಒಂದು ಅದ್ಭುತ ಅದ್ದೂರಿಯ ಸ್ವಾಗತ ಎಂದೂ ಕಂಡಿರಲಾದ ದ್ರಶ್ಯವಾಗಿತ್ತು. ಜಹಾಂಪನಾನನ್ನು ಭೇಟಿಯಾದಾಗ ರಾಮರಾಜ ಅವನ ತಲೆಯ ಮೇಲೆ ಚಿನ್ನ ಮತ್ತು ಮುತ್ತಿನ ಮಳೆಗೆರಿಸಿದ. ಬೆಲೆಬಾಳುವ ವಸ್ತ್ರಗಳನ್ನು, ಮುತ್ತು ಹವಳಗಳನ್ನು ದಾರಿಯುದ್ದಕ್ಕೂ ಸುರಿದು ನಿವಾಳಿಸಿ ತೆಗೆಯಲಾಯಿತು. ತುಂಗ ಭದ್ರಾ ನದಿ ತಟದಲ್ಲಿ ಹಸಿರು ತೋರಣದಂತಿರುವ ಹೃದಯ ಸೂರೆಗೊಳ್ಳುವ ಪ್ರಕೃತಿ ಸೌಂದರ್ಯದ ಮಡಿಲಲ್ಲಿರುವ ದೊಡ್ಡ ಮೈದಾನದಲ್ಲಿ ಜಹಾಂಪನಾ ಮತ್ತು ಪರಿವಾರದವರು ತಂಗಲು ವ್ಯವಸ್ಥೆ ಮಾಡಲಾಗಿತ್ತು. ಈ ವಿಶಾಲ ಮೈದಾನದಲ್ಲಿ ಬಣ್ಣಬಣ್ಣದ ಜಮಖಾನಗಳನ್ನು ಹಾಸಲಾಗಿತ್ತು. ರೇಶ್ಮೆಯ ಪರದೆಗಳನ್ನು ನಾಲ್ಕೂ ದಿಕ್ಕಿನಲ್ಲಿ ಹಾಕಲಾಗಿತ್ತು. ಜಮಖಾನಗಳ ಮೇಲೆ ಮಕ್ಮಲಿನ ಮೆತ್ತಗಿನ ಹಾಸನ್ನು ಹಾಸಲಾಗಿತ್ತು. ದರ್ಬಾರಿನ ಸಭೆಯಲ್ಲಿ ಅಂಬರ್, ಊದ್, ಮುಷ್ಕ್ ಮುಂತಾದ ಸುಗಂಧ ದ್ರವ್ಯಗಳನ್ನು ಹರಡಿಸಲಾಗಿತ್ತು. ಇವಿಷ್ಟು ಜಹಾಂಪನಾರ ಆತಿಥ್ಯಕ್ಕಾಗಿ ಮಾಡಿದ ಏರ್ಪಾಡು ಆಗಿದ್ದರೆ, ಸ್ವತ್ಯಃ ರಾಮರಾಜರ ದರ್ಬಾರು ನಡೆಯಲು ಮಾಡಿದ ಏರ್ಪಾಡುಗಳು ಹಿಂದೂ ಧರ್ಮದ ರೀತಿ ರಿವಾಜುಗಳಿಗೆ ಅನ್ವಯಿಸುವಂತೆ ಅತ್ಯಂತ ಸುಂದರವಾಗಿ ಸಿಂಗರಿಸಲ್ಪಟ್ಟಿತ್ತು. ತಮ್ಮ ಕೆಂಪಾದ ಗಲ್ಲಗಳನ್ನು ಪ್ರದರ್ಶಿಸುತ್ತಾ ಹಾಡಿ ನರ್ತಿಸುವ ಸುಂದರ ನರ್ತಕಿಯರು ಅಲ್ಲಿ ನರ್ತಿಸುತ್ತಿದ್ದರು. ಗಾಯನದ ಬೈಠಕಿನಲ್ಲಿ ಗಾಯಕರು ಹಾಡಿದ ಗಾಯನಕ್ಕೆ ತಲೆದೂಗಿದ ಪ್ರೇಕ್ಷಕ ವೃಂದ ಮತ್ತೆಮತ್ತೆ ಹಾಡಲು ಪ್ರೋತ್ಸಾಹಿಸುತ್ತಿತ್ತು.

ಇವರಿಬ್ಬರೂ ಮಹಾರಾಜರು ದರ್ಬಾರಿನ ಕೆಲಸಕಾರ್ಯಗಳಿಂದ ಸ್ವತಂತ್ರರಾಗಿ ಬಿಡುಗಡೆ ಹೊಂದಿದ ನಂತರ ರಾಮರಾಜ ತನ್ನ ಖಾಸಗಿ ಅರಮನೆಯಲ್ಲಿ ಅವರನ್ನು ಆಹ್ವಾನಿಸಿ ಮಾತುಕತೆ ನಡೆಸಿದ. ಈ ಮನೆಯ ಒಪ್ಪ ಓರಣ ಮತ್ತು ಸಿಂಗಾರ ಎಷ್ಟೊಂದು ಕಣ್ಮನ ತಣಿಸುವಂತಿತ್ತೆಂದರೆ ನನಗೆ ಶಬ್ದಗಳಲ್ಲಿ ವ್ಯಕ್ತಮಾಡುವುದು ಸಾಧ್ಯವಾಗುತ್ತಿಲ್ಲ. ಬಾದಶಾಹ ಅವರ ಸಭೆಗೆ ಬಂದಾಗ ಅವರ ಮುಂದೆ ಬಹಳಷ್ಟು ಉಡುಗೊರೆಗಳು ಇಡಲಾಗಿತ್ತು. ಹಿಂದೆ ನಾನು ಹೇಳಿದ್ದ ಅಮೂಲ್ಯವಾದ ವಜ್ರವೂ ಕೂಡ ಈ ಉಡುಗೊರೆಯಲ್ಲಿ ಸೇರಿತ್ತು. ಇದರ ತೂಕ ಇಸ್ಲಾಮೀ ಪರಂಪರೆಯ ಪ್ರಕಾರ ೧೮ ದಿರಮ್ ಆಗಿ, ಬೆಲೆ ಆಗಿನ ಸರಕಾರದ ಕರೆನ್ಸಿ ಮೌಲ್ಯ ೧೮ ಲಕ್ಷವಾಗಿತ್ತು. ಜೊತೆಗೆ ಬೆಲೆಬಾಳುವ ಆಭರಣಗಳು, ಚಿನ್ನ ಬೆಳ್ಳಿಯ ನಾಣ್ಯಗಳು ತುಂಬಿದ ಹರಿವಾಣಗಳು, ಮುತ್ತು ಹವಳಗಳನ್ನು ಪೋಣಿಸಿ ಮಾಡಿದ ತಸ್ಬೀಹ್(ಜಪಮಾಲೆ)

ಇತ್ಯಾದಿ ಬಹಳ ವಿಧದ ಬೆಲೆ ಬಾಳುವ ವಸ್ತುಗಳು ಅವರಿಗೆ ನೀಡಿದ ಉಡುಗೊರೆಗಳಲ್ಲಿ ಸೇರಿತ್ತು. ಒಂದು ಶಕ್ತಿಶಾಲಿ ಆನೆಗಳ ದಂಡು, ಜೀನು ಲಗಾಮುಗಳನ್ನು ಹಾಕಿದ ನೂರು ಬಲಿಷ್ಠ 'ತಾಜಿ' ತಳಿಯ ಕುದುರೆಗಳು, ಬೆಲೆ ಬಾಳುವ ವಸ್ತ್ರಗಳು ತುಂಬಿದ ಸಂದೂಕಗಳು, ರೋಮ್, ಸಿರಿಯಾ, ಇರಾನ್, ಬ್ರಿಟೇನ್‌ನಿಂದ ಆಮದು ಮಾಡಲ್ಪಟ್ಟ ಲೆಕ್ಕವಿಲ್ಲದಷ್ಟು ಸಂಖ್ಯೆಯ ಉಡುಗೊರೆಯ ವಸ್ತ್ರಗಳು ಮತ್ತು ಇತರ ವಸ್ತುಗಳನ್ನು ಅವರಿಗೆ ಕಾಣಿಕೆಯಾಗಿ ನೀಡಲಾಯಿತು. ರಾಮರಾಜ ಸ್ವತಃ ತನ್ನ ಹಸ್ತದಿಂದ ಈ ಉಡುಗೊರೆಗಳನ್ನು ನೀಡಿದ್ದ. ಹೀಗೆಯೇ ಬಾದಶಾಹನ ಜೊತೆಗೆ ಬಂದಿದ್ದ ಮಂತ್ರಿಗಳು, ಸರದಾರರು ಮತ್ತಿತರ ಸಂಬಂಧಿಕರಿಗೂ ಅವರವರ ಸ್ಥಾನಮಾನಕ್ಕೆ ಸರಿಯಾಗಿ ಉಡುಗೊರೆ ನೀಡುವುದರಲ್ಲಿ ರಾಮರಾಜ ಯಾವುದೇ ರೀತಿಯಲ್ಲಿಯೂ ಕಮ್ಮಿಮಾಡಲಿಲ್ಲ.

ಈ ಸಭೆಯು ಮುಗಿದ ನಂತರ ರಾಮರಾಜನ ಪತ್ನಿ ಅವರನ್ನು ಪ್ರೀತಿ, ಗೌರವದಿಂದ ಆದರಿಸಿ ಅತಿಥಿ ಸತ್ಕಾರ ಮಾಡಿದಳು. 'ನನ್ನ ತಾಯಿ ಕೂಡ ನಿಮ್ಮನ್ನು ನೋಡಲು ಇಚ್ಛಿಸುತ್ತಿದ್ದಾಳೆ' ಎಂದು ರಾಣಿ ಹೇಳಿದಳು. ನೀವು ಇದಕ್ಕೆ ಒಪ್ಪಿದರೆ ಇದು ನಮಗೊಂದು ಸಂತಸದ, ಆತ್ಮೀಯತೆಯ ಸಂದರ್ಭವೆನಿಸಲ್ಪಡುತ್ತದೆ. ಜಹಾಂಪನಾ ಅವರ ಪ್ರೀತಿಯ ಆಹ್ವಾನಕ್ಕೆ ಒಪ್ಪಿಗೆ ನೀಡಿ, ಮಹಿಳೆಯರ ಪ್ರತ್ಯೇಕ ಕೋಣೆ ಅಂತಃಪುರದೊಳಗೆ ಹೋದ. ಬಾದಶಾಹರನ್ನು ಅಂತಃಪುರದೊಳಗೆ ಕೈ ಹಿಡಿದು ಆದರದಿಂದ ಕೋಣೆಯ ಮಧ್ಯದಲ್ಲಿದ್ದ ಆಸನದಲ್ಲಿ ಕುಳ್ಳಿರಿಸಿದರು. ಬಾದಶಾಹರ ಮಗ ಇನ್ನೊಂದು ಸಿಂಹಾಸನದಲ್ಲಿ ಕೂತಿದ್ದರು.

ರಾಜಮಾತೆ ತನ್ನ ಮಗನಂತೆಯೇ ಪರಿಗಣಿಸಿ ವಾತ್ಸಲ್ಯವನ್ನು ತೋರಿಸಿ ಜಹಾಂಪನಾರ ಮುಂಗೈಯನ್ನು ಮತ್ತು ಹಣೆಯನ್ನು ಚುಂಬಿಸಿ ಪ್ರೀತಿಯನ್ನು ವ್ಯಕ್ತಪಡಿಸಿದಳು. ಇದರ ನಂತರ ಇಬ್ಬರೂ ಮಹಾರಾಜರು ಸಭೆ ಸೇರಿ ತಮ್ಮೆರಡೂ ರಾಜ್ಯಗಳ ಒಗ್ಗಟ್ಟು, ಪರಸ್ಪರ ಸಹಯೋಗ ಮತ್ತು ವೈರಿಗಳನ್ನು ಎದುರಿಸುವಾಗ ಸಹಕಾರವೂ ಸೇರಿದಂತೆ ಸೌಹಾರ್ದವನ್ನು ಕಾಪಾಡಿಕೊಂಡಿರುವ ಬಗ್ಗೆ ಒಂದು ಕರಾರು ಮಾಡಿಕೊಂಡರು. ಮತ್ತೆ ಅವರಿಗೆ (ರಾಜಮಾತೆಯ ಕಡೆಯಿಂದ) ಉಡುಗೊರೆಯಾಗಿ ಬೆಲೆಬಾಳುವ ಬಟ್ಟೆಗಳು, ಸುಂಗಧ ದ್ರವ್ಯಗಳು, ಶ್ರೀಗಂಧ, ಪುನುಗು, ಅಂಬರ್, ಕೇಸರ್ ಮುಂತಾದವುಗಳನ್ನು ನೀಡಲಾಯಿತು. ಎಲ್ಲ ಕೆಲಸಕಾರ್ಯಗಳನ್ನು ಮುಗಿಸಿ ಜಹಾಂಪನಾ ಇಲ್ಲಿಂದ ಬೀಳ್ಕೊಟ್ಟು ತಮ್ಮ ರಾಜ್ಯಕ್ಕೆ ಹಿಂತಿರುಗಿದರು. ದರ್ಬಾರಿಗಳು, ಅಧಿಕಾರಿಗಳು ಪರಿವಾರದವರು ಆತಂಕದಲ್ಲಿದ್ದವರು ಜಹಾಂಪನಾರು ಮತ್ತು ಜೊತೆಗೆ ಪ್ರಯಾಣಿಸಿದವರು ಯಾವುದೇ ತೊಂದರೆಯಿಲ್ಲದೆ ಹಿಂತಿರುಗಿ ಬಂದುದಕ್ಕೆ ಸಂತಸಪಟ್ಟುಕೊಂಡರು. ಅವರಿಗೆ ರಿವಾಜಿನಂತೆ ನಿವಾಳಿಸಿ ತೆಗೆದು, ದಾನವನ್ನು ಬಡವರಿಗೆ ಹಂಚಿದರು. ಇದರ ನಂತರ ಒಂದಷ್ಟು ಕಾಲ ಶಾಂತಿ

ನೆಲೆಸಿತು. ಎರಡೂ ರಾಜ್ಯಗಳ ಮಧ್ಯೆ ಯುದ್ಧ ನಡೆಯಲಿಲ್ಲ. ರಾಮರಾಜರ ಸಂಬಂಧಿಗಳು, ಸರದಾರರು, ಮಂತ್ರಿಗಳು, ಆಡಳಿತಾಧಿಕಾರಿಗಳು ಆಗಾಗ ಜಹಾಂಪನಾರ ದರ್ಬಾರಿಗೆ ಸ್ನೇಹ ಭೇಟಿ ನೀಡುತ್ತಿದ್ದು ಬಹಳ ಸೌಹಾರ್ದ ವಾತಾವರಣ ಮೂಡಿತ್ತು. ದಯಾನಿಧಿಯೂ, ಸಹಾಯ ಹಾಗೂ ಸ್ನೇಹ ಹಸ್ತರೂ ಆದ ಬಾದಶಾಹರು ಖುದ್ದಾಗಿ ತನ್ನನ್ನು ಭೇಟಿಯಾಗಲು ಬಂದವರಿಗೆ ಅತಿಥಿ ಸತ್ಕಾರ ನೀಡಿ ಅವರನ್ನು ಖುಶಿಪಡಿಸಿದರು. ಮುಸ್ಲಿಂ ಹಾಗೂ ಹಿಂದೂ ಬಡವರು ಬಂದವರಿಗೆ, ಸಂಕಷ್ಟದಲ್ಲಿರುವ ಜನರಿಗೆ ಬಹಳಷ್ಟು ಸಹಾಯ ಮಾಡಿದರು.

ಈ ರಾಜ್ಯದಲ್ಲಿ ಬಾದಶಾಹರಿಂದ ಸಹಾಯ ಪಡೆಯದಿರುವ ಪ್ರಜೆಗಳು ಯಾರೂ ಇರಲಿಲ್ಲ. ಒಟ್ಟಾರೆಯಾಗಿ ೧೫೦೦ ಕುದುರೆಗಳು ಮತ್ತು ೧೫೦೦೦ ಮಕ್ಮಲ್, ಜರದಾರಿ, ರೇಶ್ಮೆ, ವಿದೇಶೀ ಬೆಲೆಬಾಳುವ ಬಟ್ಟೆಗಳು ದಾನವಾಗಿ ನೀಡಲಾಯಿತು. ಬಿಳಿಯ ೫೦೦೦ ಗಜಗಳ ಅಳತೆಯ ಮಿರುಗುವ ಬಟ್ಟೆಗಳು ಆ ನಗರದ ಜನರಿಗೆ ಹಂಚಲಾಯಿತು. ಚಿನ್ನದ ಆಭರಣ, ನಾಣ್ಯಗಳನ್ನು ಸಾಕಷ್ಟು ಹಂಚಲಾಯಿತು. ಹೀಗೆ ಬಾದಶಾಹರ ಕೈಯಿಂದ ಉಡುಗೊರೆಗಳ ಮಳೆಗೆರೆಯಲಾಯಿತು. ಅವರು ಹಾತಿಮ್‌ತಾಯಿಯಂತಹ ದಾನಶೂರರಾಗಿದ್ದರು.

ಈ ಎಲ್ಲ ಕಾರ್ಯಗಳು ಮುಗಿದ ನಂತರ ವೈರಿಗಳನ್ನು ದೂರವಿರಿಸುವ ಬಗ್ಗೆ ಯೋಚಿಸತೊಡಗಿದರು.

**ಜಹಾಂಪನಾ ಮತ್ತು ರಾಮರಾಜರು ಸೈನಿಕರನ್ನು ಒಟ್ಟುಗೂಡಿಸ್ಸಿ ಜಂಟಿಯಾಗಿ ವೈರಿಗಳನ್ನು ಓಡಿಸುವ ತಯಾರಿ ಮತ್ತು ಯುದ್ಧದಲ್ಲಿ ವಿಜಯಿಗಳಾಗಿ ಹಿಂತಿರುಗಿದ ವಿವರಗಳು:**

ಜಹಾಂಪನಾ ಮತ್ತು ರಾಮರಾಜ ತಮ್ಮ ನಡುವೆ ಮಾಡಿಕೊಂಡ ಒಪ್ಪಂದದಂತೆ ತನ್ನ ಸೈನಿಕರನ್ನು ಒಟ್ಟುಗೂಡಿಸಿ ಜಹಾಂಪನಾ ಅಹ್ಮದ್ ನಗರದಲ್ಲಿ ಕಾರ್ಯಾಚರಣೆಯನ್ನು ನಡೆಸಲು ಪ್ರಯಾಣಿಸಿದರು. ಇವರು ದಂಡಯಾತ್ರೆಗೆ ಹೊರಟ ಸುದ್ದಿ ತಿಳಿದು ರಾಮರಾಜರು ಕೂಡ ತಮ್ಮ ಸಶಕ್ತ ಸೈನಿಕ ಪಡೆಯನ್ನು ಒಟ್ಟುಗೂಡಿಸಿ ಪ್ರಯಾಣಕ್ಕೆ ಹೊರಟರು. ಹತ್ತು ಮೈಲಿ ದೂರದ ಹಸ್ದಿಯಾಪುರದಲ್ಲಿ ಒಬ್ಬರನ್ನೊಬ್ಬರು ಪರಸ್ಪರ ಭೇಟಿಯಾದರು. ಜಹಾಂಪನಾ ರಾಜಧಾನಿ ಬಿಜಾಪುರದಿಂದ ಹೊರಡುವುದಕ್ಕೆ ಮೊದಲು ಒಂದು ಸಮುದಾಯದ ತನ್ನ ನಂಬಿಕಸ್ಥ ಜನರಿಗೆ ಸಾಕಷ್ಟು ಧನ ನೀಡಿ ಬಂದರಿನಲ್ಲಿ ಸಿಗುವ ಉತ್ತಮ ಕುದುರೆಗಳನ್ನು, ಶಸ್ತ್ರಾಸ್ತ್ರಗಳನ್ನು ಖರೀದಿಸಿ ರಾಜ್ಯದಲ್ಲಿರುವ ಎಲ್ಲ ಕೋಟೆಗಳಲ್ಲಿ ದಾಸ್ತಾನು ಮಾಡಲು ಸೂಚಿಸಿದ್ದರು. ರಾಜ್ಯದ ನಾಲ್ಕೂ ದಿಕ್ಕಿನಲ್ಲಿ ಸರದಾರರು ಸೈನಿಕ ತಯಾರಿ ನಡೆಸಲು ಆಜ್ಞೆ ನೀಡಿದ್ದರು.

ರಾಮರಾಜರು ಕೂಡ ತಮ್ಮ ರಾಜ್ಯ ಹಿಂಪಾ ನಗರದಲ್ಲಿ ಸಾಕಷ್ಟು ಸೈನಿಕ ತಯಾರಿಯೊಂದಿಗೆ ಪ್ರಯಾಣಿಸಿದ್ದರು. ಇವರಿಬ್ಬರೂ ತಮ್ಮ ಸೈನಿಕರನ್ನು ಸಜ್ಜುಗೊಳಿಸಿ ಒಂದಾಗಿ ಹೊರಟರು. ತಫಾವುರ್ ಖಾನ್ ಎಂಬವನು ಜಹಾಂಪನಾರ ರಾಜ್ಯದಲ್ಲಿ ಗೊಂದಲವೆಬ್ಬಿಸಲು ಪ್ರಯತ್ನಿಸಿದ್ದ. (ಈ ತಫಾವುರ್ ಖಾನ್, ಅಮಾದುಲ್ ಮುಲ್ಕ್ ಬರಾರಿಯ ಮಂತ್ರಿಯಾಗಿದ್ದ. ಇವನು ತನ್ನ ಪಿತೂರಿಯ ಕಾರ್ಯಕ್ಕೆ ನಿಶ್ಚಿತ ರೂಪ ನೀಡುವ ತಯಾರಿ ಮಾಡಲು ಬಿಜಾಪುರ ರಾಜ್ಯ ಸಂಸ್ಥಾನದಲ್ಲಿ ಬೀಡು ಬಿಟ್ಟಿದ್ದ) ಈತ ರಾಜ್ಯದ ಪ್ರಮುಖ ಆಡಳಿತದಲ್ಲಿ ಮೂಗುತೂರಿಸುತ್ತಿದ್ದ. ಹಳೆಯ ಕಂದಾಯ, ತೆರಿಗೆ ವಸೂಲಿಯ ಶಾನುಭೋಗಿಕೆಯ ಕೆಲಸದ ಜನರನ್ನು ತೆಗೆದು ಹಾಕಿ ತನ್ನ ಸಂಬಂಧಿಕರು, ಆಪ್ತರನ್ನು ನೇಮಿಸಿದ್ದ. ಇವನು ನಿಜಾಮುಲ್ ಮುಲ್ಕನೊಂದಿಗೆ ಸೇರಿಕೊಂಡಿದ್ದ.

ಈ ಸಂಗತಿ ಜಹಾಂಪನಾರಿಗೆ ಮತ್ತು ರಾಮರಾಜರ ಗಮನಕ್ಕೆ ಬಂದಿದೆಯೆಂದು ತಿಳಿದಾಗ ತನಗೆ ಇವರನ್ನು ಎದುರಿಸಲು ಸಾಧ್ಯವಾಗದೆಂದು ತಫಾವುರ್ ಖಾನ್ ಹೆದರಿದ. ತಾನು ಈ ಸಂಕಷ್ಟದಿಂದ ಪಾರಾಗುವ ಬಗೆ ಹೇಗೆಂದು ಯೋಚಿಸಿದ. ಇವರೊಂದಿಗೆ ರಾಜಿಮಾಡಿಕೊಳ್ಳುವುದರಲ್ಲಿ ತನಗೆ ಒಳಿತಿದೆ ಎಂದು ಲೆಕ್ಕಹಾಕಿದ. ಜಹಾಂಪನಾ ಮತ್ತು ರಾಮರಾಜರು ಹಿಂದಿನಿಂದ ಅವನ ಪ್ರಾಂತ್ಯಕ್ಕೆ ಮುತ್ತಿಗೆ ಹಾಕಿ ಬಂಧಿಸಿದರು. ರಾಮರಾಜ ಈ ದಂಡಯಾತ್ರೆಯಲ್ಲಿ ಯಾರು ಕೂಡ ಯೋಚಿಸಲಾರದಷ್ಟು ತನ್ನ ಘನತೆ, ಗೌರವವನ್ನು, ಅಹಂಕಾರವನ್ನು ಅಗತ್ಯಕ್ಕಿಂತ ಹೆಚ್ಚು ಪ್ರದರ್ಶಿಸಿದ. ಜಹಾಂಪನಾ ಈ ಯುದ್ಧದಲ್ಲಿ ಮುಂದೆ ನಡೆದಿದ್ದರು. ನಡೆಯುತ್ತ ಮುಂದುವರಿದು ಒಂದು ಮನೋಲ್ಲಾಸ ಕೊಡುವ ಸುಂದರ ಸ್ಥಳಕ್ಕೆ ತಲಪಿ ಅಲ್ಲಿ ತಂಗಲು ಬಯಸಿದರು. ರಾಮರಾಜರ ಪರಿವಾರ ತಮ್ಮ ಸೈನ್ಯದೊಂದಿಗೆ ಹಿಂದಿನಿಂದ ಪ್ರಯಾಣಿಸಿದವರು ಬಂದು ಜಹಾಂಪನಾರ ಸೈನ್ಯ ತಂಗಲು ಆರಿಸಿದ ಈ ಪ್ರದೇಶವು ತಮಗಾಗಿ ಮೊದಲೇ ಕಾದಿರಿಸಲಾಗಿದೆ, ಈ ಸ್ಥಳವನ್ನು ಬಿಟ್ಟು ಬೇರೊಂದು ಪ್ರದೇಶಕ್ಕೆ ಹೋಗಿ ತಂಗಬೇಕೆಂದು ಹೇಳಿದರು. ಇದನ್ನು ಕೇಳಿದ ಜಹಾಂಪನಾ ಕೂಗಿ ಗಟ್ಟಿಯಾಗಿ ಹೇಳುತ್ತಾರೆ, 'ನನ್ನನ್ನು ಇಲ್ಲಿಂದ ಕಿತ್ತುಹಾಕಿ ರಾಮರಾಜರಿಗೆ ಯಾವ ಕಾರಣಕ್ಕೆ ಬಿಟ್ಟುಕೊಡಬೇಕು?' ಇದನ್ನು ಕೇಳಿದ ರಾಮರಾಜರ ಸೈನಿಕರು ಪರಿವಾರದವರು 'ಸರಿ ನೀವೇ ಇದ್ದುಬಿಡಿ' ಎಂದು ತಾವೇ ಎಬ್ಬಿಸಿದ ವಿವಾದವನ್ನು ಸಮಾಧಾನಪಡಿಸಿಕೊಂಡು ಬಿಟ್ಟುಕೊಟ್ಟರು. ಹೀಗೆ ಜಹಾಂಪನಾ ಮತ್ತು ರಾಮರಾಜರು ಸೇರಿ ನಿಜಾಮುಲ್ ಮುಲ್ಕ್‌ನ ರಾಜ್ಯಕ್ಕೆ ಪ್ರವೇಶಿಸಿ ಅವನನ್ನು ಹುಡುಕುತ್ತ ಅಹ್ಮದ್‌ನಗರವನ್ನು ತಲಪಿದರು. ಕೆಲವು ದಿನಗಳ ಕಾಲ ಇಲ್ಲಿ ತಂಗಿ, ಸುತ್ತಲಿನ ನಾಲ್ಕೂದಿಕ್ಕಿನ ಎಲ್ಲ ಪ್ರದೇಶಗಳನ್ನು ಹಾಳುಗೆಡವಿ ನಾಶಪಡಿಸಿದರು. ನಿಜಾಮುಲ್ ಮುಲ್ಕ್ ತನ್ನ ರಾಜ್ಯದ ಪ್ರದೇಶವನ್ನು ರಕ್ಷಿಸಲು ಸಾಧ್ಯವಾಗದೆ

ದೌಲತಾಬಾದಿಗೆ ಓಡಿ ಹೋಗಿ ಅಡಗಿಕೊಂಡ. ಅಲ್ಲೇ ವಾಸಿಸಿದ. ಅಹ್ಮದ್ ನಗರದ ವಿನಾಶ ಎಷ್ಟೊಂದು ತೀವ್ರವಾಯಿತೆಂದರೆ ಆ ರಾಜ್ಯದ ಒಂದು ತೋಟವೂ ಕೂಡ ಬಾಕಿ ಉಳಿದಿರಲಿಲ್ಲ. ದೊಡ್ಡ ಶ್ರೀಮಂತರ ಮನೆಯ ಕೆತ್ತನೆಯ ಆಕರ್ಷಕ ಬಾಗಿಲುಗಳನ್ನು ಕೂಡ ಎತ್ತಿಕೊಂಡು ಬಿಜಾಪುರಕ್ಕೆ ಸಾಗಿಸಿದರು. ಬಡವರ ಮನೆಗಳನ್ನು ಬೆಂಕಿ ಹಚ್ಚಿ ನಾಶಪಡಿಸಿದರು. ಮೂರು ನಾಲ್ಕು ತಿಂಗಳುಗಳ ಕಾಲ ಈ ರಾಜ್ಯದ ಪ್ರದೇಶಗಳಲ್ಲಿ ಹೀಗೆ ಗಲಭೆ ಎಬ್ಬಿಸಿ, ಲೂಟಿ ನಡೆಸಿ ತಮ್ಮ ರಾಜ್ಯಕ್ಕೆ ಹಿಂತಿರುಗಿದರು. ಹೀಗೆ ಈ ಯುದ್ಧ ಲೂಟಿಗಳು ನಡೆದು, ಇದರ ಪರಿಣಾಮವಾಗಿ ಈ ರಾಜ್ಯಗಳ ನಡುವೆ ಮುಂದೆ ರಾಜಿ ಸಂಧಾನಗಳು ಸಾಧ್ಯವಾಗದೆ ವೈರತ್ವ ಹೆಚ್ಚುತ್ತಲೇ ಹೋಯಿತು.

■

*

# ಅಧ್ಯಾಯ-೭

**ಗುಜರಾತಿನ ಬಾದಶಾಹರ ಪರಿಸ್ಥಿತಿಯ ವಿವರಗಳು ಮತ್ತು ಸುಲ್ತಾನ್ ಬಹಾದ್ದೂರ್ ಗುಜರಾತಿಯ ದಕ್ಷಿಣಕ್ಕೆ ಆಗಮನ ಹಾಗೂ ಬುರ್ಹಾನ್ ನಿಜಾಮುಲ್ ಮುಲ್ಕನೊಂದಿಗೆ ಭೇಟಿ.**

ಗುಜರಾತಿನ ಮೊತ್ತಮೊದಲ ಮುಸ್ಲಿಂ ಬಾದಶಾಹ ಝಫರ್ ಖಾನ್ ಸಿಂಹಾಸನವನ್ನೇರಿದನೆಂದು ಜನ ಮಾತಾಡುತ್ತಿದ್ದರು.

ಈ ಬಾದಶಾಹ ಝಫರ್ ಖಾನ್ ಮೂಲದಲ್ಲಿ 'ತಾಕೋಕಲಾಲ್' ವಂಶಕ್ಕೆ ಸೇರಿದವನಾಗಿದ್ದು ನಂತರ ಇಸ್ಲಾಂ ಧರ್ಮಕ್ಕೆ ಮತಾಂತರಗೊಂಡಿದ್ದ. ದೆಹಲಿಯ ಸುಲ್ತಾನ್ ಫೈರೋಝ್ ಬಾದಶಾಹ ಝಫರ್ ಖಾನನಿಗೆ ಗುಜರಾತಿನ ಜಾಗೀರು ನೀಡಿದ್ದ. ಝಫರ್ ಖಾನನ ಮಗ ನತ್ತಾರ್ ಖಾನ್ ಆಗ ಸುಲ್ತಾನ್ ಫೈರೋಝನ ಆಸ್ಥಾನದಲ್ಲಿ ಕೆಲಸಮಾಡುತ್ತಿದ್ದ. ಸುಲ್ತಾನ್ ಫೈರೋಝ್ ತೀರಿಕೊಂಡು ತನ್ನ ಪಾರಮಾರ್ಥಿಕ ಬದುಕಿಗೆ ಕಾಲಿಟ್ಟಾಗ ರಾಜ್ಯದಲ್ಲಿ ದಂಗೆ ಘರ್ಷಣೆಗಳು ನಡೆದವು. ಸರದಾರರ ಮಧ್ಯೆ ತಿಕ್ಕಾಟಗಳು ನಡೆದವು. ಇವರಲ್ಲಿ ಪ್ರತಿಯೊಬ್ಬ ಸರದಾರನೂ ಸಿಂಹಾಸನದಲ್ಲಿ ಕೂರಲು ಇಚ್ಛೆ ಪಟ್ಟುಕೊಂಡಿದ್ದರು. ಈ ರೀತಿಯಲ್ಲಿ ಪರಿಸ್ಥಿತಿ ಬಿಗಡಾಯಿಸಿದ್ದು ಕಂಡು ನತ್ತಾರ್ ಖಾನ್ ದೆಹಲಿಯಿಂದ ಹೊರಟು ತನ್ನ ತಂದೆಗೆ ಸಹಾಯ ಮಾಡಲು ಗುಜರಾತಿಗೆ ಪ್ರಯಾಣ ಬೆಳೆಸಿದ. ತನ್ನ ತಂದೆಯ ಮುಂದೆ 'ಸುಲ್ತಾನ್ ಫೈರೋಝನ ಪ್ರತಿಯೊಬ್ಬ ದರ್ಬಾರಿಗಳು ತಮ್ಮ ಹೆಸರಿನ ಮೊಹರು ನೋಟು ನಾಣ್ಯಗಳನ್ನು ಛಾಪಿಸಿಕೊಂಡಿದ್ದಾರೆ. ನೀವು ಕೂಡ ಅದೇ ತರಹ ಮಾಡಿಕೊಳ್ಳಿ' ಎಂದು ತನ್ನ ಸಲಹೆಯನ್ನು ನೀಡಿದ. ಇದಕ್ಕೆ ಉತ್ತರವಾಗಿ ಝಫರ್ ಖಾನ್ 'ನನ್ನ ದರ್ಬಾರಿನ ಮೊಹರು ನಾಣ್ಯಗಳು ತಯಾರಿಸಿ ನನಗೆ ಏನು ಮಾಡಲಿಕ್ಕಿದೆ?' ಎಂದು

ಪ್ರಶ್ನಿಸಿ ಸಲಹೆಯನ್ನು ತುಚ್ಛೀಕರಿಸಿದ. ನತ್ತಾರ್ ಖಾನ್ ತನ್ನ ತಂದೆಯ ಈ ನಡವಳಿಕೆ ಮತ್ತು ಉತ್ತರದಿಂದ ನೊಂದುಕೊಂಡು ತುಂಬ ಸಿಟ್ಟಾದ. ಅವನು ತನ್ನ ಜೊತೆಗಾರರ ಸಹಾಯದಿಂದ ಕೂಡಲೇ ಅಪ್ಪನನ್ನು ಬಂಧಿಸಿದ. ಮರುದಿನವೇ ತನ್ನ ತಂದೆಯ ಸಿಂಹಾಸನದಲ್ಲಿ ಕೂತುಬಿಟ್ಟ. ಕೆಲವು ದಿನಗಳ ಬಳಿಕ ಝಫರ್ ಖಾನ್ ಕ್ಲಪ್ತ ಸಮಯದಲ್ಲಿ ಪತ್ರದ ಮೂಲಕ ತನ್ನದೊಂದು ಸಂದೇಶವನ್ನು ದೂತರ ಮೂಲಕ ತನ್ನ ಸಹೋದರನಿಗೆ ತಲಪಿಸಿದ. 'ನಾನು ನಿನ್ನ ಸಹೋದರನಾಗಿ ಇಂತಹ ಅವಮಾನವನ್ನು ಸಹಿಸಿಕೊಳ್ಳಬೇಕೇ? ನೀನಿದ್ದೂ ನಾನು ಜೈಲಿನಲ್ಲಿ ಕೊಳೆಯುವಂತಾಗಿದೆ. ನನ್ನ ಮಗ ನನ್ನನ್ನು ಬಂಧಿಸಿ ಸಿಂಹಾಸನದಲ್ಲಿ ಕೂತಿದ್ದಾನೆ' ಎಂದು ಆ ಪತ್ರದಲ್ಲಿ ಬರೆದಿದ್ದ. ಝಫರ್ ಖಾನನ ಸಹೋದರನಿಗೆ ಈ ಪತ್ರ ಓದಿ ಹೃದಯಕ್ಕೆ ಇರಿದಂತಾಗಿ ಬಹಳ ನೊಂದುಕೊಂಡ. ಅವನು ತನ್ನ ಕೆಲವು ಆಪ್ತರು ಸೈನಿಕರನ್ನು ಕರೆದುಕೊಂಡು ಹೋಗಿ ಆಕ್ರಮಣ ಮಾಡಿ, ನತ್ತಾರ್ ಖಾನನನ್ನು ಬಂಧಿಸಿ, ಮತ್ತೆ ತನ್ನ ಸಹೋದರನನ್ನು ಸಿಂಹಾಸನದಲ್ಲಿ ಕುಳ್ಳಿರಿಸಿದ. ಅವನ ಹೆಸರಿನ ನಾಣ್ಯಗಳು ಮತ್ತು ಮೊಹರನ್ನು ಚಲಾವಣೆಗೆ ತಂದ. ಅವನಿಗೆ 'ಮುಝುಫ್ಫರ್ ಷಾ' ಎಂಬ ಬಿರುದನ್ನು ನೀಡಿ ಗೌರವಿಸಿದ. ಈ ಬಾದಶಾಹ ಅನೇಕವರ್ಷಗಳ ಕಾಲ ರಾಜ್ಯವಾಳಿ ಕೊನೆಯಲ್ಲಿ ಲೌಕಿಕ ಬದುಕನ್ನು ತೊರೆದ.

**ಸುಲ್ತಾನ್ ಅಹ್ಮದ್ ಬಿನ್ ಸುಲ್ತಾನ್ ಮುಝುಫ್ಫರ್ ರಾಜ್ಯಭಾರದ ವಿವರಗಳು:**

ಸುಲ್ತಾನ್ ಅಹ್ಮದ್ ತನ್ನ ತಂದೆಯ ಸಿಂಹಾಸನದಲ್ಲಿ ಉತ್ತರಾಧಿಕಾರಿಯಾಗಿ ಕೂತಾಗ ಮಾಡಿದ ಮೊದಲ ಕೆಲಸವೆಂದರೆ ಅಹ್ಮದಾಬಾದ್ ನಗರವನ್ನು ಪುನರ್‌ನಿರ್ಮಾಣ ಮಾಡುವ ಕೆಲಸವಾಗಿತ್ತು. ಆಗಿನ ಕಾಲದಲ್ಲಿ ಅಂತಹದೊಂದು ವೈಭವಪೂರ್ಣ ನಗರ ಇನ್ನೊಂದು ಇರಲಿಲ್ಲ. ಇಂದಿಗೂ ಕೂಡ ಈ ನಗರ ಹಾಗೆಯೇ ಇದೆ.

ಆ ನಗರದ ತಾಜಾತನ, ಸ್ವಚ್ಛತೆ ಇಂದಿಗೂ ಹಾಗೆಯೇ ಉಳಿದಿದೆ. ಎಲ್ಲ ತರದ ಕರಕುಶಲ ಕರ್ಮಿಗಳು ಮತ್ತು ಕಲಾಕಾರರು, ತಾಂತ್ರಿಕ ತಜ್ಞರನ್ನು ದೂರ ದೂರದ ದೇಶಗಳಿಂದ ಕರೆಸಿ ಈ ನಗರವನ್ನು ಕಟ್ಟಿಸಿದ. ನಗರವನ್ನು ಎರಡು ಭಾಗವನ್ನಾಗಿ ವಿಂಗಡಿಸಿದ. ಹೆಚ್ಚು ಕಮ್ಮಿ ೨೦೦ ಗ್ರಾಮಗಳನ್ನು ಈ ನಗರಕ್ಕೆ ಸೇರಿಸಿ ವಿಶಾಲ ಪ್ರದೇಶವನ್ನಾಗಿ ಮಾಡಿದ. ಈ ನಗರದ ಸುತ್ತ ಬಲಿಷ್ಠವಾದ ಆವರಣವನ್ನು ರಚಿಸಿದ. ಅದರ ಒಂದು ಭಾಗವನ್ನು ಉಸ್ಮಾನ್‌ಪುರವೆಂದು ಕರೆಯಲಾಗಿದೆ. ಇಲ್ಲಿ ೧೨,೦೦೦ ಅಂಗಡಿ ಮುಂಗಟ್ಟುಗಳನ್ನು ಕಟ್ಟಿಸಿ ಅನೇಕ ಕರಕುಶಲ ಕರ್ಮಿಗಳಿಗೆ, ಕೈಗಾರಿಕೆಯ ತಜ್ಞರಿಗೆ ನೀಡಿದ. ಈಗ ನೋಡಿದರೆ ಮೊಗಲರ ಆಕ್ರಮಣದಿಂದ ನಗರದ ಅನೇಕ ಭಾಗದ ವೈಭವವೆಲ್ಲವೂ ನಾಶವಾಗಿವೆ. ಆದರೆ ಉಸ್ಮಾನ್‌ಪುರ ಮಾತ್ರ ಹಿಂದೆ ಇದ್ದಹಾಗೆಯೇ ಇದೆ. ಅಹ್ಮದಾಬಾದ್ ಮತ್ತು ಉಸ್ಮಾನಪುರದ ಮಧ್ಯೆ ಒಂದು

ವಿಶಾಲವಾದ ನದಿ ಹರಿಯುತ್ತಿದೆ. ಈ ನಗರದ ಸ್ಥಾಪನೆಯ ವರ್ಷ 'ಶೆಹರೆ ಖೈರ್ ಅಸ್ತ್'(ಎಂಥಹಾ ಸುಂದರ ನಗರವಾಗಿದೆ) ಎಂಬ ಪದದಲ್ಲಿ ಅಡಗಿದೆ(ಉರ್ದು, ಫಾರಸಿ, ಅರಬಿ ಭಾಷೆಗಳಲ್ಲಿ ವಾಕ್ಯ/ಶಬ್ಧಗಳನ್ನು ಸಂಕ್ಷಿಪ್ತವಾಗಿ ಬರೆಯಲು ಉಪಯೋಗಿಸುವ ಸಂಖ್ಯಾಶಾಸ್ತ್ರದ ಪ್ರಕಾರ) ಅಂದರೆ ಹಿಜರಿ ವರ್ಷ ೮೯೦ರಲ್ಲಿ ಆಗಿದೆ.

ಸುಲ್ತಾನ್ ಅಹ್ಮದ್‌ರವರು ತೀರಿಕೊಂಡ ನಂತರ ಸುಲ್ತಾನ್ ಖುತುಬುದ್ದೀನ್ ಘನತೆ, ವಿಶೇಷ ಮರ್ಯಾದೆಗಳೊಂದಿಗೆ ಯಶಸ್ವಿಯಾಗಿ ರಾಜ್ಯಭಾರ ಮಾಡಿದ. ಬಹಳ ಅಲ್ಪ ಕಾಲದಲ್ಲಿ ಈತ ಇಹಲೋಕವನ್ನು ತ್ಯಜಿಸಿದ. ನಿಧನಕ್ಕೆ ಮೊದಲು ಸುಲ್ತಾನ್ ಮಹಮೂದ್ ಬೇಗಡನನ್ನು ತನ್ನ ಉತ್ತರಾಧಿಕಾರಿಯನ್ನಾಗಿ ನೇಮಿಸಿದ್ದ. ಸುಲ್ತಾನ ಮಹಮೂದ ತನ್ನ ರಾಜ್ಯದಲ್ಲಿ ನ್ಯಾಯ ನೀತಿಯ ಶುದ್ಧ ಆಳ್ವಿಕೆಯನ್ನು ನಡೆಸಿ ಒಳ್ಳೆಯ ಹೆಸರುಗಳಿಸಿದ್ದ. ನಂತರ ಈತನೂ ಕೂಡ ನಿಧನಹೊಂದಿದ. ಇವನ ನಂತರ ಸುಲ್ತಾನ್ ಮುಝುಫ್ಫರ್ ಪಟ್ಟವನ್ನೇರಿ ಆಳ್ವಿಕೆಯನ್ನು ನಡೆಸಿದ. ಇವನ ನಂತರ ಸುಲ್ತಾನ್ ಸಿಕಂದರ್ ಸಿಂಹಾಸನವನ್ನು ಏರಿದ. ಇವರು ಐವರು ಕೂಡ ತಮ್ಮ ಯೌವನವನ್ನು ಅನುಭವಿಸುವುದಕ್ಕೆ ಮತ್ತು ರಾಜ್ಯಭಾರವನ್ನು ಯಶಸ್ವಿಯಾಗಿ ನಡೆಸುವುದಕ್ಕೆ ಆಯುಷ್ಯದ ಕೊರತೆಯಿಂದಾಗಿ ಅವಕಾಶವಿಲ್ಲದೆ ಅಕಾಲದಲ್ಲಿ ಲೌಕಿಕ ಬದುಕನ್ನು ತೊರೆಯಬೇಕಾದ ದುರಂತಕ್ಕೀಡಾದರು. ಇವರ ನಂತರದಲ್ಲಿ ಸುಲ್ತಾನ್ ಬಹದ್ದೂರ್ ಪಟ್ಟಕ್ಕೆ ಬಂದು ರಾಜ್ಯಭಾರ ನಡೆಸಿದ.

**ಸುಲ್ತಾನ್ ಬಹದ್ದೂರ್ ಗುಜರಾತಿಯ ಆಳ್ವಿಕೆ ಮತ್ತು ಇತರ ವಿದ್ಯಮಾನಗಳ ವಿವರ:**

ಸುಲ್ತಾನ್ ಬಹದ್ದೂರ ರಾಜ್ಯಭಾರದ ಚುಕ್ಕಾಣಿ ಹಿಡಿದ ಬಳಿಕ ಶುದ್ಧ ನ್ಯಾಯಪರಿಪಾಲನೆಗೆ ಮಹತ್ವವನ್ನು ನೀಡಿದ್ದ. ತನ್ನ ರಾಜ್ಯವನ್ನು ಸಶಕ್ತಗೊಳಿಸಿದ. ತನ್ನ ರಾಜ್ಯಭಾರವನ್ನು ಶಿಸ್ತಿನಿಂದ ಸಶಕ್ತವಾಗಿ ನಡೆಸುತ್ತಿದ್ದ. ಆ ಕಾಲದಲ್ಲಿ ಅವನ ರಾಜ್ಯದ ಆಸುಪಾಸಿನಲ್ಲಿದ್ದ ವಿರೋಧಿಗಳು, ತಂಟೆಕೋರರು ಅವನ ರಾಜ್ಯಭಾರಕ್ಕೆ ಸದಾ ತೊಂದರೆಯನ್ನು ನೀಡುತ್ತಿದ್ದರು.

ಅವರು ಕುತಂತ್ರ ಮಾಡಲು ಕೆಲವು ಜನರನ್ನು ತಮ್ಮ ಆಪ್ತರನ್ನಾಗಿಸಿಕೊಂಡು ಒಂದು ಗುಂಪುಕಟ್ಟಿಕೊಂಡರು. ಹೀಗೆ ಗುಂಪು ಕಟ್ಟಿಕೊಂಡು ದಕ್ಷಿಣದ ರಾಜ್ಯದ ಕಡೆಗೆ ನಡೆದರು. ದಕ್ಷಿಣದ ರಾಜ್ಯದ ಸರಹದ್ದಿಗೆ ತಲಪಿದಾಗ ಅಹ್ಮದ್ ನಗರದ ಸಂಸ್ಥಾಪಕನೆನಿಸಲ್ಪಟ್ಟ ಬರ್ಹಾನ್ ನಿಜಾಮುಲ್ ಮುಲ್ಕ್ ಬಿನ್ ಅಹ್ಮದ್ ನಿಜಾಮುಲ್ ಮುಲ್ಕ್ ಬಲಿಷ್ಠನಾದ ಬಾದಶಾಹ ಅಲ್ಲಿ ರಾಜ್ಯಭಾರ ನಡೆಸುತ್ತಿದ್ದ. ಇವನು ಅಗತ್ಯಬಿದ್ದಾಗ ಆಗಾಗ ತನ್ನ ರಾಜ್ಯದ ಸರಹದ್ದನ್ನು ಪರೀಕ್ಷೆ ಮಾಡುವುದಕ್ಕಾಗಿ ಮತ್ತು ಪರಿಸ್ಥಿತಿಯನ್ನು

ತಿಳಿಯುವುದಕ್ಕಾಗಿ ಗಡಿಪ್ರದೇಶಕ್ಕೆ ಭೇಟಿಯನ್ನು ನೀಡುತ್ತಿದ್ದ. ಆಗೆಲ್ಲ ತನ್ನ ಜೊತೆಗೆ ಉಡುಗೊರೆ, ಕಾಣಿಕೆಗಳಿಗೆಗಳನ್ನು ಕೊಂಡೊಯ್ಯುತ್ತಿದ್ದ. ಈಸಲ ಜೊತೆಗೆ ಸಯ್ಯದ್ ವಂಶದ ಷಾ ತಾಹಿರ್‌ರನ್ನು ಕೂಡ ಕರೆದುಕೊಂಡು ಬಂದಿದ್ದ.

ಷಾ ತಾಹಿರ್, ಇಮಾಮ್ ಜಾಫರ್ ಸಾದಿಕ್‌ರ ವಂಶಕ್ಕೆ ಸಂಬಂಧಿಸಿದವರಾಗಿದ್ದರು. ಇವರ ವಂಶದ ಮೂಲದ ಜನರು ಸಿರಿಯಾದಿಂದ ಈಜಿಪ್ಟಿನ ತನಕ ಮತ್ತು ಅರೇಬಿಯಾದ ತನಕ ವ್ಯಾಪಿಸಿದ್ದಾರೆ. ಷಾ ತಾಹಿರ್‌ರವರು ಇಸ್ಮಾಯಿಲಿಯಾ ವಂಶದ ಖಲೀಫರಲ್ಲಿ ಒಬ್ಬರಾಗಿದ್ದರು. ಸಿರಿಯಾದಲ್ಲಿ ಇವರ ಸಂತಾನದವರು ವಾಸಿಸುತ್ತಿದ್ದರು. ಇವರು ಬಹಳ ನೀತಿವಂತ, ಧೀಮಂತ ವ್ಯಕ್ತಿಯಾಗಿದ್ದರು. ಇವರು ಬರೆದ ಕಾವ್ಯದ ವಿವಿಧ ಪ್ರಕಾರಗಳು, ವ್ಯಾಖ್ಯಾನ, ಪ್ರವಚನಗಳು, ಇತಿಹಾಸದ, ಭೂಗೋಲಕ್ಕೆ ಸಂಬಂಧಿಸಿದ ಗ್ರಂಥಗಳು, ರಿಸಾಲಾತ್ ಪುಸ್ತಕಗಳು ಬಹಳ ಪ್ರಖ್ಯಾತವಾಗಿದ್ದವು. ಸುಲ್ತಾನ್ ಬಹದ್ದೂರನಿಗೆ ಇವರ ಬಗ್ಗೆ ತಿಳಿದಾಗ ತಮ್ಮ ಆಸ್ಥಾನದಲ್ಲಿ ಭೇಟಿಯಾಗುವುದಕ್ಕೆ ಆಹ್ವಾನ ನೀಡಿದ್ದ. ಅವರು ಆಗಮಿಸಿದಾಗ ದರ್ಬಾರಿನಲ್ಲಿ ಎಲ್ಲರಿಗಿಂತ ಉನ್ನತ ಸ್ಥಾನದಲ್ಲಿ ಕುಳ್ಳಿರಿಸಿ ಆದರಿಸಿದ. ಅವರ ಮಾತುಗಳನ್ನು ಬಹಳ ಅಸ್ಥೆಯಿಂದ ಕೇಳಿದ. ಬುರ್ಹಾನ್ ನಿಜಾಮುಲ್ ಮುಲ್ಕನಿಗೆ ಇವರ ಪಾದಸ್ಪರ್ಶ ಮಾಡಲು ಸಂಕೇತ ಮಾಡಿದ. ಹೀಗೆ ಅವನು ನೀಡಿದ ಕಾಣಿಕೆ, ಉಡುಗೊರೆಗಳನ್ನು ಷಾ ತಾಹಿರ್ ಸ್ವೀಕರಿಸಿ ಇವರು ತಮ್ಮ ಪ್ರಯಾಣವನ್ನು ಮುಂದುವರಿಸುವುದಕ್ಕೆ ಅನುಮತಿಯನ್ನು ಕೇಳಿ ಹೊರಟು ಹೋದರು. ಬರ್ಹಾನುಲ್ ಮುಲ್ಕನಿಗೆ ಸುಲ್ತಾನ್ ಬಹದ್ದೂರ ಸೂಚಿಸಿದಂತೆ ಷಾ ತಾಹೀರರ ಪಾದಸ್ಪರ್ಶ ಮಾಡುವುದಕ್ಕೆ ಇಷ್ಟವಾಗಲಿಲ್ಲ.

ಒಂದು ದಿನ ಸುಲ್ತಾನ್ ಬಹದ್ದೂರನ ಮುಂದೆ ನಿಂತು ತಾನು ಪ್ರಯಾಣ ಹೊರಡಲು ಅನುಮತಿ ಕೇಳಲು ಬಂದಾಗ ನಿಜಾಮುಲ್ ಮುಲ್ಕನಿಗೆ ಕೂತುಕೊಳ್ಳಲು ಆಸನವನ್ನು ನೀಡಲಿಲ್ಲ. ಷಾ ತಾಹಿರ್ ಸಾದಾತ್ ವಂಶಕ್ಕೆ ಸೇರಿದವರು ಮತ್ತು ಸಾಹಿಬೆ ಇಲ್ಮ್(ಉಚ್ಚ ಸ್ಥರದ ಜ್ಞಾನಿ) ಎನಿಸಿದರಿಂದ ಸುಲ್ತಾನ್ ಬಹದ್ದೂರ್ ಅವರನ್ನು ಎಲ್ಲರಿಗಿಂತ ಉನ್ನತ ಸ್ಥಾನದಲ್ಲಿ ಕೂರಿಸಿದರು. ಅವರಿಗೆ ವಿಶೇಷವೆನಿಸಲ್ಪಟ್ಟ ಮತ್ತು ಬಾದಶಾಹರು ತೊಡುವಂತಹ ಹಸಿರು ಮಕ್ಮಲಿನ ಜುಬ್ಬಾವನ್ನು ನೀಡಿದ್ದ. ಈ ಉಡುಗೊರೆ ಮತ್ತು ಉನ್ನತ ಸ್ಥಾನ ಷಾ ತಾಹಿರರಿಗೆ ನೀಡಿದುದರಿಂದ ನಿಜಾಮುಲ್ ಮುಲ್ಕ ಅಸೂಯೆ ಪಟ್ಟುಕೊಂಡು ಅತೃಪ್ತನಾಗಿದ್ದ. ಸುಲ್ತಾನ್ ಬಹದ್ದೂರ್ ಅಲ್ಲಿಂದ ಅಹ್ಮದಾಬಾದಿಗೆ ಹೋಗಿ ತನ್ನ ಆಸ್ಥಾನದ ಕಾರ್ಯಕಲಾಪದಲ್ಲಿ ತೊಡಗಿಕೊಂಡ. ತನ್ನ ರಾಜ್ಯದ ವಿಸ್ತರಣೆಯಲ್ಲಿ ತೊಡಗಿ ಸೈನ್ಯವನ್ನು ಅಗಾಧ ಸಂಖ್ಯೆಯಲ್ಲಿ ಸೇರಿಸಿಕೊಂಡು ಅಹಂಕಾರದಿಂದ ಮೆರೆಯ ತೊಡಗಿದ. ಇವನ ಅಹಂಕಾರ ಎಷ್ಟು ಬೆಳೆಯಿತೆಂದರೆ

ಯಾವ ಬಾದಶಾಹರನ್ನು ಕೂಡ ಲೆಕ್ಕಿಸುತ್ತಿರಲಿಲ್ಲ. ತನ್ನ ಸೈನ್ಯದ ಸಂಖ್ಯೆಯ ಬಗ್ಗೆ ಹೇಳಿಕೊಂಡು ಬೀಗುತ್ತಿದ್ದ. ಇದರಿಂದಾಗಿ ಮುಂದೆ ಸಂಪೂರ್ಣವಾಗಿ ಅವನತಿಗೀಡಾದ.

**ಸುಲ್ತಾನ್ ಬಹದ್ದೂರ್ ಪೋರ್ಚುಗೀಸರೊಂದಿಗೆ ಸೇರಿದ್ದು ಮತ್ತು ಅವನ ಕೊಲೆ**

ಈ ಸಮಯದಲ್ಲಿ 'ಗೋಹು'(ಗೋವಾ?) ಬಂದರಿನ ಆಡಳಿತಾಧಿಕಾರಿ ಘುಲ್ವಿ ತನ್ನ ಸಿಪಾಯಿಗಳೊಂದಿಗೆ ದೀವ್‌ನ ಬಂದರಿನ ಬಳಿ ಈ ದೇಶವನ್ನು ವಶಪಡಿಸಲು ಬಂದಿದ್ದಾನೆಂದು ಒಂದು ಸುದ್ದಿ ಬಂತು. ಸುಲ್ತಾನ್ ಬಹದ್ದೂರ ತನ್ನ ದೊಡ್ಡ ಸೈನ್ಯವನ್ನು ಸೇರಿಸಿ ಈ ಫಿರಂಗಿಯಾನ್ (ಪೋರ್ಚುಗೀಸ)ರನ್ನು ಓಡಿಸುವುದಕ್ಕಾಗಿ ದಿವ್‌ನ ಬಂದರು ತಲಪಿದ. ಮುಜಾಬಾ ಸಮುದ್ರ ತೀರದಲ್ಲಿ ತನ್ನ ಸರದಾರರು ಮತ್ತು ಸೈನಿಕರನ್ನು ಇಬ್ಭಾಗವನ್ನಾಗಿ ಮಾಡಿ ಪರಂಗಿಗಳಿಗೆ ಬರಲು ಹಾದಿ ಮಾಡಿದ. ಪ್ರತೀದಿನ ಈ ಸಮುದ್ರ ತೀರದಲ್ಲಿ ಯುದ್ಧ ನಡೆಯಲು ಶುರುವಾಯಿತು. ಎರಡೂ ಕಡೆಯಲ್ಲಿ ಸೈನಿಕರು ಸಾಯ ತೊಡಗಿದರು. ಒಂದು ಅವಧಿಯ ತನಕ ಈ ರೀತಿಯ ಘಟನೆಗಳು ನಡೆಯುತ್ತಲೇ ಇದ್ದವು. ಎರಡೂ ಕಡೆಯ ಸೈನಿಕರು ಯುದ್ಧದಿಂದ ಬೇಸತ್ತುಹೋಗಿದ್ದರು. ಇವರ ಮಧ್ಯೆ ಸಂಧಾನ ನಡೆಸುವ ತೀರ್ಮಾನವಾಯಿತು. ಹಡಗಿನಲ್ಲಿ ಕೂತು ಮಾತುಕತೆ ನಡೆಸಲು ಪೋರ್ಚುಗೀಸರು ಆಹ್ವಾನ ನೀಡಿದರು. ಆದರೆ ಸುಲ್ತಾನರ ಪರಿವಾರದವರು ಇದಕ್ಕೆ ಒಪ್ಪದೆ, 'ನೀವು ಹೊರಗೆ ಬನ್ನಿ ನಾವು ಮಾತುಕತೆ ನಡೆಸೋಣ, ಹಾಗೆಯೇ ಊಟಕೂಡ ಮಾಡೋಣ' ಎಂಬ ಆಹ್ವಾನವನ್ನು ನೀಡಿದರು. ಯಾಕೆಂದರೆ ಸುಲ್ತಾನ್ ಬಹದ್ದೂರರಿಗೆ ಹಡಗಿನೊಳಗೆ ಜೀವಕ್ಕೇನಾದರೂ ಅಪಾಯವಾದರೆ ಎಂಬ ಅನುಮಾನದಿಂದ ಸರದಾರರು ಮತ್ತು ಪರಿವಾರದವರು ಅವರನ್ನು ತಡೆದಿದ್ದರು.

ಆದರೆ ಸುಲ್ತಾನರು ಈ ಅನುಮಾನಗಳಿಗೆ ಬೆಲೆ ನೀಡಲಿಲ್ಲ. 'ಇದೆಲ್ಲ ನಿಮ್ಮ ಅನುಮಾನಗಳು, ಏನೂ ಆಗುವುದಿಲ್ಲ' ಎಂದು ತನ್ನ ಪರಿವಾರದವರ ಮಾತನ್ನು ಕೇಳದೆ ಹಡಗಿನೊಳಗೆ ಅವಸರಪಟ್ಟುಕೊಂಡು ಹೋದರು. ಈ ಅವಕಾಶವನ್ನು ಉಪಯೋಗಿಸಿಕೊಂಡು ಪರಂಗಿಗಳು(ಪೋರ್ಚುಗೀಸರು) ಅವರನ್ನು ಮೋಸದಿಂದ ಕೊಂದು ಹಾಕಿದರು. ಅವರ ಜೊತೆಯಲ್ಲಿ ಬಂದಿದ್ದ ಅಂಗರಕ್ಷಕ ಸೈನಿಕರನ್ನು ಕೂಡ ಕೊಂದು ಹಾಕಿದರು.

**ಸುಲ್ತಾನ್ ಮಹಮೂದನ ಆಳ್ವಿಕೆ ಮತ್ತು ಅವನ ಬದುಕಿನ ವಿವರಗಳು**

ಸುಲ್ತಾನ್ ಬಹದ್ದೂರನ ಕೊಲೆಯ ನಂತರ ಅವನ ಸಹೋದರನ ಮಗ ಸುಲ್ತಾನ್ ಮಹಮೂದ ಸಿಂಹಾಸನವನ್ನೇರಿದ. ಈ ಸುಲ್ತಾನ ಬಹಳ ಬುದ್ಧಿವಂತನೂ, ಆಲೋಚಿಸಿ ಕಾರ್ಯಕ್ಕೆ ಕೈಹಾಕುವ ಜಾಗ್ರತೆಯ ಮನುಷ್ಯನೂ ಆಗಿದ್ದ. ಇವನ ಆಳ್ವಿಕೆಯಲ್ಲಿ

ರಾಜ್ಯದ ಜನತೆ ಸುಖಸಂತೋಷದಿಂದ ಬಾಳಿದರು. ಸಂಕಷ್ಟಕ್ಕೀಡಾದ ಜನರಿಗೆ ಮತ್ತು ಬಡವರಿಗೆ ಸಹಾಯ ಮಾಡುವುದರಲ್ಲಿ ಇವನದು ಎತ್ತಿದ ಕೈಯಾಗಿತ್ತು. ಪ್ರವಾಸಿಗರನ್ನು ಆದರದಿಂದ ಬರಮಾಡಿಕೊಂಡು ಅವರಿಗೆ ಸೂಕ್ತ ವ್ಯವಸ್ಥೆ ಮಾಡಿಕೊಡುತ್ತಿದ್ದ. ಪ್ರಜೆಗಳು ಮತ್ತು ಸೈನಿಕರು ತುಂಬ ಸಂತೋಷದಿಂದ ಬದುಕಿದ್ದರು. ನಗರದ ಮಧ್ಯೆ ೨೦ ಮೈಲಿಗಳಷ್ಟು ವಿಶಾಲವಾದ ತೋಟವನ್ನು ಮಾಡಿಸಿದ್ದ. ವಿಶ್ವದಲ್ಲಿ ಸಿಗುವ ಎಲ್ಲ ಥರದ ಹಣ್ಣುಗಳ ವಿವಿಧ ತಳಿಗಳ ಬೀಜ, ಗಿಡಗಳನ್ನು ತರಿಸಿ ತನ್ನ ತೋಟದಲ್ಲಿ ಬೆಳೆಸಿದ್ದ. ಈ ತೋಟವು ಎಷ್ಟೊಂದು ಸುಂದರ ಮತ್ತು ಸಂತೋಷದಾಯಕವಾಗಿತ್ತೆಂದರೆ ಇದೊಂದು ಭೂಮಿಯ ಸ್ವರ್ಗವೆಂದು ಕರೆಯಲಾಗುತ್ತಿತ್ತು. ಈ ತೋಟದಲ್ಲಿ ಎಲ್ಲ ರೀತಿಯ ಪಕ್ಷಿಗಳು, ಪ್ರಾಣಿಗಳನ್ನು ತರಿಸಿ ಸಾಕಿದ್ದ. ಈ ಪ್ರಾಣಿಗಳು ಮತ್ತು ಪಕ್ಷಿಗಳ ಸಂತತಿಗಳು ಬೆಳೆದವು. ಈ ಪ್ರದೇಶವು ಮಹಮೂದಾಬಾದ್ ಎಂಬ ಹೆಸರಿನಲ್ಲಿ ಪ್ರಸಿದ್ಧವಾಯಿತು. ಹದಿನೇಳು ವರ್ಷಗಳ ಕಾಲ ಸುಖ ಸಂತೋಷದೊಂದಿಗೆ ತನ್ನ ಆಳ್ವಿಕೆಯನ್ನು ನಡೆಸಿದ. ಮೂಲದಲ್ಲಿ ಬ್ರಾಹ್ಮಣ ವಂಶದಲ್ಲಿ ಹುಟ್ಟಿ ಇಸ್ಲಾಂ ಧರ್ಮವನ್ನು ಸ್ವೀಕರಿಸಿದ್ದ ಏತೆಮಾದ್ ಖಾನ್‌ನನ್ನು ಈತ ತನ್ನ ಪ್ರಧಾನ ಸೇನಾಧಿಪತಿಯನ್ನಾಗಿ ನೇಮಿಸಿದ. ರಾಜ್ಯಭಾರದ ಕೆಲಸದಲ್ಲಿ ಇವನ ಸಲಹೆಯನ್ನು ಸುಲ್ತಾನ ಮಹಮೂದ ಸಂಪೂರ್ಣವಾಗಿ ಸ್ವೀಕರಿಸುತ್ತಿದ್ದ. ಸುಲ್ತಾನ್ ಮಹಮೂದ ಹಬಶಿ ಮತ್ತು ತುರ್ಕಿ ನೌಕರರನ್ನು ತನ್ನ ಆಸ್ಥಾನದಲ್ಲಿ ನೇಮಕಾತಿ ಮಾಡಿದ್ದ. ಅವರಲ್ಲಿ ಬಹಳಷ್ಟು ಮಂದಿ ಉನ್ನತ ದರ್ಜೆಯ ಅಧಿಕಾರಿಗಳಾಗಿಯೂ ಇದ್ದರು. ಸುಲ್ತಾನನಿಗೆ ಈ ಸೇವಕರ ಕಡೆಯಿಂದ ಸಂಪೂರ್ಣ ರೀತಿಯ ಬೆಂಬಲ ದೊರಕಿತ್ತು. ಸುಲ್ತಾನನಿಗೆ ಈ ಗುಲಾಮರ ಬೆಂಬಲದಿಂದ ಉತ್ಸಾಹಿತನಾಗಿದ್ದ.

ಒಂದು ರಾತ್ರಿ ಸುಲ್ತಾನ ಶರಾಬಿನ ಮೆಹಫಿಲನ್ನು ತನ್ನ ಆಪ್ತ ಸಹಚರರು, ಗೆಳೆಯರೊಂದಿಗೆ ಆಸ್ವಾದಿಸುವುದರಲ್ಲಿ ತಲ್ಲೀನನಾಗಿದ್ದ. ಅರ್ಧ ರಾತ್ರಿಯ ನಂತರ ಅವನಿಗೆ ಶರಾಬಿನ ನಶೆ ತಲೆಗೆ ಹತ್ತಿ ಮತಿತಪ್ಪಿ ಬಿದ್ದುಬಿಟ್ಟ. ಗುಲಾಮ ನಮಕ್ ಹರಾಮರು ಸುಲ್ತಾನ ಮತ್ತು ಜೊತೆಗಾರ ಅಂಗರಕ್ಷಕರನ್ನು ಒಳಗೊಂಡಂತೆ ನಾಲ್ಕು ಮಂದಿಯ ತಲೆಗಳನ್ನು ಕಡಿದು ಹಾಕಿದರು. ಕೊಲೆಯ ಕೃತ್ಯವನ್ನು ನಡೆಸಿದ ಸೇವಕರು ಯಾರ ಆಜ್ಞೆಯ ಮೇರೆಗೆ ಈ ಕೃತ್ಯವನ್ನು ನಡೆಸಿದರೆಂಬುದು ರಹಸ್ಯವಾಗಿರಬೇಕೆಂಬ ದೃಷ್ಟಿಯಿಂದ ಸುಲ್ತಾನರ ಜೊತೆಗಾರರು ಮತ್ತು ಅಂಗರಕ್ಷಕರನ್ನು ಕೂಡ ಕೊಲೆಮಾಡಿದ್ದರು. ಮರುದಿನ ಮಡಿದವರನ್ನು ದಫನಮಾಡಲಾಯಿತು. ಇದಾದ ಬಳಿಕ ಸುಲ್ತಾನರ ಮಕ್ಕಳಲ್ಲಿ ಓರ್ವನಿಗೆ ತುಂಬ ಆಘಾತ ಉಂಟಾಗಿತ್ತು. ಅವನು ಸೀದಾ ಹೋಗಿ ಸುಲ್ತಾನನ ಸಿಂಹಾಸನದಲ್ಲಿ ಕೂತುಬಿಟ್ಟ.

## ಸುಲ್ತಾನ್ ಅಹ್ಮದನನ ಆಳ್ವಿಕೆಯ ದಿನಗಳು

ಸುಲ್ತಾನ್ ಮಹಮೂದನ ಕೊಲೆಯ ಬಳಿಕ ಸುಲ್ತಾನ್ ಅಹ್ಮದ್ ಸಿಂಹಾಸನಾರೂಢನಾಗಿ ರಾಜ್ಯಭಾರ ನಡೆಸಿದ. ಇವನ ಆಳ್ವಿಕೆ ಬರಿಯ ಹೆಸರಿಗೆ ಮಾತ್ರ ಆಗಿತ್ತು. ಕೆಲವು ಅಧಿಕಾರಿಗಳನ್ನು ನೇಮಕಾತಿ ಮಾಡಿಕೊಂಡು ಅವರನ್ನು ಮುಂದಿಟ್ಟುಕೊಂಡು ಆಳ್ವಿಕೆಯನ್ನು ನಡೆಸುತ್ತಿದ್ದ. ಏತಿಮಾದ್ ಖಾನ್, ಬಾಜುಜಾರ್ ಖಾನ್ ಮತ್ತು ಅಲ್ಫೆ ಖಾನ್ ಈ ಮೂರು ಜನರನ್ನು ಸೇನಾಪತಿಗಳನ್ನಾಗಿ ನೇಮಕಾತಿ ಮಾಡಿದ. ಉಳಿದ ಕೆಲಸಕಾರ್ಯಗಳಿಗೆ ತಕ್ಕಂತೆ ಅಧಿಕಾರಿಗಳನ್ನು ನೇಮಿಸಿ ಜವಾಬ್ದಾರಿಗಳನ್ನು ಹಂಚಿದ. ಮೂಸಾ ಖಾನ್, ಅಮಾಚಿ ಖಾನ್ ಮತ್ತು ಅಮಾದುಲ್ ಮುಲ್ಕರನ್ನು ಭರೂಚದಲ್ಲಿ, ಅಮೀನ್ ಖಾನನನ್ನು ದರ್ಪಿಗರ್(ವಾಪಿ?)ನ್ನು ನೋಡಿಕೊಳ್ಳುವ ಜವಾಬ್ದಾರಿಯನ್ನು ವಹಿಸಿಕೊಡಲಾಯಿತು. ಅವನು ತನ್ನ ಮೊಹರು ಮತ್ತು ನಾಣ್ಯಗಳನ್ನು ಜಾರಿ ಮಾಡಿದ. ಏಳು ವರ್ಷಗಳ ಕಾಲ ಎರಡು ಬಾರಿ ಏತಮಾದ್ ಖಾನ್‌ನಿಗೆ ತನ್ನ ಸರದಾರರ ಸಿಫಾರಸು ಮೇರೆಗೆ ಭಡ್ತಿ ನೀಡಿದನಾದರೂ, ಇವನು ತನ್ನ ಜವಾಬ್ದಾರಿಯನ್ನು ಸರಿಯಾಗಿ ನಿಭಾಯಿಸಲಿಲ್ಲ. ಹಿಜರಿ ವರ್ಷ ೯೦೦ರ ಸಮಯದಲ್ಲಿ ಸುಲ್ತಾನ್ ಅಹ್ಮದ್ ಒಮ್ಮೆ ಮುಂಜಾನೆ ನದಿ ತಟದಲ್ಲಿ ನಡೆದಾಡುತ್ತಿದ್ದಾಗ, ಒಂದು ಹಸ್ತಲಿಖಿತ ಪತ್ರಗಳ ದಾಖಲೆಯನ್ನು ದೂತರು ತಂದೊಪ್ಪಿಸಿದರು. ಅದರಲ್ಲಿ 'ರಾತ್ರಿ ಸುಲ್ತಾನನ ತಲೆಹಾರಿಸಲಾಗುವುದು' ಎಂದು ಎಚ್ಚರಿಸಲಾಗಿತ್ತು. ಇದರಿಂದಾಗಿ ಅವನ ಅರೋಗ್ಯದಲ್ಲಿ ಏರುಪೇರುಂಟಾಯಿತು. ನಗರದಲ್ಲಿ ಬಂಡಾಯ, ದಂಗೆ ಏಳುವ ಸಾಧ್ಯತೆ ಇರಬಹುದೆಂದು ರಾಜಧಾನಿಯ ಕಡೆ ಹೋದ. ತನ್ನ ಸ್ಥಾನದಲ್ಲಿ ಇನ್ನೊಬ್ಬನನ್ನು ಕೂರಿಸಿದ.

## ಸುಲ್ತಾನ್ ಮುಝಫ್ಫರನ ಆಳ್ವಿಕೆಯ ವಿವರಗಳು(ಹಿಜರಿ ವರ್ಷ ೯೭೦)

ಸುಲ್ತಾನ್ ಅಹ್ಮದನ ಕೊಲೆಯ ಬಳಿಕ ದಫನ್ ಕ್ರಿಯಾಕರ್ಮ ನಡೆದ ನಂತರ ದೊಡ್ಡ ಯುದ್ಧವೊಂದರಲ್ಲಿ ಭಾಗವಹಿಸಿದ್ದ ಶೂರ ಯುವಕ ಸುಲ್ತಾನ್ ಮುಝಫ್ಫರ್‌ನನ್ನು ವಾಪಸು ಕರೆಸಿ ಸಿಂಹಾಸನದಲ್ಲಿ ಕೂರಿಸಿ ಪಟ್ಟಾಭಿಷೇಕ ಮಾಡಿದರು. ಸಮಸ್ತ ದರ್ಬಾರಿಗಳು, ಅಧಿಕಾರಿಗಳು ಮತ್ತು ಸರದಾರರು ಅವನಿಗೆ ಸಲಾಂ ಮಾಡಿದರು. ಇವರೆಲ್ಲರ ಉದ್ದೇಶ ರಾಜ್ಯದಲ್ಲಿ ಅರಾಜಕತೆಯಾಗದೆ, ಸುಖಸಮೃದ್ಧಿಯ ಒಳ್ಳೆಯ ಆಡಳಿತ ಜಾರಿಗೆ ಬರಲಿ ಎಂಬ ಆಶಯವಾಗಿತ್ತು. ಸುಲ್ತಾನ ಮುಝಫ್ಫರನ ಕೋಟೆ ಕಾಯುವ ಮುಖ್ಯ ಸರದಾರರಾಗಿದ್ದ ಅಮಾದುಲ್ ಮುಲ್ಕ್ ಮತ್ತು ಖುದಾವಂದ್ ಖಾನ್ ಎಂಬ ಇಬ್ಬರ ಮಧ್ಯೆ ಸದಾ ಪರಸ್ಪರ ವಾದವಿವಾದ ಜಗಳಗಳು ನಡೆಯುತ್ತಿದ್ದವು. ಇವರಿಬ್ಬರ ನಡುವೆ ಸುಲ್ತಾನ ಎರಡು ಶರ್ತಗಳನ್ನಿಟ್ಟು ರಾಜಿಮಾಡಲು ತೀರ್ಮಾನ ಮಾಡಿದ. ಶರ್ತದಂತೆ ಅಮಾದುಲ್ ಮುಲ್ಕ್‌ನ ಮಗಳನ್ನು ಖುದಾವಂದ್ ಖಾನನಿಗೆ

ನಿಕಾಹ ಮಾಡಿಕೊಡಬೇಕೆಂದು ಹೇಳಲಾಯಿತು. ಇದರಿಂದಾಗಿ ಇವರಿಬ್ಬರೂ ಜಗಳವಮಾಡುತ್ತಿರುವವರು ನಿಲ್ಲಿಸಿ ಸಂಬಂಧಿಕರಾಗಿ ಬದಲಾಗಲೆಂಬುದು ಆಶಯವಾಗಿತ್ತು. ಸುಲ್ತಾನ್ ಅಹ್ಮದ್ ಇವರಿಬ್ಬರ ಮಧ್ಯೆ ರಾಜಿ ಏರ್ಪಡಿಸಲು ಮತ್ತು ಸ್ನೇಹ ಸಂಬಂಧಿಗಳನ್ನಾಗಿ ಪರಿವರ್ತಿಸಲು ಪ್ರಯತ್ನಪಟ್ಟಿದ್ದ.

ಒಂದು ದಿನ ಖುದಾವಂದ್ ಖಾನ್, ಕೋಟೆಯೊಳಗೆ ಒಂದು ಔತಣ ಕೂಟ ಏರ್ಪಡಿಸಿ ಅಮಾದುಲ್ ಮುಲ್ಕನನ್ನು ಆಹ್ವಾನಿಸಿದ. ಊಟದ ಚಾಪೆಯ (ದಸ್ತರ್ ಖಾನ– ಸುಪುರ) ಒಂದು ಬದಿಯಲ್ಲಿ ಒಂದು ಗುಂಪನ್ನು ಕೂರಿಸಿ ಅಮಾದುಲ್ ಮುಲ್ಕನನ್ನು ಕೊಲೆ ಮಾಡುವಂತೆ ನಿಯೋಜಿಸಿದ್ದ. ಅಮಾದುಲ್ ಮುಲ್ಕ್ ದಸ್ತರ್ ಖಾನದಲ್ಲಿ ಕೂತಾಗ ಒಂದು ಗುಂಪು ತಲ್ವಾರು ಹಿರಿದು ಸುತ್ತ ನಿಲ್ಲಲು ತಯಾರಾಯಿತು. ಅವನು ಪರಿಸ್ಥಿತಿಯನ್ನು ತಿಳಿದು ಎಚ್ಚತ್ತು ಒಂದು ದೊಡ್ಡ ಊಟದ ಪಾತ್ರೆಯನ್ನು ಮತ್ತು ತಶ್ತನ್ನು(ಕೈ ತೊಳೆಯುವ ಪಾತ್ರೆ) ಹಿಡಿದು ಢಾಲಿನಂತೆ ಉಪಯೋಗಿಸಿದ. ಲೋಟವೊಂದನ್ನು ಇನ್ನೊಂದು ಕೈಯಲ್ಲಿ ಆಯುಧವನ್ನಾಗಿ ಹಿಡಿದು ಅಮಾದುಲ್ ಮುಲ್ಕ್ ಕೂಡಲೇ ಯುದ್ಧಕ್ಕೆ ಅಣಿಯಾದ. ಅವರೆಲ್ಲರ ಮೇಲೆ ಆಕ್ರಮಣನಡೆಸಿ ಸೋತು ಮೈ ನೀರಿಳಿಸುವಂತೆ ಹೋರಾಡಿದ. ಅವನೊಂದಿಗೆ ಕೂಡಲೇ ಅವನ ಅಂಗರಕ್ಷಕರ ದಂಡು ಬಂದು ಸೇರಲು ವಿರೋಧಿಗಳಿಗೆ ಚಳ್ಳೆಹಣ್ಣು ತಿನ್ನಿಸಿ ಅಲ್ಲಿಂದ ಪರಾರಿಯಾದ. ನಿಜವಾಗಿಯೂ ಅಮಾದುಲ್ ಮುಲ್ಕನ ಜೊತೆಗೆ ಇರುವವರ ತಂಡ ಬಹು ಚಿಕ್ಕದಾಗಿತ್ತು. ಆದರೆ ಅವರ ಅಪ್ರತಿಮ ಶೌರ್ಯದಿಂದಾಗಿ ಸಂಖ್ಯೆಯಲ್ಲಿ ಹೆಚ್ಚಿದ್ದ ವಿರೋಧಿಗಳನ್ನು ಹೊಡೆದುರುಳಿಸಿದರು. ಅಮಾದುಲ್ ಮುಲ್ಕನ ಮಗ ಜಂಘರ್ ಖಾನನಿಗೆ ಈ ಸುದ್ದಿ ತಲಪಿದಾಗ, ಒಂದು ಸೈನ್ಯವನ್ನು ಕಟ್ಟಿಕೊಂಡು ಬಂದು ಯುದ್ಧರಂಗಕ್ಕೆ ಧುಮುಕಿದ.

ಜಂಘರ್ ಖಾನ್ ೨೦ ವರ್ಷ ವಯಸ್ಸಿನ ಕಟ್ಟುಮಸ್ತಾದ ದೇಹದ ಯುವಕನಾಗಿದ್ದು ಓರ್ವನೇ ಒಂದು ಸಾವಿರ ಜನರನ್ನು ಒಮ್ಮೆಗೇ ಎದುರಿಸುವ ತಾಕತ್ತು ಹೊಂದಿದವನಾಗಿದ್ದ. ಖುದಾವಂದ್ ಖಾನ್ ಹತ್ತಿರ ತಲಪಿದಾಗ ಜಂಘರ್ ಖಾನ ಭುಗಿಲೆದ್ದ ಬೆಂಕಿಯಂತೆ ನುಗ್ಗಿ ಬಂದು ಎಲ್ಲರನ್ನೂ ಕೊಂದು ನಾಶಪಡಿಸಿದ. ಖುದಾವಂದ್ ಖಾನ್ ಎಷ್ಟು ಪ್ರಯತ್ನಿಸಿದರೂ ಯುದ್ಧದಲ್ಲಿ ಜಯಗಳಿಸಲಾಗದೆ ತನ್ನ ಕೋಟೆಯೊಳಗೆ ಹೋಗಿ ಅಡಗಿಕೊಂಡ. ಇದನ್ನು ತಿಳಿದ ಜಂಘರ್ ಖಾನ್ ಕೋಟೆಗೆ ಮುತ್ತಿಗೆ ಹಾಕಿದ. ಹೀಗೆ ಎರಡು ವರ್ಷಗಳ ಕಾಲ ಮುತ್ತಿಗೆ ಹಾಕಿದ್ದ. ಮುತ್ತಿಗೆ ಹಾಕಿದ ಸಂದರ್ಭದಲ್ಲಿ ಸಮಯ ನೋಡಿ ಸುಲ್ತಾನನನ್ನು ಕೊಲ್ಲಿಸಿ ಸುಲ್ತಾನ್ ಮುಝಫ್ಫರ್ ರಾಜ್ಯದಲ್ಲಿ ಪಟ್ಟಕ್ಕೆ ಬಂದ. ಜಂಘರ್ ಖಾನ್ ಈ ಪ್ರಾಂತ್ಯವನ್ನು ತನ್ನ ಮುಷ್ಠಿಯೊಳಗೆ ಇಟ್ಟುಕೊಂಡು ಆಳ್ವಿಕೆ ನಡೆಸಿದ. ತನ್ನ ಸೈನ್ಯವನ್ನು ವಿಸ್ತರಿಸಿದ. ತನ್ನ

ತಂದೆಯ ಸೇನೆಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಮತ್ತು ಬಲಶಾಲಿಯಾದ ಸೈನ್ಯವನ್ನು ಕಟ್ಟಿಕೊಂಡ.

ಅವನ ತಂದೆಯ ಕಾಲದ ಇಬ್ಬರು ಹಿರಿಯ ಅಧಿಕಾರಿಗಳಾದ ಅಸದ್ ಖಾನ್ ಮತ್ತು ರುಸ್ತುಂ ಖಾನ್ ರಿಗೆ ರಾಜ್ಯಾಡಳಿತದಲ್ಲಿ ಒಳ್ಳೆಯ ಪರಿಣಿತಿ ಪಡೆದಿದ್ದರು. ಈ ಘಟನೆಗಳ ಬಳಿಕ ಜಂಘರ್ ಖಾನ್‌ನ ಸ್ಥಾನದಲ್ಲಿ ಉನ್ನತ ಪದವಿಗೇರುವಾಗ ಈ ಇಬ್ಬರು ಹಿರಿಯ ಅಧಿಕಾರಿಗಳು ಅವನ ಕೈಕೆಳಗೆ ಕೆಲಸಮಾಡಲು ಒಪ್ಪದೆ ತಮಗೆ ಸ್ವತಂತ್ರ ಅಧಿಕಾರವನ್ನು ನೀಡಬೇಕೆಂಬ ಬೇಡಿಕೆಯನ್ನು ಮುಂದಿಟ್ಟರು. ಜಂಘರ್ ಖಾನನಿಗೆ ಇವರ ಬಗ್ಗೆ ಮತ್ತು ಇವರ ಬೇಡಿಕೆಗಳ ಬಗ್ಗೆ ತಿಳಿದಾಗ ಇಬ್ಬರನ್ನೂ ಬಂಧಿಸಿದ. ಜಂಘರ್ ಖಾನ್ ದಿನವೂ ಕೋಟೆಯೊಳಗೆ ಅಡಗಿದ್ದ ಖುದಾವಂದ ಖಾನ ಹೊರಗೆ ಬರಲೆಂದು ಒಂದಲ್ಲ ಒಂದು ರೀತಿಯ ತೊಂದರೆಗಳನ್ನು, ಕಿರುಕುಳವನ್ನು ನೀಡತೊಡಗಿದ. ಅವನಲ್ಲಿ ಇಷ್ಟೊಂದು ದೀರ್ಘಕಾಲದ ತನಕದ ಅಗತ್ಯದ ಸಾಮಾನುಗಳು ಆಹಾರ ಸಾಮಾಗ್ರಿಗಳ ದಾಸ್ತಾನು ಇರಲಿಲ್ಲ. ತನ್ನಲ್ಲಿ ದಾಸ್ತಾನಿರುವ ಸಾಮಾನುಗಳು ಮತ್ತು ಅವಶ್ಯಕ ವಸ್ತುಗಳು ಒಂದೊಂದಾಗಿ ಮುಗಿಯುತ್ತಾ ಬಂದು ಕೊರತೆ ಕಾಡತೊಡಗಿತು. ಅಡಗಿದಲ್ಲಿಂದಲೇ ಖುದಾವಂದ ಖಾನನು ಏತಿಮಾದ್ ಖಾನನಿಗೆ ಪತ್ರ ಬರೆದ. 'ನೀನು ನನಗೆ ಸಂಕೇತ ನೀಡಿದರೆ ನಾನು ಅಮಾದುಲ್ ಮುಲ್ಕನನ್ನು ಮುಗಿಸುತ್ತೇನೆ. ನೀವು ಏನಾದರೂ ಪ್ರಯತ್ನ ಮಾಡಿ ಕೋಟೆಯ ಬಂಧನದಿಂದ ಸ್ವತಂತ್ರನಾಗುವಂತೆ ಸಹಾಯ ಮಾಡಿ. ನೀವು ನನಗೆ ಸಹಾಯ ಮಾಡಿ ಪಾರು ಮಾಡಿದರೆ ವೈರಿಯ ತಲೆಯನ್ನು ಕಡಿದು ಕೋಟೆಯನ್ನು ನಿಮ್ಮ ವಶಕ್ಕೆ ಒಪ್ಪಿಸುತ್ತೇನೆ' ಎಂದು ಬರೆದಿದ್ದ. ಏತ್‌ಮಾದ್ ಖಾನನು ಇದರ ಸಾಧ್ಯತೆಯನ್ನು ಪರಿಶೀಲಿಸಿದಾಗ ಜಂಘರ್ ಖಾನನ ಸೈನ್ಯ ಅಧಿಕ ಸಂಖ್ಯೆಯಲ್ಲಿರುವುದು ಕಂಡು ಬಂತು. ತಾನೀಗ ಇವನಿಗೆ ಸಹಾಯ ಮಾಡಿದಲ್ಲಿ ನಮ್ಮ ಮಧ್ಯೆ ದ್ವೇಷ ಉಂಟಾಗುತ್ತದೆ ಎಂದುಕೊಂಡು ಒಂದು ಕುಟಿಲ ಕಾರಸ್ಥಾನಕ್ಕೆ ಯೋಜನೆಗಳನ್ನು ರಚಿಸತೊಡಗಿದ. ಜಂಘರ್ ಖಾನನ ಕಟ್ಟುನಿಟ್ಟಿನ ಪಹರೆಯಲ್ಲಿ ನ್ಯೂನತೆಯನ್ನು ಕಂಡು ಹಿಡಿದ ಖುದಾವಂದ್ ಖಾನ್ ಕೋಟೆಯ ಅಡಗುತಾಣದಿಂದ ಎದ್ದು ತಪ್ಪಿಸಿಕೊಂಡು ರಾತ್ರೋರಾತ್ರಿ ಏತಿಮಾದ್ ಖಾನನ ಬಳಿಗೆ ಹೋದ.

ಏತಿಮಾದ್ ಖಾನ್ ತುಂಬ ಕುತಂತ್ರಿ, ಮಕ್ಕಾರ್, ಚಾಲಾಕಿ ಮತ್ತು ಢೋಂಗಿ ವ್ಯಕ್ತಿಯಾಗಿದ್ದ. ತನ್ನ ಬಳಿ ಬಂದ ಖುದಾವಂದ್ ಖಾನನಿಗೆ 'ನಿನಗೆ ಕೋಟೆಯನ್ನು ಒಪ್ಪಿಸುತ್ತೇನೆ' ಎಂದು ಸುಳ್ಳು ಆಶ್ವಾಸನೆಯನ್ನು ನೀಡಿದ್ದ. ಅವನಿಗೆ ಖರ್ಚಿಗೆ ಸ್ವಲ್ಪ ಹಣಕೊಟ್ಟು ಒಂದು ಪರ್ವತ ಪ್ರದೇಶಕ್ಕೆ ಕಳುಹಿಸಿದ. ನಂತರ ಅಸದ್ ಖಾನ್ ಮತ್ತು ರುಸ್ತುಂ ಖಾನರನ್ನು ಕರೆದು, 'ಖುದಾವಂದ್ ಖಾನ್‌ನ ಶಿರಚ್ಛೇದ ಮಾಡಿದರೆ

ನೀವು ನನಗೆ ಕಾಣಿಕೆಯ ರೂಪದಲ್ಲಿ ಏನು ಕೊಡುತ್ತೀರಿ?' ಎಂದು ಕೇಳಿದ. ಹೀಗೆ ರಹಸ್ಯವಾಗಿ ಎರಡು ಮೈಲಿಯಷ್ಟೇ ಪ್ರಯಾಣ ಮಾಡಿದ್ದ ಖುದಾವಂದ್ ಖಾನನ ಹಿಂದಿನಿಂದ ತನ್ನ ಆಳುಗಳನ್ನು ಕಳುಹಿಸಿ ಖಡ್ಗದಿಂದ ಅವನ ತಲೆಯನ್ನು ಕಡಿದು ಹಾಕಿಸಿದ. ಜಂಘರ್ ಖಾನನ ಆಸ್ಥಾನಕ್ಕೆ ಖುದಾವಂದ್ ಖಾನನ ತಲೆಯನ್ನು ಕಳುಹಿಸಿಕೊಟ್ಟ.

ಜಂಘರ್ ಖಾನನಿಗೆ ತಲಪಿದ ಕೂಡಲೇ ಅವನ ಶಿರವನ್ನು ಕೋಟೆಯ ತುದಿಯಲ್ಲಿ ನೇತಾಡಿಸಿದ. ಇದರ ಬದಲಿಗೆ ಏತಿಮಾದ್ ಖಾನನಿಗೆ ಸಾಕಷ್ಟು ಬೆಲೆಬಾಳುವ ಉಡುಗೊರೆಗಳನ್ನು ನೀಡಿ ಖುಶಿಪಡಿಸಿದ. ತನ್ನ ತಂದೆಯ ಕೊಲೆಗಡುಕನ ಮತ್ತು ಕೋಟೆಯ ವಿಚಾರದ ಸುತ್ತ ನಡೆದ ಗೊಂದಲ, ಘರ್ಷಣೆಗಳಿಂದ ಜಂಘರ್ ಖಾನ ಹೊರ ಬಂದ ಬಳಿಕ ಕೋಟೆಯನ್ನು ಶಾಂತಿ ಸೌಹಾರ್ದ ಬಯಸುವ ತನ್ನ ಅಪ್ತರಲ್ಲೊಬ್ಬನಿಗೆ ನೋಡಿಕೊಳ್ಳುವ ಜವಾಬ್ದಾರಿ ವಹಿಸಿಕೊಟ್ಟು ಬರೋಚಿಗೆ ತನ್ನ ಸೈನಿಕರನ್ನು ಕಟ್ಟಿಕೊಂಡು ಹೋದ. ಅಲ್ಲಿ ಸುಖ ಸಂತೋಷದಿಂದ ಬದುಕಿದ. ದಿನದಿಂದ ದಿನಕ್ಕೆ ಅವನ ಮರ್ಯಾದೆ, ಗೌರವ ಉನ್ನತ ಮಟ್ಟಕ್ಕೇರತೊಡಗಿತು. ನಾಲ್ಕೂ ದಿಕ್ಕಿನಿಂದ ಜನರು ಅವನಿಗೆ ಸಲಾಂ ಮಾಡುವುದಕ್ಕಾಗಿ ಆಗಮಿಸುತ್ತಿದ್ದರು. ಅವನು ಅವರಿಗೆ ಕೊಡುಗೈಯವನಾಗಿ ಉಡುಗೊರೆಗಳನ್ನು ನೀಡುತ್ತಿದ್ದ. ಸಹಾಯ ಯಾಚಿಸುತ್ತ ಬಂದವರಲ್ಲಿ ಕೆಲವರು ಸುಲ್ತಾನ್ ಹುಸೈನ್ ಮಿರ್ಜಾರ ಸಂತಾನದವರು ಕೂಡ ಇದ್ದರು. ಇವರಿಗೆ ತನ್ನಲ್ಲಿ ಅಧಿಕಾರಿಗಳ ಹುದ್ದೆಯನ್ನು ನೀಡಿ ಸಹಾಯ ಮಾಡಿದ. ಶರ್ಫುದ್ದೀನ್ ಹುಸೈನ್ ಮಿರ್ಜಾನಿಗೆ ಕೂಡ ಆಸ್ಥಾನದಲ್ಲಿ ಅಧಿಕಾರಿಯ ದರ್ಜೆಯನ್ನು ನೀಡಿದ. ಇವನು ದೆಹಲಿಯ ಅಕ್ಬರ್ ಬಾದಶಾಹನ ಮಗನ ಮಗ ಅಂದರೆ ಮೊಮ್ಮಗನಾಗಿದ್ದ. ಅಕ್ಬರ್ ಬಾದಶಾಹ ತನ್ನ ಸಹೋದರಿಯನ್ನು ಶರ್ಫುದ್ದೀನನ ಸಹೋದರನಿಗೆ ಮದುವೆ ಮಾಡಿಕೊಟ್ಟಿದ್ದ. ಹೀಗೆ ಮೂವರು ಶೌರ್ಯಕ್ಕೆ ಹೆಸರಾಂತರಾಗಿದ್ದರು. ಈ ಮೂವರೂ ಒಂದೇ ಕಡೆ ಸೇರಿದುದರಿಂದ ಹಲವು ಯುದ್ಧಗಳನ್ನು ಜಯಿಸುವುದಕ್ಕೆ ಕೂಡ ಕಾರಣವಾಯಿತು. ಹಿಂದೆಂದೂ ವಶಪಡಿಸಿಕೊಳ್ಳಲು ಸಾಧ್ಯವಾಗದ ಆ ಕಾಲದ ಹೆಸರಾಂತ ಅಜ್ಮೀರಿನ ಕೋಟೆಯನ್ನು ಇವರು ತಮ್ಮ ಶೌರ್ಯದಿಂದ ಜಯಿಸಿದರು. ಆದರೆ ಅಕ್ಬರ್ ಬಾದಶಾಹ ಇದರಿಂದ ಸಂತಸಪಡಲಿಲ್ಲ. ಅಕ್ಬರ್ ಬಾದಶಾಹನ ಸಮೀಪವರ್ತಿಯಾಗಿದ್ದ ಜಂಘರ್ ಖಾನ್‌ನಿಗೆ ಅರಮನೆಯಲ್ಲಿ ಮತ್ತು ದರ್ಬಾರಿನಲ್ಲಿ ಒಂದು ಪ್ರಮುಖ ಹುದ್ದೆಯಿತ್ತು. ಶಾಹಮೀರ್‌ನಿಗೆ ಕೂಡ ಒಂದು ಒಳ್ಳೆಯ ಗೌರವದ ಸ್ಥಾನವಿತ್ತು. ಇವನು ಮೂಲದಲ್ಲಿ ಕುರ್ದಿಸ್ಥಾನಿಯಾಗಿದ್ದ. ತನ್ನ ಪ್ರಯಾಣದ ಹಾದಿಯಲ್ಲಿ ಜಂಘರ್ ಖಾನ್ ದೆಹಲಿಯಲ್ಲಿ ಶಾಹಮೀರ್‌ರನ್ನು ಭೇಟಿಯಾಗಿದ್ದ. ಈ ಶಾಹಮೀರ್ ಷಾ ತಹಮಾಸ್ಫರ ಸಂಬಂಧಿಕರಲ್ಲಿ ಒಬ್ಬನಾಗಿದ್ದ.

ಷಾ ತಹಮಾಸ್ಫ್ ಇರಾನಿನ ರಾಜವಂಶಸ್ಥನಾಗಿದ್ದ. ಫಕೀರಿ ಮತ್ತು ಸೂಫಿ ಉಡುಪುಗಳನ್ನು ಧರಿಸುತ್ತಿದ್ದ. ಇವನ ಯೌವನವು ನೀತಿ ನೈತಿಕತೆಯಲ್ಲಿ ಕಳೆದಿದ್ದು ನಡತೆಯಲ್ಲಿ ಪವಿತ್ರವಾಗಿರುವಂತೆ ಜಾಗರೂಕನಾಗಿರುತ್ತಿದ್ದ. ಶಾಹಮೀರ ಒಂದು ಅರ್ಜಿಯನ್ನು ಬರೆದು ಷಾ ತಹಮಾಸ್ಫರಿಗೆ ತಲಪಿಸಿದ. ಅವರು ಇವನ ಪತ್ರವನ್ನು ಸಂತೋಷ ಚಿತ್ತದೊಂದಿಗೆ ಸ್ವೀಕರಿಸಿದರು. ಆ ಪತ್ರಕ್ಕೆ ಉತ್ತರವನ್ನು ಗೌರವಾದರಗಳೊಂದಿಗೆ ಕಳುಹಿಸಿದ.

ಶಾಹಮೀರ್ ಈ ಉತ್ತರವನ್ನು ಉಪಯೋಗಿಸಿಕೊಂಡು ತಾನು ಇರಾನಿನ ಷಾ ತಹಮಾಸ್ಫನ ಹತ್ತಿರದ ಖಾಸಾ ಸಂಬಂಧಿಯಾಗಿದ್ದೇನೆಂದು ಹೇಳುತ್ತ ಸಾಗಿದ್ದ. ಇದರಿಂದಾಗಿ ಅವನು ಹೋದಲ್ಲೆಲ್ಲ ಜನ ವಿಶೇಷ ಗೌರವವನ್ನು ತೋರುತ್ತಿದ್ದರು ಮಾತ್ರವಲ್ಲ ಇದರಿಂದ ಅವನಿಗೆ ತುಂಬ ಲಾಭವೂ ದೊರೆಯುತ್ತಿತ್ತು!

**ಜಂಘರ್ ಖಾನನ ಬಳಿಗೆ ಶಾಹಮೀರ ಖುರ್ದುಸ್ತಾನಿ ಹೋದ ವಿವರಗಳು, ಅವನನ್ನು ವಶೀಕರಿಸಿಕೊಂಡ ವಿವರಗಳು:**

ಜಂಘರ್ ಖಾನ್ ಬರೂಚಿನಲ್ಲಿ ಸ್ವತಂತ್ರನಾಗಿ ಐಶ್ವರ್ಯ, ಆರಾಮದಿಂದ ಘರ್ಷಣೆ, ಯುದ್ಧಗಳಿಲ್ಲದೆ ಶಾಂತಿಯಿಂದ ಬದುಕುತ್ತಿದ್ದ. ಗುಜರಾತಿನ ಇತರ ಸರದಾರರು ಕೂಡ ಇವನೊಂದಿಗೆ ಸಂತೋಷದಿಂದಿದ್ದರು. ಅವನ ಹೆಸರು, ನಾಣ್ಯ ಬಹಳ ಪ್ರಖ್ಯಾತವಾಗಿತ್ತು.

ಈ ಶಾಹಮೀರ್ ಕುರ್ದಿಸ್ತಾನಿ ಕೂಡ ಜಂಘರ್ ಖಾನನ ಬಳಿಗೆ ಹೋದ. ಅವನೊಂದಿಗೆ ಬಹಳ ಅನ್ಯೋನ್ಯತೆಯನ್ನು ಬೆಳೆಸಿಕೊಂಡ. ಜಂಘರ್ ಖಾನ್ ಬರಬರುತ್ತಾ ಶಾಹಮೀರನ ಮೇಲೆ ಬಹಳ ಭರವಸೆಯನ್ನಿಟ್ಟುಕೊಂಡು ಅವನ ಮಾತುಗಳೆಲ್ಲವನ್ನೂ ಕೇಳುವವನಾದ. ತನ್ನ ಜನಾನದಲ್ಲಿ ರಾಣಿಯ ಕೋಣೆಗೆ ಪ್ರವೇಶಿಸಿದರೂ ಕೂಡ ಅಭ್ಯಂತರ ಮಾಡದಷ್ಟು ಅವನ ಮೇಲೆ ವಿಶ್ವಾಸ ಭರವಸೆಯಿತ್ತು. ತನ್ನ ಜನಾನದಿಂದ ದಿನವೂ ಬೆಳಿಗ್ಗೆ ಎದ್ದು ಹೊರಬಂದ ಜಂಘರ್ ಖಾನ್ ಅವನಿಗೆ ಸಲಾಮ್ ಮಾಡಿ ಅವನ ಮಿಲನದ ನಂತರವೇ ಇತರ ಕಾರ್ಯಕ್ರಮಗಳಲ್ಲಿ ತೊಡಗಿದ. ಇವನು ಯಾವಾಗಲೂ ಶಾಹಮೀರನ ಹತ್ತಿರವೇ ಇರ ಬಯಸುತ್ತಿದ್ದ. ಜಂಘರ್ ಖಾನ್ ಒಂದು ದೊಡ್ಡ ಬಾಲಾ ಖಾನಾ(ಮೇಲ್ಮನೆ)ವನ್ನು ಕಟ್ಟಿಸಿದ್ದ. ಅದರಲ್ಲಿ ಒಂದು ಸುಂದರ ವೇದಿಕೆ ಇತ್ತು. ಒಳಗೆ ಎರಡು ಕೋಣೆಗಳಿದ್ದವು. ಈ ಕೋಣೆಗಳು ತುಂಬ ಸುಂದರವಾಗಿ ಅಲಂಕೃತವಾಗಿ, ಆಕರ್ಷಕ ಕಲಾಕೃತಿ ಎನಿಸಲ್ಪಟ್ಟ ಚಿತ್ರಗಳನ್ನು ತೂಗಿ ಹಾಕಲಾಗಿತ್ತು. ಅದರ ಕೋಣೆಯಲ್ಲಿ ಒಂದು 'ತಾಗ್ಚಾ'(ಚಿಕ್ಕ ಕಿಂಡಿ) ಇತ್ತು ಅದಕ್ಕೆ ತಾಗಿ ಒಂದು ಹಾದಿಯೂ ಇತ್ತು. ಅದರೊಳಗೆ ಒಬ್ಬ ತೂರಿ ಹೋದರೆ ಯಾರಿಗೂ ತಿಳಿಯುತ್ತಿರಲಿಲ್ಲ ಮತ್ತು ಈ ರಸ್ತೆ ಅಲ್ಲಿನ ರಹಸ್ಯವಾಗಿತ್ತು.

ಶಾಹಮೀರ ಈ ಗುಪ್ತ ಹಾದಿಯನ್ನು ತಿಳಿದುಕೊಂಡಿದ್ದ. ಈ ಗುಪ್ತಹಾದಿಯನ್ನು ಬಳಸಿಕೊಂಡು ಯಾರಿಗೂ ತಿಳಿಯದಂತೆ ಒಳಗೆ ಹೊರಗೆ ಹೋಗಿ ಬರುತ್ತಿದ್ದ. ಜಂಘರ್ ಖಾನನಿಗೆ ಶಾಹ ಮೀರನನ್ನು ಭೇಟಿಯಾಗುವ ಇಚ್ಛೆಯಾಗಿ ಒಮ್ಮೊಮ್ಮೆ ಕಾಯುತ್ತ ಅಲ್ಲಿ ನಿಂತಿರುತ್ತಿದ್ದ. ಒಮ್ಮೊಮ್ಮೆ ತನ್ನ ನೌಕರನನ್ನು ಕರೆದು ಶಾಹಮೀರನನ್ನು ಕರೆದು ತರಲು ಹೇಳುತ್ತಿದ್ದ. ನೌಕರ ಅವನನ್ನು ಕರೆದು ತರಲು ಹೋದವನು ಅವನನ್ನು ಕಾಣದೆ ಹಿಂತಿರುಗಿ ಬಂದ. ನೌಕರ ಕೆಳಗೆ ಬಂದು ನೋಡಿದರೆ ಅವರಿಬ್ಬರೂ ಜೊತೆಗಿರುವುದನ್ನು ಕಂಡು ಆಶ್ಚರ್ಯಚಕಿತನಾದ. ಹೀಗೆ ಅವನು ಇಲ್ಲಿನ ರಹಸ್ಯ ಹಾದಿಯ ಮೂಲಕ ತೂರಿ ಹೋಗಿ ಬರುವುದು ಯಾರಿಗೂ ತಿಳಿಯುತ್ತಿರಲಿಲ್ಲ. ತುಂಬ ಹೊತ್ತಿನಿಂದ ತಾನು ನಿಮ್ಮನ್ನು ಕಾಯುತ್ತಿದ್ದೆ ನೀವು ಎಲ್ಲಿಗೆ ಹೋಗಿದ್ದಿರಿ ಎಂದು ಜಂಘರ್ ಖಾನ್ ವಿಚಾರಿಸಿದ.

ಅಂತಹ ಸಂದರ್ಭದಲ್ಲಿ ಶಾಹಮೀರ್ ತಾನೊಬ್ಬ ದೊಡ್ಡ ಆಧ್ಯಾತ್ಮ ಸಾಧಕನೆಂಬುದನ್ನು ಅವನಿಗೆ ತಿಳಿಸಿ ಮನದಟ್ಟು ಮಾಡಲು ಪ್ರಯತ್ನಪಡುತ್ತಾನೆ. ನಾನು ಇಂತಹ ಮರು ಭೂಮಿಯಲ್ಲಿದ್ದೆ. ಅಥವಾ ದೊಡ್ಡ ಕೊಳದ ಬದಿಯಲ್ಲಿದ್ದೆ, ಇಲ್ಲವೇ ಇಂತಹ ದೇಶದಲ್ಲಿ ನನ್ನ ಒಬ್ಬ ಶಿಷ್ಯನಿಗೆ ತೊಂದರೆಯಾಗಿ ಜೈಲಿನಲ್ಲಿದ್ದ. ಅವನನ್ನು ಬಿಡಿಸಿ ತರಲು ಹೋಗಿದ್ದೆ ಎಂದು ಢೋಂಗಿ ಬಾಬಾಗಳಂತೆ ಕಥೆಗಳನ್ನು ಹೆಣೆದು ಹೇಳುತ್ತಿದ್ದ. ಜಂಘರ್ ಖಾನ್ ಕೇಳಿದಾಗ ಕೂಡ 'ನನ್ನನ್ನು ದಯವಿಟ್ಟು ಕ್ಷಮಿಸಿ, ನಾನು ಇಂತಹ ನಗರದಲ್ಲಿ ದೊಡ್ಡ ಕೊಳವೊಂದರ ತೀರದಲ್ಲಿದ್ದೆ. ಅಲ್ಲಿ ನಗರದಲ್ಲಿ ನನ್ನ ಶಿಷ್ಯನೊಬ್ಬ ಸಂಕಷ್ಟದಲ್ಲಿ ಸಿಕ್ಕಿಬಿದ್ದಿದ್ದ, ಅವನನ್ನು ಪಾರುಮಾಡಲಿಕ್ಕಾಗಿ ಹೋಗಿದ್ದೆ' ಎಂದು ತನ್ನ ಕಟ್ಟು ಕತೆಯೊಂದನ್ನು ಹೇಳಿ ಮಂಕುಬೂದಿ ಎಸೆದು ಬುಟ್ಟಿಗೆ ಹಾಕಿಕೊಂಡಿದ್ದ. ಹೀಗೆಯೇ ದಿನಕ್ಕೊಂದು ರೀತಿಯಲ್ಲಿ ತನ್ನ ಕತೆಗಳನ್ನು ಹೆಣೆದು ಸಾರ್ವಜನಿಕರನ್ನು ಮಂತ್ರಮುಗ್ಧಗೊಳಿಸಿ ಆಕರ್ಷಿಸಿ ತಾನೊಬ್ಬ ದೊಡ್ಡ ಕರಾಮತಿ ಮಾಡುವ ಶಕ್ತಿಯನ್ನು ಪಡೆದ ಪವಾಡಪುರುಷನೆಂಬಂತೆ ಪ್ರಚಾರ ಮಾಡಿದ್ದ. ಇದರಿಂದಾಗಿ ಸಾಮಾನ್ಯ ಜನರ ದೊಡ್ಡ ಗುಂಪೊಂದು ಅವನು ಹೋದಲ್ಲೆಲ್ಲ ಸೇರುತ್ತಿತ್ತು. ಅವನನ್ನು ಭೇಟಿಯಾಗಲು ಜನಗಳು ಈ ಮನೆಗೆ ಅಧಿಕ ಸಂಖ್ಯೆಯಲ್ಲಿ ಬರ ತೊಡಗಿದರು. ಅವರೆಲ್ಲರಿಗೂ ಬಿಸಿ ಬಿಸಿಯಾದ ರೊಟ್ಟಿ ಪಲ್ಯಗಳನ್ನು ತಿನ್ನಿಸುತ್ತಿದ್ದ. ಈ ರೊಟ್ಟಿ ಎಲ್ಲಿಂದ ಬಂತೆಂದು ಆಶ್ಚರ್ಯ ಪಡುತ್ತಿದ್ದಂತೆ ಜನ ಅವನ ಕರಾಮತಿಗಳ ಬಗ್ಗೆ ಯೋಚಿಸುತ್ತಿದ್ದರು. ಸಾರ್ವಜನಿಕರ ಮತ್ತು ಸಾಮಾನ್ಯರ ಕಣ್ಣುಗಳಲ್ಲಿ ಈತನೊಬ್ಬ ಮಹಾತ್ಮನೆಂದು ಕಾಣಿಸಿದ. ಹೀಗಾಗಿ ಅವನಿಗೆ ಸಾರ್ವಜನಿಕರು ತಾವಾಗಿಯೇ ಬೆಲೆಬಾಳುವ ಒಡವೆಗಳು, ಚಿನ್ನ ಬೆಳ್ಳಿಯ ನಾಣ್ಯ, ವಸ್ತುಗಳು, ಧನ ಸಂಪತ್ತು ಕಾಣಿಕೆಯಾಗಿ ನೀಡತೊಡಗಿದರು. ಈತನ ಸಂಪತ್ತು ಎಷ್ಟೊಂದು ಮಾತ್ರದಲ್ಲಿ

ಬೆಳೆಯಿತೆಂದರೆ ಖಾರೂನನ (ಮೂಸಾ ನಬಿಯ(ಮೋಸೆಸ್) ಕಾಲದಲ್ಲಿ ಅವರ ವಿರೋಧಿಯಾದ ಈಜಿಪ್ಟಿನ ಅರಸ ಫಿರಾವೂನನ(ಫರೋಹ) ಕಾಲದ ಅಮಿತ ಸಂಪತ್ತಿನ ಖಜಾನೆಯ ಒಡೆಯ) ಖಜಾನೆಯೂ ಕೂಡ ನಾಚುವಂತಿತ್ತು. ಸಾರ್ವಜನಿಕರ ಗೌರವ, ಬೆಂಬಲ ಮತ್ತು ಅದರಿಂದ ಬಂದ ಸಂಪತ್ತು ಇವನಲ್ಲಿ ಹೆಚ್ಚುತ್ತಾ ಹೋಯಿತು. ಅವನು ಪ್ರತೀದಿನ ಫಕೀರರು, ಬಡವರಿಗೆ ಈ ಸಂಪತ್ತಿನಿಂದ ಒಂದು ಪಾಲು ದಾನವಾಗಿ ನೀಡುತ್ತಿದ್ದ. ಇದರಿಂದಾಗಿ ಅವನ ಜನಪ್ರಿಯತೆ ಇನ್ನಷ್ಟು ಹೆಚ್ಚುತ್ತಿತ್ತು. ಜಂಫರ್ ಖಾನನಿಗೆ ಅವನು ಹೀಗೂ ಹೇಳುತ್ತಿದ್ದ, 'ನಿನಗೇನಾದರೂ ಖಜಾನೆಯಲ್ಲಿ ಸಂಪತ್ತಿನ ಕೊರತೆಯಾಗಿದ್ದರೆ ಹೇಳು, ನಾನು ಜಿನ್ನ್‌ಗಳ ಬಾದಶಾಹರ(ಗಂಧರ್ವರಂತಹ ಭೂಮಿ ಮತ್ತು ಆಕಾಶದಲ್ಲಿ ಸಂಚರಿಸುವ ಅದೃಷ್ಯ ಕಾಯರಾದ ಆತ್ಮಗಳ ರಾಜರುಗಳು) ಖಜಾನೆಯಿಂದ ಎಷ್ಟು ಬೇಕಾದರೂ ಧನಕನಕ ಸಂಪತ್ತನ್ನು ತರಿಸಿ ನಿನಗೆ ನೀಡಬಲ್ಲೆ'. ತನ್ನ ಈ ಢೋಂಗಿ ಮತ್ತು ಕಪಟ ಕರಾಮತಿನ ಮೂಲಕ ಜನರನ್ನು ಸಂಪೂರ್ಣ ಮೋಡಿಗೊಳಗಾಗಿಸುವ ಮಾತುಗಳನ್ನು ಹೇಳುತ್ತ ಹತ್ತು ವರ್ಷಗಳ ಕಾಲ ಆ ಪ್ರದೇಶದಲ್ಲಿ ನೆಲೆನಿಂತು ಪ್ರಖ್ಯಾತನಾದ. ಜನರಿಗೆ ಇದರ ಮರ್ಮವೇನೆಂದು ತಿಳಿಯಲೇ ಇಲ್ಲ. ಆದರೆ ಇವನ ಬಳಿ ಒಬ್ಬ ಇವನ ಆಪ್ತ ವಲಯಕ್ಕೆ ಸೇರಿದ ನೌಕರನಿದ್ದ. ಇವನು ನೋಡುವಾಗ ಒಮ್ಮೆ ಶಾಹಮೀರನ ಬಳಿ ಗುಜರಾತಿನಿಂದ ತಂದ ಕೆಲವು ಪತ್ರ ಕಡತಗಳು ಕಣ್ಣಿಗೆಬಿದ್ದವು. ಅದರಲ್ಲಿ ಅವನ ರಹಸ್ಯಗಳು ಅಡಗಿದ್ದವೆಂದು ಅವನಿಗೆ ತಿಳಿಯಿತು. ಇದರ ಬಗ್ಗೆ ವಿಚಾರಿಸಲು ಮತ್ತು ಅನ್ವೇಷಿಸುವ ಸಲುವಾಗಿ ಈತ ಅವನನ್ನು ಒಲಿಸಿಕೊಂಡು ಒಬ್ಬ ಶಿಷ್ಯನಾಗಿ ಸೇರಿಕೊಂಡು ರಾತ್ರಿ ಕೂಡ ಅವನ ಸೇವೆ ಮಾಡುತ್ತ ವಿಶ್ವಾಸಗಳಿಸಿದ. ಶಾಹಮೀರನಿಗೆ ಒಂದಲ್ಲ ಒಂದು ದಿನ ತನ್ನ ರಹಸ್ಯ ಹೊರಬರುತ್ತದೆಂದು ಸಂಶಯ ಮೂಡಿದಾಗ ಈ ಶಿಷ್ಯನನ್ನು ಏಕಾಂತಕ್ಕೆ ಕರೆದು 'ದಕ್ಷಿಣದ ದೊಡ್ಡ ಪ್ರಖ್ಯಾತನಾಮರೊಂದಿಗೆ ನಿನ್ನ ಹಳೆಯ ಸ್ನೇಹ ಪರಿಚಯವಿದ್ದರೆ ಈ ನನ್ನ ಅತ್ಯಂತ ಪ್ರಮುಖವಾದ ದಾಖಲೆಗಳ ಪುಸ್ತಕವನ್ನು ಜತನದಿಂದ ಇಟ್ಟುಕೊಳ್ಳುವಂತೆ ವ್ಯವಸ್ಥೆ ಮಾಡು' ಎಂದು ಹೇಳಿದ. ಇವನ್ನು ತಲಪಿಸಿದಾಗ ಅವರೇನು ಹೇಳುತ್ತಾರೆ ಎಂಬ ಬಗ್ಗೆ ಕೇಳಿ ಅವರು ನೀಡಿದ ಉತ್ತರವನ್ನು ನನಗೆ ಒಪ್ಪಿಸು, ಯಾಕೆಂದರೆ ದಕ್ಷಿಣ ಭಾರತದಲ್ಲಿ ಪ್ರಯಾಣ ಮಾಡಬೇಕೆಂಬ ಆಸೆಯಾಗಿದೆ. ಬಹಳ ಸಮಯದಿಂದ ನನಗೆ ಒಂದೇ ಕಡೆಯಲ್ಲಿದ್ದು ಬೇಸತ್ತು ಹೋಗಿದೆ. ನನಗೆ ಸ್ವಲ್ಪ ಬದಲಾವಣೆಯಾಗಬೇಕೆಂದೂ ಹೇಳಿದ. ಹೀಗೆ ಹೇಳಿ ಶಿಷ್ಯನನ್ನು ದಾಖಲೆ ಪತ್ರಗಳ ಕಡತದೊಂದಿಗೆ ಕಳುಹಿಸಿಕೊಟ್ಟ. (ಈ ಶಿಷ್ಯ ತಾನು ಹೈದರಾಬಾದಿನ ನಿಜಾಂ ಶಾಹನನ್ನು ಬಲ್ಲೆನೆಂದೂ ಅವನ ಬಳಿ ಈ ಕಡತವನ್ನು ಒಪ್ಪಿಸುತ್ತೇನೆಂದೂ ಶಾಹಮೀರನನ್ನು ನಂಬಿಸಿದ್ದ).

ಈ ಕಾಲಘಟ್ಟದಲ್ಲಿ ಜಂಫರ್ ಖಾನ್ ಅಹ್ಮದಾಬಾದನ್ನು ವಶಪಡಿಸಿಕೊಳ್ಳುವ ಸಲುವಾಗಿ ಸೈನಿಕ ಕಾರ್ಯಾಚರಣೆಯಲ್ಲಿ ತನ್ನನ್ನು ತೊಡಗಿಸಿಕೊಂಡು ಅಲ್ಲಿಗೆ ತೆರಳಿದ್ದ.

ಅಹ್ಮದಾಬಾದನ್ನು ಮುತ್ತಿಗೆ ಹಾಕಲಾಯಿತು. ಈ ಮುತ್ತಿಗೆಯ ಅವಧಿ ಬಹಳ ಹೆಚ್ಚಾಗಿ ಜಂಫರ್ ಖಾನ ಕೊಂಡುಹೋಗಿದ್ದ ಅವಶ್ಯಕ ಸಾಮಾನುಗಳು, ಸಂಪತ್ತು, ಹಣದ ಕೊರತೆ ಇದಿರಾಯಿತು. ಸೈನಿಕರ ಖರ್ಚಿಗಾಗಿ ಪರದಾಡುವ ಸ್ಥಿತಿಯಾಯಿತು. ಖಜಾನೆಯ ಅಧಿಕಾರಿ ಜಂಫರ್ ಖಾನನಿಗೆ 'ನಿಮ್ಮ ಸ್ನೇಹಿತ ಶಾಹಮೀರ್ ದೊಡ್ಡ ದೊಡ್ಡ ಮಾತುಗಳನ್ನು ಹೇಳುತ್ತಿದ್ದ. ಜಿನ್ನ್‌ಗಳ ಬಾದಶಾಹನ ಖಜಾನೆಯಿಂದ ಸಂಪತ್ತನ್ನು ತರಿಸಿ ಕೊಡುತ್ತೇನೆ ನಿಮಗೆ ಅಗತ್ಯಬಿದ್ದಾಗ ಎಂದಿದ್ದನಲ್ಲವೇ? ನೀವೀಗ ಅವನ ಸಹಾಯದ ಅಗತ್ಯವಿದೆ. ಶಾಹಮೀರ್ ಇಂತಹ ಸಮಯದಲ್ಲಿ ಸಹಾಯ ಮಾಡದಿದ್ದರೆ ಮತ್ತೆ ಯಾವಾಗ ಮಾಡುವುದು?' ಎಂದು ಹೇಳಿದ. ಇದಕ್ಕೆ ಒಪ್ಪಿದ ಜಂಫರ್ ಖಾನ್ ತನ್ನ ಓರ್ವ ಬುದ್ಧಿವಂತ ಸೇವಕನನ್ನು ಕರೆದು ಪತ್ರಬರೆದು ಶಾಹಮೀರ್‌ಗೆ ತಲಪಿಸುವಂತೆ ಹೇಳಿಕಳುಹಿಸಿದ. ಆ ಪತ್ರದಲ್ಲಿ ತನಗೆ ಈಗ ಅಗತ್ಯವಿರುವ ಸಹಾಯವನ್ನು ಒದಗಿಸಬೇಕೆಂಬ ಬೇಡಿಕೆಯೂ ಸೇರಿತ್ತು. ಶಾಹಮೀರ್‌ನಿಗೆ ಈಗ ತನ್ನ ಬಂಡವಾಳವೆಲ್ಲ ಹೊರಬೀಳುವ ಪರಿಸ್ಥಿತಿ ಉಂಟಾಗಿದೆ ತನ್ನ ಬಳಿ ಸತ್ತನಂತರ ಗೋರಿಯೊಳಗೆ ವಿಚಾರಣೆ ನಡೆಸುವ ಮಲಕ್(ದೇವದೂತರು) ಮುಂಕರ್ ನಕೀರ್ ಬಂದಿದ್ದಾರೆ ತನಗಿನ್ನು ಉಳಿಗಾಲವಿಲ್ಲವೆಂಬುದನ್ನು ಅರಿತುಕೊಂಡ. ತನಗೆ ಸಾರ್ವಜನಿಕರ ಮಧ್ಯೆ ಮರ್ಯಾದೆ ಕಳೆದು ಕೊಳ್ಳಬೇಕಾದ ಸಂದರ್ಭ ಬಂದಿದೆ ಎಂದು ಕೊಂಡ. ತನಗೆ ಎದುರಾದ ಈ ಸಂದರ್ಭದ ಸಂಕಷ್ಟದಿಂದ ಪಾರಾಗಲು ತನ್ನ ಬಳಿಯಿದ್ದ ೫,೦೦೦ ಅಶ್ರಫಿ ಚಿನ್ನದ ನಾಣ್ಯಗಳನ್ನು (ಪ್ರತೀ ಅಶ್ರಫಿ ನಾಣ್ಯದ ತೂಕ ಮೂರು ದಿರ್ಹಮ್ ಆಗಿತ್ತು) ದೂತನ ಕೈಗೆ ನೀಡಿ 'ನಾನು ಅಲ್ಲಿಂದ ಸ್ವಲ್ಪ ಮಾತ್ರ ತರಿಸಿದ್ದೆ. ನಿಮಗೆ ಮತ್ತೆ ಬೇಕಾದರೆ ತಿಳಿಸಿ ಮತ್ತೆ ಸಾಕಷ್ಟು ತರಿಸಿ ನಿಮ್ಮ ಖಜಾನೆಯನ್ನು ತುಂಬಿಸುತ್ತೇನೆ' ಎಂದು ಉತ್ತರ ಬರೆದು ನೀಡಿದ. ಇವರು ಹೋದ ನಂತರ ಶಾಹಮೀರ್ ತನ್ನ ಸಾಮಾನು ಸರಂಜಾಮುಗಳನ್ನು ಕಟ್ಟಿಕೊಂಡು ಅಲ್ಲಿಂದ ಬೇರೆಡೆಗೆ ಬದಲಾಯಿಸುವ ಬಗ್ಗೆ ಯೋಚಿಸಿದ್ದ. ಆದರೆ ನಿಜಾಂ ಷಾಹನಿಗೆ ತನ್ನ ಶಿಷ್ಯನೊಂದಿಗೆ ಕಳುಹಿಸಿದ ದಾಖಲೆಗಳ ಪತ್ರ ತಲಪಿದ ಉತ್ತರಕ್ಕಾಗಿ ಅವನು ನಿರೀಕ್ಷಿಸುತ್ತ ನಿಲ್ಲಬೇಕಾಯಿತು. ಈ ಮಧ್ಯೆ ಜಂಫರ್ ಖಾನನಿಗೆ ಮತ್ತಷ್ಟು ಖರ್ಚಿಗಾಗಿ ಹಣಬೇಕಾಗಿತ್ತು. ಮತ್ತೆ ತನ್ನ ದೂತನನ್ನು ಶಾಹಮೀರನ ಬಳಿಗೆ ಕಳುಹಿಸಿದ. ಈ ಸಲ ೨೫೦೦೦ ಅಶ್ರಫಿಗಳನ್ನು ಕಳುಹಿಸಿದ ಶಾಹಮೀರ ವೇಷ ಬದಲಿಸಿ ಫಕೀರನ ವೇಷತೊಟ್ಟು ಎಲ್ಲೋ ಹೋಗಿಬಿಟ್ಟ.

(ಅಹ್ಮದಾಬಾದನ್ನು ವಶಪಡಿಸಿಕೊಂಡ ವಿವರಗಳು ಮತ್ತು ಜಂಘರ್ ಖಾನ್ ಹಾಗೂ ಶಾಹಮೀರರ ಅಂತಿಮ ವರ್ತಮಾನಗಳನ್ನು 'ಇನ್ಶಾ ಅಲ್ಲಾಹ್' ದೇವರ ದಯೆಯೊಂದಿಗೆ ಮುಂದೆ ನಾನು ಬರೆಯಲಿದ್ದೇನೆ).

**ಅಹ್ಮದಾಬಾದಿನ ವಿಜಯ ಮತ್ತು ಜಂಘರ್ ಖಾನನ ಅಂತಿಮ ದಿನಗಳ ವಿವರಗಳು:**

ಜಂಘರ್ ಖಾನ್ ೯ ತಿಂಗಳ ಕಾಲ ಅಹ್ಮದಾಬಾದಿನಲ್ಲಿದ್ದ. ಈ ಮಧ್ಯೆ ಯುದ್ಧ ನಡೆದು ಬಹಳ ಜನ ಅಸುನೀಗಿದರು. ಅಲ್ಲಿ ಏತಿಮಾದ್ ಖಾನ ತನ್ನ ಕೆಲವು ಸರದಾರರು ಮತ್ತು ಸೈನಿಕರನ್ನು ಅಹ್ಮದಾ ಬಾದ್ ನಗರದೊಳಗೆ ವಿರೋಧಿಗಳನ್ನು ಮಣಿಸಿ ತಮ್ಮ ಮುಷ್ಠಿಯೊಳಗೆ ತರುವ ಹಾಗೂ ಯುದ್ಧದ ಆಸಕ್ತಿಯನ್ನು ಅವರಲ್ಲಿ ಕುಂದಿಸುವ ಉದ್ದೇಶದೊಂದಿಗೆ ಕಳುಹಿಸಿದ. ಅಲ್ಲಿ ತಂಗಿ ಪಟನ್ ಕಡೆಯಿಂದ ಸೈನ್ಯ ಆಗಮಿಸುವುದನ್ನು ನಿರೀಕ್ಷಿಸತೊಡಗಿದ. ಸ್ವಲ್ಪದಿನಗಳ ನಂತರ ಪಟನ್ ಕಡೆಯಿಂದ ಹೆಚ್ಚುಕಮ್ಮಿ ೧೦,೦೦೦ ಕುದುರೆ ಸವಾರಿ ಸೈನ್ಯ ಆಗಮಿಸಿತು. ಈ ಮಧ್ಯೆ ೧೦,೦೦೦ ಕಾಲಾಳು ಸೈನ್ಯವೂ ಅವನ ಸಹಾಯಕ್ಕೆ ಬಂದು ತಲಪಿತು. ಎಲ್ಲರೂ ಸೇರಿ 'ಈದೆ ಮೂಮಿನಾನ್'(ಮಾನವನ ವಾರದ ಹಬ್ಬ/ಪವಿತ್ರ ದಿನ) ದಿನವೆಂದು ಪರಿಗಣಿಸಲ್ಪಟ್ಟ ಶುಕ್ರವಾರದಂದು ಒಮ್ಮೆಲೇ ನಗರದ ಹಿಂದಿನ ಬಾಗಿಲಿನಿಂದ ನುಗ್ಗಿ ಜಂಘರ್ ಖಾನನ ಸೈನ್ಯದ ನಡುವೆ ನುಗ್ಗಬೇಕೆಂದು ತೀರ್ಮಾನಿಸಲಾಯಿತು.

ಅದೇದಿನ ಅವನು ಮತ್ತು ಅವನ ಸಂಪೂರ್ಣ ಸೈನ್ಯ ನಾಲ್ಕೂ ಬಾಗಿಲಿನಿಂದ ಹೊರಬಂದು ಅಲ್ಲಿ ಜಮಾಯಿಸಿದ. ಜಂಘರ್ ಖಾನನಿಗೆ ಈ ವಿಷಯ ವಿವರವಾಗಿ ತಿಳಿದು ತನ್ನ ಸೈನ್ಯವನ್ನು ಎದುರಿಸುವುದಕ್ಕೆ ತಯಾರಾಗಿ ಹೊರಟ. ಹೀಗೆ ಎರಡೂ ಕಡೆಯಿಂದ ಹಾಯೆ... ಹೂ... ಗುಲ್ಲೆಬ್ಬಿಸಿ ಘೋಷಣೆಗಳನ್ನು ಕೂಗುತ್ತ ಸೈನ್ಯ ಹೊರಟಿತು. ರಣರಂಗದಲ್ಲಿ ಬಹದ್ದೂರ ಸೈನಿಕರ ಗಲಾಟೆ ಆಕಾಶ ಮುಟ್ಟುವಂತಿತ್ತು. ಈ ಶೂರವೀರರು ಪರಸ್ಪರ ಮೇಲೇರಿ ಯುದ್ಧರಂಗದಲ್ಲಿ ಒಬ್ಬರನ್ನೊಬ್ಬರು ಮೇಲೇರಿ ಬರುವಂತೆ ಆಕ್ರಮಣ ಶುರುವಾಯಿತು. ಒಬ್ಬರ ಮೇಲೊಬ್ಬರು ಬಿಲ್ಲು ಬಾಣಗಳ ಮಳೆಗೆರೆಯುವ ಮೂಲಕ ಸಂಪೂರ್ಣ ವಿರೋಧಿ ಸೇನೆಯ ಗರಿ ಪುಕ್ಕಗಳು ಉದುರಿದವು. ಈ ಆಕ್ರಮಣದಲ್ಲಿ ಜಂಘರ್ ಖಾನ ಅವಮಾನವನ್ನು ಎದುರಿಸಬೇಕಾಯಿತು. ಸ್ವಲ್ಪ ಸೇನೆ ಹಿಂದಿನಿಂದ ಜಂಘರ್ ಖಾನನ ಸೇನೆಯನ್ನು ಮುತ್ತಿಗೆ ಹಾಕಿತು. ಕೆಲವು ಸೈನಿಕರು ಅಹ್ಮದಾಬಾದ ನಗರದೊಳಗೆ ಬಾಣಗಳನ್ನು ಎಸೆಯುತ್ತ, ಖಡ್ಗಗಳಿಂದ ಆಕ್ರಮಣ ಮಾಡುತ್ತ ವೈರಿ ಸೈನ್ಯವನ್ನು ಚೆಲ್ಲಾಪಿಲ್ಲಿಯಾಗಿ ಓಡುವಂತೆ ಮಾಡಿದರು. ಹೀಗೆ ಅಹ್ಮದಾಬಾದಿನ ಸೈನಿಕರು ತಮ್ಮ ಧ್ವಜವನ್ನು ಊರಿ ಜಯಭೇರಿ ಬಾರಿಸಿದರು. ಜಂಘರ್ ಖಾನನ ಸೈನಿಕರ ಪರವಾದ ಇತರ ಸೈನಿಕರ ತಂಡವನ್ನು ಕೂಡ ಮಣಿಸಿ ಓಡಿಸಿದರು. ಈಗ ಶರ್ಫುದ್ದೀನ್ ಮಿರ್ಜಾ ತನ್ನನ್ನು ಯುದ್ಧರಂಗದಿಂದ ಪ್ರತ್ಯೇಕಿಸಿದ. ಕೆಲವು ದೂತರನ್ನು

ಕಳುಹಿಸಿ ಜಂಘರ್ ಖಾನನ ಸದ್ಯದ ಪರಿಸ್ಥಿತಿಯ ಬಗ್ಗೆ ವಿಚಾರಿಸಿದ. ಜಂಘರ್ ಖಾನ ತನ್ನ ಸ್ವಲ್ಪ ಸೈನಿಕರೊಂದಿಗೆ ನಗರದ ಹೊರಗೆ ಕೆಲವು ಚಿಕ್ಕಪುಟ್ಟ ಗುಡ್ಡಗಳ ಹಿಂದೆ ಅಡಗಿದ್ದು ಬಹಳ ತೊಂದರೆಗೆ ಸಿಲುಕಿದ್ದಾರೆಂಬಸುದ್ದಿ ಸಿಕ್ಕಿತು. ಶರ್ಫುದ್ದೀನ್ ಮಿರ್ಜಾ ಜಂಘರ್ ಖಾನನನ್ನು ಹುಡುಕುತ್ತ ಹೋದಾಗ ದೂರದಲ್ಲಿ ಅವನ ಧ್ವಜ ಕಂಡು ಬಂತು. ಧ್ವಜ ಇದ್ದ ಸ್ಥಳದ ಬಳಿ ಹೋದ. ಅಲ್ಲಿ ಅವನ ಜೊತೆ ಸಾವಿರಾರು ಜನ ಸೇರಿದ್ದರು. "ವೈರಿ ಸೈನ್ಯ ಈಗಲೂ ಲೂಟಿಯಲ್ಲಿ ತೊಡಗಿ ಅಲ್ಲಲ್ಲಿ ಚೆಲ್ಲಾಪಿಲ್ಲಿಯಾಗಿ ಹಂಚಿ ಹರಡಿಹೋಗಿದೆ. ನಾವು ಈಗ ಕೋಟೆಯ ಮುಖ್ಯ ದ್ವಾರದ ಬಾಗಿಲಿನ ಬಳಿ ಹೋಗಿ ನೋಡೋಣ ಏನಾಗುತ್ತದೆಂದು" ಎಂದು ಶರ್ಫುದ್ದೀನ್ ಮಿರ್ಜಾ ಅವನನ್ನು ಹುರಿದುಂಬಿಸಿ ಹೇಳಿದ.

ಜಂಘರ್ ಖಾನನಿಗೆ ಅವರ ಮಾತು ಕೇಳಿ ಉತ್ಸಾಹ ಮೂಡಿ ಕೆಚ್ಚೆದೆ ಕೆರಳಿ ಉಬ್ಬಿನಿಂತಂತಾಯಿತು. ಅವನಿಗೆ ಅಪಾರವಾದ ಶಕ್ತಿ ಪ್ರಾಪ್ತವಾದಂತಾಯಿತು. ಸಂಪೂರ್ಣ ಸೇನೆಯು ತನ್ನ ಎಂದಿನ ಘನತೆ ಮತ್ತು ಶೌರ್ಯದ ನಡೆಯೊಂದಿಗೆ ಮುಂದಡಿ ಇಟ್ಟಿತು. ಕೋಟೆಯ ಬಾಗಿಲ ಬಳಿ ಕಾವಲಿದ್ದ ಸೈನಿಕರು ಲೂಟಿಮಾಡುವುದರಲ್ಲಿ ಮಗ್ನರಾಗಿದ್ದರು. ಯಾರು ಬಂದರೂ ಹೋದರೂ ಅವರಿಗೆ ಪರಿವೆಯೇ ಇದ್ದಂತಿರಲಿಲ್ಲ. ಮಿರ್ಜಾ ಮತ್ತು ಜಂಘರ್ ಖಾನ್ ನೇರವಾಗಿ ತಮ್ಮ ಸೈನಿಕರೊಂದಿಗೆ ಅಹ್ಮದಾಬಾದ್ ನಗರದೊಳಗೆ ಪ್ರವೇಶಿಸಿದರು. ತಮ್ಮ ವಿಜಯಪತಾಕೆಯನ್ನು ನಗರದ ದ್ವಾರದಲ್ಲಿ ಹಾರಿಸಿದರು. ಸಂತಸದ ವಿಜಯವಾರ್ತೆಯನ್ನು ಸಾರುತ್ತ, ಘೋಷಣೆಗಳನ್ನು ಕೂಗುತ್ತ, ಡಂಗುರವನ್ನು ಜೋರಾಗಿ ಬಾರಿಸುತ್ತ ಗಲಾಟೆ ಮಾಡುತ್ತ ಮುನ್ನಡೆದರು. ಎಲ್ಲೆಲ್ಲಿ ಕೋಟೆಯ ಬಾಗಿಲುಗಳು ಮುಚ್ಚಿದ್ದವೋ ಅಲ್ಲೆಲ್ಲ ತಮ್ಮ ಧ್ವಜವನ್ನು ಹಾರಿಸಿದರು. ಹೀಗೆ ಮೂರುನಾಲ್ಕು ಮೂಲೆಗಳಲ್ಲಿ ಜಂಘರ್ ಖಾನನ ಸೈನಿಕರು ನುಗ್ಗಿ ಬಂದು ನಗರವನ್ನು ಕೈವಶಮಾಡಿಕೊಂಡರು. ಜಂಘರ್ ಖಾನ್ ಅಹ್ಮದಾಬಾದ್ ಸ್ವತಂತ್ರ ರಾಜ್ಯವೆಂದು ಘೋಷಿಸಿ ತನ್ನ ಧ್ವಜವನ್ನು ಹಾರಿಸಿದ. ಪಟ್ಟಣ್‌ನಿಂದ ಬಂದ ಸೈನಿಕರನ್ನು ಹಿಂತಿರುಗಿಸಿದ. ಏತಿಮಾದ್ ಖಾನ್ ಇಲ್ಲಿಂದ ಅಕ್ಬರ್ ಬಾದಶಾಹನ ಸೇವೆ ಮಾಡುವುದಕ್ಕಾಗಿ ಆಗ್ರಾಕ್ಕೆ ಪ್ರಯಾಣ ಬೆಳೆಸಿದ. ಅವರಿಗೆ ಗುಜರಾತ್ ರಾಜ್ಯವನ್ನು ಮುತ್ತಿಗೆ ಹಾಕಲು ಹುಮ್ಮಸ್ಸು ಮೂಡುವಂತೆ ಮಾಡತೊಡಗಿದ. ಏತಿಮಾದ್ ಖಾನ ತಯಾರಿಮಾಡಿದ ಸೈನಿಕರು ಹೆಚ್ಚಾಗಿ ಅಹ್ಮದಾಬಾದಿನಲ್ಲೇ ವಾಸಿಸುತ್ತಿದ್ದರು. ಮುಂದೆಂದಾದರೂ ಅಪಾಯ ಎದುರಾದ ಸಂದರ್ಭದಲ್ಲಿ ಅವನ ಕೈಂಕರ್ಯದಲ್ಲಿ ಪಾಲ್ಗೊಳ್ಳುವಂತೆ ಈ ಸೈನಿಕರಿಗೆ ನಿರ್ದೇಶಿಸಿದ್ದ. ಜಂಘರ್ ಖಾನನಿಗೆ ನೀಡಿದ ಮಾತನ್ನು ಪೂರೈಸಿದ್ದ. ಹೀಗೆ ಮಾಡಲು ಇತರರಿಗೆ ಸಾಧ್ಯವಾಗುತ್ತಿರಲಿಲ್ಲ. ಅವನು ಯಾವಾಗಲೂ ಸುಖಸಂತೋಷದಲ್ಲಿ ಶರಾಬಿನ

ನಶೆಯಲ್ಲಿ ತೇಲಾಡುತ್ತಿದ್ದ. ಅವನು ತನ್ನ ರಾಜ್ಯವನ್ನು ತನ್ನ ಹಿಡಿತದಲ್ಲಿಟ್ಟುಕೊಂಡಿದ್ದ. ಗುಜರಾತಿನ ಸೈನಿಕರು ಏತಿಮಾದ್ ಖಾನನೊಂದಿಗೆ ಇರುತ್ತಿದ್ದವರು ಈಗ ಜಾಗೀರು ಪಡೆಯುವ ಆಸೆಯಿಂದ ಜಂಘರ್ ಖಾನನ ದಂಡಿನಲ್ಲಿ ಸೇರಲು ತೊಡಗಿದರು. ತನ್ನ ಅಗಾಧ ಸಂಖ್ಯೆಯ ಸೈನ್ಯಕ್ಕೆ ತರಬೇತಿ ನೀಡಿ ಜಂಘರ್ ಖಾನ್ ಸಜ್ಜುಗೊಳಿಸಿದ. ದೊಡ್ಡ ಸರದಾರರಿಗೆ ಉನ್ನತ ದರ್ಜೆಯ ಅಧಿಕಾರ ನೀಡಿ ಸ್ವತಂತ್ರ ಜವಾಬ್ದಾರಿಯನ್ನು ವಹಿಸಿಕೊಟ್ಟ. ತನ್ನ ಜೊತೆಯಲ್ಲಿ ಭಾಗವಹಿಸಿದವರಿಗೆ ಭರಪೂರ ಉಡುಗೊರೆಗಳನ್ನು ನೀಡಿ ಅವರೊಂದಿಗೆ ಪ್ರೀತಿ, ಗೌರವಾದರಗಳನ್ನು ತೋರಿದ. ಜೋಜುರ್ ಖಾನ್ ಮತ್ತು ಉಲ್ಘೇ ಖಾನ್ ಎಂಬ ಇಬ್ಬರು ತಮ್ಮ ಖಾಸಗಿ ಸೈನ್ಯದ ಜೊತೆಗೆ ಯಾವಾಗಲೂ ಜಂಘರ್ ಖಾನನ ಬಳಿ ಬರುತ್ತಿದ್ದರು. ಅವನ ಜೊತೆ ಸೇರಿ ರಾಜ್ಯದ ಆಡಳಿತ ಸಂಬಂಧಿತ ಮತ್ತು ರಾಜ್ಯದ ಹಣಕಾಸಿನ ವಿಷಯದಲ್ಲಿ ಚರ್ಚೆನಡೆಸಿ ಸಲಹೆಗಳನ್ನು ನೀಡುತ್ತಿದ್ದರು. ಎದುರಿನಲ್ಲಿ ಸ್ವಾಮಿನಿಷ್ಠೆ ತೋರಿಸುತ್ತಿದ್ದರೂ ಅವರ ಆಂತರ್ಯದಲ್ಲಿ ಬಂಡಾಯದ ಬೆಂಕಿ ಉರಿಯುತ್ತಿತ್ತು. ಇದನ್ನು ಕಾರ್ಯರೂಪಕ್ಕೆ ತರಲು ಸರಿಯಾದ ಅವಕಾಶವನ್ನು ಕಾಯುತ್ತಿದ್ದರು. ಒಂದು ದಿನ ವಾತಾವರಣ ಅಪ್ಯಾಯಮಾನಕರವಾಗಿತ್ತು. ತಮ್ಮ ಸೈನ್ಯವನ್ನು ತಯಾರು ಮಾಡಿ ಬೇರೆ ಬೇರೆ ಸ್ಥಾನಗಳಲ್ಲಿ ನಿಲ್ಲಿಸಿದ್ದರು.

ನಂತರ ಜೋಜುರ್ ಖಾನ್ ಮತ್ತು ಉಲ್ಘೇಖಾನ್ ಜೊತೆಯಾಗಿ ಜಂಘರ್ ಖಾನನ ಮನೆಗೆ ಹೋದರು. ಹೊರಗೆ ವಾತಾವರಣ ತುಂಬ ಚೆನ್ನಾಗಿದೆ, ಕುದುರೆ ಸವಾರಿ ಮಾಡುವುದಕ್ಕೆ ಉತ್ತಮವಾಗಿದೆ ಎಂದರು. ಜಂಘರ್ ಖಾನ್ ಸಂತೋಷದಿಂದ ಮನೆಯಿಂದ ಹೊರಬಂದು ಕುದುರೆಯನ್ನೇರಿ ಸವಾರಿಗೆ ತಯಾರಾದ. ಮೈದಾನದಲ್ಲಿ ಮೂವರು ಜೊತೆಯಾಗಿ ಸವಾರಿ ಮಾಡ ತೊಡಗಿದರು. ಇಲ್ಲಿ ಹಳೆಯ ಕಾಲದಲ್ಲಿ ವೈಭವದ ದರ್ಬಾರು ನಡೆಯುತ್ತಿತ್ತೆಂದು ಹೇಳಲಾಗುತ್ತಿತ್ತು. ತರುಪಳ್ಯ ಎಂಬ ಹೆಸರಿನ ಈ ಪ್ರದೇಶದಲ್ಲಿ ಖಾನ್ ದ್ವಯರ ಸೈನ್ಯ ಪೊದೆಗಳ ಹಿಂದೆ ಅಡಗಿ ಕೂತಿತ್ತು. ತಕ್ಷಣ ಜೋಜುರ್ ಖಾನ್ ತನ್ನ ತಲ್ವಾರಿನಿಂದ ಜಂಘರ್ ಖಾನನ ಶಿರಚ್ಛೇದ ಮಾಡಿದ. ಒಂದು ಕೈಯನ್ನೂ ಕಡಿದು ಹಾಕಿದ. ಜಂಘರ್ ಖಾನ್ ನೆಲಕ್ಕೆ ಬಿದ್ದುಬಿಟ್ಟ. ಅವನ ಜೊತೆಗೆ ಬಂದಿದ್ದ ಅಂಗರಕ್ಷಕರು ಪಲಾಯನಗೈದರು. ತಮ್ಮ ಸೇನೆಯನ್ನು ಅಡಗಿದಲ್ಲಿಂದ ದೂರ ಕಳುಹಿಸಿ, ಈ ಕೊಲೆಯ ಆರೋಪವನ್ನು ಜಂಘರ್ ಖಾನನ ಅಂಗರಕ್ಷರ ಮೇಲೆ ಹೊರಿಸಿ ಅವರಲ್ಲಿ ಕೆಲವರನ್ನು ಬಂಧಿಸಿದರು. ಈ ಘಟನೆಯ ನಂತರ ಅಹ್ಮದಾಬಾದಿನಲ್ಲಿ ಎಲ್ಲೆಡೆಗಳಲ್ಲಿ ಕುತಂತ್ರ, ಪಿತೂರಿಗಳು ನಡೆಯ ತೊಡಗಿದವು. ಜಂಘರ್ ಖಾನ್ ಆಳುತ್ತಿದ್ದ ಈ ರಾಜ್ಯ ಹೋಳು ಹೋಳಾಗಿ ಹೋಯಿತು. ಸೈನ್ಯವೂ ಕೂಡ ಚೆಲ್ಲಾಪಿಲ್ಲಿಯಾದವು. ದೆಹಲಿಯ ಬಾದಶಾಹ ಅಕ್ಬರ ಇಲ್ಲಿಗೆ ಧಾಳಿಯಿಟ್ಟು ಈ ಪ್ರದೇಶವನ್ನು ವಶಪಡಿಸಿಕೊಂಡರೆ ಇಲ್ಲಿನ ರಾಜ್ಯದ ವ್ಯವಸ್ಥೆಯಲ್ಲಿ ಸುಧಾರಣೆಯಾದೀತೆಂದು ಇಲ್ಲಿನ ಪ್ರಜೆಗಳು ಆಶಿಸುತ್ತಿದ್ದರು.

**ಶಾಹಮೀರನ ಬದುಕಿನ ವಿವರಗಳು ಮತ್ತು ಆತನ ಆಗ್ರಾಕ್ಕೆ ಪಯಣ ಹಾಗೂ ಅಲ್ಲಿಂದ ಎತ್ತಂಗಡಿ ಮಾಡಲ್ಪಟ್ಟ ವಿವರಗಳು:**

ಶಾಹಮೀರನ ಬದುಕಿನಲ್ಲಿ ಹಿಂದಿನ ವೈಭವವಿರಲಿಲ್ಲ. ಅವನು ಜಂಘರ್ ಖಾನನ ಮನೆಯಿಂದ ಓಡಿಹೋಗಿ ನಿಜಾಂ ಷಾಹನ ಬಳಿ ಹೋಗಿ ಆಶ್ರಯ ಪಡೆದಿದ್ದ. ಅಲ್ಲಿಯೂ ಕೂಡ ಅವನ ಕೈಚಳಕ ನಡೆಯಲಿಲ್ಲ. ನಂತರ ಆಗ್ರಾಕ್ಕೆ ಪ್ರಯಾಣ ಬೆಳೆಸಿ ಅಕ್ಬರ್ ಬಾದಶಾಹನ ಸೇವೆ ಮಾಡುವ ಉದ್ದೇಶದೊಂದಿಗೆ ಆಗಮಿಸಿದ. ಅಕ್ಬರ್ ಬಾದಶಾಹ ಅವನಿಗೆ ಆಶ್ರಯವನ್ನು ನೀಡಿದ. ಅವನಿಗೆ ಲಾಹೋರ್‌ಗೆ ಹೋಗಿ ಜೀವನ ನಡೆಸಲು ಬೇಕಾದ ವ್ಯವಸ್ಥೆ ಮಾಡಿಕೊಟ್ಟ. ಬಾದಶಾಹನ ಅನುಮತಿಯಂತೆ ಶಾಹಮೀರ ಲಾಹೋರ್ ನಗರಕ್ಕೆ ಹೋಗಿ ಅಲ್ಲಿ ನೆಲೆನಿಂತ. ಅವನು ವಜ್ರಗಳ ವ್ಯಾಪಾರ ಮಾಡುವವನಂತೆ ನಟಿಸಿ ತನ್ನ ಚಾಲಾಕಿತನದ ಕೆಲಸಗಳನ್ನು ಶುರುಮಾಡಿದ. ಜನಸಾಮಾನ್ಯರನ್ನು ಅವನ ಢೋಂಗಿ ಕೆಲಸಗಳ ಮೂಲಕ ಆಕರ್ಷಿಸತೊಡಗಿದ್ದ. ಅವನ ಸುತ್ತಮುತ್ತ ಜನಸಾಮಾನ್ಯರ ಗುಂಪು ಯಾವಾಗಲೂ ಇರುತ್ತಿತ್ತು. ಇವನು ತನ್ನ ಜನಪ್ರಿಯತೆಯಿಂದ ಆಳ್ವಿಕೆಗೆ ತೊಂದರೆಯುಂಟು ಮಾಡಬಹುದು ಎಂದು ದರ್ಬಾರಿಗಳು ಯೋಚಿಸಿದರು. ಇಂತಹ ವ್ಯಕ್ತಿ ಈ ಪ್ರದೇಶದಲ್ಲಿದ್ದರೆ ಹಲವು ಪಿತೂರಿ, ಕುತಂತ್ರಗಳನ್ನು ಉಂಟು ಮಾಡಬಹುದು ಎಂದು ಬಾದಶಾಹನ ಮುಂದೆ ಇವನ ಚಟುವಟಿಕೆಗಳ ಬಗ್ಗೆ ವರದಿ ಮಾಡಿ ಎಚ್ಚರಿಕೆ ನೀಡಿದರು. ಈ ವಿಚಾರದಲ್ಲಿ ಅವರು ನೀಡಿದ ಎಚ್ಚರಿಕೆ ಸರಿಯಾದದ್ದೆಂದು ಬಾದಶಾಹನಿಗೆ ತಿಳುವಳಿಕೆ ಮೂಡಿದಾಗ ಅವನು ಇನ್ನು ಮುಂದೆ ಅಕ್ಬರ್ ಬಾದಶಾಹನ ರಾಜ್ಯದಲ್ಲಿ ಇರಕೂಡದು ಎಂದು ಹುಕುಂ ನೀಡಿದ. ಅವನು ಅಸಹಾಯಕನಾಗಿ ಲಾಹೋರಿನಿಂದ ಕಾಶ್ಮೀರದ ಕಡೆಗೆ ಪ್ರಯಾಣ ಬೆಳೆಸಿದ. ಕೆಲವು ದಿನಗಳು ಕಳೆದ ನಂತರ ಕಾಶ್ಮೀರಿನ ಬಾದಶಾಹ ಅವನ ಮೋಡಿಗೆ ಒಳಗಾಗಿ ಅವನ ಶಿಷ್ಯನಾದ. ಬಾದಶಾಹ ಎಷ್ಟೊಂದು ಮೋಡಿಗೊಳಗಾದನೆಂದರೆ ತನ್ನ ಮಗಳನ್ನು ಶಾಹಮೀರನಿಗೆ ನಿಕಾಹ ಮಾಡಿಕೊಟ್ಟ.

ಶಾಹಮೀರನಿಗೆ ಇಂತಹ ದೊಡ್ಡ ಆಶ್ರಯ ಅವಕಾಶ ದೊರೆತನಂತರ ಜನರ ಆಕರ್ಷಣೆಗೆ ಇನ್ನಷ್ಟು

ಕಾರಣವಾಗಿ ಒಂದು ದೊಡ್ಡ ತೂಫಾನು ಬಂದೆರಗಿದಂತೆ ಅಲ್ಲಿನ ರಾಜ್ಯಾಡಳಿತದಲ್ಲಿ ಅಲ್ಲೋಲಕಲ್ಲೋಲ ಉಂಟಾಯಿತು. ಅವನ ಜನಪ್ರಿಯತೆ ಮುಗಿಲು ಮುಟ್ಟಿದಾಗ ಸಿಂಹಾಸನದಲ್ಲಿ ಕೂತ ಬಾದಶಾಹನಿಗೆ ಅಪಾಯದ ಬಿಸಿ ಮುಟ್ಟಿತು. ಕಾಶ್ಮೀರದ ಬಾದಾಶಾಹ ಎಚ್ಚತ್ತುಕೊಂಡ. ಅವನು ಶಾಹಮೀರನನ್ನು ತನ್ನ ರಾಜ್ಯದಿಂದ ಹೊರಹಾಕಿದ.

ಶಾಹಮೀರ ತನ್ನೊಂದಿಗೆ ಒಂದು ಆಪ್ತರ ಗುಂಪನ್ನು ಸೇರಿಸಿಕೊಂಡು ತನ್ನ ಹುಟ್ಟೂರಾದ ಬುಸ್ತಾನೆ ಪಾರಿಶ್(ಇರಾನಿನ ಒಂದು ಪ್ರದೇಶ)ಗೆ ಪ್ರಯಾಣ ಬೆಳೆಸಿದ. ಅಲ್ಲಿ ತನ್ನನ್ನು ಶಾಹೆ ಖಲಂದರ್(ರಾಜಸನ್ಯಾಸಿ) ಎಂದು ಕರೆದುಕೊಂಡು ನೆಲೆನಿಂತ. ಶಾಹ ತಹಮಾಸ್ಫ್ ಬರೆದು ಕೊಟ್ಟ ಒಂದು ಹಳೆಯ ಫರ್ಮಾನು ಪತ್ರ ಅವನೊಂದಿಗೆ ಈಗಲೂ ಇತ್ತು. ಅದನ್ನು ಬಳಸಿಕೊಂಡು ಹಿಂದೆ ಹಲವು ಅವಾಂತರಗಳನ್ನು ಮಾಡಿದ್ದ. ಸಾಕಷ್ಟು ದೊಡ್ಡ ಮೊತ್ತದ ಸಂಪತ್ತನ್ನೂ ಗಳಿಸಿದ್ದ. ತನ್ನನ್ನು ತಾನು ದೊಡ್ಡ ವ್ಯಕ್ತಿಯೆಂದು ಪ್ರಚಾರ ಮಾಡುವುದಕ್ಕೆ ಈ ಪತ್ರವನ್ನು ಉಪಯೋಗಿಸಿದ. ಫಕೀರ ದರ್ವೇಶಿಯ ಬಟ್ಟೆ ಧರಿಸಿಕೊಂಡು ದೇವರ ಆರಾಧನೆಯನ್ನು ಮಾಡುತ್ತಿರುವ ನಾಟಕವನ್ನು ಶುರುಮಾಡಿದ. ಅವನ ಬಳಿ ಆಕರ್ಷಿತರಾಗಿ ಬಂದ ಜನರಿಗೆ ತಾನೇ ದೇವರೆಂದೂ, ತನ್ನನ್ನು ಪೂಜಿಸಿ ಎಂದು ಬೋಧಿಸತೊಡಗಿದ. ಎರಡೆರಡು ಮೂರು ಮೈಲಿ ದೂರದ ತನಕ ವಾಸವಾಗಿದ್ದ ಜನರಿಗೆ ನೀರಿನ ಕೊರತೆಯಿರುವ ಕೋಹಿಸ್ತಾನದ ಪರ್ವತ ಪ್ರದೇಶದ ಕುಗ್ರಾಮದಲ್ಲಿ ದೊಡ್ಡ ಕೊಳವನ್ನು ನಿರ್ಮಿಸಿದ. ಈ ಕೊಳದಲ್ಲಿ ನೀರು ತುಂಬಿರುವಂತೆ ವ್ಯವಸ್ಥೆಯನ್ನು ಮಾಡಿದ್ದ. ತನ್ನ ಆಪ್ತರೊಂದಿಗೆ ಪರ್ವತದ ಪ್ರದೇಶಕ್ಕೆ ಹೋಗಿ ಕೊಳ ನಿರ್ಮಿಸಿದ ಜಾಗಕ್ಕೆ ಹೋದಾಗ ಖಾಲಿ ಇತ್ತು. ಅಲ್ಲಿನ ಜನರನ್ನು ಸೇರಿಸಿ ನಮಾಜಿನ ಚಾಪೆ ಬಿಡಿಸಿ ಐದಾರು ಗಂಟೆಯ ತನಕ ನಮಾಜು ಮಾಡುತ್ತಿದ್ದ. ಇದೊಂದು ಭಯ ಭಕ್ತಿಯ ಆರಾಧನೆಯಂತೆ ಅಲ್ಲಿನ ಸಾಮಾನ್ಯ ಜನರಿಗೆ ಅನಿಸಿತ್ತು. ಐದಾರು ಗಂಟೆಗಳ ನಂತರ ಓರ್ವ ಅತ್ಯಂತ ಸಂಕಷ್ಟಗಳನ್ನು ಎದುರಿಸುತ್ತಿರರುವ ವ್ಯಕ್ತಿಯೊಬ್ಬ ಅತ್ಯಂತ ಕಡುಬಿಸಿಲಿನ ಬೇಗೆಯಲ್ಲಿ ಬೆಂದು ಬಾಯಾರಿ ಅಲ್ಲಿಗೆ ಬಂದ. 'ಈ ಪರ್ವತದ ಪ್ರದೇಶದಲ್ಲಿ ಕೆಲವು ಜನರು ದಿನ ನಿತ್ಯವೂ ಕುಡಿಯಲು ನೀರಿಲ್ಲದೆ ಬಾಯಾರಿ ಸಾಯುತ್ತಿದ್ದಾರೆ. ಇಲ್ಲಿರುವ ಶಾಹ ಖಲಂದರನಿಗೆ ಈ ಸಂಗತಿಯನ್ನು ತಿಳಿಸಿ. ಅವನು ಇದಕ್ಕೆ ಪರಿಹಾರ ಒದಗಿಸುತ್ತಾನೆ' ಎಂದು ಊರವರಿಗೆ ಹೇಳಿ ಶಾಹಮೀರ ಉರ್ಫ್ ಶಾಹ ಖಲಂದರನ ಬಳಿಗೆ ಕಳುಹಿಸುತ್ತಾನೆ. ಈ ವ್ಯಕ್ತಿಯ ಮಾತು ಕೇಳಿ ಪರ್ವತವಾಸಿ ಊರ ಜನಗಳು ಅವನ ಬಳಿ ಹೋದರು. 'ನೀವು ದೇವರ ಕರುಣೆಯನ್ನು ಪಡೆದವರು, ದೇವರ ಆಶೀರ್ವಾದವನ್ನು ಪಡೆದವರು ನೀವು ನಮಗೆ ನೀರನ್ನು ಕರುಣಿಸಬೇಕು' ಎಂದು ಭಯ ಭಕ್ತಿಯಿಂದ ಕೇಳಿಕೊಂಡರು. ಈ ಊರವರು ಬರುವಾಗ ಕೊಡ, ಮಡಿಕೆ, ಚರ್ಮದ ಚೀಲಗಳನ್ನು ತಂದಿದ್ದರು. ಊರವರ ಮಾತು ಕೇಳಿ ಅವನು ಖಾಲಿ ಮಣ್ಣಿನ ದೊಡ್ಡ ಹೊಂಡದಲ್ಲಿ ಇಳಿದು ನಮಾಜಿನ ಚಾಪೆಯನ್ನು ಬಿಡಿಸಿದ. ತನ್ನ ಕೈಯಲ್ಲಿದ್ದ ಒಂದು ಕೋಲನ್ನು ತೋರಿಸಿ ಇದೊಂದು ಪವಿತ್ರ ಕೋಲು, ಇದು ಬಹಳ ಕರಾಮತಿನ ಕೋಲು ಎನ್ನುತ್ತ ಒಂದೆಡೆ ನೆಲಕ್ಕೆ ಹೊಡೆಯುತ್ತಾನೆ, ಅಲ್ಲಿ ನೀರು ಚಿಮ್ಮಿ ಬಂತು. ಆ ನೀರು ಕೆಲವು ಕೊಡಗಳಲ್ಲಿ ಜನರಿಗೆ ತುಂಬಿಕೊಳ್ಳಲು ಹೇಳಿದ. ಜನರು ತಮ್ಮ ಕೊಡಗಳನ್ನು ತುಂಬಿಕೊಂಡರು.

ಈ ಪವಾಡದ ಬಗ್ಗೆ ಊರಲ್ಲಿ ಎಂತಹಾ ಪ್ರದರ್ಶನ, ಪ್ರಚಾರ ನಡೆಯಿತೆಂದರೆ ಸಹಸ್ರಾರು ಜನರು ಅವನ ಬಳಿಗೆ ಬಂದು ದುವಾ ಮಾಡಿ ಆರಾಧನೆ ಮಾಡತೊಡಗಿದರು.

ಬೋಸ್ತಾನ ನಗರದಲ್ಲಿ ಅವನ ಜನಪ್ರಿಯತೆ ತುತ್ತತುದಿಗೇರಿತು. ಅವನಿಗೆ ಕುದುರೆ, ಹಸುಗಳು, ಆಡು, ಒಂಟೆಗಳು, ನಗದು, ಚಿನ್ನ ಬೆಳ್ಳಿಯ ವಸ್ತುಗಳು ಬಟ್ಟೆಗಳು, ಜೇನು ತುಪ್ಪದ ಗಡಿಗೆಗಳು ಹರಕೆ ಕಾಣಿಕೆಗಳಾಗಿ ಬಂದು ರಾಶಿಬೀಳತೊಡಗಿದವು. ಇವನ್ನೆಲ್ಲ ಒಂದೆಡೆ ಒಟ್ಟು ಮಾಡಿ ಜತನದಿಂದ ಕಾಪಾಡುವುದು ದೊಡ್ಡ ಸಮಸ್ಯೆಯಾಗಿ ಬಿಟ್ಟಿತು. ತುರ್ಕ್, ಮಿಸ್ರ್, ಶಾಮ್, ಕುರ್ದ್, ಪರ್ಸಿಯಾ ಮುಂತಾದ ದೇಶಗಳಿಂದ ಗುಂಪು ಗುಂಪಾಗಿ ಜನರು ಬರತೊಡಗಿದರು.

ಎರಡನೆಯ ಸಲ ಘಟಿಸಿದ ಅವನಿಗೆ ಸಂಬಂಧಿತ ಘಟನೆಗಳು ಹೀಗಿವೆ: ಒಮ್ಮೆ ಶಿಕಾರಿ ಮಾಡುವುದಕ್ಕೆ ಅವನು ತನ್ನ ಜೊತೆಗಾರರೊಂದಿಗೆ ಪರ್ವತದ ಕಡೆ ಹೋಗಿದ್ದ. ಅಲ್ಲಿ ಒಂದೆಡೆ ಯಾರೂ ವಾಸಿಸದ ಒಂದು ಹಳೆಯ ದೊಡ್ಡ ಮನೆಯಿತ್ತು.

ಶಾ ಖಲಂದರ್ ಯಾನೆ ಶಾಹಮೀರ ಈ ಖಾಲಿ ಮನೆಯೊಳಗೆ ಹೋಗಿ ತನ್ನ ಹಿಂದೆ ಬಂದ ಹಿಂಬಾಲಕರನ್ನು ತಿರುಗಿನೋಡಿ ಹೇಳಿದ. 'ನಿಮಗೆ ಏನೆಲ್ಲ ಬೇಕು ಹೇಳಿ, ಅದೆಲ್ಲವನ್ನೂ ಅದೃಷ್ಯ ಲೋಕದಿಂದ ತರಿಸಿಕೊಡುತ್ತೇನೆ' ಎಂದ. ಜನರು ಈ ಮನೆಯ ಸುತ್ತ ಕೂತುಬಿಟ್ಟರು. ಆ ಮನೆಯ ಒಳಗಿನ ಗೋಡೆಯಲ್ಲಿ ತೆರೆದ ಕಿಟಿಕಿ(ಬೆಳಕು ಬರಲು ಮಾಡಿದ ಕಿಂಡಿ) ಇತ್ತು. ಅದರಿಂದ ಆದಿನ ಹತ್ತು ಸಾವಿರ ಆಶ್ರಫಿ ಚಿನ್ನದ ನಾಣ್ಯಗಳನ್ನು ಜನರಿಗೆ ಹಂಚಿದ. ಇದು ತನ್ನ ಸಂಪತ್ತಿನಿಂದ ರಹಸ್ಯ ರೀತಿಯಿಂದ ತಂದಿರುವುದಾದರೂ ಹೀಗೆ ಪ್ರಚಾರ ಮಾಡಿದ– 'ಇಂದು ನಾನು ಒಂದು ಲಕ್ಷ ಫಕೀರರು, ಬಡವರಿಗೆ ಇದೇ ರೀತಿಯಾಗಿ ಅದೃಷ್ಯ ರೂಪದಲ್ಲಿ ಹಂಚಿದ್ದೇನೆ' ಎಂದ. ಈ ರೀತಿಯ ಪ್ರಚಾರ ಬೆಳೆದು ಸುದ್ದಿ ರಾಜ್ಯದ ಆಡಳಿತ ನಡೆಸುವ ಮಂತ್ರಿ ಮಂಡಳದವರಿಗೆ, ಸರದಾರರು, ಅಧಿಕಾರಿಗಳ ಕಿವಿಗೆ ಬಿತ್ತು. ಅವರು ಕೂಡ ತಮ್ಮಲ್ಲಿ ಇದ್ದ ಸಂಪತ್ತನ್ನು ಅವನಿಗೆ ಭಯ ಭಕ್ತಿಯಿಂದ ಒಪ್ಪಿಸಿದರು. ೨೦,೦೦೦ ಕುದುರೆಗಳು ಮತ್ತು ಸವಾರರು, ೧೫೦೦೦ ಕಾಲಾಳುಗಳನ್ನು ಅವನ ಬಳಿ ತಂದೊಪ್ಪಿಸಿದರು. ರಾಜ್ಯವನ್ನು ಆಳುವಂತೆ ಆಹ್ವಾನಿಸಿ ಸಿಂಹಾಸನದಲ್ಲಿ ಕೂರಿಸಿದರು. ಈ ಕಾಲಘಟ್ಟದಲ್ಲಿ ಷಾ ತಹಮಾಸ್ಫ್ ತೀರಿಕೊಂಡಿದ್ದರು. ಅದು ಇರಾನ್ ದೇಶದ ರಾಜಕೀಯದಲ್ಲಿ ಅಲ್ಲೋಲಕಲ್ಲೋಲವಾದ ಕಾಲವಾಗಿತ್ತು. ಒಂದು ಕಡೆ ಅಜಬೇಕರು ಇನ್ನೊಂದೆಡೆ ರೋಮನರು ಷಾ ತಹಮಾಸ್ಫರ ರಾಜ್ಯದ ಮೇಲೆ ಕಣ್ಣಿಟ್ಟಿದ್ದರು. ಯಾವ ರಾಜಕುವರನನ್ನು ಸಿಂಹಾಸನದಲ್ಲಿ ಕುಳ್ಳಿರಿಸಬೇಕೆಂದು ಆಸ್ಥಾನದಲ್ಲಿನ ಅಧಿಕಾರಿಗಳು, ಮಂತ್ರಿಗಳು, ಸರದಾರರ ಮಧ್ಯೆ ಕಿತ್ತಾಟ ನಡೆಯುತ್ತಿತ್ತು. ಪ್ರತಿಯೊಬ್ಬನೂ ತಮ್ಮವರನ್ನು ರಾಜನನ್ನಾಗಿ ಮಾಡುವುದರಲ್ಲಿ ಆಸಕ್ತರಾಗಿದ್ದರು. ಯಾರಿಗೂ ಶಾ ಖಲಂದರನನ್ನು

ಓಡಿಸಲು ಧೈರ್ಯವಿರಲಿಲ್ಲ. ಯಾಕೆಂದರೆ ಪರ್ಸಿಯಾ ದೇಶದ ಹೆಚ್ಚಿನ ಭಾಗ ಅವನ ಹಿಡಿತದಲ್ಲಿತ್ತು. ಹೆಚ್ಚು ಕಮ್ಮಿ ೧೫೦೦೦ ಕಾಲಾಳು ಸೈನ್ಯ ಅವನ ಬಳಿಯಿತ್ತು. ಯಾರೂ ಅವನು ಎದುರು ಹಾಕಿಕೊಂಡು ಯುದ್ಧಮಾಡುವಷ್ಟು ಶಕ್ತಿಶಾಲಿಗಳಾಗಿರಲಿಲ್ಲ. ಅಫ್ಘಾದ್ ಪ್ರಾಂತ್ಯದ ಅಧಿಕಾರಿಗಳು ೨೦,೦೦೦ ಕಾಲಾಳುಗಳನ್ನು ಒಟ್ಟುಮಾಡಿ ಶಾ ಕಲಂದರನ ಮೇಲೆ ಯುದ್ಧಕ್ಕೆ ತಯಾರಾದರು. ಎರಡು ರಾಜ್ಯಗಳ ನಡುವೆ ಭೀಕರ ಯುದ್ಧ ನಡೆಯಿತು. ಅಘಾರ ಸಂಖ್ಯೆಯಲ್ಲಿ ಜನರು ಬಲಿಯಾದರು. ಶಾ ಕಲಂದರನ ಆಪ್ತರು ಕೂಡ ಅವನ ಸಹಾಯಕ್ಕೆ ಬಂದು ಸೇರಿದರು. ಆದರೆ ಆದಿನದ ಭೀಕರ ಯುದ್ಧದಲ್ಲಿ ಅಫ್ಘಾದದ ಸೈನಿಕರು ಸೋತುಹೋದರು. ಎರಡು ಮೂರು ಮುಖ್ಯ ಸರದಾರರು ಕೂಡ ಅಸುನೀಗಿದರು. ಬಾಕಿ ಉಳಿದ ಸೈನಿಕರು ಓಡಿದರು. ಅವರು ಬಿಟ್ಟು ಹೋದ ಬಹಳಷ್ಟು ಸಂಪತ್ತು ಶಾ ಕಲಂದರನ ವಶವಾಯಿತು. ಹೀಗೆ ಅವನ ಮತ್ತು ಅವನ ಸೈನ್ಯದ ಘನತೆ ಮತ್ತಷ್ಟು ಹೆಚ್ಚಿತು.

ಅಂತ್ಯದಲ್ಲಿ ಏನಾಗುತ್ತದೆಂದರೆ ಶಿರಾಜ್ ಪ್ರಾಂತ್ಯದ ಮಂಡಳಾಧಿಪತಿ(ಗವರ್ನರ್) ಷಾ ಅರಸ್‌ತಲುಹು ಕೆಲವು ಆಪ್ತರೊಂದಿಗೆ ಶಾ ಖಲಂದರನ ಬಳಿಗೆ ಮುರೀದ್ ಅಥವಾ ಶಿಷ್ಯತ್ವ ಪಡೆಯಲು ಆಗಮಿಸಿದರು. ಅವರನ್ನು ಶಾ ಖಲಂದರ್ ತುಂಬ ಆದರದಿಂದ ಬರಮಾಡಿಕೊಂಡ. ಅಲ್ಪಕಾಲದಲ್ಲಿ ಈ ತಂಡದವರು ಸಂಪೂರ್ಣ ಅವನ ವಿಶ್ವಾಸವನ್ನು ಗಳಿಸಿದರು. ಈ ಮಂಡಳಾಧಿಪತಿ ಉಪಾಯದಿಂದ ರಹಸ್ಯವಾಗಿ ತನ್ನ ಸೈನ್ಯವನ್ನು ಸ್ವಲ್ಪ ಸ್ವಲ್ಪವಾಗಿ ತಂಡಕಟ್ಟಿ ತರಿಸಿದ. ಕಾಲ ಕಳೆದಂತೆ ಸರಿಯಾದ ಅವಕಾಶಕ್ಕೆ ಕಾಯುತ್ತಿದ್ದ. ಒಂದು ದಿನ ಶಾ ಖಲಂದರ್ ಏಕಾಂತದಲ್ಲಿರುವ ಸಮಯದಲ್ಲಿ ಹಲ್ಲೆಮಾಡಿ ಅವನನ್ನು ಕೊಂದುಬಿಟ್ಟ. ಹೀಗೆ ಬಹಳ ಬುದ್ಧಿವಂತಿಕೆಯಿಂದ ಶಾ ಖಲಂದರನ ಕುತಂತ್ರದ ಕಾಂಡಕ್ಕೆ ಅಂತಿಮ ಗತಿ ನೀಡಿದಂತಾಯಿತು.

**ಜಂಘರ್ ಖಾನನ ಕೊಲೆಯ ಬಳಿಕ ಗುಜರಾತಿನ ಕ್ರಾಂತಿಯ ವಿವರಗಳು ಮತ್ತು ಅಕ್ಬರ್ ಬಾದಶಾಹನ ರಂಗಪ್ರವೇಶ**

ಜಂಘರ್ ಖಾನನ ಕೊಲೆಯ ಬಳಿಕ ಅವರ ಆಸ್ಥಾನದ ಅಧಿಕಾರಿವರ್ಗದಲ್ಲಿ ಸುಲ್ತಾನ್ ಹುಸೈನ್ ಮಿರ್ಜಾನ ಕುಟುಂಬದ ಸದಸ್ಯರು ಕೂಡ ಇದ್ದರು. ಇಬ್ರಾಹಿಂ ಹುಸೈನ್ ಮಿರ್ಜಾ, ಮುಜಫ್ಫರ್ ಹುಸೈನ್ ಮಿರ್ಜಾ ಮತ್ತು ಮುಹಮ್ಮದ್ ಹುಸೈನ್ ಮಿರ್ಜಾ ಮುಂತಾದವರಿದ್ದರು. ಇವರೆಲ್ಲರೂ ಆಸ್ಥಾನದಲ್ಲಿ ಸೇರಿದ್ದರು. ಜಂಘರ್ ಖಾನನ ರಾಜ್ಯ ಬಾದಶಾಹ ಅಕ್ಬರನ ಆಳ್ವಿಕೆಗೆ ಸೇರಿತು. ಜೊತೆಗೆ ಈ ಪ್ರಾಂತ್ಯದಲ್ಲಿ ಸ್ವತಂತ್ರ ತುಂಡರಸರು ಹುಟ್ಟಿಕೊಂಡು ಆಳ್ವಿಕೆ ಹೆಚ್ಚಾಯಿತು. ಗುಜರಾತಿನ ಒಂದು ಭಾಗ ಏತಿಮಾದ್ ಖಾನ್ ಗುಜರಾತಿ ಅಕ್ಬರ್ ಬಾದಶಾಹನ ಬಳಿ ತೆರಳಿ ನಿವೇದಿಸಿಕೊಂಡ, 'ಅಲ್ಲಿ ಪರಸ್ಪರ ಪಿತೂರಿ, ಕುತಂತ್ರಗಳಿಂದಾಗಿ ಅರಾಜಕತೆ ಉಂಟಾಗಿದೆ. ನೀವು ಈ

ರಾಜ್ಯಕ್ಕೆ ಯಾರನ್ನಾದರೂ ಕಳುಹಿಸಿ ನಿಮ್ಮ ವಶಪಡಿಸಿಕೊಂಡು ಸುಸೂತ್ರವಾದ ಆಡಳಿತವನ್ನು ನಡೆಸಬಹುದಾಗಿದೆ. ನೀವೇ ಮುಂದೆ ನಿಂತು ಈ ಕೆಲಸ ನಡೆಸಿದರೆ ಉತ್ತಮ' ಎಂದು ಸಲಹೆ ನೀಡಿದ. ಅಕ್ಬರ್ ಬಾದಶಾಹ ಕೂಡ ಇದೇ ಅವಕಾಶವನ್ನು ಕಾಯುತ್ತಿದ್ದ. ಅವನು ತನ್ನ ಸರದಾರರನ್ನು ಕರೆಸಿ ದೊಡ್ಡ ಸೈನ್ಯವನ್ನು ಒಂದುಗೂಡಿಸಿ ಅಲ್ಲಿಗೆ ಕಳುಹಿಸಿದ. ಸೈನ್ಯದ ಹಿಂದೆ ಸ್ವತಃ ಬಾದಶಾಹ ಕೂಡ ಗುಜರಾತಿಗೆ ಪ್ರಯಾಣ ಬೆಳೆಸಿದ. ಅಕ್ಬರನ ಅಸ್ಥಾನದ ಅಧಿಕಾರಿಗಳು ಸೈನಿಕರು ಗುಜರಾತಿಗೆ ತಲಪಿದಾಗ ಗುಜರಾತಿನ ಸೇನೆ ಒಟ್ಟಾಗಿ ಎರಡು ಮೂರು ಬಾರಿ ಯುದ್ಧಮಾಡಿದರು. ಎರಡೂ ಕಡೆಗಳಲ್ಲಿ ಸಾಕಷ್ಟು ಜನರು ಅಸುನೀಗಿದ್ದರು. ಒಮ್ಮೆಯಂತೂ ಗುಜರಾತಿನ ಸೈನ್ಯ ಮೊಘಲ್ ಬಾದಶಾಹನ ಸೈನ್ಯವನ್ನು ರಣರಂಗದಲ್ಲಿ ಹಿಂದಕ್ಕೆ ಅಟ್ಟಿತ್ತು. ನಂತರ ಅಕ್ಬರ್ ಬಾದಶಾಹ ಅಲ್ಲಿಗೆ ತಲಪಿದ ಸುದ್ದಿ ತಲಪಿ ಗುಜರಾತಿನ ಸೈನ್ಯ ನಡೆಯುತ್ತ ಸಾಗಿ 'ಪನ್ನಾನ್' ಎಂಬ ಸ್ಥಳವನ್ನು ತಲಪಿತು. ಗುಜರಾತಿ ಸೈನ್ಯದ ಮೇಲೆ ಮೊಘಲ್ ಬಾದಶಾಹನ ಸೈನ್ಯ ಈ ಸ್ಥಳದಲ್ಲಿ ಧುತ್ತನೆ ದಾಳಿ ನಡೆಸಿತು. ಕಕ್ಕಾಬಿಕ್ಕಿಯಾದ ಗುಜರಾತಿನ ಸೈನ್ಯ ಚೆಲ್ಲಾಪಿಲ್ಲಿಯಾಗಿ ಓಡಿತು. ಸೈನಿಕ ಸರದಾರ ಜೋಜು ಖಾನ್ ಈ ಯುದ್ಧದಲ್ಲಿ ಹತನಾದ. ಉಲ್ಫೇ ಖಾನ್‌ನನ್ನು ಸೆರೆಹಿಡಿಯಲಾಯಿತು. ಈತ ಜಂಘರ್ ಖಾನನನ್ನು ಮೋಸದಿಂದ ಕೊಲೆ ಮಾಡಿದವನಾದುದರಿಂದ ಹಗ್ಗದಿಂದ ಬಿಗಿದು ಕಟ್ಟಿ ಅಕ್ಬರ್ ಬಾದಶಾಹನ ಮುಂದೆ ಹಾಜರುಪಡಿಸಲಾಯಿತು.

ಆ ಸಮಯದಲ್ಲಿ ಜಂಘರ್ ಖಾನನ ತಾಯಿ ಮುಂದೆ ಬಂದು, 'ನನ್ನ ಮಗನ ಕೊಲೆಗಡುಕರಿಗೆ ಮಾಫಿ ನೀಡಬಹುದು ಯಾ ಶಿಕ್ಷೆ ನೀಡಬಹುದು ಇದು ಬಾದಶಾಹನ ತೀರ್ಮಾನಕ್ಕೆ ಸಂಬಂಧಿಸಿದ್ದು. ಬಾದಶಾಹ ಯಾವ ತೀರ್ಮಾನ ನೀಡುತ್ತಾನೋ ಅದಕ್ಕೆ ನಾನು ಬದ್ಧಳಾಗಿದ್ದೇನೆ' ಎಂದಳು. ಉಲ್ಫೇ ಖಾನನನ್ನು ದರ್ಬಾರಿನಲ್ಲಿ ಹಾಜರಿಪಡಿಸಲಾಯಿತು. ಬಾದಶಾಹನ ತೀರ್ಮಾನದಂತೆ ಉಲ್ಫೇಖಾನನನ್ನು ಆನೆಯ ತುಳಿತದ ಶಿಕ್ಷೆ ವಿಧಿಸಿ ಕೊಂದುಹಾಕಲಾಯಿತು. ಅಕ್ಬರ್ ಬಾದಶಾಹ ಸಮಸ್ತ ರಾಜ್ಯವನ್ನು ಜಗಳ, ಪಿತೂರಿ, ಗಲಭೆಗಳಿಲ್ಲದೆ ಶಾಂತರೀತಿಯಲ್ಲಿ ಆಳ್ವಿಕೆಯನ್ನು ನಡೆಸಿದ. ಹಿರಿಯ ಅಧಿಕಾರಿಗಳಿಗೆ ರಾಜ್ಯದ ಆಡಳಿತದ ಜವಾಬ್ದಾರಿ ಹೊರಿಸಿದರು. ಹಳೆಯ ತನ್ನ ವಿರೋಧಿಗಳನ್ನು ಸಮ್ಮುಖಕ್ಕೆ ಕರೆಸಿ ವಿಚಾರಿಸಿ ಕೊನೆಯಲ್ಲಿ ಗುಜರಾತಿನಲ್ಲಿ ಶಾಂತಿಯುತ ರೀತಿಯಲ್ಲಿ ಬದುಕುವ ವ್ಯವಸ್ಥೆ ಮಾಡಿಕೊಟ್ಟ. ಬಾದಶಾಹ ಅಕ್ಬರ್ ಅಲ್ಲಿಂದ ಹಿಂತಿರುಗಿ ಆಗ್ರಾಕ್ಕೆ ಪ್ರಯಾಣ ಬೆಳೆಸಿದ.

ಇದಾದ ಕೆಲವು ವರ್ಷಗಳ ಬಳಿಕ ಗುಜರಾತಿನ ಹಳೆಯ ಸುಲ್ತಾನರ ವಂಶಕ್ಕೆ ಸೇರಿದ್ದ ಸುಲ್ತಾನ್ ಮುಜಫ್ಫರ್ ಎಂಬ ಹೆಸರಿನವನು ಇಲ್ಲಿಗೆ ಆಗಮಿಸಿ ಬರೋಚನ್ನು ವಶಪಡಿಸಿಕೊಂಡ. ಖುತುಬುದ್ದೀನ್ ಮುಹಮ್ಮದ್ ಖಾನನನ್ನು ಸೆರೆಹಿಡಿದು ಕೊಲ್ಲಿಸಿದ.

ಇದರಿಂದಾಗಿ ಬಹಳಷ್ಟು ಸಂಪತ್ತು ಅವನ ವಶವಾಯಿತು. ಇವೆಲ್ಲ ಸಂಪತ್ತನ್ನು ತನ್ನ ಸೈನಿಕರ ಮಧ್ಯೆ ಹಂಚಿದ. ಈ ಸಂಸ್ಥಾನದ ಹೆಚ್ಚಿನ ಭಾಗವನ್ನು ತನ್ನ ವಶಮಾಡಿಕೊಂಡ. ಈ ಸಂಗತಿ ನಡೆದ ಬಳಿಕ ಅಕ್ಬರ್ ಬಾದಶಾಹ ಮತ್ತೊಮ್ಮೆ ಗುಜರಾತಿಗೆ ಬರಬೇಕಾಯಿತು. ಈ ಪಿತೂರಿಯನ್ನು ಶಮನಗೊಳಿಸಿ ಮುಂದೆ ಹೆಚ್ಚುಕಮ್ಮಿ ೪೦ ವರ್ಷಗಳ ಕಾಲ ಗುಜರಾತು ಅಕ್ಬರ್ ಬಾದಶಾಹ ಮತ್ತು ಅವನ ಮಗ ಸಲೀಂ ಷಾನ ಆಡಳಿತಕ್ಕೊಳಗಾಗಿತ್ತು.

■

*

## ಅಧ್ಯಾಯ–೮

# ಅಹ್ಮದ್‌ನಗರದ ಬಾದಶಾಹರ ಆಳ್ವಿಕೆಯ ಚರಿತ್ರೆ ಮತ್ತು ದಂತಕತೆಗಳು

ಅಹ್ಮದ್ ನಗರದ ಬಾದಶಾಹರಲ್ಲಿ ಪ್ರಥಮ ಸ್ಥಾನದಲ್ಲಿ ಕಂಡು ಬರುವುದು ಅಹ್ಮದ್ ನಿಜಾಮುಲ್ ಮುಲ್ಕನ ಹೆಸರು. ಅಹ್ಮದ್ ನಗರದ ಕೋಟೆಯನ್ನು ಈತನೇ ಕಟ್ಟಿಸಿದ್ದ. ಸುಲ್ತಾನ್ ಮಹಮೂದನ ಕಾಲದಲ್ಲಿ ದೌಲತಾಬಾದ್ ಮತ್ತು ಇತರ ಹತ್ತಿರದ ಇಲಾಖೆಯನ್ನು ತನ್ನ ನೌಕರ ಚಾಕರರಿಗೆ ದಾನ ನೀಡಿದ್ದ. ಈ ಜನರು ದೈನಂದಿನ ಶ್ರಮ ಕಾರ್ಯಕಲಾಪಗಳ ಮೂಲಕ ಈ ಪ್ರದೇಶವನ್ನು ಅಭಿವೃದ್ಧಿ ಪಡಿಸಿ ಒಂದು ಸಾಮ್ರಾಜ್ಯವನ್ನಾಗಿ ಕಟ್ಟಿದರು.

ಅಹ್ಮದ್ ನಿಜಾಮುಲ್ ಮುಲ್ಕನ ಇಚ್ಛೆಯಂತೆ ಮರಣಾನಂತರ ಅವನ ಮಗನಿಗೆ ಸಂಪೂರ್ಣ ರಾಜ್ಯಭಾರದ ಅಧಿಕಾರವನ್ನು ಹಸ್ತಾಂತರಗೊಳಿಸಲಾಯಿತು.

**ಬುರ್ಹಾನ್ ನಿಜಾಮುಲ್ ಮುಲ್ಕನ ಆಳ್ವಿಕೆಯ ಸಂಕ್ಷಿಪ್ತ ಚರಿತ್ರೆ ಮತ್ತು ವೈಶಿಷ್ಟ್ಯಗಳ ವಿವರಗಳು**

ಬುರ್ಹಾನ್ ನಿಜಾಮುಲ್ ಮುಲ್ಕ್ ಓರ್ವ ಅತ್ಯಂತ ಶಕ್ತಿಶಾಲಿ ಮತ್ತು ಬುದ್ದಿವಂತ ಬಾದಶಾಹನಾಗಿದ್ದ. ಅವನು ಜ್ಞಾನಿಗಳು, ಮತ್ಸದ್ಧಿಗಳು, ಬುದ್ಧಿಶಾಲಿಗಳ ಸಂಗದಲ್ಲಿ ಕಾಲಕಳೆಯುತ್ತಿದ್ದ. ಅವನ ಕಾಲದಲ್ಲಿ ಖೊರಸಾನ್, ಇರಾಕ್, ಅರಬಸ್ಥಾನದಿಂದ ಉಲೇಮಾಗಳು, ಸಾಹಿತಿಗಳು, ಅನುಭಾವಿಗಳು, ಸೂಫಿ ಮಶಾಯಿಕರು ಇಲ್ಲಿಗೆ ಆಗಮಿಸಿದರು. ಅವನ ದರ್ಬಾರಿನ ಸಭೆಗಳಲ್ಲಿ ಭಾಗವಹಿಸುವವರಲ್ಲಿ ಹೆಚ್ಚಿನ ಜನರು ಇವರೇ ತುಂಬಿಕೊಂಡಿದ್ದರು. ಇದೇ ಪರಂಪರೆ ಅಹ್ಮದ್ ನಗರದಲ್ಲೂ ಕಂಡುಬರುತ್ತಿತ್ತು. ಸುಲ್ತಾನ್ ಹುಸೈನ್ ಮಿರ್ಜಾನ ಆಳ್ವಿಕೆಯ ಕಾಲದಲ್ಲಿ ಹೇರಾತಿನ

ಆಗಿನ ಪ್ರಮುಖ ಕುಟುಂಬಕ್ಕೆ ಸೇರಿದ ಮೀರ್ ಅಲಿ ಷೇರ್‌ರನ್ನು ತನ್ನ ರಾಜ್ಯಕ್ಕೆ ಆಹ್ವಾನಿಸಿದ. ಬರ್ಹಾನ್ ನಿಜಾಮುಲ್ ಮುಲ್ಕ್ ಮತ್ತು ಇರಾನಿನ ಬಾದಶಾಹ ಷಾ ತಹಮಾಸ್ಪ್ ಮಧ್ಯೆ ಸ್ನೇಹ ಸಂಬಂಧ ಬೆಳೆಸಲು ಇವರು ಕಾರಣರಾದರು. ಇವರಿಬ್ಬರ ಮಧ್ಯೆ ಅಗಾಗ ಪತ್ರವ್ಯವಹಾರ ಕೂಡ ನಡೆಯುತ್ತಿತ್ತು. ಬರ್ಹಾನ್ ನಿಜಾಮುಲ್ ಮುಲ್ಕ್ ನೀತಿವಂತನೂ, ಬುದ್ಧಿವಂತನೂ, ದಯಾಪರನೂ ಆಗಿದ್ದ. ತನ್ನ ಆಳ್ವಿಕೆಯಲ್ಲಿ ಅತ್ಯಂತ ಪ್ರಸಿದ್ಧಿಯನ್ನು ಪಡೆದಿದ್ದ. ಅವನ ಮರಣಾ ನಂತರ ಅವನ ಮಗ ಸಿಂಹಾಸನವನ್ನು ಏರಿದ.

**ಮೀರಾನ್ ಷಾ ಹುಸೇನ್ ನಿಜಾಮ್ ಷಾ ಸಿಂಹಾಸನದಲ್ಲಿ ಕೂರುವುದು ಮತ್ತು ಅವನ ಆಳ್ವಿಕೆಯ ವಿವರಗಳು**

ಬುರ್ಹಾನ್ ನಿಜಾಮುಲ್ ಮುಲ್ಕ್ ತನ್ನ ಬದುಕಿರುವಾಗಲೇ ತನ್ನ ಹಿರಿಯ ಮಗ ಮೀರಾನ್ ಅಬ್ದುಲ್ ಖಾದರನನ್ನು ತನ್ನ ವಾರೀಸುದಾರನೆಂದು ಘೋಷಿಸಿದ್ದ. ರಾಜ್ಯಾಡಳಿತದ ಹೆಚ್ಚಿನ ಜವಾಬ್ದಾರಿಯನ್ನು ಅವನ ವಶಕ್ಕೆ ಒಪ್ಪಿಸಿದ್ದ. ಒಮ್ಮೆ ಮೀರಾನ್ ಅಬ್ದುಲ್ ಖಾದರನ ಆಸ್ಥಾನದಲ್ಲಿ ಕೆಲವು ವಿಶೇಷ ಅತಿಥಿಗಳು ಆಗಮಿಸಿದರು. ಅವರು ಹೇಳಿದರು, 'ಈ ವಿದೇಶೀಯರ ಜೊತೆಗೆ ನಿಮ್ಮ ಗೆಳೆತನವಿದೆ. ದಖ್ಖಣಿಯ ಜನಗಳನ್ನು ಅವರ ಸೆರಗು ಮತ್ತು ಚಪ್ಪಲಿಗಳನ್ನು ಹಿಡಿಯುವ ಗುಲಾಮರನ್ನಾಗಿ ಮಾಡಿದ್ದೀರಿ'. ಈ ಕಾಲಘಟ್ಟದಲ್ಲಿ ದರ್ಬಾರಿನ ಎಲ್ಲ ಅಧಿಕಾರಿಗಳು, ಕಾರಕೂನರು, ಮಂತ್ರಿಗಳು ವಿದೇಶೀಯರೇ ಆಗಿ, ಆಸ್ಥಾನದಲ್ಲಿ ವಿದೇಶೀಯರೇ ತುಂಬಿದ್ದರು. ಆಳ್ವಿಕೆಯ ಎಲ್ಲ ಪ್ರಮುಖ ವ್ಯವಹಾರಗಳಲ್ಲಿ ಇವರದೇ ಮೇಲುಗೈಯಾಗಿತ್ತು.

ಖಾಸಿಂ ಬೇಗ್ ಬಾದಶಾಹರ ಭರವಸೆಯ ಪೇಶ್ವೆಯಾಗಿದ್ದ. ಫರ್ಹಾದ್ ಖಾನ್ ಫೌಜಿ ಗುಲಾಮ್ ಕೂಡ ಈ ಪೈಕಿ ವಿದೇಶೀಯರಲ್ಲೊಬ್ಬನಾಗಿದ್ದ. ಬುರ್ಹಾನ್ ನಿಜಾಮುಲ್ಕ್‌ನಿಗೆ ಬಹಳಷ್ಟು ಗಂಡು ಮಕ್ಕಳಿದ್ದರು. ಇವರಲ್ಲೊಬ್ಬ ಮೀರಾನ್ ಷಾ ಹುಸೈನ್ ತುಂಬ ಬುದ್ಧಿವಂತನೂ, ಜ್ಞಾನಿಯೂ ಆಗಿದ್ದ. ಅವನ ಸಹೋದರರ ಮಧ್ಯೆ ಯಾವ ಬೇಧಭಾವವನ್ನೂ ಮಾಡುತ್ತಿರಲಿಲ್ಲ. ಖಾಸಿಂ ಬೇಗ್ ಒಮ್ಮೆ ಮೀರಾನ್ ಷಾ ಹುಸೈನನ ಸಭೆಯೊಂದರಲ್ಲಿ ಪ್ರಶ್ನೆ ಮಾಡಿದ್ದ, ತಂದೆಯ ಮರಣದ ನಂತರ ನಿನ್ನನ್ನು ಬಾದಶಾಹ ಮಾಡಿದರೆ ಏನು ಮಾಡುತ್ತಿ? ಅವನು 'ದಕ್ಷಿಣದ (ಸ್ಥಳೀಯರು) ಜನರು ನಾಯಕರಾಗಲು ಮತ್ತು ಅಧಿಕಾರಿಗಳಾಗಲು ಅನರ್ಹರಾಗಿದ್ದಾರೆ. ಆಡಳಿತ ಕಾರ್ಯದಲ್ಲಿ ಸಲಹೆ ಕೊಡುವಷ್ಟು ಸಮರ್ಥರಲ್ಲ. ನನ್ನ ತಂದೆ ನನಗೆ ಏನು ಹೇಳುತ್ತಾರೋ ಅದನ್ನು ಪಾಲಿಸುತ್ತೇನೆ. ಅವರ ವಂಶದ ಘನತೆಯನ್ನು ಎತ್ತರಕ್ಕೇರಿಸಲು ಪ್ರಯತ್ನಿಸುತ್ತೇನೆ' ಎಂದು ಹೇಳಿದ್ದ. ಖಾಸಿಂ ಬೇಗ್ ಈ ವಿಚಾರವನ್ನು ಬಾದಶಾಹ

ಬುರ್ಹಾನುಲ್ ಮುಲ್ಕ್ ತೀರಿಕೊಳ್ಳುವ ತನಕ ತನ್ನಲ್ಲೇ ಇಟ್ಟುಕೊಂಡಿದ್ದ. ಒಂದು ರಾತ್ರಿ ಖಾಸಿಂ ಬೇಗ್ ಒಂಟಿಯಾಗಿದ್ದ. ಮೀರಾನ್ ಅಬ್ದುಲ್ ಖಾದರ್ ಯಾವಾಗಲೂ ಕೋಟೆಯಲ್ಲೇ ಇರುತ್ತಿದ್ದ. ಖಾಸಿಂ ಬೇಗ್ ಅವನ ಬಳಿಹೋಗಿ 'ದರ್ಬಾರಿಗಳ ಒಂದು ಗುಂಪು ಮೀರಾನ ಷಾ ಹುಸ್ಸೈನ್‌ನಿಗೆ ಸಿಂಹಾಸನ ಒಪ್ಪಿಸಬೇಕೆಂದಿದ್ದಾರೆ. ಇದಕ್ಕಾಗಿ ಸುಬಹ್ ನಮಾಜಿನ ನಂತರ ಎಲ್ಲರೂ ನಿಮ್ಮ ಬಳಿ ಕೋಟೆಗೆ ಬರಲಿದ್ದಾರೆ. ನಿಮ್ಮ ಸಹೋದರರ ಮಧ್ಯೆಯೇ ನಿಮ್ಮ ಎದುರಲ್ಲೇ ಅವನನ್ನು ಸಿಂಹಾಸನದ ಮೇಲೆ ಕೂರಿಸಲಾಗುವುದು. ಸ್ವಲ್ಪ ಹುಷಾರಾಗಿರಬೇಕು, ಇದು ಜಗಳಕ್ಕೆ ನಾಂದಿಯಾಗ ಕೂಡದು. ನಿಮ್ಮ ನನ್ನ ಆಲೋಚನೆಗೆ ವಿರುದ್ಧವಾಗಿ ಪರಿಸ್ಥಿತಿ ಬದಲಾಗ ಕೂಡದು. ನಮ್ಮ ಕೈಯಿಂದ ರಾಜ್ಯದ ಚುಕ್ಕಾಣಿ ಜಾರಿಹೋಗದಂತೆ ಜಾಗರೂಕರಾಗಬೇಕು' ಎಂದು ಕುತಂತ್ರ ಹೂಡಿದ. ಅಬ್ದುಲ್ ಖಾದರ್ ಈ ಕತೆಯನ್ನು ಕೇಳಿ ಇದು ಸತ್ಯವೆಂದು ತಿಳಿದುಕೊಂಡ. ಖಾಸಿಂ ಬೇಗನೊಂದಿಗೆ 'ನೀವು ನಮಗೆ ತಂದೆಯ ಸ್ಥಾನದಲ್ಲಿರುವವರು. ನೀವು ಹೇಗೆ ಹೇಳುತ್ತೀರೋ ಹಾಗಾಗುವುದು. ನೀವು ರಾಜ್ಯದ ಆಡಳಿತ ವ್ಯವಸ್ಥೆ ಉತ್ತಮ ಗೊಳಿಸಲು ಬಹಳಷ್ಟು ಶ್ರಮಿಸಿದವರು. ಆದರೆ ನನಗೆ ಅನಿಸುತ್ತದೆ ಇದು ನಿಮ್ಮ ಯೋಚನೆಯಂತೆ ಅಗಲೂಬಹುದು, ಆಗದಿರಲೂ ಬಹುದು' ಎಂದು ಹೇಳಿದ. 'ಈಗ ಯೋಚಿಸುವುದಕ್ಕೆ ಸಮಯಾವಕಾಶ ಇಲ್ಲ. ನೀವು ಬೆಳಿಗ್ಗೆ ಕೋಟೆಯಿಂದ ಹೊರಬಂದು ನೇರವಾಗಿ ಕಪ್ಪು ವೇದಿಕೆಯಲ್ಲಿ ಎಲ್ಲ ತಯಾರಿಯೊಂದಿಗೆ ಕೂತು ಬಿಡಿ. ಆ ಕಡೆಯಿಂದ ಹಾದು ಹೋಗುವವರು ತಮ್ಮ ಮುಂದೆ ಶಿರಬಾಗಿಸಿ ಮುನ್ನಡೆಯುವರು. ಎಲ್ಲರ ಸಲಾಮ್ ಮುಗಿದ ನಂತರ ನೀವು ಕೋಟೆಯೊಳಗೆ ಹೋಗಿರಿ' ಎಂದು ಖಾಸಿಂ ಹೇಳಿದ.

ಎಲ್ಲರೂ ಹೋಗುವ ತನಕ ಕೋಟೆಯಲ್ಲೇ ಇದ್ದು ಬಿಡುವಂತೆ ಖಾಸಿಂ ಸಲಹೆ ನೀಡಿದ್ದ. ಇವೆಲ್ಲಾ ಮೊದಲೇ ತೀರ್ಮಾನಿಸಿದ ಕುತಂತ್ರದ ಮಾತುಗಳನ್ನು ಅವನ ಸಹೋದರ ಮೀರಾನ್ ಷಾ ಹುಸ್ಸೈನನ ಮನೆಗೆ ಹೋಗಿ ಖಾಸಿಂ ಬೇಗ್ ತಿಳಿಸಿದ. ಬೆಳಿಗ್ಗೆ ಕೋಟೆಯಲ್ಲಿದ್ದ ಮೀರಾನ್ ಅಬ್ದುಲ್ ಖಾದರ್ ಕಪ್ಪು ವೇದಿಕೆಯ ಕಡೆ ತನ್ನ ಪರಿವಾರದವರ ಜೊತೆಗೆ ಬಂದು ಕೋಟೆಯ ಕಡೆ ಬೆನ್ನು ಹಾಕಿ ಕೂತ. ದರ್ಬಾರಿಗಳಿಗೆ ಇಬ್ಬರೂ ರಾಜಕುಮಾರರು ತಮ್ಮ ತಯಾರಿ ಮಾಡಿಕೊಂಡು ಬಂದಿದ್ದಾರೆಂದು ತಿಳಿಸಲಾಗಿತ್ತು. ದರ್ಬಾರಿಗಳ ಪೈಕಿ ವಿದೇಶಿಯರು ಮೀರಾನ್ ಷಾ ಹುಸ್ಸೈನನ ಪಕ್ಕದಲ್ಲಿ ಕೂತರು. ದಕ್ಷಿಣದ ಸ್ಥಳೀಯ ದರ್ಬಾರಿಗಳು ಈ ಬದಲಾವಣೆಯನ್ನು ಕಂಡು ಆಶ್ಚರ್ಯ ಚಕಿತರಾದರು. ಕೆಲವರು ರಾಜಕುಮಾರ ಮೀರಾನ್ ಅಬ್ದುಲ್ ಖಾದರನ ಬಳಿಗೆ ಹೋಗಿ 'ನೀವು ಕೋಟೆಯ ಹೊರಗೆ ಯಾಕೆ ಬಂದಿರಿ. ಯಾಕೆ ಇಷ್ಟು ಸಮಯ ಕಾಯುತ್ತ ನಿಂತಿದ್ದೀರಿ? ಇದರ ಅರ್ಥವೇನು?' ಎಂದು ಕೇಳಿದರು.

ಮೀರಾನ್ ಅಬ್ದುಲ್ ಖಾದರನಿಗೆ ಇವೆಲ್ಲ ಕುತಂತ್ರ ಮಾಡಿದ್ದು ಖಾಸಿಂ ಬೇಗ್ ಎಂದು ತಿಳಿಯಿತು. ಈ ಮೂಲಕ ತನ್ನನ್ನು ಕೋಟೆಯಿಂದ ಹೊರಹಾಕಲು ಷಡ್ಯಂತ್ರ ರಚಿಸಿದ್ದಾನೆಂದು ಅನುಭವಕ್ಕೆ ಬಂತು. ಈ ಮಧ್ಯೆ ಖಾಸಿಂ ಬೇಗ್ ಒಂದು ದೊಡ್ಡ ಸೈನ್ಯದೊಂದಿಗೆ ಮೀರಾನ್ ಷಾ ಹುಸೈನನಿಗೆ ಸಲಾಂ ಮಾಡುತ್ತಾ ಮುಂದುವರಿದ. ಮೀರಾನ್ ಅಬ್ದುಲ್ ಖಾದರನಿಗೆ ಖಾಸಿಂ ಬೇಗ್ ತನ್ನ ಸೈನ್ಯದೊಂದಿಗೆ ತನ್ನ ಜೊತೆ ಸೇರುತ್ತಾನೆಂಬ ಆಸೆ ಇನ್ನೂ ಇತ್ತು. ಆದರೆ ಅವನು ಇವನನ್ನು ತನ್ನ ಮಾತಿನ ಮೋಡಿಗೆ ಸಿಲುಕಿಸಿ ಅವನ ವಿರುದ್ಧ ಷಡ್ಯಂತ್ರವನ್ನು ಖಾಸಿಂ ಬೇಗ್ ರಚಿಸಿದ್ದ.

ಮೀರಾನ್ ಹುಸೇನನಿಗೆ ಸಲಾಂ ಮಾಡಿ ಖಾಸಿಂ ಬೇಗ್ ನಿಂತದ್ದು ಕಂಡು ತನ್ನ ವಿರುದ್ಧ ಪಿತೂರಿ ನಡೆದೇ ಹೋಯಿತೆಂದು ಮೀರಾನ್ ಅಬ್ದುಲ್ ಖಾದರ್ ನೊಂದುಕೊಂಡು ನಾಚಿದ. ಬೆನ್ನು ತಿರುಗಿಸಿ ಅವನು ಹೊರಗೆ ನಡೆಯುತ್ತಾನೆ. ದರ್ಬಾರಿಗಳು ಅವನ ಹಿಂದೆ ಹೋಗಲು ತಯಾರಾದಾಗ 'ಇಂತಹ ಸಂದರ್ಭದಲ್ಲಿ ದಂಗೆಯೇಳುವುದು, ಯುದ್ಧ ಮಾಡುವುದರಿಂದ ಏನು ಪ್ರಯೋಜನ?' ಎಂದು ಖಾಸಿಂ ಅವರನ್ನು ಕೇಳುತ್ತಾನೆ. ಮೀರಾನ್ ಷಾ ಹುಸೈನ ಇವರೆಲ್ಲರೂ ವಿರೋಧಿ ಬಣದವರು ಆತಂಕದಿಂದ ಪೆಚ್ಚುಮೋರೆ ಹಾಕಿಕೊಂಡು ಹೋಗುತ್ತಿರುವುದು ಕಂಡು ದೇವರ ಕೃಪೆ ಎಂದುಕೊಂಡು ಕೋಟೆಯ ಒಳಗೆ ನಡೆದ. ಯುದ್ಧವಿಲ್ಲದೆ ಸುಲಭವಾಗಿ ಪಡೆದ ಸಿಂಹಾಸನದ ಮೇಲೆ ಆರೂಢನಾದ.

ರಾಜ್ಯದ ಆಳ್ವಿಕೆಯು ಸುಸೂತ್ರವಾಗಿ ನಡೆಯುತ್ತಿರುವುದು ಕಂಡು ಮೀರಾನ್ ಷಾ ಹುಸೈನ್ ತನ್ನ ರಾಜ್ಯಭಾರವನ್ನು ನಡೆಸುವುದರಲ್ಲಿ ತನ್ಮಯನಾದ. ಸೈನಿಕರು ಮತ್ತು ಪ್ರಜೆಗಳ ಅಭ್ಯುದಯದ ಕೆಲಸ ಕಾರ್ಯಗಳನ್ನು ಕೈಗೊಂಡ. ದಿನೇದಿನೇ ತನ್ನ ನ್ಯಾಯಯುತವಾದ ಚಟುವಟಿಗಳ ಮೂಲಕ ಹೆಸರು ಗಳಿಸಿದ. ವಿಶ್ವದ ಎಲ್ಲೆಡೆಗಳಿಂದ ಜ್ಞಾನಿಗಳು, ಬುದ್ಧಿವಂತರು, ಸಾಹಿತಿಗಳು, ಬಡಜನರು, ಸಂಕಷ್ಟಕ್ಕೆ ಸಿಲುಕಿದವರು ಇವನ ದರ್ಬಾರಿಗೆ ಬಂದು ಸಹಾಯ ಪಡೆಯ ತೊಡಗಿದರು. ಜನರು ನಿಜಾಮುಲ್ ಮುಲ್ಕನ ಆಳ್ವಿಕೆಯ ವೈಭವವನ್ನು ಮರೆಯತೊಡಗಿದರು. ನಿಜಾಮುಲ್ ಮುಲ್ಕ್ ಮತ್ತು ಆದಿಲ್ ಖಾನ್‌ನ ಮಧ್ಯೆ ಯುದ್ಧ ತಿಕ್ಕಾಟಗಳು, ವಾದವಿವಾದಗಳು ನಡೆಯುತ್ತಿತ್ತು. ಅವರ ತಂದೆ ಜಹಾಂಪನಾರ ಮರಣಾ ನಂತರವೂ ಯುದ್ಧ ನಡೆದಿತ್ತು. ಎರಡುಸಲ ರಾಮರಾಜನ (ವಿಜಯನಗರದ) ಮತ್ತು ಇವರ ನಡುವಿನ ವಿವಾದದಲ್ಲಿ ಯುದ್ಧ ನಡೆದಿತ್ತು. ಇನ್ನೊಮ್ಮೆ ನಿಜಾಮುಲ್ ಮುಲ್ಕ್ , ಕುತುಬುಲ್ ಮುಲ್ಕನ ನಡುವೆ ಯುದ್ಧ ನಡೆದು ನಂತರ ಮಧ್ಯೆ ಸಂಧಾನ ನಡೆದು ಅವನ ಮಗಳ ಜೊತೆ ವಿವಾಹ ವೇರ್ಪಟ್ಟಿತ್ತು.

ಹೀಗೆ ಸಂಧಾನ ರಾಜಿ ನಡೆದು ಅಮಾದುಲ್ ಮುಲ್ಕನೊಂದಿಗೆ ಸ್ನೇಹ ಉಂಟಾಗಿ ಮೂವರೂ ಸೇರಿಕೊಂಡು ಜಹಾಂಪನಾರ ರಾಜ್ಯದೊಳಗೆ ನುಗ್ಗಿ ಆಕ್ರಮಣ ನಡೆಸಿದ್ದರು. ಜಹಾಂಪನಾರಿಗೆ ಈ ಮೂವರು ಒಟ್ಟಾಗಿ ಯುದ್ಧ ನಡೆಸುತ್ತಾರೆಂದು ತಿಳಿದುಬಂದಾಗ ರಾಮರಾಜನನ್ನು ಸಹಾಯಕ್ಕಾಗಿ ಕರೆದಿದ್ದರು. ರಾಮರಾಜ ಜಹಾಂಪನಾರಿಗೆ ಸಕಲರೀತಿಯ ತಯಾರಿಯೊಂದಿಗೆ ಸಹಾಯ ಮಾಡಲು ಯುದ್ಧಭೂಮಿಗೆ ತನ್ನ ಸೈನ್ಯವನ್ನು ಕಳುಹಿಸಿದ್ದ. ಬಹಳ ಸಮಯದ ತನಕ ಎರಡೂ ಕಡೆಗಳ ಸೈನ್ಯಗಳು ಎದುರು ಬದುರಾಗಿ ನಿಂತಿತ್ತು. ಆಗಾಗ ಸಣ್ಣಪುಟ್ಟ ಘರ್ಷಣೆಗಳು ನಡೆಯುತ್ತಿದ್ದವು. ರಾಮರಾಜ ನಿಜಾಮುಲ್ಕನೊಂದಿಗೆ ಸೇರಿಕೊಂಡು ಮದುರೈ ಪಟ್ಟಣಕ್ಕೆ ಹೋದರು. ಅವನ ಮಗ ಕೂಡ ಈ ಕೆಲಸದಲ್ಲಿ ಸೇರಿಕೊಳ್ಳುತ್ತಾನೆಂದು ವ್ಯವಸ್ಥೆಯನ್ನು ಮಾಡಿದ್ದ. ಈ ವಿಷಯ ತಿಳಿದ ಜಹಾಂಪನಾ ಅಲ್ಲಾಹನ ಮೇಲೆ ಭರವಸೆಯಿಟ್ಟು, ಅಲ್ಲಿಯ ಕೆಲಸವನ್ನೆಲ್ಲವನ್ನು ಅವರು ನೋಡಿಕೊಳ್ಳಲು ಬಿಟ್ಟು ತಾನು ಸೈನ್ಯವನ್ನು ನಿಜಾಂ ಶಾಹನನ್ನು ಎದುರಿಸಲು ಹೋಗುವ ಬಗ್ಗೆ ಜಹಾಂಪನಾ ತಯಾರಿಗೆ ತೊಡಗಿದರು. ಮರುದಿನ ಯುದ್ಧ ಹೂಡುವ ತಯಾರಿ ಮಾಡಿ ಹೊರಟು ನಿಜಾಂ ಶಾಹ ಮತ್ತು ಸೈನ್ಯವನ್ನು ಸೋಲಿಸಿ ವಿದ್ರೋಹದ ಅಗ್ನಿಯನ್ನು ಶಮನಗೊಳಿಸಿದರು. ಈ ಯುದ್ಧದಲ್ಲಿ ಅನೇಕ ಜನರು ಅಸುನೀಗಿದರು. ರಾಮರಾಜ ಮತ್ತೆ ತನ್ನ ಮೇಲೆ ತಿರುಗಿ ಬೀಳಬಹುದು ಎಂಬ ಕಾರಣಕ್ಕೆ ಪರಸ್ಪರ ಒಪ್ಪಂದಕ್ಕೆ ಬಂದರೂ ನಂತರದಲ್ಲಿ ಒಪ್ಪಂದವನ್ನು ನಿಜಾಂ ಶಾಹ ಮುರಿದಿದ್ದ. ಜಹಾಂಪನಾ ಸ್ವತಃ ತನ್ನ ಸೈನ್ಯದೊಂದಿಗೆ ಅವನ ಬೆನ್ನುಹತ್ತಿ ಹೋದಾಗ ಅವನು ಸೋತು ಸುಣ್ಣವಾದ. ಜಹಾಂಪನಾರ ಸೈನ್ಯ ಅವನು ಬಿಟ್ಟು ಹೋದ ಸರಕು, ಸಾಮಾಗ್ರಿಗಳು, ಶಸ್ತ್ರಾಸ್ತ್ರಗಳು, ಸಂಪತ್ತು, ಸೊತ್ತುಗಳನ್ನು ವಶಪಡಿಸಿಕೊಂಡರು. ನಿಜಾಂ ಶಾಹನನ್ನು ಬಿಡದೆ ಬೆನ್ನುಹತ್ತಿ ಮಧ್ಯ ಮಾರ್ಗದಲ್ಲಿ ಅವನನ್ನು ಸೆರೆಹಿಡಿದರು. ಈಗ ನಿಜಾಂ ಶಾಹ ಸಂಪೂರ್ಣ ಸೋತುಹೋಗಿ ನಿರುಪಾಯನಾಗಿ ಶಸ್ತ್ರಾಸ್ತ್ರಗಳನ್ನು ಕೆಳಗಿಟ್ಟು ತನ್ನ ಸೈನ್ಯದೊಂದಿಗೆ ಶರಣಾಗತನಾದ. ಸೂರ್ಯ, ಬಾಣ, ಮೀನು ಚಿನ್ಹೆಗಳ ಸಂಕೇತ ಚಿತ್ರವನ್ನೊಳಗೊಂಡ ನಿಜಾಂ ಶಾಹನ ಹಳದಿವರ್ಣ ಧ್ವಜವನ್ನು ಮತ್ತು ಅಳಿದುಳಿದ ಸಾಮಾನು ಶಸ್ತ್ರಾಸ್ತ್ರಗಳು, ಧನ ಕನಕಗಳನ್ನು ಜಹಾಂಪನಾರಿಗೆ ಒಪ್ಪಿಸಿದ. ಅವನು ನೀಡಿದ ಸುಲ್ತಾನ್ ಬಹದ್ದೂರ್ ಗುಜರಾತಿಯ ಆಳ್ವಿಕೆಯಲ್ಲಿ ನಿಜಾಂ ಶಾಹನಿಗೆ ದೊರಕಿದ್ದ ಹಳದಿ ವರ್ಣದ ಈ ಧ್ವಜವನ್ನು ಜಹಾಂಪನಾರು ಹಸಿರುವರ್ಣಕ್ಕೆ ಬದಲಾಯಿಸಿ ತನ್ನದಾಗಿಸಿದರು. ಈ ಹಸಿರು ವರ್ಣದ ಧ್ವಜ ಮತ್ತು ಅದರ ಸೂರ್ಯ, ಬಾಣ ಹಾಗೂ ಮೀನಿನ ಚಿನ್ಹೆಯನ್ನು ಒಳಗೊಂಡ ಪತಾಕೆ ಜಹಾಂಪನಾರ ಧ್ವಜವಾಗಿ ಮಾರ್ಪಟ್ಟು ಮುಂದೆ ನೂರಾರು ವರ್ಷಗಳ ಕಾಲ ಹಾರಾಡಿತು. ಯುದ್ಧದಲ್ಲಿ ಮಾತ್ರ ಈ ಧ್ವಜಕ್ಕೆ ಕೆಂಪು ಪಟ್ಟಿ ಸೇರಿಸಲಾಗಿ ಬೇರೆಬೇರೆ ತಂಡದ ಸೈನ್ಯಗಳ ಸಂಕೇತವಾಗಿ ಮುಂದೆ ಬಳಸಲಾಯಿತು.

ನಿಜಾಂ ಷಾಹ ತನ್ನ ಕುತಂತ್ರಕ್ಕೆ ತಾನೇ ಬಲಿಯಾಗಿ ತನ್ನ ಸಂಪತ್ತು, ಕುದುರೆ ಸವಾರರು, ಕಾಲಾಳು ಸೈನ್ಯವನ್ನು ಕಳೆದುಕೊಂಡು ಸಂಪೂರ್ಣವಾಗಿ ಸೋತುಹೋದ. ಇದಕ್ಕೆಲ್ಲ ಕಾರಣಕರ್ತನು ರಾಮರಾಜನೆಂದು ಅವನ ಮೇಲೆ ಅಪಾದನೆ ಹೊರಿಸಿ ಸೇಡು ತೀರಿಸಿಕೊಳ್ಳಲು ಸಮಯ ಕಾಯುತ್ತಿದ್ದ.

**ಜಹಾಂಪನಾ ಷಾ ಅಲಿ ಆದಿಲ್ ಷಾ, ತನ್ನ ಮಗ ಹುಮಾಯೂನ್ ಆದಿಲ್ ಷಾನೊಂದಿಗೆ ರಾಜ್ಯಕ್ಕೆ ತಲಪಿದ ವಿವರಗಳು**

ನಿಜಾಂ ಷಾ ತನ್ನ ಒಳಿತು ಜಹಾಂಪನಾರ ಜೊತೆಗೆ ಸ್ನೇಹ ಸಂಬಂಧ ಬೆಳೆಸುವುದರಲ್ಲಿ ಅಡಗಿದೆಯೆಂದು ತಿಳಿದುಕೊಂಡ. ಇವನು ಇನ್ನಿತರ ಮುಸ್ಲಿಂ ಬಾದಶಾಹರೊಂದಿಗೆ ಸೇರಿ ರಾಮರಾಜನ ಮೇಲೆ ಸೇಡುತೀರಿಸಿಕೊಳ್ಳುವ ಹಾದಿಯನ್ನು ಹುಡುಕ ತೊಡಗಿದ. ರಾಮರಾಜರ ಕಿರುಕುಳದಿಂದ ಪಾರಾಗಲು ಮುಸ್ಲಿಮರು ಸೇರಿ ಬಣವೊಂದನ್ನು ಕಟ್ಟಿಕೊಂಡಾಗ ಅದರ ನಾಯಕತ್ವವನ್ನು ಜಹಾಂಪನಾ ವಹಿಸಿಕೊಂಡು ಯುದ್ಧ ಹೂಡುವುದಕ್ಕೆ ಹೊರಟ. ಈ ಯುದ್ಧದಿಂದ ರಾಮರಾಜನ ರಾಜ್ಯದ ಅನೇಕ ಮುಖ್ಯ ಭಾಗಗಳು ಜಹಾಂಪನಾರ ಕೈವಶವಾಯಿತು. ಇದರ ನಂತರ ಹಿಂಪಾನಗರದಿಂದ ರಾಮರಾಜನ ಸಂಗಡಿಗರನ್ನು ಓಡಿಸಲು ಕುತುಬುಲ್ ಮುಲ್ಕ್ ಮತ್ತು ನಿಜಾಂ ಷಾಹ್ ಜೊತೆಗೆ ಜಹಾಂಪನಾರೊಂದಿಗೆ ಸೇರಿಕೊಂಡು ತಮ್ಮ ಮಕ್ಕಳನ್ನು ಜೊತೆಗೂಡಿ ಸಿಂದ್ರಾಪುರ ಕೋಟೆ(ಸೋಲಾಪುರದ ಕೋಟೆ)ಯನ್ನು ವಶಪಡಿಸಿಕೊಳ್ಳಲು ಕಳುಹಿಸಿದ. ನಿಜಾಂ ಶಾಹ್ ತನ್ನ ಮಗಳು ಚಾಂದ್ ಬೀಬಿ ಸುಲ್ತಾನಳನ್ನು ಜಹಾಂಪನಾರ ಸಹೋದರಿ ಬೀಬಿ ಐಮನಾ ಸುಲ್ತಾನಳನ್ನು ಮುರ್ತಜಾ ನಿಜಾಂ ಶಾಹನ ಪ್ರತಿನಿಧಿಯನ್ನಾಗಿ ಮಾಡಿ ಕಳುಹಿಸಿದರು. ಹೀಗೆಲ್ಲ ವ್ಯವಸ್ಥೆ ಮಾಡಿಕೊಂಡು ನಿಜಾಂ ಶಾಹನ ದರ್ಬಾರಿನಲ್ಲಿ ತಲಪಿದರು. ನಿಜಾಂ ಶಾಹನ ನೇತೃತ್ವದಲ್ಲಿ ಅಲ್ಲಾಪೂರದ ಕೊಳದ ಬಳಿಯಲ್ಲಿ ಸಭೆ ಸೇರಿದರು. ಈ ಸಭೆ ಎಂತಹ ಸುಂದರವಾಗಿ ಅಲಂಕರಿಸಿದ್ದರೆಂದರೆ ಅದನ್ನು ವರ್ಣಿಸಿ ಬರೆಯಲು ಲೇಖಕನಿಗೆ ಅಸಾಧ್ಯವಾಗುವಂತಿತ್ತು ಮತ್ತು ಹೇಳಲು ನಾಲಗೆಗೆ ವರ್ಣಿಸಲು ಶಬ್ದಗಳು ಸಿಗುವುದು ಅಸಾಧ್ಯವಾಯಿತು. ಕೋಟೆಯ ಒಳಗೆ ಸೇರಿದ ಸಭೆ ಎಷ್ಟೊಂದು ವಿಶೇಷ ಕಳೆಯೊಂದಿಗೆ ಆಕರ್ಷಿಸಿತ್ತೆಂದರೆ ಮೂಲ ಮಾನವ ಆದಮ್ ಹುಟ್ಟಿದಂದಿನಿಂದ ಇಂತಹ ವೈಭವಪೂರ್ಣ ಸಭೆಯ ದೃಶ್ಯ ಇನ್ನೊಂದು ಕಾಣುವುದಕ್ಕೆ ಸಿಗಲಾರದು. ಸ್ವರ್ಗ ಸದೃಶ ಸಿಂಗರಿಸಲ್ಪಟ್ಟ ಈ ಮೆಹಫಿಲ್‌ನಲ್ಲಿ, ಅಂಬರ್, ಮುಷ್ಕ್, ಊದ್, ಜಾಫ್ರಾನ್ ಮುಂತಾದ ಸುಗಂಧ ದ್ರವ್ಯಗಳಿಂದ ತುಂಬಿದ ಸಭಾಭವನದ ವಾತಾವರಣದಲ್ಲಿ ಒಂದು ವಿಶೇಷ ಸುವಾಸನೆ ಹೊರಹೊಮ್ಮುತ್ತಿತ್ತು. ಈ ಬೈಠಕ್ಕಿನ ಕೆಳಗಿನ ಮಹಡಿಯಲ್ಲಿ ನರ್ತಕಿಯರು ವಿವಿಧ ಭಂಗಿಗಳಲ್ಲಿ ನರ್ತಿಸುತ್ತಿದ್ದರು. ಸಂಗೀತ, ವಾದ್ಯಗಳನ್ನು ನುಡಿಸುವವರು, ಗಾಯಕರು

ಸೇರಿ ಸಭೆಯ ವೈಭವವನ್ನು ಎತ್ತರಕ್ಕೇರಿಸಿ ಮೆರೆದಿದ್ದರು. ಸಭಾಂಗಣದ ವೇದಿಕೆಯಲ್ಲಿ ಈ ಮನೋರಂಜನೆಯ ತಂಡದವರು ಧರಿಸಿದ ಬಟ್ಟೆಗಳ ವೈಭವ ಜರಿ ಕುಸುರಿಗಳ ನಯವಾದ ರೇಶ್ಮೆಯ ಮಿರುಗು ಕಣ್ಣಿಗೆ ಹಬ್ಬವನ್ನುಂಟುಮಾಡುವಂತಿದ್ದವು.

ಈ ಸಮಾರಂಭವು ಇಡೀ ಹಗಲು ಇಡೀ ರಾತ್ರಿ ನೃತ್ಯ, ಗಾಯನದ ವೈಭವದೊಂದಿಗೆ ಜರಗಿತು. ಸುರಾಪಾನದ ಮತ್ತು ಕೂಡ ಎಲ್ಲರಲ್ಲೂ ಆವರಿಸಿತ್ತು. ಪ್ರತೀದಿನವೂ ಅಲ್ಲಿ ಭಾಗವಹಿಸಿದ ಪ್ರತಿಯೊಬ್ಬ ಸರದಾರನ ಮನೋರಂಜನೆಗಾಗಿ ಒಂದೊಂದು ವೈವಿಧ್ಯಮಯ ಸಭೆಗಳನ್ನು ಆಯೋಜಿಸಲಾಗಿತ್ತು. ಈ ಸಭಾಂಗಣದಲ್ಲಿ ನಡೆದ ವೈಭವೋಪೇತ ಕಾರ್ಯಕ್ರಮಗಳ ವಿವರಗಳನ್ನು ಸಂಪೂರ್ಣವಾಗಿ ಬರೆದು ನೀಡುವುದಕ್ಕೆ ದಪ್ಪವಾಗಿರುವ ದಾಖಲೆ ಪುಸ್ತಕವು ಬೇಕಾಗಬಹುದು. ಆದರೆ ನಾನೀ ವಿವರಗಳನ್ನು ಸಂಕ್ಷಿಪ್ತವಾಗಿ ನೀಡಿದ್ದೇನೆ. ಹೆಚ್ಚುಕಮ್ಮಿ ಮೂರು ತಿಂಗಳ ಕಾಲ ಈ ವೈಭವಪೂರ್ಣ ಸಭೆಯು ನಡೆಯುತ್ತಿತ್ತು ಮತ್ತು ಜನರು ಅದರ ಸಂಪೂರ್ಣ ಆಸ್ವಾದನೆಯನ್ನು ಮಾಡುತ್ತಿದ್ದರು. ಈ ಮಧ್ಯೆ ರಾಮರಾಜ ಹಿಂಪಾನಗರದಿಂದ ಒಂದು ದೊಡ್ಡ ಸೈನ್ಯವನ್ನು ಕಟ್ಟಿಕೊಂಡು ತನ್ನ ಶೂರ ಸರದಾರರೊಂದಿಗೆ ರಾಜ್ಯದ ಗಡಿಪ್ರದೇಶಕ್ಕೆ ಬರುತ್ತಿದ್ದಾನೆಂಬ ಸುದ್ದಿ ಬಂತು. ಬಾದಶಾಹರು ಸೇರಿಕೊಂಡು ಈ ವಿರೋಧಿ ಸೈನ್ಯವನ್ನು ಹಿಮ್ಮೆಟ್ಟಿಸಲು ಕೃಷ್ಣಾ ನದಿಯ ಬಳಿಗೆ ತೆರಳಿದರು. ಕೃಷ್ಣಾ ನದಿಯು ಎರಡು ರಾಜ್ಯಗಳ ಪ್ರಕೃತಿದತ್ತ ಗಡಿಯಾಗಿ ಮಾರ್ಪಟ್ಟಿತ್ತು. ಎರಡೂ ದಡದಲ್ಲಿ ಸೈನ್ಯಗಳು ಜಮಾವಣೆ ಆಗಿದ್ದಂತೆಯೇ ಒಕ್ಕೂಟದ ಮೂವರು ಬಾದಶಾಹರು ಬಿಜಾಪುರದ ಕಡೆ ವಿರೋಧಿಗಳನ್ನು ಒಂದಾಗಿ ಹೋರಾಡುವುದಕ್ಕೆ ಬೇಕಾದ ಕರಾರು ಮಾಡಿಕೊಳ್ಳುವುದಕ್ಕಾಗಿ ಪ್ರಯಾಣಬೆಳೆಸಿದರು. ಯುದ್ಧ ಶುರುವಾಗುವ ತನಕ ಸೈನಿಕರನ್ನು ಮನರಂಜಿಸುವ ಸಲುವಾಗಿ ಕನ್ಯೆಯರನ್ನು ಸರಬರಾಜು ಮಾಡುವ ವ್ಯವಸ್ಥೆಯನ್ನು ಮಾಡಿದ್ದರು. ಬಿಜಾಪುರಕ್ಕೆ ತೆರಳಿದ ಬಾದಶಾಹರು ಯುದ್ಧ ಹೂಡುವ ತಯಾರಿಯಲ್ಲಿ ಮುಳುಗಿದ್ದರು. ತಮ್ಮ ನಡುವಿನ ಒಪ್ಪಂದವನ್ನು ತಯಾರಿಸಿ ವಿರೋಧಿ ಸೈನ್ಯದ ವಿರುದ್ಧ ಹೋರಾಡಲು ಕೃಷ್ಣಾ ನದಿಯ ದಡಕ್ಕೆ ಪ್ರಯಾಣಬೆಳೆಸಿದರು. ನದಿಯಲ್ಲಿ ಎಲ್ಲೆಲ್ಲಿ ನೀರಿನ ಸೆಳೆತ ಮತ್ತು ಆಳ ಕಮ್ಮಿ ಇರುತ್ತದೋ ಅಲ್ಲೆಲ್ಲ ಸೈನ್ಯಕ್ಕೆ ಯುದ್ಧದಲ್ಲಿ ಬಳಸುವ ಪ್ರಾಣಿಗಳನ್ನು, ಸರಕು ಸಾಮಗ್ರಿಗಳನ್ನು ಹೊತ್ತ ಪ್ರಾಣಿಗಳನ್ನು ದಾಟಲು ಬೇಕಾದ ವ್ಯವಸ್ಥೆಯನ್ನು ಮಾಡಿಕೊಂಡರು. ಮರುದಿನ ಯುದ್ಧವು ಶುರುವಾಯಿತು. ಇಸ್ಲಾಮಿನ ಸೈನಿಕರು ಧುತ್ತನೆ ವಿರೋಧಿ ಸೈನ್ಯದ ಮಧ್ಯೆ ನುಗ್ಗಿದರು. ವಿರೋಧಿಗಳ ಸೈನ್ಯ ಯುದ್ಧಕ್ಕೆ ತಯಾರಿ ಮಾಡುವಷ್ಟರಲ್ಲಿ ಮುಸ್ಲಿಂ ಬಾದಶಾಹರ ಒಕ್ಕೂಟದ ಸೈನ್ಯ ರಣರಂಗದಲ್ಲಿ ಬೆಂಕಿಯು ಭುಗಿಲೆದ್ದಂತೆ ಹುಯಿಲೆಬ್ಬಿಸಿದರು.

ಮುಸ್ಲಿಂ ಸೈನಿಕರು ಹೂಂಕರಿಸುತ್ತ ಸಿಂಹಗಳಂತೆ ನುಗ್ಗಿದಾಗ ವಿರೋಧಿ

ರಾಮರಾಜನ ಸೈನ್ಯ ಚೆಲ್ಲಾಪಿಲ್ಲಿಯಾಯಿತು. ನಿಜಾಂ ಶಾಹನಿಗೆ ಇದು ತಿಳಿದಾಗ ತನ್ನ ಆಪ್ತವಲಯದ ಸರದಾರರನ್ನು ಕರೆದು ಖುತುಬ್ ಶಾಹನ ದಂಡಿನ ಕಡೆ ಕಳುಹಿಸಿದ. ಇವರೆಲ್ಲರೂ ಸೇರಿ ವಿರೋಧಿಗಳ ಸೈನ್ಯದ ನಡುವೆ ನಿಂತರು. ಈ ಮಧ್ಯೆ ನಿಜಾಂ ಶಾಹ ನೋಡುವಾಗ ವಿರೋಧಿಗಳು ತಮ್ಮೊಂದಿಗೆ ತಮ್ಮ ಹೆಂಗಸರನ್ನು ಕೂಡ ಕರೆದು ತಂದಿರುವುದನ್ನು ಗಮನಿಸಿದ. ಅವರು ತಮ್ಮೊಂದಿಗೆ ರಹಸ್ಯವಾಗಿ ಹರಿತವಾದ ಖಡ್ಗಗಳನ್ನು ಅಡಗಿಸಿಟ್ಟುಕೊಂಡಿದ್ದರು. ಇದಕ್ಕೆ ಅಲ್ಲಿನ ಭಾಷೆಯಲ್ಲಿ 'ರಂತಾಬ' ಎಂದು ಕರೆಯುತ್ತಾರೆ. ರಾಮರಾಜ ಈ ತುರ್ಕಿ ಮುಸ್ಲಿಮರ ವಿರುದ್ಧ ಯುದ್ಧದಲ್ಲಿ ತನ್ನ ಸೇನೆಯು ಇನ್ನಷ್ಟು ಆಸಕ್ತಿಯನ್ನು ಬೆಳೆಸುವಂತೆ ಹುರಿದುಂಬಿಸುವ ಸಲುವಾಗಿ ಈ ಮಹಿಳೆಯರ ಸೇನೆಯನ್ನು ತಯಾರಿಸಿದ್ದ. ಜಹಾಂಪನಾರ ಸೇನೆ ನೇರವಾಗಿ ತಿರುಮಲರಾಜನ ಎದುರಾಗಿ ಬಂದು ನಿಂತಿತು. ಈ ಸೈನ್ಯ ಅತ್ಯಂತ ರೋಷದಿಂದ ಯುದ್ಧರಂಗಕ್ಕೆ ಧುಮುಕಿದರು. ಎರಡೂ ಕಡೆಯವರ ಸೈನ್ಯದಲ್ಲೂ ಸಾಕಷ್ಟು ಸಂಖ್ಯೆಯಲ್ಲಿ ಜನರ ಪ್ರಾಣ ಕಳೆದುಕೊಂಡರು. ತಿರುಮಲರಾಜ ಇವರನ್ನು ಎದುರಿಸಲಾರದೆ ತನ್ನ ಸಹೋದರ ರಾಮರಾಜನ ಸೈನ್ಯದ ಕಡೆಗೆ ಸೇರಿಕೊಂಡ. ಜಹಾಂಪನಾ ಅವನನ್ನು ಹಿಂಬಾಲಿಸುತ್ತ ಹೋಗಿ ಅವನ ಜೊತೆಯಲ್ಲಿದ್ದ ಸೈನಿಕರ ದಂಡು ಎತ್ತೆಂದರತ್ತ ಓಡುವಂತೆ ಮಾಡಿದ. ಯುದ್ಧರಂಗದ ಗಲಾಟೆಯ ಮಧ್ಯೆ ರಾಮರಾಜ ಹಿಂತಿರುಗಿ ತನ್ನ ಸೇನೆಯನ್ನು ನೋಡುವಾಗ ಸೈನಿಕರು ಸೋತು ಹೋದಂತೆ ಕಂಡು ಬಂತು. ಈ ಯುದ್ಧದಲ್ಲಿ ವಿರೋಧಿ ರಾಮರಾಜನ ಸೇನೆಗೆ ಎಂತಹ ದಿಗ್ಭ್ರಮೆ ಮೂಡಿತೆಂದರೆ ಅವರು ಆಚೀಚೆಗೆ ಚಲಿಸಲಾಗದಂತೆ ಸ್ಥಬ್ಧರಾಗಿಬಿಟ್ಟರು. ಅವರ ಕಾಲಾಳು ಸೈನ್ಯ ಕೂಡ ಯುದ್ಧರಂಗದಿಂದ ಓಡಿಹೋಗಲು ಹವಣಿಸಿದರೆ ಅವರಿಗೆ ಸ್ವಲ್ಪವೂ ಜಾಗಬಿಡದಂತೆ ಬಾದಶಾಹರ ಸೈನಿಕರು ಘೇರಾಯಿಸಿದ್ದರು. ವಿರೋಧಿ ಸೈನಿಕರು ಅಲ್ಲಿಂದ ಹೊರಬರಲು ಯಾವುದೇ ಹಾದಿಯಿಲ್ಲವೆಂದು ತಿಳಿದ ಕೂಡಲೇ ಮನಸ್ಸಿಲ್ಲದ ಮನಸ್ಸಿನಲ್ಲಿ ಈ ಯುದ್ಧವನ್ನು ಇಲ್ಲಿಗೇ ನಿಲ್ಲಿಸಬೇಕೆಂದು ಯೋಚಿಸಿದರು.

ನಾನು ಇಲ್ಲಿ ಮರಣಹೊಂದುವುದು ಅಥವಾ ಶರಣಾಗತನಾಗುವುದಕ್ಕಿಂತ ಜಹಾಂಪನಾರ ಹಿಂದಿನಿಂದ ಯಾವುದಾದರೂ ಹಾದಿಯೊಂದನ್ನು ಕಂಡು ಹಿಡಿಯಬೇಕೆಂದುಕೊಂಡು ರಾಮರಾಜ ಯೋಚಿಸಿದ. ನಿಜಾಂ ಶಾಹನಿಗೆ ಈ ಸಂದರ್ಭದಲ್ಲಿ ಸಿಕ್ಕಿದ ವರ್ತಮಾನದಂತೆ ಜಹಾಂಪನಾರಿಗೆ ಸೋಲಾಗುತ್ತಿದೆಯೆಂದು ಆತಂಕವುಂಟಾಯಿತು. ಇವನು ಹೈರಾಣನಾಗಿರುವಾಗ ತೋಫು ಮತ್ತು ಗುಂಡುಗಳ ದಾಸ್ತಾನಿನ ಉಸ್ತುವಾರಿ ನೋಡುತ್ತಿರುವ ರೂಮಿ ಖಾನ ಅಲ್ಲಿಗೆ ಬಂದು 'ಈ ದಾಸ್ತಾನು ಇರುವುದು ಯಾವಾಗ ಉಪಯೋಗಿಸಲಿಕ್ಕೆ?' ಎಂದು ಕೇಳಿದ. ನಿಜಾಂ ಶಾಹ 'ಎಷ್ಟು ತೋಪುಗಳಿವೆ?' ಎಂದು ಕೇಳಿದ. ಅದಕ್ಕೆ ರೂಮಿ ಖಾನ, 'ಎರಡು

ದೊಡ್ಡ ತೋಪುಗಳಿವೆ' ಎಂದು ಹೇಳಿ ಆ ದೈತ್ಯಾಕಾರದ ಎರಡು ತೋಪುಗಳನ್ನೂ ಬಂಡಿಯ ಮೇಲೆ ನಿಲ್ಲಿಸಿ ಅದರಲ್ಲಿ ಗುಂಡುಗಳನ್ನು ತುಂಬಿಸಿದ. ಈ ಎರಡು ಉಪಯೋಗಿಸಲು ತಯಾರಾದ ತೋಪುಗಳು ಚಲಿಸುತ್ತ ಬರುತ್ತಿರುವುದನ್ನು ಕಂಡ ವಿರೋಧಿ ಸೈನಿಕರು ಭಯಗೊಂಡು ಚೆಲ್ಲಾಪಿಲ್ಲಿಯಾಗಿ ಓಡಿದರು. ಎಲ್ಲಿ ಹೋದರಲ್ಲಿ ಸೈನಿಕರೇ ತುಂಬಿರುವಾಗ ಅವರೊಳಗೆ ನೂಕುನುಗ್ಗಲು ಉಂಟಾಗಿ ಉಸಿರು ಕಟ್ಟಿ ಹಲವು ಸೈನಿಕರು ಅಸುನೀಗಿದರು. ರೂಮಿ ಖಾನ ಆನೆಯ ಮೇಲೆ ಸವಾರನಾಗಿ ವಿರೋಧಿ ಸೈನ್ಯದ ಹಿಂದೆ ಆನೆಯನ್ನು ಓಡಿಸಿ ಮತ್ತಷ್ಟು ಗುಲ್ಲೆಬ್ಬಿಸಿದ. ಇದರ ಮಧ್ಯೆ ರಾಮರಾಜ ಕೂಡ ಉಪಸ್ಥಿತನಿದ್ದ. ತನ್ನ ಆನೆಯ ಸೊಂಡಿಲು ಮತ್ತು ಬಲವಾದ ದಂತಗಳಿಂದ ಸೈನಿಕರ ದಂಡನ್ನು ದೂಡುತ್ತ ರೂಮಿ ಖಾನ ಬಂದು ಮಧ್ಯೆ ಇದ್ದ ರಾಮರಾಜನನ್ನು ಕೂಡ ದಬ್ಬಿದಾಗ ಅವನು ಗಾಯಗೊಂಡು ನೆಲದ ಮೇಲೆ ಬಿದ್ದು ಬಿಟ್ಟ. ರಾಮರಾಜನ ಸುತ್ತಮುತ್ತಲಿದ್ದ ಸೈನಿಕರು ಚೆಲ್ಲಾಪಿಲ್ಲಿಯಾಗಿ ಓಡಿಹೋದರು. ಆದರೆ ರಾಮರಾಜನ ಓರ್ವ ಮಂತ್ರಿ ದಲಪತ ರಾಯ ಇದನ್ನು ಕಂಡು ರಾಜನನ್ನು ರಕ್ಷಿಸುವ ಸಲುವಾಗಿ ಅವನ ಮೇಲೆ ಬಿದ್ದುಬಿಟ್ಟ. 'ಇವರು ನಮ್ಮ ಮಹಾರಾಜರು ಇವರ ರಕ್ಷಣೆಗೆ ನಾನು ಇದ್ದೇನೆ ಇವರ ಮಹಾ ಮಂತ್ರಿಗಳಲ್ಲೊಬ್ಬನಾಗಿ ಇವರನ್ನು ರಕ್ಷಿಸ ಬಯಸುತ್ತೇನೆ. ಇವರನ್ನು ಕೊಲ್ಲಬೇಡ' ಎಂದು ದಲಪತ ರಾಯ ಕೂಗಿ ಹೇಳಿದ. ರೂಮಿ ಖಾನ ರಾಮರಾಜರನ್ನು ನೆಲದಿಂದ ಎತ್ತಿ ಆನೆಯ ಮೇಲೆ ಕೂರಿಸಿ ನಿಜಾಂ ಶಾಹನ ಸಮ್ಮುಖಕ್ಕೆ ಕೊಂಡೊಯ್ದ.

ನಿಜಾಂ ಶಾಹ ಬಾಗಿಲ ಬಳಿ ನಿಂತಿದ್ದ. ರಾಮರಾಜನನ್ನು ಗಾಯಾಳುವಾಗಿ ಕಂಡಾಗ ನಿಜಾಂ ಶಾಹ ಅವನನ್ನು ಖಾಸಿಂ ಬೇಗ್ ಹಕೀಮರ ಬಳಿಗೆ ಕೊಂಡೊಯ್ಯಲು ಹೇಳಿದ. ಖಾಸಿಂ ಬೇಗ್ ಅವರ ವಂಶದ ಉನ್ನತ ಮತ್ತು ಹಿರಿಯ ಮಂತ್ರಿಯಾಗಿದ್ದುದರಿಂದ ರಾಜ್ಯಾಡಳಿತದ ಮಹತ್ವದ ಕೆಲಸಗಳನ್ನು ಅವನ ಸಲಹೆಯ ಮೇರೆಗೆ ತೀರ್ಮಾನಿಸಲಾಗುತ್ತಿತ್ತು. ಈ ಕಾರಣಕ್ಕೆ ರಾಮರಾಜನನ್ನು ಅವನ ಬಳಿಗೆ ಕಳುಹಿಸಲು ಆದೇಶ ನೀಡಿದ. ಈ ಸಮಯವು ಜೀವ ಉಳಿಸುವುದಕ್ಕಾಗಿ ಹಣದ ಮೊತ್ತವನ್ನು ನಿಗದಿಪಡಿಸಿ ಭಕ್ಷೀಸು ನೀಡುವ ಮೂಲಕ ಬಿಡಿಸಿಕೊಳ್ಳುವ ಅವಕಾಶಕ್ಕಾಗಿ ಕಾಯುವಂತಹದ್ದೂ ಆಗಿರಲಿಲ್ಲ. ಖಾಸಿಂ ಬೇಗ್ 'ಈ ಅಹಂಕಾರಿ ವೈರಿಯನ್ನು ಜೀವ ಸಹಿತ ಬಿಡುವುದು ತರವಲ್ಲ. ಆದಷ್ಟು ಬೇಗ ಕೊಂದು ಬಿಡುವುದು ಉತ್ತಮ' ಎಂದು ತೀರ್ಪು ನೀಡಿದ. ಹೆಚ್ಚು ಸಮಯ ಕಾಯದೆ ರಾಮರಾಜನ ಶಿರಚ್ಛೇಧ ಮಾಡಲಾಯಿತು. ವಿಶ್ವಕ್ಕೆ ಈ ಮುಸ್ಲಿಂ ಬಾದಶಾಹರ ಒಕ್ಕೂಟದ ವಿಜಯದ ಸುದ್ದಿ ಹರಡಬೇಕೆಂಬ ಕಾರಣಕ್ಕೆ ಅವನ ಶಿರವನ್ನು ಈಟಿಯೊಂದಕ್ಕೆ ಚುಚ್ಚಿ ಸೈನ್ಯ ಶಿಬಿರಕ್ಕೆ ಒಯ್ಯಲಾಯಿತು. ಸಂಪೂರ್ಣ ವೈರಿಗಳು ಮತ್ತು ಸ್ನೇಹಿತರ ಬಳಗಕ್ಕೆ ಈ ಸತ್ಯ

ಬೆಳಕಿಗೆ ಬಂದ ನಂತರ ಯುದ್ಧ ಕೊನೆಗೊಂಡಿತೆಂದು ಎಲ್ಲ ಬಾದಶಾಹರಿಗೆ ಸಮಾಧಾನ ಉಂಟಾಯಿತು. ಇಸ್ಲಾಮಿ ಬಾದಶಾಹರ ಒಕ್ಕೂಟದ ಸೈನ್ಯ ಯುದ್ಧರಂಗದಲ್ಲಿ ವೈರಿಗಳ ಸೊತ್ತು ಸಂಪತ್ತಿನ ಲೂಟಿಯಲ್ಲಿ ತೊಡಗಿತು.

ಬಾದಶಾಹರ ಇಸ್ಲಾಮೀ ಸೈನ್ಯಕ್ಕೆ ಲಭಿಸಿದ ಈ ವಿಜಯದ ನಂತರ ಲೂಟಿಯಲ್ಲಿ ರಾಮರಾಜನ ಸಂಪತ್ತಿನ ಜೊತೆಗೆ ಯುದ್ಧರಂಗದಲ್ಲಿ ಹೆಚ್ಚುಕಮ್ಮಿ ಒಂದು ಸಾವಿರ ಕುದುರೆ, ಆನೆಗಳ ಗುಂಪು ಇಸ್ಲಾಮೀ ಸೈನ್ಯದ ವಶಕ್ಕೆ ಲಭಿಸಿತು. ರಾಮರಾಜನ ರಾಜ್ಯಕ್ಕೆ ನೆರೆಯ ರಾಜ್ಯವಾಗಿದ್ದ ಮತ್ತು ಈ ಯುದ್ಧ ನಡೆಯುವುದಕ್ಕೆ ವಿರೋಧ ವ್ಯಕ್ತಪಡಿಸಿದ್ದ ಅಮಾದ್ ಶಾಹನ ರಾಜ್ಯಕ್ಕೆ ಈ ಸೈನ್ಯವನ್ನು ಕಳುಹಿಸಲಾಯಿತು. ಈ ಅಮಾದ್ ಶಾಹ, ನಿಜಾಂ ಶಾಹ ರಾಜ್ಯದ ಆಡಳಿತ ವ್ಯವಸ್ಥೆಯಲ್ಲಿ ಹಸ್ತಕ್ಷೇಪ ಮಾಡುತ್ತಿದ್ದು ತೊಂದರೆ ಮಾಡುತ್ತಿದ್ದ. ಸೈನ್ಯ ತನ್ನ ರಾಜ್ಯಕ್ಕೆ ಕಾಲಿಡುತ್ತಿದೆ ಎಂಬ ಸುದ್ದಿ ತಲಪಿದ ಕೂಡಲೇ ಭಯಗ್ರಸ್ತನಾಗಿ ಯುದ್ಧಹೂಡುವ ನಿಶ್ಚಯವನ್ನು ಬದಲಿಸಿದ. ಈ ಯುದ್ಧ ನಡೆದ ಕಾಲವನ್ನು 'ಫತೆಹದೀನ್ ಮರ್ಗ್‌ಲೈನ್' ಎಂಬ ಶಬ್ದಗಳಲ್ಲಿ ಅಡಗಿದೆ (ಹಿಜರಿ ವರ್ಷ ೯೭೩ ಎಂದಾಗುತ್ತದೆ).

ಹೆಚ್ಚುಕಮ್ಮಿ ಇಪ್ಪತ್ತು ದಿನಗಳ ಕಾಲ ಈ ಯುದ್ಧದ ಮೈದಾನದಲ್ಲಿ ಸೈನ್ಯ ನಿಂತಿತ್ತು. ವಿರೋಧಿ ಬಣದ ಸೊತ್ತು, ಸಾಮಾನು ಸರಂಜಾಮು, ಶಸ್ತ್ರಾಸ್ತ್ರಗಳನ್ನು, ಸಂಪತ್ತುಗಳನ್ನು ಸೈನಿಕರು ವಶಪಡಿಸಿಕೊಂಡರು. ಇಸ್ಲಾಮಿ ಸೈನ್ಯದಲ್ಲಿದ್ದ ಅನೇಕ ಬಡಸೈನಿಕರು ಸಾಕಷ್ಟು ಧನಿಕರಾದರು. ಈ ಯುದ್ಧದ ಮೈದಾನದಿಂದ ಹೊರಟ ಸೈನ್ಯ ವಿಜಯದ ಸಂತಸದಲ್ಲಿ ವಿರೋಧಿಗಳ ರಾಜಧಾನಿ ಹಿಂಪಾ ನಗರ(ಹಂಪಿ)ದ ಕಡೆ ಪ್ರಯಾಣ ಬೆಳೆಸಿದರು. ಹಿಂಪಾ ನಗರ ಒಂದು ದೊಡ್ಡ ನಗರವಾಗಿದ್ದು, ಇಲ್ಲಿ ಹೆಚ್ಚು ಜನರು ವಾಸವಾಗಿದ್ದು ಪ್ರಜೆಗಳು ಬಹಳ ಅನ್ಯೋನ್ಯವಾಗಿ ಬದುಕಿದ್ದರು. ಇದನ್ನು ಸಂಪೂರ್ಣವಾಗಿ ನಾಶಪಡಿಸಲಾಗಿತ್ತು. ನಗರದಲ್ಲಿ ಏನೆಲ್ಲ ಕಣ್ಣಿಗೆ ಕಂಡಿತ್ತೋ ಅವನ್ನೆಲ್ಲ ಲೂಟಿ ಮಾಡಲಾಗಿತ್ತು. ಕಳೆದ ಒಂದು ಸಾವಿರ ವರ್ಷಗಳ ಕಾಲ ವೈರಿಗಳ ಸೈನ್ಯ ಈ ನಗರಕ್ಕೆ ಕಾಲಿಟ್ಟಿರಲಿಲ್ಲ. ನಗರದಲ್ಲಿ ವಾಸಿಸುತ್ತಿದ್ದ ಜನರು ಯಾವುದೇ ತೊಂದರೆಗಳಿಗೆ ಒಳಗಾಗದೆ ಸುಖ ಸಮೃದ್ಧಿ ಮತ್ತು ಅನ್ಯೋನ್ಯವಾಗಿ, ಆತಂಕವಿಲ್ಲದೆ ಬದುಕುತ್ತಿದ್ದರು. ಇಲ್ಲಿ ವಾಸಿಸುವ ಪ್ರಜೆಗಳು ಎತ್ತರದ ಪರ್ವತ ಪ್ರದೇಶಗಳಲ್ಲಿ, ಸಮತಟ್ಟಾದ ಪ್ರದೇಶಗಳಲ್ಲಿ, ಪರ್ವತ ಕಣಿವೆಗಳಲ್ಲಿ ಮನೆ ಕಟ್ಟಿಕೊಂಡು ಬದುಕುತ್ತಿದ್ದರು. ಇಸ್ಲಾಮಿ ಸೈನಿಕರಿಗೆ ಇವೆಲ್ಲ ತಿಳಿದಿತ್ತು. ಮೂರೂ ಬಾದಶಾಹರ ಸೈನಿಕರು ಜನಗಳ ಮನೆಯೊಳಗೆ, ದೇವಾಲಯಗಳೊಳಗೆ ಹೊಕ್ಕರು. ಸಂಪತ್ತಿನ ಆಸೆಯಿಂದ ನೆಲವನ್ನು ಅಗೆದರು. ಕೈಗೆ ಸಿಕ್ಕಿದ ನಗನಾಣ್ಯ ಸಂಪತ್ತನ್ನು ಹೊತ್ತೊಯ್ದರು. ಇಡೀದಿನ ಸಂಪತ್ತಿನ

ಖಜಾನೆಯನ್ನು  ಹುಡುಕುತ್ತ ಗುಲ್ಲೆಬ್ಬಿಸಿದರು. ಅವರಿಗೆ ಬಹಳಷ್ಟು ಸಂಪತ್ತು ಕೂಡ ಲಭಿಸಿತ್ತು.

ಒಂದು ದಿನ ನಿಜಾಂ ಶಾಹ ಹಂಪಾನಗರದ ಸುತ್ತಮುತ್ತ ನಡೆದಾಡುತ್ತ ನಗರದ ಪರಿಸ್ಥಿತಿಯನ್ನು ಪರಿಶೀಲಿಸುತ್ತಿದ್ದ. ಅಲ್ಲೊಬ್ಬ ಜಹಾಂಪನಾರ ಸೈನ್ಯಕ್ಕೆ ಸೇರಿದ್ದ ದರ್ವೇಶ್ ಫಕೀರನೊಬ್ಬ ಕಂಡುಬಂದ. ಅವನ ಬಳಿ ಇದ್ದ ದೊಡ್ಡ ಮಡಕೆಯಲ್ಲಿ ತುಂಬಿದ್ದ ಚಿನ್ನ, ಬೆಳ್ಳಿ ಮುತ್ತು, ಹವಳ, ನಗ ನಾಣ್ಯಗಳು, ಬೆಲೆ ಬಾಳುವ ಆಭರಣಗಳನ್ನು ಹಂಪಾ ನಗರದ ಹಾಳುಬಿದ್ದ ನಗರದಲ್ಲಿ ಯುದ್ಧದಿಂದಾಗಿ ಸಂಕಷ್ಟಕ್ಕೊಳಗಾದ ಬಡಜನರೆಲ್ಲರಿಗೆ ಹಂಚುತ್ತಿದ್ದ. 'ನೀನು ಈ ರೀತಿ ನಮ್ಮ ವೈರಿಗಳಾದ ಇಲ್ಲಿನ ಜನರಿಗೆ ಯಾಕೆ ಸಂಪತ್ತನ್ನು ಹಂಚುತ್ತಿರುವಿ?' ಎಂದು ನಿಜಾಂ ಶಾಹನ ಜೊತೆಯಲ್ಲಿದ್ದವರು ಅವನ ಬಳಿಗೆ ಹೋಗಿ ಕೇಳಿದರು. ಮಾತು ಬೆಳೆದು ಮೊದಲು ಜಗಳ ಶುರುವಾಗಿ, ಎರಡೂ ಕಡೆಯಲ್ಲಿರುವವರ ಮಧ್ಯೆ ಕೈಗೆ ಕೈ ಹತ್ತಿ, ಮುಂದೆ ಆಯುಧಗಳನ್ನು ಹಿಡಿದು ಯುದ್ಧ ನಡೆಯಿತು. ದರ್ವೇಶರ ಕಡೆಯವರು ಮತ್ತು ನಿಜಾಂ ಶಾಹನ ಕಡೆಯವರ ಮಧ್ಯೆ ಯುದ್ಧ ಜೋರಾಗಿ ನಡೆಯಿತು. ದರ್ವೇಶರ ಅನುಯಾಯಿಗಳಲ್ಲಿ ಇಬ್ಬರು ತಿರ್ಮಿಜಿ ಸಯ್ಯದರು ಈ ಯುದ್ಧದಲ್ಲಿ ತೀರಿಕೊಂಡರು. ಈ ಹಿರಿಯ ದರ್ವೇಶರು, ಅಬ್ದಾಲ್ ಮತ್ತು ಖಲಂದರರ ಪರಂಪರೆಗೆ ಸೇರಿದವರಾಗಿದ್ದು, ಆಶ್ರಮವನ್ನು ಕಟ್ಟಿಕೊಂಡಿದ್ದರು. ಇವರು ಸೂಫಿ ಸಂತರಾಗಿ ಮಾರಿಫತ್ ಸಾಧನೆಯನ್ನಾಗಿ ಮಾಡಿಕೊಂಡವರಾಗಿದ್ದು ಹೆಚ್ಚುಕಮ್ಮಿ ನಾಲ್ಕುನೂರು ಶಿಷ್ಯರು ಅವರೊಂದಿಗಿದ್ದರು. ಈ ದರ್ವೇಶಿ ಸೂಫಿ ಸಂತನ ಕುತ್ತಿಗೆಯ ಹಿಂಭಾಗದಲ್ಲಿ ತಲ್ವಾರಿನ ಹೊಡೆತ ಬಿದ್ದು ಗಂಟಲಿನ ಭಾಗ ಹಾಗೆಯೇ ಇತ್ತು. ಅಲ್ಲಿಂದ ರಕ್ತ ತೊಟ್ಟಿಕ್ಕಿ ಹರಿಯತೊಡಗಿತು. ಅವರ ಜೀವದ ಉಸಿರು ಸ್ವಲ್ಪ ಬಾಕಿ ಇತ್ತು. ಸ್ವಲ್ಪಹೊತ್ತಿನಲ್ಲಿ ಆ ಸಂತ ಅಸುನೀಗಿದರು.

ಈ ಘಟನೆ ನಡೆದು ಹೆಚ್ಚುಕಮ್ಮಿ ಹತ್ತು ವರ್ಷ ಕಳೆದ ನಂತರ ನೋಡಿದರೆ ಈ ಸಂತರ ಪವಿತ್ರ ಗೋರಿ ರೌಜಾದ ಆಡಳಿತ ನಡೆಸುವವರು ಬಾದಶಾಹರಾಗಿದ್ದರು. ಆ ಕಾಲದಲ್ಲಿ ಇಂತಹ ಸೂಫಿ ಸಂತ ಮತ್ತು ಧರ್ಮ ಜ್ಞಾನಿ ಮತ್ತೊಬ್ಬರಿರಲಿಲ್ಲ. ನಿಜಾಂ ಶಾಹ ಈ ನಗರದ ಮತ್ತು ತನ್ನ ಇಡೀ ರಾಜ್ಯದ ಅವನತಿಯನ್ನು ನೋಡಿ, ಆ ಬಗ್ಗೆ ಪರಿಶೀಲನೆ ನಡೆಸಿದ. ಅವನು ತನ್ನ ರಾಜ್ಯದ ಅವನತಿಗೆ ಈ ನಿರಪರಾಧಿ ಸಂತನನ್ನು ಕೊಂದದ್ದು ಕೂಡ ಕಾರಣವಾಗಿರಬೇಕೆಂದುಕೊಂಡ. ಈ ವಿಷಯದಲ್ಲಿ ಬಾದಶಾಹರ ನಡುವೆ ವಾಗ್ವಾದ ನಡೆದು, ಪರಸ್ಪರ ಆರೋಪ ಪ್ರತ್ಯಾರೋಪಗಳು ಜೋರಾಗಿ ನಡೆದು ದ್ವೇಷಕ್ಕೆ ಕಾರಣವಾಗಿತ್ತು. ಈ ಕಾರಣಕ್ಕಾಗಿ ಹಂಪಾ ನಗರದ ಎಲ್ಲ ತ್ಯಾಜ್ಯವಸ್ತುಗಳನ್ನು, ಕಸಕಡ್ಡಿಗಳನ್ನು, ಸುಟ್ಟು ಕರಕಲಾದ ಮನೆ, ಅಂಗಡಿ ಮುಂಗಟ್ಟುಗಳನ್ನು ತೆಗೆಸಿ ಸ್ವಚ್ಛಗೊಳಿಸಲು ಆಜ್ಞೆ ನೀಡಿದ. ನಿಜಾಂ ಶಾಹ ಹೆಚ್ಚುಕಮ್ಮಿ ಆರು ತಿಂಗಳುಗಳ

ಕಾಲ ಈ ಹಾಳುಬಿದ್ದ ನಗರದಲ್ಲಿ ತಂಗಿ, ೨೦ ಚದರ ಮೈಲಿಗಳ ವ್ಯಾಪ್ತಿಯಲ್ಲಿ ನಾಶಗೊಂಡ ಅವಶೇಷಗಳನ್ನು ತೆಗೆಸಿ ಸ್ವಚ್ಛಗೊಳಿಸಿದ. ಇವೆಲ್ಲ ಬಹಳ ವರ್ಷಗಳ ಹಿಂದೆ ನಡೆದಿದ್ದು, ಈ ನಗರ ಆಗಲೇ ಅವನತಿಹೊಂದಿತ್ತು.

ನಿಜವಾದ ಹಿಂಪಾ ನಗರದ ಸುತ್ತ ನಾಲ್ಕೂ ದಿಕ್ಕಿನಲ್ಲಿ ಪರ್ವತಗಳಿವೆ, ಚಿಕ್ಕ ಸಪೂರ ರಸ್ತೆಗಳು ಗುಹೆಗಳು ಇವೆ. ನಗರದ ಗುಹೆಗಳು ಮೂರು ನಾಲ್ಕು ಮೈಲಿದೂರದ ತನಕ ನಡೆಯುವ ಹಾದಿಯಾಗಿತ್ತು. ಅಲ್ಲಿ ಸೂರ್ಯನ ಬೆಳಕು ಮೂಡುವಂತೆ ವ್ಯವಸ್ಥೆ ಇತ್ತು. ಹಿಂಪಾ ನಗರದ ನಾಗರಿಕರು ತಮ್ಮ ವಾಸಸ್ಥಾನವನ್ನು ಇಂತಹ ಗುಹೆಗಳಲ್ಲಿ ಮಾಡಿಕೊಂಡಿದ್ದರು. ಈ ಗುಹೆಗಳಲ್ಲಿ ಹೆಂಗಸರು, ಮಕ್ಕಳು, ಸಾಮಾನುಗಳ ಜೊತೆಯಲ್ಲಿ ಈ ಜನರು ಬದುಕುತ್ತಿದ್ದರು. ರಾತ್ರಿ ಹೊರ ಬಂದು ಆಹಾರ ಸಾಮಗ್ರಿಗಳು, ನೀರನ್ನು ತಂದು ದಾಸ್ತಾನು ಮಾಡಿಡುತ್ತಿದ್ದರು. ಹಗಲಿಗೆ ಹೊರಬರುತ್ತಿರಲಿಲ್ಲ. ಹೀಗೆ ಅವರ ಬದುಕು ಸಾಗುತ್ತಿತ್ತು. ಸೈನ್ಯಕ್ಕೆ ಈ ಪರಿಸ್ಥಿತಿ ತಿಳಿದಾಗ, ರಾತ್ರಿ ಹೊರಬಂದವರನ್ನು ಬಂಧಿಸಿದರು. ಒಮ್ಮೆ ನೋಡುವಾಗ ಮೂರು ನಾಲ್ಕು ಹಿಂದೂಗಳು ಗುಹೆಯಲ್ಲಿ ಆಸರೆ ಪಡೆದಿದ್ದರು. ಅವರನ್ನು ಕೂಡ ಬಂಧಿಸಿದರು. 'ಯಾವ ಯಾವ ಗುಹೆಗಳಲ್ಲಿ ಜನರು ವಾಸವಾಗಿದ್ದಾರೆಂಬುದನ್ನು ತಿಳಿಸಿದರೆ ನಿಮ್ಮನ್ನು ಬಿಡುತ್ತೇವೆ ಮತ್ತು ಭಕ್ಷೀಸು ನೀಡುತ್ತೇವೆ' ಎಂದು ಅವರನ್ನು ವಿಚಾರಿಸಿ, ಹೇಳಿದರು. ಹಣದ ಅಮಿಷಕ್ಕೊಳಗಾದವರು ಒಂದು ಗುಹೆಯ ಬಳಿ ಸೈನಿಕರನ್ನು ಕರೆದೊಯ್ದರು. ಗುಹೆಯೊಳಗೆ ನಾಲ್ಕು ಹೆಜ್ಜೆಯಿಟ್ಟು ನೋಡುವಾಗ ಇದರ ರಸ್ತೆ ದೀರ್ಘವಾಗಿದ್ದು ಸುರಂಗ ಸೇರಿಕೊಂಡು ಇನ್ನೊಂದು ರಸ್ತೆಯ ಜೊತೆ ಬೆಸೆದುಕೊಂಡಿರುವುದು ಕಂಡುಬಂತು. ತಾವು ಮುಂದಕ್ಕೆ ಹೋದರೆ, ಎಲ್ಲಾದರೂ ತಪ್ಪು ಹಾದಿಗಳನ್ನು ತೋರಿಸಿ ಕೊಂದು ಹಾಕಿದರೆ! ಎಂದು ಯೋಚಿಸಿದರು.

ಅಲ್ಲಿ ನಾವು ತೊಂದರೆಗೆ ಸಿಕ್ಕಿಕೊಳ್ಳಕೂಡದು ಎಂಬ ಮುಂಜಾಗ್ರತೆಯಿಂದ ಸೈನಿಕರು ತಮ್ಮ ಜೊತೆಗಿದ್ದ ಬಂದಿಗಳಲ್ಲಿ ಕೆಲವರನ್ನು ಸೇರಿಸಿಕೊಂಡು ಅವರ ಕೈಯಲ್ಲಿ ಉರಿಯುವ ದೀವಟಿಗೆ, ಸೂಟೆಗಳನ್ನು ನೀಡಿ ರಸ್ತೆಯಲ್ಲಿ ಸಿಗುವ ಬಂಡೆಗಳ ಬಿರುಕು ಎಡೆಗಳ ಮೇಲೆ ದೀವಟಿಗಳನ್ನು ಹಚ್ಚಿಟ್ಟು, ಹಾದಿ ತೋರುವುದಕ್ಕೆ ಬೇಕಾದ ಬೆಳಕಾಗಿ ಮತ್ತು ಹಿಂತಿರುಗುವಾಗ ಹಾದಿಯು ಗುರುತಿನ ಸಂಕೇತವಾಗಿ ಮಾಡಿಕೊಂಡರು. ಕೆಲವು ಸ್ಥಳಗಳಲ್ಲಿ ಕಲ್ಲುಗಳನ್ನು ತೆಗೆದು ಸರಿಸಿ ಸೂರ್ಯನ ಬೆಳಕು ಬೀಳುವಂತೆ ಮಾಡಿದರು. ಹೀಗೆ ರಸ್ತೆ ಮಾಡಿಕೊಂಡು ಮುಂದುವರಿದರು. ಕೆಲವೆಡೆಯಲ್ಲಿ ತುಂಬ ಕತ್ತಲೆಯಿತ್ತು. ಅಂತಹ ಕಡೆಗಳಲ್ಲಿ ಮೂರು ನಾಲ್ಕು ದೀವಟಿಗೆಗಳನ್ನು ಹಚ್ಚಿಡಬೇಕಾಯಿತು. ಹೀಗೆ ಅರ್ಧ ಮೈಲಿತನಕ ಗುಹೆಯೊಳಗೆ ಪ್ರಯಾಣಿಸಿದರು. ಎಲ್ಲಿಯವರೆಗೆಂದರೆ ಒಂದು ಕಿರಿದಾದ ಸ್ಥಳದ ತನಕ ನಡೆದು ತಲಪಿದರು. ಅಲ್ಲಿ ಒಂದು ಕಲ್ಲನ್ನು ಹಾದಿಗೆ ಅಡ್ಡ ತಡೆಗೋಡೆಯಾಗಿ ನಿಲ್ಲಿಸಿದ್ದರು.

ಸೈನಿಕರ ಜೊತೆಯಲ್ಲಿದ್ದ ಇಬ್ಬರು ವ್ಯಕ್ತಿಗಳನ್ನು ಕಲ್ಲನ್ನು ಸರಿಸಲು ಹೇಳಿದರು. ಅಷ್ಟರಲ್ಲಿ ಹಿಂದಿನಿಂದ ಒಂದು ದೊಡ್ಡ ಸ್ಫೋಟದಂತಹ ಸದ್ದು ಕೇಳಿಬಂತು. ಜೊತೆಗೆ ಇನ್ನಷ್ಟು ಸದ್ದುಗಳು ಕೇಳಿಬಂದವು. ನೋಡುವಾಗ ಬಹಳಷ್ಟು ಜನರು ಈ ಸುರಂಗ ರಸ್ತೆಯಲ್ಲಿ ಅಡಗಿದ್ದರು. ಅವರ ಕೈಯಲ್ಲಿದ್ದ ಆಯುಧಗಳ ಸದ್ದು ಕೇಳಿಬಂತು. ಆಯುಧಗಳನ್ನು ಮೇಲಕ್ಕೆತ್ತಿ ತಾವು ಇಲ್ಲಿದ್ದೇವೆಂದು ತೋರಿಸಿದರು. ಸೈನಿಕರು ಭಯಪಟ್ಟುಕೊಂಡು ಹಿಂತಿರುಗುವುದರ ಬಗ್ಗೆ ಯೋಚಿಸಿದರು. ಸೈನಿಕರು ಹಿಂತಿರುಗಿ ಅದೇ ದೀವಟಿಗೆಗಳ ಗುರುತಿನ ಹಾದಿಯಲ್ಲಿ ನಡೆಯುತ್ತ ಬಂದು ಜೀವವನ್ನು ಉಳಿಸಿಕೊಂಡರು. ಇಂತಹ ಸುರಂಗಗಳಿರುವ ಪರ್ವತಗಳು ಈಗಲೂ ನಮಗೆ ಈ ರಾಜ್ಯದಲ್ಲಿ ಕಾಣ ಸಿಗುತ್ತವೆ. ಅವುಗಳಲ್ಲಿ ಬಿಜಾಪುರದ ಹತ್ತಿರದ ಗ್ರಾಮವಾದ ಆನೆಗೊಂದಿಯಲ್ಲಿ ಈಗಲೂ ಇವು ಕಾಣ ಸಿಗುತ್ತವೆ.

ಈ ಗ್ರಾಮದ ಮಧ್ಯೆ ಒಂದು ದೊಡ್ಡ ನದಿಯು ಹರಿಯುತ್ತಿದೆ. ಇದರ ದಡದ ದಂಡೆ ಕೂಡ ಶಕ್ತಿಶಾಲಿಯಾಗಿದೆ. ಜಹಾಂಪನಾ ಅಲ್ಲಿಯ ಜನರಿಗೆ ಈ ಗ್ರಾಮವನ್ನು ಅವರು ವಾಸದ ವ್ಯವಸ್ಥೆ ಮಾಡಿಕೊಳ್ಳಲಿಕ್ಕಾಗಿ ನೀಡಿದ್ದ. ಇಲ್ಲಿ ಅವನ ತೆರಿಗೆ ವಸೂಲಿಮಾಡುವ 'ಆಮಿಲ'ರು ವಾಸವಾಗಿದ್ದರು. ಈ ಪ್ರದೇಶವನ್ನು ಅನೇಕ ವಿಧದಲ್ಲಿ ಅಭಿವೃದ್ಧಿ ಮಾಡಲಾಗಿತ್ತು. ರೈತರು ಕೂಡ ಅಲ್ಲಿ ಬಂದು ವಾಸವಾಗಿದ್ದರು. ಮೂರು ವರ್ಷಗಳ ಅವಧಿಯೊಳಗೆ ಈ ಗ್ರಾಮ ಒಳ್ಳೆಯ ಅಭಿವೃದ್ಧಿ ಹೊಂದಿತ್ತು. ರಾಮರಾಜನ ಮಗನ ಜೊತೆಗಾರರು ಒಂದು ಮಧ್ಯ ರಾತ್ರಿಯಲ್ಲಿ ಮೂರು ಮೈಲಿ ದೂರದಲ್ಲಿರುವ ಈ ಸ್ಥಳಕ್ಕೆ ಗುಹೆಯ ಮೂಲಕ ಬಂದು ಜಹಾಂಪನಾರ ಆಮಿಲರನ್ನು ಹೊಡೆದೋಡಿಸಿ ಗ್ರಾಮವನ್ನು ವಶಪಡಿಸಿಕೊಂಡರು. ಅಲ್ಲಿ ಸಿಕ್ಕಿದ್ದನ್ನು ಲೂಟಿಮಾಡಿದ್ದರು.

■

*

## ಅಧ್ಯಾಯ-೯

# ನಿಜಾಂ ಶಾಹ ಮತ್ತು ಕುತುಬ್ ಶಾಹ ತಮ್ಮ ಸ್ವದೇಶಕ್ಕೆ ಮರಳಿ ಬಂದ ವಿವರಗಳು

ಹಂಪಾ ನಗರದ ಬಳಿಯಲ್ಲಿ ಆರು ತಿಂಗಳು ಕಾಲ ತಂಗಿದ್ದ ಬಳಿಕ ಮೂರು ಬಾದಶಾಹರ ಸೈನ್ಯ ಪೆನುಗೊಂಡಕ್ಕೆ ಪ್ರಯಾಣಿಸಿತು. ರಾಮರಾಜನ ತಮ್ಮ ತಿರುಮಲರಾಯ ಯುದ್ಧದಿಂದ ಪಾರಾಗಿ ಪೆನುಗೊಂಡಕ್ಕೆ ಪ್ರಯಾಣಿಸಿ ಅಲ್ಲಿನ ರಾಜ್ಯಭಾರವನ್ನು ತನ್ನ ಮಗನಿಗೆ ವಹಿಸಿಕೊಟ್ಟು ಜಾಗರೂಕನಾಗಿರುವಂತೆ ಹೇಳಿ ತನ್ನ ಕೋಟೆಯ ಬಿದ್ದುಹೋದ ಭಾಗವನ್ನು ಸರಿಪಡಿಸುವುದು ಮುಂತಾದ ರಾಜ್ಯದ ಕೆಲಸಕಾರ್ಯಗಳಲ್ಲಿ ತೊಡಗಿಕೊಂಡ. ರಾಯಚೂರು, ಮುದಗಲ್, ತೋರಣಕಲ್, ಬಾದಾಮಿ ಎಂಬ ನಾಲ್ಕು ಕೋಟೆಗಳು ಹಂಪಾ ನಗರವನ್ನು ಜಯಿಸಿದ ನಂತರ ಜಹಾಂಪನಾನಿಗೆ ಒಪ್ಪಿಸಬೇಕು ಎಂದು ಒಕ್ಕೂಟದ ಬಾದಶಾಹರೊಳಗೆ ತೀರ್ಮಾನವಾಗಿತ್ತು. ಈ ತೀರ್ಮಾನಕ್ಕೆ ತಿರುಮಲರಾಯನ ಒಪ್ಪಿಗೆ ಇರಲಿಲ್ಲ. ಈ ಕೋಟೆಗಳು ನನ್ನ ವಶಕ್ಕೆ ಕೊಡಬೇಕೆಂದು ತಿರುಮಲರಾಯ ಬಾದಶಾಹರಿಗೆ ಪತ್ರ ಬರೆದು ತನ್ನ ಸೈನಿಕ ಸಹಚರರನ್ನು ಕಳುಹಿಸಿದ.

ತಿರುಮಲ ರಾಯ ಈ ನಾಲ್ಕು ಕೋಟೆಗಳು ಜಹಾಂಪನಾರ ವಶದಲ್ಲಿರುವುದರಿಂದ ಸಿಟ್ಟಾಗಿದ್ದ. ಈ ಕೋಟೆಗಳನ್ನು ನನ್ನಿಂದ ಕಸಿದುಕೊಂಡಿದ್ದಾರೆಂದು ಕೂಗು ಹಾಕಿದ. ಎಲ್ಲೆಲ್ಲ ಈ ಭಾಗದಲ್ಲಿ ಗುಲ್ಲು ಗಲಾಟೆ, ಘರ್ಷಣೆ ನಡೆಯುವ ಸಾಧ್ಯತೆ ಇತ್ತೋ ಅಲ್ಲೆಲ್ಲ ಸರಿಯಾದ ಕ್ರಮಗಳನ್ನು ಕೈಗೊಂಡು ತಡೆಹಿಡಿದ. ನಿಜಾಂ ಶಾಹ ಈ ಬೆಳವಣಿಗೆಯಿಂದ ಆತಂಕಗೊಂಡಿದ್ದ. ನಿಜಾಂ ಶಾಹನಿಗೂ ಈ ಕೋಟೆಗಳನ್ನು

ಪಡೆಯುವ ಆಸೆಯಿತ್ತು. ಜಹಾಂಪನಾರನ್ನು ಎದರಿಸಲು ಧೈರ್ಯವಿರಲಿಲ್ಲ. ಈ ಹಿನ್ನೆಲೆಯಲ್ಲಿ ನಿಜಾಂ ಶಾಹ ಕೆಲವು ಪತ್ರ ದಾಖಲೆಗಳನ್ನು ಅವರ ಬಳಿಗೆ ರವಾನಿಸಿದ. ಆ ಪತ್ರಗಳ ಪೈಕಿ ಒಂದರಲ್ಲಿ 'ಅಹ್ಮದ್ ನಗರದಿಂದ ಬಂದ ಸುದ್ದಿಯಂತೆ ನನ್ನ ರಾಜ್ಯದ ಸರಹದ್ದಿನ ಗಡಿಪ್ರದೇಶದಲ್ಲಿ ಅಹ್ಮದ್ ಶಾಹ ಸೀಮೋಲ್ಲಂಘನೆ ಮಾಡಿದ್ದಾನೆ. ಈ ಉಲ್ಲಂಘನೆ ದಿನೇದಿನೇ ಹೆಚ್ಚುತ್ತಿದೆ. ತಾವು ಅನುಮತಿ ನೀಡಿದಲ್ಲಿ ಅಹ್ಮದ್ ಶಾಹನ ಸೈನಿಕರ ಕಡೆಯಿಂದ ಆಗುತ್ತಿರುವ ತೊಂದರೆಗಳನ್ನು ದೂರಮಾಡಲು ಕ್ರಮ ಕೈಗೊಳ್ಳುತ್ತೇನೆ" ಎಂದು ಸೂಚಿಸಿದ್ದ. ಜಹಾಂಪನಾ ಈ ಪತ್ರವನ್ನೋದಿದ ನಂತರ ಸಂತೋಷದಿಂದ ಒಪ್ಪಿಗೆಯನ್ನು ನೀಡಿದರು. ಜಹಾಂಪನಾರಿಗೆ ಸಂದೇಶ ತಂದ ನಿಜಾಂ ಶಾಹರ ತಂಡದ ಜನರಿಗೆ ಶುಭ ಹಾರೈಸಿ ಬೀಳ್ಕೊಟ್ಟ. ಈ ಒಪ್ಪಿಗೆ ಪಡೆದ ಸಂದೇಶವಾಹಕರು ತಲಪುವಾಗ ನಿಜಾಂ ಶಾಹ ಮತ್ತು ಕುತುಬ್ ಶಾಹ ತಮ್ಮ ತಮ್ಮ ರಾಜ್ಯದಲ್ಲಿದ್ದರು. ಹನ್ನೊಂದು ದಿನಗಳು ಕಳೆದ ಬಳಿಕ ನಿಜಾಂ ಶಾಹ ನಿಧನನಾದ. ಅವನ ಆಳ್ವಿಕೆಯ ಅವಧಿ ಹನ್ನೆರಡು ವರ್ಷವಾಗಿತ್ತು. ಹಿಜರಿ ವರ್ಷ ೯೭೦ರಲ್ಲಿ ನಿಜಾಂ ಶಾಹ ಇಹಲೋಕವನ್ನು ತ್ಯಜಿಸಿದ್ದ. ಅವನ ಪತ್ನಿಯೋರ್ವಳಿಗೆ ವಿಷವುಣ್ಣಿಸಲಾಯಿತು. ಇದಕ್ಕೆ ಸಂಬಂಧಿಸಿದಂತೆ ಯಾರು ನೀಡಿದರು ಯಾಕೆ ನೀಡಿದರು ಎಂಬ ವಿಷಯದಲ್ಲಿ 'ವಲ್ಲಾಹ ಆಲಂ ಬಿಸ್ಸವಾಬ್' ಅಲ್ಲಾಹನೇ ಹೆಚ್ಚು ತಿಳಿದವನು!

**ಮುರ್ತಜಾ ನಿಜಾಂ ಶಾಹನ ರಾಜ್ಯಭಾರದ ವಿವರಗಳು**

ಮುರ್ತಜಾ ನಿಜಾಂ ಶಾಹ ರಾಜ್ಯದ ಸಿಂಹಾಸನದಲ್ಲಿ ಕೂತ. ಇವನು ಪ್ರಾಮಾಣಿಕ ಬುದ್ಧಿವಂತ ರಾಜಕುಮಾರನಾಗಿದ್ದ. ತನ್ನ ರಾಜ್ಯದ ಪ್ರಜೆಗಳ ವಿದ್ಯಾಭ್ಯಾಸದ ಬಗ್ಗೆ ಮತ್ತು ಅದಕ್ಕೆ ಸಂಬಂಧಿಸಿದ ಕಾರ್ಯಕ್ರಮಗಳನ್ನು ಅನುಷ್ಠಾನ ಗೊಳಿಸುವುದರಲ್ಲಿ ಹೆಚ್ಚು ಆಸಕ್ತಿವಹಿಸಿದ್ದ. ಅಕ್ಷರ ಕಲೆಯ ವಿಷಯದಲ್ಲೂ ಅವನಿಗೆ ಆಸಕ್ತಿಯಿತ್ತು. ರಾಜ್ಯದ ಆಡಳಿತ ವ್ಯವಸ್ಥೆಯ ವಿಷಯದಲ್ಲಿ ಹೆಚ್ಚು ಆಸಕ್ತಿ ವಹಿಸದೆ ಅದರ ಜವಾಬ್ದಾರಿಯನ್ನು ತನ್ನ ಅಜ್ಜಿಗೆ ವಹಿಸಿ ಕೊಟ್ಟಿದ್ದ. ನಿಜಾಂ ಶಾಹರ ತಾಯಿ ಹೆಚ್ಚುಕಮ್ಮಿ ಆರು ವರ್ಷಗಳ ಕಾಲ ರಾಜ್ಯಾಡಳಿತವನ್ನು ಸಂಪೂರ್ಣ ಜವಾಬ್ದಾರಿಯೊಂದಿಗೆ ನಡೆಸಿದ್ದರು. ಇದರ ಜವಾಬ್ದಾರಿಯ ಭಾರ ಹೆಚ್ಚಿದಾಗ ಖಾಸಿಂಬೇಗರ ಸಂಬಂಧಿ ಮೌಲಾನಾ ಹುಸೈನ್, ಮುರ್ತಜಾನ ಮೇಲೆ ಒಳಗಿಂದೊಳಗೆ ವೈರತ್ವ ಹೊಂದಿದವನಾಗಿ ತನ್ನ ಕೈಗೆ ರಾಜ್ಯಾಡಳಿತವನ್ನು ಎತ್ತಿಕೊಳ್ಳಲು ಹವಣಿಸಿದ್ದ. ನಿಮ್ಮ ಅಜ್ಜಿ ರಾಜ್ಯಾಡಳಿತದ ಮೂಲಕ ಎಲ್ಲರ ಮೇಲೂ ಒತ್ತಡವನ್ನು ತರುತ್ತಿದ್ದಾರೆ, ಇದರಿಂದಾಗಿ ಭವಿಷ್ಯದಲ್ಲಿ ಕುತಂತ್ರ ಪಿತೂರಿ ಹುಟ್ಟಿಕೊಳ್ಳುವುದಕ್ಕೆ ಕಾರಣವಾಗಬಹುದು, ಇದಕ್ಕೆ ಪರಿಹಾರವಾಗಿ ನಿಮ್ಮ ಆಪ್ತರಿಗೂ ಜವಾಬ್ದಾರಿ ವಹಿಸುವ ಬಗ್ಗೆ ಚಿಂತನೆ ನಡೆಸಿ' ಎಂದು ಮರ್ತಜಾನಿಗೆ ಸಲಹೆ ನೀಡುವವನಂತೆ ಹೇಳುತ್ತಿದ್ದ.

ಮೌಲಾನಾ ಹುಸೈನ ರಾಜಮಾತೆಗೆ ಸಲಹೆ ನೀಡಿದಂತೆ ಕೆಲವು ಆಯ್ದ ದರ್ಬಾರಿನ ಅಧಿಕಾರಿಗಳ ಹಿಂದೆ ಸಹಾಯಕರಾಗಿ ತನ್ನ ಕೆಲವು ಅನುಯಾಯಿಗಳನ್ನು ಕಾರಕೂನ ಕೆಲಸಕ್ಕೆ ನೇಮಿಸಿದ. ಹೀಗೆ ಅವನು ಅಧಿಕೃತ ಅಧಿಕಾರಿಯಾಗಿ ಒಳಗಿಂದೊಳಗೆ ಪರಿವರ್ತನೆಗೊಂಡ. ಮುರ್ತಜಾ ನಿಜಾಂ ಶಾಹನಿಗೆ ನಿಜಸ್ಥಿತಿ ತಿಳಿದಾಗ ಮುಲ್ಲಾ ಹುಸೈನನ್ನು ಪ್ರಧಾನ ಮಂತ್ರಿಯನ್ನಾಗಿ ನೇಮಿಸಿದ. ತನ್ನ ರಾಜ್ಯಾಡಳಿತದ ವ್ಯವಸ್ಥೆಯನ್ನು ಸರಿಪಡಿಸಿದ. ತನ್ನ ಮಾತೆ ಖಾನ್‌ಜಾದ ಹುಮಾಯೂನ್ ಬೀಬಿಯನ್ನು ಬಂಧಿಸಿ ಜುನೈರ್ ಕೋಟೆಯಲ್ಲಿ ಇರಿಸಿದ. ಅವಳು ಅಲ್ಲೇ ಅಸುನೀಗಿದಳು.

**ರಾಯಚೂರು, ಮುದಗಲ್, ತೋರಣಗಲ್ ಮತ್ತು ಬಾದಾಮಿ ಕೋಟೆಗಳನ್ನು ವಶಪಡಿಸಿಕೊಂಡ ವಿವರಗಳು:**

ನಿಜಾಂ ಶಾಹ ಮತ್ತು ಖುತುಬ್ ಶಾಹ ತಮ್ಮತಮ್ಮ ರಾಜ್ಯಕ್ಕೆ ತೆರಳಿದಾಗ ಜಹಾಂಪನಾ ತನ್ನ ಸೈನ್ಯವನ್ನು ಕಟ್ಟಿಕೊಂಡು ದಾಳಿ ನಡೆಸಿ ರಾಯಚೂರು ಕೋಟೆಗೆ ಮುತ್ತಿಗೆ ಹಾಕಿದರು. ಕೋಟೆಯ ಒಳಗಿದ್ದವರು ಸಂಪೂರ್ಣವಾಗಿ ನಿರಾಶರಾಗಿದ್ದರು. ಯಾಕೆಂದರೆ ಅವರಲ್ಲಿದ್ದ ಆಹಾರ ಸಾಮಗ್ರಿಗಳು ಮತ್ತು ನೀರು ಖಾಲಿಯಾಗಿತ್ತು. ಎಲ್ಲಿಂದಲೂ ತಮಗೆ ಸಹಾಯ ಬರುತ್ತದೆಂಬ ಆಸೆಯೂ ಬತ್ತಿ ಹೋಗಿತ್ತು. ಕೋಟೆಯಲ್ಲಿದ್ದ ಜನಗಳು, ಸೈನಿಕರು ಸಹಾಯ ಕ್ಷಮೆಯಾಚಿಸಿ ಶರಣಾಗತರಾಗಿ ಬಾದಶಾಹರ ಬಳಿಬಂದರು. ಎಲ್ಲರೂ ತಮ್ಮ ಪ್ರತಿಭೆ, ಸ್ಥಾನಮಾನಕ್ಕನುಗುಣವಾಗಿ ತಮಗೆ ನೌಕರಿಯನ್ನು ಕೊಡುವಂತೆ ಬಾದಶಾಹರನ್ನು ಕೇಳಿಕೊಂಡರು. ಜಹಾಂಪನಾ ಅವರನ್ನು ಸಮಾಧಾನಪಡಿಸಿ ಸಹಾಯ ಮತ್ತು ರಕ್ಷಣೆಯ ಭರವಸೆಯನ್ನು ನೀಡಿದ. ಅವರಿಗೆ ಉತ್ತಮ ಬಟ್ಟೆಬರೆಗಳನ್ನು ನೀಡಿದ. ಅವರ ಹಳೆಯ ರಾಜ್ಯವನ್ನು ಅವರಿಗೇನೆ ಹಿಂತಿರುಗಿಸಿದರು. ಇವರು ಬದುಕಿರುವ ವರೆಗೂ ವೈರಿಗಳ ವಿರುದ್ಧ ಹೋರಾಡುವುದಕ್ಕೆ ತೊಡಗಿದಾಗ ಜಹಾಂಪನಾರ ಜೊತೆಗೆ ಇರುತ್ತಿದ್ದರು. ಇವರು ಪ್ರಮುಖವಾಗಿ 'ನಾಯಕವಾರು' ಸಮುದಾಯಕ್ಕೆ ಸೇರಿದವರಾಗಿದ್ದು, ಆ ಇಲಾಖೆಯಲ್ಲಿ 'ದೊಂಗರು' ಎಂಬ ಹೆಸರು ಇವರಿಗಿದೆ. ಇವರು ಕೆಲಸಕಾರ್ಯದಲ್ಲಿ ತೊಡಗಿ ಪರಿಶ್ರಮಪಟ್ಟು ದಿನೇದಿನೇ ಅಭಿವೃದ್ಧಿ ಹೊಂದಿದರು. ಬಾದಶಾಹರ ವೈರಿಗಳ ವಿರುದ್ಧ ಹೋರಾಟದಲ್ಲಿ ಭಾಗವಹಿಸಿ ಸ್ವಾಮಿನಿಷ್ಠೆ ಪ್ರದರ್ಶಿಸಿದ್ದರು. ಜಹಾಂಪನಾರ ಸೈನ್ಯದವರು ಕೋಟೆಯ ಬಗ್ಗೆ ರಾಜ್ಯದ ಆಡಳಿತದ ಬಗ್ಗೆ ಚೆನ್ನಾಗಿ ತಿಳಿದುಕೊಂಡು ಕೆಲಸಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಇಲ್ಲಿನ ನಾಲ್ಕೂ ಕೋಟೆಗಳ ಮೇಲಧಿಕಾರಿಗಳು ತಮ್ಮ ಕೈಯಲ್ಲಿ ಕೋಟೆಯ ಬಾಗಿಲಿನ ಕೀಲಿಕೈಯನ್ನು ಹಿಡಿದುಕೊಂಡು ಜಹಾಂಪನಾರ ದರ್ಬಾರಿಗೆ ಬಂದು ಅವರ ವಶಕ್ಕೊಪ್ಪಿಸಿದರು. ಬಾದಶಾಹ ಅವರಿಗೆ ಉತ್ತಮ ರೀತಿಯಲ್ಲಿ ಅತಿಥಿ ಸತ್ಕಾರವನ್ನು ಮಾಡಿ, ಅವರ ಪೈಕಿ ಕೆಲವರನ್ನು ತನ್ನ ಮಂತ್ರಿಗಳನ್ನಾಗಿ ನೇಮಿಸಿದ.

ರಾಜ್ಯದ ಕೆಲಸಕಾರ್ಯಗಳಲ್ಲಿ ಈ ಮಂತ್ರಿಗಳು ನಿಷ್ಠಾವಂತರಾಗಿ ಕೆಲಸ ಮಾಡಿದರು. ಜಹಾಂಪನಾರು ಈ ನಾಲ್ಕೂ ಕೋಟೆಗಳ ಬುರುಜು, ಕಮಾನು, ಗೋಡೆಗಳಲ್ಲಿ ಉಂಟಾದ ಬಿರುಕುಗಳನ್ನು ಸರಿಪಡಿಸುವ ದುರಸ್ತಿ ಕೆಲಸವನ್ನು ಮಾಡಲು ವ್ಯವಸ್ಥೆ ಮಾಡಿ ತನ್ನ ರಾಜಧಾನಿ ಬಿಜಾಪುರದ ಕಡೆಗೆ ಪ್ರಯಾಣ ಬೆಳೆಸಿದರು.

ಈ ಕೋಟೆಗಳ ವಿಜಯ ಮತ್ತು ವಶಪಡಿಸಿಕೊಂಡ ಸಂತೋಷದಲ್ಲಿ ಜಹಾಂಪನಾ ಫಕೀರರು, ಬಡವರು, ದೀನರಿಗೆ, ಸಂಕಷ್ಟಕ್ಕೊಳಗಾದವರಿಗೆ ತನ್ನ ದಾನದ ದಸ್ತರ್‌ಖಾನದಲ್ಲಿ ಊಟದ ವ್ಯವಸ್ಥೆ ಮಾಡಿ ಕಾಣಿಕೆಗಳನ್ನು ನೀಡಿ ಖುಶಿಪಡಿಸಿದರು. ಈ ಸಂತೋಷಕೂಟದಲ್ಲಿ ಭಾಗವಹಿಸಲು ರಾಜ್ಯದ ಅಬಾಲವೃದ್ಧರು ಬಂದು ಸೇರಿಕೊಂಡರು. ರಾಜ್ಯದಲ್ಲಿ ಸಂತಸಪಡದ ಒಂದೂ ಮನೆ ಉಳಿದಿರಲಿಲ್ಲ. ಹಲವು ದಿನಗಳ ಒಂದು ಅವಧಿಯ ತನಕ ಈ ಸಂತಸ ಸಂಭ್ರಮ ನಡೆಯಿತು. ಜಹಾಂಪನಾ ಇದರ ನಂತರ ಮುಂದಿನ ಯುದ್ಧಕ್ಕಾಗಿ ಕಿಶ್ವರ್ ಖಾನ್ ಎಂಬ ಮುಖ್ಯ ಸರದಾರನೊಬ್ಬನ ನೇತೃತ್ವದಲ್ಲಿ ಬೃಹತ್ ಸೈನ್ಯವನ್ನು ಕಳುಹಿಸಿದ. ಈ ಸೈನ್ಯದಲ್ಲಿ ಐದಾರು ದೊಡ್ಡ ಸೇನಾನಿಗಳು, ಹೆಚ್ಚುಕಮ್ಮಿ ೨೦ ಸಾವಿರ ಕುದರೆ ಸವಾರರನ್ನೊಳಗೊಂಡ ಬೃಹತ್ ಸೇನೆ ತಿರುಮಲರಾಯನ ರಾಜ್ಯ ಪೆನುಗೊಂಡದ ಕೋಟೆಯನ್ನು ವಶಪಡಿಸಿಕೊಳ್ಳಲು ದಂಡಯಾತ್ರೆ ಕೈಗೊಂಡಿತು. ಈ ವಾರ್ತೆ ನಿಜಾಂ ಶಾಹ ನಿಗೆ ತಲಪಿತು. ಕುತುಬ್ ಶಾಹನಿಗೆ ಕೂಡ ತಿಳಿಯಿತು. ಒಬ್ಬ ದೂತನ ಮೂಲಕ ನಿಜಾಂ ಶಾಹ ಸಂದೇಶವನ್ನು ಕಳುಹಿಸಿದ. ಅದರಲ್ಲಿ 'ಈ ಅತ್ಯಂತ ವಿಸ್ತಾರವಾದ ಸಾಮ್ರಾಜ್ಯದೊಳಗೆ ಪೆನುಗೊಂಡ ಸೇರಲ್ಪಡಬಹುದು. ಜಹಾಂಪನಾ ಬೃಹತ್ ಸೇನೆಯನ್ನು ಕಳುಹಿಸಿಕೊಟ್ಟಿದ್ದಾರೆ. ತಿರುಮಲ್ ಮತ್ತು ಪೆನುಗೊಂಡ ಸೇರಿದರೆ ರಾಜ್ಯ ಮತ್ತಷ್ಟು ವಿಸ್ತಾರವಾಗಬಹುದು. ಇವರು ಇಲ್ಲಿ ಜಯಿಸಿದರೆ ನಾವು ಇವರ ಗುಲಾಮರಾಗ ಬೇಕಾಗಬಹುದು. ಈಗ ಅತ್ಯಂತ ಮುಖ್ಯವಾದ ವಿಚಾರವೆಂದರೆ ಇಂತಹ ಸಂದರ್ಭದಲ್ಲಿ ನಾವು ದೊಡ್ಡ ಸೈನ್ಯಕಟ್ಟಿಕೊಂಡು ಅವರ ರಾಜ್ಯದ ಮೇಲೆ ದಾಳಿ ನಡೆಸಬೇಕಾದದ್ದು ತೀವ್ರವಾದ ಅಗತ್ಯವಾಗಿದೆ. ಭಾಗ್ಯ ನಮ್ಮ ಜೊತೆಯಲ್ಲಿದ್ದರೆ ಆ ವಿಶಾಲ ರಾಜ್ಯ ನಮ್ಮ ಪಾಲಾಗಬಹುದು. ಹೀಗಾಗದಿದ್ದರೆ ಈ ಸೈನ್ಯ ಅವರ ಮುಂದೆ ಸೋಲೊಪ್ಪ ಬೇಕಾಗಬಹುದು. ಕೊನೆಯ ಪಕ್ಷ ಹೀಗೆ ಮಾಡಿದಲ್ಲಿ ಅವರ ಘನತೆ ಕುಗ್ಗಬಹುದು' ಎಂದು ಬರೆದಿದ್ದ. ಹೀಗೆ ಖುತುಬ್ ಶಾಹನ ಸಂದೇಶವನ್ನು ನಿಜಾಂ ಶಾಹ ಒಪ್ಪಿಕೊಂಡ. ಅಮಾದುಲ್ ಮುಲ್ಕನ ಸಹವರ್ತಿಯಾಗಿದ್ದ ತಫಾವುರ್ ಖಾನ್ ಕೂಡ ಈ ಉದ್ದೇಶಕ್ಕೆ ಒಪ್ಪಿಗೆಯನ್ನು ನೀಡಿ ಸೇರಿಕೊಂಡ.

**ನಿಜಾಂ ಶಾಹ, ಖುತುಬ್ ಶಾಹ, ಅಮಾದುಲ್ ಮುಲ್ಕ್ ಜೊತೆ ಸೇರಿದ ವಿವರಗಳು ಮತ್ತು ಜಹಾಂಪನಾರ ರಾಜ್ಯಕ್ಕೆ ಆಗಮನದ ವಿವರಗಳು:**

ಹಿಜರಿ ವರ್ಷ ೯೭೫ರಲ್ಲಿ ನಿಜಾಂ ಶಾಹ, ಖುತುಬ್ ಶಾಹ ಮತ್ತು ತುಫಾವುಲ್ ಖಾನನ ಮಗ ಜೊತೆಗೂಡಿ ಸೈನ್ಯವನ್ನು ಕಟ್ಟಿಕೊಂಡು ಜಹಾಂಪನಾರ ರಾಜ್ಯದ ಸರಹದ್ದಿಗೆ ಹೋದರು. ಜಹಾಂಪನಾ ತನ್ನ ಸೈನ್ಯವನ್ನು ಕಟ್ಟಿಕೊಂಡು ಅವರ ಸ್ವಾಗತಕ್ಕಾಗಿ ಹೋದರು. ಅಲ್ಲಿ ಷಾಹದುರ್ಗ ಕೋಟೆಯಲ್ಲಿ ತಂಗಿದರು. ಯಾಕೆಂದರೆ ಈ ಹಾದಿಯಲ್ಲಿ ಅವರ ಆಗಮನ ಅಲ್ಲಿಂದ ಜಹಾಂಪನಾರ ಸೈನ್ಯಕ್ಕೆ ತಿಳಿಯುವುದು ಸಾಧ್ಯವಾಗುತ್ತಿತ್ತು. ಅವರ ಸಲಹೆಕಾರರು ಕೂಡ ಇನ್ನೊಂದು ಬಳಸು ಹಾದಿ ಹಿಡಿದು ಬಿಜಾಪುರ ನಗರಕ್ಕೆ ಹೋದರು. ಈ ನಗರವು ಜಹಾಂಪನಾರ ಆಳ್ವಿಕೆಯಲ್ಲಿ ಅತ್ಯಂತ ವೈಭವವನ್ನು ಕಂಡಿತ್ತು. ನಾನು ಈ ಮುಂಚೆ ಈ ನಗರದ ಬಗ್ಗೆ ವಿವರವಾಗಿ ಬರೆದಿದ್ದೇನೆ.

ಜಹಾಂಪನಾ ಶಾಹದುರ್ಗದ ಕೋಟೆಯಲ್ಲಿ ತಂಗಿದ್ದು ಪಟ್ಟಣದ ನಾಲ್ಕೂದಿಕ್ಕಿನಲ್ಲಿ ಕಾವಲಿಗಾಗಿ ಸೈನ್ಯವನ್ನು ಕಳುಹಿಸಿ ರಕ್ಷಣೆಯ ವ್ಯವಸ್ಥೆ ಮಾಡಿದ್ದರು. ಅಲ್ಲಿಂದ ಎಲ್ಲ ಸೈನಿಕರನ್ನು ನಗರದ ರಕ್ಷಣೆಗಾಗಿ ನಾಲ್ಕೂ ದಿಕ್ಕಿಗೆ ಕಳುಹಿಸಿದರು. ಇನ್ನೊಂದು ಕಡೆ ಬಹಳ ಸಂಖ್ಯೆಯಲ್ಲಿ ವಿರೋಧಿಗಳು ನಗರದೊಳಗೆ ಪ್ರವೇಶಿಸತೊಡಗಿದರು. ನಗರದ ನಾಲ್ಕೂ ಕಡೆಯ ಕೋಟೆಯ ಗೋಡೆ, ಬಾಗಿಲುಗಳನ್ನು ಮುತ್ತಿಗೆ ಹಾಕಲು ಶುರುಮಾಡಿದರು. ಜಹಾಂಪನಾರ ಸೈನ್ಯಕ್ಕೆ ಸೇರಿದ ಆರು ಸರದಾರರು ಒಂದೊಂದು ಬಾಗಿಲಲ್ಲಿ ಮೂರು ಸೈನಿಕರಂತೆ ಜೀವದ ಹಂಗು ತೊರೆದು ರಕ್ಷಣೆಗಾಗಿ ನಿಂತರು. ಹೆಚ್ಚುಕಮ್ಮಿ ಆರು ಸಾವಿರ ಕುದುರೆಗಳನ್ನು ನಗರ ಮಧ್ಯೆ ನಿಲ್ಲಿಸಲಾಯಿತು. ವಿರೋಧಿಗಳ ಸೇನೆಯ ಒತ್ತಡ ಹೆಚ್ಚಿದಾಗ ಅವರನ್ನು ತಡೆದು ಎದುರಿಸುವವರಿಗೆ ಸಹಾಯ ಮಾಡಲು ಹೋಗಬೇಕೆಂದು ಆಜ್ಞೆಮಾಡಲಾಯಿತು. ಮೂರನೆಯ ದಿನ ರಮಜಾನ್ ಪವಿತ್ರ ತಿಂಗಳ ೨೫ನೇ ದಿನಾಂಕವಾಗಿತ್ತು. ಸೂರ್ಯನು ಆಗ ಸಿಂಹ ನಕ್ಷತ್ರದಲ್ಲಿ(ಬುರ್ಜುಲ್ ಅಸದ್) ನಿಂತಿದ್ದ ವಿಪರೀತ ಸೆಖೆಯ ಕಾಲವಾಗಿತ್ತು. ಮೂರು ಬಾದಶಾಹರ ಜಂಟಿ ಸೇನೆ ನಗರವನ್ನು ಆಕ್ರಮಿಸುವುದಕ್ಕೆ ಸವಾರಿಗಳ ಮೇಲೇರಿ ತಯಾರಾಯಿತು. ನಗರದ ಸ್ವಲ್ಪದೂರದಲ್ಲಿ ಸೇನೆ ನಿಂತು ಬಿಟ್ಟು, ನಗರ ಪ್ರವೇಶಕ್ಕೆ ಅನುಕೂಲಕರ ಸಮಯಕ್ಕಾಗಿ ಕಾಯುತ್ತಿತ್ತು. ಮೌಲಾನಾ ಇನಾಯತ್ ಎಂಬ ಜಹಾಂಪನಾರ ಆಸ್ಥಾನದ ಅಧಿಕೃತ ಅಧಿಕಾರಿಯು ಮುಖ್ಯ ಸರದಾರನಿಗೆ ಸಂಜ್ಞೆಮಾಡಿ ನಗರದ ಮಧ್ಯಭಾಗದಲ್ಲಿರುವ ಕಿಶ್ವರ್ ಖಾನನ ಮನೆಯ ಕಡೆ ಸ್ವಾಮಿನಿಷ್ಠ ಸೈನಿಕರನ್ನು ಜಮಾಯಿಸುವಂತೆ ಸೂಚಿಸಿದ. ಹೀಗೆ ಅವರ ಮೇಲಿನ ನಿಗಾ ಇಟ್ಟಿರುವ ಜೊತೆಗೆ ಕೋಟೆಯ ಮೇಲೆ ದೊಡ್ಡ ತೋಪನ್ನು ಇಟ್ಟು ತಯಾರಾಗಿರಿ ಎಂದು ಸೂಚಿಸಿ, ಇಲ್ಲಿಂದ ನೇರವಾಗಿ ವಿರೋಧಿಗಳ ಮೇಲೆ ದಾಳಿ ನಡೆಸ ಬೇಕೆಂದು ಆಜ್ಞಾಪಿಸಲಾಯಿತು.

ಒಂದು ಆನೆ ಮತ್ತು ಒಂದು ಕುದುರೆಯನ್ನು ನಗರದ 'ಸಾರ್‌ವಾರ್' ಎಂಬ ಹೆಸರಿನ ದ್ವಾರದಲ್ಲಿ ರಕ್ಷಣೆಗಾಗಿ ನಿಲ್ಲಿಸಿದರು.

ವಿರೋಧಿಗಳ ಸೇನೆ ನಗರದ ದಕ್ಷಿಣ ದಿಕ್ಕಿನಲ್ಲಿದ್ದ 'ಮಂಗಲಿ' ದ್ವಾರದ ಕಡೆ ಬರತೊಡಗಿತು. ಜಹಾಂಪನಾರ ಸೈನಿಕರಲ್ಲಿ ಕೆಲವರು ಕೋಟೆಯ ಹೊರಗಡೆ ವೈರಿಸೈನ್ಯದ ಚಲವಲನಗಳನ್ನು ವೀಕ್ಷಿಸಲು ಬಯಸಿದರು. ಈ ಸೈನಿಕರ ಪೈಕಿ ಓರ್ವ ಹಿಂದಯ್ಯ ಎಂಬ ಹೆಸರಿನ ಹಿಂದೂ ಅಮೀರನೂ(ಮುಖಂಡ) ಇದ್ದ. ಇವನ ಜೊತೆಯಲ್ಲಿ ಎರಡು ಸಾವಿರ ಕುದುರೆ ಸವಾರರ ಸೈನ್ಯವಿತ್ತು. ಅವನು ಮುನ್ನೂರು ಹವನ್ ತೆರಿಗೆ ನೀಡುತ್ತಿದ್ದ. ಇವನು ಮಧ್ಯೆ ಬಂದು ಯುದ್ಧವನ್ನು ತಡೆಯಲು ಸಮಜಾಯಿಸಿ ಮಾಡಿದ್ದ. ಆದರೆ ಹಾಗಾಗದೆ ಹೋದಾಗ, ಹಿಂದೂಗಳ ಸೈನ್ಯ ಹಿಂದಿನಿಂದ ದಾಳಿ ನಡೆಸಿ ಕುದುರೆಗಳನ್ನು ಮತ್ತು ಸೈನಿಕರನ್ನು ಸೆರೆಹಿಡಿದರು. ಉಳಿದ ಕುದುರೆ, ಆನೆಗಳನ್ನೂ ವಶಪಡಿಸಿಕೊಂಡರು. ಹೆಚ್ಚು ಕಮ್ಮಿ ಐದು ಮೈಲುಗಳ ತನಕದ ಈ ಸಂಪೂರ್ಣ ಪ್ರದೇಶ ಸೂರ್ಯನ ಬಿಸಿಲಿನ ತಾಪದಿಂದ ಉರಿದು ಹೋಗುವಂತೆ ಇತ್ತು. ಎಲ್ಲೂ ನೀರು ಕಂಡುಬರಲಿಲ್ಲ. ಅನೇಕ ಕುದುರೆಗಳು, ಆನೆಗಳು ಬಾಯಾರಿ ಸರಹದ್ದಿನ ಬಳಿ ಬರುವಾಗಲೇ ಸಾವಿಗೀಡಾದವು. ಸ್ವಲ್ಪದೂರದಲ್ಲಿ ಅಲ್ಲಾಪುರದ ಬಳಿ ಒಂದು ಕೊಳವಿತ್ತು. ಇವರು ಅಲ್ಲಿಗೆ ಹೋಗಿ ನೀರು ಕುಡಿದು ಸಾವರಿಸಿಕೊಳ್ಳಲು ಬಯಸಿದರು. ಆದರೆ ಕೋಟೆಯ ಅಲ್ಲಾಪುರದ ದ್ವಾರದಲ್ಲಿ ಖಾಮಿಲ್ ಖಾನ್, ನಸೀರುಲ್ ಮುಲ್ಕ್ ಮತ್ತು ಮೀರ್ ಮುಹಮ್ಮದ್ ಮುಖರ್ರಫ್ ಖಾನ್ ರಕ್ಷಣೆಗಾಗಿ ನಿಂತಿದ್ದರು. ಸೈನಿಕರು ನೀರನ್ನು ಅರಸುತ್ತ ಬಂದವರನ್ನು ಸೆರೆಹಿಡಿದು ಅವರ ಜೊತೆಗಿದ್ದ ಕುದುರೆಗಳು, ಆನೆಗಳನ್ನು ಹಿಡಿದಿಟ್ಟುಕೊಂಡರು.

ಜಹಾಂಪನಾರ ಸೈನಿಕರು ನಾಲ್ಕೂ ದಿಕ್ಕಿನಲ್ಲಿ ಹಬ್ಬಿದ್ದರು. ಅವರಿಗೀಗ ಯಾವ ಭಯವೂ ಇರಲಿಲ್ಲ. ಜಹಾಂಪನಾರಿಗೆ ಇಲ್ಲಿನ ಶಾಂತ ಪರಿಸ್ಥಿತಿಯ ಬಗ್ಗೆ ತಿಳಿಸಿ ಸಮಾಧಾನ ಮಾಡಿದರು. ವಿರೋಧಿಗಳ ಸರದಾರರ ಪೈಕಿ ಹಲವರನ್ನು ಕೊಂದು ಹಾಕಲಾಗಿತ್ತು. ಕೆಲವರನ್ನು ಸೆರೆಹಿಡಿಯಲಾಗಿತ್ತು. ಪೂರ್ವದಿಕ್ಕಿನಲ್ಲಿರುವ ದ್ವಾರದಲ್ಲಿ ದೊಡ್ಡರೀತಿಯಲ್ಲಿ ಯುದ್ಧ ಭೀಕರವಾಗಿ ಶುರುವಾಗಿತ್ತು. ತೂಫಾನಿನಲ್ಲಿ ಧೂಳು ಎದ್ದಂತೆ, ವಿರೋಧಿಗಳು ಯಾರು ಮತ್ತು ಬಾದಶಾಹರ ಕಡೆಯವರೆಂದು ಗುರುತಿಸಲಾರದಷ್ಟು ರಣರಂಗದಲ್ಲಿ ಅಲ್ಲೋಲಕಲ್ಲೋಲವಾಗಿತ್ತು. ಈ ಮಧ್ಯೆ ಕಿಶ್ವರ್ ಖಾನ್ ತಿರುಮಲದ ಕಡೆಯಿಂದ ೨೦ ಸಾವಿರ ಸೈನಿಕರನ್ನು ಜೊತೆಗೆ ಕರೆದುಕೊಂಡು ಬಂದು ಸೇರಿ ವೈರಿಗಳ ಸೇನೆಯನ್ನು ಸವರಿಹಾಕುತ್ತಾ ಸರ್ವನಾಶ ಮಾಡತೊಡಗಿದ. ನಿಜಾಂ ಶಾಹನ ಮಂತ್ರಿಗಳಲ್ಲೊಬ್ಬರಾದ ಮೌಲಾನಾ ಇನಾಯತ್‌ರು ಶೇರ್ ಜಾದ್ ಎಂಬ ಹೆಸರಿನ ಸರದಾರನ ಮೂಲಕ ಜಹಾಂಪನಾರಿಗೆ ತನ್ನ ಸೈನಿಕರನ್ನು ನಿಮಗಾಗಿ

ಕಳುಹಿಸುತ್ತೇನೆಂಬ ಆಶ್ವಾಸನೆಯನ್ನು ನೀಡುವ ಸಂದೇಶವನ್ನು ಸ್ವತಃ ತನ್ನ ಕುದುರೆಯನ್ನು ನೀಡಿ ಕಳುಹಿಸಿದ. ನಿಜಾಂ ಶಾಹನ ಖಜಾನೆಯ ಅಧಿಕಾರಿ ಜಮಾಲುದ್ದೀನ್ ಈ ಮಧ್ಯೆ ಪಿತೂರಿ ನಡೆಸಿದ ಆರೋಪದ ಮೇಲೆ ಬಂದಿಯಾಗಿದ್ದ. ನಿಜಾಂ ಶಾಹನ ಕುಟುಂಬದ ಹಿರಿಯ ಸ್ವಾಮಿನಿಷ್ಠ ನೌಕರನೆನಿಸಿದ್ದ ಕಾಮಿಲ್ ಖಾನ್ ಜಹಾಂಪನಾರ ಜೊತೆ ಸೇರಿದ್ದರಿಂದ ಅತ್ಯಂತ ಪ್ರಮುಖ ಹುದ್ದೆ ದೊರೆಯಿತು.

ನಿಜಾಂ ಶಾಹನ ಕಡೆಯಿಂದ ಬಂದಿಸಿದ್ದ ಸೈನಿಕ ಕೈದಿಗಳಿಗೆ ಜಹಾಂಪನಾರ ಕಡೆಯಿಂದ ಹಣ್ಣು ಹಂಪಲುಗಳನ್ನು ನೀಡಲಾಯಿತು. ಕಾಮಿಲ್ ಖಾನನಿಗೆ ಪ್ರಮುಖ ಹುದ್ದೆ ನೀಡಿದ್ದನ್ನು ಕಂಡು ಕಿಶ್ವರ್ ಖಾನ ಸಹಿಸದೆ, ಸಿಟ್ಟಾಗಿ ತನ್ನ ಸೈನಿಕರನ್ನು ಕರೆದುಕೊಂಡು ತನ್ನ ರಾಜ್ಯಕ್ಕೆ ಹಿಂತಿರುಗಿದ. ಯುದ್ಧ ನಿಂತ ಬಳಿಕ ಉಳಿದ ಬಾದಶಾಹರು ತಮ್ಮ ತಮ್ಮ ರಾಜ್ಯಕ್ಕೆ ಹಿಂತಿರುಗಿದರು. ಕಿಶ್ವರ್ ಖಾನ್, ಷಾ ಅಬುಲ್ ಹಸನನೊಂದಿಗೆ ಸೇರಿ ಜಹಾಂಪನರ ವಿರುದ್ಧ ಷಡ್ಯಂತ್ರ ರಚಿಸತೊಡಗಿದರು.

ಜಹಾಂಪನಾ ತಮ್ಮ ಪಾಡಿಗೆ ತಾವು ರಾಜಧಾನಿ ಬಿಜಾಪುರಕ್ಕೆ ಹೋಗಿ ತನ್ನ ಎಂದಿನ ರಾಜ್ಯಭಾರದ ಕೆಲಸ ಕಾರ್ಯಗಳಲ್ಲಿ ತೊಡಗಿದರು. ಆದರೆ ಅವರ ವೈರಿಗಳು ಸದಾ ಅವರ ವೈಭವದ ಆಳ್ವಿಕೆಯನ್ನು ನೋಡಿ ಸಹಿಸಲಾರದೆ ಹಾಳುಗೆಡವಲು ಷಡ್ಯಂತ್ರವನ್ನು ರಚಿಸುತ್ತಲೇ ಇದ್ದರು. ಈ ಮೂರು ಬಾದಶಾಹರು ಮತ್ತೆ ಒಂದಾಗಿ ದೊಡ್ಡದಾದ ಸೈನ್ಯವನ್ನು ಒಟ್ಟುಗೂಡಿಸಿ ಜಹಾಂಪನಾರ ರಾಜಧಾನಿ ಬಿಜಾಪುರದತ್ತ ದಂಡೆತ್ತಿ ಹೋದರು. ಜಹಾಂಪನಾರು ತಮ್ಮ ಹಿರಿಯ ಸರದಾರರನ್ನು ಕಿಶ್ವರ್ ಖಾನನ ನೇತೃತ್ವದಲ್ಲಿ ಈ ಸಮಸ್ಯೆಯನ್ನು ಸಂಪೂರ್ಣವಾಗಿ ಮುಕ್ತಾಯಗೊಳಿಸುವ ಉದ್ದೇಶದಲ್ಲಿ ಕಳುಹಿಸಿದ. ಆ ಸಮಯದಲ್ಲಿ ಹಸನಾಬಾದಿನ ಕೋಟೆಯು ಕಿಶ್ವರ್ ಖಾನನ ಅಧೀನದಲ್ಲಿತ್ತು. ಈ ಸಂದರ್ಭದಲ್ಲಿ ಅವನು ಯುದ್ಧದ ತಯಾರಿಯಲ್ಲಿ ತೊಡಗಿದ. ಇವರಿಬ್ಬರ ನಡುವೆ ಆಗಾಗ ಯುದ್ಧ ಆಗುತ್ತಲೇ ಇತ್ತು. ಎರಡೂ ಕಡೆಯಲ್ಲಿ ಜನಗಳು ಸಾಯುತ್ತಲೇ ಇದ್ದರು. ಒಮ್ಮೆ ಆತ ವೈರಿ ಸೈನ್ಯದ ಎದುರು ಹೋಗಿ ಕೋಟೆಯನ್ನು ಘೇರಾವ್ ಮಾಡಲು ಹವಣಿಸಿದ. ಕಿಶ್ವರ್ ಖಾನನನ್ನು ದ್ವೇಷಿಸುತ್ತಿದ್ದ ಜಹಾಂಪನಾನ ಸರದಾರರು ಅವನ ವಿರುದ್ಧಹೋರಾಡಲು ಯಾವಾಗಲೂ ಸಿದ್ಧವಾಗಿದ್ದರು. ಈಗ ಕಿಶ್ವರ್ ಖಾನ್ ಈ ಮೂರೂ ಬಾದಶಾಹರ ವಿರುದ್ಧ ಹೋರಾಡುವಷ್ಟು ಶಕ್ತಿವಂತನಾಗಿರಲಿಲ್ಲ. ಇದನ್ನೆಲ್ಲ ಪರಿಶೀಲಿಸಿದ ಕಿಶ್ವರ್ ಖಾನ್ ತನ್ನ ಕೋಟೆಯ ಒಳಗೆ ಹೋದ. ಬಾಕಿಯಿದ್ದ ಅವನ ಸೈನ್ಯದವರು ಕಂದಕದ ಒಳಗೆ ಹೋಗಿ ಅಡಗಿದರು. ಕೋಟೆಯಲ್ಲಿದ್ದವರಿಗೆ ಕೋಟೆಯ ಒಳಗಿರುವ ತೋಪುಗಳನ್ನು ಉಡಾಯಿಸದಿರಿ, ಬಾಣಗಳನ್ನು ಚಲಾಯಿಸದಿರಿ ಎಂದು ನಿರ್ದೇಶನ ನೀಡಿದ್ದ. ಆದರೆ ಇದನ್ನು ಮರೆತ ಸೈನಿಕರು ಕೋಟೆಯ ಮೇಲಿನ ತೋಪನ್ನು ಚಲಾಯಿಸಿದರು. ಇದರಿಂದಾಗಿ

ಯುದ್ಧ ಶುರುವಾಯಿತು. ರಾತ್ರಿಯಾದಾಗ ಅವರು ಅಲ್ಲಿಂದ ಹೊರಟುಬಿಟ್ಟಿದ್ದರು. ಕಿಶ್ವರ್ ಖಾನನ ಸೈನಿಕರು ದಿಕ್ಕುದೆಸೆ ಕಾಣದೆ ಚಲ್ಲಾಪಿಲ್ಲಿಯಾಗಿಬಿಟ್ಟರು. ಕಿಶ್ವರ್ ಖಾನ ಕೋಟೆಯ ಅಧಿಕಾರಿಯನ್ನು ಹಿಡಿದುಕೊಂಡ. ಜಹಾಂಪನಾರಿಗೆ ಈ ಸುದ್ದಿ ತಲಪಿದಾಗ ಕೂಡಲೇ ತಮ್ಮ ಸೈನ್ಯವನ್ನು ಇವರನ್ನು ಹೊಡೆದೋಡಿಸಲು ಕಳುಹಿಸಿದರು. ಇದರಿಂದಾಗಿ ವೈರಿಗಳಿಗೆ ಏನುಮಾಡಲು ಸಮಯಾವಕಾಶ ಸಿಗದಂತೆ ಕ್ಷಿಪ್ರಕಾರ್ಯಾಚರಣೆ ನಡೆಯಿತು. ಬೇರೆ ಯಾವ ದಾರಿಯೂ ಕಾಣದ ವೈರಿಗಳು ನಿರಾಶರಾಗಿ ತಮ್ಮ ರಾಜ್ಯವನ್ನು ಜಹಾಂಪನಾರಿಗೆ ಒಪ್ಪಿಸಿದರು.

**ದಗಾವೂರ್ ಎಂಬ ಹೆಸರಿನಲ್ಲೂ ಹೆಸರುವಾಸಿಯಾದ ಅಮಾದುರ್ಗ ಕೋಟೆಯನ್ನು ದುರಸ್ತಿಗೊಳಿಸಿದ್ದು ಮತ್ತು ಕಿಶ್ವರ್ ಖಾನ್ ಹತನಾದ ವಿವರಗಳು:**

ಜಹಾಂಪನಾರ ಸರದಾರರು, ಮಂತ್ರಿಗಳು, ಸೇನಾನಿಗಳು ಎಲ್ಲರೂ ಕಿಶ್ವರ್ ಖಾನನ ಮೇಲೆ ಆಸ್ಥಾನದಲ್ಲಿ ಆರೋಪಗಳ ದಾವೆ ಹೂಡಿದರು. ಕಿಶ್ವರ್ ಖಾನ್ ತನ್ನ ಮೇಲಿನ ಆರೋಪಗಳನ್ನು ಅಲ್ಲಗಳೆಯಲು ಜಹಾಂಪನಾರ ಮುಂದೆ ನಿಂತ. 'ನಿಜಾಂ ಶಾಹನ ಇಲಾಖೆಯಲ್ಲಿ ಒಂದು ಹಳೆಯ ಕೋಟೆಇದೆ, ಅಮ್ಮಾದುರ್ಗ ಎಂಬ ಹೆಸರಿನ ಕೋಟೆಯನ್ನು ನಿಮ್ಮ ಅನುಮತಿಯಿದ್ದರೆ ನಾನು ಗೆದ್ದುಕೊಂಡು ಅಭಿವೃದ್ಧಿಪಡಿಸಲು ಇಚ್ಛಿಸುತ್ತೇನೆ' ಎಂದ. ದರ್ಬಾರಿನಲ್ಲಿ ಹಾಜರಾಗಿದ್ದವರೆಲ್ಲರೂ ಅವನ ಮಾತನ್ನು ಕೇಳಿದರು. ಅವರಲ್ಲಿ ಕೆಲವರು ಒಪ್ಪಿಗೆ ನೀಡಿದರೆ ಹಲವರು ಸಾಧ್ಯವಿಲ್ಲವೆಂದರು. ಜಹಾಂಪನಾ ತಾನು( ಮುಸ್ಲಿಂ ಜೋತಿಷ್ಯ) ಕಲಾಮುಲ್ಲಾದಿಂದ ಅಭಿಪ್ರಾಯ ಕೇಳುತ್ತೇನೆ. ಅಲ್ಲಿ ಬಂದ ಸಂದೇಶದಂತೆ ಕ್ರಮ ಕೈಗೊಳ್ಳುತ್ತೇನೆ ಎಂದು ಹೇಳಿದರು.

ಮೌಲಾನಾ ಗಯಾಸುದ್ದೀನ್ ಮಕ್ಸೂದ್ ಶಿರಾಜಿಯವರು ಕೂಡ ಈ ದರ್ಬಾರಿನ ಸಭೆಯಲ್ಲಿ ಹಾಜರಿದ್ದರು. ಇವರಿಗೆ 'ಅಫ್ಜಲ್ ಖಾನ್' ಎಂಬ ಬಿರುದು ಸಿಕ್ಕಿತ್ತು. ಇವರು ಹಲವು ವಿದ್ಯೆಗಳ ಬಹುದೊಡ್ಡ ಜ್ಞಾನಿಯಾಗಿದ್ದರು. ಇವರು ಮತ್ತು ಈ ಗ್ರಂಥದ ಲೇಖಕನಾದ ನಾನು ಜೊತೆಯಾಗಿದ್ದೆವು. ಪರಸ್ಪರರನ್ನು ಬಲ್ಲೆವು. ಜಹಾಂಪನಾ ಸಭೆಯನ್ನುದ್ದೇಶಿಸಿ 'ನೋಡಿ ಕಿಶ್ವರ್ ಖಾನ್ ಇದಕ್ಕೆ ಏನು ಹೇಳುತ್ತಿದ್ದಾನೆಂದು ಕೇಳಿ' ಎಂದು ಅವನಿಗೆ ಮಾತಾಡಲು ಅವಕಾಶ ನೀಡಿದರು. ಕಿಶ್ವರ್ ಖಾನ ತನ್ನ ಅಭಿಪ್ರಾಯವೂ ಕಲಾಮುಲ್ಲಾದಿಂದ ಅಭಿಪ್ರಾಯ ಕೇಳುವುದು ಉತ್ತಮ ಎಂದಾಗಿದೆ ಎಂದು ಹೇಳಿದ. ಕಲಾಮುಲ್ಲಾ ಎಂಬ ಭವಿಷ್ಯ ಕೇಳುವ 'ಫಾಲ್' ಪುಸ್ತಕವನ್ನು ತೆರೆದರು. ಅದರಲ್ಲಿನ ಮೊದಲು ತೆರೆದ ಪುಟದಲ್ಲಿ 'ಆಯಾತೆ ಕಿತಾಲ್' (ಮರಣ ದಂಡನೆಗೆ ಸಂಬಂಧಿಸಿದ ವಾಕ್ಯ) ಮೂಡಿ ಬಂದು ಮರಣ ದಂಡನೆಯ ನೀಡದಿರಿ ಎಂಬ ಸಂದೇಶ ಕಂಡುಬಂತು. ಅಫ್ಜಲ್ ಖಾನ್ 'ಮರಣದಂಡನೆ ಸೂಕ್ತ

ಕ್ರಮವಲ್ಲವೆಂದು ಇದರಿಂದ ತಿಳಿದುಬರುತ್ತದೆ' ಎಂದು ಅಭಿಪ್ರಾಯಪಟ್ಟರು. ಇದರಿಂದ ಜಹಾಂಪನಾ ಅವನನ್ನು ಬಿಟ್ಟುಬಿಟ್ಟರು. ತನಗೆ ಸಿಕ್ಕಿದ ಬಿಡುಗಡೆಯ ಅವಕಾಶದಿಂದ ಉಲ್ಲಸಿತನಾದ ಕಿಶ್ವರ್ ಖಾನ್ ಅಮ್ಮಾದುರ್ಗಾಕ್ಕೆ ದಂಡೆತ್ತಿ ಹೋಗಿ ಕೋಟೆಯನ್ನು ವಶಪಡಿಸಿಕೊಂಡ. ಆ ಕೋಟೆಯನ್ನು ದುರಸ್ತಿಗೊಳಿಸಿ ಅದರ ರಕ್ಷಣೆಗೆ ಬೇಕಾದ ತೋಪುಗಳನ್ನು, ಶಸ್ತ್ರಾಸ್ತ್ರಗಳನ್ನು ಶೇಖರಿಸಿಟ್ಟುಕೊಂಡು ಸರ್ವ ಏರ್ಪಾಡುಗಳನ್ನು ಮಾಡಿದ. ಆ ಕಾಲದಲ್ಲಿ ಮಕರಾನ ಖಾನ್ ಎಂಬ ಚಾಲಾಕಿನ ಮತ್ತು ಕುತಂತ್ರಿ ದರೋಡೆಕೋರನೊಬ್ಬ ಈ ಕೋಟೆಯನ್ನು ಲೂಟಿ ಮಾಡಿದ್ದ. ಕೋಟೆಯೊಳಗೆ ಶೇಖರಿಸಿದ್ದ ೪೦,೦೦೦ ಬಳ್ಳ ಆಹಾರ ಧಾನ್ಯವನ್ನು ಅವನು ಲೂಟಿಮಾಡಿದ್ದ.

ಈ ಅವಧಿಯಲ್ಲಿ ನಿಜಾಂ ಶಾಹ ತನ್ನ ಸೇನೆಯನ್ನು ಮತ್ತೆ ಕಟ್ಟಿದ. ತುಫಾವುಲ್ ಖಾನ್, ಕುತುಬ್ ಶಾಹ ಮತ್ತು ನಿಜಾಂ ಶಾಹ, ಸೇರಿಕೊಂಡು ಜಹಾಂಪನಾರಿಗೆ ಒಂದು ಪತ್ರಬರೆದರು; 'ನಿಮ್ಮಲ್ಲಿ ಮನವಿಯೇನೆಂದರೆ ನಾವೀಗ ಮೂವರು ಬಾದಶಾಹರು ಮತ್ತೆ ಒಂದಾಗಿದ್ದೇವೆ. ಉಳಿದ ನಮ್ಮ ಸರದಾರರು ಸೇನಾನಿಗಳು ನಿಮ್ಮ ರಾಜ್ಯದಲ್ಲಿರುವವರನ್ನು ನಮ್ಮ ಒಕ್ಕೂಟಕ್ಕೆ ಬರಲು ಹೇಳುತ್ತಿದ್ದೇವೆ' ಎಂದು ಸಂದೇಶ ಕಳುಹಿಸಿದ್ದರು. ಅವರು ಹೇಳಿದ ಸರದಾರರಲ್ಲಿ ನೂರ್ ಖಾನ್, ಐನುಲ್ ಮುಲ್ಕ್ ಎಂಬ ಸೇನಾನಿಗಳು ಸೇರಿದ್ದರು. ಇವರು ಕಿಶ್ವರ್ ಖಾನನ ಸರದಾರಾಗಿ ಅವನ ಆಜ್ಞೆಗಳನ್ನು ಪಾಲಿಸುತ್ತಿದ್ದರು. ಅವನು ಸ್ವತಃ ಕೃಷ್ಣಾನದಿಯ ತೀರಕ್ಕೆ ಹೋದ.

ಯಾಕೆಂದರೆ ಜಹಾಂಪನಾರನ್ನು ನಾನು ಬೆಂಬಲಿಸಬೇಕು ಮತ್ತು ಅವರ ವಿರೋಧಿಗಳು ಸೋಲುವುದನ್ನು ನೋಡ ಬೇಕು ಎಂಬ ಇಚ್ಛೆಯನ್ನು ನಿಜಾಂ ಶಾಹ ವ್ಯಕ್ತಪಡಿಸಿದ್ದ. ಷಾ ಅಬುಲ್ ಹಸನ್ ಬಿನ್ ಷಾ ತಾಹಿರ್, ಕಿಶ್ವರ್ ಖಾನನನ್ನು ದ್ವೇಷಿಸುತ್ತಿದ್ದ ಮತ್ತು ನಿಜಾಂ ಶಾಹನನ್ನು ಗೌರವಿಸುತ್ತಿದ್ದನಲ್ಲದೆ ಎಲ್ಲ ಕಾರ್ಯಗಳಲ್ಲೂ ಅವನಿಗೆ ಪ್ರಥಮ ಪ್ರಾಶಸ್ತ್ಯ ನೀಡುತ್ತಿದ್ದ. ಆಸ್ಥಾನದ ಮಂತ್ರಿಗಳು, ಸರದಾರರ ಜೊತೆಗೆ ಮಾತ್ರ ಕೆಟ್ಟದಾಗಿ ನಡೆದುಕೊಳ್ಳುತ್ತಿದ್ದ. 'ನೀವು ಕಿಶ್ವರ್ ಖಾನನ ಸಹಾಯಕ್ಕೆ ಹೋಗುತ್ತಿದ್ದೀರಿ, ಆದರೆ ನಿಮ್ಮ ನಿಜಾಂ ಶಾಹರ ಅನೇಕ ಪ್ರದೇಶಗಳು ಅವನ ವಶದಲ್ಲಿವೆ. ಅವನು ಈ ಹಿಂದೆ ನಿಮ್ಮ ಇಲಾಖೆಗಳ ಪ್ರದೇಶಗಳನ್ನು ನಾಶಪಡಿಸಿದ್ದ. ಆದರೆ ನಿಜಾಂ ಶಾಹ ಈ ಯುದ್ಧ ಹೂಡುವುದಕ್ಕೆ ಸಾಕಷ್ಟು ಶಕ್ತಿಯನ್ನು ಹೊಂದಿಲ್ಲ. ನಾಚಿಕೆ ಮತ್ತು ಮರ್ಯಾದೆಯ ಕಾರಣಕ್ಕಾಗಿ ಯದ್ಧಕ್ಕೆ ಹೊರಡುತ್ತಿದ್ದಾನೆ' ಎಂದು ಹೇಳಿದ್ದ. ಜಹಾಂಪನಾರ ದರ್ಬಾರಿಗಳು ನಿಜಾಂ ಶಾಹನ ರಾಜ್ಯಕ್ಕೆ ಹೋಗುವುದಕ್ಕೆ ಅನುಮತಿ ನೀಡಿದರು. ಯಾಕೆಂದರೆ ಅಬುಲ್ ಹಸನ್ ಮಧ್ಯದಲ್ಲಿ ಎಷ್ಟೇ ಅಡೆತಡೆಗಳನ್ನೊಡ್ಡಿದರೂ ಜಹಾಂಪನಾ ಕಿಶ್ವರ್ ಖಾನನಿಗೆ ಸಹಾಯ ಮಾಡಲು ಇಚ್ಛಿಸಿದ್ದರು. ನಿಜಾಂ ಶಾಹ ಈ ಎಲ್ಲ ಸುದ್ದಿಗಳನ್ನು ತಿಳಿದ ಕೂಡಲೇ ಕಿಶ್ವರ್

ಖಾನನ ಆಳ್ವಿಕೆಯ ಪ್ರದೇಶದ ಮೇಲೆ ದಾಳಿನಡೆಸುವುದಕ್ಕೆ ತಯಾರಿ ಮಾಡತೊಡಗಿದ. ಒಂದು ದಿನವನ್ನು ನಿಶ್ಚಯಿಸಿ ದೊಡ್ಡರೀತಿಯಲ್ಲಿ ದಾಳಿ ನಡೆಸಿ ಕೋಟೆಯನ್ನು ವಶಪಡಿಸಿಕೊಂಡ. ಕಿಶ್ವರ್ ಖಾನ ಆ ದಿನ ಯುದ್ಧಕ್ಕೆ ತಯಾರಿ ಮಾಡಿಕೊಂಡಿದ್ದ. ತನ್ನ ಶಸ್ತ್ರಾಸ್ತ್ರಗಳನ್ನು ತೊಟ್ಟುಕೊಂಡು, ಕುದುರೆಯ ಮೇಲೆ ಹತ್ತಿ ಕೂರಲು ತಯಾರಾಗಿದ್ದಾಗ, ಓರ್ವ ವ್ಯಕ್ತಿ ಅವನ ಬಳಿ ಬಂದು ದಿವಾನೆ ಖ್ವಾಜಾ ಹಾಫಿಜ್ 'ಫಾಲ್' ಭವಿಷ್ಯ ನೋಡಿ ಹೊರಡಿರೆಂದು ಸೂಚಿಸಿದ. ಅವನು ಒಪ್ಪಿ ಫಾಲ್ ಬಿಡಿಸಿದಾಗ ಪುಸ್ತಕದ ಪುಟದಲ್ಲಿ ಈ ಪದ್ಯವಿತ್ತು:

**ಕಶೆ ಕೆ ತಾಜೆ ಮುರಸ್ಸಾ ಸಬಾಹ್ ದರ್ ಸರ್ ದಾಶ್ತ್**
**ನುಮಾ ಜೆಶಾಮ್ ವ ರಾಹತಶ್ತ್ ದೇರೆ ಸರ್ ದೀದಂ**

ರತ್ನ ಖಚಿತ ಕಿರೀಟವನ್ನು ಮುಂಜಾನೆ ತಲೆಗೇರಿಸಿದ
ಸಂಜೆ ನಿದ್ದೆ ಆವರಿಸಿದಾಗ ತಲೆಯಡಿಗಿರಿಸಿ ಮಲಗಿದ.

ಈ ಪದ್ಯದಲ್ಲಿ ಬಂದ ವಿಚಾರವನ್ನು ಕಡೆಗಣಿಸಿದ ಕಿಶ್ವರ್ ಖಾನ 'ದಿವಾನೆ ಹಾಫಿಜ್' ಪುಸ್ತಕವನ್ನು ಎತ್ತಿ ಒಗೆದು ಸೈನ್ಯವನ್ನು ಜೊತೆಗೆ ಕರೆದುಕೊಂಡು ವಿರೋಧಿ ಸೈನ್ಯವನ್ನು ಬೇಧಿಸಿ ವಿಪರೀತ ರೋಷದಿಂದ ರುಂಡಗಳನ್ನು ಚೆಂಡಾಡತೊಡಗಿದ. ಯುದ್ಧ ರಂಗೇರಿದಂತೆ ಜಹಾಂಪನಾರ ಸೈನ್ಯದಲ್ಲಿದ್ದ ಕಿಶ್ವರ್ ಖಾನನನ್ನು ದ್ವೇಷಿಸುತ್ತಿದ್ದ ಕೆಲವು ಸೇನಾನಿಗಳು ತಮ್ಮನ್ನು ಪ್ರತ್ಯೇಕಿಸಿಕೊಂಡರು. ಇವರ ಪೈಕಿ ಅಂಗೇಖಾನ್ ಎಂಬ ಸೇನಾನಿ ಬೇಕಂತಲೇ ಸೈನ್ಯ ನಡೆಯುತ್ತಿದ್ದ ಹಾದಿಯ ಭಾಗವನ್ನು ಕಡಿದು ಹಾಳುಗೆಡವಿದ. ಸೈನ್ಯ ಬೇರೊಂದು ಹಾದಿಯಲ್ಲಿ ನಡೆಯಬೇಕಾಯಿತು. ಕಿಶ್ವರ್ ಖಾನ್ ತನ್ನ ಸರದಾರರೊಂದಿಗೆ ಕೋಟೆಯ ಮುಖ್ಯದ್ವಾರದ ಬಳಿ ಬಂದ. ಅವನ ವಿರೋಧಿಗಳ ಸೈನ್ಯವನ್ನು ಹಿಂದಿಡುತ್ತಾ ಮುನ್ನಡೆದು ಒಮ್ಮೆಲೇ ಎರಗಿದ. ನಾಲ್ಕೂ ದಿಕ್ಕಿನಲ್ಲಿ ಒಂದೇ ಸವನೆ ದಾಳಿ ನಡೆಯಿತು. ಎಂದಿನ ದಾಳಿಗಿಂತ ಹೆಚ್ಚು ಬೇಗನೆ ವೈರಿಗಳನ್ನು ಸೋಲಿಸುವ ನಿಟ್ಟಿನಲ್ಲಿದ್ದ. ಈಗ ತನಗೆ ವಿಜಯ ಪ್ರಾಪ್ತಿ ಖಂಡಿತವೆಂದು ಅವನಿಗೆ ಅನಿಸತೊಡಗಿತು. ವೈರಿಗಳು ರಣರಂಗ ಬಿಟ್ಟು ಓಡಿಹೋಗುವ ಲಕ್ಷಣ ಕಂಡುಬಂತು.

ನಿಜಾಂ ಶಾಹನಿಗೆ ತನ್ನ ಕೆಲವು ದರ್ಬಾರಿನ ಅಧಿಕಾರಿಗಳು ಅಂಫಜ್ ಖಾನನ ಹಾದಿಯಲ್ಲಿ ಕೋಟೆಯ ಕಡೆ ಬರುತ್ತಿರುವ ಸುದ್ದಿ ಕೇಳಿ ಸಂತಸಗೊಂಡು ವೀರಾವೇಶದಿಂದ ಕಿಶ್ವರ್ ಖಾನನನ್ನು ಹೊಡೆದೋಡಿಸುತ್ತಾ ಹಿಂದಿನ ಬಾಗಿಲಿನ ಬಳಿ ತನಕ ತಲಪಿಸಿದ. ಕಿಶ್ವರ್ ಖಾನನಿಗೆ ಈಗ ವೈರಿಗಳು ಕೋಟೆಯ ಒಳಗೆ ಬಂದುಬಿಟ್ಟಿದ್ದಾರೆಂದು ತಿಳಿದುಬಂದು ಚಿಂತಿತನಾಗಿ ಕುದುರೆಯಿಂದ ಇಳಿದು ಓಡುತ್ತಾ

ಹೋಗುತ್ತಿದ್ದ. ಅವನ ಮೇಲೆ  ಮೂರುನಾಲ್ಕು ಬಾಣಗಳನ್ನು ನಿಜಾಂ ಶಾಹನ ಸೈನಿಕರು ಹಾರಿಸಿದರು. ಅದರಲ್ಲಿ ಒಂದು ಗುರಿತಪ್ಪಿತು. ಕೊನೆಯ ಬಾಣ ನಾಭಿಯ ಕೆಳಗೆ ನಾಟಿತು. ಕಿಶ್ವರ್ ಖಾನ್ ನೆಲಕ್ಕೆ ಬಿದ್ದುಬಿಟ್ಟ. ಅವನ ಸೈನಿಕರು ಎಲ್ಲೆಂದರಲ್ಲಿ ಓಡಿಹೋದರು. ಕಿಶ್ವರ್ ಖಾನನ ಶಿರಚ್ಛೇದ ಮಾಡಿ ನಿಜಾಂ ಶಾಹನ ಮುಂದೆ ಸೈನಿಕರು ತಂದಿಟ್ಟರು. 'ಇವನ ಶವವನ್ನು ಎತ್ತಿಕೊಂಡು ಹೋಗಿ ಸೈನಿಕ ಶಿಬಿರದಾಚೆಗೆ ದೂರ ಎಸೆದುಬಿಡಿ' ಎಂದು ನಿಜಾಂ ಶಾಹ ಹೇಳಿದ. ನಂತರ ತನ್ನ ಹೇಳಿಕೆಯನ್ನು ಬದಲಿಸಿದ ಅವನ ಆಜ್ಞೆಯಂತೆ ಕೋಟೆಯನ್ನು ಮೇಲ್ವಿಚಾರಕರಿಗೆ ಒಪ್ಪಿಸಲಾಯಿತು.

ನೂರ್ ಖಾನ್ ಮತ್ತು ಐನುಲ್ ಮುಲ್ಕ್ ಈ ಅತ್ಯಂತ ಭೀಕರ ಸುದ್ದಿಯನ್ನು ತಿಳಿದಾಗ ಓಡುತ್ತ ನಿಜಾಂ ಶಾಹನ ಬಳಿ ಹೋದರು. 'ಅವನ ಬದಲಿಗೆ ಶಿಕ್ಷೆಗೆ ನಾವು ತಯಾರಾಗಿದ್ದೇವೆ' ಎಂದು ಹೇಳಿದರು. ಆದರೆ ನಿಜಾಂ ಶಾಹ ಅವರನ್ನು ಅಲ್ಲಿಂದ ಓಡಿಸಿದ. ಯುದ್ಧ ಇನ್ನೂ ಹೆಚ್ಚು ಕಷ್ಟಕರವಾಯಿತು. ಕೊನೆಯಲ್ಲಿ ಐನುಲ್ ಮುಲ್ಕ್ ಕೊಲೆಯಾದ. ನೂರ್ ಖಾನನನ್ನು ಸೆರೆಹಿಡಿಯಲಾಯಿತು. ಅವರ ಸೈನ್ಯ ಚೆಲ್ಲಾಪಿಲ್ಲಿಯಾಗಿ ಓಡಿದರು. ಅಳಿದುಳಿದ ಸಾಮಾನುಗಳು, ಆನೆ, ಕುದುರೆಗಳು ಶಸ್ತ್ರಾಸ್ತ್ರಗಳು ನಿಜಾಂ ಶಾಹನ ವಶವಾಯಿತು. ಇವರ ಸೋತ ಸೈನ್ಯವನ್ನು ಬಂಧಿಸಲಾಯಿತು ಮತ್ತು ನಿಜಾಂ ಶಾಹನ ಬಳಿಗೆ ತರಲಾಯಿತು. ಅವನು ಈ ಸೈನಿಕರನ್ನು ಕ್ಷಮಿಸಿಬಿಟ್ಟ. ಈ ಬಂದಿಯಾದವರಲ್ಲಿ ಕಿಶ್ವರ್ ಖಾನನ ಹಬ್‌ಶಿ ಗುಲಾಮ ಯಾಕೂತ್ ಖಾನ ನಿಜಾಂ ಶಾಹನ ಮುಂದೆ ನಿಂತು ಕಿಶ್ವರ್ ಖಾನನ ಶವವನ್ನು ಕೇಳಿದ. ನಿಜಾಂ ಶಾಹ 'ಯಾಕೂತನಿಗೆ ಕಿಶ್ವರ್ ಖಾನನ ಶವವನ್ನು ಒಪ್ಪಿಸಿ ಬಿಡಿ' ಎಂದು ತನ್ನ ಅಧಿಕಾರಿಗಳಿಗೆ ಹೇಳಿದ. ಅವನು ಒಂದು ಶವಪಟ್ಟಿಗೆಯಲ್ಲಿಟ್ಟುಕೊಂಡು ಬಿಜಾಪುರ ನಗರಕ್ಕೆ ಹೋದ. ಅಲ್ಲಿ ನಗರದ ಮಧ್ಯೆ ಇರುವ ತೋಟದಲ್ಲಿ ಶವವನ್ನು ದಫನ ಮಾಡಿದ. ಜಹಾಂಪನಾರಿಗೆ ಈ ಎಲ್ಲ ಸುದ್ದಿಯು ವಿವರವಾಗಿ ತಿಳಿದಾಗ ಬಹಳ ನೊಂದುಕೊಂಡು 'ಮೌಲಾನಾ ಗಿಯಾಸುದ್ದೀನ್ ಶಿರಾಜಿಯವರು ಫಾಲ್ ನೋಡಿ ಕೊಲೆಯನ್ನು ತಡೆದು ಹೇಳಿದ ಹಾಗೆಯೇ ಎಲ್ಲವೂ ನಡೆದು ಹೋಯಿತು' ಎಂದು ಹೇಳಿದರು. ಮುಂದಿನ ಕ್ರಮಗಳನ್ನು ಕೈಗೊಳ್ಳುವ ಮೂಲಕ ಪರಿಸ್ಥಿತಿಯನ್ನು ಸುಧಾರಿಸುವ ಬಗ್ಗೆ ಯೋಚಿಸತೊಡಗಿದರು. ಖುತುಬ್ ಶಾಹನ ಮೇಲೆ ಯುದ್ಧಕ್ಕಾಗಿ ನಿಜಾಂ ಶಾಹ  ಕಾಲ್ಕೆರೆದು ನಿಂತಿದ್ದಾನೆಂದು ಈ ಮಧ್ಯೆ ಒಂದು ಸುದ್ದಿ ಕೇಳಿಬಂತು.

ನಿಜಾಂ ಶಾಹ ಆಗಮಿಸುವ ವರ್ತಮಾನ ತಿಳಿದ ಕೂಡಲೇ ಖುತುಬ್ ಶಾಹ ಗೋಲ್ಕೊಂಡಾದ ಕಡೆ ಸೈನಿಕ ಜಂಬೋ ಸವಾರಿಯಲ್ಲಿ ಪ್ರಯಾಣಿಸಿದ. ತನ್ನ ಸರಕು ಸಾಮಾನುಗಳು, ಸಂಪತ್ತುಗಳನ್ನು ಜೊತೆಗೆ ತನ್ನ ರಾಜ್ಯಕ್ಕೆ ಸಾಗಿಸಿ ಅಲ್ಲಿ ಗೋಲ್ಕೊಂಡಾದ ರಾಜ್ಯಭಾರ ಮಾಡಿಕೊಂಡು ವೈಭವದಿಂದ ಬಾಳಿ ಬದುಕಿದ.

**ಖ್ವಾಜಾ ಮೀರಗ್ ಜಂಘರ್ ಖಾನರ ಕಾಲದ ಚಿಕ್ಕ ಚರಿತ್ರೆ ಮತ್ತು ಬದುಕಿನ ವಿವರಗಳು:**

ಖ್ವಾಜಾ ಮೀರಗ್ ಜಂಘರ್ ಖಾನ್ ಓರ್ವ ಉತ್ತಮ ಗುಣ ನಡತೆಯ ಪ್ರಾಮಾಣಿಕ ವ್ಯಕ್ತಿಯಾಗಿದ್ದ. ಇವರು ಹುಟ್ಟಿದ್ದು ಇರಾನಿನ ಹೇರಾತಿನಲ್ಲಿ ಹುಟ್ಟಿ ಅಸ್ಫಹಾನಿನಲ್ಲಿ ದೈನಂದಿನ ಬದುಕಿಗಾಗಿ ನೌಕರಿಮಾಡುತ್ತಿದ್ದ. ಹಿಂದುಸ್ಥಾನಕ್ಕೆ ಭೇಟಿಕೊಡುವ ಇರಾದೆಯಿಂದ ಹೊರಟು ದಕ್ಷಿಣ ಭಾರತಕ್ಕೆ ತಲಪಿ ನಿಜಾಂ ಶಾಹನ ದರ್ಬಾರಿನಲ್ಲಿ ಕಾರಕೂನನಾಗಿದ್ದ. ಷಾ ತಾಹಿರ್‌ರ ಎಂಬ ಆಸ್ಥಾನದಲ್ಲಿರುವ ಓರ್ವ ಜ್ಞಾನಿ ಮತ್ತು ಬುದ್ಧಿವಂತ ವ್ಯಕ್ತಿಯಾದುದರಿಂದ ಅವರ ಸನಿಹದಲ್ಲಿ ಇರುತ್ತಿದ್ದ ಖ್ವಾಜ ಮೀರಗ್ ಅವರಿಂದ ಬಹಳ ವಿದ್ಯೆ ಬುದ್ಧಿಗಳನ್ನು ಪಡೆದುಕೊಂಡ. ನಿಜಾಂ ಶಾಹನ ರಾಜ್ಯದಲ್ಲಿ ಬಂಡಾಯದ ಅಲೆ ಏಳತೊಡಗಿತು. ಜನರಿಗೆ ತೊಂದರೆಯಾಗ ತೊಡಗಿ ಪ್ರಜೆಗಳು ಗುಳೆಯೆದ್ದು ಹೊರರಾಜ್ಯಗಳಿಗೆ ಉದ್ಯೋಗಾವಕಾಶ ಹುಡುಕಿಕೊಂಡು ಹೊರಟರು. ಕೆಲವರು ಜಹಾಂಪನಾರ ರಾಜ್ಯ ಬಿಜಾಪುರ ಸಂಸ್ಥಾನಕ್ಕೆ ಆಗಮಿಸಿದರು. ಇವರ ಪೈಕಿ ಖ್ವಾಜಾ ಮೀರಗ್ ಜಂಘರ್ ಖಾನ್ ಕೂಡ ಒಬ್ಬನಾಗಿದ್ದ. ಜಹಾಂಪನಾರ ರಾಜ್ಯದಲ್ಲಿ ಪ್ರಜೆಗಳು ಸುಖಶಾಂತಿನೆಲೆಸಿರುವುದರಿಂದ ಅವನಿಗೆ ಸಂತಸವಾಗಿತ್ತು. ಅವನ ಪ್ರಯತ್ನದ ಫಲವಾಗಿ ದರ್ಬಾರಿನಲ್ಲಿ ಒಂದು ಉತ್ತಮ ಉದ್ಯೋಗಿಯಾಗಿ ಸೇರಿಕೊಂಡ. ಈ ಕಾಲಘಟ್ಟದಲ್ಲಿ ಇರಾನಿನ ಖೊರಸಾನಿನಿಂದ ಮೌಲಾನಾ ಗಿಯಾಸುದ್ದೀನ್ ಮಕ್ಸೂದ್ ರಾಜ್ಯಕ್ಕೆ ಆಗಮಿಸಿದ್ದರು. ಅವರ ಜೊತೆಗೆ ಖೊರಸಾನಿನಿಂದ ಬಂದ ಕೆಲವು ಜನರ ತಂಡವೂ ಇತ್ತು. ಇವರನ್ನು ಶಿಷ್ಯರೆಂದು ಅವರು ಕರೆಯುತ್ತಿದ್ದರು. ಖ್ವಜಾ ಮೀರಗ್ ಜಂಘ್‌ಗೆ ಮೌಲಾನಾ ಗಿಯಾಸುದ್ದೀನ್‌ರ ಜೊತೆ ಒಡನಾಟ ತೊಡಗಿ ಅನ್ಯೋನ್ಯತೆ ಬೆಳೆಯಿತು. ಇವರಿಂದ ಮೌಲಾನಾ ಅಲಿ ಖೂಸ್ಜಿ ಬರೆದ ಫಾರಸಿ ಭಾಷೆಯ ಕೃತಿ 'ಇಲ್ಮೆ ಹಯ್ಯತ್' ಖಗೋಳಶಾಸ್ತ್ರದ ಜ್ಞಾನ ಪಡೆದು ಅದರಿಂದ ಆಕಾಶ, ನಕ್ಷತ್ರಗಳ ಚಲನೆಯ ಶಾಸ್ತ್ರವನ್ನು ಕಲಿತರು. ಲೇಖಕನಾದ ನಾನು ಕೂಡ ಹೀಗೆ ಅವರು ಅಭ್ಯಾಸಮಾಡುವಾಗ ಸೇರಿಕೊಂಡು ವ್ಯಾಸಂಗಮಾಡಿದ್ದೆ. ನಿಜಾಂ ಶಾಹನ ಆಳ್ವಿಕೆ ಕೊನೆಗೊಂಡಾಗ ಖ್ವಾಜಾ ಮೀರಗ್ ಅಹ್ಮದ್ ನಗರಕ್ಕೆ ಪ್ರಯಾಣಿಸಿದ. ಮೌಲಾ ಗಿಯಾಸುದ್ದೀನರ ಶಿಫಾರಸಿನ ಮೇರೆಗೆ ಮುರ್ತಜಾ ನಿಜಾಂ ಶಾಹನ ಆಸ್ಥಾನದಲ್ಲಿ ಉನ್ನತ ಅಧಿಕಾರಿಯಾಗಿ ನೇಮಿಸಲ್ಪಟ್ಟ. ಮುಂದೆ ತನ್ನ ಪರಿಶ್ರಮ ಮತ್ತು ಸಾಧನೆಯಿಂದ ಸುಲ್ತಾನನ ಕಾರ್ಯದರ್ಶಿ ಪದವಿ ಪಡೆದ. ಯಾರಾದರೂ ಅಧಿಕಾರಿಗಳು ರಾಜ್ಯದ ಅರ್ಥವ್ಯವಸ್ಥೆ ಮತ್ತು ಖಜಾನೆ ಸಂಬಂಧಿತ ವಿಷಯದಲ್ಲಿ ಅಪ್ರಾಮಾಣಿಕರಾಗಿರುವುದು ಗಮನಕ್ಕೆ ಬಂದರೆ ಅವರನ್ನು ಕೆಲಸದಿಂದ ವಜಾಗೊಳಿಸಿ ತನ್ನ ಕೈಯೊಳಗೆ ಇರಿಸಿಕೊಳ್ಳುತ್ತಿದ್ದ. ಮುಂದೆ 'ಜಂಘರ್ ಖಾನ್' ಎಂಬ ಬಿರುದು ಪಡೆದು ಮುಂದೆ ಸರದಾರನ ಸ್ಥಾನವನ್ನು ಪಡೆದು, ಸೈನ್ಯಕ್ಕೆ ಉತ್ತಮ ತರಬೇತಿಯ

ಅವಕಾಶಕೊಡಿಸಿ ಸೈನಿಕರಿಗೆ ಭಡ್ತಿ ನೀಡಿದ. ಹೀಗೆ ಸೈನ್ಯವನ್ನು ಸುಧಾರಿಸಿ, ಸಶಕ್ತಗೊಳಿಸಿ ತನ್ನ ಘನತೆ ಗೌರವವನ್ನು ಹೆಚ್ಚಿಸಿಕೊಂಡ. ನಿಜಾಂ ಶಾಹನ ಸೈನ್ಯವನ್ನು ಜಹಾಂಪನಾರ ರಾಜ್ಯದ ಮೇಲೆ ಆಕ್ರಮಣನಡೆಸಲು ಕಳುಹಿಸಿಕೊಡತೊಡಗಿದ. ಜಹಾಂಪನಾ ತನ್ನ ಬೃಹತ್ ಸೈನ್ಯವನ್ನು ತಯಾರಿಸಿ ನಿಜಾಂ ಶಾಹನ ಸೈನ್ಯವನ್ನು ಎದುರಿಸಲು ಮತ್ತೊಮ್ಮೆ ತಯಾರಿ ನಡೆಸಿದ. ಸೈನಿಕರಿಗೆ ಭಕ್ಷೀಸು ಕೊಡುವ ಮೂಲಕ ಖುಶಿಪಡಿಸತೊಡಗಿದ.

ನಿಜಾಂ ಶಾಹನ ಸಂಪೂರ್ಣ ಸೈನ್ಯ ಜಹಗೀರು ಸಂಪತ್ತಿನ ಮೋಹಕ್ಕೆ ಸಿಲುಕಿ ಅವನನ್ನು ತೊರೆದು ಜಹಾಂಪನಾರ ಸೇವೆಗೆ ಸೇರಿಕೊಂಡರು. ನಿಜಾಂ ಶಾಹನ ಸೈನ್ಯ ಸಂಪೂರ್ಣವಾಗಿ ಮುರಿದು ಬಿದ್ದದ್ದು ಕಂಡು ಜಂಘರ್ ಖಾನ ಪರಸ್ಪರ ರಾಜಿ ಸೂತ್ರಗಳನ್ನು ಮುಂದಿಟ್ಟು ನಾಚಿಕೊಂಡಂತೆ ನಟಿಸುತ್ತಾ ಜಹಾಂಪನಾರ ಮುಂದೆ ಹಾಜರಾದ. ಅವರ ಜೊತೆಗೆ ಮಾತುಕತೆಯ ಪ್ರಸ್ತಾಪವಿಟ್ಟ. ನಿಜಾಂ ಶಾಹ, ಅಮಾದುಲ್ ಮುಲ್ಕನ ಬಿರಾರ್ ಪ್ರಾಂತ್ಯವನ್ನು ತನಗೆ ನೀಡಬೇಕೆಂಬ ಶರ್ತವನ್ನಿಟ್ಟ. ಜಹಾಂಪನಾ ರಾಮರಾಜನ ರಾಜ್ಯವನ್ನು ಇಟ್ಟುಕೊಳ್ಳಬಹುದು ಎಂದೂ ಹೇಳಿದ.

ನಿಜಾಂ ಶಾಹ ಈ ಮಧ್ಯೆ 'ಬಿಲಂಜೆ ಪುರ'ಕ್ಕೆ ತನ್ನ ಸೈನ್ಯವನ್ನು ಕೊಂಡುಹೋಗಿ ಕೋಟೆಯನ್ನು ಆಕ್ರಮಿಸಿದ. ಇದರಿಂದ ಅಲ್ಲಿ ದಿನವೂ ಯುದ್ಧನಡೆಯುತ್ತಿತ್ತು. ಅಲ್ಲಿನ ಸೈನಿಕರು ತಫಾವುಲ್ ಖಾನನ ವರ್ತನೆಯಿಂದ ನೊಂದುಕೊಂಡಿದ್ದರು. ಈ ಕಾರಣದಿಂದ ಈ ಸೈನ್ಯ ತಮ್ಮ ಸೇನಾಧಿಪತಿ ಅಮಾದುಲ್ ಮುಲ್ಕನನ್ನು ಸೆರೆ ಹಿಡಿದು ತಮ್ಮ ರಾಜ್ಯದ ಆಸ್ಥಾನಕ್ಕೆ ನಡೆದರು. ಕೋಟೆಯ ರಕ್ಷಣೆಯ ಜವಾಬ್ದಾರಿ ತಫಾವುಲ್ ಖಾನನಿಗೆ ಒಪ್ಪಿಸಕೂಡದೆಂದು ಬಿನ್ನೈಸಿದರು. ಯಾಕೆಂದರೆ ಅವನಿಗೆ ಹೆಚ್ಚು ಅಧಿಕಾರವಿದ್ದುದರಿಂದ ನಿಜಾಂ ಶಾಹನೊಂದಿಗೆ ಸೇರಿ ರಾಜ್ಯಭಾರವನ್ನು ನಡೆಸುವುದಕ್ಕೆ ಮಾತುಕತೆ ನಡೆಸಿ ಒಪ್ಪಿಕೊಂಡಿದ್ದ. ಮುಂದೆ ಸ್ವಲ್ಪ ಸಮಯದ ನಂತರ ಸಂಪೂರ್ಣ ರಾಜ್ಯವನ್ನು ನಿಜಾಂ ಶಾಹನ ವಶಕ್ಕೆ ಒಪ್ಪಿಸಿದ. ತಫಾವುಲ್ ಖಾನ್ ಬಂಧಿಸಲ್ಪಟ್ಟ. ಅವನ ಕೆಟ್ಟ ನಡತೆಯಿಂದಾಗಿ ಎಲ್ಲವನ್ನೂ ಕಳಕೊಂಡ. ಅವನ ಸ್ಥಾನಕ್ಕೆ ಹೆಚ್ಚು ಬುದ್ಧಿವಂತನನ್ನು ನೇಮಿಸಲಾಯಿತು. 'ನೀನು ಸಂಪೂರ್ಣ ರಾಜ್ಯದ ಆಡಳಿತವನ್ನು ಚೆನ್ನಾಗಿ ನೋಡಿಕೊಳ್ಳಬೇಕು' ಎಂದು ಹೇಳಿ ಹೊಸ ಅಧಿಕಾರಿಗೆ ಒಪ್ಪಿಸಿದ. ಹೀಗೆ ಜಂಘರ್ ಖಾನನ ಪ್ರಯತ್ನದಿಂದ ಹಾಗೂ ಹೀಗೂ ಕೆಲಸದಲ್ಲಿ ಜಯಪ್ರಾಪ್ತಿಯಾಯಿತು. ಇವನು ದಿನೇದಿನೇ ಅಭಿವೃದ್ಧಿ ಹೊಂದಿದರಿಂದಾಗಿ ನೆರೆಹೊರೆಯ ಇತರ ರಾಜರು, ಬಾದಶಾಹರಿಗೆ ಇವನಿಂದ ಅಪಾಯವಿದೆಯೆಂದು ಅನಿಸತೊಡಗಿತು. ಬಾದಶಾಹರು, ಆಸ್ಥಾನಿಕರು ಇವನ ಬುದ್ಧಿವಂತಿಕೆಯ ಅಟ್ಟಹಾಸ ಕಂಡು ಭಯದಿಂದ ನಡುಗತೊಡಗಿದರು. ಅವನನ್ನು ಓಡಿಸುವುದಕ್ಕಾಗಿ ಯೋಜನೆಯನ್ನು ತಯಾರು ಮಾಡತೊಡಗಿದರು. ನಿಜಾಂ ಶಾಹನ ಸಲಹೆ ಮೇರೆಗೆ

ಖುತುಬ್ ಶಾಹ, ಹಕೀಮ್ ಮುಸ್ಸೈರಿ ಎಂಬ ಹೆಸರಿನ ವೈದ್ಯನ ಬಳಿ ಒಂದು ದಿನ ಭೇಟಿಯಾಗಲು ಹೋದ. ಈ ಹಕೀಮ್ ಮುಸ್ಸೈರಿ ನಿಜಾಂ ಶಾಹನ ಅರಮನೆಯಲ್ಲಿದ್ದು ಅವನ ಅತ್ಯಂತ ಆಪ್ತವಲಯಕ್ಕೆ ಸೇರಿದವನಾಗಿದ್ದ. ಇವರೆಲ್ಲ ಸೇರಿ ರಚಿಸಿದ ಷಡ್ಯಂತ್ರದಂತೆ, ಈತ ಒಂಭತ್ತು ಮಿಸ್ಕಾಲ್ ತೂಕದ ಅಫೀಮನ್ನು ಒಂದು ಗ್ಲಾಸು ಶರಬತ್ತಿನಲ್ಲಿ ಸೇರಿಸಿ ಜಂಘರ್ ಖಾನಾನಿಗೆ ಕುಡಿಸಿದನೆಂದು ಜನಪ್ರಸಿದ್ಧ ಸುದ್ದಿ ಇದೆ. ಇದರ ನಶೆಯಿಂದ ತನ್ನ ಸ್ವಯವನ್ನು ಕಳೆದುಕೊಂಡ ಅವನ ಮೇಲೆ ಉರಿಯುತ್ತಿರುವ ದೀಪ ಗುಚ್ಛವೊಂದು ಬೀಳಿಸಲಾಯಿತೆಂದೂ ಇಲ್ಲಿನ ಜನ ಹೇಳುತ್ತಾರೆ. ಅವನ ದೇಹವು ಗಾಯಗೊಂಡು ಅರ್ಧ ಸುಟ್ಟ ಅವಸ್ಥೆಯಲ್ಲಿ ಆತ ಅಸುನೀಗಿದ. ಅವನು ಜೀವಂತವಾಗಿರುತ್ತಿದ್ದರೆ ಸಂಪೂರ್ಣ ದಕ್ಷಿಣ ಭಾರತವನ್ನು ವಶಪಡಿಸಿಕೊಳ್ಳುತ್ತಿದ್ದ, ಸ್ವತಃ ಮೊಘಲ್ ಬಾದಶಾಹ ಅಕ್ಬರ ಕೂಡ ಎದುರುನಿಂತರೂ ತನ್ನ ಖಡ್ಗದಿಂದ ಶಿರಚ್ಛೇದ ಮಾಡಿಬಿಡುವಷ್ಟು ಶಕ್ತಿಶಾಲಿಯಾಗಿ ಬೆಳೆದಿದ್ದನೆಂದು ಜನರು ಮಾತಾಡಿಕೊಂಡಿದ್ದರು.

■

*

# ಅಧ್ಯಾಯ-೧೦

**ಹಂಪೆಯಿಂದ ಜಹಾಂಪನಾರ ಪೆನುಗೊಂಡ ಯಾತ್ರೆ ಹಾಗೂ ಅಲ್ಲಿನ ಕೋಟೆಯನ್ನು ವಶಪಡಿಸಿಕೊಂಡದ್ದು ಮತ್ತು ಅಲ್ಲಿನ ಹಿಂದೂ ರಾಜರ ವಿರೋಧದ ವಿವರ:**

ಜಹಾಂಪನಾ ಹಂಪಾನಗರಕ್ಕೆ ಭೇಟಿನೀಡಿದಾಗ ರಾಮರಾಜರಿಂದ ಜಹಗೀರು, ಇನಾಮನ್ನು ಪಡೆದ ಹಿಂದೂ ಪ್ರಮುಖರು ಅಲ್ಲಿದ್ದರು. ರಾಮರಾಜನು ತೀರಿಕೊಂಡ ನಂತರ ರಾಯಚೂರು, ಮುದಗಲ್, ತೋರಣಗಲ್, ಬಾದಾಮಿಯನ್ನು ಜಹಾಂಪನಾರಿಗೆ ಬಿಟ್ಟುಕೊಡಬೇಕೆಂದು ಕರಾರಾಗಿದ್ದಂತೆ ವಶಕ್ಕೆ ಒಪ್ಪಿಸಬೇಕಾಗಿತ್ತು.

ಜಹಾಂಪನಾರು ತಮಗೆ ಈ ಕಡೆಯ ಆಳ್ವಿಕೆಯ ಕಾರ್ಯವನ್ನು ನಡೆಸಲು ಕಷ್ಟಕರವಾಗಬಹುದೆಂಬ ಕಾರಣಕ್ಕೆ ವಶಪಡಿಸಿಕೊಂಡ ಪ್ರದೇಶವನ್ನು ಅಲ್ಲಿನ ಹಳೆಯ ಪಾಳೇಗಾರ ಹಿಂದೂ ರಾಜರಿಗೆ ಹಿಂದಕ್ಕೆ ನೀಡಿ ನಮ್ಮ ಸಹಾಯದ ಅಗತ್ಯ ಬಿದ್ದಾಗ ತಿಳಿಸಿದಲ್ಲಿ ಸಹಾಯ ಮಾಡಲಾಗುವುದು ಮತ್ತು ಅವರಿಗೆ ರಕ್ಷಣೆಯ ಆಶ್ವಾಸನೆಯನ್ನು ನೀಡಿದರು. ಯುದ್ಧ ನಡೆದಲ್ಲಿ ಬಾದಶಾಹರ ಸೈನ್ಯಕ್ಕೆ ನೀವೆಲ್ಲರೂ ವೈರಿಗಳನ್ನು ಎದುರಿಸುವುದಕ್ಕೆ ಸಹಕಾರ ನೀಡಬೇಕು ಎಂಬ ಕರಾರಿಗೆ ಒಪ್ಪಿಗೆಯನ್ನು ಪಡೆದರು. ಜೊತೆಗೆ ಸ್ವಲ್ಪ ಸೈನಿಕ ಶಸ್ತ್ರಾಸ್ತ್ರಗಳನ್ನು, ಕುದುರೆ, ಆನೆಗಳನ್ನು ನೀಡಿದರು. ಆದರೆ ಈ ಸವಲತ್ತನ್ನು ಅನುಭವಿಸುತ್ತ ಕೆಲವೇ ಸಮಯದಲ್ಲಿ ಈ ಹಿಂದೂ ತುಂಡರಸರ ತಲೆಯಲ್ಲಿ ಅಹಂಕಾರ ಹೊಕ್ಕಿಬಿಟ್ಟಿತ್ತು.

ಜಹಾಂಪನಾ ಇಲ್ಲಿಂದ ಹಿಂಪಾನಗರದತ್ತ ಪ್ರಯಾಣ ಬೆಳೆಸಿದರು. ಹಾದಿಯಲ್ಲಿ ಬರುವ ರಾಜ್ಯಗಳ ಪ್ರಜೆಗಳು, ಸೈನಿಕರು ಅದ್ದೂರಿಯ ಸ್ವಾಗತವನ್ನು ನೀಡಿದ್ದರು. ಅಲ್ಲಿನ ರಾಜರು, ಬಾದಶಾಹರು ತಮ್ಮ ದರ್ಬಾರಿಗಳು, ಮಂತ್ರಿಗಳೊಂದಿಗೆ ಸೈನ್ಯವನ್ನು ಸಿಂಗರಿಸಲಾದ ಉಡುಪಿನಲ್ಲಿ ಸಾಲಾಗಿ ನಿಲ್ಲಿಸಲಾಗಿತ್ತು. ಎಲ್ಲೆಲ್ಲಿ ಜಹಾಂಪನಾರ ಪ್ರಯಾಣ

ನಿಲ್ಲಿಸಿ ಆರಾಮಕ್ಕಾಗಿ ತಂಗಿದಾಗ ದೂರದಲ್ಲೇ ಅವರಿಗೆ ಬೇಕಾದ ರಾಜಯೋಗ್ಯ ಏರ್ಪಾಡುಗಳನ್ನು ಮಾಡಲಾಗುತ್ತಿತ್ತು. ಪೆನುಗೊಂಡದ ಕೋಟೆಯನ್ನು ವಶಪಡಿಸಿಕೊಳ್ಳಲು ಹೊರಟ ಈ ಸೈನ್ಯವು ದಾರಿಯುದ್ಧಕ್ಕೂ ಆತಿಥ್ಯ ಸ್ವೀಕರಿಸುತ್ತ ದಾರಿಸವೆಸಿದರು. ಪೆನುಗೊಂಡದ ಕೋಟೆಯನ್ನು ಮುತ್ತಿಗೆ ಹಾಕಿ, ಹಲವಾರು ದಿನಗಳ ತನಕ ಯುದ್ಧ ನಡೆಯಿತು. ಕೋಟೆಯೊಳಗಿನ ಜನರು ಹಲವಾರು ಬವಣೆಗಳನ್ನು ಎದುರಿಸಬೇಕಾಯಿತು. ಇದರಿಂದ ಈ ಜನರು ಶರಣಾಗತರಾಗುವುದು ಅನಿವಾರ್ಯವಾಯಿತು. ಇಲ್ಲಿನ ಹಿಂದೂ ರಾಜರು ಜಹಾಂಪನಾರೊಂದಿಗೆ ಶರಣಾಗತರಾಗಿ ತಮಗೆ ಕೆಲವು ಸವಲತ್ತುಗಳನ್ನು ನೀಡಬೇಕೆಂದು ಕೇಳಿಕೊಂಡರು. ಇವರು ಪ್ರಾಮಾಣಿಕರಾಗಿರದೆ ಒಳಗಿಂದೊಳಗೆ ದ್ವೇಷವನ್ನು ಬೆಳೆಸಿಕೊಂಡಿದ್ದರು. ಅಲ್ಲಿನ ಕೋಟೆಯ ಹಿಂದೂ ರಾಜ ಮತ್ತು ಬಳಗದವರು ಸೋತು ಹಿಮ್ಮೆಟ್ಟಿದವರು ಕೋಟೆಯ ಮುಖ್ಯದ್ವಾರದ ಬಳಿ ಸೇರಿದರು. ನೋಡನೋಡುತ್ತಿದ್ದಂತೆ ಇವರ ಒಂದು ಸಾವಿರ ಬಲಶಾಲಿ ಕುದುರೆ ಸವಾರರು ಧುತ್ತನೆ ಅಲ್ಲಿ ಕಾಣಿಸಿಕೊಂಡರು. ಇವರು ದಕ್ಷಿಣದಾದ್ಯಂತ ಬಹದ್ದೂರ ಸಿಪಾಯಿಗಳೆಂದು ಹೆಸರುವಾಸಿಗಳಾಗಿದ್ದರು. ಜಹಾಂಪನಾರಿಗೆ ಇವರ ಷಡ್ಯಂತ್ರ ಮತ್ತು ಸೈನಿಕರ ಬಲದ ಬಗ್ಗೆ ತಿಳಿದ ಕೂಡಲೇ ತನ್ನ ಸೈನ್ಯವನ್ನು ಹಿಂದಕ್ಕೆ ಸರಿಯಲು ಆಜ್ಞೆ ನೀಡಿದರು. ಜಹಾಂಪನಾ ಹಿಂದಕ್ಕೆ ಸರಿಯದಿರುತ್ತಿದ್ದರೆ ಈ ಸೈನ್ಯ ಮತ್ತು ಹಿಂದೂ ಅರಸರು ಯುದ್ಧಹೂಡಿ ಸರ್ವನಾಶ ಮಾಡುತ್ತಿದ್ದರು. ಸಮಯದ ಅಗತ್ಯವನ್ನು, ತೀವ್ರತೆಯನ್ನು ಅರಿತು ಮತ್ತು ಬುದ್ಧಿವಂತಿಕೆಯನ್ನು ಪ್ರದರ್ಶಿಸಿ ಈ ತೀರ್ಮಾನ ತೆಗೆದುಕೊಂಡು ಅಲ್ಲಿಂದ ಹಿಂತಿರುಗಿ ಗುಲ್ಬರ್ಗಾಕ್ಕೆ ಹೋಗಿ ಕೆಲವು ದಿನಗಳ ಆರಾಮ ಮಾಡಿದರು. ಮತ್ತೆ ಹೊಸ ತಯಾರಿಗಳನ್ನು ಮಾಡಿಕೊಂಡು ಬೆಂಗಳೂರು ಕಡೆ ಸೈನ್ಯದೊಂದಿಗೆ ಪ್ರಯಾಣ ಬೆಳೆಸಿದರು.

ಹಾದಿಯಲ್ಲಿ ತೋರಣಗಲ್ ಕೋಟೆ ಎದುರಾಯಿತು. ತೋರಣಗಲ್ ಕೋಟೆಯವರು ಜಹಾಂಪನಾರ ವಿರುದ್ಧ ಬಂಡಾಯವೆದ್ದಿದ್ದರಲ್ಲದೆ, ಅವರ ಆಪ್ತರನ್ನು ಕೊಂದು ಹಾಕಲು ಹೊಂಚುಹಾಕಿದ್ದರು. ಒಂದು ಕ್ಷಿಪ್ರ ಕಾರ್ಯಾಚರಣೆಯ ಮೂಲಕ ಕೋಟೆಯನ್ನು ಕೂಡಲೇ ಸುತ್ತುವರಿದು ವಶಪಡಿಸಿಕೊಂಡರು. ಇಲ್ಲಿನ ವೈರಿಗಳನ್ನು ಅಲ್ಲಿಂದ ಹೊರದಬ್ಬಿ ಮಣಿಸುವುದರಲ್ಲಿ ಯಶಸ್ವಿಯಾದರು. ಕೋಟೆಯನ್ನು ಖಾಲಿಮಾಡಿಸಿ ತಮ್ಮ ಕೈವಶಮಾಡಿಕೊಂಡರು. ಕೋಟೆಯ ರಸ್ತೆಯನ್ನು ಕೂಡ ತಮ್ಮ ವಶಕ್ಕೆ ತೆಗೆದುಕೊಂಡರು. ಇಲ್ಲಿಂದ ಬೆಂಗಳೂರಿಗೆ ಹೊರಟು, ಬೆಂಗಳೂರಿನ ತನಕ ಸೈನಿಕ ಕಾರ್ಯಾಚರಣೆಯನ್ನು ನಡೆಸಿದರು. ಇಲ್ಲಿ ದೊಡ್ಡ ಶಕ್ತಿಶಾಲಿ ಕೋಟೆಯೊಂದು ಸೈನಿಕರಿಂದ ತುಂಬಿ ಹೋಗಿತ್ತು. ಇವರು ಆಗಾಗ ಕೋಟೆಯಿಂದ

ಹೊರಬಂದು ತಮ್ಮ ಬಲವನ್ನು ಪ್ರದರ್ಶಿಸುವಂತೆ ಹೊರಗಿನವರೊಂದಿಗೆ ಜಗಳಾಡುತ್ತಿದ್ದರು. ಹಿಂದೂಗಳ ನಾಯಕರು ಕೂಡ ಜಹಾಂಪನಾರ ರಾಜ್ಯದ ಸರಹದ್ದಿನಲ್ಲಿ ನಿಂತಿದ್ದ ಸೈನ್ಯದ ಬಳಿ ಬಂದು ಗಲಾಟೆ ಮಾಡುತ್ತಿದ್ದರು. ಸೈನ್ಯಕ್ಕೆ ಸರಕು ಸಾಮಗ್ರಿಗಳನ್ನು ಸಾಗಿಸುವ ಹಾದಿಯಲ್ಲಿ ಅಡ್ಡಾದಿಡ್ಡಿ ನಿಂತು ತಡೆಯೊಡ್ಡುತ್ತಿದ್ದರು. ಆಗಾಗ ಸಾಮಾನುಗಳ ಲೂಟಿಯನ್ನು ಕೂಡ ಮಾಡುತ್ತಿದ್ದರು. ಇವರ ಈ ಪುಂಡಾಟ ಹೆಚ್ಚುತ್ತ ಹೋಗಿ, ಈ ಕೃತ್ಯಗಳ ಮೂಲಕ ತಮ್ಮನ್ನು ಅತ್ಯಂತ ಶೌರ್ಯವಂತರೆಂದು ಬೀಗಿಕೊಂಡಿದ್ದರು. ಹಿಂದೆ ಇವರೊಂದಿಗೆ ಇಂತಹ ಬದ್ಮಾಶಿ ಕೃತ್ಯಗಳನ್ನು ಮಾಡಕೂಡದೆಂದೂ, ಕಿರುಕುಳಗಳನ್ನು ನೀಡಕೂಡದೆಂದೂ ಕರಾರು ಮಾಡಿಕೊಳ್ಳಲಾಗಿತ್ತು. ಆದರೆ ಹಿಂದೂ ರಾಜನ ಸೈನಿಕರು ಮತ್ತು ಅಧಿಕಾರಿಗಳು ಈ ಕರಾರುಗಳನ್ನು ಮುರಿದಿದ್ದರು.

ಜಹಾಂಪನಾರ ಗಮನಕ್ಕೆ ಈ ಪರಿಸ್ಥಿತಿ ಬಂದಾಗ ಕೋಟೆಯ ನಾಲ್ಕೂ ದಿಕ್ಕಿನಲ್ಲಿ ಸುತ್ತುವರಿದು, ಹೆಚ್ಚಿನ ಸಂಖ್ಯೆಯಲ್ಲಿ ಸೈನಿಕರನ್ನು ಕೋಟೆಯ ಕಡೆ ಕಳುಹಿಸಿಕೊಡಿ ಎಂದು ಕೂಡಲೇ ಆಜ್ಞೆ ನೀಡಿದರು. ದಾರಿಯಲ್ಲಿ ಬುದ್ಧಿವಂತನಾದ ಕಾವಲು ಅಧಿಕಾರಿಯನ್ನು ನಿಲ್ಲಿಸಿರಿ, ಕೋಟೆಯನ್ನು ಹೆಚ್ಚು ದಿನಗಳ ಕಾಲ ಸುತ್ತುವರಿದು ದಿಗ್ಬಂಧನಗೊಳಿಸಿದರೆ ತನ್ನಷ್ಟಕ್ಕೆ ಅವರಿಗೆ ಬುದ್ಧಿ ನೆಟ್ಟಗಾಗುತ್ತದೆ ಎಂದೂ ತಿಳಿಸಿದರು. ಅವರ ಆಜ್ಞೆಯಂತೆ ಎಲ್ಲ ಕಾರ್ಯಗಳೂ ಜಾರಿಗೆ ಬಂದವು. ಕೋಟೆಯ ಜನರು ಸಂಕಷ್ಟಕ್ಕೊಳಗಾಗಿ ಒಂದು ದಿನ ತನ್ನಷ್ಟಕ್ಕೆ ಕೋಟೆಯನ್ನು ಖಾಲಿಮಾಡಿದರು. ಜಹಾಂಪನಾ ಕೋಟೆಯ ಒಳಗೆ ಹೋಗಿ ಅಲ್ಲಿನ ಪ್ರದೇಶವನ್ನು ಸ್ವಚ್ಛಗೊಳಿಸುವ ಮತ್ತು ದುರಸ್ತಿಗೊಳಿಸಲು ಏರ್ಪಾಡು ಮಾಡಿದರು. ಈ ಕೋಟೆ ಬಹಳ ವಿಸ್ತಾರವಾಗಿ, ಬಹುದೊಡ್ಡ ಶಕ್ತಿಶಾಲಿಯಾಗಿ ಕಟ್ಟಿಸಲಾಗಿದೆ. ಈ ಕೋಟೆಯ ವ್ಯಾಪ್ತಿಯಲ್ಲಿರುವ ಮನೆಗಳು ಹಿಂದೂ ಪರಂಪರೆಯ ವಾಸ್ತು ಪ್ರಕಾರ ಕಟ್ಟಲಾಗಿತ್ತು. ಬೆಂಗಳೂರಿನ ಈ ಕೋಟೆಯನ್ನು ಹಿಜರಿ ವರ್ಷದ ೯೭೪ ರಮಜಾನ್ ತಿಂಗಳ ೧೬ನೇ ದಿನ (ಮುಂದೆ ಶಿರಾಜಿ ತನ್ನ ಟಿಪ್ಪಣಿ ಸೂಚಿಯಲ್ಲಿ ಈ ಇಸವಿಯನ್ನು ಬದಲಾಯಿಸಿ ಹಿಜರಿ ವರ್ಷ ಸನ್ ೯೭೫ರ ರಮಜಾನ್ ತಿಂಗಳ ಆರನೇ ದಿನಾಂಕದಂದು ಈ ಕೋಟೆಯನ್ನು ವಶಪಡಿಸಿಕೊಳ್ಳಲಾಗಿತ್ತೆಂದು ಬರೆದಿದ್ದಾನೆ). ಲೇಖಕ ಈ ಸಂದರ್ಭದಲ್ಲಿ ಬರೆಯುತ್ತಾನೆ– ಬೆಂಗಳೂರಿನ ಕೋಟೆಯನ್ನು ಜಹಾಂಪನಾರು ವಶಪಡಿಸಿಕೊಂಡ ಹದಿನೈದು ದಿನಗಳ ನಂತರದಲ್ಲಿ ನನ್ನನ್ನು ಆಪ್ತ ಸಹಚರನೆಂದು ನೇಮಿಸಲಾಯಿತು. ಕೆಲವು ದಿನಗಳ ನಂತರ ಖಾನ್ ಸಾಲಾರ್(ಸರದಾರ) ಎಂದು ಭಡ್ತಿ ನೀಡಲಾಯಿತು. ಕೆಲ ವರ್ಷಗಳ ನಂತರ ಜಹಾಂಪನಾರ ಖಜಾನೆಯ ಕಾವಲು, ಬೇಗಮರು ಇರುವ ಜನಾನಾದ ಕಟ್ಟಡದ ಉಸ್ತುವಾರಿ, ಅರಮನೆಯ ಶೃಂಗಾರ, ಗೃಹಲಂಕಾರದ ಜವಾಬ್ದಾರಿಯ ಕೆಲಸವನ್ನು ನನಗೆ ಒಪ್ಪಿಸಲಾಯಿತು. ಈ ಘಟನೆಯ ಹಿನ್ನೆಲೆಯಲ್ಲಿ ನೋಡಿದಾಗ

ನನ್ನ ಅಭಿಪ್ರಾಯ ಪ್ರಕಾರ ಬೆಂಗಳೂರಿನ ಕೋಟೆಯನ್ನು ಹಿಜರಿ ವರ್ಷ ೯೭೨ರಲ್ಲಿ ವಶಪಡಿಸಿಕೊಂಡಿದ್ದರೆಂದಾಗಿದೆ. ಈ ಹಿಜರಿವರ್ಷವು ಈ ಪದ್ಯ(ಬೈತ್)ದಲ್ಲಿ ಅಡಕವಾಗಿದೆ:

**ಸಾಲ್ ಎ ತಾರೀಖ್ ಖಿಲಯೇ ಸಾಲಿಸ್ ಜಸ್ತಂ**

ಮೂರನೆಯ ಕೋಟೆಯ ವಿಜಯ ದಿನದ ವರ್ಷವಿದು(೯೭೨)

ಜಹಾಂಪನಾರು ಸಂಪೂರ್ಣ ವೈಭವ ಪೂರ್ಣ ಮೆರವಣಿಗೆಯೊಂದಿಗೆ ಇಲ್ಲಿಂದ ರಾಜಧಾನಿ ಬಿಜಾಪುರಕ್ಕೆ ತೆರಳಿದರು. ಬಿಜಾಪುರವನ್ನು ಸಜ್ಜುಗೊಳಿಸುವ, ಸಿಂಗರಿಸುವ ಮತ್ತು ಅಭಿವೃದ್ಧಿಗೊಳಿಸುವ ಕೆಲಸ ಕಾರ್ಯದಲ್ಲಿ ಮಗ್ನರಾದರು. ಯಾಕೆಂದರೆ ಈ ನಗರದ ನಾಲ್ಕೂ ದಿಕ್ಕಿನಲ್ಲಿ ದಟ್ಟವಾದ ಕಾಡುಗಳಿದ್ದು ಅನೇಕ ಗುಡ್ಡ, ಪರ್ವತಗಳೂ ಆವರಿಸಿದ್ದವು. ಎತ್ತರ ಪರ್ವತದ ಸಾಲುಗಳೂ ಆವರಿಸಿದ್ದವು. ಬಹಳಷ್ಟು ಸೇನೆ ಇಲ್ಲಿ ಇರುತ್ತಿತ್ತು. ಜಹಾಂಪನಾರ ಆಸ್ಥಾನದ ಪ್ರದೇಶವೂ ಕೂಡ ವಿಶಾಲವಾಗಿತ್ತು. ಎರಡು ಸಾರಿ ರಾಜ್ಯದ ಸೈನ್ಯ ರಾಜಧಾನಿಯಲ್ಲಿ ಈ ಕಾರ್ಯಾಚರಣೆಯಲ್ಲಿ ಕೆಲವು ಗುಡಿ ದೇವಾಲಯಗಳನ್ನು ಮತ್ತು ಹಲವು ಮೂರ್ತಿಗಳನ್ನು ನಾಶಪಡಿಸಲಾಯಿತು. ಯಾಕೆಂದರೆ ಹಿಂದಿನ ರಾಜರ ಕಾಲದಲ್ಲಿ ಹಿಂದೂ ಅರಸರು ಮುಅಜ್ಜಿನ್, ಇಮಾಂ, ಮೌಲವಿಗಳು ನಮಾಜ್ ಮಾಡುತ್ತಿದ್ದ ಮತ್ತು ಕುರಾನ್ ಕಲಿಸುವ ಪಾಠಶಾಲೆಗಳು ಇದ್ದಂತಹ ಇಲ್ಲಿನ ಅನೇಕ ಮಸೀದಿಗಳನ್ನು ಒಡೆದು ನಾಶಪಡಿಸಿದ್ದರು. ಇಲ್ಲಿನ ಆಳ್ವಿಕೆ ಮುಸ್ಲಿಮರ ಕೈಗೆ ಬಂದ ಕೂಡಲೇ ಮತ್ತೆ ಹಿಂದಿನಂತೆ ಮಸೀದಿಗಳನ್ನು ಕಟ್ಟಿಸಿದರು.

**ಸುಬ್ಹಾನ್ ಖುಲಿ ಕುತುಬ್ ಷಾ ಮತ್ತು ಅವನ ಮಕ್ಕಳ ಬದುಕಿನ ಕೆಲವು ವಿವರಗಳು**

ಇವನು ಇರಾನಿನ ಹಮ್ದಾನ್ ನಗರದ ಶ್ರೀಮಂತ ಕುಟುಂಬದಲ್ಲಿ ಜನಿಸಿದ್ದ. ಶೌರ್ಯದಲ್ಲಿ ಇವನ ಹಾಗೆ ಬಲಶಾಲಿ ಯಾರೂ ಇರಲಿಲ್ಲ. ಖುಲಿ ಕುತುಬ್ ಷಾನಿಗೆ ಶಿಕಾರಿಯ ಬಹಳ ಶೋಕಿಯಿತ್ತು. ತನ್ನ ಬದುಕಿನ ಹೆಚ್ಚು ಸಮಯವನ್ನು ಶಿಕಾರಿ ಮಾಡುವುದರಲ್ಲಿ ಕಳೆಯುತ್ತಿದ್ದ. ತನಗೆ ಎದುರಾದ ತಕ್‌ದೀರಿನ(ಭಾಗ್ಯ ಚಕ್ರದ) ಚಲನೆಯಲ್ಲಿ ಸಿಲುಕಿ ತನ್ನ ಕುಟುಂಬದವರನ್ನು, ಸಂಪತ್ತನ್ನು ತೊರೆದು ಪ್ರವಾಹಕ್ಕೆ ಸಿಲುಕಿದಂತೆ ಹಿಂದುಸ್ಥಾನಕ್ಕೆ ಬಂದು ತಲಪಿದ. ಅವನ ನಸೀಬು ಅವನನ್ನು ಬೀದರ್ ನಗರಕ್ಕೆ ತಂದು ಒಪ್ಪಿಸಿತು. ಆಗ ಸುಲ್ತಾನ್ ಮಹಮೂದ್ ಷಾ ಬಹಮನಿಯ ಆಳ್ವಿಕೆಗೆ ಬೀದರ್ ಒಳಪಟ್ಟಿತ್ತು. ಖುಲಿ ಕುತುಬ್ ಷಾನನ್ನು ನೋಡಿದಾಗ ಈತನೊಬ್ಬ ಸುಂದರ ವ್ಯಕ್ತಿತ್ವ ಹೊಂದಿದವನಾಗಿದ್ದು, ಶಕ್ತಿಶಾಲಿ ಆಕರ್ಷಕ ಮೈಕಟ್ಟಿನ ವ್ಯಕ್ತಿಯಾಗಿದ್ದ. ಇವನನ್ನು ತನ್ನ ಅಂಗರಕ್ಷಕನನ್ನಾಗಿ ನೇಮಕಮಾಡಿಕೊಂಡ. ಇವನ ಗುಣ ನಡತೆಗಳು ಸುಲ್ತಾನನಿಗೆ ಬಹು ಮೆಚ್ಚಿಗೆಯಾಯಿತು. ಅವನನ್ನು ಈ ಕಾರಣಕ್ಕಾಗಿ ಉನ್ನತ

ಸ್ಥಾನದಲ್ಲಿ ಅವಕಾಶನೀಡಿದ. ಈ ಸಂದರ್ಭದಲ್ಲಿ ಶಿಕಾರಿಯ ಹವ್ಯಾಸವನ್ನು ಸಂಪೂರ್ಣವಾಗಿ ಖುಲಿ ಕುತುಬ್ ಷಾ ತೊರೆದುಬಿಟ್ಟಿದ್ದ. ಅವನ ಶಿಕಾರಿಯ ಸಾಮಾನು, ಶಸ್ತ್ರಾಸ್ತ್ರಗಳನ್ನು ಸುಲ್ತಾನನ ಅಧಿಕಾರಿಗಳ ವಶಕ್ಕೆ ಒಪ್ಪಿಸಿದ್ದ. ಸುಲ್ತಾನನ ಸೇವೆಯಲ್ಲಿ ತೊಡಗಿಕೊಂಡ ನಂತರ ಸುಲ್ತಾನರ ಮಕ್ಕಳ ಜೊತೆಯೂ ಅನ್ಯೋನ್ಯತೆಯನ್ನು ಬೆಳೆಸಿಕೊಂಡಿದ್ದ. ಈ ಕಾಲವು ಯೂಸುಫ್ ಆದಿಲ್ ಖಾನ್ ತೆಲಂಗಾಣ ಪ್ರದೇಶ ಮತ್ತು ಅಲ್ಲಿನ ಕೋಟೆಗಳನ್ನು ಚಾಲಾಕಿನ ಬದ್ಮಾಶ್ ಕಳ್ಳ, ದರೋಡೆಕೋರರ ವಶದಿಂದ ಬಿಡಿಸಿ ತನ್ನ ಆಳ್ವಿಕೆಯನ್ನು ಶುರುಮಾಡಿದ್ದರು. ಸುಲ್ತಾನ್ ಮಹಮೂದ್ ಷಾ ಬಹಮನಿ ಮತ್ತು ಆಡಳಿತಗಾರರು, ಅಧಿಕಾರಿಗಳು ಯೂಸೂಫ್ ಆದಿಲ್ ಖಾನನನ್ನು ದ್ವೇಷಿಸುತ್ತಿದ್ದರು. ಒಮ್ಮೆ ಈ ಆಡಳಿತಗಾರರು ಸುಲ್ತಾನನೊಂದಿಗೆ ಯೂಸೂಫ್ ಆದಿಲ್ ಖಾನನ ಸೈನ್ಯ ಇಲ್ಲಿಗೆ ಆಕ್ರಮಣ ನಡೆಸುವ ಸಾಧ್ಯತೆಯಿದೆ ಎಂದು ಎಚ್ಚರಿಸಿದ್ದರು. ಅವನಿಗೆ ಈ ಅವಕಾಶ ದೊರೆಯುವ ಮುಂಚೆನೇ ಅವನನ್ನು ಓಡಿಸಿಬಿಡುವುದು ಉತ್ತಮವೆಂದು ಅವರು ಸುಲ್ತಾನನಿಗೆ ಸಲಹೆಯನ್ನು ನೀಡಿದ್ದರು. ಖುಲಿ ಕುತುಬ್ ಷಾನನ್ನು ಅವನ ಬಳಿಗೆ ಕಳುಹಿಸುವುದು ಉತ್ತಮವೆಂದು ದರ್ಬಾರಿಗಳು ಸಲಹೆಯನ್ನು ನೀಡಿದರು. ಈ ಸಲಹೆಯ ಬಗ್ಗೆ ಚರ್ಚಿಸಲು ಇಬ್ಬರು ಸೇವಕರನ್ನು ಖುಲಿ ಕುತುಬ್ ಷಾನ ಬಳಿಗೆ ಕಳುಹಿಸಲಾಯಿತು. ಸುಬ್ಹಾನ್ ಖುಲಿ ಇವರ ಸಲಹೆಯನ್ನು ಒಪ್ಪಿದ. ಸುಬ್ಹಾನ್ ಖುಲಿಯ ನೇತೃತ್ವದಲ್ಲಿ ಸೇನೆಯೊಂದು ಹೊರಟು ತೆಲಂಗಾಣದಲ್ಲಿ ಯೂಸುಫ್ ಆದಿಲ್ ಖಾನ್ ವಶಪಡಿಸಿಕೊಂಡಿದ್ದ ಕಳ್ಳ ದರೋಡೆಕೋರರ ಕೋಟೆಯನ್ನು ಸುತ್ತುವರಿದು ಮರುವಶಪಡಿಸಿಕೊಂಡ. ಅಲ್ಲಿ ಸಿಕ್ಕ ಸಾಮಾನು, ಸರಕುಗಳನ್ನು ಸುಲ್ತಾನನ ಬಳಿಗೆ ಕಳುಹಿಸಿಕೊಟ್ಟ.

ಈ ವಿಜಯಯಾತ್ರೆಯ ಬಳಿಕ ಸುಲ್ತಾನ ಇವನ ಪ್ರಾಮಾಣಿಕತೆ ಮತ್ತು ಸತ್ಯಸಂಧತೆಯನ್ನು ಪರಿಗಣಿಸಿ ಸಾಕಷ್ಟು ಉಡುಗೊರೆ, ಕಾಣಿಕೆಗಳನ್ನು ನೀಡಿ ಗೌರವಿಸಿದ. ಹೀಗೆ ಅವನ ಸ್ಥಾನವು ಮೇಲಿಂದ ಮೇಲೆ ಉನ್ನತವಾಗುತ್ತ ಹೋಯಿತು. ಆದಿಲ್ ಖಾನನಿಂದ ಗೆದ್ದ ತೆಲಂಗಾಣ ಪ್ರದೇಶವು ಮಹಮೂದ್ ಷಾ ಬಹಮನಿಯ ರಾಜ್ಯಕ್ಕೆ ಸೇರಿತು. ಗುಲ್ಬರ್ಗಾ, ಸಾಗರ, ರಾಯಗಢ ಪ್ರದೇಶಗಳು ರಾಜ್ಯದಲ್ಲಿ ಸೇರ್ಪಡೆಗೊಂಡಿದ್ದವು. ಸುಲ್ತಾನ್ ಮಹಮೂದ್ ಷಾ ಬಹಮನಿಯ ಮರಣಾನಂತರ ಆಸ್ಥಾನದ ಕೆಲಸಕಾರ್ಯಗಳಲ್ಲಿ ತೊಂದರೆಯಾಗತೊಡಗಿತು. ಸುಲ್ತಾನನ ಸಿಂಹಾಸನದಲ್ಲಿ ಸುಲ್ತಾನ್ ಅಹ್ಮದನನ್ನು ಕೂರಿಸಲಾಯಿತು. ಇವನ ನಂತರ ಸುಲ್ತಾನ್ ಅಲಾವುದ್ದೀನ ಆಳಿದ. ಇವನ ನಂತರ ವಲೀಯುಲ್ಲಾ  ನಂತರ ಕಲೀಮುಲ್ಲಾ ಸುಲ್ತಾನ ಪದವಿಯನ್ನು ಅಲಂಕರಿಸಿದರು. ಈ ನಾಲ್ಕು ಸುಲ್ತಾನರೂ ಎರಡು ಮೂರು ವರ್ಷಗಳು ಮಾತ್ರ ಸಿಂಹಾಸನವನ್ನು ಅಲಂಕರಿಸಿದ್ದರು. ಇವರಿಗೆ ಯಾವ ಅಧಿಕಾರವೂ ಇರದಿದ್ದುದರಿಂದ

ಖಾಸಿಂ ಬರೀದ್ ಆಡಳಿತವನ್ನು ನೋಡಿಕೊಳ್ಳುತ್ತಿದ್ದ. ಇವನು ಬಹಳ ದೊಡ್ಡ ವ್ಯಕ್ತಿಯಾಗಿ ಬೆಳೆದ. ಆಸ್ಥಾನದ ದರ್ಬಾರಿಗಳ ಮಧ್ಯೆ ತಿಕ್ಕಾಟ ನಡೆಯುತ್ತಿತ್ತು. ಉದಯಗಿರಿ ಕೋಟೆಯನ್ನು ಖುತುಬುಲ್ ಮಲಿಕ್ ವಶಪಡಿಸಿಕೊಳ್ಳಲು ಬಯಸಿದ್ದ. ಈ ಕಾರ್ಯಕ್ಕಾಗಿ ಅವನು ತನ್ನ ಸೈನ್ಯವನ್ನು ಅಲ್ಲಿಗೆ ಕಳುಹಿಸಿಕೊಟ್ಟಿದ್ದ. ಸ್ವತಃ ತಾನು ಕೂಡ ಈ ಸೈನ್ಯದ ಜೊತೆಗೆ ಶಾಮೀಲಾಗಿದ್ದ. ಆ ಕಾಲದಲ್ಲಿ ದರ್ಬಾರಿಯಾಗಿದ್ದ ಮೌಲಾನ ಮಹಮೂದ್ ಅವನಿಗೆ ಸಲಾಮ್ ಸಲ್ಲಿಸಿದ. ಕುತುಬ್ ಷಾ ಇವರನ್ನು ಕರೆದು 'ಫಾಲ್ ಕಿತಾಬ್ ತೆರೆದು ನೋಡಿ, ಯಾರ ಹೆಸರಲ್ಲಿ ಈ ಕೋಟೆಯ ವಿಜಯ ಬರೆದಿದೆ?' ಎಂದು ಹೇಳಿದ. ನೀವು ಪ್ರಯಾಣಕ್ಕೆ ಹೊರಟುಬಿಟ್ಟಿದ್ದೀರಿ, ಎಂದಾದರೆ ಫಾಲ್ ಭವಿಷ್ಯ ನೋಡಿ ಏನುಪಯೋಗವೆಂದು ಮೌಲಾನಾ ಹೇಳಿದರು. ಮೊದಲು ನಿಮ್ಮ ಮೇಲೆ ವಿಶ್ವಾಸವಿಡಿ, ಮತ್ತೆ ಮುಂದುವರಿಯಿರಿ. ಕುತುಬುಲ್ ಮಲಿಕ್ ಇದರಿಂದ ಸಿಟ್ಟಾಗಿ, 'ನಾನು ನಿನ್ನನ್ನು ಈ ಕೆಲಸಕ್ಕಾಗಿ ಇಟ್ಟಿದ್ದೇನೇನು?' ಮೌಲಾನಾರನ್ನು ಕೇಳಿದ. ಮೌಲಾನಾ ಇದನ್ನು ಕಂಡು ಭಯಭೀತರಾಗಿದ್ದರು. 'ಹೇಳಿದಷ್ಟು ಮಾಡುವುದು ನಿಮ್ಮ ಕರ್ತವ್ಯ. ಹೇಳಿದಂತೆ ನೀವು ಫಾಲ್ ಕಿತಾಬನ್ನು ನೋಡಿ' ಎಂದೂ ಮೌಲಾನರನ್ನುದ್ದೇಶಿಸಿ ಹೇಳಿದ. ಮೌಲಾನಾರು ಅವರ ಮಾತು ಕೇಳಿ ಭಯದಿಂದ ನಡುಗುತ್ತ ಒಂದು ನಾಲ್ಕು ಗರೆಗಳನ್ನು (ದಾಯರಾ) ಚೌಕಾಕಾರದಲ್ಲಿ, ಅಡ್ಡ ನೀಟಾಗಿ ಎಳೆದು ಅದನ್ನು ನೋಡಿ 'ಜೀವಕ್ಕೆ ಸಂಬಂಧಿಸಿದ ಮೊದಲನೆಯ ಚೌಕದಲ್ಲಿ ನೋಡುವಾಗ ಅಪಶಕುನ ಕಾಣಿಸುತ್ತಿದೆ. ಆದರೆ ಒಂಭತ್ತನೆಯ ಚೌಕೋನದಲ್ಲಿ ಶುಭವಿದೆ. ನೀವು ಈ ಶಕುನದಂತೆ ಪ್ರಯಾಣಿಸ ಬಹುದಾಗಿದೆ' ಎಂದು ಹೇಳಿದರು. ನಿಮ್ಮ ಚೌಕೋನ ಹತ್ತನೆಯದರಲ್ಲಿದೆ. ಅದು ಈಗ ನಹಸ್ ಅನಿಷ್ಟಕಾರಕವಾ್ಗಿದೆ. ಆಶಾದಾಯಕವೆನಿಸಿದ ಹನ್ನೊಂದನೆಯ ಚೌಕೋನದಲ್ಲಿ ಯಾವ ಶುಭಸೂಚನೆಯೂ ಕಂಡುಬರುತ್ತಿಲ್ಲ. ಹನ್ನೆರಡನೆಯ ಚೌಕೋನದಲ್ಲಿ ನಿಮ್ಮ ದುಷ್ಮನ್ ಗಟ್ಟಿಯಾಗಿ ಕೂತುಬಿಟ್ಟಿದ್ದಾನೆ' ಎಂದು ಭವಿಷ್ಯ ನುಡಿದರು.

ಈ ದಾಯರಾ ಭವಿಷ್ಯವನ್ನು ತದೇಕಚಿತ್ತದಿಂದ ನೋಡಿ, ಅದರ ಫಲಗಳನ್ನು ಓದಿ ಕೇಳಿದ ಬಳಿಕ ಕುತುಬ್ ಶಾಹನಿಗೆ ಮೌಲಾನಾ ಮಹಮೂದರು ನೀಡಿದ ಹೇಳಿಕೆ ಕೇಳಿ ಇದರಲ್ಲಿ ಸತ್ಯ ಇರಬೇಕೆಂದುಕೊಳ್ಳುತ್ತಲೇ ಒಂದುರೀತಿಯ ಚಡಪಡಿಕೆ ಉಂಟಾಯಿತು. ಕುತುಬ್ ಶಾಹ ಕುತೂಹಲ ತಡೆಯಲಾರದೆ 'ಇವೆಲ್ಲ ನಿಮ್ಮ ಮಾತುಗಳು ಒಗಟಾಗಿ ಕಾಣಿಸುತ್ತಿದೆ. ವಿವರವಾಗಿ ಬಿಡಿಸಿ ನಮಗೆ ಅರ್ಥವಾಗುವಂತೆ ಹೇಳಿ' ಎಂದು ಒತ್ತಾಯಿಸಿದ. ಇದನ್ನು ಕೇಳಿದ ಮೌಲಾನಾರು "ಈ ಪ್ರಯಾಣವನ್ನು ತಡೆಯುವುದು ಉತ್ತಮ" ಎಂದರು. ಕುತುಬ್ ಶಾಹ "ಇದರ ಬಗ್ಗೆ ಕೂಡ ನನಗೆ ವಿಷದವಾಗಿ ತಿಳಿಯ ಬೇಕಾಗಿದೆ" ಎಂದು ಒತ್ತಾಯಿಸಿದ. "ಇದಕ್ಕೆ ಉತ್ತರವನ್ನು

ನನ್ನ ನಾಲಗೆಯು ಹೇಳಲು ಇಷ್ಟಪಡುತ್ತಿಲ್ಲ. ನಾನು ಹೇಳದಿದ್ದಲ್ಲಿ ಏನೋ ಸಬೂಬು ಹುಡುಕುತ್ತಿದ್ದಾನೆಂದು ನೀವು ಹೇಳಬಹುದು. ಈ ಕಾರಣಕ್ಕಾಗಿ ಹೇಳಿಯೇ ಬಿಡುತ್ತೇನೆ. ವಿಷಯವೇನೆಂದರೆ ನಿನ್ನ ಸೈನ್ಯಕ್ಕೆ ಯಾರದೋ ಕೆಟ್ಟದೃಷ್ಟಿ ಬಿದ್ದಿದೆ. ಯುದ್ಧ ನಡೆದಲ್ಲಿ ನಿನ್ನ ಒಂದು ಕೈಯನ್ನು ವೈರಿಗಳು ಕತ್ತರಿಸಿಹಾಕಲಿದ್ದಾರೆ" ಎಂದು ಮೌಲಾನಾ ಹೇಳಿದರು. ಮಾತು ಕೇಳಿದ ಕುತುಬುಲ್ ಮಲಿಕ್ ಸಿಟ್ಟಾಗಿ 'ನಿನ್ನ ನಾಲಗೆಯನ್ನು ಕತ್ತರಿಸ ಬೇಕು' ಎನ್ನುತ್ತ ಕತ್ತಿಹಿರಿದು ಮೌಲಾನಾರ ಮೇಲ್ದುಟಿಯನ್ನು ಕತ್ತರಿಸಿ ಹಾಕಿದ. ಪಾಪ ಅಸಹಾಯಕ ಮೌಲಾನಾ ನೋವನ್ನು ಸಹಿಸಿಕೊಳ್ಳುತ್ತ ತನ್ನ ವೈದ್ಯರನ್ನು ಕಾಣಲು ಹೋದ. ಕುತುಬುಲ್ ಮುಲ್ಕ್ ಕುದುರೆ ಹತ್ತಿ ಸೈನ್ಯವನ್ನು ನಡೆಸಿಕೊಂಡು ಉದಯಗಿರಿ ಕೋಟೆಯ ಮೇಲೆ ಆಕ್ರಮಣ ನಡೆಸಲು ನಡೆದ.

ಇಸ್ಮಾಯಿಲ್ ಆದಿಲ್ ಖಾನನಿಗೆ ಕುತುಬುಲ್ ಮಲಿಕ್ ಸೈನ್ಯದೊಂದಿಗೆ ದಂಡೆತ್ತಿ ಬರುತ್ತಿದ್ದಾನೆಂಬ ವಾರ್ತೆ ತಿಳಿದಾಗ ಕ್ಷಿಪ್ರಗತಿಯಲ್ಲಿ ಅವನಿಗಿಂತ ಹೆಚ್ಚು ಬಲವಾದ ಸೈನ್ಯವನ್ನು ಕಟ್ಟಿಕೊಂಡು ಉದಯಗಿರಿಯ ರಕ್ಷಣೆಗಾಗಿ ಹೊರಟ. ಅವರಿಬ್ಬರ ನಡುವೆ ಅತ್ಯಂತ ಭೀಕರ ಯುದ್ಧ ನಡೆಯಿತು. ಬಾಣಗಳ ಮಳೆ ಸುರಿಯಿತು. ಈ ಮಧ್ಯೆ ಇಸ್ಮಾಯಿಲ್ ಆದಿಲ್ ಖಾನನ ಸೈನಿಕನೊಬ್ಬ ಗುರಿಯಿಟ್ಟು ಎಸೆದ ಬಾಣ ಮೌಲಾನಾ ಹೇಳಿದಂತೆ ಕುತುಬುಲ್ ಮುಲ್ಕನ ತೋಳನ್ನು ಕತ್ತರಿಸಿ ಹಾಕಿತು. ಕುತುಬುಲ್ ಮಲಿಕ್ ಮುಖಮುಚ್ಚಿಕೊಂಡು ಅಲ್ಲಿಂದ ಯುದ್ಧರಂಗದಿಂದ ಹಿಂತಿರುಗಿ ತನ್ನ ರಾಜ್ಯ ಗೋಲ್ಕೊಂಡಕ್ಕೆ ಹೋದ. ಅವನ ಸಂಪೂರ್ಣ ಸೈನ್ಯ ಚೆಲ್ಲಾಪಿಲ್ಲಿಯಾಗಿ ರಣರಂಗಬಿಟ್ಟು ಓಡಿ ಹೋಯಿತು. ಅವನ ಸೈನ್ಯಕ್ಕೆ ಯಾರದೋ ಕೆಟ್ಟಕಣ್ಣು ತಾಗಿದಂತೆ ಸೋಲಿನಿಂದ ಬಸವಳಿದು ಜೊತೆಗೆ ತಂದಿದ್ದ ಸಾಮಾನು ಸರಕುಗಳು, ಶಸ್ತ್ರಾಸ್ತ್ರಗಳು, ಸಂಪತ್ತನ್ನು ಬಿಟ್ಟು ಹೋಗಿದ್ದರು. ಇಸ್ಮಾಯಿಲ್ ಆದಿಲ್ ಖಾನ್ ವಿಜಯಶಾಲಿಯಾಗಿ ಮುಂದಿನ ಕಾರ್ಯದಲ್ಲಿ ಮಗ್ನನಾದ. ಕುತುಬುಲ್ ಮುಲ್ಕ್ ತನ್ನ ರಾಜಧಾನಿಗೆ ಹಿಂತಿರುಗಿದಾಗ ಮೊದಲು ಮೌಲಾನಾ ಮಹಮೂದರನ್ನು ತನ್ನ ಬಳಿ ಕರೆದುಕೊಂಡು ಅವನಿಂದ ಕ್ಷಮೆಯಾಚಿಸಿದ. ಅವನ ಔಷಧೋಪಚಾರವನ್ನು ನೋಡಿಕೊಂಡು ಹರಿದ ತುಟಿಯನ್ನು ಸರಿಪಡಿಸುವುದಕ್ಕಾಗಿ ಕ್ರಮವನ್ನು ಕೈಗೊಂಡ. ಮೌಲಾನ ಮಹಮೂದ ತನ್ನ ಮುಖವನ್ನು ಮುಚ್ಚಿಕೊಂಡು ದರ್ಬಾರಿನಲ್ಲಿ ಪರದೆಯ ಹಿಂದೆ ಕೂತು ತನ್ನ ಕೆಲಸವನ್ನು ಮಾಡುತ್ತಿದ್ದ. ಹೀಗೆ ಕುತುಬುಲ್ ಮುಲ್ಕನ ಬದುಕು ತನ್ನ ಗೋಲ್ಕೊಂಡ ನಗರದಲ್ಲಿ ಕಳೆಯಿತು. ಅವನಿಗೆ ಇಬ್ಬರು ಗಂಡು ಮಕ್ಕಳಿದ್ದರು. ಒಬ್ಬನ ಹೆಸರು ಜಮ್ಶೇದ್ ಖುಲಿ, ಇನ್ನೊಬ್ಬನದು ಇಬ್ರಾಹಿಂ ಖುಲಿ ಎಂದಾಗಿತ್ತು. ಜಮ್ಶೇದ್ ಖುಲಿಗೆ ಸುಲ್ತಾನನಾಗಿ ರಾಜ್ಯಭಾರ ಮಾಡುವ ಹುಚ್ಚು ತಲೆಗೇರಿತ್ತು.

ಒಮ್ಮೆ ಅವನು ಅರಮನೆಯ ಅಪ್ಪನ ಅಂತಃಪುರದ ಸೇವಕನನ್ನು ಪುಸಲಾಯಿಸಿ

ಅವನಿಗೆ ಸಂಪತ್ತು ನೀಡುವ ಆಸೆಹುಟ್ಟಿಸಿ ಬುಟ್ಟಿಗೆ ಹಾಕಿಕೊಂಡು ಅಪ್ಪನನ್ನು ಕೊಲ್ಲುವ ಸಂಚು ಹೂಡಿದ. ಎಂದಿನಂತೆ ಕುತುಬುಲ್ ಮುಲ್ಕ್ ಆಸ್ಥಾನದ ಕೆಲಸಗಳನ್ನು ಮುಗಿಸಿ ಬಟ್ಟೆ ಬದಲಾಯಿಸಲು ಅಂತಃಪುರದ ಕೋಣೆಯನ್ನು ಪ್ರವೇಶಿಸಿದಾಗ ಸೇವಕ ಅವನನ್ನು ಹಿಂಬಾಲಿಸಿ ಬಂದು ತನ್ನಲ್ಲಿ ಅಡಗಿಸಿಟ್ಟುಕೊಂಡಿದ್ದ ಚೂರಿಯಿಂದ ಇರಿದ. ಈ ಕೆಲಸದ ನಂತರ ಜಮ್ಶೆದ್ ಖುಲಿ ಸೇವಕನಿಗೆ ಧನ ಸಂಪತ್ತು ನೀಡಿ ನೀನು ಇಲ್ಲಿದ್ದರೆ ತೊಂದರೆಯಾಗ ಬಹುದೆಂದು ಹೇಳಿ ರಾಜ್ಯ ಬಿಟ್ಟು ಓಡಿಹೋಗಲು ಹೇಳಿದ. ಈ ಕೊಲೆಗಡುಕ ಸೇವಕ ಮೂರು ನಾಲ್ಕು ವರ್ಷ ಗುಜರಾತ್ ರಾಜ್ಯದಲ್ಲಿ ಕಳೆದ. ಈ ಹಿಂದೆ ವಲೀ ನಿಯಮತಿಯ ಕೊಲೆ ಮಾಡಿದ ಆರೋಪದ ಮೇಲೆ ಈ ಸೇವಕನನ್ನು ಬಂಧಿಸಲಾಗಿ ಗೋಲ್ಕೊಂಡಕ್ಕೆ ತರಲಾಯಿತು.

ಜಮ್ಶೆದ್ ಖುಲಿಗೆ ಈ ಸೇವಕನ ಬಂಧನದ ಬಳಿಕ ವಿಚಾರಣೆ ನಡೆದಾಗ ಬಾಯಿಬಿಟ್ಟಾಗ, 'ನಾನು ಈ ಬಗ್ಗೆ ಏನೊಂದೂ ತಿಳಿದಿಲ್ಲ. ನನ್ನ ಮೇಲೆ ಇಲ್ಲಸಲ್ಲದ ಆರೋಪ ಮಾಡಿ ನನ್ನ ಹೆಸರನ್ನು ಹಾಳು ಮಾಡುತ್ತಿರುವ ಈತನನ್ನು ನಗರದ ಹೊರಗೆ ಎಳೆದುಕೊಂಡು ಹೋಗಿ ಶಿರಚ್ಛೇದ ಮಾಡಿ' ಎಂದು ಆಜ್ಞಾಪಿಸಿದ. ಹೀಗೆ ಜಮ್ಶೆದ್ ಖುಲಿ ಅಪ್ಪನ ಸಿಂಹಾಸನವನ್ನು ಕಿತ್ತುಕೊಂಡು ರಾಜ್ಯಭಾರ ಮಾಡಿದ.

ಸಹೋದರನ ಮೇಲೆ ಅನುಮಾನ ಹೊಂದಿದ ತಮ್ಮ ಇಬ್ರಾಹಿಂ ಖುಲಿ ಹಿಂಪಾನಗರಕ್ಕೆ ಹೋಗಿ ಅಲ್ಲಿ ರಾಮರಾಜನ ಆಶ್ರಯ ಪಡೆದ. ರಾಮರಾಜ ಅವನಿಗೆ ಸಹಕಾರ ನೀಡಿ ಚೆನ್ನಾಗಿ ನೋಡಿಕೊಂಡ. ಅನೇಕ ಹೊಸ ವಿಷಯಗಳ ಜ್ಞಾನವನ್ನು ನೀಡಿದ. ಜಮ್ಶೆದ್ ಖುಲಿ ಹತ್ತು ವರ್ಷಗಳ ಕಾಲ ರಾಜ್ಯಭಾರ ಮಾಡಿದ. ಆದರೆ ಬದುಕಿನ ಕೊನೆಯಲ್ಲಿ ಅವನು ಬಹಳ ಆತಂಕಿತನಾದವನಂತೆ ಕಂಡುಬಂದು, ಮತ್ತೆ ಮೂಲವ್ಯಾದಿ ರೋಗಕ್ಕೆ ತುತ್ತಾಗಿ ನರಳ ತೊಡಗಿದ. ನಂತರ ಅವನ ದೇಹದಲ್ಲಿ ಅನೇಕ ಹಳೆಯ ಗಾಯಗಳು ಮತ್ತೆ ಹಸಿರಾಗಿ ಕೊಳೆತು ನಾರತೊಡಗಿತು. ಹಲವಾರು ವೈದ್ಯರು ಚಿಕಿತ್ಸೆಗೆ ಪ್ರಯತ್ನಿಸಿದರು. ಕೆಲವು ಗಾಯಗಳು ಒಣಗಿದರೆ ಕೆಲವು ವಾಸಿಯಾಗದೆ ಹಾಗೆಯೇ ಉಳಿದು ನರಳುವಂತಾಯಿತು. ಅವನ ರಾಜ್ಯಭಾರವನ್ನು ದರ್ಬಾರಿಗಳ ಸಲಹೆ ಸಹಕಾರಗಳೊಂದಿಗೆ ನಡೆಸುತ್ತಿದ್ದ. ಈ ದರ್ಬಾರಿಗಳ ಪೈಕಿ ಒಬ್ಬ ಯುವಕ ಪ್ರಾಮಾಣಿಕ, ಬುದ್ಧಿವಂತ ಸಯ್ಯದ್ ಕಮಾಲುದ್ದೀನ್ ಹುಸ್ಸೈನ್ ಕೂಡ ಒಬ್ಬನಾಗಿದ್ದ. ಮುಂದೆ ಈತ ಒಳ್ಳೆಯ ಕೆಲಸಗಾರನೆಂದು ಹೆಸರುವಾಸಿಯಾದ. ಇವನು ಕೋಟೆಯ ಮುಖ್ಯ ಸರದಾರನಾಗಿ ನೇಮಕಗೊಂಡ. ಅವನಿಗೆ 'ಮುಸ್ತಫಾ ಖಾನಿ' ಎಂಬ ಬಿರುದು ನೀಡಲಾಯಿತು. ಮುಂದೆ ಅವನು ಇಪ್ಪತ್ತು ವರ್ಷಗಳ ಕಾಲ ಇಲ್ಲೇ ಇದ್ದು ಅಲ್ಲಿಯ ಓರ್ವ ದೊಡ್ಡ ವಿದ್ವಾಂಸನೆಂದೂ, ಮಾರಿಫತ್ ಸೂಫಿತತ್ವಗಳ ಜ್ಞಾನಿಯೆಂದೂ, ಹಲವು ವಿಷಯಗಳನ್ನು ಬಲ್ಲ ಹಿರಿಯ ಜ್ಞಾನಿಯೆಂದೂ ಹೆಸರು ಗಳಿಸಿ ಪ್ರಮುಖ

ವ್ಯಕ್ತಿಯೆನಿಸಲ್ಪಟ್ಟ. ಜಮ್ಶೆದ್ ಖುಲಿ ಕುತುಬ್ ಶಾಹ ತನ್ನ ಅಂತಿಮ ದಿನಗಳಲ್ಲಿ ತನ್ನ ರೋಗಗಳಿಂದ ಬಹಳ ನರಳಿ ಒಂದು ದಿನ ಕೊನೆಯುಸಿರೆಳೆದ. ಇವನು ತೀರಿಕೊಳ್ಳುವ ಮುಂಚೆ ತನ್ನ ಮಗನನ್ನು ವಾರೀಸುದಾರನನ್ನಾಗಿ ಮಾಡಿದ್ದ. ಜಮ್ಶೆದನ ಸಾವು ಮತ್ತು ಅವನ ಮಗನಿಗೆ ಪಟ್ಟಾಭಿಷೇಕದ ಸುದ್ದಿ ರಾಮರಾಜನಿಗೆ ತಲಪಿದಾಗ ತನ್ನ ಜೊತೆಗೆ ಇಬ್ರಾಹಿಂ ಖುಲಿಯನ್ನು ಕರೆದುಕೊಂಡು ಗೋಲ್ಕೊಂಡಕ್ಕೆ ಬಂದ. ಇಬ್ರಾಹಿಂ ಖುಲಿಗೆ ಸಿಂಹಾಸನವನ್ನು ಕೊಡಿಸುವುದು ಅವನ ಉದ್ದೇಶವಾಗಿತ್ತು. ಗೋಲ್ಕೊಂಡದ ಪ್ರಜೆಗಳಿಗೆ ರಾಮರಾಜನ ಆಗಮನದ ಸುದ್ದಿ ತಿಳಿದಾಗ ತುಂಬ ಆತಂಕಿತರಾದರು.

ರಾಮರಾಜನ ಆಗಮನದಿಂದಾಗಿ ಇಲ್ಲಿನ ವಾತಾವರಣದಲ್ಲಿ ಅಲ್ಲೋಲಕಲ್ಲೋಲವುಂಟಾಗುವ ಭಯ ಅಲ್ಲಿನ ಪ್ರಜೆಗಳಲ್ಲಿ ಮೂಡಿತು. ಈ ಕಾರಣದಿಂದ ಏನಾದರಾಗಲಿ ಎಂದು ಮೌನವಾಗಿ ಕೂತರು. ರಾಮರಾಜನ ತೀರ್ಮಾನದಂತೆ ಇಬ್ರಾಹಿಂ ಖುಲಿ ಕುತುಬ್ ಶಾಹನನ್ನು ಗೋಲ್ಕಂಡಾದ ಮುಂದಿನ ಸುಲ್ತಾನನನ್ನಾಗಿ ಆರಿಸಿ ಸಿಂಹಾಸನವನ್ನು ಒಪ್ಪಿಸಿದರು.

**ಇಬ್ರಾಹಿಂ ಖುಲಿ ಕುತುಬ್ ಶಾಹನ ರಾಜ್ಯಭಾರದಲ್ಲಿ ನಡೆದ ವಿದ್ಯಮಾನಗಳ ವಿವರಗಳು:**

ಎಲ್ಲರೂ ತೀರ್ಮಾನಕ್ಕೆ ಬದ್ಧರಾಗಿ ಇಬ್ರಾಹಿಂ ಖುಲಿ ಕುತುಬ್ ಶಾಹನನ್ನು ತಮ್ಮ ಸುಲ್ತಾನನ್ನಾಗಿ ಪರಿಗಣಿಸಿ ಪಟ್ಟಾಭಿಷೇಕ ನಡೆದ ಬಳಿಕ ರಾಮರಾಜ ತನ್ನ ರಾಜ್ಯ ಹಿಂಪಾನಗರಕ್ಕೆ ಹಿಂತಿರುಗಿದ. ಅಲ್ಲಿಂದ ಒಂದು ಪತ್ರ ಬರೆದು ನಾವು ಕೂಡ ನಿಮ್ಮನ್ನು ಗೋಲ್ಕೊಂಡ ರಾಜ್ಯದ ಸುಲ್ತಾನನೆಂದು ಪರಿಗಣಿಸಿದ್ದೇವೆ ಎಂದು ತಿಳಿಸಿದ. ಇದಕ್ಕೆ ವ್ಯತಿರಿಕ್ತವಾಗಿ ನಡೆಯುವ ಸಂದರ್ಭ ಬರಕೂಡದು ಎಂದೂ ಎಚ್ಚರಿಕೆ ನೀಡಿ, ಈ ತೀರ್ಮಾನಕ್ಕೆ ಬದ್ಧರಾಗಿರುವುದರಿಂದ ರಾಜ್ಯಕ್ಕೆ, ರಾಜ್ಯದ ಪ್ರಜೆಗಳ ಒಳಿತಿದೆ ಎಂದು ತಿಳಿಸಿದ. ಇಬ್ರಾಹಿಂ ಕುತುಬ್ ಶಾನಿಗೆ ಎಲ್ಲರೂ ಜಯ ಘೋಷ ಹಾಕಿ, ಹಿಂದಿನ ಸುಲ್ತಾನರೊಂದಿಗೆ ನಡೆದುಕೊಳ್ಳುವ ರೀತಿಯಲ್ಲೇ ಭಯ ಭಕ್ತಿಯಿಂದ ನಡೆದುಕೊಂಡರು. ರಾಮರಾಜ ಮತ್ತು ಅವನ ದರ್ಬಾರಿಗಳು, ಉನ್ನತ ದರ್ಜೆಯ ಮಂತ್ರಿ, ಸರದಾರರ ಶುಭಾಶಯಗಳು, ಹಣ, ಸಂಪತ್ತು, ಶಸ್ತ್ರಾಸ್ತ್ರಗಳು, ಕುದುರೆಗಳು, ಆನೆಗಳನ್ನು ಕೊಡುಗೆ ಕಾಣಿಕೆಗಳು ಸಲ್ಲಿಸಿದರು.

ಯಾವುದೇ ರೀತಿಯ ಸಂಘರ್ಷ, ತಿಕ್ಕಾಟಗಳಿಲ್ಲದೆ ರಾಜ್ಯಭಾರ ಮಾಡಲು ಬದ್ಧನಾಗಿದ್ದ ಇಬ್ರಾಹಿಂ ಖುಲಿ ಕುತುಬ್ ಶಾಹ ಈ ಸಂದರ್ಭದಲ್ಲಿ ಸಂತಸಪಟ್ಟುಕೊಂಡಿದ್ದ. ಈ ಸುಲ್ತಾನ ಬಹಳ ಬುದ್ಧಿವಂತನಾಗಿದ್ದ, ಜ್ಞಾನಿಯೂ, ಕುಶಾಗ್ರಮತಿಯೂ ಆಗಿ, ತುಂಬ ಒಳ್ಳೆಯ ಗುಣವಂತನಾಗಿದ್ದು, ಬಡವರು, ಸಂಕಷ್ಟದಲ್ಲಿ ಸಿಲುಕಿದವರಿಗೆ ಸಹಾಯ ಮಾಡುವ ಮೃದುಹೃದಯಿಯೂ ಆಗಿದ್ದ. ತನ್ನ ಪ್ರಜೆಗಳ

ಅಭಿವೃದ್ಧಿಗಾಗಿ ಬಹಳ ಕೆಲಸ ಕಾರ್ಯಗಳನ್ನು ಕೈಗೊಂಡಿದ್ದ. ಸೈನ್ಯ ಮತ್ತು ತನ್ನ ಆಸ್ಥಾನದಲ್ಲಿ ನೌಕರಿ ಮಾಡುತ್ತಿರುವವರಿಗೂ ಒಳ್ಳೆಯ ರೀತಿಯ ಸೌಲಭ್ಯವನ್ನು ಕಲ್ಪಿಸಿದ್ದ. ಅವನ ಗುರುಗಳಾಗಿಯೂ, ಆಸ್ಥಾನದಲ್ಲಿ ಉನ್ನತ ಪದವಿಯಲ್ಲಿದ್ದ ಸಯ್ಯದ್ ಕಮಾಲುದ್ದೀನ್ ಹುಸೈನ್‌ರಿಗೆ ಗೌರವದ ಸ್ಥಾನಮಾನ ನೀಡಿ 'ಮುಸ್ತಫಾ ಖಾನಿ' ಎಂಬ ಬಿರುದು ನೀಡಿ ಸನ್ಮಾನಿಸಿದ. ಹಿಂದಿನ ಕುತುಬ್ ಶಾಹನ ಕೈಕೊಂಡು ಅಪೂರ್ಣವಾಗಿದ್ದ ಕೆಲಸಕಾರ್ಯಗಳನ್ನು ತನ್ನ ಮೇಲೆ ಎರಡು ಪಟ್ಟು ಒತ್ತಡವಾದರೂ ಲೆಕ್ಕಿಸದೆ ಶ್ರಮಪಟ್ಟು ಸಂಪೂರ್ಣಗೊಳಿಸಿದ.

ಮುಸ್ತಫಾ ಖಾನರು ಹಿರಿಯರಾದುದರಿಂದ ಜನಪ್ರಿಯರಾಗಿ ಪ್ರಜೆಗಳ ಬೆಂಬಲವೂ ಇತ್ತು. ಜಮ್ಶೆದ್ ಖುಲಿ ಕುತುಬ್ ಶಾಹನ ಕೆಲವು ಜವಾಬ್ದಾರಿಯುತ ಕಾರ್ಯಗಳನ್ನು ತನ್ನ ಹೆಗಲಮೇಲೆ ಹೊತ್ತುಕೊಂಡು ಸಹಾಯದ ನೆಲೆಯಲ್ಲಿ ಮಾಡುತ್ತಿದ್ದ. ಇದನ್ನು ಕಂಡು ಆಗಿನ ಸುಲ್ತಾನ ಅವನು ತನ್ನನ್ನು ಕಡೆಗಣಿಸುತ್ತಿದ್ದಾನೆಂದು ಸಂಶಯಿಸಿದ್ದ. ಸುತ್ತಲಿನ ಕೆಲವು ಆಸ್ಥಾನದ ಸೇವಕರು ಅವನ ಕಿವಿಯೂದುತ್ತಿದ್ದರು. ಇವರಿಬ್ಬರ ಮಧ್ಯೆ ಪಿತೂರಿ ನಡೆಯುತ್ತಿದ್ದುದರಿಂದ ಇವನು ಹಲವು ರೀತಿಯ ಸಂಕಷ್ಟಗಳನ್ನು ಎದುರಿಸಬೇಕಾಗುತ್ತಿತ್ತು. ಜಮ್ಶೆದ್ ಕುತುಬ್ ಶಾಹ ಸ್ವತಃ ಮುಸ್ತಫಾ ಖಾನನನ್ನು ತೆಗೆದು ಹಾಕಬೇಕೆಂದು ಯೋಚಿಸುತ್ತಿದ್ದ. ಮುಸ್ತಫಾ ಖಾನನಿಗೆ ಇದರ ಸುಳಿವು ದೊರೆತ ಕೂಡಲೇ ಈ ವ್ಯೂಹದಿಂದ ಹೊರಬರುವುದು ಹೇಗೆಂದು ಯೋಚಿಸಿದ. ಈ ಸಂದರ್ಭದಲ್ಲಿ ಷಾ ಹುಸೈನ್ ನಿಜಾಮ್ ಶಾಹನ ದೂತನೊಬ್ಬ ಒಂದು ಸಂದೇಶವನ್ನು ತಂದಿದ್ದ. ಮುಸ್ಲಿಂ ಬಾದಶಾಹರು ಒಟ್ಟಾಗಿ ಒಂದು ತೀರ್ಮಾನ ಮಾಡಿಕೊಂಡಿದ್ದಾರೇನೆಂದರೆ, ಹಿಂದೂ ರಾಜರು ಈ ಪ್ರದೇಶವನ್ನು ಆಕ್ರಮಿಸುವ ಮೂಲಕ ನಮ್ಮನ್ನು ನಾಶಪಡಿಸಲು ಹೊಂಚು ಹಾಕುತ್ತಿದ್ದಾರೆ. ಮುಸ್ಲಿಮರ ಸರ್ವನಾಶ ಮಾಡ ಹೊರಟ ಹಿಂದೂ ರಾಜರನ್ನು ಒಟ್ಟಾಗಿ ಸೋಲಿಸ ಬೇಕೆಂದು ಬಾದಶಾಹರ ಒಕ್ಕೂಟ ತೀರ್ಮಾನಿಸಿದೆ ಎನ್ನುವುದು ಆ ಸಂದೇಶದ ತಾತ್ಪರ್ಯವಾಗಿದೆ. ಖುತುಬ್ ಶಾಹ ಈ ವಿಷಯವನ್ನು ಬೇಕಂತಲೇ ಇನ್ನಷ್ಟು ದೊಡ್ಡದಾಗಿ ಬೆಳೆಸಿ ಮುಸ್ತಫಾ ಖಾನನ ನೇತೃತ್ವದಲ್ಲಿ ಈ ಕೆಲಸ ನಡೆಯಲಿ ಎನ್ನುವಂತೆ ಆಸ್ಥಾನದಲ್ಲಿ ಹೇಳತೊಡಗಿದ. ಹಿಂದೂಗಳ ರಾಜ ರಾಮರಾಜ ದೊಡ್ಡ ರಾಜ್ಯವನ್ನು ಕಟ್ಟಿಕೊಂಡಿದ್ದಾನೆ, ಇವನನ್ನು ನಾವು ಸೋಲಿಸಿ ಅದನ್ನು ಮುಸ್ಲಿಂ ಬಾದಶಾಹನ ರಾಜ್ಯವನ್ನಾಗಿ ಮಾಡಲು ಅಲ್ಲಾಹ ನಮಗೆ ಸಹಾಯ ಮಾಡಬಹುದು. ಹೀಗೆ ನಾವು ಮಾಡುವುದರ ಮೂಲಕ ಅಲ್ಲಾಹನ ಕೃಪೆ ನಮ್ಮ ಮೇಲೆ ಉಂಟಾಗ ಬಹುದು ಎಂದು ಮುಸ್ತಫಾ ಖಾನನನ್ನು ಪುಸಲಾಯಿಸುವ ಮೂಲಕ ಈ ಅಪಾಯಕಾರಿ ಕೆಲಸಕ್ಕೆ ನೂಕುವುದು ಅವನ ಉದ್ದೇಶವಾಗಿತ್ತು. ಮುಸ್ತಫಾ ಖಾನ್ ಈ ಯುದ್ಧದ ನೇತೃತ್ವ ವಹಿಸಲು ಒಪ್ಪಿದ. ನಾನು ಈ ಯುದ್ಧದಲ್ಲಿ

ಜಯ ಗಳಿಸಿದರೆ ನಂತರ ಮಕ್ಕಾಕ್ಕೆ ಹಜ್ ಯಾತ್ರೆ ಮಾಡುತ್ತೇನೆ ಮತ್ತು ನನ್ನ ಬದುಕಿನ ಕೊನೆಯಲ್ಲಿ ಮಕ್ಕಾದ ಪವಿತ್ರ ಕ್ಷೇತ್ರದಲ್ಲಿ ಕಳೆಯುತ್ತೇನೆ, ನನ್ನ ಮುಖ ಹಾಗೂ ಬಿಳಿ ದಾಡಿಯನ್ನು ಅಲ್ಲಿ ತೊಳೆಯುತ್ತೇನೆ ಎಂದು ಯೋಚಿಸಿದ. ಹೀಗೆ ಜಮ್ಶೆದ್ ಕುತುಬ್ ಶಾಹ ಅವನನ್ನು ತಯಾರಿಗೊಳಿಸಿ ಷಾ ಹುಸೈನ್ ನಿಜಾಂ ಶಾಹನ ಬಳಿ ಮುಸ್ತಫಾ ಖಾನನನ್ನು ಕಳುಹಿಸಿದ್ದ.

ಮುಸ್ತಫಾ ಖಾನ್ ಈ ಯೋಜನೆಯನ್ನು ಒಪ್ಪಿಕೊಳ್ಳುವ ಮೊದಲು ಒಂದು ಶರ್ತವನ್ನು ಮುಂದಿಟ್ಟ, ಅದೆಂದರೆ ಈ ಸಂದೇಶವನ್ನು ದೂತನೊಂದಿಗೆ ಮೊದಲು ಜಹಾಂಪನಾರ ಮುಂದಿಡುತ್ತೇನೆ ಎಂಬುದಾಗಿತ್ತು. ಜಹಾಂಪನಾರಿಗೆ ಇದರ ಬಗ್ಗೆ ಯಾವುದೇ ವಿಷಯ ತಿಳಿದಿರಲಿಲ್ಲವೆಂಬುದು ಅವನಿಗೆ ಗೊತ್ತಿತ್ತು. ನಿಜಾಂ ಶಾಹನ ಉದ್ದೇಶ ಮೊದಲು ರಾಮರಾಜನನ್ನು ಮುಗಿಸಿ ನಂತರ ಜಹಾಂಪನಾರನ್ನು ಕೊಂದುಬಿಡಬೇಕೆನ್ನುವ ಕುತಂತ್ರ ರಚಿಸುವುದಾಗಿತ್ತು. ಈ ಬಗ್ಗೆ ಮುಸ್ಲಿಂ ಬಾದಶಾಹರ ಒಕ್ಕೂಟದಲ್ಲಿ ಆಗಾಗ ಪತ್ರ ಮೂಲಕ ಚರ್ಚೆಯಾಗುತ್ತಿತ್ತು. ಅವರೊಳಗಿನ ತಮ್ಮ ಭಿನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸಲಾಗಿತ್ತು. ಕೊನೆಗೆ ಇದರಲ್ಲಿ ಅಲ್ಲಾಹನ ಹೆಸರು ಕೂಡ ಶಾಮೀಲಾಗಿರುವುದರಿಂದ ಮುಸ್ಲಿಂ ಬಾದಶಾಹರು ಎಲ್ಲರೂ ಸೇರಿ ಈ ಕೆಲಸ ಮಾಡಬೇಕು ಎಂದು ತೀರ್ಮಾನಿಸಲಾಯಿತು. ನಿಜಾಂ ಶಾಹ ತನ್ನ ಮಗಳು ಚಾಂದ್ ಬೀಬಿಯನ್ನು ಜಹಾಂಪನಾರಿಗೆ ಕೊಟ್ಟು ಮದುವೆ ಮಾಡುವ ಮೂಲಕ ಜಹಾಂಪನಾರನ್ನು ಈ ಕೆಲಸದಲ್ಲಿ ಭಾಗಿಯಾಗಲು ಒಪ್ಪಿಸಬೇಕೆಂಬುದು ಕೂಡ ತೀರ್ಮಾನದಲ್ಲಿ ಶಾಮೀಲಾಗಿತ್ತು. ಎರಡು ಬಾದಶಾಹರ ನಡುವೆ ತಿಕ್ಕಾಟಕ್ಕೆ ಕಾರಣವಾಗಿರುವ ಸೋಲಾಪುರದ ಕೋಟೆಯನ್ನು ಜಹಾಂಪನಾರಿಗೆ ಒಪ್ಪಿಸ ಬೇಕೆಂದು ಕೂಡ ತೀರ್ಮಾನದಲ್ಲಿ ಅಡಕವಾಗಿತ್ತು. ಜಹಾಂಪನಾ ತನ್ನ ತಂಗಿ ಹದಿಯಾ ಸುಲ್ತಾನಾಳನ್ನು ಮುರ್ತಜಾ ನಿಜಾಂ ಶಾಹನ ಮಗನಿಗೆ ಮದುವೆ ಮಾಡಿಕೊಡಬೇಕೆಂದು ಕೂಡ ಅದರಲ್ಲಿ ಶರ್ತವಿತ್ತು. ನಿಜಾಂ ಶಾಹ ಮತ್ತು ಕುತುಬ್ ಶಾಹ ತಮ್ಮ ಗಂಡು ಮಕ್ಕಳನ್ನು ಜಹಾಂಪನಾರ ಸುಪರ್ದಿಗೆ ಒಪ್ಪಿಸುವ ಮೂಲಕ ಈ ಶರ್ತಗಳಿಗೆ ಒತ್ತೆಯಾಗಿಟ್ಟು ಭರವಸೆ ನೀಡಬೇಕು ಎಂದೂ ತೀರ್ಮಾನವಾಗಿತ್ತು. ಈ ಶರತ್ತುಗಳು ಕಾರ್ಯರೂಪಕ್ಕೆ ಬಂದಾಗ, ರಾಮರಾಜನ ಹಂಪಾನಗರವನ್ನು ಯುದ್ಧದಲ್ಲಿ ವಶಪಡಿಸಿಕೊಂಡು ವಿಜಯ ದುಂದುಭಿ ಮೊಳಗಿದಾಗ, ಮುಸ್ಲಿಂ ಬಾದಶಾಹರು ಸಂತಸಪಟ್ಟುಕೊಂಡರು. ಮುಸ್ತಫಾ ಖಾನ್ ಈ ಸಂದರ್ಭ ಅತ್ಯಂತ ಅನುಕೂಲಕರವಾಗಿದೆ ಎಂದುಕೊಂಡು ತನ್ನ ಬಳಿಗೆ ನಿಜಾಂ ಶಾಹನ ಮುಖ್ಯ ಸರದಾರ ಕಿಶ್ವರ್ ಖಾನ್ ಮತ್ತು ಜಹಾಂಪನಾರ ಮುಖ್ಯ ಸರದಾರ ಮೌಲಾನಾ ಇನಾಯತುಲ್ಲಾ ನಾಯಿನಿಯವರನ್ನು ಕರೆಯಿಸಿ ಬಿನ್ನಹ ಮಾಡಿಕೊಂಡ. ಈ

ಬಿನ್ನಹದಲ್ಲಿ 'ನಾನು ನನ್ನ ಸ್ವ ಇಚ್ಛೆಯಿಂದ ಮಕ್ಕಾದ ಪವಿತ್ರಯಾತ್ರೆಯನ್ನು ಮಾಡುತ್ತಿದ್ದೇನೆ. ಆದರೆ ನೀವು ಮಾತ್ರ ನಾನು ಗೋಲ್ಕೊಂಡಾದ ಕಡೆ ಹೋಗಿದ್ದೇನೆಂದು ಹೇಳಬೇಕು. ಯಾಕೆಂದರೆ ಕುತುಬ್ ಶಾಹ ನನ್ನನ್ನು ನಾಶಮಾಡಲು ಹಂಚಿಕೆ ಹಾಕುತ್ತಿದ್ದಾನೆ. ನಾನು ಇದರಿಂದ ತಪ್ಪಿಸಿಕೊಳ್ಳಲು ನೀವು ನನಗೆ ಸಹಾಯ ಮಾಡಬೇಕು. ಈ ಕೆಲಸವನ್ನು ನೀವು ನಡೆಸಿಕೊಟ್ಟಲ್ಲಿ ನಾನು ನಿಮಗೆ ಸಾಕಷ್ಟು ಸಂಪತ್ತು ನೀಡುತ್ತೇನೆ' ಎಂದು ಹೇಳಿದ. ಇದಕ್ಕೆ ಅವರಿಬ್ಬರು ಒಪ್ಪಿ ಮುಸ್ತಫಾ ಖಾನನಿಗೆ ಸಹಾಯ ಮಾಡಿದರು. ಕುತುಬ್ ಶಾಹ ತನ್ನ ಉದ್ದೇಶವನ್ನು ಬದಲಾಯಿಸಿ ದೂರವಿದ್ದು ಬಿಟ್ಟ. ಯಾವುದೋ ಒಂದು ಸಬೂಬು ನೀಡಿ ತನ್ನ ಮನೆಗೆ ಹೋದ.

ಕುತುಬ್ ಶಾಹ ತನ್ನ ಒಬ್ಬ ದೂತನನ್ನು ಕಳುಹಿಸಿ ನಿಮ್ಮ ಹಾದಿಯಲ್ಲಿ ಯಾವುದೇ ತರದ ಅಡಚಣೆಯನ್ನುಂಟು ಮಾಡುವುದಿಲ್ಲವೆಂದು ತಿಳಿಸಿದ. ಈ ವಿಷಯವನ್ನು ಕಿಶ್ವರ್ ಖಾನ್ ಮತ್ತು ಇನಾಯಿತುಲ್ಲಾರಿಗೆ ತಿಳಿಸದೆ ಮುಸ್ತಫಾ ಖಾನ್ ತನ್ನ ಶರತ್ತಿನಂತೆ ನಡೆದುಕೊಳ್ಳದೆ ಸಾಮಾನು ಸರಂಜಾಮುಗಳನ್ನು ಕಟ್ಟಿಕೊಂಡು ಬಂದರಿಗೆ ಹೋಗುತ್ತೇನೆಂದು ಹೊರಟು ಮತ್ತೆ ಹಾದಿ ಬದಲಾಯಿಸಿ ಹಿಂಪಾನಗರಕ್ಕೆ ಹೋದ. ಈ ವರ್ತಮಾನ ತಿಳಿದು ಖುತುಬ್ ಶಾಹ ಭಯದಿಂದ ನಡುಗಿದ. ಹೀಗಾಗಿ ಅವನು ಹಜ್ ಯಾತ್ರೆಗೆ ಹೋಗುವುದಕ್ಕೆ ಅನುಮತಿಯನ್ನು ಒತ್ತಾಯ ಪೂರ್ವಕ ನೀಡಲೇ ಬೇಕಾಯಿತು. ಮುಸ್ತಫಾ ಖಾನ್ ತನ್ನ ಹಿತೈಷಿಗಳ ದಂಡಿನ ಜೊತೆಗೆ ನಿರಾಯಾಸವಾಗಿ ಗುಲ್ಬರ್ಗಾದ ಕಡೆ ಪ್ರಯಾಣ ಬೆಳೆಸಿದ. ಕಿಶ್ವರ್ ಖಾನ್ ಮತ್ತು ಮೌಲಾನಾ ಇನಾಯತುಲ್ಲಾ ಕುತುಬ್ ಶಾಹ ನೀಡಿದ ಅನುಮತಿಯನ್ನು ಬದಲಿಸಿ ಅಲ್ಲಿರುವ ಓರ್ವ ವಯಸ್ಸಾದ ಹಿರಿಯ ಸಯ್ಯದ್ ಪೀರ್ ಸೂಫಿಯೊಬ್ಬರಿಗೆ ಹಜ್ ಯಾತ್ರೆಗೆ ಕಳುಹಿಸಲು ಉಪಯೋಗಿಸುವುದಕ್ಕೆ ಒಪ್ಪಿಗೆಯನ್ನು ಕೇಳಿದರು. ಮುಸ್ತಫಾ ಖಾನ್ ತಾನು ಹಜ್ ಪವಿತ್ರ ಯಾತ್ರೆ ಮಾಡದೆ ಗುಲ್ಬರ್ಗಾದಲ್ಲಿ ನಿಜಾಂ ಶಾಹನ ಸೈನ್ಯದ ಕೆಲಸದಲ್ಲಿ ಮುಳುಗಿದ್ದೇನೆಂದು ತನ್ನ ತಳಮಳವನ್ನು ಓರ್ವ ದೂತನ ಮೂಲಕ ಜಹಾಂಪನಾರಿರುವ ಗೊಲ್ಕೊಂಡಾಗೆ ಸಂದೇಶ ಪತ್ರವನ್ನು ಕಳುಹಿಸಿದ. ಕುತುಬ್ ಶಾಹ ಕೂಡ ತನಗೆ ಇವನಿಂದ ತೊಂದರೆಯಾಗ ಕೂಡದೆಂದು ಭಯಗ್ರಸ್ತನಾಗಿ ಯೋಚಿಸುತ್ತ ತನ್ನ ಬಚಾವಿಗಾಗಿ ಮುಸ್ತಫಾ ಖಾನನಿಗೆ ಸಾಕಷ್ಟು ಸಂಪತ್ತು ನೀಡಿದ. ಇನ್ನು ಈ ಮುಸ್ತಫಾ ಖಾನ ಗೋಲ್ಕೊಂಡಾದಲ್ಲಿ ಇದ್ದು ಬಿಟ್ಟರೆ ತಾನು ಬಚಾವಾಗಿರುತ್ತೇನೆನ್ನುವುದು ಅವನ ಲೆಕ್ಕಾಚಾರವಾಗಿತ್ತು. ಈ ಕಾಣಿಕೆ ಕೊಡುಗೆಗಳನ್ನು ಮುಸ್ತಫಾ ಖಾನನಿಗೆ ಕಳುಹಿಸಿ ಕುತುಬ್ ಷಾ ರಾಜಧಾನಿ ಬಿಜಾಪುರಕ್ಕೆ ಪ್ರಯಾಣಿಸಿದ.

ಹಿಂದೆ ಮುಸ್ತಫಾಖಾನನಿಗೆ ಎರಡು ಸಾವಿರ ಕುದುರೆಗಳನ್ನು ಕಾಣಿಕೆಯ ಜೊತೆಗೆ ಕುತುಬ್ ಶಾಹ ನೀಡಿದ್ದ. ಆಸ್ಥಾನದ ಉಸ್ತುವಾರಿ ನೋಡಿಕೊಳ್ಳುತ್ತಿದ್ದ ಮುಸ್ತಫಾಖಾನ್

ದೀವಾನ್ ದರ್ಜೆಗೆ ತಲಪಿದ. ಕಿಶ್ವರ್ ಖಾನನ ಕೊಲೆಯ ನಂತರ ಮತ್ತು ಶಾ ಅಬುಲ್ ಹಸನನ್ನು ಸೆರೆ ಹಿಡಿದ ನಂತರ ಜಹಾಂಪನಾರ ವೈಯುಕ್ತಿಕ ಕಾರ್ಯದರ್ಶಿಯಾಗಿ ನೇಮಕಗೊಂಡಿದ್ದ. ನಂತರದಲ್ಲಿ ಬಹಳ ಹೆಸರು ಗಳಿಸಿದ್ದ. ಜಹಾಂಪನಾರ ಹೆಸರಿನ ನಾಣ್ಯವನ್ನು ಕೂಡ ಚಲಾವಣೆಗೆ ತಂದಿದ್ದ. ಇವನು ಮಂತ್ರಿಯಾಗಿದ್ದಾಗ ಸಾಕಷ್ಟು ಸಂಪತ್ತು, ಖಜಾನೆ ಮತ್ತು ಹಿಂಬಾಲಕರು ಬಾದಶಾಹರಿಗೆ ಸಿಗುವಂತೆ ಮಾಡಿದ್ದ. ರೋಮಿನ ಬಾದಶಾಹರಿಗೆ, ಇರಾನಿನ ಬಾದಶಾಹ ತಹಮಸ್ಫ್‌ನಿಗೆ, ಅಕ್ಬರ್ ಬಾದಶಾಹನಿಗೆ ಸಿಕ್ಕಿದಂತೆ ವೈಭವ ಲಭಿಸಿತ್ತು. ಅಕ್ಬರ್ ಬಾದಶಾಹನ ರಾಜ್ಯದ ಗಡಿ ಗುಜರಾತಿನಿಂದ  ಬಂಗಾಳದ ತನಕ ಹರಡಿತ್ತು. ಅವನ ೧೭೦ ಪ್ರದೇಶಗಳ ಮೇಲೆ ನಿಯಂತ್ರಣವಿಟ್ಟುಕೊಂಡಿದ್ದ.  ಅಕ್ಬರ್ ಬಾದಶಾಹನಿಗೆ ಹಿಂದುಸ್ಥಾನದಿಂದ ಹೊರ ದೇಶಗಳಿಂದಲೂ ಕಪ್ಪ ಕಾಣಿಕೆ, ಉಡುಗೊರೆಗಳು ಬರುತ್ತಿದ್ದವು. ಪ್ರಖ್ಯಾತ ಬುದ್ಧಿವಂತ ಮತ್ತು ಜ್ಞಾನಿಯಾಗಿದ್ದ. ಆದರೆ ಮುಂಗೋಪಿಯಾಗಿದ್ದ ಬಹಳ ಅಹಂಕಾರಿಯಾಗಿದ್ದ. ಚಿಕ್ಕ ತಪ್ಪಿಗೂ ಒಮ್ಮೊಮ್ಮೆ ದೊಡ್ಡ ಶಿಕ್ಷೆಯನ್ನು ನೀಡುತ್ತಿದ್ದ. ಕೊಲೆ, ನಷ್ಟ, ಮುಂತಾದವುಗಳ ಬಗ್ಗೆ ಲೆಕ್ಕಿಸುತ್ತಿರಲಿಲ್ಲ. ಆದರೆ ಬಹಳ ಶೌರ್ಯವಂತನಾಗಿದ್ದ.

ಜಹಾಂಪನಾರ ಮರಣಾನಂತರ ಏಳು ತಿಂಗಳ ನಂತರ ಕಿಶ್ವರ್ ಖಾನನ ಮಗ ಕಿಶ್ವರ್ ಖಾನ್ ಕೋಚಕ್ ಉಸ್ತುವಾರಿ ರಾಜನಾಗಿ ಆಳ್ವಿಕೆ ನಡೆಸಿದ. ಇವನು ಒಬ್ಬ ಒಳ್ಳೆಯ ಗುಣವಂತ ಮತ್ತು ಸಂತನೆನಿಸಲ್ಪಟ್ಟ ಸಯ್ಯದ್ ಸೂಫಿಯನ್ನು ಕೊಲೆ ಮಾಡಿದ್ದ. ಅವರ ಸಾಮಾನು ಸರಂಜಾಮುಗಳನ್ನು ವಶಪಡಿಸಿಕೊಂಡಿದ್ದನಲ್ಲದೆ, ಅವರ ಹಿಂಬಾಲಕರನ್ನು ಸೆರೆಗೆ ತಳ್ಳಿದ್ದ.

**ಇಬ್ರಾಹಿಂ ಖುತುಬ್ ಶಾಹನ ಆಳ್ವಿಕೆ ಮತ್ತು ಅವರ ಒಳ್ಳೆಯ ನಡತೆಗಳ ವಿವರಗಳು:**

ಹಿಂಪಾ ನಗರದಿಂದ ಇಬ್ರಾಹಿಂ ಕುತುಬ್ ಶಾಹ ಗೋಲ್ಕೊಂಡಕ್ಕೆ ಹಿಂತಿರುಗಿದಾಗ ಆಳ್ವಿಕೆಯ ಕೆಲಸ ಕಾರ್ಯಗಳನ್ನು ಸ್ವತಃ ಕೈಗೊಳ್ಳುತ್ತಿದ್ದ. ಇಲ್ಲಿನ ಪ್ರಜೆಗಳಲ್ಲಿ ಹೆಚ್ಚಿನವರು ಸಾಮಾನ್ಯವಾಗಿ ಅಹಂಕಾರಿ, ಲಫಂಗರಾಗಿ ಕಾಡುಗಳಲ್ಲಿ ವಾಸವಾಗಿರುವ ಅನಾಗರಿಕರಾಗಿದ್ದರು. ಅವರ ದೇಹ ಕೂಡ ಕಟ್ಟುಮಸ್ತಾಗಿದ್ದು ಒರಟರಾಗಿದ್ದರು. ಇಬ್ರಾಹಿಂ ಕುತುಬ್ ಶಾಹ ಈ ಜನರನ್ನು ಬಹಳ ನಯವಾಗಿ, ಜಾಗರೂಕರಾಗಿ ಮಾತಾಡುತ್ತ ತನ್ನೆಡೆಗೆ ಸೆಳೆದುಕೊಂಡು ವ್ಯವಹರಿಸಿಕೊಂಡಿದ್ದ. ಹೆಚ್ಚು ಒರಟರು ಮತ್ತು ಶೀಘ್ರ ಕೋಪಿಗಳನ್ನು ತರಾಟೆಗೆ ತೆಗೆದುಕೊಂಡ. ನಿತ್ಯ ಅಪರಾಧದ ದಂಧೆ ಮಾಡಿಕೊಂಡಿರುವವರಿಗೆ ಶಿಕ್ಷೆ ನೀಡಿದ. ಅವರಲ್ಲಿ ಗುರುತರ ಅಪರಾಧಿಗಳನ್ನು ಕೊಲ್ಲಿಸಿದ. ಕೆಲವರನ್ನು ತನ್ನ ಸೇವಕರನ್ನಾಗಿ ಮಾಡಿಕೊಂಡು ನೌಕರಿಯನ್ನು ನೀಡಿದ. ರಾಜ್ಯದಲ್ಲಿ ಯಾರು ಕೂಡ ನಿರುದ್ಯೋಗಿಗಳು ಇರದಂತೆ ಸರ್ವರಿಗೂ ಉದ್ಯೋಗವನ್ನು

ಕಲ್ಪಿಸಿಕೊಟ್ಟಿದ್ದ. ತನ್ನ ಪ್ರಜೆಗಳು ನಾಲ್ಕಕ್ಕಿಂತ ಹೆಚ್ಚು ಹಸುಗಳನ್ನು ಸಾಕುವಂತಿಲ್ಲವೆಂದು ಕಾನೂನು ಮಾಡಿದ್ದ. ಯಾರಾದರೂ ತನ್ನ ಕಾನೂನನ್ನು ಉಲ್ಲಂಘಿಸಿದಲ್ಲಿ ಜುರ್ಮಾನೆಯನ್ನು ವಿಧಿಸುತ್ತಿದ್ದ. ಯಾರಾದರೂ ತನ್ನ ಮಾತನ್ನು ಕೇಳದಿದ್ದಲ್ಲಿ, ಕಾನೂನು ಭಂಗ ಮಾಡಿದಲ್ಲಿ ಅವರನ್ನು ಕಾಡಿಗೆ ಅಟ್ಟುತ್ತಿದ್ದ. ಪ್ರಜೆಗಳೆಲ್ಲರ, ಅದರಲ್ಲೂ ಮುಖ್ಯವಾಗಿ ಮುಸ್ಲಿಮರನ್ನು ಆರ್ಥಿಕವಾಗಿ ಸುಧಾರಿಸುವುದಕ್ಕೆ ಹಲವಾರು ಉತ್ತಮ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದ. ಮುಸ್ಲಿಮೇತರರು ಇಸ್ಲಾಂ ಧರ್ಮದ ತತ್ವಗಳನ್ನು ತಿಳಿದುಕೊಳ್ಳುವುದಕ್ಕೆ, ಧರ್ಮವನ್ನು ಸ್ವೀಕರಿಸುವುದಕ್ಕೆ ಅವಕಾಶ ಹಾಗೂ ಆಯ್ಕೆಗೆ ಮುಕ್ತ ಸ್ವಾತಂತ್ರ್ಯವನ್ನು ಕಲ್ಪಿಸಿಕೊಟ್ಟಿದ್ದ. ಇದರಿಂದಾಗಿ ಅನೇಕ ಮುಸ್ಲಿಮೇತರರು ಇಸ್ಲಾಂ ಧರ್ಮ ಸ್ವೀಕರಿಸಿದ್ದರು. ತನ್ನ ರಾಜ್ಯದ ಅನೇಕ ಚಿಕ್ಕ, ದೊಡ್ಡ ಪ್ರದೇಶಗಳಲ್ಲಿ ಮಸೀದಿಗಳನ್ನು ಕಟ್ಟಿಸಿದನಲ್ಲದೆ, ಇಮಾಮ್, ಮುಅಜ್ಜಿನ್‌ಗಳನ್ನು ನೇಮಕ ಮಾಡಿ ಪ್ರಾರ್ಥನೆ ಮತ್ತು ನಿಯಮಿತ ಪ್ರಾರ್ಥನೆಯ ಕರೆಯನ್ನು ನಿರ್ವಹಿಸುವ ವ್ಯವಸ್ಥೆಯನ್ನು ಮಾಡಿದ್ದ. ಮುಸ್ಲಿಮರ ಮಕ್ಕಳಿಗೆ ಕಟ್ಟುನಿಟ್ಟಾಗಿ ಮದ್ರಸಾದಲ್ಲಿ ಧಾರ್ಮಿಕ ವಿದ್ಯಾಭ್ಯಾಸವನ್ನು ನೀಡುವಂತೆ ಕಡ್ಡಾಯಗೊಳಿಸಿದ್ದ. ಅವರಿಗೆ ಊಟದ ವ್ಯವಸ್ಥೆಯನ್ನೂ ಮಾಡಿದ್ದ. ಈ ಮಕ್ಕಳಿಂದ ಒಂದು ಪೈಯನ್ನು ವಸೂಲಿ ಮಾಡಿಸುತ್ತಿದ್ದ. ಇದರಿಂದ ಮಕ್ಕಳಿಗೆ ಓದು ಬರಹದ ಅಭ್ಯಾಸ ಖಾಯಮ್ಮಾಗಿ ಬೆಳೆಯಲಿ ಎಂಬುದು ಅವನ ಉದ್ದೇಶವಾಗಿತ್ತು. ತನ್ನ ಆಸ್ಥಾನದ ಸೇವಕರು, ನೌಕರರು, ಅಧಿಕಾರಿಗಳಿಗೆ, ಸೈನಿಕರು ಸರದಾರರುಗಳಿಗೆ ತಕ್ಕ ಸಂಬಳ ಮತ್ತು ಭತ್ಯೆಗಳನ್ನು ನಿಗದಿಪಡಿಸಿದ್ದ. ಕುದುರೆ, ಆನೆ ಮುಂತಾದ ಪ್ರಾಣಿಗಳನ್ನು ಸಾಕುವವರಿಗೆ ತಿಂಗಳಿಗೆ ಎರಡು ಬಾರಿ ರಾಜ್ಯದ ಬೊಕ್ಕಸದಿಂದ ಸಹಾಯಧನಗಳನ್ನು ನೀಡುತ್ತಿದ್ದ. ಇದರ ವಿತರಣೆ ಸರಿಯಾಗಿ ಆಗುತ್ತಿದೆಯೋ ಇಲ್ಲವೋ ಎಂಬುದನ್ನು ನೋಡಿಕೊಳ್ಳಲು ಒಂದು ತಪಾಸಣಾ ತಂಡವನ್ನು 'ತಸದ್ದುಕ್ ಜಮಾತ್' ಎಂಬ ಹೆಸರಲ್ಲಿ ನೇಮಕಾತಿ ಮಾಡಿಕೊಂಡಿದ್ದ. ಇವರ ಮೂಲಕ ತಪಾಸಣೆಯ ಕೆಲಸವಲ್ಲದೆ ತೆರಿಗೆ ವಸೂಲಿ, ತೆರಿಗೆ ಕಳ್ಳರಿಗೆ ಜುಲ್ಮಾನೆ ಹಾಕಿ ವಸೂಲಿ ಮಾಡಿ ಬೊಕ್ಕಸಕ್ಕೆ ವರ್ಷಕ್ಕೆ ತೆರಿಗೆಯ ರೂಪದಲ್ಲಿ ಒಂದು ಲಕ್ಷ ಹವನ್ ಜಮಾ ಆಗುತ್ತಿತ್ತು. ಈ ಹಣವನ್ನು ಪ್ರಜೆಗಳ ಅಭ್ಯುದಯಕ್ಕಾಗಿ ವೆಚ್ಚವಾಗುತ್ತಿತ್ತು. ಸಾದಾತ್, ಉಲೇಮಾಗಳು, ಯಾತ್ರಿಕರು ಮತ್ತು ಸಂಕಷ್ಟದಲ್ಲಿರುವವರ ನೆರವಿಗೆ ರಾಜ್ಯದ ಬೊಕ್ಕಸದಿಂದ ಹಣ ಸಂದಾಯವಾಗುತ್ತಿತ್ತು.

ಅವನ ಆಳ್ವಿಕೆಯಲ್ಲಿ ಬಹಳ ಜನರು ಖೊರಸಾನದಿಂದ, ಅರೇಬಿಯಾದಿಂದ ಮಕ್ಕಾ, ಮದೀನಾದಿಂದ ಪ್ರತೀ ವರ್ಷ ಬಹಳಷ್ಟು ಜನಗಳು, ಪ್ರವಾಸಿಗಳು ಆಗಮಿಸುತ್ತಿದ್ದರಲ್ಲದೆ ಇವರಿಗೆ ಉಳಿದುಕೊಳ್ಳಲು ವ್ಯವಸ್ಥೆ ಮಾಡಲಾಗಿತ್ತು. ಅಗತ್ಯವಿದ್ದವರಿಗೆ ಬಾದಶಾಹರ ಸಹಾಯಧನದ ವ್ಯವಸ್ಥೆ ಮಾಡಿಕೊಡುತ್ತಿದ್ದರು. ಈ

ಜನಗಳು ಇಲ್ಲಿಗೆ ಬಂದು ಸಹಾಯ ಪಡೆದು ಹಿಂತಿರುಗಿ ತಮ್ಮ ದೇಶಗಳಿಗೆ ಪ್ರಯಾಣ ಬೆಳೆಸುತ್ತಿದ್ದರು. ಇಬ್ರಾಹಿಂ ಕುತುಬ್ ಶಾಹನ ಆಳ್ವಿಕೆಯ ಗೋಲ್ಕೊಂಡ ನಗರದಲ್ಲಿ ಈ ರೀತಿಯ ವಿದೇಶಿ ಯಾತ್ರಿಕರು ತುಂಬಿರುತ್ತಿದ್ದರು. ಅವರು ತಮ್ಮ ಆಸ್ಥಾನಕ್ಕಾಗಿ, ಮಂತ್ರಿಗಳ ಆಡಳಿತ ವ್ಯವಸ್ಥೆ, ಜನರ ಸೌಲಭ್ಯಗಳಿಗಾಗಿ ಅನೇಕ ದೊಡ್ಡ ದೊಡ್ಡ ಕಟ್ಟಡಗಳನ್ನು ಕಟ್ಟಿಸಿದ್ದ. ನಗರದ ರಕ್ಷಣೆಗಾಗಿ ಆವರಣದ ಗೋಡೆಗಳನ್ನು ಮಜಬೂತಾಗಿ ಕಟ್ಟಿಸಿದ್ದ. ಈ ಆವರಣದ ಗೋಡೆಗೆ ನಾಲ್ಕು ದೊಡ್ಡ ಹೆಬ್ಬಾಗಿಲುಗಳನ್ನು ಕಟ್ಟಿಸಿದ್ದ. ಈ ಆವರಣದ ಗೋಡೆ ಎರಡು 'ಫರ್‌ಸಪ್' (ಮೈಲು)ಗಳ ವ್ಯಾಪ್ತಿಯಲ್ಲಿತ್ತು. ನಾಲ್ಕೂ ದಿಕ್ಕಿನಲ್ಲಿ ನೀರಿನ ವ್ಯವಸ್ಥೆಯನ್ನು ಮಾಡಿದ್ದರು. ಒಳ ಹೊರಗೆ ವಿವಿಧ ರೀತಿಯ ತೋಟಗಳನ್ನು ಕೂಡ ಮಾಡಲಾಗಿತ್ತು. ಇವುಗಳಲ್ಲಿ ಎಲ್ಲರೀತಿಯ ಹಣ್ಣುಗಳನ್ನು ಬೆಳೆಸಲಾಗುತ್ತಿತ್ತು. ನಗರದ ಮಧ್ಯಭಾಗದಲ್ಲಿ ದೊಡ್ಡದೊಡ್ಡ ಕಟ್ಟಡಗಳನ್ನು ಕಟ್ಟಿಸಲಾಗಿತ್ತು. ಗಲ್ಲಿಗಳು, ಸುಸಜ್ಜಿತ ಮಾರುಕಟ್ಟೆಗಳಿದ್ದವು. ಇವೆಲ್ಲ ಪ್ರದೇಶಗಳು ಸ್ವಚ್ಛವಾಗಿ ಕಸಕಡ್ಡಿ ಕಚರಾಗಳು ಎಲ್ಲೂ ಕಾಣಿಸುತ್ತಿರಲಿಲ್ಲ. ತೋಟಗಳು ಕೂಡ ಎಷ್ಟು ಸ್ವಚ್ಛವಾಗಿ ಹಸುರಾಗಿ ಒಂದೇ ಒಂದು ಒಣ ಹುಲ್ಲು ಕೂಡ ಕಾಣದಂತೆ ಎಲ್ಲ ಕಾಲದಲ್ಲೂ ಕಂಡುಬರುತ್ತಿದ್ದವು. ಈ ನಗರ, ಹೂದೋಟಗಳನ್ನು ನೋಡಿದರೆ 'ಖುಲ್ದೆ ಬರೀನ್' ಸ್ವರ್ಗದ ನೆನಪಾಗುತ್ತಿತ್ತು. ಯಾರೇ ಆಗಲಿ ಈ ಹೂದೋಟಗಳೊಳಗೆ ಆಗಮಿಸಿದವರು ಮನಸ್ಸು ಪ್ರಫುಲ್ಲಗೊಳ್ಳದೆ ಹೊರಹೋಗುತ್ತಿರಲಿಲ್ಲ. ಹಲವು ವಿಧದ ಹಣ್ಣು ದಾಳಿಂಬ, ಅಂಜೂರ, ಸೇಬು, ಮಾವುಗಳ ಹಲವಾರು ತಳಿಗಳ ಗಿಡ ಮರಗಳು ಕಣ್ಮನ ತಣಿಯುವಂತಿತ್ತು. ಈ ತೋಟಗಳಲ್ಲಿ ಒಂದೆಡೆ ಎತ್ತರದ ಭಾಗವಿದ್ದರೆ, ಕೆಲವು ಭಾಗಗಳು ತಗ್ಗಿನಲ್ಲಿದ್ದು, ಹೆಚ್ಚಿನ ಭಾಗ ಸಮತಟ್ಟಾದ ನೆಲದಲ್ಲಿ ಇದ್ದವು. ಅಲ್ಲಲ್ಲಿ ಗಿಡಗಳನ್ನು ಸಮತಟ್ಟಾಗಿ ಕತ್ತರಿಸಿ ಇಡಲಾಗಿತ್ತು. ಹಣ್ಣು ಹಂಪಲುಗಳ ಗಿಡಗಳು ಮರಗಳು ಬೇರೆಯೇ ಭಾಗಗಳಲ್ಲಿ ಬೆಳೆಯಲಾಗಿತ್ತು. ಈ ಹಣ್ಣುಗಳಲ್ಲಿ ಉತ್ತಮವಾದುದನ್ನು ಆಯ್ದು ಬಾದಶಾಹರ ಅರಮನೆಗೆ ದಿನವೂ ಕಳುಹಿಸಿಕೊಡಲಾಗುತ್ತಿತ್ತು. ರಾಜ್ಯದ ಪ್ರಮುಖರಿಗೆ, ಸಂತರ ಆಶ್ರಮುಗಳಿಗೆ, ದರ್ಬಾರಿಗಳಿಗೆ, ಉಲೇಮಾ ಸಾದಾತರಿಗೆ ಹಣ್ಣುಗಳನ್ನು ತಲಪಿಸಲಾಗುತ್ತಿದ್ದವು. ಇನ್ನೂ ಹೆಚ್ಚು ಉಳಿದರೆ ಸಾಮುದಾಯಿಕ ಭೋಜನ ಶಾಲೆಗಳಿಗೆ ಕಳುಹಿಸಿಕೊಡಲಾಗುತ್ತಿತ್ತು. ಈ ಭೋಜನ ಶಾಲೆಗಳಲ್ಲಿ, ವಿದ್ಯಾರ್ಥಿಗಳು, ಸಾಹಿತಿಗಳು, ಸಾಮಾನ್ಯ ಜನರು ಇದರ ಉಪಯೋಗ ಪಡೆಯುತ್ತಿದ್ದರು.

ಈ ಎಲ್ಲ ಸವಲತ್ತುಗಳು ಅಲ್ಲಿ ದೊರೆತಿರುವುದದರಿಂದ ದೂರದ ಊರಲ್ಲಿರುವ ಬಡವರು, ವಿದ್ಯಾರ್ಥಿಗಳು ಮುಂತಾದವರು ತಮ್ಮ ಮಕ್ಕಳುಮರಿಗಳೊಂದಿಗೆ ನಗರದಲ್ಲಿ ಬಂದು ನೆಲೆಸಿದರು. ಅವರಿಗೆಲ್ಲರಿಗೂ ಭೋಜನ ಶಾಲೆಯಲ್ಲಿ ಊಟ ಮುಫತ್ತಾಗಿ ದೊರೆಯುವುದರಿಂದ ತುಂಬ ಸಂತೋಷಪಟ್ಟುಕೊಂಡಿದ್ದರು. ಬಾದಶಾಹನಿಂದ

ಸ್ಥಾಪಿಸಲ್ಪಟ್ಟ ತಸದ್ದುಕ್ ಜಮಾತಿನ ವತಿಯಿಂದ ಈ ಜನರಿಗೆ ಸ್ವಲ್ಪ ಧನ ಸಹಾಯವೂ ಸಿಗುತ್ತಿತ್ತು. ಹೀಗೆ ಸಂಕಷ್ಟಕ್ಕೊಳಗಾದ ಜನರು ಸಂತೋಷದಿಂದ ಬದುಕುತ್ತಿದ್ದರು ಮತ್ತು ತಮಗೆ ಸಹಾಯ, ಸೌಕರ್ಯಗಳನ್ನು ಮಾಡಿಕೊಟ್ಟ ಬಾದಶಾಹನ ಆಯುರಾರೋಗ್ಯ ಮತ್ತು ಸಂಪತ್ತಿಗಾಗಿ ದೇವರಿಗೆ ಪ್ರಾರ್ಥನೆ ಸಲ್ಲಿಸಿ ಶುಭ ಹಾರೈಸುತ್ತಿದ್ದರು.

ಬಾದಶಾಹರ ಅರಮನೆ ಎಂದರೆ ಅದ್ಭುತ ಮಹಲಾಗಿತ್ತು, ತುಂಬ ಆಕರ್ಷಕವಾಗಿದ್ದು ಕೋಟೆಯೊಳಗೆ ಮಧ್ಯಭಾಗದಲ್ಲಿತ್ತು. ಈ ಸುಂದರ ಅರಮನೆ ವಿಶೇಷ ಮಹಲಾಗಿತ್ತು. ಇದಲ್ಲದೆ ಇನ್ನೂ ಏಳು ಅರಮನೆಗಳಿದ್ದವು. ಮೊದಲನೆಯ ಅರಮನೆಯಲ್ಲಿ ದೊಡ್ಡ ದೊಡ್ಡ ನಾಲ್ಕು ಜಗಲಿಗಳಿದ್ದವು. ಪ್ರತೀ ಮೂಲೆಯೂ ಬೆಳಗುವಂತೆ ಬೆಳಕಿನ ವ್ಯವಸ್ಥೆ ಇತ್ತು. ದೊಡ್ಡದೊಡ್ಡ ಕೋಣೆಗಳು, ವಿಶಾಲವಾದ ಚಾವಡಿ, ಪ್ರತೀ ಜಗಲಿಗೆ ಹೊಂದಿದಂತೆ ಜಾಮಾಖಾನ ದಕ್ಷಿಣದ ಭಾಷೆಯಲ್ಲಿ ಜಾಮ್‌ದಾರ್ ಖಾನಾ ಎಂದು ಹೇಳುವ ದೊಡ್ಡ ಬಟ್ಟೆ ಬದಲಾಯಿಸುವ ಕೋಣೆ ಇದೆ. ಇನ್ನೆರಡು ಕೋಣೆಗಳಲ್ಲಿ ಒಂದರಲ್ಲಿ ದರ್ಜಿಗಳು ಬಟ್ಟೆಗಳನ್ನು ಹೊಲಿದು ಉಡುಪುಗಳನ್ನು ತಯಾರಿಸುತ್ತಿದ್ದರೆ ಇನ್ನೊಂದರಲ್ಲಿ ಮೆತ್ತನೆಯ ಹಾಸಿಗೆಯನ್ನು ತಯಾರಿಸುತ್ತಿದ್ದರು. ಈ ಕೆಲಸಗಾರರು ದಿನ ಪೂರ್ತಿ ಕೆಲಸಮಾಡುತ್ತಿದ್ದು ಕೊನೆಯಲ್ಲಿ ತಾವು ತಯಾರು ಮಾಡಿದ್ದನ್ನು ಬಾದಶಾಹರಿಗೆ ತಲಪಿಸುತ್ತಿದ್ದರು. ಈ ಅರಮನೆಯ ಇನ್ನೊಂದು ದೊಡ್ಡ ವಿಶಾಲವಾದ ಕೋಣೆಯಲ್ಲಿ ಸಿಪೇ ಸಾಲಾರ್(ಸೇನಾ ಮುಖ್ಯಸ್ಥ) ಮತ್ತು ಕೆಲವು ಸೈನಿಕರು ಇದ್ದರು. ಇವರು ಇಲ್ಲಿ ಶಿಸ್ತಿನಿಂದ ಹಗಲೂ ರಾತ್ರಿ ಕಾವಲು ಕಾಯುತ್ತಿದ್ದು ಪಾಳಿಯಲ್ಲಿ ಕೆಲಸಮಾಡುತ್ತಿದ್ದರು.

ಎರಡನೆಯ ಅರಮನೆಯಲ್ಲಿ ಜರಿಯ ಕೆಲಸ ಮಾಡುವವರು, ಕಸೂತಿ ಕೆಲಸ ಮಾಡುವವರು, ತಾಮ್ರದ ಪಾತ್ರೆಗಳಿಗೆ ಕಲಾಯಿ ಹಾಕುವ ಕೆಲಸಗಾರರು ಕೆಲಸದಲ್ಲಿ ನಿರತರಾಗಿದ್ದರು.

ಮೂರನೆಯ ಅರಮನೆಯಲ್ಲಿ ಆಭರಣಗಳನ್ನು ತಯಾರಿಸುವವರು, ಆಭರಣಗಳಿಗೆ ಮತ್ತು ವಸ್ತುಗಳಿಗೆ ಚಿನ್ನ, ಬೆಳ್ಳಿಯ ಗಿಲೀಟು ಹಾಕುವವರು, ಕುರಾನ್ ಮುಂತಾದ ಅಮೂಲ್ಯ ಗ್ರಂಥಗಳನ್ನು ಓರಣವಾಗಿ ಕಟ್ಟುವುದು, ಲಿಪಿ ಕಲಾವಿದರು ಅಕ್ಷರಗಳ ಮೇಲೆ ಚಿನ್ನ ಬೆಳ್ಳಿಯ ಲೇಪ ಹಚ್ಚುವ ಕೆಲಸಕಾರ್ಯಗಳಲ್ಲಿ ಮಗ್ನರಾಗಿದ್ದರು.

ನಾಲ್ಕನೆಯ ಮಹಲಿನಲ್ಲಿ ಸಾಹಿತಿಗಳು ಇತಿಹಾಸ, ಶಾಹನಾಮಾ, ಕಾದಂಬರಿ, ಕಥಾ ಸಂಕಲನಗಳನ್ನು ಬರೆಯುವುದು, ಓದುವುದು, ಅವುಗಳ ಬಗ್ಗೆ ಸಂಶೋಧನೆ ಮಾಡುವವರು, ವಿಮರ್ಶಕರು ತಮ್ಮ ಕೆಲಸಕಾರ್ಯಗಳಲ್ಲಿ ಮಗ್ನರಾಗಿದ್ದರು.

ಐದನೆಯ ಮಹಲಿನಲ್ಲಿ ದರ್ಬಾರಿಗಳೂ ಆಗಿರುವ ಉಲೇಮಾಗಳು, ಧಾರ್ಮಿಕ

ಪಂಡಿತರು, ಧಾರ್ಮಿಕ ಜ್ಞಾನಿಗಳು ಪರಸ್ಪರ ಚರ್ಚೆ, ಜಿಜ್ಞಾಸೆ, ವ್ಯಾಖ್ಯಾನಗಳನ್ನು ಅಭ್ಯಾಸ ಮಾಡಿಕೊಳ್ಳುತ್ತಿದ್ದರು. ಕೃತಿಗಳನ್ನು ರಚಿಸುತ್ತಿದ್ದರು.

ಆರನೆಯ ಮಹಲಿನಲ್ಲಿ ಹೊರಗಿನಿಂದ ಆಗಮಿಸುವ ಅತಿಥಿಗಳಿಗೆ ಉಳಕೊಳ್ಳುವುದಕ್ಕೆ, ಮಂತ್ರಿ ಮಂಡಳದವರಿಗೆ ಪ್ರತ್ಯೇಕ ಆರಾಮದ ಕೋಣೆಗಳು ಸಜ್ಜಾಗಿರುತ್ತಿದ್ದವು.

ಏಳನೆಯ ಮಹಲು 'ಮಹಲೇ ಖಾಸ್' ಎಂಬ ಬಾದಶಾಹರ ಅರಮನೆಯಾಗಿತ್ತು. ತಮ್ಮ ಅಂತಃಪುರದಿಂದ ನೇರವಾಗಿ ಆಸ್ಥಾನಕ್ಕೆ ಹೋಗಿ ಸಿಂಹಾಸನದಲ್ಲಿ ವಿರಾಜಮಾನರಾಗುವುದಕ್ಕೆ ವ್ಯವಸ್ಥೆಯಿತ್ತು. ಹಿಂದಿನ ಆರು ಮಹಲುಗಳಲ್ಲಿರುವ ಪ್ರಮುಖರನ್ನು ಅಗತ್ಯವಿರುವ ಸಂದರ್ಭದಲ್ಲಿ ಕರೆದು ಅವರ ಕೆಲಸಕಾರ್ಯಗಳಿಗೆ ಸಂಬಂಧಿಸಿದಂತೆ ಬಾದಶಾಹ ಮಾತುಕತೆ ನಡೆಸುತ್ತಿದ್ದರು. ಇಂತಹ ಆಕರ್ಷಕ ಸುಂದರ ಅರಮನೆಯಲ್ಲಿ ಪ್ರತ್ಯೇಕವಾಗಿ ಒಂದು ಆಬ್ದಾರ್ ಖಾನ ಇತ್ತು. ಇದರಲ್ಲಿ ಹಲವಾರು ವಿಧದ ಶರಬತ್ತುಗಳು, ಓರಣವಾಗಿಟ್ಟಿರುವ ವಿವಿಧ ಸುಂದರ ಗಾಜಿನ ಪಾತ್ರೆಗಳಲ್ಲಿ ಒಯ್ದು ಕೊಡುವ ವ್ಯವಸ್ಥೆ ಇತ್ತು. ಇದು ತುಂಬ ಒಪ್ಪ ಓರಣವಾದ ಕೋಣೆಯಾಗಿದ್ದು, ಸುಂದರ ಕುರ್ಚಿಮೇಜುಗಳ ವ್ಯವಸ್ಥೆಯಿದ್ದು ಸುಗಂಧ ಪೂರಿತ ವಾತಾವರಣವಿತ್ತು. ಇಲ್ಲಿ ಪಾನೀಯುಗಳನ್ನು ನೀಡುವ ನಾಲ್ಕು ಮಂದಿ ಆಬ್ದಾರರೆನ್ನಲಾಗುವ ಸೇವಕರು ಪಾಳಿಯಲ್ಲಿ ಹಗಲೂ ರಾತ್ರಿ ಸಜ್ಜಾಗಿ ನಿಂತಿರುತ್ತಿದ್ದರು. ಇಲ್ಲಿ ಇನ್ನೊಂದು ವಿಭಾಗದಲ್ಲಿ ಸುಸಜ್ಜಿತ ಸುಂದರ ಪಾತ್ರೆಗಳಲ್ಲಿ ಒಪ್ಪ ಓರಣವಾಗಿ ಇಟ್ಟಿರುವ ವಿವಿಧ ಬಣ್ಣಗಳ, ವಿವಿಧ ರುಚಿಯ ಶರಾಬು ತುಂಬಿಡಲಾಗಿರುತ್ತಿತ್ತು. ಇವುಗಳಲ್ಲಿ ಕೆಲವು ರೀತಿಯ ಶರಾಬುಗಳಲ್ಲಿ ಅಫೀಮು ಮುಂತಾದ ಅಮಲು ಪದಾರ್ಥಗಳನ್ನು ಕೂಡ ಬೆರಸಲಾಗುತ್ತಿತ್ತು. ಸುಂದರ ಬಟ್ಟಲುಗಳು ಜೋಡಿಸಲಾಗಿಟ್ಟಿದ್ದವು. ಮತ್ತೊಂದು ವಿಭಾಗದಲ್ಲಿ ಘಮಘಮಿಸುವ ಆಹಾರ, ತಿಂಡಿಗಳನ್ನು ತಯಾರಿಸಿ ಅತಿಥಿಗಳಿಗೆ ನೀಡಲಾಗುತ್ತಿತ್ತು. ಮಹಲಿನಲ್ಲಿ ಒಂದು ಮುಖ್ಯ ವಿಭಾಗದಲ್ಲಿ ಅಡುಗೆ ಕೋಣೆಯಿದ್ದು ಅಲ್ಲಿ ಎರಡು ಹೊತ್ತಿನ ವಿವಿಧ ರೀತಿಯ ಊಟದ ತಯಾರಿಯು ನಡೆಯುತ್ತಿತ್ತು. ಇಲ್ಲಿನ ಕೆಲಸಗಾರರಿಗೆ ಈ ಊಟದ ಕೋಣೆಯಲ್ಲಿ ನಿಯಮಿತವಾಗಿ ಊಟ ಬಡಿಸಲಾಗುತ್ತಿತ್ತು.

ಈ ಮಹಲಿನ ಹೊರ ಕೋಣೆಯಲ್ಲಿ ಬಾಗಿಲಲ್ಲಿ ನಿಂತಿರುತ್ತಿದ್ದ ಕಾವಲುಗಾರರು ಒಳಗೆ ಹೋಗುವ ಅತಿಥಿಗಳು, ಕೆಲಸಗಾರರು, ಜನಸಾಮಾನ್ಯರ ಬಳಿಯಿರುವ ಗುರುತು ಚೀಟಿಯನ್ನು ಪರಿಶೀಲಿಸಿ ಒಳಗೆ ಬಿಡುತ್ತಿದ್ದರು. ಈ ಗುರುತು ಚೀಟಿ/ಪತ್ರಗಳನ್ನು ಪರಿಶೀಲಿಸಿ ಬಾದಶಾಹರ ಬಳಿಗೆ ಕಳುಹಿಸುತ್ತಿದ್ದರು. ಬಾದಶಾಹರು ಪರಿಶೀಲಿಸಿ ಅನುಮತಿ ಬಂದಾಗ ಆಸ್ಥಾನದ ಒಳಗೆ ಹೋಗಲು ಈ ಕಾವಲುಗಾರರು ಬಿಡುತ್ತಿದ್ದರು. ಒಮ್ಮೆ ಕಾವಲುಗಾರರ ಅನುಮತಿಯನ್ನು ಪಡೆಯದೆ ಒಬ್ಬ ಒಳಗೆ ನುಸುಳಿದ.

ಬಾದಶಾಹ ಇದನ್ನು ಗಮನಿಸಿ ಕಾನೂನನ್ನು ಇನ್ನಷ್ಟು ಕಟ್ಟುನಿಟ್ಟುಗೊಳಿಸಿದ. ಯಾಕೆಂದರೆ ಹಿಂದೊಮ್ಮೆ ವ್ಯಾಪಾರದ ಸಬೂಬು ಹೇಳಿ, ಮತ್ತೊಮ್ಮೆ ಬಾದಶಾಹರ ವಿಶೇಷ ಅನುಮತಿಯ ಮೇರೆಗೆ ಎಂಬ ಕಾರಣವನ್ನು ನೀಡಿ ಕೆಲವರು ಪ್ರವೇಶಿಸಿದ್ದರು. ಇವರು ಒಳಗೇನು ನಡೆಯುತ್ತಿದೆ ಎಂಬುದನ್ನು ತಿಳಿಯುವುದಕ್ಕಾಗಿ ಪ್ರವೇಶಿಸಿದ್ದರೆನ್ನುವುದು ಬೆಳಕಿಗೆ ಬಂದಿತ್ತು. ಇಷ್ಟೊಂದು ವಿಶಾಲ ರಾಜ್ಯದ ಬಾದಶಾಹರ ಆಸ್ಥಾನದ ಕೆಲವು ಗುಪ್ತ ತೀರ್ಮಾನಗಳು ಹೊರಬೀಳದಂತೆ ನೋಡಿಕೊಳ್ಳುವ ಸಲುವಾಗಿ ಮತ್ತು ಇಷ್ಟೊಂದು ದೊಡ್ಡ ಬಾದಶಾಹನ ಬಗ್ಗೆ ಮತ್ತು ಅವನ ಕೆಲಸಕಾರ್ಯಗಳ ಬಗ್ಗೆ ಬೇರೆ ರಾಜರು, ಅರಸರ ಗೂಢಚಾರರು ಮಾಹಿತಿ ಪಡೆಯಲು ಸಾಧ್ಯವಾಗದಂತೆ ಈ ಕಟ್ಟುನಿಟ್ಟಿನ ಕಾವಲು ಅಗತ್ಯವಾಗಿತ್ತು.

ರಾಮರಾಜನ ಕೊಲೆಯ ನಂತರ ಅವನ ಹಲವು ಕೋಟೆಗಳನ್ನು ಬಾದಶಾಹರು ವಶಪಡಿಸಿಕೊಳ್ಳುವ ಮೂಲಕ ರಾಜ್ಯ ವಿಸ್ತರಣೆ ಭರದಿಂದ ನಡೆಯಿತು. ಈ ಬಾದಶಾಹ ಐವತ್ತು ವರ್ಷಗಳ ಕಾಲ ಸುಖ ಸಂತೋಷದಿಂದ ರಾಜ್ಯಭಾರ ಮಾಡಿದ. ಹಿಜರಿ ವರ್ಷ ಸನ್ ೯೮೯ರಲ್ಲಿ ಇವನು ಇಹಲೋಕ ತ್ಯಜಿಸಿದ. ನಿಧನವಾಗುವ ಮುಂಚೆ ತನ್ನ ಬುದ್ಧಿ ಜ್ಞಾನ ಉಪಯೋಗಿಸಿಕೊಂಡು ಮತ್ತು ಹಿರಿಯರೊಂದಿಗೆ ಸಮಾಲೋಚನೆ ನಡೆಸಿ ತನ್ನ ವಾರೀಸುದಾರನಾಗಿ ಕಿರಿಯ ಮಗನನ್ನು ನೇಮಿಸಿದ್ದ. ಸಮಸ್ತ ಪ್ರಜೆಗಳು ಮತ್ತು ದರ್ಬಾರಿಗಳು ಬಾದಶಾಹನ ತೀರ್ಮಾನಕ್ಕೆ ಒಕ್ಕೊರಳಿನ ಬೆಂಬಲ ನೀಡಿ ಶುಭ ಹಾರೈಸಿದ್ದರು.

**ತನ್ನ ತಂದೆಯ ಅಂತಿಮ ಇಚ್ಛೆಯಂತೆ ಮುಹಮ್ಮದ್ ಖುಲಿಯ ಪಟ್ಟಾಭಿಷೇಕ ಮತ್ತು ಬಾದಶಾಹನಾದ ನಂತರದ ಬೆಳವಣಿಗೆಗಳು:**

ತಂದೆಯ ಮರಣಾನಂತರ ಮುಹಮ್ಮದ್ ಖುಲಿ ಕುತುಬ್ ಶಾಹ ಸಿಂಹಾಸನದಲ್ಲಿ ಕೂತ. ಇವನು ಪ್ರಾಮಾಣಿಕತೆ, ಬುದ್ಧಿವಂತಿಕೆ, ಜ್ಞಾನದ ಭಂಡಾರವೆನಿಸುವ ವ್ಯಕ್ತಿಯಾಗಿದ್ದು ಓರ್ವ ದೇವದೂತನ ಗುಣಗಳನ್ನು ಹೊಂದಿದವನಾಗಿದ್ದ. ಯಾವಾಗಲೂ ಜ್ಞಾನಿಗಳು, ಬುದ್ಧಿವಂತರ ಸಂಗದಲ್ಲಿ ಇರುತ್ತಿದ್ದ. ಇವನ ಆಸ್ಥಾನದಲ್ಲಿ ಕೆಲಸ ಮಾಡುವವರು ವಿದ್ಯಾವಂತರಾಗಿದ್ದರು. ಉಲೇಮಾ, ಧಾರ್ಮಿಕ ಪಂಡಿತರಿಗೆ ಬಹಳ ಗೌರವ ನೀಡುತ್ತಿದ್ದ. ಮೂರು ನಾಲ್ಕು ದೊಡ್ಡದೊಡ್ಡ ಖ್ಯಾತ ಮುಲ್ಲಾ ಹಜ್ರತರು ಅವನ ಆಸ್ಥಾನದಲ್ಲಿ ಜ್ಞಾನದಾಹಿಗಳಿಗೆ ಜ್ಞಾನ ನೀಡುವ ಸಲುವಾಗಿ ನೇಮಕ ಮಾಡಲಾಗಿತ್ತು. ಇವರಿಂದ ಜ್ಞಾನ ಪಡೆದ ಜನರು ಬಹಳ ಸಂಖ್ಯೆಯಲ್ಲಿ ರಾಜ್ಯದಲ್ಲಿದ್ದರು. ಅವನ ರಾಜ್ಯದ ಅಬಾಲವೃದ್ಧರು ನೈತಿಕ, ಪ್ರಾಮಾಣಿಕ ಬದುಕನ್ನು ಮಾಡಿಕೊಂಡಿದ್ದರು. ದೇವಲೋಕದಿಂದ ಆಗಮಿಸಿದ ದೇವದೂತನಂತಹ ಈ ಬಾದಶಾಹ ತನ್ನ ಎಲ್ಲ

ರೀತಿಯ ಪ್ರಜೆಗಳನ್ನು ಪೊರೆದು ಕಾಪಾಡುತ್ತಿದ್ದ. ಅವನ ಉತ್ತಮ ನಡತೆಯಲ್ಲಿ ಒಂದು ವಿಶೇಷತೆ ಏನಿತ್ತೆಂದರೆ ಯಾರನ್ನಾದರೂ ಅಣ್ಣನೆಂದು ಸಂಬೋಧಿಸಿ ಕರೆದರೆ ಅವನನ್ನು ತನ್ನ ಅಣ್ಣನೆಂದೇ ಪರಿಗಣಿಸಿ ಪ್ರೀತಿ ಗೌರವವನ್ನು ವ್ಯಕ್ತಪಡಿಸುತ್ತಿದ್ದ. ತನಗೆ ಸಮಯಾವಕಾಶ ದೊರೆತಾಗಲೆಲ್ಲ ತನ್ನ ಗೆಳೆಯರನ್ನು ಭೇಟಿ ಮಾಡುತ್ತಿದ್ದ. ತನ್ನ ಆನೆಯಲ್ಲಿ ಕೂರಿಸಿ ತನ್ನೊಂದಿಗೆ ಸವಾರಿ ಮಾಡಿಸುತ್ತಿದ್ದ. ಅವನಿಗೆ ಇದರಿಂದ ಯಾವುದೇ ರೀತಿಯ ಮುಜುಗರವೂ ಆಗುತ್ತಿರಲಿಲ್ಲ. ಅವನ ಕಾಲದಲ್ಲಿ ಆಸ್ಥಾನಿಕರು, ದರ್ಬಾರಿಗಳು, ಸಾಮಾನ್ಯ ಪ್ರಜೆಗಳು, ಸೈನಿಕರು ತಮ್ಮೊಳಗೆ ಪ್ರೀತಿ ವಿಶ್ವಾಸದಿಂದ ಬದುಕುತ್ತಿದ್ದರು.

ರಾಜ್ಯದೆಲ್ಲೆಡೆ ಬಾದಶಾಹನ ಗಮನವಿತ್ತು. ಯಾರೆಲ್ಲ ಅಸಹಾಯಕರಿದ್ದಾರೋ, ಸಂಕಷ್ಟಕ್ಕೊಳಗಾಗಿದ್ದಾರೋ ಅವರಿಗೆ ಸಹಾಯ ಕೂಡಲೇ ದೊರೆಯುವ ವ್ಯವಸ್ಥೆಯನ್ನು ಮಾಡಿದ್ದ. ಅವನ ಆಸ್ಥಾನದಲ್ಲಿ ಸಹಾಯ ಯಾಚಿಸುತ್ತ ಯಾರು ಬರುತ್ತಾರೋ ಅವರು ಬರಿಗೈಯಲ್ಲಿ ಹಿಂತಿರುಗುತ್ತಿರಲಿಲ್ಲ, ಈ ವಿಷಯದಲ್ಲಿ ಅವನ ತಂದೆಯ ಹಾದಿಯಲ್ಲೇ ನಡೆಯುತ್ತಿದ್ದ. ಈ ಬಾದಶಾಹನೇ ತನ್ನ ಆಳ್ವಿಕೆಯ ಅವಧಿಯಲ್ಲಿ ಗೋಲ್ಕೊಂಡವನ್ನು ವೈಭವಪೂರ್ಣ ನಗರವಾಗಿ ಅಭಿವೃದ್ಧಿಹೊಂದಿತು. ನಗರವು ಎರಡು ಮೈಲಿ ವ್ಯಾಪ್ತಿಯಲ್ಲಿದೆ, ಉಳಿದ ನೆಲದ ಭಾಗದಲ್ಲಿ ತೋಟಗಳನ್ನು ಮಾಡಲಾಗಿತ್ತು. ಅದರಲ್ಲಿರುವ ಮರಗಳು ಮುಗಿಲೆತ್ತರ ಬೆಳೆದಿದ್ದವು. ಎಷ್ಟೊಂದು ಮರಗಳಿದ್ದವೆಂದರೆ ಇಡೀ ನಗರವೇ ಒಂದು ವಿಶಾಲ ತೋಟದಂತೆ ಕಾಣಿಸುತ್ತಿತ್ತು. ಈ ತೋಟಗಳಲ್ಲಿ ಖೊರಾಸಾನ್ ಮತ್ತು ಪೋರ್ಚುಗಲ್‌ನಿಂದ ತರಿಸಿದ ತಳಿಯ ಗಿಡ ಮರಗಳನ್ನು ಬೆಳೆಸಲಾಗಿತ್ತು. ಈ ನಗರದ ಯೋಜನೆಯಲ್ಲಿ ಮಾರುಕಟ್ಟೆ ಮತ್ತು ಅಂಗಡಿಗಳು ತುಂಬ ಸುಂದರ ಸ್ವಚ್ಛ ಆಕರ್ಷಕವಾಗಿ ರಚಿಸಲಾಗಿತ್ತು. ಇಲ್ಲಿನ ಜನರು ಬಹಳ ಪ್ರಾಮಾಣಿಕರು, ಪರಿಶ್ರಮಿಗಳು, ಬುದ್ಧಿವಂತರು, ನ್ಯಾಯ ಪರಿಪಾಲಕರು ಮತ್ತು ದೈವ ಭಕ್ತರೂ ಆಗಿದ್ದರು. ಯಾರೇ ದೊಡ್ಡವರು, ಬಾಲಕರು ತಮ್ಮ ಸೇವಕರಿಗೆ ಬಯ್ಯುವುದು, ದೊಣ್ಣೆ ಮುಂತಾದ ಆಯುಧಗಳಿಂದ ಹೊಡೆಯುವುದಕ್ಕೆ ಅವಕಾಶವಿರಲಿಲ್ಲ. ಯಾರಾದರೂ ಈ ರೀತಿ ವರ್ತಿಸಿದರೆ ಕೋತ್ವಾಲನಿಗೆ ದೂರು ನೀಡಿ, ಅಂಥಹ ವ್ಯಕ್ತಿಯನ್ನು ಕರೆದು ಮೊದಲು ಅವನಿಗೆ ಹೀಗೆ ವರ್ತಿಸುವುದು ಅಪರಾಧವೆಂದು ಎಚ್ಚರಿಕೆ ನೀಡುತಿದ್ದ. ಸೇವಕ ತಪ್ಪು ಮಾಡಿದ್ದರೆ ಅವನಿಗೆ ಸರಿಯಾದ ರೀತಿಯ ನಡತೆ ಕಲಿಸಿ ಬುದ್ಧಿಯನ್ನು ತಿದ್ದುವುದಕ್ಕೆ ಸಹಕಾರ ನೀಡುತ್ತಿದ್ದ. ಬಯ್ಯುವವನಿಗೆ ತಕ್ಕ ರೀತಿಯ ಶಿಕ್ಷೆಯನ್ನು ವಿಧಿಸುತ್ತಿದ್ದ. ಬಾದಶಾಹನ ಆಡಳಿತ ವ್ಯವಸ್ಥೆಯನ್ನು ನೋಡಿಕೊಳ್ಳುವವರ ಪೈಕಿ ಹೆಚ್ಚಿನವರು ವಿದೇಶೀಯರಾಗಿದ್ದರು. ಇವರಲ್ಲಿ ಹೆಚ್ಚಿನವರು ಷೇಖ್ ಶಫಿಯವರ ಕುಟುಂಬಕ್ಕೆ ಸೇರಿದವರಾಗಿದ್ದರು. ಈ ಷೇಖ್ ಶಫಿಯವರು

'ಮನ್ಸೂರೆ ಜಹಾಂಗೀರಿ' ಎಂಬ ರಾಜ್ಯದ ಆಡಳಿತಕ್ಕೆ ಸಂಬಂಧಿಸಿದ ಪುಸ್ತಕವನ್ನು ರಚಿಸಿದ ಇರಾನಿನ ಷಾ ಆಲಂಪನಾ ಷಾ ಅಬ್ಬಾಸರವರ ತಲೆಮಾರಿನವರಾಗಿದ್ದರು. ಅವರ ಪ್ರತಿನಿಧಿಗಳಾಗಿ ಇವರು ಮುಹಮ್ಮದ್ ಖುಲಿ ಕುತುಬ್ ಷಾರ ಆಹ್ವಾನದ ಮೇರೆಗೆ ಬಂದಿದ್ದರು. ಓಗ್ಲೋ ಸುಲ್ತಾನ್ ಎಂಬ ಅದೇ ತಲೆಮಾರಿನ ಸದಸ್ಯನೊಬ್ಬ ಹೈದರಾಬಾದಿಗೆ ಹಿಂದೆ ಬಂದಿದ್ದ. ಅವನಿಗೆ ಸಾಕಷ್ಟು ಗೌರವವನ್ನು ಇಲ್ಲಿ ನೀಡಲಾಗಿ ಹೆಚ್ಚುಕಮ್ಮಿ ಮೂರು ನಾಲ್ಕು ವರ್ಷಗಳ ಕಾಲ ಇಲ್ಲಿ ತಂಗಿದ್ದ. ಅವನಿದ್ದ ಅವಧಿಯಲ್ಲಿ ಆಡಳಿತ ವ್ಯವಸ್ಥೆಯಲ್ಲಿ ಅಭಿವೃದ್ಧಿ ಕಂಡಿತ್ತು. ಆ ಕಾಲಾವಧಿಯಲ್ಲಿ ಯಾವುದೇ ತರದ ಸೈನಿಕ ಕ್ರಮ ಕೈಗೊಳ್ಳುವಂತಹ ದ್ವೇಷ, ಸಂಘರ್ಷಗಳು ರಾಜ್ಯದಲ್ಲಿ ನಡೆದಿರಲಿಲ್ಲ. ಆದರೆ ಸ್ವಲ್ಪಮಟ್ಟಿಗಿನ ಅಪಾಯ ಮೊಘಲರಿಂದ ಬಂದಿತ್ತು.

■

*

## ಅಧ್ಯಾಯ-೧೧

**ಜಹಾಂಪನಾರು ಬೆಂಗಳೂರಿನ ಕೋಟೆಯನ್ನು ಮತ್ತು ಸುತ್ತಲಿನ ಪ್ರದೇಶವನ್ನು ವಶಪಡಿಸಿಕೊಂಡ ನಂತರದ ವಿವರಗಳು:**

ಜಹಾಂಪನಾರು ಬೆಂಗಳೂರಿನಿಂದ ಹೊರಟು ತನ್ನ ರಾಜಧಾನಿಗೆ ತಲಪಿದಾಗ ಮುಸ್ತಫಾ ಖಾನನನ್ನು ತನ್ನ ಬಳಿಗೆ ಬರಲು ದೂತನ ಮೂಲಕ ಕರೆಕಳುಹಿಸಿದರು. ಮುಸ್ತಫಾ ಖಾನ್, ಅಫ್ಜಲ್ ಖಾನನ ಬೆಂಬಲದಿಂದಾಗಿ ದೊಡ್ಡಸ್ತಿಕೆ, ಅಹಂಕಾರವನ್ನು ಪ್ರದರ್ಶಿಸತೊಡಗಿದ್ದ. ತನ್ನ ವ್ಯಕ್ತಿತ್ವಕ್ಕೆ ಧಕ್ಕೆಯಾಗುತ್ತದೆಂದು ಬಾದಶಾಹನ ಬಳಿ ಹೋಗುವುದು ಅವನಿಗೆ ಇಷ್ಟವಿರದೆ ಅಫ್ಜಲ್ ಖಾನನ್ನು ತನ್ನ ಪ್ರತಿನಿಧಿಯಾಗಿ ಕಳುಹಿಸ ಬಯಸಿದ. ಇದು ಸರಿಯಾದ ಕ್ರಮವಲ್ಲವೆಂದು ಅವನ ದರ್ಬಾರಿಗಳು ಅಭಿಪ್ರಾಯಪಟ್ಟಿದ್ದರು. ಇಂತಹ ತೀರ್ಮಾನದಿಂದಾಗಿ ಬಾದಶಾಹರೊಂದಿಗೆ ಮನಸ್ತಾಪ ಉಂಟಾಗಬಹುದೆಂದು ಎಚ್ಚರಿಸಿದ್ದರು. ಜಹಾಂಪನಾರಿಗೆ ಈ ಬೆಳವಣಿಗೆಯ ಬಗ್ಗೆ ತಿಳಿದಿರಲಿಲ್ಲ. ಮುಸ್ತಫಾ ಖಾನ್, ಅಫ್ಜಲ್ ಖಾನನನ್ನು ಈ ಕೆಲಸಕ್ಕೆ ಒಪ್ಪಿಸಿ ತಾನು ಸೈನ್ಯವನ್ನು ಹಿಡಿದುಕೊಂಡು ಬಾದಕಲ್ಲು(ಬಿದ್ಕಲ್?) ಕೋಟೆಯನ್ನು ವಶಪಡಿಸಿಕೊಳ್ಳಲು ದಂಡಯಾತ್ರೆಗೆ ಹೊರಟ. ಅಫ್ಜಲ್ ಖಾನ್ ಅಹ್ಮದ್ ನಗರಕ್ಕೆ ಹೊರಟು ಅಲ್ಲಿನ ಬೆಳವಣಿಗೆಯನ್ನು ಗಮನಿಸಿ ಜಹಾಂಪನಾರಿಗೆ ಒಂದು ಪತ್ರಬರೆದು 'ನಿಮ್ಮ ಸಂಪೂರ್ಣ ಕೆಲಸಗಳು ಮುಗಿದಿವೆ, ಈ ಪತ್ರದ ಜೊತೆಗೆ ಮುಸ್ತಫಾ ಖಾನನ ಬಗ್ಗೆ ವಿಚಾರಗಳನ್ನು ನಿಮಗೆ ತಿಳಿಸುತ್ತಿದ್ದೇನೆ' ಎಂದು ನಮೂದಿಸಿ ಕಳುಹಿಸಿಕೊಟ್ಟ. ಇದು ಸರಿಯಾಗಿದ್ದರೆ ಸರಿ. ಇಲ್ಲವಾದರೆ ಮುಸ್ತಫಾ ಖಾನನ್ನು ಕಳುಹಿಸಿಕೊಡುತ್ತೇನೆ ಎಂದೂ ಸಂದೇಶ ಕಳುಹಿಸಿದ.

ಈ ಅವಧಿಯಲ್ಲಿ ಜಹಾಂಪನಾ ಹಲವು ಬಾರಿ ಮುಸ್ತಫಾ ಖಾನನಿಗೆ ಎಚ್ಚರವಹಿಸುವಂತೆ ಸಲಹೆಗಳನ್ನು ನೀಡಿದ್ದರು. ಅಫ್ಜಲ್ ಖಾನನ ಈ ಮಾತುಗಳು

ಕೂಡ ಯಾವುದೋ ಪಿತೂರಿಯನ್ನು ಒಳಗೊಂಡಿದೆ ಎಂದು ತಿಳಿದಿದ್ದರು. ಅಫ್ಜಲ್ ಖಾನನಿಗೆ ಈ ಪತ್ರಕ್ಕೆ ಉತ್ತರ ಸಿಗದಿದ್ದುದನ್ನು ಕಂಡು ತನ್ನ ಖಾಸ ವ್ಯಕ್ತಿಯ ಮೂಲಕ ಇನ್ನೊಂದು ಪತ್ರವನ್ನು ಬರೆದು ನಿಮ್ಮ ಅಭಿಪ್ರಾಯವನ್ನು ತಿಳಿಯಬಯಸುತ್ತೇನೆ ಎಂಬ ಅರಿಕೆಯ ಪತ್ರವನ್ನು ಆಸ್ಥಾನದಲ್ಲಿದ್ದ ಈ ಲೇಖಕನ(ಶಿರಾಜಿಯ) ಮೂಲಕ ಬಾದಶಾಹನಿಗೆ ತಲಪಿಸುವಂತೆ ಮಾಡಿದ. ನಾನು(ಶಿರಾಜಿ) ಈ ಬಗ್ಗೆ ಬಾದಶಾಹರಿಗೆ ಅವನ ಪರವಾಗಿ ಒಳ್ಳೆಯ ಅಭಿಪ್ರಾಯ ಮೂಡುವಂತೆ ಮಾಡುವ ಅರಿಕೆ ಮಾಡಿಕೊಂಡಿದ್ದ. ಅವನು ತನ್ನ ಖಾಸ ವ್ಯಕ್ತಿಯ ಮೂಲಕ ನನಗೆ ಈ ಪತ್ರವನ್ನು ತಲಪಿಸಲು ಅರಿಕೆ ಮಾಡಿದ್ದಾನೆಂದು ಬಾದಶಾಹರು ಊಟಮಾಡುವ ವೇಳೆ ಲೇಖಕ ಪತ್ರದ ಬಗ್ಗೆ ಬಿನ್ನೈಸಿಕೊಂಡೆ. 'ನಾನು ತಿಳಿದಂತೆ ನಿಮ್ಮ ಸುತ್ತಲಿರುವ ಕೆಲವು ಚಾಡಿಕೋರರು ಈ ವ್ಯಕ್ತಿ ಆಸ್ಥಾನಕ್ಕೆ ಬಾರದಂತೆ ತಡೆಯುತ್ತಿದ್ದಾರೆ. ಆದುದರಿಂದ ನನ್ನ ಮೂಲಕ ನಿಮಗೆ ತಲಪಿಸಲು ಬಯಸುತ್ತಿದ್ದಾರೆ' ಎಂದೆ. ಬಾದಶಾಹ 'ಅವನು ಇಲ್ಲಿಗೆ ಬರಲು ಫರ್ಮಾನು ಹೊರಡಿಸುತ್ತೇನೆ ಬರೆದು ತನ್ನಿ' ಎಂದು ಆಜ್ಞೆಮಾಡಿದ. ಅಲ್ಲೇ ನಿಂತಿದ್ದ ಸೇವಕನಿಗೆ ರಾಜಮುದ್ರೆ ತರಲು ಹೇಳಿದ. ಆದರೆ ಅವನು ತರಲು ತಡವಾದುದರಿಂದ ಪತ್ರದ ಮೇಲೆ ಬಾದಶಾಹ ಸಹಿಮಾಡಿ ಅದರಲ್ಲಿ ಕೂಫಿ ಅಕ್ಷರದಲ್ಲಿ 'ಅಲಿ ಇಬ್ನ್ ಅಬೀತಾಲಿಬ್' ಎಂದು ಪತ್ರದ ಪ್ರಾರಂಭದ ಮೇಲ್ಭಾಗದಲ್ಲಿ ಬರೆದು ನೀಡಿದರು. ಅಫ್ಜಲ್ ಖಾನ್ ಅದೇ ದಿನ ರಾಜಧಾನಿಗೆ ಆಗಮಿಸಿದ. ಬೆಳಿಗ್ಗಿನಿಂದ ಸಂಜೆ ಆರರ ತನಕ ಜಹಾಂಪನಾರ ಜೊತೆ ವೈಯಕ್ತಿಕವಾಗಿ ಮಾತಾಡಿದ. ಇದರಿಂದ ಇತರ ದರ್ಬಾರಿಗಳ ಹೃದಯದಲ್ಲಿ ಬೆಂಕಿಯಂತಹ ಅಸೂಯೆ ಮೂಡತೊಡಗಿತ್ತು.

**ಅಫ್ಜಲ್ ಖಾನನ ದಕ್ಷಿಣಕ್ಕೆ ಆಗಮನ ಮತ್ತು ಅದಕ್ಕೆ ಸಂಬಂಧಿಸಿದ ವಿವರಗಳು:**

ಅಫ್ಜಲ್ ಖಾನನ ತಂದೆ ಇರಾನಿನ ಬಾದಶಾಹನ ನಗದು ಲೆಕ್ಕ ಇಡುವ ಪ್ರಾಮಾಣಿಕ ವಿದ್ಯಾವಂತ ದಸ್ತಾವೇಜು ಕಾರಕೂನರಾಗಿದ್ದರು. ಇರಾನಿನಲ್ಲಿ ಯಾವುದಾದರೂ ಸಂದಿಗ್ಧ, ಕಷ್ಟಕರ ಕೆಲಸಕಾರ್ಯಗಳು ಎದುರಾದಲ್ಲಿ ಇವರ ಸಲಹೆ ಸಹಕಾರವನ್ನು ಊರ ಪ್ರಮುಖರು ಪಡೆಯುತ್ತಿದ್ದರು. ಇವರಿಗೆ ಇನ್ನೂ ನಾಲ್ಕು ಸಹೋದರರಿದ್ದರು. ಇಬ್ಬರು ಆಸ್ಥಾನದ ನೌಕರಿಯಲ್ಲಿದ್ದರು. ಒಬ್ಬ ಮಂತ್ರಿಯೊಬ್ಬರ ಸಲಹಾಕಾರನಾಗಿದ್ದ. ಒಬ್ಬ ವ್ಯಾಪಾರ ಮಾಡುತ್ತಿದ್ದ. ಐದನೆಯವನು ಮತ್ತು ಕೊನೆಯ ಚಿಕ್ಕವನು ನಾನಾಗಿದ್ದೆ. ಅಫ್ಜಲ್ ಖಾನ್ ನಮ್ಮ ಕುಟುಂಬದಲ್ಲಿ ಅತ್ಯಂತ ಬುದ್ಧಿವಂತ ಮತ್ತು ಉನ್ನತ ಮಟ್ಟದ ವಿಚಾರವಂತ, ಜ್ಞಾನಿಯೆಂದು ಪರಿಗಣಿಸಲಾಗಿತ್ತು. ಅವನಲ್ಲಿ ಬಾಲ್ಯದಿಂದಲೇ ವಿದ್ಯಾವಂತನಾಗುವ ಆಸೆ ಚಿಗುರಿತ್ತು. ಎಂಟು ವರ್ಷ ಪ್ರಾಯದಲ್ಲಿ ತಂದೆ, ಚಿಕ್ಕತಂದೆ, ಮಾವಂದಿರ ಮಧ್ಯೆ ಲೌಕಿಕ ವಿಷಯದಲ್ಲಿ ದ್ವೇಷ ಹುಟ್ಟಿಕೊಂಡಿದ್ದರಿಂದಾಗಿ ತಿಕ್ಕಾಟವಾಗಿ ನಮ್ಮ ತಂದೆ ಕೊಲೆಯಾಗಿದ್ದರು. ಅವನು

ಎರಡು ವರ್ಷಗಳ ತನಕ ವಿದ್ಯಾಭ್ಯಾಸಕ್ಕಾಗಿ ತನ್ನ ಗುರುಗಳೊಂದಿಗೆ ಮಗ್ರಿಬ್ ನಮಾಜಿನ ನಂತರ ಇಷಾ ತನಕ ಕೂತಿರುತ್ತಿದ್ದ. ತನ್ನ ಎಲ್ಲ ಸಹಪಾಠಿಗಳ ಪೈಕಿ ವಿದ್ಯಾಭ್ಯಾಸ, ಚರ್ಚೆ, ವ್ಯಾಖ್ಯಾನ, ಪ್ರವಚನಗಳಲ್ಲಿ ಇವನು ಎಲ್ಲರಿಗಿಂತ ಮುಂದೆ ಇದ್ದ. ಅವರ ಪೈಕಿ ಯಾರಾದರೂ ಪಾಠವನ್ನು ಮರೆತಿದ್ದರೆ ಇವನ ಬಳಿ ಬಂದು ಕೇಳಿ ತಿಳಿದು ಕೊಳ್ಳುತ್ತಿದ್ದರು. ಇವನ ನೆನಪಿನ ಶಕ್ತಿ ಅದ್ಭುತವಾಗಿತ್ತು.

ಅವನ ಉಸ್ತಾದ್(ಗುರು) ಹಜ್ರತ್ ಶಾಹ ಕವಾಲುದ್ದೀನ್ ಪತ್ಹುಲ್ಲಾ ಶಿರಾಜಿಯಾಗಿದ್ದರು. ಇವರ ಹೆಚ್ಚು ಕಮ್ಮಿ ಇತಿಹಾಸ, ಭೂಗೋಲ, ಸಾಹಿತ್ಯ (ಇಲ್ಮೆ ಮಾಕುಲಾತ್)ಕ್ಕೆ ಸಂಬಂಧಿಸಿದ ಹನ್ನೊಂದು ಗ್ರಂಥಗಳು ಪ್ರಕಟಗೊಂಡಿದ್ದವು. ಅಫ್ಜಲ್ ಖಾನ್ ಕ್ಲಾಸಿಗೆ ಬಾರದಿದ್ದಲ್ಲಿ ಸ್ವತಃ ನಮ್ಮ ಮನೆಗೆ ಬಂದು ಈವತ್ತು ನೀನು ಕ್ಲಾಸಿಗೆ ಬಂದಿಲ್ಲ, ನಾನು ಕ್ಲಾಸಿನಲ್ಲಿ ಇಂತಹ ವಿಷಯಗಳಿಗೆ ಸಂಬಂಧಿಸಿದಂತೆ ಪಾಠ ಮಾಡಿದ್ದೆ ಎಂದು ಪಾಠ ಹೇಳುತ್ತಿದ್ದರು. ಮದ್ರಸಾ ವಿದ್ಯಾಭ್ಯಾಸದ ನಂತರ ಮಿರ್ಜಾ ಖೋಜ್ಗಿಯವರ ಸೇವೆಯಲ್ಲಿದ್ದ. ಮುಂದೆ ಬದುಕಿನಲ್ಲಿ ಆದ ತೀವ್ರ ಬದಲಾವಣೆಯಿಂದಾಗಿ ದೇಶ ತೊರೆದು ಹಿಂದುಸ್ಥಾನಕ್ಕೆ ಅವನು ಬರಬೇಕಾಯಿತು. ನಂತರ ಬಿಜಾಪುರದಲ್ಲಿ ಮದ್ರಸಾದಲ್ಲಿ ಉಸ್ತಾದನಾಗಿ ಕಾರ್ಯನಿರ್ವಹಿಸಿದ. ಅಲ್ಲಿನ ದೊಡ್ಡ ಮನುಷ್ಯರಿಗೆ ಇವನ ವಿದ್ವತ್ತಿನ ಬಗ್ಗೆ ತಿಳಿದಾಗ, ಅವರು ಪ್ರಯತ್ನಪಟ್ಟು ಜಹಾಂಪನಾರ ದರ್ಬಾರಿನಲ್ಲಿ ಸೇರಿಸಿದರು. ಬಾದಶಾಹರ ಮಂತ್ರಿ ಮಂಡಳದಲ್ಲಿ ಸೇರಿಕೊಂಡ. ಇವನ ಯೋಗ್ಯತೆ ಎಷ್ಟಿತ್ತೆಂದರೆ ರಾಜ್ಯಕ್ಕೆ ಸಂಬಂಧಿಸಿದ ಕಾರ್ಯಗಳ ಬಗ್ಗೆ ತೀರ್ಮಾನಗಳನ್ನು ಕೈಗೊಳ್ಳುವಾಗ ಇವನೊಂದಿಗೆ ದರ್ಬಾರಿಗಳು, ಬಾದಶಾಹರು ಸಲಹೆ ಕೇಳುತ್ತಿದ್ದರು, ಚರ್ಚೆ ಮಾಡುತ್ತಿದ್ದರು. ಆಸ್ಥಾನದಲ್ಲಿ ಇವನ ಹಿಡಿತ ಎಷ್ಟು ಬಲವಾಗಿತ್ತೆಂದರೆ ಕೆಲವರು ಇವನ ಮೇಲೆ ಅಸೂಯೆಪಟ್ಟುಕೊಂಡು ಒಳಗೊಳಗೆ ದ್ವೇಷಿಸುತ್ತಿದ್ದರು. ಮುಸ್ತಫಾ ಖಾನ್ ಬಾದಶಾಹರ ಪೇಶ್ವೆಯಾಗಿದ್ದವನು ಅಫ್ಜಲ್ ಖಾನನ್ನು ಬಾದಶಾಹರಿಂದ ದೂರವಿಡುವುದಕ್ಕಾಗಿ ಅಹ್ಮದ್‌ನಗರಕ್ಕೆ ಕಳುಹಿಸುವ ಶಿಫಾರಸು ಮಾಡಿ ಕಳುಹಿಸಿದ. ಅವನು ಅಲ್ಲಿಂದ ಹಿಂತಿರುಗಿದಾಗ, ನಡೆದ ಎಲ್ಲ ಬೆಳವಣಿಗೆಯನ್ನು ಬಾದಶಾಹರಿಗೆ ವಿವರವಾಗಿ ತಿಳಿಸಿದ. ಜಹಾಂಪನಾ ತನ್ನ ಆಳ್ವಿಕೆಯಲ್ಲಿ ಅನೇಕ ಪ್ರಮುಖ ಕಾರ್ಯಗಳನ್ನು ನೆರವೇರಿಸಲು ಎಲ್ಲ ದರ್ಬಾರಿಗಳಲ್ಲಿ ಸಲಹೆಯಾಚಿಸುತ್ತಿದ್ದರಾದರೂ ಅಫ್ಜಲ್ ಖಾನನೊಂದಿಗೆ ಮುಖ್ಯವಾಗಿ ಚರ್ಚಿಸುತ್ತಿದ್ದರು. ರಾಜ್ಯ ಆಡಳಿತದ ಪ್ರಮುಖ ಕೆಲಸಗಳನ್ನು ಅಫ್ಜಲ್ ಖಾನನ ಜವಾಬ್ದಾರಿಗೆ ಒಪ್ಪಿಸುತ್ತಿದ್ದರು. ಕೆಲವು ಬಾರಿ ಗುಪ್ತಚಾರರನ್ನು ಕೂಡ ಅಫ್ಜಲ್ ಖಾನನ ನೇತೃತ್ವದಲ್ಲಿ ಬಿಟ್ಟಿದ್ದರು. ದಿನವೂ ನೆರೆಯ ಬಾದಶಾಹರ ಚಲನವಲನಗಳ ಬಗ್ಗೆ ಗುಪ್ತಚರರು ವರದಿಯೊಪ್ಪಿಸುತ್ತಿದ್ದರು. ಅಫ್ಜಲ್ ಖಾನ್ ರಾಜ್ಯದ ಎಲ್ಲಾ ಕಾರುಬಾರುಗಳನ್ನು ನೋಡಿಕೊಳ್ಳುತ್ತಿದ್ದರೆ, ನಾನು ಬಾದಶಾಹ

ಸಿಂಹಾಸನದಲ್ಲಿ ಕೂತು ಆರಾಮ ಮಾಡಿಕೊಂಡು ಮಜಾ ಅನುಭವಿಸುತ್ತಿದ್ದೆ ಎಂದು ಜಹಾಂಪನಾ ಹೇಳುತ್ತಿದ್ದರು.

ಈ ಸಮಯದಲ್ಲಿ ಮುಸ್ತಫಾ ಖಾನ್ ಬೆಂಗಳೂರಿನಲ್ಲಿದ್ದ. ಅಫ್ಜಲ್ ಖಾನ ಏನೋ ತನಗೆ ಕೆಟ್ಟದ್ದನ್ನು ಮಾಡುವ ಪಿತೂರಿ ನಡೆಸುತ್ತಿದ್ದಾನೆನ್ನುವ ಸುದ್ದಿ ಮುಸ್ತಫಾ ಖಾನನ ಕಿವಿಗೆ ಯಾರೋ ಮುಟ್ಟಿಸಿದ್ದರಿಂದ ಆತಂಕಿತನಾಗಿದ್ದ. ಈ ಸಂಗತಿಯನ್ನು ಜಹಾಂಪನಾರಿಗೆ ತಿಳಿಸಲಾಯಿತು. ಜಹಾಂಪನಾ ಈ ಸಂಗತಿಯನ್ನು ತಿಳಿದು ಬಹಳ ನೊಂದುಕೊಂಡರು. ಕೂಡಲೇ ಅಫ್ಜಲ್ ಖಾನನ ಬಳಿಗೆ ದೂತನನ್ನು ಕಳುಹಿಸಿ ಬರಹೇಳಿದರು. ಮುಸ್ತಫಾ ಖಾನನಿಗೆ ಜಹಾಂಪನಾ ಈ ಬಗ್ಗೆ ವಿಚಾರಣೆ ನಡೆಸುತ್ತಿರುವ ಸಂಗತಿ ತಿಳಿದು ಬೇರೆ ಇನ್ನಾವ ಪರಿಹಾರವೂ ಈ ಸಮಸ್ಯೆಗೆ ಇಲ್ಲವೆಂದು ತಿಳಿದು ಜಹಾಂಪನಾರ ಬಳಿಗೆ ಬರಲು ನಿರ್ಧರಿಸಿದ. ಈ ತನ್ನ ತೀರ್ಮಾನವನ್ನು ಅವರಿಗೆ ತಿಳಿಸುವ ಮತ್ತು ಅಫ್ಜಲ್ ಖಾನನ ಪಿತೂರಿಯ ಸಂಗತಿಯ ಬಗ್ಗೆ ಚರ್ಚಿಸುವ ಕೆಲಸಕ್ಕೆ ಜಹಾಂಪನಾರ ಅತ್ಯಂತ ಆಪ್ತರಲ್ಲಿ ಒಬ್ಬ ಮತ್ತು ಬಾಲ್ಯದ ಸಹಪಾಠಿಗಳಲ್ಲಿ ಒಬ್ಬನಾಗಿದ್ದ ಓರ್ವ ದರ್ಬಾರಿ ಕಾಮಿಲ್ ಖಾನನನ್ನು ಆಯ್ಕೆ ಮಾಡಿಕೊಂಡ. ಅವನ ಮೂಲಕ ಜಹಾಂಪನಾರಿಗೆ ತನ್ನ ವಿಚಾರಗಳನ್ನು ಮುಟ್ಟಿಸಿದ. ಜಹಾಂಪನಾರಿಗೆ ಈ ಪಿತೂರಿಯ ಬಗ್ಗೆ ಮನದಟ್ಟಾಯಿತು. ಕಾಮಿಲ್ ಖಾನ್ ಮುಸ್ತಫಾ ಖಾನನ ವಿಚಾರವನ್ನು ಜಹಾಂಪನಾರ ಮುಂದೆ ಹೇಳಿದಾಗ, ಅಫ್ಜಲ್ ಖಾನನನ್ನು ಆಸ್ಥಾನಕ್ಕೆ ಕರೆಸಿದರು. 'ಮುಸ್ತಫಾ ಖಾನ ನಿನ್ನಿಂದ ತುಂಬ ಭಯಪಟ್ಟುಕೊಂಡಿದ್ದಾನೆ, ಈ ಬಗ್ಗೆ ನಿನ್ನ ಅಭಿಪ್ರಾಯವೇನು?' ಎಂದು ಕೇಳಿದರು. ಅಫ್ಜಲ್ ಖಾನನ ಉತ್ತರದಿಂದ ಖಾಮಿಲ್ ಖಾನನಿಗೆ ಆಶ್ಚರ್ಯವಾಯಿತು. ಅವನ ಬಾಯಿಯಲ್ಲಿ 'ಸುಬ್ಹಾನಲ್ಲಾ' ಎಂಬ ಉದ್ಗಾರವೆದ್ದಿತು. ನೀನು ಅವನ ಬಗ್ಗೆ ಗೌರವ ಮತ್ತು ಪ್ರೀತಿಯನ್ನಿಟ್ಟುಕೊಂಡಿದ್ದಿ ಎನಿಸುತ್ತದೆ. ಆದರೆ ಅವನಿಗೆ ನಿನ್ನಿಂದ ಪ್ರಾಣಾಪಾಯವಿದೆ ಎಂದನಿಸಿದೆ ಎಂದ. 'ಅವನನ್ನು ಬಂದಿಸುವುದಕ್ಕೆ ನನಗೆ ಬಾದಶಾಹರ ಆಜ್ಞೆ ಇದೆ' ಎಂದು ಅಫ್ಜಲ್ ಖಾನ್ ಹೇಳಿದ.

ಖಾಮಿಲ್ ಖಾನನ ಅಭಿಪ್ರಾಯದಲ್ಲಿ ದ್ವಂದ್ವವಿರುವುದು ಬೆಳಕಿಗೆ ಬಂತು. ಖಾಮಿಲ್ ಖಾನ್, ಮುಸ್ತಫಾ ಖಾನನ ಮಾತುಗಳನ್ನು ದೊಡ್ಡದಾಗಿಸಿ ಹೇಳಿದ. 'ನಾನು ಜಹಾಂಪನಾ ಆಗಿರುತ್ತಿದ್ದರೆ ಈ ಮಾತುಗಳನ್ನು ಮತ್ತು ಒಂದು ಮನವಿಯನ್ನು ಬರೆದು ತಿಳಿಸುತ್ತಿದ್ದೆ' ಎಂದು ಅಫ್‌ಜಲ್ ಖಾನ್ ಹೇಳಿದ. ಇದರಿಂದ ಜಹಾಂಪನಾ ಮತ್ತು ಖಾಮಿಲ್ ಖಾನ್ ಸಂತೋಷಪಟ್ಟುಕೊಂಡು ಬರೆಯಲು ಒಪ್ಪಿಗೆ ನೀಡಿದರು. ಅಫ್ಜಲ್ ಖಾನ್ ಒಂದು ಮನವಿಯನ್ನು ಸ್ವತಃ ಮುನ್ಶಿಗಳೇ ಆಶ್ಚರ್ಯಪಡುವ ರೀತಿಯ ಒಕ್ಕಣೆಯಲ್ಲಿ ಬರೆದು ನೀಡಿದ. ಈ ಮನವಿ ಆಕರ್ಷಕವಾಗಿ, ಚಿಕ್ಕದಾಗಿತ್ತು.

ಖಾಮಿಲ್ ಖಾನ್ ಸಂದರ್ಭ ನೋಡಿ ಅವನ ಬಳಿಗೆ ಕಳುಹಿಸಿದ. ಮುಸ್ತಫಾ ಖಾನ್ ಇದನ್ನು ಓದಿ ಬಾದಶಾಹರ ಬಳಿ ಹೋದ. ಜಹಾಂಪನಾರ ಮುಂದೆ ಹಿಂದಿನಂತೆ ಸ್ವಾಮಿನಿಷ್ಠೆಯನ್ನು ಪ್ರದರ್ಶಿಸಿ, ತನ್ನ ಹಿಂದಿನ ಸ್ಥಳಕ್ಕೆ ಪ್ರಯಾಣ ಮಾಡಿದ. ಮುಂದೆ ತನ್ನನ್ನು ಕರೆಯಲು ಆಜ್ಞೆಯಾದರೆ ಮತ್ತೆ ಬರುವೆನು, ಇಂತಹ ಸಂದರ್ಭ ಮುಂದೆಂದೂ ಬಾರದು ಎಂಬ ಆಶ್ವಾಸನೆಯನ್ನು ಕೂಡ ನೀಡಿದ.

ಬೆಂಗಳೂರಿನ ನಾಲ್ಕೂ ದಿಕ್ಕಿನಲ್ಲಿ ಪರ್ವತಗಳು, ಕಾಡುಗಳು ಇದ್ದವು. ಹಿಂದೂ ಆದಿವಾಸಿಗಳು ಇಲ್ಲಿನ ಈ ಕಾಡಿನಲ್ಲಿ ಪುರಾತನ ಕಾಲದಿಂದ ವಾಸವಾಗಿದ್ದರು. ರಾಮರಾಜನ ಏಳು ಮಂತ್ರಿಗಳು ಬೆಂಗಳೂರಿನ ಕೋಟೆಯಲ್ಲಿ ವಾಸವಾಗಿದ್ದರು. ಅವರು ಯಾರ ಮಾತನ್ನು ಕೂಡ ಕೇಳುತ್ತಿರಲಿಲ್ಲ. ಜಹಾಂಪನಾ ಬೆಂಗಳೂರಿಗೆ ಆಗಮಿಸಿದಾಗ ಇಲ್ಲಿನ ಬಹಳಷ್ಟು ಜನರು ಅವರಿಗೆ ಪ್ರಣಾಮ ಮಾಡಿದರು. ಈ ಪ್ರದೇಶದಲ್ಲಿ ಎಲ್ಲೆಡೆ ಸುಖಶಾಂತಿಯಿತ್ತು. ಜಹಾಂಪನಾ ಬೆಂಗಳೂರಿನಲ್ಲಿರುವ ತನಕ ಪ್ರತೀವರ್ಷ ನಾಲ್ಕು ಲಕ್ಷ ಆರು ಸಾವಿರ ಹವನ್ ಮೊಬಲಗನ್ನು ಇಲ್ಲಿನವರು ಬಾದಶಾಹರ ಖಜಾನೆಗೆ ಕಪ್ಪ ಕಾಣಿಕೆಯಾಗಿ ಸಲ್ಲಿಸುತ್ತಿದ್ದರು. ಜಹಾಂಪನಾ ಹಿಂತಿರುಗಿ ರಾಜಧಾನಿಗೆ ಹೋದ ನಂತರದಲ್ಲಿ ಈ ಕಪ್ಪಕಾಣಿಕೆಯ ಮೊತ್ತವು ಕಡಿಮೆಯಾಗತೊಡಗಿತು. ದಿನ ನಿತ್ಯ ಒಂದು ಸಾವಿರ ಹವನ್‌ಗಳನ್ನು ಆನೆ, ಕುದುರೆಗಳ ಆಹಾರ ಸರಬರಾಜಿನ ಖರ್ಚಿಗಾಗಿ ಕೊಡುವೆನೆಂದು ಮುಸ್ತಫಾ ಖಾನನು ಕರಾರು ಮಾಡಿಕೊಂಡಿದ್ದ. ನಿಜವಾಗಿ ಅವನು ಈ ಕರಾರನ್ನು ಪಾಲಿಸಲಾಗಲಿಲ್ಲ. ರಾಜ್ಯದಲ್ಲಿ ಆದಾಯದ ಕೊರತೆಯಾಗದಿರಲೆಂದು ನಲ್ವತ್ತೆರಡು ದಿನಗಳ ಕಾಲ ತನ್ನ ವೈಯಕ್ತಿಕ ಗಳಿಕೆಯಿಂದ ಪ್ರತೀದಿನ ನೀಡುತ್ತಿದ್ದ. ಎಲ್ಲಾದರೂ ಖಾಮಿಲ್ ಖಾನ್ ತನ್ನ ಈ ಹುದ್ದೆಗಾಗಿ ದಾವೆ ಮಾಡದಿರುವಂತೆ ಎಚ್ಚರವಹಿಸಿದ್ದ. ಮುಸ್ತಫಾ ಖಾನ್ ಕ್ರಮೇಣ ಈ ಪಾಳಯಗಾರ ಹುದ್ದೆಯ ಆಸಕ್ತಿ ಕಳೆದುಕೊಂಡು, ತನ್ನಲ್ಲಿದ್ದ ಜಹಾಂಪನಾರ ಮೊಹರನ್ನು ಅವರಿಗೆ ಹಿಂತಿರುಗಿಸಿದ. ಜಹಾಂಪನಾರು ಈ ಮೊಹರನ್ನು ಅಫ್ಜಲ್ ಖಾನನಿಗೆ ನೀಡಿದರು. ಬೆಳಗ್ಗಿನಿಂದ ರಾತ್ರಿಯ ತನಕ ಪ್ರತಿದಿನವೂ ಅಫ್ಜಲ್ ಖಾನ್ ಇಟ್ಟುಕೊಂಡು ರಾತ್ರಿಹೊತ್ತು ಜಹಾಂಪನಾ ಖಜಾನೆಗೆ ತಲಪಿಸುತ್ತಿದ್ದ. ಅಫ್ಜಲ್ ಖಾನನ ಬಳಿಯಲ್ಲಿ ಈ ಮೊಹರು ಇರುವ ತನಕ ರಾಜ್ಯದ ಆರ್ಥಿಕ ಪರಿಸ್ಥಿತಿ ಹತೋಟಿಗೆ ಬಂತು. ಈ ಹಿಂದಿನ ಯಾರಿಗೂ ಈ ಸುಧಾರಣೆಯನ್ನು ಮಾಡಲು ಸಾಧ್ಯವಾಗಿರಲಿಲ್ಲ.

**ಖಾಮಿಲ್ ಖಾನ್ ಪೇಶ್ವೆ ಪದವಿ ಸ್ವೀಕಾರ ಮತ್ತು ಪೆನುಗೊಂಡಕ್ಕೆ ಜಹಾಂಪನಾರ ಭೇಟಿಯ ವಿವರಗಳು:**

ತನಗೆ ಒಂದು ಪೇಶ್ವೆಯ ಪದವಿ ಪಡೆಯಲು ಹಿಂದೂ ಮುಂದಾಳು ಪ್ರಮುಖರ ನೆರವು ಪಡೆದು ಖಾಮಿಲ್ ಖಾನ್ ಬಹಳಷ್ಟು ಪ್ರಯತ್ನ ಪಟ್ಟಿದ್ದ. ನಾವೆಲ್ಲ ಸೇರಿ

ಜಹಾಂಪನಾರ ಜೊತೆಯಲ್ಲಿ ಪೆನುಗೊಂಡಕ್ಕೆ ಹೋಗಿ ಕೋಟೆಯನ್ನು ವಶಪಡಿಸಿ ಕೊಳ್ಳುವ ಎಂದು ಆ ಹಿಂದೂ ಪ್ರಮುಖರಿಗೆ ಆಸೆ ಹುಟ್ಟಿಸುವ ಆಶ್ವಾಸನೆಯನ್ನು ನೀಡಿದ್ದ. ಈ ಸಮಯದಲ್ಲಿ ರಾಮರಾಜನ ಸಹೋದರನ ಮಗ ಪೆನುಗೊಂಡೆಯ ಕೋಟೆಯ ರಾಜನಾಗಿದ್ದ. ಇವನು ಇನ್ನೂ ಮೂರು ನಾಲ್ಕು ಕೋಟೆಗಳ ಒಡೆಯನಾಗಿದ್ದ. ಇವನಿಗೆ ಇನ್ನೂ ಇಬ್ಬರು ಸಹೋದರರು ಇದ್ದರು. ಎಲ್ಲರೂ ಒಗ್ಗಟ್ಟಾಗಿ ಒಟ್ಟಿಗೆ ಇರುತ್ತಿದ್ದರು. ಅವನ ಮಂತ್ರಿಗಳಲ್ಲಿ ನಾಲ್ಕು ಹಿರಿಯರಿದ್ದರು. ಹೆಚ್ಚುಕಮ್ಮಿ ನೂರ ಐವತ್ತು ಆನೆಗಳ ಸೈನ್ಯವಿತ್ತು. ಎರಡು ಮೂರು ಸಾವಿರದಷ್ಟು ಕುದುರೆಗಳಿದ್ದವು. ಹನ್ನೆರಡು ಸಾವಿರ ಕಾಲಾಳುಗಳು ಇದ್ದರು. ಈ ಎಲ್ಲರೂ ರಾಜನ ಹತೋಟಿಯಲ್ಲಿ ಒಗ್ಗಟ್ಟಾಗಿದ್ದರು. ತಮ್ಮ ತಮ್ಮ ಪಾಡಿಗೆ ತಾವು ಇದ್ದರು. ಪೆನುಗೊಂಡೆಯಿಂದ ತೀರಕ್ಕಲ್ ತನಕದ ಪ್ರದೇಶ ಖಾಲಿಯಾಗಿದೆ, ಜಹಾಂಪನಾರ ಒಪ್ಪಿಗೆಯಿದ್ದರೆ ಕೆಲವೇ ದಿನಗಳಲ್ಲಿ ನಾನು ವಶಪಡಿಸಿಕೊಳ್ಳ ಬಲ್ಲೆನೆಂದು ಖಾಮಿಲ್ ಖಾನ್ ತನ್ನ ಅಭಿಪ್ರಾಯವನ್ನು ಜಹಾಂಪನಾರಿಗೆ ತಿಳಿಸಿದ. 'ನನ್ನ ಈ ಹಿಂದೂ ಸೇನಾ ತಂಡ ಬಹಳ ಬಲಶಾಲಿಗಳಾಗಿ ಬೆಳೆದಿದ್ದಾರೆ. ಸಾವಿರಾರು ಶಕ್ತಿಶಾಲಿ ಕುದುರೆಗಳು ಅವರ ಬಳಿಯಲ್ಲಿದ್ದು, ಹುಮ್ಮಸ್ಸು ಇದೆ. ನನ್ನ ಅಭಿಪ್ರಾಯದಂತೆ ಈ ವಿಷಯದಲ್ಲಿ ನಮ್ಮ ಹಸ್ತಕ್ಷೇಪ ಕೂಡದು. ಯಾಕೆಂದರೆ ಪೆನುಗೊಂಡ ಮತ್ತಿತರ ಕೋಟೆಗಳಲ್ಲಿ ಆಳ್ವಿಕೆಯನ್ನು ಮಾಡುತ್ತಿರುವವರು ಹಿಂದುಗಳಾಗಿದ್ದು ಪರಸ್ಪರ ಸಂಬಂಧಿಗಳಾಗಿದ್ದಾರೆ. ಇದರಿಂದ ಮುಂದೆ ದೊಡ್ಡ ಆತಂಕಕಾರಿ ಸಂದರ್ಭಗಳು ಎದುರಾಗಬಹುದು. ಆಗ ನಿಮ್ಮನ್ನು ಬಚಾವು ಮಾಡಲು ನನ್ನಿಂದ ಸಾಧ್ಯವಾಗದೇ ಹೋಗಬಹುದು' ಎಂದು ಜಹಾಂಪನಾ ಹೇಳಿದರು. 'ನಾನು ಅವರ ಮಂತ್ರಿಗಳು ನಾಯಕರೊಂದಿಗೆ ಈ ಬಗ್ಗೆ ಸಲಹೆ ಸೂಚನೆಗಳನ್ನು ನೀಡಿ ಚರ್ಚಿಸಿದ್ದೇನೆ. ಅವರಿಗೆ ಆಶ್ವಾಸನೆಯನ್ನೂ ನೀಡಿದ್ದೇನೆ. ಅವರಿಂದ ಶಪಥವನ್ನು ಮಾಡಿಸಿಕೊಂಡಿದ್ದೇನೆ. ಭರವಸೆಯನ್ನು ಆಶ್ವಾಸನೆಯನ್ನು ಕೂಡ ಪಡೆದುಕೊಂಡಿದ್ದೇನೆ. ಅವರು ನಿಮ್ಮ ವಿರುದ್ಧ ತಿರುಗಲಾರರು. ನಿಮ್ಮ ನಿಷ್ಠಾವಂತರಾಗಿ ಸೇವೆಯನ್ನು ಕೊನೆಯ ತನಕ ಮಾಡುವ ಪ್ರಮಾಣವನ್ನು ಮಾಡಿಕೊಂಡಿದ್ದಾರೆ' ಎಂದು ಸಮಜಾಯಿಸಿ ಜಹಾಂಪನಾರಲ್ಲಿ ಪ್ರಲೋಭನೆ ಹುಟ್ಟಿಸಿದ. ಇದರ ಪರಿಣಾಮವಾಗಿ ಜಹಾಂಪನಾರು ಸೈನ್ಯವನ್ನು ಕಟ್ಟಿಕೊಂಡು ದಿಗ್ವಿಜಯ ಯಾತ್ರೆಗೆ ಹೊರಟರು. ಇನ್ನೂ ಪ್ರಯಾಣದಲ್ಲಿರುವಾಗಲೇ ಮಧ್ಯೆ ಶಸ್ತ್ರಾಸ್ತ್ರಗಳ ತಯಾರಿಯೊಂದಿಗೆ ಸನ್ನದ್ಧರಾದ ಹಿಂದೂ ಐದು ಸಾವಿರ ಸೈನಿಕರು ಸಿಕ್ಕಿದರು. ಅವರು ಬಾಣಗಳ ಮಳೆಗೆಯ್ಯುತ್ತ ಎದುರಾದರು. ಅವರು ಸಂಪೂರ್ಣ ಸಜ್ಜಾಗಿದ್ದರು. ಹೆಚ್ಚು ಕಮ್ಮಿ ಎರಡು ಫರ್‌ಸಖ್(ಮೈಲಿ) ದೂರದ ರಸ್ತೆಯನ್ನು ತಡೆಹಿಡಿದಿದ್ದರು.

ಹೀಗೆ ನಾಲ್ಕೂ ದಿಕ್ಕಿನಲ್ಲಿ ಈ ಸೇನೆಯವರು ಮುತ್ತಿಗೆ ಹಾಕಿ ಗುಲ್ಲೆಬ್ಬಿಸಿ ಏನಾದರೊಂದು ಘಟನೆ ಘಟಿಸುವಂತೆ ಮಾಡುತ್ತಿದ್ದರು. ಇವರನ್ನು ಮಣಿಸಿದರೂ ಮತ್ತೆ ಮತ್ತೆ ಎದ್ದು ಬರುತ್ತಿದ್ದರು. ಹಾಗೂ ಹೀಗೂ ಪೆನುಗೊಂಡವನ್ನು ತಲಪಿದ್ದಾಯಿತು. ಕೆಲವು ದಿನಗಳ ಕಾಲ ಕೋಟೆಯನ್ನು ಮುತ್ತಿಗೆ ಹಾಕುವುದಕ್ಕೆ ಸಾಧಕ ಬಾದಕಗಳನ್ನು ನೋಡಿ ಮುತ್ತಿಗೆ ಹಾಕಿಯೇ ಬಿಟ್ಟರು. ಇದರಿಂದಾಗಿ ಕೋಟೆಯ ಒಳಗಿದ್ದ ಜನರು ಆತಂಕಗೊಂಡರು. ಹಿಂದೂ ಸೇನೆಯ ಸರದಾರರು ಎರಡು ದಿನಗಳು ಕಳೆದರೂ ಕೋಟೆ ಇನ್ನೂ ವಶವಾಗದಿರುವಾಗ ಕೋಟೆಯೊಳಗಿನ ಜನರೊಂದಿಗೆ 'ನೀವು ಹಿಂದಿನಬಾಗಿಲಿಂದ ಓಡಿಹೋಗಿ, ನಾವು ಇಲ್ಲಿ ಹಿಂಬದಿಯಲ್ಲಿ ನಿಲ್ಲುತ್ತೇವೆ' ಎಂದರು. ಇದರಿಂದಾಗಿ ಜಹಾಂಪನಾರ ಸೈನ್ಯಕ್ಕೆ ಹಾನಿಯಾಯಿತು. ಈ ಹಿಂದೂ ಸೈನಿಕರು ದ್ರೋಹಿಗಳಾಗಿ ನಮ್ಮ ವಿರುದ್ಧ ನಿಂತಿದ್ದಾರೆ. ನಾವೀಗ ಏನಾದರೊಂದು ತೀರ್ಮಾನ ತೆಗೆದುಕೊಳ್ಳಬೇಕೆಂದು ಸೈನಿಕರು ಜಹಾಂಪನಾರಿಗೆ ತಿಳಿಸಿದರು. ಇದರಿಂದ ಕೆಲವೇ ದಿನಗಳು ಅಲ್ಲಿ ನಿಂತು ಜಹಾಂಪನಾ ಹಿಂತಿರುಗಿ ರಾಜಧಾನಿಗೆ ಹೋಗುವ ತೀರ್ಮಾನ ಕೈಗೊಂಡರು. ಬಿಜಾಪುರ ತಲಪುವ ಮೊದಲು ಕೆಲವು ದಿನಗಳ ಕಾಲ ಸರಹದ್ದಿನ ಪ್ರದೇಶದಲ್ಲಿ ತಂಗಿದ್ದರು. ಅಲ್ಲಿ ಖಾಮಿಲ್ ಖಾನನಿಗೆ ಸಂಬಂಧಿಸಿದ ಓರ್ವ ಸಯ್ಯದಿಯ ಬಗ್ಗೆ ತಿಳಿದು ಬಂತು. ಈ ಸಯ್ಯದಿ ತನ್ನ ಅಹಂಕಾರದ ಕೃತ್ಯಗಳಿಂದಾಗಿ ಮತ್ತು ಜಹಾಂಪನಾರ ಆಜ್ಞೆಯನ್ನು ಪಾಲಿಸದಿದ್ದುದರಿಂದ ಎರಡು ಮೂರು ಬಾರಿ ಬಂಧನಕ್ಕೊಳಗಾಗಿದ್ದ. ಒಂದು ದಿನ ಖಾಮಿಲ್ ಖಾನ್ ಮತ್ತು ಜಹಾಂಪನಾ ಗೆಳೆತನದಲ್ಲಿ ಕೈಯಲ್ಲಿ ಕೈ ಹಿಡಿದುಕೊಂಡು ನಡೆದು ಬರುತ್ತಿದ್ದಾಗ ಈ ಸಯ್ಯದನ ತಂದೆ ದುತ್ತನೆ ಎದುರಾಗಿ 'ಖಾಮಿಲ್ ಖಾನ್ ಬಹಳ ಕ್ರೂರಿಯಾದ ಮನುಷ್ಯ ನನ್ನ ಮಗನನ್ನು ಬಂಧಿಸುವಂತೆ ಮಾಡಿದ್ದಾನೆ' ಎನ್ನುತ್ತಾ ಬಂದು ಖಾಮಿಲ್ ಖಾನನ ಎದೆಗೆ ಜೋರಾಗಿ ಗುದ್ದಿದ! ಅವನ ತಲೆಯ ಪಗಡಿ ನೆಲಕ್ಕೆ ಬಿತ್ತು. 'ನೀವು ಈ ನೀಚ ಮನುಷ್ಯನ ಜೊತೆಗೆ ಸೇರಿ ನಿಮ್ಮ ಮರ್ಯಾದೆಯನ್ನು ಕಳೆದುಕೊಳ್ಳುತ್ತಿದ್ದೀರಿ' ಎಂದು ಹೇಳಿದ. ಇಷ್ಟಾಗಿಯೂ ಬಾದಶಾಹ ಅವನನ್ನು ಪೇಶ್ವ ಪದವಿಯಿಂದ ವಜಾಗೊಳಿಸಿರಲಿಲ್ಲ. ಆದರೆ ಅವನ ನೌಕರಿಯನ್ನು ಕೂಡ ಖಾಯಂಗೊಳಿಸಿರಲಿಲ್ಲ. ಎಲ್ಲ ಕೆಲಸಗಳೂ ಅವನ ಹೆಸರಲ್ಲೇ ನಡೆಯುತ್ತಿತ್ತು.

**ಅಫ್ಜಲ್ ಖಾನನ ನೇತೃತ್ವದಲ್ಲಿ ರಾಜಧಾನಿ ಬಿಜಾಪುರಕ್ಕೆ ನಾಲ್ಕೂ ದಿಕ್ಕಿನಲ್ಲಿ ಆವರಣದ ಗೋಡೆ ರಚಿಸಿದ ವಿವರಗಳು:**

ಅಫ್ಜಲ್ ಖಾನ್ ಜಹಾಂಪನಾರ ರಾಜ್ಯದ ವಿಸ್ತಾರಕ್ಕೆ ಕೊಡುಗೆ ನೀಡಿದ್ದ. ಸೈನ್ಯದ ಸಂಖ್ಯೆಯನ್ನು ಹೆಚ್ಚಿಸಿದನಲ್ಲದೆ ಪ್ರಜೆಗಳು ಸದಾ ಬಾದಶಾಹರನ್ನು ಬೆಂಬಲಿಸುವಂತೆ ಮಾಡಿದ್ದ. ಪ್ರಜೆಗಳಲ್ಲಿ ಬಹುಸಂಖ್ಯಾತರು ಬಾದಶಾಹರ ಸಿಂಹಾಸನಕ್ಕೆ

ವಿಧೇಯರಾಗಿದ್ದರು. ಆದರೆ ವೈರಿಗಳ ಕಡೆಯಿಂದ ಆತಂಕ ಸದಾಕಾಲ ಕಾಡುತ್ತಿತ್ತು. ಈ ವೈರಿ ಬಾದಶಾಹರು ಒಗ್ಗಟ್ಟಾಗುತ್ತಾರೋ, ಯಾವಾಗ ಬಿಜಾಪುರ ನಗರಕ್ಕೆ ಮುತ್ತಿಗೆ ಹಾಕಿ ವಶಪಡಿಸಿಕೊಳ್ಳುವರೋ ಎಂಬ ಶಂಕೆ ಇದ್ದೇ ಇತ್ತು. ಈ ಕಾರಣಕ್ಕಾಗಿ ಸಂಪೂರ್ಣ ನಗರದ ಆವರಣದ ಗೋಡೆಯ ಎತ್ತರವನ್ನು ಇನ್ನೂ ಹೆಚ್ಚಿಸಲು ಹಾಗೂ ಸಶಕ್ತಗೊಳಿಸಲು ಆಜ್ಞೆ ಮಾಡಿದ್ದರು.

ಕೋಟೆಯ ಆವರಣದ ಗೋಡೆಯ ಎತ್ತರವನ್ನು ೨೦ ಝುರಾ(ಗಜ) ಹಾಗೂ ೩೦ ಫರ್‌ಸಖ್ (ಮೈಲಿ) ಉದ್ದವೂ ೧೫ ಫರ್‌ಸಖ್ ವ್ಯಾಜ್ಯದಲ್ಲಿ ವ್ಯಾಪಿಸಿತ್ತು. ಇಂತಹ ಬಲಿಷ್ಠ ಆವರಣ ನಿರ್ಮಿಸಲು ಸಮಸ್ತ ದರ್ಬಾರಿಗಳು, ಸೈನಿಕರು, ನೌಕರರು ಕೈಹಾಕಬೇಕೆಂದು ಆಜ್ಞೆ ವಿಧಿಸಲಾಗಿತ್ತು. ಪ್ರತೀ ರಾಜ್ಯಗಳಿಂದಲೂ ನಿಪುಣ ಕಾರ್ಯ ತಜ್ಞರನ್ನು ಕರೆಸಲಾಯಿತು. ಈ ಕೆಲಸಕಾರ್ಯಗಳನ್ನು ಸಾಧ್ಯವಾದಷ್ಟು ಬೇಗ ಪೂರ್ತಿಗೊಳಿಸುವ ಸಲುವಾಗಿ ಹಲವಾರು ಪರಿಣಿತ ಕೆಲಸಗಾರರನ್ನು ಈ ಕೆಲಸದಲ್ಲಿ ತೊಡಗಿಸಿದರು. ಎರಡು ವರ್ಷಗಳ ಕಾಲ ಆವರಣ ಕಟ್ಟುವ ಕೆಲಸ ನಡೆದು ಸಂಪೂರ್ಣಗೊಂಡಿತು. ೧೨೦ ಬುರುಜುಗಳು, ೭೦ ಕಿಂಡಿಗಳು, ೬,೦೦೦ ಕಮಾನುಗಳು, ಆರು ಹೆಬ್ಬಾಗಿಲುಗಳು, ನಗರದ ಮುಖ್ಯದ್ವಾರವನ್ನು ಪವಿತ್ರ ಮಕ್ಕಾದ ಕಾಬಾ ಇರುವ ದಿಕ್ಕಿಗೆ ಸರಿಯಾಗಿ ಸ್ಥಾಪಿಸಲಾಗಿತ್ತು. ಇದರಿಂದ ಈ ಹೆಬ್ಬಾಗಿಲಿಗೆ 'ಮಕ್ಕಾ ದರ್ವಾಜಾ' ಎಂಬ ಹೆಸರಾಗಿತ್ತು. ಇನ್ನಿತರ ಬಾಗಿಲುಗಳಿಗೆ ಸರಿಯಾಗಿ ಹತ್ತಿರ ಇರುವ ಊರು, ಗ್ರಾಮದ ಹೆಸರನ್ನು ಇಡಲಾಗಿತ್ತು. ಆವರಣದ ನಾಲ್ಕೂ ದಿಕ್ಕಿನಲ್ಲಿ ಆಳವಾದ ಮತ್ತು ಅಗಲವಾದ ದೊಡ್ಡ ಕಂದಕವನ್ನು ತೋಡಲಾಗಿತ್ತು.

ಇಬ್ರಾಹಿಂ ಆದಿಲ್ ಖಾನ ಹಿಂದೆ ಕಟ್ಟಿಸಿದ ನಗರದ ಆವರಣದಲ್ಲಿ ಎರಡು ಗೋಡೆಗಳಿದ್ದವು, ಎರಡು ಕಂದಕಗಳು ನೀರು ತುಂಬಿರುತ್ತಿದ್ದವು. ಇವು ನಗರದ ಮಧ್ಯ ಭಾಗದಲ್ಲಿದ್ದವು. ಎರಡು ಗೋಡೆಗಳ ಮಧ್ಯೆ ಮೂರು ವಿಶಾಲವಾದ ಉದ್ಯಾನವನವಿತ್ತು. ಒಂದರ ಹೆಸರು 'ಬಾರಹ ದಿನ್‌ಕಾ ಬಾಗ್' ಎರಡನೆಯದು 'ಬಾಗೇ ಅಲವೀ' ಮೂರನೆಯದು 'ಬಾಗೇ ಅಲಿ' ಎಂಬ ಹೆಸರುಗಳಲ್ಲಿ ಪ್ರಖ್ಯಾತವಾಗಿದ್ದವು. ದರ್ಬಾರಿನ ಮಂತ್ರಿಗಳು, ಅಧಿಕಾರಿಗಳು, ಸೈನಿಕ ಸರದಾರರು ಈ ತೋಟಗಳ ಸುಂದರ ದೃಶ್ಯ ಕಾಣುವಂತಹ ಪ್ರದೇಶಗಳಲ್ಲಿ ತಮ್ಮ ಮನೆಗಳನ್ನು ಕಟ್ಟಿಸಿದ್ದರು. ಕೆಲವು ಶ್ರೀಮಂತರು ಕೂಡ ತಮ್ಮ ಮನೆಗಳನ್ನು ಆವರಣಗಳ ಗೋಡೆಗಳ ಹೊರಗಿನ ಪ್ರದೇಶಗಳಲ್ಲಿ ಕಟ್ಟಿಸಿ ಈ ನಯನ ಮನೋಹರ ದೃಶ್ಯವನ್ನು ಸವಿಯುತ್ತಿದ್ದರು. ಈ ತೋಟಗಳಲ್ಲಿ ಎಲ್ಲ ರೀತಿಯ ಹಣ್ಣು ಹಂಪಲುಗಳು ಅಗಣಿತವಾಗಿ ವಿಪುಲವಾಗಿ ಬೆಳೆದಿದ್ದವು. ಕೋಟೆಯ ಒಳಗೆ ಹೋಗಲು ಕಿಶ್ವರ್ ಖಾನನ ಉಸ್ತುವಾರಿಯಲ್ಲಿ ಎರಡು ಮೈಲುಗಳ ರಸ್ತೆಯನ್ನು ತೆಳುವಾಗಿ ಕತ್ತರಿಸಿದ ಕಲ್ಲುಚಪ್ಪಡಿಗಳನ್ನು ಹಾಸಿ

ಸಿದ್ಧಗೊಳಿಸಿದ. ಕೋಟೆಯ ಬಳಿ ಒಂದು ದೊಡ್ಡ ನೀರಿನ ಕೊಳವನ್ನು ನಿರ್ಮಿಸಿದ್ದ. ನಗರವಾಸಿಗಳು ಈ ಕೊಳದಿಂದ ನೀರನ್ನು ಒಯ್ಯುತ್ತಿದ್ದರು. ಬಿಜಾಪುರದ ವಾತಾವರಣ ಯಾವಾಗಲೂ ಸಾಮಾನ್ಯವಾಗಿದ್ದು, ಇಲ್ಲಿನ ಜನರು ಉತ್ತಮ ಆರೋಗ್ಯವಂತರಾಗಿದ್ದರು. ಕೋಟೆಯ ಉತ್ತರ ಭಾಗದ ಬಾಗಿಲಲ್ಲಿ ಒಂದು ದೊಡ್ಡ ಗ್ರಾಮವಿದ್ದು, ಹಲವು ಮಾರುಕಟ್ಟೆಗಳಿದ್ದು ಇಲ್ಲಿನ ಜನಸಂಖ್ಯೆ ದಟ್ಟವಾಗಿತ್ತು. ಈ ಗ್ರಾಮದ ಹೆಸರು ಶಾಹಪೂರ ಎಂದಿತ್ತು. ದೂರದ ಊರುಗಳಿಂದ ವ್ಯಾಪಾರಿಗಳು ಬಂದು, ಸಾಮಾನು, ಸರಕುಗಳನ್ನು ಖರೀದಿಸಿ ಕೊಂಡೊಯ್ದು ತಮ್ಮ ಊರುಗಳಲ್ಲಿ ವ್ಯಾಪಾರ ನಡೆಸುತ್ತಿದ್ದರು. ಇಲ್ಲಿಯ ವ್ಯಾಪಾರದ ಸರಕುಗಳಲ್ಲಿ ಹೆಚ್ಚಾಗಿ ಬಟ್ಟೆಗಳು ಮುಖ್ಯವಾಗಿದ್ದವು. ಸಿಲ್ಕ್, ಹತ್ತಿಯ ಬಟ್ಟೆಬರೆ, ವೆಲ್ವೆಟ್ ಬಟ್ಟೆಗಳು ವೈವಿಧ್ಯಮಯ ಸರಕುಗಳು ಮಾರಾಟಕ್ಕೆ ಇರುತ್ತಿದ್ದವು. ಇಲ್ಲಿ ಶಸ್ತ್ರಾಸ್ತ್ರಗಳು ಕೂಡ ಮಾರಾಟವಾಗುತ್ತಿದ್ದವು. ಹೆಚ್ಚುಕಮ್ಮಿ ಎರಡು ಸಾವಿರ ಗಿರಾಕಿಗಳು ಪ್ರತೀ ವರ್ಷ ಇಲ್ಲಿಗೆ ಆಗಮಿಸಿ, ಮಕ್ಕಾ, ಖೊರಸಾನ್(ಇರಾನ್) ಮುಂತಾದ ವಿದೇಶಗಳಿಗೆ ಇಲ್ಲಿನ ವಸ್ತುಗಳನ್ನು ಕೊಂಡೊಯ್ಯುತ್ತಿದ್ದರು. ಈ ಗ್ರಾಮ ಅಭಿವೃದ್ಧಿಹೊಂದಿದಾಗ ಒಂದು ಮೈಲು ವ್ಯಾಪ್ತಿಯಲ್ಲಿ ಈ ಪೇಟೆ ಹಬ್ಬಿತ್ತು.

ಬೆಳೆಯುತ್ತಾ ಹೋದಂತೆ ಶಹಾಪೂರ ರಾಜಧಾನಿ ಬಿಜಾಪುರಕ್ಕೆ ಹತ್ತಿರವಾಗ ತೊಡಗಿತು. ಈ ಪಟ್ಟಣದಲ್ಲಿ ಕುಶಲಕರ್ಮಿಗಳು ಗುಜರಾತ್, ಬುರ್ಹಾನಪುರ, ಆಸೇರ್, ಹಂಪಿ, ಅಹ್ಮದ್‌ನಗರದಿಂದ ವಲಸೆ ಬಂದು ಇಲ್ಲಿ ವಾಸಿಸುತ್ತಿದ್ದರು. ಪೇಟೆಯ ಹೊರಗೆ ಅಂಗಡಿಗಳು ಇದ್ದವು. ಜನರು ಸುಖ ಸಂತೋಷದಿಂದ ಬದುಕಿದ್ದರು. ಕೋಟೆಯಲ್ಲಿದ್ದ ದೊಡ್ಡ ಕೊಳದ ನೀರನ್ನು ಕಾಲುವೆಯ ಮೂಲಕ ಹರಿಸಲಾಗಿ ಇದರಿಂದ ಗೃಹೋಪಯೋಗಕ್ಕೂ, ಕೃಷಿ ಮಾಡುವುದಕ್ಕಾಗಿಯೂ ಉಪಯೋಗಿಸಿಕೊಳ್ಳುತ್ತಿದ್ದರು. ಹದಿನೈದು ಮೈಲುಗಳ ತನಕ ಇರುವ ತೋಟಗಳಿಗೆ ಇದರಿಂದ ನೀರು ಸರಬರಾಜು ಮಾಡಲಾಗುತ್ತಿತ್ತು. ಈ ತೋಟಗಳಲ್ಲಿ ವಿವಿಧ ರೀತಿಯ ಹಣ್ಣುಗಳನ್ನು ಬೆಳೆಸುತ್ತಿದ್ದರು. ತೋಟಗಳು ಎಷ್ಟು ಸಮೃದ್ಧವಾಗಿ ಆಕರ್ಷಕವಾಗಿತ್ತೆಂದರೆ ದೂರದ ಊರಿನಿಂದಲೂ ವಿಹಾರಾರ್ಥಿಗಳು ಬಂದು ಆರಾಮ ಪಡೆದು ಹೋಗುತ್ತಿದ್ದರು.

**ಅಫ್ಜಲ್ ಖಾನನ ಆಡಳಿತ ಕ್ರಮಗಳು ಹಾಗೂ ಕರ ಸಂಗ್ರಹಕಾರರ(ಆಮಿಲರ) ನೇಮಕಾತಿ:**

ಅಫ್ಜಲ್ ಖಾನ್ ಆಸ್ಥಾನದ ಪೇಶ್ವೆಯಾದ ಬಳಿಕ ಅವನು ದೊಡ್ಡ ವಿದ್ವಾಂಸರನ್ನು, ಪರಿಣಿತರನ್ನು, ಬುದ್ಧಿವಂತರನ್ನು, ಜ್ಞಾನಿಗಳನ್ನು, ಉಲೇಮಾ ಧಾರ್ಮಿಕ ಪಂಡಿತರನ್ನು, ಪರಿಣಿತ ಆಮಿಲರನ್ನು ಕರೆದು ಅವರವರ ಸಾಮರ್ಥ್ಯಕ್ಕನುಗುಣವಾಗಿ ಸ್ಥಾನಮಾನಗಳನ್ನು ನೀಡಿ ನೇಮಕಾತಿ ಮಾಡಿದ. ಯಾರು ಯುದ್ಧದಲ್ಲಿ ಭಾಗವಹಿಸಿದ್ದರೋ ಅವರೆಲ್ಲರಿಗೆ ಹುದ್ದೆಯಲ್ಲಿ ಭಡ್ತಿ ನೀಡಿದ. ಅವರ ಪೈಕಿ ಸಹೋದರನ ಜೊತೆಗೆ ಗದ್ದಾರಿ ಮಾಡಿ

ಶಿಕ್ಷೆಗೆ ಒಳಗಾಗಿದ್ದು ಬಿಡುಗಡೆ ಹೊಂದಿದ ಷಾ ಅಬುಲ್ ಹಸನ್ ಮತ್ತು ಮುಸ್ತಫಾ ಖಾನ್, ಖಾಮಿಲ್ ಖಾನರಿಗೆ ಅಮೀರ ಹುದ್ದೆಯನ್ನು ನೀಡಿದ. ಹೀಗೆ ಈ ಅಸಂತುಷ್ಟರಾಗಿದ್ದ ಜನಗಳು ಕೂಡ ಸಂತೋಷಪಟ್ಟುಕೊಳ್ಳುವಂತಾಯಿತು. ತಿಂಗಳು, ಎರಡು ತಿಂಗಳುಗಳಿಗೊಮ್ಮೆ ಜಹಾಂಪನಾರಿಗೆ ಸಲಾಂ ಸಲ್ಲಿಸಲು ಇವರೆಲ್ಲರೂ ಆಸ್ಥಾನದಲ್ಲಿ ಹಾಜರಾಗುತ್ತಿದ್ದರು. ಮುರಾದ್ ಖಾನನನ್ನು ಕೊಂಕಣ ಪ್ರಾಂತ್ಯದ ಹವಾಲ್ದಾರನನ್ನಾಗಿ ನೇಮಿಸಲಾಯಿತು. ಕೊಂಕಣವು ಸಮುದ್ರದ ತೀರದಲ್ಲಿದ್ದ ಹದಿನೈದು ಮೈಲಿ ಉದ್ದ ಮತ್ತು ಹತ್ತು ಮೈಲಿ ಅಗಲದ ಒಂದು ಊರಾಗಿತ್ತು. ಹಿಂದೆ ಪೇಶ್ವಾ ಸ್ಥಾನದಲ್ಲಿದ್ದ ಮೋತಬರ್ ಖಾನನಿಗೆ ಭಡ್ತಿ ನೀಡಿ 'ಸರ್ ನವೇತಿ'ಯನ್ನಾಗಿ(ಮುಖ್ಯ ದಸ್ತಾವೇಜು ಬರಹಗಾರ) ಮಾಡಿದ. ಷೇಖ್ ಸಾಲಿಮ್‌ನನ್ನು ಸೈನ್ಯದ ಸರ್‌ಖೈಲ್ (ಉಚ್ಛಸರದಾರ) ಸ್ಥಾನವನ್ನು ನೀಡಿದ. ಇವನು ಒಳ್ಳೆಯ ವಿದ್ಯಾವಂತನೂ, ಬುದ್ಧಿವಂತನೂ ಆಗಿದ್ದು ಒಂದಿಷ್ಟು ಕಾಲ ಇರಾನಿನ ಶಿರಾಜಿಯಲ್ಲಿ ಜ್ಞಾನಾರ್ಜನೆಯನ್ನು ಪಡೆದಿದ್ದ. ಅರ್ಥಿಕ ವಿಷಯದಲ್ಲಿ ಈತ ಪರಿಣಿತನಾಗಿದ್ದನಲ್ಲದೆ, ಸೈನ್ಯ ಸಂಘಟನೆಯಲ್ಲಿ ನಿಷ್ಣಾತನೆನಿಸಲ್ಪಟ್ಟಿದ್ದ. ಇವನು ಯಾವುದೇ ನಿರ್ಣಯಗಳನ್ನು ತೆಗೆದುಕೊಳ್ಳುವ ಸಂದರ್ಭದಲ್ಲಿ ಅಫ್ಜಲ್ ಖಾನನೊಂದಿಗೆ ಸಲಹೆ ಕೇಳುತ್ತಿದ್ದ. ಲತೀಫ್ ಖಾನನಿಗೆ ಜನರ ಫಿರ್ಯಾದುಗಳನ್ನು ದಾಖಲಿಸುವ ಕೆಲಸವನ್ನು ನೀಡಿದ. ಇವನು ಒಬ್ಬ ಕವಿಯಾಗಿ, ಉತ್ತಮ ವಾಗ್ಮಿಯಾಗಿದ್ದ. ತನ್ನ ಕಾವ್ಯನಾಮ 'ಫಾನಿ'ಯ ಮೂಲಕ ಜನಪ್ರಿಯನಾಗಿದ್ದ. ಇರಾನಿನ ಲಾರ ಪ್ರದೇಶದ ಸಯ್ಯದ್ ಕುಟುಂಬದವನಾಗಿದ್ದ ಸದರ್ ಖಾನ್‌ನಿಗೆ ಗುಪ್ತಚರ ಇಲಾಖೆಯ ನಾಯಕ ಸ್ಥಾನ ನೀಡಲಾಯಿತು. ಇವನ ಕೈಕೆಳಗೆ ೭೦೦ ಗುಪ್ತಚರರು ಕೆಲಸಮಾಡುತ್ತಿದ್ದರು. ಇವರು ಬಾದಶಾಹರ ವಿರೋಧಿಗಳು, ವೈರಿಗಳ ಬಗ್ಗೆ ತಪಾಸಣೆ ಮಾಡಿ ಗಂಟೆಗೊಮ್ಮೆ ವರದಿ ನೀಡುತ್ತಿದ್ದರು. ಷೇಖ್ ನೂರುದ್ದೀನ್ ಮುಹಮ್ಮದ್ ಲಾರಿಗೆ ಕೋಟೆಯ ಒಳಗಿನ ವ್ಯವಹಾರಗಳ ಬಗ್ಗೆ ನೋಡಿಕೊಳ್ಳುವ ಮತ್ತು ರಾಜ್ಯದ ವಿವಿಧ ಕಡೆಯಿಂದ ಬರುವ ಅರ್ಜಿಗಳನ್ನು ತಪಾಸಣೆ ಮಾಡಿ ಸಂಬಂಧಪಟ್ಟ ಅಮೀರನ (ಅಧಿಕಾರಿಯ) ಬಳಿಗೆ ಕಳುಹಿಸಿಕೊಡುವ ವ್ಯವಸ್ಥೆಯನ್ನು ನೋಡಿಕೊಳ್ಳುವ ಜವಾಬ್ದಾರಿಯನ್ನು ವಹಿಸಿಕೊಡಲಾಯಿತು. 'ಖಾನ್ ಸಾಲಾರಿ' (ಮುಖ್ಯ ಮೇಲ್ವಿಚಾರಕ) ಸ್ಥಾನವನ್ನು, ಖಜಾನೆಯ ಉಸ್ತುವಾರಿ, ಅರಮನೆಯ ಜನಾನಾಗಳ ಉಸ್ತುವಾರಿ ನೋಡಿಕೊಳ್ಳುವ ಕೆಲಸಗಳನ್ನು ನನಗೆ(ಲೇಖಕ ಶಿರಾಜಿಗೆ) ನೀಡಲಾಯಿತು. ಹೀಗೆ ಜಹಾಂಪನಾರ ಆಸ್ಥಾನದಲ್ಲಿ ಕೆಲಸಕ್ಕಿರುವ ನೌಕರರು, ಮಂತ್ರಿಗಳು, ಅಧಿಕಾರಿಗಳೆಲ್ಲರೂ ಒಳ್ಳೆಯ ವಿದ್ಯಾವಂತರೂ, ವಿದ್ವಾಂಸರೂ, ಪರಿಣಿತರೂ ಆಗಿದ್ದರು.

ಷಾ ಕಮಾಲುದ್ದೀನ್ ಫತ್ತುಲ್ಲಾ ರಾಜ್ಯದ ಸಂವಿಧಾನವನ್ನು ರಚಿಸುವವನಾಗಿದ್ದ. ಜನರು ಇವನನ್ನು ಅತ್ಯಂತ ದೊಡ್ಡ ಮೇಧಾವಿ(ಗ್ಯಾರಂವಿ ಅಕಲ್‌ವಾಲಾ) ಎಂದು

ಕರೆಯುತ್ತಿದ್ದರು. ಸಯ್ಯದ್ ಮುಹಮ್ಮದ್ ತರಾಬ್ಲಿಸ್ ಕೂಡ ದೊಡ್ಡ ವಿದ್ವಾಂಸರಾಗಿದ್ದರು. ಅಸ್ಫಹಾನ್‌ನ ಮುಲ್ಲಾ ಆಗಿದ್ದ ಮೀರ್ ಇಜ್ಜತ್ ದೀನ್ ಫರುಲ್ಲಲ್ಲಾ ಯಝ್ದಿ ಮತ್ತು ಮೀರಾನ್ ಶರ್ಖಿ ಆಖಾ ಇವರಿಬ್ಬರೂ ಕುರಾನ್, ಹದೀಸ್, ಫಿಖ್ಹ್(ಇಸ್ಲಾಮಿ ಕಾನೂನು), ತಫ್ಸೀರ್ (ಅರ್ಥ ಗ್ರಹಣ)ನಲ್ಲಿ ದೊಡ್ಡ ಜ್ಞಾನಿಗಳಾಗಿದ್ದರು. ಈ ಮೂವರು ದರ್ಬಾರಿನಲ್ಲಿ ಪ್ರತಿದಿನವೂ ಹಾಜರಿರುವ ಮತ್ತು ಧಾರ್ಮಿಕ ಜಿಜ್ಞಾಸೆಯ ಸಂದರ್ಭದಲ್ಲಿ ಬಾದಶಾಹರಿಗೆ ಮಾರ್ಗದರ್ಶನ ನೀಡುವ ವಿದ್ವಾಂಸರಾಗಿದ್ದರು. ಮೀರ್ ಮುರ್ಷದ್ ಖುಮ್ಮಿ ಕೂಡ ಇವರೊಂದಿಗೆ ಇರುವ ಸಮಾನ ವಿದ್ವಾಂಸರಾಗಿದ್ದರು. ಇವರ ಕೆಲವು ಶಿಷ್ಯರು ಷಾ ಕಮಾಲುದ್ದೀನರ ಮನೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದರು. ಹಿಂದೆ ಅಫ್ಜಲ್ ಖಾನನ ಜೊತೆಯಲ್ಲಿ ಪತ್ರ ಬರೆಯಲು ಕೂಡ ಯಾವ ವಿದ್ವಾಂಸರೂ ಇದ್ದಿರಲಿಲ್ಲ. ಈಗ ಅಫ್ಜಲ್ ಖಾನನ ಬಳಿ ಸಾಕಷ್ಟು ವಿದ್ವಾಂಸರು, ತಂತ್ರಜ್ಞಾನಿಗಳು, ತಜ್ಞರು ಬಂದು ಸೇರಿಕೊಂಡಿದ್ದರು. ಹೀಗೆ ಅಫ್ಜಲ್ ಖಾನ ರಾಜ್ಯದ ವ್ಯವಸ್ಥೆಯನ್ನು ಸರಿಪಡಿಸುವಷ್ಟು ತಾಕತ್ತನ್ನು ಪಡೆದುಕೊಂಡಿದ್ದ. ಮುಖ್ಯವಾಗಿ ಷಾ ಕಮಾಲುದ್ದೀನರನ್ನು (ಇರಾನಿನ)ಶಿರಾಜಿನಿಂದ ದೂತರನ್ನು ಕಳುಹಿಸಿ ಕರೆಸಲಾಗಿತ್ತು. ಇದಕ್ಕಾಗಿ ಸಾಕಷ್ಟು ಹಣವೂ ವೆಚ್ಚವಾಗಿತ್ತು. ಅಫ್ಜಲ್ ಖಾನನಿಗೆ ಬಿಡುವು ಸಿಕ್ಕಾಗಲೆಲ್ಲ ಅವರ ಪ್ರವಚನ, ವಿದ್ಯಾ ಬೋಧನೆಯ ಸಭೆಗಳಲ್ಲಿ ಹಾಜರಾಗುತ್ತಿದ್ದ. ಒಮ್ಮೊಮ್ಮೆ ಇಲ್ಲಿಗೆ ಜಹಾಂಪನಾರು ಕೂಡ ಅವರ ಮಾತುಗಳನ್ನು ಕೇಳಲು ಆಗಮಿಸುತ್ತಿದ್ದರು. ತಮ್ಮ ಜೀವದಲ್ಲಿ ಉಸಿರು ಇರುವ ತನಕವೂ ಜಹಾಂಪನಾ ಇವರ ಮಾತುಗಳನ್ನು ಕೇಳುವುದರಲ್ಲಾಗಲಿ, ಜ್ಞಾನ ಸಂಪಾದನೆ ಮಾಡುವ  ಆಕಾಂಕ್ಷೆಯಾಗಲಿ ಕುಗ್ಗಿರಲಿಲ್ಲ.

**ಹಿಂದೂ ರಾಜರನ್ನು ದೂರವಿಡುವ ಉದ್ದೇಶದ ಕ್ರಮಗಳ  ವಿವರಗಳು:**

ಈ ರಾಜರು ಬಹಳ ದೀರ್ಘಕಾಲದ ತನಕ ಸ್ನೇಹದಿಂದ ಇದ್ದರಾದರೂ, ನಂತರದಲ್ಲಿ ಅತ್ಯಂತ ಮುಖ್ಯ ಸಂದರ್ಭವನ್ನು ನೋಡಿ ವಿರೋಧಿ ಬಣದೊಂದಿಗೆ ಸೇರಿ ಜಹಾಂಪನಾರಿಗೆ ಎದುರು ನಿಂತಿದ್ದರು. ಒಂದು ದಿನ ಅಫ್ಜಲ್ ಖಾನನ ಬಳಿಗೆ ಓರ್ವ ಸಿಪಾಯಿ ಬಂದು, 'ಹಿಂದೂ ನಾಯಕರುಗಳು ಐದು ಜನರಿದ್ದಾರೆ. ಇವರು ನಮ್ಮ ರಾಜ್ಯದ ಸರಹದ್ದಿನೊಳಗೆ ನುಗ್ಗಿ ಪ್ರಜೆಗಳಿಗೆ ಕಿರುಕುಳವನ್ನು ನೀಡುತ್ತಿದ್ದಾರೆ. ಇವರು ಎಲ್ಲೆಲ್ಲ ಹೋಗುತ್ತಿರುವರೋ ಅಲ್ಲೆಲ್ಲ ಜನರನ್ನು ಹಿಡಿದು ಅವರ ಮೇಲೆ ದೌರ್ಜನ್ಯ ನಡೆಸುತ್ತಿದ್ದಾರೆ. ಈ ಹಿಡಿದ ಜನರನ್ನು ಕೆಲವೊಮ್ಮೆ ಬಿಟ್ಟುಬಿಡುತ್ತಲೂ ಇದ್ದಾರೆ. ಅವರಲ್ಲಿ ಮೂರು ಮಂದಿ ಮುಖ್ಯರಾಗಿದ್ದಾರೆ. ದೇವು ನಾಯಕ್, ವಸು ನಾಯಕ್, ವಿಶ್ವ ನಾಯಕ್ ಎಂಬ ಹೆಸರಿನ ಈ ಮೂರು ಜನ ಅವರ ಮುಖ್ಯಸ್ಥರಾಗಿದ್ದು, ದೊಡ್ಡ ಶ್ರೀಮಂತರೂ, ಜಾಗೀರುದಾರರೂ ಆಗಿದ್ದರು. ಒಬ್ಬೊಬ್ಬರ ಬಳಿ ೪೦೦–೫೦೦ ಕುದುರೆಗಳೂ ಇದ್ದವು.

ಈ ನಾಯಕರುಗಳು ಒಗ್ಗಟ್ಟಾಗಿರುತ್ತಿದ್ದರು. ಯಾವಾಗಲೂ ಬ್ರಾಹ್ಮಣರ ಒಳಿತಿನ ಬಗ್ಗೆ ಮಾತಾಡುತ್ತಿದ್ದರು' ಎಂದು ಹೇಳಿದ. ಅಫ್ಜಲ್ ಖಾನ್ ಈ ಮೂರು ಬ್ರಾಹ್ಮಣರನ್ನು ಕರೆದು 'ಈ ರೀತಿಯ ಆತಂಕಕಾರಿ ಕೆಲಸಗಳನ್ನು ಮಾಡಬೇಡಿ. ನಿಮ್ಮ ಮೇಲೆ ಅನೇಕ ಜನರು ಆರೋಪ ಮಾಡುತ್ತಿದ್ದಾರೆ. ಈ ಲೂಟಿ, ಅನ್ಯಾಯಗಳೆಲ್ಲವೂ ಮತ್ತು ಅದರಿಂದ ಬರುವ ಆದಾಯಗಳೆಲ್ಲವೂ ಹರಾಂಖೋರಿ ಅಥವಾ ಅನೈತಿಕವಾದದ್ದು. ಈ ಸಂಗತಿ ಜಹಾಂಪನಾರಿಗೆ ತಿಳಿದರೆ ಪರಿಣಾಮ ನೆಟ್ಟಗಾಗಲಿಕ್ಕಿಲ್ಲ' ಎಂದು ಎಚ್ಚರಿಕೆ ನೀಡಿದ. ಇದಕ್ಕೆ ಅವರು ಅಹಂಕಾರದಿಂದ 'ನಾವು ಅನೈತಿಕ ಸಂಪಾದನೆಯನ್ನು ಮಾಡುವುದಿಲ್ಲ, ನಮ್ಮ ಬಳಿ ಜಮೀನು, ಜಾನುವಾರುಗಳೆಲ್ಲವೂ ಬೇಕಾದಷ್ಟಿವೆ. ನಮ್ಮ ಬಳಿ ದೊಡ್ಡ ಮದದಾನೆಗಳಿವೆ. ಅಂತಹ ಮದಗಜಗಳು ನಿಮ್ಮ ಜಹಾಂಪನಾರ ಬಳಿಯೂ ಕೂಡ ಇರಲಿಕ್ಕಿಲ್ಲ' ಎಂದರು. ಅವರ ಅಹಂಕಾರದ ಮಾತುಗಳನ್ನು ಕೇಳಿ ಅಫ್ಜಲ್ ಖಾನನಿಗೆ ಆಶ್ಚರ್ಯವಾಯಿತು. ಇವರ ಸಂಪೂರ್ಣ ವಿವರಗಳನ್ನು, ಚಟುವಟಿಕೆಗಳು ತಮ್ಮ ನಡುವೆ ನಡೆದ ಮಾತುಗಳ ವಿವರಗಳನ್ನು ಅಫ್ಜಲ್ ಖಾನ, ಜಹಾಂಪನಾರ ಮುಂದೆ ತಿಳಿಸಿದ. 'ತಾವು ಬಾದಶಾಹರು. ಇದರ ಅರ್ಥವೇನೆಂಬುದು ತಮಗೆ ಚೆನ್ನಾಗಿ ತಿಳಿದಿದೆ. ನಿಮಗೆ ದೇವರು ಪ್ರಜೆಗಳನ್ನು ಕಾಪಾಡುವ ಜವಾಬ್ದಾರಿಯನ್ನು ನೀಡಿದ್ದಾನೆ. ಇಂತಹ ವೈರಿಗಳನ್ನು, ಪ್ರಜಾಪೀಡಕರನ್ನು ಓಡಿಸುವ ಶಕ್ತಿಯನ್ನು ನೀಡಿದ್ದಾನೆ' ಎಂದ. ಜಹಾಂಪನಾರು, 'ಇದೆಲ್ಲ ಅವರಲ್ಲಿ ಮೂಡಿದ ಅಹಂಕಾರದಿಂದ ಉಂಟಾಗಿದೆ. ಅವರು ಹಿಂದಿನ ದಿನಗಳನ್ನು ಮರೆತಿದ್ದಾರೆ. ನಾನು ಅವರ ಪೈಕಿ ಎಷ್ಟು ಜನರಿಗೆ ಆಸ್ಥಾನದಲ್ಲಿ ನೌಕರಿ ನೀಡಿದೆ. ಆಸ್ಥಾನದಲ್ಲಿ ಪೇಶ್ವೆಯ ಪದವಿಯನ್ನು ಕೂಡ ಅವರಲ್ಲಿ ಕೆಲವರಿಗೆ ನೀಡಿದೆ. ಅವರ ಸಂಕಷ್ಟದ ದಿನಗಳಲ್ಲಿ ಸಹಾಯ ಮಾಡಿದೆ. ಅವರ ಶ್ರೀಮಂತಿಕೆ ಹಾಗೆಯೇ ಖಾಯಮ್ಮಾಗಿ ಉಳಿಯುವಂತೆ ಎಷ್ಟೆಲ್ಲ ಸಹಾಯ ಮಾಡಿದ್ದೆ ಎಂಬುದನ್ನು ಮರೆತಿದ್ದಾರೆ' ಎಂದರು. ಅಫ್ಜಲ್ ಖಾನ ಇದನ್ನು ಕೇಳಿ, 'ನೀವೀಗ ಒಪ್ಪಿದರೆ, ಅವರ ಆಟೋಪಗಳನ್ನು ಮುಗಿಸಿ, ನಿಮ್ಮ ವಶಕ್ಕೆ ಕಳುಹಿಸಿ ಕೊಡ ಬಲ್ಲೆ' ಎಂದು ಹೇಳಿದ. ಇದಕ್ಕೆ ಉತ್ತರವಾಗಿ 'ಇವರನ್ನು ನಮ್ಮ ರಾಜ್ಯದಿಂದ ಓಡಿಸುವುದು ಹೇಳಿದಷ್ಟು ಸುಲಭವಿಲ್ಲ. ಇದರಿಂದಾಗಿ ಈ ಜನರು ಮತ್ತೊಂದು ಪಿತೂರಿ ಮಾಡಿ, ನಾವು ಅದನ್ನು ನಿಗ್ರಹಿಸುವುದು ಸಾಧ್ಯವಾಗದಂತಹ ಪರಿಸ್ಥಿತಿ ಉಂಟಾಗ ಕೂಡದು' ಎಂದು ಜಹಾಂಪನಾ ಹೇಳಿದರು. ಸಾಧಾರಣ ಐದು ತಿಂಗಳುಗಳ ಕಾಲ ಜಹಾಂಪನಾ ಮತ್ತು ಅಫ್ಜಲ್ ಖಾನನ ಮಧ್ಯೆ ಚರ್ಚೆ ನಡೆಯಿತು. ಅವರನ್ನು ಇಲ್ಲಿಂದ ದೂರ ಓಡಿಸುವುದು ಅಷ್ಟು ಸುಲಭದ ಕೆಲಸವಲ್ಲವೆಂದು ಜಹಾಂಪನಾರಿಗೂ ತಿಳಿದಿತ್ತು. ಅವರು ಅಹಂಕಾರವನ್ನು ಪ್ರದರ್ಶಿಸುವ ಉದ್ದೇಶವು ಬರೇ ಬಾದಶಾಹರ ಸಿಂಹಾಸನವನ್ನು ತಮ್ಮ ಮುಷ್ಠಿಯೊಳಗೆ ಮಾಡಿಕೊಂಡು ರಾಜ್ಯವನ್ನಾಳುವುದಾಗಿತ್ತು.

ಜಂಗಮ ಸನ್ಯಾಸಿಯೊಬ್ಬ ಅಲ್ಲಿ ಪ್ರಖ್ಯಾತನಾಗಿ ತನ್ನ ಪವಾಡವನ್ನು ತೋರಿಸುತ್ತಿದ್ದ. ದೇವನಾಯಕನನ್ನು ಕರೆದು ಅವನು 'ನಿನ್ನ ಬಳಿಗೆ ಸಿಂಹಾಸನ ಬಲು ಬೇಗನೆ ಬರಲಿದೆ' ಎಂದ. ದೇವನಾಯಕ ಅವನ ಮೋಡಿಯ ಮಾತುಗಳಿಗೆ ಬಲಿಬಿದ್ದು ಸಾಕಷ್ಟು ತನ್ನ ಧನ ಕನಕಗಳನ್ನು ಅವನಿಗೆ ಕಾಣಿಕೆಯನ್ನಾಗಿ ನೀಡಿದ. ಅವನಿಗೆ ಎಷ್ಟೊಂದು ಸಲಿಗೆ ಕೊಟ್ಟನೆಂದರೆ ನೋಡಿದವರೆಲ್ಲರೂ ಆಶ್ಚರ್ಯಪಟ್ಟುಕೊಳ್ಳುವಂತಾಗಿತ್ತು. ಅವನಿಗೆ ತನ್ನ ಮನೆಯಲ್ಲಿ ಎಲ್ಲೆಂದರಲ್ಲಿ ಹೋಗಿಬರುವ ಸ್ವಾತಂತ್ರ್ಯ ನೀಡಿದ. ದಿನ ಕಳೆದಂತೆ ಅವನು ಹೆಚ್ಚು ಕಮ್ಮಿ ಅವನ ಮನೆಯವನೇ ಆಗಿ ಮನೆಯಲ್ಲೇ ವಾಸಿಸ ತೊಡಗಿದ. ಈ ಜಂಗಮ ಸನ್ಯಾಸಿ ಬರಬರುತ್ತ ದೇವನಾಯಕನ ಪತ್ನಿಯ ಮೇಲೆ ಕಣ್ಣಿಟ್ಟು ಅವಳನ್ನು ಬಯಸಿದ. ಅವನು ದೇವನಾಯಕನಿಂದ ನಿನ್ನ ಪತ್ನಿಯನ್ನು ನನ್ನ ಬಳಿಗೆ ಕಳುಹಿಸೆಂದು ನೇರವಾಗಿ ಕೇಳಿದ. ಜಂಗಮ ಸನ್ಯಾಸಿಯ ಬೇಡಿಕೆಯನ್ನು ತಿರಸ್ಕರಿಸಲಾರದ ದೇವನಾಯಕ ತನ್ನ ಪತ್ನಿಯನ್ನು ಅವನ ಬಳಿಗೆ ಕಳುಹಿಸಿದ. ಈ ಸುದ್ದಿ ಅವರ ಸಮುದಾಯದೊಳಗೆ ಕಾಡ್ಗಿಚ್ಚಿನಂತೆ ಹಬ್ಬಿತು. ಇಡೀ ಜಗತ್ತಿನಲ್ಲಿ ಎಲ್ಲಡೆ ಹರಡಿತು. ಅಫ್ಜಲ್ ಖಾನ್ ಈ ಸಂದರ್ಭವನ್ನು ಉಪಯೋಗಿಸಿಕೊಂಡು ಈ ಜನರನ್ನು ದೂರ ಓಡಿಸುವ ಬಗ್ಗೆ ಜಹಾಂಪನಾರ ಮುಂದೆ ಹೇಳಿದ. ಜಹಾಂಪನಾ ಇದಕ್ಕೆ ಒಪ್ಪಲಿಲ್ಲ. ಅಫ್ಜಲ್ ಖಾನ ಅವರ ಮಧ್ಯೆ ಒಡಕುಂಟುಮಾಡುವ ಯೋಜನೆಯನ್ನು ಜಹಾಂಪನಾರ ಮುಂದಿಟ್ಟ.

'ಅವರ ಕೆಲವು ಕೆಳಸ್ತರದ ಮುಖಂಡರನ್ನು ಕರೆದು ಅವರಿಗೆ ಇನ್ನಷ್ಟು ಭಡ್ತಿ ನೀಡಿ ಮೇಲಕ್ಕೆ ತಂದಾಗ ಅವರ ಮಧ್ಯೆ ಒಡಕುಂಟು ಮಾಡುವುದು ಸಾಧ್ಯವಾಗುತ್ತದೆ. ಆಗ ಅವರ ಶಕ್ತಿ ಕುಂದುತ್ತದೆ. ಆಹಂಕಾರವೂ ತಗ್ಗುವುದು' ಎಂಬ ಸಲಹೆಯನ್ನು ಅಫ್ಜಲ್ ಖಾನ್ ನೀಡಿದ. ಜಹಾಂಪನಾ ಈ ಸಲಹೆಯ ವಿಚಾರದಲ್ಲಿ ಸ್ವಲ್ಪಹೊತ್ತು ಯೋಚಿಸಿ 'ನೀನು ಈ ಬಗ್ಗೆ ಹೆಚ್ಚು ತಿಳಿದವನು. ನಿನಗೆ ಯಾವುದು ಸರಿ ಕಾಣುವುದೋ ಆ ರೀತಿ ನಡೆದು ಈ ಸಮಸ್ಯೆಯ ನಿವಾರಣೆಗೆ ಕ್ರಮ ಕೈಗೊಳ್ಳಬೇಕು. ನೀನು ಮುಂದೆ ಏನು ಸಲಹೆ ನೀಡುವಿಯೋ ಹಾಗೆಯೇ ನಾನು ನಡೆದುಕೊಳ್ಳುತ್ತೇನೆ' ಎಂದು ಹೇಳುವ ಮೂಲಕ ತನ್ನ ಶುಭ ಹಸ್ತವನ್ನು ನನ್ನ ತಲೆಯ ಮೇಲಿಟ್ಟು ಆಶೀರ್ವಾದ ಮಾಡಿದರು. ಅಫ್ಜಲ್ ಖಾನ್ ಈ ದಗಾಕೋರ ಮುಂಡರನ್ನು ರಾಜ್ಯದಿಂದ ದೂರ ಓಡಿಸುವ ಕ್ರಮಗಳನ್ನು ಕೈಗೊಳ್ಳುವ ವಿಧಾನಗಳನ್ನು ಯೋಚಿಸತೊಡಗಿದ.

ಜ್ಯೋತ್ ರಾವ್ ಎಂಬ ಒಬ್ಬ ದೊಡ್ಡ ಶ್ರೀಮಂತ ಮುಖಂಡನಿದ್ದ. ಇವನ ತಾಯಿ ಸುಲ್ತಾನ ಇಬ್ರಾಹಿಂ ಆದಿಲ್ ಖಾನ್‌ರ ಕುಟುಂಬದ ದಾದಿಯಾಗಿದ್ದಳು. ಇವಳು ೧೬ ವರ್ಷಗಳ ಕಾಲ ಅರಮನೆಯ ಮಹಿಳಾ ವಿಭಾಗದಲ್ಲಿ ಕೆಲಸ ಮಾಡಿದ್ದಳು. ಈ ಜ್ಯೋತ್‌ರಾವ್ ಕೂಡ ಬಾಲ್ಯದಲ್ಲಿ ಅರಮನೆಯಲ್ಲಿ ಓಡಾಡುತ್ತ ಬೆಳೆದವನಾಗಿದ್ದ.

ಈ ವಿಚಾರಗಳನ್ನು ತಿಳಿದ ಅಫ್ಜಲ್ ಖಾನ್ ಇವನನ್ನು ಉಪಯೋಗಿಸಿಕೊಂಡು ಯಾವ ಕೆಲಸಗಳನ್ನು ಮಾಡಿಸಬಹುದು ಎಂಬುದರ ಬಗ್ಗೆ ಯೋಚಿಸತೊಡಗಿದ. ಮರುದಿನ ನಾಯಕರ ತಂಡದವರು ಅಫ್ಜಲ್ ಖಾನನ ಮನೆಗೆ ಬಂದು ತಮ್ಮ ಬ್ರಾಹ್ಮಣ ಶಿಷ್ಟಾಚಾರದಂತೆ ನಮಸ್ಕಾರ ಮಾಡಿದರು. ಜಹಾಂಪನಾರನ್ನು ಭೇಟಿ ಮಾಡುವ ಅಪೇಕ್ಷೆಯನ್ನು ವ್ಯಕ್ತಪಡಿಸಿದರು. ಅಫ್ಜಲ್ ಖಾನ್ ಹೇಳಿದನೇನೆಂದರೆ, 'ಜಹಾಂಪನಾರೊಂದಿಗೆ ಮೂರು ಅಂಗರಕ್ಷಕರು ಇರುತ್ತಾರೆ. ಯಾರಾದರೂ ಒಬ್ಬರು ಮಾತ್ರ ಇದ್ದ ಸಮಯ ನೋಡಿ ಅವರ ಬಳಿ ಮಾತಾಡಲು ಹೋಗಬಹುದು' ಎಂದ. ಜ್ಯೋತ್ ರಾವ್ ಕೂಡ ಅಲ್ಲಿಗೆ ಜಹಾಂಪನಾರನ್ನು ನೋಡಲು ಪ್ರತ್ಯೇಕವಾಗಿ ಬಂದ. ನಂತರ ಬಂದ ಜ್ಯೋತ್ ರಾವ್‌ನಿಗೆ ಜಹಾಂಪನಾರನ್ನು ಭೇಟಿ ಮಾಡುವ ಅವಕಾಶವನ್ನು ಮೊದಲು ಅಫ್ಜಲ್ ಖಾನ್ ನೀಡಿದ. ನಮ್ಮ ನಂತರ ಬಂದ ಜ್ಯೋತ್ ರಾವ್ ಅದೂ ಕೂಡ ನಮಗಿಂತ ಕೆಳಜಾತಿಯವನಿಗೆ ಆದ್ಯತೆ ನೀಡಿದ್ದು ಕಂಡು ನಾಯಕರ ತಂಡಕ್ಕೆ ಮೈಯೆಲ್ಲ ಉರಿದುಹೋಯಿತು. 'ಜಹಾಂಪನಾರು ಜ್ಯೋತ್ ರಾವ್‌ನನ್ನು ಬಾಲ್ಯದಿಂದ ಅರಮನೆಯಲ್ಲಿ ನೋಡಿರುವುದರಿಂದ ಅವನನ್ನು ಮಗನಂತೆ ಪರಿಗಣಿಸಿದ್ದಾರೆ. ಯಾಕೆಂದರೆ ಅವನ ಕುಟುಂಬದವರು ನಿಮ್ಮ ಪಂಗಡದ ಕೆಲವು ಜನರನ್ನು ಬಂಧಿಸಲು ಸಹಾಯಕರಾಗಿದ್ದರು. ಅವನು ಮುಸಲ್ಮಾನರ ರೀತಿಯ ಶಿಷ್ಟಾಚಾರವನ್ನು ಕಲಿತು ಅನ್ಯೋನ್ಯನಾಗಿದ್ದಾನೆ. ಇದರಿಂದಾಗಿ ಬೇರೆ ಹಿಂದೂ ಮಂತ್ರಿ, ಅಧಿಕಾರಿಗಳ ಜೊತೆಗೆ ಕೆಟ್ಟದಾಗಿ ನಡೆದು ಕೊಳ್ಳುತ್ತಾನೆ. ಜಹಾಂಪನಾರಿಂದ ತೆರಿಗೆಯಲ್ಲಿ ಕೆಲವು ವಿನಾಯತಿಯನ್ನೂ ಪಡೆದುಕೊಂಡಿದ್ದಾನೆ. ಈಗ ನಿಮಗೆ ಅವನ ಮೇಲೆ ಸೇಡು ತೀರಿಸಲು ಅವಕಾಶವಿದೆ' ಎಂದು ಅಫ್ಜಲ್ ಖಾನ ತನ್ನ ಯೋಜನೆಯ ಭಾಗವಾಗಿ ಇವರ ಕಿವಿಯೂದಿದ. 'ನಾನು ಜಹಾಂಪನಾರೊಂದಿಗೆ ವೈಯಕ್ತಿಕವಾಗಿ ನಿಮ್ಮ ಪರವಾಗಿ ಮಾತಾಡಿ ನಿಮ್ಮ ಉಚ್ಚ ಶ್ರೇಣಿಗೆ ತಕ್ಕ ಹಕ್ಕನ್ನು ಕೊಡಿಸುತ್ತೇನೆ' ಎಂಬ ಆಶ್ವಾಸನೆಯನ್ನು ಕೂಡ ನೀಡಿದ.

ಹೀಗೆ ಈ ಬ್ರಾಹ್ಮಣರ ತಂಡದೊಂದಿಗೆ ಕತೆಕಟ್ಟಿ ಪುಸಲಾಯಿಸಿ, ಇವನ ವಿರುದ್ಧ ನೀವು ಒಂದು ಅರ್ಜಿಯನ್ನು ಬರೆದು ಕೊಡಿ. ನಾನು ಅದನ್ನು ಜಹಾಂಪನಾರಿಗೆ ತಲಪಿಸುತ್ತೇನೆ ಎಂದೂ ಅವರ ಕಿವಿಯೂದಿದ. 'ಹೀಗೆ ನಾನು ಹೇಳಿದಂತೆ ಮಾಡಿ, ಮುಂದೆ ನೋಡಿ, ಜೋತ್ ರಾವನನ್ನು ನಿಮ್ಮ ಪಾದದಡಿಗೆ ತಂದು ಹಾಕುತ್ತೇನೆ' ಎಂದು ಹೇಳಿದ. ಈ ಬ್ರಾಹ್ಮಣರು ಇನ್ನಿತರ ತಮ್ಮ ಸಮುದಾಯದ ಜನರ ಜೊತೆ ಸೇರಿ ಒಗ್ಗಟ್ಟಾಗಿ, ರಾಜ್ಯದಲ್ಲಿ ಪಿತೂರಿ ಮಾಡತೊಡಗಿದರು. ಕೆಲವುದಿನಗಳ ಬಳಿಕ ಜೋತ್ ರಾವನನ್ನು ದ್ವೇಷಿಸತೊಡಗಿದರು. ಅವನ ಮನೆಯನ್ನು ಹೊಕ್ಕು ಗಲಾಟೆಯೆಬ್ಬಿಸಿದರು. ಈ ವಿಚಾರಗಳು ಜಹಾಂಪನಾರ ಆಸ್ಥಾನಕ್ಕೆ ತಲಪಿದಾಗ

ಜೋತ್ ರಾವನ ಪರವಾಗಿ ನ್ಯಾಯ ತೀರ್ಮಾನ ಮಾಡಿ ಅವನಿಗೆ ಪರಿಹಾರ ರೂಪದಲ್ಲಿ ಕುದುರೆ ಮತ್ತು ನಿಲುವಂಗಿಯನ್ನು ನೀಡಿ ಸಮಾಧಾನಪಡಿಸಿದ. ಈಗ ನಾಯಕರ ತಂಡದವರು ಇದನ್ನು ವಿರೋಧಿಸಿ ಗಲಾಟೆ ಮಾಡಲು ತೊಡಗಿದರು. ತಮ್ಮ ಸಮಸ್ಯೆಗಳಿಗೆ ಪರಿಹಾರ ಮಾರ್ಗ ಕೇಳಲು ಜಂಗಮ ಸನ್ಯಾಸಿಯ ಬಳಿಗೆ ಹೋದರು. 'ನಾನು ನಿಮಗೆ ನಿಮ್ಮ ಹಕ್ಕುಗಳನ್ನು ಕೊಡಿಸುತ್ತೇನೆ. ನಿಮ್ಮ ಆತಂಕವನ್ನು ದೂರಮಾಡುತ್ತೇನೆ' ಎಂದು ಜಂಗಮ ಸನ್ಯಾಸಿ ಆಶ್ವಾಸನೆಯನ್ನು ನೀಡಿದ. ಅವರ ಹೆಚ್ಚುಕಮ್ಮಿ ಐದು ಸಾವಿರ ಜನರನ್ನು ತನ್ನ ಜೊತೆಗೆ ಸೇರಿಸಿಕೊಂಡ. ಅರ್ಧಪಾಲು ಸೈನ್ಯವನ್ನು ತನ್ನ ಜೊತೆಗೆ ಇಟ್ಟುಕೊಂಡ. ಅರ್ಧದಷ್ಟು ಜನರ ಸೈನ್ಯವನ್ನು ನಾಯಕರ ತಂಡಕ್ಕೆ ನೀಡಿ ಯುದ್ಧ ಮಾಡಲು ಉತ್ತೇಜಿಸಿದ. ಆದರೆ ಜಹಾಂಪನಾರ ಸೈನ್ಯದ ಮುಂದೆ ಇವರ ಬೇಳೆ ಬೇಯದೆ ಯುದ್ಧದಲ್ಲಿ ಸೋತು ಚೆಲ್ಲಾಪಿಲ್ಲಿಯಾದರು. ಹೀಗಾಗಿ ಇವರ ಶಕ್ತಿ ಕಮ್ಮಿಯಾಯಿತು. ಗುಂಪುಗಾರಿಕೆ ಬೆಳೆಯಿತು.

**ಜೋತ್ ರಾವನ ಜಹಾಂಪನಾರ ಬಳಿಗೆ ಆಗಮನ ಮತ್ತು ಜಹಾಂಪನಾ ಅವನಿಗೆ ಉಡುಗೊರೆಗಳ ಜೊತೆಗೆ ಸನ್ಮಾನಿಸಿದ ವಿವರಗಳು:**

ಜಹಾಂಪನಾರ ವತಿಯಿಂದ ಜ್ಯೋತ್ ರಾವ್‌ನಿಗೆ ಈ ಸಂತಸದ ಸಂದರ್ಭದಲ್ಲಿ ಕರೆಬಂದಾಗ ತನ್ನ ಕಾರ್ಯಗಳನ್ನು ಇತರ ಸಹಯೋಗಿಗಳಿಗೆ ಒಪ್ಪಿಸಿ ಬೇಗನೆ ತನ್ನ ಊರಿನಿಂದ ಆಸ್ಥಾನಕ್ಕೆ ತಲಪಲು ಪ್ರಯಾಣ ಶುರುಮಾಡಿದ. ಅಫ್ಜಲ್ ಖಾನನಿಗೆ ಸುದ್ದಿ ಸಿಕ್ಕಾಗ ಅರ್ಧಹಾದಿಯಲ್ಲಿ ಜೋತ್ ರಾವನ ಸ್ವಾಗತಕ್ಕೆ ಕೆಲವು ಸಿಪಾಯಿಗಳನ್ನು ಕಳುಹಿಸಿದ. ರಾಜ ಮರ್ಯಾದೆಯೊಂದಿಗೆ ಜಹಾಂಪನಾರ ದರ್ಬಾರಿನೊಳಗೆ ಜ್ಯೋತ್ ರಾವ್ ಆಗಮಿಸಲು ಏರ್ಪಾಡು ಮಾಡಿದ. ನಾನು(ಲೇಖಕ ಶಿರಾಜಿ) ಕೂಡ ಅಲ್ಲಿ ಹಾಜರಿದ್ದೆ. ಅಫ್ಜಲ್ ಖಾನ್ 'ಇವರಿಗೆ ಅರಮನೆಯ ಮಹಡಿಯಲ್ಲಿ ಆರಾಮ ಮಾಡಲು ಕೋಣೆಯಲ್ಲಿ ಏರ್ಪಾಡು ಮಾಡಿ. ಇದರಿಂದ ಜಹಾಂಪನಾರ ಭೇಟಿಗೆ ಅನುಕೂಲವಾಗುತ್ತದೆ' ಎಂದು ನನಗೆ ತಿಳಿಸಿದ. ಜೋತ್ ರಾವ್ ಬರುವ ವರ್ತಮಾನ ತಿಳಿಸಲು ನಾನು ಮಹಡಿಗೆ ಹೋದಾಗ ಜಹಾಂಪನಾ ಸ್ನಾನ ಗೃಹದಲ್ಲಿದ್ದರು. ಎರಡು ಮೂರು ಸೇವಕರು ಅವರ ಪವಿತ್ರ ದೇಹವನ್ನು ಮಾಲೀಶು ಮಾಡುತ್ತಿದ್ದರು. ನಾನು ಹೋಗಿ ಹೇಳಿದೆ 'ಖಾನ್ ನನ್ನನ್ನು ನಿಮಗೆ ಸಂದೇಶ ನೀಡಲು ಕಳುಹಿಸಿದ್ದಾನೆ, ನಿಮ್ಮ ಮುಂದೆ ಬಿನ್ನೈಸುವುದೇನೆಂದರೆ ಜೋತ್ ರಾವ್ ಆಗಮಿಸಿದ್ದಾನೆ'. ಹೂಜೂರರು ಗಡಿಬಿಡಿಯಲ್ಲಿ ತನ್ನ ಅರೆ ನಗ್ನ ದೇಹದ ಮೇಲೆ ಚಾದರ ಹೊದ್ದು ಜೋತ್ ರಾವ್‌ನನ್ನು ಭೇಟಿ ಮಾಡಲು ಹೋದರು. ಅವನು ಜಹಾಂಪನಾರನ್ನು ಕಂಡ ಕೂಡಲೇ ಸಾಷ್ಟಾಂಗ ನಮಸ್ಕಾರ ಮಾಡಿದ. ಅವನನ್ನು ಎತ್ತಿ ಆಲಂಗಿಸಲು ಹೋದಾಗ ಸರಿದ ಚಾದರವನ್ನು ಅಲ್ಲಿದ್ದ ಅಫ್ಜಲ್ ಖಾನ ಸರಿಪಡಿಸಿದ. ಹೀಗೆ ಅವನನ್ನು ರಾಜ

ಮರ್ಯಾದೆಯೊಂದಿಗೆ ಸ್ವಾಗತಿಸುತ್ತ 'ಜ್ಯೋತ್ ರಾವ್ ನನ್ನ ಮಗನಂತೆ' ಎಂದು ಜಹಾಂಪನಾ ಹೇಳಿದರು. ಮುಂದೆ ಅವನನ್ನು ತನ್ನ ಜೊತೆಯಲ್ಲೆ ಇರಿಸಿಕೊಂಡರು. ಅವನಿಗೆ ರಾಜ ಪೋಷಾಕು ನೀಡಿದರು. ದಕ್ಷಿಣದ ಬಾದಶಾಹರ ವಾಡಿಕೆಯ ನಡೆಯಂತೆ ಜೋತ್ ರಾವನಿಗೆ ಆನೆ, ಕುದುರೆಗಳನ್ನು, ಅಂಬರ್, ಮುಷ್ಕ ಸುಗಂಧಗಳ ಜೊತೆಗೆ ನೀಡಿದರು. ಜಹಾಂಪನಾರು ತನಗೆ ನೀಡಿದ ಆದರ ಸನ್ಮಾನಗಳಿಂದ ಜೋತ್ ರಾವ್ ಅತ್ಯಂತ ಸಂತಸಪಟ್ಟುಕೊಂಡ.

ತನ್ನನ್ನು ನಿಜಕ್ಕೂ ಇವರು ಗೌರವಿಸುತ್ತಾರೆಂದು ಜೋತ್ ರಾವನಿಗೆ ಮನವರಿಕೆಯಾದ ಕೂಡಲೇ ಜಹಾಂಪನಾರ ಆಪ್ತರಲ್ಲಿ ಒಬ್ಬನಾದ. ಜಹಾಂಪನಾರ ಕಡೆಯಿಂದ ಸಾಕಷ್ಟು ವಿಧದ ಉಡುಗೊರೆಗಳು, ಕಾಣಿಕೆಗಳು, ಅದರಪೂರ್ವಕವಾಗಿ ದೊರೆತ ಬಳಿಕ ಜೋತ್ ರಾವ್ ಹೆಚ್ಚಾಗಿ ಜಹಾಂಪನಾರ ಆಸ್ಥಾನದಲ್ಲಿ ಅವಕಾಶ ಸಿಕ್ಕಾಗಲೆಲ್ಲ ಬಂದಿರುತ್ತಿರುತ್ತಿದ್ದ. ಜಹಾಂಪನಾರೊಂದಿಗೆ ತನಗೆ ಎರಡು ಮೂರು ಎಕ್ರೆ ಜಮೀನು ಸಿಕ್ಕಿದಲ್ಲಿ ನಾನು ನನ್ನ ಕುದುರೆ ಆನೆಗಳನ್ನು ಸಾಕಲು ಅವಕಾಶವಾಗುತ್ತದೆ ಎಂದ. ಜಹಾಂಪನಾ ಅಫ್ಜಲ್ ಖಾನನಿಗೆ ಹೇಳಿ ಜೋತ್ ರಾವನಿಗೆ ಅವಶ್ಯವಿರುವ ಈ ವ್ಯವಸ್ಥೆಯನ್ನು ಮಾಡಲು ಹೇಳಿದ. ಕೂಡಲೇ ನಾಲ್ಕೈದು ಎಕ್ರೆ ಜಮೀನನ್ನು ಅವನಿಗೆ ನೀಡಲಾಯಿತು. ಜೋತ್ ರಾವ್‌ನಿಗೆ ಸಂಪೂರ್ಣ ಶಕ್ತಿ ದೊರೆತಂತಾಯಿತು. ದಿನ ನಿತ್ಯ ಬೆಳಿಗ್ಗೆ ಎದ್ದವನು ಖಾನ್‌ನ ಮನೆಗೆ ಹೋಗಿ ಅಲ್ಲಿಂದ ಜಹಾಂಪನಾರ ಬಳಿಗೆ ಹೋಗುತ್ತಿದ್ದ. ಸಂಜೆ ೬ ಮತ್ತು ೭ ಗಂಟೆ ಮಧ್ಯೆ ತನ್ನ ಮನೆಗೆ ಹಿಂತಿರುಗುತ್ತಿದ್ದ. ಹೀಗೆ ಜೋತ್ ರಾವ್ ತನ್ನ ಎಲ್ಲ ವಿಚಾರಗಳನ್ನು ಜಹಾಂಪನಾರ ಬಳಿ ಹೇಳಿಕೊಳ್ಳುತ್ತಿದ್ದ. ಅಫ್ಜಲ್ ಖಾನ ಅವನ ಮಾತುಗಳನ್ನು ಕೇಳಿಸಿಕೊಂಡು ಅರ್ಥಮಾಡಿಕೊಳ್ಳುತ್ತಿದ್ದ. ಕೆಲಸಮಯ ಕಳೆದ ನಂತರ ನಾಯಕರ ತಂಡದವರು ತನ್ನನ್ನು ದ್ವೇಷಿಸುತ್ತಿದ್ದಾರೆ ಮತ್ತು ತನ್ನ ವಶದಲ್ಲಿರುವ ಪ್ರದೇಶವನ್ನು ಹಾಳು ಮಾಡಲು ತೊಡಗಿದ್ದಾರೆಂದು ಜೋತ್ ರಾವ್ ಹೇಳಿದ. ನಿಮ್ಮ ಅಪ್ಪಣೆ ಇದ್ದರೆ ನಾನು ಕೆಲವು ದಿನಗಳ ಕಾಲ ನನ್ನ ಊರಿಗೆ ಹೋಗಿ ಈ ವೈರಿಗಳನ್ನು ಓಡಿಸಿ ಹಿಂದಕ್ಕೆ ವಾಪಸು ಬರುತ್ತೇನೆಂದು ಹೇಳಿದ. ಅವರ ಅನುಮತಿ ಪಡೆದು ಊರಿಗೆ ಹೋದ. ಸ್ವಲ್ಪ ದಿನಗಳನಂತರ ವಾಪಸು ಬಂದು "ಜಹಾಂಪನಾರ ಬಗ್ಗೆ ನೀಚ ಬುದ್ಧಿಯ ಮಾತುಗಳನ್ನು ನಾಯಕರ ಕಡೆಯವರು ಹೇಳುತ್ತಿದ್ದಾರೆ. ಇವರು ಇಪ್ಪತ್ತೆರಡು ಮಂದಿ ಇದ್ದಾರೆ. ಇವರಲ್ಲಿ ಹನ್ನೆರಡು ಮಂದಿ ಹಲವು ರೀತಿಯಲ್ಲಿ ಬಾದಶಾಹರಿಂದ ಹೆಚ್ಚಿನ ಸಹಾಯ ಪಡೆದವರಿದ್ದಾರೆ. ಎಲ್ಲರೂ ಒಂದಲ್ಲ ಒಂದು ರೀತಿಯಲ್ಲಿ ಸಹಾಯ ಪಡೆದವರೇ ಆಗಿದ್ದಾರೆ" ಎಂದು ಹೇಳಿದ. ಜಹಾಂಪನಾರು ಖಾನನನ್ನು ಕರೆದು, 'ನಾಯಕರಲ್ಲಿ ನಮ್ಮಿಂದ ಸಹಾಯ ಪಡೆದವರನ್ನು ಹೊರತು ಪಡಿಸಿ ಉಳಿದವರಲ್ಲಿ ನನ್ನ ಬಗ್ಗೆ ಕೆಟ್ಟ

ಮಾತುಗಳನ್ನಾಡುವವರನ್ನು ಕರೆಸಿ ಯಾಕೆ ಈ ರೀತಿ ವರ್ತಿಸುತ್ತಾರೆಂಬುದರ ಕುರಿತು ವಿಚಾರಿಸೋಣ' ಎಂದು ಹೇಳಿದರು. ಅಫ್ಜಲ್ ಖಾನ್ ಅವರನ್ನು ಕರೆಸಲು ತನ್ನ ದೂತರನ್ನು ಕಳುಹಿಸಿದರೂ ಅವರು ಆಸ್ಥಾನಕ್ಕೆ ಬರಲು ಒಪ್ಪಲಿಲ್ಲ.

**ನಾಯಕ ಸಮುದಾಯದವರ ಕಡೆ ಸೈನ್ಯದ ರವಾನೆ ಮತ್ತು ಅದರ ಪರಿಣಾಮದ ವಿವರಗಳು:**

ಹಿಜರಿ ವರ್ಷ ೯೮೬ಕ್ಕೆ ಸಂಬಂಧಿಸಿದ ವಿವರಗಳನ್ನು ನೋಡಿದರೆ ಮುರ್ತಜಾ ಖಾನ್ ಪ್ರಮುಖ ದರ್ಬಾರಿಗಳಲ್ಲಿ ಓರ್ವನೂ ಬಾದಶಾಹರ ಆಪ್ತರಲ್ಲಿ ಓರ್ವನೂ ಆಗಿದ್ದ. ಅವನು ಆರು ಮಂದಿ ಸಿಪಾಯಿಗಳ ತಂಡವೊಂದನ್ನು ರಚಿಸಿ, ಈ ದಗಲಬಾಜಿ ವಿರೋಧಿಗಳತ್ತ ಕಳುಹಿಸಿದ್ದ. ಇದು ಅವರಿಗೆ ತಿಳಿದಾಗ ತಮ್ಮ ಊರನ್ನು ಬಿಟ್ಟು ಸಾಮಾನು ಸರಂಜಾಮು, ಜಾನುವಾರು ಸವಾರಿ ಮಾಡಿಕೊಂಡು ಕುಟುಂಬ ಸಮೇತ ಮಲೆನಾಡಿನತ್ತ ಓಡಿ ಹೋದರು.

ಮುರ್ತಜಾ ಖಾನನ ನೇತೃತ್ವದಲ್ಲಿ ಒಂದು ಸೈನ್ಯವನ್ನು ಅವರ ಕಡೆ ಕೂಡಲೇ ಕಳುಹಿಸಲಾಗಿತ್ತು. ನಾಲ್ಕು ಮೈಲುಗಳ ದೂರ ಈ ಸೈನ್ಯ ಪ್ರಯಾಣಿಸಿದಾಗ ರಾತ್ರಿಯಾಗಿತ್ತು. ಅಲ್ಲಿ ತಂಗಿ ಬೆಳಿಗ್ಗೆ ಸೈನ್ಯವು ತನ್ನ ಪ್ರಯಾಣವನ್ನು ಮುಂದುವರಿಸಿತು. ಈ ತಂಡದಲ್ಲಿದ್ದ ಜೋತ್ ರಾವ್ ಅಂದಿನ ಈ ಪಿತೂರಿಯ ಮುಖ್ಯ ಬದ್ಮಾಶನೆನಿಸಿದ್ದ. ಅವನು ಭಯಭೀತನಾಗಿ ಮಲೆನಾಡಿನ ಕಾಡಿನೊಳಗೆ ಅಡಗಿದ್ದ. ಅಫ್ಜಲ್ ಖಾನ್ ನೂರೈವತ್ತು ಜನರ ಗುಪ್ತಚರ ತಂಡವನ್ನು ಕಳುಹಿಸಿದ್ದ. ಐದನೇ ದಿನ ಜೋತ್ ರಾವನ ತಂಡದ ಜನಗಳು ಸಿಕ್ಕಿಬಿದ್ದು ಜಹಾಂಪನಾರ ಬಳಿಗೆ ಕಳುಹಿಸಲಾಗಿತ್ತು. 'ಇವರೆಲ್ಲರೂ ಮಲೆನಾಡಿನ ಕಾಡಿನಲ್ಲಿ ಅಡಗಿದ್ದು ಅಲ್ಲೊಂದು ವಿದ್ರೋಹಿಗಳ ಗುಂಪನ್ನು ತಯಾರಿ ಮಾಡಿದ್ದರು. ನಿಮ್ಮ ಆಳ್ವಿಕೆಯಲ್ಲಿ ಅಡಚಣೆಯನ್ನು ಉಂಟು ಮಾಡುವುದು ಇವರ ಉದ್ದೇಶವಾಗಿತ್ತು' ಎಂದು ಆರೋಪಿಸಲಾಗಿತ್ತು. 'ಮುರ್ತಜಾ ಖಾನ ವಿರೋಧಿಗಳ ಜೊತೆ ಶಾಮೀಲಾಗಿದ್ದಾನೆ, ನಮ್ಮ ಸಹಾಯ ಸಹಕಾರಗಳನ್ನು ಮರೆತಿದ್ದಾನೆ. ಅವನು ಕೂಡಲೇ ನಮ್ಮ ಮುಂದೆ ಹಾಜರಾಗ ತಕ್ಕದ್ದು. ಇಲ್ಲವಾದಲ್ಲಿ ನಮ್ಮ ನಿನ್ನ ಭೇಟಿ ಸ್ವರ್ಗ ಲೋಕದಲ್ಲಿ ಆಗುವುದು' ಎಂದು ಜಹಾಂಪನಾ ಫರ್ಮಾನ್ ಜಾರಿಮಾಡಿದರು. ಮುರ್ತಜಾ ಖಾನನಿಗೆ ಈ ಸಂದೇಶ ತಲಪಿದಾಗ ಭಯಭೀತನಾಗಿ ತತ್ತರಿಸಿ ಐನುಲ್ ಮಲಿಕನಿಗೆ ಶರಣಾಗತನಾಗಿ ಜಹಾಂಪನಾರ ಫರ್ಮಾನನ್ನು ಓದುತ್ತಾ ಗೋಳೆಂದು ಅತ್ತಿದ್ದ. 'ನಾನು ಸಂಪೂರ್ಣ ನಾಶವಾಗಿದ್ದೇನೆ, ನನಗೆ ನಾಚಿಕೆಯಾಗುತ್ತಿದೆ. ನನ್ನ ಫರ್ಯಾದನ್ನು ಅಲ್ಲಿಗೆ ತಲಪಿಸಿ. ಇಲ್ಲವಾದಲ್ಲಿ ನಾನು ಸಾಯುತ್ತೇನೆ' ಎಂದು ಹಲುಬಿದ್ದ. ಇದಕ್ಕೆ ಉತ್ತರವಾಗಿ 'ನಾನು ನಿನ್ನ ಜೊತೆಗಿದ್ದೇನೆ' ಎಂದು ಅವನನ್ನು

ಐನುಲ್ ಮಲಿಕ್ ಸಮಾಧಾನಪಡಿಸಿದ್ದ. ಮುರ್ತಜಾ ಖಾನ್ ತಾನು ಯುದ್ಧ ಮಾಡಲಾರೆ. ನೀನು ನಿನ್ನ ಕೆಲಸವನ್ನು ಮುಂದುವರಿಸು ಎಂದು ಮುರ್ತಜಾ ಖಾನ್ ಹೇಳಿದ. ನಂತರ ಐನುಲ್ ಮಲಿಕ್ ಮತ್ತು ಮುರ್ತಜಾ ಖಾನ್ ಸೇರಿ ಸವಾರಿ ಮಾಡಿಕೊಂಡು ಹೋದರು. ಉಳಿದ ಜೊತೆಗಾರರು ಕೂಡ ಅವರ ಜೊತೆಗೆ ಪ್ರಯಾಣಿಸಿದರು. ಜೋತ್ ರಾವ್ ಮತ್ತು ನಾಯಕ ಸಮುದಾಯದವರು 'ಕೂಡಲೇ ನಿಮ್ಮ ಕೆಲಸ ಮಾಡಿ. ಇಲ್ಲವಾದರೆ ಕೆಲಸ ಕೆಡುವುದು' ಎಂಬ ಸಂದೇಶವನ್ನು ಮುರ್ತಜಾ ಖಾನನಿಗೆ ಕಳುಹಿಸಿದ.

ಅವರ ಸಂದೇಶ ಪತ್ರ ಮುರ್ತಜಾ ಖಾನನಿಗೆ ತಲಪಿದಾಗ 'ಇಲ್ಲಿ ತಂಗುವುದು ಅಪಾಯಕಾರಿಯಾಗಿದೆ. ನೀವು ಕೂಡಲೇ ಅಲ್ಲಿಂದ ಹೊರಡಿ' ಎಂಬ ಉತ್ತರ ಬರೆದು ಕಳುಹಿಸಿದ. ಮರುದಿನ ಬೆಳಿಗ್ಗೆ ಈ ಪತ್ರ ತಲಪಿದಾಗ ದೇವ ನಾಯಕ್ ತಂಡದವರಿಗೆ ಸೈನ್ಯ ದಂಡೆತ್ತಿ ತಮ್ಮತ್ತ ಬರುತ್ತಿರುವುದು ತಿಳಿಯಿತು. ಕೂಡಲೇ ದೇವ ನಾಯಕ ತಯಾರಾಗಿ ಐದು ಸಾವಿರ ಕುದುರೆ ಸವಾರ ಸೈನಿಕರೊಂದಿಗೆ ಕಾಡಿನ ಕಡೆ ಓಡಿಹೋಗಿ ಅಡಗಿಕೊಂಡ. ಇದನ್ನು ತಿಳಿದು ಮುರ್ತಜಾ ಖಾನ ತನ್ನ ಸೈನಿಕರನ್ನು ಸೇರಿಸಿಕೊಂಡು ಬೆನ್ನಟ್ಟಿ ಹೋಗಿ ದೇವ ನಾಯಕನ ಸೈನ್ಯದ ಮಧ್ಯೆ ಸಿಂಹದಂತೆ ಹಾರಿ ನುಗ್ಗಿ ಅವರ ಸೈನ್ಯವನ್ನು ತರಿದು ಹಾಕತೊಡಗಿದ.

ಮುರ್ತಜಾ ಖಾನ್ ಓರ್ವ ಶಕ್ತಿಶಾಲಿ, ನಿರ್ಭಯ ಶೂರನಾದ ಸರದಾರನಾಗಿದ್ದ. ಇವನು ಹಲವಾರು ಯುದ್ಧಗಳಲ್ಲಿ ಪಾಲ್ಗೊಂಡಿದ್ದ. ಆದರೆ ಈ ಯುದ್ಧದಲ್ಲಿ ಅವನ ಶಕ್ತಿ ಮತ್ತು ಪೌರುಷದ ಪ್ರದರ್ಶನ ಬಹಳ ಚೇತೋಹಾರಿಯಾಗಿ ಕಂಡು ಬಂತು. ನಿಜವಾಗಿ ನೋಡಿದರೆ ಅವನಿಗೆ ವಯಸ್ಸಾಗಿತ್ತು. ಎಂಭತ್ತು ವರ್ಷದ ವಯೋವೃದ್ಧನಾಗಿದ್ದೂ ಕೂಡ ಇಂತಹ ಸಾಹಸಕ್ಕೆ ಇಳಿದಿದ್ದ. ಮುರ್ತಜಾ ಖಾನನ ಈ ವೃದ್ಧಾವಸ್ಥೆಯಲ್ಲೂ ತೋರಿದ ಶೌರ್ಯ ಸಾಹಸಕ್ಕೆ ಅನೇಕರು ಅವನನ್ನು ಆಲಂಗಿಸಿ ಅಭಿನಂದಿಸಿದ್ದರು. ಹಾದಿಯಲ್ಲಿ ಜನರು ಸೇರಿ ಅವನ ವಿಜಯೋತ್ಸವವನ್ನು ಪಟಾಕಿ ದುರುಸುಗಳನ್ನು ಸುಡುವ ಹಾಗೂ ಘೋಷಣೆ ಕೂಗುವ ಮೂಲಕ ಆಚರಿಸಿದರು. ಮುರ್ತಜಾ ಖಾನ್ ಈ ಯುದ್ಧದಲ್ಲಿ ರುಸ್ತುಮನಂತೆ, ಇಸ್ಫಂದಿಯಾರ್‌ನಂತೆ ಅಮಿತ ಸಾಹಸ ತೋರಿದ್ದ. ಕೊನೆಗೆ ಜಹಾಂಪನಾರ ಇಸ್ಲಾಮೀ ಸೇನೆಗೆ ವಿಜಯ ಪ್ರಾಪ್ತವಾಗಿ ಅವರ ಸಾಮ್ರಾಜ್ಯದ ಧ್ವಜ ಎತ್ತರಕ್ಕೆ ಹಾರಾಡಿತು. ವೈರಿಗಳ ಸೈನ್ಯ ಇವರನ್ನು ಎದುರಿಸಲಾಗದೆ ಚೆಲ್ಲಾಪಿಲ್ಲಿಯಾಗಿ ಓಡಿದರು. ಮುರ್ತಜಾ ಖಾನನ ಸೈನಿಕರು ಅವರನ್ನು ಹಿಂಬಾಲಿಸಿ ಅಟ್ಟಿಸಿಕೊಂಡು ತರಿದು ಹಾಕಿದರು. ದೇವನಾಯಕ ಕುದುರೆಯಿಂದ ಜಾರಿ ಕೆಸರು ಮಣ್ಣಿನಲ್ಲಿ ಬಿದ್ದುಬಿಟ್ಟ. ಅವನ ಮಗ ಅವನನ್ನು ಎತ್ತಿಕೊಂಡು ತನ್ನ ಕುದುರೆಯಲ್ಲಿ ಕೂರಿಸಿಕೊಂಡು ಹಮೀದ್ ಖಾನ್ ಎಂಬ ಹಬ್ಶಿ

ಗುಲಾಮನ ಬಳಿಗೆ ಕೊಂಡೊಯ್ದು. ಈ ಹಮೀದ್ ಖಾನ ಬಾದಶಾಹನ ಓರ್ವ ದರ್ಬಾರಿನ ಅಮೀರ್ ಅಥವಾ ಅಧಿಕಾರಿಗಳಲ್ಲಿ ಓರ್ವನಾಗಿದ್ದ. ಉಳಿದ ಸೈನಿಕರು ಎಲ್ಲೆಂದರಲ್ಲಿ ಜೀವ ಹಿಡಿದುಕೊಂಡು ಓಡಿದರು. ಹಸ್ಮಲ್ ನಾಯಕ ತನ್ನ ಮಕ್ಕಳು, ಸಾಮಾನು ಸರಂಜಾಮುಗಳನ್ನು ಹಿಡಿದು ಕಾಡಿನ ಕಡೆ ಸಾಗಿದ್ದ. ಇವನ ಸಂಪೂರ್ಣ ಸಾಮಾನು ಸರಂಜಾಮುಗಳು ಜಹಾಂಪನಾರ ಸೈನಿಕರ ವಶಕ್ಕೆ ಸಿಕ್ಕಿತ್ತು.

ಜೋತ್ ರಾವ್ ತಿಳಿದೂ ತಿಳಿದೂ ಈ ಎಲ್ಲ ಜಂಜಾಟದಿಂದ ದೂರನಿಂತಿದ್ದವನಿಗೆ ದೇವ ನಾಯಕ ತನ್ನ ಮಗನೊಂದಿಗೆ ಹಮೀದ್ ಖಾನನ ಕೈಯೊಳಗೆ ಸೆರೆಯಾಗಿದ್ದಾನೆಂಬ ಸಂಗತಿ ತಿಳಿದಾಗ ಕೂಡಲೇ ತನ್ನ ಸೈನಿಕರ ಜೊತೆಗೂಡಿ ಅವನ ಬಳಿಗೆ ಹೋದ. ದೇವ ನಾಯಕನನ್ನು  ಮಗನೊಂದಿಗೆ ಒಂದು ಆನೆಯ ಮೇಲೆ ಕೂರಿಸಿ ವಿಜಯೋತ್ಸವವನ್ನು ಆಚರಿಸುತ್ತಿದ್ದ ಜನರು ಮತ್ತು ಸೇನೆಯ ಮೆರವಣಿಗೆಯ ಸಾಲಿನ ಹಿಂದೆ ಕರೆದುಕೊಂಡು ಬರುತ್ತಿದ್ದರು. ಜಹಾಂಪನಾರಿಗೆ ಈ ವಿಜಯವಾರ್ತೆಯ ಜೊತೆಗೆ ದೇವನಾಯಕ ಮತ್ತು ಅವನ ಮಗನ ಬಂಧನದ ವಾರ್ತೆ ತಲಪಿತು. ಜಹಾಂಪನಾ ಸಂತೋಷಗೊಂಡರು. ಹಾಜಿ ಕೂಸಪರ್ದಾದಾರ್ ಎಂಬ ಸರದಾರ ದೇವನಾಯಕ ಮತ್ತು ಅವನ ಮಗನನ್ನು ಬಂಗಾಪುರದ ಕೋಟೆಯಲ್ಲಿ ಬಂಧಿಸಿಡಲು ಆದೇಶ ನೀಡಿದ. ಇದಕ್ಕೆ ಕಾರಣ ಜೋತ್ ರಾವ್ ಅಥವಾ ಇನ್ನಾರಾದರೂ ಬಂದು ಅವರನ್ನು ಬಿಡಿಸಿಕೊಂಡು ಹೋಗದಂತೆ ತಡೆಯುವುದಾಗಿತ್ತು. ಜೋತ್ ರಾವ್ ಬಳಿಗೆ ಅವನನ್ನು ಬಂಧಿಸುವ ಫರ್ಮಾನು ಹಿಡಿದುಕೊಂಡು ಹಾಜಿ ಹೋದಾಗ ಆಜ್ಞೆಯನ್ನು ಒಪ್ಪಿಕೊಂಡ ಬಳಿಕ ಅವನು 'ದೇವ ನಾಯಕ ಮತ್ತು ಅವನ ಮಗನನ್ನು ಜಹಾಂಪನಾರ ಬಳಿಗೆ ನಾನು ಕೊಂಡೊಯ್ಯುತ್ತೇನೆ' ಎಂದು ಹೇಳಿದ. ಈ ವಿಷಯವನ್ನು ಹಾಜಿ ತನ್ನ ದೂತರ ಮೂಲಕ ಜಹಾಂಪನಾರಿಗೆ ಸಂದೇಶ ಕಳುಹಿಸಿದ. ನಂತರದಲ್ಲಿ ಇನ್ನುಳಿದ ಸೈನಿಕರಂತೆ ಪ್ರಯಾಣಿಸಿ ಬಿಜಾಪುರಕ್ಕೆ ತಲಪಿದ. ಮುರ್ತಜಾ ಖಾನ್ ಆಂಜೋ ಈ ವಿಜಯದ ನಂತರ ಶಾಹ ಕಮಾಲುದ್ದೀನ್ ಫತ್ತುಲ್ಲಾರನ್ನು ಆಹ್ವಾನಿಸುವ ಸಲುವಾಗಿ ದೂತರನ್ನು ಕಳುಹಿಸಿದ. ಜಹಾಂಪನಾರು ಪರ್ಕೋಟಾಕ್ಕೆ ಹೋಗಿದ್ದರು. ಪರ್ಕೋಟಾ ಎಂಬ ಪ್ರದೇಶ ಬಿಜಾಪುರದ ಕೋಟೆಯ ಭಾಗವಾಗಿದ್ದು ಎರಡು ಹೂದೋಟಗಳು ಅಲ್ಲಿವೆ. ಎರಡು ಕಂದಕಗಳು ಅಲ್ಲಿವೆ. ಅಲ್ಲಿ ದೊಡ್ಡದೊಡ್ಡ ಕಟ್ಟಡಗಳೂ ಇವೆ. ಕೋಟೆಯ ಆವರಣಕ್ಕೆ ಎರಡು ಬಾಗಿಲುಗಳಿವೆ ಇವಕ್ಕೆ ಬೀಗ ಹಾಕಲಾಗಿದೆ. ಇಲ್ಲಿ ಒಂದು ಪ್ರಸಿದ್ಧ ಅಖಾಡಾವಿದ್ದು ಆಗಾಗ ಕುಸ್ತಿ ಪಂದ್ಯಾಟ ನಡೆಯುತ್ತದೆ. ಇಲ್ಲಿ ಜ್ಯೋತ್ ರಾವ್ ಮತ್ತು ದೇವ್ ನಾಯಕ್ ಹಾಗೂ ಇವರ ಮಕ್ಕಳು ಇದ್ದು ಕೆಲವು ಹಿಂದೂ ಸರದಾರರುಗಳೊಂದಿಗೆ ಪರ್ಕೋಟಾಕ್ಕೆ ಬಂದು ಮುರ್ತಜಾ ಖಾನನ ಸುಂದರ ಮನೆಯಲ್ಲಿ ಇದ್ದರು. ಇಲ್ಲಿಗೆ ಕಮಾಲುದ್ದೀನ್ ಫತ್ತುಲ್ಲಾ ಕೂಡ ಬಂದು

ಸೇರಿಕೊಂಡರು. ಜಹಾಂಪನಾ ಇಲ್ಲಿಗೆ ಆಗಮಿಸಿ ಇಲ್ಲಿನ ಸೇನಾನಿಯಾಗಿದ್ದ ಮಲಿಕ್ ತಾಜುದ್ದೀನರ ಮನೆಯಲ್ಲಿ ತಂಗಿದ್ದರು. ಇಲ್ಲಿ ಕೂತು ಅಫ್ಜಲ್ ಖಾನ್, ಖಾಮಿಲ್ ಖಾನ್, ಮುರ್ತಜಾ ಖಾನ್ ಅಂಜೂನ ಖಾಸ ಸಹೋದರ ಷಾ ಕಾಸಿಂ ಅಂಜೂ ಸಭೆ ಸೇರಿ ಈ ಬದ್ಮಾಶರನ್ನು ಏನು ಮಾಡಬೇಕೆಂಬ ಬಗ್ಗೆ ತೀರ್ಮಾನಿಸಲು ಮನೆಯಲ್ಲಿ ಸೇರಿದ್ದರು. ಈ ಎಲ್ಲ ಫಿರ್ಯಾದುಗಳು, ಆರೋಪಗಳ ಪಟ್ಟಿಯ ಬಗ್ಗೆ ಷಾ ಕಾಸಿಂ ವಿವರವಾಗಿ ಸಭೆಯಲ್ಲಿ ಪ್ರಸ್ತುತಪಡಿಸಿದ್ದ. 'ನೀವು ಏನು ತೀರ್ಮಾನ ತೆಗೆದುಕೊಳ್ಳುವಿರೋ ಅದಕ್ಕೆ ನನ್ನ ಬೆಂಬಲವಿದೆ' ಎಂದು ಖಾಸಿಂ ಖಾನ್ ಹೇಳಿದ. ಖಾಮಿಲ್ ಖಾನ್ ಕೂಡ ಇದೇ ಅಭಿಪ್ರಾಯ ವ್ಯಕ್ತಪಡಿಸಿದ. ಅಫ್ಜಲ್ ಖಾನ್ 'ಜೋತ್ ರಾವ್ ನನಗೆ ಮಾತು ಕೊಟ್ಟಿದ್ದಾನೆ; ಈ ಕಾರಣಕ್ಕಾಗಿ ಅವನಿಗೆ ಜೀವದಾನ ಮಾಡಿ, ಉಳಿದವರು ನಿಮ್ಮ ತೀರ್ಮಾನಕ್ಕೆ ಬಿಟ್ಟದ್ದು' ಎಂದು ವಿನಂತಿಸಿದ.

ಜೋತ್ ರಾವ್‌ನ ಊರಿಗೆ ಕೆಲವು ಸೇವಕರನ್ನು ಕಳುಹಿಸಿ ಅವನ ಸಾಮಾನು ಸರಂಜಾಮುಗಳು, ಅವನ ಹೆಂಡತಿ ಮಕ್ಕಳನ್ನು ಕರೆತರಿಸಲಾಗಿ ಅವರನ್ನು ಬಾದಶಾಹರ ಸರಕಾರದ ನಿಗಾದಲ್ಲಿ ಇಡಲಾಯಿತು. ಜಹಾಂಪನಾ ಹೊರಗೆ ಬಂದಾಗ ಸಭೆ ಸೇರಿದ ಪ್ರಮುಖರು ಎದ್ದು ನಿಂತು ಸಲಾಮ್ ಸಲ್ಲಿಸಿದರು. ಜಹಾಂಪನಾ ಜೋತ್ ರಾವನನ್ನು ಕರೆಸಿದರು. ದೇವ ನಾಯಕನ ಪರವಾಗಿ ಅಹವಾಲುಗಳನ್ನು ಮಂಡಿಸಬಲ್ಲ ಸಹಾಯಕನನ್ನು ಕೂಡ ಕರೆಸಿದರು. ದೇವ ನಾಯಕನ ಮಗನಿಗೆ ಐನೂರು ಕುದುರೆಗಳು, ಜಮೀನು, ಅವನ ಹಿಡಿತದಲ್ಲಿದ್ದ ಪ್ರಾಂತ್ಯದ ಒಂದು ನ್ಯಾಯಯುತ ಪಾಲು ನೀಡಬೇಕಾಗಿ ಈ ಸಹಾಯಕ ಕೇಳಿಕೊಂಡ. ಇದಕ್ಕೆ ಜೋತ್ ರಾವ್ ಜಾಮೀನಾಗಿರುತ್ತಾನೆ ಎಂದು ಸಹಾಯಕ ಹೇಳಿದ. ಜಹಾಂಪನಾ ಸಭೆಯಲ್ಲಿ ಕೂತು, ದೇವ ನಾಯಕನ ಸ್ಥಿರ ಚರ ಸೊತ್ತುಗಳಿಂದ ಅವನ ಮಗನಿಗೆ ಏನೊಂದೂ ಕೊಡುವುದು ಸಾಧ್ಯವಿಲ್ಲವೆಂದು ಹೇಳಿದರು. ಇದರಿಂದ ನಾಯಕನ ಬೆಂಬಲಿಗರು ಸಿಟ್ಟಾದರು. ಜಹಾಂಪನಾರು ಅವರ ಮಧ್ಯೆ ಕೂತು ಎಲ್ಲ ದಾಖಲೆಗಳನ್ನು ಪರಿಶೀಲಿಸಿ ಇದರಲ್ಲಿ ಈ ಸಭೆಯ ಸಭಾಸದರ ಹಸ್ತಾಕ್ಷರ ಹಾಕುವ ಮೂಲಕ ಇದು ಒಂದು ಕಾನೂನಿನ ದಾಖಲೆಯಾಗಲೆಂದು ಪರಿಗಣಿಸಲ್ಪಡಬೇಕೆಂದು ಒತ್ತಾಯಿಸಿದರು. ದೇವ ನಾಯಕ್ ಮತ್ತು ಅವನ ಮಗನಿಗೆ ರಾತ್ರಿ ಹೊತ್ತು ಜೋತ್ ರಾವ್ ಕೆಟ್ಟ ಭಾಷೆಯಲ್ಲಿ ಬಯ್ಯಾಡ ತೊಡಗಿದ.

ಜೋತ್ ರಾವನ ಪತ್ನಿ ಮತ್ತು ಮಕ್ಕಳಿಗೆ ಒಂದು ದೊಡ್ಡ ಮನೆಯನ್ನು ನೀಡಲಾಯಿತು. ಅವನು ಸಾಯುವ ತನಕವೂ ಆ ಮನೆಯಲ್ಲೇ ಆರಾಮದಲ್ಲಿ ವಾಸಿಸಿದ್ದ. ಅವನಿಗೆ ತಿಂಗಳು ತಿಂಗಳೂ ಅವಶ್ಯಕತೆಗೆ ಅನುಗುಣವಾಗಿ ನಗದಿನ ರೂಪದಲ್ಲಿ ಮಾಶಾಸನವೂ ನೀಡಲಾಗುತ್ತಿತ್ತು. ದೇವ ನಾಯಕನ ತಂದೆ ಲಚ್ಮಣ್

ನಾಯಕ್ ಕಾಡಿನಲ್ಲಿ ಸಂಚರಿಸುತ್ತ, ಆದಿವಾಸಿಗಳ ಜತೆಗೆ ಬದುಕುತ್ತ ಕಾಲ ಕಳೆದು ಅಲ್ಲೇ ಅಸುನೀಗಿದ. ಆತನ ಮಗ ಸ್ವಲ್ಪಕಾಲದ ನಂತರ ಜಹಾಂಪನಾರ ಆಸ್ಥಾನಕ್ಕೆ ಬಂದು ಅವರಿಗೆ ಶರಣಾಗತನಾದ. ಅವನ ಮೇಲೆ ಕನಿಕರಪಟ್ಟುಕೊಂಡು ಕ್ಷಮಿಸಿ ಆಸ್ಥಾನದಲ್ಲಿ ಅಮೀರ್ ಪದವಿ ನೀಡಿದರು. ಹೀಗೆ ಬಾದಶಾಹನ ಆಸ್ಥಾನಿಗರಲ್ಲಿ ಒಬ್ಬನಾಗಿ ಶಾಮೀಲಾದ. ಆದರೆ ಅವನ ಚಿಕ್ಕ ಮಗ ದೇವ ನಾಯಕನಿಗೆ ಕ್ಷಮಾದಾನ ಸಿಗಲಿಲ್ಲ. ಅವನು ಬದ್ಮಾಶ್ ತಂಡಗಳೊಂದಿಗೆ ಸೇರಿಕೊಂಡು ಪಿತೂರಿ, ಲಫಂಗತನದಲ್ಲೇ ಮುಳುಗಿದ್ದ. ಕೊನೆಯಲ್ಲಿ ಅವನನ್ನು ಬಂದಿಸಿದ ನಂತರ ಸೆರೆಮನೆಯಲ್ಲಿ ಕಾಲ ಕಳೆಯಬೇಕಾಯಿತು.

ಹದಿನೈದು ವರ್ಷಗಳ ಕಾಲ ದೇವ ನಾಯಕ ಸೆರೆಮನೆ ವಾಸ ಅನುಭವಿಸಿದ್ದ. ಅವನ ಜೊತೆಗಾರರು ಹಲವರು ಜಹಾಂಪನಾರಿಗೆ ಶರಣಾಗತರಾಗಿ ಸವಲತ್ತು, ನೌಕರಿ ಪಡೆದುಕೊಂಡು ಸ್ವಾಮಿನಿಷ್ಠರಾಗಿ ಬಾಳಿದರು. ಇದರ ನಂತರ ಜಹಾಂಪನಾರ ರಾಜ್ಯ ಇನ್ನೂ ಹೆಚ್ಚು ಬಲಶಾಲಿಯಾಯಿತು. ಯಾಕೆಂದರೆ, ಹಂಪೆಯ ವಿಜಯ ನಗರದ ಅರಸರ ನಾಲ್ಕು ಸಶಕ್ತ ಕೋಟೆಗಳು ಜಹಾಂಪನಾರ ವಶವಾಗಿದ್ದವು. ಅನೇಕ ಕಾರಣಗಳಿಂದ ಇಸ್ಲಾಂ ಧರ್ಮದ ಅನುಯಾಯಿಗಳ ಸಂಖ್ಯೆಯೂ ಹೆಚ್ಚಿತು. ಚಿಕ್ಕ ಚಿಕ್ಕ ಪಾಳೇಗಾರರು, ತುಂಡರಸರು ಜಹಾಂಪನಾರಿಗೆ ಶರಣಾಗತರಾಗಿ ರಾಜ್ಯಾಡಳಿತದೊಂದಿಗೆ ಸೇರಿಕೊಂಡಿದ್ದರು. ಜಹಾಂಪನಾರಿಗೆ ಸಾಕಷ್ಟು ಕಪ್ಪ ಕಾಣಿಕೆಯನ್ನು ನೀಡಿಕೊಂಡು ಸ್ನೇಹದಿಂದ ಇದ್ದುಕೊಂಡು, ರಾಜ್ಯದ ಆಡಳಿತದಲ್ಲಿ ಪಾಲ್ಗೊಂಡು ಸುಖವಾಗಿದ್ದರು.

**ದೊಡ್ಡ ವಜ್ರದ ಹಿನ್ನೆಲೆಯ ಐತಿಹಾಸಿಕ ಸಂಗತಿಗಳು**

ಜಹಾಂಪನಾರು ರಾಮರಾಜರ ಅರಮನೆಗೆ ಭೇಟಿ ನೀಡಿದಾಗ ಅವರು ದೊಡ್ಡ ವಜ್ರವನ್ನು ಉಡುಗೊರೆಯಾಗಿ ರಾಮರಾಜರಿಗೆ ನೀಡಿದ್ದರು. ಇಲ್ಲಿ ಈ ವಜ್ರದ ಬಗೆಗಿನ 'ನಹೂಶತ್' ಅಶುಭ ಹಿನ್ನೆಲೆಯ ಬಗ್ಗೆ ಕೆಲವು ವಿವರಗಳನ್ನು ನೀಡ ಬಯಸುತ್ತೇನೆ. ಈ ವಜ್ರ ಐವತ್ತು 'ಮಿಸ್ಕಾಲ್' (ಒಂದು ತೂಕದ ಅಳತೆ ಮಾಪನ) ತೂಕದ್ದಾಗಿದ್ದು ಇಪ್ಪತ್ತೊಂದು ದಿರ್ಹಾಮ್ ತೂಕಕ್ಕೆ ಸಮನಾಗುತ್ತದೆ. ನೋಡಲು ಈ ವಜ್ರ ಅಂಗೈ ಅಗಲದ ಆಕಾರದಲ್ಲಿತ್ತು. ಆದರೆ ಅದರ ಮಧ್ಯ ಭಾಗದಲ್ಲಿ ಒಂದು ದೊಡ್ಡ ಕಪ್ಪು ಕಲೆ ಇತ್ತು. ಜ್ಯೋತಿಷ್ಯ ಶಾಸ್ತ್ರದ ಪ್ರಕಾರ ಹಾನಿಕಾರಕ ಮತ್ತು ಅಶುಭವೆಂದು ಇಂತಹ ವಜ್ರಗಳನ್ನು ಪರಿಗಣಿಸಲಾಗುತ್ತಿತ್ತು. ಆಗಿನ ಕಾಲದಲ್ಲಿ ಕಿಷನ್ ರಾವ್ (ಕೃಷ್ಣದೇವರಾಯ) ಹಿಂಪಾನಗರದ ಬಾದಶಾಹ ಆಗಿದ್ದರು. ನಡು ಹರೆಯದ ವಯಸ್ಸಿನಲ್ಲಿ ಇವರು ತೀರಿಕೊಂಡರು. ನಂತರ ಇವರ ವಂಶದಿಂದ (ವಿಜಯನಗರದ ಸಾಮ್ರಾಜ್ಯದ) ಸಿಂಹಾಸನದ ವಾರೀಸುದಾರಿಕೆ ನಿಂತು ಹೋಯಿತು. ಈ ಸಮಯದಲ್ಲಿ ಇಬ್ರಾಹಿಂ

ಆದಿಲ್ ಖಾನ್ ಹಿಂಪಾ ನಗರಕ್ಕೆ (ಹಂಪೆ) ಹೋಗಿದ್ದರು. ಹಂಸ ತಿರುಮಲರಾಯ ತನ್ನ ಸಾಮ್ರಾಜ್ಯವನ್ನು ಸ್ಥಾಪಿಸುವ ಸಲುವಾಗಿ ಈ ವಜ್ರವನ್ನು ಇಬ್ರಾಹಿಂ ಆದಿಲ್ ಖಾನರಿಗೆ ಮಾರಿದ್ದ. ಇದನ್ನು ಎಂಭತ್ತು ಲಕ್ಷ ಹವನ್ ಕೊಟ್ಟು ಖರೀದಿಸಿದ್ದರು. ನಂತರ ಇಬ್ರಾಹಿಂ ಆದಿಲ್ ಖಾನರಿಗೆ ಮೂಲವ್ಯಾಧಿಯ ತೀವ್ರವಾದ ಕಾಯಿಲೆ ಉಂಟಾಗಿ, ವಾಸಿಯಾಗದ ಗಾಯವಾಗಿತ್ತು. ದೇಶದ ಅನೇಕ ಭಾಗಗಳಿಂದ ಹೆಸರಾಂತ ವೈದ್ಯರು ಬಂದು ಔಷಧಿ ನೀಡಿದ್ದರೂ ಕಾಯಿಲೆ ವಾಸಿಯಾಗಲಿಲ್ಲ. ಈ ರೋಗದ ಕಾರಣದಿಂದ ಸುಲ್ತಾನ ತೀರಿಕೊಂಡ. ಜಹಾಂಪನಾ ರಾಮರಾಜನ ಅರಮನೆಗೆ ಭೇಟಿ ನೀಡಿದಾಗ ಉಡುಗೊರೆ, ಕಾಣಿಕೆಗಳನ್ನು ನೀಡುವ ಜೊತೆಗೆ ಈ ವಜ್ರವನ್ನು ಕೂಡ ನೀಡಿದ್ದರು. ನಾಲ್ಕೈದು ವರ್ಷಗಳ ಕಾಲ ರಾಮರಾಜನ ಆಳ್ವಿಕೆ ವೈಭವದಿಂದ ನಡೆಯಿತು.

ಕೆಲವು ಕಾಲದ ನಂತರ ಜಹಾಂಪನಾರಿಗೆ ಈ ವಜ್ರವನ್ನು ಹಿಡಿದುಕೊಂಡು ಒಬ್ಬ ವ್ಯಕ್ತಿ ಗೋವಾದ ಬಂದರಿಗೆ ಬಂದಿದ್ದನೆಂಬ ಸುದ್ದಿ ಸಿಕ್ಕಿತು. ಅಲ್ಲಿನ ಅಧಿಕಾರಿಗಳಿಗೆ ಗೊತ್ತಾಗಿ ಈ ವಜ್ರವನ್ನು ವಜ್ರದ ವ್ಯಾಪಾರಿಗಳಿಗೆ ತೋರಿಸಿ ಬೆಲೆ ಕಟ್ಟಿದರು. ಅರವತ್ತು ಸಾವಿರ ಲಕ್ಷ ಹವನ್‌ಗಳ ಬೆಲೆ ನಿಗದಿಯಾಗಿತ್ತು.

ಗೋವಾದ ಅಧಿಕಾರಿಗಳು ಪೋರ್ಚುಗಲ್ಲಿನ ರಾಜ ಇದಕ್ಕಿಂತ ಹೆಚ್ಚಿನ ಬೆಲೆ ಕಟ್ಟಿದ್ದರು, ನಾವು ಇದಕ್ಕೆ ಒಪ್ಪಲಿಲ್ಲವೆಂದು ಹೇಳಿದರು. ಬೀಬಿ ಅಸೀಲಾ ಎಂಬ ಓರ್ವ ಮಹಿಳೆ, ಪಂಗನಾಮ ಹಾಕಿ ಲಪಟಾಯಿಸುವುದು, ಕದಿಯುವುದರಲ್ಲಿ ನಿಷ್ಣಾತಳಾಗಿದ್ದಳು. ಜಹಾಂಪನಾರು ಇವಳನ್ನು ಕರೆಸಿದರು. ಅವಳನ್ನು ಗೋವಾಕ್ಕೆ ಕಳುಹಿಸಿ ಆ ವಜ್ರವನ್ನು ಲಪಟಾಯಿಸಿ ತರಲು ಹೇಳಿದರು. ಅವಳು ತನ್ನ ಚಾತುರ್ಯವನ್ನು ಬಳಸಿಕೊಂಡು ವಜ್ರವನ್ನು ಹಾರಿಸಿಕೊಂಡಳು. ವಜ್ರದ ಹರಳನ್ನು ಹುಡುಕುತ್ತ ಬಂದ ಪೋರ್ಚುಗೀಸ್ ಪೋಲಿಸ್ ಅಧಿಕಾರಿಗಳು ಒಂದೆಡೆ ಕೋಣೆಯಲ್ಲಿ ಮಲಗಿದ್ದ ಅಸೀಲಾ ಸಿಕ್ಕಿಬಿದ್ದು ವಜ್ರವನ್ನು ವಶಪಡಿಸಿಕೊಂಡು ಬಿಜಾಪುರದ ಸರಕಾರದ ವಶಕ್ಕೆ ಒಪ್ಪಿಸಿದರು. ಈ ವಿಚಾರ ಮುಜಫ್ಫರಾಬಾದ್ ತಲಪಿತು. ಈ ವಜ್ರದ ನಿಜವಾದ ಗ್ರಾಹಕನನ್ನು ಬಿಜಾಪುರಕ್ಕೆ ಕರೆಸಿ ಆಸ್ಥಾನದಲ್ಲಿ ವಿಚಾರಣೆ ನಡೆಯಿತು. ಈತನಿಗೆ ಜಹಾಂಪನಾ ಸಮಾಧಾನ ಪಡಿಸಿ ಒಪ್ಪಿಸಿ, ಅವನಿಂದ ಪಡೆದುಕೊಂಡರು. ಇದರ ಹಿನ್ನೆಲೆಯಲ್ಲಿರುವ ಅಶುಭಕಾರಕ ಸಂಗತಿಗಳು ಜಹಾಂಪನಾರ ತಿಳುವಳಿಕೆಗೆ ಬಂತು. ಜಹಾಂಪನಾರು ಈ ವಜ್ರದ ಹಿಂದೆ ಇರುವ ಅಶುಭಕಾರಕ ಸಂಗತಿಗಳನ್ನು ದೂರ ಮಾಡಲು ಐಮ್ಮೆ ಇತ್ನಾ ಅಶರಿ(ಇಮಾಮ್ ಬಾಡ) ಪೀಠಕ್ಕೆ ನೀಡುವ ವಿಚಾರವನ್ನು ಯೋಚಿಸಿದರು. ಕೊನೆಗೆ ಈ ಬೆಲೆಬಾಳುವ ವಜ್ರವನ್ನು ಷಿಯಾ ಪಂಥದ ಎಂಟನೇ ಇಮಾಂ ಆಗಿದ್ದ ಇಮಾಮೆ ಅಲಿ ಇಬ್ನೆ ಮೂಸಾ ಅರ್ರಝಾರ ಮೂಲಕ ಇರಾನಿನ

ಸುಲ್ತಾನ ಷಾ ತಹಮಾಸ್ಫ಼ರಿಗೆ ತಲಪಿಸಿ ಎಂದು ಹೇಳಲಾಯಿತು. ಸ್ವಲ್ಪ ದಿನಗಳ ನಂತರ ಷಾ ತಹಮಾಸ್ಫ್ ಕೂಡ ಅಸುನೀಗಿದರು. ಮತ್ತೆ ಷಾ ಇಸ್ಮಾಯಿಲ್ ತನ್ನ ತಂದೆಯ ಸಿಂಹಾಸನದಲ್ಲಿ ಕೂತ. ಒಂದು ವರ್ಷ ಐದು ತಿಂಗಳಲ್ಲಿ ಇವನೂ ತೀರಿಕೊಂಡ. ಅವನ ತಮ್ಮ ಸುಲ್ತಾನ್ ಮುಹಮ್ಮದ್ ಸಿಂಹಾಸನವನ್ನೇರಿದ. ಅವನು ಈ ವಜ್ರವನ್ನು ಒಂದು ಪೆಟ್ಟಿಗೆಯ ಮೇಲೆ ನಾಲ್ಕು ಗುಂಬಜ್ ಮಾಡಿಸಿ ಮಧ್ಯದಲ್ಲಿ ವಜ್ರವನ್ನಿಟ್ಟು ಒಂದು ಗೋರಿಯ ಪ್ರತಿರೂಪದಂತೆ ಮಾಡಿ ಸಿಂಗರಿಸಿ ಹಜ್ರತ್ ಅಲಿ ಇಬ್ನ್ ಮೂಸ ಇಬ್ನ್ ರಝೂರವರ ದರ್ಗಾಕ್ಕೆ ಕಾಣಿಕೆಯಾಗಿ ನೀಡಿದ. ಮತ್ತೆ ಮೂರು ವರ್ಷಗಳು ಕಳೆದಿರಲಿಲ್ಲ, ಅಬ್ದುಲ್ಲಾ ಖಾನ್ ಅಜ್ಬಕ್ ಎಂಬ ಹೆಸರಿನ ಓರ್ವ ವ್ಯಕ್ತಿ ದೊಡ್ಡ ಸೈನ್ಯದೊಂದಿಗೆ ಅಜ್ಬೆಕಿಸ್ತಾನದಿಂದ ಆಗಮಿಸಿ ಖೊರಸಾನ್ ಮೇಲೆ ದಾಳಿ ನಡೆಸಿದ. ಸಂಪೂರ್ಣ ದೇಶದಾದ್ಯಂತ ಅಲ್ಲೋಲ ಕಲ್ಲೋಲವೆಬ್ಬಿಸಿ, ಮಶ್‌ಹದ್ ಷರೀಫ್ ಎಂದು ಈಗ ಕರೆಯಲಾಗುವ ತೂಸ್ ಎಂಬ ನಗರದ ಮೇಲೆ ನುಗ್ಗಿ, ಮೂಸಾ ಇಬ್ನ್ ರಝೂರವರ ಗೋರಿ ರೌಝಾದ ಬಳಿ ಕೊಲೆ ಸುಲಿಗೆ ಮಾಡುತ್ತ ಗುಲ್ಲೆಬ್ಬಿಸಿದ. ಗೋರಿಯ ಪಕ್ಕದಲ್ಲಿ ನಾಲ್ಕು ಸಯ್ಯದರು ಕೂತಿದ್ದರು. ಅವರು ತಮ್ಮ ಬಚಾವಿಗಾಗಿ ರೌಝಾ ಕಟ್ಟಡದೊಳಗೆ ಹೋದರು.

ಆದರೆ ಆತ ರೌಝಾದ ಒಳಹೊಕ್ಕು ಅವರೆಲ್ಲರನ್ನೂ ಇರಿದು ಕೊಂದು ಹಾಕಿದ. ರೌಝಾ ಕಟ್ಟಡದೊಳಗಿಂದ ರಕ್ತ ಹರಿದು ಬರತೊಡಗಿತು. ರೌಝಾದೊಳಗಿದ್ದ ಬೆಲೆ ಬಾಳುವ ಸಾಮಾನುಗಳು, ಮತ್ತು ಕಾಣಿಕೆಯ ವಜ್ರದ ಹರಳಿನ ಪೆಟ್ಟಿಗೆಯನ್ನು ಲೂಟಿ ಮಾಡಿ ಕೊಂಡೊಯ್ದ. ಈ ಗೋರಿಯ ಕಟ್ಟಡದೊಳಗೆ ನಾಲ್ಕು ಸುಲ್ತಾನರ ಖಜಾನೆಯಲ್ಲಿರುವಷ್ಟು ಸಂಪತ್ತಿನ ರಾಶಿ ಇತ್ತು. ಇವೆಲ್ಲವನ್ನೂ ಅಬ್ದುಲ್ಲಾ ಖಾನ್ ಅಜ್ಬಕ್ ಸೂರೆ ಮಾಡಿ ಕೊಂಡುಹೋದ. ಕೆಲವೇ ದಿನಗಳ ನಂತರ ಈ ಲೂಟಿಕೋರ ಅಬ್ದುಲ್ಲಾ ಖಾನ್ ಅಜ್ಬಕ್ ಸತ್ತುಹೋದ. ಇವನ ನಂತರ ಇವನ ಮಗ ಅಬ್ದುಲ್ ಮೋಮಿನ್ ಖಾನ್ ತಂದೆಯ ಸ್ಥಾನವನ್ನು ಅಲಂಕರಿಸಿದ. ಆದರೆ ವಜ್ರದ ಶನಿ ಅವನನ್ನೂ ಬಿಡಲಿಲ್ಲ. ಇದರ ನಂತರ ಓರ್ವ ವ್ಯಕ್ತಿ ಈ ಅಮೂಲ್ಯ ವಜ್ರವನ್ನು ರೋಮ್ ನಗರಕ್ಕೆ ಕೊಂಡೊಯ್ದ. ಸುಲ್ತಾನ್ ಮುಹಮ್ಮದ್ ಬಾದಶಾಹ ರೂಮ್‌ನ ಬಳಿ ಈ ವಜ್ರ ಸೇರಿಕೊಂಡಿತು. ನಂತರ ಈ ನ್ಯಾಯ ಪರಿಪಾಲಕ, ಪ್ರಾಮಾಣಿಕ, ಸಹಾಯ ಹಸ್ತನೆಂದು ಹೆಸರಾದ ಈ ಪ್ರಖ್ಯಾತ ಬಾದಶಾಹ ತನ್ನ ಯೌವನದಲ್ಲೇ ತೀರಿಕೊಂಡ. ಅಂದಿನಿಂದ ಈ ವಜ್ರದ ಕಾರಣದಿಂದ ರೋಮ್ ದೇಶ ಪರಸ್ಪರ ಒಳಜಗಳಗಳಲ್ಲಿ ಮುಳುಗಿತು. ಇರಾನ್ ಮತ್ತು ರೋಮ್ ನಡುವೆ ಯುದ್ಧ ನಡೆಯಿತು. ಪ್ರತೀ ಸಾರಿಯೂ ಇರಾನ್ ಯುದ್ಧದಲ್ಲಿ ಜಯಗಳಿಸಿತ್ತು. ನಂತರ ರೋಮ್‌ನ ಕೆಲವು ಸರದಾರ ಪ್ರಮುಖರು ಅಬ್ಬಾಸ್ ಬಾದಶಾಹನ ಜೊತೆಗೆ ಆಸ್ಥಾನದಲ್ಲಿ

ಸೇರಿಕೊಂಡರು. ಮುಂದೆ ಈ ಬಾದಶಾಹ ಧೈರ್ಯದಿಂದ ಅಝುರ್ ಬೈಜಾನ್, ಶೇರ್ ವಾನ್ ಷಾ ತಹಮಾಸ್ಪನ ಆಳ್ವಿಕೆಯಲ್ಲಿ ರೋಮನರ ವಶವಾಗಿದ್ದುದನ್ನು ಷಾ ಅಬ್ಬಾಸ್ ಯುದ್ಧ ಹೂಡಿ ಜಯಿಸಿದ.

**ಜಹಾಂಪನಾರನ್ನು ಕೊಂದು ಹುತಾತ್ಮರಾಗಿಸಿದ ವಿವರಗಳು:**

ಜಹಾಂಪನಾರನ್ನು ಕೊಲ್ಲಿಸುವುದರಲ್ಲಿ ಖಾಮಿಲ್ ಖಾನ್‌ನ ಕೈವಾಡವಿದೆ ಎಂದು ಕೆಲವರು ಹೇಳಿದರೆ, ಇನ್ನು ಕೆಲವರು ಅಭಿಪ್ರಾಯಪಡುವಂತೆ ಅವರ ಕೊಲೆಯಲ್ಲಿ ಅವರ ಹತ್ತಿರದ ಸಂಬಂಧಿಗಳ ಕೈವಾಡವಿದೆ ಎನ್ನುತ್ತಾರೆ. ಇವರ ಬೆರಳು ಜಹಾಂಪನಾರ ತಂಗಿ ಅಮೀರ್ ಬರೀದಳತ್ತ ಬೊಟ್ಟು ಮಾಡಿ ತೋರಿಸುತ್ತದೆ. ಇವಳಿಗೆ ಸಂತಾನವಿರಲಿಲ್ಲ. ನಂತರ ಇವಳೂ ತೀರಿಕೊಂಡಳು. ಇವಳಲ್ಲಿ ಅಗರ್ಭ ಶ್ರೀಮಂತಿಕೆಯಿತ್ತು. ಒಮ್ಮೆ ತನ್ನ ದೂತನನ್ನು ಕಳುಹಿಸಿ ಬಾದಶಾಹರ ಸ್ಥಿರ ಚರ ಸೊತ್ತು ಸಂಪತ್ತಿನಲ್ಲಿ (ಇಸ್ಲಾಮೀ ಕಾನೂನಿನ ಪ್ರಕಾರ ಇರುವ)ಮಹಿಳೆಯರ ಪಾಲು (ತರ್‌ಕಾ) ಕೇಳಿದ್ದಳು. ಇದರಿಂದ ಬಾದಶಾಹನ ಕಡೆಯಿಂದ ಬಹಳಷ್ಟು ಸೊತ್ತುಗಳು ಆಸ್ತಿ ಪಾಲು ಅವಳಿಗೆ ಸಿಕ್ಕಿತ್ತು. ಆದರೆ ಚಿನ್ನಾಭರಣಗಳು, ವಜ್ರ ವೈಢೂರ್ಯಗಳಲ್ಲಿ ಅವಳಿಗೆ ಪಾಲು ದೊರಕಿರಲಿಲ್ಲ. ಅವಳ ಸಾವಿನಿಂದ ಈ ಬೇಡಿಕೆ ಹಾಗೆಯೇ ಉಳಿಯಿತು. ಹಿಜರಿ ವರ್ಷ ಸನ್ ೯೮೮ರಲ್ಲಿ ಒಂದು ಬೇಡಿಕೆಯ ದಾವೆಯನ್ನು ಮುಂದಿಟ್ಟು ಜಹಾಂಪನಾರಿಗೆ ನೆನಪುಮಾಡಿದ. “ನನ್ನ ಮತ್ತು ಮಲೀಕ್ ಬರೀದನ ನಡುವೆ ಹಳೆಯ ಸಂಬಂಧವಿದೆ. ನಿಮ್ಮ ಅನುಮತಿ ಇದ್ದರೆ ಅವಳಿಗೆ ಸಂಬಂಧಪಟ್ಟ ಪಾಲಿನ ಸಂಪತ್ತನ್ನು ನಾನು ತರಿಸಬಲ್ಲೆ” ಎಂದ. “ಈ ಪಾಲಿನ ಹಕ್ಕೆಲ್ಲವೂ ನಮ್ಮ ತಾಯಿಗೆ ಸಂಬಂಧಿಸಿದ್ದಾಗಿದೆ. ಷರೀಯತ್(ವೈಯಕ್ತಿಕ ಕಾನೂನು) ಪ್ರಕಾರ ಅವರ ಹಕ್ಕು ಏನಿದೆಯೋ ಆರೀತಿಯಲ್ಲಿ ವಿವಾದವನ್ನು ಇತ್ಯರ್ಥ ಮಾಡಿಕೊಳ್ಳಿ” ಎಂದು ಜಹಾಂಪನಾ ಉತ್ತರಿಸಿದರು.

ಖಾಮಿಲ್ ಖಾನ್ ಪತ್ರವೊಂದನ್ನು ಜಹಾಂಪನಾರಿಂದ ಬರೆಸಿಕೊಂಡು ಅಲಿ ಆಘಾನನ್ನು ದೂತರೊಂದಿಗೆ ಅವರ ಕಡೆಗೆ ಕಳುಹಿಸಿದ. ನಾಲ್ಕು ತಿಂಗಳುಗಳು ಕಳೆದ ನಂತರ ಅವಳ ಸಂಪತ್ತು ಮತ್ತು ಅವಳ ಇಬ್ಬರು ಅಂಗರಕ್ಷಕರಾಗಿದ್ದ ಖೊಜ್ಜಗಳನ್ನು ಜೊತೆಗೆ ಕರೆತಂದಿದ್ದ. ಈ ಸಂಪತ್ತು ಅರಮನೆಗೆ ತಲಪಿದಾಗ ಜಹಾಂಪನಾ ತನ್ನ ಅಂತಃಪುರದ ಕೋಣೆಯಲ್ಲಿ ಖೊಜ್ಜರನ್ನು ಕರೆಸಿ ಸಂಪತ್ತಿನ ಬಗ್ಗೆ ವಿಚಾರಿಸಿದರು. ಜಹಾಂಪನಾ ಒಬ್ಬರೇ ಇರುವುದು ಕಂಡು ಈ ಖೊಜ್ಜರಲ್ಲೊಬ್ಬ ತನ್ನ ಕೈಯಲ್ಲಿದ್ದ ಖಂಜರ್‌ನಿಂದ(ದೊಡ್ಡ ಚಾಕು) ಪವಿತ್ರ ಎದೆಗೆ ಇರಿದುಬಿಟ್ಟ. ಎಷ್ಟು ಜೋರಾಗಿ ಇರಿದಿದ್ದನೆಂದರೆ ಚಾಕು ಜಹಾಂಪನಾರ ಎದೆಯ ಹಿಂಭಾಗದಿಂದ ಹೊರಬಂದಿತ್ತು. ಜಹಾಂಪನಾ ಅಲ್ಲೇ ಕುಸಿದು ಅಸುನೀಗಿದರು. ಅದನ್ನು ಕಂಡ ಅಲ್ಲಿನ ಎಲ್ಲರೂ ಕೂಗಿಬಿಟ್ಟರು.

ನಾನು ಅರಮನೆಯ ಹೊರಗೆ ಕೂತಿದ್ದೆ. ನಾನು ಒಳಗೆ ಹೋಗಿ ನೋಡುವಾಗ ಜಹಾಂಪನಾ ರಕ್ತದ ಮಡುವಿನಲ್ಲಿ ಬಿದ್ದಿದ್ದರು. ಅಫ್ಜಲ್ ಖಾನ್ ಮತ್ತು ಎಲ್ಲ ಆಸ್ಥಾನ ಪ್ರಮುಖರೆಲ್ಲರೂ ಒಳಗೆ ಓಡಿಬಂದರು. ಈ ಕೊಲೆ ಭಾನುವಾರ ರಾತ್ರಿ ೮ ಗಂಟೆಯ ಹೊತ್ತಿಗೆ ಸಫರ್ ತಿಂಗಳ ೨೪ನೇ ದಿನದಂದು ಹಿಜರಿ ವರ್ಷ ಸನ್ ೯೮೮ರಲ್ಲಿ ನಡೆಯಿತು.

ಅಫ್ಜಲ್ ಖಾನ್ ಓಡಿಬಂದು ಜಹಾಂಪನಾರ ನಾಡಿಹಿಡಿದು ಪರೀಕ್ಷಿಸಿ ತನ್ನ ತಲೆಯ ಮೇಲೆ ಕೈಯಿಟ್ಟುಕೊಂಡ. ಜಹಾಂಪನಾರ ಶವವನ್ನು ಕೋಣೆಯಿಂದ ಎತ್ತಿಕೊಂಡು ಹೊರಬಂದ. ಊರ ಪರವೂರ ಜನರು ಪ್ರವಾಹದಂತೆ ಕೋಟೆಯ ಬಾಗಿಲಬಳಿ ಬಂದು ಸೇರತೊಡಗಿದರು. ಕೊಲೆಗಡುಕ ಖೊಜ್ಜನು ಅಲ್ಲೇ ಅರಮನೆಯಲ್ಲಿದ್ದ. ಓರ್ವ ವ್ಯಕ್ತಿ ಒಳಗೆ ಹೋಗಿ ಅವನ ತಲೆಯ ಮೇಲೆ ಕತ್ತಿಯಿಟ್ಟು ಹೊರಗೆ ಎಳೆದುಕೊಂಡು ಬಂದ. ಅವನನ್ನು ಕಟ್ಟಿ ಹಾಕಿದರು. ಮರುದಿನ ಅವನನ್ನು ಮರಣದಂಡನೆಗೆ ಗುರಿಪಡಿಸಿದರು. ಇನ್ನೊಬ್ಬ ಖೊಜ್ಜನನ್ನು ಕೂಡ ಅರಮನೆಯ ಸೇವಕರು ಬಂಧಿಸಿ ಎಳೆದು ತಂದರು. ಅವನಿಗೆ ಹೊಡೆದು ಬಡಿದು ಕೊಂದುಹಾಕಿದರು. ಕೊಲೆಗಡುಕ ಖೊಜ್ಜನ ಹೆಸರು ಅಲಿಖಾನ್ ಎಂದಾಗಿತ್ತು. ಜಹಾಂಪನಾರ ಸೇವಕರು ಪ್ರಮುಖ ದರ್ಬಾರಿಗಳು ಕೋಟೆಯ ಬಾಗಿಲನ್ನು ಮುಚ್ಚಿ ಯಾರೂ ಕೋಟೆಯೊಳಗೆ ಬಂದು ಗುಲ್ಲೆಬ್ಬಿಸದಂತೆ ನೋಡಿಕೊಂಡರು. ಅಫ್ಜಲ್ ಖಾನ್ ಇದೆಲ್ಲ ಸಂಪತ್ತನ್ನು ತರಿಸುವ ವ್ಯವಸ್ಥೆ ಮಾಡಿದ್ದರಿಂದ ನಾನೇ ಈ ಘಟನೆ ನಡೆಯುವುದಕ್ಕೆ ಕಾರಣನಾದೆ ಎಂದು ಹಲುಬಿದ. ನಾನು ಪೇಶ್ವೆಯಾಗಿದ್ದುಕೊಂಡು ಜಹಾಂಪನಾರನ್ನು ರಕ್ಷಿಸಲಾರದೆ ಹೋದೆ ಎಂದು ಹೇಳತೊಡಗಿದ. ಆಸ್ಥಾನದ ಉಳಿದ ಪ್ರಮುಖರು ಅವರನ್ನು ಸಂತೈಸಿದರು. ದರ್ಬಾರಿಗಳು, ಸರದಾರರು ಮತ್ತು ಪ್ರಮುಖರು ಸೇರಿ ಏನು ತೀರ್ಮಾನ ಮಾಡುತ್ತೀರೋ ಅದಕ್ಕೆ ಬದ್ಧರಾಗಿದ್ದೇವೆ ಎಂದು ಅಫ್ಜಲ್ ಖಾನ ಹೇಳಿದ. ಹೀಗೆ ಮಾತಿನಲ್ಲಿ ಮುಳುಗಿದಾಗ ಮುಂಜಾವಿನ ನಮಾಜಿನ ಕರೆ 'ಆದಾನ್' ಕೇಳಿಬಂತು. ಈ ಸಮಯದಲ್ಲಿ ಓರ್ವ ವ್ಯಕ್ತಿ ಕೋಟೆಯ ಬಾಗಿಲ ಕಡೆಯಿಂದ ಬಂದು ಅಫ್ಜಲ್ ಖಾನರು ಊರಿನ ಪ್ರಮುಖ ವ್ಯಕ್ತಿಗಳು, ದರ್ಬಾರಿನವರು ಮಾಡುವ ತೀರ್ಮಾನಕ್ಕೆ ಬದ್ಧರಾಗಿದ್ದಾರೆಂದು ಘೋಷಿಸಿದ. ಮುರ್ತಜಾ ಖಾನ್ 'ಇಲ್ಲಿ ನಡೆಯುವ ಎಲ್ಲ ಮಾತುಕತೆ ತೀರ್ಮಾನಗಳಿಗೆ ಷಾ ಕಮಾಲುದ್ದೀನ್ ಫತ್ತುಲ್ಲಾ ಜವಾಬ್ದಾರಿಯುತ ಅಧಿಕಾರಿಯಾಗಿರುತ್ತಾರೆ' ಎಂದು ಘೋಷಿಸಿದ.

ಎಲ್ಲ ಅಭಿಪ್ರಾಯಗಳನ್ನು ಕೂಲಂಕುಷವಾಗಿ ಪರಿಶೀಲಿಸಿದ ನಂತರ ಸಭೆಯು ಜಹಾಂಪನಾರ ಸಹೋದರನ ಮಗ (ಎರಡನೇ)ಇಬ್ರಾಹಿಂ ಆದಿಲ್ ಷಾನನ್ನು ಸಿಂಹಾಸನದಲ್ಲಿ ಕೂರಿಸುವ ಮಹತ್ವದ ತೀರ್ಮಾನವನ್ನು ಕೈಗೊಂಡಿದ್ದರು. ಯಾಕೆಂದರೆ

ಜಹಾಂಪನಾರು ಜೀವಂತವಿರುವಾಗ ಅನೇಕ ಸಂದರ್ಭಗಳಲ್ಲಿ ಇವರನ್ನು ತನ್ನ ವಾರೀಸುದಾರನೆಂದು ಕರೆದಿದ್ದರು, ಅಲ್ಲದೆ ಇಬ್ರಾಹಿಂ ಆದಿಲ್ ಷಾರ ಪಾಲನೆ ಪೋಷಣೆ ಮಾಡಿಕೊಂಡು ಜಹಾಂಪನಾ ತಮ್ಮ ಬಳಿ ಇರಿಸಿಕೊಂಡಿದ್ದರು. ಅಫ್ಜಲ್ ಖಾನ್ ಈ ತೀರ್ಮಾನವನ್ನು ಒಪ್ಪಿಕೊಳ್ಳಲು ತಯಾರಿಲ್ಲವೆಂದು ಹೇಳಿದ. ಈ ಅಭಿಪ್ರಾಯವನ್ನು ಮುರ್ತಜಾ ಖಾನನಿಗೆ ತಲಪಿಸಿದ. 'ಈಗ ಕೋಟೆಯ ಮಹಾದ್ವಾರವನ್ನು ತೆರೆಯದಿರಿ. ಯಾಕೆಂದರೆ ತೆರೆದರೆ ಹೊರಗೆ ನಿಂತಿರುವ ಜನಸಾಗರ ಒಮ್ಮೆಲೇ ನುಗ್ಗಿ ಒಳಗೆ ಬಂದು ಗುಲ್ಲೆಬ್ಬಿಸಬಹುದು, ಇದಲ್ಲದೆ ಏನಾದರೊಂದು ಪಿತೂರಿ ನಡೆದು ಗಲಾಟೆ ನಡೆದರೆ ದೊಡ್ಡ ಪ್ರಮಾದ ಉಂಟಾಗಬಹುದು. ಆದುದರಿಂದ ಜನರ ಪ್ರಮುಖರಲ್ಲಿ ಪ್ರತಿನಿಧಿಗಳನ್ನಾಗಿ ನಾಲ್ಕು ಮಂದಿಯನ್ನು ಆರಿಸಿ ಒಳಗೆ ಕರೆತಂದು ಅವರ ಮೂಲಕ ಮುಂದಿನ ಬಾದಶಾಹರಾಗಿ ಆಯ್ಕೆಯಾದ ಇಬ್ರಾಹಿಂ ಆದಿಲ್ ಷಾರನ್ನು ಕೋಟೆಯ ಎತ್ತರದ ಬುರುಜಿನ ಮೇಲೆ ಕೂರಿಸಿ ಪ್ರಜೆಗಳ ಸಮ್ಮುಖದಲ್ಲಿ ಪಟ್ಟಾಭಿಷೇಕವನ್ನುಮಾಡಿ' ಎಂದು ಮುರ್ತಜಾ ಖಾನ್ ಹೇಳಿದ. ಮುಂದಿನ ಬಾದಶಾಹನನ್ನು ಬುರುಜಿನ ಮೇಲೆ ನೋಡಿ ಪ್ರಜೆಗಳು ಸಲಾಮ್, ನಮಸ್ಕಾರ ಸಲ್ಲಿಸುವ ವ್ಯವಸ್ಥೆಯನ್ನು ಮಾಡಿದರು. ನಂತರ ಷಾ ಕಮಾಲುದ್ದೀನ್ ಪತ್ಹುಲ್ಲಾ, ಮುರ್ತಜಾ ಖಾನ್, ಕಿಶ್ವರ್ ಖಾನ್‌ನ ಮಗ ಮತ್ತು ಖಾಮಿಲ್ ಖಾನನ ಅಳಿಯ ಮಂಜನ್ ಖಾನ್ ಮುಂತಾದವರು ಒಳಗೆ ಹೋಗಿ ಶಾಹಬ್ಜಾದಾ ಇಬ್ರಾಹಿಂ ಆದಿಲ್ ಖಾನನನ್ನು ಅಲಂಕರಿಸಿ ರಾಜ ಮುಕುಟವನ್ನು ತಲೆಯ ಮೇಲಿಟ್ಟು ಬುರುಜಿನ ಮೇಲೆ ಸಿಂಹಾಸನವನ್ನಿಟ್ಟು ಕೂರಿಸಿದರು. ಸಮಸ್ತ ಜನಗಣ ಮತ್ತು ದರ್ಬಾರಿಗಳು ಅಭಿನಂದಿಸಿದರು.

ಷಾ ಕಮಾಲುದ್ದೀನ್ ಫತ್ಹುಲ್ಲ ದೊಡ್ಡ ಧಾರ್ಮಿಕ ಪಂಡಿತರು ದರ್ಬಾರಿಗಳು ಸೇರಿ ಜಹಾಂಪನಾರ ಮೃತದೇಹವನ್ನು 'ಜನಾಜಾ' ಶವವಾಹಕದಲ್ಲಿಟ್ಟು ಹೊತ್ತುಕೊಂಡು ನಗರದೊಳಗೆ ಅವರ ತಾಯಿಯ ಗೋರಿಯ ಬಳಿಯಿದ್ದ ಜಾಗದಲ್ಲಿ ದಫನ ಮಾಡಲಾಯಿತು. ಇದಕ್ಕಿಂತ ಮುಂಚೆ ಷರೀಯತ್ ಕಾನೂನಿನಂತೆ ಶವಕ್ಕೆ ಸ್ನಾನ ಮಾಡಿಸಿ, ಕಫನ್ ಹೊದಿಸಲಾಗಿತ್ತು.

**ಜಹಾಂಪನಾರ ಉತ್ತಮ ನಡತೆಗಳು ಮತ್ತು ಅವರಿಗೆ ಸಂಬಂಧಿಸಿದ ಇತರ ವಿವರಗಳು:**

ಈ ಬಾದಶಾಹ ಆರೋಗ್ಯವಂತನಾಗಿ ಚಟುವಟಿಕೆಯಲ್ಲಿದ್ದ. ನೈತಿಕವಾಗಿ ಎತ್ತರದ ಮಟ್ಟದಲ್ಲಿದ್ದ, ಪ್ರಾಮಾಣಿಕವಾಗಿದ್ದ, ಜನರೊಂದಿಗೆ ತುಂಬ ಸಹಾಯ ಸಹಕಾರದ ಸಂಬಂಧವನ್ನಿಟ್ಟುಕೊಂಡಿದ್ದನಲ್ಲದೆ ಬಹಳ ಕಟ್ಟುನಿಟ್ಟಿನ ಶಿಸ್ತು ಪಾಲನೆ ಮಾಡುವವನೂ ಆಗಿದ್ದ. ದಾನಧರ್ಮದ ನಡವಳಿಕೆಯಲ್ಲಿ ಎಷ್ಟು ಉದಾರಿಯಾಗಿದ್ದನೆಂದರೆ ವಿಶ್ವದ

ಎಲ್ಲೆಡೆ ಅವನು ನೀಡಿದ ವಸ್ತುಗಳನ್ನು ಹರಡಿದರೆ ನಾಲ್ಕೂ ದಿಕ್ಕಿನಲ್ಲಿ ತುಂಬಿ ತುಳುಕಬಹುದು. ಪ್ರತೀ ವರ್ಷವೂ ಇರಾನಿನಿಂದ, ಇರಾಕ್‌ನಿಂದ, ಅಜರ್‌ಬೈಜಾನಿನಿಂದ, ಅರಬಸ್ಥಾನದಿಂದ, ಮಕ್ಕಾದಿಂದ ಧಾರ್ಮಿಕ ಮುಖಂಡರು, ಜ್ಞಾನಿಗಳು, ಸಂತರು, ಮೌಲಾನಾರನ್ನು ಆಹ್ವಾನಿಸಿ ಅವರನ್ನು ಗೌರವಿಸುವ ಮೂಲಕ ಆಶೀರ್ವಾದ ಶುಭ ಹಾರೈಕೆಗಳನ್ನು ಪಡೆದುಕೊಳ್ಳುತ್ತಿದ್ದರು. ಶಿರಾಜಿನಿಂದ ಹೆಚ್ಚುಕಮ್ಮಿ ೧೦ ಸಾವಿರ ಮಂದಿ ಇವರ ರಾಜ್ಯಕ್ಕೆ ಬಂದಿದ್ದರು; ನಾನು (ಈ ಕೃತಿಯ ಲೇಖಕ) ಕೂಡ ಇಲ್ಲಿಗೆ ಅವರೊಂದಿಗೆ ಬಂದಿದ್ದೆ.

ಇಲ್ಲಿ ತಮ್ಮ ಕಾರ್ಯಗಳನ್ನು ಪೂರೈಸಿ, ಸಾಕಷ್ಟು ಸಂಪಾದನೆಯನ್ನು ಮಾಡಿಕೊಂಡು ಇವರಲ್ಲಿ ಹೆಚ್ಚಿನವರು ತಮ್ಮ ಊರಿಗೆ ಹಿಂತೆರಳಿದ್ದರು. ಅಲ್ಲಿ ತಮಗೆ ಬೇಕಾದ ಜಮೀನನ್ನು ಖರೀದಿಸಿದ್ದರು, ಮನೆ ಕಟ್ಟಿಸಿಕೊಂಡು ಆರಾಮವಾಗಿದ್ದರು. ಮುರಾದ್ ಖಲಂದರ್ ಹಮ್ದಾನಿ ಎಂಬ ಒಬ್ಬ ದರ್‌ವೇಶ್ ಫಕೀರ್ ಒಮ್ಮೆ ಜಹಾಂಪನಾರ ಬಳಿಗೆ ಬಂದಿದ್ದ. ಇವನ ಕೈಯಲ್ಲಿ ಕುರಾನ್ ಗ್ರಂಥವಿತ್ತು. ಇವನು ಈ ಕುರಾನ್ ಗ್ರಂಥವನ್ನು ಬಾದಶಾಹರ ಖಜಾನೆಯೊಳಗೆ ಜೋಪಾನವಾಗಿಡಲು ನೀಡಿದ್ದ. ಖಜಾನೆಯ ಪೆಟ್ಟಿಗೆಯನ್ನು ತೆರೆದಾಗ ಅದರೊಳಗೆ ಇಟ್ಟಿದ್ದ ಪಾತ್ರೆಗಳು ಚಿನ್ನದ ನಾಣ್ಯದಿಂದ ತುಂಬಿದವು. ಕೆಲವು ಪಾತ್ರೆಗಳಲ್ಲಿ ಐದು ಸಾವಿರ ಹವನ್‌ಗಳಿದ್ದರೆ, ಕೆಲವುಗಳಲ್ಲಿ ಹತ್ತು ಸಾವಿರ ಹವನ್‌ಗಳಷ್ಟು ತುಂಬಿದವು. ಇದನ್ನು ತಿಳಿದ ಜಹಾಂಪನಾ 'ಅವರು ಪಾತ್ರೆಗಳಲ್ಲಿ ತುಂಬಿದ ಚಿನ್ನದ ನಾಣ್ಯಗಳ ಎರಡುಪಟ್ಟು ಮೌಲ್ಯವನ್ನು ಅವರಿಗೆ ಭಕ್ಷೀಸಾಗಿ ಕೊಟ್ಟುಬಿಡಿ' ಎಂದು ಆಜ್ಞಾಪಿಸಿದ್ದರು. ಜಹಾಂಪನಾ ಬಳಿ ಸಂತರು ಬಂದರೂ ಕೂಡ ಅವರಿಗೆ ಕಾಣಿಕೆ, ಉಡುಗೊರೆಗಳನ್ನು ನೀಡುತ್ತಿದ್ದರು. ಅಗತ್ಯವಿದ್ದವರಿಗೆ, ಸಂಕಷ್ಟದಲ್ಲಿದ್ದವರಿಗೆ ಖಜಾನೆಯಿಂದ, ಕೆಲವೊಮ್ಮೆ ರಾಜ್ಯದ ಒಡೆತನದಲ್ಲಿದ್ದ ಜಮೀನಿನಿಂದ, ಕೆಲವೊಮ್ಮೆ ಇನಾಮುಗಳನ್ನು ನೀಡಿ ಸಂತೈಸುತ್ತಿದ್ದರು. ಸಾವಿರಾರು ಹವನ್‌ಗಳನ್ನು ಸಂಕಷ್ಟ ಸಂತ್ರಸ್ಥರಿಗೆ ಕಳುಹಿಸಿಕೊಡುತ್ತಿದ್ದರು. ಒಮ್ಮೆ ಜಹಾಂಪನಾ ಆಸ್ಥಾನದಲ್ಲಿ ಸಿಂಹಾಸನಾರೂಢರಾಗಿದ್ದ ಸಂದರ್ಭದಲ್ಲಿ ಆಬ್ದಾರ್ ಖಾನಾ(ಪಾನೀಯಗಳ ಸರಬರಾಜಿನ ಸ್ಥಳ)ದ ಅಧಿಕಾರಿಯ ಶಿಷ್ಯನಾಗಿದ್ದ ಓರ್ವ ವ್ಯಕ್ತಿ ಬಂದು ತನ್ನ ಮದುವೆಯ ಖರ್ಚಿಗಾಗಿ ಸ್ವಲ್ಪ ಹಣ ಸಹಾಯ ಬೇಕಾಗಿದೆ ಎಂದಿದ್ದ. ಜಹಾಂಪನಾರು ಅವನ ಅವಶ್ಯಕತೆಗೆ ಅನುಗುಣವಾಗಿ ನೀಡಿ ಎಂದು ಆದೇಶವನ್ನು ನೀಡಿದ್ದರು. ಪ್ರತಿಯೊಂದು ಚೀಲದಲ್ಲೂ ಒಂದು ಸಾವಿರ ಹವನ್ ನಾಣ್ಯಗಳ ಹದಿನಾರು ಚೀಲಗಳನ್ನು ಎತ್ತಿಕೊಂಡ. ಅವು ಎಷ್ಟು ಭಾರವಾಗಿದ್ದವೆಂದರೆ ಅವನ್ನು ಹೊತ್ತುಕೊಂಡು ಹೋಗಲು ಸಾಧ್ಯವಾಗದೆ ತಲೆಯಮೇಲೆ ಹೆಗಲಮೇಲೆ, ಕಂಕುಳಲ್ಲಿ ಇಟ್ಟುಕೊಂಡು ಹೋದ. ಅದರಿಂದ ರಸ್ತೆಯಲ್ಲೂ ಸ್ವಲ್ಪ ಉದುರಿತ್ತು.

ಅದನ್ನು ದಾರಿಹೋಕರು ಹೆಕ್ಕಿಕೊಂಡಿದ್ದರು. ಜಹಾಂಪನಾರ ಖಜಾನೆಯಲ್ಲಿ ಸಂಪತ್ತು ಎಷ್ಟೊಂದು ತುಂಬಿತ್ತೆಂದರೆ ಇದರ ಮೌಲ್ಯವನ್ನು ಅಳೆಯುವುದು ಬಹುಶಃ ಸಾಧ್ಯವಿರಲಿಲ್ಲ. ಇವರು ನೀಡುವ ಕೊಡುಗೆ, ಕಾಣಿಕೆ, ಸಹಾಯಗಳ ಲೆಕ್ಕವಿಡಲು ಲೇಖನಿಗೆ ಸಾಧ್ಯವಾಗದು. ಇವರ ಕೊಡುಗೆ ಕಾಣಿಕೆ ಇನಾಮುಗಳು, ದರ್ವೇಶಿ ಸಂತರುಗಳಿಗೆ, ವಿದ್ವಾಂಸರಿಗೆ, ಧಾರ್ಮಿಕ ಮುಖಂಡರಿಗೆ ಧಾರಾಳವಾಗಿತ್ತು. ಹೆಚ್ಚು ಬಿಡುವಿನ ಸಮಯದಲ್ಲಿ ಈ ದರ್ವೇಶಿಗಳು ಸಂತರು ವಿದ್ವಾಂಸರೊಂದಿಗೆ ಕಾಲ ಕಳೆಯುತ್ತಿದ್ದರು. ಅತಿಥಿಗಳು, ಪ್ರವಾಸಿಗರು ಆಗಮಿಸಿದರೆ ಅವರ ಯೋಗ ಕ್ಷೇಮವನ್ನು ವಿಚಾರಿಸುತ್ತಿದ್ದರು. ಅವರು ಇಲ್ಲಿ ನೆಲಸಲು ಬಯಸಿದರೆ ಅವರಿಗೆ ನೌಕರಿ, ಉಳಿದುಕೊಳ್ಳಲು ವಸತಿಯನ್ನು ಒದಗಿಸುತ್ತಿದ್ದರು.

ಅವರ ನಡವಳಿಕೆಯಲ್ಲಿ ಮುಖ್ಯವಾಗಿ ಎದ್ದು ಕಾಣುವ ಗುಣವೆಂದರೆ ತನ್ನ ನೌಕರರು ಕೆಲಸಮಾಡುವಲ್ಲಿಗೆ ಭೇಟಿ ನೀಡಿದಲ್ಲಿ ಅವರ ಜೊತೆಗೇ ಕೂತುಬಿಡುತ್ತಿದ್ದರು. ನಯವಾಗಿ ಸೌಜನ್ಯದಿಂದ ಮಾತಾಡುತ್ತಿದ್ದರು. ಕೆಳಗಿನ ಸ್ವರದಲ್ಲಿ ಮಾತಾಡುತ್ತಿದ್ದರೇ ಹೊರತು ಹೆಚ್ಚು ಗಟ್ಟಿಯಾಗಿ ಮಾತಾಡುತ್ತಿರಲಿಲ್ಲ. (ಶಿರಾಜಿಯವರು ಹೇಳುತ್ತಿದ್ದಾರೆ) ನಾನು ಬಾದಶಾಹರ ಜೊತೆಗೆ ಸಹಾಯಕ ಸೇನಾನಿಯಾಗಿ ಕೆಲಸ ಮಾಡುತ್ತಿದ್ದಾಗ ನನಗೊಂದು ಘಟನೆ ನೆನಪಾಗುತ್ತಿದೆ, ಜಹಾಂಪನಾ ಒಮ್ಮೆ ನನ್ನೊಂದಿಗೆ ಹೇಳಿದರು, 'ನನ್ನೊಬ್ಬನಿಗಾಗಿ ಅಡುಗೆ ಮಾಡುವುದಕ್ಕೆ ಒಂದು ಇಡೀ ಆಡನ್ನು ಯಾಕೆ ಜುಬಾಂ ಮಾಡುತ್ತೀರಿ?' ಎಲ್ಲರಿಗೂ ಮಾಡುವ ಅಡುಗೆಯಲ್ಲಿ ನಾನೂ ಊಟಮಾಡುತ್ತೇನೆ ಎನ್ನುವುದು ಅವರ ಇಂಗಿತವಾಗಿತ್ತು. ನನ್ನ ಊಟವನ್ನು ಕೂಡ ಸಾಮಾನ್ಯ ಜನರಿಗೆ ನೀಡುವಂತೆಯೇ ನೀಡಿ ಎಂದೂ ಹೇಳಿದ್ದರು. ಹೆಚ್ಚಿನ ಸಮಯ ನೆಲದ ಮೇಲೆಯೇ ಕೂತುಬಿಡುತ್ತಿದ್ದರು. ತನ್ನ ಉಡುಗೆ ತೊಡುಗೆಗಳಲ್ಲಿ ಸೂಫಿ ದರ್ವೇಶಿ ಫಕೀರರು ತೊಡುವ ಬಟ್ಟೆಯಂತೆಯೇ ಇತ್ತು. ಸವಾರಿ ಕೂಡ ಸಾಮಾನ್ಯವಾಗಿತ್ತು. ತಮ್ಮ ಹೆಸರನ್ನು ಬರೆಯುವಾಗಲೂ 'ಆದಿಲ್ ಷಾ ಸೂಫಿ' ಎಂದು ಸಂಬೋಧಿಸುತ್ತಿದ್ದರು. ತನ್ನ ರಾಜ್ಯದ ಪ್ರಜೆಗಳೊಂದಿಗೆ ಗೌರವದಿಂದ ನಡೆದುಕೊಳ್ಳುತ್ತಿದ್ದರು. ನಾನು ಅವರನ್ನು ಒಂದು ಸಲ ನನ್ನ ಕನಸಲ್ಲಿ ಕಂಡಿದ್ದೆ. ಅವರು ತಾನು ಬರೆದ ಕಾಗದ ಪತ್ರಗಳನ್ನು ನನಗೆ ತೋರಿಸುತ್ತಿದ್ದರು. ಅವರ ಮುಖಕಮಲ ಪ್ರಕಾಶಮಾನವಾಗಿ ನನಗೆ ಕಂಡಿತ್ತು. ನಾನು ಅವರ ಸಾವಿನ ಬಗ್ಗೆ ಕೇಳುತ್ತಿದ್ದೆ. ಅವರು ಬಿಳಿ ಬಟ್ಟೆ ತೊಟ್ಟ ಮಹಿಳೆಯರತ್ತ ಬೊಟ್ಟು ಮಾಡಿ ತೋರಿಸಿದ್ದರು. ದಕ್ಷಿಣದ ಮಹಿಳೆಯರು ವಿಧವೆಯರಾದಾಗ ಬಿಳಿಬಟ್ಟೆತೊಡುವ ಸಂಪ್ರದಾಯವಿತ್ತು. ನಿಮ್ಮ ಅನುಮತಿ ಇದ್ದರೆ ನಾನು ಈ ಮಹಿಳೆಯರಿಗೆ ಬಣ್ಣದ ಉಡುಪನ್ನು ನೀಡುವೆ ಎಂದಾಗ ಅವರು ಅದಕ್ಕೆ ಸಂಜ್ಞೆಯ ಮೂಲಕ ನಿರಾಕರಿಸಿದರು.

ಇನ್ನೊಂದು ವಿಷಯ ಅವರ ಬಗ್ಗೆ ಹೇಳುವುದಿದ್ದರೆ ಅವರು ಕೋಟೆಯ ಬಳಿಯಲ್ಲಿ ಒಂದು ಮಸೀದಿಯನ್ನು ಕಟ್ಟಿಸಿದ್ದರು. ಈ ಮಸೀದಿಗೆ 'ಮಸ್ಜಿದೆ ಘಾಲಿಬ್' ಎಂದು ಹೆಸರಿಟ್ಟಿದ್ದರು. ಮಸ್ಜಿದೆ ಘಾಲಿಬ್ ಎಂಬ ಪದದಲ್ಲಿ (ಅಬ್ಜದ್ ಅಥವಾ ಸಂಖ್ಯಾ ಶಾಸ್ತ್ರದ ಪ್ರಕಾರ) ೧೦೩೩ರ ಸಂಖ್ಯೆ ಅಡಗಿದೆ. ಇದರ ಆಧಾರದ ಮೇಲೆ ಮಸೀದಿಯ ಒಳಗೆ ೧೦೩೩ ದೀಪ ಗುಚ್ಛಗಳನ್ನು ಮಾಡಿಸಿದ್ದ. ಒಮ್ಮೆ ಮಸೀದಿಯ ಆವರಣದಲ್ಲಿ ಕೂತಿದ್ದಾಗ 'ಇಸ್ಮಾಯಿಲ್ ಆದಿಲ್ ಖಾನನ ತಲ್ವಾರು ಖಜಾನೆಯಲ್ಲಿ ಇಡಲಾಗಿದ್ದನ್ನು ಇಲ್ಲಿಗೆ ತನ್ನಿ' ಎಂದು ಆಜ್ಞಾಪಿಸಿದ್ದರು. ಅದನ್ನು ತಂದು ಅವರ ಮುಂದಿಟ್ಟಾಗ ಅವರು ಅದನ್ನು ಒರೆಯಿಂದ ತೆಗೆದು ಮಸೀದಿಯ ಮೆಹರಾಬ್(ಶುಕ್ರವಾರದ ಖುತ್ಬಾ ಪ್ರವಚನದ ವೇದಿಕೆ)ನಲ್ಲಿ ತೂಗುಹಾಕಿದ್ದರು. ಇದು ಇಂದಿಗೂ ಅಲ್ಲಿ ಹಾಗೆಯೇ ಇದೆ. ಹೀಗೆ ಒಮ್ಮೆ ನನ್ನೊಂದಿಗೆ, 'ನಾಲ್ಕು ಸಾವಿರ ಹವನ್ ಹಣವನ್ನು ಮೌಲಾನಾ ಲುತ್ಫಿ ಖಾನ್ ಸಾರಿಯವರಿಗೆ ನೀಡಿರಿ' ಎಂದು ಹೇಳಿದ್ದರು. ಅವರು ಶಿರಾಜ್ ಪ್ರಾಂತ್ಯಕ್ಕೆ ಹೋಗಿ ಇಮಾಮೆ ಮೂಸಾ ಅಲ್ ಖಾಝಿಂರವರ ಗೋರಿಯನ್ನು ನೋಡಿ ಅದೇ ರೀತಿಯ ಒಂದು ಗೋರಿಯನ್ನು ಕಟ್ಟಿಸುವ ವ್ಯವಸ್ಥೆಯನ್ನು ಮಾಡಿ ಎಂಬುದು ಅವರ ಇಚ್ಛೆಯಾಗಿತ್ತು. ಆಗಾಗ ಅವರು ಹೇಳುತ್ತಿದ್ದರು, 'ನಾನು ಬದುಕಿರುವ ತನಕ ನನ್ನ ಖಜಾನೆ ಬರಿದಾಗದು'. ಹೀಗೆ ಇವರು ಮೂರು ನಾಲ್ಕು ತಿಂಗಳ ಕಾಲ ಪುನರುಚ್ಚಾರ ಮಾಡುತ್ತಿದ್ದರು. ಜೊತೆಗೆ ಆಗಾಗ 'ನನ್ನ ಕಾಲ ಸಮೀಪಿಸಿದೆ, ನನ್ನನ್ನು ಮಕ್ಕಾ, ಮದೀನಾದ ಪವಿತ್ರಯಾತ್ರೆಗೆ ಕರೆದುಕೊಂಡು ಹೋಗಿ' ಎಂದು ಹೇಳುತ್ತಿದ್ದರು.

**ಜಹಾಂಪನಾರು ಸರ್ವತಯಾರಿಯೊಂದಿಗೆ ನಿಜಾಂ ಶಾಹನ ಕಡೆಗೆ ಹೋಗುವ ವಿವರಗಳು:**

ಒಮ್ಮೆ ಜಹಾಂಪನಾರು ಹೇಳಿದ್ದರು, 'ರಾಮರಾಜನ ಸಾವಿನ ನಂತರ ನಾನು ಒಮ್ಮೆ ಹಿಂಪಾನಗರದಲ್ಲಿನ ಕೊಳವೊಂದರ ತೀರದಲ್ಲಿ ಕೂತಿದ್ದೆ. ಅಲ್ಲೇ ನಿಜಾಂ ಶಾಹ ಒಂದೆಡೆ ಮತ್ತು ಖುತುಬ್ ಶಾಹ ಇನ್ನೊಂದೆಡೆ ಕೂತಿದ್ದರು. ತಮ್ಮ ಪ್ರತಿಬಿಂಬವನ್ನು ಕೊಳದ ನೀರಿನಲ್ಲಿ ಕಾಣುತ್ತಿದ್ದರು. ಆದರೆ ನಿಜಾಂ ಶಾಹನ ಅರ್ಧ ಪ್ರತಿಬಿಂಬ ಮಾತ್ರ ಕಾಣುವಂತಿತ್ತು. ನಾನು ಧೈರ್ಯದಿಂದ ನಿಜಾಂ ಶಾಹನತ್ತ ಹೋದೆ. ನಿಜಾಂ ಶಾಹರ ಕೈಯನ್ನು ಗಟ್ಟಿಯಾಗಿ ಹಿಡಿದುಕೊಂಡೆ. ಅವನನ್ನು ಕೆಡವಿ ಎದೆಯ ಮೇಲೆ ಕೂತುಕೊಂಡೆ. ನನ್ನ ಮಂತ್ರಿಗಳಲ್ಲೊಬ್ಬ ಮವಾಲಿ ಖಾನ್ ಕೂಡ ಹತ್ತಿರ ಬಂದ. ಸುಜಾತ್ ಖಾನ್ ನನ್ನ ತಲ್ವಾರನ್ನು ಒರೆಯಿಂದ ಹೊರಗೆಳೆದು ನನಗೆ ನೀಡಿದ. ನನ್ನ ಬಳಿಬಂದು ನಿಂತ. ಮವಾಲಿ ಖಾನ್ ತನ್ನ ಕೈಯಲ್ಲಿ ಕತ್ತಿ ಹಿಡಿದು, "ಇಲ್ಲೀಗ ನಿನ್ನ ಬಳಿ ನಿನ್ನ ಸೇವಕರು ಯಾರೂ ಇಲ್ಲ, ನೀನು ಹೊರಗೆ ಹೋಗಿ ಯಾರನ್ನು ಕರೆಯುತ್ತಿ?, ಎಂದು ಕೇಳಿದ. ಆ ಮೂರ್ಖ ತನ್ನ ತಲ್ವಾರನ್ನು ಅಲ್ಲೇ ಬಿಟ್ಟು ಹೊರ

ಹೋದ. ಅವನು ನನ್ನನ್ನು ಹತ್ತು ಜನಗಳ ಮಧ್ಯೆ ಬಿಟ್ಟು ಹೋದ. ನಾನು ಯೋಚಿಸಿದೆ, ನಾನು ಒಂಟಿಯಾಗಿ ಇಲ್ಲಿ ಸ್ವಲ್ಪಮಟ್ಟಿಗೆ ಜಾಗರೂಕನಾಗಿರಬೇಕು. ನನ್ನ ರಕ್ಷಣೆಯ ಬಗ್ಗೆ ಎಚ್ಚರವಹಿಸಬೇಕೆಂದು ನಿಶ್ಚಯ ಮಾಡಿಕೊಂಡೆ. ಆಗ ನನ್ನ ಸೊಂಟದಲ್ಲಿ ಒಂದು ಕತ್ತಿ ಒರೆಯಲ್ಲಿತ್ತು. ಅದನ್ನು ಬಹಿರಂಗಪಡಿಸದೆ ನಿಜಾಂ ಶಾಹನ ಅತ್ಯಂತ ಸನಿಹಕ್ಕೆ ತಲಪಿದ್ದೆ. ನನಗೆ ಲಭಿಸಿದ ಈ ಅವಕಾಶದಲ್ಲಿ ನನ್ನ ಕತ್ತಿ ನಿಜಾಂ ಶಾಹನ ಎದೆಗೆ ಚುಚ್ಚಿ ಇರಿದುಬಿಡಲು ಯೋಚಿಸಿದೆ. ಮುಂದೇನಾಗುತ್ತದೋ ನೋಡಿ ಬಿಡೋಣವೆಂದುಕೊಂಡೆ. ಮವಾಲಿ ಖಾನ್ ನಿಜಾಂ ಶಾಹನ ಕಿವಿಯ ಬಳಿಹೋಗಿ ಗುಟ್ಟಾಗಿ ಏನೋ ಹೇಳಿದ. ನಿಜಾಂ ಶಾಹ ಎದ್ದು ನಿಲ್ಲಲು ಪ್ರಯತ್ನಿಸಿದ. ಅವನ ಮುಖದಲ್ಲಿ ಭಯ ಆವರಿಸಿತ್ತು. ಕೆಮ್ಮ ತೊಡಗಿದ. ಸಂಪೂರ್ಣ ನಿರಾಶನಾಗಿಬಿಟ್ಟಂತೆ ಕಂಡುಬಂದ. ಅದೇ ಹೊತ್ತಲ್ಲಿ ಅವನ ದೊಡ್ಡಮಗ ಇಪ್ಪತ್ತರ ಹರೆಯದ ಮುರ್ತಜಾ ನಿಜಾಂ ಶಾಹ ಬಂದಿದ್ದ. ತನ್ನ ಅಪ್ಪನ ಪರಿಸ್ಥಿತಿಯ ಬಗ್ಗೆ ಅವನಿಗೆ ತಿಳಿಯಲಾಗದಂತೆ ಅವನನ್ನು ಒಂದು ಕೋಣೆಯಲ್ಲಿ ಕರೆದುಕೊಂಡು ಕೂರಿಸಲಾಯಿತು. ನನ್ನ ಕತ್ತಿಯನ್ನು ಸೊಂಟದಿಂದ ಹಿರಿದೆತ್ತಿ ನಿಜಾಂ ಶಾಹನ ಎದೆಯನ್ನು ಇರಿದುಬಿಟ್ಟು, ಈ ಸ್ವಾಮಿದ್ರೋಹಿಯ ಬದುಕನ್ನು ಕೊನೆಗೊಳಿಸಿದೆ".

**ಜಹಾಂಪನಾರ ಬದುಕು, ನಡೆನುಡಿ ಮತ್ತು ಉಡುಪುಗಳ ಬಗೆಗಿನ ವಿವರಗಳು**

ಅವರ ಮುಂದೆ ಏನೇ ಆಹಾರ ಇಟ್ಟರೂ ಸುಮ್ಮನೆ ತಿನ್ನುತ್ತಿದ್ದರು. ಆಹಾರದಲ್ಲಿ ಖಾರ, ಉಪ್ಪು, ಹುಳಿ ಹೆಚ್ಚು ಯಾ ಕಮ್ಮಿ ಇರುವ ಬಗ್ಗೆ ಯಾವುದೇ ರೀತಿಯ ರುಚಿಯಲ್ಲಿನ ವ್ಯತ್ಯಾಸಗಳ ಬಗ್ಗೆ ಆರೋಪ ಮಾಡದೆ ತಿನ್ನುತ್ತಿದ್ದರು. ಅವರ ಜೊತೆಯಲ್ಲಿ ಊಟಕ್ಕೆ ಕೂತ ಸಂಬಂಧಿಕರು, ದರ್ಬಾರಿಗಳು ಆಹಾರದ ರುಚಿಯ ಬಗ್ಗೆ ಟೀಕಿಸುತ್ತಿದ್ದರಾದರೂ, ಅದಕ್ಕೆ ಉತ್ತರಿಸಿದ ಜಹಾಂಪನಾರು 'ಇದು ಅಲ್ಲಾಹ ನೀಡುವ ನಮ್ಮ ಪಾಲಿನ ಪ್ರಸಾದವಾಗಿದೆ. ಇದನ್ನು ಟೀಕಿಸುವುದು, ಕಡೆಗಣಿಸುವುದು ಸಲ್ಲ. ಇದು ಅಲ್ಲಾಹನ ಕರುಣೆಯ ಪ್ರಸಾದವನ್ನು ಕಡೆಗಣಿಸುವುದಕ್ಕೆ ಸಮಾನವಾಗಿದೆ' ಎನ್ನುತ್ತಿದ್ದರು. ಒಮ್ಮೆ ಹೀಗಾಗಿತ್ತು; ಅವರ ಹೊಲದಲ್ಲಿ ಹುಲ್ಲಿನ ಮಧ್ಯೆ ಮುಳ್ಳು ಸೌತೆಯ ಬಳ್ಳಿ ಬೆಳೆದು ಸೌತೆ ಕಾಯಿಗಳಾಗಿದ್ದವು. ಆ ಸೌತೆಕಾಯಿಯಲ್ಲಿ ಒಂದನ್ನು ತರಿಸಿ ನಾಲ್ಕು ತುಂಡು ಮಾಡಿ ಮೂರು ತುಂಡುಗಳನ್ನು ಜಹಾಂಪನಾರು ತಿಂದು ಒಂದು ತುಂಡನ್ನು ನನಗೆ ನೀಡಿದ್ದರು. ನಾನು ತಿಂದಾಗ ಸ್ವಲ್ಪ ಕಹಿ ಅದರಲ್ಲಿರುವುದು ಅನುಭವವಾಯಿತು. ಆದರೆ ಜಹಾಂಪನಾರು ಒಂದು ಸ್ವಲ್ಪಕೂಡ ಮುಖ ಕಿವುಚಿಕೊಳ್ಳದೆ ಖುಶಿಖುಶಿಯಾಗಿ ತಿಂದಿದ್ದರು! ಜೊತೆಗೆ ಇತರ ಆಸ್ಥಾನಿಕರಿಗೆ ಈ ಬಗ್ಗೆ ತಿಳಿಸದಿರಿ ಎಂದು ನನಗೆ ತಾಕೀತು ಮಾಡಿದ್ದರು.

ಒಮ್ಮೆ ನನ್ನನ್ನು ಊಟದ ವ್ಯವಸ್ಥೆ ಮಾಡಲು ಹೇಳಿದ್ದರು. ಮಾಮೂಲಿನಂತೆ ಊಟದ ವ್ಯವಸ್ಥೆ ಮಾಡಲಾಯಿತು. ಎಲ್ಲ ನೌಕರರು, ಆಸ್ಥಾನದ ಗಣ್ಯರು ಅವರವರ ಸ್ಥಾನದಲ್ಲಿ ಕೂತಿದ್ದರು. ತಮಗೆ ಇಷ್ಟವಾದ ಆಹಾರವನ್ನು ಆರಿಸಿ ಪಡೆದು ತಿನ್ನುತ್ತಿದ್ದರು. ಜಹಾಂಪನಾರು ಒಂದು ಮೂಲೆಯಲ್ಲಿ ಕೂತಿದ್ದರು. ದಕ್ಷಿಣದ ಸಾಮಾನ್ಯರು ತಿನ್ನುವ ರೊಟ್ಟಿ ಮತ್ತು ತರಕಾರಿ ಪಲ್ಯವನ್ನು ತಿನ್ನುತ್ತಿದ್ದರು. ನನ್ನನ್ನು ನೋಡಿ ನಾನು ತಿನ್ನುವುದನ್ನು ನೋಡಬೇಡ, ನೀನು ನಿನಗೆ ಬೇಕಾದುದನ್ನು ತರಿಸಿ ತಿನ್ನು. ನಾಚಿಕೆ, ಮುಲಾಜು ಮಾಡದಿರು ಎಂದು ಹೇಳಿದರು. ಸಂಜೆಯಾಗುವಾಗ ಕೆಲವು ಸಲ ಮೊಟ್ಟೆಯನ್ನು ಜಹಾಂಪನಾರು ತಿನ್ನುವ ಕ್ರಮವಿತ್ತು. ಕೆಲವುಸಲ ರುಮಾಲಿನಲ್ಲಿ ಕಟ್ಟಿ ಹತ್ತಾರು ಮೊಟ್ಟೆಗಳನ್ನು ಬಿಸಿ ನೀರಿನಲ್ಲಿ ಬೇಯಿಸಿ ಅವರ ಮುಂದಿಡುತ್ತಿದ್ದರು. ಅದರಿಂದ ಎರಡು ಮೂರು ಮೊಟ್ಟೆಗಳನ್ನು ತಾನು ತಿಂದು ಹತ್ತಿರದಲ್ಲಿರುವವರಿಗೆ ಉಳಿದದ್ದನ್ನು ತಿನ್ನಲು ಕೊಟ್ಟು ಬಿಡುತ್ತಿದ್ದರು.

ಉಡುಪಿನ ವಿಚಾರದಲ್ಲಿ ಯಾವುದೇ ವಿಶೇಷ ರೀತಿಯ ಆಯ್ಕೆಮಾಡುತ್ತಿರಲಿಲ್ಲ. ಹೆಚ್ಚು ಹೊಳೆಯುವ ಮಿರಿಮಿರಿ ಮಿರುಗುವ ಜರಿಗಳ ಉಡುಪನ್ನು ಅವರು ಇಷ್ಟಪಡುತ್ತಿರಲಿಲ್ಲ. ಸ್ವಚ್ಛ ಬಿಳಿ ತೆಳು ಹಗುರವಾದ ಬಟ್ಟೆಗಳು ಸಾಮಾನ್ಯ ದರಬಾರಿಗಳು ಉಡುವ ತೊಡುವ ಬಟ್ಟೆಗಳನ್ನೇ ಅವರು ಆಯ್ಕೆ ಮಾಡುತ್ತಿದ್ದರು. ಬೆಳ್ಳಿ ಬಂಗಾರ, ತಾಮ್ರ, ಮುಂತಾದವು ಬೆರೆತ ಪಂಚಲೋಹದಿಂದ ಅಲಂಕರಿಸಲಾದ ಅವರ ಸೊಂಟದ ಪಟ್ಟಿಯು ಮಾಡಲಾಗಿತ್ತು. ಅವರ ಪಗಡಿಯು ಉದ್ದವಾಗಿ ಮಕ್ಮಲಿನಲ್ಲಿ ತಯಾರಿಸಲಾದ ಸೂಫಿ ಕಲಂದರರು ಧರಿಸುವ ಟೋಪಿಯಂತೆ ಕಾಣುತ್ತಿತ್ತು. ಇದು ಅವರ ಪಟ್ಟದ ಕಿರೀಟವನ್ನಾಗಿಯೂ ಬಳಸುತ್ತಿದ್ದರು. ನಾಲ್ಕು ಮಡಿಕೆಯ ಶಾಲನ್ನು ತನ್ನ ಕುತ್ತಿಗೆಯಲ್ಲಿ ಸೂಫಿ ದರವೇಶಿಗಳು ಧರಿಸುತ್ತಿದ್ದಂತೆ ಹಾಕಿಕೊಳ್ಳುತ್ತಿದ್ದರು. ಶಾಲನ್ನು ಉದ್ದಕ್ಕೆ ಎದೆಯಲ್ಲಿ ಇಳಿಬಿಡುತ್ತಿದ್ದರು.

ಅವರ ಚಪ್ಪಲಿಗಳು ಚರ್ಮ ಮತ್ತು ಬಟ್ಟೆಯಿಂದ ಸಾಮಾನ್ಯವಾಗಿ ಅವರು ಧರಿಸುವ ಬಟ್ಟೆಗೆ ಸರಿಹೊಂದುವ ರೀತಿಯಲ್ಲಿ ತಯಾರಿಸಲಾಗಿತ್ತು. ಅವರ ಕೈಯಲ್ಲಿರುವ ಊರುಗೋಲನ್ನು ಒಮ್ಮೊಮ್ಮೆ ಭುಜಕ್ಕೆ ಸಿಕ್ಕಿಸಿಕೊಳ್ಳುತ್ತಿದ್ದರು. ಹೀಗೆ ಧರಿಸಿ ನಿಂತಾಗ ತನ್ನನ್ನು 'ಅಲಿ ಷೇರ್ ಖಲಂದರ್' ಎಂದು ಕರೆಯಲು ಇಷ್ಟಪಡುತ್ತಿದ್ದರು.

**ಜಹಾಂಪನಾರ ನಡೆನುಡಿ ಮತ್ತು ಬದುಕಿನ ವಾತಾವರಣದ ವಿವರಗಳು**

ಜಹಾಂಪನಾರು ಬಹಳ ದೊಡ್ಡ ದೊಡ್ಡ ಮಹಲುಗಳು, ಇಮಾರತುಗಳನ್ನು ಕಟ್ಟಿಸಿದ್ದರೂ, ತನ್ನ ಹಳೆಯ ಕಟ್ಟಡದಲ್ಲಿ ಜಮಖಾನಗಳು ಹಾಸಿದ ನೆಲದಲ್ಲಿ ಕೂತಿರುತ್ತಿದ್ದರು. ವಿಶೇಷ ಸಮಾರಂಭಗಳು ನಡೆದಾಗ, ಅತಿಥಿಗಳು, ವಿಶೇಷ ಆಹ್ವಾನಿತ

ಬಾದಶಾಹರು ಆಗಮಿಸಿದಾಗ ಮಾತ್ರ ಜರಿ, ರೇಶ್ಮೆ, ಸಿಲ್ಕಿನ ಮಕ್ಮಲಿನ ಅಮೂಲ್ಯ ಜಮಖಾನಗಳನ್ನು ಹಾಸಿ ಮಹಲನ್ನು ಸಿಂಗರಿಸುತ್ತಿದ್ದರು. ಇವುಗಳ ಮೇಲೆ ಆರಾಮವಾಗಿ ಕೂರುವಂತೆ ದಿಂಬುಗಳನ್ನು ಇಡುತ್ತಿದ್ದರು. ದರ್ಬಾರಿ ವಸ್ತುಗಳನ್ನು ಎಷ್ಟೊಂದು ರೀತಿಯಲ್ಲಿ ಸಿಂಗರಿಸುತ್ತಿದ್ದರೆಂದರೆ ನಾವು ಯಾವತ್ತೂ, ಕಲ್ಪನೆಯಲ್ಲೂ ಕೂಡ ಯೋಚಿಸಿಲ್ಲದಂತೆ ಅದ್ಭುತ ರೀತಿಯಲ್ಲಿ ಕಣ್ಮನ ತಣಿಸುವಂತಿತ್ತು. ದರ್ಬಾರಿನ ಒಂದು ಬದಿಯಲ್ಲಿ ರಹಸ್ಯ ಮಾತುಕತೆಯನ್ನು ನಡೆಸಲಾಗುವ ಕೋಣೆಯೂ ಇತ್ತು. ಇದರಲ್ಲಿ ಮಕ್ಮಲಿನ ಜಮಖಾನ ಹಾಸಲಾಗಿತ್ತು. ದರ್ಬಾರಿನಲ್ಲಿ ಗಣ್ಯರು ಕೂತುಕೊಳ್ಳುವ ಬೈಠಕು ಏಳು ಮಂದಿಯ ಸಾಲುಗಳಲ್ಲಿ ಕೂರುವ ವ್ಯವಸ್ಥೆ ಮಾಡಲಾಗಿತ್ತು. ರಾಜ್ಯಾಡಳಿತದ ವ್ಯವಸ್ಥೆ ಮಾಡುವಾಗ ಎಲ್ಲರ ಅಭಿಪ್ರಾಯ ಮತ್ತು ಸಲಹೆಗಳನ್ನು ಕೇಳುತ್ತಿದ್ದರು. ಆದರೆ ಬಾದಶಾಹರ ಮುಖ್ಯ ಕೆಲಸಗಳಲ್ಲಿ ತನ್ನ ಸ್ವಂತ ವಿಚಾರಗಳಿಗೆ ಮಾತ್ರ ಪ್ರಾಮುಖ್ಯತೆ ನೀಡುತ್ತಿದ್ದರು. ಪರಾಕ್ರಮ, ಶೌರ್ಯದಲ್ಲಿ ಶೂರನಾಗಿದ್ದರೆ, ಯೋಚನೆಗಳಲ್ಲಿ ಬುದ್ಧಿವಂತ ಮತ್ತು ಜ್ಞಾನಿಯಾಗಿದ್ದರು. ಸರ್ವರ ಕಲ್ಯಾಣ ಅವರ ಪ್ರತಿಯೊಂದು ಯೋಚನೆ ಮತ್ತು ವ್ಯವಹಾರಗಳ ಉದ್ದೇಶವಾಗಿತ್ತು. ಪ್ರಜೆಗಳು ಮತ್ತು ಸಾಮಾನ್ಯ ಜನರೊಂದಿಗೆ ಯಾವಾಗಲೂ ಗೌರವದಿಂದ ಮತ್ತು ಮರ್ಯಾದೆಯ ನಡೆ ನುಡಿಯಿಂದ ವ್ಯವಹರಿಸುತ್ತಿದ್ದರು.

ಒಮ್ಮೆ ಅವರು ಹಕೀಮುಲ್ ಮುಲ್ಕನ ಹತ್ತಿರ ದಿಂಬಿಗೆ ಒರಗಿ ಕೂತಿದ್ದರು. ನಾನು ಅವರ ಬಳಿ ನಿಂತಿದ್ದೆ. ಜಹಾಂಪನಾ ನನ್ನೊಂದಿಗೆ ಕೂತುಕೊಳ್ಳಲು ಹೇಳಿದರು. ಜನರು ನನ್ನ ಬಗ್ಗೆ ಏನು ಅಭಿಪ್ರಾಯ ಪಡುತ್ತಿದ್ದಾರೆ? ಎಂದು ಪ್ರಶ್ನಿಸಿದರು. ನಾನು ಇದಕ್ಕೆ ಏನೆಂದು ಉತ್ತರಿಸಲಿ ಎಂದು ಗಾಬರಿಪಟ್ಟುಕೊಂಡೆ. 'ನಿಮ್ಮನ್ನು ಸರಿಯಾಗಿ ಯಾರೂ ಅರಿತಿಲ್ಲ' ಎಂದಷ್ಟೇ ಹೇಳಿದೆ. ಇದನ್ನು ಕೇಳಿ ಅವರು ನಸು ನಕ್ಕರು. ನಾನು ತಲೆಬಾಗಿಸಿದಾಗ ನನಗೆ ಶುಭಾಶಯವನ್ನು ನೀಡಿದರು. ನನ್ನೊಂದಿಗೆ ಇದನ್ನು ವಿವರವಾಗಿ ತಿಳಿಯಲು ಉತ್ಸುಕರಾದರು. ಆಗಾಗ ಅವರ ಅಭ್ಯಾಸ ಹೇಗಿತ್ತೆಂದರೆ ತನ್ನ ಸ್ನೇಹಿತರೊಂದಿಗೆ ಮಕ್ಕಳ ಮುಗ್ಧತೆಯಿಂದ ವ್ಯವಹರಿಸುತ್ತಿದ್ದರು. ಕೆಲವು ಸಲ ತಮಗೆ ಯಾವುದೋ ಅಧ್ಯಾತ್ಮ ಜ್ಞಾನೋದಯವಾದಂತೆ ಮಜ್‌ಝೂಬಿ(ಉನ್ಮತ್ತ ವಿರಾಗಿ) ದರ್ವೇಶಿ ಸೂಫಿಗಳಂತೆ ಮಾತಾಡುತ್ತಿದ್ದರು. ವಿದ್ವಾಂಸರು ಮತ್ತು ಜ್ಞಾನಿಗಳ ಜೊತೆ ಅವರು ಮಾತುಕತೆಗೆ ಇಳಿದಾಗ ಅವರ ಮಾತುಗಳು ಅತ್ಯಂತ ಮೇಧಾವಿ ಜ್ಞಾನಿಯೊಬ್ಬ ನೀಡುವ ಪ್ರವಚನಗಳಂತಿದ್ದುವು. ಬಾದಶಾಹರ ಜೊತೆಗೆ ಮಾತಾಡುವಾಗ ವಿಶ್ವ ದರ್ಜೆಯ ಶೌರ್ಯ ಮತ್ತು ಪರಾಕ್ರಮಿಯೊಬ್ಬನ ವೀರಾವೇಶದ ಮಾತುಗಳಂತೆ ಘನತೆ ಗಾಂಭೀರ್ಯದಿಂದ ತುಂಬಿರುತ್ತಿತ್ತು. ಪ್ರತೀ ದಿನ ನಾಲ್ಕು ಯಾ ಐದು ಗಂಟೆಗಳ ಕಾಲ ರಾಜ್ಯಾಡಳಿತದ ವಿಚಾರ ವಿನಿಯಮದಲ್ಲಿ ಕಳೆಯುತ್ತಿದ್ದರು. ಆಗ

ದರ್ಬಾರಿನ ಪ್ರತಿಯೊಬ್ಬ ಸದಸ್ಯರ ಜೊತೆಗೂ ವಿನಯದಿಂದ ವ್ಯವಹರಿಸುತ್ತಿದ್ದರು. 'ಈ ಸಂಪತ್ತು ಮತ್ತು ರಾಜ್ಯದ ಜವಾಬ್ದಾರಿಯ ವಿಚಾರಗಳಲ್ಲಿ ನಾನು ಮುಳುಗಿ ಹೋಗಿದ್ದೇನೆ. ಮುಂದಿನ ಪಾರಮಾರ್ಥಿಕ ಸಂಗತಿಗಳ ಬಗ್ಗೆ ಚಿಂತಿಸಲು ಸಮಯಾವಕಾಶ ಇಲ್ಲದಂತಾಗಿದೆ' ಎಂದು ಒಮ್ಮೊಮ್ಮೆ ಹೇಳುತ್ತಿದ್ದರು.

ಒಂದು ರಾತ್ರಿ ನಾನು ಅವರ ಜೊತೆಯಲ್ಲಿದ್ದೆ. ಅವರು ಶರಾಬಿನ ಬಟ್ಟಲನ್ನು ತುಟಿಯಲ್ಲಿಟ್ಟು ಹೀರಿ ಸವಿಯುತ್ತಿದ್ದರು. ಜೊತೆಗೆ ಸೂಫಿ ಅಧ್ಯಾತ್ಮದ ವಿಚಾರಗಳ ಬಗ್ಗೆ ಮಾತಾಡುತ್ತಿದ್ದರು. ನಾನು ಕ್ಷಮೆ ಕೇಳುತ್ತ ವಿನಯದಿಂದ ಅವರ ಮುಂದೆ ಬಿನ್ನಹ ಮಾಡಿದೆ, 'ಒಂದೆಡೆ ಹುಜೂರರಾದ ತಾವು ಅಮಲು ಪದಾರ್ಥವನ್ನು ಸೇವಿಸುತ್ತಿದ್ದೀರಿ, ಇನ್ನೊಂದೆಡೆ ಅಧ್ಯಾತ್ಮದ ಮಾತುಗಳನ್ನು ಹೇಳುತ್ತಿದ್ದೀರಿ, ಇದು ತರವೇ?' ಎಂದೆ. ಅವರು ಅದಕ್ಕೆ 'ನಿಮಗೆ ನನ್ನ ಈ ರಹಸ್ಯ ಅರ್ಥವಾಗದು' ಎಂದು ಉತ್ತರಿಸಿದರು.

ಅವರ ಬಳಿ ಹಲವು ವಿಷಯಗಳಿಗೆ ಸಂಬಂಧಿಸಿದ ಹಲವಾರು ಪುಸ್ತಕಗಳು ಇದ್ದವು. ಅವರ ಗ್ರಂಥಾಲಯದಲ್ಲಿ ಸಹಸ್ರಾರು ಅಮೂಲ್ಯ ಗ್ರಂಥಗಳಿಂದ ತುಂಬಿ ತುಳುಕುತ್ತಿತ್ತು. ಸಾಕಷ್ಟು ಸಂಖ್ಯೆಯ ಬರಹಗಾರರು, ಪುಸ್ತಕಗಳ ನಕಾಶೆ, ಬೈಂಡಿಂಗ್ ಕೆಲಸಗಾರರು, ಚಿತ್ರಕಾರರು, ಲಿಪಿಕಲಾಕಾರರು ಅವರ ವೈಯಕ್ತಿಕ ಗ್ರಂಥಾಲಯದಲ್ಲಿ ಕೆಲಸಮಾಡುತ್ತಿದ್ದರು. ಅವರ ವೈಯಕ್ತಿಕ ಆಯ್ಕೆಯ ಪುಸ್ತಕಗಳ ನಾಲ್ಕು ದೊಡ್ಡ ಸಂದೂಕಗಳು ಇದ್ದವು. ಈ ಸಂದೂಕಗಳು ಮಹಲಿನಲ್ಲಿ ಮಾತ್ರವಲ್ಲ, ಅವರ ಪ್ರಯಾಣ ಸಮಯದಲ್ಲೂ ಜೊತೆಗೆ ಇರುತ್ತಿದ್ದವು. ಒಮ್ಮೆ ಪ್ರಯಾಣದಲ್ಲಿದ್ದಾಗ, ಸೇವಕರು ಈ ಪುಸ್ತಕಗಳು ತುಂಬಿದ ಸಂದೂಕಗಳನ್ನು ಜೊತೆಗೆ ಕೊಂಡೊಯ್ಯಲು ಮರೆತಿದ್ದರು.

ಅವರು ಅರ್ಧ ಯಾತ್ರೆಯಲ್ಲಿ ಅವರು ಈ ಸಂದೂಕಗಳ ಬಗ್ಗೆ ಸೇವಕರನ್ನು ಎಲ್ಲಿದೆ ಎಂದು ಕೇಳಿದರು. 'ಮಳೆ ಜೋರಾದುದರಿಂದ ನಾವು ಬರುವ ಹಾದಿಯ ಒಂದು ಗ್ರಾಮದಲ್ಲಿ ಸುರಕ್ಷಿತವಾಗಿ ಇಟ್ಟಿದ್ದೇವೆ. ಕೂಡಲೇ ಹೋಗಿ ಅದನ್ನು ತರುವ ಏರ್ಪಾಡು ಮಾಡುತ್ತೇವೆ' ಎಂದು ಸೇವಕರು ಹೇಳಿದರು. ಪುಸ್ತಕಗಳ ಸಂದೂಕಗಳು ದೂರವಿರುವ ತನಕ ಅವರು ಚಡಪಡುತ್ತಿದ್ದರು. ಪುಸ್ತಕಗಳ ಸಂದೂಕಗಳು ತಲಪಿದ ನಂತರವೇ ಅವರಿಗೆ ಸಾಂತ್ವನ ದೊರಕುತ್ತಿತ್ತು. 'ನನ್ನಿಂದ ನನ್ನ ಗ್ರಂಥಗಳನ್ನು ದೂರ ಮಾಡದಿರಿ' ಎಂದು ಹೇಳಿದ್ದರು.

ತನ್ನ ಕೊನೆಗಾಲದಲ್ಲಿ ಅವರಿಗೆ ತನ್ನ ಅಂತ್ಯ ಸಮೀಪಿಸುತ್ತಿದೆ ಎಂದು ಅನಿಸಿತ್ತು. ಅವರು ಬಹಳಷ್ಟು ಸಭೆಗಳಲ್ಲಿ ಭಾಗವಹಿಸುವುದನ್ನು ನಿಲ್ಲಿಸಿದ್ದರು. ಎಲ್ಲಿಯವರೆಗೆಂದರೆ ಅವರ ಕೊನೆಯ ಕ್ಷಣದ ಹಿಜರಿ ೯೮೮ ವರ್ಷದ ಸಫರ್ ತಿಂಗಳ ೨೪ನೇ ದಿನಾಂಕದ

ಶನಿವಾರದ ರಾತ್ರಿ ತನಕ ಇದೇ ರೀತಿಯಲ್ಲಿ ಕಳೆಯಿತು. 'ದಿವಾನೆ ಉನುಬ್' ಎಂಬ ಕೃತಿಯ ಲೇಖಕ ತನ್ನ ಪುಸ್ತಕದ ಪ್ರಥಮ ಪುಟದಲ್ಲಿ ಒಂದು ವಾಕ್ಯವನ್ನು ಬರೆದಿದ್ದ. ಅದರಲ್ಲಿ ಜಹಾಂಪನಾರ ಅಂತಿಮದಿನದ ದಿನಾಂಕ ವ್ಯಕ್ತಗೊಂಡಿತ್ತು. 'ಶಾಜಹಾಂ ಶುದ್ ಷಹೀದ್' ಎಂಬ ಶಬ್ದದ ಸಂಖ್ಯಾಶಾಸ್ತ್ರದಲ್ಲಿ ಹಿಜರಿ ವರ್ಷ ೯೮೮ನ್ನು ನಮೂದಿಸಿದ್ದ.

■

*

# ಅಧ್ಯಾಯ-೧೨

**ಇಬ್ರಾಹಿಂ ಆದಿಲ್ ಷಾ ಬಾದಶಾಹರ ಆಳ್ವಿಕೆಯಲ್ಲಿ ರಾಜ್ಯದ ಮತ್ತು ಅವರ ಕಾಲಾವಧಿಯ ಚಾರಿತ್ರಿಕ ವಿವರಗಳು:**

(ಮುಂದಿನ ಪುಟಗಳಲ್ಲಿ ಎಲ್ಲೆಲ್ಲ 'ಆಲಂಪನಾ' ಎಂಬ ಶಬ್ದದ ಉಲ್ಲೇಖವಾಗುತ್ತದೋ ಅಲ್ಲೆಲ್ಲ ಇಬ್ರಾಹಿಂ ಆದಿಲ್ ಷಾ ಬಾದಶಾಹರೆಂದು ಪರಿಗಣಿಸಬೇಕು).

ಆಲಂಪನಾರಿಗೆ ಪಟ್ಟಾಭಿಷೇಕ ನಡೆದ ವರ್ಷ ಹಿಜರಿ ಸನ್ ೯೮೮. ಇವರ ಆಳ್ವಿಕೆಯ ಕಾಲಘಟ್ಟದಲ್ಲಿ ರಾಜ್ಯದ ಎಲ್ಲೆಡೆಗಳಲ್ಲಿ ಸುಖಸಂಪತ್ತಿನ ಮತ್ತು ಸಂತಸದ ವಾತಾವರಣವಿತ್ತು. ಇವರು ತುಂಬ ಬುದ್ಧಿವಂತಿಕೆಯಿಂದ ಮತ್ತು ಸೌಹಾರ್ದ ಪರಂಪರೆಯಲ್ಲಿ ರಾಜ್ಯಾಡಳಿತ ನಡೆಸಿದರು. ಬೆಳಗ್ಗಿನಿಂದ ಸಂಜೆಯ ತನಕ ರಾಜ್ಯಾಡಳಿತದ ಮತ್ತು ಪ್ರಜೆಗಳನ್ನು ಭೇಟಿಯಾಗುವುದರಲ್ಲಿ ಮಗ್ನರಾಗಿರುತ್ತಿದ್ದರು. ದರ್ಬಾರಿನ ಕಾರ್ಯಕಲಾಪಗಳು ಮುಗಿದಾಗ ಆಸ್ಥಾನದ ಆಡಳಿತಗಾರರು, ಸೇವಕರು ಇತ್ಯಾದಿ ಜನರು ತಮ್ಮತಮ್ಮ ಮನೆಯ ಕಡೆ ತೆರಳಲು ವ್ಯವಸ್ಥೆಯನ್ನು ಮಾಡುತ್ತಿದ್ದರು. ಒಮ್ಮೆ ಓರ್ವ ವ್ಯಕ್ತಿಗೆ ಕೆಲಸ ಮಾಡುತ್ತ ರಾತ್ರಿಯಾಗಿ ಬಿಟ್ಟಿತ್ತು. ಆಲಂಪನಾ ಇದನ್ನು ಕಂಡು ತಾನೇ ಸ್ವತಃ ಅವನನ್ನು ಅವನ ಮನೆಗೆ ಸುರಕ್ಷಿತವಾಗಿ ತಲಪಿಸಿ ಬಂದಿದ್ದರು. ಅವರ ರಾಜ್ಯಾಡಳಿತದ ಸಂದರ್ಭದಲ್ಲಿ ಅಫ್ಜಲ್ ಖಾನ್ ಕೂಡ ಕೆಲಸಮಾಡಿದ್ದ. ಆ ಕಾಲಾವಧಿಯಲ್ಲಿ ರಾಜ್ಯಾಡಳಿತ ಮತ್ತು ಯುದ್ಧಗಳಲ್ಲಿ ಅತ್ಯಂತ ಹೆಚ್ಚಿನ ವಿಜಯಕೂಡ ಲಭಿಸಿತ್ತು.

ಎಂತೆಂತಹಾ ವೈರಿಗಳ ಜೊತೆಗೆ ಯುದ್ಧನಡೆದಿತ್ತೋ ಅವರೆಲ್ಲರಿಗೂ ಅಲಂಪನಾರ ಕೈಯಲ್ಲಿ ಮರಣಹೊಂದುವ ಭಾಗ್ಯ ಲಭಿಸಿತ್ತು. ಆ ಕಾಲದಲ್ಲಿ ಅಫ್ಜಲ್ ಖಾನ್ ಮತ್ತು ಕಾಮಿಲ್ ಖಾನ್ ಇಬ್ಬರೂ ಸೇರಿ ರಾಜ್ಯದ ಆಡಳಿತದಲ್ಲಿ ಸೇವೆಯನ್ನು

ಸಲ್ಲಿಸುತ್ತಿದ್ದರು. ಕಾಮಿಲ್ ಖಾನ್ ಒಂದು ದಿನ 'ನನಗೆ ನಿಮ್ಮ ದಯೆ ಬೇಕಾಗಿಲ್ಲ' ಎಂದ. 'ದೀವಾನ್ ಕೂಡ ಸಾಯುವ ತನಕ ಯಾರ ಕೃಪೆಯನ್ನೂ ಬಯಸಿರಲಿಲ್ಲ' ಎಂದು ಇದಕ್ಕೆ ಅಫ್ಜಲ್ ಖಾನ್ ಉತ್ತರಿಸಿದ. ಈ ಮಾತು ಕೇಳಿದ ಕಾಮಿಲ್ ಖಾನ್ ಧೃತಿಗೆಟ್ಟವನಂತಾದ. ಇದರ ನಂತರ ಅವನ ನಡೆನುಡಿಯಲ್ಲಿ ವ್ಯತ್ಯಾಸಗಳು ಕಂಡು ಬಂದವು. ತನ್ನ ದೊಡ್ಡಸ್ಥಿಕೆ, ಅಹಂಕಾರವನ್ನು ಹೆಚ್ಚುಹೆಚ್ಚಾಗಿ ಪ್ರದರ್ಶಿಸ ತೊಡಗಿದ. ರಾಜ್ಯಾಡಳಿತದ ಕೆಲಸಗಳಲ್ಲಿ ಅನಗತ್ಯವಾಗಿ ಕೈಹಾಕತೊಡಗಿದ. ಖಜಾನೆಯ ಕೋಣೆಯಲ್ಲಿ ಇದ್ದ ಎರಡು ಸಂದೂಕಗಳಿಂದ ಬೆಲೆಬಾಳುವ ವಸ್ತುಗಳನ್ನು ತೆಗೆದು ಬೇರೊಂದು ಪೆಟ್ಟಿಗೆಯಲ್ಲಿ ತುಂಬಿಸಿದ. ಇದರ ಲೆಕ್ಕಾಚಾರವನ್ನು ಲೆಕ್ಕ ಪುಸ್ತಕದಲ್ಲಿ ದಾಖಲು ಮಾಡಲಿಲ್ಲ. ಅದರಲ್ಲಿನ ಕೆಲವು ಸಾಮಾನುಗಳನ್ನು ತನ್ನ ಹತ್ತಿರದ ಸಂಬಂಧಿಗಳಿಗೆ ಹಂಚಿದ. ಖಜಾನೆಯ ಲೆಕ್ಕ ಪತ್ರಗಳನ್ನು ಪರಿಶೋಧಿಸಿದಾಗ ಕೆಲವು ವಸ್ತುಗಳು ಕಮ್ಮಿ ಇರುವುದು ಬೆಳಕಿಗೆ ಬಂತು. ಅರಮನೆಯ ಅಂತಃಪುರದ ಹೆಂಗಸರಿಗೆ ಪ್ರತೀ ತಿಂಗಳೂ ಕೊಡುವ ಮಾಶಾಸನದ ಮೊತ್ತವು ತಮಗೆ ತಲಪಿಲ್ಲವೆಂದು ಮಹಿಳೆಯರಿಂದ ದೂರು ಬಂತು. ವಿಚಾರಿಸಿದಾಗ ಅವರ ಮಾಶಾಸನಗಳನ್ನು ಸರಿಯಾದ ಸಮಯದಲ್ಲಿ ತಲಪಿಸಿದ್ದೆನೆಂದು ಕಾಮಿಲ್ ಖಾನ್ ಹೇಳಿದ. ಆದರೆ ಕಾಮಿಲ್ ಖಾನ್ ಖಜಾನೆಯ ಚಿನ್ನ ಬೆಳ್ಳಿಗಳನ್ನು ತೆಗೆದುಕೊಂಡು ಅಂತಃಪುರದ ಒಳಗೆ ಹೋದದ್ದನ್ನು ದಸ್ತೂರನೆಂಬ ಹೆಸರಿನ ಒಬ್ಬ ಹಬ್ಶಿ ಗುಲಾಮನೊಬ್ಬ ಕಂಡಿದ್ದ. ಇದನ್ನು ಕಂಡು, ಇವನೇಕೆ ಹೀಗೆ ವರ್ತಿಸುತ್ತಿದ್ದಾನೆಂದು ಗಾಬರಿಪಟ್ಟುಕೊಂಡ. ಗುಲಾಮ ಈ ಬಗ್ಗೆ ದೂರು ನೀಡಿದಾಗ ಕಾಮಿಲ್ ಖಾನನಿಂದ ವಶಪಡಿಸಿಕೊಳ್ಳಲಾಯಿತು. ಇದರ ನಂತರ ಅಂತಃಪುರದ ಸ್ತ್ರೀಯರ ಪಾಲಿನ ಮಾಶಾಸನದ ಮೊಬಲಗು ಅವರಿಗೆ ತಲಪಿಸಲಾಯಿತು.

ಈ ಘಟನೆಯ ನಂತರ ಒಂದು ಇಪ್ಪತ್ತು ಮಂದಿ ನೌಕರರ ಗುಂಪನ್ನು ನೇಮಕಮಾಡಲಾಗಿ ಅಂತಃಪುರದ ಮಹಿಳೆಯರಿಗೆ ನೀಡುವ ಸಂಬಳವನ್ನು ಬಟವಾಡೆ ಮಾಡುವ ಜವಾಬ್ದಾರಿ ವಹಿಸಿಕೊಡಲಾಯಿತು. ಬಾದಶಾಹರ ಕುಟುಂಬಕ್ಕೆ, ಜನಾನಾಕ್ಕೆ ಸಂಬಂಧಿಸಿದ ಮಾಸಿಕ ಪಾವತಿಯ ಹಣವನ್ನು ಸ್ವತಃ ಬಾದಶಾಹರೇ ವಹಿಸಿಕೊಂಡರು. ಹೀಗಿರುತ್ತ ಒಂದು ರಾತ್ರಿ ಜಹಾಂಪನಾರ ಪತ್ನಿ ಚಾಂದ್ ಬೀಬಿ ತನ್ನ ಮಹಲಿನಿಂದ ಹೊರಬಂದಾಗ ಅವರ ಸೇವಕನೊಬ್ಬ ನೋಡಿದ. ಮಹಲಿನ ಗೋಡೆಯನ್ನು ಹಾರಿ ಬಂದುದರಿಂದ ಅವಳ ದೇಹದಲ್ಲಿ ಗಾಯವಾಗಿತ್ತು. 'ನಾನು ನಿಮ್ಮನ್ನು ಹಳೆಯ ಮಹಲಿಗೆ ತಲಪಿಸಲು ಸಹಾಯ ಮಾಡುತ್ತೇನೆ' ಎಂದು ಸೇವಕ ಹೇಳಿದ. 'ಬೇಡ, ಈ ಮಹಲು ನನ್ನ ಗಂಡನದ್ದು, ನಾನು ಬಾದಶಾಹರ ಪತ್ನಿ. ನನಗೆ ಈ ಚಿಕ್ಕ ಮಹಲು ಸಾಕು. ಆ ದೊಡ್ಡ ಅಂತಃಪುರದ ಮಹಲು ಯಾರಿಗೆ ಬೇಕೋ ಅವರಿಗೆ ನೀಡಲಿ' ಎಂದಳು. ಕಾಮಿಲ್ ಖಾನನಿಗೆ ಈ ಘಟನೆಯ ಬಗ್ಗೆ ತಿಳಿದಾಗ

ಅಚ್ಚರಿಯಾಯಿತು. ಇದನ್ನು ಕೇಂದ್ರವಾಗಿಟ್ಟುಕೊಂಡು ಕೆಟ್ಟ ಮಾತುಗಳನ್ನು ಆಡತೊಡಗಿದ. ಜನರ ಮಧ್ಯೆ ಹೇಳುತ್ತಾನೆ, 'ನನ್ನ ಹತ್ತಿರದ ಸಹೋದರ ಸಂಬಂಧಿ ಮುರ್ತಜಾ ನಿಜಾಂ ಶಾಹ ಆಗಿದ್ದಾನೆ. ಅವನಿಗೆ ಈ ಮಹಲನ್ನು ಯಾಕೆ ಕೊಡುವುದಿಲ್ಲ?' ಎಂದು ನಿಜಾಂ ಶಾಹನ ಮುಖಕ್ಕೆ ಚಪ್ಪಲಿ ಎಸೆದ. ಇದರಿಂದ ನಿಜಾಂ ಶಾಹನ ಹಲ್ಲು ಉದುರಿಬಿತ್ತು. ಇವನ ಈ ರೀತಿಯ ಉದ್ಧಟತನದಿಂದ ಆಸ್ಥಾನದ ಎಲ್ಲ ಸದಸ್ಯರು, ಪರಿವಾರದವರು ವಿರೋಧಿಸತೊಡಗಿ, ಅವನನ್ನು ಹೊರಹಾಕುವ ಬಗ್ಗೆ ಮಾತಾಡತೊಡಗಿದರು.

ಈ ಮಧ್ಯೆ ಚಾಂದ್ ಬೀಬಿ ತನ್ನ ಸಾಮಾನು, ಬಟ್ಟೆಬರೆಯನ್ನು ಸಂದೂಕಗಳನ್ನು ಕಟ್ಟಿಕೊಂಡು ತೀರಿಕೊಂಡ ಕಿಶ್ವರ್ ಖಾನನ ಮಗ ಕಿಶ್ವರ್ ಖಾನನ ಮನೆಗೆ ಕಳುಹಿಸಿಕೊಟ್ಟಳು. ಈ ಕಿಶ್ವರ್ ಖಾನ ಬಾದಶಾಹರ ಆಸ್ಥಾನದಲ್ಲಿ ಆಮಿಲನಾಗಿ ಕೆಲಸಮಾಡುತ್ತಿದ್ದ. ತನ್ನ ಬಗ್ಗೆ ಕೆಟ್ಟದಾಗಿ ಖಾಮಿಲ್ ಖಾನ್ ಪ್ರಚಾರ ಮಾಡಿದ್ದರಿಂದ ಚಾಂದ್ ಬೀಬಿ ನೊಂದುಕೊಂಡು, 'ಈ ಮಾನಗೆಟ್ಟವನನ್ನು ದೂರಮಾಡಿರಿ, ಯಾಕೆಂದರೆ ತನ್ನ ಸ್ಥಾನದ ದುರುಪಯೋಗ ಮಾಡುತ್ತಿದ್ದಾನೆ, ನನ್ನ ಮಕ್ಕಳ ಆಳ್ವಿಕೆಯಲ್ಲಿ ಅಡೆತಡೆಯೊಡ್ಡಿ ಪಿತೂರಿ ಮಾಡುತ್ತಿದ್ದಾನೆ. ನಾನಂತೂ ನನ್ನ ಪಾಡಿಗೆ ಇದ್ದೇನೆ. ಇವನನ್ನು ಹಾಗೆಯೇ ಬಿಟ್ಟು ಬಿಡಬೇಡಿ' ಎಂದು ಹೇಳಿದಳು. ಚಾಂದ್ ಬೀಬಿ ಕಿಶ್ವರ್ ಖಾನನ ಸಹಾಯದಿಂದ ಈ ವಿಷಯದಲ್ಲಿ ಒತ್ತಡ ತಂದಳು.

ಸಭೆಸೇರಿದ ನಂತರ ಕೆಲವು ಶರ್ತಗಳ ಮೇಲೆ ಅವರ ಮಾತುಗಳ ಬಗ್ಗೆ ಕಾರ್ಯೋನ್ಮುಖರಾಗುವ ತೀರ್ಮಾನವಾಯಿತು. ಕಾಮಿಲ್ ಖಾನನಿಗೆ ಈ ಸಂಗತಿ ತಲಪಿದಾಗ ಆತಂಕಿತನಾದ. ನಂತರ ಅವನು ಮೆಲ್ಲಮೆಲ್ಲಗೆ ರಾಜ್ಯಾಡಳಿತದ ಕೆಲಸವನ್ನು ಮತ್ತೆ ತನ್ನ ಹಿಡಿತಕ್ಕೆ ತಂದುಕೊಳ್ಳಲು ಪ್ರಯತ್ನಿಸಿದ. ತನ್ನ ಮಕ್ಕಳನ್ನು ಕೋಟೆಯ ಒಳಗೆ ಕಳುಹಿಸಿಕೊಟ್ಟ.

ಒಮ್ಮೆ ಅವನು ಅರಮನೆಯ ದೀವಾನ ಖಾನ ಕಟ್ಟಡದಲ್ಲಿ ಪುರುಷರಿಗೆ ಪ್ರವೇಶ ನಿಷೇಧಿಸುವ ತೀರ್ಮಾನವನ್ನು ಕಾಮಿಲ್ ಖಾನ್ ಏಕಾಯೇಕಿ ಕೈಗೊಂಡ. ಈ ಕಟ್ಟಡದ ವಿಶಾಲ ಕೋಣೆಯಲ್ಲಿ ಸ್ತ್ರೀಯರಿಗೆ ಮಾತ್ರ ಸೇರುವ ಸಭೆ ನಡೆಸುವ ವ್ಯವಸ್ಥೆಯನ್ನು ಮಾಡಿದ. ಅಲ್ಲಿ ಅರಮನೆಯ ಜಹಾಂಪನಾರ ಮನೆಯವರು, ಆಲಂಪನಾರ ತಾಯಿ, ಪತ್ನಿಯರು, ಮಕ್ಕಳು ಜಮಾವಣೆಯಾಗುವಂತೆ ವ್ಯವಸ್ಥೆ ಮಾಡಿದ. ನನಗೆ(ಶಿರಾಜಿಗೆ) ಸಂಬೋಧಿಸಿ, 'ನೀನು ಖಜಾನೆಯಲ್ಲಿ ಇದ್ದು ಬಿಡಬೇಕು' ಎಂದ. ನನ್ನ ಸಂಬಂಧಿಗಳು ಅಲ್ಲಿಗೆ ಬಂದರೆ ಖಜಾನೆಯಿಂದ ಹಣವನ್ನು ಕೊಡುತ್ತಿರಬೇಕು ಎಂದು ಆಜ್ಞಾಪಿಸಿ ಪ್ರತೀ ಕ್ಷಣವೂ ಖಜಾನೆಯ ಮೇಲೆ ಕಣ್ಣಿಟ್ಟುಕೊಂಡಿದ್ದ. ಯಾರಿಗೆ ಹಣ ಕೊಡಲು ಅವನಿಗೆ ಮನಸ್ಸಾಗುತ್ತದೋ ಅವರಿಗೆ

ಖಜಾನೆಯ ಹಣವನ್ನು ಬಟವಾಡೆ ಮಾಡುತ್ತಿದ್ದ. ನನ್ನ ಬಗ್ಗೆ ಬಾಯಿಗೆ ಬಂದಂತೆ ಆಡುತ್ತಿದ್ದ. 'ನಾನೊಬ್ಬ ವಿದ್ವಾಂಸ, ಜ್ಞಾನಿಗಳ ಪಂಗಡಕ್ಕೆ ಸೇರಿದವನಾಗಿದ್ದೇನೆ. ನಾನು ಈ ಜಗತ್ತಿನ ವ್ಯಾಮೋಹಗಳಿಗೆ ಭಯಪಡುವವನಾಗಿದ್ದೇನೆ' ಎಂದು ನಾನು ಅವನಿಗೆ ಹೇಳಿದೆ. ಎಷ್ಟರ ವರೆಗೆ ಪರಿಸ್ಥಿತಿ ಕೆಟ್ಟುಹೋಯಿತೆಂದರೆ ಕಸಗುಡಿಸುವ ಕೆಳದರ್ಜೆಯ ಕೆಲಸಗಾರರೂ 'ನಾವೂ ಸಹಾ ಬಾದಶಾಹರಿಗೆ ಹತ್ತಿರದವರೆಂದು ನಾವೂ ಅವರ ವಾರೀಸುದಾರರು ನಮಗೆ ಹಕ್ಕಿದೆ' ಎಂದು ಕೂಗತೊಡಗಿದರು. ಅನಗತ್ಯ ಮಾತುಗಳು ನನ್ನ ನಾಲ್ಕೂ ದಿಕ್ಕಿನಲ್ಲಿ ಕೇಳಿಬರತೊಡಗಿದವು. ಹೀಗೆ ಪರಿಸ್ಥಿತಿ ಅತ್ಯಂತ ಹದಗೆಟ್ಟಂತೆ ನನಗೆ ಕಂಡುಬಂತು. ನಾನು ಕೂಡ ಈ ಪಿತೂರಿಗೆ ಕಿವಿಗೊಡುವುದನ್ನು ನಿಲ್ಲಿಸಿದೆ. ಇವನ ಕಾರಬಾರು, ಕೆಲಸಗಳ ಬಗ್ಗೆ ವರದಿಯನ್ನು ಬಾದಶಾಹರಿಗೆ ಸಲ್ಲಿಸತೊಡಗಿದೆ. ಬಾದಶಾಹರ ವಿರುದ್ಧ ಬಂಡೇಳುವ ಮಾತುಗಳನ್ನು ಕೂಡ ವರದಿ ಮಾಡಿ ಒಪ್ಪಿಸಿದೆ.

ಎರಡು ಮೂರುದಿನಗಳ ಕಾಲ ತನ್ನ ಮಹಲಿನಲ್ಲಿ ಯಾವುದೇ ಕೆಲಸವಿಲ್ಲದೆ ಕಾಮಿಲ್ ಖಾನ್ ಬಿದ್ದುಕೊಂಡಿದ್ದಾಗ ಬಾದಶಾಹರ ಆಜ್ಞೆ ಅಫ್ಜಲ್ ಖಾನನ ಬಳಿಗೆ ಗುಪ್ತಚರರ ಮೂಲಕ ಕಳುಹಿಸಲಾಯಿತು. ಅಫ್ಜಲ್ ಖಾನ್ ಮೊದಲಿಗೆ ನಯವಾಗಿ ಈ ಕೆಟ್ಟನಡತೆಯನ್ನು ಸುಧಾರಿಸುವ ಅವಕಾಶ ನೀಡಿದ. ಆದರೆ ಇದಕ್ಕೆ ಕಾಮಿಲ್ ಖಾನನು ತಮಾಷೆಯಂತೆ ಹಗುರವಾಗಿಸಿ, ತನ್ನ ದುರ್ಬುದ್ಧಿಯ ಕೆಲಸಗಳನ್ನು ಮುಂದುವರಿಸಿದ. 'ನೀನು ನಿನ್ನ ಜನರು, ಸಂಬಂಧಿಕರನ್ನು ಕೋಟೆಯ ಹೊರಗೆ ಕಳುಹಿಸದಿದ್ದರೆ, ನಾವು ನಿನ್ನನ್ನು ಓಡಿಸುವೆವು' ಎಂದು ಅಫ್ಜಲ್ ಖಾನ್, ಕಾಮಿಲ್ ಖಾನನಿಗೆ ಹೇಳಿದ. ಒಮ್ಮೆ ಅವನು ಮತಿಯಿಲ್ಲದವನಂತೆ ಬಿದ್ದಿದ್ದಾಗ ಬಂಧಿಸಲಾಯಿತು. ಅವನು ವಿರೋಧವನ್ನು ವ್ಯಕ್ತಪಡಿಸದೆ, ಸುಮ್ಮನೆ ತನ್ನನ್ನು ಅವರಿಗೆ ಒಪ್ಪಿಸಿಕೊಂಡ. ಆಲಂಪನಾರನ್ನು ಕರೆಸಿ ದರ್ಬಾರಿನ ಸಭೆ ಸೇರಿಸಿದಾಗ ಹೊಸತಾಗಿ ದೃಶ್ಯವನ್ನು ನೋಡುತ್ತಿರುವಂತೆ ಕಾಮಿಲ್ ಖಾನ್ ಆಸ್ಥಾನದ ಗೋಡೆ, ಸೂರುಗಳನ್ನು ನೋಡುತ್ತಿದ್ದ.

ನಾನು ಈ ಘಟನೆಯಲ್ಲಿ ಮೊದಲಿನಿಂದ ಕೊನೆಯ ತನಕವೂ ಹಾಜರಾಗಿದ್ದೆ. ಕಾಮಿಲ್ ಖಾನನ ಬಳಿಯೇ ನಿಂತಿದ್ದೆ. ಹೊರಗಿನ ವರ್ತಮಾನ ಮತ್ತು ಆಗುಹೋಗುಗಳ ಬಗ್ಗೆ ಕಣ್ಣಿಡುತ್ತಿದ್ದೆ. ಆಲಂಪನಾರ ವೈರಿಗಳು ಆಗಮಿಸುತ್ತಿರುವುದು ನನಗೆ ಕಂಡುಬಂತು. ಅವರು ಒಬ್ಬೊಬ್ಬರಾಗಿ, ಎರಡೆರಡು ಮಂದಿಯಂತೆ ಒಳಗೆ ಬಂದು ನನ್ನೆದುರು ನಿಂತಿದ್ದರು. ಕಾಮಿಲ್ ಖಾನ ಎಚ್ಚತ್ತು ತನ್ನ ನಾಟಕೀಯ ಸ್ಥಿತಿಯಿಂದ ಹೊರಬಂದು ಆಲಂಪನಾರನ್ನು ಅವರ ಮಹಲಿನೊಳಗೆ ಕಳುಹಿಸುವ ವ್ಯವಸ್ಥೆ ಮಾಡಿ ತಾನು ಉಸ್ತುವಾರಿ ನೋಡುವ ಮಂತ್ರಿಯಂತೆ ಬಾಗಿಲ ಬಳಿಯಲ್ಲಿದ್ದ ಕುರ್ಚಿಯಲ್ಲಿ ಕುಳಿತುಕೊಂಡ. ಇದನ್ನು ಗಮನಿಸಿದ ವೈರಿಗಳ ತಂಡ ಒಂದೇ ಸವನೆ ಮಹಲಿನೊಳಗೆ ನುಗ್ಗಿ ಒಳಗೆ ಬಂತು. ಆಗ ರಹಸ್ಯವಾಗಿ ಅಲ್ಲಿ ಅಡಗಿದ್ದ ಲವೂ ಖಾನ ಎದ್ದು ಬಂದು

ತನ್ನ ತಲ್ವಾರನ್ನು ಹಿರಿದು ಒಬ್ಬ ಸೇವಕ ಮತ್ತು ನೌಕರನನ್ನು ಕೊಂದು ಹಾಕಿದ. ಆಗ ಉಳಿದವರೆಲ್ಲ ಗಾಬರಿಗೊಂಡು ಅಲ್ಲಿಂದ ಓಡತೊಡಗಿದರು. ಈಗ ಕಾಮಿಲ್ ಖಾನ್ ನೋಡುವಾಗ ಊರ ಜನರ ಗುಂಪು ಸೇರಿಬಿಟ್ಟಿತ್ತು. ಗಾಬರಿಗೊಂಡ ಅವನು ಅರಮನೆಯ ಆವರಣದ ಗೋಡೆಯನ್ನು ಸರಸರನೆ ಹತ್ತಿ ಹಾರಿಬಿಟ್ಟ. ಕೋಟೆಯ ಎದುರಿನ ಬಾಗಿಲನ್ನು ತೆರೆದು ಹೋಗಿ ಹಿಂದಿನಿಂದ ಯಾರೂ ಪ್ರವೇಶಿಸದಂತೆ ಹಿಂದಿನ ಬಾಗಿಲನ್ನು ಮುಚ್ಚಿದ ಮತ್ತು ಕೋಟೆಯ ಆವರಣದ ಮೇಲೆ ಹತ್ತಿ ಕಮಾನುಗಳಿಂದ ನುಸುಳಿ ಹಾರಿದ. ಹಾರಿದ ರಭಸಕ್ಕೆ ಅವನ ಕೈಗಳಿಗೆ ಗಾಯವಾಯಿತು. ಅದನ್ನು ಲೆಕ್ಕಿಸದೆ ಕೋಟೆಯ ಕಂದಕದೊಳಗಿನ ಕೆಸರಲ್ಲಿ ಬಿದ್ದು, ನಂತರ ಎದ್ದು ಅಲ್ಲಿಂದ ಓಡತೊಡಗಿದ. ನಗರದ ಮುಖ್ಯ ದ್ವಾರದ ಬಳಿಗೆ ಹೋಗಿ ತಲಪಿದ. ಅವನ ಪರವಾಗಿದ್ದ ಒಬ್ಬ ಹಬ್ಶಿ ಗುಲಾಮ ಅವನನ್ನು ಸಾವರಿಸಿ ಹಿಡಿದುಕೊಂಡು ಅವನ ಮನೆಗೆ ತಲಪಿಸಿದ. ಕಾಮಿಲ್ ಖಾನ್‌ನನ್ನು ಸ್ನಾನಮಾಡಿಸಿ, ಬಟ್ಟೆ ಬದಲಾಯಿಸಿದ. ಇದರ ನಂತರ ಬಾದಶಾಹನ ಮುಂದೆ ಕ್ಷಮಾರ್ಪಣೆ ಬೇಡುವ ಸಲುವಾಗಿ ಮತ್ತು ತನಗೆ ರಕ್ಷಣೆ ನೀಡುವಂತೆ ಪ್ರಾರ್ಥಿಸುವ ಸಲುವಾಗಿ ಅರಮನೆಯ ಕಡೆ ಮತ್ತೆ ಹೋದ.

**ಕಿಶ್ವರ್ ಖಾನ್ ಹಲ್ಲೆ ನಡೆಸಿ ಕಾಮಿಲ್ ಖಾನನ ಕೊಲೆಯಾದ ವಿವರಗಳು:**

ಕಿಶ್ವರ್ ಖಾನ್ ಒಂದು ಸೈನಿಕ ಪಡೆಯನ್ನು ಕರೆದುಕೊಂಡು ಕಾಮಿಲ್ ಖಾನನ ಮನೆಗೆ ಹೋದಾಗ ಅವನು ಅಲ್ಲಿರಲಿಲ್ಲ. ಬಹಳ ಹುಡಕಾಟ ನಡೆಸಿದರೂ ಅವನ ಪತ್ತೆಯಾಗಲಿಲ್ಲ. ನಂತರದಲ್ಲಿ ಕಾಮಿಲ್ ಖಾನ್ ಒಂದು ಸೈನ್ಯವನ್ನು ಕಟ್ಟಿಕೊಂಡು ಅರಮನೆಯ ಕಡೆ ಹೋದನೆಂಬ ವರ್ತಮಾನ ಸಿಕ್ಕಿತು. ಹಾದಿಯಲ್ಲೇ ಕಾಮಿಲ್ ಖಾನ್, ಕಿಶ್ವರ್ ಖಾನನ ಕೈಗಿ ಸಿಕ್ಕಿಬಿಟ್ಟ. ಎರಡೂ ಕಡೆಯ ಸೈನಿಕರ ಮಧ್ಯೆ ಯುದ್ಧ ನಡೆಯಿತು. ಅಲಂಪನಾರ ಸೈನ್ಯ ಸಂಖ್ಯೆಯಲ್ಲಿ, ಶಕ್ತಿಯಲ್ಲಿ ಮೇಲುಗೈ ಪಡೆದಿದ್ದರಿಂದ ಕಾಮಿಲ್ ಖಾನನ ಸೈನಿಕರು ಚೆಲ್ಲಾಪಿಲ್ಲಿಯಾಗಿಬಿಟ್ಟರು. ಕಾಮಿಲ್ ಖಾನ್ ಒಂಟಿಯಾಗಿಬಿಟ್ಟು, ಈ ಯುದ್ಧದ ಮೈದಾನದಿಂದ ಹೊರಗೆ ಹೋಗುವುದು ಕೂಡ ಕಷ್ಟವಾಯಿತು. ಅವನು ಕೈಯಲ್ಲಿ ಖಡ್ಗವನ್ನು ಹಿಡಿದು ನಾಲ್ಕೂ ಕಡೆಗೂ ತಿರುಗಿ ವೇಗವಾಗಿ ಬೀಸುತ್ತಾ ಅಲಂಪನಾರ ಸೈನಿಕರ ಪೈಕಿ ಕೆಲವರನ್ನು ಓಡುವಂತೆ ಮಾಡಿದ್ದ.

ಒಬ್ಬ ಅವನ ಹಿಂದೆಯಿದ್ದ ಯುವ ಸೈನಿಕನು ತನ್ನ ಕೈಯಲ್ಲಿದ್ದ ಈಟಿಯನ್ನು ಗುರಿಯಿಟ್ಟು ಎಸೆದು ಕಾಮಿಲ್ ಖಾನನ್ನು ಇರಿದು ಕುದುರೆಯಿಂದ ಕೆಳಗೆ ಕೆಡವಿದ. ಈ ಯುವಕನನ್ನು 'ಸಿಂಹದ ಪಂಜ' ಎಂಬ ಹೆಸರಲ್ಲಿ ಜನ ಕರೆಯುತ್ತಿದ್ದರು. ಕಾಮಿಲ್ ಖಾನ್ ಬಿದ್ದವನು ಎದ್ದು ತನ್ನ ಖಡ್ಗವನ್ನು ಹಿಡಿದು ಸಿಂಹದ ಪಂಜವೆಂದು ಕರೆಯಲಾದ ಯುವ ಸೈನಿಕನ ಎದೆಯ ಮೇಲೆ ಇರಿದು ಅವನ ದೇಹವನ್ನು

ಛಿದ್ರಗೊಳಿಸಿದ. ಅವನ ತಲೆಯನ್ನು ದೇಹದಿಂದ ಬೇರ್ಪಡಿಸಿದ. ಅವನ ತಲೆಯನ್ನು ಹಿಡಿದುಕೊಂಡು ದರ್ಬಾರಿನ ಹಿರಿಯ ಮಂತ್ರಿಗಳು, ಅಧಿಕಾರಿಗಳ ಮುಂದೆ ಹೋದ. ದರ್ಬಾರಿನಲ್ಲಿ ನಾಲ್ಕೈದು ಮಂದಿ ಕೂತಿದ್ದರು. ಅವರ ಪೈಕಿ ಕಿಶ್ವರ್ ಖಾನ್, ಮುರ್ತಜಾ ಖಾನ್ ಮತ್ತು ಅವನ ಸಹೋದರ ಮೋತಬರ್ ಖಾನ್ ಸೇರಿದ್ದರು. ರಾತ್ರಿ ಹಗಲು ನಾಲ್ಕು ದಿನಗಳ ಕಾಲ ಮಾತುಕತೆಗಳು ನಡೆದವು. ಎಲ್ಲರೂ ತಮಗೆ ಹೊಳೆದಂತೆ ಸಲಹೆ ನೀಡಿದ್ದರು ಮತ್ತು ತಮ್ಮ ಸ್ವಾರ್ಥದ ಮಾತುಗಳಿಗೆ ಮಹತ್ವನೀಡಿದಂತೆ ಕಂಡುಬಂತು. ಅಫ್ಜಲ್ ಖಾನ್ ಈ ವಿಷಯದಿಂದ ತನ್ನನ್ನು ಹೊರಗಿಟ್ಟುಕೊಂಡು, ತಕ್‌ದೀರ್ ಯಾ ಭಾಗ್ಯದ ತೀರ್ಮಾನವೇನು ಎಂಬುದುನ ತಿಳಿದುಕೊಳ್ಳಲು ಪ್ರಯತ್ನಿಸಿದ. ಅಫ್ಜಲ್ ಖಾನ್, ಮುರ್ತಜಾ ಖಾನ್ ಮತ್ತು ಷಾ ಕಾಸಿಂರ ಮಧ್ಯೆ ಆಡಳಿತಾತ್ಮಕ ವಿಷಯಗಳಲ್ಲಿ ತಿಕ್ಕಾಟಗಳು ನಡೆಯುತ್ತಿದ್ದವು. ಒಂದುದಿನ ಕಿಶ್ವರ್ ಖಾನ್ ಅಫ್ಜಲ್ ಖಾನನ ಬಳಿ ಹೋಗಿ 'ನನಗೆ ನಿಮ್ಮ ಜೊತೆ ಕೆಲಸ ಮಾಡಲು ಬಹಳ ತೊಂದರೆಯಾಗುತ್ತಿದೆ. ಯಾವ ರಾತ್ರಿಯ ಕ್ಷಣದಲ್ಲಿ ನನ್ನ ಮೇಲೆ ದಾಳಿ ನಡೆಯಲಿದೆಯೋ ಎಂದು ನನಗೆ ಯಾವಾಗಲೂ ಭಯ ಆವರಿಸಿರುತ್ತದೆ. ನನ್ನಮೇಲೆ ಕರುಣೆತೋರಿ ನನಗೆ ಬಿಡುಗಡೆ ನೀಡಿ' ಎಂದ. ಈ ವಿಷಯದಲ್ಲಿ ಎರಡು ಮೂರು ಗಂಟೆಗಳ ಕಾಲ ಮಾತುಕತೆ ನಡೆಯಿತು. 'ನಮ್ಮ ಮುಂದೆ ಒಂದು ಅಪಾಯವಿರುವುದು ನಿನಗೆ ತಿಳಿದಿದೆ. ನನ್ನ ಮೇಲೆ ಗುರುತರವಾದ ಜವಾಬ್ದಾರಿಯಿದೆ. ನನ್ನನ್ನು ಕ್ಷಮಿಸಿ, ನನ್ನ ಮೇಲೆ ಕರುಣೆತೋರಿಸಿ.

ನಾನು ಇಂದು ರಾತ್ರಿ ಬಹಳವಾಗಿ ಯೋಚಿಸಿ ಹೇಳುತ್ತಿದ್ದೇನೆ. ನನಗೆ ಸಮಯಾವಕಾಶ ನೀಡಿರಿ. ಇದಕ್ಕೆ ಸಮಯ ಬಂದಾಗ ಹೇಳುತ್ತೇನೆ' ಎಂದ. ಕಿಶ್ವರ್ ಖಾನ್ 'ನನ್ನ ಜೀವಕ್ಕೆ ಬೆದರಿಕೆಯಿದೆ. ಆದುದರಿಂದ ನನ್ನ ಮಲಗುವ ಕೋಣೆಯಿಂದ ನಿಮ್ಮ ಕೋಣೆಗೆ ಬಂದಿರುತ್ತೇನೆ. ಈ ಜನ ರಾತ್ರಿ ನನ್ನನ್ನು ಕೊಲ್ಲುವ ಯೋಜನೆಯನ್ನು ಮಾಡಿದ್ದಾರೆ. ಇಂದು ರಾತ್ರಿ ನನ್ನನ್ನು ಕೊಲ್ಲುವ ಯೋಜನೆ ಮಾಡುತ್ತಿರ ಬಹುದು. ತಾವು ಇಂದು ರಾತ್ರಿ ಇಲ್ಲಿಂದ ಬೇರೆಕಡೆ ಹೋದರೆ ಚೆನ್ನಾಗಿರುತ್ತದೆ' ಎಂದು ಹೇಳಿದ. 'ನಾನು ಇಲ್ಲಿಂದ ಹೋದರೆ ರಾಜ್ಯಾಡಳಿತದ ಸಂಬಂಧದಲ್ಲಿ ಕೂಡ ದೂರವಿರಬೇಕಾಗುತ್ತದೆ. ಯಾಕೆಂದರೆ ಯಾವುದೇ ಸಂಕಷ್ಟಗಳು ಉಂಟಾಗಬಾರದು ಎನ್ನುವ ಕಾರಣಕ್ಕೆ' ಎಂದು ಅಫ್ಜಲ್ ಖಾನ್ ಹೇಳಿದ. ಈ ಮಾತನ್ನು ಕೇಳಿ ಸಂತಸಪಟ್ಟುಕೊಂಡ ಕಿಶ್ವರ್ ಖಾನ್ ಅವನಿಗೆ ಹಸ್ತಲಾಘವ ಮಾಡಿ ತನ್ನ ಕೋಣೆಗೆ ತೆರಳಿದ. (ನಾನು, ಶಿರಾಜಿ ಪಕ್ಕದ ಕೋಣೆಯಲ್ಲಿದ್ದುದರಿಂದ ಈ ಮಾತುಗಳನ್ನು ಕೇಳಿಸಿಕೊಂಡಿದ್ದೆ.)

ಮರುದಿನ ಎಲ್ಲರೂ ಅಲ್ಲಿ ಜಮಾಯಿಸಿ ಸಲಹೆ ಚರ್ಚೆಯನ್ನು ನಡೆಸಲು

ತೊಡಗಿದರು. ಈ ಸಭೆಯಲ್ಲಿ ವಿಚಾರ ವಿಮರ್ಶೆ ನಡೆಯಿತು. ಕಿಶ್ವರ್ ಖಾನ್, ಫಾಲಿ ಖಾನನಿಗೆ 'ಬೈಠಕ್ಕಿನಲ್ಲಿ ಏನು ತೀರ್ಮಾನವಾಗಿದೆಯೋ ಅದರ ಮೇಲೆ ನೀವು ನಡೆದು ಕೊಳ್ಳಬೇಕು' ಎಂದ. ಫಾಲಿ ಖಾನ್, ಮುರ್ತಜಾ ಖಾನ್ ತನ್ನ ಸಹೋದರ ಷಾ ಕಾಸಿಂನೊಂದಿಗೆ ಈ ಸಭೆಯಿಂದ ಎದ್ದು ಹೋಗುವಂತೆ ಮಾಡಿ ದೂರದಲ್ಲಿ ಕೋಟೆಯಲ್ಲಿ ಇರಿಸಲಾಯಿತು. ಮೋತಬರ್ ಖಾನ್ ತನ್ನ ಮಕ್ಕಳೊಂದಿಗೆ ನಗರದಿಂದ ಹೊರಹೋದ. ತನ್ನ ನಿಷ್ಠಾವಂತ ಸೇವಕರಲ್ಲಿ ಒಬ್ಬನನ್ನು ಆಗ್ರಾದ ಅಕ್ಬರ್ ಬಾದಶಾಹನ ದರ್ಬಾರಿಗೆ ಕಳುಹಿಸಿ ತನಗೆ ಕೂಡ ರಾಜ್ಯದ ಆಡಳಿತದಲ್ಲಿ ಮುಖ್ಯ ಭೂಮಿಕೆಯಲ್ಲಿ ಕೆಲಸಮಾಡುವ ಅವಕಾಶ ದೊರೆಯಬೇಕೆಂದು ಸಂದೇಶ ಕಳುಹಿಸಿದ. ಆದರೆ ಆತ ಈ ಸಂದೇಶ ಕಳುಹಿಸಿದ ಕೆಲವೇ ದಿನಗಳಲ್ಲಿ ತೀರಿಕೊಂಡ.

ಕಿಶ್ವರ್ ಖಾನ್ ಸಭೆಯನ್ನು ಕೊನೆಗೊಳಿಸಿ ಅಫ್ಜಲ್ ಖಾನನನ್ನು ದೂರವಿರಿಸಿದ್ದಕ್ಕೆ ಕರೆದು ಕ್ಷಮೆ ಕೇಳಿದ. ಎಲ್ಲ ಗುಲ್ಲು ಗಲಭೆಗಳ ನಂತರ ಅಲಂಪನಾರನ್ನು ತನ್ನ ತಾಯಿಯ ಜೊತೆಗೆ ಮಕ್ಕಾ ಯಾತ್ರೆಗೆ ಕಳುಹಿಸಲಾಯಿತು. ಶಾಫತ್ತುಲ್ಲಾನನ್ನು ಕೋಟೆಯಲ್ಲಿ ಬಂಧಿಸಲಾಯಿತು. ಅಫ್ಜಲ್ ಖಾನ ನಿನ್ನನ್ನು ಮುಂದೆ ಕೊಂದುಹಾಕಲಿದ್ದಾನೆ. ನನಗೆ ನೀಡಲಾದ ಖಜಾನೆಯ ಲೆಕ್ಕಾಚಾರದ ಜವಾಬ್ದಾರಿಯನ್ನು ಬೇರೆಯವರಿಗೆ ವಹಿಸಿಕೊಟ್ಟೆ. ಇಸ್ಮಾಯಿಲ್ ಆದಿಲ್ ಖಾನನ ಸಹೋದರ ಮಿಯಾ ಅಲಿಯ ಮಗ ಹಲವು ವರ್ಷಗಳ ಕಾಲ ಕೋದಾ ದ್ವೀಪದಲ್ಲಿ(ಕೊಡೈಕನಾಲ್?) ಬೆಳೆದು ಯುವಕನಾಗಿದ್ದ. ಅವನು ಸದ್ಯಕ್ಕೆ ಬಿಜಾಪುರಕ್ಕೆ ಬಂದಿದ್ದ. ಅವನನ್ನು ಸಿಂಹಾಸನದಲ್ಲಿ ಕೂರಿಸಲಾಯಿತು. ಮುರ್ತಜಾ ಖಾನನನ್ನು ಮಂತ್ರಿಯನ್ನಾಗಿ ಮಾಡಲಾಯಿತು. ಕಿಶ್ವರ್ ಖಾನ್ ಮತ್ತು ಷಾ ಕಾಸಿಂ ಆಡಳಿತದ ಮುಖ್ಯ ಕೆಲಸವನ್ನು ನೀಡಲಾಯಿತು. ಬಾಕಿ ಉಳಿದವರಿಗೆ ಅವರವರ ಯೋಗ್ಯತೆಗನುಸಾರವಾಗಿ ಜವಾಬ್ದಾರಿಯ ಕೆಲಸಗಳನ್ನು ವಹಿಸಿಕೊಡಲಾಯಿತು. ಜಹಾಂಪನಾ ತನ್ನ ವಾರೀಸುದಾರನನ್ನಾಗಿ ಎರೆಡೆರಡು ಸಲ ನೇಮಕ ಮಾಡಿದ್ದ ಆಲಂಪನಾರಂತಹ ರಾಜಕುಮಾರನನ್ನು ಇನ್ನೊಮ್ಮೆ ಕಾಣಸಿಗುವುದು ದುರ್ಲಭವೆನಿಸುತ್ತದೆ. ಇವರು ಮೂರು ತಿಂಗಳ ಮಗುವಾಗಿದ್ದಾಗಲೇ ಈ ನೇಮಕಾತಿ ನಡೆದಿತ್ತು.

ಕೆಲವುದಿನಗಳ ನಂತರ ನನ್ನನ್ನು (ಈ ಲೇಖಕನನ್ನು)ಕಾಮಿಲ್ ಖಾನನ ಬೆಂಗಾವಲಲ್ಲಿ ಕಳುಹಿಸಲಾಯಿತು. ನಾನು ಅವನ ಚಲನವಲನಗಳ ಬಗ್ಗೆ ಕಣ್ಣಿಡಬೇಕೆಂಬುದು ಅವರ ಉದ್ದೇಶವಾಗಿತ್ತು. ಯಾಕೆಂದರೆ ಅವನು ಯಾವಾಗ ವೈರಿಯಾಗಿ ಬದಲಾಗುತ್ತಾನೆಂಬುದು ತಿಳಿಯಲಾರದು. ಅಫ್ಜಲ್ ಖಾನ್ 'ನನ್ನ ಮನಸ್ಸು ತಳಮಳಗೊಂಡು ಆತಂಕಿತನಾಗಿದ್ದೇನೆ. ನನ್ನ ಆರೋಗ್ಯ ಕೂಡ ಸರಿಯಾಗಿಲ್ಲ, ನಾನು ಚಿಕಿತ್ಸೆಗಾಗಿ ಆರಾಮವನ್ನು ಕೈಗೊಳ್ಳುತ್ತೇನೆ. ನನ್ನ ಆರೋಗ್ಯ ಸುಧಾರಿಸಿದ

ನಂತರ, ನಾನು ಮುಂದೇನು ಮಾಡಬೇಕೆಂಬ ತೀರ್ಮಾನವನ್ನು ತೆಗೆದುಕೊಳ್ಳಲಿದ್ದೇನೆ' ಎಂದ. 'ಈ ಸಮಯ ನಮ್ಮ ಮಧ್ಯೆ ನೀವು ಅಗಲಿರುವುದು ಸಾಧ್ಯವಾಗದು. ನೀವು ನನ್ನನ್ನು ಒಂದು ಲಕ್ಷ ವೈರಿಗಳ ಮುಂದೆ ಒಂಟಿಯಾಗಿ ಬಿಡುವುದು ತರವಲ್ಲ. ನಿಮ್ಮ ಶಿಷ್ಯಂದಿರಲ್ಲಿ ಒಬ್ಬನಾಗಿ ಮತ್ತು ನಿಮ್ಮ ಅತ್ಯಂತ ನಿಕಟವರ್ತಿಯಾಗಿ ನನ್ನನ್ನು ಪ್ರೀತಿಸಿದ್ದೀರಿ. ನೀವೀಗ ನನ್ನನ್ನು ರಾಜ್ಯಾಡಳಿತದ ಜವಾಬ್ದಾರಿಯಿಂದ ಯಾಕೆ ದೂರವಿರಿಸಲಾಗಿದೆ? ನನ್ನನ್ನು ಸೋಮಾರಿಯೆಂದು ಎಣಿಸದಿರಿ. ಯಾಕೆಂದರೆ ನಾನು ಈ ಗುಂಪಿನ ಜನರ ಮೇಲೆ ಭರವಸೆಯನ್ನಿಟ್ಟುಕೊಂಡಿಲ್ಲ' ಎಂದ ಕಿಶ್ವರ್ ಖಾನ್. 'ನಾನು ನಿನ್ನನ್ನು ದೂರಮಾಡಿ ಅಗಲುವುದಿಲ್ಲ' ಎಂದು ಅಫ್ಜಲ್ ಖಾನ್ ಹೇಳಿದ. ತಮ್ಮೊಳಗೆ ಸಮಾಧಾನ ತಂದುಕೊಂಡು ಪರಸ್ಪರ ಬಿಗಿದಪ್ಪಿಕೊಂಡರು. ಮುಂದೆ ಇವರಿಬ್ಬರೂ ಪರಸ್ಪರ ವಿಶ್ವಾಸವಿಟ್ಟುಕೊಂಡು ರಾಜ್ಯಾಡಳಿತದ ಕೆಲಸದಲ್ಲಿ ತೊಡಗಿಕೊಂಡರು. ಕಾಮಿಲ್ ಖಾನನನ್ನು ದೂರವಿಡುವ ಅಭಿಪ್ರಾಯ ಹೊಂದಿದ್ದ ಜನರನ್ನು ಆಡಳಿತದ ಕೆಲಸಗಳಲ್ಲಿ ಸೇರಿಸಿಕೊಂಡು ಕೆಲವರನ್ನು ಅಮೀರರನ್ನಾಗಿಯೂ ನೇಮಕಾತಿ ಮಾಡಲಾಯಿತು.

ಹಂಪೆಯ ಕೆಲವು ಹಿಂದೂ ನಾಯಕರು, ಪಾಳೆಯಗಾರರೊಂದಿಗೆ ನಿಜಾಂ ಶಾಹ ಮತ್ತು ಕುತುಬ್ ಶಾಹ ಸೇರಿಕೊಂಡು ರಾಜ್ಯದ ಗಡಿಪ್ರದೇಶಕ್ಕೆ ದಾಳಿಯಿಡಲಿದ್ದಾರೆನ್ನುವ ವರ್ತಮಾನ ಬಂದು ಎಲ್ಲ ಮಂತ್ರಿಗಳು ಸೈನಿಕ ಸರದಾರರನ್ನು ರಾಜ್ಯದ ರಕ್ಷಣೆಗಾಗಿ ಕರೆಯುವ ತೀರ್ಮಾನ ಕೈಗೊಂಡರು.

**ಅಫ್ಜಲ್ ಖಾನ್ ವೈರಿಗಳ ಮೇಲೆ ದಾಳಿ ನಡೆಸಿ ಯುದ್ಧ ಮಾಡಿದ ವಿವರಗಳು:**

ಅಫ್ಜಲ್ ಖಾನ್ ತನ್ನ ಸೈನ್ಯವನ್ನು ಕರೆದುಕೊಂಡು ಕುತುಬ್ ಶಾಹನ ರಾಜ್ಯದ ಗಡಿಯಲ್ಲಿ ಕೆಲವುದಿನಗಳ ಕಾಲ ಠಿಕಾಣಿ ಹೂಡಿದ. ಅಲಂಪನಾರ ಸಂಪೂರ್ಣ ಸೈನ್ಯ ಅಲ್ಲಿ ಜಮಾವಣೆಯಾಯಿತು. ವೈರಿ ಸೇನೆ ಮುಂದೆ ಬರಲಿದೆಯೆನ್ನುವಾಗ ಅಫ್ಜಲ್ ಖಾನ್ ತನ್ನ ಸೈನ್ಯವನ್ನು ವೈರಿಗಳ ಮುಂದೆ ವೇಗವಾಗಿ ನುಗ್ಗಿದಾಗ ವೈರಿ ಸೈನಿಕರು ಹಿಂತಿರುಗಿ ಓಡತೊಡಗಿದರು. ಅವರ ಯುದ್ಧ ಸಮಾಗ್ರಿಗಳು, ಕುದುರೆ ಆನೆಗಳು, ಶಸ್ತ್ರಾಸ್ತ್ರಗಳು ಆಲಂಪನಾರ ಸೈನ್ಯದ ವಶವಾಯಿತು. ತಮ್ಮ ಒಳಿತು ಇದರಲ್ಲಿದೆ ಎಂದು ತೀರ್ಮಾನಿಸಿ ಅಫ್ಜಲ್ ಖಾನ್ ಕೂಡಲೇ ನಿಜಾಂ ಶಾಹನ ಸೈನ್ಯದ ವಿರುದ್ಧ ದಾಳಿ ನಡೆಸಲು ಕಾರ್ಯಾಚರಣೆ ನಡೆಸಿದ. ನಿಜಾಂ ಶಾಹನ ಸೈನ್ಯದ ಮುಂದೆ ಹೋದಾಗ ಬೆಹರುಖಾದುಲ್ ಮುಲ್ಕ್ ತನ್ನ ಸೈನ್ಯದೊಂದಿಗೆ ತಯಾರಾಗಿ ನಿಂತಿದ್ದ. ಆಲಂಪನಾರ ಸೈನ್ಯದ ಸಂಖ್ಯೆ ಹೆಚ್ಚಾಗಿರುವುದು ಕಂಡಾಗ ಅವನು ಅಧೀರನಾಗಿ ಎದುರಿಸಲಾರದೆ ಓಡಿಹೋದ. ಉಳಿದ ಸೈನಿಕರು ಕೆಲವರು ಸತ್ತು ಹೋದರು, ಹಲವರು ಶರಣಾಗತರಾದರು. ಈ ಯುದ್ಧದಲ್ಲಿ ಬಹಳ ಸಂಖ್ಯೆಯ ಆನೆ ಕುದುರೆಗಳು

ಕೈವಶವಾದವು. ಸನಿಹದಲ್ಲೇ ಇದ್ದ ನಿಜಾಂ ಶಾಹನ ಸೈನಿಕರು ತಮ್ಮ ಕೋಟೆಯೊಳಗೆ ಹೋಗಿ ಅಡಗಿಕೊಂಡರು. ಸಯ್ಯದ್ ಮುರ್ತಜಾನ ಆಶ್ರಯಕ್ಕೆ ಹೋಗಿ ಅವರಲ್ಲಿ ಸೇರಿಕೊಳ್ಳುವುದಕ್ಕೆ ಅಫ್ಜಲ್ ಖಾನ್ ಬಯಸಿದ್ದ. ಆದರೆ ಅವನ ಸೈನಿಕರು ಸರದಾರರು ಈ ನಿರ್ಧಾರಕ್ಕೆ ಸಮ್ಮತಿ ನೀಡಲಿಲ್ಲ. ಕಿಶ್ವರ್ ಖಾನ್ ಈ ವಿಜಯದಿಂದ ಅತ್ಯಂತ ಹೆಮ್ಮೆ ಪಟ್ಟುಕೊಂಡ. ತನ್ನ ಹಳೆಯ ಸಂಗಾತಿಗಳನ್ನು ಕರೆಸಿ ಅವರ ಪ್ರಾಂತ್ಯಗಳತ್ತ ದಂಡೆತ್ತಿ ಹೋಗಲು ತೊಡಗಿದ. ತಾನು ಎಲ್ಲರೀತಿಯಲ್ಲಿ ತಯಾರಾಗಲು ಷಾ ದುರ್ಗದಲ್ಲಿ ಕೆಲವು ದಿನಗಳ ಕಾಲ ತಂಗಿದ. ಉಳಿದ ಕೆಲವು ತನ್ನ ಸರದಾರರನ್ನು ಸೇನಾನಿಗಳನ್ನು ಕರೆಸಿದ. ಎಲ್ಲ ರೀತಿಯಲ್ಲೂ ವಾತಾವರಣ ಸರಿಯಾಗಿದ್ದರೆ ನಾನು ಮುಂದುವರಿಯುತ್ತೇನೆ, ಇಲ್ಲವಾದರೆ ಹಿಂತಿರುಗುತ್ತೇನೆ ಎಂದು ಹೇಳಿದ.

**ಕಿಶ್ವರ್ ಖಾನ್ ವೈರಿಗಳ ಮೇಲೆ ದಾಳಿಯಿಡುವ ಕೆಲವು ಯೋಜನೆಗಳ ವಿಚಾರದ ಸುತ್ತನಡೆದ ವಿವರಗಳು**

ಕಿಶ್ವರ್ ಖಾನ್, ಅಫ್ಜಲ್ ಖಾನನನೊಂದಿಗೆ ಸೈನ್ಯವನ್ನು ರಾಜ್ಯದ ಗಡಿಗೆ ಕಳುಹಿಸುವಾಗ ರಾಜ್ಯದ ವ್ಯವಸ್ಥೆಯನ್ನು ಸುರಕ್ಷಿತವಾಗಿರಿಸಿ ಮುನ್ನಡೆದಿದ್ದ. ಕಾಮಿಲ್ ಖಾನನ ಮನೆಯನ್ನು ಸಂಪೂರ್ಣ ಜಪ್ತಿ ಮಾಡಿ ಸಾಮಾನು, ಸೊತ್ತು, ಸಂಪತ್ತನ್ನು ದೋಚಿದ. ನಾಲ್ಕಾರು ಸರದಾರರು ಆಗ ಮಲೆನಾಡು ಮತ್ತು ಬೆಂಗಳೂರು ಕಡೆಯಲ್ಲಿದ್ದವರನ್ನು ಕರೆದು ಕೊಂಡ. ಮತ್ತೆ ಯುದ್ಧ ತೊಡಗಿತು. ಮುಸ್ತಫಾ ಖಾನ್ ಕೊನೆಯಲ್ಲಿ ಸೋತು ಹೋದ, ಅಲ್ಲಿಂದ ಓಡಿಹೋಗಿ ಹಿಂದೂರಾಜರ ಕೋಟೆಯೊಂದರ ಒಳಗೆ ಹೋಗಿ ಆಶ್ರಯ ಪಡೆಯಲು ಪ್ರಯತ್ನಿಸಿದ. ಸೈನ್ಯವು ಕೋಟೆಯ ಮುಖ್ಯದ್ವಾರದ ಕಡೆ ಬಂದಾಗ ಮುಸ್ತಫಾ ಖಾನನಿಗೆ ಕೋಟೆಯವರು ಆಶ್ರಯ ನೀಡಲು ನಿರಾಕರಿಸಿದರು. ಕೆಲವು ಸೈನಿಕರನ್ನು ಕೋಟೆಯ ಮೇಲೆ ಹತ್ತಿಸಿದರು. ಈ ಮಧ್ಯೆ ಅಲಂಪನಾರ ಸೈನ್ಯ ಅಲ್ಲಿಗೆ ಬಂದು ಸೇರಿಕೊಂಡಿತು.

ಸೈನಿಕರು ಮುಸ್ತಫಾ ಖಾನನನ್ನು ಹಿಡಿದು ಎಳೆದು ತಂದರು. ಮುಸ್ತಫಾ ಖಾನ್ ಅವರ ಹಿಡಿತದಿಂದ ಸಂಪೂರ್ಣ ಹತಾಶನಾದ. ಅವನನ್ನು ಬೆಂಗಳೂರಿನ ಕೋಟೆಯೊಳಗೆ ಬಂಧಿಸಿಡಲಾಯಿತು. ಕಿಶ್ವರ್ ಖಾನ್‌ನಿಗೆ ಈ ವಿಜಯದ ಸುದ್ದಿತಿಳಿದು ಸಂತಸದಿಂದ ಕುಣಿಯುವಂತಾಯಿತು. ಆಲಂಪನಾ ಅವನಿಗೆ ಅದರ ಪ್ರತಿಫಲ ನೀಡುವರು ಎಂಬ ಆಸೆಯಿತ್ತು. ಅವನು ಸ್ವತಃ ಚಾಂದ್ ಬೀಬಿಯ ಸಲಹೆಯನ್ನು ಕೂಡ ಬದಿಗಿರಿಸಿ ಎಲ್ಲ ಕೆಲಸಗಳನ್ನು ಸ್ವತಂತ್ರವಾಗಿ ಮಾಡಬಲ್ಲೆನೆಂಬ ಅಹಂಕಾರ ಅವನಲ್ಲಿ ಮೂಡಿತು. ಚಾಂದ್ ಬೀಬಿ ಸರ್ದಾರರಾಗಿದ್ದ ತನ್ನ ಸ್ವಾಮಿನಿಷ್ಠ ಸೇವಕರನ್ನು ಕರೆದು ಚರ್ಚಿಸಿ ಕಿಶ್ವರ್ ಖಾನನ ಗುಣದಲ್ಲಿ ಬದಲಾವಣೆಯನ್ನು ಪರಿಶೀಲಿಸಿ ಒಂದು ರಾತ್ರಿ ಅವನಿಗೆ ತಿಳಿಯದಂತೆ ಅವನ ಸ್ಥಾನವನ್ನು ಬದಲಾಯಿಸುವ

ತೀರ್ಮಾನವನ್ನು ಕೈಗೊಂಡಳು. ತನ್ನ ಮಾತೃ ಹೃದಯದ ಸಾಂತ್ವನ ಮತ್ತು ರಾಜಕೀಯ ಮುಂದಾಲೋಚನೆಯೊಂದಿಗೆ ಆಲಂಪನಾರನ್ನು ಅರಮನೆಗೆ ಸುರಕ್ಷಿತವಾಗಿ ತಲಪಿಸುವ ವ್ಯವಸ್ಥೆ ಮಾಡಿದಳು. ಇದರೊಂದಿಗೆ ಆರು ವರ್ಷದ ಹುಡುಗ ಸಿಂಹಾಸನವನ್ನು ಹೇಗೆ ಸಂಭಾಳಿಸಿಕೊಂಡು ಹೋಗುತ್ತಿದ್ದನೋ ಎಂದು ಯೋಚಿಸುತ್ತಿದ್ದಳು. ಹಾಗೆಯೇ ತನ್ನ ಹಿರಿತನದ ಅನುಭವವನ್ನು ನೀಡಿ ಅವನಿಗೆ ರಕ್ಷಣೆಯನ್ನು ಚಾಂದ್ ಬೀಬಿ ನೀಡುತ್ತಿದ್ದಳು. ಈ ಸುದ್ದಿ ಕಿಶ್ವರ್ ಖಾನನಿಗೆ ತಲಪಿದಾಗ ಭಯಗೊಂಡ. ಚಾಂದ್ ಬೀಬಿ ಹೊಸತೊಂದು ತೊಂದರೆಯನ್ನು ಹುಟ್ಟುಹಾಕಲು ಕಾರಣವಾಗಬಹುದೆಂಬ ಊಹೆಯಿಂದ ಅವಳನ್ನು ಕಿಶ್ವರ್ ಖಾನ್ ಕುಟಿಲೋಪಾಯದಿಂದ ಮತ್ತು ಅತ್ಯಂತ ಅವಮರ್ಯಾದೆ ಮಾಡುವುದರೊಂದಿಗೆ ನಗರದಿಂದ ಹೊರಹಾಕಿದ. ತಲೆಯ ಮೇಲೆ ದುಪ್ಪಟ್ಟವಿಲ್ಲದೆ, ಸೇವಕಿಯರು ದಾದಿಯರು ವಾಸಿಸುವ ಓಣಿಯ ಮೂಲಕ ಅಳುತ್ತಾ, ಎದೆ ಬಡಿದುಕೊಳ್ಳುತ್ತಾ ರಾಜಮಾತೆಯಾದ ಚಾಂದ್ ಬೀಬಿಯನ್ನು ಅವಮಾನಿಸಿ ಸಾಗುವಂತೆ ಮಾಡಿದ. ಆ ದಿನ ನಗರದಲ್ಲಿ ಈ ಘಟನೆಯನ್ನು ನೋಡಿ ಸಾರ್ವಜನಿಕರಲ್ಲಿ ಎಂತಹ ಗುಲ್ಲು ಗಲಾಟೆ ಎಷ್ಟೊಂದು ಆಗಿತ್ತೆಂದರೆ ಜಹಾಂಪನಾರ ಕೊಲೆಯ ದಿನ ಆದ ರೋಷಗೊಂಡ ಪ್ರಜೆಗಳು ಮಾಡಿದ ಪ್ರತಿಭಟನೆಗಿಂತಲೂ ಮೀರಿದಂತಿತ್ತು. ನಗರದ ಪ್ರಜೆಗಳು, ನಾಗರಿಕರೆಲ್ಲರೂ ಕಿಶ್ವರ್ ಖಾನನ ವಿರುದ್ಧ ಘೋಷಣೆಗಳನ್ನು ಕೂಗಿ ಅವನ ವಿರುದ್ಧ ಸಿಡಿದೆದ್ದರು, ಹಿಡಿ ಶಾಪ ಹಾಕತೊಡಗಿದರು. ಯಾರಿಗೂ ತಿಳಿಯದಂತೆ ಮಧ್ಯರಾತ್ರಿ ಕಳೆದ ನಂತರ ರಹಸ್ಯವಾಗಿ ಚಾಂದ್ ಬೀಬಿಯನ್ನು ಶತ್ತಾನ್ ಕೋಟೆಯೊಳಗೆ ಕರೆದುಕೊಂಡು ಹೋದರು. ಜಹಾಂಪನಾರ ಜನಾನಾ ಅಂತಃಪುರದೊಳಗೆ ಎಷ್ಟು ಸೇವಕಿಯರಿದ್ದರೋ ಅವರೆಲ್ಲರೂ ಮರುದಿನ ಆಲಂಪನಾರ ಸೇವೆಯಲ್ಲಿ ನಿರತರಾಗಲು ತೆರಳಿದರು. ಖಜಾನೆಯಿಂದ ದೊಡ್ಡ ಹರಿವಾಣವನ್ನು ತಂದು ಸಿಂಗರಿಸಿ ಕೆಲವು ಅಮೂಲ್ಯ ಒಡವೆಗಳು, ಸುಂದರ ಪಾತ್ರೆಗಳು ಇತ್ಯಾದಿಯಿಂದ ತುಂಬಿಸಿ ಆಲಂಪನಾರ ತಾಯಿ ಅಲಿಯಾ ಹಜ್ರತ್ ಬರ್ರಾ ಮತ್ತು ಅವರ ಸೇವಕ ಸೇವಕಿಯರ ಮುಂದೆ ಹಾಡುಗಳನ್ನು ಹಾಡುತ್ತ ಇಡಲಾಯಿತು. ಕಿಶ್ವರ್ ಖಾನನ ವತಿಯಿಂದ ಈ ವಸ್ತುಗಳನ್ನು ಕಳುಹಿಸಲಾಗಿದೆ ಎಂಬುದು ತಿಳಿಯುತ್ತಲೇ ರಾಜಮಾತೆ ಅಲಿಯಾ ಹಜ್ರತ್ ಬರ್ರಾ ಸಿಟ್ಟಾದರು. ಆಗ ಅಲಂಪನಾ ಅಲ್ಲಿ ಉಪಸ್ಥಿತರಿದ್ದರು. ಅವರ ತಾಯಿ ಸಿಟ್ಟಾಗಿರುವುದು ಕಂಡು 'ಈ ಸಾಮ್ರಾಜ್ಯ, ಸಿಂಹಾಸನ ನನ್ನದು, ಇಲ್ಲಿರುವ ಎಲ್ಲವೂ ನನಗೆ ಸೇರಿದ್ದು. ಬೇರೆಯವರು ನಮ್ಮ ವ್ಯವಹಾರದಲ್ಲಿ ಮೂಗುತೂರಿಸುವುದಕ್ಕೆ ಅವಕಾಶ ಖಂಡಿತಾ ನೀಡಲಾಗುವುದಿಲ್ಲ' ಎಂಬ ಮಾತುಗಳನ್ನು ಆಡಿದರು. ಇನ್ನೂ ಬಾಲಕನಾಗಿದ್ದ ಆಲಂಪನಾ ಮಧ್ಯವಯಸ್ಸು ದಾಟಿದ ಹಿರಿತನದ ಮತ್ತು ಅನುಭವದ ಮಾತುಗಳನ್ನು ಆಡುವುದು ಕಂಡು ಎಲ್ಲರೂ ತಬ್ಬಿಬ್ಬಾದರು. 'ಅಮ್ಮ, ನೀನ್ಯಾಕೆ ಇಷ್ಟೊಂದು ನೊಂದು ಕೊಂಡಿದ್ದಿಯಾ, ನೀನೇನೂ ಯೋಚಿಸಬೇಡ'

ಎಂದು ಮುಂತಾದ ಅವರ ಮಾತುಗಳು ಚಿನ್ನದ ಅಕ್ಷರಗಳಲ್ಲಿ ಬರೆಯುವಂತಹದ್ದಾಗಿತ್ತು. ಎಲ್ಲರೂ ಅವರಿಗೆ ಶುಭಾಶಯಗಳನ್ನು ಕೋರಿದರು. ಮರುದಿನ ಅಲಿಯಾ ಹಜ್ರತ್ ಅಲಂಪನಾರನ್ನು ಆಸ್ಥಾನದ ದರ್ಬಾರಿಗೆ ತಯಾರು ಮಾಡುತ್ತ 'ನೀನು ದರ್ಬಾರಿನಲ್ಲಿ ಸುಮ್ಮನಿದ್ದು ಆಲಿಸು, ಏನೊಂದೂ ಮಾತಾಡದಿರು' ಎಂದು ಹೇಳಿದರು. ದರ್ಬಾರಿನಲ್ಲಿ ರಾಜಗಾಂಭೀರ್ಯದೊಂದಿಗೆ ಸಿಂಹಾಸನದಲ್ಲಿ ಅಲಂಪನಾ ಕೂತಿರುತ್ತಿದ್ದರು.

ಈ ಮಧ್ಯೆ ಮುಸ್ತಫಾ ಖಾನನನ್ನು ಇಟ್ಟಿದ್ದ ಬೆಂಗಳೂರಿನ ಕೋಟೆಯಲ್ಲಿ ಕೆಲವರ ಸಹಾಯಪಡೆದು ಅಲ್ಲಿ ಪಿತೂರಿ ಮಾಡತೊಡಗಿದ. 'ಎಲ್ಲ ಸೈನಿಕರು, ಸರದಾರರು ನನ್ನ ಕೈಯೊಳಗಿದ್ದಾರೆ' ಎಂದು ಹೇಳುತ್ತಾ ಅಲ್ಲಿನ ರಾಜ್ಯಾಡಳಿತದಲ್ಲಿ ಬಂಡಾಯ ಹುಟ್ಟಿಕೊಳ್ಳುವಂತೆ ಪಿತೂರಿ ನಡೆಸಿದ. ಸ್ವಲ್ಪ ಪಾಲು ಸೈನ್ಯವನ್ನು ಕೂಡ ತನ್ನೆಡೆಗೆ ಸೆಳೆದುಕೊಳ್ಳುವಲ್ಲಿ ಯಶಸ್ವಿಯಾದ. ಕಿಶ್ವರ್ ಖಾನ್ ಈ ಪಿತೂರಿಯನ್ನು ಅರ್ಥಮಾಡಿಕೊಳ್ಳಲು ಸೋತಿದ್ದ. ಒಂದು ಸಭೆಯಲ್ಲಿ ತುಟಿಮೀರಿ 'ನಾನು ಮುಸ್ತಫಾ ಖಾನನ ವಿರುದ್ಧವಿದ್ದೇನೆ' ಎಂದು ಹೇಳಿದ. ಒಬ್ಬ ತನ್ನ ಸಹೋದ್ಯೋಗಿಯನ್ನು ಕಳುಹಿಸಿ ಸಂಧಾನದ ಮಾತುಕತೆ ನಡೆಸಲು ಹೇಳಿದ. ಇನ್ನೊಂದೆಡೆ ಕಿಶ್ವರ್ ಖಾನನ ಅಹಂಕಾರವನ್ನು ಒಡೆಯುವ ಉದ್ದೇಶದಿಂದ ಅಫ್ಜಲ್ ಖಾನ್ ತನ್ನ ಸಂಪೂರ್ಣ ಸೈನಿಕ ಸರದಾರರನ್ನು ಒಟ್ಟುಗೂಡಿಸಿ ಯುದ್ಧಕ್ಕೆ ತಯಾರಿ ನಡೆಸಿದ. ನಿತ್ಯವೂ ಸೈನಿಕರನ್ನು ಹುರಿದುಂಬಿಸಿ ಯುದ್ಧಕ್ಕಾಗಿ ಪ್ರೇರಣೆ ನೀಡುತ್ತಿದ್ದ. ತನ್ನ ಎಲ್ಲ ಹಿರಿಯ, ಹಳೆಯ ಸರದಾರರು, ನೌಕರರು, ಸೇವಕರನ್ನೂ ಒಳಗೊಂಡು ಸಂಪೂರ್ಣ ಜನರನ್ನು ಕಿಶ್ವರ್ ಖಾನನ ಕಡೆ ಕಳುಹಿಸಿದ. ಸ್ವಲ್ಪದಿನಗಳ ನಂತರ ಅವರು ಸಂಕಷ್ಟಕ್ಕೊಳಗಾಗಿ ಅಳುತ್ತ, ಅವನಿಗೆ ಹಿಡಿಶಾಪ ಹಾಕುತ್ತ ಅಫ್ಜಲ್ ಖಾನನ ಕಡೆಗೆ ಹಿಂತಿರುಗಿ ಬಂದರು. ಅವರು ಇಲ್ಲಿ ಬಂದು ತಲಪುತ್ತಲೇ ಅವನು ತನ್ನ ಅಂತಿಮ ದಿನಗಳು ಸಮೀಪಿಸಿದವು ಎಂದು ಗ್ರಹಿಸಿಕೊಂಡ. 'ಯಾರೋ ನಿಕೃಷ್ಟ ಮನುಷ್ಯನೊಬ್ಬ ನನ್ನ ಉನ್ನತ ಪದವಿಯಲ್ಲಿರುವುದು ಮತ್ತು ಇವನ ನಾನು ಇಂತಹ ನಾಚಿಕೆಗೆಟ್ಟ ನಡವಳಿಕೆಯನ್ನು ನೋಡಲಾರೆ. ನಾನು ಈ ರಾಜ್ಯದಲ್ಲಿ ಆಸ್ಥಾನದಲ್ಲಿ ಉಪ್ಪು ತಿಂದು ಬೆಳೆದವನು, ಉತ್ತಮ ಪದವಿಯನ್ನು ಪಡೆದೆ, ಅಮೀರ ಸ್ಥಾನವನ್ನು ಪಡೆದೆ, ಎತ್ತರದ ಗೌರವ ಸ್ಥಾನವನ್ನು ಪಡೆದೆ. ಇಂದು ಈ ಜನ ನನ್ನೊಂದಿಗೆ ಸೇಡು ತೀರಿಸಲು ಸನ್ನದ್ಧರಾಗಿದ್ದಾರೆ' ಎಂದುಕೊಂಡು ಅಫ್ಜಲ್ ಖಾನ ತನ್ನ ಎಲ್ಲ ಮಂತ್ರಿಗಳು, ಸರದಾರರು, ಸೇನಾನಿಗಳು ಸೈನಿಕರನ್ನು ಒಟ್ಟುಗೂಡಿಸಿ ಕಿಶ್ವರ್ ಖಾನನ ವಿರುದ್ಧ ಯುದ್ಧಮಾಡಲು ಪ್ರಯಾಣಿಸಿದ. ಕಮಾಲ್ ಖಾನ್ ಮತ್ತು ಮೊಘಲ್ ಖಾನರನ್ನು ಸೆರೆಹಿಡಿದು ಅಫ್ಜಲ್ ಖಾನ್ ಷಾ ದುರ್ಗದ ಕೋಟೆಯಲ್ಲಿ ಬಂಧಿಸಿದ. ಇಲ್ಲಿ ಇನ್ನೊಂದೆಡೆ ಇಖ್ಲಾಸ್ ಖಾನ್ ಹಬ್ಶಿ, ದೌಲತ್ ಖಾನನೊಂದಿಗೆ ಸೇರಿ ಕಿಶ್ವರ್ ಖಾನನ್ನು ಹೊಡೆದೋಡಿಸುವ ಉದ್ದೇಶದಿಂದ

ಬಿಜಾಪುರಕ್ಕೆ ದಾಳಿನಡೆಸಿದ. ಕಿಶ್ವರ್ ಖಾನನಿಗೆ ಸುದ್ದಿ ತಿಳಿದು ಆತಂಕಗೊಂಡ. ತಾನು ಪಾರಾಗುವ ಹಾದಿಯ ಬಗ್ಗೆ ಯೋಚಿಸತೊಡಗಿದ. ಕಿಶ್ವರ್ ಖಾನನ ಬೆಂಬಲಿಗರಾದ ತುರುಕರು, 'ಮೊಘಲ್ ಖಾನ್ ಖ್ವಾಜಾ ಕಮಾಲರನ್ನು ಬಂಧಿಸಿರುವ ಅಫ್ಜಲ್ ಖಾನನನ್ನು ಸೋಲಿಸಿ ಬಂಧಿಸಿದರೆ ನಿಮ್ಮ ಮಗ ಮತ್ತು ಸಹೋದರನನ್ನು ಬಿಡಿಸಬಹುದೆಂಬ ಒಂದು ಯೋಜನೆಯನ್ನು ಹೂಡಿ' ಎಂದು ಸಲಹೆ ನೀಡುತ್ತ ಹೇಳಿದರು.

ಈ ಸಂದರ್ಭದಲ್ಲಿ ಈ ಯೋಜನೆಗೆ ನನ್ನ ಒಪ್ಪಿಗೆಯನ್ನು ಮತ್ತು ಸಲಹೆಯನ್ನು ನೀಡುವಂತೆ ನನ್ನನ್ನು ಕರೆಸಲು ತೀರ್ಮಾನಿಸಿದರು. 'ನನ್ನ ಸಹೋದರ ಅಫ್ಜಲ್ ಖಾನನು ಬಂಧಿಸಿದ ನಿನ್ನ ಸಹೋದರ ಮತ್ತು ಮಗನನ್ನು ಬಿಡಿಸಲು ಅಷ್ಟು ಸುಲಭವಿಲ್ಲ. ಅವನ ಜೊತೆಯಲ್ಲಿ ದೊಡ್ಡ ಸಂಖ್ಯೆಯ ಸೈನ್ಯವಿದೆ, ಅವನನ್ನು ಪ್ರಜೆಗಳು ಗೌರವಿಸುತ್ತಾರೆ, ಬೆಂಬಲಿಸುತ್ತಿದ್ದಾರೆ. ಅವನನ್ನು ಸೋಲಿಸುವುದು ಸಾಧ್ಯವಾಗುವುದಿಲ್ಲ. ಒಂದು ಮಾರ್ಗವಿದೆಯೆಂದರೆ ನೀನು ಹೇಗಾದರೂ ಮಾಡಿ ಅಫ್ಜಲ್ ಖಾನನ ಮುಂದೆ ನಿಂತು, ಅವನೊಂದಿಗೆ ನೀನು ಮುಂದೆಂದೂ ವೈರಿಗಳೊಂದಿಗೆ ಸೇರಿಕೊಳ್ಳದಿರುವ ವಾಗ್ದಾನವನ್ನು ಮಾಡ ಬೇಕಾಗಿದೆ. ಇದರಿಂದ ಎಲ್ಲರ ಒಳಿತನ್ನು ಹಾರೈಸುವಂತಾಗಬೇಕು. ಇಡೀ ಸಾಮ್ರಾಜ್ಯ ಅವನಲ್ಲಿ ಭರವಸೆ ಇಟ್ಟುಕೊಂಡಿದೆ ಮತ್ತು ಜನರ ಕಲ್ಯಾಣವು ಅವನ ಕೈಯಲ್ಲಿದೆ. ಅವನ ಮೇಲೆಯೇ ಎಲ್ಲರ ಭರವಸೆಯಿದೆ. ನಿಮ್ಮನ್ನು ಬಿಟ್ಟು ಈ ಸಾಮ್ರಾಜ್ಯದಲ್ಲಿ ಯಾರನ್ನೂ ನಾನು ಬಲ್ಲವನಲ್ಲ. ಯಾರಿಗೂ ಅನ್ಯಾಯ ಮಾಡದಿರಿ ಎಂದು ನಾನು ನಿಮ್ಮಿಂದ ಆಶ್ವಾಸನೆಯನ್ನು ಪಡೆಯ ಬಯಸುತ್ತೇನೆ' ಎಂದು ಸಲಹೆ ನೀಡಿದೆ. ಹೀಗೆ ಅವನು ಇವರ ವಿರುದ್ಧ ಸೇಡುತೀರಿಸಿಕೊಳ್ಳುವುದು ಸಾಧ್ಯವಾಗದು ಎಂಬುದನ್ನು ಅರಿತುಕೊಳ್ಳುವಂತೆ ಮಾಡುವ ಮೂಲಕ ಅಲ್ಲಾಹನು ಅವನ ಮರ್ಯಾದೆಯನ್ನು ಉಳಿಸಿದ. ಇದರ ನಂತರ ಎರಡು ಮೂರು ಸಂದೂಕಗಳಲ್ಲಿಟ್ಟಿದ್ದ ಖಾಮಿಲ್ ಖಾನ್, ಮುಸ್ತಫಾ ಖಾನರಿಂದ ಲೂಟಿ ಮಾಡಿ, ಧನ ಸಂಪತ್ತು, ಅಮೂಲ್ಯ ಕಲ್ಲುಗಳು, ಹರಳುಗಳನ್ನು, ಎರಡು ಲಕ್ಷ ಹವನ್ ಬೆಲೆ ಬಾಳುವ ಏಳುನೂರು ಅಮೂಲ್ಯ ಮುತ್ತುಗಳಿಂದ ಮಾಡಿದ ಜಪಮಾಲೆ ಮುಂತಾದ ಸೊತ್ತುಗಳನ್ನು ನಿಜಾಂ ಶಾಹನ ರಾಜ್ಯಕ್ಕೆ ಕಳುಹಿಸಲಾಯಿತು. ಕಿಶ್ವರ್ ಖಾನ್ ಮಂತ್ರಿ(ಪೇಶ್ವೆ)ಯ ಪದವಿಯಲ್ಲಿ ನಾಲ್ಕು ತಿಂಗಳು ಹನ್ನೆರಡು ದಿನಗಳ ಕಾಲ ಇದ್ದ. ಅಂದು ರಮಜಾನ್ ತಿಂಗಳ ಐದನೆಯ ದಿನವಾಗಿತ್ತು.

**ಇಖ್ಲಾಸ್ ಖಾನನ ಆಡಳಿತ ಮತ್ತು ಬಾದಶಾಹರ ಕೋಟೆಯ ಕೆಲಸ ಮಾಡುವ ನೌಕರರ ಅದಲು ಬದಲು ಮಾಡಿದ ವಿವರಗಳು:**

ಇಖ್ಲಾಸ್ ಖಾನ್ ನಗರಕ್ಕೆ ಬಂದು ಅಲಂಪನಾರ ಕೃಪೆಯಿಂದ ಉನ್ನತ ಹುದ್ದೆಗಳನ್ನು

ಅಲಂಕರಿಸುತ್ತ ಬೆಳೆದ. ಒಂದು ದಿನ 'ನಿಮ್ಮ ಅನುಮತಿಯಿದ್ದರೆ, ಕಿಶ್ವರ್ ಖಾನನ ಬೆಂಬಲಿಗರು ಕೋಟೆಯಲ್ಲಿ ಇದ್ದಲ್ಲಿಗೆ ನಾನು ಹೋಗುತ್ತೇನೆ' ಎಂದು ವಿನಂತಿಮಾಡಿದ. ಇದಕ್ಕೆ ಅಲಂಪನಾರು 'ಮೀರ್ ರಫೀ (ಶಿರಾಜಿ) ಹೇಳುವ ಅಭಿಪ್ರಾಯ ಪ್ರಕಾರ ಇದಕ್ಕೆ ತೀರ್ಮಾನವನ್ನು ಕೈಗೊಳ್ಳುತ್ತೇನೆ' ಎಂದು ಉತ್ತರಿಸಿದರು.

ಶಾಹಿ ಮೊಹರಿನ ತಯಾರಿ ಬಗ್ಗೆ ಮಾತುಕತೆಗಳು ನಡೆದಾಗ ಈ ಲೇಖಕ (ಶಿರಾಜಿ) ಈ ಮೊಹರು ಒಂದು ಪ್ರಶಸ್ತ ಶಿಲೆ(ಅಕೀಕ್)ಯಿಂದ ಮಾಡಿಸಬೇಕೆಂದೂ, ಇದರಲ್ಲಿ 'ಅಸದುಲ್ಲಾಹಿಲ್ ಘಾಲಿಬ್ ಅಲಿ ಇಬ್ನ್ ಅಬೀತಾಲಿಬ್' ಕೂಫಿ ಕೆಲಿಗ್ರಾಫಿಯಲ್ಲಿ(ಅಕ್ಷರ ಕಲೆ) ಬರೆಯಬೇಕೆಂದೂ ಸಲಹೆ ನೀಡಿದೆ. ಅದನ್ನು ತಮ್ಮ ಉಂಗುರದಲ್ಲಿ ಇರಿಸಿ ಅಲಂಪನಾ ಧರಿಸುತ್ತಿದ್ದರು. ಆಡಳಿತ ಪತ್ರಗಳಲ್ಲಿ ಈ ಮೊಹರನ್ನು ಅಚ್ಚೊತ್ತಲಾಗುತ್ತಿತ್ತು. ಉಪಯೋಗಿಸಿದ ನಂತರ ಖಜಾನೆಯಲ್ಲಿರಿಸಲಾಗುತ್ತಿತ್ತು. ಒಂದು ದಿನ ನನಗೆ ಮೊಹರು ತರಲು ಆಲಂಪನಾ ಆಜ್ಞೆ ಮಾಡಿದರು. 'ಜಹಾಂಪನಾರ ರಕ್ತಹೊಂದಿರುವ ಈ ಮೊಹರನ್ನು ನಾನು ನೋಡಬೇಕು, ಇದರಿಂದ ನನ್ನ ಮನಸ್ಸಿಗೆ ಶಾಂತಿ ಸಿಗಬಹುದು' ಎಂದರು. ಈ ಮೊಹರನ್ನು ನೋಡಿ 'ನಾನು ಕಿಶ್ವರ್ ಖಾನನನ್ನು ಗೋಲ್ಕೊಂಡಾದಲ್ಲಿ ಮತ್ತು ಮುಸ್ತಫಾ ಖಾನನ್ನು ಮಾರುಕಟ್ಟೆಯ ಹಾದಿಯಲ್ಲಿ ಎಳೆದು ತರುವ ತನಕ, ಹಂತಕನಿಗೆ ತಕ್ಕ ಶಿಕ್ಷೆಯನ್ನು ನೀಡುವ ತನಕ ಇದೇ ಮೊಹರು ಜಾರಿಯಲ್ಲಿರಲಿ' ಎಂದರು. ಕಿಶ್ವರ್ ಖಾನನ ಗುಲಾಮ ಗೋಲ್ಕೊಂಡಾದಿಂದ ಶಾಹಿ ಮೊಹರನ್ನು ತರುತ್ತಿದ್ದ ಮತ್ತು ಅಂದಿನ ತನಕ ಇದೇ ಶಾಹಿ ಮುದ್ರೆ ಬಳಕೆಯಲ್ಲಿತ್ತು. ಇಕ್ಲಾಸ್ ಖಾನನ ಕೆಲಸವೆಂದರೆ ಪ್ರತೀದಿನ ಬಾದಶಾರ ಮಹಲಿಗೆ ಬಂದು ಆಡಳಿತಾತ್ಮಕ ಕೆಲಸಗಳನ್ನು ನೋಡಿಕೊಳ್ಳುತ್ತಿದ್ದ. ಕೆಲಸಗಾರರು, ನೌಕರರನ್ನು ಕೆಲಸಕ್ಕೆ ಕಳುಹಿಸುವಾಗ ಪತ್ರಗಳಲ್ಲಿ ಶಾಹಿ ಮುದ್ರೆಯನ್ನು ಒತ್ತಲಾಗುತ್ತಿತ್ತು. ಸಂಜೆ ಎಲ್ಲ ಮುಗಿದಾಗ ನನ್ನ ಬಳಿ ಖಜಾನೆಯಲ್ಲಿ ಅಫ್ಜಲ್ ಖಾನನ ಸಾಕ್ಷಿಯಲ್ಲಿ ಪ್ರತಿನಿತ್ಯ ಜಮಾ ಆಗುತ್ತಿತ್ತು.

ಇಖ್ಲಾಸ್ ಖಾನ್ ಓರ್ವ ಅತ್ಯಂತ ದುರ್ಬುದ್ಧಿಯ ಮತ್ತು ಕೆಟ್ಟ ನಡತೆಯ ಕ್ರೂರ ಸ್ವಭಾವದ ಮನುಷ್ಯನಾಗಿದ್ದ. ಇವನು ಕಿಶ್ವರ್ ಖಾನನ ಬೆಂಬಲಿಗರಿಗೆ ತೊಂದರೆಕೊಡಲು ತೊಡಗಿದ. ಅವರ ಪೈಕಿ ಒಬ್ಬ ಆಲಂಪನಾರ ಭರವಸೆಯ ಹಬ್ಶಿ ಗುಲಾಮ ಯಾಕೂತ್ ಕೂಡ ಇದ್ದ. ಅವನನ್ನು ಕೊಂದು ದೇಹವನ್ನು ತುಂಡು ತುಂಡು ಮಾಡಿ ಕೋಟೆಯ ಒಂದು ಬಾಗಿಲ ಬಳಿ ಎಸೆದುಬಿಟ್ಟ. ಕಿಶ್ವರ್ ಖಾನನ ಸರ್ದಾರರಾಗಿದ್ದ ಜ್ಯೋತಿರ್ ರಾವ್ ಮತ್ತು ಕೃಷಿಕರು ಅವರ ಹೆಂಡತಿ ಮಕ್ಕಳು, ಸೇವಕ ಸೇವಕಿಯರು ಎಲ್ಲರನ್ನೂ ಕರೆದು ಒಂದು ಸಭೆಯಲ್ಲಿ 'ಕಿಶ್ವರ್ ಖಾನನ ಸಂತಾನವನ್ನು ಬಿಟ್ಟುಬಿಡಿ' ಎಂದ. ಯಾಕೆಂದರೆ ಕಿಶ್ವರ್ ಖಾನ್ ತನ್ನ ಸೇವಕಿಯರನ್ನು ಅವನ ಆಪ್ತರಿಗೆ, ಅತಿಥಿಗಳಿಗೆ ಒಪ್ಪಿಸುತ್ತಿದ್ದ. ಇದನ್ನು ತಾನು ಪುಣ್ಯದ ಕೆಲಸ

ಮಾಡುತ್ತಿದ್ದೇನೆಂದು ಅವನು ಪರಿಗಣಿಸಿದ್ದ. ಷರೀಯತ್ ನಂತೆ ನಿಕಾಹ ಮಾಡಿಕೊಡುತ್ತಿದ್ದ. ಇದರಿಂದಾಗಿ ಜಗತ್ತಿನಾದ್ಯಂತ ಕೆಟ್ಟ ಹೆಸರು ಪಡೆದ. ಜನರು ಅವನನ್ನು ಕೆಟ್ಟ ನಡತೆಯವನೆಂದು ತೀರ್ಮಾನಿಸಿದ್ದರು. ಹಿರಿಯ ಕಿಶ್ವರ್ ಖಾನನ ಪತ್ನಿ ಒಳ್ಳೆಯ ನಡತೆಯ, ಗುಣಸಂಪನ್ನೆಯಾಗಿದ್ದಳು. ಮಗ ಕಿಶ್ವರ್ ಖಾನನ ಪತ್ನಿಯರನ್ನು ಕೆಳದರ್ಜೆಯವರೆಂದು ಅವಳು ಪರಿಗಣಿಸುತ್ತಿದ್ದಳು. ಯಾಕೆಂದರೆ ತನ್ನ ಗುಣ ನಡತೆಯಲ್ಲಿ ಮಗ ಕಿಶ್ವರ್ ಖಾನ ಕೆಟ್ಟ ಮತ್ತು ನಡತೆಗೆಟ್ಟ ಗುಣಹೊಂದಿದ್ದ. ಈ ಕಾರಣಕ್ಕಾಗಿ ಅವರ ಬಳಿಹೋಗಲು ಎಲ್ಲರನ್ನೂ ತಡೆಹಿಡಿಯುತ್ತಿದ್ದಳು.

ಈ ವಿಷಯಗಳು ಇಖ್ಲಾಸ್ ಖಾನನಿಗೆ ತಿಳಿದಾಗ, ಅವರನ್ನು ಕರೆದು ಬಯ್ದ. 'ನೀವು ನಿಮ್ಮ ಕೆಲಸಗಾರರನ್ನು ನೀಚರನ್ನಾಗಿ ಪರಿಗಣಿಸುತ್ತಿದ್ದೀರಿ' ಎಂದು ಹೇಳಿದಾಗ ಅವಳು 'ದೇವರು ಮತ್ತು ಪೈಗಂಬರರ ಆಣೆ, ನನ್ನ ಉದ್ದೇಶ ಅದಾಗಿರಲಿಲ್ಲ. 'ಎಲ್ಲರ ಮಾನಮರ್ಯಾದೆಯನ್ನು ಕಾಪಾಡಬೇಕಾದದ್ದು ನಮ್ಮ ಕರ್ತವ್ಯ. ಇಖ್ಲಾಸ್ ಖಾನ ಈ ಎಲ್ಲ ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು ಮಾತಾಡಬೇಕು' ಎಂದಳು. ಇದರ ಬಳಿಕೆ ದೊಡ್ಡ ಕಿಶ್ವರ್ ಖಾನ ಮತ್ತು ಕಿರಿಯ ಕಿಶ್ವರ್ ಖಾನನ ಹಿರಿಯ ಸೇವಕ ಸೇವಕಿಯರಿಗೆ ಸ್ವಾತಂತ್ರ್ಯ ನೀಡಿ ಕಳುಹಿಸಿಕೊಟ್ಟ. ಉಳಿದ ಕೆಲವರನ್ನು ರಾಜಮಾತೆ ಅಲಿಯಾ ಹಜ್ರತ್‌ರ ಸೇವೆಗೆ ಕಳುಹಿಸಿದ. ವಯಸ್ಸಾದವರನ್ನು ತಮ್ಮಿಂದ ಬಿಡುಗಡೆಗೊಳಿಸಿ ಕಳುಹಿಸಿಕೊಟ್ಟ.

ಹಿರಿಯ ಕಿಶ್ವರ್ ಖಾನನ ಮಗ ಮಜ್ಲೆ ಖಾನನನ್ನು ಮಹಿಳೆಯರ ಜೊತೆಗೆ ಕೆಟ್ಟನಡತೆಯಲ್ಲಿ ವ್ಯವಹರಿಸುತ್ತಿದ್ದ ಆರೋಪದೊಂದಿಗೆ ಬಂಧಿಸಲಾಯಿತು. ಈ ನಡುವೆ ಕಿಶ್ವರ್ ಖಾನನಿಗೆ ಬೆಂಗಳೂರಿನ ಕೆಲಸದಲ್ಲಿ ತೊಡಗಬೇಕೆಂದು ಹುಕುಂ ನಾಮಾ ಆಜ್ಞೆ ಬಂತು. ಅಲ್ಲಿನ ಕೆಲಸಕಾರ್ಯಗಳು ಮುಗಿದ ನಂತರ, ಬರ್ನಾಲಾಕ್ಕೆ ಹೋಗಿ ಅಲ್ಲಿನ ಕೆಲಸಕಾರ್ಯಗಳನ್ನು ನೋಡಬೇಕೆಂದು ಆಜ್ಞೆ ಮಾಡಲಾಯಿತು. ಈ ಹುಕುಂ ನಾಮಾವನ್ನು ಇಖ್ಲಾಸ್ ಖಾನ್ ಓದಿದ ನಂತರ ಅವನು ಅಬ್ದುಲ್ ಮೋಮಿನನ್ನು ಈ ಹುಕುಂ ನಾಮಾದೊಂದಿಗೆ ಕಳುಹಿಸಿದ. ಈ ಅಬ್ದುಲ್ ಮೊಮಿನ್ ಯಾರೆಂದರೆ ಹಿಂದೆ ಹಿರಿಯ ಕಿಶ್ವರ್ ಖಾನ ಇವನಿಗೆ 'ಅಮೀನ್ ಖಾನ್' ಬಿರುದು ನೀಡಿದ್ದ. ಇವನು ಈಗಲೂ ಆಸ್ಥಾನದಲ್ಲಿ ಉನ್ನತ ಹುದ್ದೆಯಲ್ಲಿದ್ದ. ಹುಕುಂ ನಾಮಾ ಮುಸ್ತಫಾ ಖಾನನನ್ನು ಹಿಡಿದು ಬೆಳಗಾಂವಿಗೆ ಕಳುಹಿಸ ಬೇಕೆಂದು ಅದರಲ್ಲಿ ನಿರ್ದೇಶಿಸಲಾಗಿತ್ತು. ಷಾ ಅಬುಲ್ ಹಸನ್ ಬನಾಲಾನನ್ನು ಹಿಡಿದು ಇಲ್ಲಿಗೆ ತನ್ನಿ. ಇದರಿಂದ ಮುರ್ತಜಾ ಖಾನ್ ಮತ್ತು ಷಾ ಕಾಸಿಂ ಮತ್ತು ಕಮಿಟಿಯ ಸದಸ್ಯರಿಗೆ ನಾವು ಹೇಳಿದಂತೆ ಮಾಡುತ್ತೇವೆಂಬುದನ್ನು ಮನದಟ್ಟಾಗುವಂತೆ ಮಾಡಬೇಕಾಗಿದೆ. ಮುಂದೆ ಏನು ಮಾಡಬೇಕೆನ್ನುವುದನ್ನು ದೇವರ ನಿರ್ಧಾರಕ್ಕೆ ಒಪ್ಪಿಸಿ ಬಿಡಬೇಕಾಗಿದೆ.

ಅಮಿನ್ ಖಾನ್ ಮುಸ್ತಫಾ ಖಾನನನ್ನು ಹಿಡಿದು ಬಂಧಿಸಿ ಸೈನಿಕರ ಕೇಂದ್ರಕ್ಕೆ ಒಯ್ದಾಗ ಅಲ್ಲಿ ಅವನನ್ನು ಸೆರೆಯಲ್ಲಿಟ್ಟು ಬಾದಶಾಹರ ಮುಂದೆ ನಿಲ್ಲಿಸಲಾಯಿತು. ಸೈನ್ಯದಲ್ಲಿದ್ದ ಖುದಾವಂದ್ ಖಾನ್ ಹಬ್ಶಿಗೆ ಅಮಿನ್ ಖಾನ್ ಮುಸ್ತಫಾ ಖಾನನನ್ನು ಹಿಡಿದಿಟ್ಟಿದ್ದಾನೆಂದು ತಿಳಿದಾಗ ಅಮೀನ್ ಖಾನನನ್ನು ಕೊಂದುಹಾಕಿದ. ಕೂಡಲೇ ಕಿಶ್ವರ್ ಖಾನ್ ರಮಜಾನಿನ ಹನ್ನೆರಡನೇ ದಿನಾಂಕದಂದು ಅಲ್ಲಿಂದ ಓಡಿಹೋದ. ಈ ಎಲ್ಲ ಬೆಳವಣಿಗೆಯನ್ನು ಪರಿಶೀಲಿಸಿದ ಇಖ್ಲಾಸ್ ಖಾನ ಒಂದು ಆಜ್ಞೆಯನ್ನು ಹೊರಡಿಸಿದ. ಇದರಲ್ಲಿ ಅಬುಲ್ ಹಸನ್, ಮುರ್ತಜಾ ಖಾನ್ ಮತ್ತು ಅವರ ಸಹೋದರರನ್ನು ಬಿಡುಗಡೆಗೊಳಿಸಬೇಕೆಂದು ಸೂಚಿಸಿದ್ದ. ಈ ಜನರು ಆಸ್ಥಾನದಲ್ಲಿ ಶಾಂತಿಯಿಂದ ಇರುವಂತಾಗಲಿ ಎನ್ನುವುದು ಇದರ ಉದ್ದೇಶವಾಗಿತ್ತು.

**ನಿಜಾಂ ಶಾಹರ ಸೈನ್ಯದ ಜಮಾವಣೆ ಮತ್ತು ಆಲಂಪನಾರ ಸೈನ್ಯ ಚದುರಿಹೋದ ಘಟನೆಯ ವಿವರಗಳು:**

ನಿಜಾಂ ಷಾಹ ಸೋಲುಂಡ ಬಳಿಕ ಸೈನ್ಯವನ್ನು ಮತ್ತೆ ಒಟ್ಟುಗೂಡಿಸಿಕೊಂಡು ಶಕ್ತಿಶಾಲಿಯಾಗಿ ಆಲಂಪನಾರ ಸೈನ್ಯದ ಮೇಲೆ ಅನಿರೀಕ್ಷಿತವಾಗಿ ದಾಳಿಮಾಡಿದ. ಇದರಿಂದಾಗಿ ತತ್ತರಿಸಿದ ಆಲಂಪನಾರ ಸೈನ್ಯ ಎತ್ತೆಂದರತ್ತ ಚೆಲ್ಲಾಪಿಲ್ಲಿಯಾಗಿ ಓಡತೊಡಗಿತು. ಇದರಲ್ಲಿ ಕೆಲವು ಸೈನಿಕರು ಕಿಶ್ವರ್ ಖಾನನೊಂದಿಗೆ ಸೇರಿಕೊಂಡರು. ಕೆಲವರು ಅಫ್ಜಲ್ ಖಾನರ ಜೊತೆಗೆ ಸೇರಿಕೊಂಡರು. ಆದರೆ ಯಾರು ಕೂಡ ನಿಜಾಂ ಶಾಹನ ಸೈನ್ಯವನ್ನು ಎದುರಿಸಲಾರದೆ ರಾಜಧಾನಿಗೆ ಹಿಂತಿರುಗಿ ಪ್ರಯಾಣಿಸಿದರು. ಈ ಸಮಯದಲ್ಲಿ ಹುಜೂರರ ಖಜಾನೆಯಲ್ಲಿ ನಗದು ಕಮ್ಮಿಯಾಗುತ್ತಿತ್ತು. ಸೈನ್ಯದ ಖರ್ಚು ಹೆಚ್ಚಿತ್ತು. ಇಖ್ಲಾಸ್ ಖಾನನ ಸಲಹೆಯಂತೆ ಅಲ್ಲಿನ ಕೋಟೆಯಲ್ಲಿರುವ ನಗದು ಹಣವನ್ನು ತರುವ ಸಲುವಾಗಿ ನನ್ನನ್ನು(ಲೇಖಕ ಶಿರಾಜಿಯನ್ನು) ಪನಾಲಾಕ್ಕೆ ಕಳುಹಿಸಿದರು. ಅಲ್ಲಿಂದ ಹಿಂತಿರುಗುವಾಗ ಸೈನ್ಯದ ಪಾಳಿಯಲ್ಲಿ ಪರಿಸ್ಥಿತಿ ಬಿಗಡಾಯಿಸಿದ್ದು ಕಂಡುಬಂತು. ಇಲ್ಲಿನ ತನಕ ಯಾವುದೇ ಪೇಶ್ವೆ (ಮಂತ್ರಿ) ಸ್ಥಾನವನ್ನು ನೀಡಿರಲಿಲ್ಲ. ನೌಕರರು ತಮ್ಮ ಕಡೆಯಿಂದ ಒಬ್ಬನನ್ನು ಮಂತ್ರಿಯನ್ನಾಗಿ ಮಾಡಲು ಬಯಸಿದ್ದರು. ಸ್ಥಳೀಯ ದಖ್ಖಣಿಗಳು ತಮ್ಮ ನಡುವಿನ ಒಬ್ಬನನ್ನು ಐನುಲ್ ಮುಲ್ಕ್ ಅಥವಾ ಅಂಗರುಘ್ ಖಾನ್‌ನನ್ನು ನೇಮಕಾತಿ ಮಾಡಲು ಪ್ರಯತ್ನಿಸಿದ್ದರು. ಯಾಕೆಂದರೆ ಇವರು ಬೇರೆಯವರಿಗೆ ಹೋಲಿಸಿದಲ್ಲಿ ಸಮರ್ಥರೆನಿಸಿದ್ದರು. ಅಬುಲ್ ಹಸನ್ ಮತ್ತು ಮುರ್ತಜಾ ಖಾನ್ ಕೂಡ ಈ ಸ್ಥಾನದ ಆಕಾಂಕ್ಷಿಗಳಾಗಿದ್ದರು. ಆದರೆ ಈ ಬಗ್ಗೆ ಯಾವುದೇ ನಿರ್ಣಯಕ್ಕೆ ಬಂದಿರಲಿಲ್ಲ. ಇದರಿಂದಾಗಿ ಅಫ್ಜಲ್ ಖಾನ್ ಈ ವಿಷಯದಲ್ಲಿ ಅಸಹಾಯಕನಾಗಿದ್ದ. ಇವನು ಇತ್ತೀಚೆಗೆ ಎರಡು ಯುದ್ಧಗಳಲ್ಲಿ ವಿಜಯಗಳಿಸಿದ್ದ.

ಇಂತಹ ವಿವಾದಗ್ರಸ್ತ ವಿಷಯದಲ್ಲಿ ದೂರವಾಗಿರುವುದು ಒಳಿತೆಂದು ಅವನು ತೀರ್ಮಾನಿಸಿದ್ದ. ಆದರೆ ಐನುಲ್ ಮುಲ್ಕನ ಪ್ರಭಾವ ಎಲ್ಲ ಅಭ್ಯರ್ಥಿಗಳಿಗಿಂತ ಹೆಚ್ಚಾಗಿತ್ತು. ಅನೇಕ ದರ್ಬಾರಿಗಳು ಅವನ ಮುಂದೆ ಹಿಂದೆ ಓಡಾಡುತ್ತಿದ್ದ. ಅಮೀರ್ ಆಗಿದ್ದರಿಂದ ಅವನು ನಾಲ್ಕು ಗುಲಾಮರನ್ನು ಹಿಡಿದು ಬಂಧಿಸಿದ. ತಾನೇ ಮಂತ್ರಿ ಎಂದು ಪ್ರಕಟಿಸಿದ. ಆದರೆ ಗುಲಾಮರಿಗೆ ಇವನ ಬಗ್ಗೆ ಭಯ ಇದ್ದೇ ಇರುತ್ತಿತ್ತು. ಆಸ್ಥಾನದಲ್ಲಿ ಹೆಚ್ಚುಕಮ್ಮಿ ಒಂದು ಸಾವಿರ ಗುಲಾಮರಿದ್ದರು. ಅವರಲ್ಲಿ ಹಬ್ಶಿ, ಹಿಂದಿ, ತುರ್ಕಿ ಎಲ್ಲ ರೀತಿಯ ಸೇವಕರೂ ಇದ್ದರು. ಇವರೆಲ್ಲರೂ ಖಜಾನೆಯ ಕೆಲಸದಲ್ಲಿ, ಶರಬತ್ ಖಾನಾದಲ್ಲಿ, ಅಡುಗೆಯ ಕೋಣೆಯಲ್ಲಿ, ಕುದುರೆ, ಆನೆಗಳನ್ನು ಸಾಕುವ ಲಾಯಗಳಲ್ಲಿ, ಸೈನ್ಯದಲ್ಲಿ ಕೆಲಸ ಮಾಡಿಕೊಂಡಿದ್ದು ಆರೋಗ್ಯವಂತರೂ ಸದೃಢವಾದ ಮೈಕಟ್ಟಿನವರಾಗಿದ್ದು ಒಗ್ಗಟ್ಟಿನಲ್ಲಿದ್ದರು. ತನಗೆ ಯಾವರೀತಿಯಲ್ಲಾದರೂ ತೊಂದರೆ ಮಾಡಿಯಾರೆಂಬ ಅನುಮಾನದೊಂದಿಗೆ ಇವರೆಲ್ಲರನ್ನೂ ಐನುಲ್ ಮುಲ್ಕ್ ರಾಜ್ಯದ ಆಡಳಿತದ ಹೊರಗಿನ ಕೆಲಸಗಳಲ್ಲಿ ಅಂದರೆ ಸಿಪಾಯಿಗಳಾಗಿ, ಕಾವಲುಗಾರರಾಗಿ ನೇಮಿಸಿದ. ಹೊಸದಾಗಿ ಮೂರು ಸಾವಿರ ಜವಾನರನ್ನು ನೇಮಕಾತಿ ಮಾಡಿದ. ಹಳೆಯ ಸೇವಕರನ್ನು ಅರಮನೆಯಿಂದ ದೂರದ ಹೊರಗಿನ ಕೆಲಸಗಳಿಗೆ ನೇಮಕ ಮಾಡುವುದರೊಂದಿಗೆ ಬಾದಶಾಹರಿಂದ ದೂರವಿರಿಸುವುದು ಅವನ ಉದ್ದೇಶವಾಗಿತ್ತು.

**ನಿಜಾಂ ಶಾಹ ಸೈನ್ಯದೊಂದಿಗೆ ದಾಳಿ ನಡೆಸುವುದು ಮತ್ತು ಐನುಲ್ ಮುಲ್ಕ್ ಹಾಗೂ ಅಂಗುಶ್ ಖಾನ್ ಸೆರೆಯಾದ ವಿವರಗಳು:**

ನಿಜಾಂ ಶಾಹನ ಸೈನ್ಯಕ್ಕೆ ಅಲಂಪನಾರ ದೌರ್ಬಲ್ಯದ ಬಗ್ಗೆ ಮತ್ತು ಒಳಗಿನ ವಿವರಗಳ ಮಾಹಿತಿ ದೊರಕಿತ್ತು. ತನ್ನ ಎಲ್ಲ ಶಕ್ತಿಯೊಂದಿಗೆ ರಾಜ್ಯದ ಹೊರಭಾಗದಲ್ಲಿ ತೈನಾತಿ ಹೂಡಿದ್ದ ಅಲಂಪನಾರ ಸೈನ್ಯದ ಮೇಲೆ ದಾಳಿ ನಡೆಸಿದ. ಕೋಟೆಯ ಒಳಗೆ ತನ್ನ ಕುಟಿಲಕಾರಸ್ಥಾನದ ಮೂಲಕ ಪ್ರವೇಶಿಸಿ ಅತಿಥಿಯಂತೆ ಆಸ್ಥಾನಕ್ಕೆ ಬಂದು ನಿಜಾಂ ಶಾಹ ಆಲಂಪನಾರಿಗೆ ಸಲಾಮ್ ಸಲ್ಲಿಸಿ ಅಲ್ಲೇ ಕೂತುಬಿಟ್ಟ. ಕೋಟೆಯ ಒಳಗೆ ಗುಲ್ಲೆಬ್ಬಿಸತೊಡಗಿದ. ಅಫ್ಜಲ್ ಖಾನನಿಗೆ ಈ ವರ್ತಮಾನ ಸಿಕ್ಕಕೂಡಲೇ ತನ್ನ ಕೆಲವು ಸಹಚರರೊಂದಿಗೆ ಅರಮನೆಯ ಕಡೆಗೆ ತೆರಳಿದ. ಐನುಲ್ ಮಲಿಕ್ ಅಂಗುಶ್ ಖಾನನೊಂದಿಗೆ ಸವಾರಿ ಮಾಡಿಕೊಂಡು ಕೋಟೆಯ ಆವರಣದ ದ್ವಾರದ ಕಡೆ ಹೋದ. ಈ ಮಧ್ಯೆ ಅಫ್ಜಲ್ ಖಾನನ ನಿಷ್ಠಾವಂತ ಬೆಂಬಲಿಗ ಮಕ್ಸೂದ್ ಖಾನ್ ಎಂಬ ತುರ್ಕಿ ಗುಲಾಮ ಬಂದು 'ಐನುಲ್ ಮುಲ್ಕ್ ನನ್ನನ್ನು ತನ್ನ ಬಳಿ ಬಾರೆಂದು ಕರೆದಿದ್ದಾನೆ. ನಿಮ್ಮ ಅಭಿಪ್ರಾಯವೇನು?' ಎಂದು ಕೇಳಿದ.

'ನನ್ನ ಪ್ರಕಾರ ನೀನು ಅಲ್ಲಿಗೆ ಹೋಗದಿರುವುದು ಉತ್ತಮ, ಯಾಕೆಂದರೆ ನನಗೆ ಅವನಿಂದ ಹೆಚ್ಚು ಅಪಾಯಗಳುಂಟಾಗುವ ಸಂದರ್ಭವಿದೆ' ಎಂದು ಅಫ್ಜಲ್ ಖಾನ್

ಹೇಳಿದ. ಹೀಗೆ ಬಿಟ್ಟರೆ ರಾಜ್ಯದ ಆಡಳಿತದಲ್ಲಿ ಅವನ ಹಿಡಿತ ಗಟ್ಟಿಯಾಗುವ ಸಾಧ್ಯತೆ ಇದೆ ಎಂದು ಅಫ್ಜಲ್ ಖಾನ್ ತನ್ನ ಭಯವನ್ನು ವ್ಯಕ್ತ ಪಡಿಸಿದ. ಐನುಲ್ ಮುಲ್ಕ್ ಹಲವು ಗುಲಾಮರನ್ನು ತನ್ನ ಪರವಾಗಿ ಮಾಡಿಕೊಂಡು ತನ್ನ ಸ್ಥಾನವನ್ನು ಗಟ್ಟಿಮಾಡಿಕೊಂಡ. ಇವನ್ನೆಲ್ಲ ನೋಡಿ ಮಕ್ಸೂದ್ ಖಾನ್ ಒಂದು ಆನೆಯ ಮೇಲೆ ಹತ್ತಿ ಕೂತು ಅವನ ಜೊತೆಗಾರರಲ್ಲಿ ಕೆಲವರು ಕುದುರೆಯ ಮೇಲೆ ಸವಾರರಾಗಿ ಕೋಟೆಯ ಅಲ್ಲಾಪೂರ್ ದ್ವಾರದ ಕಡೆ ಹೋದ. ಐನುಲ್ ಮುಲ್ಕ್ ನಗರದ ಆವರಣದಿಂದ ಹೊರಗೆ ಬಂದಿದ್ದ. ಇಖ್ಲಾಸ್ ಖಾನ್, ಹಮೀದ್ ಖಾನ್, ದಿಲಾವರ್ ಖಾನ್ ಮತ್ತು ಸೊಹ್ರಾಬ್ ಖಾನ್ ಅಲ್ಲಾಪುರ್ ಬಾಗಿಲಿನ ಮೂಲಕ ಒಳಗೆ ಹೋದರು. ಐನುಲ್ ಮುಲ್ಕನಿಗೆ ಇದು ತಿಳಿದಾಗ ಇನ್ನೊಂದು ಬಾಗಿಲಿನಿಂದ ಓಡಿಹೋಗುವ ಪ್ರಯತ್ನ ಮಾಡಿದ. ನಂತರ ಅವನು ಮಾರುಕಟ್ಟೆಯ ರಸ್ತೆಯಲ್ಲಿ ಓಡುತ್ತಿರುವಾಗ ಹಿಡಿದು ಆಲಂಪನಾರ ಮುಂದೆ ನಿಲ್ಲಿಸಲಾಯಿತು. ಅಫ್ಜಲ್ ಖಾನನ ಅಭಿಪ್ರಾಯ ಪ್ರಕಾರ ಅವನನ್ನು ದರ್ಬಾರಿನ ಅಧಿಕಾರ ಸ್ಥಾನದಿಂದ ಕಿತ್ತೊಗೆಯಬೇಕೆಂದಾಗಿತ್ತು. ಆಲಂಪನಾ (ಇನ್ನೂ ಬಾಲಕರಾಗಿದ್ದರಿಂದ) ಇವೆಲ್ಲ ರಾಜಕೀಯ ಅರ್ಥವಾಗುತ್ತಿರಲಿಲ್ಲ. ಅಲ್ಲಿದ್ದ ಮಹಲಿನ ಕಾವಲುಗಾರ ಇಮಾಮುಲ್ ಮುಲ್ಕ್ ಮತ್ತು ಕೋಟೆಯ ಚೌಕೀದಾರನಾಗಿದ್ದ ದಸ್ತೂರ್ ಖಾನ್ ಇವರಿಬ್ಬರನ್ನು ಕಟ್ಟಿಹಾಕಿ ಐನುಲ್ ಮುಲ್ಕ್ ಮತ್ತೆ ಪರಾರಿಯಾದ.

**ಅಫ್ಜಲ್ ಖಾನನ ಕೊಲೆ ಮತ್ತು ಲೇಖಕ ಶಿರಾಜಿಯ ಬಂಧನ ಹಾಗೂ ವೈರಿ ಸೈನಿಕರ ದಾಳಿಯ ವಿವರಗಳು:**

ಐನುಲ್ ಮುಲ್ಕ್ ಪರಾರಿಯಾದ ಸುದ್ದಿ ತಿಳಿದಾಗ ಆಲಂಪನಾ ಚಾಂದ್ ಬೀಬಿಯ ಮಹಲಲ್ಲಿ ಇದ್ದರು. ಶಾಹುಲ್ ಹಸನ್, ಮುರ್ತಜಾ ಖಾನ್, ಷಾ ಕಾಸಿಂರನ್ನು ಕರೆದು, ಆಡಳಿತದ ಕೆಲಸ ಕಾರ್ಯಗಳ ಬಗ್ಗೆ ವಿಚಾರಿಸಿದರು. ಇವರೆಲ್ಲರೂ ಅಫ್ಜಲ್ ಖಾನನನ್ನು ಮಂತ್ರಿಯನ್ನಾಗಿ ಮಾಡುವ ಪರವಾಗಿ ಅಭಿಪ್ರಾಯ ವ್ಯಕ್ತಪಡಿಸಿದರು. ಯಾಕೆಂದರೆ ಅವನು ಆಸ್ಥಾನಕ್ಕೆ ಸಂಬಂಧಿಸಿದ ಎಲ್ಲ ಚಿಕ್ಕ ದೊಡ್ಡವರನ್ನು ಅರಿತಿದ್ದ, ಎಲ್ಲ ಸಂಗತಿಗಳನ್ನೂ ತಿಳಿದಿದ್ದ.

ಐದಾರು ದಿನಗಳ ಮೊದಲು ಒಂದು ಘಟನೆ ನಡೆದಿತ್ತು. ಖಾಜಿ ಮುಹಮ್ಮದ್ ಅಮೀನ್ ತಬ್ರೇಜಿ ಒಂದು ರಾತ್ರಿ ಕನಸಿನಲ್ಲಿ ನೋಡುವಾಗ ಅಫ್ಜಲ್ ಖಾನನಿಗೆ ಒಂದು ಉನ್ನತ ಸ್ಥಾನ ಲಭಿಸಿದೆ. ಆಕಾಶದಿಂದ ಓರ್ವ ದೇವದೂತ ಇಳಿದು ಬಂದಿದ್ದ. ಅವನ ಕೈಯಲ್ಲಿ ಒಂದು ಫರ್ಮಾನು ಇತ್ತು. ಅದರಲ್ಲಿ 'ಓ ಕರುಣಾಳುವಾದ ದೇವರೇ ದಯಾಮಯನಾದ ನೀನು ನಿನ್ನ ಭಕ್ತನನ್ನು ಕಾಪಾಡು' ಎಂಬ ವಾಕ್ಯವಿತ್ತು. ಈ ಫರ್ಮಾನನ್ನು ಅವನ ಕೈಗೆ ದೇವದೂತ ನೀಡಿದ್ದನ್ನು ತಬ್ರೇಜಿಯವರು ಕನಸಿನಲ್ಲಿ

ಕಂಡಿದ್ದರು. ಅಫ್ಜಲ್ ಖಾನ್ ಕೂಡ ತನಗೆ ಕಂಡ ಕನಸಿನಲ್ಲಿ ಘಟನೆ ನಡೆದದ್ದು ಹೇಳಿದ. ಕೆಲವು ತುರ್ಕಿಗಳು ಹಾದಿಯಲ್ಲಿ ನಿಂತಿದ್ದರು. ಅವರಲ್ಲಿ ಒಬ್ಬರು ಇಮಾಮರು ನನ್ನ ಪರಿಚಿತರು. ಇಮಾಮ್ ನೌಷಾದ್ ಇವರನ್ನು ಕೇಳುತ್ತಿದ್ದ, ಇವರ ಜೊತೆಯಲ್ಲಿರುವ ಮುಲ್ಲಾ ಸಾಹೇಬರು ಯಾರು? ನೌಷಾದ್ ಹೇಳಿದರು, 'ಇವರು ಇಮಾಮೆ ಜಮಾನಾರಾದ ಮುಲ್ಲಾ ಘಯಾಸುದ್ದೀನ್' ಎಂದು ಪರಿಚಯಿಸಿದ್ದರು.

ನಾನು ಕೂಡ ಒಂದು ಕನಸು ಕಂಡಿದ್ದೆ. ಅದರಲ್ಲಿ ಅಫ್ಜಲ್ ಖಾನನೊಂದಿಗೆ ಜೊತೆಯಾಗಿ ನಡೆಯುತ್ತಿದ್ದೆ, ಮುಂದೆ ಹೋಗಿ ಒಂದು ಆಳವಾದ ಮತ್ತು ಅಗಲವಾದ ಬಾವಿಯ ಬಳಿ ತಲಪಿದ್ದೆವು. ಅಲ್ಲಿ ನಾಲ್ಕೂ ದಿಕ್ಕಿನಲ್ಲಿ ದೊಡ್ಡದೊಡ್ಡ ತೆಂಗಿನ ಮರಗಳು ಬಾವಿಯ ಕಡೆ ಬಾಗಿ ನಿಂತಿದ್ದವು. ಅಫ್ಜಲ್ ಖಾನ್ ಆ ಬಾವಿಗೆ ಹಾರುವ ಪ್ರಯತ್ನ ಮಾಡುತ್ತಿದ್ದ. ಒಂದು ಅಶರೀರವಾಣಿ ಕೇಳಿಬರುತ್ತದೆ, 'ನೀವು ಭಯಪಡದಿರಿ, ಅಲ್ಲಾಹ ಇವನನ್ನು ಕಾಯುತ್ತಾನೆ!'

ಅಫ್ಜಲ್ ಖಾನ್ ಈ ಕನಸನ್ನು ಕಂಡು ಮೂವತ್ತು ವರ್ಷಗಳು ಕಳೆದವು. ನಮ್ಮ ತಾಯಿ ನಮ್ಮ ಆರೈಕೆ ಮಾಡಿ ಮರ್ಯಾದೆಯಿಂದ ಸಾಕಿದರು. ಕಣ್ಣಲ್ಲಿಕಣ್ಣಿಟ್ಟು ನಮ್ಮನ್ನು ಕಾಪಾಡಿದಳು. ಇದರ ನಂತರ  ಭಯಾನಕ ಘಟನೆಗಳು ನಡೆದವು. ಅದು ನನ್ನ ನೆನಪಲ್ಲಿ ಅಚ್ಚಳಿಯದೆ ಉಳಿದಿದೆ. ಆದರೆ ಅವನು ತನ್ನ ಸಮಯವನ್ನು ರಾಜ್ಯದ ರಕ್ಷಣೆಯ ಬಗ್ಗೆಯೇ ಯೋಚಿಸುತ್ತ ಹದಿನೈದು ವರ್ಷಗಳ ಕಾಲ ಅಂದರೆ ತನ್ನ ಎಪ್ಪತ್ತನೆಯ ವರ್ಷದ ವಯಸ್ಸಿನ ತನಕ ಬಿಜಾಪುರದ ರಾಜ್ಯಾಡಳಿತದಲ್ಲಿ ಮಂತ್ರಿ ಪದವಿಯಲ್ಲಿ ಕಳೆದ. ಒಂದು ದಿನ ನಾನು ಅರಮನೆಯ ಅಡುಗೆ ಮನೆಯನ್ನು ನೋಡಿಕೊಳ್ಳುತ್ತಿದ್ದೆ. ನನಗೆ ಅಲ್ಲಿ ಸಿಕ್ಕಿದ ಸುದ್ದಿಯಂತೆ ಅಫ್ಜಲ್ ಖಾನ್‌ನನ್ನು ಕೆಲವು ಬಡಜನರಂತೆ ಕಾಣುವವರು ಹಿಡಿದು ತಮ್ಮ ಅಂಕೆಯೊಳಗೆ ಇರಿಸಿಕೊಂಡರು. ಕೋಟೆಯ ಬುರುಜಿನ ಬಾಗಿಲ ಬಳಿ ಕೂತ ಆಲಂಪನಾರ ಬಳಿಗೆ ಒಬ್ಬ ಮನುಷ್ಯ ಹೋದ.

ಅವನು ನನ್ನನ್ನು ಕೂಡ ಹಿಡಿದುಕೊಂಡ. ನನ್ನನ್ನು ಕಟ್ಟಿಹಾಕಿದ್ದನ್ನು ಕಂಡ ಆಲಂಪನಾ ಗಲಿಬಿಲಿಗೊಂಡು ಥಟ್ಟನೆ ಕೂತ ಆಸನದಿಂದ ಎದ್ದು ನಿಂತರು. ಆ ಸಮಯದಲ್ಲಿ ಅವರ ಬಳಿಯಿದ್ದವರು ಕೂಡ ಈ ದೃಶ್ಯವನ್ನು ನೋಡುತ್ತಿದ್ದರು. ಆಲಂಪನಾ ಸಂಜ್ಞೆಮಾಡಿ ನೀವು ಬಂದೀ ಖಾನೆಯತ್ತ ಹೋಗಿ ಎಂದು ಸೂಚಿಸಿದರು. ಈ ಮಧ್ಯೆ ಆ ಜನರು ಅಫ್ಜಲ್ ಖಾನನನ್ನು ಒಂದು ಕಬ್ಬಿಣದ ಸಂಕೋಲೆಯಿಂದ ಬಂಧಿಸಿದ್ದರು. ಕುತ್ತಿಗೆಯಲ್ಲಿ ಕೂಡ ಸಂಕೋಲೆಯನ್ನು ಸುತ್ತಲಾಗಿ ಕೈಕಾಲುಗಳನ್ನು ಕಬ್ಬಿಣದ ಸಂಕೋಲೆಯಿಂದ ಕಟ್ಟಲಾಗಿತ್ತು. ನಾನು ಅವನನ್ನು ಈ ಪರಿಸ್ಥಿತಿಯಲ್ಲಿ ನೋಡಿದ ದೃಶ್ಯ ಈಗಲೂ ಕಣ್ಣೆದುರು ನಿಂತಂತಿದೆ. ಅವರಲ್ಲಿ ಓರ್ವ ವ್ಯಕ್ತಿ ಅವನನ್ನು

ಕೊಂದು ಹಾಕಿದ. ಮಾರು ಕಟ್ಟೆಯ ಸ್ಥಳದ ಮಧ್ಯೆ ಎಸೆದುಬಿಟ್ಟರು! ಮೊದಲು ಬಾದಶಾಹರ ಆಸ್ಥಾನದಲ್ಲಿ ಕೆಲಸಕ್ಕಿದ್ದ ಮದ್ದಾ ಎಂಬ ಹೆಸರಿನ ದರ್ವೇಶಿ ಮಾರುಕಟ್ಟೆಯ ರಸ್ತೆಯಲ್ಲಿ ನಡೆದು ಬರುತ್ತಿದ್ದವನು ಅಫ್ಜಲ್ ಖಾನನ ಈ ಪರಿಸ್ಥಿತಿಯನ್ನು ಕಂಡು ಹತ್ತಿರದ ಸ್ನಾನಗೃಹದಿಂದ ನೀರು ತಂದು ಅವನನ್ನು ಎಚ್ಚರಿಸಲು ನೀರು ಚುಮುಕಿಸಿದ. ಮಲಿಕ್ ನೇಕ್ ಸೌದಾಗರ್ ತಬ್ರೇಜಿ ಈ ಘಟನೆಯನ್ನು ನೋಡಿ ಓಡುತ್ತಿರುವ ಕೊಲೆಗಾರರನ್ನು ತನ್ನ ಕುದುರೆ ಹತ್ತಿ ಓಡಿಸುತ್ತ ಬೆನ್ನು ಹತ್ತಿದ. ಆದರೆ ಅವರು ಕೈಗೆ ಸಿಗಲಿಲ್ಲ. ಅಫ್ಜಲ್ ಖಾನನ ಶವವು ಒಂದು ದಿನ ಒಂದು ರಾತ್ರಿಯ ಕಾಲ ಹೀಗೆ ಮಾರುಕಟ್ಟೆಯಲ್ಲಿ ಬಿದ್ದಿತ್ತು. ಅವರ ಎಲ್ಲ ಸಂಬಂಧಿಗಳನ್ನು ಬಂಧಿಸಿದರು. ಹಲವು ಸಂಬಂಧಿಗಳು ಭಯದಿಂದ ಅಡಗಿಕೊಂಡರು. ಷಾ ಕಮಾಲುದ್ದೀನ್ ಫತ್ತುಲ್ಲಾರ ಶಿಷ್ಯಂದಿರು ಶವವನ್ನು ಎತ್ತಿತಂದು ಕಫನ್ ದಫನ್ ಅಂತ್ಯಕ್ರಿಯೆ ನಡೆಸಿದರು. ಅಫ್ಜಲ್ ಖಾನನನ್ನು ಕೊಂದದ್ದು ಹಿಜರಿ ವರ್ಷ ೯೮೮ರಲ್ಲಿ.

ಅಫ್ಜಲ್ ಖಾನನನ್ನು ಕೊಲೆಮಾಡಿದ ನಂತರ ನನ್ನ ಮತ್ತು ದಸ್ತೂರ್ ಖಾನನನ್ನು ಕೊಲ್ಲುವ ಆಜ್ಞೆ ಹೊರಟಿತ್ತು. ದಸ್ತೂರ್ ಖಾನನ ಸಂಬಂಧಿಗಳು ದುಃಖಿತರಾಗಿ ಅಳುತ್ತಾ ಮೊರೆಹಾಕುತ್ತಾ ಬಂದರು. ಅಲ್ಲಾಹನ ಕರುಣೆ ನಮ್ಮ ಮೇಲಿದ್ದುದರಿಂದ ನನ್ನ ಮತ್ತು ದಸ್ತೂರ್ ಖಾನನ ಪ್ರಾಣ ಉಳಿಯಿತು.

**ಹಬ್ಶಿ ಗುಲಾಮರು ಒಗ್ಗಟ್ಟಾಗುವುದು, ರಾಜ್ಯಾಡಳಿತದ ಕೆಲಸಗಳನ್ನು ಕೈಗೆತ್ತಿಕೊಳ್ಳುವುದು ಮತ್ತು ಆ ಹೊತ್ತಿನ ಕೆಲವು ಸಂಗತಿಗಳು:**

ಹಬ್ಶಿ ಗುಲಾಮರು ಐನುಲ್ ಮುಲ್ಕನ ಬಂಧನದಿಂದ ಹೊರಬಂದ ಕೂಡಲೇ ಷಾ ಅಬುಲ್ ಹಸನ್‌ನ ಮಡಿಲಿಗೆ ರಾಜ್ಯಾಡಳಿತದ ಜವಾಬ್ದಾರಿ ಬಂದು ಬಿದ್ದಿತು. ಇವನು ವಿರೋಧಿಗಳನ್ನು ಓಡಿಸುವುದಕ್ಕಾಗಿ ದಿನವೂ ಒಂದೊಂದು ಕಾರ್ಯವನ್ನು ಕೈಗೆತ್ತಿಕೊಳ್ಳುತ್ತಿದ್ದ. ದಿನವೂ ವೈರಿಗಳ ಸೈನ್ಯ ಕೋಟೆಯ ದ್ವಾರದಲ್ಲಿ ಬಂದು ನಿಂತಿದ್ದರಿಂದ ಯುದ್ಧ ನಡೆಯುತ್ತಲೇ ಇತ್ತು. ಶೂರ ಮತ್ತು ಧೈರ್ಯವಂತನಾಗಿದ್ದ ಇಖ್ಲಾಸ್ ಖಾನ್, ಸ್ವಲ್ಪ ಮಟ್ಟಿಗೆ ಆಲೋಚಿಸದೆ ಧುಮುಕುವ ಸ್ವಭಾವದವನಾಗಿದ್ದ. ಅವನ ಮೈಮೇಲೆ ಎಂತಹ ಸೇಡಿನ ಭಾವ ಮೂಡಿತೆಂದರೆ ರೊಚ್ಚಿನ ಭರದಲ್ಲಿ ಹಿಂದೆಮುಂದೆ ನೋಡದೆ ವೈರಿಗಳ ಸೈನ್ಯದ ಮಧ್ಯೆ ಹಾರಿದ.

ಅವನ ತಲೆಗೆ ಪೆಟ್ಟು ತಗಲಿತು. ಅವನ ಕೈಗೆ ಪಾರ್ಶ್ವವಾಯು ತಗಲಿದಂತೆ ಸ್ಥಿಮಿತ ತಪ್ಪಿತು. ತನ್ನ ಖಡ್ಗವನ್ನು ಹಿಡಿಯಲಾರದ ಪರಿಸ್ಥಿತಿಯಲ್ಲಿ ಬಿದ್ದ. ಅವನು ಅಲ್ಲಿಂದ ಹಿಂತಿರುಗಿ ನಗರಕ್ಕೆ ಬಂದು ಔಷಧಿ ಉಪಚಾರ ಮಾಡಿಸಲು ತೊಡಗಿದ. ವೈರಿಗಳ ಸೈನ್ಯ ಪ್ರತೀದಿನ ವಿವಿಧರೀತಿಯ ಹಲ್ಲೆ, ದಾಳಿಯ ಬಗ್ಗೆ ಯೋಚಿಸುತ್ತಾ

ಹಲವು ದಿನಗಳು ಹೀಗೆಯೇ ಕಳೆದವು. ವೈರಿಗಳಿಗೆ ಈ ಕೋಟೆಯ ಆವರಣ ಬಹಳ ಶಕ್ತಿಶಾಲಿಯಾಗಿದೆ, ಇದನ್ನು ಬೇಧಿಸಿ ಒಳ ಪ್ರವೇಶಿಸುವುದು ಅಸಾಧ್ಯವೆಂಬುದು ಅನುಭವಕ್ಕೆ ಬಂತು. ಇನ್ನೊಂದೆಡೆ ಕಿಶ್ವರ್ ಖಾನ್ ವೈರಿಗಳೊಂದಿಗೆ ಸೇರಿಕೊಂಡ. ನಿತ್ಯವೂ ಹೆಚ್ಚಿನಪಾಲು ನಷ್ಟ ಇವನಿಂದಾಗಿ ಆಗತೊಡಗಿತು. ಗುಲ್ಲು ಗಲಾಟೆ ಹೆಚ್ಚುತ್ತ ಹೋದಂತೆ ಕಿಶ್ವರ್ ಖಾನ್ ಕೆಲವು ದಿನಗಳ ಕಾಲ ಅಲ್ಲಿಂದ ನಿರಾಶನಾಗಿ ಹೊರಟು ಅಹ್ಮದ್‌ನಗರದಲ್ಲಿ ನಿಂತು ಕಾದ. ಇಲ್ಲಿ ಯಾವ ಕೆಲಸವೂ ಫಲಕಾರಿಯಾಗದ ಪ್ರಯುಕ್ತ ಗೋಲ್ಕೊಂಡದ ಕಡೆ ಪ್ರಯಾಣಿಸಿದ. ಐದಾರು ತಿಂಗಳ ನಂತರ ನೋಡುವಾಗ ಬಹಳಷ್ಟು ಹಬ್ಶಿ ಗುಲಾಮ ಸೈನಿಕರು ಹತರಾಗಿದ್ದರು. ಉಳಿದ ಕೆಲವು ಹಬ್ಶಿ ಗುಲಾಮ ಸೈನಿಕರೊಂದಿಗೆ ಇವನು ರಾಜಿಮಾಡಿಕೊಂಡು ಅವರೊಂದಿಗೆ ಸೇರಿಕೊಂಡ. ತುರುಕ ಗುಲಾಮರನ್ನು ತನ್ನೆಡೆ ಸೆಳೆದುಕೊಂಡು ಪ್ರತೀಯೊಬ್ಬರಿಗೂ ಒಂದೊಂದು ಮನೆಯನ್ನು ಕಟ್ಟಿಸಿಕೊಟ್ಟ. ಈ ಗುಲಾಮರಿಗೆ ಹುಜೂರರ ಕಾಲದಲ್ಲೂ ಈ ಸೌಲಭ್ಯ ದೊರೆತಿರಲಿಲ್ಲ. ಅವನ ಉದ್ದೇಶ ಏನಾಗಿತ್ತೆಂದರೆ ತನ್ನ ಮಂತ್ರಿ ಸ್ಥಾನವನ್ನು ಸ್ಥಿರವಾಗಿ ಕಾಪಾಡಿಕೊಳ್ಳುವುದಾಗಿತ್ತು. ನಂತರದಲ್ಲಿ ಇವನ ಉದ್ದೇಶ ಯಾವ ಹಬ್ಶಿಗಳಿಗೆ ತಿಳಿಯುತ್ತದೋ ಅವರನ್ನು ಹಿಡಿದು ಕೋಟೆಯ ಒಳಗೆ ಕಳಿಸಿಬಿಡುತ್ತಿದ್ದ. ಸ್ವತಃ ತಾನು ಪರಿಸ್ಥಿತಿಯನ್ನು ಹಿಡಿತದಲ್ಲಿಟ್ಟುಕೊಂಡಿದ್ದೇನೆಂದು ಅಂದುಕೊಂಡಿದ್ದ. ಕೆಲವುದಿನಗಳ ಕಾಲ ಹೀಗೆಯೇ ಕೆಲಸ ಮುಂದುವರಿಯಿತು. ಇಖ್ಲಾಸ್ ಖಾನನಿಗೆ 'ನೀನು ಯಾವುದಾದರೊಂದು ಬಣಕ್ಕೆ ಸೇರುವ ಆಯ್ಕೆ ಮಾಡಿಕೋ' ಎಂದು ಹೇಳಿದ. ಸ್ವಾಮಿನಿಷ್ಠನಾಗಿದ್ದ ದಿಲಾವರ್ ಖಾನ್ ಶಾಹಿ ಫರ್ಮಾನುಗಳನ್ನು ದಾಖಲಾತಿ ಮಾಡುವವನಾಗಿದ್ದ. ಇವನು ಅತ್ಯಂತ ಜಾಣನೂ ತಿಳಿದವನೂ ಆಗಿದ್ದ. ಹಾಗೆಯೇ ಆಲಂಪನಾರ ಉಸ್ತಾದ್ ಗುರುವೂ, ಮುಅಲ್ಲಿನ್ ಮತ್ತು ಫಕೀರತನದಲ್ಲಿ ಬದುಕುತ್ತಿದ್ದ ಸ್ವಾಮಿನಿಷ್ಠನಾಗಿದ್ದ ಮೀರ್ ಅಬ್ದುಲ್ ಫತ್ತಾಹ್ ಹುಕುಮ್ ನಾಮಾ ಬರಹಗಾರನಾಗಿಯೂ ಆಸ್ಥಾನದಲ್ಲಿದ್ದ. ಪ್ರಾಮಾಣಿಕನೆಂದು ಪರಿಗಣಿಸಲ್ಪಟ್ಟ ಹಮೀದ್ ಖಾನ್ ಕೂಡ ಸಲಹೆಗಾರನಾಗಿ ಸೌಮ್ಯ ಸ್ವಭಾವದ ದರ್ಬಾರಿನ ಸದಸ್ಯನಾಗಿದ್ದ. ಈ ಸ್ವಾಮಿನಿಷ್ಠರು ದರ್ಬಾರಿನಲ್ಲಿ ಇಲ್ಲದೇ ಹೋಗುತ್ತಿದ್ದರೆ ಇಖ್ಲಾಸ್ ಖಾನ್ ರಾಜ್ಯದಲ್ಲಿ ಇನ್ನಷ್ಟು ಕೊಲೆ ಸುಲಿಗೆಗಳು ನಡೆಯುವಂತೆ ಮಾಡಿ ರಾಜ್ಯವನ್ನು ಹೋಳು ಮಾಡುತ್ತಿದ್ದ. ಹೆಚ್ಚು ಕಮ್ಮಿ ಎರಡು ವರ್ಷಗಳ ಕಾಲ ಇದೇ ರೀತಿಯಲ್ಲಿ ರಾಜ್ಯಾಡಳಿತ ನಡೆಯುತ್ತಿದ್ದ. ಕುತುಬ್ ಷಾನ ಸಹಾಯ ಕ್ಲಪ್ತ ಸಮಯದಲ್ಲಿ ಆಗಮಿಸಿ ಬೆಂಬಲ ನೀಡಿದ್ದರಿಂದ ಪರಿಸ್ಥಿತಿ ಬದಲಾಗತೊಡಗಿತು. ಐನುಲ್ ಮುಲ್ಕ್ ಮತ್ತು ಅಂಗಝ್ ಖಾನ್‌ನ ಜೊತೆಗೆ ಕರಾರು ಮಾಡಿಕೊಂಡು ಅದರ ಪ್ರಕಾರ ಅವರು ಹಳೆಯ ಸ್ಥಾನದಲ್ಲಿ ನೆಲೆನಿಲ್ಲುವಂತಾಯಿತು. ಉಳಿದ ಅಧಿಕಾರಿಗಳು, ಮಂತ್ರಿಗಳನ್ನು ಕರೆದು ಅವರನ್ನು ಸರಿಯಾದ ಸ್ಥಾನವನ್ನು ನೀಡಲಾಯಿತು. ದಿಲಾವರ್ ಖಾನನನ್ನು ಸೈನಿಕ ಸರದಾರನನ್ನಾಗಿ

ಮಾಡಲಾಯಿತು. ಇಖ್ಲಾಸ್ ಖಾನ್ ಕೇವಲ ಕೆಲವೇ ದಿನಗಳ ಕಾಲ ಆಲಂಪನಾರ ಸೇವೆಯಲ್ಲಿದ್ದ.

ಹೈದರ್ ಖಾನ್ ಅಧಿಕಾರಿಯಾಗಿದ್ದ ಮತ್ತು ದಿಲಾವರ್ ಖಾನನ ಸ್ನೇಹಿತನಾಗಿದ್ದ. ಇವನಿಗೆ ಕೋಟೆ ಮತ್ತು ನಗರದ ರಕ್ಷಣೆಯ ಜವಾಬ್ದಾರಿಯನ್ನು ನೀಡಲಾಯಿತು. ಹೀಗೆ ಅವನು ರಾಜ್ಯಾಡಳಿತದಲ್ಲಿ ತನ್ನನ್ನು ಮತ್ತೆ ತೊಡಗಿಸಿಕೊಂಡ. ಈ ಸಂದರ್ಭದಲ್ಲಿ ದಿಲಾವರ್ ಖಾನ ರಾಜ್ಯದ ಗಡಿಪ್ರದೇಶಕ್ಕೆ ಹೋದ. ದಿಲಾವರ್ ಖಾನನ ಬಳಿಯಿದ್ದ ಶಾಹಿ ಮೊಹರನ್ನು ಇಖ್ಲಾಸ್ ಖಾನನ ಸುಪರ್ದಿಗೆ ನೀಡಿದ್ದ. ದಿಲಾವರ್ ಖಾನ ವೈರಿಗಳ ಸೈನ್ಯ ಜಮಾವಣೆಯಾದಲ್ಲಿದ್ದ ಎರಡು ಗುಡ್ಡ ಪ್ರದೇಶಗಳ ಮಧ್ಯೆ ತನ್ನ ಸೈನ್ಯವನ್ನು ನಿಲ್ಲಿಸಿದ. ವೈರಿ ಸೈನ್ಯ ಒಮ್ಮೆಲೇ ನುಗ್ಗಿ ಬರದಂತೆ ತಡೆಯಲು ರಸ್ತೆಯನ್ನು ದೊಡ್ಡ ಮರದ ದಿಂಬಿನಿಂದ ಅಡ್ಡ ಹಾಕಿದ. ಯುದ್ಧ ಎರಡೂ ಕಡೆಯಿಂದ ಶುರುವಾಯಿತು. ಹೆಚ್ಚುಕಮ್ಮಿ ಆರು ತಿಂಗಳ ಕಾಲ ಅಲ್ಲಿ ಸೈನ್ಯ ಬೀಡುಬಿಟ್ಟಿತ್ತು. ಆಲಂಪನಾರ ಸೈನ್ಯ ವೈರಿಗಳನ್ನು ಸದೆಬಡಿಯತೊಡಗಿತು. ಅವರು ಸೋತು ಸುಣ್ಣವಾಗಿ ಒಂದು ರಾತ್ರಿ ಹಿಂತಿರುಗಬೇಕಾಗಿ ಬಂತು. ಆಲಂಪನಾರ ಸೈನ್ಯ ಅವರ ಬೆಂಬತ್ತಿಹೋಯಿತು. ಅವರು ಕಾಡಿನ ಕಡೆ ಓಡಿಹೋದರು. ಅವರು ತೊರೆದು ಬಿಟ್ಟು ಹೋದ ಬಹಳಷ್ಟು ಸಾಮಾನು ಸಾಮಾಗ್ರಿಗಳು, ಶಸ್ತ್ರಾಸ್ತ್ರಗಳು, ೧೨೦ ಆನೆಗಳು, ಬಹಳಷ್ಟು ಕುದುರೆಗಳು, ಧನಸಂಪತ್ತನ್ನು ಸೈನಿಕರು ವಶಪಡಿಸಿಕೊಂಡರು. ಈ ವಿಜಯದ ಸುದ್ದಿಯನ್ನು ಅಲಂಪನಾರಿಗೆ ತಿಳಿಸಲಾಯಿತು. ವೈರಿಗಳಿಂದ ವಶಪಡಿಸಿಕೊಂಡ ಕೋಟೆಯನ್ನು ದಿಲಾವರ್ ಖಾನ, ಹೈದರ್ ಖಾನನ ವಶಕ್ಕೆ ನೀಡಿದ. ಜೊತೆಗೆ ಹಿಡಿಯಲಾದ ಆನೆಗಳನ್ನು, ಕುದುರೆಗಳನ್ನು ಆಲಂಪನಾರ ಬಳಿಗೆ ಕಳುಹಿಸಿಕೊಡಲು ಆಜ್ಞೆ ನೀಡಿದ. ಈ ವಿಷಯದಲ್ಲಿ ಚರ್ಚೆ ನಡೆದು ಒಮ್ಮತಕ್ಕೆ ಬರುವುದರಲ್ಲಿ ಸೋತರು. ಇದು ಎಂತಹ ವಿಪರೀತಕ್ಕೆ ಹೋಯಿತೆಂದರೆ ಹೈದರ್ ಖಾನನನ್ನು ವಜಾಗೊಳಿಸಿದ. ತನ್ನ ಬೆಂಬಲಿಗನಾದ ಒಬ್ಬನನ್ನು ಆ ಸ್ಥಾನದಲ್ಲಿ ಕೂರಿಸಿ ದರ್ಬಾರಿನಲ್ಲಿ ತನ್ನ ಹಿಡಿತವನ್ನು ಗಟ್ಟಿಮಾಡಿಕೊಂಡ. ಆನೆಗಳನ್ನು ಕಾಡಿಗೆ ಅಟ್ಟಿ ಬಿಡು, ನಿನ್ನ ಜೊತೆ ಜಗಳಕಾಯುವುದಕ್ಕೆ ಸಮಯವಿಲ್ಲವೆಂದು ದಿಲಾವರ್ ಖಾನ್ ಹೇಳಿದ.

ದಿಲಾವರ್ ಖಾನ್ ಹತ್ತು ಹದಿನೈದು ದಿನಗಳ ಬಳಿಕ ತನ್ನ ಎಲ್ಲ ಸೈನ್ಯದೊಂದಿಗೆ ನಗರದ ಕಡೆ ನಡೆದ. ನಗರ ತಲಪಲು ಎರಡು ಮೂರು ಕೋಸ್(ಮೈಲು) ದೂರವಿರುವಷ್ಟರಲ್ಲಿ ನಾವು ಬರುವ ಸಮಾಚಾರವನ್ನು ಆಲಂಪನಾರಿಗೆ ತಿಳಿಸಲು ಓರ್ವ ಕೆಲಸಗಾರ ಸಲಹೆ ನೀಡಿದ. ಆಲಂಪನಾ ಈ ಸುದ್ದಿ ತಿಳಿದಾಗ ಈ ದಿನ ಶುಭ ದಿನವಲ್ಲ, ನೀವು ನಾಳೆ ನಗರದ ಒಳಗೆ ಪ್ರವೇಶಿಸಿರಿ ಎಂದು ಹೇಳಿದರು. ಆದರೆ ದಿಲಾವರ್ ಖಾನ್ ಈ ಸಲಹೆಯನ್ನು ತಿರಸ್ಕರಿಸಿ ಸಿಟ್ಟಾಗಿ ತನ್ನ ಪ್ರಯಾಣವನ್ನು

ನಿಲ್ಲಿಸದೆ ನಗರವನ್ನು ಪ್ರವೇಶಿಸಿದ. ಇಖ್ಲಾಸ್ ಖಾನನಿಗೆ ಈ ಸಮಾಚಾರ ಸಿಕ್ಕಿದಾಗ 'ಅವನ ಗುಣ ನನಗೆ ತಿಳಿದಿದೆ ಅವನು ಆಲಂಪನಾರ ಮಾತು ತಿರಸ್ಕರಿಸಿ ಇಂದೇ ನಗರ ಪ್ರವೇಶ ಮಾಡುವ ಒರಟು ಸ್ವಭಾವದವನು' ಎಂದಿದ್ದ. ಆಲಂಪನಾರನ್ನು ಈ ವಿಷಯದಲ್ಲಿ ಸಮಾಧಾನ ಮಾಡಲಾಯಿತು. ಅವನ ಸ್ವಾಗತಕ್ಕೆ ಬೇಕಾದ ತಯಾರಿ ಮಾಡಿಕೊಂಡು ಆಸ್ಥಾನದ ಪ್ರಮುಖರು ನಗರದ ಪ್ರವೇಶದ್ವಾರದ ಕಡೆಗೆ ತೆರಳಿದರು. ಈ ಸ್ವಾಗತದಲ್ಲಿ ಭಾಗವಹಿಸಿದ ಇಖ್ಲಾಸ್ ಖಾನ್, ಹಮೀದ್ ಖಾನ್ ಸಂಪೂರ್ಣವಾಗಿ ಅವನ ಬಗ್ಗೆ ಸಮಾಧಾನಪಟ್ಟುಕೊಳ್ಳದೆ ಒಳಗೊಳಗೆ ಮುನಿಸಿಕೊಂಡೇ ಇದ್ದರು. ಕೊನೆಯಲ್ಲಿ ದಿಲಾವರ್ ಖಾನನ ಜೊತೆಗೆ ಇವರ ದ್ವೇಷ ಬೆಳೆಯುತ್ತ ಹೋಯಿತು. ಇಖ್ಲಾಸ್ ಖಾನ್ ಇನ್ನೊಂದೆಡೆ ತನಗಾಗಿ ರಾಜ್ಯದ ಒಂದು ಪ್ರಾಂತ್ಯ ಭಾಗವನ್ನು ನೀಡಿ ಆಳ್ವಿಕೆ ನಡೆಸಲು ಅನುಮತಿ ನೀಡಿ ಎಂದು ಕೇಳಿದ. ಅವನು ಹೇಗೋ ಮಾಡಿ ಒಂದು ಪ್ರಾಂತ್ಯವನ್ನು ತನ್ನ ಹಿಡಿತದಲ್ಲಿಟ್ಟುಕೊಂಡ. ದಿಲಾವರ್ ಖಾನನಿಗೆ ಈ ಸಂಗತಿ ತಿಳಿದಾಗ ಆಶ್ಚರ್ಯ ಪಟ್ಟುಕೊಂಡ. ಅವನ ಜೊತೆಗೆ ದ್ವೇಷ ಇನ್ನೂ ಹೆಚ್ಚಾಯಿತು. ಈ ರೀತಿ ಇಖ್ಲಾಸ್ ಖಾನ್, ಹಮೀದ್ ಖಾನ್ ಜೊತೆಗೆ ದಿಲಾವರ್ ಖಾನನ ವೈಮನಸ್ಸು ಬೆಳೆಯತೊಡಗಿತು. ಆಗಾಗ ಬಯ್ದಾಟ, ಗಟ್ಟಿಮಾತಿನ ಚಕಮಕಿ ಬೆಳೆಯುತ್ತಾ ಹೋಯಿತು. ಯಾಕೆಂದರೆ ದಿಲಾವರ್ ಖಾನನ ಮನಸ್ಸಿನಲ್ಲಿ ಅತಿಯಾಸೆ ಮೂಡಿ, ಪಿತೂರಿಯಲ್ಲಿ ತೊಡಗಿದ. ಕೆಲವು ಸಲ ಇದು ಎಷ್ಟು ವಿಪರೀತ ಸ್ಥಿತಿಗೆ ತಲಪಿತೆಂದರೆ ಪರಸ್ಪರರು ಕತ್ತಿಹಿರಿದು ನಿಲ್ಲುವುದಕ್ಕೂ ಶುರುಮಾಡಿದರು. ಇಖ್ಲಾಸ್ ಖಾನ್‌ನಲ್ಲಿ ಕಾಡಿಗಟ್ಟಿದ ಆನೆಗಳ ಬಗ್ಗೆ ಅಸಮಾಧಾನ ಭುಗಿಲೆದ್ದಿತ್ತು. ಹಮೀದ್ ಖಾನ ತನಗೊಂದು ಪ್ರಾಂತ್ಯಾಡಳಿತ ಭಾಗ ಪಡೆಯುವುದರ ಆಸಕ್ತಿಯಲ್ಲಿ ತಲ್ಲೀನನಾಗಿದ್ದ. ಇವರಿಬ್ಬರ ಈ ಸ್ವಾರ್ಥದ ಕಾರಣಕ್ಕೆ ದಿಲಾವರ್ ಖಾನ್ ಸಿಟ್ಟಿನಿಂದ ಕುದಿಯುತ್ತಿದ್ದ. ಹಮೀದ್ ಖಾನನನ್ನು ದಿಲಾವರ್ ಖಾನ್ ತನ್ನೆಡೆ ಸೆಳೆದುಕೊಳ್ಳುವುದರಲ್ಲಿ ಸಫಲನಾದ. ದ್ವೇಷದಿಂದಾಗಿ ಇಬ್ಬರೂ ಸೇರಿ ಇಖ್ಲಾಸ್ ಖಾನನ ಮನೆಯ ಹಾದಿಯ ಮೇಲೆ ತೋಪುಗಳನ್ನು ಹಾರಿಸತೊಡಗಿದರು. ಇದರಿಂದ ಸಾಮಾನ್ಯರು, ಬಡಜನರು ಅನೇಕರು ಬಲಿಯಾಗಿ ಪ್ರಾಣವನ್ನು ಕಳಕೊಂಡರು.

ಒಂದು ದಿನ ಮೌಲಾನಾ ದೋಸ್ತ್ ಮುಹಮ್ಮದ್ ಉಸ್ತರಾಬಾದಿ ಒಂದು ಅಂಗಡಿಯಲ್ಲಿ ಕೂತಿದ್ದರು. ಆಗ ಇಖ್ಲಾಸ್ ಖಾನನ ಕಡೆಯಿಂದ ತೋಪು ಹಾರಿಸಲ್ಪಟ್ಟಿತು. ಮೌಲಾನಾರ ಜೊತೆಯಲ್ಲಿ ಬಂದಿದ್ದ ಐದು ಮಂದಿ ಬಲಿಯಾದರು. ಕೆಲವರ ಎಲುಬುಗಳು ಮುರಿದವು. ಮತ್ತೊಂದು ತೋಪು ಹಾರಿತು. ಹಣ್ಣುಗಳನ್ನು ಮಾರಾಟ ಮಾಡುವ ಅಂಗಡಿಯಲ್ಲಿ ಗಿರಾಕಿಗಳ ಪೈಕಿ ಐದು ಮಂದಿ ಹತರಾದರು. ಈ ಮದ್ದುಗುಂಡುಗಳ ಹಾರಾಟ ಒಂದು ತಿಂಗಳಕಾಲ ನಡೆಯುತ್ತಲೇ ಇದ್ದವು.

ದಿಲಾವರ್ ಖಾನ್ ಮತ್ತು ಹಮೀದ್ ಖಾನ್ ರಾಜಿ ಪಂಚಾಯತಿ ಮಾಡುವುದಕ್ಕಾಗಿ ನಾಲ್ಕು ಮಂದಿಯನ್ನು ಇಖ್ಲಾಸ್ ಖಾನನ ಬಳಿ ಕಳುಹಿಸಿದ. ಈ ಸಮಯ ಪರಸ್ಪರ ಹೊಡೆದಾಡುವುದಲ್ಲ, ವೈರಿಗಳು ರಾಜ್ಯದ ಸರಹದ್ದಿನಲ್ಲಿ ಹೊಂಚು ಹಾಕುತ್ತಿರುವ ವಿಷಮಯ ಮತ್ತು ಸಂಕಷ್ಟಗಳ ಘಳಿಗೆ ಇದು. ನಮ್ಮ ರಾಜ್ಯ ವೈರಿಗಳ ಪಾಲಾಗಿಬಿಟ್ಟರೆ ನಮಗೆ ಅತ್ಯಂತ ಕೆಡುಕಾಗಲಿದೆ. ನಾಳೆ ಪಾರಮಾರ್ಥಿಕ ಲೋಕದಲ್ಲಿ ವಿಚಾರಣೆ ನಡೆಯುವಾಗ ನಾವು ಏನೆಂದು ಉತ್ತರಿಸಬೇಕು? ನಾವು ಸಹೋದರರು ಪರಸ್ಪರರಲ್ಲಿ ರಾಜ್ಯಾಡಳಿತದ ಹೊಣೆಗಾರಿಕೆಯ ಸ್ಥಾನವನ್ನು ಪಾಲುಮಾಡಿಕೊಳ್ಳೋಣ ಎಂಬ ಸಂದೇಶವನ್ನು ಕಳುಹಿಸಿದರು. ಸದರ್ ಜಹಾಂ, ಷೇಖ್ ಸಾಲಿಮ್, ಮೌಲಾನಾ ದೋಸ್ತ್ ಮುಹಮ್ಮದ್ ಮತ್ತು ನಾನು ಶಿರಾಜಿ ಈ ರಾಜಿ ಸೂತ್ರವನ್ನು ಇಖ್ಲಾಸ್ ಖಾನನ ಬಳಿ ಹೋದೆವು. ಅವನ ಮುಂದೆ ನಾವು ಸಂಧಾನದ ಮಾತುಗಳನ್ನು ಆಡಿ ಸಮಾಧಾನ ಪಡಿಸಿದೆವು. ಆದರೆ ಇಖ್ಲಾಸ್ ಖಾನನ ಮೇಲೆ ಇವು ಯಾವರೀತಿಯ ಪರಿಣಾಮವೂ ಬೀರದಾಯಿತು. ಬದಲಿಗೆ ಇನ್ನಷ್ಟು ಕೋಪ ಹೆಚ್ಚುತ್ತಾ ಹೋಯಿತು. ಯುದ್ಧ ಮಾಡುವ ಬೆದರಿಕೆ ಹಾಕಿದ. ಸಂಧಾನ ಮಾಡಲು ಬಂದಿದ್ದ ನಮ್ಮನ್ನು ಹೊರಗಟ್ಟಿದ. ರಾತ್ರಿ ಮತ್ತೆ ಗುಂಡು ತೋಪುಗಳ ಹಾರಾಟ ಕೋಟೆಯ ಆವರಣದ ಕಡೆ ನಡೆಸತೊಡಗಿದ. ಇದರಿಂದ ಸಾರ್ವಜನಿಕರಿಗೆ ಅತ್ಯಂತ ಹೆಚ್ಚು ನಷ್ಟ ಉಂಟಾಗಿ ಭಯಭೀತರಾದರು.

ದಿಲಾವರ್ ಖಾನ್ ಓರ್ವ ಚಾಣಾಕ್ಷ ಮಂತ್ರಿಯಾಗಿದ್ದ, ಬುದ್ಧಿವಂತನೂ ದೂರದೃಷ್ಟಿಯವನೂ, ಪ್ರಜೆಗಳೊಂದಿಗೆ ಒಳ್ಳೆಯರೀತಿಯಲ್ಲಿ ವ್ಯವಹರಿಸುವವನಾಗಿದ್ದ. ಆಲಂಪನಾರನ್ನು ನಿಷ್ಠೆಯಿಂದ ನೋಡಿಕೊಳ್ಳುತ್ತಿದ್ದನಲ್ಲದೆ, ಕೋಟೆಯು ಇವನ ಆಡಳಿತಕ್ಕೆ ಒಳಪಟ್ಟಿತ್ತು. ಐನುಲ್ ಮುಲ್ಕ್ ಮತ್ತು ಅಂಗರುಘ್ ಖಾನ್ ಬಂದು ಇಖ್ಲಾಸ್ ಖಾನನ ಮನೆಯ ಹಿಂಬಾಗದ ಆವರಣವನ್ನು ಹಾರಿ ಬಂದರು. ಮತ್ತೆ ದಿಲಾವರ್ ಖಾನ ಮತ್ತು ಹಮೀದ್ ಖಾನ್ ಬಂದು ಇಖ್ಲಾಸ್ ಖಾನನ ಸೈನಿಕರಿಗೆ 'ಒಮ್ಮೆ ನೀವು ನಗರದಿಂದ ಹೊರಬಂದು ಆಲಂಪನಾರ ಬಳಿ ಮಾತಾಡಲು ಬನ್ನಿ' ಎಂದು ಕರೆದರು. ಆದರೆ ಅವರು ಇದಕ್ಕೂ ಒಪ್ಪಲಿಲ್ಲ.

ದಿಲಾವರ್ ಖಾನ್ ಒಂದು ಸೈನ್ಯವನ್ನು ತಯಾರು ಮಾಡಿ ಬೇರೆ ಹಾದಿಯ ಮೂಲಕ ಇಖ್ಲಾಸ್ ಖಾನನ ಮನೆಯ ಬಳಿ ಬಂದ. ಒಂದು ರಾತ್ರಿ ಅಲ್ಲೇ ರಹಸ್ಯವಾಗಿ ತಂಗಿದ. ಅವನ ಬೆಂಬಲಿಗರನ್ನು ಅಲ್ಲಿಂದ ಓಡಿಸಿದ. ಇಖ್ಲಾಸ್ ಖಾನ್ ಒಂಟಿಯಾಗಿಬಿಟ್ಟ. ತನ್ನ ಮಕ್ಕಳೊಂದಿಗೆ ಹಮೀದ್ ಖಾನನ ಮನೆಗೆ ತನ್ನ ಜೀವ ಉಳಿಸಿಕೊಳ್ಳಲು ಗುಟ್ಟಾಗಿ ಹೋದ. ದಿಲಾವರ್ ಖಾನನನ್ನು ನೋಡಿ ಹಮೀದ್ ಖಾನ್ ಭಯಭೀತನಾದ. 'ನೀನು ಹೆದರಬೇಡ, ನಿನ್ನನ್ನು ಸುರಕ್ಷಿತವಾಗಿ ಮಕ್ಕಾಯಾತ್ರೆಗೆ

ಕಳುಹಿಸುತ್ತೇವೆ' ಎಂದು ಹಮೀದ್ ಖಾನನನ್ನು ದಿಲಾವರ್ ಖಾನ್ ಸಮಾಧಾನ ಪಡಿಸಿದ. ಮರುದಿನ ದಿಲಾವರ್ ಖಾನ್ ದೊಡ್ಡ ಸಂಖ್ಯೆಯಲ್ಲಿ ಜನರನ್ನು ಸೇರಿಸಿ ಇಖ್ಲಾಸ್ ಖಾನನ ಮನೆಗೆ ಕಳುಹಿಸಿದ. ಅವನು ಮನೆಯಿಂದ ಹೊರಬರಬೇಕೆಂಬುದು ಅವನ ಯೋಜನೆಯಾಗಿತ್ತು. ಹಮೀದ್ ಖಾನನನ್ನು ಮರ್ಯಾದೆಯೊಂದಿಗೆ ಆಲಂಪನಾರ ಮುಂದೆ ಹಾಜರುಪಡಿಸಿದ.

ಈ ಮಧ್ಯೆ ಈ ಘಟನೆಯ ಬಗ್ಗೆ ಮತ್ತು ಇಖ್ಲಾಸ್ ಖಾನ್ ಹೊರಬಂದನೆಂಬ ಸುದ್ದಿ ಎಲ್ಲೆಡೆ ಹಬ್ಬಿತು. ದಿಲಾವರ್ ಖಾನ್ ಒಬ್ಬ ಕಾವಲುಗಾರನನ್ನು ಆಲಂಪನಾರ ಬಳಿಗೆ ಕಳುಹಿಸಿ ಹಮೀದ್ ಖಾನನಿಗೆ ಮಕ್ಕಾ ಯಾತ್ರೆಗೆ ತಯಾರಿ ನಡೆಸಲು ಸಲಹೆ ನೀಡಿದ. ಖಜಾಂಜಿಯಾಗಿ ನೌಕರಿಯಲ್ಲಿದ್ದ ಅಹ್ಮದ್ ಖಾನನನ್ನು ಮುರ್ತಜಾಬಾದಿನ ಕಡೆ ಕಳುಹಿಸಿ ಹಮೀದ್ ಖಾನ್ ಮಕ್ಕಾದ ಯಾತ್ರೆಯ ತಯಾರಿ ನಡೆಸಲು ಸೂಚನೆ ನೀಡಲಾಯಿತು. ತನ್ನ ಕುಟುಂಬದವರ ಜೊತೆಗೆ ಅಹ್ಮದ್ ಖಾನ್ ಮುರ್ತಜಾಬಾದಿನ ಕೋಟೆಯಲ್ಲಿ ಕಾವಲು ಕಾಯುವ ಕೆಲಸಕ್ಕೆ ಹೋದ.

ವಾಸು ಪಂಡಿತನ ಮಗಳು ಒಂದು ಅವಧಿ ತನಕ ಅರಮನೆಯಲ್ಲಿ ನೌಕರಿ ಮಾಡುತ್ತಿದ್ದಳು. ಇವಳು ಜಮಾದಾರಿ ಕೆಲಸದಲ್ಲಿ ಲೆಕ್ಕಪತ್ರಗಳನ್ನು ನೋಡಿಕೊಳ್ಳುತ್ತಿದ್ದಳು. ಜಹಾಂಪನಾರ ಜೊತೆಗೆ ಇವಳ ಸಂಬಂಧವಿತ್ತು. ಅವಳ ಸಹೋದರಿಯ ಇಬ್ಬರು ಹೆಣ್ಣು ಮಕ್ಕಳು ಮುಸಲ್ಮಾನರಾಗಿ ಜಹಾಂಪನಾರನ್ನು ಮದುವೆಯಾಗಿದ್ದರು. ಒಬ್ಬ ಸಹೋದರ ದಾಸು ಪಂಡಿತ್ ದರ್ಬಾರಿನಲ್ಲಿ ನೌಕರನಾಗಿದ್ದನಲ್ಲದೆ ಇವನು ಶೌರ್ಯವಂತನಾಗಿ, ಬಹದ್ದೂರನಾಗಿದ್ದು 'ಹಿಮ್ಮತ್ ಖಾನ್' ಎಂಬ ಬಿರುದು ಪಡೆದಿದ್ದ. ಇಖ್ಲಾಸ್ ಖಾನ ಒಂದು ಕೆಟ್ಟಘಳಿಗೆಯಲ್ಲಿ ಅವನ ಮಗನನ್ನು ಕೊಂದು ಹಾಕಿ ಮಗಳನ್ನು ತನ್ನ ಬಳಿ ಇಟ್ಟುಕೊಂಡಿದ್ದ. ದಿಲಾವರ್ ಖಾನನ ಮಗ ಈ ಹುಡುಗಿಯನ್ನು ಮದುವೆಯಾಗಲು ಬಯಸಿದ್ದನೆಂದು ಅಲ್ಲೆಲ್ಲ ಸುದ್ದಿ ಹರಡಿತ್ತು.

ಇಖ್ಲಾಸ್ ಖಾನ್ ತನ್ನ ಹೆಂಡತಿ ಮಕ್ಕಳೊಂದಿಗೆ ಮುರ್ತಜಾ ಕೋಟೆಯಲ್ಲಿ ವಾಸಿಸತೊಡಗಿದ. ದಿಲಾವರ್ ಖಾನ್ ಹೋದನಂತರ ಆಲಂಪನಾ ಅವನನ್ನು ಮತ್ತು ಅವನ ಹೆಂಡತಿ ಮಕ್ಕಳನ್ನು ಕರೆಸಿ ದೈನಂದಿನ ಖರ್ಚಿಗೆ ಹಣವನ್ನು ಕೊಡಿಸಿದರು. ಅವನ ಮಕ್ಕಳಿಗೆ ಬದುಕಲು ನೌಕರಿ ಕೊಡಿಸಿದರು. ಹತ್ತು ವರ್ಷಗಳ ನಂತರ ಇಖ್ಲಾಸ್ ಖಾನ್ ತೀರಿಕೊಂಡ. ಆದರೆ ಅವನ ಬದುಕಿನ ಕೊನೆ ಬಹಳ ಯಾತನೆದಾಯಕವಾಗಿತ್ತು.

**ದಿಲಾವರ್ ಖಾನ್ ಮಂತ್ರಿಯಾಗುವುದು ಮತ್ತು ಆ ಕಾಲದಲ್ಲಿ ನಡೆದ ಮುಖ್ಯ ಘಟನೆಗಳ ವಿವರಗಳು:**

ಇಖ್ಲಾಸ್ ಖಾನ್ ಮರಣದ ನಂತರ ದಿಲಾವರ್ ಖಾನ್ ಮತ್ತು ಹಮೀದ್ ಖಾನ್ ಜೊತೆಗೆ ಸೇರಿಕೊಂಡು ರಾಜ್ಯಾಡಳಿತ ಮತ್ತು ಪ್ರಜೆಗಳ ಅಭಿವೃದ್ಧಿಯ ಕೆಲಸಗಳಲ್ಲಿ ನಿರತರಾದರು. ಹಮೀದ್ ಖಾನ್ ಸರ್ ನೌಬತ್(ಮುಖ್ಯ ಮೇಲ್ವಿಚಾರಕ)ಪದವಿಯ ಮೇಲೆ ಕಣ್ಣಿಟ್ಟಿದ್ದ. ಇದರಿಂದ ರಾಜ್ಯಾಡಳಿತದ ವಿಷಯಗಳಲ್ಲಿ ಶಾಮೀಲಾಗುವ ಆಶಯವನ್ನು ಇಟ್ಟುಕೊಂಡಿದ್ದ. ಆದರೆ ಒಂದು ದಿನ ದಿಲಾವರ್ ಖಾನ ತನ್ನ ಮಗ ಕಮಾಲ್ ಖಾನನನ್ನು ಆಲಂಪನಾರ ಬಳಿ ಕರೆ ತಂದ. ಅವನಿಗೆ 'ಸರ್ ನೌಬತಿ' ಸ್ಥಾನವನ್ನು ನೀಡಲಾಯಿತು. ಇದರಿಂದ ದಿಲಾವರ್ ಖಾನ್ ಇನ್ನೂ ಬಲಶಾಲಿಯಾಗಿದ್ದಾನೆನ್ನುವುದು ಜಾಹೀರು ಪಡಿಸಿದಂತಾಗಿತ್ತು. ಈ ಘಟನೆಯಿಂದ ಹಮೀದ್ ಖಾನ್ ಬಹಳ ಸಿಟ್ಟಾದ. ಆರೋಪ ಪ್ರತ್ಯಾರೋಪಗಳಲ್ಲಿ ತೊಡಗಿದ. ಆದರೆ ದಿಲಾವರ್ ಖಾನ್ ಅವನ ಮಾತಿನ ಕಡೆ ಧ್ಯಾನ ನೀಡಿರಲಿಲ್ಲ. ಒಂದು ದಿನ ಆಲಂಪನಾರ ವತಿಯಿಂದ ಹಮೀದ್ ಖಾನನ ಮನೆಗೆ ಒಬ್ಬ ದೂತನನ್ನು ಕಳುಹಿಸಿ ಫರ್ಮಾನು ಹೊರಡಿಸಲಾಯಿತು. 'ನಮ್ಮ ಅಪ್ಪಣೆಯಿಲ್ಲದೆ ಮನೆಯಿಂದ ಹೊರಗೆ ಹೋಗಕೂಡದು. ಆನೆ, ಕುದುರೆ, ಶಸ್ತ್ರಾಸ್ತ್ರಗಳನ್ನು ಸರಕಾರದ ವಶಕ್ಕೆ ಒಪ್ಪಿಸಬೇಕು' ಎಂದು ಆದೇಶ ನೀಡಲಾಯಿತು. ಹಮೀದ್ ಖಾನ್ ವ್ಯಥಿತನಾಗಿ ಮನೆಯಲ್ಲೇ ಇದ್ದು ಬಿಟ್ಟ. ತನ್ನಲ್ಲಿದ್ದ ಸರಕಾರಿ ಒಡೆತನದ ಸಾಮಾನು ಸರಂಜಾಮುಗಳನ್ನು ಸರಕಾರಕ್ಕೆ ಒಪ್ಪಿಸಿದ. ಕೆಲವು ದಿನಗಳ ಬಳಿಕ ಹಮೀದ್ ಖಾನನನ್ನು ಸತಾರಾ ಕೋಟೆಗೆ ಕಳುಹಿಸಲಾಯಿತು. ಹಮೀದ್ ಖಾನ್ ತನ್ನ ಸ್ವತಃ ಒಟ್ಟು ಮಾಡಿದ ವೈಯಕ್ತಿಕ ಸಂಪತ್ತು, ಸಾಮಾನುಗಳನ್ನು ರಾಜ್ಯದಲ್ಲಿದ್ದ ಕಡು ಬಡವರಿಗೆ ಹಂಚಲಾಯಿತು. ದಿಲಾವರ್ ಖಾನ್ ಬುದ್ಧಿವಂತ ಮತ್ತು ಪ್ರಾಮಾಣಿಕನಾದುದರಿಂದ ರಾಜ್ಯದ ಆಡಳಿತ ವ್ಯವಸ್ಥೆ ಬಲಿಷ್ಠವಾಗಿತ್ತು. ತನ್ನ ನಾಲ್ಕು ಮಕ್ಕಳನ್ನು ಸರದಾರರನ್ನಾಗಿ ನೇಮಕಾತಿ ಮಾಡಿಸಿದ. ತನ್ನ ಬಳಿ ಸ್ವಂತದ ಎರಡು ಸಾವಿರ ಕುದುರೆಗಳನ್ನು ಇಟ್ಟುಕೊಂಡಿದ್ದ. ಹಳೆಯ ಅಧಿಕಾರಿಗಳು, ಸರದಾರರೊಂದಿಗೆ ಅವನ ಸಂಬಂಧ ಸೌಹಾರ್ದಯುತವಾಗಿತ್ತು. ಸಿಪಾಯಿ, ಸೈನಿಕರೊಂದಿಗೂ ಅವನ ವ್ಯವಹಾರ ಸ್ನೇಹದಿಂದ ಕೂಡಿತ್ತು. ಅವನ ಮನೆತನವೂ ಬಹಳ ದೊಡ್ಡದಾಗಿತ್ತು. ಅವರಲ್ಲಿ ಬಹಳಷ್ಟು ಮಂದಿಗೆ ಆಲಂಪನಾರ ಆಸ್ಥಾನದಲ್ಲಿ ನೌಕರಿ ಕೊಡಿಸಿದ್ದ. ಹಲವಾರು ದಾದಿಯರು ಮತ್ತು ಸೇವಕಿಯರು ರಾಜಮಾತೆ ಅಲಿಯಾ ಹಜ್ರತ್‌ರ ಮಹಲಿನಲ್ಲಿ ನೇಮಕವಾಗಿದ್ದರು.

ದಿಲಾವರ್ ಖಾನ್ ರಾಜ್ಯಾಡಳಿತದ ಕೆಲಸಕಾರ್ಯಗಳನ್ನು ಶಿಸ್ತಿನಿಂದ ಮತ್ತು ನೇರವಾದ ಕ್ರಮಗಳ ಮೂಲಕ ನಡೆಸುತ್ತಿದ್ದ. ಯಾರು ಕೂಡ ಅವರ ಕೆಲಸಗಳಲ್ಲಿ

ಮೂಗು ತೂರಿಸುವುದಕ್ಕಾಗಲಿ, ಟೀಕೆ ಮಾಡುವುದಕ್ಕಾಗಲಿ ಅವಕಾಶವಿರುತ್ತಿರಲಿಲ್ಲ. ಅವನ ಕೆಲಸಕಾರ್ಯಗಳಲ್ಲಿ ಆಲಂಪನಾ ಕೂಡ ಹಸ್ತಕ್ಷೇಪ ಮಾಡುತ್ತಿರಲಿಲ್ಲ. ದಿಲಾವರ್ ಖಾನನ ಹಿರಿಯ ಮಗ ಯುವಕನಾಗಿ ರಾಜ್ಯಾಡಳಿತದ ಕೆಲಸಗಳಲ್ಲಿ ಸಾಕಷ್ಟು ಪರಿಣಿತಿಗಳಿಸಿದ್ದ. ವಿದ್ಯಾರ್ಥಿಗಳು ಮತ್ತು ಸಾಹಿತಿಗಳು ಕವಿಗಳ ಜೊತೆ ತುಂಬ ಅನ್ಯೋನ್ಯವಾಗಿರುತ್ತಿದ್ದ. ಆಲಂಪನಾರ ಜೊತೆಗೆ ಸಾಕಷ್ಟು ಸಮಯ ಕಳೆಯುತ್ತಿದ್ದ. ದಿಲಾವರ್ ಖಾನ್ ಕೂಡ ವಿದ್ಯಾರ್ಥಿಗಳ ಜೊತೆ ಅನ್ಯೋನ್ಯವಾಗಿರುತ್ತಿದ್ದ. ಗುಜರಾತು, ಲಾಹೋರಿನಿಂದ ಅನೇಕ ವಿದ್ವಾಂಸರನ್ನು ಕರೆಸಿದ್ದ. ಇವರು ದರ್ಬಾರಿನಲ್ಲಿ ಕೂಡ ಹಾಜರಿರುತ್ತಿದ್ದರು. ದಿಲಾವರನಿಗೆ ಧಾರ್ಮಿಕ ವಿಷಯಗಳ ಬಗ್ಗೆ ಹದೀಸ್, ಕುರಾನ್ ಬಗ್ಗೆ ಹೆಚ್ಚಿನ ಜ್ಞಾನವನ್ನು ಪಡೆಯುವ ಹಂಬಲವಿತ್ತು. ಜನರೊಂದಿಗೆ ತುಂಬ ಆದರ ಗೌರವದಿಂದ ನಡೆದುಕೊಳ್ಳುತ್ತಿದ್ದ. ಹೆಚ್ಚು ಕಮ್ಮಿ ಹತ್ತು ವರ್ಷಗಳ ಕಾಲ ಅವನ ನಡವಳಿಕೆ ಹೀಗೆಯೇ ಇತ್ತು. ಇತರ ಬಾದಶಾಹರೊಂದಿಗೂ ಒಳ್ಳೆಯ ಸಂಬಂಧ ಬೆಳೆಸಿಕೊಂಡಿದ್ದ.

ಇಬ್ರಾಹಿಂ ಕುತುಬ್ ಶಾಹನ ಮಗಳನ್ನು ಆಲಂಪನಾರಿಗೆ ನಿಕಾಹ ಸಂಬಂಧಕ್ಕಾಗಿ ಕೇಳಲಾಗಿತ್ತು. ಆಲಂಪನಾರ ತಂಗಿಯನ್ನು ಮುರ್ತಜಾ ನಿಜಾಂ ಶಾಹನ ಮಗನಿಗೆ ವಿವಾಹ ಮಾಡಿಕೊಡುವ ಸಂಬಂಧಕ್ಕಾಗಿ ಮಾತುಕತೆ ನಡೆಯುತ್ತಿತ್ತು. ಇದರ ಮಧ್ಯೆ ಪಿತೂರಿ ಮಾಡುವವರ ಕೃತ್ಯದಿಂದಾಗಿ ಎರಡೂ ಕಡೆಯವರ ಮಧ್ಯೆ ವೈರತ್ವ ಬೆಳೆಯತೊಡಗಿತು. ನಿಜಾಂ ಶಾಹ ಮತ್ತು ಕುತುಬ್ ಶಾಹರು ಈ ಸಂಬಂಧಕ್ಕೆ ಯಾಕಾದರೂ ಕೈಹಾಕಿದೆವು ಎಂಬ ವಿಷಾದ ಮೂಡಿ ತಮ್ಮ ನಡುವಿನ ಅಂತರ ಹೆಚ್ಚುತ್ತ ಹೋದಂತೆ ಅನಿಸಿತು. ಒಂದಷ್ಟು ಕಾಲ ನಿಜಾಂ ಶಾಹ ಪಲ್ಲಕ್ಕಿಯಲ್ಲಿ ಕೋಟೆಯ ಹೊರಗೆ ಯಾವ ಮಹಿಳೆಯರು ಯಾವ ದಂಡಿನ ಪಹರೆಯೊಂದಿಗೆ ಹೋಗುತ್ತಿದ್ದಾರೆಂಬುದನ್ನು ನೋಡುತ್ತಿರುತ್ತಿದ್ದ. ಅಹ್ಮದ್ ನಗರದ ಪ್ರಮುಖರು ಈ ರೀತಿಯ ಬೆಳವಣಿಗೆಯಾಗಿದೆ ಎಂಬುದನ್ನು ಪರಿಶೀಲಿಸುತ್ತಿದ್ದರು. ಕುತುಬ್ ಶಾಹ ಸ್ನೇಹದಿಂದ ದೂರ ನಿಲ್ಲ ತೊಡಗಿದ. ಈ ಮಧ್ಯೆ ಆಲಂಪನಾರಿಗೆ ರಾಜ್ಯದ ಸರಹದ್ದಿನ ಕಡೆ ಹೋಗುವ ಒತ್ತಡ ಎದುರು ಬಂತು. ಮೊದಲು ಕುತುಬ್ ಶಾಹನ ರಾಜ್ಯದ ಗಡಿಗೆ ತಾಗಿರುವ ತನ್ನ ರಾಜ್ಯದ ಗಡಿಪ್ರದೇಶಕ್ಕೆ ಭೇಟಿಯಿಟ್ಟರು. 'ಮಲಿಕಾ ಎ ಜಹಾಂ' ಎಂಬ ಬಿರುದು ಪಡೆದು ಗೌರವ ಸ್ಥಾನದಲ್ಲಿದ್ದ ಚಾಂದ್ ಬೀಬಿಯವರ ಸಲಹೆಯ ಮೇರೆಗೆ ಮುಹಮ್ಮದ್ ಕುಲಿ ಬಾದಶಾಹನ ತಂಗಿಯನ್ನು ಕರೆಯಲು ಓರ್ವ ಬುದ್ಧಿವಂತ ಮನುಷ್ಯನನ್ನು ಕಳುಹಿಸಿದರು. ಆದರೆ ಅವಳು ಏನಾದರೊಂದು ನೆವಹೇಳಿ ನಯವಾಗಿ ತಪ್ಪಿಸಿಕೊಳ್ಳುತ್ತಿದ್ದಳು. ಆದರೆ ಆಲಂಪನಾರಿಗೆ ಅವಳ ಮೇಲೆ ಪ್ರೇಮ ಅಂಕುರಿಸಿತು. ಸ್ವತಃ ಸಾಕಷ್ಟು ಯೋಚಿಸಿ ಅವಳ ಮಾತಿಗೆ ಬೆಲೆಕೊಟ್ಟು

ದಕ್ಷಿಣದ ಬಾದಶಾಹರ ಪರಂಪರೆ, ರಿವಾಜಿನಂತೆ ಸಂಗೀತ ವಾದ್ಯಗಳೊಂದಿಗೆ ವಿಜೃಂಭಣೆಯಲ್ಲಿ ತಯಾರಿ ನಡೆದು ವಧುವಿನ ಮನೆಗೆ ನಿಶ್ಚಿತಾರ್ಥಕ್ಕಾಗಿ ಹೋದರು. ನಿಕಾಹದ ದಿನ ಜನರು ಬಹಳಷ್ಟು ಉತ್ಸಾಹದಿಂದ ಪಾಲ್ಗೊಂಡರು. ಎರಡೂ ಕಡೆಯ ಬಾದಶಾಹರ ಮಧ್ಯೆ ಕಾಣಿಕೆ, ಉಡುಗೊರೆ, ಬಳುವಳಿಗಳ ಕೊಡು ಕೊಳ್ಳುವಿಕೆ ಬಹಳಷ್ಟು ಶ್ರೀಮಂತ ಮರ್ಯಾದೆಗಳೊಂದಿಗೆ ನಡೆಯಿತು. ಮದುವೆಯ ಕಾರ್ಯಕ್ರಮ ನಲ್ವತ್ತು ದಿನಗಳ ಕಾಲ ವಿಜ್ರಂಭಣೆಯಿಂದ ನಡೆಯಿತು.

ಇಸ್ಲಾಮ್ ಷರೀಯತ್ ಕಾನೂನಿನ ಪ್ರಕಾರ ನಿಕಾಹವು ಮುಶ್ತರಿ ಹಾಗೂ ಜೊಹರಾ ನಕ್ಷತ್ರಗಳು ಜೊತೆಯಾಗುವ ಮಿಲನದ ಘಳಿಗೆಯಲ್ಲಿ ನೆರವೇರಿ ವಧೂವರರು ತಮ್ಮ ಆಕಾಂಕ್ಷೆಯಂತೆ ಪುಣ್ಯ ಮಿಲನದ ಭಾಗ್ಯಗಳಿಸಿದರು. ಇಬ್ಬರಲ್ಲೂ ತಮ್ಮ ಆಸೆ ಆಕಾಂಕ್ಷೆಗಳೂ ನೆರವೇರಿದವು.

**ಆಲಂಪನಾರು ನಿಜಾಂ ಶಾಹನ ರಾಜ್ಯದ ಗಡಿಪ್ರದೇಶಕ್ಕೆ ನೀಡಿದ ಭೇಟಿಯ ವಿವರಗಳು:**

ಆಲಂಪನಾರ ಶುಭ ವಿವಾಹದ ನಂತರ ನಿಜಾಂ ಶಾಹನ ರಾಜ್ಯದ ಸರಹದ್ದಿನ ಕಡೆ ತನ್ನ ಪ್ರಯಾಣ ಬೆಳೆಸಿದರು. ಅಲ್ಲಿಗೆ ಹೋಗುವ ಮುಂಚೆ ತನ್ನ ಓರ್ವ ಬುದ್ಧಿವಂತ ದೂತನನ್ನು ನಿಜಾಂ ಶಾಹನ ಬಳಿಗೆ ಕಳುಹಿಸಿದರು. ಆಲಂಪನಾರ ಅನಿರೀಕ್ಷಿತ ಭೇಟಿಯಿಂದ ನಿಜಾಂ ಶಾಹ ಭಯಗ್ರಸ್ತನಾದ. ಯಾಕೆಂದರೆ ತನ್ನ ಮೇಲೆ ಈ ಸಂದರ್ಭದಲ್ಲಿ ದಾಳಿ ನಡೆದರೆ ಎದುರಿಸುವಷ್ಟು ಶಕ್ತಿಯಿಲ್ಲವೆಂಬುದು ಅವನಿಗೆ ತಿಳಿದಿತ್ತು. ಈಗ ಸಂಧಾನ ಮಾಡಿಕೊಳ್ಳುವುದರಲ್ಲೇ ತನ್ನ ಒಳಿತಿದೆ ಎನ್ನುವುದು ಅವನಿಗೆ ಅನಿಸಿತು. ಆಲಂಪನಾರ ಜೊತೆಗೆ ಬಂದಿದ್ದ ಸಹೋದರಿ ಬೀಬಿ ಖದೀಜಾ ಸುಲ್ತಾನಳನ್ನು ಆದರದಿಂದ ಬರಮಾಡಿಕೊಂಡ. ಹೀಗೆಯೇ ಅವರ ಜೊತೆಗೆ ಬಂದಿದ್ದವರಿಗೂ ಗೌರವದ ಶಾಲು, ಕಾಣಿಕೆ ಉಡುಗೊರೆಗಳನ್ನು ನಿಜಾಂ ಶಾಹ ನೀಡಿ ಅವರನ್ನು ತನ್ನಲ್ಲಿಗೆ ಬರಮಾಡಿಕೊಂಡ. ಆಲಂಪನಾ ಈ ಗೌರವಪೂರ್ಣ ಸ್ವಾಗತ ಸ್ವೀಕರಿಸಿದ ಬಳಿಕ ತನ್ನ ರಾಜಧಾನಿಗೆ ಹಿಂತಿರುಗಿದರು. ಆದರೆ ಸಾಮಾನ್ಯ ಪ್ರಜೆಗಳಿಗೆ ಈ ದೋಸ್ತಿಯು ದಿಲಾವರ್ ಖಾನ್‌ನ ಚಾಲಾಕಿನ ನಡೆಯ ಭಾಗವಾಗಿದೆ ಎಂದು ತಿಳಿದಿತ್ತು. ಆಲಂಪನಾರ ಒಬ್ಬ ಸಹೋದರ ಮುಸ್ತಫಾಬಾದಿನ ಕೋಟೆಯಲ್ಲಿರುವನನ್ನು ಇಲ್ಲಿಗೆ ಕರೆಸುವುದು ಮತ್ತು ಅವನನ್ನು ಸಿಂಹಾಸನದಲ್ಲಿ ಕೂರಿಸುವಂತೆ ಮಾಡುವುದು ದಿಲಾವರ್ ಖಾನನ ಈ ಎಲ್ಲ ನಡವಳಿಕೆಗಳ ಉದ್ದೇಶವಾಗಿದೆ ಎಂದು ಸಾಮಾನ್ಯ ಜನರು ಆಡಿಕೊಂಡಿದ್ದರು. ಒಂದು ತಿಂಗಳ ತನಕ ಈ ಮಾತುಗಳು ಚಾಲ್ತಿಯಲ್ಲಿದ್ದು ಆಲಂಪನಾರ ಕಿವಿಗೂ ಬಿತ್ತು. ಆ ರಾತ್ರಿ ಪೂರ್ಣ ಯೋಚನೆಯಲ್ಲಿ ಬಿದ್ದು ತನ್ನ ತಾಯಿ ಅಲಿಯಾ ಹಜ್ರತ್ ಜೊತೆಗೆ ಮಾತಾಡುತ್ತ ನಿದ್ದೆ ಇಲ್ಲದೆ ಕಳೆದರು. ಬೆಳಿಗ್ಗೆ ಅಂತಃಪುರದ ಇತರ ಮಹಿಳೆಯರಿಗೆ

ಕೂಡ ಈ ವಿಷಯ ತಿಳಿದು ಎಲ್ಲರೂ ಚಿಂತಾಕ್ರಾಂತರಾದರು. ನಂತರ ದಿಲಾವರ್ ಖಾನ್ ಆಲಂಪನಾರ ಬಳಿಗೆ ಬಹಳ ಲೆಕ್ಕಾಚಾರ, ಯೋಜನೆಗಳನ್ನು ಹಾಕಿಕೊಂಡು ಬಂದ. 'ಸ್ವಲ್ಪ ಗಹನವಾದ ವಿಚಾರಗಳನ್ನು ನಿಮ್ಮ ಮುಂದೆ ಇಡಲಿಕ್ಕಿದೆ, ನಾವು ಇಬ್ಬರೂ ಏಕಾಂತದಲ್ಲಿ ಮಾತುಕತೆ ನಡೆಸಲಿಕ್ಕಿದೆ' ಎಂದ. ಆಲಂಪನಾ ಅವನನ್ನು ತನ್ನ ಖಾಸಗಿ ಕೊಠಡಿಗೆ ಕರೆದರು.

ನಾನು(ಶಿರಾಜಿ) ಈ ಸಮಯದಲ್ಲಿ ಅದೇ ಕೊಠಡಿಯ ಪರದೆಯ ಹಿಂದಿನ ಭಾಗದಲ್ಲಿ ಉಪಸ್ಥಿತನಿದ್ದೆ. ದಿಲಾವರ್ ಖಾನ ಈ ಖಾಸಗಿ ಕೋಣೆಗೆ ಪ್ರವೇಶಿಸಿ 'ನೀವು ರಾತ್ರಿ ಜಾಗರಣೆಯಲ್ಲಿದ್ದು ಚಿಂತೆಯಲ್ಲಿ ಮುಳುಗಿದ ವಿಚಾರ ತಿಳಿದು ಬಹಳ ನೊಂದುಕೊಂಡೆ' ಎಂದ. ಈ ಮಾತು ಕೇಳಿ ಆಲಂಪನಾರು ತಲೆಯ ಮೇಲೆ ಕೈಯಿಟ್ಟುಕೊಂಡು ಚಕಿತರಾಗಿ 'ಈ ಸಂಗತಿ ನಿನಗೆ ಹೇಗೆ ತಿಳಿಯಿತು?' ಎಂದು ಸಿಟ್ಟಾಗಿ ಅಲ್ಲಿಂದ ಹಿಂತಿರುಗಿ ತನ್ನ ಸ್ಥಾನಕ್ಕೆ ಹೋದರು. ತನ್ನ ಸಮಸ್ತ ದರ್ಬಾರಿಗಳಿಗೆ 'ನನ್ನ ಅಪ್ಪಣೆಯಿಲ್ಲದೆ ಯಾರು ಕೂಡ ನನ್ನ ಮನೆಯನ್ನು ಪ್ರವೇಶಿಸಕೂಡದು' ಎಂದು ಆಜ್ಞೆಯಿತ್ತರು. ಕೋಟೆ ಮತ್ತು ಅರಮನೆಯ ಕಾವಲುಗಾರರಿಗೆ 'ನನ್ನ ಮನೆಯೊಳಗೆ ಪ್ರವೇಶಕ್ಕೆ ಅನುಮತಿ ನೀಡದಿರಿ' ಎಂದರು. ಐದು ದಿನಗಳಕಾಲ ಅವರು ತನ್ನ ಅರಮನೆಯಿಂದ ಹೊರಗೆ ಬರಲಿಲ್ಲ. ಕೋಟೆಯ ಉಸ್ತುವಾರಿ ನೋಡಿಕೊಳ್ಳುವ ಅಧಿಕಾರಿ ರೂಮಿ ಖಾನನ ತಾಯಿ ಆಲಂಪನಾರ ಮಗ ಷಾ ತಹಮಾಸ್ಫ್‌ನಿಗೆ ಮೊಲೆಹಾಲು ನೀಡಿ ಪಾಲನೆ ಮಾಡಿದ ತಾಯಿಯಾಗಿದ್ದಳು. ಈ ಕಾರಣದಿಂದ ರೂಮಿ ಖಾನನಿಗೆ ಈ ನೌಕರಿಯನ್ನು ನೀಡಿ ಕೋಟೆಯ ಉಸ್ತುವಾರಿ ನೋಡಿಕೊಳ್ಳುವ ಜವಾಬ್ದಾರಿಯನ್ನೂ ನೀಡಿದ್ದ. ಈತನ ಮಗಳನ್ನು ತನ್ನ ಮಗ ಅಬ್ದುಲ್ ಖಾದರನಿಗೆ ನಿಕಾಹ ಮಾಡಿ ಸೊಸೆಯನ್ನಾಗಿ ದಿಲಾವರ್ ಖಾನ್ ಮನೆಗೆ ತಂದಿದ್ದ. ರೂಮಿ ಖಾನ್ ಈ ಸಂಬಂಧದ ಹಿನ್ನೆಲೆಯಲ್ಲಿ ದಿಲಾವರ್ ಖಾನನನ್ನು ಕೋಟೆಗೆ ಕರೆಸಿದ. ಕೋಟೆಯ ಉಸ್ತುವಾರಿಯನ್ನು ನೋಡಿಕೊಳ್ಳಲು ದಿಲಾವರ್ ಖಾನನಿಗೆ ಒಪ್ಪಿಸಿ ಐದು ದಿನಗಳ ಕಾಲ ರೂಮಿ ಖಾನ್ ದೂರವಿದ್ದ. ನನ್ನ ಜವಾಬ್ದಾರಿಯಲ್ಲಿದ್ದ ಇಲಾಖೆಗಳಲ್ಲಿ ಕೂಡ ಎಷ್ಟೊಂದು ತೊಂದರೆಗೆ ಒಳಗಾಗಿದ್ದೆನೆಂದರೆ ಆಲಂಪನಾರಿಗೆ ಬಟ್ಟೆಗಳನ್ನು ಒದಗಿಸಲೂ ಕೂಡ ಕಷ್ಟಪಡಬೇಕಾಯಿತು. ಯಾಕೆಂದರೆ ನೌಕರರು ಒಳ ಹೊರಗೆ ಹೋಗುವುದಕ್ಕೆ ನಿಷೇಧವಿತ್ತು. ಶನಿವಾರದಂದು ರೂಮಿ ಖಾನ್ ತನ್ನ ಮಗ ಅಮೀರ್ ಹುಸೈನ್ ಮತ್ತು ಸಯ್ಯದ್ ಇಸ್ಮಾಯಿಲ್ ದಿಲಾವರ್ ಖಾನನ ಬಳಿ ಹೋಗಿ ಈ ಗೊಂದಲಕ್ಕೆ ಕಾರಣಗಳನ್ನು ಕೇಳಿ ಅವನಿಗೆ ಬುದ್ಧಿವಾದದ ಮಾತುಗಳನ್ನು ಹೇಳಿದ. ಆದರೆ ಇದರ ಪ್ರಭಾವ ಅವನ ಮೇಲೆ ಆದಂತಿರಲಿಲ್ಲ.

ಕೊನೆಗೆ ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲ ಮಾರ್ಗದರ್ಶನ ನೀಡಬಲ್ಲ ಬುದ್ಧಿವಂತ ಹಿರಿಮಗ ಮುಹಮ್ಮದ್ ಖಾನನನ್ನು ತಂದೆ ದಿಲಾವರ್ ಖಾನನ ಬಳಿಗೆ ರೂಮಿ ಖಾನ ಕಳುಹಿಸಿದ. ಆದರೆ ತಂದೆ ಮಗನ ಮಾತನ್ನು ಕೂಡ ಕೇಳುವ ಸ್ಥಿತಿಯಲ್ಲಿರಲಿಲ್ಲ.

'ನನ್ನ ಪರಿಸ್ಥಿತಿಗೆ ನನ್ನಷ್ಟಕ್ಕೆ ಇರಲು ಬಿಟ್ಟು ಬಿಡಿ. ನನಗೆ ಬುದ್ಧಿವಾದ ಹೇಳಲು ಬರಬೇಡಿ' ಎಂದು ದಿಲಾವರ್ ಖಾನ್ ಹೇಳಿದ. 'ನಾನು ನನ್ನಲ್ಲಿರುವ ಸಂಪತ್ತು, ಜಮೀನು ಎಲ್ಲವನ್ನೂ ನನ್ನ ಮಕ್ಕಳಿಗೆ ಕೊಟ್ಟು, ನನಗೆ ಬೇಕಾದ ಸ್ವಲ್ಪ ಭಾಗವನ್ನು ತೆಗೆದುಕೊಂಡು ಇಲ್ಲಿಂದ ಹೊರಟು ಹೋಗುತ್ತೇನೆ' ಎಂದೆಲ್ಲ ಗೊಣಗಿದ. ಹೀಗೆ ಇಂತಹ ಮಾತುಗಳನ್ನು ರಾತ್ರಿ ಮೂರುಗಂಟೆಯ ತನಕ ಹೇಳುತ್ತಲೇ ಇದ್ದ. ನಂತರ ರೂಮಿ ಖಾನನ ಸೇವಕನೊಬ್ಬನನ್ನು ಕರೆದು ಪತ್ರ ಬರೆದು ನಾನು ಹೇಳಿದ ಎಲ್ಲ ಮಾತುಗಳನ್ನು ಪಾಲಿಸಬೇಕು ಮತ್ತು ಅಲಂಪನಾರಿಗೆ ತಿಳಿಸಬೇಕು ಎಂದು ಸಂದೇಶವನ್ನು ಕಳುಹಿಸಿದ. ರೂಮಿ ಖಾನ ಈ ಸಂದೇಶ ತಲಪಿದಾಗ ಆಲಂಪನಾರ ಆಜ್ಞೆಯಿಂದಾಗಿ ನಾವು ಯಾರೂ ಅವರ ಬಳಿಗೆ ಹೋಗಲಾರೆವು ಎಂದು ರೂಮಿ ಖಾನ ಹೇಳಿದ. ಈ ಸಂದೇಶ ಪತ್ರವನ್ನು ಅಂತಃಪುರದ ಸೇವಕಿಯೋರ್ವಳ ಮೂಲಕ ರೂಮಿ ಖಾನ ತಲಪಿಸಿದ. ಬೆಳಿಗ್ಗೆ ಆಲಂಪನಾ ಎದ್ದಾಗ ಈ ಸಂದೇಶವನ್ನು ನೋಡಿ ಸ್ವತಃ ಅವರೇ ದಿಲಾವರ್ ಖಾನನ ಬಳಿಗೆ ಬಂದು ಸಮಾಧಾನಪಡಿಸಿ ಅವನನ್ನು ಕರೆದು ತಂದರು. ಅಷ್ಟರವರೆಗೆ ನಿಂತು ಹೋಗಿದ್ದ ರಾಜ್ಯಾಡಳಿತದ ಕೆಲಸಕಾರ್ಯಗಳು, ಪ್ರಜೆಗಳಿಗೆ ಸಂಬಂಧಿಸಿದ ಕೆಲಸಗಳನ್ನು ಮತ್ತೆ ಚಾಲನೆಗೆ ತರುವುದಕ್ಕೆ ಹುರಿದುಂಬಿಸಿ ತೊಡಗಿಸಿದರು.

ಮರುದಿನ ಆಲಂಪನಾ ಕುದುರೆಗಳ ರಥದಂತಹ ಗಾಡಿಯಲ್ಲಿ ಸವಾರಿ ಮಾಡಿಕೊಂಡು ದಿಲಾವರ್ ಖಾನನ ಪತ್ನಿಯನ್ನು ಕಾಣಲು ಅವನ ಮನೆಗೆ ಹೋದರು. ದಿಲಾವರ್ ಖಾನ್ ಕೂಡಲೇ ಹೊರಬಂದು ತನ್ನ ತಲೆಯನ್ನು ಆಲಂಪನಾರ ಪಾದಗಳಲ್ಲಿಟ್ಟು ಎರಗಿದ. ಅವರ ಸವಾರಿಯನ್ನು ಬದಿಗೆ ನಿಲ್ಲಿಸಿದ. ಆಲಂಪನಾ ದಿಲಾವರ್ ಖಾನನನ್ನು ರಥಕ್ಕೆ ಹತ್ತಿಸಿ ತನ್ನೊಂದಿಗೆ ಕೂರಿಸಿದರು. ದಿಲಾವರ್ ಖಾನ್ ಒಂದು ಉಡುಗೊರೆಯಾಗಿ ಹೊಸ ಬಟ್ಟೆಯನ್ನು ನೀಡಿ 'ನಿಮ್ಮ ಬಟ್ಟೆ ಹಳೆಯದಾಗಿದೆ, ಬಟ್ಟೆ ಬದಲಾಯಿಸಿ' ಎಂದು ಹೇಳಿದ. ತನ್ನ ಬಟ್ಟೆಯನ್ನು ಬದಲಾಯಿಸಿ ಹಳೆಯ ಬಟ್ಟೆಯನ್ನು ದಿಲಾವರ್ ಖಾನನಿಗೆ ನೀಡಿದರು. ದಿಲಾವರ್ ಖಾನರ ಹಳೆ ಬಟ್ಟೆಯನ್ನು ಗೌರವದಿಂದ ತನ್ನ ಮನೆಯಲ್ಲಿ ಇರಿಸಿಕೊಂಡ. ಈ ಎಲ್ಲ ಬೆಳವಣಿಗೆಗಳಿಂದ ಇಷ್ಟರವರೆಗೆ ನಡೆದಿದ್ದ ಪಿತೂರಿಯು ಸಮಾಪ್ತಿಗೊಂಡು, ಜಗತ್ತಿಗೆ ಇಲ್ಲಿ ಉಂಟಾದ ಭಯವು ಕೊನೆಗೊಂಡಿತು. ಇದರಿಂದ ದಿಲಾವರ್ ಖಾನ್ ತಾನು

ಅಹಂಕಾರಿಯಾಗಿಲ್ಲವೆಂದು ಜಗತ್ತಿಗೆ ತೋರಿಸಿದನಲ್ಲದೆ ತಾನು ಬುದ್ಧಿವಂತನೆಂದೂ ತೋರಿಸಿಕೊಟ್ಟಿದ್ದ.

**ದಿಲಾವರ್ ಖಾನ ರಾಜ್ಯಾಡಳಿತದ ಕೆಲಸವನ್ನು ಮತ್ತೆ ಕೈಗೆತ್ತಿಕೊಂಡ ವಿವರಗಳು:**

ದಿಲಾವರ್ ಖಾನ್ ತನ್ನ ಪದಾಧಿಕಾರವನ್ನು ಮತ್ತೆ ಪಡೆದು ಕಾರ್ಯದಲ್ಲಿ ತೊಡಗಿದಾಗ ಹೆಚ್ಚುಕಮ್ಮಿ ೫೦,೦೦೦ ಹವನ್ ಖರ್ಚು ಮಾಡಿ ಶಸ್ತ್ರಾಸ್ತ್ರಗಳನ್ನು ದುರಸ್ತಿಗೊಳಿಸಿದ, ಕುದುರೆ, ಆನೆಗಳ ಸವಾರಿಯ ಲಗಾಮು, ಜೀನುಗಳನ್ನು, ಅಂಬಾರಿಯ ಬಟ್ಟೆಗಳನ್ನು ಹೊಸತಾಗಿ ಹೊಲಿಸಿದ. ಐದು ಸಾವಿರ ಕಾಲಾಳುಗಳು ಮತ್ತು ಅಷ್ಟೇ ಸಂಖ್ಯೆಯ ಕುದುರೆ ಸವಾರ ಸೈನಿಕರನ್ನು ಮತ್ತೆ ಹೊಸ ಸೇರ್ಪಡೆ ಮಾಡಿಕೊಂಡು ಆಲಂಪನಾರ ಸಮ್ಮುಖದಲ್ಲಿ ಪ್ರದರ್ಶಿಸಿದ. ಆಲಂಪನಾ ಕೋಟೆಯ ಬುರುಜಿನ ಮೇಲೆ ಕೂತು ಈ ಸೈನ್ಯದ ಕವಾಯತನ್ನು ಪರಿಶೀಲಿಸುತ್ತಿದ್ದರು. ಹೆಚ್ಚುಕಮ್ಮಿ ಒಂಭತ್ತು ಸಾವಿರ ಕುದುರೆ ಸವಾರರು, ನಾಲ್ಕು ಸಾವಿರಕಾಲಾಳುಗಳು, ಮುನ್ನೂರು ಆನೆಗಳನ್ನು ಸೈನ್ಯಕ್ಕೆ ಒಟ್ಟು ಸೇರ್ಪಡೆ ಮಾಡಿದ. ಆಲಂಪನಾರು ದಿಲಾವರ್ ಖಾನನಿಗೆ ಮತ್ತು ಅವನ ಮಕ್ಕಳಿಗೆ ಹೆಚ್ಚು ಕಮ್ಮಿ ಎರಡು ಲಕ್ಷ ಹವನ್ ಧನವನ್ನು ನೀಡಿದರು. ಕುದುರೆಗಳು, ಆನೆಗಳು, ರತ್ನ ಖಚಿತ ಖಡ್ಗಗಳು, ಅತ್ತರ್, ಅಂಬರ್ ಸುಗಂಧ ದ್ರವ್ಯಗಳನ್ನು, ಯಾಕೂತ್(ಮಾಣಿಕ್ಯ) ಅಲ್ಮಾಸ್(ವಜ್ರ) ಮತ್ತು ಪಚ್ಚೆ ಹರಳುಗಳ ಉಂಗುರ, ಮುತ್ತಿನ ಸರಮಾಲೆಯನ್ನು ಉಡುಗೊರೆಯಾಗಿ ನೀಡಿದರು. ಏಳು ಜೋಡಿ ರೇಶ್ಮೆ ಮತ್ತು ಮಕ್ಮಲಿನ ಬಟ್ಟೆಗಳನ್ನು ನೀಡಿದರು. ಬಿಳಿಯ ಧೋತಿಗಳನ್ನು ನೀಡಿದರು. ಎಲ್ಲರಿಗೂ ಈ ಘನತೆಯ ದಿಲಾವರ್ ಖಾನನ ಪದವಿ ಅತ್ಯಂತ ಎತ್ತರದ್ದಾಗಿದೆ ಎಂಬುದನ್ನು ಪ್ರದರ್ಶಿಸುವಂತೆ ಅವನನ್ನು ದರ್ಬಾರಿನಲ್ಲಿ ಎತ್ತರದ ವೇದಿಕೆಯಲ್ಲಿ ಕೂರಿಸಿದರು.

ತನ್ನ ಸಂಬಂಧಿಕರಿಂದ ದೊರೆತ ಬಿಲಾಲ್ ಖಾನ್ ಹಬ್ಶಿಯ ಒಂದು ಜಾಗೀರು ಹಿಂದೆ ಸರಕಾರ ವಶಪಡಿಸಿಕೊಂಡಿತ್ತು. ಹೀಗೆಯೇ ಶಿರ್ಝಾ ಖಾನನ ಆಸ್ತಿಯನ್ನು ಕೂಡ ಗುಲ್ಬರ್ಗಾದಲ್ಲಿ ವಶಪಡಿಸಿಕೊಂಡದ್ದನ್ನು ಸರಕಾರದ ಒಡೆತನಕ್ಕೆ ಸೇರಿಸಿಕೊಳ್ಳಲಾಯಿತು. ಆಲಂಪನಾರ ದರ್ಬಾರಿಗಳಲ್ಲಿ ಓರ್ವನಾಗಿದ್ದ ಜಲಾಲನನ್ನು ತನ್ನ ಜೊತೆಗೆ ಅಧಿಕಾರಿಯನ್ನಾಗಿ ದಿಲಾವರ್ ಖಾನ್ ಸೇರಿಸಿಕೊಂಡ. ಒಂದು ಸಾವಿರ ಹಳೆಯ ದರ್ಬಾರಿಗಳು ನೌಕರರನ್ನು ನಿವೃತ್ತರನ್ನಾಗಿ ಮಾಡಲಾಯಿತು. ಇದರಿಂದ ಐದು ಸಾವಿರದಷ್ಟು ಸೈನಿಕರು ಆಲಂಪನಾರ ಸೈನ್ಯದಲ್ಲಿ ಕಮ್ಮಿಯಾಯಿತು. ಹೀಗೆ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತ ತನ್ನ ಸ್ಥಾನವನ್ನು ಎತ್ತರಕ್ಕೇರಿಸಿಕೊಂಡು ಆಲಂಪನಾರ ಸ್ಥಾನವನ್ನು ಕೆಳಗಿರುವಂತೆ ಮಾಡಿದ. ಇದರಿಂದಾಗಿ ಆಲಂಪನಾ

ತನ್ನ ಮೇಲೆ ಸಂಪೂರ್ಣ ನಿರ್ಭರವಾಗಿರುವಂತೆ ಮಾಡಿ ತನ್ನನ್ನು ಸ್ಥಾನದಿಂದ ಕೆಳಗಿಳಿಸಲು ಸಾಧ್ಯವಾಗದಂತೆ ವ್ಯೂಹ ರಚಿಸಿದ. ಈ ಎಲ್ಲ ಕೆಲಸಗಳು ಮಾತ್ರವಲ್ಲ ಇದಕ್ಕಿಂತ ಮೇಲಾಗಿ ನಿಜಾಂ ಶಾಹನ ರಾಜ್ಯವನ್ನು ವಶಪಡಿಸಿಕೊಂಡು ತನ್ನ ಬೆಂಬಲಿಗನೊಬ್ಬನನ್ನು ಅಲ್ಲಿನ ಮೇಲ್ವಿಚಾರಣೆ ನೋಡುವಂತೆ ನೇಮಕಾತಿ ಮಾಡುವ ಉದ್ದೇಶವನ್ನು ಕೂಡ ಹೊಂದಿದ್ದ.

**ಬುರ್ಹಾನ್ ನಿಜಾಂ ಶಾಹನ ರಾಜ್ಯದ ಮೇಲೆ ಕಣ್ಣಿಟ್ಟು ದಿಲಾವರ್ ಖಾನನ ಚಾಲಾಕಿ, ತನ್ನನ್ನು ಶಕ್ತಿಶಾಲಿಯನ್ನಾಗಿ ಮಾಡಲು ಕೈಗೊಂಡ ಉಪಾಯಗಳು:**

ದಿಲಾವರ್ ಖಾನ್ ಯಾವಾಗಲೂ ಬುರ್ಹಾನ್ ನಿಜಾಂ ಶಾಹನ ರಾಜ್ಯದ ಆಗುಹೋಗುಗಳತ್ತ ಕಣ್ಣಿಟ್ಟು ನೋಡುತ್ತಲೇ ಇದ್ದ. ಜಹಾಂಪನಾರು ಬದುಕಿದ್ದಾಗ ಬುರ್ಹಾನ್ ಶಾಹ ಬಿಜಾಪುರಕ್ಕೆ ಬರುತ್ತಿದ್ದ. ಜಹಾಂಪನಾ ಅವನಿಗೆ ತರಬೇತಿ ನೀಡಿ ಬಾದಶಾಹನನ್ನಾಗಿ ಮಾಡುವ ಯೋಚನೆ ಮಾಡಿದ್ದರು. ಆದರೆ ಭಾಗ್ಯ ಇನ್ನೊಂದು ರೀತಿಯಲ್ಲಿತ್ತು, ಜಹಾಂಪನಾರು ಮರಣಹೊಂದಿದ ನಂತರ ಆಲಂಪನಾರ ಆಳ್ವಿಕೆಯಲ್ಲಿ ಸರದಾರನಾಗುವ ಬಯಕೆಯನ್ನಿಟ್ಟುಕೊಂಡು ಇದಕ್ಕೆ ಸಹಾಯಪಡೆಯಲು ಅಕ್ಬರ್ ಬಾದಶಾಹನ ಬಳಿಗೆ ಹೋಗಿದ್ದ. ಅಲ್ಲಿ ಓರ್ವ ಅಧಿಕಾರಿಯಾಗಿ ಸೇರಿಕೊಂಡ. ಬಿಜಾಪುರದ ಜನರ ಜೊತೆಗೆ ಕೂಡ ಸಂಪರ್ಕಹೊಂದಿದ್ದ. ಆಗಾಗ ತನ್ನ ಸುಖದುಃಖಗಳ ಬಗ್ಗೆ ಪತ್ರ ಬರೆದು ತಿಳಿಸುತ್ತಿದ್ದ. ಇದು ದಿಲಾವರ್ ಖಾನನಿಗೆ ತಿಳಿದಿತ್ತು. ಅವನು ಬುರ್ಹಾನ್ ಶಾಹನ ಪತ್ರ ಪಡೆದ ವ್ಯಕ್ತಿಯನ್ನು ಕರೆದು ಪತ್ರವನ್ನು ಓದಿ ಕೇಳುತ್ತಿದ್ದ. ಅವರಿಗೆ 'ಬುರ್ಹಾನ್ ಶಾಹ ಬರೆದಿರುವುದು ದಿಲಾವರ್ ಖಾನನ ಪರಿಸ್ಥಿತಿಯನ್ನು ತಿಳಿಯಲಿಕ್ಕಾಗಿ' ಎಂದು ಹೇಳುತ್ತಿದ್ದ. ಅಕ್ಬರ್ ಬಾದಶಾಹನ ಫರ್ಮಾನು ಬಂದಿರುವುದು ಒಂದು ತನಗೆ, ಇನ್ನೊಂದು ಮೀರಾ ರಾಜಾ ಅಲಿಖಾನ್ ಎಂಬ ಆಮೇರ್‌ನ(ಹಳೆಯ ಜೈಪುರ) ಅಮೀರನ ಮತ್ತು ಸಮಸ್ತ ದರ್ಬಾರಿಗಳ ಹೆಸರಿಗಿತ್ತು. ಅವನಿಂದ ಈ ಸಂದೇಶವನ್ನು ಪಡೆದುಕೊಂಡು ರಾಜಾ ಅಲಿಖಾನ್ ತನ್ನ ರಾಜ್ಯಕ್ಕೆ ತೆರಳಿದ್ದ. 'ನಾನು ಆಲಂಪನಾರ ರಾಜ್ಯದ ಸೇವೆಯಲ್ಲೇ ಇರುತ್ತೇನೆ, ನಿಮ್ಮ ರಾಜ್ಯ ನಿಮ್ಮ ಬಳಿಯಲ್ಲೇ ಇರಲಿ' ಎಂದು ದಿಲಾವರ್ ಖಾನ್ ಪತ್ರ ಬರೆದು ಅಕ್ಬರ್ ಬಾದಶಾಹನ ಬಳಿಗೆ ಕಳುಹಿಸಿದ. ಈ ಸಮಯದಲ್ಲಿ ಬುರ್ಹಾನ್ ಷಾನ ಮಗ ೧೨ ವರ್ಷ ವಯಸ್ಸಿನ ಷಾ ಇಸ್ಮಾಯಿಲ್ ಸಿಂಹಾಸನಾರೂಢನಾಗಿ ಬಾದಶಾಹನಾಗಿದ್ದ. ಬುರ್ಹಾನ್ ನಿಜಾಂ ಷಾ, ಅಕ್ಬರ್ ಬಾದಶಾಹನ ಪತ್ರವನ್ನು ಪಡೆದುಕೊಂಡು ದಕ್ಷಿಣಕ್ಕೆ ಹೋದ. ಬುರ್ಹಾನ್ ಷಾ ಬರುವ ಸುದ್ದಿ ದಿಲಾವರ್ ಖಾನನಿಗೆ ತಿಳಿದಾಗ ರಾಜಾ ಅಲಿಖಾನ್‌ಗೆ ಮೊದಲು ಈ ಸಂಗತಿಯನ್ನು ತಿಳಿಸಿದ. ಬುರ್ಹಾನ್ ಷಾ ಪ್ರಯಾಣಿಸುತ್ತ ಅಮೇರ್‌ಗೆ ತಲಪಿದಾಗ ರಾಜಾ ಅಲಿಖಾನ್ ಸ್ವಾಗತಿಸಿದ. ಬುರ್ಹಾನ್ ಷಾನಿಗೆ ರಾಜ್ಯವನ್ನು ಒಪ್ಪಿಸಿ ಅವನನ್ನು

ಸಿಂಹಾಸನದಲ್ಲಿ ಕೂರಿಸಿ, ತನ್ನ ಸೈನ್ಯವನ್ನು ಅವನಿಗೆ ಒಪ್ಪಿಸಿದ. ದಿಲಾವರ್ ಖಾನ ಆಲಂಪನಾರ ಸವಾರಿಯನ್ನು ಬಳಸಿಕೊಂಡು ಪ್ರಯಾಣ ಬೆಳೆಸಿ ನಿಜಾಂ ಶಾಹನ ರಾಜ್ಯಕ್ಕೆ ಹೋದ. ಅಲ್ಲಿ ಶಾಹ ದುರ್ಗ ಕೋಟೆಯಲ್ಲಿ ಕೆಲವುದಿನಗಳ ಮಟ್ಟಿಗೆ ತಂಗಿದ.

ಅಲ್ಲಿ ತನ್ನ ವಿಕೃತ ಯೋಜನೆಯೊಂದನ್ನು ತಯಾರಿ ಮಾಡಿ ತನ್ನ ಒಬ್ಬ ಮಗನನ್ನು ಬಿಜಾಪುರದ ಕೋಟೆಯ ಬಂದೊಬಸ್ತನ್ನು ನೋಡಿಕೊಳ್ಳುವುದಕ್ಕಾಗಿ ನೇಮಿಸಿದ. ಆಲಂಪನಾರ ತಾಯಿ ಅಲಿಯಾ ಹಜ್ರತರ ಮಗನೋರ್ವನನ್ನು ಅಗಲಿಸಿ ಬೇರೆ ಮಾಡಿದ. ಇದರಿಂದ ಆಲಂಪನಾರ ಶಕ್ತಿಕುಂದಿಸುವುದು ಅವನ ಉದ್ದೇಶವಾಗಿತ್ತು. ದಿಲಾವರ್ ಖಾನ ತನ್ನ ಬೆಂಬಲಿಗರನ್ನು ರಾತ್ರಿ ನಗರದಲ್ಲಿ ರಹಸ್ಯವಾಗಿ ಕಳುಹಿಸಿದ. ರಾತ್ರಿ ಯಾರೋ ಕಳ್ಳರು ಬಂದು ದರೋಡೆ ಮಾಡಿದರು ಎಂದು ಅಲ್ಲಿ ಗುಲ್ಲೆದ್ದಿತು. ಪಹರೆದಾರರು ಗಲಿಬಿಲಿಗೊಂಡು ಆತಂಕಗೊಂಡು ಆಲಂಪನಾರ ಮುಂದೆ ಸೇರಿ ಈ ಸಂಗತಿಯನ್ನು ತಿಳಿಸಿದರು. ದಿಲಾವರ್ ಖಾನ್ ಆಲಂಪನಾರಿಗೆ 'ಇದೆಲ್ಲ ರೂಮಿ ಖಾನನಿಂದಾಗಿ ಮತ್ತು ಅವನು ತನ್ನ ಕೆಲಸಕಾರ್ಯದಲ್ಲಿ ನಿಗಾ ಇಡದಿರುವುದರಿಂದಾಗಿ ಆಗಿದೆ. ಪ್ರತೀ ದಿನ ಒಂದಲ್ಲ ಒಂದು ಇಲ್ಲಿನ ಮನೆಗೆ ಕಳ್ಳರು ಹೊಕ್ಕು ಗುಲ್ಲೆಬ್ಬಿಸುತ್ತಿರುವುದು ಸಾಮಾನ್ಯವಾಗಿದೆ' ಎಂದು ಹೇಳಿದ. ಆಲಂಪನಾರ ಅನುಮತಿ ಇದ್ದಲ್ಲಿ ಈ ಕೆಲಸವನ್ನು ಬೇರೆಯವರಿಗೆ ಒಪ್ಪಿಸುತ್ತೇನೆಂದು ಕೇಳಿಕೊಂಡ.'ರೂಮಿ ಖಾನ್ ನಮ್ಮ ಮನೆಯಲ್ಲೇ ಉಂಡು ತಿಂದು ಬೆಳೆದವನು, ಅವನು ತುಂಬ ಸ್ವಾಮಿನಿಷ್ಠನಾದ ಮನುಷ್ಯ. ಅವನಿಗೆ ಸರಿಯಾಗಿ ತಿಳಿಸಿ ಬುದ್ಧಿಹೇಳಿ ಸಮಜಾಯಿಸುವುದು ಉತ್ತಮ' ಎಂದು ಆಲಂಪನಾ ಹೇಳಿದರು. ಅಂತೆಯೇ ಅವನಿಗೆ ರಾತ್ರಿಹೊತ್ತು ತುಂಬ ಜಾಗರೂಕರಾಗಿರಲು ದೂತನೊಬ್ಬನನ್ನು ಕಳುಹಿಸಿ ಅಲಂಪನಾರ ಇಂಗಿತವನ್ನು ತಿಳಿಸಲಾಯಿತು. ಹೀಗೆ ದಿಲಾವರ್ ಖಾನನ ಈ ತಂತ್ರವೂ ಫಲಿಸಲಿಲ್ಲ. ಅವನ ಇಚ್ಛೆ ನೆರವೇರಲಿಲ್ಲ. ಅವನು ನಿರಾಶನಾಗಿ ಆಲಂಪನಾರ ಈ ಮಾತು ತನ್ನ ತಾಯಿಯಿಂದ ಬೋಧಿಸಲ್ಪಟ್ಟ ವಿಚಾರದಿಂದ ಹುಟ್ಟಿರಬೇಕೆಂದು ಆಲೋಚಿಸಿದ. ಇನ್ನೊಂದು ಕುತಂತ್ರ ಮಾಡಿ ತಾಯಿಯನ್ನು ಮಗನಿಂದ ದೂರಮಾಡುವ ಷಡ್ಯಂತ್ರವನ್ನು ರಚಿಸಿ. ತಮ್ಮ ಕುಟುಂಬದವರನ್ನು ಜಮಾಯಿಸಿ 'ನನಗೆ ಈಗ ಶಾದುರ್ಗಕ್ಕೆ ಹೋಗುವ ಸಮಯ ಬಂದಿದೆ. ನಾನು ನನ್ನ ಕೆಲಸಕ್ಕೆ ಹೋಗುತ್ತಿದ್ದೇನೆ' ಎಂದ. 'ರಾಜಮಾತೆ ಅಲಿಯಾ ಹಜ್ರತ್‌ಗೆ ಹೇಳಿ ಯುದ್ಧದಿಂದ ನಾನು ದೂರವಿದ್ದೇನೆ. ನನಗೆ ಸಾಕಾಗಿಹೋಗಿದೆ. ನಾನು ಶಾ ದುರ್ಗಕ್ಕೆ ಹೋಗಿ ಇದ್ದುಬಿಡುತ್ತೇನೆ' ಎಂದು ತನ್ನ ಕುಟುಂಬದವರ ಮೂಲಕ ಹೇಳಿಕಳಿಸಿದ. ಇದಕ್ಕೆ ಉತ್ತರಿಸಿದ ರಾಜಮಾತೆ 'ನಾನು ನನ್ನ ಮಗನಿಂದ ದೂರವಿದ್ದು ಬದುಕಿರಲಾರೆ. ನನಗೆ ಕುದುರೆಯ ಸವಾರಿ ಮಾಡಿ ಹಂಪೆಗೆ ಹೋಗಿ

ಕಾಲ ಕಳೆಯುತ್ತೇನೆ. ನನಗೆ ಪ್ರಯಾಣದ ವ್ಯವಸ್ಥೆ ಮಾಡಿ. ನಾನು ಹಂಪೆಗೆ ಹೋಗಬೇಕು' ಎಂದು ಉತ್ತರಿಸಿದಳು. ಹೀಗೆ ಅವನ ಈ ತಂತ್ರ ಕೂಡ ವಿಫಲಗೊಂಡು ನಿರಾಶನಾದ.

ಈ ಮಧ್ಯೆ ನಿಜಾಂ ಶಾಹ ಸರಹದ್ದಿನ ಹತ್ತಿರ ಸೈನ್ಯ ಜಮಾವಣೆ ಮಾಡಿದ. ವೈರಿ ಸೈನಿಕರ ಕಡೆ ಪಯಣಿಸಿದ. ಆಲಂಪನಾರ ಸೈನ್ಯದ ಎದರು ನಿಂತಾಗ ದಿನವೂ ಯುದ್ಧ ನಡೆಯಿತು. ಎರಡೂ ಕಡೆಗಳಲ್ಲಿ ಜೋರಾಗಿ ಘರ್ಷಣೆ ಹಲ್ಲೆ ನಡೆದು ಕೊನೆಗೆ ಆಲಂಪನಾರ ಸೈನ್ಯ ನಿಜಾಂ ಶಾಹನ ಸೈನ್ಯದ ಮೇಲೆ ಎಗರಿಬಿದ್ದುಬಿಟ್ಟಿತು. ನಿಜಾಂ ಶಾಹನ ಸೈನ್ಯ ಸೋತು ಸುಣ್ಣವಾಗಿ ಎಲ್ಲೆಂದರಲ್ಲಿ ಓಡಿ ಚೆಲ್ಲಾಪಿಲ್ಲಿಯಾಯಿತು. ಹೆಚ್ಚು ಕಮ್ಮಿ ಇನ್ನೂರು ಆನೆಗಳು ಹಿಂದೂ ಸರದಾರರ ಎರಡು ಸಾವಿರ ಕುದುರೆಗಳು ಮತ್ತು ಸಾಮಾನು ಶಸ್ತ್ರಾಸ್ತ್ರಗಳು, ಸಂಪತ್ತನ್ನು ವಶಪಡಿಸಿಕೊಂಡು ರಾಜಧಾನಿಗೆ ಹಿಂತಿರುಗಿದರು.

ಈ ಸಮಯದಲ್ಲಿ ಆಲಂಪನಾ ಅಲ್ಲಿನ ಮರಗಳ ಅಡಿಯಲ್ಲಿ ಕೂತಿದ್ದರು. ಅವರಿಗೆ ವಿಜಯದ ವರ್ತಮಾನ ಮುಟ್ಟಿಸಲಾಗಿತ್ತು. ಯುದ್ಧದಲ್ಲಿ ಪಾಲ್ಗೊಳ್ಳದ ಆಲಂಪನಾರ ಸರದಾರರು ವಿಜಯದ ವರ್ತಮಾನ ತಿಳಿದ ಕೂಡಲೇ ಆಲಂಪನಾರ ಬಳಿಗೆ ವಿಜಯದ ಸುದ್ದಿ ತಲಪಿಸಬೇಕೆಂದುಕೊಂಡು ಹೊರಟಾಗ ನಿಜಾಂ ಶಾಹನ ಸೈನ್ಯ ಅನಿರೀಕ್ಷಿತವಾಗಿ ತನ್ನ ಮಂತ್ರಿ ಜಮಾಲ್ ಖಾನ್ ಮತ್ತು ತನ್ನ ಅಳಿಯ ಖುದಾವಂದ್ ಖಾನನೊಂದಿಗೆ ಅಡಗಿಕೊಂಡು ಬತ್ತಿಹೋದ ನದಿಯ ಕಳ್ಳರಸ್ತೆಯಲ್ಲಿ ಸಾಗಿ ಬಂದ. ದಿಲಾವರ್ ಖಾನನ ಆನೆಗಳೊಂದಿಗೆ ಅಲ್ಲಿಗೆ ದಾಳಿ ನಡೆಸಿದ್ದ. ನೋಡ ನೋಡುತ್ತ ಆಲಂಪನಾ ಹತ್ತಿರವಾದಾಗ ಅವರ ಸೈನ್ಯವನ್ನು ಕಂಡು ಭಯದಿಂದ ತತ್ತರಿಸಿದರು. ಹೆಚ್ಚು ಕಮ್ಮಿ ಆರುನೂರು ಆನೆಗಳನ್ನು ಅಲ್ಲೇಬಿಟ್ಟು ಓಡಿಹೋದರು. ದಿಲಾವರ್ ಖಾನನಿಗೂ ವೈರಿಗಳಲ್ಲಿರುವ ಆನೆಗಳು, ಕುದುರೆಗಳು ಹೆಚ್ಚಿನವು ಅಂಗುಶ್ ಖಾನ್ ಮತ್ತು ಐನುಲ್ ಮುಲ್ಕನಿಂದ ಹಿಡಿದದ್ದೆಂದು ತಿಳಿದುಬರುತ್ತದೆ. ಈ ಕಾರಣದಿಂದ ಯುದ್ಧದಿಂದ ದೂರ ಉಳಿದು ಬಿಟ್ಟ. ಈ ರೀತಿ ಅವನ ಇನ್ನೊಂದು ಕುತಂತ್ರವೂ ಕೂಡ ಫಲಿಸಿತು. ಆಲಂಪನಾ ಯುದ್ಧರಂಗದಿಂದ ಬಂದು ಸೈನ್ಯದ ತಂಗುದಾಣಕ್ಕೆ ಹೋಗದೆ ಶಿರಾ ದುರ್ಗದ ಮಾರ್ಗವನ್ನು ಹಿಡಿದು ಬದಲಾಯಿಸಿ ಶಾದುರ್ಗದ ಕಡೆಗೆ ಪ್ರಯಾಣ ಬೆಳೆಸಿದರು. ಇಡೀ ದಿನ ಮತ್ತು ಮರುದಿನ ಮಧ್ಯಾಹ್ನದ ತನಕ ಕಾಡುಮೇಡಿನ ರಸ್ತೆಯಲ್ಲಿ ಪ್ರಯಾಣಿಸಿ ಶಾ ದುರ್ಗಕ್ಕೆ ತಲಪಿದರು. ಈ ಪ್ರಯಾಣದಲ್ಲಿ ಆಲಂಪನಾರ ಸಾಮಾನು, ಸಂಪತ್ತುಗಳಿಗೆ ಯಾವರೀತಿಯ ನಷ್ಟವೂ ಆಗಲಿಲ್ಲ. ಆದರೆ ರಾತ್ರಿಹೊತ್ತು ಕತ್ತಲಲ್ಲಿ ಯಾರೋ ದರೋಡೆಕೋರರು ಬಂದು ದಾರಿಯಲ್ಲಿ ಬಿದ್ದುಹೋದ ಚಿಕ್ಕ ಚಿಕ್ಕ ತಿಂಡಿ ಸಾಮಾನುಗಳನ್ನು ಎತ್ತಿಕೊಂಡು ಹೋಗಿದ್ದರು.

ದಿಲಾವರ್ ಖಾನ್ ಮತ್ತು ಅವನ ಮಗ ನಗರಕ್ಕೆ ಹೋದರು. ಮತ್ತೆ ತಾಜಾ ಸ್ಥಿತಿಗೆ ಮರಳುವ ಉದ್ದೇಶದಿಂದ ಇವರು ಬಿಜಾಪುರಕ್ಕೆ ಪ್ರವೇಶಿಸಿದ್ದರು. ನಿಜಾಂ ಶಾಹ್ ಈ ಯುದ್ಧದ ಭಯದಿಂದ ರಾತ್ರಿ ಇಡೀ ನಿದ್ದೆ ಮಾಡಿರಲಿಲ್ಲ. ಅವನ ಚಿಕ್ಕ ಸಂಖ್ಯೆಯ ಸೈನ್ಯಕ್ಕೆ ಆಹಾರ ಒದಗಿಸಲು ಕೂಡ ಸಾಧ್ಯವಾಗಲಿಲ್ಲ.

**ಜಮಾಲ್ ಖಾನ್ ತಿರುಗಿನಿಂತು ವೈರಿಪಾಳ್ಯಕ್ಕೆ ಸೇರುವುದು ಮತ್ತು ಅವನ ಸಾವು**

ನಿಜಾಂ ಶಾಹನಿಗೆ ಮರುದಿನ ಆಲಂಪನಾ ಯುದ್ಧ ಭೂಮಿಯಿಂದ ಹೊರಟು ಶಾ ದುರ್ಗಕ್ಕೆ ಹೋದ ಸುದ್ದಿ ಸಿಕ್ಕ ಕೂಡಲೇ ತನ್ನ ಒಳಿತು ಆಹ್ಮದ್ ನಗರದ ಕಡೆ ಪ್ರಯಾಣ ಬೆಳೆಸುವುದರಲ್ಲಿದೆ ಮತ್ತು ತನ್ನ ಕೋಟೆಯ ಕೆಲಸದಲ್ಲಿ ತೊಡಗುವುದರಲ್ಲಿದೆ ಎಂದುಕೊಂಡ. ಇದರಿಂದ ಆಲಂಪನಾರ ಸೈನ್ಯಕ್ಕೆ ಸಹಾಯ ಮಾಡುವ ಮೂಲಕ ಅವರ ಮೈತ್ರಿಗಳಿಸುವ ಉದ್ದೇಶವು ಕೂಡ ಅವನಿಗಿತ್ತು. ಬುರ್ಹಾನ್ ನಿಜಾಂ ಶಾಹನ ಕಾರ್ಯಗಳಿಗೆ ಒಂದು ಮೂರ್ತರೂಪ ನೀಡುವ ಉದ್ದೇಶವೂ ಇತ್ತು. ಅಹ್ಮದ್ ನಗರಕ್ಕೆ ಹೋಗುವ ಗಡಿಬಿಡಿಯಲ್ಲಿ ತನ್ನ ಖಡ್ಗ ಮತ್ತು ಕತ್ತಿಗಳನ್ನು ಮರೆತು ಬಿಟ್ಟು ಹೋಗಿದ್ದ. ಬುರ್ಹಾನ್ ನಿಜಾಂ ಶಾಹ ರಾಜಾ ಅಲಿಯೊಂದಿಗೆ ಸೇರಿ ಸರಹದ್ದಿನ ಮಧ್ಯದಲ್ಲಿದ್ದ ತನ್ನ ಸರದಾರರನ್ನು ಜಮಾಲ್ ಖಾನನ ಸಹಾಯಕ್ಕಾಗಿ ಯುದ್ಧದಲ್ಲಿ ಪಾಲ್ಗೊಂಡಿರಲಿಲ್ಲ. ಅವರಿಗೆ ಕೆಲವು ಅಮಿಷಗಳನ್ನು ತೋರಿಸಿ ತನ್ನೆಡೆಗೆ ಸೆಳೆದುಕೊಂಡಿದ್ದ. ಇನ್ನೊಂದೆಡೆ ದಿಲಾವರ್ ಖಾನ್ ಶಾದುರ್ಗಕ್ಕೆ ತನ್ನ ಹೆಚ್ಚುಕಮ್ಮಿ ಹತ್ತು ಸಾವಿರ ಸೈನಿಕರೊಂದಿಗೆ ನಿಜಾಂ ಶಾಹನ ಹಿಂದಿನಿಂದ ಹೋಗಿ ಬೇಗಬನ್ನಿ ಎಂದು ಹೇಳಿ ತಾನು ಬುರ್ಹಾನ್ ನಿಜಾಂ ಶಾಹನ ಬಳಿ ಹೋದ. ಜಮಾಲ್ ಖಾನನನ್ನು ಬದಿಗೊತ್ತಿ ಹೀಗೆ ಅವನು ಹೋಗಿದ್ದ. ಅಲಂಪನಾರ ಸೈನ್ಯ ಹೋದ ನಂತರದಲ್ಲಿ ಜಮಾಲ್ ಖಾನನೂ ಹಿಂದಿನಿಂದ ಬುರ್ಹಾನ್ ನಿಜಾಂ ಶಾಹನ ಬಳಿಗೆ ಹೋದ. ಮೊದಲು ಸಲಾಂ ಶುಭಾಶಯಗಳ ವಿನಿಮಯವಾಯಿತು. ಮೊದಲಿಗೆ ಬುರ್ಹಾನ್ ಶಾಹನಿಗೆ ಇವರೆಲ್ಲರೂ ತನ್ನೆಡೆಗೆ ಬಂದದ್ದರಿಂದ ಹೊಸ ಹುರುಪು ಮೂಡಿತು. ಆದರೆ ಜಮಾಲ್ ಖಾನನಿಗೆ ಇವರು ಪರಸ್ಪರ ಸೇರಿದ್ದು ಕಂಡು ನಿರಾಶನಾದ. ತನ್ನ ಜೀವದ ಹಂಗು ತೊರೆದು ಜಮಾಲ್ ಖಾನ್ ಬುರ್ಹಾನ್ ಶಾಹನ ಸೈನಿಕರ ಮಧ್ಯೆ ದೊಡ್ಡ ಶೂರನಂತೆ ನುಗ್ಗಿಬಿಟ್ಟ. ಒಂದು ಕಡೆ ಆಲಂಪನಾರ ಸೈನ್ಯ, ಇನ್ನೊಂದೆಡೆ ರಾಜಾ ಅಲಿ ಖಾನನ ಸೈನ್ಯ ತಯಾರಾಗಿ ನಿಂತಿತ್ತು. ನಾಲ್ಕೂ ದಿಕ್ಕಿನಲ್ಲಿ ನಿಜಾಂ ಶಾಹ ಇವರನ್ನು ಮುತ್ತಿಗೆ ಹಾಕಿದ್ದ. ಜಮಾಲ್ ಖಾನ್ ಮತ್ತು ಖುದಾವಂದ್ ಖಾನನ ಮೇಲೆ ಎಂತಹ ದಾಳಿ ನಡೆಯಿತೆಂದರೆ ಓಡಲು ಕೂಡ ಅವರಿಗೆ ಸಾಧ್ಯವಿರಲಿಲ್ಲ. ಒಂದು ಹರಿತವಾದ ಖಡ್ಗದ ಏಟಿನಿಂದ ಅವನು ನಾಲಗೆ ಹೊರಹಾಕಿ ಬಿದ್ದು ಬಿಟ್ಟ. ಕೂಡಲೇ ಅಸುನೀಗಿದ. ಜಮಾಲ್ ಖಾನ್ ಮತ್ತು ಖುದಾವಂದ್ ಖಾನನ ಶಿರವನ್ನು ಕಡಿದು ಬುರ್ಹಾನ್

ಖಾನನ ಗಾಡಿಯೊಳಗೆ ಸೈನಿಕರು ಹಾಕಿಬಿಟ್ಟರು. ನಂತರದಲ್ಲಿ ಇಸ್ಮಾಯಿಲ್ ಶಾಹನ ಕುದುರೆಗಳನ್ನು ಸೆರೆಹಿಡಿದು ತುಂಡರಿಸಿ ಅವನ ಅಪ್ಪ ಬುರ್ಹಾನ್ ಶಾಹನ ಮನೆಯ ಬಾಗಿಲ ಮುಂದೆ ಎಸೆದು ಬಿಟ್ಟರು. ರಾಜ ಅಲಿಖಾನ್ ಮತ್ತು ಬುರ್ಹಾನ ಖಾನ್ ಇಬ್ಬರೂ ಸಂತೋಷದಿಂದ ಆಲಂಗಿಸಿಕೊಂಡರು. ರಾಜಾ ಅಲಿಖಾನನಿಗೆ ಅನೇಕ ಕುದುರೆಗಳು ಸಮಾನುಗಳು ಸೂರೆಗೊಳ್ಳಲು ದೊರೆತವು. ಅವನು ಮೂರು ಮೈಲಿ ದೂರಹೋಗಿ ನೋಡುವಾಗ ಬುರ್ಹಾನ್ ಶಾಹನ ಬಲಿಷ್ಠ ಸೇನೆ ತನ್ನ ಎದುರು ಬರುತ್ತಿರುವುದನ್ನು ಕಂಡ. ತನಗೆ ಸೂರೆ ಸಿಕ್ಕಿದ ಕುದುರೆ ಮತ್ತು ಸಾಮಾನು ಸರಂಜಾಮುಗಳನ್ನು ಕಾಣಿಕೆಯ ರೂಪದಲ್ಲಿ ಬುರ್ಹಾನ್ ಶಾಹನಿಗೆ ನೀಡಿ ಅಹ್ಮದ್ ನಗರಕ್ಕೆ ತೆರಳಿ ರಾಜ್ಯಭಾರ ಶುರುಮಾಡಿದ. ಇಸ್ಮಾಯಿಲ್ ಶಾಹನನ್ನು ಸಗರ್ ಕೋಟೆಗೆ ಕಳುಹಿಸಿ ಅಲ್ಲಿರುವ ಅವನ ಸಹೋದರನೊಂದಿಗೆ ಇರುವುದಕ್ಕೆ ಅವಕಾಶಮಾಡಿಕೊಟ್ಟರು.

**ದಿಲಾವರ್ ಖಾನನಿಗೆ ಕೊನೆಗೆ ಸಿಕ್ಕ ಪ್ರತಿಫಲ ಮತ್ತು ಬಂದಿಖಾನೆಯಲ್ಲಿ ಅವನ ಕೊಲೆ:**

ದಿಲಾವರ್ ಖಾನ್ ತನ್ನ ಸಂಗಡಿಗರ ತಂಡವನ್ನು ರವಾನಿಸಿ ಮತ್ತಷ್ಟು ಬಿಜಾಪುರದ ಸೈನ್ಯವನ್ನು ತಯಾರಿಮಾಡಲು ಸಲಹೆ ನೀಡಿದನಲ್ಲದೆ ತನ್ನ ಸ್ವಂತ ಸೈನ್ಯವನ್ನು ಶಕ್ತಿಶಾಲಿಯನ್ನಾಗಿ ಕಟ್ಟಿಕೊಂಡ. ನಿಜಾಂ ಶಾಹನ ಸೈನ್ಯದ ಮುಂದೆ ಹೋಗಿ ನಿಂತ. ಕೆಲವು ದಿನಗಳ ಕಾಲ ಅಲ್ಲಿ ನಿಂತು ನಿರೀಕ್ಷಿಸಿದ. ಬುರ್ಹಾನ್ ಶಾಹ ತನ್ನ ಸೋಲಿನಿಂದ ನಾಚಿ ತಲೆತಗ್ಗಿಸಬೇಕಾಯಿತು. ಸೋತರೂ ಸೂರೆಮಾಡಿದ ಸಂಪತ್ತನ್ನು ಪಡೆದದ್ದಕ್ಕೆ ಜನಸಾಮಾನ್ಯರು ಬಾಜಾರುಗಳಲ್ಲಿ, ಮಾರುಕಟ್ಟೆಯಲ್ಲಿ ತುಂಬ ಕೆಟ್ಟದಾಗಿ ಮಾತಾಡ ತೊಡಗಿದರು. ತನಗೆ ಸಿಕ್ಕ ಕುದುರೆಗಳು, ಆನೆಗಳನ್ನು ನಿಜಾಂ ಶಾಹನಿಗೆ ನೀಡಿ ಕೈ ತೊಳೆದುಕೊಂಡ. ಆಲಂಪನಾ ಈ ಪರಿಸ್ಥಿತಿಯಲ್ಲಿ ದಿಲಾವರ್ ಖಾನನ ಕಪಿಮುಷ್ಠಿಯಿಂದ ಹೊರಬರಲು ಒಳ್ಳೆಯ ಅವಕಾಶವೆಂದು ತಿಳಿದುಕೊಂಡರು. ಅವರು ಕೆಲವು ದೊಡ್ಡ ಸರದಾರರನ್ನು ಅಂದರೆ ಅಂಗುಶ್ ಖಾನ್, ಐನುಲ್ ಮುಲ್ಕ್ ಮುಂತಾದವರನ್ನು ದಿಲಾವರ್ ಖಾನನ ಕಡೆಗೆ ಕಳುಹಿಸಿದರು. ಯಾಕೆಂದರೆ ದಿಲಾವರ್ ಖಾನ್ ಬಹಳ ಸಮಯದಿಂದ ಅತ್ತಿತ್ತ ತಿರುಗುತ್ತ ತನ್ನ ಅಹಂಕಾರದ ದೆಸೆಯಿಂದ ಚಿಂತಿತನಾಗಿ ಕಾಡುಗಳಲ್ಲಿ ಮತ್ತು ಮೈದಾನಗಳಲ್ಲಿ ತಿರುಗಾಡುತ್ತ ತನ್ನಲ್ಲಿದ್ದ ಸರಕಾರಿ ಸೈನ್ಯವನ್ನು ಹದಗೆಡಿಸಿ ಬಿಟ್ಟಿದ್ದ. ಈಗಲೂ ಆತ ತನ್ನ ಅಹಂಕಾರವನ್ನಾಗಲೀ ಕುತಂತ್ರದ ಯೋಚನೆಗಳನ್ನು, ಪಿತೂರಿಯ ಲೆಕ್ಕಾಚಾರದಿಂದ ದೂರವಾಗಿಲ್ಲ. ನೀವು ನಮ್ಮ ಮನೆತನದ ಸ್ವಾಮಿನಿಷ್ಠ ನಾಯಕ ಸರದಾರರಾಗಿರುವುದರಿಂದ ನೀವು ಅವನಿಗೆ ಬುದ್ಧಿ ಹೇಳಿ ಸಮಾಧಾನ ಪಡಿಸಿ ಕರೆತನ್ನಿ ಎಂದು ಅವರನ್ನು ಶಾ ದುರ್ಗದಿಂದ ಬೀಳ್ಕೊಟ್ಟರು. ಕೊನೆಯಲ್ಲಿ ಆಶ್ವಾಸನೆ, ಆಣೆ, ಪ್ರಮಾಣಗಳು ನಡೆದರೂ ಪ್ರಯತ್ನ ಫಲಿಸಲಿಲ್ಲ. ಹಿಜರಿ ಶಕ ಸನ್ ೯೮೮ನೇ ರಜಬ್ ತಿಂಗಳ ಹದಿನೈದನೇ ದಿನಾಂಕ ಈ

ಸರದಾರರು ತಮ್ಮ ಬೆಂಗಾವಲಿಗೆ ಇರುವ ಸೈನಿಕರ ಜೊತೆಗೆ ತಯಾರಿರುವುದಕ್ಕೆ ಸೂಚನೆ ನೀಡಲಾಯಿತು. ದಿಲಾವರ್ ಖಾನನ ಮಂತ್ರಿಯಾಗಿದ್ದ ಅವಧಿಯಲ್ಲಿ ಲೆಕ್ಕ ಪುಸ್ತಕಗಳನ್ನು ಬರೆದಿಡುವ ಜವಾಬ್ದಾರಿ ನನ್ನ(ಶಿರಾಜಿಯ) ಮೇಲಿತ್ತು. ಆಲಂಪನಾ ಐದು ವರ್ಷಗಳ ನಂತರ ಇವೆಲ್ಲ ಕೆಲಸಗಳ ಜೊತೆಗೆ ಜಾಮ್‌ದಾರ(ಅರಮನೆಯ ಉಸ್ತುವಾರಿ) ಕೆಲಸವನ್ನು ನನಗೆ ನೀಡಿದ್ದರು. ನಾನವರ ಸೇವೆಯಲ್ಲಿದ್ದಾಗ ಆಲಂಪನಾ ಮತ್ತು ದಿಲಾವರ್ ಖಾನನ ಮಧ್ಯೆ ಪತ್ರವ್ಯವಹಾರ ನಡೆಯುವುದನ್ನು ಗಮನಿಸಿದ್ದೆ. ನಾನು ಅವರ ಪ್ರಯಾಣದಲ್ಲೂ ಜೊತೆಗಿದ್ದೆ. ಒಂದು ದಿನ ನಾನು ಅರಮನೆಯ ಕಡೆ ಹೋಗುವಾಗ ಚೌಕಿದಾರ ನನ್ನನ್ನು ತಡೆದು 'ದಿಲಾವರ್ ಖಾನನ ಅಪೇಕ್ಷೆ ಎಂದರೆ ನೀನು ಅಲಂಪನಾರ ಬಳಿಗೆ ಹೋಗುವ ಮುಂಚೆ ಅವನಿಗೆ ಸಲಾಂ ಮಾಡಿ ಹೋಗಬೇಕಂತೆ' ಎಂದ. ಅವನು ತನ್ನ ಮಲಗುವ ಕೋಣೆಯನ್ನು ಕೂಡ ಅಲಂಪನಾರ ಸೈನ್ಯದ ನಿಯಂತ್ರಣ ರೇಖೆಯ ಬಳಿಯಲ್ಲೇ ಮಾಡಿಕೊಂಡಿದ್ದ. ಹೀಗೆ ಅರಮನೆಯಲ್ಲಿ ಮಾಡಿರುವ ವ್ಯವಸ್ಥೆಯ ವಿರುದ್ಧ ಮಾತುಗಳು ನಡೆಯುತ್ತಿದ್ದವು. ಒಂದು ರಾತ್ರಿ ಸರದಾರರು ವಾಸವಾಗಿರುವ ಇಲಾಖೆಯಿಂದ ಎದ್ದು ಆಲಂಪನಾರ ಕೋಣೆಯ ಪ್ರದೇಶದ ಹಿಂಬದಿಯಲ್ಲಿ ಪ್ರವೇಶಿಸಿದ್ದ. ಅವನು ತಾನು ಇಲ್ಲಿಗೆ ಬಂದದ್ದು ಯಾರಿಗೂ ತಿಳಿದಿಲ್ಲವೆಂದುಕೊಂಡಿದ್ದ. ಆಲಂಪನಾ ದೀಪ ಹಿಡಿದುಕೊಂಡು ಸರದಾರರ ವಾಸದ ಪ್ರದೇಶಕ್ಕೆ ಹೋದರು.

ಆಲಂಪನಾ ಕೋಣೆಯಲ್ಲಿ ಇಲ್ಲದ್ದನ್ನು ಕಂಡು ಆರಮನೆಯವರು ಆತಂಕಿತರಾದರು. ಅವರು ಹುಡುಕುತ್ತ ಹೋದರು. ಆನೆಗಳಿಗೆ ಕುಡಿಸಲು ನೀರಿನ (ಚರ್ಮದ) ಚೀಲವನ್ನು ನೌಕರರು ತುಂಬಿಸುತ್ತಿರುವುದನ್ನು ಆಲಂಪನಾ ಕಂಡರು. ಆನೆಗಳು ಅವರ ಬಳಿಬಂದಿದ್ದವು. ದಿಲಾವರ್ ಖಾನ್ ಅಲ್ಲಿಗೆ ಬಂದು 'ನೀವು ಯಾಕೆ ಇಷ್ಟು ರಾತ್ರಿ ಹೊತ್ತು ಹೊರಗೆ ಬಂದಿರಿ?' ಎಂದು ಕೇಳಿದ. ಆಲಂಪನಾ ಸುಮ್ಮನಿದ್ದರು. ಅಲ್ಲಿಗೆ ಅರಮನೆಯ ನೌಕರರು ಸರದಾರರು ಬಂದಿದ್ದರು. ಅವರನ್ನು ಕಂಡು 'ಹೊಡೆಯಿರಿ..' ಎಂದು ಆಲಂಪನಾ ಕೂಗಿದರು. ಅಲ್ಲಿಗೆ ಬಂದಿದ್ದ ಸೈನಿಕ ಆವುರ್ಘ್ ಖಾನ್ ಕೂಡಲೇ ಕತ್ತಿ ಹಿರಿದು ಮರಣಾಂತಿಕ ಹಲ್ಲೆ ನಡೆಸಿದ. ಕುದುರೆಯ ಮೇಲಿದ್ದ ದಿಲಾವರ್ ಖಾನ್ ಕೆಳಗೆ ನೆಲಕ್ಕೆ ಬಿದ್ದ. ಆವುರ್ಘ್ ಖಾನ್ ತನ್ನ ಕೈಯಲ್ಲಿದ್ದ ಈಟಿಯಿಂದ ಅವನ ಎದೆಗೆ ಜೋರಾಗಿ ಇರಿದ. ಅವನ ಅಳಿಯ ಷಾ ಅಹ್ಮದ್ ಸಫವಿ ದಿಲಾವರ್ ಖಾನನನ್ನು ತನ್ನ ಕುದುರೆಯಲ್ಲಿ ಕೂರಿಸಿ ಇಲ್ಲಿಂದ ಓಡುವಂತೆ ಸೂಚಿಸಿದ. ಹೀಗೆ ದಿಲಾವರ್ ಖಾನ್ ಈ ಹಲ್ಲೆಯಿಂದ ಕೂಡ ಪ್ರಾಣ ಉಳಿಸಿಕೊಂಡು ತಪ್ಪಿಸಿಕೊಂಡು, ಉಳಿದ ತನ್ನ ಆಯುಷ್ಯವನ್ನು ಬುರ್ಹಾನ್ ಶಾಹನ ಆಶ್ರಯದಲ್ಲಿ ಕಳೆದ.

ಇತ್ತ ಆಲಂಪನಾ ತನ್ನ ಎಂದಿನ ವೈಭವ, ಘನತೆ ಗಾಂಭೀರ್ಯದೊಂದಿಗೆ ಶಿರಾ ಮಾರ್ಗದಿಂದ ಹೊರಟು ಅಲ್ಲಾಹನ ಕೃಪೆಗೆ ಧನ್ಯವಾದ ಪ್ರಾರ್ಥನೆ ಮಾಡುತ್ತ, ಜನರ ಶುಭಾಶಯಗಳನ್ನು ಸ್ವೀಕರಿಸುತ್ತ ಪ್ರಯಾಣ ಬೆಳೆಸಿ ತನ್ನ ರಾಜಧಾನಿ ಬಿಜಾಪುರಕ್ಕೆ ಹಿಜರಿ ವರ್ಷ ೯೮೮ರ ರಜಬ್ ತಿಂಗಳ ೨೨ರಂದು ತಲಪಿದರು. ದಿಲಾವರ್ ಖಾನ್ ತನ್ನ ಇಬ್ಬರು ಮಗಂದಿರು ಮುಹಮ್ಮದ್ ಖಾನ್ ಮತ್ತು ಖೈರಾತ್ ಖಾನರನ್ನು ಬುರ್ಹಾನ್ ಶಾಹನ ಸೇವೆಗೆ ಕಳುಹಿಸಿದ. ಅವನು ಇವರನ್ನು ಸ್ವೀಕರಿಸಿ ತನ್ನ ದರ್ಬಾರಿನಲ್ಲಿ ಉನ್ನತ ಸ್ಥಾನ ನೀಡಿ ಅಧಿಕಾರಿಗಳನ್ನಾಗಿ ಸ್ವೀಕರಿಸಿದ.

ದಿಲಾವರ್ ಖಾನನ ಮಗ ಕಮಾಲ್ ಖಾನ್ ಆಲಂಪನಾರಲ್ಲೇ ಉಳಿದು ಅಲ್ಲಿ ಸೈನ್ಯದ ಸರದಾರ ಸ್ಥಾನವನ್ನು ಪಡೆದಿದ್ದ. ಅವನು ಅಲಂಪನಾರ ಆಸ್ಥಾನದಲ್ಲಿ ಸ್ವಾಮಿನಿಷ್ಠನಾಗಿ ಸೇವೆ ಸಲ್ಲಿಸುತ್ತಿದ್ದ. ಕಮಾಲ್ ಖಾನ ತನ್ನ ಒಡೆಯ ಅಲಂಪನಾರ ಆಜ್ಞೆಯಂತೆ ದೊಡ್ಡ ಸೈನ್ಯವನ್ನು ಕಟ್ಟಿಕೊಂಡು ಬುರ್ಹಾನ್ ಶಾಹನ ರಾಜ್ಯಕ್ಕೆ ಮುತ್ತಿಗೆ ಹಾಕಿದ. ಈ ಸಂದರ್ಭದಲ್ಲಿ ಕಮಾಲ್ ಖಾನನ ಸೈನ್ಯದ ಸೈನಿಕನೊಬ್ಬ ದಿಲಾವರ್ ಖಾನನ ಬಳಿ ತೆರಳಿ ಅವನ ಶಿರಚ್ಛೇದ ಮಾಡಿದ.

**ಆಲಂಪನಾ ಸಂಪೂರ್ಣ ಸ್ವತಂತ್ರರಾಗಿ ತನ್ನ ರಾಜ್ಯಾಡಳಿತವನ್ನು ಚಲಾಯಿಸಿದ ವಿವರಗಳು:**

ಶಾ ದುರ್ಗದಿಂದ ಹಿಂತಿರುಗಿ ಬಿಜಾಪುರಕ್ಕೆ ಬಂದು ಮೊದಲು ಆಲಂಪನಾ ತನ್ನ ರಾಜ್ಯಾಡಳಿತ ಮಂಡಳಿಯಲ್ಲಿ ಬಹಳಷ್ಟು ಬದಲಾವಣೆಯನ್ನು ಮಾಡಿದರು. ರೂಮಿ ಖಾನನಿಗೆ ಮುಖ್ಯ ಮಂತ್ರಿ ಸ್ಥಾನಕ್ಕೆ ನೇಮಕಾತಿ ಮಾಡಲಾಯಿತು. ರಾಜ್ಯದ ಮೊಹರನ್ನು ಅವನಿಗೆ ನೀಡಲಾಯಿತು. ಆದರೆ ದೊಡ್ಡ ಕಾರ್ಯಗಳನ್ನು ಕೈಗೊಳ್ಳುವ ಹಕ್ಕನ್ನು ತಾನೇ ಇಟ್ಟುಕೊಂಡರು. ಇಲ್ಯಾಸ್ ಖಾನನಿಗೆ ಸರ್ ನೌಬತಿ (ಮುಖ್ಯ ಆಡಳಿತಗಾರ) ಸ್ಥಾನವನ್ನು ನೀಡಲಾಯಿತು.

ಕಂದಾಯ ವಸೂಲಿ ಮತ್ತು ಲೆಕ್ಕಾಧಿಕಾರಿಗಳಾದ ಆಮಿಲರು ಮತ್ತು ಪ್ರಾಂತ್ಯದ ಆಡಳಿತಾಧಿಕಾರಿಗಳೆನಿಸಲ್ಪಟ್ಟ ಹಾಕಿಮರು ಆಲಂಪನಾರ ಹಿಡಿತದೊಳಗಿರುವಂತೆ ವ್ಯವಸ್ಥೆ ಮಾಡಲಾಯಿತು. ಇವರು ಪ್ರತೀದಿನ ಆಸ್ಥಾನದಲ್ಲಿ ಹಾಜರಿದ್ದು ಆಲಂಪನಾರಿಗೆ ತಮ್ಮ ವರದಿಯನ್ನು ಒಪ್ಪಿಸಬೇಕಾಗಿತ್ತು. ಸೈನ್ಯಕ್ಕೆ ಸಂಬಂಧಿಸಿದ ಕಾಲಾಳು ಸೈನ್ಯದ ಸರದಾರರು ಮತ್ತು ಕುದುರೆ, ಆನೆಯ ಸವಾರಿ ಸರದಾರರು ದಿನವೂ ಆಲಂಪನಾರಿಗೆ ಸಲಾಮ್ ಸಲ್ಲಿಸಬೇಕಾಗಿತ್ತು. ತಮ್ಮ ಕುಂದು ಕೊರತೆ ಮತ್ತಿತರ ವಿಚಾರಗಳನ್ನು ಬಾದಶಾಹರ ಮುಂದೆ ಇಡುತ್ತಿದ್ದರು. ಆಲಂಪನಾ ಸರಿಕಂಡಲ್ಲಿ ತೀರ್ಮಾನಗಳನ್ನು ಕೈಗೊಂಡು ಸಲಹೆಗಳನ್ನು ನೀಡುತ್ತಿದ್ದರು. ಆಲಂಪನಾರ ಕಛೇರಿಯಿಂದ ನಡೆಯುವ ಪತ್ರವ್ಯವಹಾರಗಳು ಗುಪ್ತವಾಗಿರಬೇಕಾಗಿತ್ತು. ದಿಲಾವರ್ ಖಾನನ ಪಿತೂರಿ, ಕುತಂತ್ರಗಳ

ಕಾರ್ಯಕ್ರಮಗಳನ್ನು ಸಂಪೂರ್ಣವಾಗಿ ತೊಡೆದುಹಾಕಲಾಯಿತು. ರೂಮಿ ಖಾನನನ್ನು ಮುಖ್ಯ ಸರದಾರನನ್ನಾಗಿ ನೇಮಿಸಿ ಬುರ್ಹಾನ್ ಶಾಹನ ಬಳಿಗೆ ಸೈನ್ಯ ಸಮೇತ ಕಳುಹಿಸಲಾಯಿತು. ಇವರ ಕಾರ್ಯ ಚಟುವಟಿಕೆಗಳನ್ನು ಸೂಕ್ಷ್ಮವಾಗಿ ಆಲಂಪನಾ ಗಮನಿಸುತ್ತಿದ್ದರು. ಬುರ್ಹಾನ್ ಶಾಹನನ್ನು ಅವನ ಕೋಟೆಯಲ್ಲೇ ಬಂಧಿಸಿ ಸೆರೆಯಲ್ಲಿಡಲು ಸೂಚಿಸಲಾಗಿತ್ತು. ಇದರಿಂದಾಗಿ ದಿನವೂ ಆಲಂಪನಾರ ಸೈನ್ಯ ಮತ್ತು ಬುರ್ಹಾನ್ ಶಾಹನ ಸೈನ್ಯದ ನಡುವೆ ಯುದ್ಧದಲ್ಲಿ ಎರಡೂ ಕಡೆಯಲ್ಲಿ ಸೈನಿಕರು ಹತರಾಗುತ್ತಿದ್ದರು. ಆಲಂಪನಾ ತನ್ನ ಕೋಟೆಯನ್ನು ಬಲಿಷ್ಠವಾಗಿರಿಸಲು ತಕ್ಕ ವ್ಯವಸ್ಥೆಯನ್ನು ಮಾಡಿದ್ದರು. ಜನರಿಗೆ ದವಸಧಾನ್ಯಗಳಲ್ಲಿ ಕೊರತೆಯಾಗದಂತೆ ಶೇಖರಿಸಿಟ್ಟಿದ್ದರು.

ಬುರ್ಹಾನ್ ಶಾಹನ ಸೈನ್ಯವೇನೂ ಕಮ್ಮಿ ಶಕ್ತಿಶಾಲಿಯಾಗಿರಲಿಲ್ಲ. ಅವನು ಕೂಡ ಜನರನ್ನು ಹೊಡೆದುರುಳಿಸುವುದಕ್ಕೆ ಶುರುಮಾಡಿದ್ದ. ಅವನು ಸರಹದ್ದಿನ ಇಲಾಖೆಯಲ್ಲಿ ಮಾರುಕಟ್ಟೆ ಮುಂತಾದ ಕಡೆಗಳಲ್ಲಿ ಗುಲ್ಲೆಬ್ಬಿಸುವುದನ್ನು ಮಾಡುತ್ತಿದ್ದ. ಸರದಾರರನ್ನು ಕರೆಸಿದ ಆಲಂಪನಾ ಬುರ್ಹಾನ್ ಶಾಹನ ಕೃತ್ಯವನ್ನು ತಡೆಯ ಬೇಕೆಂದು ಆಜ್ಞೆ ನೀಡಿದರು. ಎಲ್ಲ ಸರದಾರರೂ ನಾವು ನಿಮ್ಮ ಆಜ್ಞೆಯನ್ನು ಶಿರಸಾವಹಿಸಿ ಪಾಲಿಸುತ್ತೇವೆಂದು ವಚನ ನೀಡಿದರು.

ಸ್ವಲ್ಪ ಸಮಯದ ನಂತರ ಬುರ್ಹಾನ್ ಶಾಹನಿಂದ ತರಬೇತಿ ಪಡೆದ ಹಳೆಯ ಅಧಿಕಾರಿ ನೂರಿ ಖಾನ್ ಎರಡು ಮೂರು ಮಂದಿ ಸರದಾರರೊಂದಿಗೆ ಹತ್ತು ಸಾವಿರ ಸೈನಿಕರನ್ನು ತರಬೇತುಗೊಳಿಸಿ ತಯಾರು ಮಾಡಿ ಹೊರಟಿದ್ದಾನೆಂಬ ವರ್ತಮಾನ ಬಂತು. ಅವನು ಎಲ್ಲಿಗೆ ಹೊರಟಿದ್ದಾನೆಂಬುದು ತಿಳಿದಿರಲಿಲ್ಲ. ರೂಮಿ ಖಾನ್ ತನ್ನ ಸರದಾರರೊಂದಿಗೆ ತಯಾರಾಗಿ ಬುರ್ಹಾನ್ ಶಾಹನ ಸೈನ್ಯದ ಮೇಲೆ ಮುಗಿಬಿದ್ದ. ಎರಡೂ ಸೈನ್ಯಗಳು ಎದುರುಬದುರಾಗಿ ನಿಂತು ಭೀಕರ ಯುದ್ಧ ನಡೆಯಿತು. ವೈರಿ ಸೈನ್ಯ ಅಲಂಪನಾರ ಸೈನ್ಯದ ದಾಳಿಯಿಂದ ತತ್ತರಿಸಿ ಪರಾರಿಯಾಯಿತು. ಆಲಂಪನಾರ ಸೈನ್ಯ ಸಂಪೂರ್ಣ ಶಕ್ತಿಯೊಂದಿಗೆ ಅವರ ಬೆನ್ನುಹತ್ತಿ ಹೋದಾಗ ಸಿಕ್ಕ ನೂರಿ ಖಾನ್ ತನ್ನ ಎರಡು ಸರದಾರರೊಂದಿಗೆ ಕೊಲೆಯಾದ. ಸುತ್ತಲಿದ್ದ ನಿರ್ಜನ ಪ್ರದೇಶದಲ್ಲಿ ವೈರಿಸೈನ್ಯ ತನ್ನ ಸಾಮಾನು ಸರಂಜಾಮುಗಳನ್ನು ಬಿಟ್ಟು ಓಡಿಹೋದರು. ಆಲಂಪನಾರಿಗೆ ಈ ವಿಜಯದ ವರ್ತಮಾನ ತಲಪಿಸಿದರು ವಿಜಯೀ ಸೈನ್ಯದಲ್ಲಿ ಪಾಲ್ಗೊಂಡವರಿಗೆ ಆಲಂಪನಾ ಉಡುಗೊರೆಯನ್ನು ನೀಡಿ ಸನ್ಮಾನಿಸಿದರು. ಬುರ್ಹಾನ್ ಶಾಹ ಸೋತು ಸುಣ್ಣವಾಗಿ ಆಲಂಪನಾರೊಂದಿಗೆ ಸಂಧಾನಕ್ಕಾಗಿ ಒಬ್ಬ ಜವಾಬ್ದಾರಿಯುತ ಸಲಹೆಗಾರನನ್ನು ಕಳುಹಿಸಿದ. ಸಂಧಾನಕ್ಕೆ ಒಪ್ಪಿ ಶರ್ತಗಳನ್ನು ಹಾಕಿ ಒಂದು ಕರಾರುಮಾಡಲಾಯಿತು. ಬುರ್ಹಾನ್ ಶಾಹ ಹೊಸತಾಗಿ ಆಲಂಪನಾರ ಸರಹದ್ದಿನ ಸನಿಹ ಕಟ್ಟಿಸಿದ ಕೋಟೆಯನ್ನು ಒಡೆದು ನೆಲಸಮಗೊಳಿಸಬೇಕೆಂಬುದು ಮತ್ತು

ಅದನ್ನು ತಮ್ಮ ರಾಜ್ಯಕ್ಕೆ ಸೇರಿಸಬೇಕೆಂಬುದು ಮುಖ್ಯ ಶರತ್ತಾಗಿತ್ತು. ಇದರ ಪ್ರಕಾರ ಕೋಟೆಯನ್ನು ನೆಲಸಮಗೊಳಿಸಿ ಆ ಪ್ರಾಂತ್ಯವನ್ನು ಆಲಂಪನಾರ ರಾಜ್ಯಕ್ಕೆ ಸೇರಿಸಲಾಯಿತು.

ನಗರಕ್ಕೆ ಹಿಂತಿರುಗಿದಾಗ ಸೈನ್ಯಕ್ಕೆ ಸಂಪೂರ್ಣ ಆದರದ ಸ್ವಾಗತ ದೊರೆಯಿತು. ರೂಮಿ ಖಾನನ ಗೌರವ ಹೆಚ್ಚಿತು ಮತ್ತು ಅತ್ಯಂತ ಆದರದ ಸ್ವಾಗತವನ್ನು ಪ್ರಜೆಗಳು ಮತ್ತು ದರ್ಬಾರಿನ ಸದಸ್ಯರು ಶುಭಾಶಯಗಳನ್ನು ಕೋರಿದರು. ಈ ಸುದ್ದಿ ಆಲಂಪನಾರಿಗೆ ತಲಪಿದಾಗ ಅವರು ಬಹಳ ಸಂತೋಷಪಟ್ಟುಕೊಂಡರು. ಬುರ್ಹಾನ್ ಶಾಹ ಇಲ್ಲಿಗೆ ಬರುತ್ತಿದ್ದರೆ ಅವನಿಗೆ ನಷ್ಟ ಹೆಚ್ಚು ಆಗುತ್ತಿತ್ತು. ಅವನು ಕಟ್ಟಿಸಿದ ಕೋಟೆಯನ್ನು ಅವನೇ ಒಡೆದು ಹಾಕಿದ್ದರಿಂದ ಬುರ್ಹಾನ್ ಶಾಹ ಸಾರ್ವಜನಿಕ ವಲಯದಲ್ಲಿ ಅತ್ಯಂತ ಹೆಚ್ಚು ಅವಮಾನಿತನಾಗಬೇಕಾಯಿತು. ರೂಮಿ ಖಾನ್ ತನ್ನೊಂದಿಗೆ ಬುರ್ಹಾನ್ ಖಾನನ್ನು ಬಂದಿಸಿ ತಂದಿದ್ದ. ನಗರದಲ್ಲಿ ಮೊದಲು ಇಮಾಂಬಾರಾಕ್ಕೆ ಹೋಗಿ ಪ್ರಾರ್ಥನೆಯನ್ನು ಸಲ್ಲಿಸಿ ಮತ್ತೆ ಆಲಂಪನಾರನ್ನು ದರ್ಬಾರಿನಲ್ಲಿ ಭೇಟಿಯಾದ. ಆಲಂಪನಾರಿಗೆ ಅವನನ್ನು ಕಂಡಕೂಡಲೇ ಹಳೆಯ ಘಟನೆಗಳು ನೆನಪಾದವು. ಅಲಂಪನಾರ ವೈಭವ, ಘನತೆಯನ್ನು ನೋಡಿ ಅಚ್ಚರಿಗೊಂಡ ಬುರ್ಹಾನ್ ಶಾಹನ ದ್ವೇಷ, ಸಿಟ್ಟು ಶಮನಗೊಂಡಿತ್ತು. ಅವನ ಈ ಪರಿಸ್ಥಿತಿಗೆ ಅವನಲ್ಲಿ ಭುಗಿಲೆದ್ದ ದ್ವೇಷ, ಈರ್ಷೆಗಳೇ ಕಾರಣವೆಂದು ಹೇಳಿದಾಗ ಅವನು ತಲೆಬಾಗಿ ಒಪ್ಪಿಕೊಂಡ. 'ಮುಸ್ತಫಾಬಾದ್ ಕೋಟೆಯಲ್ಲಿರುವ ಸಹೋದರ ಇಸ್ಮಾಯಿಲ್‌ಷಾನನ್ನು ಹಿಂತಿರುಗಿಸಿ ಹಾಗೂ ಅವನ ವಶದಲ್ಲಿದ್ದ ಕೋಟೆಯನ್ನು ಮತ್ತೆ ವಶಕ್ಕೊಪ್ಪಿಸಿ ಅವನ ವಿರಾಸತನ್ನು ಹಿಂತಿರುಗಿಸಿ' ಎಂದು ಹೇಳಿದರು. ಇಸ್ಮಾಯಿಲ್ ಷಾನನ್ನು ಬಿಜಾಪುರಕ್ಕೆ ಕರೆತರಲಾಯಿತು. ನಾನು ಕುತುಬ್ ಷಾನಿಗೆ ನಿನ್ನನ್ನು ಬಂಧನದಿಂದ ಬಿಡುಗಡೆಗೊಳಿಸುವ, ಹಾಗೂ ನಿನಗೆ ನಿನ್ನ ರಾಜ್ಯವನ್ನು ಮತ್ತೆ ಕೊಡಿಸುತ್ತೇನೆಂದು ವಾಗ್ದಾನ ಮಾಡಿದ್ದೆ' ಎಂದು ಆಲಂಪನಾ ಹೇಳಿದರು. ಅವನ ಪಾಲಿನ ಹಕ್ಕಿನ ನಗದು ಮತ್ತು ಚಿನ್ನಾಭರಣದ, ಆಸ್ತಿಯ ಪಾಲನ್ನು ಊರ ಹಿರಿಯ ಪ್ರಮುಖರ ಸಾಕ್ಷಿಯಲ್ಲಿ ನೀಡಿ ಸಂತಸಪಡಿಸಿದರು.

**ಇಸ್ಮಾಯಿಲ್ ಷಾ ಬಿನ್ ಷಾ ತಹಮಾಸ್ಫ್ (ಜಹಾಂಪನಾರ ಸಹೋದರ) ಬೆಳಕಿಗೆ ಬರುವುದು ಮತ್ತು ಅವನ ಕಾರ್ಯಗಳ ಫಲ ಅನುಭವಿಸಿದ ವಿವರಗಳು:**

ಬುರ್ಹಾನ್ ಶಾಹ ಪಿತೂರಿ ಮಾಡಿ ಇಡೀ ವಿಶ್ವದಲ್ಲಿ ತನ್ನ ಕೆಟ್ಟಕೆಲಸಗಳಿಂದ ನಷ್ಟವನ್ನುಂಟು ಮಾಡಿದಾಗ ದೊಡ್ಡ ಪಾಳೇಗಾರ ಸಾವಂತ ರಾವ್ ನಾಯಕ ಇಸ್ಮಾಯಿಲ್ ಷಾನಿಗೆ ತನ್ನ ಸಾಮ್ರಾಜ್ಯದಲ್ಲಿ ಮುಖ್ಯ ಅಧಿಕಾರಿಯನ್ನಾಗಿ ನೇಮಿಸಿ ಪ್ರಮುಖ ಸ್ಥಾನವನ್ನು ನೀಡುತ್ತೇನೆಂಬ ಆಶ್ವಾಸನೆಯನ್ನು ನೀಡಿದ್ದ. ತನ್ನ ಮಗಳನ್ನು

ಇಸ್ಮಾಯಿಲ್ ಷಾನಿಗೆ ವಿವಾಹಮಾಡಿಕೊಟ್ಟಿದ್ದ. ಕೋಟೆಯ ಮುಖ್ಯಾಧಿಕಾರಿಯನ್ನು ಬಂಧಿಸಿ ಇಸ್ಮಾಯಿಲ್ ಷಾನಿಗೆ ನೀಡಿದ್ದ. ಇತ್ತ ಆಲಂಪನಾ ಇಲಿಯಾಸ್ ಖಾನನನ್ನು ಸೈನ್ಯದ ಮುಖ್ಯ ಸರದಾರನನ್ನಾಗಿ ನೇಮಿಸಿದ. ಈ ಇಲಿಯಾಸ್ ಖಾನ ಅಲಂಪನಾ ಮಗುವಾಗಿದ್ದಾಗ ಸುಶ್ರೂಶ ಮಾಡಿ ಮೊಲೆಹಾಲು ನೀಡಿ ಸಾಕಿದ ದಾಯಿಯ ಮಗನಾಗಿದ್ದ.  ಇವನು ಕೋಟೆಗೆ ಮುತ್ತಿಗೆ ಹಾಕಿದ. ಕೋಟೆಗೆ ಸಂಬಂಧಿಸಿದ ಹಾದಿಗಳನ್ನು ಮುಚ್ಚಿಸಿದ.

ಐನುಲ್ ಮುಲ್ಕ್ ಮತ್ತು ಅಂಗರಖ್ ಖಾನ್ ಒಂದಾಗಿದ್ದಾರೆನ್ನುವುದು ಮತ್ತು ಇಸ್ಮಾಯಿಲನನ್ನು ನೀನು ಇಲ್ಯಾಸ್ ಖಾನನನ್ನು ಜೊತೆಗೂಡಿಕೊಂಡು ಕೋಟೆಯನ್ನು ವಶಪಡಿಸಿಕೊಳ್ಳಬೇಕೆಂದು ಕಿವಿಯೂದುತ್ತಿರುವುದು ಆಲಂಪನಾರಿಗೆ ತಿಳಿದಿರಲಿಲ್ಲ. ಉಪ್ಪುತಿಂದ ಮನೆಗೆ ಎರಡು ಬಗೆಯುವ ಹರಾಮಿ ಗುಣಹೊಂದಿರುವ ಈ ಜನ ಬಾದಶಾಹರೊಂದಿಗೆ ಅವರಿಗೆ ಬೇಕಾದಂತೆ ಮತ್ತು ವೈರಿಗಳೊಂದಿಗೆ ಅವರಿಗೆ ಬೇಕಾದಂತೆ ಮಾತಾಡುವುದರಲ್ಲಿ ಚಾಣಾಕ್ಷರಾಗಿದ್ದರು. ಕೋಟೆಗೆ ಹೋಗುವುದಕ್ಕೆ ತಡಮಾಡಬೇಡ ಎನ್ನುತ್ತ ತಮ್ಮ ಜನರನ್ನು ಬಿಜಾಪುರಕ್ಕೆ ಕಳುಹಿಸಿದರು. ತಮ್ಮ ಷಡ್ಯಂತ್ರದಂತೆ ಆಲಂಪನಾರ ವಿರುದ್ಧ ಅವನ ಸಹೋದರನನ್ನು ಮತ್ತು ಜನರನ್ನು ತಿರುಗಿ ನಿಲ್ಲುವಂತೆ ಪ್ರೋತ್ಸಾಹಿಸುತ್ತಿದ್ದರು. ಹೆಚ್ಚು ಕಮ್ಮಿ ಒಂದು ವರ್ಷದ ತನಕ ಹೀಗೆ ಪಿತೂರಿ ನಡೆಸಿದರು. ಕೆಲವು ಜನರು ಇವರ ಮಾತುಗಳನ್ನು ಕೇಳಿ ವಿರೋಧಿಗಳಾಗಿ ಪರಿವರ್ತನೆಗೊಂಡಿದ್ದರು. ಬಿಜಾಪುರದ ಗವರ್ನರ ಓರ್ವ ತುರ್ಕಿ ಮೂಲದ ಖುರ್ಷಿದ್ ಖಾನನಾಗಿದ್ದ. ಅವನು ಇಸ್ಮಾಯಿಲ್ ಷಾನಿಗೆ ತನ್ನ ಮನೆಯಲ್ಲಿ ಆಸರೆಯನ್ನು ನೀಡಿದ್ದ. ಇಸ್ಮಾಯಿಲ್ ಷಾನ ಪರವಾಗಿ ಇವನು ನಿಂತಿದ್ದ. ಅವರ ಜೊತೆಗೆ ಇರುವೆನೆಂದು ಶಪಥವನ್ನು ಕೂಡ ಮಾಡಿಕೊಂಡಿದ್ದ. ಈ ವಿಚಾರಗಳು ಆಲಂಪನಾರಿಗೆ ತಿಳಿಯುವ ಜೊತೆಗೆ ಕೆಲವರು ಅಲಂಪನಾರ ವೈರಿಗಳೊಂದಿಗೆ ಸೇರಿಕೊಂಡಿದ್ದಾರೆ, ಇನ್ನು ಕೆಲವರು ವೈರಿಗಳನ್ನು ನಿರ್ನಾಮ ಮಾಡುವ ಶಪಥ ಮಾಡಿಕೊಂಡಿದ್ದಾರೆಂಬ ವದಂತಿಗಳು ನಗರದ ನಾಲ್ಕೂ ನಿಟ್ಟಿನಲ್ಲಿ  ಹಬ್ಬತೊಡಗಿದವು. ಈ ಮಧ್ಯೆ ಕುತುಬ್ ಶಾಹನ ಸೈನ್ಯ ಸರಹದ್ದಿನ ಪ್ರದೇಶಗಳಲ್ಲಿ ಜಮಾವಣೆಯಾಗಿ ದೌರ್ಜನ್ಯ ಗಲಾಟೆ ಮಾಡತೊಡಗಿದರು. ಇದನ್ನು ನೋಡಿದ ಬುರ್ಹಾನ್ ಶಾಹ ಕೂಡ ತನ್ನ ಸೈನ್ಯವನ್ನು ಗಡಿ ಪ್ರದೇಶಗಳಲ್ಲಿ ಜಮಾವಣೆ ಮಾಡಿದ. ಇವೆಲ್ಲ ಪಿತೂರಿಗಳು ಒಮ್ಮೆಲೇ ಎದ್ದುದನ್ನು ನೋಡಿ ಗಾಬರಿಗೊಂಡ ಆಲಂಪನಾ ಆಗಾಗ ಸಿಟ್ಟಾಗುತ್ತ ತನ್ನ ಸೇವಕರ ಮೇಲೆ ಹರಿಹಾಯುತ್ತಿದ್ದರು. ನಂತರ ಸುದ್ದಿ ಸಿಕ್ಕಿತೇನೆಂದರೆ ಸ್ವಾಮಿದ್ರೋಹಿ ಐನುಲ್ ಮುಲ್ಕ್ ರಹಸ್ಯವಾಗಿ ಷಡ್ಯಂತ್ರಗಳನ್ನು ರಚಿಸಲು ಇಸ್ಮಾಯಿಲ್ ಷಾ ಇರುವ ಮುಸ್ತಫಾಬಾದ್ ಕೋಟೆಗೆ ಹೋದ. ಅವನನ್ನು ಕೋಟೆಯಿಂದ ಹೊರತಂದು, ಎಲ್ಲ ತಯಾರಿ

ಮಾಡಿ ಸಿಂಹಾಸನದ ಮೇಲೆ ಕೂರಿಸಿದ. ಅವನಿಗೆ ತಾನೂ ಸಲಾಮ್ ಮಾಡಿ ಅಲ್ಲಿನ ಪ್ರಜೆಗಳಿಗೆ ಕೂಡ ಸಲಾಮ್ ಸಲ್ಲಿಸಲು ಹೇಳಿದ. ಆಲಂಪನಾರ ಸೈನ್ಯಕ್ಕೆ ಐನುಲ್ ಮುಲ್ಕನ ಆಗಮನ ಮತ್ತು ಇವೆಲ್ಲ ಬೆಳವಣಿಗೆಯ ಸುದ್ದಿ ತಲಪಿದಾಗ ಮೀರಜ್ ಕೋಟೆಯ ಅಂದರೆ ಮುರ್ತಜಾಬಾದ್ ಕೋಟೆಯ ಕೆಲಸಗಾರರು, ನೌಕರರು ಆಲಂಪನಾರ ವಿರುದ್ಧ ತಿರುಗಿ ನಿಂತು ಇಸ್ಮಾಯಿಲ್ ಷಾನ ಜಪ ಮಾಡತೊಡಗಿದ್ದರು.

ಇತ್ತ ಅಂಗರುಘ್ ಖಾನ್ ಕೋಟೆಯಲ್ಲಿರುವ ಇಪ್ಪತ್ತೈದು ಸಾವಿರ ಸೈನಿಕರ ಜೊತೆಗೆ ಸೇರಿಕೊಂಡು ಪನ್ನಾಕ್ಕೆ ತಲಪಿದ. ಇದರ ಜೊತೆಗೆ ಬುರ್ಹಾನ್ ಶಾಹ ಕೂಡ ಗಲಾಟೆಮಾಡಿ ಕಿರುಕುಳ ನೀಡ ತೊಡಗಿದ. ತಾನೇ ಸ್ವತಃ ಮಂಜಮಾ(?) ತಲಪಿದ. ಈ ಮಧ್ಯೆ ದೇವ ನಾಯಕನ ಚಿಕ್ಕ ಮಗನ ಒಂದು ಪತ್ರ ಮಂತ್ರಿ ರೂಮಿ ಖಾನನ ಕೈಗೆ ತಲಪಿತು.

ಆ ಪತ್ರವು ಐನುಲ್ ಮುಲ್ಕನ ಪತ್ರಕ್ಕೆ ಉತ್ತರ ರೂಪದಲ್ಲಿತ್ತು. ರೂಮಿ ಖಾನ್ ತನ್ನ ಸೈನ್ಯದೊಂದಿಗೆ ನಗರಕ್ಕೆ ಹೋದ. ಅಲ್ಲಿ ಇಸ್ಮಾಯಿಲ್ ಷಾ ಇರುವ ಜಾಗದ ಬಳಿ ಹೋಗಿ 'ನಾನು ಆಲಂಪನಾರ ಸಹಾಯಕನಾಗಿದ್ದೇನೆ. ಮುಂದೆ ಹೋದರೆ ಜಾಗ್ರತೆ, ತಲ್ವಾರಿನಿಂದ ಕೊಚ್ಚಿ ಹಾಕುತ್ತೇನೆ. ನಗರದ ಹೊರಗೆ ನಿನ್ನನ್ನು ಕಾಯುತ್ತ ಕೂತಿದ್ದೇನೆ. ಇಸ್ಮಾಯಿಲ್ ಷಾನನ್ನು ಅಲ್ಲಿರುವವರು ಕರೆದು ತನ್ನಿ. ಇದರಿಂದ ಇಲ್ಲಿನ ರಾಜ್ಯದ ಆಡಳಿತ ಸುಸೂತ್ರವಾಗಿ ನಡೆಸುವಂತಾಗಲಿ. ಇದಕ್ಕೆ ಒಪ್ಪದಿದ್ದರೆ ಎಲ್ಲರನ್ನೂ ಇಲ್ಲೇ ಕಡಿದು ಹಾಕಲಿದ್ದೇನೆ ಎಂದು ಗುಡುಗಿದ.

ನನ್ನನ್ನು(ಶಿರಾಜಿಯನ್ನು) ಮುಖ್ಯ ಸರದಾರನನ್ನಾಗಿ ನೇಮಕಾತಿ ಮಾಡಿ, ಆಜ್ಞೆಯನ್ನೂ ಕೂಡ ನನಗೆ ನೀಡಲಾಯಿತು. ಬಾದಶಾಹರ ಗೈರು ಹಾಜರಿಯಲ್ಲಿ ಅವರ ಕೆಲಸಕಾರ್ಯಗಳನ್ನು ಮಾಡುವಂತೆ ನನಗೆ ಸೂಚನೆಯನ್ನು ನೀಡಲಾಯಿತು. ನನ್ನನ್ನು ನಾಳೆ ಅಹ್ಮದ್ ನಗರಕ್ಕೆ ಕಳುಹಿಸಲಾಗುವುದು ಎಂದು ಸೂಚಿಸಲಾಯಿತು. 'ಯಾ ಅಲ್ಲಾಹ! ಆಲಂಪನಾರಿಗೆ ನಿನ್ನ ಕರುಣೆ ತೋರಿಸು. ಅವರು ಬಡವರಿಗೆ ಸಹಾಯಮಾಡಿದ ವ್ಯಕ್ತಿಯಾಗಿದ್ದಾರೆ. ಓ ದೇವರೇ! ನೀನು ನನ್ನ ಆಪ್ತ ಸ್ನೇಹಿತನಾಗಿದ್ದಿ, ಈ ಸಂಕಷ್ಟದ ಸಮಯದಲ್ಲಿ ನೀನಲ್ಲದೆ ನಮಗಿನ್ನಾರು ಗತಿ?' ಎಂದು ಮನಸ್ಸಿನಲ್ಲೇ ಪ್ರಾರ್ಥಿಸಿದೆ. ನಂತರ ಮೂರು ನಾಲ್ಕು ಮಂದಿಯ ಜೊತೆಗೆ ನನ್ನನ್ನು ಅಹ್ಮದ್ ನಗರಕ್ಕೆ ಕಳುಹಿಸಿದರು. ಬುರ್ಹಾನ್ ಶಾಹ ಮತ್ತು ಕುತುಬ್ ಶಾಹ ಮತ್ತು ೩೦,೦೦೦ಸಾರ್ವಜನಿಕ ಪ್ರಜೆಗಳನ್ನು ಇಸ್ಮಾಯಿಲ್ ಷಾನ ಜೊತೆಯಲ್ಲಿ ನಿಲ್ಲಿಸಿ, ಖುರ್ಷಿದ್ ಖಾನ್ ಬಿಜಾಪುರಕ್ಕೆ ಹೋದ. ಅಲಂಪನಾರ ಬಗ್ಗೆ ಅಂತರಂಗದಲ್ಲಿ ವೈರಿಗಳಾಗಿದ್ದವರು ಅವನೊಂದಿಗೆ ಸೇರಿದ್ದರು. ಹದಿನೈದು ದಿನಗಳ ಬಳಿಕ ಇಸ್ಮಾಯಿಲ್ ಷಾ ಹೊರಬಂದ. ನಗರದ ಬಂದೋಬಸ್ತನ್ನು ನೋಡಿಕೊಂಡ. ಬುರ್ಹಾನ್ ಶಾಹನ

ಪಿತೂರಿಯನ್ನು ತಡೆದ. ಅವನು ತನ್ನನ್ನು ಭೇಟಿಯಾಗಲೂ ಕೂಡ ಬಿಡಲಿಲ್ಲ.

ಈ ಸಮಯದಲ್ಲಿ ತನಗೆ ಬುರ್ಹಾನ್ ಶಾಹನ ಅಗತ್ಯವಿದ್ದರೂ, ತನ್ನನ್ನು ಭೇಟಿಯಾಗಲು ನಿರಾಕರಿಸಿದ್ದು ಆಶ್ಚರ್ಯವಾಗಿತ್ತು. ಇಸ್ಮಾಯಿಲ್ ಷಾನಿಗೆ ಭಯ ಮೂಡತೊಡಗಿತ್ತು. ಈಗ ಅವನು ಹಿಂದಿಗಿಂತ ಹೆಚ್ಚು ಉತ್ತಮ ಸ್ಥಿತಿಯಲ್ಲಿದ್ದ. ಅವನನ್ನು ಭೇಟಿಯಾಗುವವರು ತುಂಬ ಬೆದರಿಸುತ್ತಿದ್ದರು. ಊರ ಪ್ರಮುಖರಲ್ಲಿ ಕೆಲವರು ಯಾವ ಕಡೆಗೆ ವಾಲುವವರೆಂಬುದು ತಿಳಿಯಲಾರದಾಗಿತ್ತು. ಕೆಲವು ಸರದಾರರು ಕೂಡ ಯಾವ ಕಡೆಯವರು ಎಂಬುದು ತಿಳಿಯದೆ ವಿರೋಧಿಗಳ ಜೊತೆ ನಿಂತು ಒತ್ತಡದ ತಂತ್ರ ಹೂಡತೊಡಗಿದರು. ಈ ಸಮಯದಲ್ಲಿ ಹಮೀದ್ ಖಾನ್ ಹಬ್ಶಿಯನ್ನು ಮುಖ್ಯ ಸೇನಾನಿಯನ್ನಾಗಿ ಮಾಡಿ ಉಳಿದ ಪ್ರಮುಖ ಸರದಾರರೊಂದಿಗೆ 'ನೀವು ಕೂಡಲೇ ಅಲ್ಲಿಗೆ ತಲಪ ಬೇಕು, ಭಯ ಪಡದೆ ಧೈರ್ಯದಿಂದ ಮುನ್ನುಗ್ಗಬೇಕು. ಎರಡುದಿನಗಳಲ್ಲಿ ಇದೆಲ್ಲ ಮುಗಿದು ನಾವು ಸೈನ್ಯವನ್ನು ಹಿಂದಕ್ಕೆ ಕರೆಸಬಹುದು' ಎಂದು ಅಲಂಪನಾ ಹೇಳಿ  ಕಳುಹಿಸಿದರು. ಹೀಗೆ ಮಂಗಳವಾರದ ದಿನ ಹಿಜರಿ ವರ್ಷ ಸನ್ ೧೦೦೩ ರಬೀಯುಲ್ ಅವ್ವಲ್ ತಿಂಗಳ ೨೪ನೇ ತಾರೀಖಿನಂದು ಅವರು ರಾಜಧಾನಿಗೆ ಪ್ರಯಾಣ ಬೆಳೆಸಿದರು. ಶುಕ್ರವಾರದ ದಿನ ರಬೀಯುಲ್ ಅವ್ವಲ್ ೨೬ನೇ ದಿನ ಅಲ್ಲಿಗೆ ತಲಪಿದರು. ನನಗೆ ಅಂದೇ ಹುಕೂಮತೆ ದಾರುಸ್ಸಲ್ತನತ್ (ರಾಜಧಾನಿಯ ಉಸ್ತುವಾರಿ) ಕೆಲಸವನ್ನು ಮಾಡಲು ಆಜ್ಞೆ ಹೊರಡಿಸಿದ್ದರು. ಇಂದಿನ ತನಕ ಅದೇ ಚಾಲ್ತಿಯಲ್ಲಿದೆ. ಮುಖ್ಯ ಸರದಾರರ ಹುದ್ದೆಯನ್ನು ಅವರ(ರೂಮಿ ಖಾನರ) ಮಗನ ವಶಕ್ಕೆ ನೀಡಿದರು. ಭಾನುವಾರದಂದು ಇದೇ ತಿಂಗಳ ೨೮ರಂದು ರೂಮಿ ಖಾನ್, ರಿಯಾಝ್ ಖಾನ್ ಮತ್ತು ಅಜೀಝ್ ಖಾನ್ ಎಲ್ಲರೂ ಅಪ್ಪಾಜಿ ಪಂಡಿತನೊಂದಿಗೆ ಸೇರಿ ಅಲ್ಲಿನ ರಾಜ್ಯವನ್ನು ನೋಡಿಕೊಂಡರು. ಅಲ್ಲಿನ ಮುಖ್ಯ ಸರದಾರ ದೇವನಾಯಕನನ್ನು ಬಂಧನದಲ್ಲಿದ್ದ. ರೂಮಿ ಖಾನ್ ಎರಡುವರ್ಷಗಳು ಕಳೆದ ನಂತರ ತೀರಿಕೊಂಡ. ಎರಡೂ ಸೈನ್ಯಗಳು ಮುಂದೆ ರಾಮ್‌ಪಾಕ್ ಫರ್ಗನಾಕ್ಕೆ ತಲಪಿದರು. ಆಲಂಪನಾರ ಸೈನ್ಯ ಮರುದಿನ ತಯಾರಿ ಮಾಡಿಕೊಂಡು ವೈರಿಗಳನ್ನು ಎದುರಿಸಲು ಪ್ರಯಾಣ ಬೆಳೆಸಿತು. ಯುದ್ಧ ಪ್ರಾರಂಭವಾದಾಗ ವೈರಿಗಳ ಮೇಲೆ ತೋಪುಗಳ ದಾಳಿ ನಡೆಸಿದರು. ಇದರಿಂದ ವೈರಿ ಸೈನ್ಯ ಅತ್ಯಂತ ಗಾಬರಿಗೊಂಡು ದಿಕ್ಕುತಪ್ಪಿದಂತಾದರು. ಆಲಂಪನಾ ಸಮಯನೋಡಿ ತಮ್ಮ ದೊಡ್ಡ ಆನೆಯನ್ನು ಐನುಲ್ ಮುಲ್ಕನ ಮೇಲೆ ಛೂಬಿಟ್ಟರು. ಇದರಿಂದ ಅವನು ಜಖಂ ಗೊಂಡು ಕುದುರೆಯಿಂದ ದೊಪ್ಪನೆ ಬಿದ್ದುಬಿಟ್ಟ. ಅವನನ್ನು ಇನ್ನೊಂದು ಆನೆಯ ಮೇಲೆ ಕೂರಿಸಿ ಸಾಗಹಾಕಿದರು. ಆದರೆ ಅವನ ಪರಿಸ್ಥಿತಿ ತುಂಬ ಚಿಂತಾಜನಕವಾಗಿತ್ತು. ತನ್ನ ಮಗನನ್ನು ಕರೆದು ಇಲ್ಲಿ ನಿಲ್ಲದಿರು ಇಲ್ಲಿಂದ ಕೂಡಲೇ ಹೋಗು ಎಂದು

ಹೇಳಿದ. ಅವನನ್ನು ಸೆರೆಹಿಡಿದು ಶಿರಚ್ಛೇಧ ಮಾಡಲಾಯಿತು. ಅವನ ಶಿರವನ್ನು ಕೆಲವು ದಿನಗಳ ಕಾಲ ಬಿಜಾಪುರದ ಕೋಟೆಯ ಮುಖ್ಯದ್ವಾರದಲ್ಲಿ ನೇತು ಹಾಕಲಾಯಿತು.

(ಶಿರಾಜಿ ತನ್ನ ಬಗ್ಗೆ ಹೇಳುತ್ತಾನೆ) ನನ್ನ ಸಹೋದರ ಸಂಬಂಧಿ ಮೊಯೀನುದ್ದೀನ್ ಮುಹಮ್ಮದ್ ಈ ವಿಜಯದ ಬಗ್ಗೆ ಒಂದು ಅಶಾರ್ ಪದ್ಯ ಬರೆದಿದ್ದ. ಇದರ ಒಂದು ಸಾಲು 'ಬಿರಾದರ್ ಸಜಾಬೂದ್ ಸರೇ ಐನುಲ್ ಮುಲ್ಕ್' ಎಂದು ಬರೆದಿದ್ದ. ಇದರಲ್ಲಿ ಅವನ ಮರಣದ ವರ್ಷ ಒಳಗೊಂಡಿತು. ಹೀಗೆ ಅಲ್ಲಾಹನ ದಯೆಯಿಂದ ಎದುರಾದ ಒಂದು ದೊಡ್ಡ ಕಂಟಕ ಸುಲಭದಲ್ಲಿ ಪರಿಹಾರವಾಯಿತು. ನಂತರ ಗೂಂಡಾ ಮವ್ವಾಲಿಗಳಂತೆ ಬೆಳೆದಿದ್ದ ಐನುಲ್ ಮುಲ್ಕನ ಮಗ ಮತ್ತು ಅಂಗಝ್ಹ್ ಖಾನನ ಮಗ ಅವರ ಆದೇಶದಂತೆ ಮಾಲು, ಸಾಮಾನು ಸರಂಜಾಮುಗಳನ್ನು ಸಾಗಿಸಿಕೊಂಡು ಪೆನುಗೊಂಡ ಮತ್ತು ಹಂಪಾನಗರದತ್ತ ತೆರಳಿ ಅಲ್ಲಿನ ಹಿಂದೂ ರಾಜರುಗಳೊಂದಿಗೆ ಸೇರಿಕೊಂಡರು.

ಕೆಲವು ಸಮಯದ ನಂತರ ಅಂಗಝ್ಹ್ ಖಾನ್ ಬಾದಶಾಹನ ಆದೇಶದಂತೆ ಆಲಂಪನಾರ ಸರದಾರರೊಂದಿಗೆ ಸೇರಿಕೊಂಡ. ನಂತರ ಅವನು ಅಧಿಕಾರಿ ಹುದ್ದೆಯನ್ನು ಪಡೆದುಕೊಂಡ. ಆಲಂಪನಾ ಈ ವಿಜಯೋತ್ಸವದ ಭಾಗವಾಗಿ ಪ್ರಜೆಗಳಿಗೆ ಉಡುಗೊರೆ ಫಲಕಾಣಿಕೆ ನೀಡಿ ಖುಶಿಪಡಿಸಿದರು. ಬುರ್ಹಾನ್ ಶಾಹ್ ಈ ಸೋಲಿನಿಂದ ತುಂಬ ನಾಚಿ, ಜರ್ಝರಿತನಾಗಿ ಹಿಂತಿರುಗಿದ. ಆದರೆ ದಖ್ಖಣಿ, ಹಬ್ಶಿ, ವಿದೇಶೀಯರನ್ನೊಳಗೊಂಡ ಅವನ ಸೈನ್ಯ ತಮ್ಮ ಅಹಂಕಾರವನ್ನು ಪ್ರದರ್ಶಿಸುತ್ತ ಮುಂದಿನ ಪಿತೂರಿಯನ್ನು ಹೆಣೆಯುತ್ತ ಸರಹದ್ದಿನ ಸಮೀಪದಲ್ಲಿ ನಿಂತರು. ಇದರ ಪ್ರಕಾರ ದೌರ್ಜನ್ಯ, ಗುಲ್ಲು ಗಲಾಟೆಯಲ್ಲಿ ತೊಡಗಿದರು. ಯಾಕೆಂದರೆ ಬುರ್ಹಾನ್ ಶಾಹನ ಸೈನ್ಯದಲ್ಲಿ ಅಧಿಕಾರಿಗಳು ವಿದೇಶೀಯರಾಗಿ ದಖ್ಖಣಿಯ ಸೈನಿಕರು ಅತೃಪ್ತರಾಗಿದ್ದರು. ಇದರಿಂದಾಗಿ ಅವರೊಳಗೆ ಘರ್ಷಣೆ ನಡೆದು ಸ್ಥಳೀಯರು ಮೂರು ವಿದೇಶೀಯರನ್ನು ಕೊಂದು ಹಾಕಿ, ಹಲವರನ್ನು ಓಡಿಸಿದರು. ಇಖ್ಲಾಸ್ ಖಾನ್ ಹಬ್ಶಿ ಈ ಒಳಜಗಳದಿಂದ ಅತೃಪ್ತನಾಗಿ ಒಂದು ದೊಡ್ಡ ಸೈನ್ಯವನ್ನು ಕಟ್ಟಿಕೊಂಡು ಬುರ್ಹಾನ್ ಶಾಹನ ವಿರುದ್ಧ ನಿಂತ. ನಂತರ್ ಬುರ್ಹಾನ್ ಶಾಹನ ರಾಜ್ಯದತ್ತ ನಡೆದ. ಆಗ ಬುರ್ಹಾನ್ ಶಾಹ ಮುದುಕನಾಗಿ ದುರ್ಬಲನಾಗಿದ್ದ. ಆದರೂ ಅವನು ತನ್ನ ಸೈನ್ಯವನ್ನು ಒಟ್ಟುಗೂಡಿಸಿ ಕೋಟೆಯ ಹೊರಗೆ ಯುದ್ಧಕ್ಕೆ ತಯಾರಾಗಿ ನಿಂತ. ಇಖ್ಲಾಸ್ ಖಾನ್ ತನ್ನೆಲ್ಲ ಶಕ್ತಿಯೊಂದಿಗೆ, ಶೌರ್ಯದಿಂದ ಕಾದಾಡಿದ. ತೋಪು, ಬಾರೂದುಗಳನ್ನೂ ಯುದ್ಧದಲ್ಲಿ ಬಳಸಲಾಯಿತು.. ಈ ಮಧ್ಯೆ ಇಖ್ಲಾಸ್ ಖಾನನ ಸೈನಿಕರು ಎದುರಾಳಿಗಳ ತೋಪುಗಳ ಹಾರಾಟದ ರಭಸಕ್ಕೆ ಎದೆಗುಂದಿ ಸೋತರು.

ಬುರ್ಹಾನ್ ಖಾನ್ ಈ ವಿಜಯದ ನಂತರ ತನ್ನ ಕೋಟೆಯಲ್ಲಿ ತಂಗಿದ. ಸ್ವಲ್ಪ ಕಾಲದ ನಂತರ ರೋಗದಿಂದ ನರಳಿ ಬುರ್ಹಾನ್ ಖಾನ್ ತೀರಿಕೊಂಡ. ಇವನ ಆಳ್ವಿಕೆ ನಾಲ್ಕು ಫರ್ಷಗಳ ಕಾಲ ಜಾರಿಯಲ್ಲಿತ್ತು.

**ಬುರ್ಹಾನ್ ಶಾಹನ ಮಗ ಇಬ್ರಾಹಿಂ ಶಾಹನ ಆಳ್ವಿಕೆಯ ವಿವರಗಳು:**

ಬುರ್ಹಾನ್ ಶಾಹ ರೋಗದಿಂದ ನರಳುತ್ತಿರುವಾಗ ತನ್ನ ಮಗ ಇಬ್ರಾಹಿಂ ಶಾಹನನ್ನು ಕರೆದು ತನ್ನ ವಾರೀಸುದಾರನನ್ನಾಗಿ ನೇಮಿಸಿದ. ಅವನ ಮರಣಾ ನಂತರ ಇವನು ಆಳ್ವಿಕೆಯನ್ನು ಮುಂದುವರಿಸಿದ. ಬುರ್ಹಾನ್ ಶಾಹ ತೀರಿಕೊಳ್ಳುವ ಮುಂಚೆ ಕಟ್ಟಿದ್ದ ಬೃಹತ್ ಸೈನ್ಯದ ಅಗತ್ಯವನ್ನು ಇಬ್ರಾಹಿಂ ಶಾಹ ಕಂಡುಕೊಳ್ಳಲಿಲ್ಲ. ಇವನು ಹೊಸ ಸೈನ್ಯವನ್ನು ಕಟ್ಟಿಕೊಂಡು ಯುದ್ಧವನ್ನು ಮಾಡಲು ತೊಡಗಿದ. ಅಲ್ಲಿ ಆಲಂಪನಾ ತನ್ನ ಸೈನ್ಯವನ್ನು ಮತ್ತೆ ಎಲ್ಲಾದರೂ ಯುದ್ಧವಾದಲ್ಲಿ ಸಶಕ್ತವಾಗಿ ಎದುರಿಸಲು ತಯಾರಾಗಿರುವಂತೆ ತಯಾರಿಯಲ್ಲಿ ವ್ಯಸ್ತರಾದರು. ದಿನವೂ ಎರಡೂ ಕಡೆಯಲ್ಲಿ ಘರ್ಷಣೆ ನಡೆದು ಜನ ಸಾಯುತ್ತಿದ್ದರು. ಇದರಿಂದಾಗಿ ಅವರು ಯುದ್ಧಕ್ಕೆ ಸಂಪೂರ್ಣ ತಯಾರಿ ಮಾಡಿ ತಮ್ಮ ವೈರಿಗಳನ್ನು ಎದುರಿಸಲು ಹೋದರು. ಆ ನಿರ್ದಿಷ್ಟ ರಾತ್ರಿ ತನ್ನ ಸರದಾರರೊಂದಿಗೆ ವೈಯಕ್ತಿಕ ಭೇಟಿ ಮಾಡುತ್ತಿದ್ದ. ಅವನೊಂದಿಗೆ ಬಹಳಷ್ಟು ಜನ ಹಬ್ಶಿಗಳು ಇದ್ದರು. ವಿದೇಶೀಯರ ಒಂದು ದೊಡ್ಡ ಗುಂಪು ಇದ್ದವು. ಬಾದಶಾಹನಿಗೆ ಅವರ ಮೇಲೆ ಬಹಳ ಭರವಸೆಯಿತ್ತು. ಇವರು ಬಹಳ ಶೂರರೂ ಬುದ್ಧಿವಂತರೂ ಆಗಿದ್ದರು. ಅವರಿಗೆ ತರಬೇತಿ ನೀಡಿ, ಯುದ್ಧದಲ್ಲಿ ಪರಿಣಿತರನ್ನಾಗಿ ಮಾಡಿ ಉಪಯೋಗಿಸಲು ಸಾಧ್ಯವಿತ್ತು. ದಕ್ಷಿಣದ ಸ್ಥಳೀಯ ಸರದಾರರು ಆ ಕಾಲದಲ್ಲಿ ಒಳ್ಳೇ ಶಕ್ತಿವಂತರೂ ಪ್ರಭಾವಿಗಳೂ ಆಗಿದ್ದರು. ಇವರು ತಾವು ಶೀಘ್ರವಾಗಿ ಈ ಬಾದಶಾಹನನ್ನು ಬದಲಾಯಿಸಬೇಕು ಇಲ್ಲವಾದಲ್ಲಿ ಸ್ಥಳೀಯರಾದ ದಕ್ಷಿಣದವರನ್ನು ನಿರ್ನಾಮ ಮಾಡುತ್ತಾನೆ ಎಂದು ಯೋಚಿಸಿದರು. ಈ ಉದ್ದೇಶದಲ್ಲಿ ಸ್ಥಳೀಯ ಮತ್ತು ವಿದೇಶಿ, ಎರಡೂ ಕಡೆಯ ಸರದಾರರು ಯುದ್ಧದ ಹುರುಪನ್ನು ತೋರಿಸಿದರು. ಈ ಉದ್ದೇಶದಲ್ಲಿ ಆರು ಸಾವಿರ ಸವಾರಿ ಸೈನ್ಯವನ್ನು ತಯಾರಿ ಮಾಡಿ ರಣರಂಗದಲ್ಲಿ ಆಲಂಪನಾರ ಸೈನ್ಯದೆದುರು ನಿಲ್ಲಿಸಿದ. ಎದುರುಬದುರಾಗಿ ನಿಂತು ಯುದ್ಧ ಜೋರಾಗಿ ಶುರುವಾಯಿತು. ಕೊಲ್ಲುವುದು ಹೊಡೆಯುವುದು ಹೆಚ್ಚಾಯಿತು. ಇದರಿಂದ ಯಾರ ಮೇಲುಗೈಯಾಯಿತೆಂದು ತಿಳಿಯುವುದು ಸಾಧ್ಯವಾಗಲಿಲ್ಲ. ಎರಡೂ ಕಡೆಯಲ್ಲಿ ಸೈನಿಕರು ಚೆಲ್ಲಾಪಿಲ್ಲಿಯಾಗಿ ಬಿಟ್ಟಿತು. ಈ ಸಂದರ್ಭದಲ್ಲಿ ಆಲಂಪನಾರ ಆನೆಗಳ ಗುಂಪು ವೈರಿಗಳ ಮೇಲೆ ನುಗ್ಗಿ ಎಗರಿಕೊಂಡು ಸೈನಿಕರನ್ನು ಕೊಲ್ಲುತ್ತ ನಡೆದು ಮುಂದೆ ಬಂತು. ಮಕ್ಸೂದ್ ಖಾನ್ ಈ ಆನೆಗಳ ಸೈನ್ಯದ ನೇತೃತ್ವ ವಹಿಸಿ ಎತ್ತರದ ಪ್ರದೇಶದಿಂದ ದಾಳಿ ನಡೆಸುತ್ತ ಬಂದುದರಿಂದ ವೈರಿ ಸೈನ್ಯ ಸೋತು ಸುಣ್ಣವಾಯಿತು.

ಆಲಂಪನಾರ ಸೈನ್ಯ ವಿಜಯಿಯಾಗಿ ತಿರುಗಿ ಬಂತು. ಸಂಪೂರ್ಣ ಸರದಾರರು ಆರೋಗ್ಯಪೂರ್ಣರಾಗಿ ಆಲಂಪನಾರ ದರ್ಬಾರಿಗೆ ಹಿಂತಿರುಗಿದರು. ಗುಪ್ತಚಾರರ ಮೂಲಕ ಅರ್ಧರಾತ್ರಿ ಹೊತ್ತು ಸುದ್ದಿ ಬಂತೇನೆಂದರೆ ವೈರಿ ಸೈನ್ಯ ಪರಂದ ಕೋಟೆಯೊಳಗೆ ಹೊಕ್ಕು ಆರಾಮ ಮಾಡುವುದಕ್ಕಾಗಿ ಯೋಜನೆ ಹೂಡಿದ್ದಾರೆ, ಇಬ್ರಾಹಿಂ ಶಾಹ ತನ್ನ ಕೈಯಲ್ಲಿ ಬಿಲ್ಲು ಬಾಣಗಳನ್ನು ಹಿಡಿದು ಕುದುರೆಯಿಂದ ಇಳಿದು ಸೈನ್ಯದೊಂದಿಗೆ ನಡೆಯುತ್ತಿದ್ದಾನೆಂಬ ಸುದ್ದಿ ತಂದರು.

**ಆಲಂಪನಾರು ವಿಜಯೋತ್ಸವದ ನಂತರ ರಾಜಧಾನಿ ಬಿಜಾಪುರಕ್ಕೆ ಹಿಂತಿರುಗಿದ ವಿವರಗಳು:**

ಸೈನ್ಯ ಯುದ್ಧ ರಂಗದಿಂದ ಹಿಂತಿರುಗಿದಾಗ ಸಾಮಾನು ಸರಂಜಾಮುಗಳನ್ನು ಶಸ್ತ್ರಾಸ್ತ್ರಗಳು, ಕುದುರೆ, ಆನೆಗಳ ಜೊತೆ ಶಾ ದುರ್ಗಕ್ಕೆ ಕಳುಹಿಸಲಾಯಿತು. ದಿಲ್ ಹಜ್ ತಿಂಗಳ ಕಳೆದ ನಂತರ ಕೃಷ್ಣಾ ನದಿಯ ದಡಕ್ಕೆ ಹೋಗಿ ಅಲ್ಲಿಯ ಮೈದಾನದಲ್ಲಿ ತಂಗಿ ಮೊಹರ್‍ರಂ ಆಶುರಾದ ವಿಧಿಗಳನ್ನು ಹುತಾತ್ಮರಾದ ಪೈಗಂಬರರ ಮೊಮ್ಮಕ್ಕಳಾದ ಹಸನ್, ಹುಸೈನರ ನೆನಪಿಗಾಗಿ ತಾಜಿಯಾ ಮಾಡಿ ಝಿಯಾರತ್ ಮಾಡುವ ಉದ್ದೇಶ ವ್ಯಕ್ತಪಡಿಸಿದರು. ಇವೆಲ್ಲ ಆಚರಣೆಗಳು ಮುಗಿದ ನಂತರ ಇಡೀ ಬಿಜಾಪುರ ಪಟ್ಟಣವನ್ನು ಸಿಂಗರಿಸಬೇಕು, ಇದಕ್ಕೆ ಆಗುವ ಖರ್ಚುವೆಚ್ಚಗಳ ಬಗ್ಗೆ ಯೋಚಿಸದೆ ಕೋಟೆಯ ಮುಖ್ಯ ದ್ವಾರದಿಂದ ಅಲ್ಲಾಪುರದ ದ್ವಾರದ ತನಕ ಮತ್ತು ಮಾರುಕಟ್ಟೆ, ಬಾಜಾರಿನ ಮಾರ್ಗಗಳಲ್ಲಿ ಕನ್ನಡಿಗಳನ್ನು ಇಟ್ಟು ಸಿಂಗರಿಸ ಬೇಕೆಂದು ಆಜ್ಞೆ ಮಾಡಿದರು. ಅಲ್ಲಿರುವ ಎಲ್ಲ ಮರಗಳಲ್ಲಿ, ಆವರಣ ಕಟ್ಟೆಗಳನ್ನು ಬಣ್ಣದ ಬಟ್ಟೆಗಳಿಂದ ಸಿಂಗರಿಸಿ, ಸಂಗೀತಗಾರರು, ಹಾಡುಗಾರರು, ನೃತ್ಯಗಾರರ ಗುಂಪನ್ನು ಹಾದಿಯ ಇಬ್ಬದಿಯಲ್ಲೂ ವೇದಿಕೆಗಳಲ್ಲಿ ಕಾರ್ಯಕ್ರಮಗಳನ್ನು ನೆರವೇರಿಸುವ ವ್ಯವಸ್ಥೆಗಳನ್ನು ಮಾಡಿದ್ದರು. ಬಾಜಾರುಗಳ ಎರಡೂ ಬದಿಗಳನ್ನು ವಿಶೇಷವಾಗಿ ಸಿಂಗರಿಸಲಾಯಿತು. ಕೋಟೆಯ ಬಾಗಿಲುಗಳನ್ನು ಇರಾನಿ, ಖೊರಾಸಾನಿ ಕುಶಲಕರ್ಮಿಗಳಿಂದ ಹೊಸತಾಗಿ ಮಾಡಿಸಲಾಯಿತು. ಇದರಿಂದಾಗಿ ರಾಜ್ಯದ ಹೊರಗಿನ ಪ್ರಾಂತೀಯ ಬಾದಶಾಹರು, ರಾಜರುಗಳು ಆದಿಲ್ ಶಾಹಿ ಸಾಮ್ರಾಜ್ಯದ ವೈಭವವು ತಿಳಿಯಲಿ ಎಂಬುದು ಇದರ ಉದ್ದೇಶವಾಗಿತ್ತು. ವಿಶ್ವದಲ್ಲಿ ಈ ರೀತಿಯ ವೈಭವ ಎಲ್ಲಿಯೂ ಇಲ್ಲ ಎಂಬುದನ್ನು ಸಾಬೀತು ಪಡಿಸಲಾಯಿತು.

ನಂತರ ಆಲಂಪನಾ ಹಿಜರಿ ಸನ್ ೧೦೦೩ನೇ ವರ್ಷದ ಮೊಹರ್‍ರಂ ತಿಂಗಳ ೧೪ನೇ ದಿನ ತನ್ನ ಆನೆಯ ಮೇಲೆ ಪರ್ವತದಷ್ಟು ಎತ್ತರದ ಅಂಬಾರಿಯಲ್ಲಿ ಕೂತು ಮೆಲ್ಲ ಮೆಲ್ಲನೆ ಸವಾರಿ ಮಾಡುತ್ತ ಸುತ್ತಲಿನ ದೃಶ್ಯಗಳನ್ನು ನೋಡುತ್ತ ಮೆರವಣಿಗೆ ನಡೆಸಿದರು. ಪ್ರಜೆಗಳು ಹಾದಿಯ ಎರಡೂ ಬದಿಯಲ್ಲಿ ಸಂತಸದಿಂದ ಆಕಡೆ ಈಕಡೆ

ಓಡಾಡುತ್ತಿದ್ದರು. ಅಲ್ಲಿಂದ ತನ್ನ ಅರಮನೆಯ ಆವರಣದಲ್ಲಿರುವ ಎರಡೂ ಬದಿಯ ಹೂದೋಟಗಳನ್ನು ನೋಡುತ್ತ ಸವಿಯುತ್ತ ಮುಂದುವರಿದರು. ಹೂದೋಟದ ಗಿಡ ಮರಗಳು ಚೆನ್ನಾಗಿ ಹಸಿರಾಗಿ ಬೆಳೆದು ಕಂಗೊಳಿಸಿದ್ದವು. ಈ ಹೂ ದೋಟಗಳು ಎಷ್ಟೊಂದು ಹಸಿರಾಗಿ ಬೆಳೆದಿವೆಯೆಂದರೆ ಹತ್ತುವರ್ಷಗಳು ಕಳೆದರೂ ಹೊಚ್ಚಹೊಸದಾಗಿ ಮಾಡಿದ ತೋಟದಂತಿವೆ ಎಂದು ಆಲಂಪನಾ ಅತ್ಯಂತ ಸಂತಸ ಪಟ್ಟುಕೊಂಡರು.

ಆಲಂಪನಾ ಸದಾ ತನ್ನ ರಾಜ್ಯದ ಜನತೆಯ ಮೇಲೆ ದಯಾಮಯರಾಗಿರುತ್ತಿದ್ದರು. ಅವರ ನ್ಯಾಯಪರಿಪಾಲನೆ ಸರ್ವರಿಗೂ ಸಮಾನವಾಗಿತ್ತು. ರಾಜ್ಯಾಡಳಿತದ ಕೆಲಸವನ್ನು ಸ್ವತಃ ನೋಡಿಕೊಳ್ಳುತ್ತಿದ್ದರು. ಪ್ರತೀದಿನ ಎರಡು ಗಂಟೆಯಿಂದ ಏಳುಗಂಟೆಯ ತನಕ ತನ್ನ ಸಿಂಹಾಸನದಲ್ಲಿ ಕೂತು ಎಲ್ಲರ ಅಗತ್ಯಗಳು ಮತ್ತು ರಾಜ್ಯದ ಪ್ರಜೆಗಳ ಅಗತ್ಯಗಳನ್ನು ಪೂರೈಸುತ್ತಿದ್ದರು. ಆಸ್ಥಾನದ ಮತ್ತು ರಾಜ್ಯದ ಚಿಕ್ಕ ದೊಡ್ಡವರ ಅಹವಾಲುಗಳನ್ನು ಸ್ವೀಕರಿಸಿ ಅದಕ್ಕೆ ಪರಿಹಾರ ನೀಡುತ್ತಿದ್ದರು. ಗುಪ್ತಚರರ ವರದಿಗಳನ್ನು ಕೂಲಂಕುಷವಾಗಿ ಪರಿಶೀಲಿಸುತ್ತಿದ್ದರು. ಈ ವಿಚಾರದಲ್ಲಿ ತನ್ನ ತೀರ್ಮಾನಕ್ಕೆ ಮಹತ್ವ ನೀಡುತ್ತಿದ್ದರೇ ಹೊರತು ಹೊರಗಿನವರ ಪ್ರವೇಶಕ್ಕೆ ಆಸ್ಪದ ನೀಡುತ್ತಿರಲಿಲ್ಲ. ಹೀಗೆ ಅವರು ತಮ್ಮ ರಾಜ್ಯದ ಸಂಪೂರ್ಣ ಕೆಲಸವನ್ನು ಯಾವುದೇ ಅಡಚಣೆಯಿಲ್ಲದೆ ಆಳ್ವಿಕೆಯ ಮೂಲಕ ನಡೆಸಿದರು. ಆಡಳಿತವನ್ನು ಗಟ್ಟಿ ಮತ್ತು ವ್ಯವಸ್ಥಿತವನ್ನಾಗಿ ಮಾಡಿದ ನಂತರ ನಿಜಾಂ ಶಾಹನ ಮೇಲೆ ತನ್ನ ಸೈನಿಕರನ್ನು ಸಜ್ಜುಗೊಳಿಸಿ ದಾಳಿ ನಡೆಸಿದರು. ನಿಜಾಂ ಶಾಹನ ಸೈನ್ಯ ಅಲಂಪನಾರ ಸೈನ್ಯದ ಹೊಡೆತದಿಂದ ಚೂರು ಚೂರಾಯಿತು. ಸಮಯಾವಕಾಶ ನೋಡಿ ಪ್ರಖ್ಯಾತ ಸಪ್ತ ಕೋಟೆಗಳು ಕುಂದಹಾರ, ಕಂಡಾಣ, ಪೂನಾ, ಜಾಗಲ್‌ಸಪ್ಪಾ, ಬಜೋಲ್, ಹಿಂದೂಪುರ ಮತ್ತು ಜಾವಳಿಗಳನ್ನು ವಶಪಡಿಸಿಕೊಂಡು ಅವುಗಳ ಉಸ್ತುವಾರಿ, ಮೇಲ್ವಿಚಾರಣೆಗೆ ತನ್ನ ಜನರನ್ನು ನೇಮಿಸಿದರು. ಹೀಗೆ ತನ್ನ ರಾಜ್ಯವನ್ನು ವಿಸ್ತಾರಗೊಳಿಸಿದರು. ಸೈನ್ಯವನ್ನು ಬಲಿಷ್ಠವಾಗಿ ಕಟ್ಟಿದರು.

ಬಹಳ ಕಾಲದಿಂದ ದೆಹಲಿಯ ಅಕ್ಬರ್ ಬಾದಶಾಹ ದಕ್ಷಿಣ ಭಾರತದ ಮೇಲೆ ದಾಳಿ ನಡೆಸುವ ಬಗ್ಗೆ ಯೋಚಿಸುತ್ತಿದ್ದ. ಈ ಪ್ರಯತ್ನ ಅವನಲ್ಲಿ ಸದಾ ಜಾಗೃತವಾಗಿತ್ತು. ಈ ಮಧ್ಯೆ ಬುರ್ಹಾನ ಶಾಹ ತನ್ನ ಪರಂಪರೆಯ ರಾಜ್ಯವನ್ನು ಪುನಃ ಪಡೆಯಲು ಅಕ್ಬರ್ ಬಾದಶಾಹನ ಸಹಾಯವನ್ನು ಯಾಚಿಸಿದ. ಅಕ್ಬರ್ ಬಾದಶಾಹ ತನ್ನ ಸಾಮ್ರಾಜ್ಯದ ಗಡಿಯಲ್ಲಿರುವ ಅಧಿಕಾರಿಗಳಿಗೆ ಫರ್ಮಾನು ಕಳುಹಿಸಿದ. ಬರ್ಹಾನ್ ಶಾಹ ಬಂದು ತನ್ನ ಕಳೆದ ರಾಜ್ಯವನ್ನು ಮತ್ತೆ ವಶಪಡಿಸಿಕೊಂಡ. ಅಕ್ಬರ್ ಬಾದಶಾಹ ಸಂತೋಷದಿಂದ ಅವನ ರಾಜ್ಯವನ್ನು ಅವನಿಗೆ ನೀಡಿದ. ದಕ್ಷಿಣದ ಬಾದಶಾಹನೆಂದು ಬುರ್ಹಾನ್ ಶಾಹನನ್ನು ಕರೆದ.

**‘ಹಿಂದಿಯಾಪುರ’ ಎಂಬ ಹೆಸರನ್ನು ಬದಲಾಯಿಸಿ ‘ಬಿಜಾಪುರ’ ಎಂದು ಕರೆಯಲಾದುದರ ಹಿನ್ನೆಲೆ ಮತ್ತು ‘ನೌರಸ್‌ಪುರ್’ ಪಟ್ಟಣವನ್ನು ಕಟ್ಟುವ ಕೆಲಸದಲ್ಲಿ ತೊಡಗಿದ ವಿವರಗಳು:**

ನೌರಸ್‌ಪುರ ಪಟ್ಟಣವನ್ನು ಹಿಜರಿವರ್ಷದ ೧೦೦೮ರಲ್ಲಿ ಕಟ್ಟಲು ಶುರುಮಾಡಲಾಯಿತು. ಬಾದಶಾಹರು ತಮ್ಮ ಖಜಾನೆಯಿಂದ ಬಂಗಾರದ ದೊಡ್ಡ ಮೌಲ್ಯದ ಹಣವನ್ನು ಈ ಬಿಜಾಪುರ ನಗರದಿಂದ ನೌರಸ್‌ಪುರದ ತನಕ ಕಟ್ಟಡಗಳನ್ನು ಕಟ್ಟಿಸಲು, ಬಜಾರುಗಳನ್ನು ಹೊಸತಾಗಿ ನಿರ್ಮಿಸಲು ಖರ್ಚುಮಾಡಲು ಏರ್ಪಾಡು ಮಾಡಿದರು. ಇದಕ್ಕೆ ಬೇಕಾದ ಒಂದು ಫರ್ಲಾಂಗಿನಷ್ಟು ಸ್ಥಳವನ್ನು ನಿಗದಿಪಡಿಸಲಾಗಿ, ಕೆಲಸದ ಜವಾಬ್ದಾರಿಯನ್ನು ತನ್ನ ದರ್ಬಾರಿಗಳು, ಮಂತ್ರಿ ಪ್ರಮುಖರಿಗೆ ವಹಿಸಿಕೊಟ್ಟರು. ಪ್ರತೀದಿನ ೨೦,೦೦೦ ಕೆಲಸಗಾರರು ಕಟ್ಟಡಗಳ ಕೆಲಸದಲ್ಲಿ ತೊಡಗಿದ್ದರು. ಇವರಲ್ಲಿ ಕಲ್ಲಿನ ನಾಜೂಕಿನ ಕೆತ್ತನೆಯ ಕೆಲಸಗಾರರು, ಶಿಲ್ಪಿಗಳು, ತಜ್ಞರು ಸೇರಿದ್ದರು. ಬಾದಶಾಹರ ಖಾಸಗಿ ಉಪಯೋಗಕ್ಕಾಗಿ ಅರಮನೆ ಮಹಲು, ಹೂದೋಟಗಳನ್ನು ನಿರ್ಮಿಸಲು ಆಜ್ಞೆಯನ್ನು ನೀಡಿದ್ದರು. ಈ ಅರಮನೆಯ ವಿಸ್ತಾರ, ಕಟ್ಟಡದ ಸೌಂದರ್ಯ, ಮಜಬೂತಿನಲ್ಲಿ ಯಾವುದೇ ಕೊರತೆ ಉಂಟಾಗದಂತೆ ನಿಗಾವಹಿಸಬೇಕೆಂದೂ ಸೂಚಿಸಲಾಗಿತ್ತು. ಈ ಪ್ರಕಾರ ಆಲಂಪನಾರ ಖಾಸಗಿ ವಾಸ್ತವ್ಯಕ್ಕಾಗಿ ಸಾಕಷ್ಟು ವಿಸ್ತಾರವಾದ, ಎತ್ತರವಾದ, ಸುಂದರವಾದ ಅರಮನೆಯನ್ನು ಕಟ್ಟಲು ಶುರುಮಾಡಿದರು. ಇದರ ನಾಲ್ಕು ದಿಕ್ಕುಗಳಲ್ಲೂ ಸುಂದರವಾದ ಹೂದೋಟಗಳನ್ನು ಮಾಡಲಾಯಿತು. ಅವರ ಪತ್ನಿಯರಿಗಾಗಿ ಮೂರು ನಾಲ್ಕು ಬೇರೆ ಬೇರೆ ಮಹಲುಗಳನ್ನು ಮಾಡಲಾಯಿತು. ಇವುಗಳಲ್ಲಿ ಪ್ರತಿಯೊಂದು ಕಟ್ಟಡವೂ ಕೂಡ ಸಾಕಷ್ಟು ವಿಸ್ತಾರವಾಗಿ ಮತ್ತು ಸುಂದರವಾಗಿದ್ದವು.

ಬಾದಶಾಹರ ದರ್ಬಾರಿಗಾಗಿ ೧೦೦ ಚದರ ಗಜಗಳ ಕಟ್ಟಡವನ್ನು ನಿರ್ಮಿಸಲಾಯಿತು. ಈ ಕಟ್ಟಡದ ನಾಲ್ಕೂ ದಿಕ್ಕುಗಳಲ್ಲಿ ದರ್ಬಾರಿಗಳ ಬೈಠಕ್ಕುಗಳನ್ನು ಸ್ವಚ್ಛ ಮತ್ತು ಆರಾಮದಾಯಕವಾಗಿ ಬಳಸುವಂತೆ ನಿರ್ಮಿಸಲಾಯಿತು. ಈ ಮಹಡಿಯ ಮೇಲೆ ಸಂಗೀತಕಾರರಿಗಾಗಿ, ನೃತ್ಯಗಾತಿಯರಿಗಾಗಿ ‘ಮುಜ್ರಾ ಖಾನಾ’ವನ್ನು ಮಾಡಿ, ಅದಕ್ಕೆ ಬೇಕಾದ ಸೌಕರ್ಯಗಳನ್ನು ಮಾಡಲಾಗಿತ್ತು. ಸೈನಿಕರಿಗೆ ಸರದಾರರಿಗೆ ಅವರವರ ಸ್ಥಾನಮಾನಕ್ಕೆ ಸರಿಯಾಗಿ ಮನೆಗಳನ್ನು ನಿರ್ಮಿಸಲಾಯಿತು. ಇಲ್ಲಿಂದ ಒಂದು ರಸ್ತೆ ಬಜಾರಿನ ಮೂಲಕ ಬಿಜಾಪುರದ ಅರಮನೆಯ ತನಕ ತಲಪುವಂತೆ ನಿರ್ಮಾಣವಾಗಿತ್ತು. ಈ ಕೆಲಸವು ಹಿಜರಿ ವರ್ಷ ಸನ್ ೧೦೧೨ರ ತನಕ ನಡೆಯಿತು. ಇಲ್ಲಿನ ಬಜಾರಿನ ಮಧ್ಯದಲ್ಲಿ ‘ಮಾನಕ್ ಚೌಕ್’ ಎಂಬ ಬಜಾರು ಕೂಡ ಇತ್ತು. ಇದರಲ್ಲಿ ಉದ್ದ ಅಗಲಗಳು ಎದ್ದು ಕಾಣುವ ವಿಸ್ತಾರವಾದ ಅಂಗಡಿಗಳಿದ್ದವು. ಇದರ ಮೇಲಿನ ಮಹಡಿಗಳಲ್ಲಿ ರಾಜ್ಯಾಡಳಿತದ ಕೆಲಸಕಾರ್ಯಗಳು ನಡೆಯುವ ವಿವಿಧ

ಕಛೇರಿಗಳು ಇದ್ದವು. ಬಜಾರಿನ ಕಟ್ಟಡಗಳ ಹಿಂಬದಿಯಲ್ಲಿ ಉನ್ನತ ಶ್ರೇಣಿಯ ಅಧಿಕಾರಿಗಳು, ಮಂತ್ರಿಗಳು, ಸೇನಾಪತಿಗಳು, ಸರದಾರರ ವಾಸಕ್ಕಾಗಿ ಸುಂದರ ಮನೆಗಳನ್ನು ನಿರ್ಮಾಣ ಮಾಡಲಾಗಿತ್ತು.

ನಗರದಲ್ಲಿ ಸರ್ವಕಾಲದಲ್ಲೂ ತುಂಬಿರುವಂತಹ ಒಂದು ದೊಡ್ಡ ಸರೋವರವನ್ನು ನಿರ್ಮಿಸಲಾಗಿತ್ತು. ಅದಕ್ಕಿಂತ ಮೊದಲು ಒಂದು ಕಂದಕವನ್ನು ನಿರ್ಮಾಣ ಮಾಡಲಾಗಿತ್ತು. ಇದು ಆಳವಾಗಿದ್ದು ಕೆಸರನ್ನು ತುಂಬಿಸಲಾಗಿತ್ತು. ಒಂದು ಕಾಲುವೆಯಿಂದ ಇದಕ್ಕೆ ನೀರು ಹರಿಯುತ್ತಿತ್ತು. ಅಲ್ಲಿ ದೊಡ್ಡ ದೊಡ್ಡ ಮರಗಳಿದ್ದವು. ಇದಕ್ಕೆ ಸರಿಯಾಗಿ ಸನಿಹದಲ್ಲಿ ತೋಡು ಇತ್ತು. ತೋಡಿನಲ್ಲಿ ಕಲ್ಲುಗಳನ್ನು ತುಂಬಿಸಲಾಗಿತ್ತು. ನೌರಸಪುರದ ನಾಲ್ಕೂ ದಿಕ್ಕುಗಳಲ್ಲಿ 'ದುನ್' ಎಂಬ ಹೆಸರಿನ ನದಿಯೊಂದು ಹರಿಯುತ್ತಿತ್ತು. ಮಳೆಗಾಲದಲ್ಲಿ ಬಾದಶಾಹರು ಇಲ್ಲಿಗೆ ಬಂದು ಇಲ್ಲಿನ ಪ್ರಕೃತಿ ಸೌಂದರ್ಯವನ್ನು ಸವಿಯಲು ಆಗಮಿಸುತ್ತಿದ್ದರು.

೧೫ರ ಹರೆಯದಲ್ಲಿದ್ದ ರಾಜಕುಮಾರ ಶಾ ನವಾಜ್ ಖಾನನಿಗೆ ರಾಜ್ಯಾಡಳಿತದ ಕೆಲವು ಮುಖ್ಯ ಕೆಲಸಗಳನ್ನು ನಡೆಸುವ ಜವಾಬ್ದಾರಿಯನ್ನು ನೀಡಲಾಗಿತ್ತು. ಅವನು ನಿಯಮಿತವಾದ ತನ್ನ ಸಂಪೂರ್ಣ ಶ್ರಮದೊಂದಿಗೆ ಕೆಲಸಕಾರ್ಯಗಳನ್ನು ಮಾಡಿದ್ದಲ್ಲದೆ, ತನ್ನದೇ ಆದ ರೀತಿಯಲ್ಲಿ ಮೂಲ ಪುರುಷ ಆದಮನ ಕಾಲದಿಂದ ಇಂದಿನವರೆಗೆ ಯಾವುದೇ ಬಾದಶಾಹ ಕಟ್ಟಿಸದ ಸುಂದರ ಕಟ್ಟಡಗಳನ್ನು ಕಟ್ಟಿಸಿದ್ದ. ಅವನ ಕಾಲದಲ್ಲಿ ಇರಾನ್, ರೋಮ್, ಅರಬಸ್ಥಾನ ಮತ್ತು ಹಿಂದೂಸ್ಥಾನದಿಂದ ಪ್ರವಾಸಿಗರು ಇಲ್ಲಿಗೆ ಆಗಮಿಸಿ ವಾಸಮಾಡತೊಡಗಿದ್ದರು. ಅವನು ಬೆಳ್ಳಿ ಬಂಗಾರಗಳ ಬಾಗಿಲುಗಳನ್ನು ಅರಮನೆಗಳಲ್ಲಿ ನಿರ್ಮಾಣ ಮಾಡಿಸಿದ್ದ. ಅರಮನೆಗಳ ಗೋಡೆಗಳನ್ನು ಹಾಲುಗಲ್ಲುಗಳು ಮತ್ತಿತರ ಬೆಲೆಬಾಳುವ ಸುಂದರ ಕಲ್ಲುಗಳನ್ನು ಉಪಯೋಗಿಸಿ ನಿರ್ಮಾಣ ಮಾಡಿದ್ದ.

ಅಲ್ಲಾಹ ಅವನ ಆಯುಷ್ಯ, ಘನತೆ, ಶ್ರೀಮಂತಿಕೆಯನ್ನು ಉನ್ನತವಾದ ಮಟ್ಟಕ್ಕೆ ಏರಿಸಿ ನಿಲ್ಲುವಂತೆ ಮಾಡಲಿ! ಅವನ ಘನತೆ, ಗೌರವ, ಶ್ರೇಯಸ್ಸು ಸೂರ್ಯನಂತೆ ಬೆಳಗುತ್ತ ಆಕಾಶದ ಎತ್ತರಕ್ಕೇರಿ ನಿಲ್ಲಲಿ! ಅವನ ಉಜ್ವಲ ಭವಿಷ್ಯ ಬೆಳಗುತ್ತಿರಲಿ. ಅವನ ಬದುಕಿನ ಸಂಪೂರ್ಣ ಆಯುಷ್ಯದಲ್ಲಿ ವೈಭವ ಅತ್ಯಂತ ಎತ್ತರಕ್ಕೆ ಏರುತ್ತ ಹೋಗಲಿ. 'ಆಮೀನ್, ಯಾ ರಬ್ಬಲ್ ಆಲಮೀನ್, ಬಿ ಹಕ್ಕೆ ಸಯ್ಯದುಲ್ ಮುರ್‌ಸಲೀನ್'. ಎಲ್ಲ ದಿವ್ಯ ಪುರುಷರ ದುವಾ, ಆಶೀರ್ವಾದಗಳೊಂದಿಗೆ ಅವನಿಗೆ ಶುಭವಾಗಲಿ!

**ಸ್ವಾರಸ್ಯಕರವಾದ ಹಾಗೂ ಆಹ್ಲಾದಕರವಾದ ನೌರಸ್‌ಪುರದ ನಿರ್ಮಾಣದ ಪ್ರಾರಂಭಿಕ ಹಂತದ ವಿವರಗಳು**

ನೌರಸ್‌ಪುರ ಈಗ ಎಲ್ಲಿ ಸ್ಥಾಪಿಸಲಾಗಿದೆಯೋ ಅಲ್ಲಿ ಹಿಂದೆ 'ತೊರವೆ' ಎಂಬ

ಗ್ರಾಮವಿತ್ತು. ಅಲ್ಲಿನ ನೀಲಯ್ಯ ಎಂಬ ಹೆಸರಿನ ಓರ್ವ ವ್ಯಕ್ತಿ ಆಲಂಪನಾರ ಆಸ್ಥಾನಕ್ಕೆ ಬಂದಿದ್ದ. ಅವನು ದರ್ಬಾರಿನಲ್ಲಿರುವ ಯಾರಿಗೂ ತಿಳಿಯದ ಅಪರಿಚಿತ ವ್ಯಕ್ತಿಯಾಗಿದ್ದ. ಆದರೆ ಅವನ ಮುಖದಲ್ಲಿ ಸಂತೋಷ ಮತ್ತು ಸಮಾಧಾನಗಳು ಪುಟಿಯುತ್ತಿರುವಂತೆ ಕಂಡುಬರುತ್ತಿತ್ತು. ಆಲಂಪನಾ ತನ್ನ ಕನಸಿನ ನೌರಸ್‌ಪುರವನ್ನು ಕಟ್ಟಿಸಲು ಸೂಕ್ತ ಸ್ಥಳ ಯಾವುದು ಎಂಬ ಯೋಚನೆಯಲ್ಲಿದ್ದರು. ಅವನು ಅಲ್ಲಿಗೆ ಬಂದು ಇದೇ ಗ್ರಾಮದಲ್ಲಿ ಈ ನಗರವನ್ನು ಕಟ್ಟಿಸಿ ಎಂಬ ಸಲಹೆಯನ್ನು ನೀಡಿದ. 'ಈ ಅಪರಿಚಿತ ಆಗಂತುಕನ ಆಗಮನದಿಂದ ಹೊಸದೊಂದು ಆಸೆ ಹುಟ್ಟಿಕೊಂಡಿತು, ಮನಸ್ಸಿಗೆ ಸಮಾಧಾನವಾಯಿತು. ಆದುದರಿಂದ ಈ ನಗರಕ್ಕೆ 'ನೌರಸ್‌ಪುರ್' (ಫಾರಸಿ ಭಾಷೆಯಲ್ಲಿ ಈ ಶಬ್ಧಕ್ಕೆ 'ಅಪರಿಚಿತ ಹೊಸ ಆಗಂತುಕ' ಎಂಬ ಅರ್ಥವಿದೆ) ಎಂಬ ಹೆಸರು ಇಡಲಾಯಿತು. ಈ ನಗರ ಕಟ್ಟುವುದಕ್ಕೆ ತಳಪಾಯ ಹಾಕುವಾಗ ಬಾದಶಾಹರು ತಮ್ಮ ರಾಜ್ಯದ ಸಂಪತ್ತಿನ ಲೆಕ್ಕಪತ್ರದ ದಸ್ತಾವೇಜನ್ನು ಹೊಸತಾಗಿ ಶುರುಮಾಡಿದರು. ತನ್ನ ಹೊಸ ಆರ್ಥಿಕ ಲೆಕ್ಕಾಚಾರಗಳನ್ನು ಈ ದಿನದಿಂದ ಶುರುಮಾಡಿದರು. ನೌರಸ್ ಮೊಹರು, ನೌರಸ್ ಧ್ವಜ, ನೌರಸ್ ನಾಣ್ಯಗಳನ್ನು ಅದೇ ದಿನದಿಂದ ಚಲಾವಣೆಗೆ ತಂದಿದ್ದರು. ನೌರಸ್ ಧ್ವಜವು ಬಂಗಾರ ವರ್ಣದ್ದಾಗಿತ್ತು. ಆಲಂಪನಾರ ಅಜ್ಜ ಬಳಸಿದ್ದ ನಿಶಾನೆ ಇದರಲ್ಲಿ ಅಡಕವಾಗಿತ್ತು. ಇದೇ ನಿಶಾನೆಯನ್ನು ರಾಜ್ಯದ ಎಲ್ಲೆಡೆ ಬಳಕೆಯಾಗಿತ್ತು. ಹಿಜರಿ ವರ್ಷದ ಒಂಭತ್ತನೆಯ ತಿಂಗಳ ಪ್ರಥಮ ಶುಕ್ರವಾರದಂದು 'ಈದೆ ನೌರಸ್' ಉತ್ಸವದ ಆಚರಣೆಯಾಗುತ್ತಿತ್ತು. ಈ ಉತ್ಸವದ ದಿನಗಳಲ್ಲಿ ಅತ್ಯಂತ ವೈಭವಪೂರ್ಣವಾಗಿ ಊರನ್ನು ಸಿಂಗರಿಸಲಾಗುತ್ತಿತ್ತು. ಸಂಗೀತ, ನೃತ್ಯ, ಗಾಯನಗಳು ನಡೆಯುತ್ತಿದ್ದವು. ಈ ಉತ್ಸವದಲ್ಲಿ ಭಾಗವಹಿಸಲು ಎಲ್ಲ ಸಾಮಾನ್ಯ ಪ್ರಜೆಗಳಿಗೂ ಅವಕಾಶವಿತ್ತು. ಇದರಲ್ಲಿ ಸೈನಿಕರು ಕೂಡ ಭಾಗವಹಿಸುತ್ತಿದ್ದರು. ಸಂಗೀತ ಕಛೇರಿಗಳಲ್ಲಿ ಗಾಯಕರು, ವಾದ್ಯ ವೃಂದದವರು ಉತ್ಸಾಹದಿಂದ ಭಾಗವಹಿಸುತ್ತಿದ್ದರು. ಈ ಉತ್ಸವದ ವೈಭವಗಳ ವಿವರಗಳನ್ನು ಶಬ್ದಗಳಲ್ಲಿ ವಿವರಿಸುವುದು ಬಹಳ ಕಷ್ಟಸಾಧ್ಯ. ಇದನ್ನು ದರ್ಬಾರಿಗಳು, ಆಸ್ಥಾನದ ಪ್ರಮುಖರು 'ಅತಾ ದಿನ'ವೆಂದು ಕರೆಯುತ್ತಿದ್ದರು. ರಾಜ್ಯದ ಸಾಮಾನ್ಯ ಪ್ರಜೆಗಳು 'ಕಿಂಜನ್' ಎಂಬ ಹೆಸರಲ್ಲಿ ಈ ಉತ್ಸವವನ್ನು ಕರೆಯುತ್ತಿದ್ದರು. ಈ ಉತ್ಸವದಲ್ಲಿ ದೊಡ್ಡದೊಡ್ಡ ಹೆಸರಿನ ಬಾದಶಾಹರು, ರಾಜಕುವರರು ಭಾಗವಹಿಸಲು ಆಗಮಿಸುತ್ತಿದ್ದರು. ಶಿಸ್ತಿನಿಂದ ಕೂತು, ಸಮಾಧಾನದಿಂದ ಗಾಯನ, ಸಂಗೀತವನ್ನು ಆಸ್ವಾದಿಸುತ್ತಿದ್ದರು. ನೃತ್ಯವನ್ನು ನೋಡಿ ಕಣ್ತಣಿಸಿಕೊಳ್ಳುತ್ತಿದ್ದರು. ಮುಸ್ಕ್, ಜಾಫ್ರಾನ್ ಸುಗಂಧವನ್ನು ನಾಲ್ಕೂ ದಿಕ್ಕುಗಳಲ್ಲಿ ಹರಡಲಾಗಿ ಭಾಗವಹಿಸುವವರಿಗೆ ಹಚ್ಚಲಾಗಿತ್ತು. ವಿವಿಧ ರೀತಿಯ ಹಣ್ಣುಗಳನ್ನು ರಾಶಿರಾಶಿಯಾಗಿ ಇಡುತ್ತಿದ್ದರು. ವೈವಿಧ್ಯಮಯ ಆಹಾರಗಳ ಪಾತ್ರೆಗಳನ್ನು, ಸಿಹಿತಿಂಡಿಗಳ ಪಾತ್ರೆಗಳನ್ನು ಸುಂದರವಾಗಿ ಜೋಡಿಸಲಾಗಿತ್ತು. ಜನರು ಊಟದ ಚಾಪೆಗಳಲ್ಲಿ ಗುಂಪುಗುಂಪಾಗಿ ಬಂದು ಕೂತು ಊಟಮಾಡುತ್ತಿದ್ದರು.

ಕೆಲಸಗಾರರು, ಫಕೀರರು, ಬಡವರು, ಭಿಕ್ಷುಕರು ಇಲ್ಲಿಗೆ ಬಂದು ಆಹಾರ ಸ್ವೀಕರಿಸಲು ಅವಕಾಶವಿತ್ತು. ನಂತರ ಅಲ್ಲಿದ್ದ ದೊಡ್ಡ ಕೊಳದಲ್ಲಿ ನಾಲ್ಕೂನಿಟ್ಟಿನಲ್ಲಿ ಸುಂದರ ಕಾರಂಜಿಗಳು ಚಿಮ್ಮಿ ನೋಡುಗರ ಮನಸ್ಸು ಮುದಗೊಳ್ಳುವಂತೆ ಮಾಡಲಾಗಿತ್ತು. ಇದಕ್ಕೆ 'ನೌರಸ್ ಮೆಹಲ್' ಎಂದು ಕರೆಯಲಾಗುತ್ತಿತ್ತು. ಸಭೆಯ ಕಾರ್ಯಕ್ರಮಗಳೆಲ್ಲವೂ ಇದೇ ಮಹಲಿನಲ್ಲಿ ವಿಜ್ರಂಭಣೆಯಿಂದ ನಡೆಯುತ್ತಿತ್ತು. ಕೊನೆಯ ದಿನಗಳಲ್ಲಿ ರಾಜ್ಯದಲ್ಲಿನ ಎಲ್ಲ ಕೆಲಸಗಾರರನ್ನು ಆಹ್ವಾನಿಸಿ ಸಮವಸ್ತ್ರವನ್ನು ವಿತರಣೆಮಾಡುತ್ತಿದ್ದರು. ಈ ದಿನ ಭಕ್ಷೀಸುಗಳ ಮಹಾಪೂರವೇ ಹರಿಯುತ್ತಿತ್ತು. ಇದರಲ್ಲಿ ಧಾನ್ಯ, ನಗದು ಮುಂತಾದುವನ್ನು ಅಗತ್ಯ ಇರುವ ಎಲ್ಲರಿಗೂ ಹಂಚಲಾಗುತ್ತಿತ್ತು.

ನೌರಸದ ಸಂಗೀತ ಸಭೆಯಲ್ಲಿ ಗಾಯಕನನ್ನು 'ಅತಾಯೆ' ಎಂದು ಕರೆಯುತ್ತಾರೆ. ಖೋರಸ್ ಗಾಯಕವೃಂದದವರಿಗೆ 'ಕೊಂಚನ್' ಎಂದು ಸ್ಥಳೀಯ ಭಾಷೆಯಲ್ಲಿ ಹೇಳುತ್ತಾರೆ. ಆಲಂಪನಾರಿಗೆ ಬಾಲ್ಯದಿಂದಲೇ ಸಂಗೀತ ಕಲಿಯುವ ಆಸೆಯಿತ್ತು ಮತ್ತು ಸಂಗೀತ ಜ್ಞಾನ ಪಡೆಯುವುದಕ್ಕಾಗಿ ಅವಕಾಶವನ್ನು ಹುಡುಕುತ್ತಿದ್ದರು. ಮೂರನೆಯ ಆಕಾಶದಲ್ಲಿ ಸಂಗೀತ ಕಲಿಸುವ ಶಾಲೆ ಇದೆಯೆಂದು ತಿಳಿದರೆ ಅಲ್ಲಿಗೂ ಹೋಗಿ ಕಲಿಯುವಷ್ಟು ಹಂಬಲ ಅವರಲ್ಲಿತ್ತು. ಈ ಹಂಬಲದಿಂದಾಗಿ ಹಿಂದುಸ್ಥಾನದ ಮೂಲೆ ಮೂಲೆಗಳಿಂದ ಬಹಳಷ್ಟು ಸಂಗೀತದ ಪಂಡಿತರನ್ನು ಕರೆಸಿ ಅವರ ಶಿಷ್ಯರಾಗಿ ಸಂಗೀತವನ್ನು ಕಲಿತರು. ತಾನು ಕೂಡ ಸಂಗೀತದ ಜಗದ್ವಿಖ್ಯಾತ ಪಂಡಿತ ಯಶಾ ಗೋರಿಶ್‌ನ ಶಿಷ್ಯಂದಿರ ತಲೆಮಾರಿನಲ್ಲಿ ಸೇರುವುದನ್ನು ಇಷ್ಟಪಟ್ಟಿದ್ದರು. ಇವರ ಪೀಳಿಗೆಯಲ್ಲಿ ಸಂಗೀತ ಪರಂಪರೆಯ ನಾಲ್ಕು ಸಾವಿರ ಪಂಡಿತರು ಆಗಿಹೋಗಿದ್ದರು. ಸಂಗೀತಗಾರರು ಮೂರು ನಾಲ್ಕು ತರದವರಿದ್ದರು. ಒಂದನೆಯ ತರದವರ ಗಾಯನದ ಸ್ವರದಿಂದ ಮನುಷ್ಯನ ಆತ್ಮವು ಎಚ್ಚರಗೊಂಡು, ಸಂತೋಷದಿಂದ ರೋಮಾಂಚನಗೊಳ್ಳುತ್ತದೆ. ಇಂತಹ ಗಾಯಕರನ್ನು 'ರಬ್ತ್' ಎನ್ನುತ್ತಾರೆ. ಇಂತಹ ಸಂಗೀತಗಾರರ ತಂಡವೊಂದು ಬಾದಶಾಹರ ಬಳಿ ಹಗಲೂರಾತ್ರಿ ಸಂಗೀತ ನುಡಿಸುತ್ತಿದ್ದರು. ಇವರು ನುಡಿಸುವ ಸಂಗೀತಕ್ಕೆ 'ದರ್ಬಾರಿ' ಸಂಗೀತವೆಂದು ಕರೆಯುತ್ತಾರೆ. ಕಾರಣ ಇವರು ಯಾವಾಗಲೂ ಬಾದಶಾಹರ ದರ್ಬಾರಿನಲ್ಲಿರುತ್ತಾರೆ. ಈ ದರ್ಬಾರಿಗಳಿಂದ ಸಂಗೀತ ಜ್ಞಾನ ಪಡೆಯುವುದಕ್ಕಾಗಿ ನೌರಸ್‌ಪುರ ನಗರದಲ್ಲಿ ಅನೇಕ ಜಿಜ್ಞಾಸುಗಳು ಆಗಮಿಸುತ್ತಿದ್ದರು. ಬಾದಶಾಹರು ತಮ್ಮ ಖಜಾನೆಯಿಂದ ಪ್ರತೀ ತಿಂಗಳೂ ಈ ಪಂಡಿತರಿಗೆ ಸಂಬಳದಂತೆ ಸಂಭಾವನೆಯನ್ನು ನೀಡುತ್ತಿದ್ದರು. ಸಹಗಾಯಕರು ಮತ್ತು ವಾದ್ಯವೃಂದದವರಿಗೆ ಸಭೆಯಲ್ಲಿ ನೀಡುವ ಇನಾಮುಗಳು ಸಂದುತ್ತಿದ್ದವು. ಬಾಜಾರಿನ ವ್ಯಾಪಾರಸ್ಥರು ಕೂಡ ತಮ್ಮ ದೇಣಿಗೆಯನ್ನು ಇವರಿಗೆ ನೀಡುತ್ತಿದ್ದರು. ಇವರೆಲ್ಲರೂ ತಮಗೆ ನೆಮ್ಮದಿಯ ಬದುಕನ್ನು ಕಲ್ಪಿಸಿಕೊಟ್ಟ ಆಲಂಪನಾರ

ಅಭ್ಯುದಯಕ್ಕಾಗಿ ದುವಾ ಪ್ರಾರ್ಥನೆ ಸಲ್ಲಿಸುತ್ತಿದ್ದರು ಮಾತ್ರವಲ್ಲ ಆಲಂಪನಾರು ಕೂಡ ಇವರ ಬಗ್ಗೆ ಗೌರವದಿಂದ ನಡೆದುಕೊಂಡು ದಯಾಪರರಾಗಿದ್ದರು.

**ಲೇಖಕ ಶಿರಾಜೆಯವರನ್ನು ಅಹ್ಮದ್ ನಗರಕ್ಕೆ ನವಾಬ್ ಬಹದ್ದೂರ್ ಷಾ ಜೊತೆಗೆ ಸಂಧಾನಕ್ಕಾಗಿ ಕಳುಹಿಸಿದ ವಿವರಗಳು**

ಆಲಂಪನಾರು ಹಿಜರಿ ವರ್ಷ ಸನ್ ೧೧೦೫ರಲ್ಲಿ ನಾನು ಅಹ್ಮದ್ ನಗರಕ್ಕೆ ಹೋಗಬೇಕೆಂದು ಆಜ್ಞೆ ಮಾಡಿದರು. ಅಲ್ಲಿ ನವಾಬ್ ಬಹದ್ದೂರ್ ಷಾ ಬಂಡಾಯವೆದ್ದಿದ್ದ. ಅವನಿಗೆ ನಾನು ಹೋಗಿ ಬುದ್ಧಿವಾದವನ್ನು ಹೇಳಿ ಸಮಾಧಾನಪಡಿಸಬೇಕೆಂಬುದು ಆಲಂಪನಾರ ಇಂಗಿತವಾಗಿತ್ತು. ಬಹದ್ದೂರ್ ಷಾ ತನ್ನ ನೆರೆಯ ಪ್ರಾಂತ್ಯದ ಸರದಾರ ಸುಹೈಲ್ ಖಾನನನ್ನು ಹೆದರಿಸಿ ಬೆದರಿಸಿಟ್ಟಿದ್ದ. ಅವನಿಗೆ ಬಾದಶಾಹರ ಕಡೆಯಿಂದ ಸಂಪೂರ್ಣ ಅಭಯವಿತ್ತು. ಆ ಕಾಲದಲ್ಲಿ ನನಗೆ ಬಹಳಷ್ಟು ಜವಾಬ್ದಾರಿಯನ್ನು ಆಲಂಪನಾ ವಹಿಸಿಕೊಟ್ಟಿದ್ದರು. ಆಲಂಪನಾರ ಆಗಿನ ಪೇಶ್ವೆಯಾಗಿದ್ದ ಫತೇ ಖಾನನ ಕೈಯಲ್ಲಿ ೭೦೦ ಒಂಟೆಗಳು, ೨೦ ಆನೆಗಳು ಮತ್ತು ೧೫೦೦ ಕುದುರೆಗಳು ಆಲಂಪನಾರ ಕಡೆಯಿಂದ ನೋಡಿಕೊಳ್ಳುವ ಜವಾಬ್ದಾರಿ ಇದ್ದವು. ನನ್ನ ಕೈಯಲ್ಲಿ ಪತ್ರವ್ಯವಹಾರಗಳನ್ನು ನೋಡಿಕೊಳ್ಳುವ ಜವಾಬ್ದಾರಿಯಿತ್ತು. ನಾನು ನನ್ನ ಜವಾಬ್ದಾರಿಯನ್ನು ನನ್ನ ಮಗ ಫತೇ ಖಾನನಿಗೆ ವಹಿಸಿಕೊಟ್ಟು ಷಹದುರ್ಗದ ಕಡೆಗೆ ಪಯಣಿಸಿದೆ. ಸುಹೇಲ್ ಖಾನ್ ನನ್ನನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿ ತನ್ನ ತುಂಬ ವೈಭವದ, ವಿಶಾಲವಾದ ಸುಂದರವಾದ ಮಹಲಿಗೆ ಕರೆದುಕೊಂಡು ಹೋದ. ಅಲ್ಲಿ ತುಂಬ ಗೌರವದಿಂದ ನನಗೆ ಆತಿಥ್ಯವನ್ನು ನೀಡಿದ. ನಾನು ಅವನಿಗೆ ಸಮಾಧಾನಮಾಡಿದೆ, 'ನೀನು ಹೆದರುವ ಅಗತ್ಯವಿಲ್ಲ, ಆಲಂಪನಾರ ಕಡೆಯಿಂದ ನಿನಗೆ ಸಂಪೂರ್ಣ ಬೆಂಬಲವಿದೆ. ನಿನ್ನ ಮನಸ್ಸಿನಲ್ಲಿ ಮೊಘಲರ ಕಡೆಯಿಂದ ದಾಳಿಯ ಭಯವಿದ್ದರೆ ಅದನ್ನು ತೊಡೆದುಬಿಡು. ನಿನಗೂ ಕೂಡ ಯಾವುದೇ ರೀತಿಯಲ್ಲಿಯೂ ಅವರ ಜೊತೆಗೆ ಸಂಘರ್ಷಕ್ಕೆ ಇಳಿಯುವ ಅಗತ್ಯವಿಲ್ಲ' ಎಂದು ಆಲಂಪನಾರ ಕಡೆಯಿಂದ ನನ್ನ ಕೈಯಲ್ಲಿ ನೀಡಲಾಗಿದ್ದ ಪತ್ರವನ್ನು ಅವನಿಗೆ ನೀಡಿದೆ.

ನಿಜಾಂ ಶಾಹನ ರಾಜ್ಯದೊಳಗೆ ಕಾಲಿಟ್ಟಾಗ ಈ ರಾಜ್ಯ ಸಂಪೂರ್ಣ ಹಾಳಾಗಿರುವುದನ್ನು ಕಂಡೆ. ಅಲ್ಲಿನ ಪ್ರಜೆಗಳು ಅತ್ಯಂತ ದಯನೀಯ ಪರಿಸ್ಥಿತಿಯಲ್ಲಿ ಬದುಕು ಸಾಗಿಸುವುದನ್ನು ನೋಡಿದೆ. ಕಡುಬಡತನ ಅವರನ್ನು ಒಬ್ಬರಿಗೊಬ್ಬರ ವೈರಿಗಳನ್ನಾಗಿ ಮಾರ್ಪಡಿಸಿತ್ತು. ಒಂದೆಡೆಯಲ್ಲಿ ಇಪ್ಪತ್ತು ಸಾವಿರ ಸೈನಿಕರನ್ನು ಹೊಂದಿದ ಅಬ್ಬಂಗ್ ಖಾನ್ ಎಂಬ ಹಬ್ಶಿ ಅಲ್ಲಿನ ಗಡಿಪ್ರದೇಶದಲ್ಲಿ ತನ್ನ ಸೈನಿಕರೊಂದಿಗೆ ಯುದ್ಧ ನಡೆಸಲು ಕಾದು ಕೂತಿದ್ದ. ಇವನು ಚಾಂದ್ ಬೀಬಿಯ ವಂಶಸ್ಥರು ಮತ್ತು

ಬೆಂಬಲಿಗರೊಂದಿಗೆ ವೈರತ್ವ ಹೊಂದಿದ್ದ. ಅವನು ಬಹದ್ದೂರ್ ಷಾನನ್ನು ಹಿಡಿದು ತನಗೆ ಒಪ್ಪಿಸಬೇಕೆಂದು ಅವನು ಹೇಳುತ್ತಿದ್ದ. ನಾನು ಮರುದಿನ ಪ್ರಖ್ಯಾತ ಬಾದಶಾಹರ ನಿಕಟವರ್ತಿ ಸಯ್ಯದ್ ಅಲಿ ತಾರೀಖಿಯ ಮೂಲಕ ನಾನು ಬಹದ್ದೂರ್ ಶಾಹನ ಬಳಿಗೆ ಹೋದೆ. ಅಲ್ಲಿ ಇನ್ನಿತರ ಬಹಳಷ್ಟು ಸರದಾರರು ತುಂಬ ವ್ಯಥಿತರಾಗಿರುವುದನ್ನು ಕಂಡೆ. ಇವರು ಬಹದ್ದೂರ್ ಶಾಹನಿಂದ ಬಿಡುಗಡೆಹೊಂದುವುದಕ್ಕೆ ಕಾತರರಾಗಿದ್ದರು. ನಾನು ಇವರ ಅಹವಾಲುಗಳನ್ನು ಕೇಳಿದೆ. ಆಲಂಪನಾರ ಆದೇಶದಂತೆ ಸಂಧಾನದ ಮಾತುಕತೆಗೆ ತೊಡಗಿದೆ. ಅವರು ನೀಡಿದ ಸಲಹೆಗಳನ್ನು ಮುಂದಿಟ್ಟೆ. ಬಹದ್ದೂರ್ ಷಾ ಕೋಟೆಯ ಬುರುಜಿನ ಮೇಲೆ ಭೇಟಿಗಾಗಿ ಆಗಮಿಸಿದ. ನನ್ನೊಂದಿಗೆ ಬಂದಿದ್ದ ಎಲ್ಲ ಎಲ್ಲ ಸರದಾರರೊಂದಿಗೆ ಭೇಟಿಮಾಡಿದ. ಬಾದಶಾಹರ ಕಡೆಯಿಂದ ಅವರೆಲ್ಲರಿಗೂ ಶುಭಾಶಯಗಳ ಸಂದೇಶವನ್ನು ನೀಡಿದೆ. ಈ ಮಧ್ಯೆ ಮರುದಿನ ನಿಜಾಂ ಶಾಹ ಕೂಡ ಅಲ್ಲಿಗೆ ಬಂದು ಇಬ್ಬರೂ ಗೆಳೆಯರಾಗಿರಲು ಒಪ್ಪಿಕೊಂಡರು. ಎಲ್ಲರೂ ಸೇರಿ ಆಲಂಪನಾರ ಆಯುಷ್ಯಕ್ಕಾಗಿ, ಅಭ್ಯುದಯಕ್ಕಾಗಿ ದುವಾ ಪ್ರಾರ್ಥನೆ ಮಾಡಿದರು. ಇವರ ನಡುವಿನ ದ್ವೇಷ, ಘರ್ಷಣೆಗಳು, ಯುದ್ಧದ ಸಂಭವವು ದೂರವಾಗಿ ಪ್ರಜೆಗಳು ಸಮಾಧಾನದ ಉಸಿರುಬಿಡುವಂತಾಯಿತು. ಜನಸಾಮಾನ್ಯರು ಕೋಟೆಯಿಂದ ಒಳಹೊರಗೆ ಹೋಗುವಂತಾಗಿ ತಮ್ಮ ಬಂಧು ಬಳಗದವರು, ಮಿತ್ರರನ್ನು ಸೇರುವುದಕ್ಕೆ ಸ್ವತಂತ್ರರಾದರು. ಬಹದ್ದೂರ್ ಷಾ ನೊಂದಿಗೆ ಪ್ರಜೆಗಳು ತಮ್ಮ ಅಹವಾಲುಗಳನ್ನು ಮುಂದಿಡತೊಡಗಿದರು. ಇವುಗಳನ್ನು ಇತ್ಯರ್ಥಗೊಳಿಸುವುದಕ್ಕಾಗಿ ತನ್ನ ಮಂತ್ರಿಮಂಡಳವನ್ನು, ಅಧಿಕಾರಿಗಳನ್ನು ನೇಮಕಾತಿ ಮಾಡಿದ. ಆದರೆ ಅಲ್ಲಿ ಕೆಲವು ಸರದಾರರು ಅತೃಪ್ತರಾಗಿದ್ದರು. ಇವರು ಅಲಂಪನಾರ ಸಲಹೆಗಳಿಗೆ ಮಾನ್ಯತೆಮಾಡುವುದನ್ನು ವಿರೋಧಿಸಿದರು. ಇವರು ಬಹದ್ದೂರ್ ಷಾನ ವಿರುದ್ಧ ಬಂಡಾಯವೆದ್ದರು. ಇವರು ಹೊಸತಾಗಿ ನೇಮಕಗೊಂಡ ಮೂರು ನಾಲ್ಕು ಅಧಿಕಾರಿಗಳನ್ನು ತಮ್ಮ ವಶಕ್ಕೆ ತೆಗೆದುಕೊಂಡರು. ಕೋಟೆಯ ಕಾವಲಿನವರಿಗೆ ಹೆದರಿಸಿ ಬೆದರಿಸಿ, ಲಂಚ ನೀಡಿ, ಪುಸಲಾಯಿಸಿ ತಮ್ಮಕಡೆ ಸೆಳೆದುಕೊಂಡರು. ಬಲತ್ಕಾರದಿಂದ ಈ ಬಂಡಾಯಗಾರರು ಕೋಟೆಯ ಬಳಿ ಬಂದು ಬಾಣಗಳ ಪ್ರಯೋಗ ಮಾಡತೊಡಗಿದರು.

ಕೋಟೆಯ ಹೊರಗೆ ಈ ವಿದ್ರೋಹಿಗಳು ಬಲಿಷ್ಠವಾಗಿ ನಿಂತರು. ಕೋಟೆಯ ಬಾಗಿಲನ್ನು ದೂಡಿ ಒಳಬಂದರು. ಕೋಟೆಯ ಕಾವಲುಗಾರ ತಾನು ನೀಡಿದ ಮಾತಿನಂತೆ ಬಾಗಿಲು ತೆರೆದಿದ್ದ. ವಿದ್ರೋಹಿಗಳು ಒಳಗೆ ಬಂದು ಯುದ್ಧ ಶುರುಮಾಡಿದರು. ನವಾಬ್ ಬಹಾದ್ದೂರ್ ಷಾ ಕೋಟೆಯ ಬುರುಜಿನಲ್ಲಿ ನಿಂತು ತನ್ನ ಸೈನಿಕರನ್ನು ಯುದ್ಧಕ್ಕೆ ಹುರಿದುಂಬಿಸುತ್ತಿರುವುದನ್ನು ಅವರು ಕಂಡರು. ಆಗ

ವಿದ್ರೋಹಿಗಳ ಕಡೆಯಿಂದ ಮೂರು ನಾಲ್ಕು ಬಾಣಗಳು ಅವನತ್ತ ಹಾರಿದವು. ಅವುಗಳಲ್ಲಿ ಒಂದು ಬಾಣ ನೇರವಾಗಿ ನವಾಬ್ ಬಹದ್ದೂರ್ ಷಾನ ತೋಳನ್ನು ಬೇಧಿಸಿತು. ಗಾಯಗೊಂಡ ಬಹದ್ದೂರ್ ಷಾ ಅಲ್ಲೇ ಕುಸಿದು ಕೂತ. ಇನ್ನೊಂದು ಬಾಣ ವೇಗದಿಂದ ಬಂದು ಅವನ ಹಿಂದೆ ನಿಂತಿದ್ದ ಸೇನಾನಿಯೋರ್ವನ ಕುತ್ತಿಗೆಯನ್ನು ಬೇಧಿಸಿತು. ಅವನು ಅಲ್ಲೇ ಬಿದ್ದು ಸತ್ತು ಹೋದ. ಎರಡು ಮೂರು ಸಿಪಾಯಿಗಳನ್ನು ಬಾಣಗಳು ಹಾರಿ ಬಂದು ಗಾಯಗೊಳಿಸಿದವು. ಆದರೆ ಇದರಿಂದ ಎದೆಗುಂದದ ಬಹದ್ದೂರ್ ಷಾ ಸೈನಿಕರನ್ನು ಯುದ್ಧಕ್ಕೆ ಹುರಿದುಂಬಿಸುತ್ತಲೇ ಇದ್ದ. ಸಿಪಾಯಿಗಳ ತೋಪು, ಬಾಣಗಳಿಂದಾಗಿ ವಿದ್ರೋಹಿಗಳ ಸೈನ್ಯದ ಹಲವು ಜನ ಸತ್ತು ಹೋದರು. ಉಳಿದವರು ತಮ್ಮ ಜೀವ ಉಳಿಸಿಕೊಳ್ಳುವುದಕ್ಕಾಗಿ ಹಿಂತಿರುಗಿ ಓಡತೊಡಗಿದರು. ಆದರೆ ಚಾಂದ್ ಬೀಬಿ ಸಂಧಾನಕ್ಕೆ ತಯಾರಾಗಲಿಲ್ಲ.

ಅಬ್ಬಂಗ್ ಖಾನ್ ಎಂಬ ಹಣದಿಂದ ಖರೀದಿ ಮಾಡಲಾದ ಗುಲಾಮ, ತನ್ನ ಬದ್ಮಾಷಿ, ಗೂಂಡಾಗಿರಿಯ ನಡತೆಯಿಂದ ಒಂದು ಸಲ ಬಂಧನಕ್ಕೊಳಗಾಗಿದ್ದ. ಅವನ ತಮ್ಮನ ಸಾವಿನ ನಂತರ ಅವನನ್ನು ನಾನು(ಶಿರಾಜಿ) ಬಂಧನದಿಂದ ಬಿಡಿಸಿ, ಬಾದಶಾಹರ ಸೇವೆಯಲ್ಲಿ ನೇಮಕ ಮಾಡಿಕೊಂಡಿದ್ದೆ. ಆದರೆ ಅವನು ನನ್ನ ಈ ಸಹಾಯವನ್ನು ಮರೆತಿದ್ದ. ಬೇರೆಯವರ ಜೀವವನ್ನು ಹೀರುವ ಇರಾದೆ ಅವನಲ್ಲಿ ಇನ್ನೂ ಇತ್ತು. ಅವನ ಮೇಲೆ ನನಗೆ ಒಂದಿಷ್ಟೂ ವಿಶ್ವಾಸವಿರಲಿಲ್ಲ. ನನಗೆ ಅವನೊಂದಿಗೆ ಸಂಧಾನಕ್ಕೆ ಎಳ್ಳಷ್ಟೂ ಇಷ್ಟವಿರಲಿಲ್ಲ. ಹಿಂದೆ ಈತ ರಮ್ಜಾನಿನ ಪವಿತ್ರ ತಿಂಗಳಲ್ಲಿ ಕೋಟೆಯನ್ನು ಮುತ್ತಿಗೆ ಹಾಕಿ ದಾಳಿ ನಡೆಸಿದ್ದ. ನನಗೆ ಆಹಾರ ಸಿಗದಂತೆ ತಡೆದಿದ್ದ. ನಾನು ಈ ಪವಿತ್ರ ತಿಂಗಳಲ್ಲಿ ಬರೇ ಒಗರು ನೀರಿನಿಂದ ಇಫ್ತಾರ್ ಮಾಡಬೇಕಾಯಿತು. ಅಲ್ಲಿದ್ದ ಹಳೆಯ ಧಾನ್ಯವನ್ನು ನಾನು ಉಪಯೋಗಿಸಬೇಕಾಗಿ ಬಂದಿತ್ತು. ಅಬ್ಬಂಗ್ ಖಾನನೊಂದಿಗೆ ರಾಜಿಗೆ ನನ್ನ ದೇಹ ಒಪ್ಪಿಕೊಳ್ಳಲಿಲ್ಲ. ನಾನು ಈ ಸಂಗತಿಗಳನ್ನು ಬರೆದು ನನ್ನ ಮಗನಿಂದ ಬರೆಯಿಸಿ ಪತ್ರ ಮೂಲಕ ಅಕ್ಬರ್ ಬಾದಶಾಹನ ಸನ್ನಿಧಾನಕ್ಕೆ ಕಳುಹಿಸಿದ್ದೆ.

ಈ ಪತ್ರ ಸುಲ್ತಾನ್ ಮುರಾದನ ಬಳಿ ತಲಪಿದಾಗ ಅವನು ಈ ಪತ್ರವನ್ನು ಸುಲ್ತಾನ್ ಸಲೀಮನ ಮುಂದೆ ಹಾಜರುಪಡಿಸಿದ. 'ಅಕ್ಬರನ ಪುಣ್ಯದಲ್ಲಿ ಜಯವೇ ಜಯವಿದೆ. ಅವರ ಸೈನ್ಯ ಎಲ್ಲೇ ಹೋಗಲಿ, ಜಯಭೇರಿ ಹೊಡೆಯುತ್ತದೆ' ಎಂದ. ಬಹಳ ಚರ್ಚೆ ನಡೆದ ಬಳಿಕ ಚಾಂದ್ ಬೀಬಿ ಸಂಧಾನಕ್ಕೆ ಒಪ್ಪುವಂತೆ ಮಾಡಿದೆ. ಕೆಲವು ದಿನಗಳ ಕಾಲ ಪಿತೂರಿ, ಪರನಿಂದನೆ ನಿಂತು ಹೋಗಿ ತಮ್ಮ ತಮ್ಮ ಸ್ಥಾನಕ್ಕೆ ತೆರಳಿದರು. ಮತ್ತೆ ಸೈನ್ಯವನ್ನು ಸಂಪೂರ್ಣವಾಗಿ ಒಟ್ಟಾಗಿಸಿ ಸುಲ್ತಾನ್ ಮುರಾದನನ್ನು ದಕ್ಷಿಣ ಭಾರತದ ಮೇಲೆ ದಾಳಿ ನಡೆಸದಂತೆ ತಡೆಯಲು ಸನ್ನದ್ಧಗೊಳಿಸಲಾಯಿತು.

ಈ ಮಧ್ಯೆ ಬಹದ್ದೂರ್ ಷಾನ ಓರ್ವ ನಿಕಟವರ್ತಿಯು ಕೋಟೆಯೊಳಗಿರುವವರು ದೊಡ್ಡ ಮೌಲ್ಯದ ಸಂಪತ್ತನ್ನು ತಮ್ಮೊಳಗೆ ಹಂಚಿಕೊಳ್ಳುವುದನ್ನು ನೋಡಿದೆ. ಈ ಸುದ್ದಿ ಚಾಂದ್ ಬೀಬಿಗೆ ತಲಪಿದಾಗ ಅವಳು ಈ ಬಗ್ಗೆ ವಿಚಾರಣೆ ನಡೆಸಿದಾಗ ಅಬ್ಹಂಗ ಖಾನ್ ಕೋಟೆಯ ಕಾವಲುಗಾರನಿಗೆ ಈ ಹಣವನ್ನು ಕಳುಹಿಸಿದ್ದಾನೆಂದು ತಿಳಿಯಿತು. ಇದರಿಂದಾಗಿ ಅಗತ್ಯ ಬಿದ್ದಾಗ ಕೋಟೆಯನ್ನು ವಶಪಡಿಸಿಕೊಳ್ಳಲು ಅಬ್ಹಂಗ ಖಾನ್ ಬಂದಾಗ ಅನಾಯಾಸವಾಗಿ ಕಾವಲುಗಾರ ಬಾಗಿಲನ್ನು ತೆರೆದು ಕೊಡಬೇಕೆಂಬುದು ಮಾತುಕತೆ ನಡೆದಿತ್ತು. ಚಾಂದ್ ಬೀಬಿಗೆ ತಾನು ಭ್ರಷ್ಟನಾಗಿ ಲಂಚ ಸ್ವೀಕರಿಸಿದ್ದು ತಿಳಿದುಹೋಯಿತೆಂದು ಕಾವಲುಗಾರನಿಗೆ ಗೊತ್ತಾಯಿತು. ಮರುದಿನ ಅಬ್ಹಂಗ ಖಾನ್ ಕೋಟೆಯ ಬಳಿ ಬಂದು ನಿಂತು ಕಾವಲುಗಾರ ಕೋಟೆಯ ಬಾಗಿಲನ್ನು ತೆರೆಯುತ್ತಾನೆಂದು ಕಾದರೆ, ಕೋಟೆಯ ಬಾಗಿಲನ್ನು ಹಿಂದಿನಿಂದ ಬಲವಾದ ಕಬ್ಬಿಣದ ಸರಪಳಿಗಳಿಂದ ಕಟ್ಟಲಾದದ್ದು ತಿಳಿದು ಬಂತು. ಈ ಕಾವಲುಗಾರ ಒಂದು ರಹಸ್ಯ ಕಿಟಿಕಿಯ ಮೂಲಕ ಪರಾರಿಯಾಗಿದ್ದ. ಚಾಂದ್ ಬೀಬಿ ಈ ಸುದ್ದಿ ತಿಳಿದಾಗ ಕಾವಲುಗಾರರ ನಾಯಕರನ್ನು ತನ್ನ ಬಳಿ ಕರೆಸಿ, ಅವರನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡು ಜಾಗರೂಕರಾಗಿರುವುದಕ್ಕೆ ಆಗ್ರಹಪಡಿಸಿದಳು. ಕೆಲವರು ಅವರ ಮಾತನ್ನು ಒಪ್ಪಿದರು. ಕೆಲವರು ಕೋಟೆಯ ಬಾಗಿಲ ಮುಂದೆ ಕಾದು ನಿಂತು ಅಬ್ಹಂಗ ಖಾನ್ ಕೋಟೆಯ ಬಳಿ ಬರುವುದನ್ನು ಎದುರುನೋಡ ತೊಡಗಿದರು ಹಾಗೂ ಅವನೊಂದಿಗೆ ಕಾದಾಡಲು ಸನ್ನದ್ಧರಾಗಿ ನಿಂತರು. ಅಬ್ಹಂಗ ಖಾನ್ ಕೋಟೆಯ ಬಳಿ ತಲಪಿದಾಗ ಅಲ್ಲಿ ಕೋಟೆಯ ಘನತೆಯನ್ನು ಕಾಪಾಡುವುದಕ್ಕಾಗಿ ಚಾಂದ್ ಬೀಬಿ ಕಳುಹಿಸಿದ  ಗುಂಪು ಅಲ್ಲಿತ್ತು. ಅಂಬರ್ ಜಪ್ಪರ್ ಎಂಬ ಹಬ್ಶಿ ಗುಲಾಮನನ್ನು ಅಬ್ಹಂಗ ಖಾನ್ ಒಂದು ಸೈನ್ಯ ತಂಡವನ್ನು ಕಳುಹಿಸಿದ್ದ. ಇವೆರಡು ಗುಂಪುಗಳ ಮಧ್ಯೆ ತೀವ್ರವಾದ ಘರ್ಷಣೆ ನಡೆದು ಬಾಣಗಳ ಮಳೆ ಸುರಿಯತೊಡಗಿತು. ಚಾಂದ್ ಬೀಬಿಯ ಸೈನ್ಯದ ಮುಂದೆ ಅಬ್ಹಂಗ ಖಾನನ ಸೈನ್ಯ ಸೋತು ಒಂದು ರಹಸ್ಯ ಕಿಂಡಿಯ ಮೂಲಕ ಓಡಿಹೋಯಿತು. ಇನ್ನೊಂದು ಕಿಂಡಿಯಲ್ಲಿ ನುಸುಳಿ ಅಂಬರ್ ಜಪ್ಪರ್ ಕೂಡ ಓಡಿಹೋದ.

ಮತ್ತೆ ಹಿಂತಿರುಗಿದ ಅಂಬರ್ ಜಪ್ಪರ್, ಇನ್ನೊಂದು ಕಿಂಡಿಯ ಮೂಲಕ ಕೋಟೆಯ ಒಳಗೆ ಬಂದ. ಚಾಂದ್ ಬೀಬಿಯ ಸೈನಿಕರು ವಿದ್ರೋಹಿ ಕೋಟೆಯ ಕಾವಲುಗಾರರ ಗುಂಪನ್ನು ಹೊಡೆದೋಡಿಸಿ ಹೊರಗೆ ಅಟ್ಟುತ್ತಿರುವುದನ್ನು ಆತ ನೋಡಿದ. ಕೋಟೆಯ ಮುಖ್ಯ ದ್ವಾರದ ಮೇಲಿನ ಬುರುಜಿನಲ್ಲಿ ಮುಲ್ಲಾ ಎಂಬ ಬಿರುದಾಂಕಿತ ಮಲಿಕ್ ಸಂದಲ್ ಬರೀಜಿ ಕೆಲವು ಜನರೊಂದಿಗೆ ಕೂತಿದ್ದನ್ನು ಕಂಡ. ಈತ ಅಬ್ಹಂಗ್ ಖಾನನ್ನು ಮತ್ತು ಸೈನಿಕರ ಬೆನ್ನುಹತ್ತಿ ಓಡಿಸುತ್ತಿದ್ದ. ಅಂಬರ್ ಜಪ್ಪರ್

ತನ್ನ ಮಂದೆ ಒಂದು ದೊಡ್ಡ ಗುಂಪು ಓಡಿಸಿಕೊಂಡು ಬರುವುದು ಜೊತೆಗೆ ತೋಪುಗಳು ಸಿಡಿಯುತ್ತಿರುವುದನ್ನು ಕಂಡು ಭಯಭೀತನಾಗಿ ಕೋಟೆಯ ಬಾಗಿಲ ಕಡೆ ಓಡಿದ. ಅಬ್ಹಂಗ್ ಖಾನನಿಗೂ ಓಡುವುದಕ್ಕೆ ದಾರಿ ಸಿಗದಾಗ ಸುತ್ತುವರಿದು ಸೈನಿಕರು ಬಂಧಿಸಿದರು. ಸೆರೆ ಹಿಡಿದ ಕೆಲವರನ್ನು ತೋಪಿನ ಮುಂದೆ ಇಟ್ಟು ಉಡಾಯಿಸಿ ಕೊಂದರು. ಕೆಲವರನ್ನು ಮಿಂಜನೀಖ್ ಎಂಬ ಸಿಡಿಯಲ್ಲಿಟ್ಟು ಕೊಂದು ಹಾಕಿದರು. ವಿದ್ರೋಹಿಗಳ ಕುಟುಂಬದವರನ್ನು ಬಂಧಿಸಿ ಗುಲಾಮರನ್ನಾಗಿ ಮಾಡಿಕೊಂಡರು.

ಈ ಹದಿನಾಲ್ಕು ತಿಂಗಳುಗಳ ಅವಧಿಯಲ್ಲಿ ಹೀಗೆ ವಿದ್ರೋಹ, ಬಂಡಾಯದ ಘಟನೆಗಳು ನಡೆದದ್ದನ್ನು ನಾನು ಕಂಡಿದ್ದೆ. ಇದೇ ಅವಧಿಯಲ್ಲಿ ಸುಲ್ತಾನ್ ಮುರಾದನ ಸೈನಿಕರು ಈ ರಾಜ್ಯವನ್ನು ಕಬಳಿಸಲು ಹೊಂಚು ಹಾಕುತ್ತಿದ್ದಾರೆಂಬ ವರ್ತಮಾನ ಬಂತು. ಕೆಲವು ಗ್ರಾಮಗಳನ್ನು ಆಗಲೇ ವಶಪಡಿಸಿಕೊಂಡು ಗುಲ್ಲೆಬ್ಬಿಸತೊಡಗಿದ್ದರು. ಸುಲ್ತಾನ್ ಮುರಾದನ ಪಡೆಯು ಅಹ್ಮದ್‌ನಗರದ ಕಡೆ ಶೀಘ್ರವಾಗಿ ದಾಳಿ ನಡೆಸುವ ಯೋಚನೆ ಮಾಡಿತ್ತು. ನಾನು ಈ ಎಲ್ಲ ವಿಚಾರಗಳನ್ನು ವಿವರವಾಗಿ ಬರೆದು ಆಲಂಪನಾರ ಸಮ್ಮುಖಕ್ಕೆ ಹಾಜರುಪಡಿಸಿದೆ. ಆಲಂಪನಾ ಇದನ್ನು ಓದಿದ ಕೂಡಲೇ ಇನ್ನು ಯೋಚಿಸುತ್ತ ಕಾಲಹರಣ ನಡೆಸುವುದು ಸಾಧ್ಯವಿಲ್ಲವೆಂದು ತಿಳಿದುಕೊಂಡು ಚಾಂದ್ ಬೀಬಿಯವರ ಅನುಮತಿ ಪಡೆಯಲು ನಿಶ್ಚಯಿಸಿದರು. 'ಹೀಗೆ ಮೂರು ನಾಲ್ಕು ಬಾರಿ ಪಿತೂರಿ ನಡೆಯಿತಾದರೂ, ನೀವು ಪ್ರತೀ ಬಾರಿಯೂ ಆಲೋಚಿಸುವುದರಲ್ಲೆ ಕಾಲಕಳೆದಿರಿ. ಈಗ ಯೋಚಿಸುತ್ತ ಕೂತಿರುವ ಕಾಲವಲ್ಲ. ನೀವು ಮಾತಿಗೆ ತಪ್ಪುವುದು ಕೂಡ ತರವಲ್ಲ' ಎಂಬ ಸಂದೇಶವನ್ನು ಕಳುಹಿಸಲಾಯಿತು. ಎಲ್ಲ ಸರದಾರರೂ ಸೇರಿ ಚಾಂದ್ ಬೀಬಿಯವರಿಗೆ ಮನವಿಯನ್ನು ಸಲ್ಲಿಸಿದರು. ಚಾಂದ್ ಬೀಬಿ ಈ ಎಲ್ಲ ಬೆಳವಣಿಗೆಯನ್ನು ಗಮನಿಸಿ ತನ್ನ ೨೦ ಸಾವಿರ ಪೇದೆಗಳು, ಪ್ರಜೆಗಳು ಕುಟುಂಬ ಸಮೇತ ತಮ್ಮ ಸಾಮಾನು ಸರಂಜಾಮುಗಳನ್ನು ಕಟ್ಟಿಕೊಂಡು ಯುದ್ಧಕ್ಕೆ ತಯಾರಾಗುವಂತೆ ಮಾಡಿದರು. ಎಲ್ಲರೂ ಯಾವುದೇ ಭಯವಿಲ್ಲದೆ ಸೈನ್ಯದೊಂದಿಗೆ ಸೇರಿ ಹಿಂದಿಯಾಪುರದ ಬಳಿ ಸೇರಿಕೊಂಡು ತಂಗಿದರು. ಈ ಎಲ್ಲ ಸುದ್ದಿಗಳನ್ನು ಅಲಂಪನಾರಿಗೆ ತಲಪಿಸಿದೆ. ಹೀಗೆ ದೊಡ್ಡದೊಂದು ಪಿತೂರಿಯಿಂದ ರಾಜ್ಯಕ್ಕೆ ಬಂದಿದ್ದ ಗಂಡಾಂತರದಿಂದ ಪಾರಾಗಿತ್ತು. ಈ ಸಾಧನೆಯಲ್ಲಿ ಬಹಳಷ್ಟು ವಿವರಗಳು ತುಂಬಿಕೊಂಡಿದ್ದರೂ ನಾನು ಅತ್ಯಂತ ಸೂಕ್ಷ್ಮವಾಗಿ ವಿವರಗಳನ್ನು ನೀಡಿದ್ದೇನೆ.

■

*

## ಅಧ್ಯಾಯ–೧೩

**ಅಮೀರ್ ತೈಮೂರ್ ಗೊರ್‌ಗಾನನ ವಂಶದ ಭಾರತಕ್ಕೆ ಆಗಮನ ಮತ್ತು ಇಲ್ಲಿ ರಾಜ್ಯಾಡಳಿತ ನಡೆಸಿದ ವಿವರಗಳು**

ಇವರ ವಂಶದಲ್ಲಿ ಮೊದಲು ಜಹೀರುದ್ದೀನ್ ಮುಹಮ್ಮದ್ ಬಾಬರ್ ಇಲ್ಲಿಗೆ ಆಗಮಿಸಿದ. ಇವರ ವಂಶವೃಕ್ಷ ಹೀಗಿದೆ:

ಅಮೀರ್ ತೈಮೂರನ ಮಗ

|

ಮಿರ್ಜಾ ಮೀರಾ ಷಾನ ಮಗ

|

ಮಿರ್ಜಾ ಸುಲ್ತಾನನ ಮಗ

|

ಮಿರ್ಜಾ ಸಯೀದನ ಮಗ

|

ಮಿರ್ಜಾ ಉಮರ್ ಷೇಖ್ ಗೊರ್‌ಗಾನ– ಇವನ ಮಗ

ಭಾರತದ ಖ್ಯಾತ ಮೊಗಲ್ ವಂಶದ ಬಾದಶಾಹ ಜಹೀರುದ್ದೀನ್ ಮುಹಮ್ಮದ್ ಬಾಬರ್.

ಬಾಬರ ಬಹಳ ಬಲಿಷ್ಠ, ಶೌರ್ಯವಂತ ಮತ್ತು ನಿರ್ಭಯನಾದ ಬಾದಶಾಹನೆಂದು

ಹೆಸರಾಂತನಾಗಿದ್ದ. ಅವನ ಕೈಯಲ್ಲಿ ಝಳಪಿಸುವ ಖಡ್ಗಕ್ಕೆ 'ಶಂಷೀರೆ ಬೇನಜೀರ್' (ಸರಿಸಾಟಿಯಿಲ್ಲದ ಶ್ರೇಷ್ಠ ಖಡ್ಗ) ಎಂಬ ಹೆಸರಲ್ಲಿ ಪ್ರಖ್ಯಾತವಾಗಿತ್ತು. ತನ್ನದೇ ಆದ ಸ್ವಂತ ದೇಶವೊಂದನ್ನು ಆಳಬೇಕು ಎನ್ನುವ ಮಹದಾಕಾಂಕ್ಷೆ ಅವನಿಗಿತ್ತು. ಅವನು ಇದೇ ಪ್ರಯತ್ನದಲ್ಲಿ ಇರುತ್ತಿದ್ದ. ತನ್ನ ದೇಶದಲ್ಲಿ ಅವನಿಗೆ ಅನೇಕ ವೈರಿಗಳು ಹುಟ್ಟಿಕೊಂಡಾಗ ತನ್ನ ಕೆಲವು ನಿಷ್ಠಾವಂತ ಬೆಂಬಲಿಗರನ್ನು ಕಟ್ಟಿಕೊಂಡು ಅನೇಕ ದೇಶಗಳಿಗೆ ವಿಜಯಯಾತ್ರೆ ನಡೆಸಿ ಜಯಶಾಲಿಯಾಗಿದ್ದ. ಅವನಿಗೆ ತನ್ನ ಬಂಧು ಬಳಗದ ಜನರಿಂದ ಕೂಡ ಸಾಕಷ್ಟು ವಿರೋಧ ಎದುರಿಸಬೇಕಾಗಿ ಬಂತು. ಇಲ್ಲಿ ಕೂಡ ಅವನು ವಿಜಯಶಾಲಿಯಾಗಿಯೇ ಎದ್ದು ಬಂದಿದ್ದ. ಆ ಕಾಲದಲ್ಲಿ ಶಾಹಿ ಬೇಗ್ ಖಾನ್ ಎಂಬ ಹೆಸರಿನಲ್ಲಿ ಪ್ರಖ್ಯಾತನಾಗಿದ್ದ ಮುಹಮ್ಮದ್ ಖಾನ್ ಶೇಬಾನಿ ಸಮುದ್ರ ಬಿಟ್ಟು ಉಳಿದ ನೆಲವೆಲ್ಲ (ಮಾವರಾ ಉನ್ನಹರ್) ಸೇರಿದಂತೆ ಇಡೀ ವಿಶ್ವ ಸಂಪೂರ್ಣವಾಗಿ ಅವನ ಹಿಡಿತದಲ್ಲಿತ್ತು ಎಂಬ ಖ್ಯಾತಿ ಅವನಿಗಿತ್ತು. ಜಹೀರುದ್ದೀನ್ ಮುಹಮ್ಮದ್ ಬಾಬರ ಸಮರ್‌ಖಂಡನ್ನು ವಶಪಡಿಸಿಕೊಳ್ಳಲು ಮೂರು ಬಾರಿ ಮುಹಮ್ಮದ್ ಖಾನ್ ಶೇಬಾನಿಯೊಂದಿಗೆ ಯುದ್ಧ ಮಾಡಿದ್ದ. ಕಟ್ಟಕಡೆಗೆ ಈ ಕ್ರೂರಿ ಬಾದಶಾಹನಿಂದ ಸಮರ್‌ಖಂಡವನ್ನು ವಶಪಡಿಸಿಕೊಳ್ಳುವುದರಲ್ಲಿ ಬಾಬರ್ ಜಯಶಾಲಿಯಾಗಿದ್ದ. ಇದರ ನಂತರ ಬಾಬರನಿಗೆ ಖುರಾಸಾನನ್ನು ವಶಪಡಿಸಿಕೊಳ್ಳುವ ಮಹದಾಸೆ ಮೂಡಿತು. ತನ್ನ ಜೊತೆ ಬೃಹತ್ ಸೈನ್ಯವನ್ನು ಸೇರಿಸಿಕೊಂಡು ಖುರಾಸಾನನ್ನು ಆಕ್ರಮಿಸಲು ಯುದ್ಧ ಹೂಡಿದ. ಈ ಕಾಲಘಟ್ಟದಲ್ಲಿ ಸುಲ್ತಾನ್ ಹುಸೈನ್ ಮಿರ್ಜಾರು ತೀರಿಕೊಂಡು ಅವರ ಮಕ್ಕಳು ಪಟ್ಟಕ್ಕಾಗಿ ಪರಸ್ಪರ ಕಾದಾಡುತ್ತಿದ್ದರು. ಆಸ್ಥಾನದಲ್ಲಿ ಆಡಳಿತ ನಡೆಸಲು ಸಾಧ್ಯವಾಗುತ್ತಿರಲಿಲ್ಲ. ಮುಹಮ್ಮದ್ ಖಾನ್ ಶೇಬಾನಿ ಈ ಸಂದರ್ಭವನ್ನು ಉಪಯೋಗಿಸಿಕೊಂಡು ಅವರನ್ನು ಒಬ್ಬೊಬ್ಬರನ್ನಾಗಿ ವಿಂಗಡಿಸಿ ಕೊಂದುಹಾಕಿದ. ಕೆಲವರನ್ನು ಅಲ್ಲಿಂದ ಓಡಿಸಿದ. ಹೀಗೆ ಅವನು ಖುರಾಸಾನಿನ ಮೇಲೆ ತನ್ನ ಹಿಡಿತವನ್ನು ಸ್ಥಾಪಿಸಿದ. ಅಲ್ಲಿ ತನ್ನ ಪಟ್ಟವನ್ನು ಸ್ಥಾಪಿಸಿ ಆಡಳಿತ ನಡೆಸಿದ.

ಹಿಂದೆ ಷಾ ಇಸ್ಮಾಯಿಲ್ ಆಝುರ್ ಬೈಜಾನ್, ಶೇರ್‌ವಾನ್, ಇರಾಕ್, ಫಾರಿಶ್(ಇರಾನ್)ನ್ನು ಆಳುತ್ತಿರುವಾಗ ಮುಹಮ್ಮದ್ ಖಾನ್ ಶೇಬಾನಿಯ ಅಹಂಕಾರವನ್ನು ಮುರಿದು ಹಾಕಲು ಒಂದು ದೊಡ್ಡ ಸೇನೆಯ ಜೊತೆಗೆ ಖುರಾಸಾನಿನ ಮೇಲೆ ದಾಳಿ ನಡೆಸಿದ. ಹೇರಾತ್ ಷಾ ಇಸ್ಮಾಯಿಲನ ಆಳ್ವಿಕೆಗೆ ಒಳಗಾಗಿತ್ತು. ತನ್ನ ಸೇನೆಯ ಸರದಾರರೊಂದಿಗೆ ಮರವೂ(ಮರ್‌ವಾನ್) ಪ್ರಾಂತ್ಯಕ್ಕೆ ಆಗಮಿಸಿದ. ಆಗ ಶಾಹಿ ಬೇಗ್ ಖಾನ್(ಮುಹಮ್ಮದ್ ಖಾನ್ ಶೇಬಾನಿ) ಅಸ್ವಸ್ಥನಾಗಿದ್ದ. ಶಾಹ ಮದೀದ್ ಖಾನ್ ಮರವೂ ಪ್ರಾಂತ್ಯಕ್ಕೆ ಮುತ್ತಿಗೆ ಹಾಕಿದ್ದ. ಶಾಹಿ ಬೇಗನ ಸೈನ್ಯದ ಮೇಲೆ ದಾಳಿ

ನಡೆಸುತ್ತ ಮರವೂವನ್ನು ವಶಪಡಿಸಿಕೊಂಡು ಮುಂದುವರಿದಿದ್ದ. ಶಾಹಿ ಬೇಗ್ ಖಾನ್ ಅಲ್ಲಿಂದ ಪರಾರಿಯಾದ. ಅವನ ಬೆನ್ನು ಹತ್ತಿಕೊಂಡು ಶಾಹಿ ಬೇಗ್ ಆಶ್ರಯ ಪಡೆದಿದ್ದ ಸಿಯಾಲ್ಡಾ ಪ್ರಾಂತ್ಯಕ್ಕೆ ಪ್ರವೇಶಿಸಿ ಅವನನ್ನು ಸಮೀಪಿಸಿದ. ಶಾಹಿ ಬೇಗ್ ಯಾನೆ ಮುಹಮ್ಮದ್ ಖಾನ್ ಶೇಬಾನಿ ಯುದ್ಧಕ್ಕೆ ತಯಾರಾಗದೆ ಅಲ್ಲಿಂದ ಮರವೂ ಕಡೆ ಹಿಂತಿರುಗಿ ಓಡಿದ. ಇವನ ಸೈನ್ಯ ಅವನನ್ನು ಹಿಂಬಾಲಿಸುತ್ತಲೇ ಇತ್ತು. ಅವನಿಗೆ ಬಚಾವಾಗಲು ಯಾವುದೇ ದಾರಿ ಇಲ್ಲದಾಗ ಒಬ್ಬರ ಮೇಲೆ ಇನ್ನೊಬ್ಬರು ಮುಗಿಬಿದ್ದು ಹೋರಾಡಿದಾಗ ಅನೇಕ ಜನರು ಅಸುನೀಗಿದರು. ಇವರಲ್ಲೊಬ್ಬನಾಗಿ ಶಾಹಿ ಬೇಗ್ ಖಾನ್ ಕೂಡ ಅಸುನೀಗಿದ್ದ. ಅವನ ಶಿರಚ್ಛೇದ ಮಾಡಿ ಷಾ ಇಸ್ಮಾಯಿಲನ ಮುಂದೆ ಹಾಜರುಪಡಿಸಿದಾಗ 'ಇವನ ತಲೆಯ ಚಿಪ್ಪಿಗೆ ಬಂಗಾರದ ಲೇಪ ಹಚ್ಚಿ ಶರಾಬಿನ ಬಟ್ಟಲನ್ನು ಮಾಡಿ' ಎಂದು ಆತ ಆಜ್ಞಾಪಿಸಿದ. ಈ ಶರಾಬಿನ ಬಟ್ಟಲಿನಿಂದ ಷಾ ಇಸ್ಮಾಯಿಲ್ ಶರಾಬು ಕುಡಿಯುತ್ತಿದ್ದ. ನಂತರ ಇದನ್ನು ತನ್ನ ಮುಖ್ಯಮಂತ್ರಿ ನಜ್ಮೆ ಶಾನಿಗೆ ಉಡುಗೊರೆಯಾಗಿ ನೀಡಿದ. ಶಾಹಿ ಬೇಗ್ ಖಾನ್ ಈ ಲೋಕದಿಂದ ದೂರವಾದ ಬಳಿಕ ಝಹೀರುದ್ದೀನ್ ಮುಹಮ್ಮದ್ ಬಾಬರನಿಗೆ ಲೋಕದ ಅನೇಕ ದೇಶಗಳನ್ನು ಜಯಿಸಲು ಸಾಧ್ಯವಾಯಿತು. ಹೀಗೆ ಜಯಿಸುತ್ತ ವಿಜಯಯಾತ್ರೆ ಮಾಡುತ್ತ ಪ್ರಯಾಣಿಸಿದ ಬಾಬರ ಹಿಂದೂಸ್ಥಾನಕ್ಕೆ ಕಾಲಿಟ್ಟ. ಇಲ್ಲಿನ ರಾಜ್ಯಗಳನ್ನು ಜಯಿಸಿ ವಶಪಡಿಸಿಕೊಂಡ. ತನ್ನ ಮಕ್ಕಳನ್ನು ಅಧಿಕಾರಿಗಳನ್ನಾಗಿ ನೇಮಿಸಿ ಆಳ್ವಿಕೆ ನಡೆಸಿದ. ಮಕ್ಕಳಲ್ಲಿ ಒಬ್ಬನಾದ ಹುಮಾಯೂನ್ ಬಾದಶಾಹನಿಗೂ ಪ್ರಮುಖ ಸ್ಥಾನವನ್ನು ನೀಡಿದ. ಅವನ ಎಲ್ಲ ಮಕ್ಕಳೂ ಬಾಲ್ಯದಿಂದಲೇ ಕತ್ತಿ ಕಾಳಗದಲ್ಲಿ ಬಹಳ ಪರಿಣಿತರಾಗಿ ಬೆಳೆದಿದ್ದರು. ದೆಹಲಿಯನ್ನು ತಮ್ಮ ಆಡಳಿತದ ರಾಜಧಾನಿಯನ್ನಾಗಿ ಮಾಡಿಕೊಂಡರು. ಈ ರಾಜಧಾನಿಯಲ್ಲಿ ತಮ್ಮ ಸ್ಥಾನವನ್ನು ಗಟ್ಟಿಮಾಡಿಕೊಂಡರು. ಎಲ್ಲೆಲ್ಲಿ ತನ್ನ ಸೈನ್ಯವನ್ನು ಕಳುಹಿಸುತ್ತಾನೋ ಅಲ್ಲೆಲ್ಲ ವಿಜಯಿಯಾಗಿ ದೊಡ್ಡ ಸಾಮ್ರಾಜ್ಯವನ್ನು ಕಟ್ಟಿಕೊಂಡ.

**ಜಹೀರುದ್ದೀನ್ ಮುಹಮ್ಮದ್ ಬಾಬರನ ಅಂತ್ಯ ಹಾಗೂ ಹುಮಾಯೂನ್ ಬಾದಶಾಹ ಘಾಜಿಗೆ ಪಟ್ಟಾಭಿಷೇಕದ ವಿವರಗಳು:**

ಬಾಬರನಿಗೆ ತನ್ನ ಅಂತ್ಯ ಸಮೀಸುತ್ತಿದೆ ಎಂದು ಅನಿಸಿದಾಗ ತನ್ನ ಮಗ ಹುಮಾಯೂನನನ್ನು ವಾರೀಸುದಾರನನ್ನಾಗಿ ನೇಮಕ ಮಾಡಿ ಸಿಂಹಾಸನದಲ್ಲಿ ಕೂರಿಸಿದ. ಆದರೆ ಸಹೋದರರ ಮಧ್ಯೆ ದಿನವೂ ಒಂದಲ್ಲ ಒಂದು ಕಾರಣಕ್ಕೆ ಜಗಳಗಳು ನಡೆಯುತ್ತಿದ್ದವು. ಇದರಿಂದಾಗಿ ರಾಜ್ಯಗಳನ್ನು ವಶಪಡಿಸಿಕೊಂಡು ಸಾಮ್ರಾಜ್ಯ ವಿಸ್ತರಣೆ ಮಾಡುವುದು ಸಾಧ್ಯವಾಗದೆ ನಿಂತಿತ್ತು. ಮಿರ್ಜಾ ಕಾಮ್‌ರಾನ್ ಎಂಬ ಆಸ್ಥಾನದ ದಕ್ಷ ಪ್ರಾಮಾಣಿಕ ಅಧಿಕಾರಿಯ ಭಾಗ್ಯದಲ್ಲಿ ಬಾದಶಾಹನ ಪಟ್ಟ ದಕ್ಕಲಿಲ್ಲ.

ಈ ಜಂಜಾಟದಿಂದ ಪಾರಾಗಲು ಅವನು ಮಕ್ಕಾದ ಯಾತ್ರೆಗೆ ತೆರಳಿದ. ಮದೀನಾದ ಪವಿತ್ರ ಮಸೀದಿಗೆ ತಲಪಿದಾಗ ಅಲ್ಲೇ ಕೊನೆತನಕ ಕಾಲಕಳೆಯುವ ನಿರ್ಧಾರವನ್ನು ತೆಗೆದುಕೊಂಡ. ಸುಲ್ತಾನ್ ಸುಲೈಮಾನ್ ಎಂಬ ರೋಮಿನ ಬಾದಶಾಹ ತನ್ನ ಘನತೆ, ಗಾಂಭೀರ್ಯ, ವೈಭವಗಳಿಗೆ ವಿಶ್ವದಲ್ಲಿ ಪ್ರಖ್ಯಾತನಾಗಿದ್ದ. ಅವನು ತನ್ನ ಪ್ರಜೆಗಳಿಗೆ ದಿನವೂ ನಲ್ವತ್ತು ದಿರ್ಹಮ್ ವೇತನ ರೂಪದಲ್ಲಿ ನೀಡುತ್ತಿದ್ದ. ಅವನು ತನ್ನ ಮರಣದ ತನಕವೂ ಇದೇ ಪರಂಪರೆಯನ್ನು ರೂಢಿಮಾಡಿಕೊಂಡಿದ್ದ.

ಹುಮಾಯೂನ್ ಬಾದಶಾಹನು ಪಟ್ಟಕ್ಕೆ ಬಂದ ನಂತರ ಕಾಮರಾನ್ ಮಿರ್ಜಾ ತನ್ನ ಆಳ್ವಿಕೆಯಲ್ಲಿ ಅರ್ಧಕ್ಕೆ ಬಿಟ್ಟು ಹೋಗಿದ್ದ ಕಾರ್ಯಗಳನ್ನು ಪೂರ್ಣಗೊಳಿಸಿದ. ದಿನೇದಿನೇ ತನ್ನ ಸಾಮ್ರಾಜ್ಯದ ವೈಭವ, ಘನತೆಯನ್ನು ಹೆಚ್ಚಿಸುವ ಕಾರ್ಯಗಳನ್ನು ಕೈಗೆತ್ತಿಕೊಂಡ. ತಿಂಗಳಲ್ಲಿ ಒಂದು ದಿನ ಆನೆಯ ಅಂಬಾರಿಯಲ್ಲಿ ಕೂತು ತನ್ನ ಪ್ರಜೆಗಳ ಪರಿಸ್ಥಿತಿಯನ್ನು ತಿಳಿಯಲು ಸಂಚಾರ ನಡೆಸುತ್ತಿದ್ದ. ಆಗ ಅವನ ಮುಖವನ್ನು ಮುಚ್ಚಿಕೊಳ್ಳುತ್ತಿದ್ದ. ಪ್ರಜೆಗಳು ಇದಕ್ಕೆ 'ಜಲ್ವಯೆ ಖುದ್ದೂಸ್'(ದೊಡ್ಡ ಶಕ್ತಿಯ ದೃಷ್ಯ) ಎಂದು ಹೆಸರಿಟ್ಟಿದ್ದರು. ಇವನ ದರ್ಬಾರಿನ ವೈಭವ ಹೇಗಿತ್ತೆಂದರೆ ವರ್ಣಿಸಲಸದಳವಾಗಿ, ವಿಶ್ವದೆಲ್ಲೆಡೆ ಕಂಡು ಕೇಳದಿರುವ ಅಚ್ಚರಿಯಾಗಿತ್ತು. ಇವನ ಆಪ್ತಮಿತ್ರರಲ್ಲಿ ರೋಮಿನ ಸುಲೈಮಾನ್ ಬಾದಶಾಹ ಮತ್ತು ಇರಾನಿನ ಶಾಹ ತಹಮಾಸ್ಪ್ ಸೇರಿದ್ದರು. ಇವರಿಬ್ಬರೂ ಸಯ್ಯದ್ ವಂಶಸ್ಥರಾಗಿದ್ದು(ಪೈಗಂಬರರ ವಂಶವಾಹಿನಿಯಲ್ಲಿ ಜನಿಸಿದವರು) ದರ್ಬಾರಿನಲ್ಲಿ ಇವರ ಆಗಮನವಾದಾಗ ತನ್ನ ಬಲ ಮತ್ತು ಎಡ ಭಾಗದಲ್ಲಿ ತನ್ನ ಸಾಲಿನಲ್ಲಿ ನೇರವಾಗಿ ಕೂರಿಸುತ್ತಿದ್ದ. ಉಳಿದ ಬಾದಶಾಹರು ಆಗಮಿಸಿದಾಗ ಅವರ ಸ್ಥಾನಮಾನಕ್ಕೆ ಸರಿಯಾಗಿ ಆಸ್ಥಾನದ ಸಾಮಾನ್ಯ ಅತಿಥಿಗಳ ವೇದಿಕೆಗಳಲ್ಲಿ ಕೂರಿಸುತ್ತಿದ್ದ.

ಬಾದಶಾಹ ಹುಮಾಯೂನನಿಗೆ ಗುಜರಾತನ್ನು ವಶಪಡಿಸಿಕೊಳ್ಳುವ ಯೋಚನೆ ಹುಟ್ಟಿಕೊಂಡು, ಒಂದು ದೊಡ್ಡ ಸೈನ್ಯವನ್ನು ಕರೆದುಕೊಂಡು ಅಲ್ಲಿಗೆ ಹೋದ. ಸುಲ್ತಾನ್ ಬಹದ್ದೂರ್ ಮೊಘಲ್ ಸೇನೆಯನ್ನು ಎದುರಿಸಲಾಗದೆ ಸೋತು, ತನ್ನ ಜೀವವನ್ನು ಮಾತ್ರ ಉಳಿಸಿಕೊಂಡ. ಅವನು ಅಹ್ಮದಾಬಾದನ್ನು ಅಲ್ಲಿನ ರಾಜಧಾನಿಯನ್ನಾಗಿಸಿ ತನ್ನ ಸಿಂಹಾಸನವನ್ನು ಸ್ಥಾಪಿಸಿಕೊಂಡ. ಹತ್ತಿರದ ಮತ್ತು ಸುತ್ತಮುತ್ತಲಿನ ಇಲಾಖೆಯನ್ನು ತನ್ನ ವಶಕ್ಕೆ ತೆಗೆದುಕೊಂಡ. ಹೆಚ್ಚುಕಮ್ಮಿ ಎರಡು ವರ್ಷಗಳ ಕಾಲ ಈತ ಗುಜರಾತಿನಲ್ಲಿ ನೆಲೆನಿಂತಿದ್ದ. ನಂತರ ತನ್ನ ಮುಂದಿನ ಪ್ರಯಾಣವನ್ನು ಕೈಗೊಂಡ. ಇಂತಹ ಸಮಯದಲ್ಲಿ ಆಗ್ರಾ ಮತ್ತು ದೆಹಲಿಯಲ್ಲಿ ಇವನ ವಿರುದ್ಧ ಒಂದು ದೊಡ್ಡ ಮಟ್ಟದ ವಿದ್ರೋಹದ ಪಿತೂರಿ ಎದ್ದಿತು. ಹುಮಾಯೂನ ಈ ವಿದ್ರೋಹವನ್ನು ಮಟ್ಟಹಾಕಲು ಗುಜರಾತಿನಿಂದ ಆಗ್ರಾಕ್ಕೆ ಪ್ರಯಾಣ ಬೆಳೆಸಿದ. ಈ ವಿದ್ರೋಹಿಗಳನ್ನು ಮರ್ದಿಸಿ ತನ್ನ ಹಿಡಿತದೊಳಗೆ ಇಟ್ಟುಕೊಳ್ಳುವುದರಲ್ಲಿ

ಯಶಸ್ವಿಯಾದ. ಗುಜರಾತಿನ ಉಳಿದ ಪ್ರಮುಖ ಅಧಿಕಾರಿಗಳು, ಮಂತ್ರಿಗಳ ಪಿತೂರಿಯನ್ನು ಕೂಡ ಶಮನಗೊಳಿಸಿದ. ಇದರಿಂದ ಸುಲ್ತಾನ್ ಬಹದ್ದೂರ ಅಲ್ಲಿಂದ ಕಾಲುಕಿತ್ತು ಓಡಬೇಕಾಯಿತು. ಹುಮಾಯೂನ್ ಬಾದಶಾಹ ಹೀಗೆ ತನ್ನ ಘನತೆ, ವೈಭವ, ಶೌರ್ಯದಿಂದ ಸುಖಸಂತೋಷದಿಂದ ಬದುಕಿ ಬಾಳಿದ.

ಹಿಂದುಸ್ಥಾನದಲ್ಲಿ ಅಫಘಾನಿಸ್ಥಾನದ ಜನರು ಕೆಲವರು ಬಂದು ನೆಲೆಸಿದ್ದರು. ಇವರು ತಮ್ಮನ್ನು ಖಾಲಿದ್ ಬಿನ್ ವಲೀದರ ವಂಶಸ್ಥರೆಂದು ಹೇಳಿಕೊಳ್ಳುತ್ತಿದ್ದರು. ಇವರಲ್ಲಿ ಕೆಲವರು ಸುಲ್ತಾನರಾಗಿಯೂ ಇದ್ದರು. ಇವರು ನ್ಯಾಯಪರಿಪಾಲನೆಯನ್ನು ಮಾಡುತ್ತ ತಮ್ಮ ಆಳ್ವಿಕೆಯನ್ನು ನಡೆಸಿದ್ದರು. ಹುಮಾಯೂನ್ ಬಾದಶಾಹನ ಕಾಲದಲ್ಲಿ ಕೆಲವು ಅಫಘಾನಿ ವಂಶಸ್ಥರು ಆಸ್ಥಾನದಲ್ಲಿ ಅಧಿಕಾರಿಗಳಾಗಿ ಕೆಲಸಮಾಡುತ್ತಿದ್ದರು. ಈ ಅಧಿಕಾರಿಗಳಲ್ಲಿ ಮಿಯಾ ಫರೀದ್ ಬಿನ್ ಹಸನ್ ಶೋರ್ರಿ ಎಂಬವನು ಬಾದಶಾಹ ಹುಮಾಯೂನನ ನಿಕಟವರ್ತಿಗಳಲ್ಲಿ ಒಬ್ಬನಾಗಿದ್ದ. ತನ್ನ ದೇಹ ಧಾರ್ಢ್ಯತೆ ಮತ್ತು ಗುಣ ನಡತೆಗಳಲ್ಲಿ ಶ್ರೇಷ್ಠನಾಗಿದ್ದು, ಶುದ್ಧ ಚಾರಿತ್ರ್ಯವಂತನಾಗಿ ಪ್ರಾಮಾಣಿಕನಾಗಿದ್ದ. ಕೆಲವು ಕಿವಿಯೂದುವ ನಂಜುಕಾರುವ ಮನುಷ್ಯರು ಬಾದಶಾಹನ ಮನಸ್ಸಿನಲ್ಲಿ ಇವನ ಬಗ್ಗೆ ಸಂದೇಹ ಮೂಡಿಸುವ ಪ್ರಯತ್ನ ಮಾಡಿದ್ದರು. ಇದನ್ನು ತಿಳಿದ ಫರೀದ್ ಬಿನ್ ಹಸನ್ ಶೋರ್ರಿ ತನ್ನನ್ನು ಬಾದಶಾಹನಿಂದ ದೂರವಿರುವ ನಿರ್ಧಾರವನ್ನು ತೆಗೆದುಕೊಂಡ. ನಂತರ ತನ್ನ ಹುಟ್ಟೂರಿನ ಕಡೆಗೆ ಪ್ರಯಾಣ ಬೆಳೆಸಿದ. ಈ ಮಧ್ಯೆ ಬಾದಶಾಹರಿಗೆ ಕೆಲವು ವಿದ್ರೋಹಿಗಳು ಹೊಂಚು ಹಾಕುತ್ತಿದ್ದಾರೆಂಬ ಸುಳಿವು ಸಿಕ್ಕಿತು. ಆಗ ಬಾದಶಾಹ ಅಫಘಾನ್ ಮೂಲದ ಈ ವ್ಯಕ್ತಿಗಳ ನೆರವು ಕೇಳಿದ. ಈ ಸಂದರ್ಭದಲ್ಲಿ ಫರೀದ್ ಬಿನ್ ಹಸನ್ ಶೋರ್ರಿ ತನ್ನ ನಿರ್ಧಾರವನ್ನು ಬದಲಿಸಿ ಬಾದಶಾಹರ ಸಹಾಯಕ್ಕೆ ನಿಲ್ಲುವುದು ಸರಿಯಾದ ಕ್ರಮವೆಂದು ತೀರ್ಮಾನಿಸಿದ. ಆ ಕಾಲದಲ್ಲಿ ಇವನ ಪಂಗಡದ ಕೆಲವರು ಕೃಷಿಯಲ್ಲಿ ತೊಡಗಿದ್ದವರಿಗೆ ಆಸ್ಥಾನದಲ್ಲಿ ಸ್ಥಾನಮಾನವನ್ನು ಕೊಡಿಸಿದ. ಬಾದಶಾಹ ಇವನಿಗೆ 'ಶೇರ್ ಖಾನ್' ಎಂಬ ಬಿರುದನ್ನು ನೀಡಿದ್ದ. ಇವನ ನೆರವಿಗೆ ಮೂರು ಸಾವಿರ ಸೈನಿಕರ ತಂಡವನ್ನು ನೀಡಲಾಯಿತು. ಬಾದಶಾಹರ ಈ ಬೆಂಬಲದಿಂದ ಪಿತೂರಿ ನಡೆಸುವವರಿಗೆ ಹಿನ್ನೆಡೆಯಾಗಿ ಕ್ರಮೇಣ ಮಾಯವಾದರು.

ಈ ಮಧ್ಯೆ ಬಾದಶಾಹ ಹುಮಾಯೂನನಿಗೆ ಬಂಗಾಲದ ಬಾದಶಾಹ ತೀರಿಕೊಂಡರೆಂಬ ವರ್ತಮಾನ ಸಿಕ್ಕಿತು. ಅಲ್ಲಿ ರಾಜ್ಯದ ಆಳ್ವಿಕೆಯ ವಿಷಯದಲ್ಲಿ ಕುಟುಂಬದೊಳಗೆ ತಿಕ್ಕಾಟ ಶುರುವಾಗಿತ್ತು. ಬಾದಶಾಹ ಸಮಯದ ಸದುಪಯೋಗ ಪಡೆದು ಸ್ವತಃ ತಾನೇ ಸೈನ್ಯದ ನಾಯಕತ್ವವಹಿಸಿ ದಾಳಿನಡೆಸಿ ಬಂಗಾಳವನ್ನು ವಶಪಡಿಸಿಕೊಂಡ.

**ಬಾದಶಾಹ ಹುಮಾಯೂನ ಬಂಗಾಳವನ್ನು ವಶಪಡಿಸಿಕೊಳ್ಳುವ ಸಲುವಾಗಿ ಪ್ರಯಾಣ ಬೆಳೆಸಿದ ವಿವರಗಳು**

ಬಾದಶಾಹ ಹುಮಾಯೂನ ತನ್ನ ಎಂದಿನ ಘನತೆ, ವೈಭವದಿಂದ ಶೂರ ಸೈನಿಕರ ದೊಡ್ಡ ತಂಡದೊಂದಿಗೆ ಬಂಗಾಳಕ್ಕೆ ಪ್ರಯಾಣ ಬೆಳೆಸಿದ. ಶೇರ್ ಖಾನನಿಗೆ ಬಾದಶಾಹನಿಂದ ಸೈನಿಕ ಪಡೆಯೊಂದನ್ನು ನೀಡಲಾಗಿದ್ದರಿಂದ ಅವನನ್ನು ತನ್ನ ಸೈನಿಕ ತಂಡದೊಂದಿಗೆ ಬಂಗಾಳದ ದಂಡೆಯಾತ್ರೆಯಲ್ಲಿ ಪಾಲ್ಗೊಳ್ಳಲು ಆಜ್ಞೆ ನೀಡಲಾಯಿತು. ಶೇರ್ ಖಾನನಿಗೆ ಬಾದಶಾಹರ ಆದೇಶ ತಲಪಿದಾಗ ಅವನು ಹುಜೂರ್ ನಾಮಾ ಪತ್ರವನ್ನು ಬರೆದು ಬಾದಶಾಹರಿಗೆ ತಲಪಿಸಿದ. ತಾನು ಈ ಸಮಯದಲ್ಲಿ ತನ್ನ ದೇಶದ ಒಂದು ಅತೀ ಅಗತ್ಯವಾದ ಕಾರ್ಯದಲ್ಲಿ ಮಗ್ನನಾಗಿದ್ದೇನೆ ಎನ್ನುವುದನ್ನು ಪತ್ರದಲ್ಲಿ ನಮೂದಿಸಲಾಗಿತ್ತು. ಬಾದಶಾಹರು ಪತ್ರವನ್ನು ಸಂತೋಷದಿಂದ ಸ್ವೀಕರಿಸಿ 'ನನಗೆ ನಮ್ಮ ಸಾಮ್ರಾಜ್ಯದಲ್ಲಿ ಕೆಲವು ಅಪಾಯಗಳು ಉಂಟಾಗುವ ಸುಳಿವು ಸಿಕ್ಕಿದೆ. ಅವುಗಳನ್ನು ಸರಿಪಡಿಸಬೇಕಾಗಿದೆ' ಎಂದು ಮಾರುತ್ತರ ನೀಡಿದರು. ದೇಶದಲ್ಲಿ ಒಂದು ಕೋಟೆ ರೊಹತಾಸ್ ಎಂಬ ಸ್ಥಳದಲ್ಲಿತ್ತು. ರೊಹತಾಸಿನ ಈ ಕೋಟೆ ತುಂಬ ಪ್ರಖ್ಯಾತವಾಗಿತ್ತು. ಈ ರೀತಿಯ ಕೋಟೆ ವಿಶ್ವದಲ್ಲಿ ಎಲ್ಲೂ ಕಾಣಸಿಗಲಾರದು ಎಂದೂ ಹೇಳಲಾಗುತ್ತಿತ್ತು. ಈ ಕೋಟೆಯೊಳಗೆ ೩೦ ಗ್ರಾಮಗಳು ಒಳಗೊಂಡಿದ್ದವು. ಇಲ್ಲಿ ದೊಡ್ಡ ಪ್ರಮಾಣದಲ್ಲಿ ಕೃಷಿ ನಡೆಯುತ್ತಿತ್ತು. ಈ ಗ್ರಾಮಗಳಲ್ಲಿ ಬೆಳೆದ ದವಸ ಧಾನ್ಯಗಳು ನಗರದಲ್ಲಿ ಮಾರುಕಟ್ಟೆಗೆ ಬರುತ್ತಿತ್ತು. ಅಲ್ಲಿ ಒಂದು ದೊಡ್ಡ ಕಾಲುವೆ ಹರಿಯುತ್ತಿತ್ತು. ಇದರ ದಡದಲ್ಲಿ ತರಕಾರಿ ಹಣ್ಣು ಹಂಪಲುಗಳನ್ನು ಬೆಳೆಸುತ್ತಿದ್ದರು. ಈ ಬೃಹತ್ ಕೋಟೆಯು ಹಿಂದೂ ರಾಜನೊಬ್ಬನ ಆಳ್ವಿಕೆಯೊಳಗಿತ್ತು. ಶೇರ್ ಖಾನ್ ಮತ್ತು ಹಿಂದೂ ರಾಜನ ಮಧ್ಯೆ ಮೈತ್ರಿ ಸಂಬಂಧವಿತ್ತು. ಆಗಾಗ ಆತ ಇವನಿಗೆ ಕಾಣಿಕೆ, ಉಡುಗೊರೆಗಳನ್ನು ಕಳುಹಿಸುತ್ತಿದ್ದ. ಅವನಿಗೂ ಕೂಡ ತಿಳಿಯಲೆಂಬ ಕಾರಣಕ್ಕೆ ಹುಮಾಯೂನನಿಂದ ಬಂದ ಪತ್ರವನ್ನು ರೋಹಿತಾಸ್‌ನ ರಾಜನಿಗೆ ಕೂಡ ಶೇರ್ ಖಾನ್ ಕಳುಹಿಸಿದ್ದ. ಇದನ್ನು ಓದಿ ತಪ್ಪಾದ ಅರ್ಥ ಮಾಡಿಕೊಂಡು 'ನೀನು ಬಂಗಾಳಕ್ಕೆ ಹೋದರೆ ಹುಮಾಯೂನನ ಜನರು ಬಂದು ನನ್ನ ಕೋಟೆಯನ್ನು ವಶಪಡಿಸಿಕೊಳ್ಳುತ್ತಾರೆ. ಆಗ ನಾನು ಕಾಡಿನಲ್ಲಿ ಅಡಗಬೇಕಾಗುತ್ತದೆ. ಇದಕ್ಕಿಂತ ಬಾದಶಾಹ ಹುಮಾಯೂನನ ಸಾಮಂತ ರಾಜನಾಗಿರುವುದರಿಂದ ನನಗೆ ಒಳಿತಿದೆ. ನಾನು ನಿನಗೆ ಕೋಟೆಯನ್ನು ಸಂಪೂರ್ಣವಾಗಿ ಒಪ್ಪಿಸುತ್ತೇನೆ' ಎಂದು ಯುದ್ಧವಿಲ್ಲದೆ ತನ್ನ ಕೋಟೆಯನ್ನು ಶೇರ್ ಖಾನನಿಗೆ ಒಪ್ಪಿಸಿದ. ಶೇರ್ ಖಾನ್‌ನಿಗೆ ಅನೇಕ ಪತ್ನಿಯರಿದ್ದರು. ಮುನ್ನೂರು ಮಹಿಳೆಯರು, ಏಳುನೂರು ಜನ ಗಂಡಸರು ಸೇರಿದ ಒಂದು ಸಾವಿರ ಜನರ ಕುಟುಂಬಗಳನ್ನು ಕೋಟೆಯ ಒಳಗೆ ಸೇರಿಸಲು ಕಳುಹಿಸಿದ. ಕೋಟೆಯ ಕಾವಲುಗಾರರು ಈ ಬುರ್ಖಾಧಾರಿಗಳನ್ನು ತಡೆದರು.

ಗಂಡಸರು ತಮ್ಮ ಬಳಿಯಿದ್ದ ಖಡ್ಗಗಳನ್ನು ಹಿರಿದು ಕಾವಲಿನ ಸೈನಿಕರೊಂದಿಗೆ ಘರ್ಷಣೆಗೆ ಇಳಿದರು. ಇದರಿಂದ ಭೀಕರ ಕಾಳಗ ನಡೆದು ಕೋಟೆಯ ರಾಜನನ್ನು ಸೇರಿದಂತೆ ಹಲವರನ್ನು ಕೊಂದುಹಾಕಲಾಯಿತು. ನಂತರದಲ್ಲಿ ಕೋಟೆಯನ್ನು ಶೇರ್ ಖಾನ್ ಸಂಪೂರ್ಣವಾಗಿ ವಶಪಡಿಸಿಕೊಂಡು ದೇವರಿಗೆ ಕೃತಜ್ಞತೆ ಸಲ್ಲಿಸಿ ಕೋಟೆಯೊಳಗೆ ಪ್ರವೇಶಿಸಿದ. ಈ ಕೋಟೆಯನ್ನು ನಂತರ ಬಂಗಾಲದಿಂದ ಹಿಂತಿರುಗಿದ ಬಾದಶಾಹ ಹುಮಾಯೂನನ ವಶಕ್ಕೆ ಒಪ್ಪಿಸುವುದರ ಬಗ್ಗೆ ಶೇರ್ ಖಾನ್ ಯೋಚಿಸಿದ್ದ.

**ಬಾದಶಾಹ ಹುಮಾಯೂನ್ ಬಂಗಾಳದಿಂದ ಹಿಂದಿರುಗುವುದು ಮತ್ತು ಕೆಟ್ಟದೃಷ್ಟಿ ಬಿದ್ದು ಸಂಕಟಕ್ಕೊಳಗಾದ ವಿವರಗಳು:**

ಹುಮಾಯೂನ್ ಬಾದಶಾಹ ಬಂಗಾಳಕ್ಕೆ ಪ್ರಯಾಣ ಬೆಳೆಸಿದಾಗ, ಅವನಿಗೆ ಅಲ್ಲಿನ ಪ್ರದೇಶದ ಪರಂಪರೆ, ಕಾನೂನಿನ ಬಗ್ಗೆ ಹೆಚ್ಚು ತಿಳಿದಿರಲಿಲ್ಲ. ಅವನು ಅಲ್ಲಿನ ಪ್ರದೇಶಗಳನ್ನು, ಕೋಟೆಗಳನ್ನು ವಶಪಡಿಸಿಕೊಳ್ಳಲು ತುಂಬ ಪ್ರಯತ್ನಿಸಿದ. ಅಲ್ಲಿನ ವಾತಾವರಣ, ಹವೆ ಅವನಿಗೆ ಮತ್ತು ಸೈನಿಕರಿಗೆ ಅನುಕೂಲಕರವಾಗಿರಲಿಲ್ಲ. ಅವನು ಮತ್ತು ಸೈನಿಕರು ರೋಗಗಳಿಗೆ ತುತ್ತಾದರು. ಅನೇಕರು ಸತ್ತುಹೋದರು. ಇದರಿಂದಾಗಿ ಅಲ್ಲಿಂದ ಮುಂದುವರಿಯುವ ಬಯಕೆಯನ್ನು ಹತ್ತಿಕ್ಕಿಕೊಂಡು ಹಿಂತಿರುಗುವ ತೀರ್ಮಾನ ಕೈಗೊಂಡು ಆಗ್ರಾದ ಕಡೆ ಪ್ರಯಾಣ ಬೆಳೆಸಿದ. ಆಗ್ರಾದಿಂದ ಆರು ಮೈಲಿ ದೂರದಲ್ಲಿ ಗಂಗಾ ನದಿಯ ತಟದಲ್ಲಿದ್ದ ಶೇರ್‌ಘಡದಲ್ಲಿ ತಂಗಿದರು. ಈ ನದಿಯಲ್ಲಿ ನೀರು ಕುಡಿದು ಆಯಾಸ ಪರಿಹಾರ ಮಾಡಿಕೊಳ್ಳುವ ಉದ್ದೇಶದಿಂದ ತಮ್ಮ ಡೇರೆಯನ್ನು ಹಾಕಿದ್ದರು. ಈ ನದಿಯು ದೊಡ್ಡದಾಗಿದ್ದು ಆಳವಾಗಿ ರಭಸದಿಂದ ತುಂಬಿ ಹರಿಯುತ್ತಿತ್ತು. ಈ ಸಮಯದಲ್ಲಿ ಶೇರ್ ಖಾನ್ ತನ್ನ ಸೈನ್ಯದೊಂದಿಗೆ ಯುದ್ಧ ಮಾಡುವ ಉದ್ದೇಶದಿಂದ ಅಲ್ಲಿಗೆ ಬರುತ್ತಿದ್ದಾನೆಂಬ ಸುದ್ದಿತಲಪಿತು. ಬಾದಶಾಹನಿಗೆ ಸುದ್ದಿ ತಲಪಿದಾಗ ಆ ಸುದ್ದಿಗೆ ಹೆಚ್ಚು ಮಹತ್ವ ನೀಡದೆ, ಆ ಸಾಮಾನ್ಯ ಮನುಷ್ಯ ನನ್ನಂತಹ ರುಸ್ತುಮನ ಎದರು ಸಾಟಿಯೇನು ಎಂದು ಕಿವಿಗೆ ಹಾಕಿಕೊಳ್ಳದೆ ತಿರಸ್ಕರಿಸಿದ.

ಬಾದಶಾಹ ಈ ಸುದ್ದಿಯನ್ನು ಅವಗಣಿಸಿ ಮಾಮೂಲಿಯಾಗಿ ಸ್ವೀಕರಿಸಿದ. ಮರುದಿನ ವೈರಿಯ ಸೈನ್ಯ ಹತ್ತಿರವಾಗಿದೆ ಎಂದು ತಿಳಿದುಬಂತು. ಆಗಲೂ ಕೂಡ ಬಾದಶಾಹ ಸ್ವಲ್ಪವೂ ವಿಚಲಿತನಾಗದೆ ತನ್ನ ಬೆಳಗ್ಗಿನ ಪ್ರಾತರ್ವಿಧಿಗಳನ್ನು ಪೂರೈಸಲು ಹೋದ. ಆ ಸಂದರ್ಭದಲ್ಲಿ ಬಾದಶಾಹ ಬಹಳಷ್ಟು ಅಫೀಮು ಸೇವಿಸುತ್ತಿದ್ದ. ಆಗಾಗ ಅವನಿಗೆ ಹೊಟ್ಟೆಯಲ್ಲಿ ತೊಂದರೆಯಿರುತ್ತಿತ್ತು. ಇದರಿಂದಾಗಿ ಬಹಿರ್ದೆಸೆಗೆ ಹೋದಲ್ಲಿ ಬಹಳ ಸಮಯ ಹಿಡಿಯುತ್ತಿತ್ತು. ಈ ಮಧ್ಯೆ ಶೇರ್ ಖಾನನ ದಂಡು ಬಹಳ ಹತ್ತಿರ ಬಂತು. ಅವನು ನೇರವಾಗಿ ಯುದ್ಧಕ್ಕೆ ತೊಡಗಿದ. ಆ ಸಮಯದಲ್ಲಿ ಹುಮಾಯೂನನ

ಸಹೋದರ ಅಸ್ಗರ್ ಮಿರ್ಜಾ ಕೂಡ ಅಲ್ಲೇ ಇದ್ದ. ಎರಡೂ ಕಡೆಯಲ್ಲಿ ಭಯಂಕರವಾದ ಯುದ್ಧ ಶುರುವಾಯಿತು. ರಣರಂಗದ ಗುಲ್ಲು ಶುರುವಾದಾಗ ಬಾದಶಾಹ ಹೊರಬಂದು 'ಇದು ಏನು ಗಲಾಟೆ?' ಎಂದು ಕೇಳಿದ. 'ಶೇರ್ ಖಾನ್ ಬಂದುಬಿಟ್ಟಿರುವುದು ನಿನಗೆ ತಿಳಿದಿಲ್ಲವೇ?' ಎಂದು ಆಶ್ಚರ್ಯಪಟ್ಟುಕೊಂಡು ಸಹೋದರ ಅಸ್ಗರ್ ಮಿರ್ಜಾ ಉತ್ತರವಾಗಿ ಮರುಪ್ರಶ್ನಿಸಿದ. ಹೊರಗೆ ಬಂದು ನೋಡುವಾಗ ಶೇರ್ ಖಾನ್ ಧ್ವಜವನ್ನು ಏರಿಸಿಕೊಂಡು ವೇಗವಾಗಿ ಗಂಗಾನದಿಯ ಆಚೆ ದಡದಲ್ಲಿ ಧಾವಿಸಿ ಬರುತ್ತಿರುವುದು ಕಂಡುಬಂತು. ಬಾದಶಾಹ ಕೂಡಲೇ ಸೈನ್ಯವನ್ನು ಹಿಡಿದುಕೊಂಡು ಕುದುರೆಯ ಮೇಲೆ ಸವಾರಿಯಾಗಿ ನದಿಗೆ ಇಳಿದ. ಸೈನ್ಯವೂ ಅವನನ್ನು ಹಿಂಬಾಲಿಸಿಕೊಂಡು ಆನೆ, ಕುದುರೆ ಸವಾರಿಗಳ ದಂಡಿನೊಂದಿಗೆ ನೀರಿಗೆ ಇಳಿಯಿತು. ಅವರಿಗೆ ನದಿಯ ಆಳ ಅಗಲಗಳ ಮಾಹಿತಿ ಇರಲಿಲ್ಲ. ನದಿ ಬಹಳ ಅಗಲವಾಗಿ ರಭಸದಿಂದ ಹರಿಯುತ್ತಿತ್ತು. ಆನೆ, ಕುದುರೆಗಳು ಇವನ್ನು ಎದುರಿಸಲಾರದೆ ಮುಳುಗಿ ಏಳತೊಡಗಿದವು. ಆಡುಗೆ ಕೆಲಸ ಮಾಡುವ ಸುಂಬುಲ್ ಎಂಬ ಹೆಸರಿನ ಗುಲಾಮ ಬಾದಶಾಹರು ನದಿಯಲ್ಲಿ ಮುಳುಗುತ್ತಿರುವುದು ಕಂಡು ತನ್ನ ಅಡುಗೆ ಕೆಲಸವನ್ನು ಹಾಗೆಯೇ ಬಿಟ್ಟು ನೀರಿಗೆ ಹಾರಿ ಈಜುತ್ತ ಹೋಗಿ ಬಾದಶಾಹ ಹುಮಾಯೂನನನ್ನು ಮುಳುಗುವುದರಿಂದ ಪಾರುಮಾಡಿದ. ಬಾದಶಾಹ ನೀರಿನಿಂದ ಹೊರಬಂದು ದಡದಲ್ಲಿ ಬಹಳ ಹೊತ್ತು ಕೂತು ತನ್ನ ಸೈನ್ಯದವರು ಮುಳುಗಿ ಸಾಯುವುದನ್ನು ಹತಾಶನಾಗಿ ನೋಡುತ್ತಿದ್ದ ಮತ್ತು ನಿಟ್ಟುಸಿರುಬಿಡುತ್ತಿದ್ದ.

ತನ್ನ ಅಳಿದುಳಿದ ಸಂಗಾತಿಗಳೊಂದಿಗೆ ಸಂಪೂರ್ಣ ಹತಾಶನಾಗಿ ಬಾದಶಾಹ ಆಗ್ರಾಕ್ಕೆ ಪ್ರಯಾಣಿಸಿದ. ಪ್ರಜೆಗಳಿಗೆ ಈ ಸುದ್ದಿ ತಲಪಿದಾಗ ಗಲಿಬಿಲಿಗೊಂಡು ಅತ್ತಿತ್ತ ಓಡಾಡತೊಡಗಿದರು. ಕೆಲವರು ತಮ್ಮ ಊರು ಬಿಟ್ಟು ಗುಳೆ ಎದ್ದು ಹೋದರು. ಸಂಗಾತಿಗಳೆಲ್ಲರೂ ತಮ್ಮ ಮನೆ ಸಾಮಾನುಗಳನ್ನು ಬಿಟ್ಟು ಬಾದಶಾಹನ ಹಿಂದೆ ಕಾಬೂಲಿಗೆ ಪ್ರಯಾಣ ಬೆಳೆಸಿದರು. ಅಳಿದುಳಿದ ಮೊಘಲರು ಒಬ್ಬರನ್ನೊಬ್ಬರು ದ್ವೇಷಿಸುತ್ತ ಕೊಲೆ, ಪಿತೂರಿಯಲ್ಲಿ ಮುಳುಗಿದರು. ಅತಿಸಾಮಾನ್ಯರು ಕೂಡ ಈ ಸನ್ನಿವೇಶದಲ್ಲಿ ಮೊಘಲರನ್ನು ಸಿಟ್ಟಿನಿಂದ ಕಣ್ಣು ಅಗಲವಾಗಿ ತೆರೆದು ದಿಟ್ಟಿಸಿ ನೋಡತೊಡಗಿದರು! ಹೆಚ್ಚುಕಮ್ಮಿ ನ ಭೂತೋ ನ ಭವಿಷ್ಯತಿ ಎನ್ನುವಂತೆ ಈ ರೀತಿ ಇಪ್ಪತ್ತು ಸಾವಿರ ಆನೆ, ಕುದುರೆಗಳ ಸವಾರ ಸೈನಿಕರು ಅಸುನೀಗಿದ್ದರು.

ಬಾದಶಾಹ ಹುಮಾಯೂನನ 'ಖಾನ್ ಖಾನಾನಿ' ಎಂಬ ಬಿರುದುಪಡೆದ ಸೇನಾಧಿಪತಿ ಬೈರಾಮ್ ಖಾನನ್ನು ಕೆಲವು ತೋಟದ ಕೆಲಸದ ಮಾಲಿಗಳು ಬಂಧಿಸಿದರು. ಅವರು ಇವನ ಬಟ್ಟೆಗಳನ್ನು ಕಳಚಿ ನಗ್ನನನ್ನಾಗಿಸಿ ಕೋಲುಗಳಲ್ಲಿ ಹೊಡೆಯುತ್ತಾ 'ಏ ಮೊಘಲ್ ಕತ್ತೆ, ಕುಣಿದಾಡು ಈಗ ನೋಡುವ' ಎಂದು ಹೇಳುತ್ತ ಕೂಗುತ್ತಾ

ಮತ್ತೆಮತ್ತೆ ಹೊಡೆದರು! ಈ ಘಟನೆಗಳೆಲ್ಲವೂ ಅಲ್ಲಾಹನ ಕಡೆಯಿಂದ ನೀಡಲಾದ ಶಾಪಗಳಾಗಿವೆ. ಅವರಿಂದ ಬೈರಾಮ್ ಖಾನ್ ಹೇಗೋ ತಪ್ಪಿಸಿಕೊಂಡು ಕಂದಹಾರಕ್ಕೆ ಹೋಗಿ ಅಲ್ಲೇ ನೆಲೆನಿಂತ. ಕೆಲಕಾಲದ ನಂತರ ಹುಮಾಯೂನನ ಆಹ್ವಾನದ ಮೇರೆಗೆ ಮತ್ತೆ ಹಿಂದುಸ್ಥಾನಕ್ಕೆ ಬಂದು ಮತ್ತೆ ಪದಗ್ರಹಣಮಾಡಿಕೊಂಡು ಹಳೆಯ ವೈಭವವನ್ನು ಮರುಪಡೆದ.

**ಶೇರ್ ಶಾ ಸೂರಿ ಹಿಂದುಸ್ಥಾನದಲ್ಲಿ ಆಳ್ವಿಕೆ ನಡೆಸಿದ ವಿವರಗಳು:**

ಹುಮಾಯೂನ್ ಅಲ್ಲಿಂದ ಪ್ರಯಾಣಿಸಿದ ನಂತರ ಶೇರ್ ಶಾಹ್ ಸೂರಿ ಗಂಗಾ ನದಿಯ ತೀರದಲ್ಲಿ ಸ್ವಲ್ಪದಿನ ನಿಂತು ನಾಲ್ಕೂ ದಿಕ್ಕಿನಲ್ಲಿ ಗೂಢಚಾರರನ್ನು ಕಳುಹಿಸಿ ಪರಿಸ್ಥಿತಿಯ ಬಗ್ಗೆ ತಿಳಿದುಕೊಳ್ಳಲು ಪ್ರಯತ್ನಿಸಿದ. ಹೆಚ್ಚಿನವರೆಲ್ಲ ಕಾಬೂಲಿಗೆ ಪ್ರಯಾಣಿಸಿದರೆಂದು ಗುಪ್ತಚಾರರು ವರ್ತಮಾನವನ್ನು ನೀಡಿದರು. ಶೇರ್ ಶಾಹ ತನ್ನ ಸರದಾರರ ಪೈಕಿ ಶಾಹಬುದ್ದೀನ್ ಎಂಬವನನ್ನು ನಾಲ್ಕು ಸಾವಿರ ಸೈನಿಕರೊಂದಿಗೆ ಆಗ್ರಾಕ್ಕೆ ಕಳುಹಿಸಿದ. ಅಲ್ಲಿ ನಡೆದ ಸಂಗತಿಗಳನ್ನು ಕಂಡು ಆದ ಅನಾಹುತ, ಅವಘಡಗಳಲ್ಲಿ ನಾಶಗೊಂಡದ್ದನ್ನು ಸರಿಪಡಿಸಿ, ಅಲ್ಲಿ ಪ್ರಜೆಗಳಿಗೆ ಧೈರ್ಯ ತುಂಬುವಂತೆ ಮಾಡಬೇಕೆಂಬುದು ಅವನ ಉದ್ದೇಶವಾಗಿತ್ತು. ಅವನು ಯಾವುದೇ ರೀತಿಯ ವಿರೋಧವಿಲ್ಲದೆ ಆಗ್ರಾ ಪ್ರವೇಶಿಸಿದ. ಅಲ್ಲಿ ಅವನು ನೋಡುವಾಗ ಇಡೀ ನಗರವು ನಿಶ್ಶಬ್ಧವಾಗಿ, ಜನರ ಓಡಾಟವಿಲ್ಲದೆ ಬಿಕೋ ಎನ್ನುತ್ತಿದ್ದಂತೆ ಕಂಡು ಬಂತು. ಅನೇಕ ಕಡೆ ಬಹಳಷ್ಟು ಕಟ್ಟಡಗಳ ಭಾಗಗಳು, ಮಾರುಕಟ್ಟೆ ನಾಶವಾಗಿತ್ತು. ಈ ಮಧ್ಯೆ ಒಂದು ದೊಡ್ಡ ಅಪಘಾತ ನಡೆಯಿತು. ಆಗ್ರಾದಲ್ಲಿ ವಾಸವಾಗಿದ್ದ ಹತ್ತು ಸಾವಿರ ವಿದೇಶಿ ವ್ಯಾಪಾರಿಗಳು ಮತ್ತು ಸೈನಿಕರನ್ನು ಮತ್ತು ಕುಟುಂಬದ ಜನರು, ಮಹಿಳೆಯರು, ಮಕ್ಕಳನ್ನು ಹಿಡಿದು ಬಂಧಿಸಿದರು. ಕೆಲವೇ ದಿನಗಳಲ್ಲಿ ಅವರನ್ನು ಸಾಮೂಹಿಕವಾಗಿ ಕೊಲೆಮಾಡಿದರು! ಇದರ ವಾರ್ತೆ ಶೇರ್ ಶಾಹ ಸೂರಿಗೆ ತಿಳಿದಾಗ ಅವನು ಕೂಡಲೇ ತನ್ನ ಸ್ವಾಮಿನಿಷ್ಠೆ, ಪ್ರಾಮಾಣಿಕ, ಧರ್ಮನಿಷ್ಠ ಸರದಾರ ಖವಾಸ್ ಖಾನನನ್ನು ಐದುಸಾವಿರ ಸೈನಿಕರೊಂದಿಗೆ ಮೊದಲು ಕಳುಹಿಸಿದ ಸರದಾರ ಶಹಾಬುದ್ದೀನನನ್ನು ಹಿಡಿದು ತರಲು ಕಳುಹಿಸಿದ. ಈ ಕೃತ್ಯವನ್ನು ಮಾಡಿದ ಈ ಸರದಾರನ ಬೆನ್ನು ಹತ್ತಿ ಆಗ್ರಾದಲ್ಲಿ ಬಂಧಿಸುವಲ್ಲಿ ಖವಾಸ್ ಖಾನ್ ಯಶಸ್ವಿಯಾದ. ಶೇರ್ ಶಾಹ ಸೂರಿಯ ಆಜ್ಞೆಯಂತೆ ಅವನನ್ನು ಬಹಿರಂಗವಾಗಿ ಸಾರ್ವಜನಿಕರ ಮುಂದೆ ಶಿರಚ್ಛೇದ ಮಾಡಿಸಿದ. ಇದರಿಂದ ಇಂತಹ ಅಮಾನವೀಯ ಘಟನೆ ಮುಂದೆಂದೂ ನಡೆಯ ಕೂಡದು ಎಂಬುದು ಅವನ ಉದ್ದೇಶವಾಗಿತ್ತು. ಮೊಘಲರ ಕುಟುಂಬದವರು, ಮಕ್ಕಳು ಮರಿಗಳು ಸೆರೆಯಾದವರನ್ನು ಬಿಡುಗಡೆ ಮಾಡಿದ. ಅವರ ಲೂಟಿಯಾದ ಮನೆ ಮಠಗಳನ್ನು ಸಾಮಾನುಗಳನ್ನು ಅವರಿಗೆ ಹಿಂತಿರುಗಿಸಿ ಧನಸಹಾಯ ಮಾಡಿ ಅವರಿಗೆ ಧೈರ್ಯ

ತುಂಬಿದ. ಭಯದಿಂದ ಹೊರಗೆ ಬರಲು ಸಾಧ್ಯವಾಗದೆ ಅಡಗಿದ್ದ ಪ್ರಜೆಗಳು ಸ್ವತಂತ್ರರಾಗಿ ಹೊರಗೆ ಬಂದು ಎಂದಿನಂತೆ ಅಲ್ಲಿ ಇಲ್ಲಿ ನಡೆದಾಡತೊಡಗಿದರು. ಅಲ್ಲಿನ ಎಲ್ಲ ವ್ಯವಸ್ಥೆ ಸರಿಯಾದ ನಂತರ ಶೇರ್ ಶಾಹ ರಾಜಧಾನಿಗೆ ತೆರಳಿ ತನ್ನ ಆಳ್ವಿಕೆಯನ್ನು ನ್ಯಾಯಯುತವಾಗಿ, ಘನತೆ ಗಾಂಭೀರ್ಯದೊಂದಿಗೆ ನಡೆಸಿದ. ಆಡಳಿತದ ಚಿಕ್ಕ ದೊಡ್ಡ ಕಾರ್ಯಗಳನ್ನು ಸ್ವತಃ ನಿಗಾವಹಿಸಿ ನೆರವೇರಿಸಿದ. ಪ್ರತಿಯೊಬ್ಬರಿಗೂ ತಮ್ಮ ಅಹವಾಲುಗಳು, ಬೇಡಿಕೆಗಳನ್ನು ಮುಂದಿಡಲು ಯಾವುದೇ ತಡೆಯಿಲ್ಲದೆ ಆಸ್ಥಾನದಲ್ಲಿ ಪ್ರವೇಶಿಸಿಸಲು ಸಂಪೂರ್ಣವಾದ ಸ್ವಾತಂತ್ರ್ಯವನ್ನು ನೀಡಿದ್ದ. ನೌಕರರು, ಮಜೂರರಿಗೆ ಒಳ್ಳೆಯ ಸಂಬಳವನ್ನು ನಿಗದಿಪಡಿಸಿದ್ದ.

ನಗರದ ಕಾವಲು ವ್ಯವಸ್ಥೆಯನ್ನು ಶಿಸ್ತುಬದ್ಧಗೊಳಿಸಿದ್ದ. ರಾತ್ರಿ ಗಸ್ತು ತಿರುಗುವ ಸಿಪಾಯಿಗಳನ್ನು 'ಚಾಬುಕ್' ಎಂದು ಕರೆಯುತ್ತಿದ್ದರು. ಇವರ ಕೈಯಲ್ಲಿ ಬಿಲ್ಲು ಬಾಣಗಳು ಇರುತ್ತಿದ್ದವು. ಒಂದೊಂದು ಗಸ್ತಿನ ಗಡಿಯಲ್ಲಿ ತಮ್ಮ ಬಾಣವನ್ನು ಎಸೆದು ಗುರುತು ಮಾಡಿಕೊಳ್ಳುತ್ತಿದ್ದರು. ಹೀಗೆ ಬಾಣ ಎಸೆಯುವಾಗ ಹಾದಿಯಲ್ಲಿ ನಡೆದಾಡುವ ಜನಸಾಮಾನ್ಯರಿಗೆ ತಾಗದಂತೆ ಜಾಗರೂಕರಾಗಿರಬೇಕೆಂಬ ಕಟ್ಟುನಿಟ್ಟಿನ ಆದೇಶವನ್ನು ಪಾಲಿಸಬೇಕಾಗಿತ್ತು. ಈ ಗಸ್ತಿನ ಸಿಪಾಯಿಗಳ ಕೆಲಸದ ಬಗ್ಗೆ ನಿಗಾವಹಿಸಲು ಇನ್ನೊಂದು ಸಿಪಾಯಿಗಳ ದಂಡು ಪರಿಶೀಲನೆಗಾಗಿ ಬರುತ್ತಿತ್ತು. ಅರ್ಧ ಮೈಲಿಗಳ ಅಂತರದಲ್ಲಿ ಒಂದೊಂದು ಪ್ರವಾಸಿ ಮಂದಿರಗಳನ್ನು ಸ್ಥಾಪಿಸಿದ್ದ. ಪ್ರವಾಸಿಗರು ಬಂದವರು ಅಲ್ಲಿ ಆರಾಮವಾಗಿರಲು ಅವಕಾಶಮಾಡಿ ಕೊಟ್ಟಿದ್ದ. ಅಂಗಡಿ ಮುಂಗಟ್ಟುಗಳನ್ನು ಸ್ಥಾಪಿಸಿದ್ದ. ಪ್ರತೀ ಒಂದು ಮೈಲಿಗೆ ಒಂದರಂತೆ ರಕ್ಷಕರ ಕೇಂದ್ರವನ್ನು ಮಾಡಿಸಿದ್ದರಿಂದ ದರೋಡೆಕೋರರು, ಕಳ್ಳರನ್ನು ಹತೋಟಿಯಲ್ಲಿಡಲು ಸಾಧ್ಯವಾಗುವಂತೆ ಮಾಡಿದ್ದ. ಅವನ ಬಳಿ ಅಸಂಖ್ಯಾತ ಸೇನೆಯಿದ್ದು, ಈ ಸೇನೆಯೊಂದಿಗೆ ಎಲ್ಲೆಲ್ಲ ದಾಳಿನಡೆಸುತ್ತಾನೋ ಅಲ್ಲೆಲ್ಲ ಜಯಗಳಿಸುತ್ತಿದ್ದ. ಈ ಸೇನೆಯನ್ನು ತನ್ನ ಸಾಮ್ರಾಜ್ಯದ ಗಡಿಯಲ್ಲಿ ನಿಲ್ಲಿಸಿದ್ದ. ಇವನ ಸಾಮ್ರಾಜ್ಯ ಬಂಗಾಳದಿಂದ ಕಾಬೂಲಿನ ತನಕ ಹರಡಿತ್ತು. ಪ್ರತಿಯೊಂದು ಕಡೆಯಲ್ಲಿ ಅವನ ಸರದಾರರು ಮತ್ತು ಗವರ್ನರರು ಇದ್ದರು. ಅವನ ಆಡಳಿತ ವ್ಯವಸ್ಥೆಯು ಎಲ್ಲ ಬಾದಶಾಹರಿಗಿಂತ ಭಿನ್ನವಾದ ರೀತಿಯಲ್ಲಿತ್ತು.

ಬಾದಶಾಹನ ಆಜ್ಞೆಗಳನ್ನು ಪ್ರಜೆಗಳು ಬಹಳ ಗೌರವದಿಂದ ಪಾಲಿಸುತ್ತಿದ್ದರು. ಯಾರಾದರೂ ವಿರೋಧ ಮಾಡಿದರೆ ಒಂದು ಸವಾರಿಯನ್ನು ಕಳುಹಿಸಿ ಅವನನ್ನು ಬಾದಶಾಹನ ಬಳಿಗೆ ಕರೆಸಲಾಗುತ್ತಿತ್ತು. ಅವನು ತನ್ನ ತಪ್ಪನ್ನು ಒಪ್ಪಿಕೊಂಡಲ್ಲಿ ಎಚ್ಚರಿಕೆಯನ್ನು ನೀಡಿ ಬಿಟ್ಟುಬಿಡುತ್ತಿದ್ದರು. ಹೀಗೆ ಈ ಬಾದಶಾಹ ಏಳು ವರ್ಷಗಳ ಕಾಲ ತುಂಬ ವ್ಯವಸ್ಥಿತವಾಗಿ ಆಡಳಿತವನ್ನು ನಡೆಸಿದ. ಪ್ರಜೆಗಳು ಸುಖಸಂತೋಷದಿಂದ ಬಾಳಿದರು. ಇವನ ಕಾಲದಲ್ಲಿ ರೋಮ್, ಈಜಿಪ್ಟ್, ಇರಾನ್‌ನಿಂದ ವ್ಯಾಪಾರಿಗಳು

ಇಲ್ಲಿಗೆ ವ್ಯಾಪಾರಕ್ಕಾಗಿ ಬರುತ್ತಿದ್ದರು. ಇವನ ಸಾಮ್ರಾಜ್ಯದಲ್ಲಿ ಯಾವ ಪ್ರಜೆಯೂ ಕೂಡ ದೇಶೀ ವಿದೇಶಿ ಎಂಬ ಬೇಧಭಾವ ಮಾಡುತ್ತಿರಲಿಲ್ಲ. ಈ ರೀತಿ ಅಲ್ಲಾಹನು ಭೂಲೋಕದಲ್ಲಿ ನ್ಯಾಯಪರಿಪಾಲನೆಗಾಗಿ ಈತನನ್ನು ಬಾದಶಾಹನನ್ನಾಗಿ ಮಾಡಿಕಳುಹಿಸಿದ್ದಾನೆಂದು ನಮಗೆ ಅನಿಸುತ್ತಿತ್ತು.

**ಶೇರ್ ಶಾಹ್ ಸೂರಿಯ ಮರಣ ಮತ್ತು ಅವನ ಮಗ ಸಲೀಮ್ ಶಾಹ ಪಟ್ಟವೇರಿದ ವಿವರಗಳು:**

ಶೇರ್ ಶಾಹ್ ಹೆಚ್ಚಿನ ಸಮಯವನ್ನು ರೊಹತಾಝ್ ಕೋಟೆಯ ಹತ್ತಿರದ ಸೆಹಸರಾಮ್ ಗ್ರಾಮದಲ್ಲಿ ಇರುತ್ತಿದ್ದ. ಯಾಕೆಂದರೆ ಅವನ ತಂದೆಯ ಗೋರಿ ಅಲ್ಲೇ ಇತ್ತು. ಒಂದು ಬೃಹತ್ ಗಾತ್ರದ ತೋಪನ್ನು ತಯಾರಿಸಿ ಅಲ್ಲಿ ನಿಲ್ಲಿಸಿದ್ದ. ಈ ತೋಪು ಅವನಿಗೆ ಬಹಳ ಇಷ್ಟವಾದದ್ದಾಗಿತ್ತು. ಒಂದು ದಿನ ಆ ತೋಪನ್ನು ಪರಿಶೀಲಿಸುವ ಸಲುವಾಗಿ ಗುಂಡುಗಳನ್ನು ತುಂಬಿ ಹಾರಿಸುವುದಕ್ಕೆ ಯೋಚಿಸಿದ್ದ. ಆದರೆ ಒಂದು ಪರಾಮೋಸದಿಂದಾಗಿ ಅದರಲ್ಲಿ ಮೊದಲೇ ಕೆಲವು ಹತ್ತಿಬಟ್ಟೆಯ ತುಂಡುಗಳು ತುಂಬಿದ್ದು, ಬಿಸಿಲಿನ ಝಳಕ್ಕೆ ಗುಂಡು ಬಿಸಿಯೇರಿ ಬೆಂಕಿಯ ಕಿಡಿಗಳು ಉಂಟಾಗಿ ತೋಪು ಅಚಾನಕ್ಕಾಗಿ ಸಿಡಿಯಿತು. ತೋಪಿನ ಬಳಿಯಿದ್ದ ಜನರು ಮತ್ತು ಬಾದಶಾಹರು ಎಲ್ಲರೂ ಸಿಡಿದು ದೇಹಗಳು ಚೂರುಚೂರಾಗಿ ಮಾಂಸದ ತುಂಡುಗಳು ಚೆಲ್ಲಾಪಿಲ್ಲಿಯಾಗಿ ಹಾರಿದವು. ಯಾರಿಗೂ ಇದು ಯಾರ ದೇಹದ ಚೂರುಗಳು ಎಂದು ಗುರುತಿಸಲಾರದಷ್ಟು ರೀತಿಯಲ್ಲಿ ಹರಡಿದ್ದವು. ಬಹಳಷ್ಟು ಹೊತ್ತು ಹುಡುಕಿದ ನಂತರ ಶೇರ್ ಶಾಹನ ಕಾಲು ಒಂದು ಮರದ ಮೇಲೆ ನೇತಾಡುವುದು ಕಂಡಿತು. ಅವನು ಧರಿಸಿದ ಕಾಲುಚೀಲದ ಮೂಲಕ ಜನರು ಶವವನ್ನು ಗುರುತಿಸಿದರು. ಉಳಿದ ದೇಹದ ತುಂಡುಗಳನ್ನು ಒಟ್ಟುಮಾಡಿ ಅವನ ತಂದೆಯ ಗೋರಿಯ ಪಕ್ಕದಲ್ಲಿ ದಫನಮಾಡಲಾಯಿತು. ಹಿಜರಿ ವರ್ಷ ಸನ್ ೯೩೯ರಲ್ಲಿ ನಾನು ಅಲ್ಲಿಗೆ ಹೋಗಿದ್ದೆ. ಅಲ್ಲಿ ಒಂದು ಸುಂದರವಾದ ಕೊಳವಿತ್ತು. ಮಧ್ಯದಲ್ಲಿ ಕಾರಂಜಿ ಇದ್ದು, ಸುತ್ತಲೂ ಒಂದು ಹೂದೋಟವಿತ್ತು. ಬಳಿಯಲ್ಲಿ ತಂದೆ ಮತ್ತು ಮಗನ ಗೋರಿ ಇದ್ದು ಅದರ ಮೇಲೆ ಗುಂಬಜ್ ಕಟ್ಟಲಾಗಿತ್ತು.

ಶೇರ್ ಶಾಹನ ಮರಣಾ ನಂತರ ಅವನ ಮಗ ಸಲೀಮ್ ಶಾಹ ಪಟ್ಟವನ್ನೇರಿದ. ಸಫಲವಾಗಿ ರಾಜ್ಯಾಡಳಿತ ನಡೆಸಿದ. ಇವನ ಸಹೋದರನೊಂದಿಗೆ ಪಟ್ಟದ ಅಧಿಕಾರದ ಸಂಬಂಧದಲ್ಲಿ ವಾಗ್ವಾದ ನಡೆದು, ಯುದ್ಧ ಕೂಡ ನಡೆಯಿತು. ಆದರೆ ಸಲೀಮ್ ಶಾಹ, ಖವಾಸ್ ಖಾನನನ್ನು ಮಧ್ಯವರ್ತಿಯನ್ನಾಗಿ ಮಾಡಿ ರಾಜ್ಯವನ್ನು ಇಬ್ಭಾಗವನ್ನಾಗಿ ಮಾಡಿ ಅವನ ಸಲಹೆಯಂತೆ ಒಂದು ಸಂಧಾನವನ್ನು ಮಾಡಿಕೊಂಡ. ಸಲೀಮ್ ಶಾಹ ಅವರನ್ನು ತುಂಬ ಗೌರವದಿಂದ ನೋಡಿಕೊಳ್ಳುತ್ತಿದ್ದ. ಆದರೆ ಸಲೀಮ್ ಶಾಹ

ಅವನ ಒಬ್ಬ ಸಹೋದರನನ್ನು ಸಂಧಾನದ ಸಭೆಯಿಂದ ಕಿತ್ತುಹಾಕಿದ. ಇದರಿಂದ ಖವಾಸ್ ಖಾನ್ ಮತ್ತು ಅವನ ಬೆಂಬಲಿಗೆ ಅಸಮಾಧಾನವಾಯಿತು. ಇವರೆಲ್ಲ ಸೇರಿ ಸಲೀಮ್ ಶಾಹನನ್ನು ವಿರೋಧಿಸತೊಡಗಿದರು. ಖವಾಸ್ ಖಾನ್ ತನ್ನ ಬೆಂಬಲಿಗರಲ್ಲಿ ಮುಖ್ಯರಾದ ಸರದಾರರನ್ನು ಕರೆಸಿ ಸಮಾಧಾನಪಡಿಸಿ ಈ ಘಟನೆಯನ್ನು ತಣ್ಣಗಾಗಿಸಿದ.

ಖವಾಸ್ ಖಾನನಿಗೆ ಬಾದಶಾಹನಿಂದ 'ಸನದೇ ಆಲಿ' ಎಂಬ ಬಿರುದು ದೊರೆತಿತ್ತು. ಖವಾಸ್ ಖಾನನ ಮರಣಾ ನಂತರದಲ್ಲಿ ಮಾಡಿದ ಗೋರಿಯು ದೆಹಲಿಯ ಬಜಾರಿನ ಮಧ್ಯೆ ಇದೆ. ಬಹಳಷ್ಟು ಜನ ಇವನನ್ನು ವಲಿ (ಸಂತ) ಮತ್ತು ಪವಾಡ ಪುರುಷನೆಂದು ಪರಿಗಣಿಸಿದ್ದರು. ಇದರ ಪ್ರಕಾರ ಇವನ ಗೋರಿಯ ಬಳಿ ಬಂದು ಜನರು ಫಾತಿಹಾ ಓದಿ, ಹರಕೆ ಕಾಣಿಕೆಗಳನ್ನು ಒಪ್ಪಿಸುತ್ತಿದ್ದರು. ಪ್ರತೀ ದಿನ ಹೆಚ್ಚು ಕಮ್ಮಿ ಇಲ್ಲಿ ಇಪ್ಪತ್ತು ಮಣ ಧಾನ್ಯದ ಅನ್ನ, ರೊಟ್ಟಿ ತಯಾರಾಗುವ ಲಂಗರು ಅಡುಗೆ ತಯಾರಾಗುತ್ತಿತ್ತು. ಇದಕ್ಕೆ ಹಿಂದುಸ್ಥಾನದವರು 'ಮಾಲಿದಾ'(ಪ್ರಸಾದ) ಎಂದು ಕರೆದು ಸ್ವೀಕರಿಸುತ್ತಿದ್ದರು. ಫಕೀರರಿಗೆ ನಾನ್, ರೋಟಿ ಹಾಗೂ ಗಂಜಿಯನ್ನು ದಿನವೂ ವಿತರಿಸಲಾಗುತ್ತಿತ್ತು.

ಖವಾಸ್ ಖಾನ್ ನಿಷ್ಠಾವಂತ, ನೀತಿವಂತ ಮತ್ತು ದೇವರನ್ನು ಸ್ತುತಿಸುತ್ತಿದ್ದ ಮನುಷ್ಯನಾಗಿದ್ದ. ತನ್ನ ಮನೆಯಲ್ಲಿ ದಿನವೂ ಊಟಹಾಕಿ ತಾನೇ ಸ್ವತಃ ಬಡಿಸಿ ಅತಿಥಿಗಳಿಗೆ ಸತ್ಕಾರ ಮಾಡುತ್ತಿದ್ದ. ದಿನವೂ ನಾನ್ ರೊಟ್ಟಿ, ಹಲ್ವ ಸಮೋಸಾ ತಯಾರಿಸಿ ಮನೆಗೆ ಬಂದ ಅತಿಥಿಗಳು ಫಕೀರರಿಗೆ ಹಂಚುತ್ತಿದ್ದ. ಮಸೀದಿಗಳಲ್ಲಿ ಆಗಾಗ ಬಂದು ಹೋಗುವ ಪ್ರವಾಸಿಗರು, ಫಕೀರರಿಗೆ ಕೂಡ ಕೊಂಡು ಹೋಗಿ ಆಹಾರವನ್ನು ನೀಡುತ್ತಿದ್ದ.

ಸಲೀಮ್ ಶಾಹ ತನ್ನ ಆಸ್ಥಾನದಿಂದ ಖವಾಸ್ ಖಾನನನ್ನು ಹೊರಗೆ ಹಾಕಿದ. ಸಲೀಮ್ ಶಾಹನ ಆಳ್ವಿಕೆ ಏಳು ವರ್ಷಗಳು ನಡೆಯಿತು. ರಾಜ್ಯದಲ್ಲಿ ಎಲ್ಲೆಡೆಗಳಲ್ಲಿ ಗಲಭೆ ದೊಂಬಿಗಳು ಉಂಟಾಗಿ ಬೇರೆ ಬೇರೆಯಾಗಿ ರಾಜ್ಯ ವಿಂಗಡಿಸಲ್ಪಟ್ಟಿತು. ಲಾಹೋರ್ ಮತ್ತು ಆಸುಪಾಸಿನ ಇಲಾಖೆಯು ಸಿಕಂದರನ ಕೈಸೇರಿತು. ನಾಗೋರ್ ಮತ್ತು ನಾರ್‌ನೋಲ್ ಪ್ರಾಂತ್ಯ ಹುಮಾಯೂನನ ವಶವಾಯಿತು. ಅವನು ಶೇರ್ ಶಾಹನ ಖಜಾನೆಯ ಕೋತ್ವಾಲನಾಗಿ ನೇಮಕಗೊಂಡ. ಕೆಲವು ಸರದಾರರು ನವಾಬರು ಹಿಂದ್ವಾನ್(ಹಿಂಡೋಲ್) ಪ್ರಾಂತ್ಯವನ್ನು ವಶಪಡಿಸಿಕೊಂಡರು. ಆಗ್ರಾ ಮತ್ತು ದೆಹಲಿಯನ್ನು ಶಾಹಬುದ್ದೀನ್ ಕೈವಶಮಾಡಿಕೊಂಡ. ಜಲಾಲ್ ಶಾಹ ವರ್ಜನಾಪುರವನ್ನು ಹಿಡಿದುಕೊಂಡ. ಹೀಗೆ ಎಲ್ಲ ಬಾದಶಾಹರು ತಮ್ಮತಮ್ಮ ರಾಜ್ಯವನ್ನು ಕಟ್ಟಿಕೊಂಡರು. ಇವರೆಲ್ಲರೂ ಸೇರಿ ಸಲೀಮ್ ಶಾಹನನ್ನು ಕೊಂದು, ಅವನ ನಾಣ್ಯ

ಮತ್ತು ಮೊಹರನ್ನು ತಮ್ಮ ಹೆಸರಿಗೆ ಮಾಡಿಕೊಂಡರು. ಮತ್ತೆ ಇವರೊಳಗೆ ಯುದ್ಧವಾಯಿತು. ಕೆಲವು ರಾಜ್ಯಗಳು ಸಂಪೂರ್ಣ ನಾಶವಾದವು. ಕೆಲವರು ತಮ್ಮೊಳಗೆ ಸಂಧಾನ ಮಾಡಿಕೊಂಡು ಸುಗಮವಾಗಿ ರಾಜ್ಯಭಾರವನ್ನು ನಡೆಸಿದರು.

**ಹುಮಾಯೂನ್ ಬಾದಶಾಹ ತನ್ನ ರಾಜ್ಯದ ಪರಿಸ್ಥಿತಿಯ ಬಗ್ಗೆ ಆತಂಕಪಟ್ಟುಕೊಂಡು ಇರಾನಿನ ಬಾದಶಾಹ ತಹಮಾಸ್ಪ್ ಬಿನ್ ಷಾ ಇಸ್ಮಾಯಿಲನಿಂದ ನೆರವು ಪಡೆದ ವಿವರಗಳು:**

ಹುಮಾಯೂನ್ ಬಾದಶಾಹ ಕಾಬೂಲಿಗೆ ತಲಪಿದಾಗ ಅವನಿಗೆ ತನ್ನ ಕಳೆದ ಹಳೆಯ ವೈಭವವನ್ನು ನೆನೆದುಕೊಂಡು ದುಃಖಿಸಿದ. ಅವನು ದೆಹಲಿಯಲ್ಲೇ ನಿಂತಿದ್ದರೆ ಅವನ ಸಾಮ್ರಾಜ್ಯ ಶೇರ್ ಖಾನ್ ಸೂರಿಯ ವಶವಾಗುತ್ತಿರಲಿಲ್ಲ. ನಾನು ಸ್ವಲ್ಪ ಯೋಚಿಸುತ್ತಿದ್ದರೆ, ಸರಿಯಾದ ನಿಟ್ಟಿನಲ್ಲಿ ಕ್ರಮ ಕೈಗೊಂಡಿದ್ದರೆ ಇಂತಹ ದಿನಗಳನ್ನು ಎದುರಿಸುವ ಪರಿಸ್ಥಿತಿ ಬಂದೊದಗುತ್ತಿರಲಿಲ್ಲವೆಂದು ಅವನಿಗೆ ಅನಿಸುತ್ತಿತ್ತು.

ಹುಮಾಯೂನ್ ಕೆಲವು ದಿನಗಳ ಕಾಲ ಇರಾನ್ ದೇಶದ ಯಾತ್ರೆಯಲ್ಲಿದ್ದು ಖೊರಾಸಾನಿನಲ್ಲಿ ಒಂದು ದೊಡ್ಡ ಸೈನ್ಯವನ್ನು ಕಟ್ಟಿಕೊಂಡು ಕಾಬೂಲಿಗೆ ಹಿಂತಿರುಗಿದ. ಇಲ್ಲಿ ತನ್ನ ಭಾಗ್ಯದಲ್ಲಿ ಏನು ಬರೆದಿದೆಯೋ ಎಂಬುದನ್ನು ಪರಿಶೀಲಿಸಲು ಬಯಸಿದ್ದ. ಇದರಿಂದಾಗಿ ಕಾಬೂಲಿನಲ್ಲಿ ತಂಗಿದ. ಶೇರ್ ಶಾಹ್ ಸೂರಿಯ ಮರಣ ಮತ್ತು ಸಲೀಮ್ ಶಾಹ ಬಾದಶಾಹ ಪಟ್ಟಕ್ಕೆ ಬಂದು ಅವನ ಅಧಿಕಾರಿಗಳು ಬಂಡಾಯವೆದ್ದ ಸುದ್ದಿಗಳು ತಲಪಿದಾಗ ಅವನ ಆಸೆ ಕುದುರಿತು. ಇದೇ ಸೂಕ್ತ ಸಮಯವೆಂದು ತಿಳಿದು ಅವನು ಶಾಹ ತಹಮಾಸ್ಫನ ಬಳಿ ಹೋಗಿ ಸಹಾಯ ಕೇಳುವುದಕ್ಕೆ ತೀರ್ಮಾನಿಸಿದ. ಈ ಉದ್ದೇಶದಿಂದ ಹುಮಾಯೂನ ಇರಾನಿಗೆ ಪ್ರಯಾಣಿಸಿದ್ದ. ಹಾದಿಯಲ್ಲಿ ಇರಾನಿನ ಹೇರಾತ್ ಪಟ್ಟಣಕ್ಕೆ ತಲಪಿದಾಗ ಅವನು ಮುಹಮ್ಮದ್ ಖಾನ್ ಶರ್ಫುದ್ದೀನ್ ಖೊರಾಸಾನಿನ ಮಂತ್ರಿಯಾಗಿದ್ದ. ಹೆಚ್ಚುಕಮ್ಮಿ ಅವನ ಬಳಿ ೨೦ ಸಾವಿರ ಕಾಲಾಳುಗಳ ಸ್ವಂತ ಸೈನ್ಯವಿತ್ತು. ೮ ಸಾವಿರ ಗುಲಾಮರ ಬಿಲ್ಲುಬಾಣದಲ್ಲಿ ಪರಿಣಿತರ ಸೈನ್ಯವಿದ್ದು ಬಲಶಾಲಿಯಾದ ಆಡಳಿತವನ್ನು ನಡೆಸುತ್ತಿದ್ದ. ಇವನು ಹುಮಾಯೂನ್ ಬಾದಶಾಹನನ್ನು ರಾಜಯೋಗ್ಯವಾದ ಆತಿಥ್ಯವನ್ನು ನೀಡಿ ಸ್ವಾಗತಿಸಿದ. ಅವನ ಗೌರವಾರ್ಥ ಒಂದು ದೊಡ್ಡ ಸ್ವಾಗತ ಸಮಾರಂಭವನ್ನು ಏರ್ಪಡಿಸಿದ. ಇದರ ವೈಭವವನ್ನು ಕಂಡು ಬಾದಶಾಹ ಹುಮಾಯೂನ ಮಂತ್ರಮುಗ್ಧನಾದ. ತನ್ನ ಬಗ್ಗೆ ತಾನೆಷ್ಟು ಬಲಹೀನನೆಂಬುದು ಕಂಡುಕೊಂಡು ತಾನೇ ಜಿಗುಪ್ಸೆಪಟ್ಟುಕೊಂಡ. ತಾನು ಇವರ ಬುದ್ಧಿವಂತಿಕೆಯ ಮುಂದೆ ತುಂಬ ಚಿಕ್ಕವನು ಎಂದು ತನ್ನ ಮನದಲ್ಲಿ ಯೋಚಿಸುತ್ತ ಇವರನ್ನು ಖಂಡಿತವಾಗಿಯೂ ಜಯಿಸಲು ಸಾಧ್ಯವಿಲ್ಲ ಎಂಬ ತೀರ್ಮಾನಕ್ಕೆ ಬಂದಿದ್ದ. ನಮ್ಮ ಸರಹದ್ದಿನಿಂದ ತಬ್ರೇಜ್ ತನಕ ಪ್ರತಿಯೊಂದು ಹಂತದಲ್ಲೂ ಇವರ ಸಹಾಯ ಮಾಡಬೇಕೆಂದು ಹುಮಾಯೂನನ ಪರವಾಗಿ

ಬಾದಶಾಹ ತನ್ನ ಸರದಾರರಿಗೆ ಆಜ್ಞೆ ನೀಡಿದ. ಇವನನ್ನು ಸಂರಕ್ಷಣೆ ಮಾಡಿ ಗೌರವದಿಂದ ನೋಡಿಕೊಳ್ಳಿರೆಂದು ಫರ್ಮಾನು ನೀಡಿದ. ತಬ್ರೇಜಿಗೆ ತಲಪಿದಾಗ ಅಲ್ಲಿನ ಮಂತ್ರಿ ಇಬ್ರಾಹಿಂ ಖಾನ್ ತನ್ನ ದೊಡ್ಡ ಸರದಾರ ಕಜಲ್ ಬೇಗ್‌ನನ್ನು ರಕ್ಷಣೆ ಮತ್ತು ಸ್ವಾಗತಕ್ಕಾಗಿ ಕಳುಹಿಸಿದ. ಇವನು ಒಂದು ಸಾವಿರ ಕುದುರೆ ಮತ್ತು ೫೦೦ ಹಿಂದುಸ್ಥಾನದ ತಳಿಯ ಒಂಟೆಗಳನ್ನು ನೀಡಿ ಗೌರವದ ಸ್ವಾಗತ ನೀಡಿದ. ಷಾ ತಹಮಾಸ್ಫನನ್ನು ಭೇಟಿ ಮಾಡುವ ಒಂದು ದಿನ ಮುಂಚೆ ಇಬ್ರಾಹಿಂ ಖಾನ್ ಹುಮಾಯೂನನ ಗೌರವಾರ್ಥ ಔತಣಕೂಟವನ್ನು ಏರ್ಪಡಿಸಿದ್ದ. ಈ ಸುದ್ದಿ ತಿಳಿದು ಷಾ ತಹಮಾಸ್ಫ ಬಹಳ ಸಂತಸಪಟ್ಟುಕೊಂಡಿದ್ದ.

ಮರುದಿನ ಇಬ್ರಾಹಿಂ ಖಾನನ ಜೊತೆಯಲ್ಲಿ ಚಕ್ರವರ್ತಿ ಷಾ ತಹಮಾಸ್ಫನನ್ನು ಒಂದು ನದಿಯ ದಡದಲ್ಲಿ ಒಂದು ಹಸಿರು ಹುಲ್ಲಿನ ದೊಡ್ಡ ಸುಂದರ ಮೈದಾನದಲ್ಲಿ ನಾಲ್ಕೂ ದಿಕ್ಕಿನಲ್ಲಿ ಬಣ್ಣಬಣ್ಣದ ಜಮಖಾನಗಳನ್ನು ಹಾಸಿ ಸುಂದರ ಡೇರೆಗಳನ್ನು ಹಾಕಿ ನಾಲ್ಕು ಸುತ್ತಲೂ ಬಣ್ಣಬಣ್ಣಗಳ ಸಿಲ್ಕ್ ಬಟ್ಟೆಗಳ ಪರದೆಗಳು, ನಯವಾದ ಅಮೂಲ್ಯ ಬೆಲೆಯ ನೆಲಹಾಸುಗಳನ್ನು ಹಾಸಿದ್ದರು. ಅಲ್ಲಲ್ಲಿ ಶರಬತ್, ಶರಾಬಿನ ಅಡ್ಡೆಗಳು, ಅಡುಗೆ ಮನೆಗಳು ಇದ್ದವು. ಅಲ್ಲಲ್ಲಿ ಮಹಿಳೆಯರ ಕೋಣೆಗಳು ಇದ್ದು ನೌಕರ ಮಹಿಳೆಯರು ಇರಲು ವ್ಯವಸ್ಥೆ ಮಾಡಿದ್ದರು. ಇನ್ನೊಂದು ಕಡೆಯಲ್ಲಿ ಆತಿಥ್ಯ ಕೋಣೆಗಳಲ್ಲಿ ತುರ್ಕಿ, ಹಬ್ಸಿ, ಗುಜರಾತಿ ಗುಲಾಮರು ಸುಂದರ ಬಟ್ಟೆಗಳನ್ನು ತೊಟ್ಟು ಶಿಸ್ತಿನಿಂದ ಅಲ್ಲಲ್ಲಿ ನಿಂತಿದ್ದರು. ಇನ್ನೊಂದೆಡೆ ದಿವಾನ್ ಖಾನ, ಬಾದಶಾಹರ ಆಸ್ಥಾನಕ್ಕಾಗಿ ಏರ್ಪಾಡು ಮಾಡಿದ್ದು ಅಲ್ಲಲ್ಲಿ ಶಿಸ್ತಿನ ಸಿಪಾಯಿಗಳು, ನೌಕರರು ಬೆನ್ನು ಬಗ್ಗಿಸಿ ಆಜ್ಞೆ ಪಾಲಿಸಲು ಸನ್ನದ್ಧರಾಗಿ ನಿಂತಿದ್ದರು. ಇಲ್ಲಿ ಚಿನ್ನ, ಬೆಳ್ಳಿಯ ಅಗಣಿತ ಪಾತ್ರೆಗಳು ಒಂದು ಸಾಲಿನಲ್ಲಿ ಆಕರ್ಷಕವಾಗಿ ಕಾಣುವಂತೆ ಇಟ್ಟಿದ್ದರು. ಹಣ್ಣು ಹಂಪಲುಗಳನ್ನು ತಬಕ್ ಪಾತ್ರೆಗಳಲ್ಲಿ ತುಂಬಿಸಿ ಕಣ್ತುಂಬುವಂತೆ ಕಾಣಿಸುತ್ತಿತ್ತು. ಒಂದು ಸಾವಿರ ನಾಝಿ ಮತ್ತು ತುರ್ಕಿ ಕುದುರೆಗಳು ಮಕ್ಮಲ್, ರೇಶ್ಮೆಯ ಝೂಲದೊಂದಿಗೆ ಸಿಂಗರಿಸಿಡಲಾಗಿತ್ತು. ಪ್ರತೀ ದ್ವಾರಗಳಲ್ಲಿ ಎರಡೂ ಭಾಗಗಳಲ್ಲಿ ಸರದಾರರು ನಿಂತಿದ್ದರು. ಸಾಲುಸಾಲಾಗಿ ನೌಕರ ಚಾಕರರು ಸೇವೆಯ ಅವಕಾಶಕ್ಕಾಗಿ ಕಾದು ನಿಂತಿದ್ದರು. ಹುಮಾಯೂನ್ ಬಾದಶಾಹನನ್ನು ಸಾಲಾಗಿ ದೀಪ ಗುಚ್ಛ ಮಶಾಲುಗಳನ್ನು ಹಿಡಿದು ನಿಂತಿದ್ದ ಹಾದಿಯಲ್ಲಿ ಶಾ ಆಲಂಪನಾಹರ ದರ್ಬಾರಿಗೆ ಕರೆತಂದರು. ಇದನ್ನು ನೋಡಿ ತನಗೆ ನೀಡಿದ ವೈಭವದ ಆದರಾತಿಥ್ಯಗಳನ್ನು ನೀಡಿ ಗೌರವಿಸಿದ ರೀತಿಯನ್ನು ಕಂಡು ಬಾದಶಾಹ ಹುಮಾಯೂನ ಮೂಕವಿಸ್ಮಿತನಾಗಿದ್ದ. ರಾತ್ರಿಯ ಊಟ ಮಾಡಿದ ಬಳಿಕ ಅಲ್ಲಾಹನ ಪ್ರಾರ್ಥನೆ ಮಾಡಿ ಎಲ್ಲರಿಗೂ ಒಳಿತನ್ನು ಹಾರೈಸಿ ದುವಾಮಾಡಿದರು.

ಬಾದಶಾಹ ಹುಮಾಯೂನ್ ಬಾದಶಾಹನಿಗೆ 'ಈ ಸಮಾರಂಭಕ್ಕಾಗಿ ನಾವು ಸಾಮಾನು ಸರಂಜಾಮುಗಳನ್ನು ಉಪಯೋಗಿಸಿ ಸಿಂಗರಿಸಿದ ಎಲ್ಲ ವಸ್ತುಗಳೂ ನಿಮಗಾಗಿವೆ. ಇವೆಲ್ಲವೂ ಬಾದಶಾಹರ ಕಡೆಯಿಂದ ನೀಡಲಾದ ಉಡುಗೊರೆಗಳಾಗಿವೆ' ಎಂದು ಇಬ್ರಾಹಿಂ ಖಾನ್ ಹೇಳಿದ. ಇದರಿಂದ ಹುಮಾಯೂನ್ ಬಹಳ ಸಂತಸಪಟ್ಟುಕೊಂಡ. ಇಲ್ಲಿನವರ ಬಗ್ಗೆ ಅವನಲ್ಲಿದ್ದ ಎಲ್ಲ ಪೂರ್ವಗ್ರಹ ಪೀಡಿತ ಅಭಿಪ್ರಾಯಗಳು ಮಾಯವಾಗಿದ್ದವು. ಒಂದು ಅವಧಿಯ ತನಕ ಹುಮಾಯೂನ್ ಬಾದಶಾಹ, ಷಾ ತಹಮಾಸ್ಪನ ಸಾಮ್ರಾಜ್ಯದಲ್ಲಿ ತಂಗಿದ್ದ. ದಿನವೂ ಅವನ ಉಲ್ಲಾಸಕ್ಕಾಗಿ ಹೊಸ ಹೊಸ ಸಂಗೀತ, ನೃತ್ಯದ ಸಮಾರಂಭಗಳನ್ನು ಏರ್ಪಡಿಸಿ ಅವನ ಆತಂಕವನ್ನು ದೂರ ಮಾಡುವುದಕ್ಕೆ ಸಾಕಷ್ಟು ಪ್ರಯತ್ನಗಳನ್ನು ಮಾಡಲಾಯಿತು. ಹುಮಾಯೂನ್ ಹಿಂತಿರುಗಿ ತನ್ನ ದೇಶಕ್ಕೆ ಹೊರಟು ನಿಂತಾಗ ಷಾ ತಹಮಾಸ್ಫ್ ಆಲಂಪನಾಹ ಹನ್ನೆರಡು ಸಾವಿರ ಕಾಲಾಳು ಸವಾರರೊಂದಿಗೆ ಮತ್ತು ಕೆಲವು ಸರದಾರರೊಂದಿಗೆ ಕಳುಹಿಸಿದರು. ತನ್ನ ಸಾಮ್ರಾಜ್ಯದ ಎಲ್ಲ ಸರಹದ್ದುಗಳನ್ನು ಕಾಯುವ ಸರದಾರರಿಗೆ ಇವನ ಸಾಮ್ರಾಜ್ಯವನ್ನು ಹಿಂತಿರುಗಿಪಡೆಯಲು ಇವನಿಗೆ ನೆರವಾಗಬೇಕೆಂದು ಆಜ್ಞಾಪಿಸಿದ. ಅವರಿಗೆಲ್ಲ ತನ್ನ ಹೃತ್ಪೂರ್ವಕ ಕೃತಜ್ಞತೆಗಳನ್ನು ಅರ್ಪಿಸಿ ಹುಮಾಯೂನ್ ಇರಾನಿನಿಂದ ಕಾಬೂಲಿಗೆ ಹಿಂತಿರುಗಿದ. ತನ್ನ ಸಾಮ್ರಾಜ್ಯದ ರಕ್ಷಣಾ ವ್ಯವಸ್ಥೆಯನ್ನು ಸರಿಪಡಿಸಲು ಮುಖ್ಯ ಸೇನಾನಿಯನ್ನು ಕಂದಹಾರಕ್ಕೆ ಕಳುಹಿಸಿದ. ಈ ಮಧ್ಯೆ ದಿನೇದಿನೇ ಸಲೀಮ್ ಶಾಹನ ವಿರೋಧಿಗಳ ಚಟುವಟಿಕೆಗಳ ಸುದ್ದಿಗಳು ಹುಮಾಯೂನನಿಗೆ ತಲಪುತ್ತಿದ್ದವು. ಇದನ್ನು ತಿಳಿದ ಹುಮಾಯೂನ್ ಹಿಂದುಸ್ಥಾನಕ್ಕೆ ಹೋಗುವಂತೆ ತನ್ನ ಸೇನಾಧಿಪತಿಯೊಂದಿಗೆ 'ನನಗೀಗ ಸರಿಯಾದ ಸಮಯಾವಕಾಶ ಸಿಕ್ಕಿದೆ. ಹಿಂದುಸ್ಥಾನಕ್ಕೆ ಹೋಗುವ ತವಕವುಂಟಾಗಿದೆ' ಎಂದು ಹೇಳಿದ. 'ಈ ವಿರೋಧಿಗಳ ಮೇಲೆ ಒಮ್ಮೆಲೇ ಮುಗಿದು ಬೀಳುವ ಸಮಯ ಇದಲ್ಲ. ಸ್ವಲ್ಪ ತಾಳ್ಮೆ ಇರಲಿ' ಎಂದು ಸೇನಾಧಿಪತಿ ತನ್ನ ಸಲಹೆಯನ್ನು ನೀಡಿದ. ಸ್ವಲ್ಪ ಸಮಯ ಹೀಗೆಯೇ ಕಳೆಯಿತು. ಸಲೀಮ್ ಶಾಹನನ್ನು ಈ ಮಧ್ಯೆ ಪಟ್ಟದಿಂದ ಉರುಳಿಸಲಾಯಿತು, ರಾಜ್ಯದಲ್ಲಿ ಗಲಭೆಯೆದ್ದಿದೆ ಎಂಬ ಸುದ್ದಿ ಬಂತು. ಖೊರಸಾನ್ ಮತ್ತು ಮಾವರ ಉನ್ನಹರ್‌ನಿಂದ ಸೈನ್ಯವೊಂದು ತಯಾರಾಗಿ ಹೊರಟಿರುವ ಸುದ್ದಿಯೂ ತಲಪಿತು. ಇಂತಹ ಸನ್ನಿವೇಶದಲ್ಲಿ ನಾವು ಸರಿಯಾದ ಹೆಜ್ಜೆಯಿಡದಿದ್ದಲ್ಲಿ ಮತ್ತೆ ಯಾವಾಗ ಕಾಲ ಕೂಡಿಬರುತ್ತದೆಂದು ಕಾಯುವುದು ಎಂಬ ಯೋಚನೆ ಹುಮಾಯೂನನಿಗೆ ಹತ್ತಿಕೊಂಡಿತು. ಸೇನಾಧಿಪತಿಯೊಂದಿಗೆ ಮುಂದಿನ ಹೆಜ್ಜೆಯನ್ನು ಇಡುವ ವಿಚಾರದಲ್ಲಿ ಚರ್ಚೆ ನಡೆಸಿದ. ಸೇನಾಧಿಪತಿ ಮುಂದಿನ ಸುದ್ದಿ ಸಿಗುವುದನ್ನು ಕಾಯುತ್ತ ಕೂತ. ಒಂದುದಿನ ಈ ಸೇನಾಧಿಪತಿಯ ಗುರುಗಳಾದ ಮೌಲಾನಾ ಪೀರ್ ಮುಹಮ್ಮದ್ ಶೇರ್ವಾನಿ ಅಲ್ಲಿನ ಸಭೆಗೆ ಹಾಜರಾದರು. ಅವರು ಬರುವಾಗ ತಂದಿದ್ದ ಒಂದು ಗ್ರಂಥವನ್ನು

ಬಾದಶಾಹರ ಕೈಗೆ ನೀಡಿದರು. 'ಇದು ಯಾವ ಪುಸ್ತಕ?' ಎಂದು ಬಾದಶಾಹ ಕೇಳಿದಾಗ, 'ಇದು 'ದೀವಾನೆ ಹಾಫಿಜ್' ಎಂಬ ಗ್ರಂಥವಾಗಿದೆ' ಎಂದು ಅವರು ಉತ್ತರಿಸಿದರು. 'ಖ್ವಾಜಾ ಹಾಫಿಜರ ಬಗ್ಗೆ ನನಗೆ ತುಂಬ ಗೌರವವಿದೆ. ನೀವು ಅದರ ಸಂದೇಶಗಳ ಮೂಲಕ ನಾನು ವಿರೋಧಿಗಳ ಮೇಲೆ ದಂಡೆತ್ತಿ ಹೋದರೆ ಯಾವ ಪರಿಣಾಮ ಉಂಟಾಗಬಹುದು ಎಂಬುದನ್ನು ನೋಡಿ ಹೇಳಿ' ಎಂದು ಬಾದಶಾಹ ಹೇಳಿದರು. ಅವರು ಗ್ರಂಥವನ್ನು ಬಿಡಿಸಿ ನೋಡಿದಾಗ ಅದರಲ್ಲಿ ಬಂದ ಸಂದೇಶವು 'ಹೆಚ್ಚು ಯೋಚಿಸುವುದು ಮತ್ತು ಕಾರ್ಯವನ್ನು ಮುಂದೂಡುವುದು ಸರಿಯಲ್ಲ'ವೆಂಬ ಅರ್ಥ ನೀಡಿತು.

ಈ ಮಧ್ಯೆ ಬಂದ ಸುದ್ದಿಯಂತೆ ಹಿಂದುಸ್ಥಾನದ ಹಲವು ರಾಜರುಗಳ ಒಕ್ಕೂಟವೊಂದು ಯುದ್ಧಕ್ಕೆ ಹೊರಟು ನಿಂತಿದೆ ಎಂದು ತಿಳಿದು ಬಂತು. ಇಂತಹ ನಿರ್ದಿಷ್ಟ ಸ್ಥಳವೊಂದರಲ್ಲಿ ತಂಗುವ ಏರ್ಪಾಡು ಮಾಡಲಾಗಿದೆ ಎಂದೂ ವರ್ತಮಾನ ಸಿಕ್ಕಿತು. ಮೌಲಾನ ಪೀರ್ ಮುಹಮ್ಮದರಿಗೆ 'ಪೀರ್ ಖಾನ್' ಎಂಬ ಬಿರುದನ್ನು ನೀಡಲಾಯಿತು. ಅವರನ್ನು ಸರದಾರ ಸ್ಥಾನವನ್ನು ನೀಡಲಾಯಿತು.

**ಹುಮಾಯೂನ್ ಬಾದಶಾಹ ಹಿಂದುಸ್ಥಾನಕ್ಕೆ ಮರುಪ್ರವೇಶ ಹಾಗೂ ತನ್ನ ವಿರೋಧಿಗಳನ್ನು ಯುದ್ಧದಲ್ಲಿ ಸೋಲಿಸಿದ ವಿವರಗಳು:**

ಬಾದಶಾಹ ಹುಮಾಯೂನ್ ಒಳ್ಳೆಯ ಘಳಿಗೆಯನ್ನು ನೋಡಿ ತನ್ನ ಎಲ್ಲ ಶೌರ್ಯ, ಬಲವನ್ನು ಉಪಯೋಗಿಸಿಕೊಂಡು ಕಾಬೂಲಿನಿಂದ ಹೊರಟು ತ್ವರಿತವಾಗಿ ದೆಹಲಿಯನ್ನು ತಲಪಿದ. ಮೊದಲು ವಿರೋಧಿಗಳಿಗೆ ಪತ್ರ ಬರೆದು ಪರಿಸ್ಥಿತಿಯನ್ನು ತಿಳಿಯುವ ಪ್ರಯತ್ನ ಮಾಡಿದ. ಸ್ವಲ್ಪ ದಿನಗಳು ಕಳೆದ ಬಳಿಕ ಸಲಹೆಗಾಗಿ ಏಳು ರಾಜರುಗಳು ಒಂದೆಡೆ ಸೇರಿ ಚರ್ಚೆನಡೆಸಲು ಅನುಕೂಲವಾಗುವಂತೆ ಸಭೆ ಕರೆದ. ಆ ಸಮಯದಲ್ಲಿ ಶಾಬುದ್ದೀನ ಆಳುತ್ತಿದ್ದ ರಾಜ್ಯ ಆಗ್ರಾವಾಗಿತ್ತು. ಇವನು ಒಬ್ಬ ಬುದ್ಧಿವಂತ ರಾಜನಾಗಿದ್ದ. ತನ್ನ ವಿದ್ವಾಂಸರೊಂದಿಗೆ ಹುಮಾಯೂನನ ವಿರುದ್ಧ ಯುದ್ಧ ಮಾಡುವ ಬಗ್ಗೆ ನಿಮ್ಮ ಅಭಿಪ್ರಾಯವೇನು ಎಂದು ಕೇಳಿದ. ವಿದ್ವಾಂಸರು 'ನೀನು ಈ ರೀತಿ ತೀರ್ಮಾನವನ್ನು ತಡೆದುಕೊಳ್ಳಬೇಕು' ಎಂದು ಅಭಿಪ್ರಾಯಪಟ್ಟರು. ಈ ಪ್ರಕಾರ ಶಾಬುದ್ದೀನ್ ತನ್ನ ನಿರ್ಧಾರವನ್ನು ಕೈಬಿಟ್ಟ. ಆದರೆ ಉಳಿದ ರಾಜರು ಒಮ್ಮತದ ತೀರ್ಮಾನಕ್ಕೆ ಬಾರದೆ ಪರಸ್ಪರ ತಿಕ್ಕಾಟದಲ್ಲಿ ತೊಡಗಿದರು. ಇವರಲ್ಲಿ ಒಬ್ಬ ಸಿಕಂದರ ತನ್ನ ರಾಜ್ಯ ಮತ್ತು ಶೌರ್ಯದ ಬಗ್ಗೆ ಅತ್ಯಂತ ಅಹಂಕಾರಿಯಾಗಿದ್ದ. ಅವನು ಯಾವಾಗಲೂ ತನ್ನ ಶಕ್ತಿಯನ್ನು ಮೀರಿದ ದೊಡ್ಡದೊಡ್ಡ ಮಾತುಗಳನ್ನಾಡುತ್ತಿದ್ದ. ಈ ಎಲ್ಲ ಸುದ್ದಿಗಳನ್ನು ಗುಪ್ತಚಾರರ ತಂಡ ಹುಮಾಯೂನ್ ಬಾದಶಾಹನಿಗೆ ತಲಪಿಸಿದರು. ಈ ಸುದ್ದಿಗಳನ್ನು ಪರಾಮರ್ಶಿಸಿದಾಗ ಬಾದಶಾಹ ತುಂಬ ಉಲ್ಲಸಿತನಾದ.

ಇದು ನಮಗೆ ವಿಜಯದ ಸಂಕೇತವಾಗಿದೆ ಎಂದು ತನ್ನ ಸೇನಾನಿಗಳಿಗೆ ಹೇಳಿದ. ಇನ್ನು ಹೆಚ್ಚು ತಡಮಾಡುವುದು ತರವಲ್ಲ. ಇದರ ಪರಿಣಾಮ ಏನಾಗುವುದೋ ಅದನ್ನು ಅಲ್ಲಾಹನ ಮರ್ಜಿಗೆ ಬಿಟ್ಟುಬಿಡೋಣ ಎಂದು ಮರುದಿನ ತನ್ನ ಸೈನ್ಯವನ್ನು ನಾಲ್ಕೂ ದಿಕ್ಕಿನಲ್ಲಿ ಆಕ್ರಮಣ ಮಾಡಲು ಕಳುಹಿಸಿಕೊಟ್ಟ. ಎಲ್ಲ ಶೂರ ಸೈನಿಕರು ಕಾದಾಡುತ್ತ ಮುಂದೆ ನುಗ್ಗಿದರು.

ರಾತ್ರಿಯಾಗುತ್ತಿದ್ದಂತೆ ಎಲ್ಲರೂ ಸೈನಿಕ ಶಿಬಿರಗಳತ್ತ ತೆರಳಿದರು. ಆದರೆ ಶಹಬುದ್ದೀನ್ ಶಿಬಿರಕ್ಕೆ ಹೋಗದೆ ಅಲ್ಲೇ ನಿಂತ. ಈ ಸುದ್ದಿ ಸಿಕಂದರನಿಗೆ ತಿಳಿದಾಗ, ಈ ರಾಜರುಗಳು ನನ್ನ ಪರವಾಗಿದ್ದು ಯುದ್ಧ ಮಾಡುವುದಿಲ್ಲ ಎಂದು ಯೋಚಿಸಿದ. ಆದರೆ ಹಲವು ಸಹಸ್ರ ಕಾಲಾಳುಗಳು ಸೈನ್ಯವು ಮರುದಿನ ಅವನ ಮುಂದೆ ಬರತೊಡಗಿದವು. ಸಿಕಂದರ್ ಈ ಭ್ರಮೆಯಲ್ಲೇ ಇದ್ದನೆಂದರೆ ಇವರೆಲ್ಲ ತನ್ನ ಪರವಾಗಿದ್ದಾರೆ ಎಂದುಕೊಂಡಿದ್ದ. ಆದರೆ ಅವರೆಲ್ಲರೂ ತನ್ನ ವಿರೋಧಿಗಳಾಗಿ ಯುದ್ಧಕ್ಕೆ ತೊಡಗಿದಾಗ ದಿಗ್ಭ್ರಾಂತನಾದ. ರಣರಂಗದಲ್ಲಿ ಯುದ್ಧ ತೀವ್ರವಾಗಿ ನಡೆಯಿತು. ಹುಮಾಯೂನ್ ವೈರಿಗಳ ಎದುರು ಸೈನ್ಯದೊಂದಿಗೆ ನುಗ್ಗುತ್ತ ರಣರಂಗದ ಹಿಂದಿನ ಕಾಲುದಾರಿಯಲ್ಲಿ ಹೋಗಿ ಸಿಕಂದರನನ್ನು ಹಿಡಿದುಬಿಟ್ಟ. ಅವನನ್ನು ಸೆರೆಹಿಡಿದು, ಅವನ ಸಮಸ್ತ ಸಾಮಾನು, ಯುದ್ಧ ಸಾಮಾಗ್ರಿಗಳನ್ನು ವಶಪಡಿಸಿಕೊಂಡು, ಸಂಪತ್ತು, ಬೆಲೆಬಾಳುವ ವಸ್ತುಗಳಲ್ಲಿ ಯುದ್ಧದಲ್ಲಿ ಪಾಲ್ಗೊಂಡ ಸೈನಿಕರಿಗೆ ಒಂದು ಪಾಲನ್ನು ಹಂಚಿ ಇನ್ನೊಂದು ಪಾಲನ್ನು ತನ್ನ ಖಜಾನೆಗೆ ತುಂಬಿಸಿಕೊಂಡ. ಹೀಗೆ ಹೆಚ್ಚೇನೂ ನಷ್ಟವಾಗದೆ ಯುದ್ಧವು ಕೊನೆಗೊಂಡಿತು. ಅವನು ತನ್ನ ರಾಜಧಾನಿ ಲಾಹೋರಿಗೆ ತೆರಳಿ ತನ್ನ ಈ ವಿಜಯದ ನೆನಪಿನಲ್ಲಿ ನಾಣ್ಯವನ್ನು ಜಾರಿಗೊಳಿಸಿದ. ತನ್ನ ಬಹಳಷ್ಟು ಸಂಖ್ಯೆಯ ಸರದಾರರು, ಸೇನಾನಿಗಳನ್ನು ರಾಜ್ಯಾಡಳಿತದ ವ್ಯವಸ್ಥೆಗಾಗಿ ನೇಮಕಾತಿ ಮಾಡಿದ. ಹೀಗೆ ಅಲ್ಲಾಹನ ಕೃಪೆಯಿಂದ ಅವನ ಸಾಮ್ರಾಜ್ಯ ಮತ್ತೆ ಅವನ ಕೈಗೆ ದೊರಕಿತು. ಅಲ್ಲಿಂದ ಸ್ವಲ್ಪ ಸಮಯ ಕಳೆದ ನಂತರ ಸಮಯಾವಕಾಶ ನೋಡಿ ದೆಹಲಿಯ ಪಟ್ಟವನ್ನು ಅಲಂಕರಿಸಿದ. ಬಹಳಷ್ಟು ಉಡುಗೊರೆ, ಕಾಣಿಕೆಗಳನ್ನು ಇರಾನಿನ ಬಾದಶಾಹ ಷಾ ತಹಮಾಸ್ಪನಿಗೆ ಕಳುಹಿಸಿಕೊಟ್ಟ. ಸಮಸ್ತ ಹಿಂದುಸ್ಥಾನ, ಕಾಬೂಲ್, ಘಜ್ನವಿ, ಕಂದಹಾರಗಳನ್ನು ವಶಪಡಿಸಿಕೊಂಡ ನಂತರ ಸಾಮ್ರಾಜ್ಯವನ್ನು ತಮ್ಮ ಸ್ವಾಧೀನಕ್ಕೆ ಒಪ್ಪಿಸುತ್ತೇನೆ ಎಂದು ವಾಗ್ದಾನ ಮಾಡಿದ. ಕೆಲಕಾಲ ನಾನು ನನ್ನ ದೇಶಕ್ಕೆ ಹೋಗಿ ಇರಬಯಸುತ್ತೇನೆ ಯಾಕೆಂದರೆ ಅಲ್ಲಿ ನನ್ನ ಅಗತ್ಯವಿದೆ ಎಂದು ತಿಳಿಸಿದ. ದೈವೇಚ್ಛೆಯಂತೆ ನಮ್ಮ ಈ ಇಚ್ಛೆ ಪೂರ್ಣಗೊಂಡ ನಂತರ ಈ ಮೂರು ರಾಜ್ಯಗಳ ಕೋಟೆಗಳ ದ್ವಾರಗಳ ಕೀಲಿಕೈಯನ್ನು ನಿಮ್ಮ ವಶಕ್ಕೆ ಒಪ್ಪಿಸುವೆನೆಂಬ ಸಂದೇಶವನ್ನು ಕಳುಹಿಸಿ ಹಿಂತಿರುಗಿ ಪ್ರಯಾಣ ಬೆಳೆಸಿದ. ತಮ್ಮ ಸ್ವಂತ ತೀರ್ಮಾನದಂತೆ ಕೆಲವರು ಅಲ್ಲೇ

ನಿಂತರು. ಇವರಲ್ಲಿ ಹೈದರ್ ಸುಲ್ತಾನ್ ಅರ್ಝುಕನ ಮಕ್ಕಳಾದ ಅಲಿ ಖುಲಿ ಖಾನ್, ಬಹದ್ದೂರ್ ಖಾನ್ ಪ್ರಮುಖರಾಗಿದ್ದರು. ಇವರು ಒಂದು ಯುದ್ಧದಲ್ಲಿ ಸೆರೆಹಿಡಿಯಲ್ಪಟ್ಟಿದ್ದರು. ಷಾ ತಹಮಾಸ್ಫ್ ಇವರನ್ನು ಸಾಕಿ ಬೆಳೆಸಿದ್ದ. ತನ್ನ ಮಗಳನ್ನು ಸುಲ್ತಾನ್ ಅರ್ಝುಕನಿಗೆ ವಿವಾಹಮಾಡಿಕೊಟ್ಟಿದ್ದ. ಇವರಿಬ್ಬರೂ ಅವಳ ಮಕ್ಕಳಾಗಿದ್ದರು. ಇವರ ಬಗ್ಗೆ ಮುಂದೆ ಅವಕಾಶ ಬಂದಾಗ ನಾನು ವಿವರವಾಗಿ ನೀಡಲಿದ್ದೇನೆ.

ವೈರಿ ಸೈನ್ಯಗಳು ರಾಜ್ಯದ ಸುತ್ತ ಮುತ್ತಿಕೊಂಡಾಗ ರಕ್ಷಣೆಗೆ ಕಷ್ಟವಾಗಬಹುದು ಎಂಬ ಉದ್ದೇಶದೊಂದಿಗೆ ಲಾಹೋರಿನಲ್ಲಿದ್ದರೂ ಕೂಡ, ದೆಹಲಿಯ ಸರದಾರರು, ಸೇನಾನಿಗಳಿಗೆ ನಾಲ್ಕೂ ದಿಕ್ಕಿನಲ್ಲಿ ಕಣ್ಣಿಟ್ಟು ನೋಡಬೇಕು ಮತ್ತು ತನ್ನ ಆಡಳಿತವನ್ನು ಚೆನ್ನಾಗಿ ಜಾರಿಗೆ ತಂದು ಕಾಪಾಡಿ ಎಂದು ಆಜ್ಞೆಯನ್ನು ಮಾಡಿದ. ಕೆಲವು ವೈರಿಗಳು ಸೈನ್ಯವನ್ನು ಕಟ್ಟಿಕೊಂಡು ದಾಳಿ ನಡೆಸಲು ಪ್ರಯತ್ನಿಸಿದರಾದರೂ ಹುಮಾಯೂನನ ಸೈನ್ಯ ಇದನ್ನು ಸರಿಯಾದ ರೀತಿಯಲ್ಲಿ ಎದುರಿಸಿ ಸದೆಬಡಿಯುವುದರಲ್ಲಿ ಯಶಸ್ವಿಯಾದರು.

ಹೀಗೆ ಮೊಘಲರ ಹಿರಿಮೆ ಗರಿಮೆ, ದೌಲತ್ತಿನ ಘನತೆ ತುತ್ತ ತುದಿಗೇರುತ್ತ ಹೋಯಿತು. ಅಲ್ಲಿ ಸಿಕಂದರ್ ಮತ್ತು ಶಾಹಬುದ್ದೀನರ ಮಧ್ಯೆ ವೈರತ್ವ ಹೆಚ್ಚುತ್ತ ಹೋಯಿತು. ಇಬ್ಬರೂ ಪರಸ್ಪರರ ಮೇಲೆ ಆಕ್ರಮಣ ಮಾಡುತ್ತಲೇ ಇದ್ದರು. ಕೆಲವು ಸಲ ಸಿಕಂದರ್ ಜಯಗಳಿಸಿದರೆ, ಶಹಬುದ್ದೀನ್ ಸೋತ, ಕೆಲವು ಸಲ ಯುದ್ಧದಲ್ಲಿ ಶಹಬುದ್ದೀನ ಜಯಗಳಿಸಿದರೆ ಸಿಕಂದರ್ ಸೋಲುತ್ತಿದ್ದ. ಹೀಗೆ ಕಾಲ ಕಳೆಯುತ್ತಿದ್ದಂತೆ ಶಹಬುದ್ದೀನ್ ತೀರಿಕೊಂಡ. ಹುಮಾಯೂನ್ ಬಾದಶಾಹನ ಸೈನಿಕರಿಗೆ ಒಂದು ಒಳ್ಳೆಯ ಅವಕಾಶದೊರೆತು ಸಾಕಷ್ಟು ಸಂಪತ್ತನ್ನು ಸೂರೆ ಮಾಡಿಕೊಂಡರು. ಅಲ್ಲಿಂದ ಆಗ್ರಾಕ್ಕೆ ಪ್ರಯಾಣ ಬೆಳೆಸಿದರು. ಆಗ್ರಾಕ್ಕೆ ಬಂದು ಗಂಗಾನದಿಯ ತಟದಲ್ಲಿನ ಷೇರ್‌ಘಡದ ಕೋಟೆಯನ್ನು ವಶಪಡಿಸಿಕೊಂಡರು. ಈ ಸ್ಥಳದಲ್ಲೇ ಹಿಂದೆ ಹುಮಾಯೂನನು ಶೇರ್ ಖಾನ್ ಸೂರಿಯನ್ನು ಎದುರಿಸಲು ಹೋಗಿ ಗಂಗಾ ನದಿಯ ಉಬ್ಬರದ ರಭಸದಲ್ಲಿ ಸೈನ್ಯವು ಕೊಚ್ಚಿಕೊಂಡು ಹೋದ ಘಟನೆ ನಡೆದಿತ್ತು. ಈಗ ಹುಮಾಯೂನ್ ಬಾದಶಾಹ ವೈರಿಗಳನ್ನು ಮತ್ತು ಅವರ ಕೃತ್ಯಗಳನ್ನು ಮರೆತು ತನ್ನ ಎಂದಿನ ಶೌರ್ಯ, ಬಲದೊಂದಿಗೆ ಸುಖ ಸಂತೋಷದಲ್ಲಿ ಸಾಮ್ರಾಜ್ಯವನ್ನು ಆಳಲು ತೊಡಗಿದ. ಅವನ ಸರದಾರರು, ಸೇನಾನಿಗಳು ಅನೇಕ ರಾಜ್ಯಗಳನ್ನು ವಶಪಡಿಸಿಕೊಳ್ಳುವುದರಲ್ಲಿ ಜಯಗಳಿಸಿ ಸಾಮ್ರಾಜ್ಯ ವಿಸ್ತರಣೆ ವ್ಯಾಪಕವಾಗಿ ನಡೆದು ಅತ್ಯಂತ ವೈಭವದೊಂದಿಗೆ ರಾಜ್ಯವಾಳಿದ.

ಶೇರ್ ಶಾ ಸೂರಿ ದೆಹಲಿಯ ಜಾವುನ್(ಜಮುನಾ) ನದಿಯ ದಡದಲ್ಲಿ ದಕ್ಷಿಣ ಮತ್ತು ಪಶ್ಚಿಮಕ್ಕೆ ಮುಖಮಾಡಿದ ಒಂದು ಕೋಟೆಯನ್ನು ಕಟ್ಟಿಸಿದ್ದ. ಈ ಬೃಹತ್ತಾದ

ಕೋಟೆಯ ಒಳಗೆ ಒಂದು ಭವ್ಯವಾದ ಮಸೀದಿಯನ್ನು ಕಟ್ಟಿಸಿದ್ದ. ಹುಮಾಯೂನ್ ಬಾದಶಾಹ ಪ್ರತೀ ಶುಕ್ರವಾರ ಜುಮಾ ನಮಾಜಿಗೆ ಇಲ್ಲಿಗೆ ಆಗಮಿಸುತ್ತಿದ್ದ. ಆಗಾಗ ಸಂಜೆಯ ಮಗ್ರಿಬ್ ನಮಾಜಿಗೂ ಅಲ್ಲಿಗೆ ಹೋಗುವ ಪರಿಪಾಠ ಇಟ್ಟುಕೊಂಡಿದ್ದ. ಕೆಲವು ಬಾರಿ ಮಸೀದಿಯ ಆವರಣದ ಹೊರಗೆ ಕೂತು ಜಟ್ಟಿಗಳ ಜಿದ್ದಾಜಿದ್ದಿಯ ಆಟಗಳನ್ನು ನೋಡುತ್ತಿದ್ದ. ಕೆಲವು ಸಲ ತನ್ನ ಸಂಗಾತಿಗಳಿಂದ ಹಿಂದಿನ ಕಾಲದ ಗತವೈಭವಗಳು, ಘಟನೆಗಳ ಸ್ವಾರಸ್ಯಕರ ಕಥೆಗಳನ್ನು ಕೇಳುವುದರಲ್ಲಿ ಮಗ್ನನಾಗಿರುತ್ತಿದ್ದ. ಇವನ ಆಳ್ವಿಕೆಯು ನಡೆದು ಎರಡುವರೆ ವರ್ಷಗಳು ಕಳೆದಿತ್ತು, ತನ್ನ ಎಂದಿನ ಅಭ್ಯಾಸದಂತೆ ಶುಕ್ರವಾರದಂದು ಜುಮಾ ನಮಾಜಿಗೆಂದು ಮಸೀದಿಗೆ ಬಂದಿದ್ದ. ಅಂದು ಸಂಜೆಯ ಮಗ್ರಿಬ್ ನಮಾಜಿನ ಹೊತ್ತಿನ ತನಕ ಅಲ್ಲೇ ಕೂತಿದ್ದ. ಮುಅಜ್ಜಿನ್ ಪ್ರಾರ್ಥನೆಯ ಕರೆ ನೀಡುತ್ತ ಅಲ್ಲಾಹು ಅಕ್ಬರ್ ಹೇಳುವಾಗ ಹುಮಾಯೂನನೂ ಅಲ್ಲಾಹು ಅಕ್ಬರ್ ಎಂದು ಉತ್ತರಿಸುತ್ತಾ ತನ್ನ ಲಾಠಿ ಹಿಡಿದ ಎದ್ದು ನಿಂತು ಮುಅಜ್ಜಿನನ ಕಡೆ ನೋಡುತ್ತಿದ್ದ. ಊರಿ ನಿಲ್ಲಿಸಿದ ಲಾಠಿಯ ಮೇಲೆ ತಲೆಯಿಟ್ಟು ನಿಂತಲ್ಲೆ ಆದಾನ್ ಪೂರ್ತಿ ಕೇಳುವಷ್ಟರಲ್ಲಿ ದೇಹದಲ್ಲಿ ಅತ್ಯಂತ ನಿತ್ರಾಣವಾದಂತೆ ಅನಿಸಿ ತನ್ನ ಪಲ್ಲಂಗದಲ್ಲಿ ಕೂತು ಅರಮನೆಗೆ ಹಿಂತಿರುಗಿದ.

ಹೀಗೆ ತನ್ನ ಹಾಸಿಗೆಯಲ್ಲಿ ೨೩ ದಿನಗಳ ಕಾಲ ಆರಾಮ ಮಾಡಿದ. ಎರಡು ದಿನಗಳ ನಂತರ ಕೊನೆಯುಸಿರೆಳೆದ. ಇವನ ಮರಣದ ದಿನಾಂಕದ ಒಂದು ಮಿಶ್ರಾ ಪದ್ಯದಲ್ಲಿ ಹಿಜರಿ ವರ್ಷದ ಸನ್ ೯೬೧ ಎಂದು ತಿಳಿದು ಬರುತ್ತದೆ.

**ಹುಮಾಯೂನ್ ಬಾದಶಾಹನ ಮರಣ ಮತ್ತು ಮರಣ ಶಾಸನದ ವಿವರಗಳು:**

ಇವನ ಶವವನ್ನು ಮೊದಲು ಲಾಹೋರಿಗೆ ಕೊಂಡೊಯ್ಯಲಾಯಿತು. ಹುಮಾಯೂನ್ ಬಾದಶಾಹ ತನ್ನ ಆಳ್ವಿಕೆಯ ಮೊದಲ ಹಂತದಲ್ಲಿ ಅನೇಕ ಸಫಲ ಕಾರ್ಯಗಳನ್ನು ಕೈಗೆತ್ತಿಕೊಂಡಿದ್ದನಲ್ಲದೆ ಪ್ರತೀ ಯುದ್ಧಗಳಲ್ಲೂ ಸರಣಿಯ ವಿಜಯವನ್ನು ಪಡೆದಿದ್ದ. ತನ್ನ ಸಾಮ್ರಾಜ್ಯವನ್ನು ಆಳುತ್ತಿರುವಾಗ ಯಾರಿಗೂ ಅವನ ವಿರುದ್ಧ ಎದುರುನಿಲ್ಲುವ ಧೈರ್ಯವಿರಲಿಲ್ಲ. ಹಿಂದುಸ್ಥಾನದ ಬಹುಪಾಲು ಪ್ರದೇಶಗಳಲ್ಲಿ ತನ್ನ ಸಾಮ್ರಾಜ್ಯವನ್ನು ಸ್ಥಾಪಿಸಿ ಆಳ್ವಿಕೆಯನ್ನು ನಡೆಸಿದ. ಇವನ ಯೌವನ ಶ್ರೀಮಂತಿಕೆಯ ವೈಭವದೊಂದಿಗೆ ಕಳೆಯಿತು. ಆದರೆ ಇವನ ಹತ್ತಿರದವರು, ದೂರದವರು ಸೇರಿದಂತೆ ಈತನ ಘನತೆ, ಗಾಂಭೀರ್ಯಕ್ಕೆ ಎಲ್ಲರೂ ತಲೆಬಾಗುತ್ತಿದ್ದರು. ತನ್ನ ಪ್ರಜೆಗಳ ಅಹವಾಲುಗಳನ್ನು ಕೇಳುತ್ತಿದ್ದ ಮತ್ತು ಅವುಗಳಿಗೆ ಪರಿಹಾರ ಒದಗಿಸುವುದಕ್ಕೆ ತಡಮಾಡುತ್ತಿರಲಿಲ್ಲ. ಆದರೆ ಇನ್ನಿತರ ಬಾದಶಾಹರ ವಿಷಯದಲ್ಲಿ ಅವಸರದ ತೀರ್ಮಾನಗಳನ್ನು ತೆಗೆದುಕೊಳ್ಳುತ್ತಿರಲಿಲ್ಲ ಎಂಬುದನ್ನು ಒಪ್ಪಿಕೊಂಡರೂ ಜವಾಬ್ದಾರಿಯುತವಾಗಿ ನಡೆದುಕೊಂಡಿರಲಿಲ್ಲ. ಇದರಿಂದಾಗಿ ಗುಜರಾತನ್ನು

ಜಯಿಸಿಕೊಂಡರೂ ಅಲ್ಲಿ ತನ್ನ ಆಳ್ವಿಕೆಯನ್ನು ಪ್ರಭಾವಶಾಲಿಯಾಗಿ ನಡೆಸುವುದರಲ್ಲಿ ಸೋತಿದ್ದ. ಬಂಗಾಲವನ್ನು ವಶಪಡಿಸಿಕೊಂಡರೂ ಆ ಪ್ರದೇಶದ ಮೇಲೆ ನಿಗಾ ಇಡಲು ಸೋತಿದ್ದ. ಇದೇರೀತಿ ಶೇರ್ ಖಾನ್ ಸೂರಿಯ ವಿಷಯದಲ್ಲಿ ಕೂಡ ಜವಾಬ್ದಾರಿಯುತವಾಗಿ ನಡೆದುಕೊಂಡಿದ್ದರೆ ಅವನ ಚರಿತ್ರೆಯೇ ಬದಲಾಗುತ್ತಿತ್ತು. ಈ ವಿಷಯದಲ್ಲಿ ನಾನು ಹಿಂದೆ ವಿವರವಾಗಿ ನೀಡಿದ್ದೇನೆ.

ಹತ್ತು ವರ್ಷಗಳ ನಂತರ ಅವನ ಗೋರಿಯ ಅವಶೇಷಗಳನ್ನು ಎತ್ತಿ ಲಾಹೋರಿನಿಂದ ದೆಹಲಿಗೆ ತರಲಾಯಿತು. ಅವನ ಗೋರಿಯ ಮೇಲೆ ರಾಜವೈಭವದ ಕಟ್ಟಡ, ಗುಂಬಜ್ ಮತ್ತು ನಾಲ್ಕೂ ದಿಕ್ಕಿನಲ್ಲಿ ಮಿನಾರುಗಳನ್ನು ಕಟ್ಟಿಸಲಾಯಿತು. ಈ ಆವರಣದಲ್ಲಿ ಅವನ ಕಾಲದ ಖಾಸಾ ಸರದಾರರು, ಸೇನಾನಿಗಳು, ಮಂತ್ರಿಗಳ ಗೋರಿಗಳು ಕೂಡ ಇದ್ದವು. ಹೆಚ್ಚುಕಮ್ಮಿ ಒಂದು ಫರ್ಲಾಂಗು ವ್ಯಾಪ್ತಿಯಲ್ಲಿ ಗೋರಿಗಳು ಇದ್ದವು. ರೌಜಾದ ಕಟ್ಟಡಗಳು ಕೂಡ ಶ್ರೀಮಂತವಾಗಿದ್ದವು. ಮನಸ್ಸಿಗೆ ಆಹ್ಲಾದ ನೀಡುವಂತಹ ಸುಂದರ ಹೂದೋಟಗಳು ಕೂಡ ಅಲ್ಲಿ ರಚಿಸಲಾಗಿದ್ದವು. ಈ ರೀತಿ ಸುಂದರವಾದ ಬಹಳಷ್ಟು ಇಮಾರತುಗಳು, ಉದ್ಯಾನವನಗಳನ್ನು ಕಟ್ಟಿಸಿ ಆಗಂತುಕರಿಗೆ ಸುಂದರ ಅನುಭವವಾಗುವಂತೆ ಮಾಡಿದ್ದ. ಮುಖ್ಯ ಸಂಗತಿಯೆಂದರೆ ಹುಮಾಯೂನ್ ದೆಹಲಿಯನ್ನು ಸುಂದರವಾಗಿಸಿ, ಉನ್ನತ ವಾಸ್ತುವಿನ ಕಟ್ಟಡಗಳನ್ನು ಕಟ್ಟಿಸಿ ವೈಭವವನ್ನು ಮೆರೆಸಿದ್ದ.

■

*

## ಅಧ್ಯಾಯ-೧೪

**ಸುಲ್ತಾನ್ ಜಲಾಲುದ್ದೀನ್ ಮುಹಮ್ಮದ್ ಅಕ್ಬರ್‌ನ ಸಾಮ್ರಾಜ್ಯ ಮತ್ತು ಆಳ್ವಿಕೆಯ ವಿವರಗಳು:**

ಅಕ್ಬರನ ಆಳ್ವಿಕೆಯಲ್ಲಿ ದೆಹಲಿಯ ಸೈನ್ಯದಲ್ಲಿ ಅಗಣಿತ ಸಂಖ್ಯೆಯ ಸೈನಿಕರಿದ್ದರು. ಇವನು ಶೂರನೂ ಬಲಶಾಲಿಯೂ ಆಗಿದ್ದ. ಇವನಿಗೆ ಶಿಕಾರಿ ಮಾಡುವ ಬಹಳ ಶೋಕಿ ಇತ್ತು. ಹೆಚ್ಚಿನ ವಿರಾಮದ ಸಮಯವು ಶಿಕಾರಿ ಮಾಡುವುದರಲ್ಲಿ ಕಳೆಯುತ್ತಿದ್ದ. ಜಿಂಕೆ, ಹುಲಿ, ಚಿರತೆ ಮುಂತಾದ ಪ್ರಾಣಿಗಳನ್ನು ಶಿಕಾರಿ ಮಾಡುವುದು ಅವನ ಖಯಾಲಿಯಾಗಿತ್ತು. ಅವನು ಶಿಕಾರಿಗೆ ಹೋಗುವಾಗ ಪ್ರತ್ಯೇಕ ಬಟ್ಟೆಗಳನ್ನು ಧರಿಸುತ್ತಿದ್ದ. ಈ ಬಟ್ಟೆಗಳಲ್ಲಿ ಹಸಿರು ಮತ್ತು ಹಳದಿ ಬಣ್ಣದ್ದಾಗಿತ್ತು. ದೂರದಲ್ಲಿ ನೋಡುವಾಗ ಕಾಡಿನಲ್ಲಿ ಹುಲ್ಲಿನ ಮೆದೆಯೊಂದು ನಿಂತಂತೆ ಕಂಡುಬರುತ್ತಿತ್ತು. ಅವನ ಜೊತೆಗೆ ಶಿಕಾರಿಗೆ ಹೋಗುವವರು ಕೂಡ ಅದೇ ಬಣ್ಣದ ಬಟ್ಟೆಗಳನ್ನು ಧರಿಸುತ್ತಿದ್ದರು. ಕಾಡಿನಲ್ಲಿ ಅವರು ನಿಂತಿದ್ದಾಗ ಪ್ರಾಣಿಗಳು ಹಸಿರು ಹುಲ್ಲಿನ ಮೆದೆಯೆಂದು ತಿಳಿದು ಹತ್ತಿರ ಬರುತ್ತಿದ್ದವು. ಆಗ ಅವನ್ನು ಜೀವಂತ ಹಿಡಿಯುತ್ತಿದ್ದ, ಅಥವಾ ಕತ್ತಿಯಿಂದ ಅವುಗಳ ಶಿಕಾರಿ ಮಾಡುತ್ತಿದ್ದ. ಶಿಕಾರಿ ಮಾಡುತ್ತ ಕೆಲವು ಸಲ ಮೂರು ನಾಲ್ಕು ಫರ್ಲಾಂಗುಗಳಷ್ಟು ದೂರ ನಡೆದು ಹೋಗುತ್ತಿದ್ದ. ಅವನ ಶಿಕಾರಿಯ ಗುರಿ ತಪ್ಪಿಸಿಕೊಂಡು ಪ್ರಾಣಿಗಳು ಓಡುವ ಸಂದರ್ಭ ಬಹಳ ಕಮ್ಮಿಯಾಗಿತ್ತು. ಶಿಕಾರಿಯ ಹಿಂದೆ ತನ್ನ ಜೊತೆಗಾರರಿಗಿಂತ ವೇಗವಾಗಿ ಓಡುತ್ತಿದ್ದ. ಒಮ್ಮೆ ಶಿಕಾರಿಯ ಬೆನ್ನುಹಿಡಿದು ತನ್ನ ಜೊತೆಗಾರರಿಂದ ಬಹಳ ದೂರ ಹೋಗಿದ್ದ. ಎಷ್ಟು ದೂರ ಸಾಗಿದ್ದನೆಂದರೆ ಸೈನಿಕರ ಕಣ್ಣಿಗೆ ಕಾಣಿಸದಷ್ಟು ದೂರ ಹೋಗಿದ್ದ. ಇವರೆಲ್ಲ ಬಾದಶಾಹನನ್ನು ಯಾರಾದರೂ ಗಲಭೆ ಉಂಟು ಮಾಡುವ ವ್ಯಕ್ತಿಯೆಂದು ಕಾಡು ವಾಸಿಗಳು ಹಿಡಿದು ಬಂಧಿಸಿರಬೇಕೆಂದು ಅಂದಾಜು ಮಾಡಿದ್ದರು. ಜೊತೆಗಾರರು ಇವನನ್ನು ಹುಡುಕುತ್ತ ಆಕಡೆ ಈಕಡೆ ಓಡಾಡಿದರು.

ಈ ಸುದ್ದಿ ರಾಜಧಾನಿಗೂ ತಲಪಿ, ಪೀರ್ ಮುಹಮ್ಮದ್ ಶೆರ್‌ವಾನಿ ಒಂದು ಸೈನ್ಯವನ್ನು ಹಿಡಿದುಕೊಂಡು ಕಾಡಿಗೆ ಸುತ್ತು ಹಾಕಿ ಹುಡುಕ ತೊಡಗಿದ. ಕಾಡಿನಲ್ಲಿ ಅಕ್ಬರ್ ಬಾದಶಾಹನ ಕಾಲಿಗೆ ಹಗ್ಗ ಕಟ್ಟಿ ಕಾಡಿನ ಆದಿವಾಸಿಗಳು ದೊಡ್ಡ ಮರವೊಂದಕ್ಕೆ ಕಟ್ಟಿಹಾಕಿದ್ದು ಕಂಡು ಬಂತು. ಸೈನಿಕರು ಅವರನ್ನು ಬಿಡಿಸಿದರು. ಹೀಗೆ ಶಿಕಾರಿಯ ಶೋಕಿಯಿಂದಾಗಿ ಎರಡು ಬಾರಿ ಬಂದಿಯಾಗಿದ್ದ.

ಎರಡನೆಯ ಬಾರಿಯ ಶಿಕಾರಿಯ ಮೋಜಿಗೊಳಗಾಗಿ ಪ್ರಾಣಿಯೊಂದರ ಹಿಂದೆ ಓಡುತ್ತ ಸಣ್ಣದೊಂದು ಗ್ರಾಮಕ್ಕೆ ತಲಪಿದ. ಈ ಗ್ರಾಮದಲ್ಲಿ ಒಂದು ಚಿಕ್ಕ ಗುಡಿಸಲಿಗೆ ಹೋಗಿ ಹಸಿದಿದ್ದ ಅವನು ಆಹಾರವನ್ನು ಕೇಳಿದ. ಗುಡಿಸಲಲ್ಲಿದ್ದ ಹೆಣ್ಣು ಮಗಳು ಇವನು ಹಾದಿತಪ್ಪಿದ ಪ್ರಯಾಣಿಕನಿರಬೇಕೆಂದು ತಿಳಿದು ಅವನಿಗೆ ಊಟ ಬಡಿಸಿದಳು. ರಾತ್ರಿಯಾದಾಗ ನೋಡುವಾಗ ಎತ್ತರದ ಸ್ಥಳದಲ್ಲಿ ಚಿಕ್ಕ ಕೋಣೆ ಖಾಲಿಯಾಗಿತ್ತು. ಪ್ರವಾಸಿಗರು ಇಲ್ಲಿ ನಿಂತು ರಾತ್ರಿಯನ್ನು ಕಳೆದು ಬೆಳಿಗ್ಗೆ ಎದ್ದು ಪ್ರಯಾಣದಲ್ಲಿ ಮತ್ತೆ ತೊಡಗುತ್ತಿದ್ದರು. ಬಾದಶಾಹ ಅಕ್ಬರ ಕೂಡ ಅಲ್ಲೇ ತಂಗಿ ರಾತ್ರಿಯನ್ನು ಕಳೆದ. ಮುಂಜಾನೆ ಎದ್ದು ಅಲ್ಲಿಂದ ಹೊರಟ. ಈ ಘಟನೆಯ ನಂತರ ತನ್ನ ಸಾಮ್ರಾಜ್ಯದಲ್ಲಿ ಪ್ರತೀ ಅರ್ಧ ಮೈಲಿಗೆ ಒಂದರಂತೆ ತಂಗುದಾಣಗಳನ್ನು ಕಟ್ಟಿಸಿದ. ಇಲ್ಲಿ ಪ್ರವಾಸಿಗರು ಬಂದು ನಿಲ್ಲಲು ಅನುಕೂಲವಾಗುವಂತೆ ಏರ್ಪಾಡು ಮಾಡಿದ್ದ. ಈ ಘಟನೆಯ ಸಂದರ್ಭದಲ್ಲಿ ಒಂದು ಪ್ರವಾಸಿ ತಂಡದವರು ಅಲ್ಲಿಗೆ ಬಂದರು. ಅವರು ಅಕ್ಬರ್ ಬಾದಶಾಹನನ್ನು ಗುರುತಿಸಿ ಅವನ ಸೇವೆ ಮಾಡಿದರು. ಈ ಸಂಗತಿಯು ಗುಡಿಸಲ ಹೆಣ್ಣುಮಗಳಿಗೂ ತಾನು ಆಹಾರ ನೀಡಿದ್ದು ಬಾದಶಾಹನಿಗೆಂದು ತಿಳಿಯಿತು. ಇವೆಲ್ಲ ವಿಷಯ ತಿಳಿದು ಸೈನಿಕರಿಗೆ ತುಂಬ ನಾಚಿಕೆಯಾಗಿತ್ತು. ಬಾದಶಾಹನ ಭಯದಿಂದ ಸುಮ್ಮನಿದ್ದರು.

ನಾನು ವ್ಯಾಪಾರದ ನಿಮಿತ್ತ ಹಿಜರಿ ವರ್ಷ ೯೬೭ರಲ್ಲಿ ಗುಜರಾತಿನಿಂದ ಆಗ್ರಾಕ್ಕೆ ಬಂದಿದ್ದೆ. ನನ್ನ ಕೆಲಸಕಾರ್ಯಗಳಲ್ಲಿ ಮಗ್ನನಾಗಿದ್ದೆ. ಅಕ್ಬರ್ ಬಾದಶಾಹನನ್ನು ನೋಡಬೇಕೆಂಬುದು ನನ್ನ ಆಸೆಯಾಗಿತ್ತು. ಕಾಕತಾಳೀಯವೆಂಬಂತೆ ಆ ಕಾಲದಲ್ಲಿ ಮಾಸೂಮ್ ಬೇಗನ ಮಗ ಮತ್ತು ಷಾ ತಹಮಾಸ್ಪನ ಹತ್ತಿರದ ಸಂಬಂಧಿ ಸಯ್ಯದ್ ಬೇಗ್ ಷಾನ ಸಂದೇಶವನ್ನು ಹಿಡಿದುಕೊಂಡು ಅಲ್ಲಿಗೆ ಬಂದಿದ್ದ. ಇವನನ್ನು ಭೇಟಿಯಾದುದರಿಂದ ಗೆಳೆತನ ಬೆಳೆದು ಅಕ್ಬರ್ ಬಾದಶಾಹನ ದರ್ಬಾರನ್ನು ನೋಡುವ ಅವಕಾಶ ನನಗೆ ದೊರೆಯಿತು. ಬಾದಶಾಹ ಆಸ್ಥಾನದಲ್ಲಿ ಪಟ್ಟದ ಸಿಂಹಾಸನದಲ್ಲಿ ಕೂತು ಸಭೆಯನ್ನು ನಡೆಸುತ್ತಿದ್ದ. ನಾಲ್ಕೂ ದಿಕ್ಕಿನಲ್ಲಿ ಅಧಿಕಾರಿಗಳು, ಮಂತ್ರಿಗಳು ತಲೆ ತಗ್ಗಿಸಿ ವಿನಮ್ರರಾಗಿ ನಿಂತಿದ್ದರು. ಪ್ರಜೆಗಳು ಬಹಳ ಸಂಖ್ಯೆಯಲ್ಲಿ ಸೇರಿದ್ದರು. ಆಸ್ಥಾನದ ವೇದಿಕೆಯ ಪರದೆ ಎತ್ತುತ್ತಿದ್ದಂತೆ 'ಬಾದಶಾಹ ಸಲಾಮತ್' ಎಂದು

ಕೂಗಿದರು. ಇದರಿಂದಾಗಿ ಬಾದಶಾಹ ವೇದಿಕೆಗೆ ಹಾಜರಾಗುತ್ತಿದ್ದಾನೆಂದು ತಿಳಿದುಬರುತ್ತಿತ್ತು. ನಾನು ನೋಡುವಾಗ ಅವರ ವದನಾರವಿಂದದಲ್ಲಿ ವಿಶೇಷವಾದ ಶಾಹಿ ಪ್ರಭೆ ಮೂಡಿತ್ತು. ಆಗ ಅವನು ೨೦ ವರ್ಷ ವಯಸ್ಸಿನ ಯುವಕನಾಗಿದ್ದ. ಮುಂದೆ ಹಿಂದೆ ನೌಕರ ಚಾಕರರು ಉಪಸ್ಥಿತರಿದ್ದು ಬಾದಶಾಹ ಗಾಂಭಿರ್ಯದಿಂದ ಕೂಡಿ ನಡೆದು ಬಂದು ಸಿಂಹಾಸನದಲ್ಲಿ ಕೂತ. ಈ ಬಾದಶಾಹನಿಗೆ ನೀಡುವ ಗೌರವ, ಶಿಸ್ತಿನ ಸೇವೆ, ವೈಭವ ಇನ್ನಾವ ಬಾದಶಾಹರಿಗೂ ದೊರೆಯುವುದು ನಾನು ಇದುವರೆಗೆ ಕಂಡಿರಲಿಲ್ಲ. ಜನರನ್ನು ಭೇಟಿಯಾಗಲು ಬೇರೆಬೇರೆ ವಿಭಾಗಗಳನ್ನು ಮಾಡಿಸಿದ್ದ. ಉಳಿದವರು ಯಾರೂ ಅಲ್ಲಿಗೆ ಬರುವುದಕ್ಕೆ ಆಸ್ಪದವಿರಲಿಲ್ಲ.

ಇನ್ನೊಂದು ಸಂದರ್ಭದಲ್ಲಿ ನಾನು ಬಾದಶಾಹರ ದಿವಾನೆ ಖಾಸ್(ಖಾಸಗಿ ಮಹಲು)ನಲ್ಲಿ ಕೂತಾಗ 'ಬಾದಶಾಹ ಸಲಾಮತ್ ಬರುತ್ತಿದ್ದಾರೆ' ಎಂಬ ಕೂಗು ಗಟ್ಟಿಯಾಗಿ ಕೇಳತೊಡಗಿತು. ನಾನು ನೋಡುವಾಗ ಮಹಲಿನ ಬಾಲ್ಕನಿಗೆ ಬಂದಿದ್ದರು. ಅವರ ದೇಹದಲ್ಲಿ ಬರಿಯ ಲುಂಗಿ ಸುತ್ತಿಕೊಂಡಿದ್ದರು. ತಲೆಯ ಮೇಲೂ ಟೊಪ್ಪಿ ಇಟ್ಟಿರಲಿಲ್ಲ. ಆಗ ವಿಪರೀತ ಸೆಖೆಯಿತ್ತು. ಅವರ ಕೈಯಲ್ಲಿ ಕಾಗದದ ಬೀಸಣಿಗೆಯಿತ್ತು. ಅದನ್ನವರು ಬೀಸಿಕೊಂಡು ಸೆಖೆಯನ್ನು ತಣಿಸಿಕೊಳ್ಳುತ್ತಿದ್ದರು. ನಾನು ಇವರ ಸರಳತೆ, ಸಾಮಾನ್ಯ ಜನರ ನಡವಳಿಕೆಯಿಂದ ಪ್ರಭಾವಿತನಾದೆ. ಇಂತಹ ನಡವಳಿಕೆಯ ಬಾದಶಾಹರು ಕಾಣಸಿಗುವುದು ಬಹಳ ಕಮ್ಮಿ.

**ಶೇರ್ ಶಾಹ ಸೂರಿಯ ಖಜಾನೆಯ ಕೋತ್ವಾಲ ಹೇಮೂ ಸೈನ್ಯವನ್ನು ಕಟ್ಟಿಕೊಂಡು ದೆಹಲಿಯ ಬಾದಶಾಹ ಹುಮಾಯೂನನ ಸಾಮ್ರಾಜ್ಯವನ್ನು ಆಕ್ರಮಿಸಲು ಆಗಮಿಸುವ ವಿವರಗಳು:**

ಬಾದಶಾಹ ಹುಮಾಯೂನ್ ತೀರಿಕೊಂಡ ಬಳಿಕ, ಅಕ್ಬರ್ ತನ್ನ ತಂದೆಯ ವಾರೀಸುದಾರನಾಗಿ ಸಿಂಹಾಸನವನ್ನೇರಿದ ನಂತರ ಅವನು ಲಾಹೋರ್ ನಗರವನ್ನು ಸಂದರ್ಶಿಸುವ ಸಲುವಾಗಿ ಹೋದಾಗ ವೈರಿಗಳ ಸೈನ್ಯವು ಶೇರ್ ಶಾಹ ಸೂರಿಯ ಕೋತ್ವಾಲನಾಗಿ ಹಿಂದೆ ಇದ್ದ ಹೇಮೂವಿನ ನೇತೃತ್ವದಲ್ಲಿ ದೆಹಲಿಯನ್ನು ವಶಪಡಿಸಿಕೊಳ್ಳಲು ದಾಳಿ ನಡೆಸಿತು. ಅವನ ಸರದಾರರು ಮತ್ತು ಅಕ್ಬರನ ಸೈನ್ಯ ಮಧ್ಯೆ ಭೀಕರ ಕಾಳಗ ನಡೆಯಿತು. ಅವನು ತನ್ನನ್ನು ಒಂದು ಕಡೆ ಪ್ರತ್ಯೇಕಿಸಿದ. ಬಾದಶಾಹನ ಆಸ್ಥಾನಕ್ಕೆ ಒಂದು ಅರ್ಜಿಯನ್ನು ಬರೆದು ಕಳುಹಿಸಿದ್ದ. ಆಗ ದೆಹಲಿಯ ಸರಹದ್ದಿನಲ್ಲಿ ನಿಂತಿದ್ದ ಹೇಮೂ, ದೆಹಲಿಯ ಬಲಿಷ್ಠ ಕೋಟೆಯನ್ನು ನೋಡಿ ಇದರ ಆವರಣ, ಕೋಟೆಯ ಗೋಡೆಗಳು ಎಷ್ಟೊಂದು ಶಕ್ತಿಶಾಲಿಯಾಗಿದೆ, ನಾನು ಆಕ್ರಮಿಸಿದಲ್ಲಿ ಇದನ್ನು ಜಯಿಸುವುದು ಕಷ್ಟಸಾಧ್ಯವೆಂದು ತೀರ್ಮಾನಿಸಿದ್ದ. ಈ

ಸುದ್ದಿ ಲಾಹೋರಿಗೆ ತಲಪಿದಾಗ, ಪೀರ್ ಮುಹಮ್ಮದ್ ಶೆರ್ವಾನಿ ಸೈನ್ಯ ಕಟ್ಟಿಕೊಂಡು ಬಂದು ಹೇಮೂನನ್ನು ಓಡಿಸುವುದಕ್ಕೆ ತೀರ್ಮಾನಿಸಿದ. ಹೇಮೂನಿಗೆ ಇತರ ಬಾದಶಾಹರಿಂದ ಸಹಾಯ ಒದಗಿದೆ ಎಂಬ ವರ್ತಮಾನವು ನಂತರದಲ್ಲಿ ಅವನಿಗೆ ತಲಪಿತ್ತು. ಇನ್ನೊಂದು ತಂಡದಲ್ಲಿ ಅಲಿ ಖುಲಿ ಖಾನ್‌ನನ ಸರದಾರರು ಕೂಡ ಅವನಿಗೆ ಸಹಾಯ ಮಾಡುತ್ತಿದೆ ಎಂಬ ಸುದ್ದಿಯೂ ಸಿಕ್ಕಿತ್ತು.

ಅಲಿ ಖುಲಿ ಖಾನ್ ಹಿಂದೆ ಅಕ್ಬರ್ ಬಾದಶಾಹನ ಸೈನಿಕನಾಗಿದ್ದ. ಇವನು ಆಗಲೇ ಅಲಿ ಖುಲಿ ಬಹದ್ದೂರ್ ಖಾನ್ ಎಂಬ ಹೆಸರಿನಲ್ಲಿ ಆಗ ಪ್ರಸಿದ್ಧನಾಗಿದ್ದ. ಯಾಕೆಂದರೆ ಖೊರಸಾನಿನ ಒಂದು ಯುದ್ಧದಲ್ಲಿ ಶಾಹ ತಹಮಾಸ್ಫ್ ಅರ್ಘ್‌ಬೆಗಾನ್ ರಾಜ್ಯದ ವಿರುದ್ಧ ಯುದ್ಧ ಮಾಡುವಾಗ ಸೈನ್ಯದ ಮಧ್ಯೆ ಸಾಮಾನ್ಯ ಸಿಪಾಯಿಯೊಬ್ಬ ಕುದುರೆಯನ್ನು ಶರವೇಗದಲ್ಲಿ ಓಡಿಸುತ್ತ ವೈರಿಗಳ ಮಧ್ಯೆ ನುಗ್ಗಿ ತನ್ನ ಕೈಯಲ್ಲಿದ್ದ ಚಾಟಿಯಿಂದ ಸೈನಿಕರಿಗೆ ಹೊಡೆಯುತ್ತ ತಿರುಗಿ ತನ್ನ ಸೈನ್ಯದೊಂದಿಗೆ ಸೇರಿದ್ದು ನೋಡಿ ಷಾ ತಹಮಾಸ್ಫ್ ದಂಗಾಗಿದ್ದ. ಈ ಸೈನಿಕ ಬಂದು ಷಾನಿಗೆ ಸಲಾಮ್ ಸಲ್ಲಿಸಿದ. ಷಾ ತಹಮಾಸ್ಫ್ ಈ ಹುಡುಗನನ್ನು ನೋಡಿ 'ಇವನು ಯಾರ ಮಗ?' ಎಂದು ಕೇಳಿದ. ಇವನು ಹೈದರ್ ಸುಲ್ತಾನ್ ಅರ್ಝ್ಬೇಕನ ಮಗ ಎಂದು ಹೇಳಿದಾಗ, ಅವನಿಗೆ ಬಹದ್ದೂರ್ ಖಾನಿ ಎಂಬ ಬಿರುದು ನೀಡಿ ಓರ್ವ ಸೈನಿಕ ಅಧಿಕಾರಿಯನ್ನಾಗಿ ಮಾಡಿ ಮುಂದೆ ಮುಖ್ಯ ಸೇನಾನಿಯಾಗಿ ಭಡ್ತಿಹೊಂದಿದ.

ಅಲಿ ಖುಲಿ ಖಾನನಿಗೆ ಸಹಾಯಹಸ್ತ ನೀಡಲಾಗುತ್ತಿದೆ ಎಂದು ಪೀರ್ ಮುಹಮ್ಮದ್ ಖಾನನಿಗೆ ಸುದ್ದಿ ತಿಳಿದಾಗ ಅವನ ಹೃದಯದಲ್ಲಿ ಬಿರುಗಾಳಿಯೆದ್ದಂತೆ ಆಗಿ, ಅಲಿ ಖುಲಿ ಖಾನ್ ನನ್ನ ವಿರೋಧಿಯಾದನೆಂದು ಅವನ ಮನಸ್ಸು ಮುರಿದುಬಿಟ್ಟಿತು. ಅವನು ಸ್ವತಃ ತನ್ನನ್ನು ಯುದ್ಧದಲ್ಲಿ ಸೋಲುವುದಕ್ಕಿಂತ ತಾನು ಭಾಗವಹಿಸದೆ ತಟಸ್ಥನಾಗಿಬಿಡುವುದು ಒಳಿತೆಂದು ತೀರ್ಮಾನ ಮಾಡಿಕೊಂಡ.

ಸಾಕಷ್ಟು ಯೋಚಿಸಿದ ನಂತರ ಪೀರ್ ಮುಹಮ್ಮದ್ ಖಾನ್ ಯುದ್ಧದಿಂದ ಹೊರಗುಳಿದ. ಅಲಿ ಖುಲಿ ಖಾನ್, ಪೀರ್ ಮುಹಮ್ಮದ್ ಖಾನನ ಮುಂದೆ ಯುದ್ಧದಲ್ಲಿ ಭಾಗವಹಿಸುವಂತೆ ಕೇಳಿಕೊಂಡಾಗ ಅವನು ತಿರಸ್ಕರಿಸಿದ್ದ. ಇಬ್ಬರೊಳಗೆ ಯಾವ ಮಾತುಕತೆಯೂ ಸಂಧಾನಕ್ಕೆ ಬಾರದೆ ಹೋದಾಗ ಇಬ್ಬರ ಮಧ್ಯೆ ಯುದ್ಧನಡೆಯಿತು. ಭೀಕರ ಕಾಳಗ ನಡೆಯ ತೊಡಗಿದಾಗ ಪೀರ್ ಮುಹಮ್ಮದ್ ಖಾನ್ ಒಂದು ಎತ್ತರದ ಗುಡ್ಡದ ಮೇಲೆ ನಿಂತು ರಣರಂಗವನ್ನು ವೀಕ್ಷಿಸುತ್ತಿದ್ದ. ಅವನ ಕಣ್ಣಿಗೆ ಅಲಿ ಖುಲಿ ಖಾನ್ ರಣರಂಗದಲ್ಲಿ ಸೈನ್ಯದ ಮಧ್ಯೆ ನಿಂತು ಸೈನಿಕರನ್ನು ಕೂಗಿ ಹುರಿದುಂಬಿಸುತ್ತಿದ್ದುದು ಕಂಡುಬಂತು. ಈ ಮಧ್ಯೆ ಅವನ ದೃಷ್ಟಿ ಹೇಮೂನ ಧ್ವಜದ ಮೇಲೆ ಬಿತ್ತು. ಇದು ಯುದ್ಧವನ್ನು ನಿಲ್ಲಿಸಲು ಮಾಡುವ ಸೂಚನೆಯಾಗಿತ್ತು.

ಆದರೂ ಅವನು ಅಲ್ಲಿಂದ ತನ್ನ ಸೈನಿಕರಿಗೆ ಯುದ್ಧವನ್ನು ನಿಲ್ಲಿಸುವ ಆಜ್ಞೆಯನ್ನು ನೀಡಲಿಲ್ಲ ಮತ್ತೂ ಮುಂದುವರಿದು ಹೇಮೂನ ಹತ್ತಿರ ಹೋಗಿದ್ದ. ಹೇಮೂ ನೋಡುವಾಗ ಅಲಿ ಖುಲಿ ಖಾನ್ ಯುದ್ಧದಲ್ಲಿ ಸಂಪೂರ್ಣ ನಿರತನಾಗಿದ್ದ. ಅವನಿಂದ ಮುಖ ತಿರುಗಿಸಿದ್ದ. ಆದರೆ ಅಲಿ ಖುಲಿ ಖಾನ್ ಹಿಂದಿನಿಂದ ಬಳಸಿ ಹೇಮೂನ ಮುಂದೆ ನಿಂತು ಅವನ ಹೊಟ್ಟೆಗೆ ತನ್ನ ಬಾಣದಿಂದ ಘಾಸಿಗೊಳಿಸಿದಾಗ ಅವನು ಬಿದ್ದುಬಿಟ್ಟ. ಸೈನಿಕರು ಗಾಯಗೊಂಡ ಹೇಮೂನನ್ನು ಆನೆಯ ಮೇಲೆ ಎತ್ತಿ ಕೂರಿಸಿ ಕರೆದುಕೊಂಡು ಹೋದರು. ಹಾಯ್... ಹೋ ಎಂಬ ಶೂರ ಸೈನಿಕರ ಕೂಗು ಕೇಳಿಬಂತು! ಅಲಿ ಖುಲಿ ಖಾನ್ ಎತ್ತರದ ಸ್ಥಳಕ್ಕೆ ಹೋಗಿ ನಿಂತ. ಸೈನಿಕರು ಇವನನ್ನು ನೋಡುತ್ತಿದ್ದಂತೆ ಓಡಿ ಹೋಗತೊಡಗಿದರು. ಈ ಘಟನೆಗಳನ್ನು ನೋಡುತ್ತ್ ಪೀರ್ ಮುಹಮ್ಮದ್ ಖಾನ್ ತನ್ನ ಸ್ಥಾನದಲ್ಲಿ ನಾಚಿ ತಬ್ಬಿಬ್ಬಾಗಿ ನಿಂತಿದ್ದಾಗ ಅವನ ಸೈನ್ಯ ಲೂಟಿಪಾಟಿಯಲ್ಲಿ ನಿರತರಾಗಿದ್ದರು. ಈ ಯುದ್ಧದ ವಿಜಯ ಅಲಿ ಖುಲಿ ಖಾನ್‌ನ ಹೆಸರಲ್ಲಿ ಪ್ರಸಿದ್ಧವಾಯಿತು. ಈ ವಿಜಯದ ವಿವರಗಳು ಅಕ್ಬರನ ಆಸ್ಥಾನಕ್ಕೆ ತಲಪಿದಾಗ ಯಾರು ವೈರಿಗಳು ಯಾರು ಸ್ನೇಹಿತರು ಎಂಬ ಆಯ್ಕೆಯ ತೀರ್ಮಾನಕ್ಕೆ ಬರಲಾಯಿತು. ಅಲಿ ಖುಲಿ ಖಾನ್ ಮತ್ತು ಅವನ ವೀರ ಸರದಾರರಿಗೆ ಇನಾಮು, ಉಡುಗೊರೆಗಳನ್ನು ಅಕ್ಬರ್ ಬಾದಶಾಹ ನೀಡಿದ. ತನ್ನ ರಾಜ್ಯದಲ್ಲಿ ಅವರಿಗೆ ಉನ್ನತ ಪದವಿಯನ್ನು ನೀಡಿ ಗೌರವಿಸಿದ ಮತ್ತು ತನ್ನ ವಿರೋಧಿಗಳಿಗೆ ಸಜೆಯನ್ನು ನೀಡಿ ಶಿಕ್ಷಿಸಿದ.

ಹೇಮೂ ತೀರಿಕೊಂಡ ನಂತರ ಯಾರೂ ಕೂಡ ವಿರೋಧಿಗಳು ಜೀವಿಸಿರುವುದು ಸಾಧ್ಯವಿರಲಿಲ್ಲ. ಎಲ್ಲರೂ ಅಕ್ಬರ್ ಬಾದಶಾಹರ ಮುಂದೆ ಶರಣಾಗತರಾಗಿದ್ದರು. ಅವನು ರಾಜ್ಯದ ಆಡಳಿತವನ್ನು ಗಟ್ಟಿಯಾಗಿಸಿದ. ಎಲ್ಲ ಆಡಳಿತಾತ್ಮಕ ಕಾರ್ಯಗಳನ್ನು ಬಹಳ ಮುತವರ್ಜಿಯಿಂದ ನೋಡಿಕೊಂಡು, ಅರ್ಥ ವ್ಯವಸ್ಥೆಯನ್ನು ಸಮೃದ್ಧಿಗೊಳಿಸಿದ. ಅಕ್ಬರ್ ಬಾದಶಾಹನಿಗೆ ಈ ವಿಜಯ ಪ್ರಾಪ್ತಿಯಾದ ನಂತರ ತನ್ನ ರಾಜಧಾನಿಯನ್ನು ದೆಹಲಿಗೆ ಬದಲಾಯಿಸಿದ. ಸ್ವಲ್ಪ ದಿನಗಳ ಕಾಲ ದೆಹಲಿಯಲ್ಲಿ ನಿಂತು ಮತ್ತೆ ಲಾಹೋರಿನ ಕಡೆ ಪ್ರಯಾಣಿಸಿದ. ಹೈದರ್ ಬೇಗ್ ಸಾರ್‌ಬಾನನ ಮಗ ಶಾಹಮ್‌ಬೇಗ್ ಬಹಳ ಬುದ್ಧಿವಂತ, ಚಾಲಾಕಿನ ಸುಂದರ ಮೈಕಟ್ಟಿನ ಯುವಕನಾಗಿದ್ದ. ಇವನು ಒಂದು ಪ್ರೇಮದ ಸುಳಿಯಲ್ಲಿ ಸಿಲುಕಿದ.

**ಶಾಹ ಹಮ್‌ಬೇಗನ ಪ್ರೇಮದಲ್ಲಿ ಸಿಲುಕಿದ ಪ್ರಕರಣದ ಕಾರಣಕ್ಕೆ ಅಲಿ ಖುಲಿ ಖಾನನ ಬಂಡಾಯ:**

ಶಾಹಮ್ ಬೇಗ್ ಬಾಲ್ಯದಲ್ಲಿ ಚುಗ್ತಿ(ಚುಗ್ತಾಯಿ?) ಎಂಬ ಶ್ರೀಮಂತ ಮನೆತನದ

ಮಕ್ಕಳೊಂದಿಗೆ ಮದ್ರಸಾ ಪಾಠಶಾಲೆಯಲ್ಲಿ ಸಹಪಾಠಿಯಾಗಿದ್ದ. ಅವನು ಬಹಳ ಬುದ್ಧಿವಂತನಾಗಿದ್ದ. ಪಾಠದಲ್ಲಿ ಬಹಳ ಮುಂದೆಯಿದ್ದ. ಬೆಳೆದು ಯುವಕನಾದಾಗ ಯಾವಾಗಲೂ ಮಂದಸ್ಮಿತನಾಗಿ, ಆತ್ಮೀಯ ಗುಣದಿಂದಾಗಿ ಎಲ್ಲರೂ ಅವನಿಂದ ಆಕರ್ಷಣೆಗೆ ಒಳಗಾಗುತ್ತಿದ್ದರು. ಅವನ ಮಾತಿನಲ್ಲಿ ಮೋಡಿಮಾಡುವ ಗುಣವಿತ್ತು; ಜನ ತಲೆದೂಗುತ್ತಿದ್ದರು. ಬಾದಶಾಹ ಅಕ್ಬರನಿಗೆ ಅವನೊಂದಿಗೆ ಕಾಲಕಳೆಯುವುದೆಂದರೆ ತುಂಬ ಇಷ್ಟವಾಗಿತ್ತು. ಇದರಿಂದಾಗಿ ಅವನನ್ನು ತನ್ನ ಬಳಿ ಆಪ್ತನನ್ನಾಗಿ ಇರಿಸಿಕೊಂಡಿದ್ದ. ಮುಂದೆ ಇವನಿಗೆ ತುಂಬ ಭಡ್ತಿ ಕೂಡ ದೊರೆಯಿತು. ಜನರು ಕೂಡ ಇವನನ್ನು ತುಂಬ ಇಷ್ಟಪಟ್ಟುಕೊಂಡಿದ್ದರು. ಅಲಿ ಖುಲಿ ಖಾನ್‌ನೊಂದಿಗೆ ಈತನ ಸಖ್ಯವಿತ್ತು. ಅವನ ಸಾವಿರಾರು ಗೆಳೆಯರ ಪೈಕಿ ಅಲಿ ಖುಲಿ ಖಾನನ್ನು ಹೆಚ್ಚು ಪ್ರೀತಿ ಸಲುಗೆಯಿಂದ ಇರುತ್ತಿದ್ದ. ಅವನು ಈತನಿಗೆ ಬಹಳಷ್ಟು ಕೊಡುಗೆಗಳನ್ನು ನೀಡುತ್ತಿದ್ದ ಮತ್ತು ಸಹಾಯವನ್ನು ಮಾಡುತ್ತಿದ್ದ. ಅವಕಾಶ ಸಿಕ್ಕಾಗಲೆಲ್ಲ ಅವನನ್ನು ಗುಪ್ತವಾಗಿ ಭೇಟಿಯಾಗುತ್ತಿದ್ದ. ದಿನೇದಿನೇ ಇವರ ಮಧ್ಯೆ ಪ್ರೇಮ ಬೆಳೆದು, ಇಬ್ಬರೂ ಕೂಡ ಒಬ್ಬರನ್ನೊಬ್ಬರು ಬಿಟ್ಟು ಅಗಲಲಾರದಂತೆ ಆಪ್ತರಾಗಿದ್ದರು. ಅಲಿ ಖುಲಿ ಖಾನನ ಈ ಪ್ರೇಮ ಎಷ್ಟು ಬೆಳೆಯಿತೆಂದರೆ ಶಾಹಮ್‌ಬೇಗನ ಸ್ನೇಹ ಅತ್ಯಂತ ನಿಕಟವಾಗಿ, ದಿನವೂ ಅನ್ಯಮನಸ್ಕನಾಗಿ ಅವನ ಬಗ್ಗೆಯೇ ಯೋಚಿಸುತ್ತಿದ್ದ. ಇಬ್ಬರೂ ತಮ್ಮೊಳಗೆ ಪ್ರೇಮ ಪತ್ರವನ್ನು ಕೂಡ ಪರಸ್ಪರ ಬರೆಯುತ್ತಿದ್ದರು. ಈ ಪ್ರೇಮದ ಬೆಂಕಿ ಎಷ್ಟು ಭುಗಿಲೆದ್ದಿತೆಂದರೆ ಇಡೀ ವಿಶ್ವಕ್ಕೆ ಈ ಸಮಾಚಾರ ಹರಡಿತು.

'ನನ್ನ ವಿರಹದ ರಹಸ್ಯ ನಿನ್ನ ಪ್ರೇಮದಿಂದ ಬಯಲಾಯಿತು
ನಮ್ಮ ಪ್ರೇಮದ ರಹಸ್ಯವು ಜಗದೆಲ್ಲೆಡೆ ಹರಡಿತು'.

ಈ ಕಡೆ ಇವನು ಚಡಪಡಿಸಿದರೆ ಆ ಕಡೆ ಅವನು ಚಡಪಡುತ್ತಿದ್ದ. ಹೀಗೆ ಇವರ ಪ್ರೇಮ ಕತೆ ಜಗಜ್ಜಾಹೀರಾಗಿಬಿಟ್ಟಿತು. ಈ ಸುದ್ದಿ ಜನಪ್ರಿಯವಾದಾಗ ಪ್ರೇಮಿ ತನ್ನ ಈ ಬದನಾಮಿಯಿಂದ ಹಾಗೂ ತನ್ನ ವಿರಹವನ್ನು ಪ್ರೇಯಸಿಯ ಮೇಲೆ ಅಪವಾದವನ್ನು ಹೊರಿಸಲು ತಯಾರಾಗಿರಲಿಲ್ಲ. ಇದರಿಂದಾಗಿ ಅವನು ಪ್ರಿಯಕರನ ಬಳಿಹೋಗಿ ಹೇಳಿದ, 'ನಾನು ಈವತ್ತಲ್ಲ ನಾಳೆ ಕೊನೆಯ ಪ್ರಯಾಣದಲ್ಲಿ ಹೋಗುವವನಿದ್ದೇನೆ. ನನ್ನ ಬಳಿ ಸಮಯವಿಲ್ಲ'.

ಈ ಪ್ರೇಮದ ರೋಗಕ್ಕೆ ಔಷಧ ಅಂತಿಮ ಯಾತ್ರೆ
ಇದರಲ್ಲಿ ತನ್ನ ಹೃದಯ, ಪ್ರಾಣವ ತ್ಯಾಗ ಮಾಡಿದ.

ಬಾದಶಾಹ ಅಕ್ಬರನಿಗೆ ಈ ಬಗ್ಗೆ ಸಂಪೂರ್ಣ ಮಾಹಿತಿ ದೊರೆತಾಗ ಅವನು ಈ ಪ್ರೇಮ ಪ್ರಕರಣಕ್ಕೆ ಒಂದು ಅಂತ್ಯ ಸೂಚಿಸುವ ಬಗ್ಗೆ ಯೋಚಿಸಿದ. ಅಲ್ಲಿನ

ಕಾನೂನು ಪ್ರಕಾರ ಇವರಿಬ್ಬರನ್ನು ಬಂಧಿಸಿ ಈ ಅಪರಾಧಕ್ಕೆ ಮರಣದಂಡನೆಯನ್ನು ನೀಡಬೇಕಾಗಿತ್ತು. ಆದರೆ ಅವರ ಮಧ್ಯೆ ಪ್ರೇಮದ ತೀವ್ರತೆಯನ್ನು ಗಮನಿಸಿದಾಗ ಇವರಿಬ್ಬರ ಪ್ರಾಣದ ರಕ್ಷಣೆ ಬಹಳ ಮಹತ್ವದ್ದೆಂದು ಪರಿಗಣಿಸಿದ. ಶಾಹಮ್ ಬೇಗ್‌ನನ್ನು ಕರೆದು ಅವನನ್ನು ಗುರುಮಾನಕ್‌ಪುರಕ್ಕೆ ಕಳುಹಿಸಿದ. ಅಲ್ಲಿಂದ ಅವನು ಜೈಪುರಕ್ಕೆ ಹೋಗುವ ಇಚ್ಛೆಯನ್ನು ಪ್ರಕಟಿಸಿದ. ಯಾಕೆಂದರೆ ಈ ಸಂಪೂರ್ಣ ಪ್ರದೇಶವು ಅಫಘಾನಿಗಳ ವಶದಲ್ಲಿತ್ತು. ಖಾನೆ ಜಮಾನ್ ಶಾಹಮ್ ಬೇಗನಿಗೆ ಅಲ್ಲಾಹನಿಂದ ಒಳ್ಳೆಯ ಭಾಗ್ಯ ಒದಗಿ ಬಂದು ಅವನು ಯಾವಕಡೆ ತೆರಳಿದರೂ ವೈರಿಗಳು ಅವನೆದುರು ನಿಲ್ಲಲಾರದಂತಹ ಪರಿಸ್ಥಿತಿ ಉತ್ಪನ್ನವಾಯಿತು. ಆ ಕಾಲದ ಶೇರ್ ಘಡ, ಕನ್ನೋಜ್, ಬಹರಾಯಿಚ್, ಅವಧ್ ಸೇರಿದ ಪ್ರದೇಶ ಈಗಿನ ಲಕ್ನೋ ಎಂಬ ಹೆಸರಲ್ಲಿ ಪ್ರಸಿದ್ಧವಾಗಿದೆ. ಈ ಎಲ್ಲ ಇಲಾಖೆಯನ್ನು ಅವನು ತನ್ನ ವಶಪಡಿಸಿಕೊಂಡ. ಇವನ ಸೈನ್ಯದ ಶಕ್ತಿ ಕೂಡ ಹೆಚ್ಚುತ್ತ ಹೋಯಿತು. ಇವನು ಬಲಶಾಲಿಯಾಗುತ್ತ ಹೋಗಿ ತನ್ನದೇ ಆದ ಸ್ವತಂತ್ರ ರಾಜ್ಯವನ್ನು ಕಟ್ಟಿಕೊಂಡು. ಇವನು ಬಾದಶಾಹನಿಗೆ ಒಂದು ಪತ್ರವನ್ನು ಬರೆದು ತನ್ನ ವಿಜಯದ ವಾರ್ತೆಯನ್ನು ತಿಳಿಸಿ, ಅದರ ಜೊತೆಗೆ ಉಡುಗೊರೆ, ಕಾಣಿಕೆಗಳನ್ನು ಕಳುಹಿಸಿಕೊಟ್ಟ. ಈ ಪತ್ರದಲ್ಲಿ ಹಿಂದೆ ನಡೆದ ಘಟನೆಗಳಿಗೆ ಪಶ್ಚಾತ್ತಾಪ ಪಟ್ಟುಕೊಂಡು ಕ್ಷಮೆಯನ್ನು ಕೂಡ ಯಾಚಿಸಿದ್ದ.

ಮೌಲಾನಾ ಕಮಾಲುದ್ದೀನ್ ಲಾರಿಯ ಮಗ ಮೌಲಾನಾ ಅಲಾವುದ್ದೀನ್ ಮುಹಮ್ಮದ್ ಲಾರಿ ಧಾರ್ಮಿಕ ಜ್ಞಾನದಲ್ಲಿ ಪ್ರಸಿದ್ಧ ವಿದ್ವಾಂಸರಾಗಿದ್ದರು. ಇವರ ಖಾಸಗಿ ಮದ್ರಸಾವಿದ್ದು ಹೆಚ್ಚು ಕಮ್ಮಿ ೪೦ ವಿದ್ಯಾರ್ಥಿಗಳು ಇಲ್ಲಿ ವ್ಯಾಸಂಗ ಮಾಡುತ್ತಿದ್ದರು. ಮೌಲಾನಾ ಅಲಾವುದ್ದೀನ್ ಮುಹಮ್ಮದ್ ಲಾರಿ ಮತ್ತು ಖಾನೆ ಜಮಾನ್ ಶಾಹಮ್ ಬೇಗರ ಮಧ್ಯೆ ಗುರು ಶಿಷ್ಯ ಸಂಬಂಧವಿತ್ತು. ಇವರಿಬ್ಬರೂ ಅಕ್ಬರ್ ಬಾದಶಾಹರ ಆಪ್ತರಲ್ಲಿ ಸೇರಿಕೊಂಡಿದ್ದರು. ಬಾದಶಾಹನ ಜೊತೆಯಲ್ಲಿರುವಾಗ ಜ್ಞಾನದ ಮಾತುಗಳನ್ನು ಉಪದೇಶ ಮಾಡುತ್ತಿದ್ದರು. ಇವರು ಬಾದಶಾಹನ ವೈರಿಗಳ ಕಡೆಯ ಮಾತುಕತೆ, ಪತ್ರವ್ಯವಾಹರಗಳಿಗೆ ಬೇಕಾದ ಉತ್ತರವನ್ನು ತಯಾರಿಸಿಕೊಡುತ್ತಿದ್ದರು.

ಒಮ್ಮೆ ಬಾದಶಾಹರ ಮುಂದೆ ಒಂದು ಅರ್ಜಿಯನ್ನು ಸಲ್ಲಿಸಿದ್ದರು. 'ನಾವು ನಿಮ್ಮ ವೈರಿಗಳ ಪ್ರದೇಶಗಳನ್ನು ವಶಪಡಿಸಿಕೊಂಡಿದ್ದೇವೆ' ಎಂದು ತಿಳಿಸಿದ್ದರು. ಬಾದಶಾಹ ಈ ವಿಜಯಕ್ಕೆ ಶುಭಾಶಯಗಳನ್ನು ಕೋರಿದರು. ಈ ಪ್ರದೇಶಗಳಲ್ಲಿ ನೀವೇ ಆಡಳಿತ ನಡೆಸಿ ಎಂದು ಕೊಡುವ ಮೂಲಕ ಶಾಹಮ್ ಬೇಗನು ಹಿಂದೆ ಮಾಡಿದ ತಪ್ಪುಗಳಿಗೆ ಕ್ಷಮಾಪಣೆಯನ್ನು ನೀಡಿದ. ಹೀಗೆ ಬಾದಶಾಹನೊಂದಿಗೆ ಒಳ್ಳೆಯ ಸಂಬಂಧ ಬೆಳೆಸಿದ್ದರಿಂದ ಅವನಲ್ಲಿ ಹಿಂದೆ ಇದ್ದ ಭಯ ಸಂಶಯಗಳು ಮಾಯವಾದವು.

ವೈರಿಗಳಿಂದ ಬಾದಶಾಹನನ್ನು ದೂರವಿರಿಸುವುದಕ್ಕೆ ಬಹಳ ಶ್ರಮಪಟ್ಟಿದ್ದ.

**ಖಾನೆ ಖಾನ್ ಬಿರುದು ಪಡೆದ ಬೈರಮ್ ಖಾನನ ಬದುಕಿನ ಮುಖ್ಯ ವಿವರಗಳು:**

ಹುಮಾಯೂನ್ ಬಾದಶಾಹನ ಅಂತಿಮ ದಿನಗಳಲ್ಲಿ ಅವನ ಅಂತಿಮ ಇಚ್ಛೆಯ ಪ್ರಕಾರ ಅಕ್ಬರ್ ಬಾದಶಾಹನನ್ನು ಸಾಕಿ, ಸಲಹಿ, ನೋಡಿಕೊಳ್ಳುವ ಜವಾಬ್ದಾರಿಯನ್ನು ಭೈರಮ್ ಖಾನನಿಗೆ ವಹಿಸಿಕೊಡಲಾಗಿತ್ತು. ಭೈರಮ್ ಖಾನ್ ಇದರ ಪ್ರಕಾರ ರಾಜ್ಯದ ಆಡಳಿತವನ್ನು ಕೈಗೆತ್ತಿಕೊಂಡು ಸೂಕ್ತವಾಗಿ ನಡೆಸಿಕೊಂಡು ಬಂದಿದ್ದ. ರಾಜ್ಯದಲ್ಲಿ ಯಾವುದೇ ವಿಷಯಗಳು ನಡೆದರೂ ಅಕ್ಬರ್ ಬಾದಶಾಹನ ಮುಂದೆ ಬಂದು ತಿಳಿಸುತ್ತಿದ್ದ. ಎಲ್ಲೆಲ್ಲ ಅಗತ್ಯವಿರುವುದೋ ಅಲ್ಲಿಗೆಲ್ಲ ಸೈನ್ಯವನ್ನು ಕಳುಹಿಸುತ್ತಿದ್ದನಲ್ಲದೆ ವೈರಿಗಳನ್ನು ಎಲ್ಲೂ ನಿಲ್ಲಲು ಅವಕಾಶ ಸಿಗದಂತೆ ಓಡಿಸುತ್ತಿದ್ದ. ಈ ಕಾಲಘಟ್ಟದಲ್ಲಿ ಮೂರು ಸಾವಿರ ಕುದುರೆ ಸವಾರರನ್ನು ಯುದ್ಧಕ್ಕೆ ತಯಾರು ಮಾಡಲಾಗಿತ್ತು. ಪೀರ್ ಮುಹಮ್ಮದ್ ಖಾನ್ ಶೆರ್‌ವಾನಿಯು ಭೈರಮ್ ಖಾನನ ಗುರುಗಳಾಗಿದ್ದರು. ಆದರೆ ಅವನು ತೋರ್ಪಡಿಕೆಗೆ ಪ್ರೀತಿ ಗೌರವಗಳನ್ನು ವ್ಯಕ್ತಪಡಿಸಿದ್ದರೂ ಆಂತರಿಕವಾಗಿ ಅವನ ಮನಸ್ಸಿನಲ್ಲಿ ದ್ವೇಷ ತುಂಬಿತ್ತು. ಅವನು ಬಹಳ ಸಿಟ್ಟಿನ ಸ್ವಭಾವದವನಾಗಿದ್ದ. ಸಣ್ಣಪುಟ್ಟ ಸಾಮಾನ್ಯ ತಪ್ಪುಗಳಿಗೂ ದೊಡ್ಡ ಶಿಕ್ಷೆ ವಿಧಿಸುತ್ತಿದ್ದ. ಇದರಿಂದಾಗಿ ಪ್ರಜೆಗಳು ಅವನ ಆತುರದ ಈ ಗುಣದಿಂದಾಗಿ ಯಾವಾಗಲೂ ಸಿಟ್ಟಾಗುತ್ತಿದ್ದರು ಮತ್ತು ಅವನನ್ನು ಇಷ್ಟಪಡುತ್ತಿರಲಿಲ್ಲ. ಭೈರಾಮ್ ಖಾನ್ ಬಹಳ ಸಲ ಇವನಿಗೆ ತುಂಬ ಸಲ ಬುದ್ಧಿವಾದಗಳನ್ನು ಹೇಳಿದ್ದ. ಆದರೆ ಅವನು ಇದಕ್ಕೆಲ್ಲ ಸೊಪ್ಪು ಹಾಕದೆ ಇನ್ನಷ್ಟು ಹೆಚ್ಚು ಮಾಡತೊಡಗಿದ. ಪ್ರಜೆಗಳು ಇವನ ನೆರಳು ಕಂಡರೂ ಭಯಪಡತೊಡಗಿದ್ದರು. ಇವನ ಈ ವರ್ತನೆಯು ಹತೋಟಿ ಮೀರಿ ಬೆಳೆದಾಗ ಬಾದಶಾಹನ ಬಳಿಗೆ ದೂರು ಹೋಯಿತು. ಬಾದಶಾಹ ಅವನನ್ನು ಬಂಧಿಸಿದ. ಅವನ ಸಂಪೂರ್ಣ ಸೊತ್ತು ಸಾಮಾನುಗಳನ್ನು ಬಾದಶಾಹನ ಖಜಾನೆಗೆ ಜಮಾ ಮಾಡಲಾಯಿತು.

ಭೈರಾಮ್ ಖಾನ್ ಪ್ರಮುಖ ಸೇನಾಧಿಪತಿಯಾಗಿ ಆಡಳಿತಕ್ಕೆ ಸಂಬಂಧಿಸಿದ ಕೆಲಸಕಾರ್ಯಗಳನ್ನು ಬಹಳ ನಿಷ್ಠಾವಂತನಾಗಿ ಪ್ರಾಮಾಣಿಕತೆಯಿಂದ ನಡೆಸುತ್ತಿದ್ದ. ಇನ್ನೊಬ್ಬರು ಅವನ ಕೆಲಸಕಾರ್ಯಗಳಲ್ಲಿ ತಪ್ಪನ್ನು ಹುಡುಕಲು ಸಾಧ್ಯವಾಗದಂತೆ ತನ್ನ ಕೆಲಸವನ್ನು ಪೂರ್ಣಗೊಳಿಸುತ್ತಿದ್ದ. ನೌಕರರಿಂದ  ಹಿಡಿದು ಅಧಿಕಾರಿಗಳು, ಮಂತ್ರಿಗಳು, ಸರದಾರರು ಅವನ ಸಲಹೆ, ಅನುಮತಿಯನ್ನು ಪಡೆಯದೆ ಯಾವ ಕೆಲಸವನ್ನು ಕೂಡ ಮಾಡಲು ಸಾಧ್ಯವಾಗುತ್ತಿರಲಿಲ್ಲ. ಬಾದಶಾಹ ಅಕ್ಬರ್ ತನ್ನ ಎಂದಿನ ಅಭ್ಯಾಸದಂತೆ ಶಿಕಾರಿಯಲ್ಲಿ ಮಗ್ನನಾಗಿರುತ್ತಿದ್ದ. ಅವನ ಹಾಗಿನ ಶಿಕಾರಿ

ಯಾರೂ ಇರಲಿಲ್ಲ. ಅವನು ಇಟ್ಟ ಗುರಿ ಯಾವಾಗಲೂ ತಪ್ಪುತ್ತಿರಲಿಲ್ಲ. ಶಿಕಾರಿಯ ಹಿಂದೆ ಎಷ್ಟು ವೇಗವಾಗಿ ಓಡುತ್ತಿದ್ದನೆಂದರೆ ಹತ್ತು ದಿನಗಳ ಹಾದಿಯನ್ನು ಮೂರು ದಿನಗಳಲ್ಲಿ ಪೂರೈಸುತ್ತಿದ್ದ. ಒಮ್ಮೆ ಶಿಕಾರಿಯಲ್ಲಿ ಮಗ್ನನಾಗಿದ್ದಾಗ ರಾತ್ರಿಯಾಗಿತ್ತು. ಒಂದೇ ಸವನೆ ಮಳೆ ಸುರಿಯ ತೊಡಗಿತು. ನಾಲ್ಕೂ ದಿಕ್ಕಿನಲ್ಲಿ ನೀರು ತುಂಬಿಕೊಂಡಿತ್ತು. ನಾನು ಬೆಳಿಗ್ಗೆ ನಡೆದುಕೊಂಡೇ ನಗರಕ್ಕೆ ಹೋಗುತ್ತೇನೆ ಎಂದು ತನ್ನ ಜೊತೆಗಾರರಿಗೆ ಹೇಳಿದ್ದ. ಆದರೆ ಅಲ್ಲಿಂದ ನಗರವು ೧೨ ಮೈಲು ದೂರದಲ್ಲಿತ್ತು. ಆದರೆ ಅವನು ಬೆಳಿಗ್ಗೆ ಏಳುಗಂಟೆಗೆ ಸರಿಯಾಗಿ ಅರಮನೆ ತಲಪಿದ್ದ. ಜೊತೆಗಾರ ದರ್ಬಾರಿಗಳು ಕೆಸರು ತುಂಬಿದ ಹಾದಿಯಲ್ಲಿ ಬಿದ್ದು ಎದ್ದು ಏದುರುಸಿರುಬಿಡುತ್ತ ತುಂಬ ಸುಸ್ತಾಗಿ ಅವನ ನಂತರ ತಲಪಿದ್ದರು. ಅವರೆಲ್ಲರೂ ನೋಡುತ್ತಿದ್ದಂತೆ ಬಾದಶಾಹ ಕೋಟೆಯ ಮುಖ್ಯ ದ್ವಾರವನ್ನು ಆಗಲೇ ತಲಪಿ ಬಿಟ್ಟಿದ್ದ. ಸುಮ್ಮನೆ ತಮಾಷೆಗಾಗಿ ಅಲ್ಲಿದ್ದ ನಗಾರಿಯನ್ನು ಹೊಡೆದಿದ್ದ. ಖಾನೆ ಖಾನಾನ್ ಭೈರಮ್ ಖಾನ್ ಮೊಘಲ್ ವಂಶದ ಚಕ್ರವರ್ತಿಗಳ ಬಹಳ ಹಳೆಯ ಸರದಾರನಾಗಿದ್ದ. ಇವನ ಶ್ರಮ ಮತ್ತು ದೂರದರ್ಶಿತ್ವದಿಂದಾಗಿ ಅನೇಕ ರಾಜ್ಯಗಳು ಸಾಮ್ರಾಜ್ಯಕ್ಕೆ ಸೇರಿದ್ದವಲ್ಲದೆ, ಅಕ್ಬರನ ಸಾಮ್ರಾಜ್ಯ ವಿಸ್ತರಿಸಿದ್ದವು. ಬಾದಶಾಹ ಕೆಲವು ಪ್ರಮುಖ ಕಾರ್ಯಗಳನ್ನು ಭೈರಮ್ ಖಾನನಿಗೆ ಒಪ್ಪಿಸಿ ಇನ್ನಾರೂ ಆ ಕಾರ್ಯಗಳಲ್ಲಿ ಮಧ್ಯೆ ಪ್ರವೇಶಿಸಲಾರದಂತೆ ವ್ಯವಸ್ಥೆಯನ್ನು ಮಾಡಿದ್ದ. ಹುಮಾಯೂನ್ ಬಾದಶಾಹ ಕಾಬೂಲಿನಿಂದ ಹಿಂದುಸ್ಥಾನಕ್ಕೆ ಪ್ರವೇಶಿಸಿದಾಗ ಅವನು ಮತ್ತು ಅವನ ಬೆಂಬಲಿಗರ ಮಧ್ಯೆ ಕೆಲವು ಶರ್ತಗಳು ಮತ್ತು ಮಾತುಕತೆಗಳು ನಡೆದಿದ್ದವು. ಯಾವುದೇ ರಾಜ್ಯವನ್ನು ಜಯಿಸಿದರೂ ಅದರಲ್ಲಿ ಅರ್ಧ ಪಾಲು ಬೆಂಬಲಿಗರಿಗೆ ನೀಡಲಾಗುವುದೆಂಬ ಮಾತು ನೀಡಲಾಯಿತು. ನಾಣ್ಯ ಮತ್ತು ಮೊಹರು ರಾಜ್ಯದ ಹೆಸರಿನಲ್ಲಿದ್ದು, ಸಿಂಹಾಸನ ಬಾದಶಾಹನಲ್ಲಿದ್ದು, ಉಳಿದಂತೆ ಸೈನ್ಯ, ಆಡಳಿತ ವ್ಯವಸ್ಥೆಯನ್ನು ಸಂಬಂಧಿಸಿದ ರಾಜರ ಜವಾಬ್ದಾರಿಗೊಳಗಾಗಬೇಕಾಗಿತ್ತು. ಹುಮಾಯೂನನ ಸಂಪೂರ್ಣ ಬದುಕಿನಲ್ಲಿ ಇದೇ ಶರತ್ತುಗಳ ಮೇಲೆ ತನ್ನ ಆಳ್ವಿಕೆಯನ್ನು ನಡೆಸಿದ್ದ. ಮರಣ ಸಮೀಪಿಸಿದಾಗ ಜಲಾಲುದ್ದೀನ್ ಮುಹಮ್ಮದ್ ಅಕ್ಬರ್‌ನನ್ನು ತನ್ನ ನಂತರ ಸಾಮ್ರಾಟನನ್ನಾಗಿ ಮಾಡಬೇಕೆಂಬುದು ತನ್ನ ಅಂತಿಮ ಇಚ್ಛೆಯೆಂದು ಪ್ರಕಟಿಸಿದ್ದ. ಖಾನೆ ಖಾನಾನ್ ಬೈರಮ್ ಖಾನನು ನಿಷ್ಠಾವಂತನಾಗಿ ಆಡಳಿತ ವ್ಯವಸ್ಥೆಯನ್ನು ಸ್ಥಿರವಾಗಿ ಬಲಿಷ್ಠವಾಗಿ ಇರಿಸಲು ಬೆನ್ನೆಲುಬಾಗಿ ನಿಂತ. ಹಲವು ರಾಜ್ಯಗಳ ಮೇಲೆ ದಾಳಿ ನಡೆಸಿ, ಅನೇಕ ರಾಜ್ಯಗಳನ್ನು ಸಾಮ್ರಾಜ್ಯಕ್ಕೆ ಸೇರಿಸಿ ಒಂದು ಬಲಿಷ್ಠ ಸಾಮ್ರಾಜ್ಯವನ್ನು ಕಟ್ಟಲು ಸಹಕಾರಿಯಾಗಿದ್ದ. ವೈರಿಗಳನ್ನು ಮಧ್ಯದಲ್ಲೇ ನಿಷ್ಕ್ರಿಯರನ್ನಾಗಿಸಿ ಸಾಮ್ರಾಜ್ಯಕ್ಕೆ ಶರಣಾಗತರನ್ನಾಗಿ ಮಾಡಿದ.

ಅಕ್ಬರ್ ಬಾದಶಾಹನ ಸಾಮ್ರಾಜ್ಯದ ಧ್ವಜವನ್ನು ಹಿಂದುಸ್ಥಾನದ ಮೂಲೆ

ಮೂಲೆಗಳಲ್ಲೂ ವ್ಯಾಪಿಸುವಂತೆ ಬಲಿಷ್ಠವಾಗಿಸಿದ. ಬಾದಶಾಹನಿಗೆ ಎಲ್ಲೆಡೆಗಳಿಂದ ಸಲಾಮ್ ಹಾರೈಕೆಗಳು ಬರತೊಡಗಿದವು. ಅಲ್ಲಾಹನಿಂದ ನಾನು ಬೇಡಿಕೊಂಡ ಕೆಲವೊಂದು ನನ್ನ ಆಸೆಗಳು ಈಡೇರಿದಂತೆ ಖಾತ್ರಿಯಾಗಿತ್ತು. ಈ ಬಾದಶಾಹ ಸ್ವತಃ ತನ್ನ ಸಾಮ್ರಾಜ್ಯದ ಆಡಳಿತಾತ್ಮಕ ಕೆಲಸಗಳನ್ನು ತಾನೇ ಕೈಗೆತ್ತಿಕೊಳ್ಳುವ ಶಕ್ತಿ ತುಂಬುವಂತೆ ಆಗಲೆಂದು ನನ್ನ ದುವಾ ಹಾರೈಕೆ ಇತ್ತು. ಬಾದಶಾಹ ಮುಂದೆ ತಾನೇ ಸಾಮ್ರಾಜ್ಯದ ಆಳ್ವಿಕೆಯನ್ನು ನಡೆಸಿ ತನ್ನ ಶಕ್ತಿಯನ್ನು ಜಗತ್ತಿಗೆ ತೋರಿಸಿಕೊಡಬೇಕೆಂಬುದು ಕೂಡ ನನ್ನ ದುವಾ ಪ್ರಾರ್ಥನೆಯಾಗಿತ್ತು. ಬಾದಶಾಹ ಪ್ರಾಪ್ತವಯಸ್ಸಿಗೆ ಬಂದಾಗ, ಭೈರಾಮ್ ಖಾನನ ವಿರುದ್ಧ ಪಿತೂರಿಯ ಮಾತುಗಳು ಕಿವಿಗೆ ಬೀಳತೊಡಗಿದವು. ಅದರ ಉದ್ದೇಶವೇನಿತ್ತೆಂದರೆ ಬಾದಶಾಹನನ್ನು ಭೈರಾವ್ ಖಾನನಿಂದ ದೂರಮಾಡುವುದಾಗಿತ್ತು. ಶಿಕಾರಿಯ ಉದ್ದೇಶದಿಂದ ಆಗ್ರಾದಿಂದ ದೆಹಲಿಯ ಕಡೆ ಹೋದಾಗ ಶಿಕಾರಿಯಲ್ಲಿರುವ ಜೊತೆಗಾರರು ಅವನ ಜೊತೆಯಲ್ಲಿದ್ದರು. ಉಳಿದ ಆಸ್ಥಾನದ ಮಂತ್ರಿಗಳು, ಅಧಿಕಾರಿ ಸರದಾರರು, ನೌಕರರು ಆಗ್ರಾದಲ್ಲಿ ಉಳಿದಿದ್ದರು. ಬಾದಶಾಹ ದೆಹಲಿ ತಲಪಿದಾಗ ಅಧಿಕಾರಿಗಳು, ಸರದಾರರು ಒಂದು ಆಜ್ಞೆಯನ್ನು ಹೊರಡಿಸಿದ್ದರು. ಅದರಲ್ಲಿ 'ಯಾರು ನಮ್ಮ ಜೊತೆ ಇರ ಬಯಸುತ್ತಾರೋ ಅವರೆಲ್ಲರೂ ದೆಹಲಿಗೆ ಹೋಗಬೇಕು. ಇಲ್ಲದಿದ್ದಲ್ಲಿ ಆಗ್ರಾದಲ್ಲೇ ಇರಬೇಕಾಗುತ್ತದೆ' ಎಂದು ಅದರಲ್ಲಿ ಬರೆಯಲಾಗಿತ್ತು. ಆಗ್ರಾದ ಜನರು ಈ ಅಜ್ಞೆಯ ಹಿನ್ನೆಲೆಯನ್ನು ಅರ್ಥಮಾಡಿಕೊಳ್ಳಲು ಕಷ್ಟಪಟ್ಟುಕೊಂಡರು. ಭೈರಾಮ್ ಖಾನನ ಭಯದಿಂದ ಜನರು ದೆಹಲಿಗೆ ಹೊರಡಲು ತಯಾರಾದರು. ಈ ಪತ್ರದ ಬಗ್ಗೆ ಭೈರಾಮ್ ಖಾನನಿಗೆ ತಿಳಿದಾಗ ಅವನು ಕೂಡಲೇ ದರ್ಬಾರಿನ ಸಭೆ ಕರೆದ. ದರ್ಬಾರಿನಲ್ಲಿ ಗಟ್ಟಿಯಾಗಿ ಕೂಗಿ 'ಯಾರು ಬಾದಶಾಹನ ಜೊತೆಯಲ್ಲಿರಲು ಬಯಸುತ್ತಾರೋ ಅವರು ಆಗ್ರಾದಲ್ಲಿ ಇರಕೂಡದು. ಯಾಕೆಂದರೆ ಇದು ನನ್ನ ಹೆಸರಿಗೆ ಕಳಂಕ ತರುತ್ತದೆ. ನಾನು ಇಲ್ಲಿಯೇ ಇರಲು ಬಯಸುತ್ತೇನೆ. ಬಾದಶಾಹನ ಅನುಮತಿಯಿಲ್ಲದೆ ಯಾವ ಕೆಲಸವನ್ನೂ ಮಾಡಲು ಬಯಸುವುದಿಲ್ಲ. ದೇವರು, ಪೈಗಂಬರರು, ಕುರಾನ್‌ನ ಆಣೆ ಇದೆ, ನೀವೆಲ್ಲರೂ ಬಾದಶಾಹನ ಮುಂದೆ ಶಪಥ ಮಾಡಬೇಕಾಗಿದೆ' ಎಂದು ಹೇಳಿದ. 'ನಾನು ನನ್ನ ಮಕ್ಕಳು ಮತ್ತು ಹಿರಿಯ ಮಗ ಶೇರ್ ಅಲಿಯ ಜೊತೆಗೆ ಮಕ್ಕಾದ ಪವಿತ್ರ ಯಾತ್ರೆಗೆ ಹೊರಡುತ್ತೇನೆ' ಎಂದು ಕೂಡ ಹೇಳಿಕೆಯನ್ನು ನೀಡಿದ. ಆಗ್ರಾದ ಹಲವಾರು ಜನರು ದೆಹಲಿಯತ್ತ ಪ್ರಯಾಣ ಮಾಡಿದರು. ಭೈರಾಮ್ ಖಾನ ಬಾದಶಾಹನ ಹೆಸರಿಗೆ ಒಂದು ಪತ್ರವನ್ನು ಬರೆದ.

ಭೈರಮ್ ಖಾನ್ ಬರೆದ ಪತ್ರದಲ್ಲಿ 'ನಾನು ಇಂದಿನ ತನಕ ನಿಮ್ಮ ಅನ್ನ ಉಂಡು ಬೆಳೆದಿದ್ದೇನೆ. ತುಂಬ ಜಟಿಲವಾದ ಸಮಸ್ಯೆಗಳ ಸಂದರ್ಭದಲ್ಲಿ ಸಮರ್ಥರೀತಿಯಲ್ಲಿ ಕೆಲಸವನ್ನು ಮಾಡಿದ್ದೇನೆ. ನನಗೀಗ ಹಜ್ ಯಾತ್ರೆ ಮಾಡುವುದು

ಕರ್ತವ್ಯವಾಗಿದೆ. ನಾನು ನನ್ನ ಕುಟುಂಬದವರ ಜೊತೆಗೆ ಮಕ್ಕಾ ಯಾತ್ರೆಗೆ ಹೋಗಲು ಬಯಸುತ್ತೇನೆ. ಹಜ್ ಯಾತ್ರೆಯ ಬಳಿಕ ನಾನು ಬದುಕಿ ಉಳಿದರೆ ಮತ್ತೆ ಹಿಂತಿರುಗಿ ಬಂದು ನಿಮ್ಮ ಸೇವೆಯಲ್ಲಿ ನಿರತನಾಗಿರುತ್ತೇನೆ. ಇಲ್ಲವಾದಲ್ಲಿ ನನ್ನ ಭಾಗ್ಯದಲ್ಲಿ ಏನು ಬರೆದಿದೆಯೋ ಹಾಗಾಗುತ್ತದೆ' ಎಂದು ಬರೆದಿದ್ದ. ಭೈರಾಮ್ ಖಾನ್ ದೂರದ ಕೋಟೆಯ ಉಸ್ತುವಾರಿಯ ಕೆಲಸದಲ್ಲಿದ್ದ ತನ್ನ ಮಗ ಶೇರ್ ಅಲಿಗೆ ಮಕ್ಕಳನ್ನು ಕರೆತರಲು ಹೇಳಿ ಕಳುಹಿಸಿದ್ದ. ಇವರ ದಾರಿಕಾಯುತ್ತ ಕೂತ. ಆದರೆ ಬಾದಶಾಹನಿಗೆ ಈ ಸಂಗತಿ ತಿಳಿದಾಗ ಮಕ್ಕಳು ಬರುವುದನ್ನು ತಡೆಹಿಡಿಯಲು ಹೇಳಿದ. ಇದರಿಂದ ಭೈರಾಮ್ ಖಾನ್, ತನ್ನ ಮಕ್ಕಳನ್ನು ನೋಡಿಕೊಳ್ಳುವ ಜವಾಬ್ದಾರಿಯನ್ನು ಬಾದಶಾಹ ವಹಿಸಿಕೊಂಡಿದ್ದಾನೆ, ತನಗಿನ್ನೇನೂ ಯೋಚನೆಯಿಲ್ಲವೆಂದು ನಿಶ್ಚಿಂತನಾಗಿ, ತಾನೊಬ್ಬನೇ ಹಜ್ ಯಾತ್ರೆಗೆ ಹೊರಡಲು ತಯಾರಾದ. ಭೈರಾಮ್ ಖಾನನ ಪ್ರಮುಖ ಸರದಾರನಾಗಿದ್ದ ವಲೀ ಬೇಗ್ ಬಹಳ ಸಲ ಪಿತೂರಿಯ ಬಗ್ಗೆ ಮಾತಾಡುತ್ತಿದ್ದ. ನನಗೆ ಸೈನಿಕರ ನಡತೆಯಿಂದ ತೊಂದರೆಯಾಗುತ್ತಿದೆ, ತಾನು ಇಲ್ಲಿನ ಕೆಲಸ ಬಿಟ್ಟು ಕಾಬೂಲಿಗೆ ಹೋಗುತ್ತೇನೆ ಎನ್ನುತ್ತಿದ್ದ. ಕೆಲವು ಬಾರಿ ಅಕ್ಬರ್ ಬಾದಶಾಹನಿಗೆ ದೊರೆತ ಈ ಸಿಂಹಾಸನವು ಅವನ ಸಹೋದರ ಮುಹಮ್ಮದ್ ಹಕೀಮನಿಗೆ ನ್ಯಾಯವಾಗಿ ದೊರೆಯ ಬೇಕಿತ್ತು ಎಂದು ಆಗಾಗ ಅಧಿಕಪ್ರಸಂಗದ ಮಾತುಗಳನ್ನಾಡುತ್ತಿದ್ದ. ಇವನ ಕುತಂತ್ರದ ಮಾತುಗಳಿಗೆ ಭೈರಾಮ್ ಖಾನ್ ಬೆಲೆನೀಡಿರಲಿಲ್ಲ. ಅವನ ತಲೆಯಲ್ಲಿ ಬರೇ ಮಕ್ಕಾ ಯಾತ್ರೆ ಹೋಗುವ ಬಗ್ಗೆಯೇ ಯೋಚನೆಗಳು ತುಂಬಿತ್ತು ಮತ್ತು ಇದೇ ತೀರ್ಮಾನ ಮಾಡಿಕೊಂಡು ಮಕ್ಕಾ ಯಾತ್ರೆಗೆ ತಯಾರಿ ಮಾಡಿದ್ದ. ಹಜ್ ಯಾತ್ರೆಯ ಆಗಿನ ಹಾದಿಯಲ್ಲಿ ಜೋದ್‌ಪುರದ ಕೋಟೆಯ ಬಳಿ ಬಂದು ತಲಪಿದಾಗ ಅಲ್ಲಿನ ರಾಜ ಚಿರಪರಿಚಿತ ಮಾನ್ ದೇವನಾಗಿದ್ದ. ಇವನ ಒಡೆತನದಲ್ಲಿ ಇನ್ನಷ್ಟು ಕೋಟೆಗಳೂ ಇದ್ದವು. ಇವನು ಒಬ್ಬ ಬಾದಶಾಹನ ಹಾಗೆ ವೈಭವದಲ್ಲಿ ರಾಜ್ಯವನ್ನು ಆಳುತ್ತಿದ್ದ. ೨೦ ಸಾವಿರ ಸೈನ್ಯ ಇವನ ಬಳಿಯಿತ್ತು. ಹೀಗೆ ಆ ಪ್ರದೇಶದಲ್ಲಿ ಇನ್ನೂ ಹಲವು ರಾಜರು ಇದ್ದರು. ಇವರೆಲ್ಲರೂ ರಾಜಪೂತರಾಗಿದ್ದು ಪರಸ್ಪರ ಒಗ್ಗಟ್ಟಿನಲ್ಲಿದ್ದರು. ಅವನಿಗೆ ಭೈರಾಮ್ ಖಾನ್ ಈ ಕಡೆ ಬಂದದ್ದು ತಿಳಿದು ಕೋಟೆಯಿಂದ ಹೊರಬಂದು ನನ್ನನ್ನು ಸ್ವಾಗತಿಸಿ ಅತಿಥಿ ಸತ್ಕಾರ ಮಾಡಿದ. ಇವನನ್ನು ಭೇಟಿಯಾಗಿ ಭೈರಾಮ್ ಖಾನನಿಗೂ ತುಂಬ ಸಂತೋಷವಾಯಿತು. ಸ್ವಲ್ಪಹೊತ್ತು ಕಳೆದ ನಂತರ ಅಲ್ಲಿಂದ ಹೊರಡಲು ಅವನಿಂದ ಅನುಮತಿ ಕೇಳಿದ. ಈ ರಾಜ ಮಹಾರಾಜರ ಜೊತೆಗೆ ಪತ್ರವ್ಯವಹಾರ ನಡೆಯುತ್ತಿತ್ತು. ಇವರು ಕಾಣಿಕೆ ಕೊಡುಗೆಗಳನ್ನು ವಿನಿಮಯ ಮಾಡಿಕೊಳ್ಳುತ್ತಿದ್ದರು. ಅವನು, 'ನಿಮ್ಮ ಬಾದಶಾಹ ಮತ್ತು ಅಧಿಕಾರಿಗಳು ಇಲ್ಲಿಗೆ ಭೇಟಿಗಾಗಿ ಬರಲಿದ್ದೇವೆಂದು ಹಲವು ಬಾರಿ ಹೇಳಿದ್ದರೂ ನಮ್ಮಲ್ಲಿಗೆ ಭೇಟಿ ನೀಡಲು ಯಾರೂ ಬರಲಿಲ್ಲ' ಎಂದು ಹೇಳಿದ. ಆದರೆ ನೀವು ಸ್ವತಃ ನನ್ನ ಮನೆಗೆ ಕಾಲ್ನಡಿಗೆಯಲ್ಲಿ

ಬಂದಿದ್ದೀರಿ. ನಾನು ಬಹಳ ಸಂತಸಪಟ್ಟಿದ್ದೇನೆ. ನಮಗೆ ಯಾವಾಗಲೂ ಭಯವಿದ್ದೇ ಇರುತ್ತದೆ. ನಮಗೆ ನಿಮ್ಮ ರಕ್ಷಣೆಯ ಸಹಾಯ ಅಗತ್ಯವಾಗಿ ಬೇಕಿರುತ್ತದೆ. ಭೈರಾಮ್ ಖಾನ್ ಮಾನ್ ದೇವನ ಮಾತು ಕೇಳಿ ನನ್ನ ಸಲಹಾ ಮಂತ್ರಿ ವಲೀ ಖಾನ್‌ನನ್ನು ನಿಮ್ಮ ಬಳಿ ಕಳುಹಿಸುತ್ತೇನೆ ಎಂದು ಮಾತು ಕೊಟ್ಟ.

ಅಲ್ಲಿಂದ ಭೈರಾಮ್ ಖಾನ್ ಲಾಹೋರಿನ ಕಡೆ ಪ್ರಯಾಣ ಬೆಳೆಸಿದ. ಅಲ್ಲಿ ಸ್ವಲ್ಪ ಹೊತ್ತು ಕಳೆದು ಪ್ರಯಾಣ ಮುಂದುವರಿಸಿ ಖೊರಾಸಾನಿನ ಸರಹದ್ದು ತಲಪಿದ. ಅಲ್ಲಿ ಬಹಳ ಜನರು ಭೈರಾಮ್ ಖಾನನ್ನು ಭೇಟಿಯಾಗಲು ಬಂದರು. ಅವರ ಜೊತೆಯಲ್ಲಿ ದೊಡ್ಡದೊಂದು ಸೈನ್ಯವೂ ಇತ್ತು. ಅಲ್ಲಿನ ಜನರಿಂದ ಸೈನಿಕರು ಬಲಾತ್ಕಾರವಾಗಿ ಕರವಸೂಲಿ ಮಾಡುತ್ತಿದ್ದರು. ಅಕ್ಬರ್ ಬಾದಶಾಹನಿಗೆ ಈ ವರ್ತಮಾನ ತಿಳಿದಾಗ ಅವನು ಕೆಲವು ಸರದಾರರನ್ನು ಮೂರು ಸಾವಿರ ಕುದುರೆ ಸವಾರ ಸೈನಿಕರೊಂದಿಗೆ ಕಳುಹಿಸಿ ಭೈರಾಮ್ ಖಾನ್ ಅಲ್ಲಿದ್ದಾರೆ, ಅವರು ಆ ಸೈನಿಕರನ್ನು ಓಡಿಸುವ ವ್ಯವಸ್ಥೆ ಮಾಡುತ್ತಾರೆಂದು ಹೇಳಿ ಕಳುಹಿಸಿದ. ಬಾದಶಾಹನ ಸೈನಿಕರು ಭೈರಾಮ್ ಖಾನನ ಬಳಿ ಬರತೊಡಗಿದರು. ಆದರೆ ಅವನು ತುಂಬ ಶೂರನಾಗಿದ್ದುದರಿಂದ ಅವರನ್ನು ಸದೆಬಡಿದು ಹಾಕಿದ. ಪೀಡಕರ ಸೈನಿಕರು ಓಡುವಂತಾಯಿತು. ಕೆಲವರು ಸತ್ತು ಹೋದರು, ಕೆಲವರು ಗಾಯಗೊಂಡು ಬಿದ್ದರು, ಉಳಿದವರು ಅಲ್ಲಿಂದ ಓಡಿಹೋದರು. ಬಾದಶಾಹರ ಸೈನಿಕರು ಯಾವುದೇ ರೀತಿಯ ನಷ್ಟಕ್ಕೊಳಗಾಗದೆ ಸುರಕ್ಷಿತರಾಗಿದ್ದರು. ಮರುದಿನ 'ಸತ್ತು ಬಿದ್ದವರ ಶವಗಳನ್ನು ಮೈದಾನದಲ್ಲಿ ದಫನ ಮಾಡುವ ವ್ಯವಸ್ಥೆ ಮಾಡಿ' ಎಂದು ಹೇಳಿ ಶವಸಂಸ್ಕಾರಕ್ಕೆ ಏರ್ಪಾಡು ಮಾಡಿದ. ರಾತ್ರಿಯಾದಾಗ ಹತ್ತಿರದಲ್ಲಿ ಒಂದು ಪರ್ವತದ ಒಳಗೆ ಒಂದು ಗವಿಯಿದೆ. ಇದು ಐದು ಮೈಲು ಉದ್ದವಿದೆ. ಈ ಗವಿಯಲ್ಲಿ ಒಬ್ಬ ಬಾದಶಾಹ ಇದ್ದಾನೆ, ಅವನ ಬಳಿ ತನ್ನದೇ ಆದ ಸೈನ್ಯವಿತ್ತು, ಈ ಪರ್ವತ ಪ್ರದೇಶದಲ್ಲಿ ನೀರು ಸಮೃದ್ಧವಾಗಿದ್ದು ಜನವಸತಿ ತುಂಬ ದಟ್ಟವಾಗಿತ್ತು. ಅವನು ನಾಲ್ಕೂದಿಕ್ಕಿನಲ್ಲಿ ಹೊರಗಿನವರ ದಾಳಿಯಿಂದ ತನ್ನ ರಾಜ್ಯದ ರಕ್ಷಣೆಗೆ ಬಲವಾದ ಆವರಣವನ್ನು ನಿರ್ಮಿಸಿದ್ದ.

ಖಾನೆ ಖಾನಾನ್ ಭೈರಾಮ್ ಖಾನ ಅಲ್ಲಿ ಅವನ ಬಳಿ ತಂಗಿ ರಾತ್ರಿಯನ್ನು ಕಳೆದ. ಇವನನ್ನು ಅಲ್ಲಿನ ರಾಜ ತುಂಬ ಆದರದಿಂದ ನೋಡಿಕೊಂಡ. ಅವರಿಗೆ ಚೆನ್ನಾಗಿ ಆತಿಥ್ಯ ನೀಡಿ ಸತ್ಕರಿಸಿದ. ತನ್ನ ಕೆಲವು ನೌಕರರನ್ನು ಅವರ ಸೇವೆಗಾಗಿ ಅಲ್ಲಿನ ರಾಜ ವ್ಯವಸ್ಥೆ ಮಾಡಿಕೊಟ್ಟಿದ್ದ. ಭೈರಾಮ್ ಖಾನನನ್ನು ತುಂಬ ಆದರ ಪೂರ್ವಕ ನೋಡಿಕೊಂಡ. ಅಲ್ಲಿಗೆ ಓರ್ವ ರಾಜ ಪರ್ವತದ ತಪ್ಪಲಲ್ಲಿ ಈ ಪ್ರದೇಶವನ್ನು ಆಕ್ರಮಿಸಲು ಒಮ್ಮೆ ಸೈನಿಕರೊಂದಿಗೆ ಬಂದು ಬೀಡು ಬಿಟ್ಟಿದ್ದ. ರಾತ್ರಿ ಹೊತ್ತು

ದರೋಡೆಕೋರರರಂತೆ ಒಳ ಹೊಕ್ಕು ಕೈಗೆ ಸಿಕ್ಕ ಕುದುರೆಗಳು, ವಸ್ತುಗಳನ್ನು ಸಾಮಾನುಗಳನ್ನು ಹೊತ್ತೊಯ್ಯುತ್ತಿದ್ದರು. ಹುಸೈನ್ ಖಾನ್ ಎಂಬ ಸರದಾರನನ್ನು ಇದರ ಬಗ್ಗೆ ಉಸ್ತುವಾರಿ ನೋಡಿಕೊಳ್ಳಲು ಮತ್ತು ನಿಮ್ಮ ರಾಜ್ಯಕ್ಕೆ ರಕ್ಷಣೆ ನೀಡಲು ಹೇಳುತ್ತೇನೆಂದು ಭೈರಾಮ್ ಖಾನ್ ಆಶ್ವಾಸನೆ ನೀಡಿದ. ಅದಕ್ಕೆ 'ನನ್ನೊಬ್ಬನಿಗಾಗಿ ಈ ರೀತಿ ವ್ಯವಸ್ಥೆ ಮಾಡಿದರೆಂಬ ಕಾರಣಕ್ಕೆ ಅಸೂಯೆಯಿಂದ ಇತರ ರಾಜರುಗಳು ಕಿರುಕುಳ ನೀಡಲು ಶುರುಮಾಡಬಹುದು. ಅದಕ್ಕಾಗಿ ನಾನು ಸ್ವತಃ ಬಾದಶಾಹನ ಬಳಿ ಹೋಗಿ ರಕ್ಷಣೆಯನ್ನು ನೀಡಲು ಕೇಳಿಕೊಳ್ಳುತ್ತೇನೆ' ಎಂದು ಹೇಳಿದ.

ಇಲ್ಲಿಂದ ಬೀಳ್ಕೊಟ್ಟು ಭೈರಾಮ್ ಖಾನ್ ಅಕ್ಬರ್ ಬಾದಶಾಹನ ಬಳಿ ಹೋಗುವ ನಿಶ್ಚಯ ಮಾಡಿಕೊಂಡ. ಅಕ್ಬರ್ ಬಾದಶಾಹನಿಗೆ ಭೈರಾಮ್ ಖಾನನ ಆಗಮನದ ವಾರ್ತೆ ತಿಳಿದಾಗ ಅವನೇ ಸ್ವತಃ ತಾನೇ ಸ್ವಾಗತಿಸಲು ಬಂದ. ತನ್ನ ಸವಾರಿಯಿಂದ ಕೆಳಗಿಳಿದ ಭೈರಾಮ್ ಖಾನ ಬಾದಶಾಹನಿಗೆ ಸಲಾಮ್ ಸಲ್ಲಿಸಿದ. ಬಾದಶಾಹ ಭೈರಾಮ್ ಖಾನನನ್ನು ಬಿಗಿದಪ್ಪಿ ಆಲಂಗಿಸಿ ಸ್ವಾಗತಿಸಿದ. ಅವನ ಕೈಹಿಡಿದು ದರ್ಬಾರಿಗೆ ಕರೆತಂದ. ಅವನೊಂದಿಗೆ ಬಹಳ ಆತ್ಮೀಯವಾಗಿ ವ್ಯವಹರಿಸಿದ. ಮರುದಿನ ಸ್ವತಃ ಅವನು ತಂಗಿದ್ದ ಸ್ಥಳಕ್ಕೆ ಬಾದಶಾಹ ಹೋಗಿ ಅವನ ಹಿಂದಿನ ನಿಷ್ಠಾವಂತ ಸೇವೆಗಾಗಿ ಧನ್ಯವಾದಗಳನ್ನು ಸಲ್ಲಿಸಿದ. ಮಾತುಕತೆಯ ಮಧ್ಯೆ ಮಕ್ಕಾ ಯಾತ್ರೆಗೆ ಹೊರಟ ಅವನಿಗೆ ಒಪ್ಪಿಗೆ ಮತ್ತು ಸಹಕಾರ ನೀಡಿದ.

ಬಾದಶಾಹ ೧೨ಲಕ್ಷ ಟಿಕ್ಕಾವನ್ನು ಹಜ್ ಯಾತ್ರೆಯ ಸಂದರ್ಭದ ಖರ್ಚಿಗಾಗಿ ನೀಡಿದ. ಭೈರಾಮ್ ಖಾನನ ಮಡದಿ ಮಕ್ಕಳು ಕೂಡ ಹಜ್ ಯಾತ್ರೆಯಲ್ಲಿ ಪಾಲ್ಗೊಳ್ಳಲು ಅನುಮತಿ ನೀಡಿದ. ಹೀಗೆ ಹಜ್ ಯಾತ್ರೆಯ ಇರಾದೆಯೊಂದಿಗೆ ಹಾದಿಯಲ್ಲಿ ಗುಜರಾತಿನ ಪಟನ್‌ಗೆ ತಲಪಿದ. ಆಗ ಸಂಪೂರ್ಣ ಗುಜರಾತು ಜಂಘರ್ ಖಾನನ ಆಳ್ವಿಕೆಗೆ ಒಳಪಟ್ಟಿತ್ತು. ಅಲ್ಲಿ ಒಂದು ದೊಡ್ಡ ಕೊಳವಿತ್ತು. ಅದರ ದಡದಲ್ಲಿ ಭೈರಾಮ್ ಖಾನ್ ನಮಾಜು ಮಾಡಲು ನಿಂತ. ನಮಾಜಿಗೆ ನಿಂತಿದ್ದ ಭೈರಾಮ್ ಖಾನನ ಮೇಲೆ ಹೆಚ್ಚುಕಮ್ಮಿ ಮುನ್ನೂರು ಕುದುರೆ ಸವಾರರು ಥಟ್ಟನೆ ದಾಳಿಮಾಡಿ ಅವನನ್ನು ಕೊಂದು ಓಡಿಹೋದರು. ಅವನ ಭಾಗ್ಯವೆಂದರೆ ಸಾಯುವಾಗ ಶಹಾದತ್(ಹುತಾತ್ಮ)ನ ಪುಣ್ಯವನ್ನು ಗಳಿಸಿದ. ಈ ಕೊಲೆ ಹಿಜರಿ ವರ್ಷ ಸನ್ ೯೬೭ರಲ್ಲಿ ನಡೆಯಿತು. ಭೈರಾಮ್ ಖಾನನ ಮಗ ಅಬ್ದುಲ್ ರಹೀಮ್ ಏಳು ವರ್ಷ ವಯಸ್ಸಿನವನಾಗಿದ್ದ. ಬಾದಶಾಹ ಇವನನ್ನು ತನ್ನ ಸುಪುರ್ದಿನಲ್ಲಿಟ್ಟುಕೊಂಡು ಸಾಕಿದ. ಆಕಾಲದ ದೊಡ್ಡ ವಿದ್ವಾಂಸರಿಂದ ಅವನಿಗೆ ವಿದ್ಯಾಭ್ಯಾಸವನ್ನು ನೀಡುವ ಏರ್ಪಾಡು ಮಾಡಿದ. ಅವನು ಮದ್ರಸಾ ವಿದ್ಯಾಭ್ಯಾಸಕ್ಕೆ ಸಂಬಂಧಿಸಿದ ಎಲ್ಲ ಗ್ರಂಥಗಳನ್ನು ಓದಿ

ಎಷ್ಟು ಪರಿಣಿತನಾದನೆಂದರೆ ಯಾವುದೇ ವಿದ್ವಾಂಸ ಕೂಡ ಅವನ ಎದುರು ವಾದಗಳಲ್ಲಿ ಜಯಿಸುತ್ತಿರಲಿಲ್ಲ.

**ಭೈರಾಮ್ ಖಾನನ ಮರಣದ ನಂತರ ಸ್ವತಃ ಅಕ್ಬರ್ ಬಾದಶಾಹ ಸಾಮ್ರಾಜ್ಯದ ಆಡಳಿತ ನಡೆಸಲು ತೊಡಗಿದ ವಿವರಗಳು:**

ಖಾನೆ ಖಾನಾನ್ ಭೈರಾಮ್ ಖಾನನ ಮರಣಾ ನಂತರ ಅಕ್ಬರ್ ಬಾದಶಾಹ ಸಾಮ್ರಾಜ್ಯದ ಆಡಳಿತದ ಜವಾಬ್ದಾರಿಯನ್ನು ಸ್ವತಃ ವಹಿಸಿಕೊಂಡ. ತನಗೆ ಬೇಕಾದ ಆಪ್ತ ಜನರಿಗೆ ತರಬೇತಿ ನೀಡಿ ಅಧಿಕಾರಿಗಳನ್ನಾಗಿ ನೇಮಿಸಿದ. ಭೈರಾಮ್ ಖಾನ ಹಿಂದೆ ಕೆಲಸದಿಂದ ಕಿತ್ತು ಹಾಕಿದ ಪೀರ್ ಮುಹಮ್ಮದ್ ಖಾನ್ ಶೇರ್‌ವಾನಿ ಬಹಳ ನೊಂದುಕೊಂಡಿದ್ದ ಮತ್ತು ಅವನು ತನ್ನ ಮನಸ್ಸಿನಲ್ಲಿ ಯಾವಾಗಲೂ ಒಳಗೊಳಗೇ ಕೊರಗುತ್ತಿದ್ದ ಮತ್ತು ಅವರ ಮಧ್ಯೆ ಪರಸ್ಪರ ಅಸಮಾಧಾನ ಮತ್ತಷ್ಟು ಬೆಳೆದಿತ್ತು. ಇವರ ಮಧ್ಯೆ ಹೊಸ ಪಿತೂರಿ ನಡೆದಾಗ ಬಾದಶಾಹರ ಆಪ್ತವಲಯದ ಬಹದ್ದೂರ್ ಖಾನ್ ಮಧ್ಯೆ ಪ್ರವೇಶಿಸಿ ಒಳ್ಳೆಯ ಮಾತುಗಳನ್ನಾಡಿ ತಣಿಸುತ್ತಿದ್ದ. ಒಮ್ಮೆ ಬಾದಶಾಹರ ಶರಾಬು ಸೇವನೆಯ ಆಪ್ತವಲಯದ ಸಭೆಯಲ್ಲಿ ಬಹದ್ದೂರ್ ಖಾನ್, 'ನಿನ್ನ ಸಹೋದರ ನನ್ನನ್ನು ಬಾದಶಾಹನ ಕಾರ್ಯಕಲಾಪಗಳಿಂದ ದೂರವಿಟ್ಟಿದ್ದಾನೆ. ಅವನೀಗ ಪ್ರಸಿದ್ಧಿಗೆ ಬಂದಿದ್ದಾನೆ' ಎಂದು ತನ್ನ ಖಾಸಗಿ ಮಾತುಗಳನ್ನು ಆಡಿ ಬಾದಶಾಹನಿಗೆ ತಲಪುವಂತೆ ಮಾಡಿದ್ದ. ಅಕ್ಬರ್ ಬಾದಶಾಹ ಇದನ್ನು ಕೇಳಿ 'ಅವನನ್ನು ಕರೆಯಿಸಿ' ಎಂದು ಆಜ್ಞಾಪಿಸಿದ. ಯಮುನಾ ನದಿಯ ತಟದ ಹಾದಿಯಲ್ಲಿ ಬಹದ್ದೂರ್ ಖಾನ್, ಖಾನೆ ಝಮಾನ್ ಪೀರ್ ಮುಹಮ್ಮದ್ ಖಾನ್ ತನ್ನ ಸಹೋದರರ ಜೊತೆಗೆ ಕೂತಿದ್ದಾಗ ಬಂದು ಸೇರಿದ. 'ನಿನ್ನ ಸಹೋದರನನ್ನು ಬಾದಶಾಹ ಕರೆತರಲು ಹೇಳಿದ್ದಾರೆ' ಎಂದು ಹೇಳಿದ. ಅಲ್ಲಿ ದೋಸ್ತಂ ಸುಲ್ತಾನ್ ಎಂಬ ಅಧಿಕಾರಿಯೂ ಕೂಡ ಉಪಸ್ಥಿತನಿದ್ದ. ಅವನು ಬಹದ್ದೂರ್ ಖಾನ್‌ನ ಬೆಂಬಲಿಗರನ್ನು ಬಂಧಿಸಿದ. 'ನಿನಗೆ ನಾನು ಯಾರೆಂಬುದು ತಿಳಿದಿಲ್ಲ. ನಾನು ಒಂದು ಸನ್ನೆ ಮಾಡಿದರೆ ನಿಮ್ಮೆಲ್ಲರನ್ನು ತುಂಡುತುಂಡಾಗಿಸುವೆ' ಎನ್ನುತ್ತ ಸಿಟ್ಟಾಗಿ ಬಹದ್ದೂರ್ ಖಾನ್ ಅಲ್ಲಿಂದ ಹೊರಟುಹೋದ. ಪೀರ್ ಮುಹಮ್ಮದ್ ಖಾನನ ಸಹೋದರ ಬಾದಶಾಹನ ಬಳಿಗೆ ಹೋಗಲು ತಯಾರಾದ. ಇದರಿಂದ ಅವನು ಸಂತಸಪಟ್ಟುಕೊಂಡ. 'ಈ ಎಲ್ಲರೀತಿಯ ಅಪವಾದಗಳನ್ನು ನಾನು ಎದುರಿಸುತ್ತಿರುವುದು ಇವನ ಕಾರಣದಿಂದಲೇ' ಎಂದು ಹೇಳಿದ.

'ಈಗ ಆತಂಕದ ಕ್ಷಣಗಳು ನಿವಾರಣೆಯಾಗಿವೆ. ನಿನಗೆ ಅಲ್ಲಾಹನ ಕೃಪೆ ಇರಲಿ! ನೀನು ಈ ಪಿತೂರಿ ಕುತಂತ್ರಗಳ ಜಾಲದಿಂದ ದೂರವಿರು' ಎಂದು ಕೂಡ ಅವನು

ಹಾರೈಸಿದ. ಆದರೆ ಅವನು ತನ್ನ ಎಂದಿನ ಅಭ್ಯಾಸ ಬಲದಿಂದ ಹೊರಬಂದಿರಲಿಲ್ಲ. ಬಾದಶಾಹನ ವಲಯದಲ್ಲಿ ಪಿತೂರಿ ಮಾಡುತ್ತಲೇ ಇದ್ದ. ಇವನು ಅಲ್ಲಿ ಎಷ್ಟು ಗಟ್ಟಿಯಾಗಿ ನೆಲೆನಿಂತನೆಂದರೆ ಇವನ ಮಾತಿನ ಮೋಡಿಗೊಳಗಾಗಿ ಬಾದಶಾಹನೂ ಇವನ ಪರವಾಗಿ ನಿಂತ. ಖಾನೆ ಝಮಾನ್ ಪೀರ್ ಮುಹಮ್ಮದ್ ಖಾನನನ್ನು ಓಡಿಸಲು ಒಂದು ಸೈನ್ಯವನ್ನು ಕಳುಹಿಸಲು ಬಾದಶಾಹ ಆಜ್ಞೆ ನೀಡಿದ. ಇದು ಪೀರ್ ಮುಹಮ್ಮದ್ ಖಾನನಿಗೆ ಈ ವಿಷಯ ತಿಳಿದಾಗ ತನಗೆ ಕ್ಷಮಾಪಣೆ ನೀಡಲು ಅರ್ಜಿಪತ್ರ ಬರೆದು, ತನ್ನನ್ನು ಕೆಲಸದಿಂದ ವಜಾ ಮಾಡಲು ಕಾರಣವೇನು? ನನ್ನ ಮೇಲೆ ಆಸ್ಥಾನದ ಅಧಿಕಾರಿಗಳು ಯಾಕಿಷ್ಟು ದ್ವೇಷಿಸುತ್ತಿದ್ದಾರೆ? ನಾನು ನಿಮ್ಮ ಸಾಮ್ರಾಜ್ಯಕ್ಕೆ ಹಲವಾರು ರಾಜ್ಯಗಳನ್ನು ಗೆದ್ದು ಸೇರಿಸಿ ವಿಸ್ತರಿಸುವುದಕ್ಕೆ ನೆರವಾದೆ. ನಾನು ಸತ್ಯ ಮತ್ತು ಪ್ರಾಮಾಣಿಕತೆಯಿಂದ ನಿಷ್ಠಾವಂತನಾಗಿ ನಿಮ್ಮ ಸೇವೆ ಮಾಡಿದ್ದೇನೆ. ನನ್ನ ದೇಹದಲ್ಲಿ ಪ್ರಾಣ ಎಲ್ಲಿವರೆಗೆ ಇರುವುದೋ ಅಲ್ಲಿಯ ತನಕ ನಿಮ್ಮ ಸೇವೆ ಮಾಡುತ್ತ ಇರುತ್ತೇನೆ ಎಂದು ತಿಳಿಸಿದ. ಈ ಪತ್ರವನ್ನು ಬಾದಶಾಹರ ದರ್ಬಾರಿಗೆ ಕಳುಹಿಸಿದ. ಈ ಪತ್ರದ ಯಥಾಪ್ರತಿಯನ್ನು ಮೌಲಾನಾ ಅಲಾವುದ್ದೀನ್ ಲಾರಿಯವರಿಗೂ ಮಾಹಿತಿಗಾಗಿ ಕಳುಹಿಸಿಕೊಟ್ಟ. ಬಾದಶಾಹ ಈ ಪತ್ರವನ್ನು ಓದಿ ಸಮಾಲೋಚನೆ ನಡೆಸಿದ. ಬಾದಶಾಹನಿಂದ ಅದಕ್ಕೆ ತಕ್ಕ ಸಮಾಧಾನಕರ ಉತ್ತರ ದೊರೆಯಿತು. ಭಯ ಆತಂಕಗಳು ಶಮನಗೊಂಡು ಆತ ಶಾಂತಿಯಿಂದ ತನ್ನ ಎಂದಿನ ಸ್ಥಾನದಲ್ಲಿದ್ದು ಬದುಕತೊಡಗಿದ.

ಶಾಹಮ್ ಬೇಗನ ಪ್ರೇಮದ ಆಕರ್ಷಣೆ ಅವನ ವಲಯದಲ್ಲಿ ದಿನೇದಿನೇ ಬೆಳೆಯ ತೊಡಗಿತು. ಅವನ ಪ್ರೇಮದ ಮೋಡಿಗೊಳಗಾದ ಜನ ಎಷ್ಟು ಹಚ್ಚಿಕೊಂಡಿತೆಂದರೆ ಅವನ ಮುಂದೆ ಸಾಷ್ಟಾಂಗ ನಮಸ್ಕಾರ ಕೂಡ ಮಾಡತೊಡಗಿದರು. ಬಾದಶಾಹರಿಗೆ ಅಧಿಕಾರಿಗಳು ತಲೆಬಾಗುವಂತೆ ಶಾಹಮ್ ಬೇಗನ ಮುಂದೆ ಸಮಸ್ತ ಅಧಿಕಾರಿ ಗಣ ಪ್ರಣಾಮ ಮಾಡುತ್ತಿತ್ತು. ಆದರೆ ಅವನು ಯಾರ ಪ್ರಣಾಮ, ಸಲಾಮ್‌ಗಳಿಗೂ ಪ್ರತಿ ನಮಸ್ಕಾರವಾಗಲಿ ಯಾವ ಉತ್ತರವನ್ನಾಗಲಿ ನೀಡುತ್ತಿರಲಿಲ್ಲ. ತನ್ನ ಪ್ರೇಮಿಗಳನ್ನು ಬಗ್ಗುಬಡಿಯುವಂತೆ ಮಾಡುತ್ತಿದ್ದನೇ ಹೊರತು ತಾನು ಯಾರಿಗೂ ತಲೆ ತಗ್ಗಿಸುತ್ತಿರಲಿಲ್ಲ. ಅವನ ತಲೆಯಲ್ಲಿ ಅಹಂಕಾರ ತುಂಬಿ ತುಳುಕುತ್ತಿತ್ತು. ಅವನು ತನ್ನ ಪ್ರೇಮದ ಮೋಡಿಗೊಳಪಡಿಸಿ ಎಲ್ಲರನ್ನೂ ತನ್ನ ಮುಂದೆ ತಲೆತಗ್ಗಿಸುವಂತೆ ಮಾಡುವುದನ್ನು ಇಷ್ಟಪಡುತ್ತಿದ್ದ ಮತ್ತು ಇದರಲ್ಲಿ ತನ್ನ ಘನತೆ ಅಷ್ಟೆತ್ತರಕ್ಕೇರುತ್ತದೆಂದು ತಿಳಿದು ಗರ್ವ ಪಟ್ಟುಕೊಂಡಿದ್ದ.

ಈ ಪ್ರಿಯಕರ–ಪ್ರಿಯತಮೆಯರ ಪ್ರೇಮ ಕತೆ ಎಷ್ಟೊಂದು ಅವಹೇಳನಕ್ಕೊಳಗಾಯಿತೆಂದರೆ ಇಬ್ಬರ ಹೆಸರಿಗೂ ಕಳಂಕ ತಂದೊಡ್ಡಿತು. ಪೀರ್ ಮುಹಮ್ಮದ್ ಖಾನೆ

ಜಮಾನ್ ತನ್ನ ಅಧಿಕಾರವನ್ನು ತನ್ನ ಪ್ರಿಯಕರ ಶಾಹಮ್ ಬೇಗ್‌ನಿಗೆ ಒಪ್ಪಿಸಿ ತಾನು ಓರ್ವ ಗುಲಾಮನಂತೆ ವರ್ತಿಸತೊಡಗಿದ. ಅವನ ಮುಂದೆ ಕೈಕಟ್ಟಿನಿಂತು ನೌಕರನಂತೆ ಕೆಲಸಮಾಡುತ್ತ ತನ್ನ ಪ್ರೇಮ ನಿವೇದನೆಯನ್ನು ಮಾಡುತ್ತ ಪ್ರೇಮಕ್ಕಾಗಿ ಸರ್ವತ್ಯಾಗಕ್ಕೂ ತಯಾರಾಗುತ್ತಿದ್ದ. ಈ ಪ್ರೇಮ ಕತೆಯನ್ನು ಅರ್ಥ ಮಾಡಿಕೊಳ್ಳಲು ವಿಶೇಷವಾದ ಜ್ಞಾನ ಬೇಕಾಗಬಹುದು! ಯಾಕೆಂದರೆ ಇಲ್ಲಿ ಪ್ರೇಮಿ ಮತ್ತು ಪ್ರೇಮಿಕೆ ಇಬ್ಬರೂ ಬಾದಶಾಹರು! ಇನ್ನೊಂದು ವಿಚಾರವೆಂದರೆ ಅಲ್ಲಿನ ಪಟ್ಟದಲ್ಲಿ ಇದ್ದಿರಬೇಕಾದವನು ಸ್ವತಃ ಗುಲಾಮನಂತೆ ವರ್ತಿಸುತ್ತಿದ್ದ. ಶಾಹಮ್ ಬೇಗನ ರಾಜ ಪಟ್ಟ ಬಹಳ ಪ್ರಖ್ಯಾತವಾಗಿತ್ತು. ಅವನಿಗೆ ಸಿಕ್ಕ ಈ ರಾಜ್ಯದ ಸಿಂಹಾಸನವನ್ನು ಏರಿ ತನ್ನ ಆಳ್ವಿಕೆಯನ್ನು ಕೂಡ ನಡೆಸತೊಡಗಿದ. ಈ ಸಂದರ್ಭವು ಪಿತೂರಿನಡೆಸುವ ಕುತಂತ್ರಿ ಜನಗಳಿಗೆ ಒಳ್ಳೆಯ ಆಹಾರ ಸಿಕ್ಕಿದಂತಾಯಿತು. ಸಾವಿರಾರು ಜನರ ಬಾಯಿಯಲ್ಲಿ ಈ ಪ್ರಣಯ ಕತೆ ಪ್ರಚಾರವಾಯಿತು. ಅವರ ಸಭೆ, ಕೂಟಗಳಲ್ಲಿ ಈ ಕತೆಯನ್ನು ರಸವತ್ತಾಗಿ ಹೇಳಿಕೊಂಡು ಆಸ್ವಾದಿಸತೊಡಗಿದರು.

ಬಾದಶಾಹ ಈಗ ಎಚ್ಚತ್ತು ಸರಿಯಾದ ಕ್ರಮ ಕೈಗೊಳ್ಳದಿದ್ದಲ್ಲಿ ಪರಿಸ್ಥಿತಿ ವಿಷಮವಾಗಿ ಕೈಮೀರಿ ಹೋಗುವುದು ಸಾಧ್ಯವಿತ್ತು. ಅದಕ್ಕಾಗಿ ಪೀರ್ ಮುಹಮ್ಮದ್ ಖಾನ್ ಖಾನೆ ಝಮಾನಿಯನ್ನು ತನ್ನ ಸರಹದ್ದಿನಿಂದ ದೂರವಿರಿಸುವುದರ ಮಾರ್ಗವನ್ನು ಯೋಚಿಸಿದ. ಶಾಹಮ್ ಬೇಗನನ್ನು ಅಧಿಕಾರಿಗಳು, ಸಾರ್ವಜನಿಕರು ಸೇರಿರುವ ಸಭೆಯಲ್ಲಿ ಕರೆದು ಬಹಿರಂಗವಾಗಿ ತನ್ನ ಆಸ್ಥಾನದಲ್ಲಿ ಒಂದು ಅಧಿಕಾರಿ ಹುದ್ದೆಯನ್ನು ನೀಡಿ ಈ ಪ್ರಕರಣಕ್ಕೆ ತೆರೆಹಾಕುವ ಯೋಚನೆಯನ್ನು ಮಾಡಿದ್ದ.

**ಖಾನೆಜಮಾನ್ ಪೀರ್ ಮುಹಮ್ಮದ್ ಖಾನ್ ರಾಜ ಪಟ್ಟವನ್ನು ಶಾಹಮ್ ಬೇಗನಿಗೆ ನೀಡಿ ತಾನು ಪ್ರಧಾನ ಅಧಿಕಾರಿ(ಅಮೀರುಲ್ ಉಮ್ರ) ಪದವಿಯನ್ನು ಪಡೆದುಕೊಳ್ಳುವ ನಿರ್ಧಾರದ ಹಿನ್ನೆಲೆಯ ವಿವರಗಳು:**

ಶಾಹಮ್ ಬೇಗನಿಗೆ ರಾಜಗದ್ದುಗೆ ನೀಡಲಾದ ಸುದ್ದಿ ಪೀರ್ ಮುಹಮ್ಮದ್ ಖಾನನಿಗೆ ತಲಪಿದಾಗ ಈ ಶಾಹಮ್ ಬೇಗನಿಗೆ ನೀಡಲಾದ ರಾಜಪಟ್ಟ ತಾತ್ಕಾಲಿಕವಾದದ್ದು ಮತ್ತು ಬೂಟಾಟಿಕೆಯದ್ದೆಂದೂ ಇದು ಅವನ ಸಾಮರ್ಥ್ಯದ ಹಕ್ಕಿನ ಗಳಿಕೆಯಲ್ಲವೆಂದು ಹೇಳುವ ಮೂಲಕ ತನ್ನ ಅಂತರ್ಯದಲ್ಲಿ ಇಟ್ಟುಕೊಂಡಿದ್ದ ಅಭಿಪ್ರಾಯವನ್ನು ಹೊರಗೆ ಹಾಕಿದ್ದ. ಶಾಹಮ್ ಬೇಗನ ಅನುಮತಿಯಿಲ್ಲದೆ ಅವನು ಸಭೆಯಲ್ಲಿ ಹಾಜರಾಗುವುದಕ್ಕೂ ಒಪ್ಪುತ್ತಿರಲಿಲ್ಲ. ಅವನ ಸ್ಥಾನವನ್ನು ಬಾದಶಾಹರ ಸ್ಥಾನಕ್ಕಿಂತ ಮೇಲ್ಮಟ್ಟದ್ದಾಗಿ ಪರಿಗಣಿಸಿದ್ದ. ಅವನು ತನ್ನ ಪ್ರಾಮುಖ್ಯತೆಯನ್ನು ಕೂಡ ಅಹಂಕಾರದ ಮೂಲಕ ಪಡೆಯಲು ಪ್ರಯತ್ನಿಸುತ್ತಿದ್ದ. ತನ್ನ ಭಾರಿಸೈನ್ಯದ ಬಲದ

ಮೂಲಕ ಇನ್ನಷ್ಟು ಅಧಿಕಾರವನ್ನು ಪಡೆಯುವುದಕ್ಕೆ ಸನ್ನದ್ಧನಾಗಿದ್ದ. ಬಾದಶಾಹರಿಗೆ ಈ ಎಲ್ಲ ಬೆಳವಣಿಗೆಗಳ ಸುಳಿವು ಸಿಕ್ಕಾಗ ಅವರು ಕೂಡಲೇ ಆಫಂದೀ ಮೌಲಾನಾ ಅಲಾವುದ್ದೀನ್ ಮುಹಮ್ಮದ್ ಲಾರಿಯವರನ್ನು ತಮ್ಮ ಸಮ್ಮುಖಕ್ಕೆ ಹಾಜರಾಗಲು ಕರೆ ಕಳುಹಿಸಿದರು. ಅವರು ಆಗಮಿಸಿದಾಗ ಅಲೀ ಖುಲಿ ಈ ರಾಜಪಟ್ಟದ ಹಕ್ಕುದಾರನಾಗಿದ್ದು ಅವನ ಬದಲಿಗೆ ಬೇರೆಯವರನ್ನು ನೇಮಿಸುವುದು ಹೇಗೆ ಸರಿಯೆಂಬುದರ ಬಗ್ಗೆ ಬಾದಶಾಹ ಸಮಾಲೋಚನೆ ನಡೆಸಿದರು. ಅದಕ್ಕೆ ಮೌಲಾನರು 'ಇವೆಲ್ಲವೂ ತಮ್ಮೊಳಗಿನ ಪರಸ್ಪರ ದ್ವೇಷಸಾಧನೆಯ ಸಂಘರ್ಷದಲ್ಲಿ ಅಲ್ಲಿನ ದರ್ಬಾರಿಗಳು ನೊಂದುಬೆಂದು ಸೋತು ಬೇಸತ್ತು ಮತ್ತು ತಮ್ಮ ಜೀವವನ್ನಾದರೂ ಕೊನೆಗೆ ಉಳಿಸಿಕೊಳ್ಳುವ ಸಲುವಾಗಿ ಹೀಗೆ ತೀರ್ಮಾನವನ್ನು ಕೈಗೊಂಡಿರಬೇಕು' ಎಂದು ಅಭಿಪ್ರಾಯಪಟ್ಟರು. ಅಂದಿನಿಂದ ಇಂದಿನ ತನಕವೂ ಈ ಭಯ ಅವರನ್ನು ಕಾಡುತ್ತಿದೆ ಎಂದೂ ಹೇಳಿದರು.

ಶಾಹಮ್ ಬೇಗ್ ಯಾವುದೇ ಕೈಹಿಡಿದ ಕೆಲಸಕಾರ್ಯಗಳಲ್ಲಿ ಗಳಿಸಿದ ಸಾಧನೆ, ಜಯದ ವಾರ್ತೆಯನ್ನು ತಪ್ಪದೆ ಬಾದಶಾಹನ ಗಮನಕ್ಕೆ ತರುತ್ತಿದ್ದ. ಈ ಮೂಲಕ ತಾನು ಬಾದಶಾಹನ ಮುಂದೆ ಅತ್ಯಂತ ಒಳ್ಳೆಯವನೆಂಬ ಅಭಿಪ್ರಾಯ ಮೂಡಿಸಲು ಪ್ರಯತ್ನಿಸುತ್ತಿದ್ದ. ಆದರೆ ಅಕ್ಬರ್ ಬಾದಶಾಹ ಇವನ ಯಾವ ಮೋಡಿಗೂ ಒಳಗಾಗಲು ಇಷ್ಟಪಟ್ಟಿರಲಿಲ್ಲ. ಅವನ ಈ ರೀತಿಯ ಕುತಂತ್ರಗಳನ್ನು ಕೊನೆಗಾಣಿಸಬೇಕೆಂಬ ತೀರ್ಮಾನಕ್ಕೆ ಬಂದಿದ್ದರು. ಮೌಲಾನಾ ಆಫಂದಿಯವರೊಂದಿಗೆ ಈ ಸಮಸ್ಯೆಗೆ ಪರಿಹಾರವನ್ನು ಕೇಳಿದರು. ಈ ಎಲ್ಲ ಸಮಸ್ಯೆಗಳು ಅವರ ಪರಸ್ಪರ ಪ್ರೇಮ ಮತ್ತು ಸ್ವೇಚ್ಛಾಚಾರದ ರಂಗುರಂಗಿನ ಸಂಬಂಧಗಳಿಂದಾಗಿ ಉಂಟಾಗಿವೆ ಎಂದು ಅವರು ಹೇಳಿದರು. ಅಕ್ಬರ್ ಬಾದಶಾಹರು ಈ ಹಿಂದಿನ ಅವನ ಅನೇಕ ತಪ್ಪುಗಳಿಗೆ ಕ್ಷಮಾದಾನ ನೀಡಿದ್ದರು ಮಾತ್ರವಲ್ಲ ಅವನಿಗೆ ಬುದ್ಧಿವಾದವನ್ನು ಕೂಡ ಹೇಳಿದ್ದರು. ಆದರೆ ಇವೆಲ್ಲವುಗಳ ಹೊರತಾಗಿಯೂ ಆತ ತನ್ನ ಕುತಂತ್ರವನ್ನು ಬಿಟ್ಟಿರಲಿಲ್ಲ. ಇದರಿಂದಾಗಿ ಬಾದಶಾಹ ಮೌಲಾನಾ ಮುಹಮ್ಮದ್ ಲಾರಿಯವರ ಮೂಲಕ ಹುಕುಂ ನಾಮಾ ಬರೆದು ಕೆಲವು ನಿಯಮಗಳನ್ನು ಹಾಕಿ ಬರೆದು ಕಳುಹಿಸಿದರು. ಅವನ ವಿರುದ್ಧ ಕಾರ್ಯಾಚರಣೆಗಾಗಿ ಈಗಾಗಲೇ ಕಳುಹಿಸಲಾದ ಸೈನ್ಯವನ್ನು ತಡೆದು ನಿಲ್ಲಿಸಿ ಮತ್ತೊಂದು ಸಂಧಾನದ ಅವಕಾಶದ ತಂತ್ರವನ್ನು ಉಪಯೋಗಿಸಿದರು.

**ಮೌಲಾನಾ ಅಲಾವುದ್ದೀನ್ ಲಾರಿಯನ್ನು ಕಳುಹಿಸಿದ್ದು ಮತ್ತು ಶಾಹಮ್ ಬೇಗನ ಅಂತಿಮ ಪರಿಸ್ಥಿತಿಯ ವಿವರಗಳು:**

ಹಜ್ರತ್ ಆಫಂದಿ ಮೌಲಾನಾ ಅಲಾವುದ್ದೀನ್ ಲಾರಿಯವರು ಖಾನೆಜಮಾನ್

ಪೀರ್ ಮುಹಮ್ಮದನ ಕೈಗೆ ಬಾದಶಾಹರ ಹುಕುಂ ನಾಮಾ ಕೊಟ್ಟು ಈ ಆಜ್ಞೆಯ ನಿಯಮಗಳನ್ನು ಪಾಲಿಸಬೇಕು ಎಂದು ಎಚ್ಚರಿಕೆ ನೀಡಿದಾಗ ಅವನು ಭಯಗೊಂಡ. ಮೌಲಾನಾರವರು ಅವನಿಗೆ ಶಾಂತವಾಗಿ ಉಪದೇಶವನ್ನು ಕೂಡ ಮಾಡಿದರು. ಇದರಿಂದ ಖಾನೆಜಮಾನನ ಹೃದಯ ಪರಿವರ್ತನೆಗೊಂಡು, ಪಶ್ಚಾತ್ತಾಪ ಪಟ್ಟುಕೊಂಡು ಇಂತಹ ಕೆಟ್ಟಕೆಲಸವನ್ನು ಇನ್ನು ಮುಂದೆ ಮಾಡುವುದಿಲ್ಲವೆಂದು ಅವರಿಗೆ ಆಶ್ವಾಸನೆಯನ್ನು ನೀಡಿದ. ಅವನು ಉಪಾಯದಿಂದ ಅಲ್ಲಿನ ಒಂದು ಕೋಟೆಯೊಳಗೆ ಶಾಹಮ್ ಬೇಗನನ್ನು ಕಳುಹಿಸಿಕೊಟ್ಟು ಬಂಧನದಲ್ಲಿಟ್ಟ. ಆ ಕೋಟೆಯ ಒಳಗೆ ಅವನ ಆರಾಮಕ್ಕೆ ಬೇಕಾದ ಏರ್ಪಾಡನ್ನು ಕೂಡ ಮಾಡಿದ. ಕೆಲವು ಜನರನ್ನು ಅವನ ಸಂತೋಷಕ್ಕಾಗಿ ಮತ್ತು ಅವನ ಎಂದಿನ ಮೋಜಿನಲ್ಲಿ ಶಾಮೀಲಾಗುವಂತೆ ಏರ್ಪಾಡು ಮಾಡಿ ಕಳುಹಿಸಿದ. ಈ ಮೂಲಕ ಬಂಧನದಲ್ಲಿದ್ದೂ ಅವನ ಎಂದಿನ ಚಟುವಟಿಕೆಯನ್ನು ಮತ್ತು ಮೋಜನ್ನು ಮುಂದುವರಿಸುವುದಕ್ಕಾಗಿ ಅವಕಾಶಮಾಡಿಕೊಟ್ಟಿದ್ದ. ಹಲವು ಕಾಲದ ತನಕ ಶಾಹಮ್ ಬೇಗ್ ತನ್ನ ಮೋಜುಗಾರಿಕೆಯ ದಿನಗಳನ್ನು ಕೋಟೆಯ ಬಂಧನದಲ್ಲಿ ಕಳೆಯುತ್ತಿದ್ದ. ಒಂದು ರಾತ್ರಿ ಈ ಮೋಜುಗಾರಿಕೆಯ ಗುಂಗಿನಲ್ಲಿ ಇವನ ಜೊತೆಯಲ್ಲಿ ಬಂದಿದ್ದವರಲ್ಲಿ ಓರ್ವನ ಪ್ರಿಯತಮೆಯಾಗಿದ್ದ ಒಬ್ಬಳು ಕೆಲಸದಾಕೆಯ ಮೇಲೆ ಶಾಹಮ್ ಬೇಗನು ತನ್ನ ಮೋಹಪಾಶವನ್ನು ಬೀರಿ ಕೈವಶಮಾಡಿಕೊಂಡು ಅವಳನ್ನು ವಿವಾಹ ಮಾಡಿಕೊಂಡ. ಅವಳು ದೇವರ ಕೃಪೆಯಿಂದ ಗರ್ಭಿಣಿಯಾದಳು. ಅವಳು ತುಂಬು ಗರ್ಭಿಣಿಯಾದಾಗ ಶಾಹಮ್ ಬೇಗ್ ತನ್ನ ಮೋಜಿನ ಉತ್ತುಂಗ ಸ್ಥಿತಿಯಲ್ಲಿ ಹಿಂದಿನ ಅವಳ ಪ್ರಿಯಕರನನ್ನು ಕರೆಸಿ ಅವಳನ್ನು ಸ್ವೀಕರಿಸುವಂತೆ ಒತ್ತಾಯಿಸಿದ. ಅವಳು ಹೆರುವ ತನಕ ನೀನು ಅವಳ ಬಳಿ ಇರಬೇಕೆಂದು ಹೇಳಿದ.

ನಂತರ ತಾನು ಅವಳನ್ನು ಮತ್ತೆ ಸ್ವೀಕರಿಸುತ್ತೇನೆಂದು ಕೂಡ ಹೇಳಿದ. ಇವೆಲ್ಲ ಮಾತುಗಳನ್ನು ಅವನು ಶರಾಬು ಕುಡಿದ ಅಮಲಿನ ಸ್ಥಿತಿಯಲ್ಲಿ ಹೇಳಿದ್ದ. ಇದನ್ನು ಕೇಳಿದ ಆ ವ್ಯಕ್ತಿ ತುಂಬ ವ್ಯಗ್ರನಾಗಿದ್ದ. ಒಂದು ದಿನ ಅವನು ಶರಾಬು ಕೂಟದಲ್ಲಿ ಯಾರೂ ಇಲ್ಲದೆ ಒಂಟಿಯಾಗಿ ಶಾಹಮ್ ಬೇಗ್ ಇರುವುದನ್ನು ಕಂಡವನೊಬ್ಬ ಕೂಡಲೇ ಅವನನ್ನು ಮಲಗಿಸಿ ತನ್ನ ಕೈಯಲ್ಲಿದ್ದ ಚೂಪಾದ ಕತ್ತಿಯಿಂದ ಎದೆಗೆ ಇರಿದ. ಶಾಹಮ್ ಬೇಗ್ ಸತ್ತುಬಿದ್ದ. ಕೊಲೆಮಾಡಿದ ವ್ಯಕ್ತಿ ಕೂಡಲೇ ಅಕ್ಬರ್ ಬಾದಶಾಹನ ಬಳಿ ಹೋಗಿ ಘಟನೆಯ ಎಲ್ಲ ಸಂಗತಿಗಳನ್ನೂ ವಿವರವಾಗಿ ತಿಳಿಸಿದ. ಬಾದಶಾಹ ಈ ವಿವರಗಳನ್ನು ಕೇಳಿ ಅವನಿಗೆ ಶಹಬಾಸ್ ಎಂದು ಬೆಂಬಲಿಸಿದ. ಇದರ ನಂತರ ಅಲ್ಲೆಲ್ಲ ಜನಗಳು ಈ ಘಟನೆಯು ಬಾದಶಾಹರ ಪೂರ್ವ ನಿಯೋಜಿತ ಯೋಜನೆಯ ಭಾಗವಾಗಿತ್ತು ಎಂದು ಮಾತಾಡಿಕೊಳ್ಳ ತೊಡಗಿದರು. ಖಾನೆಜಮಾನನಿಗೆ

ತನ್ನ ಪ್ರಿಯಕರನಂತಿದ್ದ ಸ್ನೇಹಿತನ ಬಂಧನ ಮತ್ತು ಅವನ ಕೊಲೆ, ಹೀಗೆ ಈ ಎರಡು ದುರಂತಗಳಿಂದಾಗಿ ಅತ್ಯಂತ ನೋವುಂಟಾಗಿ ಬಹಳ ಸಮಯದ ತನಕ ಖಿನ್ನನಾಗಿರುತ್ತಿದ್ದ. ಶಾಹಮ್ ಬೇಗನ ಶವಪೆಟ್ಟಿಗೆಯನ್ನು ಜಾನಾಪುರಕ್ಕೆ ಒಯ್ಯಲಾಗಿ ನಗರದ ಒಂದು ದೊಡ್ಡ ಕೊಳದ ಬಳಿ ದಫನಮಾಡಲಾಯಿತು. ಅವನ ಗೋರಿಯ ನಾಲ್ಕೂ ದಿಕ್ಕಿನ ಸುತ್ತಲಲ್ಲಿ ದೊಡ್ಡ ವೇದಿಕೆಯನ್ನು ರಚಿಸಲಾಯಿತು. ಅಲ್ಲಿಯೇ ಬಳಿಯಲ್ಲಿ ಒಂದು ಮಸೀದಿಯನ್ನು ಕಟ್ಟಲಾಗಿ ನಾಲ್ಕೂ ದಿಕ್ಕಿನಲ್ಲಿ ನಾಲ್ಕು ಗುಂಬಜನ್ನು ಕೂಡ ಕಟ್ಟಿಸಲಾಯಿತು. ಮಧ್ಯಭಾಗದಲ್ಲಿ ಗೋರಿಯುಳ್ಳ ವೇದಿಕೆಯ ಬದಿಯ ನಾಲ್ಕೂ ದಿಕ್ಕಿನಲ್ಲಿ ಗಿಡಗಳನ್ನು ನೆಡಲಾಗಿ ಒಂದು ಸುಂದರ ತೋಟವನ್ನು ನಿರ್ಮಾಣ ಮಾಡಲಾಯಿತು. ಹೀಗೆ ಇದೊಂದು ಪ್ರವಾಸಿಗರ ಮನಸ್ಸನ್ನು ತಣಿಸುವ ಸುಂದರ ತಾಣವಾಯಿತು. ಈ ಘಟನೆ ನಡೆದ ಎರಡು ವರ್ಷಗಳ ನಂತರ ಈ ಪ್ರದೇಶವನ್ನು ಭೇಟಿಯಾಗುವ ಸಂದರ್ಭ ನನಗೂ ದೊರೆಯಿತು. ಈ ಘಟನೆ ಹಿಜರಿವರ್ಷ ೯೮೬ರಲ್ಲಿ ನಡೆದಿತ್ತು.

ಹೀಗೆ ಮೌಲಾನಾ ಅಲಾವುದ್ದೀನ್ ಮುಹಮ್ಮದ್ ಲಾರಿಯವರ ಸಮ್ಮುಖದಲ್ಲಿ ಶಾಹಮ್ ಬೇಗನ ಕತೆಯು ಪೂರ್ಣಗೊಂಡಿತು. ನಂತರದಲ್ಲಿ ಅವರು ಬಾದಶಾಹನ ದರ್ಬಾರಿಗೆ ತಲಪಿ, ಖಾನೆ ಜಮಾನ ನೀಡಿದ ಪತ್ರವೊಂದನ್ನು ಬಾದಶಾಹರಿಗೆ ತಲಪಿಸಿದರು. ಬಾದಶಾಹ ಅವರಿಗೆ ತನ್ನ ಕಡೆಯಿಂದ ಕ್ಷಮಾಪಣೆ ನೀಡಿದ ತೀರ್ಮಾನವನ್ನು ಪ್ರಕಟಿಸಿದರು. ಮೌಲಾನಾ ಆಫಂದಿಯವರು 'ಬಾದಶಾಹರ ವತಿಯಿಂದ ನನಗೆ ರಕ್ಷಣೆಯ ಭರವಸೆ ನೀಡಬೇಕೆಂದೂ, ದರ್ಬಾರಿಗಳ ಪೈಕಿ ತನ್ನ ಮೇಲೆ ಯಾರಾದರೂ ದ್ವೇಷದಿಂದ ಹಲ್ಲೆ ಮಾಡದಂತೆ ನಿಗಾ ಇರಿಸುವ ವ್ಯವಸ್ಥೆ ಮಾಡಬೇಕು' ಎಂದು ಕೇಳಿಕೊಂಡರು. ತನ್ನ ಹೃದಯದಲ್ಲಿ ಈ ಘಟನೆಯಿಂದಾಗಿ ಉಂಟಾದ ಎಂದೂ ಮಾಸಲಾಗದಂತಹ ನೋವಿನೊಂದಿಗೆ ಖಾನೆಜಮಾನ್ ಬದುಕಿದ್ದ.

ರಜಬ್ ಸಾಲಾರ್ ಫಾರಿಖ ಎಂಬ ಒಬ್ಬ ಬಹರಾಯಿಚ್‌ನ (ಜಾಗೀರುದಾರ)ಹಾಕೀಮನಾಗಿದ್ದ. ಇವನು ಶಿಕಾರಿಯಲ್ಲಿ ಆಸಕ್ತಿ ಹೊಂದಿ ಒಂದು ಪಡೆಯೊಂದಿಗೆ ಹೊರಟ. ಮೌಲಾನಾ ಆಫಂದಿಯವರಿಗೆ ಇದು ತಿಳಿದಾಗ ಅವರು ತನ್ನ ಓರ್ವ ಬೆಂಬಲಿಗನನ್ನು ಖಾನೆ ಜಮಾನನಿಗೆ ಎಚ್ಚರ ನೀಡಲು ಕಳುಹಿಸಿದರು. 'ಬಾದಶಾಹರು ಸಾಲಾರ್ ಫಾಜಿಯ ಭೇಟಿಗೆ ಬರಲಿದ್ದಾರೆ, ಈ ಸಂದರ್ಭದಲ್ಲಿ ನೀನು ಅವರನ್ನು ಭೇಟಿಯಾಗಿ ನಿನ್ನ ಅಂತರ್ಯದಲ್ಲಿ ಅಡಗಿಸಿಕೊಂಡಿರುವ ಎಲ್ಲ ವಿಚಾರಗಳನ್ನು ಅವರ ಮುಂದಿಟ್ಟು ಅವುಗಳಿಗೆ ಪರಿಹಾರ ಕಂಡುಕೊಳ್ಳಲು ಒಂದು ಒಳ್ಳೆಯ ಸುಯೋಗವಿದು' ಎಂದು ಹೇಳಿ ಕಳುಹಿಸಿದರು.

ಖಾನೆಜಮಾನ್ ತನ್ನ ಆಸ್ಥಾನದ ಗಣ್ಯರ ಸಭೆ ಕರೆದು ತನ್ನ ಮೇಲಿರುವ ಅಪಾದನೆಯನ್ನು ತಿಳಿಗೊಳಿಸಲು ಮಾಡುವ ಪ್ರಯತ್ನದ ಬಗ್ಗೆ ಚರ್ಚಿಸಿದ. ಅವನ ಎಲ್ಲ ಮಂತ್ರಿಗಳು ಗಣ್ಯರು 'ನಾವಂತೂ ನಮ್ಮ ಬದುಕಿನುದ್ದಕ್ಕೂ ನಿಮ್ಮ ಸೇವೆಗೆ ಬದ್ಧರಾಗಿರುವವರು. ತಾವು ಏನು ಹೇಳುತ್ತೀರೋ ಅದಕ್ಕೆ ದೇವರ ಆಣೆಯಿಟ್ಟು ಆಜ್ಞೆಯನ್ನು ಪಾಲಿಸುತ್ತೇವೆ' ಎಂದರು. ಖಾನೆಜಮಾನ್ ತನ್ನ ಪರಿವಾರದವರೊಂದಿಗೆ ಭೇಟಿಯಾಗಿ ವಿಷದವಾಗಿ ಎಲ್ಲವನ್ನೂ ತಿಳಿಸಿದ. ಬಾದಶಾಹ ಅಕ್ಬರ್ ಇವನ ಪ್ರಾಮಾಣಿಕತೆಯಿಂದ ಸಂತಸಗೊಂಡು 'ಇಲ್ಲಿರುವ ಎಲ್ಲರೂ ನಮ್ಮವರೇ ಆಗಿದ್ದಾರೆ. ನಾವೆಲ್ಲರೂ ನಮ್ಮ ಮಧ್ಯೆ ಇರುವ ವೈಮನಸ್ಸನ್ನು ಮರೆತು ಒಂದಾಗಿದ್ದೇವೆಂದು ತಿಳಿದುಕೊಳ್ಳಿ' ಎಂದು ಸಮಾಧಾನಪಡಿಸಿದರು. ಬಾದಶಾಹ ತನ್ನನ್ನು ಭೇಟಿಮಾಡಿದವರಿಗೆ ಉಡುಗೊರೆಯನ್ನು ನೀಡಿ ಖುಶಿಪಡಿಸಿದರು. ಎಲ್ಲ ಆತಂಕಗಳನ್ನು ತಿಳಿಗೊಳಿಸಿ ಈ ಭೇಟಿಯ ವಾರ್ತಾಲಾಪವನ್ನು ಮುಗಿಸಿದರು. ಖಾನೆಜಮಾನ್ ತನ್ನ ಸಹೋದರನೊಂದಿಗೆ ಆನೆಯ ಮೇಲೆ ಸವಾರಿಮಾಡಿಕೊಂಡು ಜಾನ್‌ಪುರದ ಕಡೆ ಪ್ರಯಾಣಿಸಿದ. ಅಲ್ಲಿ ಸುಖಸಂತೋಷದಲ್ಲಿ ಬದುಕಿದ. ಬಾದಶಾಹನ ವೈರಿಗಳನ್ನು ಸೋಲಿಸಿ ಅನೇಕ ರಾಜ್ಯಗಳನ್ನು ವಶಪಡಿಸಿಕೊಂಡು ತನ್ನ ರಾಜ್ಯವನ್ನು ಕೂಡ ವಿಸ್ತರಿಸಿದ.

**ಸಿಕಂದರ್ ಅಫ್‌ಘಾನ್‌ನ ಮರಣ ಮತ್ತು ಖಾನೆಜಮಾನ್ ವಿದೇಶಕ್ಕೆ ಪ್ರಯಾಣಮಾಡಿದ ವಿವರಗಳು:**

ಹುಮಾಯೂನ್ ಬಾದಶಾಹನ ಕೈಯಲ್ಲಿ ಸಿಕಂದರ್ ಅಫ್‌ಘಾನ್ ಹಿಂದೆ ಸೋಲನ್ನು ಅನುಭವಿಸಿದಾಗ ಅಫಘಾನಿಸ್ಥಾನಕ್ಕೆ ಹಿಂತಿರುಗಿ ತನ್ನ ಪಂಗಡದವರ ಜೊತೆಯಲ್ಲಿ ಸೇರಿಕೊಂಡು ಶಾಮೀಲಾಗಿದ್ದ. ಖಾನೆಜಮಾನನು ಕೂಡ ಹಿಂದೆ ಅಕ್ಬರ್ ಬಾದಶಾಹನ ಜೊತೆಯಲ್ಲಿ ವಿರಸಹೊಂದಿ ಅಫಘಾನಿಸ್ಥಾನಕ್ಕೆ ವಲಸೆಹೋಗಿದ್ದ. ಅಲ್ಲಿ ಅಫಘಾನಿಗಳ ಜೊತೆಗೆ ಒಂದಲ್ಲ ಒಂದು ಸಂಘರ್ಷದಲ್ಲಿ ನಿರತನಾಗಿ, ಅಲ್ಲಿನ ಕೆಲವು ಪ್ರದೇಶಗಳನ್ನು ತನ್ನ ಅಂಕಿತದಲ್ಲಿಟ್ಟುಕೊಂಡಿದ್ದ. ತನ್ನ ಹಲವು ನಿಷ್ಠಾವಂಚಿತ ಬೆಂಬಲಿಗರನ್ನು ಅಲ್ಲಿನ ಅಧಿಕಾರಿಗಳನ್ನಾಗಿ ಮಾಡಿದ್ದ. ಖಾನೆಜಮಾನ್ ತನ್ನ ಹಿಂದಿನ ಕೆಲವು ದುಶ್ಚಟಗಳಿಂದ ಕೆಟ್ಟಹೆಸರು ಪಡೆದು ಅಪ್ರಿಯನಾಗಿದ್ದರೂ, ಬಾದಶಾಹನ ವಿರೋಧಿಗಳನ್ನು ಎದುರಿಸುವುದು ಮತ್ತು ಅನೇಕ ಯುದ್ಧಸಂಬಂಧಿತ ವೀರೋಚಿತ ಕಾರ್ಯಗಳಲ್ಲಿ ತನ್ನ ಶೌರ್ಯವನ್ನು ಮೆರೆದು ಹೆಸರುವಾಸಿಯಾಗಿದ್ದ. ದೇಶಕ್ಕಾಗಿ ದೊಡ್ಡ ದೊಡ್ಡ ಅಪಾಯಗಳನ್ನು ಎದುರಿಸಲು ತಯಾರಾಗಿರುತ್ತಿದ್ದ. ಮೆಲ್ಲಮೆಲ್ಲನೆ ಘಾಜಿಪುರ್, ಬನಾರಸ್, ಕಾಶಿ ಮುಂತಾದ ಸ್ಥಳಗಳನ್ನು ತನ್ನ ವಶಪಡಿಸಿಕೊಂಡಿದ್ದ. ಈ ಕಾಶಿ ಎಂಬ ಸ್ಥಳ ಹಿಂದುಗಳ ಪವಿತ್ರ ಯಾತ್ರಾಸ್ಥಳವಾಗಿತ್ತು.

ಸಿಕಂದರ್ ಅಫ್‌ಘಾನ್ ಒಂದು ದೊಡ್ಡ ಸೈನ್ಯ ತಂಡವನ್ನು ಒಟ್ಟುಗೂಡಿಸಿ ಖಾನೆಜಮಾನನನ್ನು ಎದುರಿಸಲು ತಯಾರಾಗಿದ್ದ. ಇದು ನಡೆದದ್ದು ೯೬೭ರ ಹಿಜರಿ ವರ್ಷದ ಜಿಲ್‌ಹಜ್ ತಿಂಗಳಲ್ಲಿ. ನಾನು(ಶಿರಾಜಿ) ಅಕ್ಬರ್ ಬಾದಶಾಹ ಸಿಂಹಾಸನವನ್ನೇರಿದ ಏಳು ವರ್ಷಗಳ ಬಳಿಕ ದಕ್ಷಿಣದ ಗುಜರಾತ್ ಮೂಲಕ ಪ್ರಯಾಣ ಮಾಡುತ್ತ ದೆಹಲಿಯನ್ನು ತಲಪಿದ್ದೆ. ನಾನು ಹೋದಾಗ ಅಲ್ಲಿ ತುಂಬ ಸುಖಸಂತೋಷದ ವಾತಾವರಣವಿತ್ತು. ಪ್ರಜೆಗಳು ತುಂಬ ಉಲ್ಲಾಸದಿಂದ, ಅಯುರಾರೋಗ್ಯದೊಂದಿಗೆ ಬದುಕುತ್ತಿರುವುದನ್ನು ಕಂಡಿದ್ದೆ. ಒಂದು ದಿನ ನಾನು ವ್ಯಾಪಾರಿಯ ಅಂಗಡಿಯಲ್ಲಿ ಕೂತಿದ್ದಾಗ ಒಬ್ಬ ಅಲ್ಲಿಗೆ ಬಂದು 'ನಾನು ರಾತ್ರಿ ಕನಸಿನಲ್ಲಿ ಒಂದು ಘಟನೆ ಘಟಿಸಿದ್ದನ್ನು ನೋಡಿದೆ. ಅದರಲ್ಲಿ ಖಾನೆಜಮಾನ್ ತನ್ನ ತಲೆಯ ಮೇಲಿದ್ದ ದೊಡ್ಡ ಪಗಡಿಯನ್ನು ನನ್ನ ತಲೆಯ ಮೇಲೆ ಇಟ್ಟುದನ್ನು ಕಂಡೆ. ಇದರ ಅರ್ಥವೇನು ಎಂಬುದು ನನಗೆ ತಿಳಿಯಲಿಲ್ಲ' ಎಂದ. ನಮ್ಮ ಹಿರಿಯರು ಹೇಳುವಂತೆ ಈ ಕನಸಿನ ಅರ್ಥವು(ತಾಬೀರ್) ಶುಭಸೂಚನೆಯಲ್ಲ. ಅವನ ಬಗ್ಗೆ ಅಲ್ಲಿಯ ತನಕ ನನಗೆ ಹೆಚ್ಚೇನೂ ತಿಳಿದಿರಲ್ಲಿಲ್ಲ. ಖಾನೆಜಮಾನನ ಬಗ್ಗೆ ಯಾರು, ಏನು ಕೆಲಸಮಾಡುವವನು ಎಂದು ಅಲ್ಲಿಯವರನ್ನು ನಾನು ಕೇಳಿದಾಗ ಅಲ್ಲಿನ ಜನರು ಇವನು ಅಕ್ಬರ್ ಬಾದಶಾಹನ ಅಧಿಕಾರಿಗಳಲ್ಲಿ ಒಬ್ಬನಾಗಿದ್ದು ರಾಜ್ಯದ ಗಡಿಪ್ರದೇಶದಲ್ಲಿ ಬಂದು ಈಗ ಬೀಡುಬಿಟ್ಟಿದ್ದಾನೆ ಎಂದು ಹೇಳಿದರು. ಸಿಕಂದರ್ ಅಫ್‌ಘಾನ್ ಇವನನ್ನು ಸೋಲಿಸಲು ಒಂದು ದೊಡ್ಡ ಸೈನ್ಯವನ್ನು ತಯಾರು ಮಾಡುತ್ತಿದ್ದಾನೆ ಎಂದೂ ತಿಳಿಸಿದರು. ಈ ವಿಷಯವನ್ನು ತಿಳಿದು ನಾನಂದುಕೊಂಡೆ, ಈಗ ಈ ರಾಜ್ಯದ ಪರಿಸ್ಥಿತಿಯು ಅಶುಭದಾಯಕವಾಗಿದೆ; ದೊಡ್ಡ ಪಗಡಿ(ಮುಂಡಾಸು)ಯವನು ಈ ರಾಜ್ಯದ ದೊಡ್ಡ ವೈರಿಯಾಗಿದ್ದಾನೆ. ಭವಿಷ್ಯಕಾರರ ಹೇಳಿಕೆಯಂತೆ ಅತಾರಿ ಎಂಬ ನಕ್ಷತ್ರ ಆಕಾಶದ ಮಧ್ಯೆ ಬರುವಾಗ ದುವಾ ಪ್ರಾರ್ಥನೆ ಮಾಡಿದಲ್ಲಿ ನಮ್ಮ ಇಷ್ಟಾರ್ಥಗಳು ನೆರವೇರುತ್ತವೆ. ಈ ನಕ್ಷತ್ರವು ಬಹಳ ಚಿಕ್ಕ ಆಕಾರದಲ್ಲಿದ್ದು ಸೂರ್ಯನ ಸನಿಹದಲ್ಲಿ ಯಾವಾಗಲೂ ಇರುತ್ತದೆನ್ನಲಾಗುತ್ತದೆ. ಇದರಿಂದ ನನಗೆ ಈ ರಾಜ್ಯದಲ್ಲಿ ಏನೋ ಅನಾಹುತ ಸಂಭವಿಸಲಿದೆ ಎಂಬುದು ಹೊಳೆಯಿತು. ನಲ್ವತ್ತು ದಿನಗಳ ನಂತರ ನನಗೆ ಸಿಕ್ಕಿದ ವರ್ತಮಾನದಂತೆ ಸಿಕಂದರ್ ಅಫ್‌ಘಾನ್ ಯುದ್ಧದಲ್ಲಿ ಸೋತುಹೋಗಿ ಅವನ ಬಹು ಪಾಲು ಸೈನ್ಯ ನಾಶವಾಗಿತ್ತು. ಹಾಗೆ ನೋಡಿದರೆ ಸಿಕಂದರ್ ಅಫಘಾನನ ಸೈನ್ಯ, ರಾಜ್ಯದ ಘನತೆ, ಗೌರವ, ವೈಭವ, ಸಂಪತ್ತು ಅತ್ಯಂತ ಉನ್ನತ ಮಟ್ಟದ್ದಾಗಿತ್ತು. ಆದರೂ ಅವನು ಸೋತುಹೋಗಿದ್ದ. ಖಾನೆಜಮಾನ ವಿಜಯಿಯಾಗಿದ್ದ. ಕೆಲವು ದಿನಗಳ ಬಳಿಕ ಬೇರೆ ಇನ್ನಿತರ ರಾಜ್ಯಗಳನ್ನು ವಶಪಡಿಸಿಕೊಳ್ಳುವ ಅತಿಯಾದ ಆಕಾಂಕ್ಷೆಹೊಂದಿದವನಾಗಿ ಪ್ರಯಾಣವನ್ನು

ಮುಂದುವರಿಸಿದ. ಅಲ್ಲಿಂದ ಗಂಗಾನದಿಯ ದಡದ ಬಕ್ಸರ್ ರಾಜ್ಯದ ಕೋಟೆಯ ಮೇಲೆ ದಾಳಿಯಿಟ್ಟು ವಶಪಡಿಸಿಕೊಂಡ. ಪ್ರಯಾಣವನ್ನು ಮುಂದುವರಿಸಿ ತಾಜ್ ಖಾನ್ ಕರ್‍ರಾನಿಯ ಜಗದೇಶಪುರದ ಕೋಟೆಯನ್ನು ವಶಪಡಿಸಿಕೊಂಡ. ಈ ಕೋಟೆಯ ಸುತ್ತಮುತ್ತಲೂ ದಟ್ಟವಾದ ಕಾಡು ಇತ್ತು.

**ಬಂಗಾಳದ ಬಾದಶಾಹ ಜಲಾಲ್ ಶಾಹನ ತಾಜ್ ಖಾನ್ ಕರ್‍ರಾನಿಯ ರಾಜ್ಯಕ್ಕೆ ಆಗಮನ ಮತ್ತು ಅವನ ಹಾಜಿಪುರದ ತನಕ ವಿಸ್ತರಿಸಿದ ರಾಜ್ಯವನ್ನು ವಶಪಡಿಸಿಕೊಳ್ಳುವ ಪ್ರಯತ್ನದ ವಿವರಗಳು:**

ತಾಜ್ ಖಾನ್ ಕರ್‍ರಾನಿ ಓರ್ವ ಸಿಕಂದರ್ ಅಫಘಾನನ ಮುಖ್ಯ ಅಧಿಕಾರಿಯಾಗಿದ್ದು ಅವನ ವಶದಲ್ಲಿ ನಾಲ್ಕು ಕೋಟೆಗಳಿದ್ದವು. ಅವನ ಬಳಿ ಇಪ್ಪತ್ತು ಸಾವಿರ ಸೈನಿಕರು ಇದ್ದರು. ಹೀಗೆಯೇ ಜಲಾಲ್ ಶಾಹನ ಬಳಿ ಒಂದು ಲಕ್ಷ ಸೈನಿಕರು ಮತ್ತು ಹತ್ತು ಸಾವಿರ ಸಿಡಿಗುಂಡು ಪರಿಣಿತ ಸೈನಿಕರು ಇದ್ದರು. ಇವರ ಬಳಿ ಐದು ಸಾವಿರ ಯುದ್ಧ ಸಾಮಾನುಗಳು ಕೂಡ ಇದ್ದವು. ಇವೆಲ್ಲವನ್ನು ಸೇರಿಸಿಕೊಂಡು ತಾಜ್ ಖಾನ್ ಕರ್‍ರಾನಿಯ ಹಾಜಿಪುರವನ್ನು ವಶಪಡಿಸಿಕೊಳ್ಳಲು ಯುದ್ಧಮಾಡುವುದಕ್ಕೆ ಹೊರಟಿದ್ದ. ತಾಜ್ ಖಾನ್ ಕರ್‍ರಾನಿ ಅವನನ್ನು ಎದುರಿಸಲು ಸಾಧ್ಯವಾಗದೆ ಅವನ ವಶಕ್ಕೆ ಒಪ್ಪಿಸಿಬಿಟ್ಟ. ಈ ಮಧ್ಯೆ ಖಾನೆಜಮಾನ್ ಕರ್‍ರಾನಿಯನ್ನು ಬೆಂಬಲಿಸುವ ಸಲುವಾಗಿ ಅಲ್ಲಿಗೆ ಬಂದ. ಹಾಜಿಪುರದ ನದಿಯ ಬಳಿಯಲ್ಲಿ ಬೀಡುಬಿಟ್ಟ. ಜಲಾಲ್ ಶಾಹ ಪ್ರತೀದಿನ ನದಿಯ ದಡಕ್ಕೆ ಬಂದು ಪಹರೆಯ ವ್ಯವಸ್ಥೆಯನ್ನು ನೋಡಿಕೊಳ್ಳುತ್ತಿದ್ದ. ನಾನು ಕೂಡ ಒಂದು ಅವಕಾಶದ ದೆಸೆಯಿಂದ ಖಾನೆಜಮಾನನ ಬಳಿ ಹೋಗಿದ್ದೆ. ಆಗ ಅಲ್ಲಿ ಅನೇಕ ಜನ ಹಿಂಡುಹಿಂಡಾಗಿ ಆಗ್ರಾದತ್ತ ಹೋಗುತ್ತಿರುವುದನ್ನು ಕಂಡೆ. ಇದೇನು ಈ ಥರ ಜನ ಇಲ್ಲಿನ ರಾಜ್ಯವನ್ನು ಬಿಟ್ಟು ಪಲಾಯನ ಮಾಡುತ್ತಿದ್ದಾರೆ ಎಂದು ಆಶ್ಚರ್ಯಪಟ್ಟುಕೊಂಡೆ. ವಿಚಾರಿಸಿದಾಗ ಖಾನೆಜಮಾನ್ ಅಕ್ಬರ್ ಬಾದಶಾಹನ ಸಹಾಯಕ್ಕಾಗಿ ಜನರನ್ನು ಕಳುಹಿಸುತ್ತಿದ್ದಾನೆಂಬ ಸಂಗತಿ ತಿಳಿಯಿತು. ಅಕ್ಬರ್ ಬಾದಶಾಹ ತನ್ನ ಸರಹದ್ದಿನ ಪಡೆ ಮತ್ತು ಅಧಿಕಾರಿಗಳಿಗೆ ಖಾನೆಜಮಾನನ ಬೆಂಬಲಕ್ಕೆ ನಿಲ್ಲಲು ಆಜ್ಞೆನೀಡಿದ. ಅಲ್ಲಿ ಅಕ್ಬರ್ ಬಾದಶಾಹ ಆಗ್ರಾದಲ್ಲಿ ಸಿಂಹಾಸನಾರೂಢನಾಗಿದ್ದ. ಆದರೆ ಆಗ್ರಾದ ಶ್ರೀಮಂತರು ಹೆದರಿದ್ದರಿಂದ ತಮ್ಮ ಧನಕನಕ ಸಂಪತ್ತುಗಳನ್ನು ಅಲ್ಲಿಂದ ಕಾಬೂಲಿಗೆ ರವಾನಿಸ ತೊಡಗಿದ್ದರು. ಅಕ್ಬರನ ರಾಜ್ಯದಲ್ಲಿ ರಕ್ಷಣೆಯ ಭರವಸೆಯನ್ನು ಅವರು ಕಳೆದುಕೊಂಡಿದ್ದರು. ನಾನು ಇದನ್ನು ಕಂಡು ಅವರಿಗೆ ಧೈರ್ಯ ತುಂಬಿ ಅವರ ಸಂಪತ್ತನ್ನು ರಕ್ಷಿಸುವ ಭರವಸೆ ನೀಡಿದಾಗ ಅವರು ಖಾನೆ ಜಮಾನನ ಖಜಾನೆಯಲ್ಲಿ ಜಮಾ ಮಾಡಲು ಒಪ್ಪಿದರು. ಖಾನೆ ಜಮಾನನ ಸೈನ್ಯ ನದಿಯ ದಡದಲ್ಲಿ ಬೀಡುಬಿಟ್ಟಿತ್ತು. ನದಿಯಲ್ಲಿ ಪ್ರವಾಹ ಹೆಚ್ಚಿದಾಗ ಜಲಾಲ್ ಶಾಹ

ನದಿಯ ಇನ್ನೊಂದು ತಟದಲ್ಲಿ ತನ್ನ ಸೈನ್ಯವನ್ನು ಸೇರಿಸಿದ. ಆ ಕಡೆಯಲ್ಲಿ ಬರುತ್ತಿದ್ದ ಪ್ರಯಾಣಿಕರನ್ನು ತಡೆದು ಕೊಂದು ಹಾಕುತ್ತಿದ್ದ.

ಖಾನೆಜಮಾನ ಈ ಸುದ್ದಿ ತಿಳಿದಾಗ ಅಮಾಯಕರನ್ನು ಕೊಲ್ಲುವುದು ನಾಮರ್ದರ ಕೃತ್ಯವೆಂದು ಹೇಳಿದ. ಖಾನೆಜಮಾನ್ ತನ್ನ ಅಧಿಕಾರಿಗಳು ಸೇನಾಧಿಪತಿಗಳ ಸಭೆಯನ್ನು ಕರೆದು ನದಿಯನ್ನು ದಾಟುವ ಬಗ್ಗೆ ಸಮಾಲೋಚನೆ ನಡೆಸಿದ. ಖುರ್ರತ್ ಬಹರಿ ಎಂಬ ಒಬ್ಬ ಸರದಾರ ಎದ್ದು ನಿಂತು ನಿಮ್ಮ ಅನುಮತಿ ಇದ್ದಲ್ಲಿ ನಾನು ಈ ಕೆಲಸವನ್ನು ಮಾಡಬಲ್ಲೆನೆಂದು ಹೇಳಿದ. ಖಾನೆಜಮಾನ್ ಅವನಿಗೆ ಅನುಮತಿ ನೀಡಿ ಶುಭಾಶಯಗಳನ್ನು ಹೇಳಿದ. ಏಳು ನೂರು ಜವಾನರನ್ನು ಅವನ ಸಹಾಯಕ್ಕೆ ನೀಡಿದ. ಅವನು ನದಿಯನ್ನು ದಾಟುವುದಕ್ಕೆ ಅನುಕೂಲವಾಗುವಂತೆ ಹಾದಿ ನಿರ್ಮಾಣದಲ್ಲಿ ತೊಡಗಿದ. ಈ ಕೆಲಸದಲ್ಲಿ ನಿರತನಾಗಿ ನದಿಯನ್ನು ದಾಟುವುದಕ್ಕೆ ಮಣ್ಣಿನ ತಾತ್ಕಾಲಿಕ ಹಾದಿಯನ್ನು ನಿರ್ಮಿಸಿದ. ಇನ್ನು ಸಮಯ ಕಳೆಯದೆ ಕೂಡಲೇ ಅಫ್ಘಾನ್ ಸೈನ್ಯದ ಮೇಲೆ ಎರಡು ಮೂರು ಬಾರಿ ದಾಳಿಯನ್ನು ಮಾಡಿ ಅವರನ್ನು ಅಲ್ಲಿಂದ ಓಡಿಸಿದ. ವೈರಿ ಸೈನ್ಯದ ಒಂದು ದೊಡ್ಡ ತಂಡವನ್ನು ಅವರ ಕೈಗಳನ್ನು ಕಟ್ಟಿ ಬಂಧಿಸಿದ. ಅವರೆಲ್ಲರ ಶಿರಚ್ಛೇದ ಮಾಡಿಸಿದ. ನಂತರ ಖುರ್ರತ್ ಬಹರಿ ತನ್ನ ವಿಜಯದ ವಾರ್ತೆಯನ್ನು ಖಾನೆಜಮಾನನಿಗೆ ಪತ್ರದ ಮೂಲಕ ತಿಳಿಸಿದ. ಖಾನೆಜಮಾನನು ಈ ಸುದ್ದಿ ತಿಳಿದ ಕೂಡಲೇ ಅಲ್ಲಾಹನಿಗೆ ಧನ್ಯವಾದಗಳನ್ನು ಸಮರ್ಪಿಸಿದ. ವೈರಿ ಸೈನ್ಯದಿಂದ ವಶಪಡಿಸಿಕೊಳ್ಳಲಾದ ಸೈನ್ಯ ಸಾಮಾಗ್ರಿಗಳು, ಧನ ಕನಕಗಳನ್ನು ತನ್ನ ಸೈನಿಕರಿಗೆ ಸಮಾನವಾಗಿ ಹಂಚಿದ. ಸೇನೆಯಿಂದ ವಶಪಡಿಸಿಕೊಂಡ ಪ್ರಾಣಿಗಳನ್ನು ತನ್ನ ವಶಕ್ಕೆ ತೆಗೆದುಕೊಂಡ. ಹೀಗೆ ವೈರಿಗಳು ಚೆಲ್ಲಾಪಿಲ್ಲಿಯಾಗಿ ದಿಕ್ಕುದೆಸೆಕಾಣದೆ ಪಲಾಯನಗೈದರು. ಈಗ ತಾಜ್ ಖಾನ್ ಆಫ್ಘಾನನಿಗೆ ಬುದ್ಧಿಬಂದು ನಾವು ಅವರನ್ನು ಎದುರಿಸಲು ಶಕ್ತರಲ್ಲವೆಂಬ ವಿವೇಚನೆ ಮೂಡಿತು.

ಜಲಾಲ್ ಶಾಹನ ವಿರುದ್ಧ ನಡೆದ ಈ ಯುದ್ಧದಿಂದ ಅಫಘಾನನಿಗೆ ಜಯಲಭಿಸಿ ಜಲಾಲ್ ಶಾಹ ಅವಮರ್ಯಾದೆಗೆ ಗುರಿಯಾದ. ಅವನ ಸಂಪೂರ್ಣ ರಾಜ್ಯವು ಅವನ ಕೈಯಿಂದ ತಪ್ಪಿತು. ಇಷ್ಟವಿದ್ದರೆ ಸಂಧಾನಕ್ಕೆ ನಾನು ತಯಾರಾಗಿದ್ದೇನೆ ಎಂದು ಜಲಾಲ್ ಶಾಹ ಸಂದೇಶವನ್ನು ಕಳುಹಿಸಿದ. ತಾಜ್ ಖಾನ್ ಕುರ್ರಾನಿಯ ಸಹಾಯಕ್ಕೆ ತಯಾರಾಗಿ ನಿಂತಿದ್ದ ಖಾನೆಜಮಾನ್ ಈ ಸಂಧಾನಕ್ಕೆ ಸಮ್ಮತಿಸಿರಲಿಲ್ಲ. ಯಾಕೆಂದರೆ ಬಾದಶಾಹ ಅಕ್ಬರನ ಬೆಂಬಲ ಇವನಿಗಿತ್ತು. ಅವನು ಈ ಯುದ್ಧದ ವಿಜಯದ ಹಕ್ಕುದಾರ ತಾನೆಂದು ಹೇಳಬೇಕಿತ್ತು. ಇದರಿಂದಾಗಿ ಸಂಧಾನಕ್ಕೆ ಕೆಲವು ಶರ್ತಗಳು, ಪ್ರಮಾಣಗಳನ್ನು ಮುಂದಿಡಬೇಕೆಂದು ತನ್ನ ಪರವಾಗಿ ಸಂದೇಶವನ್ನು ದೂತನ ಮೂಲಕ ಕಳುಹಿಸಿದ. ಇದರಲ್ಲಿ ಮೂರು ಸಾವಿರ ಹವನ್ ನಗದು

ಹಣವನ್ನು ಜಲಾಲ್ ಶಾಹ ಕೊಡಬೇಕೆಂದೂ ಮತ್ತು ಇತರ ಚಿನ್ನ, ಬೆಳ್ಳಿ, ಮುಂತಾದ ಬೆಲೆಬಾಳುವ ಸಂಪತ್ತು, ಬಿಳಿ ಬಂಗಾಲಿ ವಸ್ತ್ರ, ಬಂಗಾಲಿ ಪರಂಪರೆಗೆ ಸೇರಿದ ದೋತಿ, ಪಾದರಕ್ಷೆ, ಒಂದು ಸಂದೂಕದ ತುಂಬ ಕಾಳು ಮೆಣಸು, ದಾಲ್ಚೀನಿ, ಲವಂಗ ಮತ್ತಿತರ ಸಂಬಾರ ಜೀನಸುಗಳು, ಮುಷ್ಕ್, ಅಂಬರ್, ಶ್ರೀಗಂಧ, ಕರ್ಪೂರ ಮುಂತಾದ ಸುಗಂಧ ದ್ರವ್ಯಗಳನ್ನು ನೀಡಬೇಕು, ಬೆಲೆಬಾಳುವ ಮುತ್ತು ಹರಳುಗಳನ್ನು ಸಿಂಗರಿಸಿದ ತಲವಾರು, ಶಂಷೀರ್ ಇನ್ನಿತರ ಯುದ್ಧದ ಶಸ್ತ್ರಾಸ್ತ್ರಗಳು, ನೆಲಹಾಸು ಜಮಖಾನಗಳು, ದಿಂಬುಗಳು, ಹಾಸಿಗೆಗಳು, ಕೆಲವು ತುರ್ಕಿ ಮತ್ತು ಹಿಂದುಸ್ಥಾನ ಮೂಲದ ಗುಲಾಮರು ಹಾಗೂ ಇತರ ಸಾಮಗ್ರಿಗಳನ್ನು ನೀಡಬೇಕೆಂದು ಶರತ್ತು ಹಾಕಲಾಯಿತು.

ಇವೆಲ್ಲ ಕಪ್ಪಕಾಣಿಕೆಯನ್ನು ಒಪ್ಪಿಸಿ ಸಂಧಾನ ಮಾಡಿಕೊಂಡ ಜಲಾಲ್ ಶಾಹ ತನ್ನ ರಾಜ್ಯ ಬಂಗಾಲಕ್ಕೆ ಹಿಂತಿರುಗಿದ. ಫತೇಹ ಖಾನ್ ಎಂಬ ಬಂಗಾಲದ ಹಿರಿಯ ಸರದಾರನ ವಶದಲ್ಲಿ ರೋಹತಾಸ್ ಕೋಟೆಯಿತ್ತು. ಈ ಕೋಟೆಯನ್ನು ಕೂಡ ಖಾನೆಜಮಾನನಿಗೆ ಒಪ್ಪಿಸಿ ಅವನು ಹಾಜಿಪುರಕ್ಕೆ ಹೋಗಿ ನೆಲೆಸಿದ. ಅವನು ತನ್ನ ಸ್ವ ಇಚ್ಛೆಯಿಂದ ಖಾನೆಜಮಾನನ ಸೈನ್ಯದಲ್ಲಿ ಸೇರಿಕೊಂಡ. ಹೀಗೆ ನಾಲ್ಕು ಪ್ರಮುಖ ಜಾಗೀರುದಾರ ಅಫಘಾನರು ಖಾನೆಜಮಾನನ ಬೆಂಬಲಿಗರಾಗಿ ಸೇರಿಕೊಂಡರು. ದರಿಯಾ ಖಾನ್ ಗಾಗರು ಮತ್ತು ಮುಬಾರಕ್ ಖಾನ್ ಲೋದಿ ಕೂಡ ಖಾನೆಜಮಾನನ ಸೇವೆಗೆ ಸೇರಿಕೊಳ್ಳಲು ಒಪ್ಪಿಕೊಂಡು ಜಗದೇಶಪುರದ ಕೋಟೆಯ ಮೇಲೆ ದಾಳಿ ನಡೆಸಲು ಹೋದರು. ಗಂಗಾ ನದಿಯ ದಡಕ್ಕೆ ಬಾದಶಾಹ ಅಕ್ಬರನ ಸರದಾರರು ಬಂದು ತಲಪಿದಾಗ ಖಾನೆಜಮಾನನು ಜಲಾಲ್ ಶಾಹನೊಂದಿಗೆ ಸಂಧಿ ಮಾಡಿಕೊಂಡ ಸುದ್ದಿ ಸಿಕ್ಕಿತು. ಜಗದೇಶಪುರ ಕೋಟೆಯನ್ನು ವಶಪಡಿಸಿಕೊಳ್ಳಲು ಪ್ರಯಾಣಿಸಿದ್ದಾನೆಂಬ ವರ್ತಮಾನ ತಲಪಿತು. ಇದರಿಂದ ಈ ಸರದಾರರಿಗೆ ತುಂಬ ಅವಮಾನವಾದಂತಾಯಿತು. ಅವರು ಬೇಸರಪಟ್ಟುಕೊಂಡು ಹಿಂತಿರುಗಿ ತಮ್ಮ ಸ್ಥಳಕ್ಕೆ ಹಿಂತಿರುಗಿದರು. ಖಾನೆಜಮಾನ ತನ್ನ ವಿಜಯ ಯಾತ್ರೆ ಸಂಪೂರ್ಣ ವರದಿಯನ್ನು ಅಕ್ಬರ್ ಬಾದಶಾಹನ ಸನ್ನಿಧಾನಕ್ಕೆ ಒಪ್ಪಿಸಿದ.

**ಖಾನೆಜಮಾನ ಜಗದೇಶಪುರ ಕೋಟೆಯನ್ನು ವಶಪಡಿಸಿಕೊಂಡ ವಿವರಗಳು:**

ಹಾಜಿಪುರದಿಂದ ಖಾನೆಜಮಾನ ಜಗದೇಶಪುರ ಕೋಟೆಯನ್ನು ವಶಪಡಿಸಿಕೊಳ್ಳುವ ಸಲುವಾಗಿ ಪ್ರಯಾಣಿಸುವಾಗ ಹಾದಿಯಲ್ಲಿ ದಟ್ಟವಾದ ಕಾಡು ಇದ್ದು, ಕೋಟೆಯ ಸುತ್ತಲೂ ಹರಡಿರುವುದು ಕಂಡುಬಂತು. ಇಲ್ಲಿ ಬಹಳ ಜೋರಾಗಿ ಮಳೆಯೂ ಹೊಯ್ಯುತ್ತಿತ್ತು. ಇದರಿಂದಾಗಿ ಕೋಟೆಯ ತನಕ ತಲಪುವುದು

ಕಷ್ಟಕರವಾಗಿತ್ತು. ಈ ಕಾರಣದಿಂದ ಸಾರ್ವಜನಿಕರಿಗೆ ಕಾಡಿನ ಮರಗಿಡಗಳನ್ನು ಕಡಿದು ಹಾಕಲು ಹೇಳಿದ. ಕಡಿದ ಮರದ ದಿಂಬುಗಳನ್ನು ಹಾಗೆಯೇ ಉಳಿಸಿ, ಗೆಲ್ಲುಗಳನ್ನು ಸಾರ್ವಜನಿಕರಿಗೆ ಉರುವಲು ಕಟ್ಟಿಗೆಯಾಗಿ ಉಪಯೋಗಿಸಲು ಹೇಳಿದ. ಕಾಡು ಕಡಿದು ವಿಶಾಲವಾದ ಪ್ರದೇಶ ಲಭಿಸಿ ಅಲ್ಲಿ ಹಾದಿಯನ್ನು ಮಾಡಲಾಯಿತು. ಅಲ್ಲಿ ಜನರ ವಾಸಕ್ಕೆ ಂೀಗ್ಯವಾದ ಒಂದು ನಾಡನ್ನು ನಿರ್ಮಿಸಲಾಗಿ ಅದಕ್ಕೆ ಇಸ್ಲಾಮ್‌ಪುರವೆಂದು ಹೆಸರಿಡಲಾಯಿತು. ಅವನ ಎಲ್ಲ ಸೇವಕರು, ಸೈನಿಕರು, ಸರದಾರರು ಸೇರಿ ಅಲ್ಲಿ ಮಾರುಕಟ್ಟೆಯನ್ನು, ನಿವಾಸಕ್ಕೆ ಕಟ್ಟಡಗಳು, ಅಂಗಡಿ ಬಾಜಾರುಗಳನ್ನು ಬಹಳ ಬೇಗನೆ ಮಾಡಿ ಮುಗಿಸಿದರು. ಈ ನಗರ ಈಗಲೂ ಹಾಗೆಯೇ ಇದೆ. ಪ್ರತೀ ದಿನ ಐದು ಸಾವಿರ ಕೂಲಿಗಳು ಕಾಡಿನ ಮರಗಿಡಗಳನ್ನು ಕಡಿಯುವ ಕೆಲಸವನ್ನು ಮಾಡುತ್ತಿದ್ದರು. ಮುನ್ನೂರು ಮೊಘಲರನ್ನು ಅವನು ಈ ಕೆಲಸದಲ್ಲಿ ತೊಡಗಿಸಿ ರಸ್ತೆಯನ್ನು ನಿರ್ಮಿಸಿದ. ಈ ಕೆಲಸಗಳ ಮಧ್ಯೆ ಆಗಾಗ ಬಹಳ ಜೋರಾಗಿ ಜಡಿಮಳೆ ಹೊಡೆಯುತ್ತಿದ್ದು ಕೆಲಸಕ್ಕೆ ಅಡಚಣೆಯುಂಟಾಗುತ್ತಿತ್ತು.

ತಾಜ್ ಖಾನ್ ಕರ್ರಾನಿ ತನ್ನ ತಮ್ಮ ಸುಲೇಮಾನನೊಂದಿಗೆ ಕುದುರೆಗಳ ಮೇಲೆ ಸವಾರಿ ಮಾಡಿಕೊಂಡು ಕಡಿದ ಕಾಡಿನ ಕಡೆ ಹೋಗಿ ಕೆಲಸ ನಡೆಯುವ ಉಸ್ತುವಾರಿ ನೋಡಿಕೊಳ್ಳುತ್ತಿದ್ದ. (ಖಾನೆಜಮಾನ್, ಜಲಾಲ್ ಶಾಹನಿಂದ ಗೆದ್ದುಕೊಂಡ ಬಂಗಾಲದ ರಾಜ್ಯವನ್ನು ಕರ್ರಾನಿಯ ಸಹೋದರ ಸುಲೇಮಾನನಿಗೆ ಒಪ್ಪಿಸಿದ ವಿವರಗಳನ್ನು ನಾನು ಮುಂದೆ ಸಂದರ್ಭ ಬಂದಾಗ ಹೇಳಲಿದ್ದೇನೆ) ಸುಲೇಮಾನ್ ನಂತರ ಖಾನೆಜಮಾನನ ಸೈನ್ಯವನ್ನು ಸೇರಿಕೊಂಡ. ಸುಲೇಮಾನನೊಂದಿಗೆ ದ್ವೇಷವಿಟ್ಟುಕೊಂಡ ಫತೇಖಾನನ ಸಹೋದರ ನುಸ್ರತ್ ಖಾನ್ ತನ್ನ ಬೇರೆಯೇ ಸೈನ್ಯವನ್ನು ಕಟ್ಟಿಕೊಂಡ. ನಾಲ್ಕು ತಿಂಗಳ ಬಳಿಕ ಮಳೆ ನಿಂತದ್ದನ್ನು ಕಂಡು ಕೆಲಸವನ್ನು ಮುಂದುವರಿಸಿ ಹಾದಿಯ ಹೊಂಡ, ಮಣ್ಣು ರಾಶಿ ಮುಂತಾದವನ್ನು ಸರಿಪಡಿಸಿ ಸಮತಟ್ಟು ಮಾಡಿದರು. ಈ ಸಮಯದಲ್ಲಿ ಜಗದೇಶಪುರದ ರಾಜ ತೀರಿಕೊಂಡ. ಅಲ್ಲಿನ ಹಿಂದೂ ಪ್ರಜೆಗಳು ಅವನನ್ನು ತುಂಬ ಆದರದಿಂದ ನೋಡಿಕೊಂಡಿದ್ದರು. ಕಾಡು ನೆಲಸಮವಾಗಿ ನಾಡಾದಾಗ ಖಾನೆಜಮಾನ ತನ್ನ ಎಂದಿನ ಘನತೆ ಗಾಂಭೀರ್ಯದಲ್ಲಿ ಅಲ್ಲಿಗೆ ಬಂದ. ಅವನು ನೋಡುವಾಗ ಈ ಕಾಡನ್ನು ನಾಡಾಗಿಸುವ ಸಂದರ್ಭದಲ್ಲಿ ಬಹಳಷ್ಟು ಯುವಕರು ಸತ್ತಿದ್ದರು. ಹೆಚ್ಚು ಕಮ್ಮಿ ನೂರು ಜನ ಯುವ ಸೇವಕರು ಕಾಣೆಯಾಗಿದ್ದರು. ಇವರಲ್ಲಿ ಕೆಲವು ಮೊಘಲ್ ಸರದಾರರು ಕೂಡ ಸೇರಿದ್ದರು. ಇವರಲ್ಲಿ ಖಾನೆಜಮಾನನ ಚಿಕ್ಕಪ್ಪ ಮಿರ್ಜಾ ಯಾದ್ಗಾರ್ ಮತ್ತು ಹೈದರ್ ಖುಲಿ ಖಾನ್ ತರ್ಕ್‌ಮಾನಿ ಸೇರಿಕೊಂಡಿದ್ದರು. ಖಂಜರ್ ಬೇಗ್ ಸುಲ್ತಾನ್ ಕೋಟೆಯ ಬಳಿ ಹೋಗಿ ವ್ಯವಸ್ಥೆಯನ್ನು ನೋಡಿಕೊಂಡಿದ್ದ. ಕೆಲವು ದಿನಗಳ ನಂತರ ಕೋಟೆಯ

ರಾಜ ತನ್ನ ಪತ್ನಿ, ಮಕ್ಕಳು ಮತ್ತಿತರ ಕುಟುಂಬದ ಸದಸ್ಯರೊಂದಿಗೆ ನದಿಯಲ್ಲಿ ದೊಡ್ಡ ದೋಣಿಯಲ್ಲಿ ಸವಾರಿ ಮಾಡಿಕೊಂಡು ಬೆಟ್ಟದ ತಪ್ಪಲಿಗೆ ಹೋಗುತ್ತಿರುವಾಗ ಮೊಘಲ್ ಸೈನಿಕರೊಂದಿಗೆ ಗಂಗಾನದಿಯ ಪಹರೆ ಮಾಡುತ್ತಿದ್ದ ಸರದಾರ ಶಾ ಅಲಿ ಖಾನ್ ಮಿರ್ಜಿ ಹಿಡಿದುಕೊಂಡು ಬಂಧಿಸಿದನಲ್ಲದೆ ಅವರ ಬಳಿಯಿದ್ದ ಸಾಮಾನು ಸರಂಜಾಮು, ಸಂಪತ್ತನ್ನು ವಶಪಡಿಸಿಕೊಂಡ. ಮೊಘಲರು ಇದನ್ನು ತಮ್ಮ ದೊಡ್ಡ ಮಟ್ಟದ ವಿಜಯವೆಂದು ಪರಿಗಣಿಸಿದರು. ಈ ವಾರ್ತೆಯನ್ನು ತಿಳಿದ ಖಾನೆಜಮಾನ ತುಂಬ ಸಂತಸಪಟ್ಟುಕೊಂಡ. ಇನ್ನು ಕೋಟೆಯನ್ನು ಸುಲಭವಾಗಿ ವಶಪಡಿಸಿಕೊಳ್ಳಬಹುದು ಎಂದು ಉತ್ಸಾಹಿತನಾದ.

ರಾಜನನ್ನು ಬಂಧಿಸಿದ ವರ್ತಮಾನ ನಾಲ್ಕೂದಿಕ್ಕಿನಲ್ಲಿ ಹಬ್ಬಿದಾಗ ಅವನ ಮಧ್ಯವರ್ತಿಯನ್ನಾಗಿ ಬಹದ್ದೂರ್ ಖಾನನನ್ನು ಕರೆಸಲಾಯಿತು. ಅವನು ರಾಜನನ್ನು ಕರೆದುಕೊಂಡು ಖಾನೆಜಮಾನನ ಸೈನಿಕರ ತಾಣಕ್ಕೆ ಹೋಗಿ ಅವನ ಭೇಟಿ ಮಾಡಿಸಿದ. 'ಜಗದೇಶಪುರದ ಕೋಟೆ ನಮಗೆ ವಂಶಪಾರಂಪರ್ಯವಾಗಿ ಬಂದದ್ದು, ಇದನ್ನು ನಮಗೆ ಬಿಟ್ಟುಬಿಡಿ, ಉಳಿದ ಪ್ರದೇಶಗಳನ್ನು ನೀವು ಇಟ್ಟುಕೊಳ್ಳಿ' ಎಂದು ರಾಜ ಹೇಳಿದ. 'ನನ್ನ ಚಿಕ್ಕಪ್ಪ ಈ ಕೋಟೆಯನ್ನು ವಶಪಡಿಸಿಕೊಳ್ಳುವ ಸಂಘರ್ಷದ ಹಾದಿಯಲ್ಲಿ ಹುತಾತ್ಮರಾಗಿದ್ದಾರೆ. ಈ ಕೋಟೆಯನ್ನು ವಶಪಡಿಸಿಕೊಂಡೇ ಸಿದ್ಧನೆಂದು ನನ್ನಲ್ಲಿ ನಾನು ಪ್ರತಿಜ್ಞೆ ಮಾಡಿಕೊಂಡಿದ್ದೆ. ಆದುದರಿಂದ ಈ ಕೋಟೆಯನ್ನು ಹೊರತು ಪಡಿಸಿ ಬೇರೆ ಪ್ರದೇಶಗಳನ್ನು ನೀನು ಇಟ್ಟುಕೊಳ್ಳಬಹುದು' ಎಂದು ಖಾನೆಜಮಾನ ರಾಜನಿಗೆ ಉತ್ತರಿಸಿ ಅವನನ್ನು ತನ್ನ ಮಂಡಳಾಧಿಪತಿಯನ್ನಾಗಿ ಮಾಡುವ ಭರವಸೆಯನ್ನೂ, ಹಲವು ರಿಯಾಯತಿಗಳನ್ನೂ ನೀಡಿದ. ರಾಜನು ತನಗೆ ಸ್ವಲ್ಪ ಕಾಲವಕಾಶವನ್ನು ನೀಡಿ ಕೋಟೆಯ ಒಳಗೆ ಹೋಗಲು ಅನುಮತಿ ನೀಡಿರೆಂದು ಕೇಳಿಕೊಂಡ. ಖಾನೆಜಮಾನ್ ನನ್ನ ಬೆಂಬಲಕ್ಕೆ ನಿಲ್ಲುವುದಾಗಿ ಆಶ್ವಾಸನೆ ನೀಡಿದಲ್ಲಿ ನಾನು ನಿನಗೆ ಕೋಟೆಯೊಳಗೆ ಪ್ರವೇಶಿಸಲು ಅನುಮತಿ ನೀಡುತ್ತೇನೆಂದು ಹೇಳಿದ. ರಾಜ ಕೋಟೆಯನ್ನು ಪ್ರವೇಶಿಸಿದ. ತನ್ನ ಬೆಂಬಲಿಗರಲ್ಲಿ ಒಬ್ಬನನ್ನು ಹೊರಗೆ ಕಳುಹಿಸಿ ರಾಜನು ಕೋಟೆಯಲ್ಲಿ ನಿಂತುಬಿಟ್ಟ. ಖಾನೆಜಮಾನನು ರಾಜ ಯಾಕೆ ಹಿಂತಿರುಗಿ ಬರಲಿಲ್ಲವೆಂದು ಆತಂಕ ಉಂಟಾಯಿತು. ಸ್ವಲ್ಪ ಕಾಲಾವಕಾಶ ನೀಡಿದ ನಂತರ ಸಂದೇಶವನ್ನು ಕಳುಹಿಸಿ ಹಿಂತಿರುಗಿ ಬಾ, ಇನ್ನಷ್ಟು ತಡ ಮಾಡಿದರೆ ಯುದ್ಧ ಮಾಡಬೇಕಾಗುತ್ತದೆ ಎಂದು ಎಚ್ಚರನೀಡಿದ. ಮರುದಿನ ಎಪ್ಪತ್ತು ಸಾವಿರ ಕೂಲಿ ಕೆಲಸದವರನ್ನು ಕರೆದು ಹಾರೆ, ಸಣಿಕೆಗಳನ್ನು ಉಪಯೋಗಿಸಿ ಸುರಂಗ ತೋಡಲು ಆಜ್ಞಾಪಿಸಿದ. ಈ ಸುರಂಗವನ್ನು ತೋಡುವಾಗ ಬಿಲದೊಳಗಿರುವ ಹಾವು, ಇಲಿ ಹೆಗ್ಗಣಗಳು ಹೊರಬಂದವು. ಹಲವು ದಿನಗಳಕಾಲ ಈ ಸುರಂಗ ತೋಡುವ ಕೆಲಸ

ನಡೆದು ಕೊನೆಯಲ್ಲಿ ಕೋಟೆಯೊಳಗೆ ಹೋಗಲು ಸುರಂಗ ಮಾರ್ಗ ನಿರ್ಮಿಸುವಲ್ಲಿ ಸಫಲರಾದರು. ಆಗ ರಾತ್ರಿ ಹೊತ್ತಾಗಿತ್ತು. ಸುರಂಗ ಮಾರ್ಗ ಸಂಪನ್ನಗೊಂಡ ಸುದ್ದಿ ಖಾನೆಜಮಾನನಿಗೆ ತಲಪಿಸಲಾಯಿತು. ಖಾನೆಜಮಾನ್ ಕೋಟೆಯ ಹೆಬ್ಬಾಗಿಲ ಬಳಿ ಬಂದು ಈ ಹೆಬ್ಬಾಗಲಿಗೆ ಬೆಂಕಿ ಇಟ್ಟುಬಿಡಿ ಎಂದು ಆಜ್ಞಾಪಿಸಿದ. ಕೋಟೆಯ ಬಾಗಿಲು ಸುಟ್ಟುಹೋಯಿತು. ಖಾನೆಜಮಾನ್ ಕೋಟೆಯ ಬುರುಜಿನ ಮೇಲೆ ಕೂತ. ಕೆಲವು ದಿನಗಳ ಕಾಲ ಅಲ್ಲೇ ಕೂತು ನಡೆಯುವ ಘಟನೆಯನ್ನು ಕಣ್ಣಾರೆ ಕಂಡ. ಯುದ್ಧ ನಡೆದು ಕೋಟೆಯೊಳಗಿದ್ದ ರಾಜ ಮತ್ತು ಅವನ ಪರಿವಾರದವರು ಹೊರಬರಬೇಕಾಗಿ ಬಂತು. ಅವರೆಲ್ಲರೂ ಶರಣಾಗತರಾದರು. ಮುಂದೆ ರಾಜನ ಈ ಎಲ್ಲ ಕೃತ್ಯಗಳಿಗೆ ಕ್ಷಮೆನೀಡಿ ತನ್ನ ಸೈನ್ಯದಲ್ಲಿ ಒಂದು ಮುಖ್ಯವಾದ ಅಧಿಕಾರ ನೀಡಿದ.

**ಖಾನೆಜಮಾನ್ ಈ ಕೋಟೆಯ ಆಳ್ವಿಕೆಯನ್ನು ನಡೆಸಿದ ವಿವರಗಳು:**

ಈ ಸಮಯದಲ್ಲಿ ಫತೇ ಖಾನ್ ಮತ್ತು ತಾಜ್ ಕರ್ರಾನಿಯ ಸಹೋದರ ಸುಲೇಮಾನರ ಮಧ್ಯೆ ವೈರತ್ವ, ಸಂಘರ್ಷ ತೀವ್ರವಾಗಿ ನಡೆಯುತ್ತಿತ್ತು. ಸುಲೇಮಾನ್ ಮುಂದೆ ಖಾನೆಜಮಾನನ ಬೆಂಬಲಿಗನಾದ. ಫತೇ ಖಾನನ ಸಹೋದರ ನುಸ್ರತ್ ಖಾನ್ ಖಾನೆಜಮಾನನ ಕಡುವಿರೋಧಿಯಾಗಿ ಮಾರ್ಪಟ್ಟ. ಇವನು ಅವಕಾಶ ಸಿಕ್ಕಾಗಲೆಲ್ಲ ಖಾನೆಜಮಾನನನ್ನು ಕೆಣಕುತ್ತಿದ್ದ. ಖಾನೆಜಮಾನನ್ನು ಇಲ್ಲಿಂದ ಓಡಿಸಿ ಕೋಟೆಯನ್ನು ವಶಪಡಿಸಿಕೊಳ್ಳಲು ಫತೇ ಖಾನನ್ನು ಹುರಿದುಂಬಿಸುತ್ತಿದ್ದ. ಈ ಸಮಯದಲ್ಲಿ ತಾಜ್ ಖಾನ್ ಕರ್ರಾನಿಯು ತೀರಿಕೊಂಡ. ಸುಲೇಮಾನ್ ತನ್ನ ಸಹೋದರನ ರಾಜ್ಯವನ್ನು ಕಾಪಾಡುವ ಸಲುವಾಗಿ ಹಾಜಿಪುರಕ್ಕೆ ಹೋದ. ಅವನ ಮೇಲೆ ಫತೇ ಖಾನ ಅನುಮಾನ ಪಟ್ಟುಕೊಂಡು ಬಂಗಾಲದ ಸುಲ್ತಾನ ಜಲಾಲ್ ಶಾಹನಿಗೆ ಒಂದು ಪತ್ರ ಬರೆದು ಕಳುಹಿಸಿದ. 'ನಿನ್ನ ಮತ್ತು ಖಾನೆಜಮಾನನ ಮಧ್ಯೆ ಇದ್ದ ಕರಾರಿನಂತೆ ಪರಸ್ಪರರ ಸ್ನೇಹಿತರೊಂದಿಗೆ ಸ್ನೇಹದಿಂದ ವ್ಯವಹರಿಸುವ ಮತ್ತು ವೈರಿಗಳೊಂದಿಗೆ ವೈರತ್ವ ಹೊಂದಿರುವ ವಿಚಾರವು ಈಗ ಮುರಿದುಬಿದ್ದಿದೆ. ಈಗ ನಮ್ಮ ರಾಜ್ಯದಲ್ಲಿ ಅರಾಜಕತೆ ಉಂಟಾಗಿ ಗುಲ್ಲುಗಲಭೆ ನಡೆಸಿದ್ದಾನೆ ಮತ್ತು ಕೋಟೆಯನ್ನು ವಶಪಡಿಸಿಕೊಳ್ಳುವ ಹುನ್ನಾರ ನಡೆಸುತ್ತಿದ್ದಾನೆ. ಇದರಿಂದಾಗಿ ಬಂಗಾಲ ರಾಜ್ಯದ ಮೇಲೆ ಯಾವಾಗಲೂ ಅಪಾಯವು ತಪ್ಪಿದ್ದಲ್ಲ. ಇದಕ್ಕಾಗಿ ಕೂಡಲೇ ಕಾರ್ಯೋನ್ಮುಖರಾಗಿರಿ' ಎಂದು ಪತ್ರದಲ್ಲಿ ನಮೂದಿಸಿದ್ದ. ಜಲಾಲ್ ಶಾಹ ಈ ಪತ್ರವನ್ನೋದಿ ತುಂಬ ಪ್ರಭಾವಿತನಾದ. ಕೂಡಲೇ ಸೈನ್ಯವನ್ನು ಸಜ್ಜಾಗಿಸಿ ಪ್ರಯಾಣಕ್ಕೆ ತಯಾರಾದ. ಆದರೆ ಜಲಾಲ್ ಶಾಹನ ತಾಯಿ ಈ ಪ್ರಯಾಣ ಮಾಡದಂತೆ ಸಲಹೆ ನೀಡಿದಳು. ಮೊಘಲರನ್ನು ಯುದ್ಧದಲ್ಲಿ ಸೋಲಿಸುವುದು ಸಾಧ್ಯವಾಗದು. ನಿನ್ನ

ರಾಜ್ಯವನ್ನು ರಕ್ಷಿಸುವ ನಿಟ್ಟಿನಲ್ಲಿ ಕಾರ್ಯೋನ್ಮುಖನಾಗುವುದರಲ್ಲಿ ನಿನ್ನ ಒಳಿತಿದೆ ಎಂದು ಆ ರಾಜಮಾತೆ ತನ್ನ ಮಗನಿಗೆ ಬುದ್ಧಿ ಹೇಳಿದಳು. ಆದರೆ ಅವನು ಯಾರ ಮಾತನ್ನು ಕೂಡ ಕೇಳುವ ಸ್ಥಿತಿಯಲ್ಲಿರಲಿಲ್ಲ. ಸೈನಿಕ ಕಾರ್ಯಾಚರಣೆಗೆ ತಯಾರಾಗಿ ಜಲಾಲ್ ಶಾಹ ಸನ್ನದ್ಧನಾದ.

ಈ ವಾರ್ತೆ ಖಾನೆಜಮಾನನಿಗೆ ತಲಪಿದಾಗ ಅವನು ತನ್ನ ಗುಪ್ತಚರರನ್ನು ಎಲ್ಲೆಡೆ ಕಳುಹಿಸಿದ. ದಿನವೂ ಈ ನಿಟ್ಟಿನಲ್ಲಿ ನಡೆಯುವ ಬೆಳವಣಿಗೆಯ ವರದಿ ತನಗೆ ಸಲ್ಲಿಸುವಂತೆ ಆಜ್ಞೆಮಾಡಿದ. ಕೊನೆಯಲ್ಲಿ ಜಲಾಲ್ ಶಾಹ ತನ್ನ ಅರಮನೆಯಿಂದ ಹೊರಟು ಕೌರ್ ಎಂಬ ಹೆಸರಿನ ಪ್ರದೇಶದ ಕಡೆ ಪ್ರಯಾಣಿಸಿದ. ಖಾನೆಜಮಾನನಿಗೆ ಈ ಸುದ್ದಿ ತಿಳಿದಾಗ ಸುಲೇಮಾನನಿಗೆ ಪತ್ರ ಬರೆದು ತಿಳಿಸಿದ. ನಾನು ಸ್ವತಃ ಜಲಾಲ್ ಶಾಹನನ್ನು ಎದುರಿಸಲು ಹೊರಡುತ್ತಿದ್ದೇನೆ, ನೀನು ಕೂಡ ಕೂಡಲೇ ಸೈನ್ಯದೊಂದಿಗೆ ಅಲ್ಲಿಗೆ ಬಂದುಬಿಡು ಎಂದು ಪತ್ರದಲ್ಲಿ ತಿಳಿಸಿದ್ದ. ಖಾನೆಜಮಾನ್ ತನ್ನೊಂದಿಗೆ ನಾಲ್ಕು ಸಾವಿರ ಸೈನಿಕರೊಂದಿಗೆ ಯುದ್ಧಕ್ಕೆ ಹೊರಟ. ಹಾದಿಯಲ್ಲಿ ಸುಲೇಮಾನ್ ಕೂಡ ತನ್ನ ಸೈನ್ಯದೊಂದಿಗೆ ಅಲ್ಲಿಗೆ ಬಂದು ಸೇರಿಕೊಂಡ. ಒಂದು ದಿನ ಜಲಾಲ್ ಶಾಹನ ಸೈನ್ಯ ಆರಾಮ ಮಾಡಿ ಮರುದಿನ ಪ್ರಯಾಣ ಮುಂದುವರಿಸಿತು. ಜಲಾಲ್ ಶಾಹ ಯುದ್ಧದ ತಯಾರಿಯನ್ನು ಸಂಪೂರ್ಣವಾಗಿ ಮಾಡಿಕೊಂಡು ಮುಂದುವರಿದ. ಆದರೆ ಅವನಿಗೆ ಮೊಘಲರ ಕೈಯಲ್ಲಿ ಸೋಲನ್ನು ಅನುಭವಿಸಬೇಕಾಯಿತು. ಅವನ ಸೈನ್ಯ ಸಂಪೂರ್ಣ ನಾಶವಾಯಿತು. ಅವನ ಬಳಿಯಿದ್ದ ಅಪರಿಮಿತವಾದ ಸಂಪತ್ತು ಸಾಮಾನು ಸರಂಜಾಮು, ಶಸ್ತ್ರಾಸ್ತ್ರಗಳು ಮೊಘಲರ ವಶವಾಯಿತು. ಬಂಗಾಲದ ರಾಜ್ಯವನ್ನು ಸುಲೇಮಾನನ ವಶಕ್ಕೆ ಒಪ್ಪಿಸಲಾಯಿತು. ಖಾನೆಜಮಾನನು ಈ ವಿಜಯದ ನಂತರ ರೋಹಿತಾಸ್ ಮೂಲಕ ತನ್ನ ರಾಜ್ಯಕ್ಕೆ ಹಿಂತಿರುಗಿದ. ಹೀಗೆ ಬಂಗಾಲದ ಮೇಲೆ ತನ್ನ ಹಿಡಿತವನ್ನು ಬಲಗೊಳಿಸಿಕೊಂಡ.

**ಬಂಗಾಲದ ಬಾದಶಾಹ ಮತ್ತು ಸರದಾರರ ಆಗಮನ ಖಾನೆಜಮಾನನ ಮೇಲೆ ಮರುದಾಳಿ ಮತ್ತು ಸೋಲಿನ ವಿವರಗಳು:**

ಬಂಗಾಲದ ಬಾದಶಾಹ ಜಲಾಲ್ ಶಾಹ ಕಿಡಿಕಿಡಿಯಾಗಿ ಖಾನೆಜಮಾನನ ಮೇಲೆ ದಾಳಿ ನಡೆಸಿ ಸೋಲಿಸುವ ಅವಕಾಶಕ್ಕಾಗಿ ಕಾಯುತ್ತಿದ್ದ. ಯಾಕೆಂದರೆ ಬಂಗಾಲದ ರಾಜ್ಯವನ್ನು ವೈರಿಗಳ ವಶಕ್ಕೆ ಒಪ್ಪಿಸಿದ್ದನೆಂಬುದು ಅವನ ದ್ವೇಷಕ್ಕೆ ಕಾರಣವಾಗಿತ್ತು. ಅವನು ಬಂಗಾಲವನ್ನು ಹೇಗಾದರೂ ಮಾಡಿ ಮರುವಶಕ್ಕೆ ತೆಗೆದುಕೊಳ್ಳುವುದಕ್ಕಾಗಿ ಹೊಂಚುಹಾಕುತ್ತಿದ್ದ. ಅವನು ತನ್ನ ಹನ್ನೆರಡು ಮಂದಿ ಸರದಾರರು ಮತ್ತು ಇಪ್ಪತ್ತು ಸಾವಿರ ಕುದುರೆ ಸವಾರ ಸೈನಿಕರು ಮೂರು ನಾಲ್ಕು

ದಸ್ತಾವೇಜು ಬರಹಗಾರರೊಂದಿಗೆ ದಾಖಲಾತಿಗಳನ್ನು ನೀಡಿ ಖಾನೆ ಜಮಾನನಿಗೆ ರವಾನಿಸಿದ. ಇದರಲ್ಲಿ ರಾಜ್ಯದ ಆಳ್ವಿಕೆಯ ಜವಾಬ್ದಾರಿಯನ್ನು ಈ ಸರದಾರರಿಗೆ ಸಮಪ್ರಮಾಣದಲ್ಲಿ ಪಾಲು ಮಾಡಿ ನೀಡಿ ಎಂದು ನಮೂದಿಸಿದ್ದ. ದಸ್ತಾವೇಜುದಾರರಿಗೆ ಈ ಕೆಲಸವನ್ನು ಸರಿಯಾಗಿ ದಾಖಲೆ ಮಾಡಬೇಕು ಎಂದು ಹೇಳಿದ್ದ. ಆದರೆ ಇವರ ಅಂತರ್ಯದ ಯೋಜನೆಗಳು ಬೇರೆಯೇ ಆಗಿದ್ದು, ಹನ್ನೆರಡು ಸರದಾರರು ಖಾನೆಜಮಾನನ ಮೇಲೆ ಎರಗಿ ಅವನನ್ನು ಬಂಧಿಸಿ ರಾಜ್ಯವನ್ನು ನಾವೇ ಇಟ್ಟುಕೊಳ್ಳೋಣವೆಂದು ಯೋಜನೆಗಳನ್ನು ಹೂಡಿದ್ದರು. ಹೀಗೆ ಯೋಚಿಸಿಕೊಂಡು ಜಲಾಲ್ ಶಾಹನ ಸೈನ್ಯ ಖಾನೆಜಮಾನನ ಬಳಿಗೆ ಹೋಗುತ್ತಿತ್ತು. ಪ್ರಯಾಣದ ಹಾದಿಯಲ್ಲಿ ಚನಾರ್ ಎಂಬ ಕೋಟೆಯ ಮುಖ್ಯಸ್ಥ ಅಫಘಾನ್ ವಂಶದ ಫತ್ತೂನನ್ನು ಭೇಟಿಯಾಗಿ ಬೆಂಬಲ ಪಡೆದರು. ಅವನ ಹೆಸರನ್ನು ಬದಲಾಯಿಸಿ ಶೇರ್ ಶಾಹ ಎಂದು ಕರೆದು ಅವನನ್ನೂ ಸೇರಿಸಿಕೊಂಡು ಖಾನೆಜಮಾನನ ಕಡೆ ಪ್ರಯಾಣವನ್ನು ಮುಂದುವರಿಸಿದರು. ಇವರ ಮಧ್ಯೆ ಯುದ್ಧ ಶುರುವಾಯಿತು. ಖಾನೆಜಮಾನ ತುಂಬ ಬಲಶಾಲಿಯಾಗಿದ್ದ. ಜಲಾಲ್ ಶಾಹನ ಸರದಾರರು ತಮ್ಮ ಶಕ್ತಿಗುಂದುತ್ತಿರುವುದನ್ನು ಕಂಡುಕೊಂಡರು. ಅವರು ಬೇರೆಯೇ ರೀತಿಯಲ್ಲಿ ಯೋಚಿಸಿದ್ದಕ್ಕೆ ಈಗ ಪಶ್ಚಾತ್ತಾಪಪಡುವಂತಾಯಿತು. ಕೊನೆಯಲ್ಲಿ ಈ ಯುದ್ಧದಲ್ಲಿ ಸಾವಿರಾರು ಜನ ಸೈನಿಕರು ಅಸು ನೀಗಿದರು. ಈ ಸರದಾರರು ಯುದ್ಧವನ್ನು ಎದುರಿಸಲಾರದೆ ಸೋತು ಸೈನ್ಯವು ಚೆಲ್ಲಾಪಿಲ್ಲಿಯಾಗಿ ಓಡಿಹೋಯಿತು. ಅವರ ಅಳಿದುಳಿದ ಕುದುರೆಗಳು, ಶಸ್ತ್ರಾಸ್ತ್ರಗಳು, ಸಾಮಾನು, ಸಂಪತ್ತು ಎಲ್ಲವೂ ಮತ್ತೊಮ್ಮೆ ಖಾನೆಜಮಾನನ ವಶವಾಯಿತು. ಫತ್ತೂ ಶೇರ್ ಶಾಹನು ಖಾನೆಜಮಾನನ ಮುಂದೆ ಶರಣಾಗತನಾಗಿ ತನ್ನ ಬದುಕನ್ನು ಆರಾಮದಿಂದ ಕಳೆಯತೊಡಗಿದ.

ಜಾಗೀರುದಾರ ಮೌಲಾನಾ ಘಝಾಲಿ ಮಶ್‌ಹೂದ್ ಕೆಲವು ಸರದಾರರೊಂದಿಗೆ ಹಾಜಿಪುರಕ್ಕೆ ಹೋದರು. ಈ ಯುದ್ಧ ನಡೆದ ಸ್ಥಳದಿಂದ ಹಾಜಿಪುರ ಐದು ಮೈಲಿಗಳ ದೂರದಲ್ಲಿತ್ತು. ಖಾನೆಜಮಾನ್ ತನ್ನ ಹನ್ನೆರಡು ಸಾವಿರ ಸೈನಿಕರೊಂದಿಗೆ ತಯಾರಾಗಿದ್ದ. ಬಹದ್ದೂರ್ ಖಾನನ ಆರೋಗ್ಯವನ್ನು ವಿಚಾರಿಸುತ್ತಿದ್ದ. ಈ ಮಧ್ಯೆ ಒಂದು ಗ್ರಾಮದಲ್ಲಿ ಕೆಲವರು ಗುಂಪುಕಟ್ಟಿದ್ದಾರೆಂಬ ವರ್ತಮಾನ ಸಿಕ್ಕಿತು. ದೂತರನ್ನು ಕಳುಹಿಸಿ ಅವರನ್ನು ತನ್ನ ಸನಿಹಕ್ಕೆ ಕರೆಸಿದ. ಖಾನೆಜಮಾನ್ ಆ ಜನರು ಪಿತೂರಿ ಮಾಡುತ್ತಿರುವರು ಎಂದು ಕಂಡುಕೊಂಡು ಕುದುರೆಯ ಮೇಲೆ ಸವಾರಿಮಾಡಿಕೊಂಡು ಅಲ್ಲಿಗೆ ಹೋಗಿ ಅವರನ್ನು ಕೊಂದು ಹಾಕಿದ. ಅಲ್ಲಿನ ಪರಿಸ್ಥಿತಿಯನ್ನು ಹತೋಟಿಗೆ ತಂದು ಹಿಂತಿರುಗಿ ಬಂದ. ವಿಜಯ ಯಾತ್ರೆಯ ಬಳಿಕ ದೊರೆತ ಶಸ್ತ್ರಾಸ್ತ್ರಗಳನ್ನು ಸಂಪತ್ತು ಸಾಮಾನುಗಳನ್ನು ಅಕ್ಬರ್ ಬಾದಶಾಹನ ಮುಂದೆ ಖಾನೆಜಮಾನ್

ಹಾಜರುಪಡಿಸಿದ. ಬಾದಶಾಹ ಸಂತಸಪಟ್ಟುಕೊಂಡ. ಕುತಂತ್ರ ಮಾಡಲು ಹೊರಟಿದ್ದ ಜಲಾಲ್ ಶಾಹನ ಸರದಾರರು ಅತ್ಯಂತ ಅವಮಾನಿತರಾಗಿ ಬೇರ್ಪಟ್ಟು ಚೆಲ್ಲಾಪಿಲ್ಲಿಯಾಗಿ ಎಲ್ಲೆಂದರಲ್ಲಿ ಅಡಗಿಕೊಂಡರು. ಸ್ವಲ್ಪಕಾಲದ ಬಳಿಕ ಅವರಲ್ಲಿ ಅನೇಕರು ಪಶ್ಚಾತ್ತಾಪಪಟ್ಟುಕೊಂಡು ಅಕ್ಬರ್ ಬಾದಶಾಹನ ಸೈನ್ಯದಲ್ಲಿ ಸೇರಿಕೊಂಡರು.

**ಅಕ್ಬರ್ ಬಾದಶಾಹ ಖಾನೆಜಮಾನನೊಂದಿಗೆ ವಿರಸ ಮತ್ತು ಅವನನ್ನು ಓಡಿಸಲು ಮಾಡಿದ ವ್ಯರ್ಥ ಪರಿಶ್ರಮದ ವಿವರಗಳು:**

ಹಿಂದೂ ಬೇಗ್ ಎಂಬವನು ರಾಜಪೂತರ ಸರದಾರನಾಗಿದ್ದ ಮತ್ತು ಅಕ್ಬರ್ ಬಾದಶಾಹನ ಆಪ್ತರಲ್ಲಿ ಒಬ್ಬನಾಗಿದ್ದ. ಆದರೆ ಹಗಲೂರಾತ್ರಿ ಅವನು ಕುತಂತ್ರ, ಪಿತೂರಿ ಮಾಡುವುದರಲ್ಲಿ ನಿರತನಾಗಿದ್ದ. ಹಿಂದೂ ಬೇಗ್ ಒಮ್ಮೆ ಅಕ್ಬರ್ ಬಾದಶಾಹನ ಮುಂದೆ 'ಖಾನೆ ಜಮಾನ್ ನಿಮ್ಮ ನಿಯತ್ತಿನ ಸರದಾರನಾಗಿದ್ದೂ ರಾಜ್ಯದ ಸರಹದ್ದಿನಲ್ಲಿ ಮೂರು ಸಾವಿರ ಸೈನಿಕರನ್ನು ಸೇರಿಸಿಟ್ಟಿದ್ದಾನೆ. ನಿಮ್ಮ ಇಷ್ಟೊಂದು ಬಲಶಾಲಿಯಾದ ಸಾಮ್ರಾಜ್ಯವನ್ನು ಕಟ್ಟಿದ ನಿಮಗೆ ಅವನನ್ನು ಹತೋಟಿಗೆ ತರುವ ಶಕ್ತಿ ಇಲ್ಲವಾಯಿತೇ? ನೀವು ಅಪ್ಪಣೆ ಮಾಡಿದರೆ ನಾನು ಹೋಗಿ ಅವನನ್ನು ಸೋಲಿಸಿ ಸೆರೆಹಿಡಿದು ತರುತ್ತೇನೆ' ಎಂದು ಹೇಳಿದ. ಶಿಕಾರಿ ಮಾಡಲು ಹೊರಟಿದ್ದ ಬಾದಶಾಹ ಅವನ ಮಾತಿನ ಮೋಡಿಗೊಳಗಾಗಿ ಸರಹದ್ದಿನ ಕಡೆ ಪ್ರಯಾಣ ಬೆಳೆಸಲು ಸನ್ನದ್ಧನಾದ. ಖ್ವಾಜ ಅಮೀನ್ ಎಂಬ ಖ್ವಾಜಾ ಜಹಾನಿ ಬಿರುದಾಂಕಿತ ವ್ಯಕ್ತಿಗೆ ಬಾದಶಾಹ ತನ್ನ ಆಸ್ಥಾನದ ಕೆಲವು ಜವಾಬ್ದಾರಿಯನ್ನು ನೀಡಿದ್ದ. ಇವನು ತುಂಬ ಬುದ್ಧಿವಂತನೆಂದು ಹೆಸರು ಗಳಿಸಿದ್ದ. ಇವನು ಬಾದಶಾಹನ ಮುಂದೆ 'ಖಾನೆಜಮಾನ್ ನಿಮ್ಮ ಹಳೆಯ ಸ್ವಾಮಿನಿಷ್ಠ ಸೇವಕನಾಗಿದ್ದಾನೆ. ಹತ್ತು ಹನ್ನೆರಡು ವರ್ಷಗಳಿಂದ ಅವನು ಸರಹದ್ದಿನ ಪಹರೆಯಲ್ಲಿ ಮತ್ತು ವಿಸ್ತರಣೆಯಲ್ಲಿ ತುಂಬ ನಿಷ್ಠೆಯಿಂದ ಕೆಲಸಮಾಡಿದವನು. ಹಗಲೂ ರಾತ್ರಿ ನಿಮ್ಮ ವೈರಿಗಳನ್ನು ಎದರಿಸುವ ಕಾರ್ಯದಲ್ಲಿ ನಿರತನಾಗಿದ್ದಾನೆ. ಅವನು ಅಪ್ರಾಮಾಣಿಕನು ಮತ್ತು ಸ್ವಾಮಿದ್ರೋಹಿಯೆಂದು ನಾನು ಪರಿಗಣಿಸುವುದಿಲ್ಲ. ನಿಮ್ಮ ವಿರುದ್ಧ ನಿಲ್ಲುವವನಲ್ಲ' ಎಂದು ಹೇಳಿದ. ಇದಕ್ಕೆ ಉತ್ತರಿಸಿದ ಬಾದಶಾಹ, 'ಅವನಿಂದ ನನಗೆ ಅವಮಾನವಾಗುವುದಕ್ಕಿಂತ ಮೊದಲು, ಅವನ ಕಿವಿಹಿಂಡಿ ಸರಿದಾರಿಗೆ ತರುವುದು ಅಗತ್ಯವೆಂದು ನಾನು ಯೋಚಿಸುತ್ತಿದ್ದೇನೆ' ಎಂದ. ಇದಕ್ಕೆ ಖ್ವಜಾ ಜಹಾನಿ 'ನೀವು ಅಲ್ಲಿಗೆ ಹೋಗುವುದು ತರವಲ್ಲ. ನಿಮ್ಮ ಘನತೆಗೆ ತಕ್ಕುದಲ್ಲ. ನೀವು ನಿಮ್ಮ ಕೆಲವು ಸರದಾರರನ್ನು ಅಲ್ಲಿಗೆ ಕಳುಹಿಸಿ' ಎಂದು ಸಲಹೆ ನೀಡಿದ. ಆದರೆ, ಅಕ್ಬರ್ ಬಾದಶಾಹನ ಮೇಲೆ ಇವರ ಮಾತಿನ ಪ್ರಭಾವ ಬೀರಲಿಲ್ಲ. ಅವನು ನಿಶ್ಚಯಮಾಡಿಕೊಂಡು ಪ್ರಯಾಣಕ್ಕೆ ಹೊರಟುನಿಂತ. ಪ್ರಯಾಣದ ಹಾದಿಯಲ್ಲಿ ಜಾನ್‌ಪುರದ ಬಳಿ ತಲಪಿದಾಗ ಖಾನೆಜಮಾನ್ ತನ್ನ ಸಾಮಾನು ಸರಂಜಾಮುಗಳನ್ನು

ಘಾಜಿಪುರಕ್ಕೆ ಕಳುಹಿಸಿದ್ದಾನೆ ಮತ್ತು ಅಲ್ಲಿಯ ಕೋಟೆಯಲ್ಲಿ ನೆಲೆಸಿದ್ದಾನೆ ಎಂಬ ಸುದ್ದಿ ಸಿಕ್ಕಿತು. ಅಕ್ಬರ್ ಬಾದಶಾಹ ತನ್ನ ಸೈನ್ಯವನ್ನು ಜಾನ್‌ಪುರದ ಕೋಟೆಯ ಬದಿಯಲ್ಲಿ ಗಂಗಾ ನದಿಯ ತಟದಲ್ಲಿ ತಂಗಲು ಆಜ್ಞೆ ನೀಡಿದ. ಖಾನೆಜಮಾನನೂ ತನ್ನ ಸೈನ್ಯವನ್ನು ಅಕ್ಬರನ ಸೈನ್ಯಕ್ಕೆ ಸನಿಹವಾಗುವಂತೆ ಕಳುಹಿಸಿಕೊಟ್ಟ. ಹಿಂದೆ ಬಾದಶಾಹ ಹುಮಾಯೂನನ ಸೈನ್ಯವು ಸಂಪೂರ್ಣ ಮುಳುಗಿ ನಾಶವಾದದ್ದು ಇದೇ ಗಂಗಾನದಿಯ ತೀರದಲ್ಲಾಗಿತ್ತು. ಇದು ಶೇರ್‌ಘಡದಿಂದ ಘಾಜೀಪುರದ ತನಕ ಹೆಚ್ಚುಕಮ್ಮಿ ನೂರ ಹನ್ನೆರಡು ಮೈಲಿ ದೂರದ ತನಕ ಹರಿಯುತ್ತಿದೆ. ಈ ನದಿಯಿಂದ ಮೂರು ನಾಲ್ಕು ನದಿಗಳು ಟಿಸಿಲು ಒಡೆದು ಹರಿಯುತ್ತವೆ. ಅವುಗಳಲ್ಲಿ ಜಮುನಾ, ಸರಸ್ವತಿ ಮುಂತಾದವು ಮುಖ್ಯವಾಗಿದ್ದವು.

ಗಂಗಾನದಿಯಲ್ಲಿ ತೂಫಾನು ಎದ್ದು ಅಲೆಗಳು ಭೀಕರವಾಗಿ ತುಂಬಿ ಹರಿಯುತ್ತಿದ್ದುದರಿಂದ ದೋಣಿಗಳನ್ನು ಚಲಾಯಿಸಲು ಅಸಾಧ್ಯವಾಗಿತ್ತು. ತುಂಬ ಹೊತ್ತಿನ ತನಕ ಬಾದಶಾಹ ತನ್ನ ಸೈನ್ಯವನ್ನು ಸೇರಿಸಿಕೊಂಡು ನದಿಯು ಶಾಂತವಾಗುವುದನ್ನು ಕಾಯುತ್ತ ನಿಂತ. ಕಾದು ಕಾದು ಸೋತುಹೋಗಿ ಹಿಂತಿರುಗುವಾಗ ತುಂಬ ಅವಮಾನವಾದಂತಾಗಿ ಬಾದಶಾಹನಿಗೆ ನಾಚಿಕೆಯಾಗಿತ್ತು. ತನ್ನ ಸಲಹಕಾರ ಖ್ವಾಜಾ ಜಹಾನಿಯ ಅಭಿಪ್ರಾಯವನ್ನು ಕೇಳಿದಾಗ ಅವನು 'ಇಲ್ಲಿಯ ವಾತಾವರಣ ನಮಗೆ ಪೂರಕವಾಗಿಲ್ಲದಿರುವುದರಿಂದ ನಾವು ನಮ್ಮ ಪ್ರಯಾಣವನ್ನು ಮುಂದುವರಿಸುವುದು ಹಿತಕರವಲ್ಲವೆಂದು ಹೇಳಿದ. 'ಖಾನೆ ಜಮಾನ್ ನಿಮ್ಮ ಆಪ್ತನಾಗಿದ್ದಾನೆ ಮತ್ತು ನಿಮ್ಮ ಹಿತವನ್ನೇ ಬಯಸುವವನು. ನಿಮಗಾಗಿ ತನ್ನ ಜೀವವನ್ನು ತ್ಯಾಗ ಮಾಡುವುದಕ್ಕೆ ಹಿಂದೆ ಮುಂದೆ ನೋಡುವವನಲ್ಲ. ಇದೆಲ್ಲ ನಿಮ್ಮ ಕೆಲವು ಕುತಂತ್ರಿ ಸರದಾರರು ಅವನ ಬಗ್ಗೆ ಕೆಟ್ಟ ಅಭಿಪ್ರಾಯ ನೀಡಿ ನಿಮ್ಮಲ್ಲಿ ಅವನ ಬಗ್ಗೆ ಅನುಮಾನ ಮೂಡುವಂತೆ ಮಾಡಿದ್ದಾರೆ. ನೀವು ಅಪ್ಪಣೆ ನೀಡಿದರೆ ಅವನಿಗೆ ಬುದ್ಧಿವಾದ ಹೇಳಿ ನಾನು ಒಂದು ಪತ್ರವನ್ನು ಬರೆದು ಕಳುಹಿಸುತ್ತೇನೆ' ಎಂದು ಕೂಡ ಸಲಹೆಯ ಜೊತೆಗೆ ಸೇರಿಸಿ ಹೇಳಿದ. ಬಾದಶಾಹ ಇದನ್ನು ಕೇಳಿ, 'ಸರಿ, ನಿನ್ನ ಇಚ್ಛೆ ಹೇಗಿದೆಯೋ ಹಾಗೆಯೇ ಆಗಲಿ' ಎಂದು ಸಮ್ಮತಿಸಿದ. ಖ್ವಾಜಾ ಜಹಾನಿ ತನ್ನ ಸಲಹೆಯಂತೆ ಒಂದು ಪತ್ರವನ್ನು ಬರೆದು ಮಿರ್ಜಾ ಮೀರದ್ ಎಂಬ ತನ್ನ ಆಪ್ತನ ಮೂಲಕ ಕಳುಹಿಸಿಕೊಟ್ಟ. ಮಿರ್ಜಾ ಮೀರದ್, ಇರಾನ್ ದೇಶದ ಮಷ್‌ಹದ್ ನಗರದ ಸಾದಾದ್ ವಂಶದವರಾಗಿದ್ದರು. ಇವರು ಖಾನೆಜಮಾನನನ್ನು ಕೂಡ ಬಲ್ಲವರಾಗಿದ್ದರು.

**ಬಂಗಾಳದಲ್ಲಿ ಸುಲೇಮಾನ್ ಬಾದಶಾಹ ನಡೆಸುವ ರಾಜಕೀಯ ವಲಯದ ಕುತಂತ್ರಗಳ ವಿವರಗಳು:**

ಖಾನೆಜಮಾನನು ಬಂಗಾಲದ ಸುಲ್ತಾನ ಗದ್ದುಗೆಯನ್ನು ಏರಲು ಸುಲೇಮಾನನಿಗೆ ಅವಕಾಶ ಮಾಡಿಕೊಟ್ಟಿದ್ದ. ಆದರೆ ಸುಲ್ತಾನನ ಸಿಂಹಾಸನವನ್ನೇರಿದ ನಂತರದಲ್ಲಿ ಖಾನೆಜಮಾನನ ಸಹಾಯವನ್ನು ಮರೆತು ಬಿಟ್ಟಿದ್ದ. ಕಾಲಕ್ರಮೇಣ ಅವನನ್ನು ವಿರೋಧಿಸತೊಡಗಿದನಲ್ಲದೆ ಅವನ ವಿರುದ್ಧ ಪಿತೂರಿ ನಡೆಸಲು ತೊಡಗಿದ. ಬಾದಶಾಹ ಅಕ್ಬರನಿಗೆ ಸುಲೇಮಾನ ಒಂದು ಪತ್ರಬರೆದು 'ನೀವು ಖಾನೆಜಮಾನನ್ನು ಹಿಡಿಯಲು ಯಾಕೆ ಸ್ವತಃ ಹೊರಟಿದ್ದೀರಿ? ನನಗೆ ಹೇಳಿದ್ದರೆ ನಾನೇ ಅವನನ್ನು ಬಂಧಿಸಿ ಕೈಕಾಲನ್ನು ಕಟ್ಟಿ ನಿಮ್ಮ ಮುಂದೆ ಹಾಜರಿಪಡಿಸುತ್ತಿದ್ದೆ' ಎಂದು ತಿಳಿಸಿದ. ನಂತರ ಖಾನೆಜಮಾನನ ತಾಯಿಯನ್ನು ಮತ್ತು ಖಾನೆಜಮಾನನಿಗೆ ಪತ್ರವನ್ನು ಕೊಂಡೊಯ್ಯುತ್ತಿದ್ದ ಮಿರ್ಜಾ ಮೀರದರನ್ನು ಬಂಧಿಸಿ ಜಾನ್‌ಪುರದ ಕೋಟೆಯ ಸೆರೆಮನೆಯಲ್ಲಿಟ್ಟ. ಈ ಸುದ್ದಿ ಖಾನೆಜಮಾನನಿಗೆ ತಲಪಿದಾಗ, ಅವನು ತನ್ನ ಸಹೋದರ ಬಹದ್ದೂರ್ ಖಾನನ್ನು ಕರೆದು ಈ ವಿಷಯವನ್ನು ತಿಳಿಸಿದ. 'ನೀನು ನನ್ನ ನಿಷ್ಠಾವಂತ ಯುವ ಸರದಾರ ಸಿಕಂದರ್ ಖಾನ್ ಅಜ್ಬೇಕ್‌ನನ್ನು ಜೊತೆಗೆ ಕರೆದುಕೊಂಡು ಹೋಗಿ ಅವನಿಗೆ ಬುದ್ಧಿಕಲಿಸಬೇಕು. ಅವನು ನನ್ನ ವಿರುದ್ಧ ಅಕ್ಬರ್ ಬಾದಶಾಹನನ್ನು ಯುದ್ಧಕ್ಕೆ ಪ್ರಚೋದಿಸುತ್ತಿದ್ದಾನೆ' ಎಂದು ಹೇಳಿದ.

ಬಹದ್ದೂರ್ ಖಾನ್ ಬಂಗಾಳದ ಕಡೆ ಪ್ರಯಾಣಿಸುವಾಗ ಗುಪ್ತಚರರು ಸುಲೇಮಾನ್ ಈಗಷ್ಟೆ ಗಂಗಾನದಿಯನ್ನು ದಾಟಿ ಹಾಜಿಪುರಕ್ಕೆ ಹೋಗಿದ್ದಾನೆ ಎಂಬ ಸುದ್ದಿ ತಂದರು. ಇದನ್ನು ಕೇಳಿ ಕೂಡಲೇ ಅದೇ ರಾತ್ರಿ ಕುದುರೆಯ ಮೇಲೆ ಸವಾರಿ ಮಾಡಿಕೊಂಡು ಸುಲೇಮಾನನ ಸೈನ್ಯದ ಮುಂದೆ ತಲಪಿದ. ಎರಡೂ ಕಡೆಯಲ್ಲಿ ಬಾಣಗಳ ಹಾರಾಟ ಶುರುವಾಗಿ ಯುದ್ಧ ನಡೆಯಿತು. ಕೆಲವರು ತಮ್ಮ ಪ್ರಾಣ ರಕ್ಷಿಸುವ ಭರದಲ್ಲಿ ನದಿಗೆ ಬಿದ್ದರು. ಅಳಿದುಳಿದವರು ಎದ್ದು ಓಡತೊಡಗಿದರು. ಈ ಯುದ್ಧವು ದಿನವಿಡೀ ಭೀಕರವಾಗಿ ನಡೆಯಿತು. ಸುಲೇಮಾನನ ಸೈನಿಕರು ರಣರಂಗದಲ್ಲಿ ತಮ್ಮ ಕುದುರೆಗಳು, ಆನೆಗಳು, ಸಾಮಾನು, ಶಸ್ತ್ರಾಸ್ತ್ರಗಳನ್ನು ಬಿಟ್ಟು ಓಡಿದರು. ಖಾನೆಜಮಾನನ ಇನ್ನೊಬ್ಬ ಸಹೋದರ ಸರದಾರನಾಗಿದ್ದ ಶಹರ್‌ಯಾರ್ ಖಾನ್ ಇವನ್ನೆಲ್ಲ ಒಟ್ಟುಗೂಡಿಸಿ ಖಜಾನೆಗೆ ಒಪ್ಪಿಸುವ ಜವಾಬ್ದಾರಿ ಹೊತ್ತಿದ್ದ. ಆದರೆ ಸುಲೇಮಾನನ ಸೈನಿಕರ ಭಯದಿಂದ ಈತ ಲೂಟಿಯ ವಸ್ತುಗಳನ್ನು ಬಿಟ್ಟು ಘಾಜಿಪುರಕ್ಕೆ ಓಡಿಹೋದ. ನಾಲ್ಕೂ ನಿಟ್ಟಿನಲ್ಲಿ ಈ ಸುದ್ದಿ ಹರಡಿತು. ಹಿಂದೂ ಬೇಗನು ಈ ವರ್ತಮಾನ ತಲಪಿದಾಗ, ಅಹಂಕಾರದೊಂದಿಗೆ ಬಹದ್ದೂರ್ ಖಾನನ ಮುಂದೆ ಹೋದ. ದಾರಿಯಲ್ಲಿ ಸಿಕಂದರ್ ಖಾನ್ ಅವನು ಬರುತ್ತಿರುವುದನ್ನು ಕಂಡ. ಅವನು ಸಿಕಂದರ್ ಖಾನ್ ಮತ್ತು

ಅವನ ಜೊತೆಯಲ್ಲಿದ್ದ ಸೈನಿಕರನ್ನು ಹಿಡಿದು ಹಾಕಲು ಯತ್ನಿಸಿದ. ಸಿಕಂದರ್ ಖಾನನಿಗೆ ಎರಡು ಮೂರು ಕಡೆ ಗಾಯಗಳಾದವು. ಅವನು ತನ್ನ ಸವಾರಿಯನ್ನು ಬಿಟ್ಟು ಒಂದು ಪಲಂಗದ ಮೇಲೆ ಮಲಗಿದ. ಅಲ್ಲಿಂದ ಸುಶ್ರೂಷೆಗಾಗಿ ಕಳುಹಿಸಲಾಯಿತು.

ಬಹದ್ದೂರ್ ಖಾನನಿಗೆ ಈ ಸುದ್ದಿ ತಿಳಿದಾಗ ಅತ್ಯಂತ ಕ್ರೋಧಗೊಂಡು, ತನ್ನ ಮೇಲೆ ತನಗೆ ಹಿಡಿತವಿಲ್ಲದವನಂತೆ ರಣರಂಗದಲ್ಲಿ ಧುಮುಕಿದ. ತನ್ನ ಎದುರು ಬಂದವರ ಮೇಲೆ ಹಾರಿ ಇರಿದುಹಾಕ ತೊಡಗಿದ. ಹಿಂದೂ ಬೇಗನ ಸೈನ್ಯದ ಬಹಳಷ್ಟು ಮಂದಿ ಸಿಪಾಯಿಗಳನ್ನು ತರಿದು ಹಾಕಿದ. ಅವನನ್ನು ಅಟ್ಟಿಸುತ್ತಾ ಹೋಗಿ ಅವನನ್ನು ಮತ್ತು ಅವನ ಆನೆ ಕುದುರೆಗಳನ್ನು ವಶಪಡಿಸಿಕೊಂಡು ಸಿಕಂದರ ಖಾನನ ಬಳಿಗೆ ಬಂದ. ಸಿಕಂದರ ಖಾನನಿಗೆ ಏಳು ಕಡೆ ಗಾಯಗಳಾಗಿ ತುಂಬ ರಕ್ತಸ್ರಾವವಾಗಿತ್ತು. ಅವನ ಬಳಿ ಸೈನಿಕರು ಕೆಲವು ಮಂದಿ ಮಾತ್ರ ಇದ್ದರು. ಅವನ ಗಾಯಕ್ಕೆ ಔಷಧ ಹಚ್ಚಿ ಸುಶ್ರೂಷೆ ಮಾಡಿ, ಅಕ್ಬರ್ ಬಾದಶಾಹನ ಬಳಿ ಹೋದ. ಬಾದಶಾಹನ ಮುಂದೆ ಹಿಂದೂ ಬೇಗ್ ಮಾಡಿದ ಅವಾಂತರಗಳ ವರದಿ ಒಪ್ಪಿಸಿದ. ಆದರೆ ಜಾನ್‌ಪುರಕ್ಕೆ ಹೋದಾಗ ಅಲ್ಲಿ ತನ್ನ ತಾಯಿಯನ್ನು ಮತ್ತು ಮಿರ್ಜಾ ಮೇರದ್‌ರನ್ನು ಬಂಧನದಲ್ಲಿಟ್ಟ ವಾರ್ತೆ ತಿಳಿದುಬಂತು. ಕೂಡಲೇ ಜಾನ್‌ಪುರದ ಕೋಟೆಗೆ ಹೋದ ಒಂದಷ್ಟು ಕಟ್ಟಿಗೆಗಳನ್ನು ಒಟ್ಟುಮಾಡಿ ಕೋಟೆಯ ಬಾಗಿಲಿಗೆ ಬೆಂಕಿಯಿಟ್ಟ, ಬಾಗಿಲನ್ನು ನಾಶಪಡಿಸಿ ಕೋಟೆಯೊಳಗೆ ಹೊಕ್ಕು ತನ್ನ ತಾಯಿ ಮತ್ತು ಮಿರ್ಜಾ ಮೇರದ್‌ರನ್ನು ಬಿಡಿಸಿ ಹೊರತಂದ. ನಂತರ ಅಕ್ಬರ್ ಬಾದಶಾಹನನ್ನು ಭೇಟಿಯಾಗಲು ಹೋದ. ಬೆಳಿಗ್ಗೆ ಅಕ್ಬರ್ ಬಾದಶಾಹನಿಗೆ ಬಹದ್ದೂರ್ ಖಾನ್, ಹಿಂದೂ ಬೇಗನನ್ನು ಹಿಡಿದು ಅವನ ಆನೆ ಕುದುರೆಗಳನ್ನು ವಶಪಡಿಸಿ ಸೈನಿಕರನ್ನು ಕೊಂದಿದ್ದಾನೆಂಬ ವರ್ತಮಾನ ಸಿಕ್ಕಿತು. ನಂತರ ಖಾನೆ ಜಮಾನ ಸುಲೇಮಾನನನ್ನು ಹಿಡಿಯಲು ಹುಡುಕುತ್ತಿದ್ದಾನೆಂಬ ಸುದ್ದಿಯೂ ತಲಪಿತು. ಖಾಜಾ ಜಹಾನನ್ನು ಕರೆಸಿ ಖಾನೆಜಮಾನನ ಬಗೆಗಿನ ಸಲಹೆಯ ಬಗ್ಗೆ ಪತ್ರಬರೆಯಲು ಹೇಳಿದ. ಖಾನೆಜಮಾನನು ಅವರ ಸಲಹೆಯಂತೆ ತಮ್ಮ ನಡುವಿನ ಸ್ನೇಹದ ಪತ್ರವನ್ನು ಬರೆದು ನೀಡಿದ. ಬಹದ್ದೂರ್ ಖಾನ್ ತನ್ನ ವಶದಲ್ಲಿದ್ದ ಹಿಂದೂ ಬೇಗನ ಕುದುರೆ ಆನೆಗಳನ್ನು ಅಕ್ಬರ್ ಬಾದಶಾಹನಿಗೆ ಒಪ್ಪಿಸಬೇಕೆಂದು ಹೇಳಿದ. ಬಹದ್ದೂರ್ ಖಾನನ ಶೌರ್ಯಕ್ಕೆ ಅಕ್ಬರ್ ಬಾದಶಾಹ ಸನ್ಮಾನಿಸಿ ಉಡುಗೊರೆಗಳನ್ನು ನೀಡಿದ. ಇವೆಲ್ಲ ಮುಗಿದ ನಂತರ ಖಾನೆಜಮಾನ್ ಸರಹದ್ದಿನ ಪ್ರದೇಶಕ್ಕೆ ಪ್ರಯಾಣಿಸಿದ. ಇಲ್ಲಿಂದ ಮತ್ತೆ ಆಗ್ರಾದ ಕಡೆ ಪ್ರಯಾಣ ಬೆಳೆಸಿದ. ಹೀಗೆ ಖಾನೆಜಮಾನ್ ಈ ಕೆಲಸವನ್ನು ಅಚ್ಚುಕಟ್ಟಾಗಿ ನಡೆಸಿದ. ಎರಡು ದೊಡ್ಡ ಕೆಲಸಗಳನ್ನು ಬಾದಶಾಹರ ಘನತೆ ಗೌರವಗಳಿಗೆ ಕಿಂಚಿತ್ತೂ ಕಳಂಕಬಾರದಂತೆ ನೋಡಿಕೊಂಡ. ಅವನ ಕಾಲದಲ್ಲಿ ಬಹಳಷ್ಟು

ಪ್ರದೇಶಗಳನ್ನು ಬಾದಶಾಹನ ಸಾಮ್ರಾಜ್ಯಕ್ಕೆ ಸೇರಿಸುವಂತೆ ಮಾಡಿ ವಿಸ್ತರಿಸಲು ಸಹಕಾರಿಯಾದ.

**ಅಕ್ಬರ್ ಬಾದಶಾಹನು ಖಾನಜಮಾನನ್ನು ತನ್ನಿಂದ ದೂರ ಮಾಡುವ ಪ್ರಯತ್ನದ ವಿವರಗಳು:**

ಒಮ್ಮೆ ಅಕ್ಬರ್ ಬಾದಶಾಹ ತನ್ನ ಅಧಿಕಾರಿಗಳನ್ನು ಮತ್ತು ದರ್ಬಾರಿಗಳ ಸಭೆ ಕರೆದು ಖಾನೆಜಮಾನನ್ನು ತನ್ನ ಆಸ್ಥಾನದ ಪದವಿಯಿಂದ ದೂರಮಾಡುವ ಬಗ್ಗೆ ಸಲಹೆಗಳನ್ನು ಕೇಳಿದ. ತಮ್ಮ ಅನುಭವದ ವ್ಯಾಪ್ತಿಯೊಳಗೆ ಎಲ್ಲರೂ ಅಭಿಪ್ರಾಯಗಳನ್ನು ನೀಡಿದರು. ಬಾದಶಾಹ ಎಲ್ಲರ ಮುಂದೆ 'ಈ ಹರಾಮ್ ಖೋರ ನಮ್ಮ ಸಾಮ್ರಾಜ್ಯದ ಸರಹದ್ದಿನಲ್ಲಿ ನಿಂತುಕೊಂಡು ಮಾಡುವ ಉಲ್ಟಾ ಸೀದಾ ಕೆಲಸಗಳನ್ನು ನಾನು ಎಷ್ಟುಮಾತ್ರಕ್ಕೂ ಸಹಿಸಲಾರದ ಸ್ಥಿತಿಗೆ ತಲಪಿದ್ದೇನೆ' ಎಂದ. ತನ್ನ ಸಾಮ್ರಾಜ್ಯದ ಎಲ್ಲ ಸರದಾರರು, ಸೇನಾಪತಿಗಳನ್ನು ಕರೆದು ಸೈನ್ಯದೊಂದಿಗೆ ಖಾನೆಜಮಾನನನ್ನು ಎದುರಿಸಲು ಸನ್ನದ್ಧನಾದ. ಕೆಲವು ಸರದಾರರು ಬಾದಶಾಹರ ಈ ತಪ್ಪು ಹೆಜ್ಜೆಯನ್ನು ಇಡದಿರಿ ಎಂದು ಪದೇಪದೇ ಸಲಹೆ ನೀಡಿದರು. ಆದರೆ ಬಾದಶಾಹ ತನ್ನ ನಿಲುವಿನಲ್ಲಿ ಅಚಲನಾಗಿದ್ದ. ಖಾನೆಜಮಾನ್ ಮತ್ತು ಸರದಾರರ ಮಧ್ಯೆ ಪ್ರತೀದಿನ ಒಂದಲ್ಲ ಒಂದು ಕಾರಣಕ್ಕೆ ತಿಕ್ಕಾಟ ನಡೆಯುತ್ತಿತ್ತು. ಎರಡೂ ಕಡೆಯಲ್ಲಿ ಸೈನಿಕರು ಹತರಾಗುತ್ತಿದ್ದರು. ಬಾದಶಾಹ ಅಲ್ಲಿಗೆ ಬರುತ್ತಿದ್ದಾನೆಂದು ಸರದಾರರಿಗೆ ತಿಳಿದಾಗೆ ಮತ್ತೆ ಇನ್ನಷ್ಟು ಪ್ರಯತ್ನಪಟ್ಟು ಖಾನೆಜಮಾನನಿಗೆ ಬುದ್ಧಿವಾದ ಹೇಳುವುದಕ್ಕೆ ಪ್ರಯತ್ನಿಸಿದರು. ಆದರೆ ಅವನು ಇದಕ್ಕೆ ಒಪ್ಪಲಿಲ್ಲ. ಖಾನೆಜಮಾನ ಕೂಡ ತನ್ನ ಸೈನಿಕರನ್ನು ಜಮಾಯಿಸಿದ. ಆದರೆ ಖಾನೆಜಮಾನನ ಸೈನ್ಯಕ್ಕಿಂತ ಅಕ್ಬರ್ ಬಾದಶಾಹನ ಸೈನ್ಯ ಹೆಚ್ಚು ಬಲಿಷ್ಠವಾಗಿತ್ತು. ಇದರಿಂದ ಖಾನೆಜಮಾನನ ಸೈನ್ಯದ ಬಹಳಷ್ಟು ಸೈನಿಕರು ಅಸುನೀಗಿದರು. ಬಾದಶಾಹನ ಸೈನಿಕರು ಹಿಂದಿನಿಂದ ಆಕ್ರಮಣ ಮಾಡಲೆತ್ನಿಸಿದಾಗ ಖಾನೆಜಮಾನ ಅವರ ಮೇಲೆ ದಾಳಿ ನಡೆಸಿ ಹಲವರನ್ನು ಕೊಂದು ಹಾಕಿದ. ಬಾದಶಾಹನ ಕೆಲವು ಸರದಾರರು ಕೂಡ ಹತರಾಗಿದ್ದರು. ಈ ಮಧ್ಯೆ ಬಾದಶಾಹ ಕೂಡ ಸ್ವತಃ ಬರುತ್ತಿದ್ದಾರೆಂದು ತಿಳಿದಾಗ ಅವರ ಸೈನಿಕರು ಉತ್ಸಾಹಿತರಾದರು. ಬಾದಶಾಹ ತನ್ನ ಸೈನಿಕರನ್ನು ತಂಡ ತಂಡವಾಗಿ ವಿಭಾಗಿಸಿ ವೈರಿ ಸೈನ್ಯ ಓಡಿಹೋಗದಂತೆ ದಿಗ್ಬಂಧನ ಮಾಡಿದ. ಖಾನೆಜಮಾನನಿಗೆ ಈ ಯುದ್ಧ ತನ್ನ ಅಂತಿಮ ಯುದ್ಧವಾಗಿದೆ ಎನಿಸಿತು. ತನ್ನ ಸಾವು ಸಮೀಪಿಸುತ್ತಿದೆ ಎಂದು ಅನಿಸಿ ರಣರಂಗದೊಳಗೆ ಹಂಗು ತೊರೆದು ಕಾದಾಡತೊಡಗಿದ. ಬಾದಶಾಹರ ಸೈನ್ಯ ಅಗಣಿತ ಸಂಖ್ಯೆಯಲ್ಲಿತ್ತು. ಖಾನೆಜಮಾನ ರಣರಂಗದಲ್ಲಿ ತಾನು ಒಂಟಿಯೆಂದು ತಿಳಿದುಕೊಂಡು ಒಂದು ಮೂಲೆಯನ್ನು ಸೇರಿದಂತಾದ.

ಖಾನೆಜಮಾನ್ ಮತ್ತು ಬಹದ್ದೂರ್ ಖಾನ್ ಸಹೋದರರು ಬಾದಶಾಹರ ಸೈನ್ಯದ ಮೇಲೆ ತೀವ್ರವಾದ ಆಕ್ರಮಣ ನಡೆಸತೊಡಗಿದರು. ಇದರಿಂದಾಗಿ ಬಾದಶಾಹರ ಕೆಲವು ಮಂದಿ ಹಿಂದಕ್ಕೆ ಸರಿದರು. ಹೀಗೆ ಮೆಲ್ಲಮೆಲ್ಲಗೆ ರಣರಂಗ ಭುಗಿಲೆದ್ದಂತೆ ತೀವ್ರವಾಯಿತು. ಖಾನೆಜಮಾನನಿಗೆ ದಿಗ್ಭಂದನ ಹಾಕಿದಂತಾಯಿತು. ಅವನ ಮೇಲೆ ನಡೆಯುವ ಹಲ್ಲೆಯನ್ನು ನಿಯಂತ್ರಿಸಲು ಸಾಧ್ಯವಾಗದೆ ತುಂಬ ತ್ರಾಸದಾಯಕವಾಯಿತು. ಕೆಲವು ಸಲ ಆಕ್ರಮಣಕ್ಕೆ ತುತ್ತಾದ ಬಹದ್ದೂರ್ ಖಾನ್ ತನ್ನ ದುರ್ದೆಶೆಯ ಕಾರಣದಿಂದ ಬಂಧನಕ್ಕೆ ಒಳಗಾದ. ಅವನನ್ನು ಬಂಧಿಸಿ ಅವಮಾನಿಸಿ ಅಕ್ಬರ್ ಬಾದಶಾಹನ ಮುಂದೆ ಸೈನಿಕರು ಹಾಜರು ಪಡಿಸಿದರು. ಆಗ ಬಾದಶಾಹ ಪಟ್ಟದಾನೆಯ ಮೇಲೆ ಕೂತಿದ್ದ. ದಾಳಿಂಬ ಹಣ್ಣಿನ ಸವಿಯನ್ನು ಸವಿಯುತ್ತಿದ್ದ. ಬಹದ್ದೂರ್ ಖಾನನ್ನು ಇನ್ನೊಂದು ಆನೆಯ ಮೇಲೆ ಕೂರಿಸಲಾಯಿತು. ಬಾದಶಾಹ ತನ್ನ ಪಗಡಿಯನ್ನು ಅವನ ತಲೆಯ ಮೇಲಿರಿಸಿ ದಾಳಿಂಬ ಹಣ್ಣಿನ ಪಾತ್ರೆಯನ್ನು ಅವನಿಗೆ ನೀಡಿದ. ಇದನ್ನು ಕಂಡ ಸರದಾರರು ಮತ್ತು ದರ್ಬಾರಿನ ಗಣ್ಯರು ಆಶ್ಚರ್ಯ ಚಕಿತರಾದರು. ಅವರೆಲ್ಲರೂ ತಮ್ಮ ಸವಾರಿಯಿಂದ ಕೆಳಗಿಳಿದು ತಮ್ಮ ಖಡ್ಗಗಳನ್ನು ಕೆಳಮುಖಮಾಡಿ ಹಿಡಿದರು. ಬಾದಶಾಹ ಇದನ್ನು ಕಂಡು 'ಏನಾಯಿತು? ನೀವು ಹೀಗೆ ಕುದುರೆಗಳಿಂದ ಇಳಿದು ಕುತ್ತಿಗೆಯನ್ನು ಬಾಗಿಸಿ ತಲೆತಗ್ಗಿಸಿ ನಿಲ್ಲಲು ಕಾರಣವೇನು?' ಎಂದು ಕೇಳಿದ. ಅದಕ್ಕೆ ಅವರಲ್ಲಿ ಒಬ್ಬ ಸೈನಿಕ, 'ಇವನು ನಮ್ಮ ಮರ್ಯಾದೆಯನ್ನು ಉಳಿಸಿದ. ಈಗ ಅವನು ಬಂಧನಕ್ಕೊಳಗಾಗಿದ್ದಾಗ್ಯೂ ಬಾದಶಹರ ಸಮಕ್ಕೆ ಕೂತು ದಾಳಿಂಬ ಹಣ್ಣನ್ನು ಸವಿಯುತ್ತಿದ್ದಾನೆ' ಎಂದು ಉತ್ತರಿಸಿದ. ಬಾದಶಾಹ ಅವರನ್ನು ಉದ್ದೇಶಿಸಿ, 'ನೀವೀಗ ತೀರ್ಮಾನ ಮಾಡಬೇಕು, ಇವನನ್ನು ವಧಿಸ ಬೇಕೋ ಇಲ್ಲ, ಇವನನ್ನು ಸ್ವತಂತ್ರಗೊಳಿಸಿ ಬಿಡುಗಡೆ ಮಾಡಬೇಕೋ?' ಎಂದು ಕೇಳಿದಾಗ ಎಲ್ಲರೂ ಒಕ್ಕೊರಳಲ್ಲಿ ವಧಿಸಬೇಕೆಂದು ಕೂಗಿದರು. ಗುಲ್ಲು ಗೌಜಿ ಹೆಚ್ಚುತ್ತಾ ಹೋಯಿತು. ಆಗ ಅಕ್ಬರ್ ಬಾದಶಾಹ ಅವರೆಲ್ಲರ ಅಪೇಕ್ಷೆಯಂತೆ ನಿರುಪಾಯನಾಗಿ ವಧಿಸಲು ಆಜ್ಞೆ ನೀಡಿದ. ಅವನನ್ನು ಎಲ್ಲರೂ ಸೇರಿ ವಧಾಸ್ಥಾನಕ್ಕೆ ಕೊಂಡೊಯ್ದರು. ಈ ಮಧ್ಯೆ ಖಾನೆಜಮಾನನ ಅಪ್ತವಲಯದ ಓರ್ವ ವ್ಯಕ್ತಿಯನ್ನು ಬಂಧಿಸಿ ಬಾದಶಾಹರ ಮುಂದೆ ತಂದು ನಿಲ್ಲಿಸಿದರು. ಅವನನ್ನು ಖಾನೆಜಮಾನ್ ಎಲ್ಲಿದ್ದಾನೆಂದು ಬಾದಶಾಹ ಕೇಳಿದರು. ಆಗ ಅವನು 'ಕೆಲವು ಮಂದಿಯೊಂದಿಗೆ ಬಹದ್ದೂರ್ ಖಾನ್‌ನನ್ನು ಹುಡುಕುತ್ತಿದ್ದ, ಪಕ್ಕನೆ ಯಾರೋ ಎಸೆದ ಬಾಣವೊಂದು ಅವನ ಎದೆಯನ್ನು ಸೀಳಿತು. ಅವನು ಕುದುರೆಯಿಂದ ಕೆಳಗೆ ಬಿದ್ದುಬಿಟ್ಟ. ಸುತ್ತಲಿದ್ದ ಅವನ ಜನರು ಓಡಿ ಹೋದರು. ಅಲ್ಲೊಂದು ದೊಡ್ಡ ಬೆಟ್ಟವಿತ್ತು. ನಾನು ಶವವನ್ನು ಹೊತ್ತುಕೊಂಡು ಹೋಗಿ ಬೆಟ್ಟದ ಮೇಲಿಟ್ಟು ಪ್ರಾಣಿಗಳು ತಿನ್ನದೆ ರಕ್ಷಿಸುವ ಸಲುವಾಗಿ ಮರದ ರೆಂಬೆಗಳು, ಪುರುಲೆಗಳನ್ನು ಅದರ ಮೇಲಿಟ್ಟು ಬಂದೆ' ಎಂದ. ಇದನ್ನು ಕೇಳಿದ ಬಾದಶಾಹ ತನ್ನ ಜನರನ್ನು ಕಳುಹಿಸಿ ಖಾನೆಜಮಾನನ

ಶವವನ್ನು ತರಿಸಿದ. ನಂತರ ವಧಿಸಿದ ಸಹೋದರ ಬಹದ್ದೂರ್ ಖಾನನ ಶವದೊಂದಿಗೆ ಖಾನೆಜಮಾನನ ಶವವನ್ನು ಶಾಸ್ತ್ರೋಕ್ತ ರೀತಿಯಲ್ಲಿ ದಫನ ಮಾಡಲಾಯಿತು. ಬಾದಶಾಹರ ಆಳ್ವಿಕೆ ಆತಂಕಗಳಿಂದ ಮುಕ್ತವಾಗಿ ಮತ್ತ ಬಲಿಷ್ಠವಾಯಿತು. ಬಾದಶಾಹ ತನ್ನ ಸರದಾರರಿಗೆ ಬೇರೆ ಬೇರೆ ಪ್ರದೇಶಗಳನ್ನು ಮಂಡಳಗಳ ಅಧಿಪತ್ಯವನ್ನು ನೀಡಿದ. ಈ ಸರದಾರರ ಪೈಕಿ ಸುಲೇಮಾನ್ ಕರ್ರಾನಿಯೂ ಕೂಡ ಒಬ್ಬನಾಗಿ, ಇವನು ಬಂಗಾಳ ಮತ್ತು ಗೌರೋ ಪ್ರಾಂತ್ಯದ ಮಂಡಳಾಧಿಪತಿಯನ್ನಾಗಿ ನೇಮಿಸಲಾಯಿತು. ಇವನು 'ಹಜ್ರತೇ ಆಲಾ' ಎಂಬ ಹೆಸರಲ್ಲಿ ಮುಂದೆ ಜನಪ್ರಿಯನಾದ. ಕೆಲಕಾಲಾನಂತರ ಬಾದಶಾಹರ ಸೈನ್ಯವು ಇವನ ರಾಜ್ಯವನ್ನು ವಶಪಡಿಸಿಕೊಂಡು ಸಂಪತ್ತು ಸಾಮಾನುಗಳನ್ನು ಒಯ್ದು ಅಕ್ಬರನ ವಶಕ್ಕೆ ಒಪ್ಪಿಸಿದರು. ಇವನು ತನ್ನ ರಾಜ್ಯವನ್ನು ವೈಭವವನ್ನು ಕಳೆದುಕೊಂಡು ಕಂಗಾಲಾಗಿ ಒಂದು ದಿನ ಸತ್ತುಹೋದ.

**ಖಾನೆಜಮಾನ ತೀರಿಕೊಂಡ ಬಳಿಕ ಪೀರ್ ಮುಹಮ್ಮದ್ ಶೆರ್ವಾನಿ, ಬಾಝ್ ಬಹದ್ದೂರ್‌ನನ್ನು ಮಂಡಾವಕ್ಕೆ ಕಳುಹಿಸಿದ ವಿವರಗಳು:**

ಸಲೀಮ್ ಶಾಹ(ಅಕ್ಬರನ ಮಗ) ಸರದಾರರಲ್ಲಿ ಒಬ್ಬನಾಗಿದ್ದ ಬಾಝ್ ಬಹದ್ದೂರ್ ಸ್ವಲ್ಪ ಕಾಲ ಹಿಂದೆ ಅವನ ವಿರೋಧಿಯಾಗಿ ದೂರವಾಗಿ ಮಂಡಾವದಲ್ಲಿ ಸ್ವತಂತ್ರ ರಾಜ್ಯವನ್ನು ಕಟ್ಟಿಕೊಂಡಿದ್ದ. ಅಕ್ಬರ್ ಬಾದಶಾಹನ ಮೊಲೆಹಾಲು ಕುಡಿಸಿ ಸಾಕಿದ ತಾಯಿ ಮಾಹಮ್ ಅಂಗಾನ ಮಗ ಉದ್ಧಮ್ ಖಾನ್ ಖ್ವಾಜಾ ಜಹಾಂನ ಕಾಲದಲ್ಲಿ ರಾಜ್ಯದ ಆರ್ಥಿಕ ವಲಯದ ಉಸ್ತುವಾರಿ ನೋಡಿಕೊಳ್ಳುತ್ತಿದ್ದ. ಪೀರ್ ಮುಹಮ್ಮದ್ ಖಾನ್ ಮತ್ತು ಇವರ ಮಧ್ಯೆ ಯಾವಾಗಲೂ ತಿಕ್ಕಾಟ, ಸಂಘರ್ಷ ನಡೆಯುತ್ತಿತ್ತು. ಇದರಲ್ಲಿ ಕೊನೆಗೆ ಪೀರ್ ಮುಹಮ್ಮದ್ ಖಾನನಿಗೆ ಸದಾ ಮೇಲುಗೈಯಾಗುತ್ತಿತ್ತು. ಪೀರ್ ಮುಹಮ್ಮದ್ ಖಾನ್ ಬಾಝ್ ಬಹದ್ದೂರನ ರಾಜ್ಯದ ಖಜಾನೆ, ಸಾಮಾನುಗಳನ್ನು ವಶಪಡಿಸಿಕೊಂಡು ತನ್ನ ಬಳಿ ಇರಿಸಿಕೊಂಡಿದ್ದ. ಉದ್ಧಮ್ ಖಾನ್ ಇದರಿಂದ ಬೆಲೆಬಾಳುವ ಆಭರಣಗಳು, ಬೆಲೆಬಾಳುವ ಮುತ್ತು ಮಾಣಿಕ್ಯಗಳನ್ನು ಪೋಣಿಸಲಾದ ಹತ್ಯಾರುಗಳನ್ನು ಬಾದಶಾಹ ಅಕ್ಬರನ ಮುಂದೆ ಹಾಜರುಪಡಿಸಿದ. ಬಾದಶಾಹ ಉದ್ಧಮ್ ಖಾನನ ಸ್ವಾಮಿನಿಷ್ಠೆಯಿಂದ ತುಂಬ ಸಂತಸಗೊಂಡಿದ್ದ ಮಾತ್ರವಲ್ಲ ಅವನನ್ನು ಸದಾ ತನ್ನ ಬಳಿಯಲ್ಲಿಟ್ಟುಕೊಂಡು ತುಂಬ ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದ. ಅವನು ದೂರವಾದಾಗ ತುಂಬ ನೊಂದುಕೊಂಡಿದ್ದ ಯಾಕೆಂದರೆ ಅವನ ಹಾಲುಣಿಸಿದ ತಾಯಿಯ ಮಗನಾದುದರಿಂದ ಸಹೋದರ ವಾತ್ಸಲ್ಯವೂ ಅವರ ಮಧ್ಯೆ ಬೆಳೆದುಕೊಂಡಿತ್ತು. ಬಾದಶಾಹನ ಸುತ್ತಮುತ್ತಲಿರುವ ಇನ್ನಿತರ ಸರದಾರರು ಈ ಸಂಬಂಧವನ್ನು ಕಂಡು ಅಸೂಯೆಗೊಂಡು ಕರುಬುತ್ತಿದ್ದರು. ಮಂಡಾವದ ರಾಜ್ಯವನ್ನು ವಶಪಡಿಸಿಕೊಂಡು ಕೂಡ ತೃಪ್ತಿಯಾಗದ ಪೀರ್ ಮುಹಮ್ಮದ್ ಖಾನನಿಗೆ ಮೀರಾ

ಮುಬಾರಕ್ ಶಾಹನ ರಾಜ್ಯವನ್ನು ತನ್ನ ವಶಕ್ಕೆ ಒಳಪಡಿಸಿಕೊಳ್ಳುವ ಅತಿಯಾಸೆ ಮೂಡಿತು. ಮೀರಾ ಮುಬಾರಕ್ ಶಾಹ, ಸುಲ್ತಾನ್ ಬಹದ್ದೂರ್ ಗುಜರಾತಿಯ ಸಂಬಂಧಿಯಾಗಿದ್ದು ಅವನ ಖಜಾನೆಯು ಆಮೇರನ ಕೋಟೆ(ಜೈಪುರ)ಯಲ್ಲಿ ಸುರಕ್ಷಿತವಾಗಿ ಇರಿಸಲಾಗಿತ್ತು. ಪೀರ್ ಮುಹಮ್ಮದ್ ಖಾನ್ ಆಮೇರ್ ಮತ್ತು ಬುರ್ಹಾನ್‌ಪುರದ ಕಡೆ ಆಕ್ರಮಣ ನಡೆಸಲು ಸೈನ್ಯದೊಂದಿಗೆ ಪ್ರಯಾಣಿಸಿದ. ಪೀರ್ ಮುಹಮ್ಮದ್ ಖಾನ್ ತನ್ನ ಸೈನ್ಯದೊಂದಿಗೆ ಆಮೇರ್ ಕೋಟೆಯ ಬಳಿ ತಲಪಿದಾಗ ಈ ಕೋಟೆಯನ್ನು ವಶಪಡಿಸಿಕೊಳ್ಳುವುದು ತನ್ನಿಂದ ಸಾಧ್ಯವಾಗದ ಮಾತು ಎಂದುಕೊಂಡು ಅಲ್ಲಿ ಸ್ವಲ್ಪ ಗುಲ್ಲುಗಲಾಟೆ ಎಬ್ಬಿಸಿ ಅಲ್ಲಿಂದ ಮುಂದುವರಿದು ಜಾನ್‌ಪುರದ ಕಡೆ ಪ್ರಯಾಣವನ್ನು ಮುಂದುವರಿಸಿದ. ಅಲ್ಲಿಗೆ ತಲಪಿ ಜಾನ್‌ಪುರ ನಗರಕ್ಕೆ ಬೆಂಕಿಯಿಟ್ಟ. ಅಲ್ಲಿ ಖುತುಬ್ ಖಾನ ಎಂಬ ದೊಡ್ಡದೊಂದು ಗ್ರಂಥಾಲಯವಿದ್ದು ಅದರಲ್ಲಿ ಕುರಾನ್, ಹದೀಸ್‌ಗೆ ಸಂಬಂಧಿಸಿದ್ದೂ ಸೇರಿದಂತೆ ಇಪ್ಪತ್ತು ಸಾವಿರ ಗ್ರಂಥಗಳು ಇದ್ದು ಅವೆಲ್ಲವೂ ಬೆಂಕಿಗೆ ಆಹುತಿಯಾದವು ಎಂದು ಪ್ರತೀತಿಯಿದೆ. ನಂತರ ಬಾರ್ಖ್ ಬಹದ್ದೂರ ತನ್ನ ಸೈನ್ಯವನ್ನು ಸೇರಿಸಿಕೊಂಡು ಮೀರಾ ಮುಬಾರಕ್ ಶಾಹನ ಸಹಾಯಕ್ಕೆ ಕಳುಹಿಸಿದ. ಈ ಸೈನ್ಯ ನರ್ಮದಾ ನದಿಯ ದಡದಲ್ಲಿ ಬೀಡು ಬಿಟ್ಟಿತು. ಪೀರ್ ಮುಹಮ್ಮದ್ ಖಾನನಿಗೆ ಈ ಸುದ್ದಿ ತಲಪಿದಾಗ, ನದಿಯ ಕಡೆ ತನ್ನ ಸೈನ್ಯವನ್ನು ಕರೆದುಕೊಂಡು ಹೋದ. ಅಲ್ಲಿ ನೋಡುವಾಗ ಬಾದಶಾಹ ಅಕ್ಬರನ ಸೈನ್ಯವೂ ಕೂಡ ಬಂದು ತಂಗಿರುವುದು ಕಂಡಿತು. ಅವನು ಅಕ್ಬರ್ ಬಾದಶಾಹನ ಸೈನ್ಯದಲ್ಲಿ ಸೇರಿಕೊಂಡು ಆಶ್ರಯವನ್ನು ಪಡೆದುಕೊಳ್ಳುವುದರಲ್ಲಿ ತನ್ನ ಒಳಿತಿದೆಯೆಂಬ ತೀರ್ಮಾನಕ್ಕೆ ಬಂದ.

ಬಾದಶಾಹನ ಸೈನ್ಯದ ಆಶ್ರಯ ಪಡೆಯುವ ಉದ್ದೇಶದಿಂದ ನರ್ಮದಾ ನದಿಯನ್ನು ತನ್ನ ಸೈನ್ಯದೊಂದಿಗೆ ದಾಟಲು ನದಿಗೆ ಇಳಿದ. ಪೀರ್ ಮುಹಮ್ಮದ್ ಖಾನ್ ನರ್ಮದಾ ನದಿ ಹರಿಯುವ ರಭಸವನ್ನು ಎದುರಿಸಲಾರದೆ ದಾಟುವ ಮಧ್ಯದಲ್ಲಿ ಮುಳುಗಿ ಸೈನ್ಯ ಸಮೇತ ಮುಳುಗಿ ನೀರುಪಾಲಾದ. ಅಕ್ಬರ್ ಬಾದಶಾಹನಿಗೆ ಪೀರ್ ಮುಹಮ್ಮದ್ ಖಾನ್ ತೀರಿಕೊಂಡ ವರ್ತಮಾನ ತಲಪಿದಾಗ ಅವನ ಸ್ಥಾನವನ್ನು ಯಾರಿಗೆ ನೀಡುವುದು ಎಂಬ ಯೋಚನೆ ಹತ್ತಿಕೊಂಡಿತು. ಉದ್ಹಮ್ ಖಾನ್ ಇದಕ್ಕೆ ಪರಿಹಾರ ಕಂಡುಕೊಳ್ಳುವುದಕ್ಕೆ ತನ್ನದೊಂದು ಸಲಹೆಯನ್ನು ಬಾದಶಾಹನಿಗೆ ನೀಡಿದ. ಅವನ ಅಭಿಪ್ರಾಯದಂತೆ ಓರ್ವ ನಿಷ್ಠಾವಂತ, ಪ್ರಾಮಾಣಿಕ, ಶೌರ್ಯವಂತ ಪರಾಕ್ರಮಿಯಾಗಿರುವ ಅತಿಕ್ಕಾ ಖಾನ್ ಅಥವಾ ಅತಖ್ವಾ ಬೇಗ್ ಎಂಬ ಹೆಸರಿನ ಸರದಾರ ಈ ಸ್ಥಾನಕ್ಕೆ ಅರ್ಹ ವ್ಯಕ್ತಿಯಾಗಿದ್ದ. ಈ ಸಲಹೆ ಇನ್ನಿತರ ಕೆಲವು ದರ್ಬಾರಿನ ಸದಸ್ಯರಿಗೆ ಒಪ್ಪಿಗೆಯಾಗಲಿಲ್ಲ. ಮುಂದೆ ಈ ಕಾರಣವು ಪರಸ್ಪರ ಘರ್ಷಣೆಗೆ ಹೇತುವಾಗಿ ಪರಿಣಮಿಸಿತು.

**ಅತಿಕ್ಕಾ ಖಾನ್‌ನ ಕೊಲೆ ಮತ್ತು ಉದ್ಧಮ್ ಖಾನ್ ಬಾದಶಾಹನ ಮೂಲಕ ಹತನಾಗುವ ವಿವರಗಳು:**

ಅತಿಕ್ಕಾ ಖಾನ್ ಮೊದಲು ಬಾದಶಾಹನ ಪಗಡಿಕಟ್ಟುವ ಕೆಲಸಮಾಡುತ್ತಿದ್ದ. ಬಾದಶಾಹ ಅಕ್ಬರ್ ಇವನ ಮೇಲೆ ತೋರಿದ ಕೃಪೆಯಿಂದ ಓರ್ವ ದರ್ಬಾರಿಯಾಗಿದ್ದ. ಅತಿಕ್ಕಾಖಾನನನ್ನು ಅಕ್ಬರ್ ಬಾದಶಾಹ ತನ್ನ ಸಹೋದರರಾದ ಮೀರ್ ಮುಹಮ್ಮದ್ ಖಾನ್ ಮತ್ತು ಖುತುಬುದ್ದೀನ್ ಮುಹಮ್ಮದ್ ಖಾನರಂತೆಯೇ ಓರ್ವ ಸಹೋದರನೆಂದು ಪರಿಗಣಿಸಿದ್ದ. ಇವನ ಮಕ್ಕಳನ್ನು ತನ್ನ ಸೈನ್ಯದ ಸರದಾರರನ್ನಾಗಿ ನೇಮಿಸಿಕೊಂಡಿದ್ದನಲ್ಲದೆ ಲಾಹೋರಿನಲ್ಲಿ ಜಾಗೀರುಗಳನ್ನು ನೀಡಿದ್ದ. ಇವನು ಚಿಕ್ಕವನಾಗಿದ್ದಾಗ ಅದ್ಧಮ್ ಖಾನ್ ಬಾದಶಾಹ ಅಕ್ಬರನ ಚಪ್ಪಲಿಗಳನ್ನು ಒರೆಸುವುದು, ಸರಿಪಡಿಸುವುದು ಮತ್ತು ನೋಡಿಕೊಳ್ಳುವ ಕೆಲಸಕ್ಕೆ ಇವನನ್ನು ಹಚ್ಚಿದ್ದ. ಇದರಿಂದ ಅತಿಕ್ಕಾ ಖಾನ್ ಉದ್ಧಮ್ ಖಾನನಿಗೆ ತುಂಬ ಆಭಾರಿಯಾಗಿರುತ್ತಿದ್ದ. ಉದ್ಧಮ್ ಖಾನನ ತಾಯಿ ಅಕ್ಬರನ ದಾದಿಯಾಗಿದ್ದಳು. ಉದ್ಧಮ್ ಖಾನನ ತಾಯಿಗೆ ಕೂಡ ಬಾದಶಾಹನ ಅರಮನೆಯ ಅಂತಃಪುರದಲ್ಲಿ ಅತ್ಯಂತ ಘನತೆಯ ಹುದ್ದೆ ಇತ್ತು. ಬಾದಶಾಹನ ಜನಾನಾದಲ್ಲಿ, ಅಂತಃಪುರದಲ್ಲಿ ಉದ್ಧಮ್ ಖಾನನಿಗೆ ಪ್ರವೇಶಿಸುವ, ಓಡಾಡುವ ಅನುಮತಿಯಿತ್ತು. ಬಾದಶಾಹನಿಗೆ ದರ್ಬಾರಿಗೆ ಪ್ರವೇಶಿಸುವುದಕ್ಕೆ ಬಟ್ಟೆಗಳನ್ನು ನೀಟಾಗಿ ತಯಾರಿಸಿ ಕೊಡುವುದು, ಕುದುರೆಯ ಜೀನನ್ನು ಓರಣಗೊಳಿಸುವುದು, ಅಗತ್ಯದ ಕೆಲವು ಕೆಲಸಗಳಲ್ಲಿ ಸಹಾಯಕನಾಗಿ, ಬಾದಶಾಹ ಮತ್ತು ಸಾಮಾನ್ಯ ಪ್ರಜೆಗಳ ಮಧ್ಯೆ ಭೇಟಿಯ ಅವಕಾಶದ ಕೆಲಸಕಾರ್ಯದ ವ್ಯವಸ್ಥೆ ಮಾಡುವುದು ಮುಂತಾದ ಕೆಲಸಗಳನ್ನು ಮಾಡುತ್ತಿದ್ದ. ದರ್ಬಾರಿನಲ್ಲಿ ಇವನ ಸ್ಥಾನಮಾನ ಖ್ವಾಜಾ ಜಹಾನನ ಸರಿಸಮವಾಗಿತ್ತು.

ಆದರೆ ಬಾದಶಾಹನ ದರ್ಬಾರಿನಲ್ಲಿ ಅತಿಕ್ಕಾ ಖಾನನನ್ನು ಮಂಡಾವಿ ಪ್ರಾಂತ್ಯದ ಅಧಿಪತಿಯನ್ನಾಗಿ ಮಾಡುವ ವಿಚಾರ ಚರ್ಚೆಯಾದಾಗಿನಿಂದ, ಉದ್ಧಮ್ ಖಾನನ ಅಂತರ್ಯದಲ್ಲಿ ಈರ್ಷೆ ಮೂಡತೊಡಗಿತು. ಅವನ ಹೃದಯದಲ್ಲಿ ಸಿಟ್ಟು, ದ್ವೇಷದ ಅಲೆಗಳು ಹುಟ್ಟತೊಡಗಿದವು. ಇವರಿಬ್ಬರೂ ತಮ್ಮೊಳಗೆ ಪರಸ್ಪರ ನಂಜುಕಾರತೊಡಗಿದರು. ಚಾಡಿಮಾತುಗಳು ಪರಸ್ಪರ ಅತ್ತಿತ್ತ ಚಲಿಸತೊಡಗಿ ತಮ್ಮೊಳಗೆ ಸಲಾಮ್ ಪ್ರತಿ ಸಲಾಮ್ ಮಾಡುವ ಕ್ರಮವೂ ನಿಂತುಬಿಟ್ಟಿತು. ಒಂದು ದಿನ ಅವನು ಬಾದಶಾಹನ ಹಾಸಿಗೆಯನ್ನು ಒಪ್ಪ ಓರಣಗೊಳಿಸಿ ಒಂದು ಚಿಕ್ಕ ಬಾಗಿಲ ಮೂಲಕ ಹೊರಬರುತ್ತಿರುವಾಗ ಉದ್ಧಮ್ ಖಾನನು ಅಕಸ್ಮತಾಗಿ ಅವನ ಮೇಲೆ ಎರಗಿ ತನ್ನ ಚಾಕುವಿನಿಂದ ಎದೆಗೆ ಜೋರಾಗಿ ಇರಿದು ಎದೆ ಬಿರಿದುಹೋಗುವಂತೆ ದಾಳಿಮಾಡಿದ. ಅಲ್ಲಿಂದ ಯಾರಿಗೂ ತಿಳಿಯದಂತೆ ತನ್ನ ಮನೆಗೆ ಹೋದ. ಈ ಘಟನೆಯನ್ನು ಕಂಡವರು ಭಯಗೊಂಡು ಅತ್ತಿತ್ತ ಓಡಿ

ಹೋದರು. ಈ ಕೆಲಸ ಬಾದಶಾಹನ ಅಪ್ಪಣೆಯಂತೆ ಕೊಲೆಯನ್ನು ಮಾಡಿರಬೇಕೆಂದು ಇವರೆಲ್ಲರೂ ಅಂದುಕೊಂಡಿದ್ದರು. ಬಾದಶಾಹ ತನ್ನ ಅಂತಃಪುರದಿಂದ ಹೊರಬಂದಾಗ ಈ ಘಟನೆ ನಡೆದ ವರ್ತಮಾನ ತಿಳಿದಾಗ ಉದ್ಧಮ್ ಖಾನನನ್ನು ಕರೆಸಿದ. "ಏಯ್ ನಾಮರ್ದ ನೀನೆಂತಹಾ ಕೆಲಸ ಮಾಡಿಬಿಟ್ಟೆ?" ಎಂದು ಕೇಳಿದ. "ನಾನು ನಿಮ್ಮ ವೈರಿಯನ್ನು ಕೊಂದಿದ್ದೇನೆ" ಎಂದು ಉದ್ಧಮ್ ಖಾನ್ ಉತ್ತರಿಸಿದ. ಬಾದಶಾಹ ಅಕ್ಬರ್ "ನೀನು ವೈರಿಯನ್ನಲ್ಲ, ನನ್ನ ಪಿತೃಸಮಾನನನ್ನು ಕೊಲೆಮಾಡಿದೆ" ಎಂದು ಪರಸ್ಪರ ಖಾರವಾದ ಮಾತುಕತೆ ನಡೆಯಿತು. ಸಾಕಷ್ಟು ಬೈಗಳು ಹೊರಬಿದ್ದವು. ಕೊನೆಗೆ ಬಾದಶಾಹ ಅಕ್ಬರ್ ಉದ್ಧಮ್ ಖಾನನನ್ನು ಕೊಂದು ಹಾಕಿಸಿದ. ಇಬ್ಬರ ಶವಗಳನ್ನು ದಫನ ಮಾಡುವ ಏರ್ಪಾಡು ಮಾಡಿದ. ಬಾದಶಾಹನ ಮೇಲೆ ಉದ್ಧಮ್ ಖಾನನ ಸಾವು ಎಷ್ಟೊಂದು ಪರಿಣಾಮ ಬೀರಿತೆಂದರೆ ನಲ್ವತ್ತು ದಿನಗಳ ಕಾಲ ಅಂತಃಪುರದಿಂದ ಹೊರಗೆ ಬಂದಿರಲಿಲ್ಲ. ಅವನ ತಾಯಿ ಕೂಡ ಹಲವು ದಿನಗಳ ಕಾಲ ಶೋಕತಪ್ತಳಾಗಿದ್ದಳು. ಮತ್ತೆ ಸಂಭಾಳಿಸಿಕೊಂಡು ಅರಮನೆಯ ಕೆಲಸಕಾರ್ಯಗಳಲ್ಲಿ ತನ್ನನ್ನು ತೊಡಗಿಸಿಕೊಂಡಳು. ಚಾಡಿಖೋರರು ಬಾದಶಾಹ ಅಕ್ಬರನ ಕಿವಿಯಲ್ಲಿ 'ಈ ಹೆಂಗಸು ನಿಮ್ಮನ್ನು ತನ್ನ ಮಗನ ಕೊಲೆಗಡುಕನೆಂದು ಅಪಾದಿಸುತ್ತಿದ್ದಾಳೆ. ನೀವು ನಿಮ್ಮ ಅರಮನೆಯ ಕೆಲಸಕಾರ್ಯದಿಂದ ಕಿತ್ತುಹಾಕಿ ದೂರವಿಡಿ, ನೀವು ಅವಳನ್ನು ಉಳಿಸಿಕೊಂಡರೆ ಮುಂದೆ ಆಗುವ ಘಟನೆಗಳಿಂದ ಪಶ್ಚಾತ್ತಾಪ ಪಡಬೇಕಾದೀತು' ಎಂದು ಹೇಳಿದರು. ಬಾದಶಾಹನ ಕಿವಿಯನ್ನು ಎಷ್ಟೊಂದು ಪರಿಣಾಮಕಾರಿಯಾಗಿ ಊದಿದರೆಂದರೆ ಅವಳ ಬಗ್ಗೆ ದ್ವೇಷ ಹುಟ್ಟತೊಡಗಿತು. ಅವಳ ಮೇಲೆ ಸೇಡು ತೀರಿಸಿಕೊಳ್ಳುವುದನ್ನು ಯೋಚಿಸತೊಡಗಿದ. ಒಂದುದಿನ ಅವಳು ಕುಡಿಯುವ ಶರಬತ್ತಿನ ಲೋಟದಲ್ಲಿ ವಿಷವನ್ನು ಸೇರಿಸಿ ಕೊಂದುಹಾಕಲಾಯಿತು. ಅವಳ ಶವಯಾತ್ರೆಯಲ್ಲಿ ಸ್ವತಃ ಅಕ್ಬರ್ ಬಾದಶಾಹ ಜನಾಜಾ ಶವಪೆಟ್ಟಿಗೆಗೆ ಹೆಗಲು ಕೊಟ್ಟಿದ್ದ. ನಂತರ ಅತಿಕ್ಕಾ ಖಾನನ ಮಗ ಯೂಸುಫ್ ಮುಹಮ್ಮದ್ ಖಾನನನ್ನು ಉದ್ಧಮ್ ಖಾನನ ಸ್ಥಾನಕ್ಕೆ ನಿಯುಕ್ತಗೊಳಿಸಿದ. ಇವನು ಬಹಳ ಬುದ್ಧಿವಂತ, ಸ್ಫುರದ್ರೂಪಿ ಯುವಕನಾಗಿ ಉದ್ಧಮ್ ಖಾನನಿಗಿಂತ ಚಾಣಾಕ್ಷನಾಗಿದ್ದ. ಆದರೆ ಇವನು ಹೆಚ್ಚು ಕಾಲ ಬದುಕಲಿಲ್ಲ. ಎರಡು ಮೂರು ವರ್ಷಗಳಕಾಲ ಮಾತ್ರ ಬಾದಶಾಹನ ದರ್ಬಾರಿನಲ್ಲಿ ನೌಕರಿಮಾಡಿ ನಂತರ ತೀರಿಕೊಂಡ.

ಇವನ ಸಹೋದರನಾದ ಮಿರ್ಜಾ ಅಜೀಜ್ ಗೋಗಾನಿಗೆ ಗುಜರಾತಿನ ಜಾಗೀರುದಾರ ಸ್ಥಾನವನ್ನು ಒಪ್ಪಿಸಲಾಯಿತು. ಇವನು ಬಹಳ ಕಾಲ ಅಲ್ಲಿಯ ಜಾಗೀರುದಾರನಾಗಿ ಬಾದಶಾಹನಿಗೆ ಸೇವೆ ಸಲ್ಲಿಸಿದ. ಆಗ ಗುಜರಾತು ಇಡೀ ರಾಜ್ಯವು ಪರ್ವತದಿಂದ ಆವರಿಸಿಕೊಂಡಿತ್ತು ಮತ್ತು ಅಲ್ಲಿ ಯಾವುದೇ ಅಭಿವೃದ್ಧಿ ಇಲ್ಲದೆ

ಬಿಕೋ ಎನ್ನುವಂತಿತ್ತು. ಅಮೀನ್ ಖಾನ್ ಗುಜರಾತನ್ನು ಸಂಪೂರ್ಣವಾಗಿ ನಾಶಮಾಡಿದ್ದ. ಅಕ್ಬರ್ ಬಾದಶಾಹ ಅಜೀಜ್ ಗೋಗಾನಿಗೆ ತನ್ನ ಸಂದೇಶವನ್ನು ಕಳುಹಿಸಿದ. 'ನೀನು ಅಲ್ಲಿಗೆ ಹೋಗಿ ಮೂರು ವರ್ಷಗಳು ಕಳೆದವು. ಅಮೀನ್ ಖಾನನನ್ನು ಗುಜರಾತಿನಿಂದ ಓಡಿಸಲು ನಿನ್ನಿಂದ ಸಾಧ್ಯವಾಗಿಲ್ಲ. ಮಹಾಘಡವನ್ನು ನೀನು ವಶಪಡಿಸಿಕೊಳ್ಳು, ಇಲ್ಲದಿದ್ದರೆ ಈ ನಿನ್ನ ಐಶಾರಾಮಿ ಬದುಕನ್ನು ತೊರೆದು ಮಕ್ಕಾ ಯಾತ್ರೆಗೆ ಹೊರಡು. ಇಲ್ಲವಾದರೆ ಸೀದಾ ನನ್ನ ಆಸ್ಥಾನಕ್ಕೆ ಬಂದು ಇದ್ದುಬಿಡು' ಎಂದು ಅದರ ತಾತ್ಪರ್ಯವಾಗಿತ್ತು. ಅಜೀಜ್ ಗೋಗಾನಿಗೆ ಈ ಸಂದೇಶ ತಲಪಿದ ಕೂಡಲೇ ಎರಡು ಹಡಗುಗಳನ್ನು ತಯಾರಿಸಿ ಮಕ್ಕಾಯಾತ್ರೆಗೆ ಬೇಕಾದ ಸಾಮಾನುಗಳನ್ನು ತುಂಬಿಸಿದ. ಇದಕ್ಕಿಂತ ಮೊದಲು ಮಹಾಘಡದ ಕಡೆ ಸೈನ್ಯವನ್ನು ಕಳುಹಿಸಿದ. ಅಲ್ಲಾಹನ ಕೃಪೆಯಿಂದ ಮಹಾಘಡವನ್ನು ತನ್ನ ಕೈವಶ ಮಾಡಿಕೊಂಡ. ಮಹಾಘಡದ ಉಸ್ತವಾರಿಯ ಕೆಲಸವನ್ನು ತನ್ನ ಅಧಿಕಾರಿಗಳಿಗೆ ಒಪ್ಪಿಸಿ ಬಂದರಿನ ಕಡೆ ಮಕ್ಕಾ ಯಾತ್ರೆ ಕೈಗೊಳ್ಳುವ ಸಲುವಾಗಿ ತೆರಳಿದ. ಸಮುದ್ರದ ಅಲೆಗಳು ಶಾಂತವಾಗಿ ಸಾಮಾನ್ಯಗೊಂಡಾಗ ತನ್ನ ಸಂಬಂಧಿಗಳು, ಬೆಂಬಲಿಗರು ಮತ್ತಿತರ ಯಾತ್ರಿಗಳನ್ನು ಹೊತ್ತ ಹಡಗು ಬಂದರಿನಿಂದ ಹೊರಟಿತು. ಎಲ್ಲ ಯಾತ್ರಿಕರ ಅವಶ್ಯಕ ಸಾಮಾನುಗಳು ಹಡಗಿನಲ್ಲಿದ್ದವು. ಅಲ್ಲಾಹನ ಕೃಪೆಯಿಂದ ಹಜ್ ಯಾತ್ರೆಯ ಸಕಲ ಹಂತಗಳೂ ಪೂರ್ಣಗೊಂಡವು. ಪವಿತ್ರ ಕಾಬಾದ ಪರಿಭ್ರಮಣೆಯೂ ಸರಿಯಾದ ರೀತಿಯಲ್ಲಿ ನಡೆಯಿತು. ಅಲ್ಲಿನ ಬಡಬಗ್ಗರಿಗೆ ದಾನವನ್ನು ನೀಡಿದ. ಪವಿತ್ರ ಯಾತ್ರೆ ಕೊನೆಗೊಂಡ ಬಳಿಕ ಗುಜರಾತಿಗೆ ಮರಳಿದ. ಅಲ್ಲಿಂದ ಅಕ್ಬರ್ ಬಾದಶಾಹನನ್ನು ಭೇಟಿಯಾದ. ಅವನ ಕೆಲಸಗಳಿಂದ ಬಾದಶಾಹನಿಗೆ ತುಂಬ ಆನಂದವಾಯಿತು. ನಮ್ಮ ರಾಜ್ಯದ ಪ್ರದೇಶವನ್ನು ಮರುವಶಕ್ಕೆ ತಂದುಕೊಂಡಲ್ಲದೆ ಹಜ್ ಯಾತ್ರೆಯ ಪವಿತ್ರ ಕಾರ್ಯವನ್ನೂ ಪೂರೈಸಿದ್ದರಿಂದ ಬಾದಶಾಹ ಅವನ ಮೇಲೆ ಹೆಮ್ಮೆಪಟ್ಟುಕೊಂಡ. ಹಿಜರಿ ವರ್ಷ ೧೦೧೭ರ ತನಕ ರಾಜಕುಮಾರ ಸುಲ್ತಾನ್ ಸಲೀಮನ ಸೇವೆಯಲ್ಲಿ ಈತ ತನ್ನ ಬದುಕನ್ನು ಕಳೆದ.

**ಅಕ್ಬರ್ ಬಾದಶಾಹನ ಆಳ್ವಿಕೆಯ ಕೆಲವು ಪ್ರಮುಖ ಮಜಲುಗಳು ಮತ್ತು ಹಿಂದುಸ್ಥಾನದಲ್ಲಿ ಸಿಂಧು, ಗುಜರಾತ್, ಬಂಗಾಳವನ್ನು ವಶಪಡಿಸಿಕೊಂಡ ವಿವರಗಳು:**

ಅಕ್ಬರನ ಆಳ್ವಿಕೆಯ ಕಾಲದಲ್ಲಿ ದೊಡ್ಡ ದೊಡ್ಡ ರಾಜ್ಯಗಳು ವಶವಾದವು. ಮೊಘಲರು ತಮ್ಮ ಪ್ರತಿಯೊಂದು ದಾಳಿಯಲ್ಲೂ ವಿಜಯ ಪ್ರಾಪ್ತಿಮಾಡಿಕೊಂಡರು. ಬಾಝ್ ಬಹಾದ್ದೂರನು ಮೊಘಲರ ಮೇಲೆ ವಿಜಯ ಪ್ರಾಪ್ತಿ ಮಾಡಿಕೊಳ್ಳಲು ತುಂಬ ಪ್ರಯತ್ನ ನಡೆಸಿದ್ದ. ಕೊನೆಯಲ್ಲಿ ಅವನೂ ಕೂಡ ತನ್ನ ಒಳಿತು ಇದರಲ್ಲೇ ಇದೆಯೆಂದುಕೊಂಡು ಬಾದಶಾಹನಿಗೆ ಶರಣಾಗತನಾದ. ಅವನು ಅಕ್ಬರ್ ಬಾದಶಾಹನ

ಸೇವೆಯಲ್ಲಿ ನಿರತನಾಗಿ ಕಾಲಕ್ರಮೇಣ ತನ್ನ ನಿಷ್ಠಾವಂತ ಸೇವೆಯಿಂದ ಅಕ್ಬರನ ಹೃದಯ ಗೆದ್ದು ಆಪ್ತವಲಯದಲ್ಲಿ ಒಬ್ಬನಾದ. ಅಕ್ಬರ್ ಬಾದಶಾಹನಿಗೆ ಹಿಂದುಸ್ಥಾನದ ಸಂಗೀತವು ಬಹಳ ಇಷ್ಟವಾಗಿತ್ತು. ಹಿಂದುಸ್ಥಾನದ ಪ್ರಜೆಗಳು ಅವನನ್ನು ಸಂಗೀತದ ಆರಾಧಕನೆಂದು, ಗುರುವೆಂದು ಪರಿಗಣಿಸಿದ್ದರು. ಬಾದಶಾಹನನ್ನು ಸಂತೋಷದಲ್ಲಿರಿಸಲು ತನ್ನ ಹೆಚ್ಚಿನ ಸಮಯವನ್ನು ಬಾಝ್ ಬಹದ್ದೂರ್ ಸಂಗೀತದ ಬೈಠಕ್ಕಿನಲ್ಲಿ ಕಳೆಯುತ್ತಿದ್ದ. ಗಾಯಕರು, ಸಂಗೀತಕಾರರ ಜೊತೆಗೆ ಕೂತಿರುತ್ತಿದ್ದ. ಅವನಿಗೆ ಸರದಾರ ಪದವಿ ಸಿಕ್ಕಾಗ ಅವನು ಒಳಗೊಳಗೆ ತನ್ನ ಹಳೆಯ ಮಿತ್ರರೊಂದಿಗೆ ಸೇರಿಕೊಂಡ. ಒಂದು ಗುಂಪನ್ನು ಕೂಡ ಕಟ್ಟಿಕೊಂಡ. ಒಂಟಿಯಾಗಿದ್ದಾಗ ತನ್ನ ಹಿಂದಿನ ರಾಜ್ಯವನ್ನು ನೆನೆಯುತ್ತಿದ್ದ. ಅವನ ಹಳೆಯ ರಾಜ್ಯ ಮಂಡಾವಾದ ಚೌಧರಿ ಜಮೀನ್ದಾರರಿಗೆ ಪತ್ರಗಳನ್ನು ಬರೆದು ಸಂಪರ್ಕ ಮಾಡುತ್ತಿದ್ದ. ಸಂದೇಶಗಳನ್ನು ಕಳುಹಿಸುತ್ತಿದ್ದ. ಅವನು ಹೀಗೆ ರಹಸ್ಯವಾಗಿ ಮಾಡುತ್ತಿರುವ ಚಟುವಟಿಕೆಗಳ ಸುದ್ದಿ ಅಕ್ಬರ್ ಬಾದಶಾಹನ ಕಿವಿಗೆ ತಲಪಿದಾಗ ಅವನನ್ನು ಬಂಧಿಸಿ ಸೆರೆಮನೆಯಲ್ಲಿಟ್ಟ. ಅವನು ಸೆರೆಮನೆಯಲ್ಲಿ ದೀರ್ಘಕಾಲದ ತನಕ ಇರಬೇಕಾಯಿತು. ನಂತರ ಅವನನ್ನು ವಧಿಸುವ ಆಜ್ಞೆ ಬಂದು ಅವನಿಗೆ ಮರಣದಂಡನೆ ವಿಧಿಸಲಾಯಿತು. ಹೀಗೆ ಇವನ ಪಿತೂರಿ ಸಮಾಪ್ತಿಯಾದಂತಾಯಿತು.

**ಮಾಸೂಮ್ ಖಾನ್ ಚುಕ್ತಾನನ್ನು ಬಾದಶಾಹ ಅಕ್ಬರ್ ಸೈನ್ಯದೊಂದಿಗೆ ದಂಡಯಾತ್ರೆಗೆ ಕಳುಹಿಸಿದ ವಿವರಗಳು:**

ಮಾಸೂಮ್ ಖಾನ್ ಚುಕ್ತಾನ ನೇತೃತ್ವದಲ್ಲಿ ಒಂದು ಸಾವಿರ ಸೈನಿಕರನ್ನು ಗೌರ್ ಮತ್ತ ಬಂಗಾಳ ದೇಶದ ಕಡೆ ದಂಡಯಾತ್ರೆಗೆ ಕಳುಹಿಸಲಾಯಿತು. ಈ ಗೌರ್ ಎಂಬ ಪ್ರದೇಶವು ಹಿಂದೆ ದಿವಂಗತ ತಾಜ್ ಖಾನ್ ಕರ್ರಾನಿಯ ಸಹೋದರ ಆಲಾ ಹಜ್ರತ್ ಎಂಬ ಅಡ್ಡ ಹೆಸರಿನಿಂದ ಜನಪ್ರಿಯತೆ ಪಡೆದಿದ್ದ ಸುಲೇಮಾನ್ ವಶಪಡಿಸಿಕೊಂಡು ಆಳ್ವಿಕೆ ನಡೆಸುತ್ತಿದ್ದ. ಇವನಿಗೆ ಖಾನೆಜಮಾನನ ಬೆಂಬಲವಿತ್ತು. ಸುಲೇಮಾನ ಈ ಪ್ರದೇಶವನ್ನು ರಕ್ತಪಾತವಿಲ್ಲದೆ ತನ್ನ ವಶಕ್ಕೆ ತೆಗೆದುಕೊಂಡಿದ್ದ. ಮಾಸೂಮ್ ಖಾನನ ಈ ಸೈನ್ಯದ ದಂಡಯಾತ್ರೆಯ ಮೂಲಕ ಮೊಘಲರ ಶಕ್ತಿಯ ಪರಿಚಯ ಅವನಿಗಾಗಲೆಂದು ಬಾದಶಾಹ ಅಕ್ಬರನ ಉದ್ದೇಶವಾಗಿತ್ತು. ಮಾಸೂಮ್ ಖಾನನ ಈ ಸೈನಿಕ ದಂಡಯಾತ್ರೆಯು ದಕ್ಷಿಣದ ಮಿತ್ರ ಅರಸರ ಸಹಕಾರವನ್ನು ಪಡೆದು ಅವರ ಸೈನ್ಯವನ್ನೂ ಸೇರಿಸಿಕೊಂಡು ನಡೆಸುವ ಯೋಜನೆಯಾಗಿತ್ತು.

ಮೊಘಲರ ಸಂದೇಶ ಒಯ್ಯುವ ದೂತರಾಗಿ ಮಲಿಕ್ ಫಕ್ರುದ್ದೀನ್ ಮತ್ತು ಮುಬಾರಕ್ ಖಾನ್ ಅಫಘಾನ್‌ರನ್ನು ಕಳುಹಿಸಿದ್ದರು. ಫತ್ಹುಲ್ ಮುಲ್ಕ್ ಶಿಫಾರಸಿನಂತೆ ಈ ಇಬ್ಬರನ್ನು ದೂತರನ್ನಾಗಿ ದಕ್ಷಿಣ ಭಾರತದ ಅರಸರ ಸಹಾಯ ಪಡೆಯುವ

ಸಲುವಾಗಿ ಬಾದಶಾಹ ಅಕ್ಬರನ ಸಂದೇಶವನ್ನು ಕಳುಹಿಸಲಾಗಿತ್ತು. ಇವರ ಜೊತೆ ನನ್ನ(ಶಿರಾಜಿಯ) ಸ್ನೇಹ ಸಂಬಂಧ ಬಹಳ ಹಳೆಯದಾಗಿತ್ತು. ನಾವು ಒಟ್ಟಿಗೆ ಬಹಳ ಸಮಯ ಕೆಲಸಮಾಡುತ್ತಿದ್ದೆವು. ಮಲಿಕ್ ಫಕ್ರುದ್ದೀನ್ ಎರಡು ವರ್ಷಗಳ ಕಾಲ ನಮ್ಮ ಇಲಾಖೆಯಲ್ಲಿದ್ದ. ಈ ಮಧ್ಯೆ ಹಜ್ರತೆ ಅಲಾ ಸುಲೇಮಾನ ತೀರಿಕೊಂಡಿದ್ದ. ಇವನು ಅಲ್ಲಿಂದ ತನ್ನ ಊರಿಗೆ ವಾಪಸು ಬಂದಿದ್ದ. ಮುಬಾರಕ್ ಖಾನ್ ಮುಂಡಾಜಾಗರದಲ್ಲಿ ಉಳಿದಿದ್ದ. ಸುಲೇಮಾನನ ಸಾವಿನ ನಂತರ ಅವನ ಮಗ ದಾವರ್ ಹಾಜಿಪುರದ ಸಿಂಹಾಸನಾರೂಢನಾದ. ಸುಲೇಮಾನ್ ಬದುಕಿದ್ದಾಗ ಹಾಜಿಪುರ ಮತ್ತು ಮುಂಘೇರನ್ನು ವಶಪಡಿಸಿಕೊಳ್ಳಲು ಮೊದಲ ಸಲ ಪ್ರಯತ್ನಿಸಿದಾಗ ಸೋತಿದ್ದ. ಅವನ ಸಾವಿನ ನಂತರ ಅವನ ಮಗ ದಾವರ್ ಆಕ್ರಮಣ ನಡೆಸಿ ಹಾಜಿಪುರವನ್ನು ವಶಪಡಿಸಿಕೊಂಡಿದ್ದ. ದಾವೂದ್ ಮತ್ತು ಮಾಸೂಮ್ ಖಾನರ ಮಧ್ಯೆ ಮತ್ತೊಮ್ಮೆ ಯುದ್ಧ ನಡೆಯಿತು. ದಾವರನ ರಾಜ್ಯದ ಮೇಲೆ ಮಾಸೂಮ್ ಖಾನ್ ಆಕ್ರಮಿಸಿಕೊಂಡ. ಮುಂದೆ ದಾವರ ದಿನೇದಿನೇ ತನ್ನ ಶಕ್ತಿಯನ್ನು ಕಳೆದುಕೊಂಡು ಚಿಂತಿತನಾದ. ತನ್ನ ಸಿಂಹಾಸನವನ್ನು ಕೂಡ ಉಳಿಸಿಕೊಳ್ಳಲಾರದವನಾಗಿ ಮಾರ್ಪಟ್ಟ. ಅನಿವಾರ್ಯವಾಗಿ ತಲೆಮರೆಸಿಕೊಂಡು ಪರ್ವತ ಬೆಟ್ಟ ಕಾಡುಗಳಲ್ಲಿ ಅಲೆದಾಡಿಕೊಂಡಿದ್ದ. ಮಾಸೂಮ್ ಖಾನ್ ಬಂಗಾಳದ ಸಂಪೂರ್ಣ ಇಲಾಖೆಯನ್ನು ಗೆದ್ದುಕೊಂಡುವ ಸ್ವತಂತ್ರ ರಾಜ್ಯವನ್ನು ಸ್ಥಾಪಿಸಿಕೊಂಡ. ತನ್ನ ವಿಜಯ ಯಾತ್ರೆಯ ಸುದ್ದಿಯನ್ನು ಅಕ್ಬರ್ ಬಾದಶಾಹನಿಗೆ ತಿಳಿಸಿದ. ಹೆಚ್ಚಿನ ಅಹಂಕಾರದಿಂದ ಮೆರೆಯುತ್ತ ಆಳ್ವಿಕೆಯನ್ನು ನಡೆಸತೊಡಗಿದ. ಬಾದಶಾಹನಿಗೆ ಈ ಸಂಗತಿ ಮನವರಿಕೆಯಾದಾಗ ವಲಿ ಬೇಗನ ಮಗ ಖಾನೆ ಖಾನಾನ್ ಎಂಬ ಬಿರುದು ಪಡೆದಿದ್ದ ಹುಸೈನ್ ಖುಲಿ ಖಾನನನ್ನು ಬಂಗಾಳಕ್ಕೆ ದಂಡಯಾತ್ರೆ ನಡೆಸಲು ಕಳುಹಿಸಿದ. ಇವನು ತುಂಬ ಪರಾಕ್ರಮಿಯೂ ಸ್ವಾಮಿನಿಷ್ಠನಾಗಿದ್ದ. ಇವನು ಬಂಗಾಳದ ದಂಡಯಾತ್ರೆಯಲ್ಲಿ ವಿಜಯಿಯಾದಾಗ ಇವನಿಗೆ ಬಂಗಾಳ ರಾಜ್ಯದ ಅಧಿಪತಿಯನ್ನಾಗಿ ನೇಮಿಸಲಾಯಿತು. ಹುಸೈನ್ ಖುಲಿ ಖಾನನ ಘನತೆ, ಗೌರವಗಳು ಅತ್ಯಂತ ಎತ್ತರದಲ್ಲಿತ್ತು. ಇವನು ಶೂರನೂ ಪರಾಕ್ರಮಿಯೂ ಬುದ್ಧಿವಂತನೂ ಆಗಿದ್ದನಲ್ಲದೆ ಬಡವರಿಗೆ ಸಹಾಯ ಮಾಡುವ ಆಪತ್ಬಾಂಧವನೆಂದೂ ಪ್ರಖ್ಯಾತನಾಗಿದ್ದ. ಆಶ್ಚರ್ಯಕರ ಸಂಗತಿಯೆಂದರೆ ಪ್ರತೀ ತಿಂಗಳಲ್ಲಿ ಒಮ್ಮೆ ಮಹಿಳೆಯರಂತೆ ವೇಷಧರಿಸಿ ಕೈಗೆ ಮಧುರಂಗಿ ಹಚ್ಚಿಕೊಂಡು ಸುಂದರವಾಗಿ ಸಿಂಗರಿಸಿಕೊಂಡು ಇರಲು ಸಂತಸಪಡುತ್ತಿದ್ದ. ಆದರೆ ಅವನ ಘನತೆ ಗಾಂಭೀರ್ಯ ಅನೇಕ ಬಾದಶಾಹರಿಗಿಂತ ಬಹಳ ಮೇಲ್ಮಟ್ಟದ್ದಾಗಿತ್ತು. ತನ್ನ ಸಾವಿನ ತನಕ ಈ ಮಟ್ಟವನ್ನು ಎಂದಿಗೂ ಕಮ್ಮಿ ಮಾಡಿಕೊಳ್ಳದೆ ವೈಭವದಿಂದ ಆಳ್ವಿಕೆ ನಡೆಸಿದ್ದ.

**ಅಕ್ಬರ್ ಬಾದಶಾಹನ ಲಾಹೋರ್ ಮೇಲಿನ ದಂಡಯಾತ್ರೆ ಸಮುದ್ರ ತೀರದ ರಾಜ್ಯಗಳನ್ನು ಜಯಿಸಿದ ವಿವರಗಳು:**

ಹಿಂದಿನ ಕಾಲದಲ್ಲಿ ಒಬ್ಬ ಶಾಶ್ವತ ಬಾದಶಾಹನ ಆಳ್ವಿಕೆ ಒಂದು ಪ್ರದೇಶದಲ್ಲಿ ಇರುತ್ತಿರಲಿಲ್ಲ. ಆಗ ಭೂಮಿಯ ದೊಡ್ಡ ಭಾಗದ ಒಡೆತನವು ಅಮೀರ್ ತೈಮೂರ್ ಗೋರ್‌ಗಾನ್ ಮತ್ತು ಚಂಗೇಜ್ ಖಾನನ ಹಾಗೂ ಅವರ ಮಕ್ಕಳ ಹಿಡಿತದಲ್ಲಿತ್ತು. ಪ್ರತೀ ಸಾರಿಯೂ ಇಬ್ಬರ ಮಧ್ಯೆ ಘರ್ಷಣೆ ತಿಕ್ಕಾಟಗಳು ಯುದ್ಧ ನಡೆಯುತ್ತಲೇ ಇತ್ತು.

ಬಹಳ ಕಾಲದ ನಂತರ ಸಮರಖಂಡ ದೇಶದ ಸಿಂಹಾಸನದ ಅಧಿಪತಿ ಅಬ್ದುಲ್ಲಾ ಖಾನ್ ಅಜ್ಬೆಕ್ ಆಳುತ್ತಿದ್ದ. ಅವನ ನಂತರ ಅವನ ಮಕ್ಕಳು ಒಬ್ಬರನ್ನು ಇನ್ನೊಬ್ಬರ ಮೇಲೆ ದ್ವೇಷ ಅಸೂಯೆಯನ್ನು ಹೊಂದಿ ಕೆಲವರನ್ನು ಬಂಧಿಸುವುದು, ಕೊಲ್ಲುವುದೇ ಮುಂತಾದ ಚಟುವಟಿಕೆಗಳಲ್ಲಿ ತೊಡಗಿ ರಾಜ್ಯವನ್ನು ಬಲತ್ಕಾರವಾಗಿ ವಶಪಡಿಸಿಕೊಳ್ಳುವುದು, ದರೋಡೆ ನಡೆಸುವುದನ್ನು ಮಾಡುತ್ತಿದ್ದರು. ಒಟ್ಟಾರೆಯಾಗಿ ಸಮುದ್ರದಾಚೆಗಿನ ಎಲ್ಲ ದೇಶಗಳನ್ನು ಮುಖ್ಯವಾಗಿ ಮರ್ವಾನ್, ಖವಾಜಿನ್, ಕೊರಸಾನ್ ಮುಂತಾದ ದೇಶಗಳನ್ನು ಹಿಡಿದು ತಮ್ಮ ಅಧಿಪತ್ಯವನ್ನು ಸಾರಿದರು. ಹೀಗೆ ಎರಡು ಲಕ್ಷ ಕುದುರೆ ಸವಾರರೊಂದಿಗೆ ದಂಡಯಾತ್ರೆ ನಡೆಸುತ್ತ ಹಿಂದುಸ್ಥಾನವನ್ನು ವಶಪಡಿಸಿಕೊಳ್ಳುವ ಯೋಚನೆ ಅವರ ತಲೆಯಲ್ಲಿ ಹೊಕ್ಕಿಕೊಂಡಿತು. ಆಗಿನ ಕಾಲದಲ್ಲಿ ತೋತಿ ಎಂಬ ಹೆಸರಿನ ಗುಲಾಮನಿದ್ದ. ಇವನ ಬಳಿ ಇದ್ದ ಏಳು ಸಾವಿರ ಸೈನಿಕರೊಂದಿಗೆ ಹಿಂದೂಕುಶ್ ಮಾರ್ಗವಾಗಿ ಹಿಂದುಸ್ಥಾನಕ್ಕೆ ಪ್ರವೇಶಿಸಿದ. ಅಕ್ಬರ್ ಬಾದಶಾಹನಿಗೆ ಈ ವರ್ತಮಾನ ಸಿಕ್ಕಿದಾಗ ಲಾಹೋರಿನತ್ತ ದಂಡಯಾತ್ರೆ ಹೊರಟ. ಇಪ್ಪತ್ತು ವರ್ಷಗಳ ಹಿಂದೆ ಲಾಹೋರಿನ ಕಡೆಗೆ ಹೋಗಿದ್ದ ಅಬ್ದುಲ್ಲಾ ಅಜ್ಬೇಕನನ್ನು ಭೇಟಿಯಾಗಲು ಇಚ್ಛೆ ವ್ಯಕ್ತಪಡಿಸಿದ್ದ. ಆ ಕಾಲದಲ್ಲಿ ಬಾದಶಾಹ ಎಲ್ಲ ತನ್ನ ಅಧಿಪತ್ಯಕ್ಕೊಳಗಾದ ರಾಜ್ಯಗಳ ರಾಜರನ್ನು ಭೇಟಿಯಾಗಿ ಅವರ ಸುಖದುಃಖಗಳ ಬಗ್ಗೆ ವಿಚಾರಿಸಿದ. ದೊಡ್ಡ ದೊಡ್ಡ ಕಟ್ಟಡಗಳನ್ನು ಕಟ್ಟಿಸಿದನಲ್ಲದೆ, ವಿದೇಶದಿಂದ ತರಿಸಲಾದ ಹಣ್ಣು ಹಂಪಲುಗಳ ಸುಂದರವಾದ ತೋಟಗಳನ್ನು ತನ್ನ ಭೇಟಿಯ ಸ್ಮರಣಾರ್ಥವಾಗಿ ನಿರ್ಮಾಣ ಮಾಡಿದ. ಲಾಹೋರಿನ ಹಣ್ಣು ಹಂಪಲುಗಳಂತೆ ಬೇರೆಲ್ಲೂ ಕಾಣ ಸಿಗದು ಎಂಬ ಮಾತು ಪ್ರಸಿದ್ಧವಾಯಿತು. ಅಲ್ಲಿ ಮನೆಗಳನ್ನು ಕಟ್ಟಿಸಿದ. ಲಾಹೋರಿನಲ್ಲಿ ತಂಗಿದ್ದಷ್ಟು ಕಾಲ ಸಿಂಧ್ ಪ್ರಾಂತ್ಯ, ತತ್ತಾ, ಬಗರೂ, ಕಾಶ್ಮೀರ, ಯೂಸುಫ್ ಝುಯಿ, ಹಝೂರಾ ಮುಂತಾದ ಪ್ರಾಂತ್ಯಗಳ ಇಲಾಖೆಗಳ ಪರಿಭ್ರಮಣ ನಡೆಸಿದ. ಎರಡು ಬಾರಿ ಕಾಶ್ಮೀರದ ಪ್ರದೇಶಕ್ಕೆ ದಂಡೆತ್ತಿ ಹೋಗಿದ್ದ. ಆಗ ಈ ಇಲಾಖೆಯಲ್ಲಿ ಪರ್ವತ, ಕಣಿವೆಗಳು ಮತ್ತು ನೀರಿನ ಝರಿಗಳು ಇದ್ದವು. ಇಲ್ಲಿನ ಹಾದಿ ಹಲವು ತಿರುವುಗಳು

ಹೊಂದಿ ಓರೆಕೋರೆಯಾಗಿ ಬಹಳ ಕಷ್ಟಕರ ದಾರಿಯಾಗಿದ್ದರೂ ಬಾದಶಾಹ ಅಲ್ಲಿಗೆ ಪ್ರಯಾಣ ಬೆಳೆಸಿದ್ದ. ಮೂವತ್ತು ಸಾವಿರ ಸೈನಿಕರ ತಂಡಗಳನ್ನು ಮಾಡಿಕೊಂಡು ಕಾಶ್ಮೀರದ ಮೇಲೆ ಹಲವು ಬಾರಿ ದಾಳಿ ನಡೆಸಿದರೂ ಯಶಸ್ಸು ಗಳಿಸಲಿಲ್ಲ. ಆದರೆ ಹಿಡಿದ ಪಟ್ಟನ್ನು ಬಿಡದೆ ಸಾಗಿ, ತನ್ನ ಗೆಲುವನ್ನು ಕಾಶ್ಮೀರವನ್ನು ವಶಪಡಿಸಿಕೊಳ್ಳುವ ಮೂಲಕ ಸಾಧಿಸಿದ.

ನಿಶಾಪುರದ ಸಾದಾತ್ ವಂಶದ ಮಿರ್ಜಾ ಯೂಸೂಫ್ ಖಾನ್ ಅಲ್ಲಿನ ಓರ್ವ ಸರದಾರರೂ ಆಗಿದ್ದರು. ಯೂಸುಫ್ ಖಾನ್ ಅಕ್ಬರ್ ಬಾದಶಾಹನನ್ನು ಕಾಶ್ಮೀರದಿಂದ ಬೀಳ್ಕೊಡಲು ಲಾಹೋರಿನ ತನಕ ಪ್ರಯಾಣ ಮಾಡಿದ. ಪ್ರಯಾಣದ ಸಮಯದಲ್ಲಿ ತನ್ನ ಸಹೋದರನ ಮಗ ಮಿರ್ಜಾ ಯಾದ್ಗಾರನನ್ನು ತನ್ನ ಸ್ಥಾನದಲ್ಲಿರಿಸಿ ಲಾಹೋರಿಗೆ ತಲಪಿದ್ದ. ಕಾಶ್ಮೀರದ ಪ್ರಜೆಗಳು ಪಿತೂರಿಗೊಳಗಾಗಿ ನಮ್ಮ ದೇಶದಲ್ಲಿ ಸದಾ ಕಾಲ ಸಾದಾತ್ ವಂಶಕ್ಕೆ ಸೇರಿದವರೇ ಆಗಿದ್ದರು. ಈ ಕಾರಣದಿಂದ ಪ್ರಜೆಗಳು ಅಸಂತುಷ್ಟರಾದರು.

**ಮಿರ್ಜಾ ಯಾದ್ಗಾರ ವಿರೋಧಿಯಾಗಿ ಕಾಶ್ಮೀರದ ಬಾದಶಾಹನಾಗುವ ವಿವರಗಳು:**

ಕಾಶ್ಮೀರಿ ಪ್ರಜೆಗಳು ಪಿತೂರಿಗೊಳಗಾಗಿ ಗುಲ್ಲೆಬ್ಬಿಸಿದಾಗ ಮಿರ್ಜಾ ಯೂಸುಫ್ ಖಾನನ ಬೆಂಬಲಿಗರು ಕೆಲವು ಕಾಶ್ಮೀರದಲ್ಲಿ ಉಳಿದಿದ್ದರಲ್ಲದೆ ಇವರ ಜೊತೆ ಮೂರು ನಾಲ್ಕು ಇತರ ಸೈಯ್ಯದ್ ವಂಶದವರು ಕೂಡ ಇದ್ದರು. ಅವರ ಪೈಕಿ ಷಾ ಶಫಿ ಇರಾಕಿ, ಮೀರ್ ಷರೀಫ್ ಜಿಲಾನಿ ಮತ್ತಿತರರು ಮುಖ್ಯವಾದ ಸಾದಾತ್ ವಂಶಜರಾಗಿದ್ದರು. ಆದರೆ, ಮಿರ್ಜಾ ಯಾದ್ಗಾರನ ಹೆಸರಲ್ಲಿ ಸರ್ದಾರಿ ಪಟ್ಟ ಒದಗಿತ್ತು. ಅವನು ಆಳ್ವಿಕೆಯನ್ನು ನಡೆಸಿ ತನ್ನ ಮೊಹರು, ನಾಣ್ಯಗಳನ್ನು ಚಲಾವಣೆಗೆ ತಂದ. ತನ್ನ ಅಧಿಕಾರಿಗಳನ್ನು ಕಳುಹಿಸಿ ಸಾಕಷ್ಟು ಕಂದಾಯ ವಸೂಲಿ ಮಾಡಿ ಹಣಜಮಾಯಿಸಿಕೊಂಡು ಐಶ್ವರ್ಯದ ಸುಪ್ಪೊತ್ತಿನಲ್ಲಿ ಆರಾಮಮಾಡತೊಡಗಿದ. ಹತ್ತು ಇಪ್ಪತ್ತು ದಿನಗಳ ಕಾಲ ಅವನು ತನ್ನ ಮಹಲಿನಲ್ಲಿ ಉಳಿದು ಹೊರಬರುತ್ತಿರಲಿಲ್ಲ. ಯಾವಾಗಲೂ ಅಹಂಕಾರದಿಂದ ಮೆರೆಯುತ್ತಿದ್ದ. ಅವನು ತಾನು ಖಜಾನೆಯಲ್ಲಿ ಒಟ್ಟುಮಾಡಿಟ್ಟ ಹಣವನ್ನು ತನ್ನ ರಾಜ್ಯದ ಸೇವಕರು, ಪ್ರಜೆಗಳ ಅಗತ್ಯಕ್ಕಾಗಿ ವೆಚ್ಚಮಾಡುತ್ತಿರಲಿಲ್ಲ. ಮಹಲಿನ ಸೇವಕರು ಮತ್ತು ರಾಜ್ಯದ ಪ್ರಜೆಗಳು ಕಡುಬಡವರಾಗಿ ಸಂಕಷ್ಟಕ್ಕೊಳಗಾಗಿ ಅಕ್ಬರ್ ಬಾದಶಾಹನ ಸನ್ನಿಧಾನಕ್ಕೆ ಅರ್ಜಿ ಕಳುಹಿಸಿದರು. ಬಾದಶಾಹ ಈ ಅರ್ಜಿಪತ್ರವನ್ನು ಓದಿ ತುಂಬ ಬೇಸರಗೊಂಡು ಖಿನ್ನನಾದ. ಮಿರ್ಜಾ ಯೂಸುಫ್ ಖಾನನನ್ನು ತನ್ನ ಬಳಿ ಬರಲು ದೂತರನ್ನು ಕಳುಹಿಸಿದ. ಮಿರ್ಜಾ ಯೂಸುಫ್ ಖಾನರ ಮೂಲಕ ಅಪರಾಧಿ ಮಿರ್ಜಾ ಯಾದ್ಗಾರನನ್ನು ಕರೆದು ಬಾದಶಾಹ ತನ್ನ

ಆಸ್ಥಾನದಲ್ಲಿ ವಿಚಾರಣೆಗೊಳಪಡಿಸಿ ಬಂಧಿಸುವ ಇರಾದೆಯನ್ನು ವ್ಯಕ್ತಪಡಿಸಿದ. ಈ ಉದ್ದೇಶದೊಂದಿಗೆ ಕಾಶ್ಮೀರದ ಕಡೆ ಬಾದಶಾಹ ಪ್ರಯಾಣ ಬೆಳೆಸಿದ. ಈ ಹಾದಿ ಬಹಳ ಎತ್ತರ ತಗ್ಗು ಮತ್ತು ತಿರುವು ಓರೆಕೋರೆಗಳಿಂದ ಕೂಡಿ ನಾಲ್ಕೂ ಸುತ್ತಲು ದಟ್ಟವಾದ ಕಾಡುಗಳಿದ್ದವು. ಬಾದಶಾಹರ ಸೈನಿಕರ ತಂಡ ರಾತ್ರಿ ಒಂದೆಡೆ ತಂಗಿ ಹಗಲು ಪ್ರಯಾಣ ಮಾಡುತ್ತಿದ್ದರು. ಬಹಳ ಕಷ್ಟದಲ್ಲಿ ಕೆಲವುದಿನಗಳ ಈ ಹಾದಿಯ ಪ್ರಯಾಣಕ್ಕೆ ಒಂದು ತಿಂಗಳು ಹಿಡಿದವು. ಈ ಸಮಯದಲ್ಲಿ ಕಾಶ್ಮೀರದ ಜನರ ಒಂದು ಗುಂಪು ಅಲ್ಲಿಗೆ ಬಂತು. ಅವರು ಒಂದು ಸಂತಸದ ವಾರ್ತೆಯನ್ನು ಅವರು ತಂದಿದ್ದರು. ತನ್ನ ಸೇವಕರಿಗೆ ಸಂಬಳನೀಡದೆ ಸತಾಯಿಸುತ್ತಿದ್ದ ಮಿರ್ಜಾ ಯಾದ್ಗಾರನ ವಿರುದ್ಧ ಈ ಸಂಕಷ್ಟಕ್ಕೊಳಗಾದ ಸೇವಕರ ದಂಡು ದಾಳಿನಡೆಸಿ ಅವನನ್ನು ಕೊಂದು ಹಾಕಿದರೆಂಬ ವರ್ತಮಾನ ಅವರು ತಂದಿದ್ದರು. ಬಾದಶಾಹ ತನ್ನ ಘನತೆ ಗೌರವದೊಂದಿಗೆ ಕಾಶ್ಮೀರದ ಸಿಂಹಾಸನವನ್ನು ಸ್ವೀಕರಿಸಿದ. ಹೀಗೆ ತನ್ನ ಉದ್ದೇಶವನ್ನು ಪೂರ್ಣಗೊಳಿಸಿದ ನಂತರ ಬಾದಶಾಹ ಅಕ್ಬರ್ ಲಾಹೋರಿನ ಕಡೆ ಹಿಂತಿರುಗಿದ.

ಹಾದಿಯಲ್ಲಿ ಲಾಹೋರ್ ಮತ್ತು ಸಿಸ್ತಾನದ ಮಧ್ಯೆ ಇರುವ ಹಝಾರಾ, ಯೂಸುಫ್ ಝುಯಿ ಪ್ರದೇಶಗಳನ್ನು ಬಾದಶಾಹ ವಶಪಡಿಸಿಕೊಂಡು ತನ್ನ ಸಾಮ್ರಾಜ್ಯಕ್ಕೆ ಸೇರಿಸಿಕೊಂಡ. ಆದರೆ ಈ ಪ್ರದೇಶಗಳು ಹೆಚ್ಚು ಪ್ರಸಿದ್ಧವಾಗಲಿಲ್ಲ ಯಾಕೆಂದರೆ ಈ ಪ್ರದೇಶವು ಕೆಲವು ಆದಿವಾಸಿ ಪಂಗಡ ಬುಡಕಟ್ಟು ಜನಗಳ ನಿವಾಸ ಸ್ಥಳವಾಗಿತ್ತು. ಇವರ ತಂಡದ ನಾಯಕರಿಗೆ ಇಲ್ಲಿಯ ಪ್ರದೇಶವನ್ನು ಒಪ್ಪಿಸಿ ತನ್ನ ಪ್ರಯಾಣವನ್ನು ಮುಂದುವರಿಸಿದ.

ಬಾದಶಾಹರುಗಳು ಸೈನ್ಯವನ್ನು ತಂದು ಆಗಾಗ ಈ ಪಂಗಡಗಳ ನಡುವೆ ಜಗಳ ಮಾಡಿಸಿ ಅಥವಾ ಅವರಿಗೆ ಮೋಸಮಾಡಿ, ಅನ್ಯಾಯ ಮಾಡಿ ನಾಯಕರನ್ನು ಮತ್ತು ಈ ಮುಗ್ಧ ಜನರನ್ನು ತಮ್ಮ ವಶಮಾಡಿಕೊಂಡು, ಬಂಡಾಯವೆದ್ದರೆ ನಿಷ್ಕಾರುಣ್ಯವಾಗಿ ಕೊಲೆ ಮಾಡಿ ಅವರ ಪ್ರದೇಶವನ್ನು ಆಕ್ರಮಿಸುತ್ತಿದ್ದರು. ಅವರ ಮೇಲೆ ಹೊರಲಾರದಷ್ಟು ತೆರಿಗೆಗಳನ್ನು ಹೊರಿಸಿ ಅವರನ್ನು ತಮ್ಮ ಅಡಿಯಾಳುಗಳನ್ನಾಗಿ ಮಾಡಿಕೊಳ್ಳುತ್ತಿದ್ದರು.

**ಗುಜರಾತಿನ ಜಗಳ ಸುಲ್ತಾನ್ ಮುಜಫ್ಫರನ ಬಂಡಾಯ ಮತ್ತು ಅಬ್ದುಲ್ ರಹೀಮ್ ಮಿರ್ಜಾ ಖಾನ್‌ನನ್ನು ಸಿಂಹಾಸನದ ಮೇಲೆ ಕೂರಿಸಲಾದ ವಿವರಗಳು:**

ಗುಜರಾತನ್ನು ಅಕ್ಬರ್ ಬಾದಶಾಹ ವಶಪಡಿಸಿಕೊಂಡಿದ್ದಾಗ, ತನ್ನ ತಮ್ಮಂದಿರಾದ ಖುತುಬುದ್ದೀನ್ ಮುಹಮ್ಮದ್ ಖಾನ್ ಮತ್ತು ಮೀರ್ ಮುಹಮ್ಮದ್ ಖಾನರು ಮತ್ತು ಕೆಲವು ಸರದಾರರ ವಶಕ್ಕೆ ಒಪ್ಪಿಸಿ ನೋಡಿಕೊಳ್ಳಲು ವ್ಯವಸ್ಥೆ ಮಾಡಿದ್ದ.

ಗುಜರಾತಿನ ಅಸಲ್ ಬಾದಶಾಹ ಮತ್ತು ವಾರೀಸುದಾರನಾಗಿದ್ದ ಸುಲ್ತಾನ್ ಮುಜಫ್ಫರ್‌ನನ್ನು ತನ್ನ ಜೊತೆಗೆ ಆಗ್ರಾಕ್ಕೆ ಕರೆದುಕೊಂಡು ಬಂದು ದರ್ಬಾರಿನಲ್ಲಿ ಮಹತ್ವದ ಜವಾಬ್ದಾರಿಯನ್ನು ನೀಡಿ ತನ್ನಲ್ಲೇ ಇರಿಸಿಕೊಂಡಿದ್ದ. ಕೆಲವು ಕಾಲಾನಂತರ ಗುಜರಾತಿನ ಕೆಲವು ಸರದಾರರು ಸುಲ್ತಾನ್ ಮುಜಫ್ಫರನನ್ನು ತಮ್ಮ ರಾಜ್ಯಕ್ಕೆ ಕರೆಸಿಕೊಳ್ಳುವ ಯೋಚನೆಮಾಡಿಕೊಂಡರು. ಮತ್ತೆ ಅವರ ಬಾದಶಾಹನಾಗುವಂತೆ ಅವನನ್ನು ಕೇಳಿಕೊಂಡರು. ಖುತುಬುದ್ದೀನ್ ಮುಹಮ್ಮದ್ ಖಾನರ ಮೂಲಕ ಅವನ ಖಜಾನೆ, ಸಂಪತ್ತನ್ನು ಅಕ್ಬರ್ ಬಾದಶಾಹ ವಶಪಡಿಸಿಕೊಂಡಿದ್ದರು. ಅವನ ಸೈನ್ಯವನ್ನು ತುಂಡರಿಸಿ ಬೇರೆ ಬೇರೆ ವಿಭಾಗಗಳಿಗೆ ಸೇರಿಸಲಾಯಿತು. ಮೊಘಲರ ಸಿಪಾಯಿಗಳು ಗುಜರಾತನ್ನು ಲೂಟಿಮಾಡಿ ಧ್ವಂಸಮಾಡಿದ್ದರು. ಆದರೆ ಗುಜರಾತಿನ ಮುಸ್ಲಿಮರು ಮತ್ತು ರಜಪೂತರು ಸೇರಿ ಗುಜರಾತನ್ನು ಈ ವೈರಿಗಳಿಂದ ಮುಕ್ತಗೊಳಿಸಿದರು. ಮೊಘಲರು ಲೂಟಿಮಾಡಿದ ಖಜಾನೆಯನ್ನು ವಾಪಸುಪಡೆದು ತಮ್ಮ ರಾಜ್ಯವನ್ನು ಹಿಂದೆ ಹೇಗಿತ್ತೋ ಹಾಗೆಯೇ ಮರು ರಚಿಸಿ ತಮ್ಮ ಘನತೆ ಗೌರವವನ್ನು ಎತ್ತಿಹಿಡಿದು ತಮ್ಮ ಸ್ವಾತಂತ್ರ್ಯದ ದ್ಯೋತಕ ಧ್ವಜವನ್ನು ಹಾರಿಸಿದರು. ಸುಲ್ತಾನ್ ಮುಜಫ್ಫರನು ಕೂಡ ಅಕ್ಬರ್ ಬಾದಶಾಹನೊಂದಿಗೆ ಜಗಳಕಾಯದೆ ಅಲ್ಲಿಂದ ಹೊರಬಂದು ಗುಜರಾತ್ ರಾಜ್ಯದ ಅಧಿಪತ್ಯವನ್ನು ವಹಿಸಿಕೊಂಡ. ಬಾದಶಾಹನಿಗೆ ಈ ವಿದ್ಯಮಾನಗಳನ್ನು ಕಂಡು ದಿಗ್ಭ್ರಮೆಯುಂಟಾಯಿತು. ಇದರಿಂದಾಗಿ ಮತ್ತೆ ಬಾದಶಾಹನ ಕಣ್ಣು ತನ್ನ ಇನ್ನೊಬ್ಬ ಸಹೋದರ ಮಿರ್ಜಾ ಮುಹಮ್ಮದ್ ಖಾನ್ ಕಡೆ ಹರಿಯಿತು. ಅವನನ್ನು ಕರೆಸಿ ನಾನು ನಿನ್ನನ್ನು ಗುಜರಾತಿಗೆ ಕಳುಹಿಸಬೇಕೆಂದಿರುವೆ ನಿನ್ನ ಅಭಿಪ್ರಾಯವೇನೆಂದು ಕೇಳಿದ. ಅವನು ಬಾದಶಾಹನ ಎಲ್ಲ ಆಜ್ಞೆಯನ್ನು ನಾನು ಪಾಲಿಸುವುದಕ್ಕೆ ತಯಾರಾಗಿದ್ದೇನೆ ಎಂದು ಹೇಳಿದ. ಬಾದಶಾಹ ಕೂಡಲೇ ಅವನನ್ನು ಪ್ರಧಾನ ಸರದಾರನನ್ನಾಗಿ ನೇಮಿಸಿ 'ಖಾನೆ ಖಾನಾನ್' ಎಂಬ ಬಿರುದನ್ನು ನೀಡಿದ.

ಬಾದಶಾಹ ತನ್ನ ಸಂಬಂಧಪಟ್ಟ ಎಲ್ಲರಿಗೂ ಧ್ವಜ, ನಗಾರಿ, ಕಹಳೆ, ಹಾಸಿಗೆಗಳು, ಶಸ್ತ್ರಾಸ್ತ್ರಗಳನ್ನು ತಯಾರು ಮಾಡಿ ಬಹಳದೊಡ್ಡ ಸೈನ್ಯದೊಂದಿಗೆ ಪ್ರಧಾನ ಸರದಾರನ ಪ್ರಯಾಣಕ್ಕೆ ಹೊರಡುವುದಕ್ಕೆ ಸನ್ನದ್ಧರಾಗುವಂತೆ ವ್ಯವಸ್ಥೆ ಮಾಡಲು ಆಜ್ಞೆ ವಿಧಿಸಿದ. ಇವನ ಸೈನ್ಯದಲ್ಲಿ ಒಂದು ಲಕ್ಷ ಸೈನಿಕರು ಇದ್ದರು. ಇದನ್ನು ನೋಡಿ ಖಾನೆ ಖಾನಾನ್ ಮಿರ್ಜಾ ಮುಹಮ್ಮದ್ ಖಾನ್ ಬಹಳ ಸಂತಸಪಟ್ಟುಕೊಂಡ. ಹೊರಡುವ ಮೊದಲು ಮತ್ತೊಮ್ಮೆ ರಣವೀಳ್ಯ ಖಿಲ್ಲತ್ ತೊಡಿಸಲಾಯಿತು. ಹೀಗೆ ಅವನ ನಾಯಕತ್ವದಲ್ಲಿ ಅಪಾರ ಸಂಖ್ಯೆಯ ಸೈನ್ಯವು ಗುಜರಾತಿನೊಳಗೆ ದಾಖಲಾಯಿತು. ಗುಜರಾತಿಗೆ ಪ್ರವೇಶಿಸಿದಾಗ ಅಲ್ಲಿನ ಚೌಧರಿ, ಸರದಾರರ ಬೈಠಕ್ ಕರೆದು 'ನಮ್ಮೊಂದಿಗೆ ಯುದ್ಧ ಮಾಡುತ್ತೀರೆಂದಾದರೆ ಇಲ್ಲಿನ ಯಾರೂ ಕೂಡ ಸುರಕ್ಷಿತವಾಗಿ ಪಾರಾಗುವುದು

ಸಾಧ್ಯವಿಲ್ಲ. ಇದಕ್ಕಿಂತ ಉತ್ತಮವಾದುದೆಂದರೆ ಗುಜರಾತನ್ನು ನಮ್ಮ ವಶಕ್ಕೆ ಸುಮ್ಮನೆ ಒಪ್ಪಿಸಿ ಇಲ್ಲವಾದರೆ ಮುಂದೆ ಆಗುವ ರಕ್ತಪಾತಕ್ಕೆ ನಾನು ಜವಾಬ್ದಾರನಲ್ಲ' ಎಂದು ಹೇಳಿದ. ಆದರೆ ಗುಜರಾತಿನ ಜನರು ತಮ್ಮ ದೇಹದಲ್ಲಿ ಪ್ರಾಣವಿರುವ ತನಕ ನಾವು ನಮ್ಮ ನೆಲವನ್ನು ಬಿಟ್ಟುಕೊಡುವುದಿಲ್ಲವೆಂದು ಹೇಳಿದರು. ಈ ಮಾತುಕತೆ ನಡೆಯುತ್ತಿರುವಾಗಲೇ ಸುಲ್ತಾನ್ ಮುಜಫ್ಫರನ ಸೈನ್ಯ ದೊಡ್ಡದಾಗಿ ಸೇರಿಸಿ ಸಜ್ಜಾಗಿ ಬರುತ್ತಿದೆಯೆಂಬ ವರ್ತಮಾನ ತಲಪಿತು. ಇವನ ಸೈನ್ಯ ಹತ್ತಿರ ಬಂದಾಗ ಅವರ ಮೇಲೆ ಹಸಿದ ವ್ಯಾಘ್ರಗಳಂತೆ ಮೈಮೇಲೆ ಎಗರಿ ಗುಜರಾತಿನ ಸೈನ್ಯವನ್ನು ಓಡಿಸಿದರು. ಬಹಳಷ್ಟು ಸಂಖ್ಯೆಯ ಜನರು ಕೊಲ್ಲಲ್ಪಟ್ಟರು. ಬಹಳ ಜನರು ಗಾಯಾಳುಗಳಾದರು. ಅವರ ಸೈನ್ಯ ಸಂಪೂರ್ಣ ನಾಶಗೊಂಡಿತು. ಖಾನೆ ಖಾನಾನನ ಸೈನ್ಯಕ್ಕೆ ದೊಡ್ಡ ಪ್ರಮಾಣದ ವಿಜಯ ಪ್ರಾಪ್ತವಾಯಿತು. ಅಳಿದುಳಿದ ವೈರಿಗಳನ್ನು ಹಿಡಿದು ಬಂಧಿಸಲಾಯಿತು.

ನಂತರದಲ್ಲಿ ಇನ್ನೊಂದು ಗುಂಪು ಎದರು ಬರುತ್ತಿದೆಯೆಂದು ತಿಳಿದಾಗ ಖಾನೆ ಖಾನ ಆನೆಯ ಮೇಲೆ ಸವಾರಿಯಾಗಿ ಅವರ ಮೇಲೆ ಯುದ್ಧ ಸಾರಿದ. ಬಹಳ ಜನರು ವೈರಿಗಳು ಸಾವಿಗೀಡಾದರು. ಗುಜರಾತಿನ ಸೈನಿಕರು ಇವರನ್ನು ಎದುರಿಸಲಾಗದೆ ಮುಖ ತಿರುಗಿಸಿ ಹಿಂತಿರುಗಿ ಓಡಿಹೋದರು. ಅದರ ನಂತರ ಸುಲ್ತಾನ ಮುಜಫ್ಫರ್ ಮತ್ತು ಖಾನೆ ಖಾನಾನ್ ಮುಖಾಮುಖಿಯಾಗಿ ನಿಂತರು. ದೀರ್ಘ ಮಾತುಕತೆಯಾಗಿ ತಮ್ಮೊಳಗೆ ಪರಸ್ಪರ ರಾಜಿಯ ಮಾತುಗಳು ನಡೆದವು. ಇವರು ಪರಸ್ಪರ ಸಂಬಂಧಿಗಳೂ ಆದುದರಿಂದ ಒಂದು ಒಪ್ಪಂದಕ್ಕೆ ಬಂದರು. ವಿರೋಧಿಗಳನ್ನು ಎದುರಿಸುವಾಗ ಪರಸ್ಪರರ ಸಹಾಯ ಪಡೆಯಬೇಕೆಂದೂ ಒಪ್ಪಿಕೊಂಡರು. ಹೀಗೆ ಮುಂದಿನ ಯುದ್ಧವು ವೈರಿಗಳನ್ನು ಎದುರಿಸುವುದರಲ್ಲಿ ಪರಸ್ಪರ ಸಹಕಾರದಲ್ಲಿ ಕೈಗೊಳ್ಳಲು ತಯಾರಾದರು. ಗುಜರಾತಿನ ಒಳಗೆ ವಿರೋಧಿಗಳನ್ನು ಎದುರಿಸಬೇಕಾಗಿ ಬಂದಾಗ ಇಬ್ಬರೂ ಸೇರಿಕೊಂಡು ಯುದ್ಧ ಮಾಡಿದರು. ಈ ಯುದ್ಧವು ಬಹಳ ಘೋರವಾಗಿ ನಡೆಯಿತು. ಗುಜರಾತಿ ವಿರೋಧಿಗಳು ಕಟ್ಟಕಡೆಗೆ ಸೋತು, ಅವರ ಶಸ್ತ್ರಾಸ್ತ್ರಗಳು ಮತ್ತು ಸಾಮಾನುಗಳನ್ನು ಸಂಪೂರ್ಣವಾಗಿ ವಶಪಡಿಸಿಕೊಳ್ಳಲಾಯಿತು. ಅವರ ಯುದ್ಧದಲ್ಲಿ ಭಾಗವಹಿಸಿದ ಕುದುರೆಗಳು ಆನೆಗಳನ್ನು ಕೂಡ ವಶಪಡಿಸಿಕೊಂಡರು. ತಮ್ಮ ವಿಜಯವನ್ನು ಸಂಭ್ರಮದಿಂದ ಆಚರಿಸುತ್ತ ಗುಜರಾತಿನ ರಾಜಧಾನಿ ಅಹ್ಮದಾಬಾದಿಗೆ ಖಾನೆ ಖಾನ್ ಪ್ರಯಾಣಬೆಳೆಸಿದ.

**ಖಾನೆ ಖಾನಾನ್ ತನ್ನ ಆಣ್ಣ ಅಕ್ಬರ್ ಬಾದಶಾಹನ ಬಳಿಗೆ ಹಿಂತಿರುಗಿದ ವಿವರಗಳು:**

ಗುಜರಾತಿನ ವಿಜಯವಾದ ಬಳಿಕ ಖಾನೆ ಖಾನ್‌ನ ಘನತೆ ಗೌರವಗಳು ತುತ್ತತುದಿಗೇರಿದವು. ಆಳ್ವಿಕೆಯನ್ನು ಕೈಗೆತ್ತಿಕೊಂಡು ಶಾಂತಿ ಕಾಪಾಡುವ ವ್ಯವಸ್ಥೆಯನ್ನು

ಸರಿಯಾಗಿ ನೋಡಿಕೊಂಡ. ಕೆಲಸ ಕಾರ್ಯಗಳನ್ನು ನೋಡಿಕೊಳ್ಳಲು ಅಧಿಕಾರಿಗಳು, ಸೇವಕರ ತಂಡವನ್ನು ನೇಮಿಸಿ ಸುಸೂತ್ರವಾಗಿ ನಡೆಯುವಂತೆ ವ್ಯವಸ್ಥೆ ಮಾಡಿದ. ರಾಜ್ಯಭಾರದ ಎಲ್ಲ ಕೆಲಸಗಳೂ ನಿಯಮಿತವಾಗಿ ನಡೆಯತೊಡಗಿ, ಅಲ್ಲಿನ ಪ್ರಜೆಗಳೂ ಈ ವ್ಯವಸ್ಥೆಯಿಂದ ಸಂತೃಪ್ತಿಪಟ್ಟುಕೊಂಡರು. ರಾಜ್ಯದ ಖಜಾನೆಯಲ್ಲಿ ಸಂಪತ್ತು, ಧನ ಕನಕಗಳು ಜಮಾವಣೆಯಾಗ ತೊಡಗಿದವು. ಅಕ್ಬರ್ ಬಾದಶಾಹನಿಗೆ ಈ ವಿಜಯದ ಸುದ್ದಿ ತಲಪಿದಾಗ ಅತ್ಯಂತ ಸಂತಸಪಟ್ಟುಕೊಂಡ. ಯಾಕೆಂದರೆ ಈ ವಿಜಯವು ಅತ್ಯಂತ ದೊಡ್ಡರೀತಿಯ ವಿಜಯವಾಗಿತ್ತು. ಖಾನೆ ಖಾನ್ ತನ್ನ ಯೌವನದಿಂದ ತನ್ನ ಉಸಿರಿನ ಕೊನೆಯ ತನಕವೂ ಸ್ವಾಮಿನಿಷ್ಠೆಯಿಂದ ಕೆಲಸ ಮಾಡಿದ. ಅವನು ಯಾವತ್ತೂ ಕೂಡ ತನ್ನ ಚಾಲಾಕಿ, ಅಹಂಕಾರ, ಸ್ವಪ್ರತಿಷ್ಠೆಯನ್ನು ಪ್ರದರ್ಶಿಸಿರಲಿಲ್ಲ. ಖಾನೆ ಖಾನಾನ್ ಗುಜರಾತಿನ ಆಡಳಿತಕ್ಕೆ ಬಲವನ್ನು ಒದಗಿಸಿ ಬಹಳಷ್ಟು ಬದಲಾವಣೆ, ಅಭಿವೃದ್ಧಿಗಳ ಹಾದಿಯನ್ನು ತೋರಿದ. ಇದರಿಂದ ಅವನ ತಾಕತ್ತು, ಪ್ರಾಮಾಣಿಕತೆ, ನೈತಿಕ ಬಲದ ಪ್ರದರ್ಶನವಾಗಿ ಸಾಬೀತಾಯಿತು. ಅವನ ಪ್ರಾಮಾಣಿಕತೆ, ಶಕ್ತಿ ಶೌರ್ಯ, ಬುದ್ಧಿವಂತಿಕೆ ನೈಪುಣ್ಯಗಳ ಬಗ್ಗೆ ಬಾದಶಾಹನ ದರ್ಬಾರಿನಲ್ಲಿ ಚರ್ಚೆಯೂ ನಡೆಯಿತು. ಬಾದಶಾಹ 'ಇವನೊಬ್ಬ ನೇರ, ಸಾಚಾ, ಪ್ರಾಮಾಣಿಕ ವ್ಯಕ್ತಿಯಾಗಿದ್ದಾನೆ, ಇವನನ್ನು ಕೂಡಲೇ ಅಲ್ಲಿಂದ ಕರೆಸಬೇಕು. ನನಗೆ ಅವನನ್ನು ನೋಡಬೇಕೆಂಬ ಆಸೆಯಾಗಿದೆ' ಎಂದು ದರ್ಬಾರಿನಲ್ಲಿ ಹೇಳಿದ. ಕೂಡಲೇ ಖಾನೆ ಖಾನನನ್ನು ದರ್ಬಾರಿಗೆ ಆಮಂತ್ರಣ ಪತ್ರ ಜಾರಿಯಾಯಿತು. ಖಾನೆ ಖಾನ್ ಕೂಡ ವೈಯಕ್ತಿಕವಾಗಿ ಬಾದಶಾಹ ಮತ್ತು ದರ್ಬಾರಿಗಳನ್ನು ಭೇಟಿಮಾಡುವ ಆಸೆಯನ್ನು ವ್ಯಕ್ತಪಡಿಸಿದ್ದ. ಅವನು ತನ್ನ ಬೆಂಬಲಿಗನಾಗಿ ಎಲ್ಲ ತನ್ನ ಚಿಕ್ಕ ದೊಡ್ಡ ಕೆಲಸಗಳನ್ನು ನೋಡಿಕೊಂಡು ವ್ಯವಸ್ಥೆಯನ್ನು ಮಾಡಿಕೊಳ್ಳುತ್ತಿದ್ದ ಶರ್ಫ್ ಬೇಗ್ ಶೆರ್ವಾನಿಯನ್ನು ತನ್ನ ಸ್ಥಾನದಲ್ಲಿ ನೇಮಕಮಾಡಿ, ಅವನ ಸಹಕಾರಿಯಾಗಿ ಬಹಮನ್‌ನನ್ನು ನೇಮಿಸಿ ಆಗ್ರಾಕ್ಕೆ ಅಕ್ಬರ್ ಬಾದಶಾಹನನ್ನು ಭೇಟಿ ಮಾಡಲು ಹೊರಟ. ಬಹಮನ್ ಈ ಅವಕಾಶ ದೊರೆತದ್ದರಿಂದ ಅಲ್ಲಿನ ಖಜಾನೆಯ ಸಂಪತ್ತನ್ನು ದೋಚಲು ಶುರುಮಾಡಿದ. ಈ ಸಂಗತಿ ಶರ್ಫ್ ಬೇಗನಿಗೆ ತಿಳಿದಾಗ ಅವನಿಗೆ ಬುದ್ಧಿವಾದ ಹೇಳಿ ತಡೆಯಲು ಪ್ರಯತ್ನಿಸಿದ. ಆದರೆ ಅವನು ಮಾತುಗಳನ್ನು ಕೇಳುವ ಸ್ಥಿತಿಯಲ್ಲಿರಲಿಲ್ಲ. ತನ್ನ ಕಳ್ಳತನವನ್ನು ಮುಂದುವರಿಸಿದ. ಇದರಿಂದಾಗಿ ಅವರಿಬ್ಬರ ಮಧ್ಯೆ ದ್ವೇಷ ಬೆಳೆಯಿತು. ಇವರ ಮಧ್ಯೆ ವಿರಸ ಮುಂದುವರಿದು ಜಗಳ ನಡೆಯಿತು. ಈ ಜಗಳ ಎಷ್ಟೊಂದು ಬೆಳೆಯಿತೆಂದರೆ ಪರಸ್ಪರರ ಕೆಲಸಗಳಲ್ಲಿ ವಿಘ್ನವುಂಟಾಗತೊಡಗಿತು.

ಒಳಗೊಳಗೆ ಬಹಮನ್ ಏನಾದರೊಂದು ಅನಾಹುತ ಮಾಡುತ್ತಲೇ ಇದ್ದ. ಒಮ್ಮೆ ಕೆಲವು ವಿದೇಶಿ ವ್ಯಾಪಾರಿಗಳು ತಮ್ಮಲ್ಲಿದ್ದ ಇನ್ನೂರ ಐವತ್ತು ಕುದುರೆಗಳನ್ನು

ಮಾರಾಟ ಮಾಡಲು ಅಲ್ಲಿಗೆ ಬಂದಿದ್ದರು. ಬಹಳ ದಿನಗಳು ಮಾರಾಟ ಮಾಡಲಾಗದೆ ತುಂಬ ತೊಂದರೆಗೊಳಗಾಗಿದ್ದರು. ಬಹಮನ್ ಈ ಕುದುರೆಗಳನ್ನು ಅರ್ಧಬೆಲೆಗೆ ಮಾರಾಟ ಮಾಡಲು ಅವರನ್ನು ಒಪ್ಪಿಸಿದ. ಶರ್ಫ್ ಬೇಗನ ಮನೆಗೆ ಹೋಗಿ ಅವನ ತೊಂದರೆಗಳನ್ನು ಹೇಳಿಕೊಂಡು ಬಹಮನ್ ಅವನಿಂದ ಹಣ ಪಡೆದುಕೊಂಡ. ಈ ಹಣದಿಂದ ಬಹಮನ್ ಕುದುರೆಗಳನ್ನು ಖರೀದಿಸಿ ಹೆಚ್ಚಿನ ಬೆಲೆಗೆ ಸರಕಾರಕ್ಕೆ ಮಾರಾಟಮಾಡಿದ. ಇದನ್ನು ತಿಳಿದ ಶರ್ಫ್ ಬೇಗನಿಗೆ ಅವನ ಮೇಲೆ ಇನ್ನಷ್ಟು ರೇಗಿದ.

ಬಾದಶಾಹನನ್ನು ಭೇಟಿಯಾಗಲು ಹೋದ ಸಂದರ್ಭದಲ್ಲಿ ತಾನು ಓರ್ವ ಸೇವಕನಂತೆಯೇ ಇರುತ್ತಿದ್ದ. ಅವನು ಬಾದಶಾಹರ ನಡೆನುಡಿ, ವ್ಯವಹಾರಗಳಿಂದ ಬಹಳಷ್ಟು ಮಾಹಿತಿಯನ್ನು ಪಡೆದುಕೊಂಡ. ಅವನು ಹಿಂತಿರುಗಿ ಗುಜರಾತಿಗೆ ಹೋಗುವಾಗ ಅವನಿಗಿಷ್ಟವಾದ ಬಹಳಷ್ಟು ಉಡುಗೊರೆ, ಸಾಮಾನುಗಳನ್ನು, ನಗದು ಹಣವನ್ನು ಬಾದಶಾಹ ನೀಡಿದ. ಅಲ್ಲಿರುವ ತನಕ ಅಲ್ಲಿನ ಬಹಳ ಜ್ಞಾನಿಗಳು, ಆಲಿಮ್, ಉಲೇಮಾಗಳ ಜೊತೆಗೆ ಎರಡು ವರ್ಷಗಳ ಕಾಲ ಸಂಗಾತಿಯಾಗಿ ತನ್ನ ಜ್ಞಾನ, ಬುದ್ಧಿಮತ್ತೆಯನ್ನು ಬೆಳೆಸಿಕೊಂಡಿದ್ದ. ಬಾದಶಾಹನೊಂದಿಗೆ 'ಗುಜರಾತಿನ ಸರಹದ್ದು ದೊಡ್ಡದಾಗಿದೆ, ನಾನು ಇಲ್ಲಿ ಬಹಳ ಸಮಯ ಕಳೆದಿದ್ದೇನೆ, ಅಲ್ಲಿ ಇಷ್ಟರಲ್ಲಿ ಪಿತೂರಿ, ದ್ವೇಷ ಹರಡಿರಬಹುದು. ಇದನ್ನು ನಿಗ್ರಹಿಸುವ ಸಲುವಾಗಿ ನಾನು ಈಗ ಗುಜರಾತಿಗೆ ಹೋಗಬೇಕಾಗಿದೆ' ಎಂದು ಅವನ ಅನುಮತಿಪಡೆದು ಗುಜರಾತಿಗೆ ಪ್ರಯಾಣ ಬೆಳೆದ. ಬಾದಶಾಹನಿಂದ ಪಡೆದ ಧನ ಕನಕಗಳಲ್ಲಿ ಒಂದು ಭಾಗವನ್ನು ಹಾದಿಯಲ್ಲಿದ್ದ ಬಡವರು, ಭಿಕ್ಷುಕರು, ಸಂಕಷ್ಟದಲ್ಲಿರುವವರಿಗೆ ದಾನಮಾಡಿದ. ಇದರಿಂದ ಅವನ ಘನತೆ, ಗೌರವ, ಪ್ರತಿಷ್ಠೆ ತುಂಬ ಎತ್ತರಕ್ಕೇರಿತು.

ಸ್ವಲ್ಪ ಕಾಲಾನಂತರ ಶರ್ಫ್ ಬೇಗ್ ಮತ್ತು ಬಹಮನನ ಜಗಳ ಬಾದಶಾಹನ ಗಮನಕ್ಕೆ ಬಂತು. ಬಹಮನ್ ಬಾದಶಾಹ ಖಾನೆ ಖಾನಾನ್‌ನ ಗೈರುಹಾಜರಿಯಲ್ಲಿ ಮಾಡಿದ ಕೆಟ್ಟಕೆಲಸಗಳು ಬಹಿರಂಗವಾದವು. ಅವುಗಳಲ್ಲಿ ಒಂದು ಕುದುರೆಗಳ ಖರೀದಿ ವ್ಯಾಪಾರವೂ ಆಗಿತ್ತು. ಬಹಮನ್ ಈ ಕೆಲಸಗಳನ್ನು ತಿರುಗುಮುರುಗಾಗಿ ಹೇಳಿ ವಿವರಿಸಿ ಶರ್ಫ್ ಬೇಗ್ ಮಾಡಿದ ಕೃತ್ಯವೆಂದು ಬಾದಶಾಹನಿಗೆ ಮನದಟ್ಟು ಮಾಡಲು ಪ್ರಯತ್ನಿಸಿದ. ಬಾದಶಾಹನಿಗೆ ಅವನು ಮಾತಾಡುವ ರೀತಿಯಿಂದ ಇದೆಲ್ಲ ಕೃತ್ಯಗಳು ಬಹಮನನೇ ಮಾಡಿದ್ದೆಂದು ಗುಮಾನಿ ಉಂಟಾಯಿತು. ಬಾದಶಾಹ ಕೆಲವು ದಿನಗಳು ಶರ್ಫ್ ಬೇಗನ ಕಡೆ ತನ್ನ ಗಮನವನ್ನು ಬೇರೆಡೆ ಹರಿಸಿ ಕೋಪಗೊಂಡಂತೆ ನಟಿಸಿ ನೋಡಿದ. ಶರ್ಫ್ ಬೇಗ್ ಇದರಿಂದ ತುಂಬ ನೊಂದುಕೊಂಡ. ತನ್ನ ಮನದಾಳದ ನೋವನ್ನು ಗೆಳೆಯರಿಗೆ ಹೇಳಿಕೊಂಡ. ಆಗ ಅವನ ಗೆಳೆಯರು ಬಹಮನನ ಕೃತ್ಯಗಳ

ವಿವರವಾದ ವರದಿಯನ್ನು ತಯಾರಿಸಿ ಬಾದಶಾಹ ಖಾನೆ ಖಾನಾನ್‌ನಿಗೆ ಒಪ್ಪಿಸಿದರು. ಇದರಲ್ಲಿ ಕುದುರೆಗಳ ಖರೀದಿಯಲ್ಲಿ ಮೋಸ ಮಾಡಿರುವುದು ಮತ್ತು ಕುದುರೆಯ ಜೀನು ಬಟ್ಟೆಗಳನ್ನು ಕೂಡ ಕದ್ದ ವಿಚಾರವನ್ನು ಸೇರಿಸಿದ್ದರು. ಸರಕಾರಿ ಖಜಾನೆಯಲ್ಲಿ ಮಾಡಿದ ಕಳವು ಮೋಸದ ಲೆಕ್ಕಾಚಾರವೂ ಕೂಡ ಬಹಿರಂಗವಾಯಿತು. ಈ ಎಲ್ಲ ವಿವರಗಳು ಬಾದಶಾಹನ ಮುಂದೆ ಬಂದಾಗ ಅವನ ಕುತ್ತಿಗೆ ಹಿಡಿದು ಎಳೆದು ದರ್ಬಾರಿಗೆ ತರುವಂತೆ ಹಾಗೂ ಅವನ ಮನೆಯನ್ನು ಜಪ್ತಿ ಮಾಡುವಂತೆ ದೂತರಿಗೆ ಅಪ್ಪಣೆ ಮಾಡಿದ. ಅವನ ಮನೆಯನ್ನು ಜಪ್ತಿ ಮಾಡಿದಾಗ ಹದಿನಾಲ್ಕು ಲಕ್ಷ ರೂಪಾಯಿ ಆದಾಯಕ್ಕೆ ಮಿಕ್ಕ ನಗದು ಸಿಕ್ಕಿತು.

ಬಹಮನನ ವಿರೋಧಿಗಳು ಬಾದಶಾಹನಿಗೆ ಸರಕಾರಿ ಖಜಾನೆಯಿಂದ ಕದಿಯಲಾದ ಸಾಮಾನುಗಳ ಬಗ್ಗೆ ಬೆಲೆಬಾಳುವ ಆಭರಣಗಳ ವಿವರ ನೀಡಿದರು. ಇವುಗಳನ್ನೆಲ್ಲ ಕಾಬೂಲಿಗೆ ಸಾಗಿಸಿದ್ದ ವಿವರಗಳನ್ನು ನೀಡಿದರು. ಇದರ ಬಗ್ಗೆ ಬಾದಶಾಹ ತನಿಖೆ ಮಾಡಲು ತನ್ನ ನಂಬಿಗಸ್ಥ ಅಧಿಕಾರಿಗಳನ್ನು ಕಾಬೂಲಿಗೆ ಕಳುಹಿಸಿದ. ಅಲ್ಲಿ ಖಜಾನೆಯ ಲಕ್ಷಗಟ್ಟಲೆ ಬಂಗಾರ ಬೆಳ್ಳಿಯ ನಾಣ್ಯಗಳು, ಮುತ್ತು ಮಾಣಿಕ್ಯಗಳನ್ನು ಪೋಣಿಸಲಾದ ಹತ್ಯಾರುಗಳನ್ನು ಶೇಖರಿಸಿದ್ದು ನಿಜವೆಂದು ವರದಿ ಬಂತು. ಕಾಬೂಲಿನಿಂದ ಈ ಸೊತ್ತುಗಳನ್ನೆಲ್ಲ ಬಾದಶಾಹನ ತನಿಖಾ ಅಧಿಕಾರಿಗಳು ಸಾಗಿಸಿ ತಂದು ಬಾದಶಾಹನ ಆಸ್ಥಾನಕ್ಕೆ ಹಾಜರಿಪಡಿಸಿದರು. ಅಧಿಕಾರಿಗಳ ಈ ಕೆಲಸದಿಂದ ಬಾದಶಾಹ ಸಂತಸಗೊಂಡು ಪ್ರತೀ ತಿಂಗಳು ಐದು ಸಾವಿರ ರೂಪಾಯಿ ಸಂಬಳ ಹೆಚ್ಚಿಸಿದ. ಬಹಮನನ ಕುಕೃತ್ಯಕ್ಕೆ ಮರಣದಂಡನೆಯ ಶಿಕ್ಷೆಯನ್ನು ವಿಧಿಸಲಾಯಿತು. ಖಾನೆ ಖಾನನ್ನು ಕೆಲವು ಕಾಲ ಗುಜರಾತಿನಲ್ಲಿ ಉಳಿಸಿ ಬಾದಶಾಹನ ಆಜ್ಞೆಯಂತೆ ಸಿಂಧ್ ಪ್ರಾಂತ್ಯಕ್ಕೆ ಪ್ರಯಾಣಿಸಿದ.

**ಕೆಲವು ಬಾದಶಾಹರ ಬದುಕಿನ ಸಂಕ್ಷಿಪ್ತ ವಿವರಗಳು:**

ಹಿಜರಿ ವರ್ಷ ೯೬೭ರಲ್ಲಿ ನಾನು ದೆಹಲಿಗೆ ಹೋಗಿದ್ದೆ. ಅಲ್ಲಿ ಸಿಕ್ಕ ಸುದ್ದಿಯಂತೆ ಸುಲ್ತಾನ್ ಹುಸೈನ್ ಮಿರ್ಜಾ ಬಾಕರನ ಮಕ್ಕಳಲ್ಲಿ ಓರ್ವ ಬಾದಶಾಹ ಮಿರ್ಜಾ ಹುಸೈನ್ ಕೂಡ ಸೇರಿದ್ದ. ಇವನು ಪ್ರಾಮಾಣಿಕ, ನೀತಿವಂತ, ಪರೋಪಕಾರಿ ಎಂದು ಖ್ಯಾತನಾಗಿದ್ದ. ಇವನಿಂದಾಗಿ ಪ್ರವಾಸಿಗರು, ನೆರೆಹೊರೆಯವರು, ಪ್ರಜೆಗಳು ಬಹಳಷ್ಟು ಸಹಾಯವನ್ನು ಪಡೆದಿದ್ದರು. ಈ ಬಾದಶಾಹರ ಓರ್ವ ಮಂತ್ರಿಯ ಹೆಸರು ಮಿರ್ಜಾ ಈಸಾ ಎಂದಾಗಿತ್ತು. ಇವನು ತರ್ಖಾನ್ ಮೂಲದ ವಂಶದವನಾಗಿದ್ದ. ಈ ಬಾದಶಾಹನ ಆಡಳಿತಾತ್ಮಕ ನಿರ್ಣಯಗಳನ್ನು ಜಾರಿಗೊಳಿಸುತ್ತಿದ್ದ. ಅಮೀರ್ ಸುಲ್ತಾನ್ ಮಹಮೂದ್ ಅಸ್ಫಹಾನಿ ಈ ಮಿರ್ಜಾನ ಮುಖ್ಯ ಸೇನಾಧಿಪತಿಯಾಗಿದ್ದ. ಇವನು ಬಹಳ ಜ್ಞಾನಿಯೂ, ಬಹಳ ಬುದ್ಧಿವಂತನೂ ಆಗಿದ್ದ. ಇವನ ಆಳ್ವಿಕೆಯಲ್ಲಿ

ಬಘರಾ ಪ್ರಾಂತ್ಯವನ್ನು ತುಂಬ ಅಭಿವೃದ್ಧಿಗೊಳಿಸಿದ್ದ. ಇವನ ಆಡಳಿತಕ್ಕೆ ಒಳಪಟ್ಟ ಕೋಟೆಗಳ ರಕ್ಷಣೆಯ ಜವಾಬ್ದಾರಿಯನ್ನು ಸಶಕ್ತವಾಗಿ ನಿಭಾಯಿಸಿದ್ದ. ಮಿರ್ಜಾ ಹುಸೈನನ ಮರಣಾ ನಂತರ ಈತ ಬಘರಾ ಪ್ರಾಂತ್ಯದ ಅಧಿಪತಿಯಾದ.

ಸುಲ್ತಾನ ಮಹಮೂದನ ಮರಣಾನಂತರ ಅವನ ಒಬ್ಬ ಗುಲಾಮ ಜೈನುಲ್ ಆಬಿದೀನ್ ಎಂಬವನು ಕೆಲವು ದಿನಗಳ ತನಕ ಬಘರಾವನ್ನು ಆಳಿದ್ದ. ಅಕ್ಬರ್ ಬಾದಶಾಹನಿಗೆ ಬಘರಾವನ್ನು ವಶಪಡಿಸಿಕೊಳ್ಳುವ ಅಲೋಚನೆಯಾದಾಗ, ಈ ಗುಲಾಮ ತನ್ನ ಸ್ವ ಇಚ್ಛೆಯಿಂದ ಬಾದಶಾಹನ ಆಸ್ಥಾನಕ್ಕೆ ಹೋಗಿ ಅವನಿಗೆ ಈ ನಗರ ಮತ್ತು ಕೋಟೆಯನ್ನು ಒಪ್ಪಿಸಿದನಲ್ಲದೆ ಬಾದಶಾಹನ ಬಳಿ ಕೆಲಸಕ್ಕೆ ಸೇರಿಕೊಂಡ. ಕ್ರಮೇಣ ಈತ ಬಾದಶಾಹನ ಸರದಾರರಲ್ಲಿ ಒಬ್ಬನಾಗಿ ನೇಮಕಗೊಂಡ. ಮಿರ್ಜಾ ಶಾಹ ಹುಸೈನನ ಆಡಳಿತದ ಅಧಿಕಾರಿ ಸ್ಥಾನದಲ್ಲಿ ಮಿರ್ಜಾ ಈಸಾ ತರ್ಖಾನಿಯನ್ನು ನೇಮಕ ಮಾಡಿಕೊಳ್ಳಲಾಯಿತು. ಈಸಾ ತರ್ಖಾನಿ ಹದಿನೈದು ವರ್ಷಗಳ ಕಾಲ ತುಂಬ ಚೆನ್ನಾಗಿ ಆಳ್ವಿಕೆ ನಡೆಸಿದ. ಇವನಿಗೆ ಮುಹಮ್ಮದ್ ಬಾಕರ್ ಮತ್ತು ಮುಹಮ್ಮದ್ ಸಾಲಿಹ್ ಎಂಬ ಇಬ್ಬರು ಮಕ್ಕಳು. ತುಂಬ ಉತ್ತಮ ನಡತೆಯ ಬುದ್ಧಿವಂತರು ಮತ್ತು ಪ್ರಾಮಾಣಿಕರಾಗಿದ್ದರು. ತಮ್ಮ ತಂದೆಯಿಂದಲೇ ಎಲ್ಲ ವಿದ್ಯಾಭ್ಯಾಸವನ್ನು ಪಡೆದಿದ್ದರು. ತಂದೆ ತನ್ನ ಜೀವಿತ ಕಾಲದಲ್ಲೇ ಇಬ್ಬರೂ ಮಕ್ಕಳಿಗೆ ತನ್ನ ರಾಜ್ಯವನ್ನು ವಿಭಾಗ ಮಾಡಿ ನೀಡಿದ್ದ. ಬಹಳ ವರ್ಷಗಳ ಕಾಲ ಈ ಇಬ್ಬರು ಸಹೋದರರೂ ಪರಸ್ಪರ ಪ್ರೀತಿ ವಿಶ್ವಾಸದಿಂದ ಬೆರೆತು ರಾಜ್ಯವನ್ನು ಆಳುತ್ತಿದ್ದರು. ಇದರಿಂದ ತಂದೆಯೂ ಕೂಡ ಸಂತಸಪಟ್ಟಿದ್ದ. ತಂದೆ ತೀರಿಕೊಂಡ ನಂತರ ಮುಹಮ್ಮದ್ ಬಾಕರ್ ರಾಜ್ಯದ ಸಂಪೂರ್ಣ ಆಡಳಿತವನ್ನು ಹಿಡಿದುಕೊಂಡ. ಮುಹಮ್ಮದ್ ಸಾಲಿಹ್ ಅತೃಪ್ತನಾಗಿ ತನ್ನ ಪಾಲಿನ ಹಕ್ಕನ್ನು ಕೇಳತೊಡಗಿದ, ಈ ವಿವಾದ ಹೆಚ್ಚು ದೊಡ್ಡದಾಗುತ್ತ ಬಂದು ಒಂದು ದಿನ ಮುಹಮ್ಮದ್ ಸಾಲಿಹ್ ರಾಜ್ಯದಿಂದ ಹೊರನಡೆದ. ಕೆಲವು ದಿನಗಳ ಬಳಿಕ ವಾಪಾಸು ನಗರಕ್ಕೆ ಬೆಂಕಿ ಹಚ್ಚಿ ದಾಂಧಲೆ ಎಬ್ಬಿಸತೊಡಗಿದ.

ಬೈತ್
ಇಬ್ಬರು ದರ್ವೇಶ್‌ಗಳು ಒಂದು ಇಲಾಖೆಯಲ್ಲಿ ಇರಲಾರರು
ಇಬ್ಬರು ಬಾದಶಾಹರು ಒಂದು ರಾಜ್ಯವನ್ನು ಆಳಲಾರರು.

ಪ್ರತೀ ದಿನವೂ ಈ ಇಬ್ಬರು ಸಹೋದರರ ನಡುವೆ ಯುದ್ಧ, ಘರ್ಷಣೆ ನಡೆಯುತ್ತಲೇ ಇದ್ದವು. ಇದರಿಂದ ರಾಜ್ಯದಲ್ಲಿ ಅರಾಜಕತೆ ಉಂಟಾಗಿ ಗುಲ್ಲೆದ್ದಿತು. ಕೊನೆಗೆ ಒಂದು ಸಬೂಬು ನೀಡಿ ಮುಹಮ್ಮದ್ ಸಾಲಿಹನಿಗೆ ನೀರಿನ ಲೋಟದಲ್ಲಿ ಒಂದು ವಸ್ತುವನ್ನು ಹಾಕಿದುದರಿಂದ ಕುಡಿದಾಗ ಬೆಂಕಿಯಂತೆ ಕರುಳನ್ನು ಸುಟ್ಟು ಹೋಗಿ ಅವನು ಸತ್ತು

ಹೋದ. ಇದರ ಜೊತೆಯಲ್ಲಿ ರಾಜ್ಯದಲ್ಲಿ ಸ್ಥಿರ ಸರಕಾರ ಸ್ಥಾಪನೆಯಾಯಿತು. ಹೀಗೆ ಮುಹಮ್ಮದ್ ಬಾಕರನು ರಾಜ್ಯವನ್ನು ವಶಪಡಿಸಿಕೊಂಡು ಆಳ್ವಿಕೆಯನ್ನು ಮುಂದುವರಿಸಿದ. ಮುಹಮ್ಮದ್ ಬಾಕರ್‌ನಿಗೆ ಎರಡು ಗಂಡು ಮಕ್ಕಳು. ಇವರಿಬ್ಬರೂ ವಿಧ್ವಾಂಸರು, ಪಂಡಿತರು, ಉಲೇಮಾಗಳೊಂದಿಗೆ ಸದಾಕಾಲ ಇರುತ್ತಿದ್ದರು. ಅವರ ಮೂಲಕ ಇಬ್ಬರೂ ಸಾಕಷ್ಟು ಜ್ಞಾನ ಸಂಪಾದನೆಯನ್ನು ಮಾಡಿಕೊಂಡಿದ್ದರು. ದೊಡ್ಡವರಾದ ನಂತರ ತಂದೆ ರಾಜ್ಯಾಡಳಿತದಲ್ಲಿ ಪಾಲ್ಗೊಂಡರು. ಸ್ವಲ್ಪ ಕಾಲದ ನಂತರ ಮುಹಮ್ಮದ್ ಬಾಕರ್ ತೀರಿಕೊಂಡ. ಮಿರ್ಜಾ ಜಾನ್ ಅವನ ನಂತರ ಸಿಂಹಾಸನವನ್ನು ಅಲಂಕರಿಸಿದ. ಇವನು ಅತ್ಯಂತ ಒಳ್ಳೆಯ ರೀತಿಯಲ್ಲಿ ಆಡಳಿತ ನಡೆಸಿದ. ಮಿರ್ಜಾ ಷಾ ಹುಸೈನನ ಗುಲಾಮರಲ್ಲಿ ಓರ್ವನಾದ ಸುಲ್ತಾನ್ ಖುಸ್ರೋ ಜರ್ಗಸ್ ಜಾತಿಗೆ ಸೇರಿದವನಾಗಿದ್ದ. ನಂತರ ಇವನು ಸರದಾರ ಪದವಿಗೇರಿದ. ಇವನು ಶೌರ್ಯವಂತನಾಗಿದ್ದನಲ್ಲದೆ ಬಡಜನರ ಬಗ್ಗೆ ಕನಿಕರವಿದ್ದವನೂ ಪ್ರಾಮಾಣಿಕನೂ, ಧರ್ಮಭೀರುವೂ ಆಗಿದ್ದ. ಯಾವುದೇ ಕೆಲಸವನ್ನು ಮಾಡಲು ಹೊರಟಾಗ ಬಾದಶಾಹರ ಸಲಹೆ, ಮಾರ್ಗದರ್ಶನ ಮಾಡಿಕೊಂಡೇ ಮುಂದುವರಿಯುತ್ತಿದ್ದ. ಇದರಿಂದಾಗಿ ಮಿರ್ಜಾ ಜಾನಿ ಆಡಳಿತದ ಸಂಪೂರ್ಣ ಜವಾಬ್ದಾರಿಯನ್ನು ಅವನಿಗೆ ವಹಿಸಿಕೊಟ್ಟಿದ್ದ. ಇವನು ತನ್ನ ಬದುಕಿರುವ ತನಕ ಯಾವುದೇ ತಪ್ಪನ್ನು ಮಾಡಲಿಲ್ಲ. ಆಳ್ವಿಕೆಯ ಕೆಲಸಕಾರ್ಯಗಳಲ್ಲಿ ಯಾವತ್ತೂ ಕೂಡ ತಪ್ಪು ಹೆಜ್ಜೆಯನ್ನು ಇಟ್ಟಿರಲಿಲ್ಲ. ಸೈನಿಕರು, ಸೇವಕರು, ಪ್ರಜೆಗಳು ಇವನಿಂದ ಬಹಳ ಸಂತೋಷಪಟ್ಟುಕೊಂಡಿದ್ದರು, ಗೆಳೆಯರು ಇವನ ಮೇಲೆ ತುಂಬ ಪ್ರೀತಿ ವಿಶ್ವಾಸವನ್ನು ಇಟ್ಟುಕೊಂಡಿದ್ದರು.

**ಅಕ್ಬರ್ ಬಾದಶಾಹ ತನ್ನ ತಮ್ಮ ಖಾನೆ ಖಾನಾನನನ್ನು ಸಿಂಧ್ ಪ್ರಾಂತ್ಯವನ್ನು ವಶಪಡಿಸಿಕೊಳ್ಳಲು ಕಳುಹಿಸುವ ವಿವರಗಳು:**

ಅಕ್ಬರ್ ಬಾದಶಾಹ ಲಾಹೋರ್ ಮತ್ತು ಸುತ್ತಲಿನ ಪ್ರಾಂತ್ಯಗಳನ್ನು ಜಯಿಸಿದಾಗ ಖಾನೆ ಖಾನಾನನಿಗೆ ಒಂದು ಸೈನ್ಯವನ್ನು ಒಪ್ಪಿಸಿ ಸಿಂಧ್ ಪ್ರಾಂತ್ಯಕ್ಕೆ ಕಳುಹಿಸಿದ. ಆಗ ಮಿರ್ಜಾ ಜಾನಿ ಅಲ್ಲಿನ ಬಾದಶಾಹನಾಗಿದ್ದ. ಮಿರ್ಜಾ ಜಾನಿ ಮೊದಲು ಖುಸ್ರೋ ಜೊತೆಗೆ ಮೊಘಲರನ್ನು ಇಲ್ಲಿನ ತಂಟೆಗೆ ಬಾರದಂತೆ ಏನು ಮಾಡಬೇಕೆಂಬ ಬಗ್ಗೆ ಚರ್ಚೆ ಮಾಡಿದ. 'ಅಕ್ಬರ್ ಬಾದಷಾಹ ಬಹುದೊಡ್ಡ ಬಲಿಷ್ಠನಾದ ಖ್ಯಾತಿಹೊಂದಿದ ಬಾದಶಾಹನಾಗಿದ್ದಾನೆ. ಇವನ ಬಳಿ ಸಾಕಷ್ಟು ಸಂಖ್ಯೆಯ ಸೈನ್ಯವಿದೆ. ನಾವು ಅವನ ಸಮನಾಗಿ ನಿಲ್ಲಲಾರೆವು. ಇದರಿಂದ ನಮ್ಮ ಸಾಮ್ರಾಜ್ಯವು ಸಂಪೂರ್ಣ ನಾಶವಾಗಬಹುದು. ಈ ಸಮಸ್ಯೆಗೆ ಪರಿಹಾರವಾಗಿ ನಮ್ಮ ರಾಜ್ಯದ ಪರ್ವತ ಗುಡ್ಡಗಳ ಇಲಾಖೆಯನ್ನು ಬಂಜರು ಭೂಮಿಯನ್ನು ಅವರಿಗೆ ನೀಡಿ ಉಳಿದ ಒಳ್ಳೆಯ

ಪ್ರದೇಶಗಳನ್ನು ದ್ವೀಪಗಳನ್ನು ನಾವು ಇಟ್ಟುಕೊಳ್ಳುವ. ಇದರಿಂದಾಗಿ ಅವರು ನಮ್ಮನ್ನು ಹುಡುಕುತ್ತ ನಮ್ಮ ಸನಿಹ ಬಾರದಹಾಗೆ ಆಗುತ್ತದೆ' ಎಂದು ಖುಸ್ರೋ ಸಲಹೆಯನ್ನು ನೀಡಿದ. ಹೀಗೆ ಮೂರುವರ್ಷಗಳ ಕಾಲ ಈ ಜನರು ಸಿಂಧ್ ನದಿಯ ದ್ವೀಪಗಳಲ್ಲಿ ಅಡಗಿದ್ದು ಮೊಘಲರೊಂದಿಗೆ ಯುದ್ಧನಿರತರಾದರು. ಎರಡೂ ಕಡೆಯ ಬಹಳ ಸಂಖ್ಯೆಯಲ್ಲಿ ಸೈನಿಕರು ಮರಣಹೊಂದಿದರು. ದೋಣಿಗಳ ಮೂಲಕವೂ ಯುದ್ಧ ನಡೆಯಿತು. ಆದರೆ ಮೊಘಲರು ಕೂಡ ದೋಣಿಯಲ್ಲಿ ಸವಾರಿಯಾಗಿ ಯುದ್ಧ ನಡೆಸಿದರು. ಇದರಿಂದಾಗಿ ಭೂಮಿ ಮತ್ತು ನೀರಿನ ಮೂಲಕ ನಾಲ್ಕೂ ನಿಟ್ಟಿನಲ್ಲಿ ಯುದ್ಧ ನಡೆಯ ತೊಡಗಿದ್ದರಿಂದ ಮಿರ್ಜಾ ಜಾನಿಗೆ ಮುಂದೆ ಸಮರ ನಡೆಸಲು ಕಷ್ಟಸಾಧ್ಯವಾಯಿತು. ಖುಸ್ರೋನನ್ನು ಒಂದು ತಂಡದೊಂದಿಗೆ ಸಂಧಾನದ ವಿಚಾರವನ್ನು ಮುಂದಿಟ್ಟು ಖಾನೆ ಖಾನಾನನ ಬಳಿಗೆ ಕಳುಹಿಸಿದ. ಯಾಕೆಂದರೆ ಈ ಯುದ್ಧದಿಂದ ಸಂಪೂರ್ಣವಾಗಿ ಸೋತುಸುಣ್ಣವಾಗಿದ್ದ. ರಾಜಿ ಮಾಡಿಕೊಳ್ಳುವುದು ಅವನಿಗೆ ಅತ್ಯಂತ ಅಗತ್ಯವಾಗಿತ್ತು. ಪರಸ್ಪರ ಪತ್ರ ವ್ಯವಹಾರ ನಡೆದು ತಟ್ಟಾ ಇಲಾಖೆ ಮತ್ತು ಮಾಹೋರಿಯ ಬಂದರು ಪ್ರದೇಶ ಬಾದಶಾಹನ ವಶಕ್ಕೆ ನೀಡಬೇಕು, ಉಳಿದ ಪ್ರದೇಶಗಳನ್ನು ಮಿರ್ಜಾಜಾನ್ ತನ್ನ ಬಳಿ ಇಟ್ಟುಕೊಳ್ಳಬಹುದು ಎಂಬ ತೀರ್ಮಾನಕ್ಕೆ ಬಂದರು. ಈ ಸಂಧಾನದೊಂದಿಗೆ ತನ್ನ ಪ್ರಾಮಾಣಿಕ ಇರಾದೆಯೊಂದಿಗೆ ಬಾದಶಾಹನ ಮುಂದೆ ಮಿರ್ಜಾ ನಿಂತ. ಖಾನೆ ಖಾನಾನಿನನ ಮೂಲಕ ಈ ಸಂಧಾನ ಪತ್ರವನ್ನು ಒಂದು ಹರಿವಾಣದಲ್ಲಿಟ್ಟು ಗೌರವದೊಂದಿಗೆ ಬಾದಶಾಹನ ಮುಂದೆ ಇಡಲಾಯಿತು. ಈ ಸಮಯದಲ್ಲಿ ಖಾನೆ ಖಾನಾನನು ಮಿರ್ಜಾ ಜಾನಿಯನ್ನು ಪ್ರೀತಿಯೊಂದಿಗೆ ಸ್ವಾಗತಿಸಿದ. ಒಬ್ಬರನ್ನೊಬ್ಬರು ಪರಸ್ಪರ ಆಲಂಗಿಸಿಕೊಂಡರು. ಈ ಭೇಟಿಯ ಬಳಿಕ ಬಾದಶಾಹನ ಕಡೆಯಿಂದ ಅವನಿಗೆ ಉಡುಗೊರೆ ಮತ್ತು ಇನಾಮುಗಳನ್ನು ನೀಡಿ ಗೌರವಿಸಲಾಯಿತು.

ಈ ಇನಾಮುಗಳ ಕೋಡಿ ಹರಿದುಬಂದದ್ದು ಮಿರ್ಜಾ ಜಾನಿಯ ಸ್ವಾಮಿನಿಷ್ಠೆಗಾಗಿ ಮುತ್ತು ಇದರ ಪ್ರಮಾಣವು ಎಷ್ಟಿತ್ತೆಂದರೆ ಇಂತಹ ಇನಾಮು ಉಡುಗೊರೆಗಳನ್ನು ಇಷ್ಟರವರೆಗೆ ಬಂದ ಯಾವುದೇ ಬಾದಶಾಹನು ಇಷ್ಟೊಂದನ್ನು ಯಾರೂ ಕೊಟ್ಟಿರಲಿಲ್ಲವೆಂದು ಜನರು ಹೇಳುತ್ತಿದ್ದರು.

**ಅಕ್ಬರ್ ಬಾದಶಾಹ ತನ್ನ ಮಗ ಮೀರ್ ಬಹಾದುರನನ್ನು(ಸುಲ್ತಾನ್ ಮುರಾದ್) ದಖ್ಖನವನ್ನು ಜಯಿಸಲಿಕ್ಕಾಗಿ ದೊಡ್ಡ ಸೈನ್ಯವನ್ನು ಕೊಟ್ಟು ಕಳುಹಿಸಿದ ವಿವರಗಳು:**

ಅಕ್ಬರ್ ಬಾದಶಾಹನಿಗೆ ಬಹಳ ಸಮಯದಿಂದ ದಕ್ಷಿಣ ಭಾರತವನ್ನು ಗೆದ್ದು ತನ್ನ ಸಾಮ್ರಾಜ್ಯಕ್ಕೆ ಸೇರಿಸಿಕೊಳ್ಳುವ ಮಹತ್ವಾಕಾಂಕ್ಷೆಯಿತ್ತು. ಆದರೆ ಅವನ ಮುಖ್ಯ ಸರದಾರರು ಇದಕ್ಕೆ ತಡೆಹಾಕುತ್ತಿದ್ದುದರಿಂದ ಈ ಆಸೆ ಕೈಗೂಡಿರಲಿಲ್ಲ. ಆಗ ಸುಲ್ತಾನ್ ಮುರಾದನನ್ನು ಹಳೆಯ ಸರದಾರರ ಸಲಹೆಯಂತೆ ಮುಖ್ಯವಾಗಿ ಖಾನೆ ಖಾನಾನ್,

ಶಾಬಾಜ್ ಖಾನ್, ಮಿರ್ಜಾ ರುಸ್ತುಂ(ಭೈರಾಮ್ ಮಿರ್ಜಾನ ಸಹೋದರ ತಹಮಾಸ್ಪನ ಮಗ), ಮುಹಮ್ಮದ್ ಸಾದಿಕ್ ಖಾನ್, ಮಿರ್ಜಾ ಅಲಿ ಅಕ್ಬರ್ ಶಾಹಿ ಮತ್ತು ಷೇಖ್ ಖ್ವಾಜಾ ಮುಂತಾದವರ ಸಲಹೆಯಂತೆ ಬಾದಶಾಹನ ಅನುಮತಿಯ ಮೇರೆಗೆ ದಕ್ಷಿಣ ಭಾರತಕ್ಕೆ ಕಳುಹಿಸಲಾಯಿತು. ಅವನು ಸೈನ್ಯದೊಂದಿಗೆ ಅಹ್ಮದ್‌ನಗರದ ಬಳಿ ತಲಪಿದಾಗ, ಅಲ್ಲಿ ಸ್ವಲ್ಪಕಾಲ ತಂಗಿದರು. ಅಲ್ಲಿ ಬುರ್ಹಾನ್ ಶಾಹನ ವಂಶದವನಾದ ಅಹ್ಮದ್ ನಿಜಾಂ ಶಾಹನ ಆಳ್ವಿಕೆಯಿತ್ತು. ಇವನು ಸುಲ್ತಾನನಾಗಿದ್ದರೂ ತುಂಬ ಬಲಹೀನನಾಗಿದ್ದ. ಯಾರಾದರೂ ವಿರೋಧಿಗಳ ಆಕ್ರಮಣವಾದರೆ ಎದುರಿಸುವ ತಾಕತ್ತು ಅವನಲ್ಲಿ ಇರಲಿಲ್ಲ. ಆಗ ಹಿಜರಿ ವರ್ಷ ಸನ್ ೧೦೦೪ರ ಕಾಲವಾಗಿತ್ತು. ಆ ಕಾಲಘಟ್ಟದಲ್ಲಿ ಮಂಜು ಎಂಬ ಹೆಸರಿನ ಒಬ್ಬ ವ್ಯಕ್ತಿ ಬುರ್ಹಾನ್ ಶಾಹನ ಪೇಶ್ವನಾಗಿದ್ದ. ಅವನನ್ನು ಅಲ್ಲಿಂದ ಹಿಂದುವಾಪುರಕ್ಕೆ ಕಳುಹಿಸಿದ್ದ. ಅವನ ಕೆಲಸವನ್ನು ತಾನೇ ಇರಿಸಿಕೊಂಡ. ಹಿಂದುವಾಪುರಕ್ಕೆ ಹೋದ ಮಂಜು ಪಿತೂರಿ ಮಾಡತೊಡಗಿದ್ದ. ಈ ಸಮಯದ ಹಿಜರಿ ವರ್ಷ ಸನ್ ೧೦೭೦ರದ್ದಾಗಿತ್ತು. ಇವನನ್ನು ಬಂಧಿಸಿ ಅವನ ಕುಟುಂಬದವರ ಜೊತೆಯಲ್ಲಿ ಮುರ್ತಜಾಬಾದ್ ಕೋಟೆಯ ಸೆರೆಮನೆಯಲ್ಲಿ ಇರಿಸಿದ. ಆಗ ಅಹ್ಮದ್‌ನಗರದ ಕೋಟೆಯಲ್ಲಿ ಚಾಂದ್ ಬೀಬಿ (ಜಹಾಂಪನಾ ಷಾ ಅಲಿ ಆದಿಲ್ ಷಾನ ಪತ್ನಿ) ಅಲ್ಲಿದ್ದಳು. ಇವಳ ಬಗ್ಗೆ ನಾನು ಈ ಮುಂಚೆ ವಿವರವಾಗಿ ನೀಡಿದ್ದೇನೆ. ಇಬ್ರಾಹಿಂ ಷಾನ ಮಗ ಬಹಾದ್ದೂರ್ ಷಾ ಆಲಂಪನಾರ ಯುದ್ಧದಲ್ಲಿ ತೀರಿಕೊಂಡಿದ್ದ. ಈ ಆಲಂಪನಾ ಮೂರನೇ ವರ್ಷ ಪ್ರಾಯದಲ್ಲಿ ಸಿಂಹಾಸನಾರೂಢನಾಗಿದ್ದ.

ಮೊಘಲರು ಅಹ್ಮದ್ ನಗರದ ಕೋಟೆಯನ್ನು ನಾಲ್ಕೂ ದಿಕ್ಕಿನಲ್ಲಿ ಮುತ್ತಿಗೆ ಹಾಕಿಕೊಂಡು ತಮ್ಮ ಸಂಪೂರ್ಣ ಶಕ್ತಿಹಾಕಿ ಕೋಟೆಯ ಮೇಲೆ ಹತ್ತಲು ಪ್ರಯತ್ನಿಸುತ್ತಿದ್ದರು. ಪ್ರತೀದಿನ ಕೋಟೆಯ ಒಳಗಿನಿಂದ ಕೆಲವರು ಹೊರಬಂದು ಇವರ ಮೇಲೆ ದಾಳಿ ನಡೆಸಿ ಮತ್ತೆ ಒಳಗೆ ಹೋಗುತ್ತಿದ್ದರು. ಹೀಗೆ ಕೆಲವು ದಿನಗಳು ಸಂದವು. ಕೊನೆಗೆ ಆವರಣದ ಕೆಳಗಿನಿಂದ
ಸಿಡಿಮದ್ದಿನಿಂದ ಸಿಡಿಸಿ ರಸ್ತೆ ಮಾಡಿಕೊಂಡು ಒಳಗೆ ಹೋದರು. ಆವರಣದ ಕೆಳಗಿನ ಭಾಗದಲ್ಲಿ ಗುಂಡಿತೋಡಿ ಮಣ್ಣು ಖಾಲಿ ಮಾಡುವಾಗ ಕೋಟೆಯೊಳಗಿದ್ದವರಿಗೆ ಇವರು ರಾತ್ರಿ ಹೊತ್ತು ಸುರಂಗ ತೋಡುತ್ತಿದ್ದಾರೆಂದು ಅಂದಾಜು ಮಾಡಿದರು. ಅಲ್ಲಿ ಆರುನೂರು ಚೀಲ ಮಣ್ಣನ್ನು ತರಿಸಿ ಪೇರಿಸಿಟ್ಟರು. ಹೊರಗಿನಿಂದ ಬೆಂಕಿಯಿಟ್ಟರು. ಇದರಿಂದಾಗಿ ಕೋಟೆಯ ದೊಡ್ಡ ಬುರುಜು ಬಿದ್ದುಬಿಟ್ಟಿತು. ಎಲ್ಲೆಡೆಯಲ್ಲಿ ಪ್ರಳಯ ಕಾಲದಲ್ಲಿ ಉಂಟಾಗುವ ಭಯ ಅಲ್ಲಿ ಆವರಿಸಿತ್ತು. ನಾಲ್ಕೂ ನಿಟ್ಟಿನಲ್ಲಿ ಬೆಂಕಿಯ ಭುಗಿಲು ಹರಡಿತು. ದಟ್ಟವಾಗಿ ಹೊಗೆ ಮತ್ತು ಧೂಳು ನಾಲ್ಕೂ ಕಡೆ ಹಬ್ಬಿತು. ಈ

ಸಮಯದಲ್ಲಿ ಸುಲ್ತಾನ್ ಮುರಾದ್ ಕುದುರೆಯ ಮೇಲೆ ಸವಾರಿ ಮಾಡಿಕೊಂಡು ಆ ಕಡೆ ಹೋದ. ಖಾನೆ ಖಾನಾನ್ ಮತ್ತು ಶಾಹಬಾಜ್ ಖಾನ್ ಖಂಭೋ ಮುಂದೆ ಬಂದು ಸುಲ್ತಾನ್ ಮುರಾದನ ಕುದುರೆಯ ಲಗಾಮನ್ನು ಹಿಡಿದರು. ನಾವು ನಾಲ್ಕೈದು ದಿನಗಳಿಂದ ಇಲ್ಲಿ ಬೆಂಕಿ ಹಾಕಿದ್ದೇವೆ ಎಂದು ನಡೆದ ಎಲ್ಲ ಸಂಗತಿಗಳನ್ನು ತಿಳಿಸಿದರು. ಆದರೆ ನಮ್ಮ ಶಕ್ತಿ ಕುಂದುತ್ತಾ ಇದೆ. ನಮ್ಮ ಮೇಲೆ ಯಾರದೋ ಕೆಟ್ಟ ದೃಷ್ಟಿ ಬಿದ್ದಿದೆ ಎಂದು ಹೇಳಿದರು. ಸುಲ್ತಾನ್ ತಮ್ಮ ಪ್ರಯತ್ನ ಜಾರಿಯಿಟ್ಟು ಜೀವವನ್ನು ಪಣವಾಗಿಟ್ಟುಕೊಂಡು ಹೇಗಾದರೂ ಮಾಡಿ ಕೋಟೆಯೊಳಗೆ ಪ್ರವೇಶಿಸಿ ನಮ್ಮ ಗುರಿ ಸಾಧಿಸಬೇಕಾಗಿದೆಯೆಂದು ಅವರನ್ನು ಹುರಿದುಂಬಿಸಿದ.

ಸುಲ್ತಾನ್ ಮುರಾದನ ಸೈನಿಕರು ಕೋಟೆಯೊಳಗೆ ಹೋಗಲು ಆ ದಿನ ಉದಾಸೀನದಿಂದ ವಿಳಂಬ ಮಾಡಿದರು. ಇದರಿಂದ ಕೋಟೆಯ ಒಳಗಿನವರಿಗೆ ಅವಕಾಶ ದೊರೆತು, ಮರುದಿನ ಹೋದಾಗ ಇವರು ತೋಡಿದ ಸುರಂಗದ ಗುಂಡಿಗೆ ಮಣ್ಣು ಕೆಸರು ಮಣ್ಣು ತುಂಬಿ ಮುಚ್ಚಿದ್ದರು. ಸುಲ್ತಾನ್ ಮುರಾದನಿಗೆ ಒಳಹೋಗಲು ಕಷ್ಟವಾಯಿತು. ಬಹಳ ಹೊತ್ತಿನ ತನಕ ಅಲ್ಲೇ ನಿಲ್ಲಬೇಕಾಯಿತು. ದಿನ ಗಟ್ಟಲೆ ಹೀಗೆಯೇ ನಿಂತಿರ ಬೇಕಾದುದರಿಂದ ಆಹಾರದ ಸರಬರಾಜಿಗೆ ಧಕ್ಕೆಯುಂಟಾಯಿತು. ಇದರಿಂದಾಗಿ ಈ ಸೈನಿಕರು ಆಹಾರವಿಲ್ಲದೆ ಹಸಿವಿನಿಂದ ಇರಬೇಕಾಯಿತು. ಕಟ್ಟಕಡೆಗೆ ಹಸಿವಿನಿಂದ ಕಂಗೆಟ್ಟ ಸೈನಿಕರು ಹಿಂಜರಿದರು. ನಿರುಪಾಯವಾಗಿ ರಾಜಿ ಸಂಧಾನ ಮಾಡಿಕೊಳ್ಳಬೇಕಾಯಿತು. ಸಂಧಾನದಲ್ಲಿ ಅಮಾದ್ ಷಾ ತನ್ನ ರಾಜ್ಯವನ್ನು ತೊರೆದು ಮೊಘಲರಿಗೆ ಬಿಟ್ಟುಕೊಡಬೇಕು, (ಅಮಾದ್ ಷಾ ಹಿಂದೆ ಜಂಘರ್ ಖಾನನ ಮಂತ್ರಿಯಾಗಿದ್ದ) ಬಹಾದ್ದೂರ್ ಷಾ ಮತ್ತು ಚಾಂದ್ ಬೀಬಿ ತಮ್ಮ ರಾಜ್ಯದಲ್ಲಿ ಇರಬಹುದು, ಎಂಬ ಶರತ್ತುಗಳನ್ನು ಹಾಕಲಾಯಿತು.

(ಲೇಖಕ ಶಿರಾಜಿ ಹೇಳುತ್ತಾನೆ) ಹಿಂದೆ ನಾನೊಮ್ಮೆ ಬಾದಶಾಹನ ಸಂದೇಶವನ್ನು ಹಿಡಿದುಕೊಂಡು ಅಹ್ಮದ್ ನಗರಕ್ಕೆ ಹೋಗಿದ್ದೆ. ನಿಜಾಂ ಶಾಹ ಮತ್ತು ಅವನ ಸರದಾರರ ಮಧ್ಯೆ ಬಿರುಕು ಉಂಟಾಗಿತ್ತು. ಇವರ ಮಧ್ಯೆ ರಾಜಿ ಒಪ್ಪಂದ ಮಾಡುವುದಕ್ಕೆ ನನ್ನನ್ನು ಕಳುಹಿಸಲಾಗಿತ್ತು. ನಾನು ಆ ಸಂದರ್ಭದಲ್ಲಿ ತುಂಬ ಭಯಪಟ್ಟುಕೊಂಡಿದ್ದೆ. ಈ ಮಧ್ಯೆ ಯಾರೋ ಒಬ್ಬ ವ್ಯಕ್ತಿ ನನ್ನತ್ತ ಒಂದು ಕಲ್ಲನ್ನು ಎಸೆದಿದ್ದ. ದೇವರ ದಯದಿಂದ ನಾನು ಬಚಾವಾಗಿದ್ದೆ.

ಸುಲ್ತಾನ್ ಮುರಾದ್ ಇಲ್ಲಿನ ಸಂಧಾನವಾದ ನಂತರ ಬಿರಾರ್ ಕಡೆ ಹೋದ. ಬಹದ್ದೂರ್ ಷಾ ಸಂತೋಷದಿಂದ ಸುಲ್ತಾನ್ ಮುರಾದನನ್ನು ಅಭಿನಂದಿಸಿ ಉಡುಗೊರೆಗಳನ್ನು ಕಳುಹಿಸಿದ. ಇದರ ಬಳಿಕ ಪ್ರಯಾಣಿಸುತ್ತ ಪಿಪಲ್‌ಗುಟ್ಟ ತಲಪಿದ.

ಈ ನಾಡಿನ ಬಳಿ ಒಂದು ಪಟ್ಟಣವೂ ಇತ್ತು. ಐದು ವರ್ಷ ಅಲ್ಲಿ ತಂಗಿದ. ಅವನು ಮತ್ತು ಅವನ ಸರದಾರರ ಮಧ್ಯೆ ಇಲ್ಲೂ ವಿರಸವುಂಟಾಗಿ ಜಗಳ ಪ್ರತೀದಿನವೂ ನಡೆಯುತ್ತಿತ್ತು. ಸುಲ್ತಾನ್ ಮುರಾದ್ ನೀಡಿದ ಸಲಹೆ, ಆಜ್ಞೆಗಳನ್ನು ಅವನ ಸರದಾರರು ಒಂದಲ್ಲ ಒಂದು ಸಬೂಬು ಹೇಳಿ ಬದಿಗೆ ತಳ್ಳಿಬಿಡುತ್ತಿದ್ದರು. ಸರದಾರರೊಂದಿಗೆ ರಾಜಿ ಸಂಧಾನ ನಡೆದ ನಂತರ ಬಾದಶಾಹರ ಬಳಿಗೆ ಹೋದರು. ಖಾನೆ ಖಾನಾನ್ 'ನನಗೆ ಬಾದಶಾಹನ ಒಂದು ಜೋಡಿ ಚಪ್ಪಲಿಗಳನ್ನು ನೀಡಬೇಕೆಂದು ಬಯಸುತ್ತೇನೆ' ಎಂದು ಬಿನ್ನಹ ಮಾಡಿದ. ಹೀಗೆ ಪ್ರತೀ ಸಾರಿಯೂ ಬಾದಶಾಹನಿಂದ ಜೋಡಿ ಚಪ್ಪಲಿಯನ್ನು ಬಯಸುವುದು ಅವನ ಅಭ್ಯಾಸವಾಗಿತ್ತು. ಬಾದಶಾಹ ಅವನ ಈ ಬೇಡಿಕೆಯನ್ನು ನೆರವೇರಿಸಿದ. ಇದರಿಂದ ಖಾನೆ ಖಾನಾನ್ ಆನಂದ ಪಟ್ಟುಕೊಂಡ. ದಕ್ಷಿಣ ಭಾರತದ ರಾಜ್ಯಗಳ ಮೇಲೆ ದಂಡೆತ್ತಿ ಹೋಗುವ ವಿಚಾರವು ಮತ್ತೆ ಎದ್ದು ನಿಂತಿತು.

ಷೇಖುಜಿ ಅಥವಾ ಅಕ್ಬರ್ ಬಾದಶಾಹನ ಹಿರಿಯ ಮಗ ಸುಲ್ತಾನ್ ಸಲೀಂ ಹೆಸರಿನ ಭವಿಷ್ಯದ ಬಾದಶಾಹನನ್ನು ಖಾನೆ ಖಾನಾನ್ ಸಂಪರ್ಕಿಸಿದ. ಅವನು ಸಂಪೂರ್ಣ ಗೌರವವನ್ನು ತೋರಿಸುತ್ತ ಅವನ ಬೇಡಿಕೆ, ಸಲಹೆಯನ್ನು ಪರಿಶೀಲಿಸಿ ಬಹಳ ಆಸಕ್ತಿ ತೋರಿಸಿ ಭರವಸೆ ನೀಡಿದ. ಆರು ವರ್ಷದ ನಂತರ ಸುಲ್ತಾನ್ ಮುರಾದ್ ಹೊಟ್ಟೆ ನೋವು ಮತ್ತು ಜುಲಾಬಿನಿಂದ ಉಂಟಾದ ಅನಾರೋಗ್ಯದ ದೆಸೆಯಿಂದ ತೀರಿಕೊಂಡ. ಅವನ ಶವವನ್ನು ಅಕ್ಬರ್ ಬಾದಶಾಹನ ಸಮ್ಮುಖಕ್ಕೆ ತರಲಾಯಿತು. ಅವನ ಗೋರಿಯನ್ನು ಹಳೆಯ ಕಬರಸ್ಥಾನ(ರೌಝು)ದಲ್ಲಿ ತೋಡಿ ದಫನ ಮಾಡಲಾಯಿತು. ಈಗ ಖಾನೆ ಖಾನಾನ್ ಸುಲ್ತಾನ್ ಸಲೀಮನ ಬಳಿ ಹೋಗುವುದು ಒಳಿತೆಂದು ನಿರ್ಧರಿಸಿದ. ಅಕ್ಬರ್ ಬಾದಶಾಹನನ್ನು ಒಪ್ಪಿಸಿ ದಕ್ಷಿಣ ಭಾರತದ ರಾಜ್ಯಗಳ ದಂಡಯಾತ್ರೆಯನ್ನು ತಮ್ಮ ನಿರ್ಧಾರದ ಮೇರೆಗೆ ಹೋಗಲು ಅನುಮತಿ ಕೇಳಿದ. ಅವನ ಒಪ್ಪಿಗೆ ಪಡೆದನಂತರ ದಂಡ ಯಾತ್ರೆ ನಡೆದು, ಒಂದು ದೊಡ್ಡ ಜಯ ಲಭಿಸಿತು.

**ಖಾನೆ ಖಾನಾನ್ ದಕ್ಷಿಣ ಭಾರತದ ಯಾತ್ರೆಯಿಂದ ಹಿಂತಿರುಗಿ, ಸುಹೇಲ್ ಖಾನನೊಂದಿಗೆ ನಡೆದ ಯುದ್ಧದ ವಿವರಗಳು:**

ಈ ಯುದ್ಧವು ಆಮೇರ್ (ಜೈಪುರ) ಬುರ್ಹಾನ್ ಪುರದ ಅಧಿಕಾರಿಯಾಗಿದ್ದ ರಾಜಾ ಅಲಿಖಾನನ ಸಹಾಯದಿಂದ ನಡೆದಿತ್ತು. ಬುರ್ಹಾನ್‌ಪುರಕ್ಕೆ ಖಾನೆ ಖಾನಾನ್ ತಲಪಿದಾಗ ರಾಜಾ ಅಲಿಖಾನನ ಸಹಾಯವನ್ನು ಯಾಚಿಸಿದ್ದ. ಖಾನೆಖಾನಾನ್ ತನ್ನ ಸೈನ್ಯದೊಂದಿಗೆ ಬುರ್ಹಾನ್ ಪುರದಲ್ಲಿ ದೊಂಬಿ, ಗಲಭೆ, ಲೂಟಿ ನಡೆಸಲು ತೊಡಗಿದ್ದ. ರಾಜ ಅಲಿಖಾನ್ ಮತ್ತು ಸುಹೇಲ್ ಖಾನರ ಮಧ್ಯೆ ಸ್ನೇಹ ಏರ್ಪಟ್ಟ

ವಿಚಾರವು ಆಲಂಪನಾರಿಗೆ ತಿಳಿಯಿತು. ಇದರಿಂದ ನಿಜಾಂ ಶಾಹನ ಸೈನ್ಯದ ಸಹಾಯವು ಅಗತ್ಯವೆಂದು ಕಂಡುಕೊಂಡು ಬೇಡಿಕೆಯನ್ನು ಮುಂದಿಟ್ಟಾಗ ಅವನು ತನ್ನ ಸೈನ್ಯವನ್ನು ಕಳುಹಿಸಿಕೊಟ್ಟ. ನಿಜಾಂ ಶಾಹನ ಸೈನ್ಯ ಮತ್ತು ಸುಹೇಲ್ ಖಾನ್ ತಮ್ಮ ಸಂಪೂರ್ಣ ತಯಾರಿಯೊಂದಿಗೆ ಮೊಘಲ್ ಸೈನ್ಯದ ಕಡೆ ತೆರಳಿದರು. ಎರಡೂ ಕಡೆಯವರು ಒಂದೆಡೆ ಸೇರಿದಾಗ ಸುಹೇಲ್ ಖಾನ್ ನಿಜಾಂ ಶಾಹನ ಸೈನ್ಯದ ಮೇಲೆ ಬೆಂಕಿಯ ಉಂಡೆಗಳನ್ನು ಬಿಸಾಡಿದ. ಅದು ಹೋಗಿ ಸೈನಿಕರ ದಂಡಿನ ಮಧ್ಯೆ ಬಂದು ಬಿತ್ತು. ನಿಜಾಂ ಶಾಹ ಕೂಡಲೇ ಒಂದು ಬದಿಗೆ ಸರಿದು ನಿಂತ. ರಾಜಾ ಅಲಿ ಖಾನನನ್ನು ನೋಡಲು ದೂತನನನ್ನು ಕಳುಹಿಸಿದ. ಇನ್ನೊಂದು ಕಡೆ ರಾಜಪೂತ ಸರದಾರ ರಾಜಾ ಜಗನ್ನಾಥನೂ ಬೆಂಕಿ ಉಂಡೆಗಳನ್ನು ಎಸೆಯಲು ತೊಡಗಿದ. ನಾಲ್ಕೂ ನಿಟ್ಟಿನಲ್ಲಿ ಹಾಹಾಕಾರವೆದ್ದಿತು. ಆಮೇರ್ ಪಟ್ಟಣ ಹೊಗೆಯಿಂದ ಆವರಿಸಿತು. ಮೊಘಲರ ಸೈನ್ಯಕ್ಕೆ ಇದರಿಂದ ಹೊಸ ಹುಮ್ಮಸ್ಸು ಉಂಟಾಯಿತು. ಎರಡೂ ಕಡೆಯಿಂದ ತಮ್ಮ ಸಂಪೂರ್ಣ ಶಕ್ತಿಯೊಂದಿಗೆ ಯುದ್ಧ ಶುರುವಾಯಿತು. ಆ ಕಡೆ ಖಾನೆ ಖಾನಾನ್ ಇಪ್ಪತ್ತೈದು ಸೈನಿಕರೊಂದಿಗೆ ಎರಡು ಗುಡ್ಡಗಳ ಮಧ್ಯೆ ಬೆಂಕಿ ಹಾಕಿ ಕೂತಿದ್ದ. ಸುಹೇಲ್ ಖಾನನ ಸೈನ್ಯ ದಾಳಿ ನಡೆಸುತ್ತ ಮುಂದುವರಿಯುತ್ತ ವಿಜಯ ಲಭಿಸಿತೆಂಬ ಖುಶಿಯಲ್ಲಿ ಸಂಭ್ರಮಿಸುತ್ತ ಅಲ್ಲಿನ ಕಾಡಿನಲ್ಲಿ ತಂಗಿದ.

ಮರುದಿನ ಪರಿಸ್ಥಿತಿಯನ್ನು ಪರಿಶೀಲಿಸುವುದಕ್ಕಾಗಿ ಕಾಡಿನಲ್ಲಿ ತಂಗಿದ ಸ್ಥಳದಿಂದ ಹೊರಬಂದು ನೋಡುವಾಗ ಮೊಘಲರ ಹತ್ತು ಸಾವಿರದಷ್ಟು ಸಂಖ್ಯೆಯ ಸೈನಿಕರು ಸತ್ತು ಬಿದ್ದಿದ್ದರು. ಇದರಿಂದ ಸುಹೇಲ್ ಖಾನ್ ಮತ್ತಷ್ಟು ಆನಂದತುಂದಿಲನಾದ. ಖಾನೆ ಖಾನಾನ್ ಬಹಳ ಜನರೊಂದಿಗೆ ನಡೆದ ಸಂಗತಿಗಳನ್ನು ತಿಳಿಯುವುದಕ್ಕಾಗಿ ಹೊರಟಿದ್ದ. ಸುಹೇಲ್ ಖಾನನಿಗೆ ಇದರ ಸುದ್ದಿ ತಲಪಿತು. ಬೇರೊಂದು ಕಡೆಯಿಂದ ಖುದಾವಂದ್ ಖಾನ್ ಆನೆಯ ಮೇಲೆ ಸವಾರಿಮಾಡಿಕೊಂಡು ಸುಹೇಲ್ ಖಾನನ ಕಡೆಗೆ ಪ್ರಯಾಣಿಸಿದ. ಇವರಿಬ್ಬರ ಮಧ್ಯೆ ಯುದ್ಧ ನಡೆಯಿತು. ಸುಹೇಲ್ ಖಾನನ ತೋಳಿಗೆ ಒಂದು ಬಾಣ ರಭಸದಿಂದ ಬಂದು ಇರಿಯಿತು. ದೌಲತ್ ಖಾನ ಆನೆಯ ಮೂಲಕ ಅವನ ಮೇಲೆ ದಾಳಿಯಿಟ್ಟ. ಇವನ ಜೊತೆಗೆ ಖಾನೆ ಖಾನಾನ್ ಕೂಡ ತನ್ನ ಸೈನಿಕರೊಂದಿಗೆ ಸೇರಿಕೊಂಡ. ಈ ಯುದ್ಧದ ವಿಜಯವು ದೌಲತ್ ಖಾನನ ಹೆಸರಿಗೆ ಪ್ರಾಪ್ತಿಯಾಯಿತು. ಈ ಯುದ್ಧದಲ್ಲಿ ರಾಜಾ ಅಲಿ ಖಾನ್ ಸೆರೆ ಹಿಡಿಯಲ್ಪಟ್ಟು ಬಂಧಿಯಾದ. ಹೀಗೆ ರಾಜಾ ಅಲಿ ಖಾನ್ ಮತ್ತು ರಾಜಾ ಜಗನ್ನಾಥರ ಸೈನ್ಯ ಕೂಡ ಈ ಯುದ್ಧದಲ್ಲಿ ಬಹಳಷ್ಟು ನಾಶವಾಯಿತು. ಅಕ್ಬರ್ ಬಾದಶಾಹರ ಸೈನಿಕರು ಈ ಯುದ್ಧದಲ್ಲಿ ಅಸುನೀಗಿದವರ ಪೈಕಿ ಮುಸ್ಲಿಮರು ಹೆಚ್ಚಿನ ಸಂಖ್ಯೆಯಲ್ಲಿದ್ದರು.

ಈ ಕಾರಣದಿಂದ ಅವರ ಅಂತಿಮ ಕ್ರಿಯೆಯನ್ನು ಮುಸ್ಲಿಮ್ ಷರೀಯತ್ ಕ್ರಿಯಾಕರ್ಮದಂತೆ ಮೀಯಿಸಿ ಜನಾಜಾದಲ್ಲಿಟ್ಟು ಸಾಗಿಸಿ ದಫನ ಮಾಡಲು ಆಜ್ಞೆ ನೀಡಲಾಗಿ ಆ ಪ್ರಕಾರ ಅಂತ್ಯಕ್ರಿಯೆ ನಡೆಯಿತು. ಈ ಯುದ್ಧದ ವಿವರಗಳು 'ಫತಹ್ ನಾಮ ಎ ದೌಲತ್ ಖಾನ್' ಎಂಬ ಪುಸ್ತಕದಲ್ಲಿ ವಿವರವಾಗಿ ನೀಡಲಾಗಿದೆ. ಖಾನೆ ಖಾನಾನ್ ನಂತರದಲ್ಲಿ ಅಕ್ಬರ್ ಬಾದಶಾಹನ ಆಸ್ಥಾನದಲ್ಲಿ ಹಾಜರಾದ. ಅವನಿಗೆ ಆಸ್ಥಾನದಲ್ಲಿ ತುಂಬ ಅದ್ದೂರಿಯ ಸನ್ಮಾನ ನಡೆಯಿತು. ಖಿಲ್ಲತ್(ವಿಜಯದ ಪೋಷಾಕು), ಇನಾಮು, ಬೆಲೆಬಾಳುವ ಉಡುಗೊರೆಗಳನ್ನು ನೀಡಲಾಯಿತು. ಎಷ್ಟೊಂದು ಬೆಲೆಬಾಳುವ ಉಡುಗೊರೆಯನ್ನು ಅವರಿಗೆ ನೀಡಿದಾಗ ಯುದ್ಧದಲ್ಲಿ ಭಾಗಿಯಾದ ಉಳಿದ ಸರದಾರರು ತಮ್ಮನ್ನು ಸನ್ಮಾನಿಸದಿದ್ದ ಬಾದಶಾಹನ ನಡವಳಿಕೆಗೆ ಬೇಸರಗೊಂಡರು. ಈ ಅತೃಪ್ತ ಸರದಾರರ ಪೈಕಿ ಕೆಲವರು ತಮ್ಮ ಸ್ಥಾನವನ್ನು ತೊರೆದು ಹೋದರು. ಇವರಲ್ಲಿ ಮಿರ್ಜಾ ನೂರುದ್ದೀನ್ ಮುಹಮ್ಮದ್ ಕೂಡ ಒಬ್ಬನಾಗಿದ್ದ. ಇವನು ಮುಹಮ್ಮದ್ ಖಾಸಿಮ್ ಖಾನ್ ನಿಶಾಪುರಿಯವರ ತಂಗಿಯ ಮಗನಾಗಿದ್ದ. ಆಗ ಈತ ಮುಲ್ತಾನಿನ ಪ್ರಾಂತ್ಯಾಧಿಕಾರಿಯಾಗಿದ್ದು ಜಾಗೀರುದಾರನಾಗಿದ್ದ. ನಂತರ ಜಾಗೀರುದಾರಿಕೆಯನ್ನು ತೊರೆದು ಖಾನೆ ಖಾನಾನನ ಜೊತೆಯಲ್ಲಿರುತ್ತಿದ್ದ. 'ನಾನು ಸಿಪಾಯಿಗಿರಿಯನ್ನು ಹೊಡೆದಾಟಗಳಲ್ಲಿ ಭಾಗವಹಿಸುವುದರಿಂದ ಮುಕ್ತನಾಗಿ ಒಂದು ಮೂಲೆಯಲ್ಲಿ ತಣ್ಣಗಿದ್ದು ನಿಮ್ಮ ಸೇವೆಯನ್ನು ಮಾಡುತ್ತಿರುತ್ತೇನೆ' ಎಂದು ಸೇವೆಯನ್ನು ತೊರೆದಿದ್ದ. ಮುಂದಿನ ಬದುಕನ್ನು ಇದೇ ರೀತಿ ಕಳೆದಿದ್ದ.

ಗಾಯಗೊಂಡ ಸುಹೇಲ್ ಖಾನ್ ಯುದ್ಧದಲ್ಲಿ ಹಿಂದೆ ಬಿದ್ದವನು ತನ್ನ ವೈದ್ಯಕೀಯ ಶುಶ್ರೂಷೆಯಲ್ಲಿ ಮಗ್ನನಾದ. ಈ ಯುದ್ಧದ ನಂತರ ಮತ್ತೆ ಬಾದಶಾಹರ್ ಸೈನ್ಯದಲ್ಲಿ ಸೇರಿಕೊಂಡು ಅವನಿಗೆ ದೊಡ್ಡದೊಡ್ಡ ಪದವಿಗಳು ದೊರೆತವು. ಆಲಂಪನಾರ ಕಡೆಯಿಂದ ಹತ್ತು ಹನ್ನೆರಡು ಸಾವಿರ ಸೈನ್ಯವು ಅವನ ಜೊತೆಗೆ ಇರುತ್ತಿದ್ದವು. ಇನ್ನಿತರ ದೊಡ್ಡ ಸರದಾರರೊಂದಿಗೆ ಸರಹದ್ದಿನ ರಕ್ಷಣೆಗಾಗಿ ಈತ ಕಟಿಬದ್ಧನಾಗಿ ನಿಂತಿರುತ್ತಿದ್ದ. ಸರದಾರರು ತಮ್ಮ ಅವಶ್ಯಕತೆಗಳೇನಾದರೂ ಇದ್ದಲ್ಲಿ ಪತ್ರಗಳನ್ನು ಬರೆದು ಈತನ ಮೂಲಕ ಕಳುಹಿಸುತ್ತಿದ್ದರು. ಇವನ ಮೂಲಕ ಯಾವುದಾದರೂ ಅರ್ಜಿಯು ತಲಪಿದರೆ ಆಲಂಪನಾ ಅದನ್ನು ಸ್ವೀಕರಿಸಿ ಮಂಜೂರು ಮಾಡಲಾಗುತ್ತಿತ್ತು. ಈತನ ಬಗೆಗೆ ಅಲಂಪನಾರ ವಿಶ್ವಾಸ, ಗೌರವ ಬಹಳ ಎತ್ತರಕ್ಕೇರಿತ್ತು. ಪ್ರತಿಯೊಬ್ಬರಿಗೂ ಅಕ್ಬರ್ ಬಾದಶಾಹ ಇವನ ಮೂಲಕ ಕಳುಹಿಸಿದ ಬೇಡಿಕೆಗಳನ್ನು ತಿರಸ್ಕರಿಸಲಾರನೆಂಬುದು ತಿಳಿದಿತ್ತು. ಅಹ್ಮದ್ ನಗರದ ಕೋಟೆಯಲ್ಲಿದ್ದ ಚಾಂದ್ ಬೀಬಿ ಮತ್ತು ಬಹದ್ದೂರ್ ಷಾರು ಇವನ ಮೂಲಕ ಬಿನ್ನಹವನ್ನು ಅಕ್ಬರ್ ಬಾದಶನಿಗೆ ತಲಪಿಸಲು ಬಯಸಿದ್ದರು. ಸುಹೇಲ್ ಖಾನ್ ಅಹ್ಮದ್ ನಗರದ ಕೋಟೆಯಲ್ಲಿ

ಎರಡು ಮೂರು ತಿಂಗಳ ಕಾಲ ತಂಗಿದ್ದು ಸರದಾರರ ಸಲಹೆಗಳನ್ನು ಕೇಳಿಕೊಂಡು ಅವರ ಅಗತ್ಯಗಳನ್ನು ಪೂರೈಸುವುದಕ್ಕೆ ನೆರವಾದ. ಮಿರ್ಜಾ ತಖೀಯನ್ನು ಬಾದಶಾಹನ ಆಸ್ಥಾನದಲ್ಲಿ ಕೆಲಸಕ್ಕೆ ಸೇರಿಸಲು ನೆರವಾಗಿದ್ದ.

ನಿಜಾಂ ಶಾಹನ ತಲೆಮಾರಿನ ಮಿರ್ಜಾ ತಖೀಗೆ ಅಕ್ಬರ್ ಬಾದಶಾಹನ ಆಸ್ಥಾನದಲ್ಲಿ ಸೈನಿಕನಾಗಿ ಸೇರಿಕೊಂಡು ಮುಂದೆ ಒಳ್ಳೆಯ ನೌಕರಿ ಸಿಕ್ಕಿ ಸ.ರದಾರ, ಅಧಿಕಾರಿಯಾಗಿಯೂ ಸೇವೆ ಸಲ್ಲಿಸಿದ. ಬಾದಶಾಹನ ಆಜ್ಞೆಯಂತೆ ಸುಹೇಲ್ ಖಾನ್ ಸರಹದ್ದಿನ ಬಳಿ ಷಾದುರ್ಗ ಎಂಬ ಕೋಟೆಯ ಬಳಿ ತೆರಳಿ ತನ್ನ ಸೈನ್ಯದೊಂದಿಗೆ ತಂಗಿದ. ಬಹದ್ದೂರ್ ಶಾಹನ ಸರದಾರರ ಎದರುನಿಂತು ಕೆಲವು ಸೈನಿಕರನ್ನು ಬಂಧಿಸಿದ. ಬಹದ್ದೂರ್ ಶಾಹ ತುಂಬ ಹೆದರಿ ಆತಂಕಗೊಂಡು ಬಾದಶಾಹನಿಗೆ ಪತ್ರ ಮೂಲಕ ತನ್ನ ಅಹವಾಲನ್ನು ಮುಂದಿಟ್ಟ. 'ನಾನು ಇಲ್ಲೇ ಇದ್ದು ಕೋಟೆಯ ರಕ್ಷಣೆಯನ್ನು ಮಾಡುತ್ತಿರುತ್ತೇನೆ. ಇಲ್ಲವಾದಲ್ಲಿ ಈ ರಾಜ್ಯದಲ್ಲಿ ಅರಾಜಕತೆ ಉಂಟಾಗಬಹುದು' ಎಂದು ತನ್ನ ಪತ್ರದಲ್ಲಿ ನಮೂದಿಸಿದ್ದ.

**ಅಕ್ಬರ್ ಬಾದಶಾಹನ ಕೊನೆಯ ಮಗ ದಾನಿಯಲ್(ಇವನನ್ನು ಮನೆಯವರು ದಾನ್‌ಜಿ ಎಂಬ ಹೆಸರಲ್ಲಿ ಕರೆಯುವರು)ನ ಬಗ್ಗೆ ವಿವರಗಳು:**

ಖಾನೆ ಖಾನಾನ್, ಸುಹೇಲ್ ಖಾನನೊಂದಿಗೆ ಯುದ್ಧ ಮಾಡಿದ ಬಳಿಕ ತನ್ನ ಮಕ್ಕಳನ್ನು ದಕ್ಷಿಣ ಭಾರತದಲ್ಲಿ ಬಿಟ್ಟು ಆಗ್ರಾದ ಕಡೆ ಹೋದ. ಅಲ್ಲಿಗೆ ಹೋದವನು ಅಲ್ಲಿ ಪ್ರದೇಶಗಳ ಬಗ್ಗೆ ಮತ್ತು ಅಲ್ಲಿನ ಪರಿಸ್ಥಿತಿಯ ಬಗ್ಗೆ ವಿವರವಾದ ವರದಿಯನ್ನು ಬಾದಶಾಹನಿಗೆ ನೀಡಿದ. ಬಾದಶಾಹ ತನ್ನ ಕಿರಿಯ ಮಗ ಆಗ ಬಂಗಾಳದಲ್ಲಿದ್ದ ದಾನಿಯಲ್‌ನನ್ನು ಆಗ್ರಾಕ್ಕೆ ಕರೆಸಿದ. ಖಾನೆ ಖಾನಾನನ ಮಗಳೊಂದಿಗೆ ಅವನ ನಿಕಾಹ ಮಾಡುವುದಕ್ಕೆ ತಯಾರಿ ನಡೆಸಿದ. ಖಾನೆ ಖಾನಾನ್ ತನ್ನ ಮಗಳು ಹಬೀಬಾಳನ್ನು ಅಕ್ಬರ್ ಬಾದಶಾಹನ ಮಗ ದಾನಿಯಲ್‌ನಿಗೆ ವಿವಾಹ ಮಾಡಿಕೊಟ್ಟ. ಈ ಎಲ್ಲ ಸಂಭ್ರಮ ಮುಗಿದ ಬಳಿಕ ಅವನು ಅಹ್ಮದ್ ನಗರಕ್ಕೆ ಚಾಂದ್ ಬೀಬಿಯ ಬಳಿಗೆ ಹೋದ. ಆಗ ಚಾಂದ್ ಬೀಬಿಯ ಬಳಿ ಬಹಳಷ್ಟು ಮಂದಿ ನೌಕರರು, ಸೇವಕರು ಇದ್ದರು. ಅವರಲ್ಲಿ ಕೆಲವರು ಹಳೆಯವರು, ಕೆಲವರು ಖರೀದಿ ಮಾಡಲಾದ ಗುಲಾಮರಿದ್ದರು. ಇವರೆಲ್ಲರನ್ನು ಕೆಲಸಕ್ಕೆ ನೇಮಿಸಿ ಅಹ್ಮದ್ ನಗರದ ಕೋಟೆಯ ಆಡಳಿತದ ಜವಾಬ್ದಾರಿಯನ್ನು ಜತ್ತಾ ಖಾನನಿಗೆ ವಹಿಸಿಕೊಟ್ಟಿದ್ದಳು. ಈ ಜತ್ತಾ ಖಾನ್, ಮುರ್ತಜಾ ನಿಜಾಮನ ಆಳ್ವಿಕೆಯಲ್ಲಿ ದೊಡ್ಡ ಅಧಿಕಾರಿಯಾಗಿ ಕೆಲಸ ನಿರ್ವಹಿಸುತ್ತಿದ್ದ. ಅಹ್ಮದ್ ನಗರದ ಆಡಳಿತ ಸ್ವತಂತ್ರಗೊಂಡು ಆಳ್ವಿಕೆ ಗಟ್ಟಿಯಾದಾಗ ಚಾಂದ್ ಬೀಬಿಯನ್ನು ಅಲ್ಲಿಂದ ಹೊರಗೆ ಕಳುಹಿಸಿದ ಮತ್ತು ಅವನು ತರಬೇತಿಗಾಗಿ ಬಹದ್ದೂರ್ ಶಾಹನ ಬಳಿಗೆ ಹೋದ. ಚಾಂದ್ ಬೀಬಿ ಸ್ವತಃ ಕೋಟೆಯನ್ನು ಮೊಘಲರ

ಕೈಗೆ ನೀಡಲು ಬಯಸುತ್ತಿದ್ದಾಳೆ ಎಂಬ ಸುದ್ದಿಯನ್ನು ಪ್ರಚಾರ ಪಡಿಸಿದ. ಅದಕ್ಕಾಗಿ ಅವಳನ್ನು ಕೋಟೆಯಿಂದ ಹೊರಹಾಕಿದೆ ಎಂದು ಹೇಳತೊಡಗಿದ.

ಈ ಮಾತು ಪ್ರಚಾರದಲ್ಲಿದ್ದಾಗ ಮೊಘಲರು ಅಹ್ಮದ್ ನಗರಕ್ಕೆ ಆಗಮಿಸಿದ್ದರು. ಮೊಘಲರು ಯಾವುದೇ ಪ್ರತಿಭಟನೆ ಇಲ್ಲದೆ ಅಹ್ಮದ್ ನಗರವನ್ನು ಸುತ್ತುವರಿದು ವಶಪಡಿಸಿಕೊಂಡರು. ಆಗ ಅಕ್ಬರ್ ಬಾದಶಾಹ ತನ್ನ ಸೈನ್ಯ ಮತ್ತು ಬಹಳ ಬೆಲೆಬಾಳುವ ಖಜಾನೆಯೊಂದಿಗೆ ಬುರ್ಹಾನ್‌ಪುರದಲ್ಲಿದ್ದ. ಆಮೇರದ ಕೋಟೆಯನ್ನು ಸುತ್ತುವರಿದಿದ್ದ. ಕೆಲವು ಸರದಾರರನ್ನು ಮಗನ ಸಹಾಯಕ್ಕೆ ಅವನ ಬಳಿಗೆ ಕಳುಹಿಸಿದ. ಅಹ್ಮದ್ ನಗರದ ಕೋಟೆಯನ್ನು ವಶಪಡಿಸಿಕೊಳ್ಳಲು ಒತ್ತಾಯ ಮಾಡಿದ್ದ. ಆಗ ಸುಲ್ತಾನ್ ಸಲೀಮ್ ಆಗ್ರಾದಲ್ಲಿದ್ದ. ಸುಲ್ತಾನ ಆಗ್ರಾದ ಖಜಾನೆಯನ್ನು ತನ್ನ ಬಳಿಯಿರಿಸಿಕೊಳ್ಳಲು ಬಯಸಿದ್ದ. ಅವನ ತನ್ನ ದಿವಾನನಾಗಿದ್ದ ಕಲಶ್ ಖಾನನನ್ನು ಆಗ್ರಾಕ್ಕೆ ಕಳುಹಿಸಿ ಖಾಜಾನೆಯ ರಕ್ಷಣೆಗಾಗಿ ನೇಮಿಸಿದ. ಮೀರ್ ಶರೀಫ್ ಸರ್ಮದನನ್ನು ತನ್ನ ಪರವಾಗಿ ದೂತನನ್ನಾಗಿ ಮಾಡಿ ಅಲಂಪನಾರ ಬಳಿಗೆ ಕಳುಹಿಸಿದ. ಇದರಿಂದಾಗಿ ಅವನು ಈ ವಿಷಯವನ್ನು ಬಾದಶಾಹನಿಗೆ ಮನದಟ್ಟು ಮಾಡುವ ಭರವಸೆ ಅವನಿಗಿತ್ತು. ಈ ರೀತಿಯಲ್ಲಿ ಒಂದಷ್ಟು ಸಮಯ ಕಳೆಯಿತು. ಸಾಮ್ರಾಜ್ಯದ ರಕ್ಷಣೆಯ ಹೊಣೆ ಹೊತ್ತಿದ್ದ ಶಾಹ ಜಮಾಲುದ್ದೀನ್ ಹುಸೈನನನ್ನುವನ ಬಳಿಗೆ ಕಳುಹಿಸಿದ. ಶಾಹ ಜಮಾಲುದ್ದೀನನ ಹುಟ್ಟೂರು ಅಹ್ಮದ್ ನಗರವಾಗಿತ್ತು. ಅಲ್ಲೇ ಈತ ಬದುಕುತ್ತಿದ್ದ. ನಿಜಾಂ ಶಾಹನ ಆಸ್ಥಾನದಲ್ಲಿ ಮಂತ್ರಿಯಾಗಿದ್ದ. ಇವನು ಚಾಂದ್ ಬೀಬಿಯ ಸಹೋದರಿ ಮತ್ತು ನಿಜಾಂ ಶಾಹನ ಮಗಳನ್ನು ಶಾಹ ಜಮಾಲುದ್ದೀನ್ ಹುಸೈನನಿಗೆ ಮದುವೆ ಮಾಡಿಕೊಟ್ಟಿದ್ದ. ಶಾಹ ಜಮಾಲುದ್ದೀನನನ್ನು ಅಕ್ಬರ್ ಬಾದಶಾಹನ ಬಳಿಗೆ ಕಳುಹಿಸಿದ್ದರು. ಅಕ್ಬರ್ ಬಾದಶಾಹನು ಇವನನ್ನು ಸ್ವಾಗತಿಸಿದ. ಇವನು ನಗರದೊಳಗೆ ಆಗಮಿಸಿದ. ಇವನನ್ನು ಕಿಶ್ವರ್ ಖಾನನ ಬಳಿ ತಂಗಲು ಅವಕಾಶಮಾಡಿಕೊಟ್ಟ. ಅವನ ಜೊತೆಗೆ ಬಂದ ಕೆಲವರನ್ನು ಮಕ್ಕಾಕ್ಕೆ ಕೆಲವರನ್ನು ಖೊರಸಾನಿಗೆ ಅವರವರ ಇಚ್ಛೆಯಂತೆ ಕಳುಹಿಸಿದ. ಖಜಾನೆಯ ಮತ್ತು ಶರಾಬಿನ ಅಡ್ಡೆಯಲ್ಲಿದ್ದ ಸಾಮಾನುಗಳನ್ನು ಅದರಲ್ಲಿ ಬೆಲೆಬಾಳುವ ಸಂಪತ್ತು, ಬಟ್ಟೆ, ಮಕ್ಮಲ್, ಚೀನಾ, ಇಜಿಪ್ಟಿನ ಸಿಲ್ಕು ಬಟ್ಟೆಗಳು ಇದ್ದವು.

ಅರಮನೆಯ ಗ್ರಂಥಾಲಯದಲ್ಲಿ ಚಿನ್ನದ ಕುಸುರಿಕೆಲಸದ ೨೦೦೦ ಪುಸ್ತಕಗಳು ಮತ್ತು ದರ್ಬಾರಿನ ತೈಲ ಚಿತ್ರಗಳು ೨೨ ಜೊತೆ ಚಪ್ಪಲಿಗಳನ್ನು ತುಂಬಿಸಲಾದ ಪೆಟ್ಟಿಗೆಗಳು, ಜಮಖಾನಗಳು, ಅಡುಗೆ ಮನೆಯ ಸಾಮಾನುಗಳು, ಹುಕ್ಕಾ, ಸುರಾಯಿಗಳು, ಸಂಗೀತ ವಾದ್ಯಗಳು, ಬೆಲೆಬಾಳುವ ಮುತ್ತಿನ ಹರಳುಗಳು, ನಾಜಿ ತುರ್ಕಿ ಇರಾಕಿ ತಳಿಯ ಕುದುರೆಗಳು ಅವುಗಳ ಮೇಲೆ ಹಾಕುವ ಚಿನ್ನ ಬೆಳ್ಳಿಯ

ಜೀನುಗಳು, ಕಸೂರಿ ಕೆಲಸದ ಅಂಬಾರಿ, ಕೊಡೆಗಳು, ಬಹಳಷ್ಟು ಸಂಖ್ಯೆಯ ಆನೆಗಳು, ಒಂಟೆಗಳು, ಇವೆಲ್ಲವನ್ನೂ ಜಮಾ ಮಾಡಿದರು. ಈ ಮಧ್ಯೆ ಅಹ್ಮದ್ ನಗರದ ಕೋಟೆಗೆ ಬೆಂಕಿ ಹಚ್ಚಲಾಯಿತು ಕೋಟೆಯನ್ನು ವಶಪಡಿಸಿಕೊಂಡರು ಎಂಬ ಸುದ್ದಿ ಬಂತು. ಚಾಂದ್ ಬೀಬಿಯನ್ನು ಕೊಂದ ಜತ್ತಾಖಾನ್‌ನನ್ನು ಕೂಡ ಕೊಲ್ಲಲಾಯಿತು. ಬಹಳಷ್ಟು ಜನ ಮಹಿಳೆಯರು, ಗಂಡಸರನ್ನು ಬಂಧಿಸಲಾಯಿತು. ಬಹದ್ದೂರ್ ಶಾಹನನ್ನು ದಾನಿಯಲ್ ಯಾನೆ ದಾನ್‌ಜಿ ಬಳಿಗೆ ಕರೆತಂದರು. ಅವನನ್ನು ಗೌರವದಿಂದ ಕಾಣಲಾಯಿತು. ಒಂದು ಮಹಲಿನಲ್ಲಿ ಅವನನ್ನು ಗೃಹ ಬಂಧನದಲ್ಲಿ ಇರಿಸಲಾಯಿತು. ಕೋಟೆಯ ಜಖಂಗೊಂಡ ಭಾಗಗಳನ್ನು ದುರಸ್ತಿಮಾಡಲಾಯಿತು. ಆಸ್ಥಾನದ ಉಸ್ತುವಾರಿಯನನ್ನು ನೋಡಿಕೊಳ್ಳುವುದಕ್ಕೆ ಆಮಿಲರನ್ನು ನೇಮಿಸಲಾಯಿತು.

ಉರೂಸ್ ಮಲಿಕ್‌ನನ್ನು ಕರೆಸಿ ನಗರವನ್ನು ಮರುನಿರ್ಮಾಣ ಮಾಡುವುದಕ್ಕೆ ದಾನ್‌ಜಿ ಆದೇಶ ನೀಡಿದ. ದಾನ್‌ಜಿ ಉರುಫ್ ದಾನಿಯಲ್ ಬಹಳ ಶೂರನಾಗಿ ಬಲಿಷ್ಠನಾದ ಬಾದಶಾಹನೆಂದು ಪರಿಗಣಿಸಲ್ಪಟ್ಟಿದ್ದ. ಒಮ್ಮೆ ರಣರಂಗದಲ್ಲಿ ಕುದುರೆಯಿಂದ ಬೀಳುವುದರಲ್ಲಿದ್ದ, ತುಂಬ ಚಾಕಚಕ್ಯತೆಯಿಂದ ಹತ್ತಿರದಲ್ಲಿ ಓಡುತ್ತಿದ್ದ ಇನ್ನೊಂದು ಕುದುರೆಯ ಮೇಲೆ ಹಾರಿಕೂತ. ಜೊತೆಗೆ ತನ್ನ ಕುದುರೆಯನ್ನು ಕೂಡ ಎಳೆದು ಹಿಡಿದುಕೊಂಡಿದ್ದ. ಕತ್ತಿ ವರಸೆಯಲ್ಲಿ ಕೂಡ ತುಂಬ ಪರಿಣಿತನಾಗಿದ್ದ.

**ಆಮೇರ್(ಜೈಪುರ) ಕೋಟೆಯನ್ನು ಜಯಿಸುವುದು, ಬುರ್ಹಾನ್‌ಪುರವನ್ನು ವಶಪಡಿಸಿಕೊಂಡದ್ದು ಮತ್ತು ಅಕ್ಬರ್ ಬಾದಶಾಹ ಆಗ್ರಾದಿಂದ ಬರುವ ವಿವರಗಳು:**

ಹಿಂದೆ ಅಕ್ಬರ್ ಬಾದಶಾಹ ಬುರ್ಹಾನ್‌ಪುರಕ್ಕೆ ಬಂದಾಗ ಆಮೇರ್ ಕೋಟೆಯನ್ನು ವಶಪಡಿಸಿಕೊಳ್ಳಲು ಸೈನ್ಯದೊಂದಿಗೆ ಮುತ್ತಿಗೆ ಹಾಕಿದ್ದ. ಷೇಕೂಜಿ(ರಾಜಕುಮಾರ ಸಲೀಂ) ಆಗ ಆಗ್ರಾದಲ್ಲಿದ್ದ. ಅವನು ರಾಜ್ಯವನ್ನು ಆಳುತ್ತಿದ್ದ. ಅವನ ಸಾಮ್ರಾಜ್ಯದ ಬಳಿ ಇದ್ದ ನೆರೆಹೊರೆಯ ಪ್ರಾಂತ್ಯಗಳಲ್ಲಿ ಚಿಕ್ಕಚಿಕ್ಕ ರಾಜರು ಆಳುತ್ತಿದ್ದದ್ದನ್ನು ಆಕ್ರಮಿಸಿ ವಶಕ್ಕೆ ಪಡೆದುಕೊಂಡಿದ್ದ. ಹೆಚ್ಚುಕಮ್ಮಿ ಏಳು ಸಾವಿರ ಸಂಖ್ಯೆಯ ಸೈನಿಕರ ದಂಡನ್ನು ತಯಾರು ಮಾಡಿಕೊಂಡಿದ್ದ. ತನ್ನ ತಂದೆಯ ಸಂಪೂರ್ಣ ಸಾಮ್ರಾಜ್ಯವನ್ನು ತನ್ನ ವಶಮಾಡಿಕೊಂಡು ಪರಿಣಾಮಕಾರಿಯಾಗಿ ಆಳ್ವಿಕೆಯನ್ನು ನಡೆಸುತ್ತಿದ್ದ. ಈ ಬಗ್ಗೆ ಒಂದು ಹುಕುಮ್ ನಾಮಾ ಆಜ್ಞೆಯನ್ನು ಲಿಖಿತ ಮೂಲಕ ತಯಾರಿಸಿ ಎಲ್ಲೆಡೆಗೂ ಕಳುಹಿಸಿದ್ದ. ಆದರೆ ಅವನ ತಂದೆಯ ಬಗ್ಗೆ 'ಕೆಲವು ಪಿತೂರಿ ಮಾಡುವವರ, ಕಿವಿಯೂದುವವರ ಮಾತುಗಳನ್ನು ಕೇಳಿ, ಹೊಸ ಮಸೀದಿಗಳನ್ನು ಕಟ್ಟುವುದನ್ನು ನನ್ನ ಅಪ್ಪ ಅಕ್ಬರ್ ಬಾದಶಾಹ ತಡೆಹಿಡಿದಿದ್ದ. ಖತೀಬ್, ಮುಅಝ್ಝಿನ್, ಇಮಾಮ್ ಮುಂತಾದ ಕೆಲವು ಧಾರ್ಮಿಕ ಪಂಡಿತರ ಪ್ರಾರ್ಥನೆ, ನಮಾಜುಗಳನ್ನು ನಿಲ್ಲಿಸಿ

ಅವರಿಗೆ ದೊರಕುವ ಮಾಸಿಕ ಸಂಬಳವನ್ನು ತಡೆಹಿಡಿದಿದ್ದ. ಬಹಳಷ್ಟು ಮಸೀದಿಗಳನ್ನು ಸಾಮಾನು ಸರಂಜಾಮುಗಳನ್ನು ಪೇರಿಸಿಡುವ ಗೋದಾಮುಗಳನ್ನಾಗಿ ಮಾಡಿದ್ದ, ಹಲವು ಮಸೀದಿಗಳನ್ನು ಕುದುರೆ ಲಾಯಗಳನ್ನಾಗಿ ಪರಿವರ್ತಿಸಿದ್ದ. ಇದು ನನ್ನ ಅಪ್ಪನಂತಹ ಕೀರ್ತಿವೆತ್ತ ಬಾದಶಾಹನಿ ಹೇಳಿಸಿದ್ದಲ್ಲ' ಎಂದು ಹೇಳುತ್ತಿದ್ದ.

ಈ ಕಾರಣಕ್ಕಾಗಿ ಬಾದಶಾಹ ಸಲೀಂ(ಜಹಾಂಗೀರ್) ತನ್ನ ತಂದೆ ಮಾಡಿದ್ದ ತಪ್ಪು ಕೆಲಸಗಳನ್ನು ಸರಿಪಡಿಸಲಿಕ್ಕಾಗಿ ಮುಸ್ಲಿಂ ಧರ್ಮಪಂಡಿತರ ಸಂಬಳವನ್ನು ಮತ್ತೆ ಜಾರಿಗೊಳಿಸಿದ. ಜನರು ಮಸೀದಿಯಲ್ಲಿ ಆರಾಧನೆ, ನಮಾಜುಗಳನ್ನು ಮಾಡಲು ಮತ್ತೆ ಹಿಂದಿನಂತೆ ಅವಕಾಶಮಾಡಿಕೊಟ್ಟ. ಈ ನಿಟ್ಟಿನಲ್ಲಿ ಪಿತೂರಿ ಮಾಡಿ ಸಾಮಾಜಿಕ ಸ್ವಾಸ್ಥ್ಯವನ್ನು ಕೆಡಿಸುವವರನ್ನು ಹಿಡಿದು ಶಿಕ್ಷೆಗೆ ಗುರಿಪಡಿಸಿದ. ಈ ಮಧ್ಯೆ ಅಕ್ಬರ್ ಬಾದಶಾಹನ ಕಡೆಯಿಂದ ಆಜ್ಞೆಯೊಂದು ಹೊರಟಿತು. ಸುಲ್ತಾನ್ ಸಲೀಮನು ನನ್ನ ಸೌಮ್ಯವಾದ ವರ್ತನೆಯ ದೆಸೆಯಿಂದ ತಪ್ಪು ಲಾಭಪಡೆದುಕೊಂಡಿದ್ದಾನೆ ಎಂದು ಅದರಲ್ಲಿ ಹೇಳಿದ್ದ. ಈ ಮಧ್ಯೆ ಅಕ್ಬರ್ ಬಾದಶಾಹ ಆಮೇರದ ಕೋಟೆಯನ್ನು ವಶಪಡಿಸಲು ತನ್ನ ಸಂಪೂರ್ಣ ಗಮನವನ್ನು ಹರಿಸಿದ್ದ. ಆದರೆ ಇದಕ್ಕೆ ಸಮಯವು ಹೆಚ್ಚುತ್ತಾ ಬಹಳ ಉದ್ದವಾಗುತ್ತ ಹೋಯಿತು. ಸಂಪೂರ್ಣವಾಗಿ ಮುತ್ತಿಗೆ ಹಾಕಿದ್ದರಿಂದ ಒಳಹೊರ ಹೋಗಲು ಅವಕಾಶವಿಲ್ಲದೆ ಕೋಟೆಯ ಒಳಗೆ ಕಷ್ಮಲಗಳು ಸೇರಿ, ಸ್ವಚ್ಛತೆ, ಸಫಾಯಿಗೆ ಅವಕಾಶವಾಗದೆ ಕೆಟ್ಟವಾಸನೆ ಹಬ್ಬಲು ಶುರುವಾಯಿತು. ಕೋಟೆಯ ಒಳಗಿದ್ದ ಜನರು ತುಂಬ ಚಿಂತಿತರಾದರು. ಆ ಸಮಯದಲ್ಲಿ ಆ ಕೋಟೆಯ ಉಸ್ತುವಾರಿ ನೋಡುತ್ತಿದ್ದ ಹಾಕಿಮ್ ಅಥವಾ ಮುಖ್ಯ ಕಾವಲುಗಾರನಾಗಿ ರಾಜಾ ಅಲಿ ಖಾನ್‌ನ ಮಗ ಖಿಜರ್ ಶಾಹನಾಗಿದ್ದ. ಅವನು ಆಗ ಅಕ್ಬರ್ ಬಾದಶಾಹನ ಸೈನ್ಯದ ಒಂಭತ್ತು ತಿಂಗಳ ಕಾಲ ನಡೆಯುತ್ತಿರುವ ದೀರ್ಘ ಆಕ್ರಮಣವನ್ನು ತಡೆಯಲು ಅಸಮರ್ಥನಾಗಿದ್ದ. ಕೊನೆಗೆ ಅಸಹಾಯಕನಾಗಿ ಶರಣಾಗತನಾಗಿ, ಕೋಟೆಯ ಮಹಾದ್ವಾರದ ಕೀಲಿಕೈಯನ್ನು ಅಕ್ಬರ್ ಬಾದಶಾಹನಿಗೆ ನೀಡಿದ. ನಂತರ ಅಕ್ಬರ್ ಬಾದಶಾಹ ತನ್ನ ಎಂದಿನ ಘನತೆ, ಗೌರವದೊಂದಿಗೆ ಕೋಟೆಯ ಒಳಗೆ ಹೋಗಿ ಅದರ ಪರಿಸ್ಥಿತಿಯನ್ನು ಅವಲೋಕನ ಮಾಡಿದ. ಮುನ್ನೂರು ಆನೆಗಳ ಮೇಲೆ ಶಸ್ತ್ರಾಸ್ತ್ರಗಳು, ಯುದ್ಧ ಸಾಮಾಗ್ರಿಗಳು, ವಜ್ರ ವೈಢೂರ್ಯ ಸಂಪತ್ತಿನ ಸೂರೆಮಾಡಿದ ಖಜಾನೆಯನ್ನು ಹೊರಿಸಿ ಕೋಟೆಯಿಂದ ಸಾಗಿಸಿದ. ಖಿಜರ್ ಶಾಹನಿಗೆ ಇದೆಲ್ಲ ನೋಡಿ ತಾನು ಈ ಕೋಟೆಯನ್ನು ರಕ್ಷಿಸಲಾರದಾದೆ, ಮುಫತ್ತಾಗಿ ಕೋಟೆಯನ್ನು ಇವರ ಕೈಗೆ ಒಪ್ಪಿಸಿಬಿಟ್ಟೆನೆಂದು ಮನಸ್ಸಿನಲ್ಲಿ ತುಂಬ ನೊಂದುಕೊಂಡ. ಸಂಪೂರ್ಣ ರಾಜ್ಯವನ್ನು ಜಯಿಸಿದ ನಂತರ ಅಕ್ಬರ್ ಬಾದಶಾಹ ತನ್ನ ಮಗ ದಾನಿಯಲ್‌ನನ್ನು ಕರೆದು ಈ ಕೋಟೆಯನ್ನು ಅವನಿಗೆ ಒಪ್ಪಿಸಿ ನೋಡಿಕೊಳ್ಳುವಂತೆ ಆದೇಶಿಸಿದ.

'ಇದು ನಿನಗೆ ಅರ್ಧ ದಕ್ಷಿಣ ಭಾರತಕ್ಕೆ ಸಮನಾದದ್ದು ನಿನ್ನ ಅಲಂಪನಾನ ಕಡೆಯಿಂದ ನಿನಗೆ ನೀಡಲಾದ ಕೊಡುಗೆಯಾಗಿದೆ. ಈ ಖಜಾನೆ ಮತ್ತು ಸಂಪತ್ತು ಮಗನಿಗೆ ತಂದೆಯ ಇನಾಮು' ಎಂದು ಹೇಳಿದ.

'ಇವನ್ನು ಜತನದಿಂದ ನೋಡಿಕೊಂಡು ಕಾಪಾಡಬೇಕು. ಇದರಿಂದ ಮುಂದಿನ ಭವಿಷ್ಯದಲ್ಲಿ ಅಗತ್ಯ ಬೀಳಬಹುದು' ಎಂದು ಬುದ್ಧಿವಾದದ ಮಾತುಗಳನ್ನು ಹೇಳಿ ಅಕ್ಬರ್ ಬಾದಶಾಹ ತನ್ನ ಮಗನನ್ನು ಬೀಳ್ಕೊಂಡು ಆಗ್ರಾದ ಕಡೆ ಪ್ರಯಾಣ ಬೆಳೆಸಿದ. ಖಾನೆ ಖಾನಾನ್ ಮತ್ತು ಇನ್ನಿತರ ಪ್ರಮುಖ ಸರದಾರರು ದಾನಿಯಲನ ಜೊತೆಗೆ ಉಳಿದರು. ಈ ಕಾಲದಲ್ಲಿ (ಎರಡನೇ ಇಬ್ರಾಹಿಂ ಆದಿಲ್ ಶಾಹನ) ನೌರಸ್ ಉತ್ಸವವು ವಿಜೃಂಭಣೆಯಿಂದ ನಡೆಯುತ್ತಿತ್ತು. ಅಕ್ಬರ್ ಬಾದಶಾಹ ದಕ್ಷಿಣಕ್ಕೆ ಆಗಮಿಸಿದ ಕಾಲವೂ ಆಗಿತ್ತು. ಇದು ಹಿಜರಿ ವರ್ಷ ಸನ್ ೧೦೦೯ನೇ ಕಾಲವಾಗಿತ್ತು.

**ಆಲಂಪನಾರ ಮಗಳನ್ನು ಆಮೇರ್ ಮತ್ತು ಬುರ್ಹಾನ್‌ಪುರಕ್ಕೆ ದಾನಿಯಲ್‌ನ ಜೊತೆಯಲ್ಲಿ ಕಳುಹಿಸಿದ ವಿವರಗಳು:**

ದಕ್ಷಿಣದ ಪರಂಪರೆಯಂತೆ ಸಭೆಯಲ್ಲಿ ಭಾಗವಹಿಸಲು ತಮ್ಮ ಪತ್ನಿಯರನ್ನು ಕರೆತರುತ್ತಿರಲಿಲ್ಲ. ಆದರೆ ಅಗತ್ಯಬಿದ್ದಲ್ಲಿ ಪಲ್ಲಕ್ಕಿಯಲ್ಲಿ ಕೂರಿಸಿ ಕರೆತರಲಾಗುತ್ತಿತ್ತು. ಪಲ್ಲಕ್ಕಿ ಎಂಬ ಶಬ್ಧ ಪರ್ದಾಧಾರಿ ಮಹಿಳೆಯರಿಗೆ ಸಂಬೋಧಿಸಲಾಗುತ್ತಿತ್ತು. ಆಲಂಪನಾ ಪ್ರಯಾಣದಲ್ಲಿ ಹೋಗುವಾಗ ಅವನ ಜೊತೆಯಲ್ಲಿ ಸಾವಿರಾರು ಸವಾರರು, ಅಧಿಕಾರಿಗಳು, ಪಲ್ಲಕ್ಕಿಗಳೂ ಇರುತ್ತಿದ್ದವು. ಒಮ್ಮೆ ಇಂತಹ ಪ್ರಯಾಣದಲ್ಲಿ ತಮ್ಮ ಸಾಮ್ರಾಜ್ಯದ ಸರಹದ್ದಿನ ಪ್ರದೇಶದಲ್ಲಿ ತಂಗಿದ್ದರು. ದಾನಿಯಲ್ ಮತ್ತು ಖಾನೆ ಖಾನಾನರ ಬಳಿಗೆ ಹಸ್ತಿನಾಪುರದಿಂದ ಅಹ್ಮದ್ ನಗರಕ್ಕೆ ಸ್ವಾಗತಕ್ಕಾಗಿ ಬಂದರು. ಅಹ್ಮದ್ ನಗರದಲ್ಲಿ ಷರೀಯತ್ ಕಾನೂನಿನಂತೆ ನಿಕಾಹ ನಡೆಯಿತು. ಇದರ ನಂತರ ದಂಪತಿಗಳು ತಮ್ಮ ಇಚ್ಛೆಯಂತೆ ಹೋಗಲು ಸ್ವತಂತ್ರರು. ದಾನಿಯಲ್(ದಾನ್‌ಜಿ) ಇದರಿಂದ ಸ್ವಲ್ಪ ಅಸಮಾಧಾನ ಹೊಂದಿದ್ದ, 'ಸೈನ್ಯವು ಪಲ್ಲಕ್ಕಿಯೊಂದಿಗೆ ಬರುತ್ತಿರುವಾಗ ಒಬ್ಬ ಬಹದ್ದೂರ ಮೇಲ್ವಿಚಾರಕ ಈ ಗುಂಪಿನಲ್ಲಿರುವುದು ಅಗತ್ಯ' ಎಂದು ಅಭಿಪ್ರಾಯಪಟ್ಟಿದ್ದ. 'ನಾವು ರಾತ್ರಿ ಹೊತ್ತು ಬೇಗನೆ ಅಹ್ಮದ್ ನಗರದ ಕೋಟೆಯೊಳಗೆ ತಲಪ ಬೇಕಾಗಿದೆ. ನಿಕಾಹದ ವ್ಯವಸ್ಥೆಯನ್ನು ಮಾಡಬೇಕಾಗಿದೆ' ಎಂದು ಖಾನೆ ಖಾನಾನ್ ಹೇಳಿದ. ಅಹ್ಮದ್ ನಗರ ತಲಪುವುದಕ್ಕೆ ಇನ್ನೂ ಸಮಯವಿತ್ತು. ಮಿರ್ಜಾ ಅಬ್ರಜ್ ರಕ್ಷಣೆಗಾಗಿ ಬಂದು ಪಲ್ಲಕ್ಕಿಯನ್ನು ಎತ್ತಿಕೊಂಡು ತನ್ನ ಜೊತೆಗೆ ಪ್ರಯಾಣ ಬೆಳೆಸಿ, ಅಹ್ಮದ್ ನಗರದ ಅಸುಪಾಸಿನಲ್ಲಿ ನಿಲ್ಲಿಸಿದ.

ದಾನಿಯಲ್ ಮತ್ತು ಖಾನೆಖಾನಾನ್ ಬಂದು ಅವರನ್ನು ಭೇಟಿಯಾದರು.

ಜೊತೆಗೆ ಪ್ರಯಾಣಿಸಿ ಬಂದ ಹಿರಿಯರಿಗೆ ಉಡುಗೊರೆಯನ್ನು ನೀಡಿದರು. ಮಿರ್ಜಾ ಅಬ್ರಜ್ ಮತ್ತು ಷಾ ಜಮಾಲುದ್ದೀನ್ ಹುಸೈನ್ ಪಲ್ಲಕ್ಕಿಯ ಜೊತೆಯಲ್ಲಿ ಒಂದು ನದಿಯ ದಡದಲ್ಲಿ ನಿಂತರು. ಅಲ್ಲಿ ನಿಕಾಹದ ಸಭೆಯನ್ನು ಸೇರಿಸಲಾಯಿತು. ಈ ಸಭೆ ಬರಖಾಸ್ತು ಆಗುವಾಗ ಮೊಘಲರ ಘನತೆಯ ವೈಭವ, ಅಕ್ಬರ್ ಬಾದಶಾಹನ ಸಂಭ್ರಮದ ಸಮಾರಂಭದ ವೈಭವದ ಎತ್ತರವು ಸಾಬೀತಾಯಿತು. ಇವೆಲ್ಲ ಮುಗಿದ ಬಳಿಕ ಅವರ ಊರಿಗೆ ಪ್ರಯಾಣಿಸಿದರು. ಸುಲ್ತಾನ್ ಸಲೀಂ ಅಕ್ಬರ್ ಬಾದಶಾಹನ ಪ್ರತಿನಿಧಿಯಾಗಿ ಆಗ್ರಾದಲ್ಲಿರುತ್ತಿದ್ದ. ದಾನಿಯಲ್ ಯಾನೆ ದಾನ್ಜಿ ತುಂಬ ಶರಾಬು ಸೇವನೆ ಮಾಡುತ್ತಿದ್ದ. ಈ ದುರ್ವ್ಯಸನದಿಂದಾಗಿ ಅವನ ಯುಕೃತ್ತು ಕೆಟ್ಟುಹೋಗಿತ್ತು. ಎಷ್ಟು ಔಷಧ ಮಾಡಿದರೂ ಗುಣವಾಗಲಿಲ್ಲ. ಆರು ತಿಂಗಳ ಬಳಿಕ ತೀರಿಕೊಂಡ. ಇವನ ಸಾವಿನ ಬಗ್ಗೆ ಜನರು ಹಗುರವಾಗಿ ಮಾತಾಡುತ್ತಿದ್ದರು. ಅವನ ಜೊತೆಗಾರರಲ್ಲಿ ಯಾರೋ ಅವನಿಗೆ ವಿಷವಿಕ್ಕಿ ಕೊಂದಿದ್ದಾರೆಂದು ಜನರ ಗುಮಾನಿಯಿತ್ತು. ಅಕ್ಬರ್ ಬಾದಶಾಹ ಬದುಕಿರುವ ತನಕ ದಾನ್ಜಿಯ ಪತ್ನಿ ಮತ್ತು ಮಕ್ಕಳು ಆಮೇರ್‌ನಲ್ಲಿ ವಾಸಿಸುತ್ತಿದ್ದರು. ಖಾನೆ ಖಾನಾನ್ ತನ್ನ ಮಗಳು ಮತ್ತು ಮೊಮ್ಮಕ್ಕಳ ರಕ್ಷಣೆ ಮಾಡುತ್ತಿದ್ದ. ಮುಂದಿನ ಶಹಜಾದರಾಗಲಿರುವ ಭವಿಷ್ಯ ಇವರಿಗಿರುವುದರಿಂದ ಮಗಳ ಮಕ್ಕಳ ಪಾಲನೆ ಪೋಷಣೆಯನ್ನು ಜತನದಿಂದ ಮಾಡುತ್ತಿದ್ದ. ಸುಲ್ತಾನ್ ಸಲೀಂ ಬಾದಶಾಹ ಸಿಂಹಾಸನವನ್ನೇರಿದಾಗ ದಾನಿಯಲ್‌ನ ಮಕ್ಕಳು ಮತ್ತು ಸಂಪತ್ತನ್ನು ಬಾದಶಾಹನ ಮುಂದೆ ಇಟ್ಟಿದ್ದ. ಅವರಿಗೆ ಪ್ರತ್ಯೇಕ ಮಹಲುಗಳನ್ನು ಕಟ್ಟಲಾಯಿತು. ಅವರ ಜೀವನ ನಿರ್ವಹಣೆಗಾಗಿ ಆದಾಯದ ವ್ಯವಸ್ಥೆಯನ್ನೂ ಮಾಡಲಾಯಿತು.

**ಖಾನೆ ಖಾನಾನ್ ಸ್ವತಂತ್ರನಾಗುವ ಮತ್ತು ಸುಲ್ತಾನ್ ಸಲೀಮ ಹೋಗಿ ವಾಪಸಾಗುವ ವಿವರಗಳು:**

ದಾನಿಯಲನ ಸಾವಿನ ನಂತರ ಮತ್ತು ಅವನ ಮಕ್ಕಳನ್ನು ಸಲೀಮ್ ಯಾನೆ ಜಹಾಂಗೀರ್ ಬಿನ್ ಅಕ್ಬರ್ ಬಾದಶಾಹನ ಜವಾಬ್ದಾರಿಗೆ ಒಪ್ಪಿಸಿದ ನಂತರ ಖಾನೆ ಖಾನಾನ್ ದಾನಿಯಲ್ ನೋಡಿಕೊಳ್ಳುತ್ತಿದ್ದ ರಾಜ್ಯವನ್ನು ಚೆನ್ನಾಗಿ ಆಳ್ವಿಕೆಯನ್ನು ನಡೆಸಿದ. ಅಲ್ಲಿ ತನ್ನ ರಾಜ್ಯವು ಸ್ವತಂತ್ರವಾದುದೆಂದು ಘೋಷಿಸಿದ. ತನ್ನ ಮಗ ಮಿರ್ಜಾ ಅಬ್ರೆಜ್‌ನನ್ನು ಖಾನ್‌ದೇಶ್ ರಾಜ್ಯಕ್ಕೆ ಕಳುಹಿಸಿದ. ಅಲ್ಲಿ ಯಾರ ಜೊತೆಯಲ್ಲೂ ಯಾವುದೇ ರೀತಿಯ ದ್ವೇಷವಿರಲಿಲ್ಲ. ಮಿರ್ಜಾ ಅಬ್ರೇಜ್ ಅಲ್ಲಿನ ಅಧಿಪತಿಯಾದ. ಅಲ್ಲಿನ ಎಲ್ಲರೂ ಅವನ ಅಧಿಪತ್ಯವನ್ನು ಒಪ್ಪಿಕೊಂಡಿದ್ದರು.

ಹನ್ನೆರಡು ಆನೆಗಳು ಮತ್ತು ನೂರು ಕುದುರೆಗಳು ಐದು ಸಾವಿರ ರೂಪಾಯಿಗಳ ನಗದು, ಕೊಡುಗೆಗಳನ್ನು ಮಿರ್ಜಾ ಅಬ್ರೇಜ್ ತನ್ನ ಖಾನ್‌ದೇಶದಿಂದ ಖಾನೆ ಖಾನಾನ್‌ಗೆ ಉಡುಗೊರೆಯ ರೂಪದಲ್ಲಿ ನೀಡಿದ. ಪ್ರತೀವರ್ಷವೂ ಕಾಣಿಕೆ

ಉಡುಗೊರೆಯನ್ನು, ನಗದನ್ನು ಖಾನೆ ಖಾನಾನ್‌ಗೆ ಕಳುಹಿಸಿಕೊಡುತ್ತಿದ್ದ. ಒಪ್ಪಿಸಲಾದ ಜವಾಬ್ದಾರಿಯುತ ಕೆಲಸಗಳನ್ನು ಪ್ರಾಮಾಣಿಕವಾಗಿ ನೆರವೇರಿಸಬೇಕೆಂದು ತನ್ನ ಮಗನಿಗೆ ಖಾನೆ ಖಾನಾನ್ ಉಪದೇಶವನ್ನು ನೀಡಿದ್ದ. ಮೀರಾ ಮತ್ತು ಅಮಾದ್ ಶಾಹರ ಬಳಿ ಅಹ್ಮದ್ ನಗರದ ಕೆಲವು ವಶಪಡಿಸಿಕೊಂಡ ಭಾಗಗಳು ಇದ್ದವು. ಇವರನ್ನು ಸಂಧಾನದ ಮೂಲಕ ಒಪ್ಪಿಸಿ ಈ ಭಾಗಗಳನ್ನು ಮತ್ತೆ ಅಹ್ಮದ್ ನಗರಕ್ಕೆ ಸೇರಿಸಿಕೊಂಡ. ಉಳಿದ ಭಾಗಗಳನ್ನು ಅವರೊಳಗೆ ಹಂಚಿ ತನ್ನ ಪರವಾಗಿ ಅಧಿಕಾರಿಗಳನ್ನಾಗಿ ಅವರನ್ನು ನೇಮಿಸಿಕೊಂಡ. ಸುಲ್ತಾನ್ ಸಲೀಮನಿಂದ ಖಾನೆ ಖಾನಾನರನ್ನು ಆಹ್ವಾನಿಸುವ ಕರೆ ಬಂದಾಗಲೆಲ್ಲ ಅವನ ಬಳಿ ಹೋಗಿಬರುತ್ತಿದ್ದ. ನಾಲ್ಕು ತಿಂಗಳ ಬಳಿಕ ಖಾನೆ ಖಾನಾನರನ್ನು ಕೆಲವು ಸರದಾರರ ಜೊತೆಗೆ ಅಲ್ಲಿ ನಿಂತಿದ್ದ. ಈ ಎಲ್ಲ ಸಂಗತಿಗಳು ನಡೆದದ್ದು ಜಿಲ್‌ಖಾಯಿದಾತಿಂಗಳ ೨೦ನೆಯ ದಿನಾಂಕ ಹಿಜರಿ ವರ್ಷ ಸನ್ ೧೦೧೭ರಲ್ಲಿ. ನಂತರ ಖಾನೆ ಖಾನಾನ್ ಅಲ್ಲಿಂದ ಹಿಂತಿರುಗಿ ಆಮೇರ್ ಮತ್ತು ಬುರ್ಹಾನ್‌ಪುರಕ್ಕೆ ಹೋಗಿ ಅಲ್ಲಿ ಓರ್ವ ಹೊಸ ಪ್ರತಿನಿಧಿಯನ್ನು ನೇಮಿಸಿದ. ಅಲ್ ಹಮ್ದು ಲಿಲ್ಲಾಹಿ ರಬ್ಬಿಲ್ ಆಲಮೀನ್ ಈ ಕಾಲಘಟ್ಟದಲ್ಲಿ ಯಾವುದೇ ರೀತಿಯ ಜಗಳ, ಯುದ್ಧ, ದ್ವೇಷದ ಘಟನೆಗಳು ನಡೆಯದೆ ತುಂಬ ಶಾಂತವಾಗಿತ್ತು.

**ಅಕ್ಬರ್ ಬಾದಶಾಹ ಆಗ್ರಾದಿಂದ ಪ್ರಯಾಣ ಮತ್ತು ಸುಲ್ತಾನ್ ಸಲೀಮನ ವಿರೋಧವನ್ನು ಶಮನಗೊಳಿಸಿದ ವಿವರಗಳು:**

ಅಕ್ಬರ್ ಬಾದಶಾಹ ಆಗ್ರಾದಿಂದ ಈ ಕಡೆ ಪ್ರಯಾಣಿಸಿದಾಗ ಬೀಳ್ಕೊಡುವ ಸುಲ್ತಾನ್ ಸಲೀಮ್ ಅಪೇಕ್ಷಿಸಿದಂತೆ ಯಾವರೀತಿಯಲ್ಲೂ ತನಗೆ ಗೌರವ ನೀಡಿ ಸಲಾಮ್ ಮಾಡಿರಲಿಲ್ಲ. ಸುಲ್ತಾನ್ ಸಲೀಮನಿಗೆ ಬಾದಶಾಹನ ಭಯವಿತ್ತು. ಒಂದು ಕಾಲದ ತನಕ ಅವನ ಬೆಂಬಲಿಗರು ಮತ್ತು ಸ್ನೇಹಿತರ ಮೇಲೆ ದಬ್ಬಾಳಿಕೆ ನಡೆಸಿದ್ದರಿಂದ ಭಯಪಡುತ್ತಿದ್ದ. ಬಾದಶಾಹ ತನ್ನ ಜೊತೆಗೆ ಬರಲು ಆಹ್ವಾನಿಸಿದಾಗ ತಾನು ಬರುವುದಿಲ್ಲವೆಂದು ಹೇಳಿದ. ಸಲೀಮ ತನ್ನ ಜೊತೆಗೆ ಆರೇಳು ಸಾವಿರ ಸಂಖ್ಯೆಯ ಸೈನ್ಯವನ್ನು ಕಟ್ಟಿಕೊಂಡಿದ್ದ. ಎಂದಾದರೂ ಬಾದಶಾಹ ತನ್ನ ಮೇಲೆ ದಬ್ಬಾಳಿಕೆ ನಡೆಸಿದರೆ ಕೆಲಸಕ್ಕೆ ಬರುತ್ತದೆ ಎಂಬುದು ಅವನ ಲೆಕ್ಕಾಚಾರವಾಗಿತ್ತು. ಬಾದಶಾಹರ ಸೈನ್ಯ ತನ್ನ ಮೇಲೆ ದಾಳಿ ನಡೆಸಿದರೆ ತಾನು ದಿಟ್ಟವಾಗಿ ಎದುರಿಸಬಲ್ಲೆನೆಂದು ಅಂದುಕೊಂಡಿದ್ದ. ಬಾದಶಾಹನಿಗೆ ಇವೆಲ್ಲ ವಿಚಾರಗಳು ತಿಳಿದಿರಲಿಲ್ಲ. ಕೆಲವು ಕಾಲದ ತನಕ ತನ್ನಿಂದ ಮುನಿಸು ತೋರಿ ದೂರವಿದ್ದ ಮಗನನ್ನು ಕರೆದರೂ ತನ್ನ ಬಳಿಗೆ ಬಂದಿರಲಿಲ್ಲ. ಅವನು ಹಿಂತಿರುಗಿ ಬರುವುದನ್ನು ಬಾದಶಾಹ ಕಾದು ಕೂತಿದ್ದ. ತಾನು ಕಾಯಿಲೆಯಲ್ಲಿ ಬಳಲುತ್ತ ಹಾಸಿಗೆ ಹಿಡಿದಾಗ ಮಿರ್ಜಾ ಅಜೀಜ್ ಗೋಗಾನ ಮೂಲಕ ಒಂದು ಪತ್ರವನ್ನು ಬಾದಶಾಹ ಬರೆಸಿದ್ದ. ಅವನಿಗೆ ಬಾದಶಾಹ ಪದವಿಯ

ಮೇಲಿನ ಆಸಕ್ತಿಯೂ ಕಮ್ಮಿಯಾಗುತ್ತ ಬಂದಿತ್ತು. ಬಾದಶಾಹನ ಬದುಕಿನಲ್ಲಿ ನಿರಾಸೆ ಮೂಡಿತ್ತು. ಈ ಚಿಂತೆಯಲ್ಲಿ ಮತ್ತು ಅಶಾಂತಿಯ ದೆಸೆಯಿಂದ ಅಜೀಜ್ ಗೋಗಾನಿಂದ ಪತ್ರ ಬರೆಸಿ ಸುಲ್ತಾನ್ ಸಲೀಮನಿಗೆ ರವಾನಿಸಿದ.

ಈ ಪತ್ರವು 'ಫರ್ಮಾನೆ ಶಾಹಿ' ಎಂಬ ಬಾದಶಾಹನ ಆಜ್ಞಾಪತ್ರವಾಗಿದ್ದು, ಮುಖ್ಯವಾಗಿ ಸುಲ್ತಾನ್ ಸಲೀಮ್ ಬಾದಶಾಹನ ಮುಂದೆ ಹಾಜರಾಗಲು ಹೊರಟ ಆಜ್ಞೆಯಾಗಿತ್ತು. ಸುಲ್ತಾನ್ ಸಲೀಮನು ಈ ಫರ್ಮಾನನ್ನು ಓದಿದ ಕೂಡಲೇ ಹತ್ತು ದಿನಗಳ ಪ್ರಯಾಣವನ್ನು ನಾಲ್ಕು ದಿನಗಳಲ್ಲಿ ಮುಗಿಸಿ ಬಂದು ತಲಪಿದ. ಅಕ್ಬರನು ತನ್ನ ಮಗನನ್ನು ಅನಾರೋಗ್ಯದಿಂದ ಹಾಸಿಗೆ ಹಿಡಿದು ಮಲಗಿದ ಅಂತಃಪುರದೊಳಗೆ ಕರೆಸಿದ. ಅವನ ಕಣ್ಣುಗಳ ಮುಂದೆ ಮಗನನ್ನು ಕಂಡ ಕೂಡಲೇ ಹಾಸಿಗೆಯಿಂದ ಎದ್ದು ಸಲೀಮನನ್ನು ತನ್ನ ಎದೆಗೆ ಅಪ್ಪಿಕೊಂಡು ಆಲಂಗಿಸಿಕೊಂಡ. ಅಕ್ಬರ್ ಬಾದಶಾಹ ಪ್ರೀತಿಯಿಂದ ಸಲೀಮ್‌ನನ್ನು ಬಂಗಾರದ ಸರಪಳಿಯನ್ನು ಕಟ್ಟಿ 'ನಝುರ್ ಬಂದ್' ಕೈದಿಯನ್ನಾಗಿಸಿದ. ಮೂರು ನಾಲ್ಕು ದಿನ ತನ್ನ ಬಳಿಯಲ್ಲೇ ಇಟ್ಟುಕೊಂಡು ಎಲ್ಲೂ ಹೋಗದಂತೆ ಪಿತೃಮೋಹ ಪಾಶದಿಂದ ಬಂಧಿಸಿಟ್ಟುಕೊಂಡ. ಬಾದಶಾಹನ ಆರೋಗ್ಯವೂ ಇದರಿಂದ ಸುಧಾರಿಸಿಕೊಂಡಿತು. ಒಂದು ತಿಂಗಳ ಬಳಿಕ ಸಂಪೂರ್ಣವಾಗಿ ಗುಣಮುಖನಾಗಿ ಸಾರ್ವಜನಿಕರ ಸಮಕ್ಷಮಕ್ಕೆ ಬಂದು ನಿಲ್ಲಲು ಬಾದಶಾಹ ಅಕ್ಬರನಿಗೆ ಸಾಧ್ಯವಾಯಿತು. ಬಾದಶಾಹ ಮಗನಿಗೆ ವಿಧಿಸಿದ ಪುತ್ರವಾತ್ಸಲ್ಯದ ಬಂಧನದಿಂದ ಸಲೀಮನನ್ನು ಬಿಡುಗಡೆಗೊಳಿಸಿ ತನ್ನ ಎದೆಗೆ ಅಪ್ಪಿಕೊಂಡು ಪ್ರೀತಿಯ ಮಳೆಗೆರೆದ. ಅವನ ಮುಖಾರವಿಂದವನ್ನು ತಡವಿ ಅಳತೊಡಗಿದ. 'ನೀನು ನನ್ನ ವಂಶದ ಬೆಳಕು. ಈ ಸಾಮ್ರಾಜ್ಯವು ನಿನ್ನದು, ಇಲ್ಲಿನ ಸಂಪತ್ತು ನಿನ್ನದು. ನಾನೂ ನಿನ್ನವನು. ಎಲ್ಲವೂ ನಿನ್ನದು. ನಾನು ಎಷ್ಟುದಿನಗಳ ಕಾಲ ಭೂಮಿಯಲ್ಲಿ ಬದುಕಿರುವೆನೋ ತಿಳಿಯದು' ಎಂದ. ಅಕ್ಬರ್ ಬಾದಶಾಹ ಸುಲ್ತಾನ್ ಸಲೀಮನನ್ನು ದರ್ಬಾರಿಗೆ ಕರೆತಂದು ಸಿಂಹಾಸನದಲ್ಲಿ ಎರಡು ದಿಂಬುಗಳನ್ನಿಟ್ಟು ಒಂದರಲ್ಲಿ ಅಕ್ಬರ್ ಬಾದಶಾಹ ಕೂತು ಇನ್ನೊಂದರಲ್ಲಿ ಮಗ ಸಲೀಮನನ್ನು ಕೂರಿಸಿ ತುಂಬ ಪ್ರೀತಿಯಿಂದ ಕಣ್ತುಂಬ ನೋಡಿದ. ಸೃಷ್ಟಿಕರ್ತ ಅಲ್ಲಾಹನನ್ನು ನೆನೆದು ಧನ್ಯವಾದ ಹೇಳಿದ. ಅವನು ನಿನ್ನಿಂದ ಸಾಮ್ರಾಜ್ಯವನ್ನು ಆಳುವ ಕೆಲಸವನ್ನು ಮಾಡಿಸಲು ಬಯಸುತ್ತಾನೆಂದು ಹೇಳಿದ. ಅಕ್ಬರ್ ಬಾದಶಾಹ ತನ್ನ ಸಾವಿನ ಮೊದಲು ಸುಲ್ತಾನ್ ಸಲೀಮನನ್ನು ತನ್ನ ವಾರೀಸುದಾರನನ್ನಾಗಿ ಮಾಡುವ 'ವಸೀಯತ್' ವಿಲ್ಲನ್ನು ಒಂದು ಖಾಸಗಿ ಕೋಣೆಯಲ್ಲಿ ತನ್ನ ಆಪ್ತರು ಸಂಬಂಧಿಕರ ಸಾಕ್ಷಿಯ ಮುಂದೆ ನಿರ್ಧಾರವನ್ನು ಪ್ರಕಟಿಸಿದ್ದ.

**ಅಕ್ಬರ್ ಬಾದಶಾಹನ ಬದುಕಿನ ಕೆಲವು ಮಹತ್ವದ ಸಂಗತಿಗಳ ವಿವರಗಳು:**

ಅಕ್ಬರ್ ಬಾದಶಾಹನ ಮೊದಲ ಹಂತದ ಕಾಲದಲ್ಲಿ ಶಿಕಾರಿ ಮಾಡುವ ತುಂಬ ಖಯಾಲಿಯಿತ್ತು. ವಿವಿಧ ರೀತಿಯ ಪ್ರಾಣಿಗಳ ಮೇಲೆ ಸವಾರಿ ಮಾಡುವ ಅಭ್ಯಾಸವೂ ಇತ್ತು. ಮೊದಮೊದಲು ಅವನ ದಿನದ ಬಹುಪಾಲು ಸಮಯ ಶಿಕಾರಿಯಲ್ಲಿ ಕಳೆಯುತ್ತಿದ್ದ. ಇವನು ಬಹಳ ಬಲಶಾಲಿಯಾಗಿದ್ದು ಯಾವುದಕ್ಕೂ ಭಯಪಡದ ಧೈರ್ಯವಂತ ವ್ಯಕ್ತಿಯಾಗಿದ್ದ. ಆಸ್ಥಾನದಲ್ಲಿ ಒಂದು ದೊಡ್ಡ ಕಬ್ಬಿಣದ ಸರಪಳಿಯಿದ್ದು ಅದರಲ್ಲಿ ಹನ್ನೆರಡು ಕೊಂಡಿಗಳಿದ್ದು ಒಂದೊಂದು ಕೊಂಡಿಯೂ ಒಂದೊಂದು (ಅಕ್ಬರನ ಕಾಲದ) ಮಣ ತೂಕದ್ದಾಗಿತ್ತು. ಒಂದು ಹೊಂಡದಲ್ಲಿ ಇದನ್ನು ಹಾಕಿಡಲಾಗಿತ್ತು. ಇದನ್ನು ಎಳೆದು ತರಲು ಕೆಲವು ಯುವಕರು ಸೇರಿ ಎಳೆದರೂ ನಾಲ್ಕು ಹೆಜ್ಜೆಯಷ್ಟು ಎಳೆಯಲು ಸಾಧ್ಯವಾಗುತ್ತಿರಲಿಲ್ಲ. ಆದರೆ ಅಕ್ಬರ್ ಬಾದಶಾಹ ಇದನ್ನು ಒಂದೇ ಕೈಯಿಂದ ಈ ಭಾರಿ ಸರಪಳಿಯನ್ನು ಎಳೆದು ತನ್ನ ಭುಜದ ಮೇಲೆ ಹಾಕಿಕೊಂಡು ನಡೆಯುತ್ತಿದ್ದ. ಇದರಿಂದ ಇವನ ಬಲಿಷ್ಠ ದೇಹದ ಶಕ್ತಿಯ ಅಂದಾಜು ಮಾಡುವುದಕ್ಕೆ ಸಾಧ್ಯವಾಗುತ್ತಿತ್ತು. ಅವನಿಗೆ ಕಾಡಿಗೆ ಹೋಗಿ ಶಿಕಾರಿ ಮಾಡುವುದು ಅತ್ಯಂತ ಸಂತೋಷದ ಕ್ರಿಯೆಯಾಗಿತ್ತು. ಶಿಕಾರಿಯ ಪ್ರಾಣಿಗಳನ್ನು ಕಾಡಿನಲ್ಲಿ ಓಡಿಸಿ ಒಂದೆಡೆ ತಂಡವಾಗಿ ಸೇರಿರುವಂತೆ ಮಾಡುತ್ತಿದ್ದ. ನಂತರ ತನ್ನ ಮೆಚ್ಚಿನ ಪ್ರಾಣಿಯ ಶಿಕಾರಿ ಮಾಡುತ್ತಿದ್ದ. ಜಿಂಕೆಗಳ ಶಿಕಾರಿ ಅವನಿಗೆ ತುಂಬ ಇಷ್ಟವಾಗಿತ್ತು. ಅವನು ಶಿಕಾರಿಗೆ ಹೊರಟಾಗ ಆನೆಗಳು, ಯುವ ಶಿಕಾರಿ ಪರಿಣಿತರು, ಬಲೆಹಾಕುವ ಪರಿಣಿತರು, ಸೈನಿಕರು ಜೊತೆಯಲ್ಲಿ ಇರುತ್ತಿದ್ದರು. ಆಗಾಗ ವಿಹಾರಕ್ಕಾಗಿ ತನ್ನ ಪತ್ನಿಯರನ್ನು ಕರೆದುಕೊಂಡು ಹೋಗುತ್ತಿದ್ದ. ಒಂದು ಎತ್ತರದ ಜಾಗದಲ್ಲಿ ಎಲ್ಲರೂ ಇರುವಂತೆ ಮತ್ತು ನಾಲ್ಕೂ ದಿಕ್ಕಿನಲ್ಲಿ ಪಹರೆಯವರು ತಂಗುವ ವ್ಯವಸ್ಥೆ ಮಾಡುತ್ತಿದ್ದ. ಅವರು ಅಲ್ಲಿಂದ ಬಾದಶಾಹನ ಶಿಕಾರಿಯ ದೃಶ್ಯವನ್ನು ನೋಡಲು ಅನುಕೂಲವಾಗುವಂತೆ ವ್ಯವಸ್ಥೆಯನ್ನು ಮಾಡುತ್ತಿದ್ದ. ಹೀಗೆಯೇ ಕಾಡಿನಲ್ಲಿರುವ ಹಿಂಸಾಮೃಗಗಳ ಶಿಕಾರಿ ಮಾಡುವುದಕ್ಕೂ ಭಯಪಡುತ್ತಿರಲಿಲ್ಲ. ಒಮ್ಮೆ ಶಿಕಾರಿಗೆ ಹೊರಟರೆ ಮೂರು ಮೂರು ತಿಂಗಳುಗಳ ಕಾಲ ಕಾಡಿನಲ್ಲೇ ಸಂಚರಿಸುತ್ತಿದ್ದ. ಹುಲಿಗಳ ಶಿಕಾರಿ ಮಾಡುವಾಗ ಆನೆಗಳನ್ನು ಬಳಸುತ್ತಿದ್ದ. ಒಂದು ಸಲ ಬಾದಶಾಹ ಆನೆಯ ಮೇಲೆ ಸವಾರಿಯಾಗಿ ಕಾಡಿನಲ್ಲಿ ಸಂಚರಿಸುವಾಗ ಎದುರಲ್ಲಿ ದೊಡ್ಡ ಸಿಂಹವೊಂದು ಬರುತ್ತಿತ್ತು. ಬಾದಶಾಹ ತನ್ನ ಸಂಗಾತಿ ಶಿಕಾರಿಗಳನ್ನು ಉದ್ದೇಶಿಸಿ 'ಯಾರಾದರೂ ಈ ಸಿಂಹವನ್ನು ಜೀವಂತವಾಗಿ ಹಿಡಿಯುವವರು ಯಾರಾದರೂ ಇದ್ದಾರೆಯೇ?" ಎಂದು ಕೇಳಿದ. ತನ್ನ ಶಕ್ತಿಯ ಮೇಲೆ ಭರವಸೆಯಿದ್ದ ಓರ್ವ ಸಿಪಾಯಿ ಇದಕ್ಕಾಗಿ ಮುಂದೆ ಬಂದ. ಅವನು ಸಿಂಹದ ಹತ್ತಿರ ಹೋದ. ಅದರ ಮೇಲೆ ಕತ್ತಿಹಿಡಿದು ಹಾರಿದ. ಆದರೆ ಸಿಂಹದ ಬಲದ ಎದುರು ಅವನ ಶಕ್ತಿ ಸಾಲದಾಗಿ ಅವನು ಸತ್ತುಹೋದ.

ಬಾದಶಾಹ ಕೂಡಲೇ ತನ್ನ ಆನೆಯನ್ನು ಆಕಡೆ ಓಡಿಸಿದ. ಆ ಗಾಯಗೊಂಡ ಸಿಂಹವನ್ನು ತನ್ನ ತೋಳಿನಲ್ಲಿ ಅದುಮಿ ಹಿಡಿದ. ಅದರ ಕುತ್ತಿಗೆಗೆ ಸರಪಳಿ ಹಾಕಿ ಒಂದು ಮರದ ಬುಡಕ್ಕೆ ಕಟ್ಟಿಹಾಕಿದ. ಸಿಂಹ ಎದೆಬಿರಿಯುವಂತೆ ಘರ್ಜಿಸಿತು. ಕೆಲವು ದಿನಗಳ ಕಾಲ ಸಿಂಹವು ಕಟ್ಟಿಹಾಕಿದಂತೆಯೇ ಉಳಿಯಿತು. ಕೊನೆಗೆ ಅದು ಪಳಗುವುದಕ್ಕೆ ತಯಾರಾಗಿತ್ತು. ಬಾದಶಾಹನಿಗೆ ಇದಲ್ಲದೆ ಬಿಲ್ಲು ಬಾಣದ ಪರಿಣಿತಿಯಿತ್ತು. ಈಟಿ ಎಸೆತ, ತಲ್ವಾರು ವರಸೆಯಲ್ಲಿ ಪಟುತ್ವಹೊಂದಿದ್ದ. ಬಾದಶಾಹ ತನ್ನ ಆರೋಗ್ಯದ ಬಗ್ಗೆ ಬಹಳ ಕಾಳಜಿ ಇಟ್ಟುಕೊಂಡಿದ್ದ. ಅಲ್ಲಾಹನ ಆರಾಧಕರೊಂದಿಗೆ ಬಹಳ ಮೃದುವಾಗಿ ನಡೆದುಕೊಂಡಿದ್ದ. ರಾತ್ರಿ ಇಡೀ ಕೆಲವೊಮ್ಮೆ ಆಡಳಿತಾತ್ಮಕ ಕಾರ್ಯಗಳಲ್ಲಿ ತಲ್ಲೀನನಾಗಿರುತ್ತಿದ್ದ. ತನ್ನ ನೌಕರರು, ಚಾಕರರು, ಪ್ರಜೆಗಳ ಪೈಕಿ ಚಿಕ್ಕ, ಸಾಮಾನ್ಯ ವ್ಯಕ್ತಿಗಳ ಅಹವಾಲುಗಳನ್ನು ಕೂಡ ಕೇಳಿಸಿಕೊಳ್ಳುತ್ತಿದ್ದ. ಅಂತಃಪುರದಲ್ಲಿ ಯೇನಾದರೂ ಘಟನೆ, ದರೋಡೆ ಆದಲ್ಲಿ ಅವರಿಗೆ ನಲ್ವತ್ತು ದಿನಗಳ ಕಾಲ ಬೇರೆ ಮಹಲಿನಲ್ಲಿ ವಾಸಿಸುವಂತೆ ತಾತ್ಕಾಲಿಕ ವ್ಯವಸ್ಥೆಯನ್ನು ಮಾಡುತ್ತಿದ್ದ. ಇದರಿಂದ ಅವರ ಮಾನಸಿಕ ಆತಂಕವನ್ನು ಕಡಿಮೆ ಮಾಡಿಕೊಳ್ಳಲು ಸಹಕರಿಸಿದ್ದ.

ವಾರದಲ್ಲೊಮ್ಮೆ ಖಾಸಗಿ ಮಹಲಿನ ಬಳಿಯಲ್ಲಿ ವಾರದ ಸಂತೆ ಮಾರುಕಟ್ಟೆ ತೆರೆಯಲಾಗುತ್ತಿತ್ತು. ಇಲ್ಲಿ ಅಂತಃಪುರದ ಮಹಿಳೆಯರು, ಸಂಬಂಧಿಕರು ಸರದಾರರ ಪತ್ನಿಯರು, ಸ್ವತಃ ಬಾದಶಾಹರ ಪಾರುಪತ್ಯೆಯಲ್ಲಿ ವ್ಯಾಪಾರದಲ್ಲಿ ಪಾಲ್ಗೊಳ್ಳುತ್ತಿದ್ದರು. ಈ ಮಾರುಕಟ್ಟೆಯಲ್ಲಿ ಹೆಚ್ಚುಕಮ್ಮಿ ಸುಂದರವಾಗಿ ಸುಸಜ್ಜಿತಗೊಳಿಸಲಾದ ಮುನ್ನೂರು ಅಂಗಡಿಗಳು ಇದ್ದವು. ಇವುಗಳಲ್ಲಿ ಲಕ್ಷಗಟ್ಟಲೆ, ಕೋಟಿಗಟ್ಟಲೆ ಮೌಲ್ಯದ ವಸ್ತುಗಳು ವ್ಯಾಪಾರ ವ್ಯವಹಾರಕ್ಕಾಗಿ ಇರಿಸಲಾಗಿತ್ತು.

ಹೆಚ್ಚಾಗಿ ಮುಶ್ಕ್, ಜಾಫ್ರಾನ್, ಊದ್, ಅಂಬರ್ ಮುಂತಾದ ಅನೇಕ ವಿಧದ ಅಗಣಿತ ಸುಗಂಧ ದ್ರವ್ಯಗಳು ಮಾರಾಟ ಮಾಡುವ ಅಂಗಡಿಗಳು ಇದ್ದವು. ಸರದಾರರು ಮತ್ತು ಅಧಿಕಾರಿಗಳು, ವಿಶೇಷ ದರ್ಬಾರಿಗಳಿಗೆ ಸುಂದರ ಸುಸಜ್ಜಿತ ಮನೆಗಳನ್ನು ಕಟ್ಟಲಾಗಿತ್ತು. ಇಲ್ಲಿ ವಾಸಿಸುವವರು ಆರಾಮದಿಂದ ಬದುಕುವ ಎಲ್ಲ ವ್ಯವಸ್ಥೆಯನ್ನು ಮಾಡಿದ್ದರು. ಈ ಮನೆಗಳನ್ನು 'ನಶೇಮನ್ ಖಾನಾ' ಎಂದು ಕರೆಯಲಾಗುತ್ತಿತ್ತು. ಈ ಮಾರುಕಟ್ಟೆಯ ಅಂಗಡಿಗಳಲ್ಲಿ ಹಲವಾರು ವಿಧದ ಶರಬತ್ತುಗಳು, ಹಣ್ಣುಗಳು, ತಿಂಡಿಗಳು, ಸಿಹಿತಿಂಡಿಗಳನ್ನು ಓರಣವಾಗಿ ಇಡಲಾಗುತ್ತಿದ್ದವು. ಈ ಸಂದರ್ಭದಲ್ಲಿ ಗಾಯಕರು, ವಾದ್ಯವೃಂದದವರು, ಕವಿಗಳು, ಚದುರಂಗ ಆಟದ ಖಯಾಲಿ ಇದ್ದವರೂ ಬಂದು ಭಾಗವಹಿಸುತ್ತಿದ್ದರು. ಈ ಸಭಾ ಕಾರ್ಯಕ್ರಮ ಬಹಳ ಆನಂದೋಲ್ಲಾಸದಲ್ಲಿ ನಡೆಯುತ್ತಿತ್ತು.

ಸ್ವಲ್ಪ ಕಾಲಾನಂತರ ಅಂತಿಮ ಸಮಯ ಸನಿಹ ಬಂದಾಗ ಬಾದಶಾಹನಿಗೆ ಧಾರ್ಮಿಕ ಆರಾಧನೆಯಲ್ಲಿ ಹೆಚ್ಚು ಆಸಕ್ತಿ ತೋರತೊಡಗಿದ. ಮಸೀದಿಗೆ ಹೋಗಿ ನವಾಜು ಮಾಡುತ್ತಿದ್ದ. ಮಸೀದಿಯಿಂದ ಹೊರಬರುವಾಗ ಬಡಬಗ್ಗರು, ಸಂಕಷ್ಟದಲ್ಲಿದ್ದವರಿಗೆ ದಾನಧರ್ಮ ಮಾಡತೊಡಗಿದ್ದ. ಆಗ್ರಾದ ಕೋಟೆಯ ಎಲ್ಲ ದ್ವಾರಗಳಲ್ಲಿ ಸಾರ್ವಜನಿಕ ಅನ್ನ ಸಂತರ್ಪಣೆಯನ್ನು ಮಾಡುವ 'ಆಶ್ ಖಾನಾ'ಗಳನ್ನು ತೆರೆದಿದ್ದ. ಇಲ್ಲಿ ಪ್ರತೀದಿನ ಮುನ್ನೂರು ಮಣ ಗೋದಿ, ಮಾಂಸ, ತರಕಾರಿಗಳ ಅಡುಗೆಯವರು ಇದ್ದು ಅಡುಗೆ ಮಾಡುತ್ತಿದ್ದರು. ಇವನ್ನು ಫಕೀರರು, ಬಡವರು, ನಿರ್ಗತಿಕರಿಗೆ ನೀಡಲಾಗುತ್ತಿತ್ತು. ಕೆಲವೊಮ್ಮೆ ಊಟಕ್ಕಾಗಿ ಸಾಲುಗಟ್ಟಿ ನಿಂತ ಈ ಬಡಜನಗಳ ಸಂಖ್ಯೆ ಅತ್ಯಧಿಕವಾಗಿ ಹಲವು ಜನರು ಊಟ ಸಿಗದೆ ಹಿಂತಿರುಗುತ್ತಿದ್ದರು. ಈ ಬಡಜನರು ತಮಗಾದ ನಿರಾಸೆಯನ್ನು ಫಿರ್ಯಾದಿನ ಮೂಲಕ ಬಾದಶಾಹನ ಮುಂದಿಟ್ಟರು. ಬಾದಶಾಹನ ಮುಂದೆ 'ಯುವಕ ಕಲಂದರರು ಮುಂದೆ ನುಗ್ಗಿ ಊಟ ಮಾಡಿ ಖಾಲಿ ಮಾಡುತ್ತಾರೆ, ಅಂಗವಿಕಲರು, ರೋಗಿಗಳು, ಬಡ ವಯಸ್ಸಾದವರು ಇವರೊಂದಿಗೆ ನುಗ್ಗಾಟ ಜಗ್ಗಾಟದಲ್ಲಿ ಸಾಧ್ಯವಾಗದೆ ಹಿಂದುಳಿದು ಹಸಿವಿನಲ್ಲಿ ಹಿಂದೆ ಹೋಗಬೇಕಾಗುತ್ತದೆ' ಎಂಬುದು ಅವರ ಅಹವಾಲಾಗಿತ್ತು. ಇದನ್ನು ಕೇಳಿದ ಬಾದಶಾಹ ಅಂಗವಿಕಲರು, ಸಂಕಷ್ಟದಲ್ಲಿರುವ ಮುದುಕರು, ರೋಗಿಗಳಿಗೆ ಮೊದಲು ಊಟ ನೀಡಬೇಕೆಂದೂ, ಯುವಕರು, ಸಶಕ್ತರಾದವರಿಗೆ ನಂತರ ನೀಡಬೇಕೆಂದೂ ಆದೇಶವನ್ನು ನೀಡಿದ. ಹೀಗೆ ಬಾದಶಾಹನ ಲಂಗರು ಅಥವಾ ಸಾರ್ವಜನಿಕ ಭೋಜನ ಶಾಲೆಯು ಪ್ರಖ್ಯಾತಗೊಂಡು ದೂರದೂರದ ಫಕೀರರು, ಬಡ ಬಿಕ್ಷುಕರ ದಂಡೇ ಬರತೊಡಗಿ ಹೆಚ್ಚು ಕಮ್ಮಿ ಮೂರು ಸಾವಿರ ಮಂದಿ ಆಗಮಿಸಿ ಮತ್ತಷ್ಟು ನೂಕುನುಗ್ಗಲು ಹೆಚ್ಚಿತು. ಹೀಗೆ ಊಟಕ್ಕಾಗಿ ಬಂದ ಬಡವರನ್ನು ಅಗ್ರಾದ ಕೋಟೆಯ ರಿಪೇರಿ ಕೆಲಸಕ್ಕೆ ಮತ್ತು ಇತರ ಕೆಲಸಗಳಿಗೆ ಇರಿಸಿಕೊಂಡು ಕೆಲಸ ಮಾಡಿಸಿ ಸಂಜೆ ಹೊತ್ತು ಒಂದು ಟಿಕ್ಕಾ ಕೂಲಿ ಕೊಡಿ ಎಂದು ಅಧಿಕಾರಿಗಳಿಗೆ ಆಜ್ಞಾಪಿಸಿದ. ಇವರು ವಾಸಿಸಲು ಯೋಗ್ಯವಾದ ಒಂದು ದೊಡ್ಡ ಪ್ರದೇಶವನ್ನು ಬಿಟ್ಟುಕೊಡಲಾಯಿತು. ಈ ಸ್ಥಳದಲ್ಲಿ ವರ್ಷಗಟ್ಟಲೆ ಕಾಲ ಅಲ್ಲೇ ವಾಸವಾಗಿ ಅವರೊಳಗೆ ಮದುವೆಗಳು ನಡೆದವು. ಮಕ್ಕಳಾಗಿ ಇವರ ಸಂಖ್ಯೆ ಹೆಚ್ಚಾಯಿತು. ಒಂದು ಹಳ್ಳಿಯು ಹೊಸತಾಗಿ ಉಂಟಾಯಿತು. ಇಲ್ಲಿನ ಯುವಕರನ್ನು ಆರಿಸಿ ಕಂದಹಾರ್, ಕಾಬೂಲಿಗೆ ಕಳುಹಿಸಲಾಗಿ ಅಲ್ಲಿಂದ ಕುದುರೆಗಳನ್ನು ತಂದು ತಮ್ಮ ಬದುಕನ್ನು ಹಸನಾಗಿಸಲು ಹಾದಿ ತೋರಿದ. ಹೀಗೆ ಈ ಬಡ ಜನರಿಗೆ ಉದ್ಯೋಗವನ್ನು ನೀಡಿ ಸಂತಸದಿಂದ ಬದುಕುವಂತೆ ಮಾಡಿಕೊಟ್ಟ.

**ಅಕ್ಬರ್ ಬಾದಶಾಹ ತನ್ನ ಧರ್ಮವನ್ನು ಬದಲಿಸಿದ್ದು ಹಾಗೂ ಧಾರ್ಮಿಕ ಸುಧಾರಣೆಯನ್ನು ಕೈಗೊಂಡ ವಿವರಗಳು:**

ಅಕ್ಬರ್ ಬಾದಶಾಹ ತನ್ನ ಆಳ್ವಿಕೆಯ ಪ್ರಾರಂಭದಲ್ಲಿ ಸ್ವೇಚ್ಛಾಚಾರದಲ್ಲಿರುವ ಶೋಕಿ ಯುವಕನಾಗಿದ್ದ. ಕೆಲವು ವರ್ಷ ಬ್ರಾಹ್ಮಣನೊಬ್ಬನ ಮಗಳನ್ನು ಪ್ರೀತಿಸಿ, ಅವಳನ್ನು ಕರೆತಂದು ತನ್ನ ಖಾಸಗಿ ಮಹಲಿನಲ್ಲಿ ಇರಿಸಿಕೊಂಡಿದ್ದ. ತನ್ನ ಅಧಿಕ ಸಮಯವನ್ನು ಅವಳೊಂದಿಗೆ ಕಳೆಯುತ್ತಿದ್ದ. ಅವಳನ್ನು ಅತ್ಯಂತ ಗಾಢವಾಗಿ ಪ್ರೀತಿಸುತ್ತಿದ್ದ. ಈ ಯುವತಿ ಬಹಳ ಜಾಣೆ ಮತ್ತು ಬುದ್ಧಿವಂತಳಾಗಿದ್ದಳು. ಬಾದಶಾಹನನ್ನು ಸದಾ ತನ್ನ ಬಳಿಯಲ್ಲೇ ಇರುವಂತೆ ಆಕರ್ಷಿಸಿದ್ದಳು. ಆದರೆ ಬಾದಶಾಹ ಸಾಮ್ರಾಜ್ಯ ವಿಸ್ತರಣೆಯಲ್ಲಿ ಆಸಕ್ತಿ ಹೊಂದಿದ್ದನಾದುದರಿಂದ ದಂಡ ಯಾತ್ರೆಗೆ ತೆರಳಿ ವಿಜಯವಾದ ನಂತರ ಸೆರೆ ಹಿಡಿಯಲಾದವರನ್ನು ಗುಲಾಮರನ್ನಾಗಿ, ಸೇವೆಯಲ್ಲಿರಿಸಿಕೊಳ್ಳುವುದು ರೂಢಿಯಾಗಿತ್ತು. ಈ ಬ್ರಾಹ್ಮಣ ಹುಡುಗಿ ಬಾದಶಾಹನಿಗೆ 'ಹೀಗೆ ಕೆಲಸಗಾರರ ಸಂಖ್ಯೆ ಹೆಚ್ಚುತ್ತ ಹೋಗಿ ನಿಮ್ಮ ಪ್ರಜೆಗಳಾಗಿ ನಿಮ್ಮಿಂದ ಹಕ್ಕುಗಳನ್ನು ಕೇಳಬಹುದು' ಎಂದು ಹೇಳಿದಳು. ಅಕ್ಬರ್ ಬಾದಶಾಹ ಇವಳ ಮಾತನ್ನು ಗಾಢವಾಗಿ ಯೋಚಿಸಿದಾಗ ಸರಿಯೆನಿಸಿತು. ಮುಂದೆ ತನ್ನ ಬಳಿಗೆ ಈ ಗುಲಾಮರ ದಂಡನ್ನು ಕರೆದುತರ ಕೂಡದೆಂದು ತನ್ನ ಸರದಾರರಿಗೆ ತಾಕೀತು ಮಾಡಿದ. ಹೀಗೆ ತನ್ನ ವಿಚಾರಗಳ ಮೂಲಕ ಈ ಬ್ರಾಹ್ಮಣ ಹೆಣ್ಣು ಬಾದಶಾಹನನ್ನು ಹೆಚ್ಚು ಆಕರ್ಷಿಸಿದಳು. ಬಾದಶಾಹ ಈ ಬ್ರಾಹ್ಮಣ ಹೆಣ್ಣಿನ ಪ್ರೇಮದಲ್ಲಿ ಮುಳುಗಿರ ತೊಡಗಿದ. ಎಲ್ಲಿಯವರೆಗೆಂದರೆ ಈ ಬ್ರಾಹ್ಮಣ ಹೆಣ್ಣು ಬಾದಶಾಹ ತನ್ನ ಬಾಯಿಗೆ ತುತ್ತು ನೀಡುವ ತನಕ ಊಟ ಮಾಡುತ್ತಿರಲಿಲ್ಲ. ಬ್ರಾಹ್ಮಣರ ರಿವಾಜಿನಂತೆ ಮೊದಲು ಸ್ನಾನ ಮಾಡಿ ನಂತರ ಊಟ ಮಾಡುವುದು ರೂಢಿ. ತಮ್ಮ ಮನೆಯ ಒಂದು ಮೂಲೆಯಲ್ಲಿ ಒಂದು ಚಿಕ್ಕ ದೇವರ ಕೋಣೆ ಮಾಡಿರುತ್ತಾರೆ. ಊಟಕ್ಕಿಂತ ಮುಂಚೆ ದೇವರ ಮೂರ್ತಿಯ ಮುಂದೆ ಊಟ ಬಡಿಸಿಟ್ಟು ಒಂದು ದೀಪವನ್ನು ಬೆಳಗಿಸಿಡುತ್ತಾರೆ. ಈ ಮೂರ್ತಿಯನ್ನು ಸಿಂಗರಿಸುತ್ತಾರೆ. ಅದನ್ನು ಪೂಜಿಸುತ್ತಾರೆ. ಹೀಗೆ ಈ ರಿವಾಜಿನ ಹೆಣ್ಣಿನೊಂದಿಗೆ ವಾಸವಾಗಿದ್ದರಿಂದ ಬಾದಶಾಹ ಅವಳ ಪ್ರಭಾವಕ್ಕೊಳಗಾಗಿದ್ದ. ಅವಳ ಆಕರ್ಷಣೆಗೆ ಎಷ್ಟೊಂದು ಒಳಗಾಗಿದ್ದನೆಂದರೆ ತನ್ನ ಪೂರ್ವಜರ ಧರ್ಮ ಮತ್ತು ಅದರ ಆಚರಣೆಗಳಿಂದ ದೂರವಾಗತೊಡಗಿದ. ಬರಬರುತ್ತ ತನ್ನ ಧರ್ಮಕ್ಕೆ ವಿರೋಧವಾದ ಮೂರ್ತಿಪ್ರಜೆಯನ್ನು ಮಾಡತೊಡಗಿದ. ಅವರ ಬಟ್ಟೆಬರೆ, ಆಹಾರ ಪದ್ಧತಿಯಂತೆ ನಡೆಯತೊಡಗಿದ. ಹೆಚ್ಚುಕಮ್ಮಿ ಬ್ರಾಹ್ಮಣರಂತೆಯೇ ನಡವಳಿಕೆಯನ್ನು ಪಾಲಿಸತೊಡಗಿದ. ಜನರಿಗೆ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಕಲಿಸಿಕೊಟ್ಟ ಇಸ್ಲಾಮ್ ಧರ್ಮವನ್ನು ಸಾರ್ವಜನಿಕವಾಗಿ ವಿರೋಧ ವ್ಯಕ್ತಪಡಿಸುತ್ತಿದ್ದ. ತನ್ನ ಬೆಂಬಲಿಗರು

ಯಾರಾದರೂ ನಮಾಜು ಮಾಡಿ ಬಂದಿದ್ದಾರೆನ್ನುವುದನ್ನು ತಿಳಿದರೆ ಅವರನ್ನು ತಮಾಷೆಮಾಡಿ ಅವಮಾನ ಮಾಡುತ್ತಿದ್ದ. ರಮಜಾನಿನ ತಿಂಗಳಲ್ಲಿ ಉಪವಾಸ ಮಾಡುವುದನ್ನು ವಿರೋಧಿಸುತ್ತಿದ್ದ. ಇಸ್ಲಾಮಿನ ಉಲೇಮಾಗಳೊಂದಿಗೆ ಜಗಳ ಮಾಡುತ್ತಿದ್ದ. ಈ ಧಾರ್ಮಿಕ ಪಂಡಿತರನ್ನು ತನ್ನ ಸಾಮ್ರಾಜ್ಯದಿಂದ ಗಡೀಪಾರು ಮಾಡುತ್ತಿದ್ದ. ಕೆಲವು ಮುಸ್ಲಿಮ್ ವಿದ್ವಾಂಸರು ಇವನ ಜೊತೆ ಘರ್ಷಣೆಗೆ ತಯಾರಿಲ್ಲದೆ ದೂರ ತೆರಳಿಬಿಡುತ್ತಿದ್ದರು. ಕೆಲವು ಮಸೀದಿಗಳನ್ನು ಖಾಲಿ ಮಾಡಿಸಿದ್ದ. ಹಲವು ಮಸೀದಿಗಳು ಕುದುರೆಗಳ ಲಾಯವನ್ನಾಗಿ ಪರಿವರ್ತಿಸಿದ್ದ. ಬೆಳಗ್ಗೆ ಮತ್ತು ಸಂಜೆ ಸೂರ್ಯನ ಕಡೆ ಮುಖಮಾಡಿ ಬ್ರಾಹ್ಮಣರಂತೆ ನಮಸ್ಕಾರ ಮಾಡುತ್ತಿದ್ದ. ಪ್ರವಾದಿ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್‌ರನ್ನು ದ್ವೇಷಿಸುತ್ತಿದ್ದ. ಮಾತ್ರವಲ್ಲ ತನ್ನನ್ನು 'ಖಾತಿಮುಲ್ ಅಂಬಿಯ'(ಅಂತಿಮ ಪ್ರವಾದಿ) ಎಂದು ಹೇಳುತ್ತಿದ್ದ. ಯಾರೂ ನನ್ನ ವಿರೋಧ ಮಾಡಕೂಡದು ಎಂದು ಆಜ್ಞಾಪಿಸಿದ್ದ. ಹೀಗೆ ಹೆಚ್ಚುಕಮ್ಮಿ ನಾಲ್ಕು ವರ್ಷಗಳ ಕಾಲ ಮೂರ್ತಿ ಪೂಜೆಯ ಆಕರ್ಷಣೆಗೆ ಒಳಗಾಗಿದ್ದ.

ಸುಲ್ತಾನ್ ಸಲೀಮ್ ತನ್ನ ಅಪ್ಪನ ಬದುಕಿನ ರೀತಿ ಮತ್ತು ಅವನು ಆಚರಿಸುತ್ತಿರುವ ಧರ್ಮದ ಬಗ್ಗೆ ಸಹಮತವಿರಲಿಲ್ಲ. ಅಕ್ಬರ್ ಬಾದಶಾಹನ ಸಾವಿನ ನಂತರವೂ ಸಲೀಮ್ ಇಸ್ಲಾಮ್ ಧರ್ಮವನ್ನು ತೊರೆದು ಅಪ್ಪನ ಧಾರ್ಮಿಕ ಹಾದಿಯಲ್ಲಿ ನಡೆಯಲಿಲ್ಲ. ಅಕ್ಬರನು ೭೬ ವರ್ಷಗಳ ಕಾಲ ಬದುಕಿದ್ದ. ಅವನ ಆಳ್ವಿಕೆಯು ೫೩ ವರ್ಷಗಳ ಕಾಲ ನಡೆದಿತ್ತು. ಅಕ್ಬರನು ತೀರಿಕೊಂಡ ವರ್ಷ ಹಿಜರಿ ಸನ್ ೧೦೦೭ ಆಗಿತ್ತು.

**ಸುಲ್ತಾನ್ ಸಲೀಮ್ ಶೇಕೂಜಿಯ ಆಳ್ವಿಕೆಯ ವಿವರಗಳು:**

ತನ್ನ ತಂದೆ ತೀರಿಕೊಳ್ಳುವ ತನಕ ರಾಜಕುಮಾರನಾಗಿ ಸುಲ್ತಾನ್ ಎನಿಸಿಕೊಂಡಿದ್ದ ಸಲೀಮ್(ಶೇಕೂಜಿ) ತಂದೆಯ ಕಾಲಾನಂತರ ಸಿಂಹಾಸನಾರೂಢನಾದ. ಆಳ್ವಿಕೆ ನಡೆಸಲು ತೊಡಗಿದ ನಂತರ ಒಳ್ಳೆಯ ಹೆಸರು ಪಡೆದ. ಪ್ರಜೆಗಳಿಗೆ ನ್ಯಾಯ ಒದಗಿಸಿದ, ಅವರ ಜೊತೆಯಲ್ಲಿ ಶಾಂತ ರೀತಿಯಲ್ಲಿ ದಯಾಪರನಾಗಿ ವ್ಯವಹರಿಸಿದ. ತನ್ನ ಆಳ್ವಿಕೆಯ ಮೊದಲ ವರ್ಷ ಖಜಾನೆಯಿಂದ ಸಾಕಷ್ಟು ಹಣವನ್ನು ತೆಗೆದು ಸೈನ್ಯದ ಸಿಪಾಯಿಗಳಿಗಾಗಿ ಖರ್ಚು ಮಾಡಿದ. ಅವನ ವಿರುದ್ಧ ಪಿತೂರಿ ನಡೆಸುತ್ತಿದ್ದವರನ್ನು ತರಾಟೆಗೆ ತೆಗೆದುಕೊಂಡ. ಸಾಮ್ರಾಜ್ಯದಲ್ಲಿ ಪಿತೂರಿ, ಷಡ್ಯಂತ್ರಗಳನ್ನು ಮಾಡುತ್ತಿದ್ದವರನ್ನು ಓಡಿಸಿದ. ವೈರಿಗಳ ತಲೆ ಹಾರಿಸಿದ. ಕಾಬೂಲಿನ ಸರಹದ್ದಿನ ಪ್ರಾಂತ್ಯದಲ್ಲಿ ರಾಜಕೀಯ ಪಿತೂರಿಯ ಕೃತ್ಯಗಳು ಬೆಳಕಿಗೆ ಬಂದಾಗ ಖಜಾನೆಯಿಂದ ಹಣ ತೆಗೆದು ಏಳು ಸಾವಿರ ಸೈನಿಕರಿಗೆ ತರಬೇತು ನೀಡಿ ದಂಡನ್ನು ತಯಾರು ಮಾಡಿ ಕಾಬೂಲಿಗೆ

ಕಳುಹಿಸಿದ. ಆಸ್ಥಾನದಲ್ಲಿದ್ದ ಸೇವಕರು, ನೌಕರರ ಪೈಕಿ ವಯಸ್ಸಾದ ಹಿರಿಯರನ್ನು ತೆಗದು ಹೊಸಬರನ್ನು ನೇಮಿಸಿದ. ತನ್ನ ಭರವಸೆಯ ಸಿಪಾಯಿಗಳನ್ನು ಆರಿಸಿ ಗಡಿಯ ರಕ್ಷಣೆಗೆ ಕಳುಹಿಸಿದ. ಇವೆಲ್ಲ ಕೆಲಸಗಳು ಕಾರ್ಯರೂಪಕ್ಕೆ ಬರುವಾಗ ಒಂಭತ್ತು ತಿಂಗಳುಗಳು ಕಳೆದವು. ನಂತರ ಆಗ್ರಾಕ್ಕೆ ಹಿಂತಿರುಗಿದ. ತನ್ನ ದಿವಂಗತ ತಮ್ಮ ದಾನ್‌ಜಿಯ (ದಾನಿಯಲನ) ಹೆಂಡತಿ ಮಕ್ಕಳನ್ನು ಆಮೇರ್ ಮತ್ತು ಬುರ್ಹಾನ್‌ಪುರದಿಂದ ಆಗ್ರಾಕ್ಕೆ ಕರೆಸಿಕೊಂಡ. ಖಾನೆ ಖಾನಾನ್‌ನನ್ನು ಮತ್ತೊಮ್ಮೆ ದಕ್ಷಿಣದ ದಂಡಯಾತ್ರೆಗೆ ಹೋಗಲು ಆದೇಶವನ್ನು ನೀಡಿದ. ಪ್ರತೀ ಸಾರಿ ಕೆಲವು ಕಾರಣಗಳಿಂದಾಗಿ ದಕ್ಷಿಣದ ದಂಡಯಾತ್ರೆ ವಿಳಂಬವಾಗುತ್ತಿತ್ತು. ಬಾದಶಾಹ ಸಲೀಮನ ದರ್ಬಾರಿನಲ್ಲಿ ಸಾಮಾನ್ಯವಾಗಿ ಹಿಂದೂ ಮುಸ್ಲಿಮ್ ದೊಡ್ಡ ಸರದಾರರು ಇರುತ್ತಿದ್ದರು. ಇವರೆಲ್ಲರೂ ಸೇರಿ ಬಾದಶಾಹನ ಆದೇಶವನ್ನು ಶಿರಸಾವಹಿಸಿ ಪಾಲಿಸುತ್ತೇವೆಂದು ಪ್ರತಿಜ್ಞೆಯನ್ನು ಮಾಡಿದ್ದರು. ಇವರೆಲ್ಲರೂ ಸೇರಿ ಬಾದಶಾಹನಿಗೆ 'ಈ ಸಮಯದಲ್ಲಿ ಗುಜರಾತಿನಲ್ಲಿ ಅಲ್ಲಿನ ರಾಜ್ಯವನ್ನು ವ್ಯವಸ್ಥಿತ ರೂಪದಲ್ಲಿ ಆಳ್ವಿಕೆಯನ್ನು ನಡೆಸುವ ನಿಟ್ಟಿನಲ್ಲಿ ಕಾರ್ಯನಡೆದಿಲ್ಲ. ಯಾರಾದರೂ ಸರಿಯಾದ ವ್ಯಕ್ತಿ ಇದ್ದರೆ ಅಲ್ಲಿಗೆ ಕಳುಹಿಸಿರಿ' ಎಂದು ಮನವಿ ಮಾಡಿಕೊಂಡರು.

ಬುಖಾರಾದ ಸಾದಾದ್ ವಂಶಕ್ಕೆ ಸಂಬಂಧಿಸಿದ ಮತ್ತು ಅಕ್ಬರ್ ಬಾದಶಾಹನ ಹಳೆಯ ಭರವಸೆಯ ಅಧಿಕಾರಿಗಳಲ್ಲೊಬ್ಬನಾದ ಷೇಖ್ ಫರೀದ ಬಕ್ಷನನ್ನು ಗುಜರಾತಿಗೆ ಒಂದು ಬಲಿಷ್ಠವಾದ ಸೇನೆಯೊಂದಿಗೆ ಕಳುಹಿಸಲಾಯಿತು. ಅವನು ಎರಡು ವರ್ಷಗಳ ಕಾಲ ಗುಜರಾತಿನಲ್ಲಿ ನೆಲೆನಿಂತು ಅಲ್ಲಿನ ಎಲ್ಲ ಭಾಗಗಳಲ್ಲೂ ವ್ಯವಸ್ಥಿತವಾಗಿ ಶಿಸ್ತು ಮೂಡುವಂತೆ ಕಾರ್ಯಕ್ರಮಗಳನ್ನು ಜಾರಿಗೆ ತಂದ. ಅಲ್ಲಿನ ಸಿಪಾಯಿಗಳು, ಅಧಿಕಾರಿಗಳು ಪ್ರಜೆಗಳು ಅವನ ಈ ಕೆಲಸಕಾರ್ಯಗಳಿಂದ ಸಂತಸಪಟ್ಟುಕೊಂಡರು. ಶಿಸ್ತು ಮತ್ತು ನ್ಯಾಯದ ಕ್ರಮಗಳನ್ನು ಕೈಗೊಂಡದ್ದರ ಪರಿಣಾಮವಾಗಿ ಗುಜರಾತಿನ ಪ್ರಜೆಗಳಿಗೆ ಹಿಂದಿನಂತೆ ಸಂತಸದ ಬದುಕನ್ನು ಅನುಭವಿಸುವಂತಾಯಿತು. ಖಾನೆ ಖಾನಾನರಿಗೆ ಈ ಸುದ್ದಿ ಸಿಕ್ಕಾಗ ಅವನೂ ಕೂಡ ತುಂಬ ಸಂತಸಪಟ್ಟುಕೊಂಡ. ಬಹಳಷ್ಟು ಉಡುಗೊರೆಗಳನ್ನು ತೆಗೆದುಕೊಂಡು ಆಗ್ರಾದ ಕಡೆ ಪ್ರಯಾಣಿಸಿದ. ನಂತರ ದಕ್ಷಿಣಕ್ಕೆ ದಂಡಯಾತ್ರೆಗೆ ಪ್ರಯಾಣಿಸುವ ಮಾತು ಎದ್ದಿತು. ಸುಲ್ತಾನ್ ಸಲೀಮನ ಅಭಿಪ್ರಾಯದಂತೆ ತಾನು ದಕ್ಷಿಣಕ್ಕೆ ಹೊರಡಬೇಕೆಂದು ತಯಾರು ಮಾಡಿದಾಗ ಅವನ ತಾಯಿ ಅತ್ತು ಕರೆದಳು. 'ನಿನಗೆ ಅಲ್ಲಾಹನು ಇಷ್ಟುದೊಡ್ಡ ಸಾಮ್ರಾಜ್ಯವನ್ನು ಆಳುವ ಸೌಕರ್ಯ ಒದಗಿಸಿದ್ದಾನೆ. ಇದರ ಆಳ್ವಿಕೆ ನಡೆಸಿದರೆ ಸಾಕು. ದಕ್ಷಿಣದ ರಾಜ್ಯಗಳನ್ನು ಅಷ್ಟೊಂದು ಕಷ್ಟಪಟ್ಟು ವಶಪಡಿಸಿಕೊಳ್ಳುವ ಅಗತ್ಯವೇನು? ಇನ್ನೊಂದು ಮಾತೆಂದರೆ ನೀವೀಗ ಬಾದಶಾಹರ ಮಕ್ಕಳಾಗಿ ಇಬ್ಬರು ಉಳಿದಿದ್ದೀರಿ. ನಿನಗೇನಾದರೂ

ಕೆಡುಕಾದರೆ ನನಗೆ ಬದುಕಿರಲು ಸಾಧ್ಯವಾಗದು. ಈ ನೋವು ನನಗೆ ಸದಾಕಾಲ ಕಾಡುತ್ತಿರುತ್ತದೆ' ಎಂದು ಅಳುತ್ತ ಹೇಳಿದಳು. ಸುಲ್ತಾನ್ ಸಲೀಮನ ಮೇಲೆ ತನ್ನ ತಾಯಿಯ ಮಾತು ಚೆನ್ನಾಗಿ ನಾಟಿತು. ದಕ್ಷಿಣಕ್ಕೆ ಹೋಗುವುದು ಯಾರ ನಾಯಕತ್ವದಲ್ಲಿ ಎಂಬುದನ್ನು ಆರಿಸಲು ಚೀಟಿಯೆತ್ತುವ ತೀರ್ಮಾನವಾಯಿತು. ಕೊನೆಯಲ್ಲಿ ಖಾನೆ ಖಾನಾನನ ಹೆಸರು ಆಯ್ಕೆಯಾಗಿ ಅವನ ನಾಯಕತ್ವದಲ್ಲಿ ದಂಡಯಾತ್ರೆ ನಡೆಸಲು ತೀರ್ಮಾನವಾಯಿತು. ಹಿಜರಿ ವರ್ಷ ಸನ್ ೧೦೧೭ರ ಜಿಲ್‌ಖಾಯಿದಾ ತಿಂಗಳು ಆಮೇರ್, ಬುರ್ಹಾನ್ ಪುರವನ್ನು ಸುತ್ತು ಬಳಸಿಕೊಂಡು ಮುಂದಿನ ರಾಜ್ಯಗಳನ್ನು ವಶಪಡಿಸಿಕೊಳ್ಳಲು ಸೈನ್ಯದೊಂದಿಗೆ ಪ್ರಯಾಣ ಬೆಳೆಸಿದ. ಅಂಬರ್ ಚಕ್ಕೂನ ರಾಜ್ಯದಲ್ಲಿ ಸೇನೆಯೊಂದಿಗೆ ಸ್ವಲ್ಪ ಸಮಯ ವಿರಾಮಕ್ಕಾಗಿ ತಂಗಿದ.

**ನಿಜಾಂ ಶಾಹನ ಆಳ್ವಿಕೆಗೆ ಒಳಪಟ್ಟ ಅಂಬರ್ ಚಕ್ಕೂನ ರಾಜ್ಯದ ಪರಿಸ್ಥಿತಿಯ ವಿವರಗಳು:**

ಅಂಬರ್ ಚಕ್ಕೂ ಹಿಂದೆ ಖ್ವಾಜಾ ಮೇರದ್ ಜಂಘರ್ ಖಾನನ ಗುಲಾಮರಲ್ಲಿ ಒಬ್ಬನಾಗಿದ್ದನಲ್ಲದೆ ನಂತರ ನಿಜಾಂ ಶಾಹನ ಸಲಹೆಕಾರನಾಗಿದ್ದ. ಹಿಂದೆ ಈ ಪುಸ್ತಕದ ಪುಟಗಳಲ್ಲಿ ಇವನ ಬಗ್ಗೆ ಸಂಕ್ಷಿಪ್ತ ಉಲ್ಲೇಖವಾಗಿತ್ತು. ಜಂಘರ್ ಖಾನನ ಮರಣಾ ನಂತರ ನಿಜಾಂ ಶಾಹನ ಸೈನ್ಯದಲ್ಲಿ ಬದಲಾವಣೆಯಾಯಿತು. ನಂತರ ಆಲಂಪನಾರ ಆಸ್ಥಾನದಲ್ಲಿ ಸಿಪಾಯಿಗಳಾಗಿ ಕೆಲಸಕ್ಕೆ ಸೇರಿದ್ದರು. ಈ ಕಾಲಘಟ್ಟದಲ್ಲಿ ಅಬ್ಧಂ ಖಾನ್ ಹಬ್ಶಿಯು ಬಹದ್ದೂರ್ ನಿಜಾಂ ಶಾಹನ ವಿರೋಧಿಯಾಗಿ ಮಾರ್ಪಟ್ಟಿದ್ದ. ದಾನ್‌ಜಿ ಮತ್ತು ಖಾನೆ ಖಾನಾನ್ ಅಹ್ಮದ್ ನಗರಕ್ಕೆ ಆಗಮಿಸಿ ಕೋಟೆಯನ್ನು ವಶಪಡಿಸಿಕೊಂಡಿದ್ದರು. ಸೈನ್ಯವು ಚೆಲ್ಲಾಪಿಲ್ಲಿಯಾಗಿ ಕಾಲುಕಿತ್ತು ಓಡಿಹೋಗಿದ್ದರು. ಆ ಸಮಯದಲ್ಲಿ ಅಂಬರ್ ಚಕ್ಕೂ ಕಳ್ಳ ದರೋಡೆ ಕೋರರು, ಲೂಟಿಕೋರರೊಂದಿಗೆ ಸೇರಿ ಸರಹದ್ದಿನ ಪ್ರದೇಶಗಳ ನಾಲ್ಕೂ ದಿಕ್ಕಿನಲ್ಲಿ ಗುಲ್ಲೆಬ್ಬಿಸಿದ್ದ.

ಈ ಕಳ್ಳ ದರೋಡೆಕೋರರು ಕೋಟೆಯ ಆವರಣದ ಒಳಗೆ ಹೋಗಲು ಕೂಡ ಶುರು ಮಾಡಿದ್ದರು. ಅವನು ಎರಡು ಮೂರು ಸಾವಿರ ಸಂಖ್ಯೆಯ ಸಿಪಾಯಿಗಳ ಸೈನ್ಯವನ್ನು ಬೀದರ್ ನಗರಕ್ಕೆ ಕಳುಹಿಸಿದ್ದ. ಅವರನ್ನು ನಗರದಿಂದ ಹೊರಗಟ್ಟಿದ. ಕೆಲವರು ಸಿಕ್ಕಲ್ಲಿ ಓಡಿಹೋದರು, ಉಳಿದವರು ಸಿಕ್ಕಿಬಿದ್ದು ಬಂಧನಕ್ಕೊಳಗಾದರು. ಈ ಯುದ್ಧದಲ್ಲಿ ವಿಜಯ ಲಭಿಸಿತ್ತು. ಕೆಲವು ಸರದಾರರು ಮತ್ತು ರಾಜಕುಮಾರರು ನಿಜಾಂ ಶಾಹನ ಜೊತೆಗೆ ಸೇರಿಕೊಂಡರು. ಇನ್ನೊಂದೆಡೆ ರಾಜಾ ಫೌಲಾದ್ ಎಂಬ ಹೆಸರಿನವನು ಸಾದತ್ ಖಾನನ ಆಪ್ತನಾಗಿದ್ದನಲ್ಲದೆ ಐದು ವರ್ಷಗಳ ಕಾಲ ಮೊಘಲರ ವಿರೋಧಿಯಾಗಿದ್ದ. ಈ ಮೊಘಲರ ಬಹಳಷ್ಟು ಸಾಮಾನು, ಖಜಾನೆಯ ಸಂಪತ್ತನ್ನು ಲೂಟಿಮಾಡಿದ್ದ. ಈಗ ಮೊಘಲರೊಂದಿಗೆ ಸೇರಿ ಭರವಸೆಯುಂಟಾಗುವಂತೆ ನಡೆದುಕೊಂಡು ಖಾನೆ ಖಾನಾನನನ್ನು ಭೇಟಿಯಾಗಲು ಬಯಸಿದ್ದ. ಅಲ್ಲಿ ಅಬ್ಧಂಗ್

ಖಾನ್ ರಾಜಾನನ್ನು ಯುದ್ಧಕ್ಕೆ ಪ್ರಚೋದಿಸುತ್ತಾ ಅವನ ರಾಜ್ಯವನ್ನು ನಿನ್ನ ವಶಪಡಿಸಿಕೊಂಡು ಅಲ್ಲಿನ ಅಧಿಪತಿಯಾಗೆಂದು ಕಿವಿಯೂದುತ್ತಿದ್ದ. ಸಾದತ್ ಖಾನ್ ನಿಜಾಂ ಶಾಹನ ಗುಲಾಮರಲ್ಲಿ ಒಬ್ಬನಾಗಿದ್ದು ಸೇವಕನಾಗಿ ಕೆಲಸ ಮಾಡುತ್ತಿದ್ದ. ಅಬ್ಬಂ ಖಾನನ ಮಾತನ್ನು ರಾಜಾ ಒಪ್ಪಿಕೊಳ್ಳಲಿಲ್ಲ. ತನ್ನ ಖಾಸಗಿ ಸೈನ್ಯವನ್ನು ಜಮಾವಣೆ ಮಾಡಿಕೊಂಡ. ಒಂದು ಕಡೆ ಅಂಬರ್ ಜಕ್ಕೂ ಇನ್ನೊಂದೆಡೆ ರಾಜ ನಿಂತುಕೊಂಡು ಮೊಘಲರನ್ನು ಲೂಟಿಮಾಡತೊಡಗಿದರು. ಕೊನೆಯಲ್ಲಿ ಅಂಬರ್ ಜಕ್ಕೂನಿಗೆ ಮೊಘಲರಿಂದ ಬಚಾವಾಗುವುದು ಕಷ್ಟಸಾಧ್ಯವೆನಿಸಿತು. ಆ ಕಡೆ ರಾಜಾ ಅಕ್ಬರ್ ಬಾದಶಾಹನ ಆಶ್ವಾಸನೆಯಂತೆ ಸಂಧಾನಕ್ಕೆ ತಯಾರಾಗಿ ಖಾನೆ ಖಾನಾನನ ಬಳಿಗೆ ಹೋದ. ಖಾನೆ ಖಾನಾನ್ ಅವನನ್ನು ಮರ್ಯಾದೆಯಿಂದ ಬರಮಾಡಿಕೊಂಡ, ಅಕ್ಬರನೊಂದಿಗೆ ಭೇಟಿ ಮಾಡಿಸುವ ಭರವಸೆಯನ್ನು ನೀಡಿದ್ದ. ಅವನ ರಾಜ್ಯದಲ್ಲಿ ಕೆಟ್ಟುಹೋದುದನ್ನು ಸರಿಪಡಿಸಿ ಸುಧಾರಣೆ ಮಾಡುವ ಭರವಸೆಯನ್ನು ನೀಡಿದ. ಹೀಗೆ ರಾಜಾನ ಮರ್ಯಾದೆ ಅವನ ಪಿತೂರಿ ಕೃತ್ಯಗಳಿಂದ ಮುಕ್ತನಾಗಿದ್ದ. ರಾಜಾ ಸದಾಕಾಲ ಐದು ಸಾವಿರ ಕುದುರೆ ಸವಾರರೊಂದಿಗೆ ದಾನ್‌ಜಿಯ ಸೈನಿಕರ ಬಳಿ ಹೋಗಿ ತೊಂದರೆ ಮಾಡುತ್ತಿದ್ದ. ಮೊಘಲರ ಸರಹದ್ದಿನೊಳಗೆ ಪ್ರವೇಶಿಸಿ ಲೂಟಿ ಮಾಡುತ್ತಿದ್ದ. ಯಾರಾದರೂ ಅವನ ವಿರೋಧ ವ್ಯಕ್ತಪಡಿಸಿದರೆ ಅವರನ್ನು ಸಂಪೂರ್ಣವಾಗಿ ಲೂಟಿ ಮಾಡಿ ನಾಶಮಾಡುತ್ತಿದ್ದ.

ದಾನ್‌ಜಿ ತನ್ನ ಆಪ್ತವಲಯದ ಸೇವಕನೊಬ್ಬನನ್ನು ರಾಜಾನ ಬಳಿಗೆ ಕಳುಹಿಸಿ, 'ನೀನು ಕಳ್ಳ ದರೋಡೆಕೋರರನ್ನು ಕಳುಹಿಸಿ ಸಾರ್ವಜನಿಕರನ್ನು ಸತಾಯಿಸುತ್ತಿರುವಿ. ನೀನು ಗಂಡು ಬಹದ್ದೂರನಾಗಿದ್ದರೆ ನನ್ನ ಎದುರು ನಿಂತು ಮಾತಾಡಬೇಕು. ನಿನ್ನ ಶಕ್ತಿಯನ್ನು ಪ್ರದರ್ಶಿಸು' ಎಂದು ಸಂದೇಶವನ್ನು ನೀಡಿದ. ಇದಕ್ಕೆ ಉತ್ತರಿಸಿದ ರಾಜಾ 'ನನಗೆ ಯಾರನ್ನೂ ಎದುರಿಸುವ ಅಗತ್ಯವಿಲ್ಲ. ನಿನಗೆ ಭರವಸೆ ಇರಲಿ, ಮುಂದೆಂದೂ ಇಂತಹ ತಪ್ಪನ್ನು ನಾನು ಮಾಡುವುದಿಲ್ಲ. ನನಗೂ ನನ್ನ ರಾಜ್ಯವನ್ನು ಆಳುವುದಕ್ಕೆ ಸಹಾಯದ ಅಗತ್ಯವಿದೆ' ಎಂದು ಹೇಳಿ ಕಳುಹಿಸಿದ. ಇಬ್ಬರ ನಡುವೆ ಒಂದು ಕರಾರನ್ನು ಮಾಡಿಕೊಂಡು ಈ ಪ್ರಾಂತ್ಯದ ಅಭಿವೃದ್ಧಿ ರಕ್ಷಣೆಯಲ್ಲಿ ಪಾಲುದಾರರಾಗಿರುತ್ತೇವೆ ಎಂದು ತೀರ್ಮಾನಿಸಿಕೊಂಡರು. ಸರಕಾರದ ಆದಾಯದಲ್ಲಿ ಸರಿಯಾದ ಅರ್ಧಪಾಲಿಗೆ ಇಬ್ಬರೂ ಹಕ್ಕುದಾರರು ಎಂದು ಕರಾರಿನಲ್ಲಿ ನಮೂದಿಸಲಾಯಿತು. ಪ್ರತೀ ಹಳ್ಳಿ ಮತ್ತು ಓಣಿ ಪಂಗಡಗಳಲ್ಲಿ ಕರ ಮತ್ತಿತರ ವಸೂಲಾತಿಗೆ ಇಬ್ಬರು 'ಆಮಿಲ್' ಎಂದು ಕರೆಯಲ್ಪಡುವ ಕಂದಾಯ ಅಧಿಕಾರಿಗಳನ್ನು ನೇಮಕ ಮಾಡಲಾಯಿತು. ಒಬ್ಬ ದಾನ್‌ಜಿಯ ಕಡೆಯಿಂದ, ಇನ್ನೊಬ್ಬ ರಾಜಾನ ಕಡೆಯಿಂದ ಎಂದೂ ತೀರ್ಮಾನಿಸಲಾಯಿತು. ಇಲ್ಲಿನ ಪ್ರದೇಶದ ಪಟನ್ ಗ್ರಾಮವು

ಬಹಳ ಅಭಿವೃದ್ಧಿ ಹೊಂದಿತ್ತು. ದೂರದ ಊರಿಂದ ವ್ಯಾಪಾರಿಗಳು, ಪ್ರವಾಸಿಗರು ಅಲ್ಲಿಗೆ ಬರುತ್ತಿದ್ದರು. ಸಾಕಷ್ಟು ವ್ಯಾಪಾರ ವಹಿವಾಟು ಅಲ್ಲಿ ನಡೆಯುತ್ತಿತ್ತು. ಒಮ್ಮೆ ರಾಜಾ ಹೊರಗಿನಿಂದ ಆಗಮಿಸಿದ ವ್ಯಾಪಾರಿಗಳಿಂದ ಒಂದು ಸಾವಿರ ರೂಪಾಯಿಯ ಸಾಲ ಕೇಳಿದ್ದ. ಆದರೆ ಈ ವ್ಯಾಪಾರಿಗಳು ಅವನ ಮೇಲೆ ಭರವಸೆ ಇಟ್ಟುಕೊಳ್ಳದೆ ಖಾಲಿ ಕೈಯಲ್ಲಿ ವಾಪಾಸು ಹೋಗುವಂತೆ ಮಾಡಿದರು. ಆಗ ರಾಜಾ ಈ ವ್ಯಾಪಾರಿಗಳ ಮೇಲೆ ಹಲ್ಲೆ ನಡೆಸಿ ಪಟನ್ ಗ್ರಾಮವನ್ನು ಸುತ್ತುವರಿದು ವಶಪಡಿಸಿಕೊಂಡ. ಇಲ್ಲಿನ ಶ್ರೀಮಂತರನ್ನು ಹಿಡಿದುಕೊಂಡ. ಸಾಕಷ್ಟು ಸಾಮಾನು, ಧನಕನಕಗಳನ್ನು ಲೂಟಿ ಮಾಡಿಕೊಂಡು ಓಡಿಹೋದ. ಎಲ್ಲಿವರೆಗೆಂದರೆ ಇಲ್ಲಿನ ಜನಗಳು, ಸೈನಿಕರು ಇವನ ಕೆಟ್ಟ ಕೆಲಸಗಳು, ನಾಚಿಕೆಗೆಟ್ಟ ವರ್ತನೆಗಳನ್ನು ನೋಡಿ ಅವನನ್ನು ತೊರೆದು ಅಂಬರ್ ಚಕ್ಕುನ ಜೊತೆಗೆ ಸೇರಿಕೊಂಡರು. ಅಂಬರ್ ಚಕ್ಕು ಇವರನ್ನು ತನ್ನ ಬಳಿಗೆ ಸ್ವಾಗತಿಸಿದ. ಇವರಿಗೆ ರಿಯಾಯತಿ ನೀಡಿ, ತಿಂಗಳ ಸಂಬಳವನ್ನು ಹೆಚ್ಚಿಸಿದ. ಇವರೆಲ್ಲರನ್ನು ಸೇರಿಸಿ ಅವನು ರಾಜಾನ ಕಡೆ ಸೈನ್ಯ ಸಮೇತ ದಾಳಿ ನಡೆಸಿದ. ಅಲ್ಲೊಂದು ಚಿಕ್ಕ ಕೋಟೆಯಿತ್ತು. ಈ ಕೋಟೆಯಲ್ಲಿ ಸಾದತ್ ಖಾನ್ ಮತ್ತು ರಾಜಾನ ಖಜಾನೆಗಳನ್ನು ಅಡಗಿಸಿಟ್ಟಿದ್ದರು. ಈ ಕೋಟೆಯನ್ನು ಅವನು ಮುತ್ತಿಗೆ ಹಾಕಿ ಎಲ್ಲ ಸಂಪತ್ತನ್ನು ಲೂಟಿಮಾಡಿದ. ಅಲ್ಲಿನ ಪ್ರಜೆಗಳು ನಿಜಾಂ ಶಾಹನ ರಾಜ ಕುವರನನ್ನು ತಮ್ಮ ಬಾದಶಾಹರನ್ನಾಗಿ ಆರಿಸುವುದಕ್ಕೆ ವಿನಂತಿಸಿಕೊಂಡರು. ಆದರೆ ಈ ರಾಜಕುಮಾರ ಈ ಜನರ ಮೇಲೆ ವಿಶ್ವಾಸ ಇಟ್ಟುಕೊಳ್ಳದಿರುವುದರಿಂದ ಇವರಿಗೆ ಒಪ್ಪಿಗೆ ನೀಡಿರಲಿಲ್ಲ. ಅಂಬರ್ ಚಕ್ಕೂ ಸಂಬಂಧ ಬೆಳೆಸುವ ಮೂಲಕ ಅವರಲ್ಲಿ ಭರವಸೆ ಉಂಟು ಮಾಡುವುದಕ್ಕಾಗಿ ಇಲ್ಲಿನ ಹೆಣ್ಣು ಮಕ್ಕಳನ್ನು ವಿವಾಹ ಮಾಡಿಕೊಡುವ ಮಾರ್ಗೋಪಾಯವನ್ನೂ ಮುಂದಿಟ್ಟ.

ಈ ರಾಜಕುಮಾರ ಅವರ ಬಿನ್ನಹವನ್ನು ಒಪ್ಪಿಕೊಂಡರು. ಅಂಬರ್ ಚಕ್ಕೂನನ್ನು ಅಲ್ಲಿನ ಪ್ರದೇಶದ ಮಂಡಳಾಧಿಪತಿಯನ್ನಾಗಿ ಮಾಡಿದ. ನಿಜಾಂ ಶಾಹನ ಹೆಸರಲ್ಲಿ ಬಾದಶಾಹ ಆಡಳಿತ ವ್ಯವಸ್ಥೆಯು ನಡೆಯುತ್ತಿತ್ತು. ನಿಜಾಂ ಶಾಹನಿಗೆ ಸಂತೋಷಪಡಿಸುವುದಕ್ಕಾಗಿ ರಾಜಾ ಅವನನ್ನು ಭೇಟಿಯಾಗುವುದಕ್ಕೆ ಹೋಗುತ್ತಿದ್ದ. ಕುದುರೆ, ಸಾಮಾನು, ಸರಂಜಾಮುಗಳು, ಚಿನ್ನ ಬೆಳ್ಳಿಯ ಆಭರಣಗಳು ಬೆಲೆಬಾಳುವ ತಲವಾರುಗಳ ಉಡುಗೊರೆ, ಕಾಣಿಕೆಗಳನ್ನು ನೀಡುತ್ತಿದ್ದ. ಆದರೆ ತಾನು ಅವನ ಖಾಸ ಆಪ್ತನೆಂದು ನಾಟಕ ಮಾಡುತ್ತಿದ್ದ. ಒಳಗೊಳಗೆ ಅವರ ಬಗ್ಗೆ ಅವಹೇಳನ ಮಾಡಿ ತಮಾಷೆ ಮಾಡುತ್ತಿದ್ದ. ತನ್ನ ಕೆಟ್ಟ ಚಾಳಿಗಳಿಂದ ಅವನು ಮುಕ್ತನಾಗಿರಲಿಲ್ಲ. ನಿಜಾಂ ಶಾಹನಿಗೂ ಈ ಬಗ್ಗೆ ತಿಳಿದಿತ್ತು. ರಾಜಾನಿಗೂ ತಾನು ಬೆನ್ನ ಹಿಂದೆ ಮಾಡುತ್ತಿರುವ ಅವಹೇಳನ, ತಮಾಷೆಗಳ ಬಗ್ಗೆ ಅವರಿಗೆ ಗೊತ್ತಾಗಿದೆ ಎಂಬ ಅನುಮಾನ

ಮೂಡಿತ್ತು. ಇದರಿಂದಾಗಿ ಬೇರೆಬೇರೆ ರೀತಿಯ ಹೊಸ ಅವಕಾಶಗಳನ್ನು ಮಾಡಿಕೊಂಡು ಬರಲೆತ್ನಿಸಿದ. ನಿಜಾಂ ಶಾಹ ಉಪಾಯದಿಂದ ಅವನನ್ನು ಹಿಡಿದು ಬಂಧಿಸಿದ. ಅವನ ಸಂಪೂರ್ಣ ಸೊತ್ತು ಸಾಮಾನುಗಳನ್ನು ವಶಪಡಿಸಿಕೊಂಡ. ಅಂಬರ್ ಚಕ್ಕೂ ಇಪ್ಪತ್ತು ಸಾವಿರ ಸೈನಿಕ ಸವಾರರನ್ನು ಸೇರಿಸಿಕೊಂಡು ಮೊಘಲರ ಸಾಮ್ರಾಜ್ಯದ ಗಡಿಯಲ್ಲಿ ನಿಲ್ಲಿಸಿದ್ದ. ಮೊಗಲರು ಅಂಬರ್ ಚಕ್ಕೂನೊಂದಿಗೆ ಪ್ರತ್ಯಕ್ಷವಾಗಿ ಅವನ ಜೊತೆಯಲ್ಲಿರುವಂತೆ ಕಾಣಿಸಿಕೊಳ್ಳುತ್ತಿದ್ದರಾದರೂ ಅಂತರ್ಯದಲ್ಲಿ ಅವನ ಜೊತೆಗಿರಲು ಬಯಸಿರಲಿಲ್ಲ. ಯಾಕೆಂದರೆ ಅವನು ತನ್ನ ಅಧಿಪತ್ಯವನ್ನು ಚಾಲಾಕಿ ಕುತಂತ್ರಗಳಿಂದ ಗಳಿಸಿಕೊಂಡಿದ್ದ. ಅಲಂಪನಾ ಕೂಡ ಅವನಿಗೆ ಹಲವು ರಿಯಾಯತಿಗಳನ್ನು ನೀಡಿದ್ದ. ಯಾಕೆಂದರೆ ಅವನು ಅಲಂಪನಾ ಯಾವುದೇ ಕೆಲಸ ಹೇಳಿದ್ದರೂ ಅದನ್ನು ಕೂಡಲೇ ಪೂರ್ತಿಮಾಡಿ ಕೊಡುತ್ತಿದ್ದ. ಕಂದಹಾರದ ಕೋಟೆಯು ಮೊಘಲರ  ವಿರುದ್ಧ ಎದ್ದ ಬಂಡಾಯದ ತೆಕ್ಕೆಯೊಳಗಿದ್ದ ಸಂದರ್ಭದಲ್ಲಿ ಅಲ್ಲಿಗೆ ಹೋಗಿ ವಿರೋಧಿಗಳಿಂದ ಬಿಡಿಸಿ ಮೊಘಲರಿಗೆ ಸಿಗುವ ಹಾಗೆ ಮಾಡಿ ನಾಲ್ಕು ವರ್ಷಗಳ ಕಾಲ ಈ ಕೋಟೆಯಲ್ಲಿದ್ದು ಕಾಪಾಡಿದ್ದ. ನಂತರ ಈತ ತನ್ನ ಚಾಲಾಕಿನಿಂದ ಆ ಕೋಟೆಯನ್ನು ವಶಪಡಿಸಿಕೊಂಡ. ಹೀಗೆ ಆತ ಮತ್ತಷ್ಟು ಬಲಿಷ್ಠನಾದ. ನಿಜಾಂ ಶಾಹನನ್ನು ಓಡಿಸಿ ತಾನೇ ಅಧಿಪತಿಯಾದ. ಇದರ ನಂತರ ರಾಜಾನನ್ನು ಅವನ ರಾಜ್ಯದಿಂದ ಓಡಿಸಲು ತಂತ್ರಗಳನ್ನು ರೂಪಿಸುತ್ತಿದ್ದ.

ಈ ಕಾಲಘಟ್ಟದಲ್ಲಿ ಖಾನೆ ಖಾನಾನ್ ಸುಲ್ತಾನ್ ಸಲೀಮನ ಆಹ್ವಾನದ ಮೇರೆಗೆ ಆಗ್ರಾಕ್ಕೆ ಹೋಗಿದ್ದ. ಆಗ ಅವಕಾಶ ಪಡೆದುಕೊಂಡು ಒಂದು ಸೈನ್ಯವನ್ನು ಆಂತೂರದ ಕೋಟೆಯ ಮೇಲೆ ದಾಳಿನಡೆಸಲು ಉಪಯೋಗಿಸಿದ. ಬಲತ್ಕಾರದಿಂದ ಈ ಕೋಟೆಯನ್ನು ಕೈವಶಮಾಡಿಕೊಂಡ. ಅಲ್ಲಿದ್ದ ಮೊಘಲರನ್ನು ಎಲ್ಲರನ್ನೂ ಕೊಂದು ಹಾಕಿದ. ಈ ಸಮಯದಲ್ಲಿ ಮೊಘಲರ ವೈರಿಗಳು ಯಾರ್ಯಾರಿದ್ದಾರೆಂಬ ಬಗ್ಗೆ ಬಹಿರಂಗವಾಯಿತು. ಹೀಗೆ ಮೊಘಲರನ್ನು ವಿರೋಧಿಸುವವರಿಗೆ ಇದರಿಂದ ಧೈರ್ಯ ಮೂಡಿದಂತಾಯಿತು. ಈಗ ನನಗೆ ಮೊಘಲರೊಂದಿಗೆ ಯುದ್ಧಮಾಡುವ ಅಗತ್ಯವಿದೆ ಎಂದು ಮತ್ತೊಮ್ಮೆ ತನ್ನ ಪ್ರತಿನಿಧಿಯ ಮೂಲಕ ಹೇಳಿ ಕಳುಹಿಸಿದ. 'ಆಲಂಪನಾ(ಆದಿಲ್ ಶಾಹಿ ಬಾದಶಾಹ) ನನಗೆ ಬೆಂಬಲ ನೀಡುತ್ತಾರೆ, ಆಸರೆಯನ್ನು ನೀಡುತ್ತಾರೆ. ನಾನು ಮೊಘಲರ ಮೇಲಿನ ಸೇಡು ತೀರಿಸುತ್ತೇನೆ. ನೀವು ನನ್ನ ಮಗನನ್ನು ನಿಮ್ಮ ಸೇವೆಗೆ ಇರಿಸಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ' ಎಂದು ಹೇಳಿದ. ಆಲಂಪನಾ ಅವನ ಮಾತುಗಳನ್ನು ಒಪ್ಪಿಕೊಂಡರು. ಯಾಕೂತ್ ಖಾನನ ಮಗಳನ್ನು ಅಂಬರ್ ಚಕ್ಕೂನ ಮಗ ಅಜೀಜುಲ್ ಮುಲ್ಕ್‌ನಿಗೆ ನಿಕಾಹ ಮಾಡಿಕೊಟ್ಟರು. ಈ ಸಮಯದಲ್ಲಿ ಯಾಕೂತ್ ಖಾನನ ಪತ್ನಿ ವಯಸ್ಸಾಗಿದ್ದಳು. ಆಸ್ಥಾನದ ವಿದ್ವಾಂಸ ಮೌಲಾನಾ ಹಬೀಬುಲ್ಲಾರಿಗೆ

ಆಲಂಪನಾ ತನ್ನ ಪತ್ರವನ್ನು ನೀಡಿ ಅಜೀಜುಲ್ ಮುಲ್ಕನನ್ನು ನಿಮ್ಮೊಂದಿಗೆ ಕರೆತನ್ನಿ ಎಂದು ಹೇಳಿ ಸಂದೇಶ ಕಳುಹಿಸಿದ. ಮದುವೆಯಾಗಲು ಬಂದ ವರನಿಗೆ ಉಳಕೊಳ್ಳಲು ಎರಡು ಮೂರು ಮಹಲುಗಳನ್ನು ತೋರಿಸಿ ಇಷ್ಟವಾದುದನ್ನು ಆರಿಸಿಕೊಂಡು ಆರಾಮವಾಗಿರಲೆಂದು ಬಯಸಿದ. ನಲ್ವತ್ತು ದಿನಗಳ ಕಾಲ ಅವರು ಅಲ್ಲಿ ನಿಂತರು. ಹೀಗೆ ವಧೂವರರು ಸಂತೋಷದಲ್ಲಿರಲೆಂದು ಬೆಲೆಬಾಳುವ ಬಟ್ಟೆಬರೆಗಳು, ಕಾಶ್ಮೀರಿ ಶಾಲು, ಚದ್ದರು, ಜರಿ ಕುಸೂರಿ ಕೆಲಸಗಳಿರುವ ಬಟ್ಟೆಗಳನ್ನು ಚಿನ್ನ ಬೆಳ್ಳಿಯ ಆಭರಣಗಳನ್ನು ನೀಡಿ, ಸುಡುಮದ್ದುಗಳನ್ನು ಖರೀದಿಸಲು ವೆಚ್ಚ ಮಾಡಿದ. ಆನೆ, ಕುದುರೆಗಳ ವ್ಯವಸ್ಥೆ ಮಾಡಿ ವಿಜೃಂಭಣೆಯಿಂದ ವಿವಾಹ ನಡೆಯಿತು. ಇದು ೧೦೧೭ ಹಿಜರಿ ವರ್ಷದ ಜಿಲ್‌ಖಾಯಿದ ತಿಂಗಳಲ್ಲಿ ನಡೆಯಿತು. ಮದುಮಗ ಮದುಮಗಳ ಜೊತೆಗೆ ನಿಜಾಂ ಶಾಹನ ರಾಜಧಾನಿ ಜುನೇರ್‌ಗೆ ಹೋದರು.

ಅಲ್ಲಿಗೆ ಹೊಸತಾಗಿ ಮದುವೆಯಾದ ದಂಪತಿಗಳು ಹೋದಾಗ ಅವರ ಜೊತೆಗೆ ಅಲಂಪನಾರ ಒಬ್ಬ ಪ್ರತಿನಿಧಿ ಅಲ್ಲಿಗೆ ಹೋಗಿದ್ದ. ಅಂಬರ್ ಚಕ್ಕು ಅವರನ್ನು ಸ್ವಾಗತಿಸಿ ಪ್ರತಿನಿಧಿಗೆ ವಿಶೇಷವಾದ ಗೌರವ ತೋರಿದ. 'ನನಗೆ ಒಂದು ಕೋರಿಕೆ ಇದೆ. ನನಗೆ ಸಹಾಯವಾಗ ಬೇಕಾಗಿದೆ. ಆಲಂಪನಾ ನನಗೆ ತಮ್ಮ ಸೈನ್ಯ ನೀಡಿ ಸಹಾಯ ಮಾಡಬೇಕು. ವೈರಿಗಳನ್ನು ಓಡಿಸಲು ನನಗೆ ಶಕ್ತಿ ಗಳಿಸಲು ಸಹಕಾರ ನೀಡಬೇಕು' ಎಂದು ಪ್ರತಿನಿಧಿಯ ಮೂಲಕ ಹೇಳಿ ಕಳುಹಿಸಿದ. ಆದರೆ ಮೊಘಲರು ಈ ಹಬ್ಶಿ ವಂಶಸ್ಥನಾದ ಅಂಬರ್ ಚಕ್ಕೂನ ಜೊತೆಯಲ್ಲಿ ಬಹಿರಂಗವಾಗಿ ಸ್ನೇಹ ಸಂಬಂಧ ಇಟ್ಟುಕೊಂಡಿರುವುದಕ್ಕೆ ಅಂತರಂಗದಲ್ಲಿ ಇಷ್ಟಪಟ್ಟಿರಲಿಲ್ಲ.

**ಇರಾನಿನ ಷಾ ಇಸ್ಮಾಯಿಲನ ಮಗ ಶಾಹೆ ದೀನ್ ಷಾ ತಹಮಾಸ್ಪ್ ಅಲ್ ಸಫವಿಯ ಬದುಕಿನ ಕೆಲವು ವಿವರಗಳು:**

**ಷಾ ಇಸ್ಮಾಯಿಲ್ ಹಿಜರಿ ವರ್ಷ ೯೦೩ರಲ್ಲಿ** ತೀರಿಕೊಂಡಾಗ ಷಾ ತಹಮಾಸ್ಫ್ ಸಿಂಹಾಸನವನ್ನೇರಿದ. ಎಲ್ಲ ಸರದಾರರನ್ನು ಜೊತೆಗೂಡಿಕೊಂಡು ಚೆನ್ನಾಗಿ ಆಳ್ವಿಕೆಯನ್ನು ನಡೆಸಿದ. ಕೆಲಕಾಲದ ನಂತರ ಅವನ ಸಹೋದರರು ಅವನ ಜೊತೆಗಿರಲು ಇಷ್ಟಪಡಲಿಲ್ಲ. ನಂತರ ಸಾಮ್ ಮಿರ್ಜಾ ಇವನ ವಿರೋಧಿಯಾಗಿ ಬದಲಾದ. ರಾಜ್ಯದಲ್ಲಿ ದಂಗೆಗೆ ತೊಡಗಿದ. ಅವನ ಸರದಾರರು ಸಮಾಧಾನದ ಮಾತುಗಳನ್ನು ಹೇಳಿ, ಅವನನ್ನು ಅವನ ಕುಟುಂಬದ ಹಿರಿಯರ ಕಬರಸ್ಥಾನ ಇರುವ ಇರ್ದ್‌ಪಲ್ ಎಂಬ ದ್ವೀಪಕ್ಕೆ ಕಳುಹಿಸಿ ಅಲ್ಲಿ ಆರಾಮದಲ್ಲಿ ಬದುಕಿರಲು ಅವಕಾಶ ನೀಡಿ ಎಂದು ಸಲಹೆ ನೀಡಿದರು. ಆ ಪ್ರಕಾರ ಅವನನ್ನು ಆ ದ್ವೀಪಕ್ಕೆ ಕಳುಹಿಸಿದಾಗ ಹೆಚ್ಚು ಕಮ್ಮಿ ಮೂರು ವರ್ಷಗಳ ಕಾಲ ಅಲ್ಲಿ ಸಾಮ್ ಮಿರ್ಜಾ ಆರಾಮದಲ್ಲಿ ಕಳೆದ.

ಷಾ ತಹಮಾಸ್ಪ್ ಬೆಳೆದು ಬುದ್ಧಿಬಂದಾಗ ತನ್ನ ಹೆಚ್ಚು ಕಾಲ ಕವಿಗಳ ಜೊತೆಯಲ್ಲಿ ಬೆಳೆದ. ಈ ಕಾಲಘಟ್ಟದಲ್ಲಿ 'ತಸ್ಕಿರತುಲ್ ಶಯಹರಾ'(ಕವಿಗಳ ಚರಿತ್ರೆ) ಎಂಬ ಕೃತಿಯನ್ನು ರಚಿಸಿ ಪ್ರಸಿದ್ಧನಾದ. ದುರದೃಷ್ಟವಶಾತ್ ತನ್ನ ಇಳಿವಯಸ್ಸಿನಲ್ಲಿ ಷಾ ತಹಮಾಸ್ಪ್ ತುಂಬ ಅನಾರೋಗ್ಯದಲ್ಲಿ ನರಳಿದ. ಆಗ ಎಷ್ಟೊಂದು ಅನಾರೋಗ್ಯದಿಂದ ಬಳಲಿದ್ದನೆಂದರೆ, ಜನರು ಅವನು ಬದುಕುವ ಅಸೆಯನ್ನು ತೊರೆದಿದ್ದರು. ಸಾಮ್ ಮಿರ್ಜಾನಿಗೆ ಈ ಸುದ್ದಿ ತಿಳಿದಾಗ ತಹಮಾಸ್ಪನನ್ನು ಕಾಣಲು ಹೊರಟ. ಸ್ವಲ್ಪ ದೂರದ ತನಕ ಪ್ರಯಾಣದ ನಂತರ ಬಾದಶಾಹನ ಅರೋಗ್ಯ ಸುಧಾರಿಸಿ ಗುಣಮುಖನಾದನೆಂದು ವರ್ತಮಾನ ಬಂತು. ತನ್ನ ಜೊತೆಗಾರರೊಂದಿಗೆ ಪ್ರಯಾಣವನ್ನು ನಿಲ್ಲಿಸಿ ತನ್ನ ರಾಜ್ಯಕ್ಕೆ ಹಿಂತಿರುಗಿದ. ಇವನ ಇನ್ನೊಬ್ಬ ಸಹೋದರ ಅಲ್‌ಖಾಸ್ ಮಿರ್ಜಾ ಇವನ ವಿರೋಧಿಯಾದ. ರೋಮಿನ ಬಾದಶಾಹನ ಆಶ್ರಯ ಪಡೆದು ಸೈನ್ಯ ಕಟ್ಟಿ ಇರಾನ್ ದೇಶದ ಮೇಲೆ ದಾಳಿನಡೆಸಿ ದೊಂಬಿ ಗಲಾಟೆ ನಡೆಸಿದ. ನಂತರ ಬಸ್ರಾದಲ್ಲಿ ಸಾಕಷ್ಟು ವಿನಾಶಕಾರ್ಯಗಳನ್ನು ಕೈಗೊಂಡು ಸಾಮ್ ಮಿರ್ಜಾನ ಮಕ್ಕಳನ್ನು ಬಂಧಿಸಿದ. ಅವರನ್ನು ಕಹ್‌ಕಹಾ ಕೋಟೆಯ ಸೆರೆಯಲ್ಲಿ ಬಂದಿಗಳನ್ನಾಗಿ ಇಟ್ಟ. ಸ್ವಲ್ಪ ಕಾಲಾನಂತರ ಆ ಹುಡುಗರನ್ನು ಕೋಟೆಯಿಂದ ಹೊರತಂದು ಕೊಂದುಹಾಕಿದ. ಯಾವುದು ಸರಿ ಯಾವುದು ತಪ್ಪೆಂದು 'ವಲ್ಲಾಹು ಆಲಂ' ಅಲ್ಲಾಹನಿಗೇ ಗೊತ್ತು!(ಎಂದು ಲೇಖಕ ಶಿರಾಜಿ ಹೇಳುತ್ತಾನೆ).

ಸ್ವಲ್ಪ ಸಮಯದ ನಂತರ ಹೇರಾತಿಗೆ ಹೋದ. ಕೊಲೆಗೀಡಾದ ಮಕ್ಕಳ ಪೈಕಿ ಎಲ್ಲರಿಗಿಂತ ಚಿಕ್ಕವನು ಬೆಹರಾನ್ ಮಿರ್ಜಾ ಕೂಡ ತನ್ನ ಸಹೋದರರ ಸಂಗತಿ ತಿಳಿದಾಗ ಅವನನ್ನು ದ್ವೇಷಿಸತೊಡಗಿದ. ಕೂಡಲೇ ಅಲ್ಲಿಗೆ ಹೋದ. ತನ್ನಲ್ಲಿದ್ದ ಶೀಶಾನ್ ಪ್ರದೇಶವನ್ನು ಅವನ ವಶಕ್ಕೆ ನೀಡಿದ. ಹುಸೇನ್ ಮಿರ್ಜಾ ತನ್ನ ಅಪ್ಪ ಸಾಮ್ ಮಿರ್ಜಾನ ಸಿಂಹಾಸನವನ್ನೇರಿದ. ಅವನಿಗೆ ಇನ್ನೂ ಬಹಳಷ್ಟು ಮಕ್ಕಳಿದ್ದರು. ಅಪ್ಪನ ನಂತರ ಅವರು ಕಂದಹಾರ್‌ನಲ್ಲಿ ಉಳಿದುಕೊಂಡರು.

ಷಾ ತಹಮಾಸ್ಪನ ಮಕ್ಕಳು ಅವನನ್ನು ದ್ವೇಷಿಸತೊಡಗಿದರು. ಅವರು ಅವನ ಮೇಲಿನ ಸೇಡು ತೀರಿಸಲಾಗದೆ ಮುಂದೇನೂ ದಾರಿಕಾಣದೆ ತಮ್ಮ ವಶದಲ್ಲಿದ್ದ ಕಂದಹಾರ ಪ್ರದೇಶವನ್ನು ಅಕ್ಬರ್ ಬಾದಶಾಹನ ಕೈಗೆ ಒಪ್ಪಿಸಿ ತಾವು ಅವನ ಆಸ್ಥಾನದ ಸೇವೆಯಲ್ಲಿ ಸೇರಿಕೊಂಡರು. ಮೂರು ಮಕ್ಕಳು ಇನ್ನೂ ಇದ್ದರು. ಒಬ್ಬ ತೀರಿಕೊಂಡಿದ್ದ ಎರಡನೆಯವನು ಶೌರ್ಯಕ್ಕೆ ಹೆಸರಾದ ಮಿರ್ಜಾ ರುಸ್ತುಂ ಈಗ ಅಕ್ಬರ್ ಬಾದಶಾಹನ ಆಸ್ಥಾನದಲ್ಲಿ ಓರ್ವ ಸರದಾರನಾಗಿ ಐದುಸಾವಿರ ಸೈನ್ಯದ ತುಕಡಿಗೆ ನಾಯಕನಾಗಿದ್ದ. ಹತ್ತು ವರ್ಷಗಳ ಕಾಲ ಖಾನೆ ಖಾನಾನನ ಜೊತೆಗೆ ಇದ್ದ. ಅವನು ಇಪ್ಪತ್ತೈದು ವರ್ಷದ ತನಕ ಅವನು ತನ್ನ ಕೆಲಸದಾಕೆಯೊಂದಿಗೆ ಅನೈತಿಕ ಸಂಬಂಧವನ್ನು

ಬೆಳೆಸಿದ್ದ. ಆದರೆ ಧಾರ್ಮಿಕ ಪಂಡಿತರು, ವಿದ್ವಾಂಸರೊಂದಿಗೆ ಸಂಪರ್ಕಬೆಳೆಯಿಸಿ ಕೊಳ್ಳಲು ಅವನು ತೊಡಗಿದ ನಂತರ ತನ್ನ ತಪ್ಪು ತಿಳಿದುಕೊಂಡು ತೌಬಾ ಅಥವಾ ಪಶ್ಚಾತ್ತಾಪ ಪಟ್ಟುಕೊಂಡ. ಆ ಕಾಲದ ದೊಡ್ಡ ವಿದ್ವಾಂಸರಾಗಿದ್ದ ಷೇಖ್ ಅಬ್ದುಲ್ಲೈನ್‌ರ ಮಾರ್ಗದರ್ಶನದಲ್ಲಿ ತೌಬಾ ಓದಿ ದಾನಧರ್ಮ ಮಾಡಿದ.

ರೋಮ್ ಮತ್ತು ತುರ್ಕಿಸ್ಥಾನದ ಬಾದಶಾಹರು ಸೈನ್ಯವನ್ನು ಕಟ್ಟಿಕೊಂಡು ಸರಹದ್ದಿಗೆ ಬಂದರು. ಬಾದಶಾಹ ಅವರನ್ನು ಎದುರಿಸಲು ತನ್ನ ಸೈನ್ಯವನ್ನು ಕಳುಹಿಸಿದ. ಉಬೈದುಲ್ಲಾ ಖಾನ್ ಅಜ್ಜೆಕ್ ತುರ್ಕಿಸ್ಥಾನದ ಅಧಿಪತ್ಯವನ್ನು ಪಡೆದುಕೊಂಡಿದ್ದ. ಅದರ ನಂತರ ಖೊರಸಾನನ್ನು ಗೆಲ್ಲಲು ದೊಡ್ಡ ಸೈನ್ಯವನ್ನು ಕಟ್ಟಿಕೊಂಡು ಅಲ್ಲಿನ ಸಂಪತ್ತು ಸಾಮಾನುಗಳನ್ನು ಬಹಳಷ್ಟು ನಾಶಮಾಡಿದ. ಷಾ ತಹಮಾಸ್ಫ್ ಬೇರೆ ಉಪಾಯಕಾಣದೆ ಅವನನ್ನು ಎದುರಿಸಲು ಸರಹದ್ದಿಗೆ ಧಾವಿಸಬೇಕಾಯಿತು. ಇಬ್ಬರ ನಡುವೆ ಭೀಕರ ಯುದ್ಧ ನಡೆಯಿತು. ಆದರೆ ಅಜ್ಬೇಕಿಗಳ ಕೈ ಮೇಲಾಯಿತು. ಷಾ ತಹಮಾಸ್ಫನ ಸೈನ್ಯ ಚೆಲ್ಲಾಪಿಲ್ಲಿಯಾಗಿ ಓಡಿತು. ಸೈನಿಕರ ಪೈಕಿ ಕೆಲವರು ಪರ್ವತಗಳ ಹಿಂದೆ ಅಡಗಿಕೊಂಡರು. ಕೆಲವು ಸೈನಿಕರು ಗುಡ್ಡಗಳ ಹಿಂದೆ ಹೋಗಿ ಅಡಗಿದರು. ರಾತ್ರಿಹೊತ್ತು ತಮ್ಮ ಕುದುರೆಗಳೊಂದಿಗೆ ಅಲ್ಲೇ ಮಲಗಿದರು. ಫಕ್ಕನೆ ರಾತ್ರಿಯಲ್ಲಿ ನೋಡುವಾಗ ಹನ್ನೆರಡು ಸವಾರರು ಬಿಳಿ ಬಟ್ಟೆ ಹಾಕಿಕೊಂಡು ಶಾಹನ ಬೆನ್ನು ತಟ್ಟುತ್ತಿದ್ದರು. ಅವನಿಗೆ ಪ್ರೋತ್ಸಾಹ ನೀಡುತ್ತ 'ನಿನ್ನ ಮೇಲೆ ಅಲ್ಲಾಹನ ಕೃಪೆಯಿದೆ. ನೀನು ಹೆದರಬೇಡ. ವೈರಿಗಳನ್ನು ಎದುರಿಸು, ಯುದ್ಧ ಮಾಡು, ನಾವು ನಿನ್ನ ಬೆಂಬಲಕ್ಕಿದ್ದೇವೆ' ಎಂದು ಹೇಳಿದಂತೆ ಷಾ ತಹಮಾಸ್ಫ್ ಕನಸು ಕಂಡ. ಕನಸಿನಿಂದ ಎಚ್ಚರಗೊಂಡಾಗ ಅವನು ಬಹಳ ಸಂತಸಪಟ್ಟುಕೊಂಡಿದ್ದ.

ಕನಸಿನಿಂದ ಎಚ್ಚರಗೊಂಡ ಬಳಿಕ ಓಡಿದ ಸೈನ್ಯವನ್ನು ಮತ್ತು ಒಟ್ಟುಗೂಡಿಸಿದ. ಸರದಾರರನ್ನು ಉದ್ದೇಶಿಸಿ 'ನನ್ನ ಹಿರಿಯರು ನನಗೆ ಯುದ್ಧಮಾಡುವುದಕ್ಕೆ ಹುರಿದುಂಬಿಸಿ ಬೆಂಬಲಿಸಿದ್ದಾರೆ. ನಾನು ಈಗ ತಡೆದು ನಿಲ್ಲಲಾರೆ. ನೀವು ಕೂಡ ಕೂಡಲೇ ನನ್ನ ಜೊತೆಗೆ ಬನ್ನಿ' ಎಂದು ಹೇಳಿ ತನ್ನ ಸೈನಿಕರನ್ನು ಕರೆದುಕೊಂಡು ನುಗ್ಗಿದ. ಶಾಹೆ ದೀನ್ ಪನಾಹನು ಹಸಿದ ಹೆಬ್ಬುಲಿಯಂತೆ ವೈರಿಗಳ ಮೇಲೆ ಹರಿಹಾಯ್ದ. ಲೆಕ್ಕವಿಲ್ಲದಷ್ಟು ವೈರಿ ಸೈನಿಕರು ಹತರಾದರು. ಅವರಲ್ಲಿ ಅನೇಕರು ಗಾಯಗೊಂಡರು. ವೈರಿಗಳ ಕುದುರೆಗಳು, ಆನೆ ಮುಂತಾದ ಸೈನಿಕರ ಸವಾರಿ ಪ್ರಾಣಿಗಳು, ಸಾಮಾನು, ಸಂಪತ್ತು, ಆಹಾರ ಸಾಮಾಗ್ರಿಗಳು, ಶಸ್ತ್ರಾಸ್ತ್ರಗಳು ಮುಂತಾದವುಗಳನ್ನು ವಶಪಡಿಸಿಕೊಂಡರು. ವೈರಿ ಸೈನ್ಯವನ್ನು ಹಿಂಬಾಲಿಸುತ್ತಾ ಓಡಿಸುತ್ತಾ ಸಮರಖಂಡದ ಗಡಿಯ ತನಕ ಬೆನ್ನು ಹಿಡಿದರು. ನಂತರ ಶಾಹೆ ದೀನ್ ತಹಮಾಸ್ಫ್ ತನ್ನ ಎಂದಿನ ವಿಜಯೋತ್ಸವದ ವೈಭವದೊಂದಿಗೆ ತಬ್ರೇಜಿಗೆ ಬಂದು ಆಳ್ವಿಕೆ ನಡೆಸಿದ.

ರೋಮಿನ ಬಾದಶಾಹ ಸುಲ್ತಾನ್ ಸುಲೇಮಾನ್ ತಬ್ರೇಜ್ ಪ್ರಾಂತ್ಯವನ್ನು ವಶಪಡಿಸಿಕೊಳ್ಳುವ ಉದ್ದೇಶದಿಂದ ಇರಾನಿಗೆ ಪ್ರವೇಶಿಸಿದ್ದ. ಅವನ ಜೊತೆಯಲ್ಲಿ ಬಹಳ ಸಂಖ್ಯೆಯ ಸೈನ್ಯವೂ, ಶಸ್ತ್ರಾಸ್ತ್ರಗಳೂ, ಗುಂಡು ತೋಪುಗಳು ಅಸಂಖ್ಯಾತವಾಗಿ ಇದ್ದವು. ಶಾಹೆ ದೀನ್ ಪನಾಹ್ ತಹಮಾಸ್ಫ್ ಅವನೊಂದಿಗೆ ಯುದ್ಧಮಾಡದಿರುವಲ್ಲಿ ತನ್ನ ಒಳಿತಿದೆ ಎಂಬ ತೀರ್ಮಾನಕ್ಕೆ ಬಂದಿದ್ದ. ಅವನು ಮಜಬೂರಿಯಿಂದ ರೋಮನರ ಸೈನ್ಯವನ್ನು ತನ್ನಲ್ಲಿದ್ದ ಸಂಪೂರ್ಣ ಯುದ್ಧ ಸಾಮಗ್ರಿಗಳೊಂದಿಗೆ ಕಳುಹಿಸಿದ. ನಂತರ ಘರ್ಖುಲ್ ಬಾಜ್ ಎಂಬ ರೋಮ್ ಸೈನಿಕ ಬಂದಾಗ ಷಾ ತಹಮಾಸ್ಫ್ ತನ್ನನ್ನು ಒಪ್ಪಿಸಿ ಬಂಧನಕ್ಕೊಳಗಾದ. ಈ ರೋಮನರು ತಮಗೆ ಕೈಗೆ ಸಿಕ್ಕಿದ ಧಾನ್ಯ, ಹುಲ್ಲು ಮೇವು, ಪ್ರಾಣಿಗಳ ಆಹಾರ ಎಲ್ಲವನ್ನೂ ಸುಟ್ಟು ಬೂದಿಮಾಡಿದರು. ರೋಮನರ ಸೈನ್ಯವು ಇದರಿಂದಾಗಿ ಆಹಾರ ಸಿಗದೆ ಹಸಿವಿನಿಂದ ತತ್ತರಿಸಿದರು. ಕೆಲವು ಸೈನಿಕರು ತಬ್ರೇಜ್ ಕಡೆ ಹೋದರು. ತಬ್ರೇಜ್ ತಲಪುವುದಕ್ಕಿಂತ ಮೊದಲೇ ತಬ್ರೇಜಿ ಸೈನಿಕರ ಹಠಾತ್ ದಾಳಿಗೆ ತುತ್ತಾಗಿ ತಡೆದು ನಿಲ್ಲಬೇಕಾಯಿತು. ಯಾಕೆಂದರೆ ಅವರು ಅಲ್ಲಿ ಕಂದಕವನ್ನು ತೋಡಿ ರಸ್ತೆಗೆ ತಡೆಹಾಕಿದ್ದರು. ತಬ್ರೇಜಿ ಸೈನಿಕರು ಹಗಲು ಹೊತ್ತು ಕಂದಕದ ಎಡೆಯಲ್ಲಿ ಅವಿತಿದ್ದು ರಾತ್ರಿಹೊತ್ತು ಹೊರಬರುತ್ತಿದ್ದರು. ಕೆಲವೇ ದಿನಗಳಲ್ಲಿ ರೋಮನರ ಸೈನ್ಯದ ಐದು ಸಾವಿರ ಸೈನಿಕರನ್ನು ಹೀಗೆ ಉಪಾಯದಿಂದ ಕೊಂದು ಹಾಕಿದರು. ಸುಲ್ತಾನ್ ಸುಲೇಮಾನ್‌ನಿಗೆ ಈ ಸುದ್ದಿ ತಲಪಿದಾಗ ನಿರುಪಾಯನಾಗಿ ತನ್ನ ಸಾಮ್ರಾಜ್ಯಕ್ಕೆ ಹಿಂತಿರುಗಿ ಪ್ರಯಾಣಿಸಲಾರಂಭಿಸಿದ. ಶಾಹೆ ದೀನ್ ಪನಾಹ್ ತಹಮಾಸ್ಫ್ ಅವರನ್ನು ಹಗಲೂ ರಾತ್ರಿ ಅಟ್ಟಿಸಿಕೊಂಡು ಹೋಗಿ ತನ್ನ ಸೈನಿಕರಿಂದ ಸುತ್ತುವರಿಸಿದ. ಎದುರಿಗೆ ಸಿಕ್ಕಿದವರನ್ನು ಒಂದೋ ಸೆರೆ ಹಿಡಿದ ಇಲ್ಲವೇ ಕೊಂದು ಹಾಕಿದ. ಹೀಗೆ ಇದು ಮೂರು ನಾಲ್ಕು ಬಾರಿ ರೋಮ್ ಸಾಮ್ರಾಜ್ಯದ ಸಾಮ್ರಾಟರನ್ನು ಯುದ್ಧದಲ್ಲಿ ಎದುರಿಸಿದ. ಕಟ್ಟಕಡೆಗೆ ರೋಮನ್ ಸಾಮ್ರಾಟರ ಸೈನ್ಯವು ಸಂಧಾನಕ್ಕೆ ಬಂದು ಎರಡೂ ಕಡೆಯಿಂದ ಸಂಧಾನ ಕರಾರುಗಳನ್ನು ತಯಾರು ಮಾಡಿ ಒಪ್ಪಂದಕ್ಕೆ ಬಂದು ತಮ್ಮತಮ್ಮ ದೇಶಗಳಿಗೆ ಹಿಂತಿರುಗಿದರು. ಪರಸ್ಪರರ ಮಧ್ಯೆ ಸ್ನೇಹ ಸಂಬಂಧ ಖಾಯಮ್ಮಾಗಿ ಉಳಿಯಿತು. ನಂತರ ಶಾಹೆ ದೀನ್ ಪನಾಹ್ ತಹಮಾಸ್ಫನ ಸಾಮ್ರಾಜ್ಯಕ್ಕೆ ತೊಂದರೆಯುಂಟು ಮಾಡಲಿಲ್ಲ. ರೋಮನರ ಸೈನ್ಯದ ಒಂದು ಭಾಗವು ಕುರ್ದಿಸ್ಥಾನದ ಕಡೆ ಪ್ರಯಾಣ ಬೆಳೆಸಿತು. ಅಲ್ಲಿನ ಜನರಿಗೆ ತೊಂದರೆ, ಕಿರುಕುಳಗಳನ್ನು ನೀಡತೊಡಗಿದರು.

ಬಹಳ ಜನರನ್ನು ರೋಮಿನ ಚಕ್ರವರ್ತಿ ಸುಲ್ತಾನ್ ಸುಲೇಮಾನ್(ಕೈಸರ್) ಬಂಧಿಸಿದ. ಈಸಾ(ಜೀಸಸ್) ನಬಿಯ ಧರ್ಮದಿಂದ ಅವರನ್ನು ಬಿಡುಗಡೆಗೊಳಿಸಿ ಇಸ್ಲಾಂ ಧರ್ಮಕ್ಕೆ ಮತಾಂತರಿಸಿದ. ಇಸ್ಲಾಂ ಧರ್ಮದ ಪ್ರಚಾರ ಮಾಡಿದ. ಈ

ಬಾದಶಾಹನಿಗೆ ಗೀಲಾನ್ ದೇಶವನ್ನು ವಶಪಡಿಸಿಕೊಳ್ಳಬೇಕೆಂಬ ಆಸೆಮೂಡಿತು. ಆ ಕಾಲದಲ್ಲಿ ಇಲ್ಲಿನ ರಾಜಧಾನಿ ತಬ್ರೇಜ್ ಆಗಿತ್ತು. ಈ ಪ್ರದೇಶವನ್ನು ಗೆದ್ದ ನಂತರ ಘಜ್ನಿಯನ್ನು ಕೂಡ ವಶಪಡಿಸಿಕೊಂಡ. ಈ ರಾಜ್ಯದ ಗಡಿಯಲ್ಲಿ ಒಂದು ದಿಕ್ಕಿನಲ್ಲಿ ನದಿಯಿತ್ತು, ಇನ್ನುಳಿದ ಮೂರು ದಿಕ್ಕುಗಳಲ್ಲಿ ಕಾಡು, ಪರ್ವತಗಳಿದ್ದು ಪ್ರಯಾಣವು ಕಠಿಣವಾಗಿತ್ತು. ವಿರೋಧಿಗಳ ಸೈನ್ಯ ಅಲ್ಲಿಗೆ ದಾಳಿಯಿಡುವುದು ಕಷ್ಟಸಾಧ್ಯವಾಗಿತ್ತು. ಹಾದಿ ಬಹಳ ದುರ್ಗಮವಾಗಿತ್ತು. ಹೀಗೆ ಸುಲ್ತಾನನು ಮೆಲ್ಲಮೆಲ್ಲಗೆ ಉಪಾಯವಾಗಿ ಅಲ್ಲಿನ ದುರ್ಗಮ ಹಾದಿಯನ್ನು ಕ್ಷಯಿಸಿ ಜಯಶಾಲಿಯಾದ. ಈ ದಾಳಿಯಿಂದ ಅವನ ಅನೇಕ ಸೈನಿಕರು ಸಾವಿಗೀಡಾದರು. ಕೆಲಕಾಲದ ಬಳಿಕ ಗೀಲಾನ್‌ನ ಬಾದಶಾಹ ಖಾನ್ ಅಹ್ಮದ್‌ನನ್ನು ಸೋಲಿಸಿ ಅಲ್ಲಿನ ಫಾರಸ್(ಇರಾನ್)ದೇಶದ 'ಇಸ್ತರಖ್' ಕೋಟೆಯಲ್ಲಿ ಬಂಧನದಲ್ಲಿಟ್ಟ. ಅಲ್ಲಿ ಜನರಿಗೆ ಕಿರುಕುಳ ನೀಡುತ್ತಿದ್ದ ಬದ್ಮಾಶ್ ಗುಂಪುಗಳನ್ನು ಓಡಿಸಿ ಶಾಂತಿ ನೆಲೆಸುವಂತೆ ಮಾಡಿದ.

**ಸುಲ್ತಾನ್ ಬಾಯಜೀದನ ವಿವರಗಳು:**

ಇವನು ರೋಮಿನ ಸುಲ್ತಾನ್ ಸುಲೇಮಾನ್ ಬಾದಶಾಹನ ಮಗನಾಗಿದ್ದ. ಇವನು ಮುಂದೆ ತನ್ನ ತಂದೆಯ ವಿರೋಧಿಯಾಗಿ ಬದಲಾಗಿದ್ದ. ಸುಲ್ತಾನ್ ಸುಲೇಮಾನನಿಗೆ ಇಬ್ಬರು ಗಂಡು ಮಕ್ಕಳು. ಒಬ್ಬ ಸುಲ್ತಾನ್ ಸಲೀಮ್, ಇನ್ನೊಬ್ಬ ಸುಲ್ತಾನ್ ಬಾಯಜೀದ್. ಈ ಇಬ್ಬರು ರಾಜಕುಮಾರರು ಬೆಳೆದು ದೊಡ್ಡವರಾದ ನಂತರದಲ್ಲಿ ಸುಲೇಮಾನ್ ಬಾದಶಾಹ ಸುಲ್ತಾನ್ ಸಲೀಮನನ್ನು ತುಂಬ ಪ್ರೀತಿಸುತ್ತಿದ್ದ. ಬಾಯಜೀದನಿಗೆ ತಂದೆಯ ಈ ವರ್ತನೆಯಿಂದ ಕಸಿವಿಸಿಯಾಗಿ, ತನ್ನ ತಂದೆಯ ನಂತರ ರಾಜ್ಯಕ್ಕಾಗಿ ಆ ಕಾಲದಲ್ಲಿ ನಡೆಯುವಂತೆ ಸಹೋದರರು ತನ್ನನ್ನು ಕೊಲೆಮಾಡಲು ಹೆಸರು ಎಂದುಕೊಂಡು ಭಯದಿಂದ ತನ್ನ ಸುತ್ತ ತನ್ನ ನಂಬಿಗಸ್ಥರಾದ ಕೆಲವು ಅಂಗರಕ್ಷಕರನ್ನು ನೇಮಿಸಿದ್ದ. ತನ್ನ ತಂದೆಯ ಸಿಂಹಾಸನ ತನಗೇ ಸಿಗಬೇಕೆಂಬ ಹಂಬಲವೂ ಅವನಿಗಿತ್ತು. ಅವನು ಈ ವಿಷಯದ ಬಗ್ಗೆ ತನ್ನ ಆಪ್ತವಲಯದಲ್ಲಿ ತಿಳಿದ ಹಿರಿಯರ ಸಮ್ಮುಖದಲ್ಲಿ ಚರ್ಚಿಸಿ ತಾನು ಹೇಗೆ ಮುಂದುವರಿಯಬೇಕೆಂದು ಸಲಹೆ ಕೇಳಿದ್ದ. ಈ ವಿಷಯಗಳ ವರ್ತಮಾನ ಸುಲ್ತಾನ್ ಸಲೀಮನಿಗೆ ತಲಪಿದ ತನ್ನ ತಂದೆಗೆ ವಿಚಾರವನ್ನು ತಿಳಿಸಿದ. ಬಾಯಜೀದ್ ನಿಮ್ಮ ವಿರುದ್ಧ ಪಿತೂರಿ ನಡೆಸುತ್ತಿದ್ದಾನೆಂದು ತಂದೆಗೆ ತಿಳಿಸಿದ. ಹೀಗೆಯೇ ಮುಂದುವರಿಯಬಿಟ್ಟಲ್ಲಿ ಮುಂದೊಂದು ದಿನ ದೇಶದಲ್ಲಿ ಗೊಂದಲ, ದೊಂಬಿ ಉಂಟಾಗಿ ದಂಗೆ ನಡೆಯಬಹುದು ಎಂದೂ ಎಚ್ಚರಿಸಿದ. ಸುಲ್ತಾನ ತನ್ನ ಸೈನಿಕರನ್ನು ಕಳುಹಿಸಿ ಮಗನನ್ನು ಕರೆಸಲು ಬಯಸಿದ. ಬಾಯಜೀದ ಸೈನಿಕರನ್ನು ತಾನು ಎದುರಿಸಲಾರೆನೆಂಬ ಭಯದಿಂದ ಷಾ ತಹಮಾಸ್ಫನಿಗೆ ಶರಣಾಗಿ ಆಶ್ರಯವನ್ನು ಪಡೆದ. ಷಾ ತಹಮಾಸ್ಫ್ ಅವನನ್ನು

ಗೌರವದಿಂದ ಕಂಡು ಅವನಿಗೆ ಸಹಾಯ ಮಾಡುವ ಆಶ್ವಾಸನೆಯನ್ನು ನೀಡಿ, ಅಗತ್ಯವಿರುವ ಸಕಲ ಸೌಕರ್ಯವನ್ನು ಒದಗಿಸಿದ. ಅವನನ್ನು ಸಂತಸದಿಂದ ಇರಿಸಲು ತನ್ನ ಜೊತೆಗೆ ತೋಟಗಳಲ್ಲಿ ವಿಹಾರಾರ್ಥ ಕರೆದುಕೊಂಡು ಹೋಗುತ್ತಿದ್ದ. ಅವನನ್ನು ತನ್ನ ಆಸನದಲ್ಲಿ ಕೂರಿಸಿ ಪ್ರೀತಿಯಿಂದ ಊಟ ಉಪಚಾರಗಳನ್ನು ಮಾಡಿಸುತ್ತಿದ್ದ. ಸಿಹಿ ತಿಂಡಿಗಳನ್ನು ತಿನ್ನಿಸುತ್ತಿದ್ದ.

ಆದರೆ ಇಷ್ಟೆಲ್ಲ ಆದರಾತಿಥ್ಯವನ್ನು ಮಾಡಿಯೂ ಕೂಡ ಬಾಯಜೀದನ ಅಹಂಕಾರ, ಹಮ್ಮುಬಿಮ್ಮುಗಳಲ್ಲಿ ಬದಲಾವಣೆಯುಂಟಾಗಲಿಲ್ಲ. 'ಈ ಅಹಂಕಾರಿ, ಉದ್ಧಟತನದ ಇಂತಹ ವ್ಯಕ್ತಿಗೆ ಯಾಕಿಷ್ಟು ಆದರ ತೋರುತ್ತೀರಿ?' ಎಂದು ತಹಮಾಸ್ಫನಿಗೆ ದರ್ಬಾರಿನ ಹಿರಿಯರು ಕೇಳುತ್ತಿದ್ದರು. ಇದಕ್ಕೆ ಶಾಹೆ ದೀನ್ ಪನಾಹ ತಹಮಾಸ್ಫ್ ಉತ್ತರವಾಗಿ 'ಇವನೊಬ್ಬ ರಾಜಕುಮಾರನಾಗಿದ್ದು ತನ್ನನ್ನು ತಾನು ರೋಮಿನ ವಂಶಪಾರಂಪರ್ಯ ದಲ್ಲಿ ಕೈಸರ್ ಚಕ್ರವರ್ತಿಯಾಗುವವನೆಂಬ ಗರ್ವವಿದೆ. ತನ್ನ ದೇಶವನ್ನು ಬಿಟ್ಟು ಇಷ್ಟು ದೂರ ನನಗೆ ಶರಣಾಗತನಾಗಿ ಆಗಮಿಸಿದ್ದಾನೆ. ಆದುದರಿಂದ ಅವನಿಗೆ ಸಹಾಯ ಮಾಡುವುದು ನನ್ನ ಕರ್ತವ್ಯವೆಂದು ನಂಬಿದ್ದೇನೆ' ಎಂದು ದರ್ಬಾರಿಗಳನ್ನು ಸಮಾಧಾನಪಡಿಸಿದ್ದ.

**ಬಾಯಜೀದನ ಬಂಧನ ಮತ್ತು ಅದರ ಪರಿಣಾಮಗಳು:**

ತನ್ನ ದೇಶದ ಕಾನೂನು ಶಿಸ್ತುಗಳಿಗೆ ಅಡಚಣೆಯಾಗಿ ಗೊಂದಲವುಂಟಾಗ ಬಹುದೆಂಬ ಕಾರಣಕ್ಕಾಗಿ ಸುಲ್ತಾನ್ ಸುಲೇಮಾನ್ ತನ್ನ ಆಪ್ತರಲ್ಲಿ ಒಬ್ಬನಾದ ಮುಹಮ್ಮದ್ ಅರಬನನ್ನು ತನ್ನ ಮಗನನ್ನು ಹಿಡಿದು ತರಲು ಕಳುಹಿಸಿದ. ಬಾಯಜೀದನಿಗೆ ಈ ಸಂಗತಿ ತಿಳಿದಾಗ ಉಪಾಯದಿಂದ ಮುಹಮ್ಮದ್ ಅರಬನನ್ನು ಕೊಲ್ಲಿಸಿದ. ಬಾದಶಾಹನಿಗೆ ಇದು ತಿಳಿದಾಗ ಎರಡು ಸಾವಿರ ರೋಮನ್ ಸೈನಿಕರ ತಂಡವನ್ನು ಅವನನ್ನು ಹಿಡಿದು ತರಲು ಕಳುಹಿಸಿದ. ತನ್ನ ರಾಜ್ಯದ ಗಡಿಯನ್ನು ಕೂಡ ಹೆಚ್ಚಿನ ಭದ್ರತೆಯನ್ನು ನೀಡಿ ಸಂಪೂರ್ಣ ಬಂದೋಬಸ್ತಿಗೆ ಒಳಪಡಿಸಿದ. ಈ ಸೈನಿಕರು ಬಾಯಜೀದನನ್ನು ಬಂಧಿಸಿ ಬಾದಶಾಹ ಸುಲ್ತಾನ್ ಸುಲೇಮಾನನ ಮುಂದೆ ಹಾಜರುಪಡಿಸಿದರು. ಅವನ ಮಹಲಿನಲ್ಲಿ ಕಬ್ಬಿಣದ ಒಂದು ದೊಡ್ಡ ಪಂಜರವನ್ನು ನಿರ್ಮಿಸಿ ಅದರಲ್ಲಿ ಬಾಯಜೀದನನ್ನು ಬಂಧನದಲ್ಲಿರಿಸಿದ. ಇವನು ಸೆರೆಯಿಂದ ತಪ್ಪಿಸಿಕೊಂಡು ಹೋಗದಂತೆ ತಡೆಯಲು ರಕ್ಷಕರ ತಂಡವನ್ನು ನಿಯಮಿಸಿದ. ಇವನ ಬಗ್ಗೆ ಶಿಕ್ಷೆಯನ್ನು ಕಾನೂನು ಜಾರಿಗೊಳಿಸುವ ತನಕ ಕಣ್ಣಿಟ್ಟು ಕಾಯಬೇಕೆಂದು ರಕ್ಷಕರಿಗೆ ಆದೇಶವನ್ನು ನೀಡಲಾಗಿತ್ತು. ನಂತರ ಸುಲ್ತಾನ್ ಸುಲೇಮಾನ್ ತನ್ನ ವಿದ್ರೋಹಿ ಮಗನಿಗೆ ಆಶ್ರಯವನ್ನು ನೀಡಿದ ಷಾ ತಹಮಾಸ್ಫನಿಗೆ ಇದರ ಪರಿಣಾಮವನ್ನು

ಎದುರಿಸಬೇಕಾಗುತ್ತದೆ ಎಂಬ ಎಚ್ಚರಿಕೆಯನ್ನು ನೀಡಿದ. ರಾಜಕುಮಾರ ಸುಲ್ತಾನ್ ಸಲೀಮನಿಗೆ ಈ ಎಲ್ಲ ಬೆಳವಣಿಗೆಗಳ ಮಾಹಿತಿ ದೊರಕಿತ್ತು.

ಸುಲ್ತಾನ್ ಸಲೀಮನಿಗೆ ಈ ಸುದ್ದಿ ತಿಳಿದಾಗ ತುಂಬ ಸಂತಸಪಟ್ಟುಕೊಂಡ. ಶಾಹೆ ದೀನ್ ಪನಾಹ ತಹಮಾಸ್ಫನನ್ನು ರೇಗಿಸುವ ಸಲುವಾಗಿ 'ಪಿತೂರಿ ಮಾಡುವ ಕುತಂತ್ರಿಗೆ ಆಶ್ರಯ ನೀಡಿದ್ದಕ್ಕಾಗಿ ಅಭಿನಂದನೆಗಳು' ಎಂದು ಗೇಲಿಮಾಡಿ ಕೆಲವು ಉಡುಗೊರೆಗಳನ್ನು ಕಳುಹಿಸಿಕೊಟ್ಟ.

ರೋಮಿನ ನ್ಯಾಯಾಲಯದಲ್ಲಿ ನ್ಯಾಯಮೂರ್ತಿ ಈ ಬಗ್ಗೆ ವಿವರವಾಗಿ ತಿಳಿದುಕೊಂಡು ತನ್ನ ತೀರ್ಪಿನಲ್ಲಿ ಈ ವ್ಯಕ್ತಿಯು ಮರಣದಂಡನೆಯ ಶಿಕ್ಷಾರ್ಹನಾಗಿದ್ದಾನೆಂದು ಅಭಿಪ್ರಾಯಪಟ್ಟ. ಇವನನ್ನು ಬಂಧಮುಕ್ತನನ್ನಾಗಿ ಮಾಡದೆ ಮರಣ ಶಿಕ್ಷೆಯನ್ನು ನೀಡಿ ಕೊಲ್ಲಬೇಕೆಂದು ತೀರ್ಮಾನಿಸಲಾಯಿತು. ಸುಲ್ತಾನ್ ಸಲೀಮ್ ಸರದಾರರನ್ನು ಕರೆದುಕೊಂಡು ಗಲ್ಲಿಗೇರಿಸುವ ಮೂಲಕ ಪಾಶಿ ಶಿಕ್ಷೆಯನ್ನು ನೀಡುವ ಜಲ್ಲಾದನ ಬಳಿಗೆ ಹೋಗಿ ಬಾಯಜೀದನನ್ನು ನೇಣುಗಂಬದ ಕುಣಿಕೆಯಲ್ಲಿ ತೂಗಿ ಹಾಕಲು ನೀಡಿದ ಸುಲ್ತಾನನ ಆಜ್ಞೆಯ ಪತ್ರವನ್ನು ನೀಡಿದ. ಎಲ್ಲರ ಎದುರು ಈ ಪತ್ರವನ್ನು ಓದಿ ಹೇಳಲಾಯಿತು. ಒಂದು ದಿನವನ್ನು ನಿಷ್ಕರ್ಷೆ ಮಾಡಿ ಅಂದು ಪಾಶಿ ಶಿಕ್ಷೆಯನ್ನು ನೀಡುವ ವಿಚಾರವನ್ನು ಬಹಿರಂಗಪಡಿಸಲಾಯಿತು. ಸಾರ್ವಜನಿಕರು ಈ ಶಿಕ್ಷೆಯನ್ನು ನೀಡುವುದನ್ನು ವೀಕ್ಷಿಸಲು ಆ ದಿನ ಸೇರಬೇಕೆಂದು ಅಹ್ವಾನಿಸಲಾಯಿತು. ಬಾಯಜೀದನ ತಲೆಯನ್ನು ಮುಚ್ಚುವ ಬಟ್ಟೆಯನ್ನು ತೊಡಿಸಲಾಯಿತು. ಕುತ್ತಿಗೆಗೆ ಕುಣಿಕೆಯನ್ನು ಹಾಕಲಾಯಿತು. ಕುಣಿಕೆಯನ್ನು ಥಟ್ಟನೆ ಎಳೆದ ಕೂಡಲೇ ಕುತ್ತಿಗೆಗೆ ಕುಣಿಕೆಯ ಹಗ್ಗ ಬಿಗಿಯಲ್ಪಟ್ಟು ಅಪರಾಧಿಯ ಪ್ರಾಣಹಾರಿ ಹೋಯಿತು. ಅವನ ಶವವನ್ನು ಶವಪೆಟ್ಟಿಗೆಯಲ್ಲಿಟ್ಟು ರೋಮ್ ಸಾಮ್ರಾಜ್ಯದ ಹೊರ ಪ್ರದೇಶದಲ್ಲಿ ಎಸೆಯಲಾಯಿತು. ಹೀಗೆ ಸಾಮ್ರಾಜ್ಯಕ್ಕೆ ಎದುರಾದ ದೊಡ್ಡದೊಂದು ಪಿತೂರಿ ಕೊನೆಗೊಂಡಿತು.

**ಬಗ್ದಾದಿನ ಮೇಲಿನ ಎರಡನೆಯ ಬಾರಿ ದಾಳಿ ಮತ್ತು ವಿಜಯದ ವಿವರಗಳು:**

ಅರಬ್ ಇರಾಕ್ ದೇಶವೆನಿಸಲ್ಪಟ್ಟಿದ್ದ ಬಗ್ದಾದಿನ ಮೇಲೆ ಹಿಂದೆ ಪ್ರಥಮ ಬಾರಿಗೆ ಸುಲ್ತಾನ್ ಹೈದರ್ ಅಲ್ ಹಸನ್‌ನ ಮಗ ಷಾ ಇಸ್ಮಾಯಿಲ್ ದಾಳಿನಡೆಸಿ ಜಯಗಳಿಸಿದ್ದ. ಕೆಲಕಾಲದ ನಂತರ ಆಳ್ವಿಕೆಯ ಜವಾಬ್ದಾರಿ ವಹಿಸಿದ್ದ ಅಧಿಕಾರಿ ಬಂಡಾಯವೆದ್ದಿದ್ದ. ಷಾ ತಹಮಾಸ್ಫ್ ಅಲ್ಲಿಗೆ ತನ್ನ ಸೈನ್ಯವನ್ನು ಕಳುಹಿಸಿ ಎರಡನೆಯ ಬಾರಿ ಬಗ್ದಾದನ್ನು ವಶಪಡಿಸಿಕೊಂಡ. ಜುಲ್ಫಿಕಾರ್ ಎಂಬ ಷಾ ತಹಮಾಸ್ಫನ ನಂಬಿಕಸ್ಥ ಪ್ರಮುಖ ಸರದಾರನನ್ನು ಬಗ್ದಾದಿನ ಕೋಟೆಯ ಅಧಿಪತಿಯನ್ನಾಗಿ ನೇಮಿಸಲಾಗಿತ್ತು. ಜುಲ್ಫಿಕಾರ್

ತನ್ನ ಅಧಿಪತ್ಯದ ಅವಧಿಯಲ್ಲಿ ಬಗ್ದಾದಿನ ಸರ್ವತೋಮುಖ ಅಭಿವೃದ್ಧಿ ಮಾಡಿ, ಪ್ರಜೆಗಳನ್ನು ಸುಖಸಂತೋಷದಿಂದ ಬದುಕುವಂತೆ ವ್ಯವಸ್ಥೆಯನ್ನು ಮಾಡಿದ್ದ. ದೇಶವು ಅಭಿವೃದ್ಧಿಯ ಉನ್ನತ ದರ್ಜೆಗೇರಿದಾಗ ಮತ್ತು ಆಳುವವರಿಗೂ ಅತ್ಯಂತ ಹೆಚ್ಚು ಲಾಭವಾಗುತ್ತಿದ್ದ ಸಂದರ್ಭದಲ್ಲಿ ಕೆಲವು ಜನರನ್ನು ತನ್ನ ಬೆಂಬಲಕ್ಕೆ ಪಡೆದುಕೊಂಡು ಬಗ್ದಾದಿನ ಬಾದಶಾಹನಾಗುವ ಕನಸನ್ನು ಜುಲ್ಫಿಕಾರ್ ಕಾಣತೊಡಗಿದ. ಜೊತೆಗೆ ಬಾದಶಾಹರ ವಿರುದ್ಧ ಬಂಡಾಯಕ್ಕೆ ಅಣಿಗೊಳಿಸಿದ್ದ. ಷಾ ತಹಮಾಸ್ಫ್ ಇವನ ಅಹಂಕಾರ ತಡೆಯಲು ತನ್ನ ಬೃಹತ್ ಸೈನ್ಯವನ್ನು ಕಳುಹಿಸಿ ಬಂಧಿಸಿ ತರಲು ಬಯಸಿದ. ಬಾದಶಾಹನ ಸೈನಿಕರು ಕೋಟೆಯನ್ನು ಸುತ್ತುವರಿದು ಮುತ್ತಿಗೆ ಹಾಕಿದರು. ಹಗಲೂ ರಾತ್ರಿ ಯುದ್ಧ ನಡೆಯಿತು. ಆದರೆ ಬಾದಶಾಹನ ಸೈನ್ಯ ಮುಂದೊತ್ತಲು ಸಾಧ್ಯವಾಗಲಿಲ್ಲ. ಯಾಕೆಂದರೆ ಕೋಟೆಯ ಒಳಗೆ ಹೋಗುವ ಹಾದಿಗಳೆಲ್ಲವೂ ಮುಚ್ಚಲಾಗಿತ್ತು. ಬಾದಶಾಹನ ಸೈನಿಕರು ಅಲ್ಲೇ ನಿಂತು ಒಂದೂವರೆ ವರ್ಷಗಳ ಕಾಲ ಕಳೆದಿತ್ತು. ಇದರಿಂದಾಗಿ ಆಹಾರ ಸರಿಯಾಗಿ ಸರಬರಾಜು ಆಗದೆ ಸೈನಿಕರಲ್ಲಿ ಅಸಮಾಧಾನ ಹುಟ್ಟಲು ತೊಡಗಿತು. ಯುದ್ಧದ ಸವಾರಿಗಳಾದ ಕುದುರೆ, ಆನೆ ಮುಂತಾದ ಪ್ರಾಣಿಗಳು ಒಂದೊಂದಾಗಿ ಸಾಯಲು ತೊಡಗಿದ್ದವು. ಬಾದಶಾಹನ ಸರದಾರರು ಷಾ ತಹಮಾಸ್ಫನಿಗೆ ಹೀಗೆಯೇ ಪರಿಸ್ಥಿತಿ ಮುಂದುವರಿದಲ್ಲಿ ಸೈನ್ಯವು ಸಂಪೂರ್ಣವಾಗಿ ನಾಶವಾಗುವುದು ಖಂಡಿತಾ ಎಂದರು. ಈ ಕೆಲಸ ನಮ್ಮಿಂದ ಸಾಧ್ಯವಾಗದು ಎಂದೂ ಹೇಳಿದರು. ಮುಂದೆ ದೇಶದ ಮರ್ಯಾದೆ, ಘನತೆ, ನಿಮ್ಮ ಕೈಯಲ್ಲಿದೆ. ಸರದಾರರು ಮೀರ್ ಘಯಾಸುದ್ದೀನ್ ಮನ್ಸೂರನ ಬಗ್ಗೆ ತಿಳಿಸಿದರು. ಈ ಕೆಲಸವನ್ನು ಮಾಡುವ ಶಕ್ತಿ ಸಾಮರ್ಥ್ಯವಿರುವುದರಿಂದ ಇವನ ಕೈಗೆ ಒಪ್ಪಿಸಿಬಿಡುವುದರಿಂದ ನಮ್ಮ ಕೆಲಸ ಸಾಧಿಸಬಹುದಾಗಿದೆ. ಯಾಕೆಂದರೆ ಈತ ದೊಡ್ಡ ಜಾದೂ ಮಂತ್ರಗಾರನಾಗಿದ್ದ. ಷಾ ತಹಮಾಸ್ಫನಿಗೆ ಈ ಸುದ್ದಿ ತಲಪಿದಾಗ ಅವನನ್ನು ತನ್ನ ಅರಮನೆಗೆ ಕರೆಸಿದ. ಅವನಿಗೆ ಎಲ್ಲ ವಿಷಯಗಳನ್ನು ವಿಷದವಾಗಿ ತಿಳಿಸಲಾಯಿತು. ಈ ವಿಚಾರವನ್ನೆಲ್ಲ ಕೇಳಿದ ನಂತರ ಆತ ಸ್ವಲ್ಪಹೊತ್ತು ಸುಮ್ಮನಿದ್ದು ಮತ್ತೆ, ಪವಿತ್ರ ಕುರಾನ್ ಗ್ರಂಥವನ್ನು ತರಿಸಿ ಅದರ ಮೇಲೆ ಆಣೆಯಿಟ್ಟು 'ನನ್ನ ಇಡೀ ಜೀವಮಾನದಲ್ಲಿ ತಿಳಿದಿದ್ದರೂ ಜಾದೂ ಮಂತ್ರವನ್ನು ಎಲ್ಲೂ ಪ್ರಯೋಗಿಸಿಲ್ಲ. ನೀವು ಹೇಳಿದ್ದರಿಂದ ಇಂದು ಈ ಕೆಲಸವನ್ನು ಮಾಡಲು ಒಪ್ಪಿದ್ದೇನೆ. ಈ ಕೆಲಸವನ್ನು ನನ್ನ ಹೊರತು ಇನ್ನಾರಿಂದಲೂ ಮಾಡಲು ಸಾಧ್ಯವಿಲ್ಲ' ಎಂದ. ಅವನು ಒಂದು ಮೇಣದ ಬತ್ತಿಯ ಮೇಣವನ್ನು ತರಿಸಿದ ಅದನ್ನು ಹಿಂಡಿ ಮುದ್ದೆ ಮಾಡಿ ಮನುಷ್ಯನ ಆಕಾರಕ್ಕೆ ಮಾಡಿದ. ಒಂದು ಬಟ್ಟೆಯಲ್ಲಿ ಅದೇನೋ ಬರೆದು ಮೇಣದ ಮೂರ್ತಿಯ ಹೊಟ್ಟೆಯೊಳಗೆ ಇಟ್ಟ. ಕೆಲವು ಸೂಜಿಗಳನ್ನು ಮೂರ್ತಿಯ ದೇಹದಲ್ಲಿ ಅಲ್ಲಲ್ಲಿ ಚುಚ್ಚಿದ. ಸಮಯ ತಿಳಿಯುವುದಕ್ಕೆ ಒಂದು ಕನ್ನಡಿಯಂತಹ ಗಡಿಯಾರವನು

ಮೂರ್ತಿಯ ಬಳಿಯಲ್ಲಿ ಆಸನದ ಮೇಲಿಟ್ಟ. ನಂತರ ಷಾ ತಹಮಾಸ್ಫನನ್ನು ಕರೆಸಿ 'ನೀವು ಪ್ರಾಮಾಣಿಕರಾಗಿದ್ದರೆ ಇದರ ಪರಿಣಾಮ ನಿಮ್ಮ ಅನುಭವಕ್ಕೆ ಒಂದು ಗಂಟೆಯಿಂದ ಹನ್ನೆರಡು ಗಂಟೆಗಳ ಮಧ್ಯೆ ಈ ಕೆಲಸದಿಂದ ಈ ಮೂರ್ತಿಯ ತಲೆ ದೇಹದಿಂದ ಪ್ರತ್ಯೇಕವಾಗುವುದು. ಹೀಗೆಯೇ ಅವನ ತಲೆಯೂ ದೇಹದಿಂದ ಪ್ರತ್ಯೇಕವಾಗುವುದು' ಎಂದು ಹೇಳಿದ.

ಹೀಗೆ ಹೇಳಿದ ನಂತರ ಎಂದಿನಂತೆ ತನ್ನ ನಮಾಜು, ಕುರಾನ್ ಪಠಣದಲ್ಲಿ ತಲ್ಲೀನನಾದ. ಶಾಹೆ ದೀನ್ ಪನಾಹ ತಹಮಾಸ್ಫನು ಕನ್ನಡಿಯಲ್ಲಿ ನೋಡುತ್ತಿದ್ದಂತೆ ಅದೇ ಸಮಯದ ಲೆಕ್ಕಾಚಾರದಂತೆ ಜುಲ್ಫಿಕಾರನ ತಲೆ ದೇಹದಿಂದ ಪ್ರತ್ಯೇಕವಾಯಿತು. ಮರುದಿನ ಷಾ ತಹಮಾಸ್ಫನು ದರ್ಬಾರಿಗೆ ಬಂದಾಗ ಎಲ್ಲ ದರ್ಬಾರಿಗಳು ಆಸ್ಥಾನದಲ್ಲಿ ಹಾಜರಾಗಿದ್ದರು. ಥಟ್ಟನೆ ನೋಡುವಾಗ ಒಬ್ಬ ವ್ಯಕ್ತಿ ಆಗಮಿಸಿದ. 'ಕೋಟೆಯ ಹೆಬ್ಬಾಗಿಲು ತೆರೆದಿದೆ. ಕೋಟೆಯಿಂದ ಓರ್ವ ಕುದುರೆ ಸವಾರ ತನ್ನ ಕೈಯಲ್ಲಿ ಒಂದು ಪೊಟ್ಟಣವನ್ನು ಹಿಡಿದುಕೊಂಡು ಅವನು ಓಡುತ್ತ ಬಾದಶಾಹನ ಬಳಿ ಬಂದ. ಆ ಪೊಟ್ಟಣದ ಜೊತೆಗಿದ್ದ ಒಂದು ಮನವಿ ಪತ್ರವನ್ನು ಬಾದಶಾಹನಿಗೆ ನೀಡಿದ. ಪೊಟ್ಟಣ ತೆರೆದು ನೋಡಿದಾಗ ಅದರೊಳಗೆ ಜುಲ್ಫಿಕಾರನ ಕತ್ತರಿಸಿದ ತಲೆಯಿತ್ತು. ಪತ್ರವನ್ನು ಓದಿದಾಗ 'ನಾನು ಇಂತಹ ಸರದಾರನ ಮಗಳು. ಹಜ್ರತ್ ಷಾ, ನೀವು ನೆನಪುಮಾಡಿಕೊಳ್ಳಿ, ನೀವು ನನ್ನನ್ನು ಜುಲ್ಫಿಕಾರನಿಗೆ ನಿಕಾಹ ಮಾಡಿ ಕೊಟ್ಟಿದ್ದೀರಿ. ಅವನು ನಿಮ್ಮ ಆಸ್ಥಾನದಲ್ಲಿದ್ದು ಸಾಕಷ್ಟು ಮಾನ, ಮರ್ಯಾದೆ, ಗೌರವಗಳನ್ನು ಪಡೆಯಲು ಸಾಧ್ಯವಾಯಿತು. ನೀವು ಅವನನ್ನು ತಮ್ಮ ಮಗನೆಂದು ತಿಳಿದು ಪಾಲನೆ ಪೋಷಣೆಗೆ ನೆರವಾಗಿದ್ದೀರಿ. ಆದರೆ ಆತ ನಿಮ್ಮ ಉಪಕಾರವನ್ನು ಮರೆತು ನಿಮ್ಮನ್ನು ದ್ವೇಷಿಸತೊಡಗಿ, ಕೊಲ್ಲಲು ಹವಣಿಸಿದ. ನನಗೆ ಅವನನ್ನು ಕಂಡರೆ ಜಿಗುಪ್ಸೆಯಾಗ ತೊಡಗಿತ್ತು. ರಾತ್ರಿ ಹೊತ್ತು ನಿದ್ದೆಯಲ್ಲಿ ಅವನ ತಲೆ ತುಂಡರಿಸಲಾದ ದೇಹವನ್ನು ಕನಸಿನಲ್ಲಿ ಕಂಡೆ. ಈ ಘಟನೆಯ ನಂತರ ಪ್ರಜೆಗಳು ಶಾಂತಿಯಿಂದ ಇಲ್ಲಿ ನೆಲೆಸಿದ್ದಾರೆ' ಎಂದು ತಿಳಿದುಬಂತು. ಬಗ್ದಾದಿನ ಕೋಟೆಯ ಮೇಲೆ ಎರಡನೆಯ ವಿಜಯಪ್ರಾಪ್ತಿಯಾಯಿತು. ಬಾದಶಾಹ ತಹಮಸ್ಫ್ ಅಲ್ಲಿನ ಸಿಂಹಾಸನವನ್ನೇರಿ ಕೂತ. ಪ್ರಜೆಗಳು ಬಾದಶಾಹನನ್ನು ಕಂಡು ಸಂತಸಗೊಂಡರು. ಎಲ್ಲರ ಸಂಕಷ್ಟಗಳೂ ದೂರವಾದವು. ಶಾಹೆ ದೀನ್ ಪನಾಹ್ ಬಾದಶಾಹ ಷಾ ತಹಮಸ್ಫ್ ಕೆಲಕಾಲ ಅಲ್ಲಿ ಆರಾಮವಾಗಿದ್ದು ನಂತರ ದೇಶಪರ್ಯಟನೆಯನ್ನು ಮಾಡಿ ಸ್ಥಿತಿಗತಿಗಳನ್ನು ಪರಾಮರ್ಶೆಮಾಡಿ ಇಮಾಮ್ ಅಬ್ಬಾಸರ ರೌಜಾ(ಗೋರಿ) ಮತ್ತು ಎಲ್ಲ ಇಮಾಮರ ಗೋರಿಗಳನ್ನು ಸಂದರ್ಶಿಸಿದ. ಎಲ್ಲ ಗೋರಿ ಕಟ್ಟಡಗಳ ದುರಸ್ಥಿಗೆ ವ್ಯವಸ್ಥೆಯನ್ನು ಮಾಡಿದ. ಅಲ್ಲಿದ್ದ ಎಲ್ಲ ಭಿಕ್ಷುಕರು, ಫಕೀರರಿಗೆ ನೆರವು

ನೀಡಿದ ಬಳಿಕ ಹಿಂತಿರುಗಿ ತನ್ನ ಸಿಂಹಾಸನವನ್ನೇರಿ ಸಮ್ರಾಜ್ಯದ ಆಳ್ವಿಕೆಯನ್ನು ನಡೆಸಿದ.

**ಮಿರ್ಜಾ ಇಸ್ಮಾಯಿಲರ ಹೇರಾತಿಗೆ ಪ್ರಯಾಣ ಮತ್ತು ಕೆಹ್‌ಕಹಾ ಕೋಟೆಗೆ ಆಗಮಿಸಿದ ವಿವರಗಳು:**

ಷಾ ಆಲಂಪನಾನಿಗೆ ೧೭ ಗಂಡು ಮಕ್ಕಳಿದ್ದರು. ಹಿರಿಯ ಮಗ ಸುಲ್ತಾನ್ ಮುಹಮ್ಮದ್ ಖುದಾಯಿ ಬಂದಾ ಆಗಿದ್ದ. ಇವನ ಯೌವನದಲ್ಲಿ ಅದೇನು ಕಾರಣವೋ ಏನೋ ಕಣ್ಣು ಮಂಜಾಗುತ್ತ ಬಂದು ಕುರುಡನಾದ. ಅನೇಕ ಹಕೀಮರು, ವೈದ್ಯರುಗಳಿಂದ ಔಷಧಮಾಡಿದರೂ ಕೂಡ ದೃಷ್ಟಿ ಸರಿಯಾಗದೆ ಔಷದೋಪಚಾರವನ್ನು ನಿಲ್ಲಿಸಿದರು. ಬಾದಶಾಹ ಮಾರ್ಖುಂದಾನ್ ಪಂಗಡದ ನಾಯಕನ ಮಗಳೊಂದಿಗೆ ಅವನ ನಿಕಾಹ್ ನಡೆಯಿತು. ನಂತರ ಅವನನ್ನು ಹೇರಾತಿನ ಮುಹಮ್ಮದ್ ಖಾನ್ ಶರ್ಫುದ್ದೀನ್ ಓಗಲಾಯಿಯ ಬಳಿಗೆ ಕಳುಹಿಸಲಾಯಿತು. ಬಹಳ ಸಮಯದ ತನಕ ಆತ ಹೇರಾತಿನಲ್ಲಿದ್ದ. ಅವನಿಗೆ ಹಲವು ಮಕ್ಕಳಾದವು. ಸ್ವತಃ ರಾಜಕುಮಾರನಾಗಿದ್ದ ಇಸ್ಮಾಯಿಲ್ ಮಿರ್ಜಾ ಓರ್ವ ತಿಳುವಳಿಕೆಯ ವ್ಯಕ್ತಿಯಾಗಿದ್ದ. ಸಾಹಿತ್ಯದ ಕಾವ್ಯ ಪ್ರಕಾರದಲ್ಲಿ ಇವನು ಪ್ರಖ್ಯಾತನಾಗಿದ್ದು ಮುಖ್ಯವಾಗಿ ಗಜಲ್, ಖಸೀದಾಗಳು ಬಹಳ ಜನಪ್ರಿಯವಾಗಿತ್ತು.

ಮಿರ್ಜಾ ಇಸ್ಮಾಯಿಲ್ ಬಹಳ ಶೂರನೂ ಬಲಶಾಲಿಯೂ ಆಗಿದ್ದ. ಒಮ್ಮೆ ಆತ ರೋಮಿನ ತಬ್ರೇಜಿನ ಬಳಿ ಯುದ್ಧಮಾಡಲು ವೈರಿಗಳು ಬಂದಿದ್ದರು. ಅವನು ಈ ವೈರಿಗಳ ಸೈನ್ಯವನ್ನು ಹೊಡೆದೋಡಿಸುತ್ತ ಒಂದು ನದಿಯ ಬಳಿಗೆ ಉಪಾಯದಿಂದ ಬರುವಂತೆ ಮಾಡಿ ನೀರಿನಲ್ಲಿ ಮುಳುಗಿ ಸಾಯುವಂತೆ ಮಾಡಿದ್ದ. ಮುಹಮ್ಮದ್ ಖಾನನಿಗೆ ಇವನ ಶೌರ್ಯದ ಬಗ್ಗೆ ತಿಳಿದಾಗ ಅವನನ್ನು ಭೇಟಿಯಾಗಲು ಆಹ್ವಾನಿಸಿದ. ಹೇರಾತಿನ ಬಳಿಯಲ್ಲಿ ಇಬ್ಬರೂ ಭೇಟಿಯಾದರು. ಮುಹಮ್ಮದ ಖಾನನು ಅವನನ್ನು ಅದ್ದೂರಿಯ ಸ್ವಾಗತವನ್ನು ನೀಡಿ ಬರಮಾಡಿಕೊಂಡ. ಅವನನ್ನು ತನ್ನ ಜೊತೆಗೆ ಇರಿಸಿಕೊಂಡ. ಅವನ ಗೌರವಾರ್ಥ ಒಂದು ದೊಡ್ಡ ಸಾಹಿತ್ಯ ಸಭೆ, ಕವಿಗೋಷ್ಠಿಯನ್ನು ಏರ್ಪಡಿಸಿದ. ಅಲ್ಲಿ ಸೇರಿದ ದೊಡ್ಡ ಸಭೆಯಲ್ಲಿ ಅವನ ಕಾವ್ಯವಾಚನವನ್ನು ಮೆಚ್ಚಿ ಅನೇಕರು ಗುಣಗಾನಮಾಡಿದ್ದರು. ನಂತರ ಮಿರ್ಜಾ ಹೇರಾತಿನ ಕೆಹ್‌ಕಹಾ ಕೋಟೆಯಲ್ಲಿ ಇಪ್ಪತ್ತು ವರ್ಷಗಳ ಕಾಲ ವಾಸಿಸಿದ್ದ.

**ಷಾ ತಹಮಾಸ್ಪನ ಕೆಲವು ಬದುಕಿನ ಘಟನೆಗಳು. ಆಲಂಪನಾರಿಗೆ ವಿಷ ನೀಡಲು ನಡೆದ ಕುತಂತ್ರ ಮತ್ತು ಅದರ ಪರಿಣಾಮಗಳ ವಿವರಗಳು:**

ಷಾ ತಹಮಾಸ್ಫ್ ಹೈದರ್ ಮಿರ್ಜಾನ ಎರಡನೆಯ ಮಗನಾಗಿದ್ದ. ಇವನ ತಾಯಿ ಕುರ್ದಿಸ್ಥಾನದ ಬಾದಶಾಹನ ಮಗಳಾಗಿದ್ದಳು. ಅವಳು ತನ್ನ ತಂದೆಯ

ಆರೈಕೆಯಲ್ಲಿ ಹೆಚ್ಚು ಸಮಯ ಕಳೆಯುತ್ತಿದ್ದಳು. ಕುರ್ದಿಸ್ಥಾನದ ಅನೇಕ ದೊಡ್ಡ ಸರದಾರರು ತಾಯಿಯ ಕಡೆಯ ಸಂಬಂಧಿಕರಾಗಿದ್ದರು. ಇವರು ಹೈದರ್ ಮಿರ್ಜಾನನ್ನು ಭೇಟಿ ಮಾಡಲು ಆಗಾಗ ಆಗಮಿಸುತ್ತಿದ್ದರು. ಆಳ್ವಿಕೆಯ ಕೆಲಸಗಳನ್ನೂ ಮಾಡುತ್ತಿದ್ದರು ಮತ್ತು ಅವಶ್ಯಕತೆ ಬಂದಾಗ ಸಲಹೆ ನೀಡುತ್ತಿದ್ದರು. ಅವನ ಇನ್ನಿತರ ಸಹೋದರರು ಅಪ್ರಾಪ್ತವಯಸ್ಕರಾಗಿದ್ದರು. ಅವರಲ್ಲಿ ಆಡಳಿತ ನಡೆಸುವ ತಿಳುವಳಿಕೆಯೂ ಇರದಿದ್ದುದರಿಂದ ಅವರ ನೆರವು ಅಗತ್ಯವಾಗಿತ್ತು. ಷಾ ತಹಮಾಸ್ಫನಿಗೆ ಓರ್ವ ಸಹೋದರಿ ಇದ್ದಳು. ಅವಳ ಹೆಸರು ಪರಿ ಖಾನಂ ಎಂದಾಗಿತ್ತು. ದೇಶದ ಆಡಳಿತದ ಸಂದರ್ಭದ ಕೆಲವು ಸಲಹೆ ಸಭೆಗಳಲ್ಲಿ ಅವಳು ಭಾಗವಹಿಸುತ್ತಿದ್ದಳು. ಷಾನಿಗೆ ಅವಳ ಮೇಲೆ ಬಹಳ ವಿಶ್ವಾಸವಿತ್ತು. ಷಾನ ಆಡಳಿತವೂ ಸುಗಮವಾಗಿ ನಡೆಯುತ್ತಿತ್ತು ಮತ್ತು ಸರದಾರರು ತುಂಬ ಸಂತೋಷಪಟ್ಟುಕೊಂಡಿದ್ದರು. ರೋಮನರ ಜೊತೆಗೆ ಶಾಂತಿಯಿಂದ ಇದ್ದು ಯುದ್ಧವಿಲ್ಲದೆ ಸ್ನೇಹದಿಂದ ಆರಾಮವಾಗಿರಲು ಎಲ್ಲರೂ ಆಶಿಸುತ್ತಿದ್ದರು. ಹೆಚ್ಚು ಕಮ್ಮಿ ಆರು ವರ್ಷಗಳ ಕಾಲ ದೇಶದಲ್ಲಿ ಶಾಂತಿ ನೆಮ್ಮದಿಯಿತ್ತು. ಪ್ರಜೆಗಳು ಮತ್ತು ಸೈನಿಕರು ಸಂತಸದಿಂದ ಬದುಕಿದ್ದರು. ಅವರ ಒಬ್ಬ ಮಗ ಬಾದಶಾಹ ಗದ್ದುಗೆಯ ಆಕಾಂಕ್ಷಿಯಾಗಿದ್ದು ಎರಡು ಬಾರಿ ಶಾ ಅಲಮರಿಗೆ ವಿಷಪ್ರಾಸನ ಮಾಡಿಸಿ ಕೊಲ್ಲಲು ಪ್ರಯತ್ನಿಸಿದ್ದ. ಎಲ್ಲಿವರೆಗೆಂದರೆ ಅವರ ದೇಹದ ಮಾಂಸ ಖಂಡಗಳು ವಿಷವುಣಿಸಿದ ಪರಿಣಾಮದಿಂದ ಕೊಳೆಯತೊಡಗಿತ್ತು. ಅವರು ಈ ಕಾರಣದಿಂದ ಕೆಲವೇ ಸಮಯದಲ್ಲಿ ತೀರಿಕೊಂಡರು.

ಶಾ ಆಲಮರ ಮರಣಾ ನಂತರ ಬಹಳ ಸರದಾರರ ಸ್ವಾಮಿನಿಷ್ಠೆಯಲ್ಲಿ ಬದಲಾವಣೆಗಳು ಕಂಡುಬಂದವು. ಎಲ್ಲರೂ ತಮ್ಮ ಮಕ್ಕಳು ಸಿಂಹಾಸನವನ್ನೇರುವ ಕನಸು ಕಾಣತೊಡಗಿದರು. ಎಲ್ಲರೂ ತಮ್ಮ ತಲವಾರುಗಳನ್ನು ಹಿರಿದು ಜಗಳಕ್ಕಿಳಿಯಲು ಪ್ರಾರಂಭಿಸಿದರು. ಇನ್ನೊಂದು ಕಡೆ ಶಾ ಆಲಮರ ದೇಹವು ಬರೀ ಎಲುಬುಗೂಡಾಗಿ ಪರಿಣಮಿಸಿತ್ತು. ಸರದಾರರು ಅವರನ್ನು ಈ ಸ್ಥಿತಿಯಲ್ಲಿ ನೋಡಿದಾಗ ಅಳತೊಡಗಿದರು. ಈ ಪಿತೂರಿಯ ಷಡ್ಯಂತ್ರಗಳನ್ನು ಅಲ್ಲೇ ಕೈಬಿಟ್ಟರು. ದೇವರ ದಯೆಯಿಂದ ಅವರ ಬದುಕಿನಲ್ಲಿ ಬದಲಾವಣೆಯಾಗತೊಡಗಿ, ಆರೋಗ್ಯವಂತರಾಗಿ ಪರಿವರ್ತನೆ ಹೊಂದತೊಡಗಿದರು. ಅವರು ಹಿಂದಿನಂತೆ ಆದರು. ಆರೋಗ್ಯವಂತರಾದ ಬಳಿಕ ಷಾರಿಗೆ ಯಾರ ಮೇಲೂ ವಿಶ್ವಾಸವಿರಲಿಲ್ಲ. ಅವರು ಸ್ವತಃ ಆಳ್ವಿಕೆಯನ್ನು ನಡೆಸತೊಡಗಿದರು. ಅವರು ಯಾವಾಗಲೂ ತಮ್ಮ ಆಹಾರದಲ್ಲಿ ಮೊಟ್ಟೆಯನ್ನು ತಿನ್ನುತ್ತಿದ್ದರು. ಅವರ ಅರಮನೆಯಲ್ಲಿ ಒಂದು ಕೊಳವಿತ್ತು. ಈ ಕೊಳದ ದಡದಲ್ಲಿ ಒಂದು ಹಂಡೆಯಲ್ಲಿ ಮೊಟ್ಟೆಗಳನ್ನು ತುಂಬಿ ಇಡುತ್ತಿದ್ದರು. ಅದರಿಂದ ಒಂದೊಂದನ್ನೇ ತೆಗೆದು ತಿನ್ನುತ್ತಿದ್ದರು. ಈ ಸಮಯದಲ್ಲಿ ಅವರ ಆಹಾರವೆಂದರೆ ಬರಿಯ ಮೊಟ್ಟೆಗಳೇ

ಆಗಿದ್ದವು. ತಮ್ಮ ಬದುಕಿನ ಕೊನೆಯಲ್ಲಿ ತಮ್ಮ ಸಂಪೂರ್ಣ ಸಂಪತ್ತನ್ನು ಜನರಿಗೆ ದಾನ ಮಾಡಿದರು. ಎಲ್ಲಿವರೆಗೆಂದರೆ ಕುಟುಂಬದ ಮೂಲ ಪುರುಷ ಅನ್ನು ಶೇರ್ವಾನ್‌ನನ್ನು ಮರೆತು, ಜನ ಶಾ ಅಲಮರ ಹೆಸರನ್ನು ಸದಾ ನೆನಪಿಟ್ಟುಕೊಂಡರು. ತನ್ನ ಊರಿನ ಯಾರಾದರೂ ಆಸ್ಥಾನಕ್ಕೆ ಬಂದರೆ ಅವರ ಮಾತುಗಳನ್ನು ಕೇಳಿಕೊಂಡು ಸಮಾಧಾನಪಡಿಸಿ ಕಳುಹಿಸಿಕೊಡುತ್ತಿದ್ದರು. ಇದರ ನಂತರ ಮತ್ತೊಮ್ಮೆ ಅನಾರೋಗ್ಯ ಉಂಟಾಯಿತು. ಬೇರೆ ಇನ್ನಿತರ ರೋಗಗಳೂ ಅವರ ದೇಹವನ್ನು ಮುತ್ತಿಕೊಂಡಿದ್ದವು. ಆದರೆ ಅವರು ಹಿಂದಿನಂತೆ ಔಷಧೋಪಚಾರಗಳನ್ನು ಮಾಡಿಕೊಳ್ಳುತ್ತಿರಲಿಲ್ಲ. ಶಾ ಆಲಮರಿಗೆ ತಾವು ಅಲ್ಲಾಹನ ಬಳಿಗೆ ಹೋಗುವ ಸಮಯ ಹತ್ತಿರ ಬಂದಿದೆ ಎಂದುಕೊಂಡು ಬದುಕಿನ ಆಸೆಯನ್ನೇ ಬಿಟ್ಟಿದ್ದರು. ಅವರು ಪರೀ ಖಾನಂಳನ್ನು ಕರೆದು, 'ಹೈದರ್ ಮಿರ್ಜಾ ಒಬ್ಬ ಅರ್ಹ, ಪ್ರಾಮಾಣಿಕ ಯುವಕನಾಗಿದ್ದಾನೆ. ಅವನ ತಾಯಿಯ ಕುಟುಂಬದವರು ತುಂಬ ಕ್ರೂರಿಗಳು, ಕರುಣೆಯಿಲ್ಲದವರಾಗಿದ್ದಾರೆ. ಈ ಕಾರಣಕ್ಕಾಗಿ ನೀನು ಪ್ರಯತ್ನಿಸಿ ಇಸ್ಮಾಯಿಲ್ ಮಿರ್ಜಾನನ್ನು ಮುಂದಿನ ಬಾದಶಾಹನನ್ನಾಗಿ ಮಾಡಬೇಕು. ಇಲ್ಲಿನ ಬಹಳಷ್ಟು ಮಂದಿ ಅವನ ವೈರಿಗಳಾಗಿಬಿಟ್ಟಿದ್ದಾರೆ. ಅವನನ್ನು ಕೋಟೆಯಲ್ಲಿ ಯಾರಾದರೂ ಕೊಂದುಬಿಟ್ಟಾರೆಂಬ ಭಯ ನನ್ನನ್ನು ಸದಾ ಕಾಡುತ್ತಿದೆ' ಎಂದರು. ಕೊನೆಯಲ್ಲಿ ಬಾದಶಾಹರಿಗೆ ಯಾವ ಅನುಮಾನ, ಭಯ ಮೂಡಿತ್ತೋ ಅದು ಪ್ರತ್ಯಕ್ಷವಾಗತೊಡಗಿತು. ಬಾದಶಾಹ ಅವನ ರಕ್ಷಣೆಗಾಗಿ ಒಂದು ಸೈನ್ಯವನ್ನು ಕಳುಹಿಸಿದರು. ಆದರೆ ಅವನ ಬಳಿಗೆ ಈ ಸೈನ್ಯವೂ ತಲಪಲಿಲ್ಲ ಮತ್ತು ಅದಲ್ಲದೆ ಬಾದಶಾಹರ ಮರಣವಾರ್ತೆಯನ್ನು ಕೂಡ ಅವನಿಗೆ ತಿಳಿಸಲಿಲ್ಲ. ಇದರ ನಂತರ ಹೈದರ್ ಮಿರ್ಜಾನನ್ನು ಕರೆದ. ಮಿರ್ಜಾ ಕೋಣೆಗೆ ಬಂದಾಗ ಅವನನ್ನು ಒಂದು ಕೋಣೆಯಲ್ಲಿ ಅಡಗಿಸಿಟ್ಟ.

ಕಾಕತಾಳೀಯವೆಂಬಂತೆ ಆ ರಾತ್ರಿಹೊತ್ತು ಹೈದರ್ ಮಿರ್ಜಾನ ಕುಟುಂಬದವರು ಅಲ್ಲಿಗೆ ಆಗಮಿಸಿದ್ದರು. ಪರಿ ಖಾನಂ ಓರ್ವ ವ್ಯಕ್ತಿಯನ್ನು ಕರೆದು, ಅಫ್ಶಾರ್ ಕೋಮಿನ ಪಂಗಡವರ ಕಡೆ ರವಾನಿಸಿದಳು. ಈ ರಾತ್ರಿ ಕೋಟೆಯ ರಕ್ಷಣೆಯನ್ನು ನೀವು ಮಾಡಬೇಕೆಂದು ಸಂದೇಶವನ್ನು ಕಳುಹಿಸಿದಳು. ಹೈದರ್ ಮಿರ್ಜಾನ ಸಂಬಂಧಿಗಳು ಕುರ್ದಿಸ್ಥಾನದವರಾಗಿದ್ದು, ಅವರು ಕೂಡ ಅಲ್ಲಿ ಬಂದು ಸೇರಿದರು. ಎರಡೂ ಪಂಗಡಗಳ ಮಧ್ಯೆ ರಕ್ಷಣೆಯ ಕೆಲಸದ ವಿಷಯದಲ್ಲಿ ತಕರಾರು ಎದ್ದಿತು. ಎಲ್ಲಿತನಕ ಈ ತಕರಾರಿನ ಬಿಸಿ ಮುಟ್ಟಿತೆಂದರೆ ಪರಸ್ಪರ ಹೊಡೆದಾಡಿಕೊಂಡ ಹೆಣಗಳು ಬಿದ್ದವು. ಕುರ್ದಿ ಕೋಮಿನವರ ಕೈಮೇಲಾಗಿ ಅಫ್ಶಾರ್ ಕೋಮಿನವರು ಓಡಿಹೋದರು.

**ಷಾ ತಹಮಾಸ್ಪನ ಮಗ ಇಸ್ಮಾಯಿಲ್ ಮಿರ್ಜಾನನ್ನು ಸಿಂಹಾಸನದಲ್ಲಿ ಕೂರಿಸಲಾದ ವಿವರಗಳು:**

ರಾಜ್ಯದ ಸಂಪೂರ್ಣ ಪ್ರಜೆಗಳು ಇಸ್ಮಾಯಿಲ್ ಮಿರ್ಜಾನನ್ನು ಸಿಂಹಾಸನದಲ್ಲಿ ಕೂರಿಸಿದ್ದಕ್ಕೆ ಅಭಿನಂದನೆಗಳನ್ನು ಸಲ್ಲಿಸಿದರು. ಕೋಟೆಯ ಆಡಳಿತ ವ್ಯವಸ್ಥೆಯನ್ನು ಹಿಂದಿನಂತೆಯೇ ಸುವ್ಯವಸ್ಥೆಗೊಳಿಸಿದ್ದ. ಶಾಂತಿ ಸೌಹಾರ್ದದ ವಾತಾವರಣ ನೆಲೆಸಿತ್ತು. ಇಸ್ಮಾಯಿಲ್ ಮಿರ್ಜಾ ಸ್ವಭಾವತ ಶೀಘ್ರಕೋಪಿಯಾಗಿದ್ದ. ಚಿಕ್ಕ ಪುಟ್ಟ ಕಾರಣಕ್ಕೆ ರೇಗುತ್ತಿದ್ದನಲ್ಲದೆ, ಸರದಾರರು, ಆಡಳಿತಾಧಿಕಾರಿಗಳೊಂದಿಗೆ ವ್ಯವಹರಿಸುವಾಗ ಕಟ್ಟುನಿಟ್ಟಿನ ನಿಯಮಗಳನ್ನು ಪಾಲಿಸುತ್ತಿದ್ದ. ಎಲ್ಲರೂ ಅವನ ಬಗ್ಗೆ ಭಯಪಡುತ್ತಿದ್ದರು. ಯಾರಿಗೂ ಅವರ ಮುಂದೆ ಆಸ್ಥಾನದಲ್ಲಿ ಯಾವುದೇ ವಿಷಯವನ್ನು ಮಂಡಿಸಲು ಭಯಪಡುತ್ತಿದ್ದರು. ಒಂದು ದಿನ ಕಿರ್ಮಾನಿನ ಬಳಿ ದರೋಡೆಕೋರರು ಕೆಲವು ವ್ಯಾಪಾರಸ್ಥರನ್ನು ಲೂಟಿಮಾಡಿದ್ದರು. ಆ ಸಮಯದಲ್ಲಿ ಷಾ ಕುಲೀ ಸುಲ್ತಾನ್ ಅಫ್ಶಾರ್ ಅಲ್ಲಿನ ಮಂಡಳಾಧಿಪತಿಯಾಗಿದ್ದ. ಜನರು ಅವನ ಮುಂದೆ ಹೋಗಿ ಫಿರ್ಯಾದು ಸಲ್ಲಿಸಿದಾಗ ಅವನು ಅವರ ವಿನಂತಿಯನ್ನು ಕಿವಿಗೆ ಹಾಕಿಕೊಳ್ಳಲಿಲ್ಲ. ಒಂದು ದಿನ ಬಾದಶಾಹ ಇಸ್ಮಾಯಿಲ್ ಮಿರ್ಜಾ ತನ್ನ ಅರಮನೆಯಿಂದ ವಿಹಾರಾರ್ಥ ಹೊರಟಿದ್ದ. ಈ ವ್ಯಾಪಾರಸ್ಥರು ಅವನ ಮುಂದೆ ತಮ್ಮ ಫಿರ್ಯಾದು ಇಟ್ಟರು. ಅವನು ಅವರ ಮಾತುಗಳನ್ನು ಕೇಳಿ, ಸ್ವತಃ ಕಿರ್ಮಾನಿನ ಕಡೆ ಹೊರಟ. ಅಲ್ಲಿನ ವ್ಯವಸ್ಥೆಯ ಬಗ್ಗೆ ಪರಾಮರ್ಶಿಸಿ ತಾನೇ ಸ್ವತಃ ದರೋಡೆಕೋರರನ್ನು ಹುಡುಕಿ ಹಿಡಿದು ಬಂಧಿಸಿ ವ್ಯಾಪಾರಸ್ಥರಿಗೆ ಅವರ ಸಾಮಾನುಗಳನ್ನು ಹಿಂತಿರುಗಿಸುವಂತೆ ಮಾಡಿ ನ್ಯಾಯವೊದಗಿಸಿದ.

ಅಲೀ ಖಾನ್ ಸಿರಾಜಿನ ಓರ್ವ ಸರದಾರನಾಗಿದ್ದ. ಸ್ವಭಾವತ ತುಂಬ ಅಹಂಕಾರಿಯಾಗಿದ್ದ. ಅವನಲ್ಲಿ ತುಂಬ ಸಂಪತ್ತು ಇತ್ತು. ಕಾರವಾನಿನ ಜನರ ಸರದಾರರೊಂದಿಗೆ ಶಾಮೀಲಾಗಿದ್ದರಿಂದ ತುರ್ಕಿಯ ಸರದಾರರ ಮಧ್ಯೆ ಇವನ ಹೆಸರು ಜನಪ್ರಿಯಗೊಂಡಿತ್ತು. ಷಾ ಇಸ್ಮಾಯಿಲ್ ಮಿರ್ಜಾನಿಗೆ ಈ ಬಗ್ಗೆ ವರ್ತಮಾನ ತಲಪಿದಾಗ ಅವನ ಅಹಂಕಾರ ಮುರಿಯುವ ಉದ್ದೇಶದಿಂದ ಅಲ್ಲಿಗೆ ತಲಪಿದ. ಯಾರಿಗೂ ಅಲೀ ಖಾನನ ಎದುರು ನಿಂತು ಮಾತಾಡುವ ಧೈರ್ಯವಿರಲಿಲ್ಲ. ಆದರೆ ಷಾ ಇಸ್ಮಾಯಿಲನ ಮುಂದೆ ಭಯದಿಂದ ನಡುಗಿದ ಅಲೀ ಖಾನ್ ನಾಲ್ಕು ಸಾವಿರ ತೂಮಾನ್ ನಗದು ಮತ್ತು ಬಹಳ ಸಾಮಾನು, ಸಂಪತ್ತುಗಳನ್ನು ತಂದು ಒಪ್ಪಿಸಿ ಕೈಕಟ್ಟಿ ನಿಂತ. ಷಾ ಇವನ್ನು ಜಿಝಿಯಾ ತೆರಿಗೆಯ ರೂಪದಲ್ಲಿ ಖಜಾನೆಯಲ್ಲಿ ಜಮಾಮಾಡಲು ಆಜ್ಞಾಪಿಸಿದ.

ಷಾ ಮಿರ್ಜಾ ಇಸ್ಮಾಯಿಲನ ಹಲವು ಸಹೋದರರು ಮತ್ತು ಸಂಬಂಧಿಕರಿದ್ದರು. ಮುಂದೆ ಆಸ್ಥಾನದಲ್ಲಿ ನಾಯಕತ್ವ ವಹಿಸುವ ಅರ್ಹತೆ ಅವರಲ್ಲಿತ್ತು. ಈತ ಅವರನ್ನೆಲ್ಲರನ್ನೂ ಕೊಲ್ಲಿಸಿದ್ದ. ಸುಲ್ತಾನ್ ಮುಹಮ್ಮದನನ್ನು ಶಿರಾಜ್ ಪ್ರಾಂತ್ಯದ ಅಧಿಪತಿಯನ್ನಾಗಿ ನೇಮಿಸಿ ಕಳುಹಿಸಿದ್ದ. ಪರೀ ಖಾನಂ 'ಇದನ್ನೆಲ್ಲ ಯಾಕೆ ಮಾಡಿದಿ?' ಎಂದು ವಿಚಾರಿಸಿದಳು. 'ಹೆಂಗಸರು ರಾಜಕೀಯದ ವಿಚಾರಗಳಲ್ಲಿ ಮಧ್ಯ ಪ್ರವೇಶಿಸ ಕೂಡದು. ಮಹಿಳೆಯರು ಅಲ್ಲಾಹನ ಆರಾಧನೆ ಮಾಡಿಕೊಂಡು ತೆಪ್ಪಗಿರಬೇಕು' ಎಂದ.

ಷಾ ತಹಮಾಸ್ಪನ ಜನಾನಾದಲ್ಲಿ (ಅಂತಃಪುರದಲ್ಲಿ) ನಾಲ್ಕು ನೂರು ಮಹಿಳೆಯರಿದ್ದರು. ಅವರಲ್ಲಿ ಕೆಲವರು ಗುಲಾಮರು, ದಾದಿಯರು, ಸೇವಕಿಯರು ಮತ್ತು ವಿವಾಹಿತ ಪತ್ನಿಯರೂ ಸೇರಿದ್ದರು. ಷಾ ಇವರೆಲ್ಲರನ್ನೂ ಭೇಟಿಯಾಗುತ್ತಿದ್ದ. ಒಂದು ಬಾರಿ ಅವನು ಕೆಲವು ಹೆಂಗಸರನ್ನು ತನ್ನ ಸ್ನಾನ ಗೃಹಕ್ಕೆ ಕರೆಸಿದ. ನಂತರ ಹೊರಬಂದ. ಸ್ನಾನ ಗೃಹದ ಕೋಣೆಯನ್ನು ಚಿಲಕ ಹಾಕಿ ಮುಚ್ಚಿದ. ಸ್ನಾನ ಗೃಹದ ಕೆಳಭಾಗದಲ್ಲಿ ಬೆಂಕಿ ಹಚ್ಚಿದ. ಹೀಗೆ ಅವನು ಅವರೆಲ್ಲರನ್ನೂ ಶಿಕ್ಷೆಯ ಕಾರಣವನ್ನು ನೀಡಿ ಕೊಂದು ಹಾಕಿದ. ಆ ಸಮಯದಲ್ಲಿ ಅವನ ವಯಸ್ಸು ಐವತ್ತಾಗಿತ್ತು. ಇಪ್ಪತ್ತೊಂದು ವರ್ಷಗಳ ಕಾಲ ರಾಜ್ಯದ ಆಡಳಿತ ನಡೆಸಿದರು. ತುಂಬ ವ್ಯವಸ್ಥಿತವಾಗಿ ರಾಜ್ಯಭಾರವನ್ನು ನಡೆಸಿದ. ಈ ಕಾಲಘಟ್ಟದಲ್ಲಿ ಕೆಲವು ರಾಜರು ಮತ್ತು ಸೇನಾನಿಗಳ ಬಗ್ಗೆ ಜನರು ಪುಕಾರು ಹಬ್ಬಿಸಿದರು. ಇವರು ಅಲ್ಲಿನ ಹೆಂಗಸರೊಂದಿಗೆ ರಾತ್ರಿ ಯಾಕೆ ಕಳೆಯುತ್ತಿದ್ದಾರೆ? ಎಂಬುದು ಅವರು ಆಸ್ಥಾನದಲ್ಲಿ ಕೇಳಿದ ಪ್ರಶ್ನೆಯಾಗಿತ್ತು. ಅವರಲ್ಲಿ ಕೆಲವರು ಗುಂಪುಕಟ್ಟಿಕೊಂಡು ರಾತ್ರಿ ಅಂತಃಪುರದೊಳಗೆ ಗುಟ್ಟಾಗಿ ರಹಸ್ಯವಾಗಿ ಪ್ರವೇಶಿಸಿದಾಗ ಅಲ್ಲಿ ಕೆಲವು ಸುಂದರಿಯರಾದ ಕನ್ಯೆಯರು ಮತ್ತು ಯುವಕರು ಜೊತೆಗೆ ತಮ್ಮ ಆಯ್ಕೆಯಂತೆ ಆರಿಸಿಕೊಂಡು ಸ್ವೇಚ್ಛಾಚಾರದಲ್ಲಿ ಕಾಮಕೇಳಿಯಲ್ಲಿ ನಿರತರಾಗಿರುವದನ್ನು ಕಂಡರು. ಒಮ್ಮೆ ಸಿಹಿತಿಂಡಿಯ ವ್ಯಾಪಾರಿಯೊಬ್ಬನ ಮಗನೊಂದಿಗೆ ಷಾ ತಹಮಾಸ್ಫ ಕೆಟ್ಟದಾಗಿ ವರ್ತಿಸುತ್ತಿರುವುದನ್ನು ನೋಡಲಾಯಿತು. ಅವನು ತನ್ನ ಅರಮನೆಯಲ್ಲಿ ಈ ಯುವಕನಿಗೆ ಒಂದು ರಹಸ್ಯ ಕೊಠಡಿಯನ್ನು ಕೂಡ ಕೊಡಿಸಿದ್ದ. ರಾತ್ರಿಹೊತ್ತು ಅಲ್ಲಿಗೆ ಷಾ ಹೋಗುತ್ತಿದ್ದ. ಹಗಲುಹೊತ್ತು ಅವನನ್ನು ವಿಹಾರಕ್ಕಾಗಿ ತನ್ನೊಂದಿಗೆ ಕರೆದುಕೊಂಡು ಹೋಗುತ್ತಿದ್ದ. ಆ ಯುವಕನ ಹೆಸರು ಒಫಲ್ ಎಂದಾಗಿತ್ತು.

ಅವನ ಮೇಲೆ ತುಂಬ ವಿಶ್ವಾಸವಿಟ್ಟುಕೊಂಡಿದ್ದರಿಂದ ಕಾಲ ಕಳೆದಂತೆ ಷಾ ತಹಮಾಸ್ಫನ ಆಡಳಿತ ವ್ಯವಹಾರಗಳಲ್ಲಿ ಕೂಡ ಓಫಲ್ ಹಸ್ತಕ್ಷೇಪ ಮಾಡತೊಡಗಿದ. ಅದೇ ಕಾಲದಲ್ಲಿ ಪಶ್ಚಿಮದ ದಿಕ್ಕಿನಿಂದ ಥಟ್ಟನೆ ಒಂದು ಬೆಂಕಿಯ ಉಂಡೆಯು ಆಕಾಶದಿಂದ ಭೂಮಿಯ ಕಡೆ ವೇಗವಾಗಿ ಬರುತ್ತಿರುವುದನ್ನು ಜನರು ಕಂಡರು.

ಖಗೋಲಶಾಸ್ತ್ರಜ್ಞರು ಹೇಳುತ್ತಾರೆ ಇಂತಹ ಘಟನೆಗಳು ಹಜ್ರತ್ ಈಸಾ (ಜೀಸಸ್)ರ ಕಾಲದಲ್ಲಿ ನಡೆದಿತ್ತು. ವಿಶ್ವದಲ್ಲಿ ಕೊಲೆ, ಕೆಟ್ಟವಿಚಾರಗಳು ಹಬ್ಬಿದಾಗ ಇಂತಹ ಘಟನೆಗಳು ಘಟಿಸುತ್ತವೆ ಎಂದು ಹೇಳಿದರು. ಇದೇ ವರ್ಷ ಷಾ ಇಸ್ಮಾಯಿಲ್‌ನಂತಹ ನಿಷ್ಠಾವಂತ, ಗೌರವಾನ್ವಿತ ಬಾದಶಾಹನ ಕೊಲೆಯಾಯಿತು. ದಕ್ಷಿಣದಲ್ಲಿ ಜಹಾಂಪನಾ ಹುತಾತ್ಮರಾದರು. ರೋಮಿನ ಬಾದಶಾಹ ಸುಲ್ತಾನ್ ಸಲೀಮ್ ಕೂಡ ತೀರಿಕೊಂಡರು. ತೆಲಂಗಾಣದ ಬಾದಶಾಹ ಖುತುಬ್ ಷಾ ಕೂಡ ಮರಣಹೊಂದಿದ. ಈ ದೇಶದಲ್ಲಿ ಷಾ ತಹಮಾಸ್ಪನ ಕೆಟ್ಟ ಚಾಳಿಯಿಂದಾಗಿ ಪ್ರಜೆಗಳು ಅವನ ಮೇಲೆ ಅಸಮಾಧಾನಹೊಂದಿದ್ದರು. ಕೆಲವು ಮಂತ್ರಿಗಳು, ಸೇನಾನಿಗಳು, ಅಧಿಕಾರಿಗಳು ರಹಸ್ಯವಾಗಿ ಪರೀ ಖಾನಂಳ ಮನೆಗೆ ಹೋಗಿ ಅವಳನ್ನು ಭೇಟಿಯಾದರು. 'ಈ ನೀತಿ ನಡತೆಗೆಟ್ಟ ರಾಜನನ್ನು ನಮ್ಮ ಹೆಗಲಮೇಲೆ ಹೊರಿಸಿದ್ದೀರಲ್ಲಾ?' ಎಂದು ದೂರಿದರು. ಪ್ರಜೆಗಳು ಇವನನ್ನು ಸಿಂಹಾಸನದಿಂದ ಕಿತ್ತು ಹಾಕುವ ಯೋಜನೆ, ವಿಧಾನಗಳನ್ನು ಯೋಚಿಸುತ್ತಿದ್ದರು. ಇಲ್ಲಿನ ಪ್ರಜೆಗಳಿಗೆ ಹೊರಗಿನವರೊಂದಿಗೆ ವ್ಯವಹರಿಸುವಾಗ ಈ ವಿಚಾರದ ಬಗ್ಗೆ ಮಾತಾಡುವುದಕ್ಕೆ ಮುಜುಗರ, ನಾಚಿಕೆಯುಂಟಾಗುತ್ತಿತ್ತು. ಈ ಬಗ್ಗೆ ಯೋಚಿಸುತ್ತಿರುವಾಗ ಜನರ ಜೊತೆಗೆ ಸಿಹಿತಿಂಡಿಯ ವ್ಯಾಪಾರಿಯ ಮಗ ಒಘಲನೂ ಸೇರಿಕೊಂಡ. ಯಾವ ಬಾದಶಾಹನ ಎದುರು ಮಾತಾಡಲು ಕೂಡ ಭಯಪಡುತ್ತಿದ್ದರೋ ಅಂತಹ ಬಾದಶಾಹನ ಮುಂದೆ ಛೀ ಥೂ ಅನ್ನುವ ಮಾತುಗಳನ್ನು ನೇರವಾಗಿ ಹೇಳ ತೊಡಗಿದ್ದರು. ಯುವಕನ ತಂದೆ ಹಲ್ವಾಯಿ ವ್ಯಾಪಾರಸ್ಥ 'ನನ್ನ ಮಗನನ್ನು ಬಲಾತ್ಕಾರದಿಂದ ಬಾದಶಾಹ ಕರೆದು ಇಟ್ಟುಕೊಂಡಿದ್ದಾನೆ, ನನಗಿದು ಬಹಳ ಅವಮಾನ ನಾಚಿಕೆಯಾಗುತ್ತಿದೆ. ನನ್ನನ್ನು ಈ ಸಂಕಷ್ಟದಿಂದ ಮುಕ್ತಿಗೊಳಿಸಿ ಕಾಪಾಡಿ. ನಾನು ನನ್ನ ಬದುಕಿನುದ್ದಕ್ಕೂ ನಿಮ್ಮ ಸೇವಕನಾಗಿರುತ್ತೇನೆ. ನೀವು ಹೀಗೆ ಮಾಡದಿದ್ದರೆ ಅವನ ಕೊಲೆಯಾಗಬಹುದು. ಇದರ ಜವಾಬ್ದಾರಿ ನಿಮ್ಮ ಮೇಲಿದೆ' ಎಂದು ಪರಿ ಖಾನಂಳ ಮುಂದೆ ತನ್ನ ಸಂಕಷ್ಟಗಳನ್ನು ತೋಡಿಕೊಂಡ. ಅವನ ಫಿರ್ಯಾದನ್ನು ಕೇಳಿದ ಪರೀ ಖಾನಂ ಅವನನ್ನು ಸಮಾಧಾನ ಪಡಿಸಿ ಏನಾದರೊಂದು ಪರಿಹಾರ ಇದಕ್ಕೆ ಕಂಡುಕೊಳ್ಳಬೇಕೆಂದು ನಿಶ್ಚಯಿಸಿಕೊಂಡಿದ್ದೇನೆ. ಅವನು ಅಲ್ಲಿಂದ ಹೊರ ಹೋದ ಬಳಿಕ ಹಲ್ವಾಯಿ ವ್ಯಾಪಾರಿಯ ಪತ್ನಿಯ ಬಳಿಗೆ ಒಬ್ಬಳು ಹೆಂಗಸನ್ನು ಕಳುಹಿಸಿದಳು. ಅವಳ ಮೂಲಕ ಅವಳಿಗೆ ಸಮಾಧಾನದ ಮಾತುಗಳನ್ನು ಹೇಳಿದಳು. ಬಾದಶಾಹ ತನ್ನ ಸಂಬಂಧದ ಹುಡುಗಿಯೊಬ್ಬಳನ್ನು ನಿಮ್ಮ ಮಗ ಒಘಲನೊಂದಿಗೆ ವಿವಾಹ ಮಾಡಿಸಲು ಇಚ್ಛಿಸುತ್ತಾನೆ ಎಂಬ ಸಂದೇಶವನ್ನು ಅವಳ ಮೂಲಕ ಕಳುಹಿಸಿದಳು. ಈ ರೀತಿಯ ಸಂಧಾನದ ಪರಿಹಾರದಿಂದ ಪರೀ ಖಾನಂ ತನಗೆ ಪ್ರಾಣಾಪಾಯವಿದೆ ಎಂದು ಕಂಡುಕೊಂಡಾಗ ಸಿಹಿತಿಂಡಿ ಹಲ್ವಾಯಿ ವ್ಯಾಪಾರಿಯ ಕುಟುಂಬಕ್ಕೆ ಇನಾಮು

ಉಡುಗೊರೆಗಳನ್ನು ನೀಡಿ. 'ಇದು ವಿಷ ಹಾಕಿದ ಲೋಟ, ಇದನ್ನು ಹುಕ್ಕಾದೊಳಗೆ ತುಂಬಿಸಿ ಬಾದಾಶಾಹನಿಗೆ ನೀಡು' ಎಂದು ಹೇಳಿದಳು. ಈ ಹಲ್ವಾಯಿ ಬಾದಶಾಹರಿಗೆ ಹುಕ್ಕಾ ತುಂಬಿಕೊಡುವ ಕೆಲಸವನ್ನೂ ಅರಮನೆಯಲ್ಲಿ ಮಾಡುತ್ತಿದ್ದ. ಹುಣ್ಣಿಮೆ ರಾತ್ರಿಯಲ್ಲಿ ಬಾದಶಾಹ ವಿಹಾರಕ್ಕೆ ತೆರಳಿ ಐದಾರು ಗಂಟೆಗಳ ಬಳಿಕ ಹಿಂತಿರುಗಿದಾಗ ಅವನಿಗೆ ಹುಕ್ಕಾ ಎಳೆಯುವ ಆಸೆಯುಂಟಾಯಿತು. ಅವನು ಹಲ್ವಾಯಿಯನ್ನು ಕರೆದು ಹುಕ್ಕಾ ತುಂಬಿ ಕೊಡಲು ಹೇಳಿದ. ಹಲ್ವಾಯಿ ಹುಕ್ಕ ತಯಾರಿ ಮಾಡಿ ತಂದನಾದರೂ ಅದರ ಹಂಡೆಯ ಬೆಣೆಯನ್ನು ಹಾಕಿರಲಿಲ್ಲ. ಅವನ ಮುಂದೆಯೇ ಎಲ್ಲವನ್ನೂ ತಯಾರು ಮಾಡಿದಾಗ ಬಾದಶಾಹ ಹಂಡೆಯು ತೆರೆದಿರುವುದನ್ನು ಕಂಡು 'ಹುಕ್ಕಾದ ಬೆಣೆಯಾಕೆ ಹಾಕಿಲ್ಲ?' ಎಂದು ಕೇಳಿದ. 'ಅಯ್ಯೋ! ನನಗೆ ಮರೆತೇ ಹೋಗಿಬಿಟ್ಟು ಒಳಗೆ ಇಟ್ಟಿದ್ದೆ' ಎನ್ನುತ್ತ ಕೋಣೆಯ ಒಳಗೆ ಹೋಗಿ ವಿಷವನ್ನು ಅದರೊಳಗೆ ಹಾಕಿದ. ಬೆಣೆಯನ್ನು ಹಾಕಿ ಬಾದಶಾಹನಿಗೆ ಹುಕ್ಕಾವನ್ನು ತಂದು ಕೈಗೆ ನೀಡಿದ.

ಬಾದಶಾಹ ಅಗತ್ಯಕ್ಕಿಂತ ಹೆಚ್ಚು ಮಾತ್ರದಲ್ಲಿ ಹುಕ್ಕಾ ಕುಡಿದು ಮತ್ತೇರಿ ಮಲಗಿದ. ಬೆಳಗಾದಾಗ ಸಮಯಕ್ಕೆ ಸರಿಯಾಗಿ ಆಸ್ಥಾನದಲ್ಲಿ ಹಾಜರಾಗದ ಕಾರಣ ದರ್ಬಾರಿಗಳಿಗೆ ಆಶ್ಚರ್ಯವಾಯಿತು. ಅವರು ಕಾದು ಬೇಸತ್ತು ಪರೀ ಖಾನಂರ ಬಳಿಗೆ ಬಂದು ವಿಚಾರಿಸಿದರು. ಅವಳು ಓಡೋಡಿ ಬಾದಶಾಹರ ಕೋಣೆಯೊಳಗೆ ಹೋಗಿ ನೋಡುವಾಗ ಸಾವಿನ ಶಯ್ಯೆಯಲ್ಲಿ ಮಲಗಿದಂತೆ ಕಂಡುಬಂದ. ಬಾಯಿಯಲ್ಲಿ ರಕ್ತ ಹರಿದಿತ್ತು. ಆದರೆ ಪ್ರಾಣ ಆಗಲೇ ಹಾರಿ ಹೋಗಿತ್ತು. ಇವನು ಒಂದು ವರ್ಷ ಐದು ತಿಂಗಳು ಬಾದಶಾಹನಾಗಿ ರಾಜ್ಯವಾಳಿದ. ಹಿಜರಿ ವರ್ಷ ೯೭೬ರಲ್ಲಿ ತೀರಿಕೊಂಡಿದ್ದ.

**ಸುಲ್ತಾನ್ ಮುಹಮ್ಮದ್ ಖುದಾಯಿಯ ರಾಜ್ಯಾಡಳಿತದ ವಿವರಗಳು:**

ಇವನು ಷಾ ತಹಮಾಸ್ಫನ ಹಿರಿಯ ಮಗನಾಗಿದ್ದ. ಆದರೆ ಕಣ್ಣು ಕಾಣದ ಕುರುಡನಾಗಿದ್ದ. ಮಗನನ್ನಲ್ಲದೆ ಬೇರೆಯವರನ್ನು ಸಿಂಹಾಸನದಲ್ಲಿ ಕೂರಿಸಲು ಸಾಧ್ಯವಾಗದಿದ್ದುದರಿಂದ ಸುಲ್ತಾನ್ ಮುಹಮ್ಮದ್ ಖುದಾಯಿ ದೃಷ್ಟಿಹೀನನಾಗಿದ್ದರೂ ಆರಿಸಬೇಕಾಗಿ ಬಂದಿತ್ತು. ಕೂಡಲೇ ಅವನನ್ನು ಕರೆಸಲು ದರ್ಬಾರಿಗಳು ಫರ್ಮಾನು ಕಳುಹಿಸಿದರು. ದರ್ಬಾರಿಗಳು ದೂತರಾಗಿ ಹೋಗಿ ಅಲ್ಲಿ ನೋಡುವಾಗ ಅವನನ್ನು ಮತ್ತು ಅವನ ಹೆಂಡತಿ ಮಕ್ಕಳನ್ನು ತಪ್ಪಿತಸ್ಥರನ್ನು ಕಟ್ಟಿಹಾಕುವಂತೆ ಕೈಕಾಲು ಕಟ್ಟಿಹಾಕಿದ್ದರು. ತುಂಬ ದೂರದಲ್ಲಿ ಒಂದು ಕೋಣೆಯಿತ್ತು ಅದರೊಳಗೆ ಮತ್ತೊಂದು ಕೋಣೆಯಿತ್ತು. ಅದರಲ್ಲಿ ಒಂದು ದೊಡ್ಡ ಸುರಂಗವಿದ್ದು ಅದರ ಮೂಲಕ ಇವರಿಗೆ ಯಾರೋ ಆಹಾರ ಒದಗಿಸುತ್ತಿದ್ದರು. ದರ್ಬಾರಿಗಳ ದೂತನಾಗಿ ಬಂದವನು 'ಸುಲ್ತಾನ್! ಸುಲ್ತಾನ್ ಮುಹಮ್ಮದ್' ಎಂದು ಕೂಗುತ್ತ ಒಳಗೆ ಹೋದ. ಆಗ ಸುಲ್ತಾನ್ ಮುಹಮ್ಮದ್

ಇದೇನೋ ಹೊಸ ಆಪತ್ತು ಬಂತು ಎಂದುಕೊಂಡು ಭಯಪಟ್ಟುಕೊಂಡಿದ್ದ. ಸುಲ್ತಾನ ತನ್ನ ಬೆಂಬಲಿಗರನ್ನು ಕಳುಹಿಸಿ ಅವನನ್ನು ಬಂಧಿಸಿದ. ಮತ್ತೆ ಸ್ವಲ್ಪಹೊತ್ತಿನಲ್ಲಿ ಇನ್ನೊಬ್ಬ ದೂತ ಹೋದಾಗಲೂ ಮೂರನೆಯ ದರ್ಬಾರಿಯನ್ನೂ ಬಂಧಿಸಿದ. ನಾಲ್ಕನೆಯ ದರ್ಬಾರಿ ತನ್ನ ಸಂಪೂರ್ಣ ತಾಕತ್ತು ಹಾಕಿ ಬಾಗಿಲನ್ನು ಒಡೆದು ಒಳಗೆ ಹೋಗಿ ಅವರೆಲ್ಲರನ್ನೂ ಬಿಡುಗಡೆಗೊಳಿಸಿ ಕರೆತರಲಾಗಿ ಸುಲ್ತಾನ್ ಮುಹಮ್ಮದ್ ಖುದಾಯಿಯನ್ನುಸಿಂಹಾಸನದಲ್ಲಿ ಕೂರಿಸಲಾಯಿತು. ರಾಜ್ಯದ ಪ್ರಜೆಗಳು ಎಲ್ಲರೂ ಆಗಮಿಸಿ ಸಿಂಹಾಸನಾರೂಢ ಬಾದಶಾಹನಿಗೆ ಅಭಿನಂದಿಸಿ ಸಂತಸಪಟ್ಟುಕೊಂಡರು.

ದರ್ಬಾರಿಗಳು ಆಸ್ಥಾನದಲ್ಲಿ ಸಭೆ ಸೇರಿ ದರ್ಬಾರು ನಡೆಸಿದರು. ಪರೀ ಖಾನಂ ಘನತೆ, ಗಂಭೀರವಾಗಿ ತನ್ನ ಸಹೋದರ ಬಾದಶಾಹನ ಪಕ್ಕದಲ್ಲಿ ಕೂತಳು. ಸುಸಜ್ಜಿತ ಸಭಾಸಮಾರಂಭ ನೋಡುಗರ ಕಣ್ಣಿಗೆ ಹಬ್ಬವಾಗುವಂತಿತ್ತು. ಸಿಂಹಾಸನಾರೂಢನಾದ ಸುಲ್ತಾನ ಮುಹಮ್ಮದ್ ಖುದಾಯಿ ಬಾದಶಾಹ ತನ್ನ ಘನತೆ ಗಾಂಭೀರ್ಯದೊಂದಿಗೆ ರಾಜ್ಯಾಡಳಿತದ ಕೆಲಸವನ್ನು ತನ್ನ ಬುದ್ಧಿವಂತಿಕೆ ಮತ್ತು ಜಾಣತನದಿಂದ ನಡೆಸಿದ. ಪರೀ ಖಾನಂ ತನ್ನ ಇಷ್ಟದಂತೆ, ಸಲಹೆಯಂತೆ ತನ್ನ ಮಾರ್ಗದರ್ಶನದಲ್ಲಿ ರಾಜ್ಯದ ಆಳ್ವಿಕೆಯನ್ನು ನಡೆಸಬೇಕೆಂದು ಲೆಕ್ಕ ಹಾಕಿಕೊಂಡಿದ್ದಳು. ಇವಳು ರಾಜ್ಯಾಡಳಿತದ ಕೆಲಸಗಳನ್ನು ತನ್ನ ಕೈವಶಮಾಡಿಕೊಳ್ಳುವುದಕ್ಕೆ ಸುಲ್ತಾನ್ ಮುಹಮ್ಮದನ ಪತ್ನಿ ವಿರೋಧ ವ್ಯಕ್ತಪಡಿಸಿದ್ದಳು. ಕೆಲವು ಸಮಯದ ನಂತರ ಸರದಾರರು ರಹಸ್ಯವಾಗಿ ಪರೀ ಖಾನಂಳನ್ನು ಭೇಟಿಯಾಗುತ್ತಿರುವುದು ಕಂಡುಬಂತು. ಈ ಸುದ್ದಿ ಸುಲ್ತಾನನಿಗೆ ತಿಳಿದಾಗ ಎಲ್ಲ ಮಧ್ಯವರ್ತಿಗಳನ್ನು ವಜಾಗೊಳಿಸಿ ರಾಜ್ಯಾಡಳಿತದ ಸಂಪೂರ್ಣ ಜವಾಬ್ದಾರಿಯನ್ನು ತಾನೇ ಸ್ವತಃ ವಹಿಸಿಕೊಂಡ. ನೆರೆಹೊರೆಯ ರಾಜ್ಯದ ಬಾದಶಾಹರಿಗೆ ಇರಾನಿನ ಸುಲ್ತಾನನೊಬ್ಬ ಅಂಧವ್ಯಕ್ತಿಯೆಂದು ತಿಳಿದು ಈ ದೇಶವನ್ನು ತಮ್ಮ ವಶಪಡಿಸಿಕೊಳ್ಳುವ ಲಾಲಸೆ ಉಂಟಾಯಿತು. ರೋಮ್ ಸಾಮ್ರಾಜ್ಯದ ಕಡೆಯಿಂದ ಮೂರು ನಾಲ್ಕು ಲಕ್ಷ ಸಂಖ್ಯೆಯ ದಂಡು ಈ ಕಡೆ ದಾಳಿಯಿಡಲು ಹವಣಿಸಿತು. ಫರಂಗಿಸ್ಥಾನ(ಇಂಗ್ಲೆಂಡ್) ಒಂದು ಲಕ್ಷ ಸೈನಿಕರು, ಕುರ್ದಿಸ್ಥಾನದಿಂದ ಬೃಹತ್ ಸಂಖ್ಯೆಯ ಸೈನಿಕರು, ಕಾಡು ಪ್ರದೇಶದ ಜನರ ದಂಡು ಹೀಗೆ ನಾಲ್ಕೂ ದಿಕ್ಕಿನ ಸರಹದ್ದು ಪ್ರದೇಶದಲ್ಲಿ ಸೈನಿಕರು ಜಮಾವಣೆಯಾದರು. ಇದನ್ನು ಪರಿಶೀಲಿಸಿದ ಸುಲ್ತಾನ್ ಮುಹಮ್ಮದ್ ಖುದಾಯಿ ತನ್ನ ಎಲ್ಲ ಸರದಾರರನ್ನು ಕರೆದು ವೈರಿಗಳನ್ನು ಓಡಿಸುವ ಬಗೆ ಹೇಗೆಂದು ಸಮಾಲೋಚನೆಯನ್ನು ನಡೆಸಿದ. ಎಲ್ಲರ ಅಭಿಪ್ರಾಯದಂತೆ ಸುಲ್ತಾನ್ ಮುಹಮ್ಮದನ ಹಿರಿಯ ಮಗ ಹಂಝಾ ಮಿರ್ಜಾನ ನೇತೃತ್ವದಲ್ಲಿ ವೈರಿಗಳನ್ನು ಎದುರಿಸಲು ಹೊರಡುವುದೆಂದು ನಿಶ್ಚಯ ಮಾಡಲಾಯಿತು. ಈ ತೀರ್ಮಾನಕ್ಕೆ ಸುಲ್ತಾನ್ ಮುಹಮ್ಮದ್ ಕೂಡ ಒಪ್ಪಿದ. ಆದರೆ, ಬಾದಶಾಹನ ಪತ್ನಿಗೆ ಈ ವಿಷಯ

ತಿಳಿದಾಗ 'ಈ ಕೆಲಸ ನೀವು ಹೇಳುವಷ್ಟು ಸುಲಭಸಾಧ್ಯವೆಂದು ತಿಳಿಯದಿರಿ. ಈ ಮಗನನ್ನು ಮುಂದಿನ ಬಾದಶಾಹನಾಗುವವನೆಂದು ಈಗಲೇ ನೀವು ತೀರ್ಮಾನ ಮಾಡಬೇಕು. ಹಂಝಾನನ್ನು ಅರಮನೆಯಲ್ಲೇ ಇರಿಸಬೇಕು. ನಾನು ನನ್ನ ಎರಡನೆಯ ಮಗನೊಂದಿಗೆ ರಣರಂಗಕ್ಕೆ ಪ್ರವೇಶಿಸುತ್ತೇನೆ' ಎಂದಳು. ಸುಲ್ತಾನ ತನ್ನ ಪತ್ನಿಯ ಮಾತಿನ ಮೇಲೆ ವಿಶ್ವಾಸ ವ್ಯಕ್ತಪಡಿಸಿದ. ಹಂಝಾ ಮಿರ್ಜಾನಿಗೆ ಖಜಾನೆ, ಮತ್ತಿತರ ಜವಾಬ್ದಾರಿಗಳನ್ನು ಎಚ್ಚರದಿಂದ ನಿಭಾಯಿಸುವಂತೆ ಸಲಹೆ ನೀಡಿ ರಾಣಿ ಬೇಗಂ ತನ್ನ ಎರಡನೆಯ ಮಗನೊಂದಿಗೆ ಸೈನ್ಯವನ್ನು ನಡೆಸಿಕೊಂಡು ಯುದ್ಧಕ್ಕೆ ಹೊರಟಳು. ಬೇಗಮಳು ಕೆಲವು ಸರದಾರರನ್ನು ಅಜರ್‌ಬೈಜಾನಿನ ಗಡಿಪ್ರದೇಶಕ್ಕೆ, ಕೆಲವರನ್ನು ಕಾಡುಪ್ರದೇಶದ ಕಡೆ ಕಳುಹಿಸಿದಳು.

ಬೇಗಮಳು ಆಜರ್‌ಬೈಜಾನಿನ ಸರದಾರರ ಸಹಾಯವನ್ನು ಪಡೆದಳು. ಅಲ್ಲಿನ ಸಂಪೂರ್ಣ ಸರದಾರರು ಅವಳ ಯೋಜನೆಗೆ ಸಹಮತ ನೀಡಿ ಸಹಕರಿಸಿದರು. ಬೇಗಮಳು ಎಲ್ಲರಿಗೂ ಉಡುಗೊರೆ ನೀಡಿ ಗೌರವಿಸಿ ಎಲ್ಲರನ್ನೂ ಸರಹದ್ದಿನ ಕಡೆಗೆ ಕಳುಹಿಸಿದಳು. ಸ್ವತಃ ಬೇಗಮಳೂ ಕೂಡ ತನ್ನದೊಂದು ಏಳು ಸಾವಿರ ಸೈನಿಕರನ್ನೊಳಗೊಂಡ ದಂಡನ್ನು ರೋಮ್ ಸಾಮ್ರಾಜ್ಯದ ಗಡಿಯ ಕಡೆಗೆ ಕಳುಹಿಸಿದಳು. ಹೆಚ್ಚು ಕಮ್ಮಿ ಎರಡು ತಿಂಗಳ ಕಾಲ ಯುದ್ಧ ನಡೆಯಿತು. ಎರಡೂ ಕಡೆಯಲ್ಲಿ ಬಹಳಷ್ಟು ಜನರು ಅಸುನೀಗಿದರು. ಆದರೆ ಬಾದಶಾಹ ಮತ್ತು ಬೇಗಮರ ಸೈನ್ಯ ಪ್ರಾಮಾಣಿಕತೆ, ಸ್ವಾಮಿನಿಷ್ಠೆ ಮತ್ತು ಶೌರ್ಯದಿಂದ ಕಾದಾಡಿ ಜಯಶಾಲಿಗಳಾದರು. ಬೇಗಮ್ ನೇತೃತ್ವದ ಸೈನ್ಯಕ್ಕೆ ಅಪಾರ ಸಂಪತ್ತು ಸಾಮಾನುಗಳು, ಶಸ್ತ್ರಾಸ್ತ್ರಗಳು ವಶವಾಯಿತು. ಈ ಯುದ್ಧವು ಮೂರು ತಿಂಗಳಗಳ ಕಾಲ ನಡೆಯಿತು. ವಿಜಯದ ವಾರ್ತೆಯನ್ನು ಸಾರುತ್ತ ಹಿಂತಿರುಗಿ ಬಂದರು. ಇವರ ವೈರಿಗಳು ಇಷ್ಟು ದೊಡ್ಡರೀತಿಯ ವಿಜಯಪ್ರಾಪ್ತಿಯಾದ ಸುದ್ದಿ ತಿಳಿದ ಇವರ ವೈರಿಗಳು ಹೆದರಿ ಕಂಗಾಲಾಗಿ ತಮ್ಮ ದೇಶಕ್ಕೆ ವಾಪಾಸಾದರು. ಈ ಯುದ್ಧದಲ್ಲಿ ರೋಮನರಿಗೆ ದೊಡ್ಡ ನಷ್ಟವಾಯಿತು. ಅವರ ಅತ್ಯಂತ ಹೆಚ್ಚು ಸಂಖ್ಯೆಯಲ್ಲಿ ಸಾವಿಗೀಡಾಗಿದ್ದರು. ಅವರ ಪ್ರಮುಖ ಸೇನಾಧಿಪತಿಯೂ ಕೂಡ ಬಂದಿಯಾಗಿದ್ದ. ಯುದ್ಧದಲ್ಲಿ ವಶವಾದ ನಗದು ಒಂದು ಲಕ್ಷ ತೂಮಾನಿನ ಮೌಲ್ಯದ್ದಾಗಿತ್ತು. ಈ ಪ್ರಚಂಡ ವಿಜಯಕ್ಕೆ ಸುಲ್ತಾನನ ಬೇಗಮಳ ಜಾಣತನ, ಬುದ್ಧಿವಂತಿಕೆಯಿಂದ ಸಾಧ್ಯವಾಗಿತ್ತು.

ಬೇಗಮಳ ವಿಜಯದ ನಂತರ ಸರ್ವ ಸರದಾರರು ಉಡುಗೊರೆಗಳನ್ನು ನೀಡಿ ಅಭಿನಂದನೆಗಳನ್ನು ಸಲ್ಲಿಸಿದರು. ಆಸ್ಥಾನದ ಕೆಲವು ಸರದಾರರು ಒಂದೆಡೆ ಸೇರಿ 'ಬೇಗಮಳು ನಮಗೆ ಮೋಸಮಾಡಿದ್ದಾಳೆ. ನಮ್ಮನ್ನು ಮೊದಲು ಕಳುಹಿಸಿಕೊಟ್ಟು ನಂತರ ತನ್ನ ಸಂಬಂಧಿಕರು, ಬೆಂಬಲಿಗರೊಂದಿಗೆ ಸೇರಿ ಸೈನ್ಯ ಕಟ್ಟಿಕೊಂಡು ಬಂದಳು.

ವಿಜಯ ಅವಳ ಹೆಸರಿಗೆ ಬಂತು' ಎಂದು ಅಸೂಯೆ ಪಟ್ಟುಕೊಂಡು ಮಾತಾಡಿಕೊಂಡರು. ಅಜ್‌ಬಕ್ ಪಂಗಡದ ರಾಜಕುಮಾರ ಬಹಳ ಬಲಶಾಲಿ ಯುವಕನಾಗಿದ್ದು, ಆಗಾಗ ಅರಮನೆಗೆ ಬಂದು ಹೋಗುವ ಪರಿಪಾಠವಿತ್ತು. ಇವನ ಜೊತೆ ಬೇಗಮಳಿಗೆ ಅಕ್ರಮ ಸಂಬಂಧವಿದೆಯೆಂದು ಈ ಸರದಾರರು ಅರೋಪ ಹೊರಿಸಿದರು. ಎಲ್ಲ ಸರದಾರರು ಸೇರಿ ಸುಲ್ತಾನ್ ಮುಹಮ್ಮದನ ಬಳಿಗೆ ಹೋಗಿ 'ಸಫಿವಿ ತಲೆಮಾರಿನ ಸುಲ್ತಾನರ ವಂಶಕ್ಕೆ ಅವಮಾನ, ಅವಮರ್ಯಾದೆಯುಂಟಾಗುತ್ತಿರುವುದನ್ನು ನಾವು ನೋಡಲಾರೆವು. ನಮ್ಮ ತಲೆಗಳು ನಾಚಿಕೆಯಿಂದ ತಗ್ಗಿವೆ. ನೀವು ಕೂಡಲೇ ಬೇಗಮಳನ್ನು ಕೊಂದು ಹಾಕಿ, ಈ ನಾಚಿಕೆಗೆಟ್ಟ ಅವಮರ್ಯಾದೆಯ ಪ್ರಕರಣವು ಇಲ್ಲಿಗೇ ಮುಕ್ತಾಯಗೊಳ್ಳಲಿ!' ಎಂದು ಕಿವಿಯೂದಿದರು. ಸುಲ್ತಾನ್ ಮುಹಮ್ಮದ್ ಈ ಸರದಾರರನ್ನು ಸಮಾಧಾನ ಪಡಿಸಲು ಪ್ರಯತ್ನಿಸಿದನಲ್ಲದೆ ಅವಳ ನಿರಪರಾಧಿತ್ವ ಮತ್ತು ಪವಿತ್ರತೆಯ ಸಾಕ್ಷಿ ನೀಡಿ ಹೇಳಿದರೂ ಕ್ರೂರಿಗಳಾದ ಸರದಾರರು ಅವನ ಮಾತು ಕೇಳದೆ ಬೇಗಮಳನ್ನು ಅರಮನೆಯಿಂದ ದರದರನೆ ಎಳೆದು ತಂದು ಸುಲ್ತಾನ್ ಮುಹಮ್ಮದನ ಕಾಲಬುಡದಲ್ಲಿ ಹಾಕಿದ. ಬೇಗಮಳು ಸುಲ್ತಾನನ ಮುಂದೆ ಸೆರಗೊಡ್ಡಿ ತನ್ನ ನಿರಪರಾಧಿತ್ವವನ್ನು ಸಾಬೀತು ಪಡಿಸುತ್ತಾ 'ಈ ಸರದಾರರು ನಾಚಿಗೆಕೆಟ್ಟ ವ್ಯಕ್ತಿಗಳು ಯಾರೂ ಸ್ವಾಮಿನಿಷ್ಠರಲ್ಲ, ಪ್ರಾಮಾಣಿಕರಲ್ಲ. ಇವರು ನನ್ನ ಮೇಲೆ ಇಲ್ಲ ಸಲ್ಲದ ಆರೋಪ ಮಾಡಿ ನಿಮಗೆ ಅವಮಾನ ಮಾಡುತ್ತಿದ್ದಾರೆ. ನನ್ನನ್ನು ಅವಮರ್ಯಾದೆ ಮಾಡುವುದಕ್ಕೆ ಕಾರಣವೇನೆನ್ನುವುದನ್ನು ಪರಿಶೀಲಿಸಿ ನೋಡಿ' ಎಂದು ಪರಿಪರಿಯಾಗಿ ಬೇಡಿಕೊಂಡಳು. ಸುಲ್ತಾನನಿಗೆ ತನ್ನ ಪತ್ನಿ ನಿರ್ದೋಷಿಯೆಂದು ತಿಳಿದಿದ್ದರೂ ಆಸ್ಥಾನದಲ್ಲಿ ಕ್ರೂರಿ ಸರದಾರರದ್ದೇ ಮೇಲುಗೈಯಾಗಿತ್ತು. ದೃಷ್ಟಿಹೀನ ಸುಲ್ತಾನನ ಮುಂದೆ ಅವನ ಪತ್ನಿಯನ್ನು ಪೀಡಿಸಿ, ಅವಮಾನಿಸಿ, ಕೊಂದು ಹಾಕಿದರು. ಸುಲ್ತಾನನಿಗೆ ತನ್ನ ಮುಂದೆ ವಿನಾಕಾರಣ ಓರ್ವ ಮಹಿಳೆಯ ಕೊಲೆ ನಡೆದು ರಕ್ತಪಾತವಾದುದಕ್ಕೆ ಬಹಳ ನೋವುಂಟಾಯಿತು. ಕೆಲವು ದಿನಗಳ ನಂತರ ಈ ಅನ್ಯಾಯ ಮಾಡುವಂತೆ ಒತ್ತಾಯಿಸಿದ ಎಲ್ಲ ಸರದಾರರನ್ನು ಒಬ್ಬೊಬ್ಬರನ್ನಾಗಿ ಹತ್ಯೆ ಮಾಡಿಸಿದ.

**ರೋಮಿನ ಸೈನ್ಯ ಆಗಮಿಸಿದ ವಿವರಗಳು:**

ಸುಲ್ತಾನ್ ಮುಹಮ್ಮದ್ ದೃಷ್ಟಿಹೀನನಾಗಿದ್ದರಿಂದ, ಅವನ ಬಲಗೈಯಂತಿದ್ದ ಬೇಗಮಳು ಕೂಡ ತೀರಿಕೊಂಡು ಏಕಾಂಗಿಯಾಗಿದ್ದ. ತನ್ನ ರಾಜ್ಯಾಡಳಿತದ ಎಲ್ಲ ಜವಾಬ್ದಾರಿಯನ್ನು ತನ್ನ ಮಂತ್ರಿಗಳ ಕೈಗೆ ನೀಡಿದ್ದ. ಇದೇ ಸಮಯದಲ್ಲಿ ರೋಮ್ ಚಕ್ರವರ್ತಿಯ ಬೃಹತ್ ಸೇನೆಯು ಅಜರ್‌ಬೈಜಾನ್ ರಾಜ್ಯದ ಸರಹದ್ದಿಗೆ ಆಗಮಿಸಿತು. ಮತ್ತೊಮ್ಮೆ ರೋಮ್ ಸೈನ್ಯವನ್ನು ಸುಲ್ತಾನ ಎದುರಿಸಬೇಕಾಗಿ ಬಂತು.

ಶೌರ್ಯವಂತನಾದ ರಾಜಕುಮಾರ ಹಂಝ ಮಿರ್ಜಾ ಬಾಲ್ಯದಿಂದಲೇ ಯುದ್ಧ ನೈಪುಣ್ಯದ ತರಬೇತಿಪಡೆದಿದ್ದ. ಇವನು ತನ್ನ ಸೈನ್ಯದೊಂದಿಗೆ ರೋಮನರ ಸೈನ್ಯದ ಮೇಲೆ ದಾಳಿ ನಡೆಸಿದ. ಅವರ ಮೇಲಿನ ಯದ್ಧದಲ್ಲಿ ಜಯಶಾಲಿಯಾದ. ಅದೇ ಸಂದರ್ಭದಲ್ಲಿ ಖೊರಾಸಾನನ್ನು ವಶಪಡಿಸಿಕೊಂಡಿದ್ದ ಅಬ್ದುಲ್ಲಾ ಖಾನ್ ಅಜ್ಬೇಕ್‌ನನ್ನು ಎದುರಿಸಿ ಜಯಗಳಿಸಿ ನಂತರ ಸಮರ್‌ಖಂಡ್ ಪ್ರಾಂತ್ಯದ ಮೇಲೆ ದಾಳಿನಡೆಸಿ ಜಯಗಳಿಸಿದ.

ಹಿಂದೆ ಸುಲ್ತಾನ್ ಮುಹಮ್ಮದನ ಒಪ್ಪಿಗೆಯ ಮೇರೆಗೆ ಅಲಿ ಕುಲಿ ಖಾನ್, ಅಬ್ಬಾಸ್ ಮಿರ್ಜಾನ ಬೆಂಬಲ ಪಡೆದು ಖೊರಾಸಾನಿನಲ್ಲಿ ಆಳ್ವಿಕೆನಡೆಸುತ್ತಿದ್ದ. ನಂತರ ಅಬ್ದುಲ್ಲ ಅಜ್ಬೇಕನ ಕೈಗೆ ಸೇರಿತು. ಆಗ ತಹಮಾಸ್ಫ್ ಮತ್ತು ಅಬೂತಾಲಿಬ್ ಮಿರ್ಜಾ ಬಹಳ ಚಿಕ್ಕವರಾಗಿ ತಮ್ಮ ತಂದೆಯ ಪಕ್ಕದಲ್ಲಿರುತ್ತಿದ್ದರು. ಅಬ್ಬಾಸ್ ಮಿರ್ಜಾ ಖೊರಸಾನಿಗೆ ಪ್ರಯಾಣ ಮಾಡಿದ ಸುದ್ದಿ ಅಮೀರ್ ಖಾನ್‌ನಿಗೆ ತಿಳಿದಾಗ ಅವನು ಹಂಝ ಮಿರ್ಜಾನಿಗೆ ಹೇಳಿದ 'ನನಗೆ ನಿನ್ನನ್ನು ಸಿಂಹಾಸನದಲ್ಲಿ ಕೂರಿಸಲು ಆಸೆಯಿದೆ. ಆದರೆ ನಿನ್ನ ಸಹೋದರ ಅಬ್ಬಾಸ್ ಮಿರ್ಜಾ, ಅಲಿ ಕುಲಿ ಖಾನನೊಂದಿಗೆ ಹೋಗಿ ಖೊರಾಸಾನಿನಲ್ಲಿ ಆಳ್ವಿಕೆಯನ್ನು ನಡೆಸಿದ್ದಾನೆ. ನೀನು ಉಪಾಯದಿಂದ ಮತ್ತು ಸಮಾಧಾನ ಚಿತ್ತದಿಂದ ಅವನೊಂದಿಗೆ ಮಾತುಕತೆ ನಡೆಸಿ ಅಲ್ಲಿಂದ ದೂರವಿರಿಸಬೇಕೆನ್ನುವುದು ನನ್ನ ಸಲಹೆ. ಇದರಿಂದ ಯುದ್ಧವೂ ನಡೆಯದು, ಹಿಂಸೆಯೂ ಆಗದು. ನಾನು ನಿನಗೆ ನನ್ನ ಸಿಂಹಾಸನವನ್ನು ನೀಡಲು ತಯಾರಾಗಿದ್ದೇನೆ' ಎಂದು ಹೇಳಿದ. ಅವನ ಮಾತಿಗೆ ಒಪ್ಪಿದ ಹಂಝ ಮಿರ್ಜಾ ತನ್ನ ತಮ್ಮ ಅಬ್ಬಾಸ್ ಮಿರ್ಜಾನಿಗೆ ಸಮಾಧಾನ ಚಿತ್ತದೊಂದಿಗೆ ಸೌಮ್ಯವಾದ ಪತ್ರವೊಂದನ್ನು ಬರೆದ. ಇದರಲ್ಲಿ ರಾಜ್ಯಾಡಳಿತದ ಕೆಲಸಗಳು ಅಪೂರ್ಣವಾಗಿವೆ, ತಂದೆಯವರ ಪರಿಸ್ಥಿತಿ ನಿನಗೂ ತಿಳಿದಿದೆ. ನಮ್ಮ ದೇಶದ ಒಳ ರಾಜಕೀಯ ಕಲಾಪಗಳು ಸರಿಯಾಗಿಲ್ಲ, ಗೊಂದಲವೆದ್ದಿದೆ. ಈಗ ನಾವಿಬ್ಬರೂ ಒಂದಾಗಿದ್ದು ದೇಶದ ಆಡಳಿತದ ಜವಾಬ್ದಾರಿಯನ್ನು ಹೊರಬೇಕಾಗಿದೆ. ಅಬ್ಬಾಸ್ ಮಿರ್ಜಾನಿಗೆ ಪತ್ರವು ತಲಪಿ, ಓದಿದಾಗ ಆ ಪತ್ರದ ಹಿಂದಿನ ಗೂಢಾರ್ಥಗಳನ್ನು ಮನನಮಾಡಿಕೊಂಡ. ಪತ್ರಕ್ಕೆ ಉತ್ತರ ರೂಪದಲ್ಲಿ, ನೀನು ನನ್ನ ಹಿರಿಯಣ್ಣನಾಗಿರುವಿ. ನಿನ್ನ ಸಲಹೆಯನ್ನು ಖಂಡಿತ ಮಾನ್ಯ ಮಾಡುತ್ತೇನೆ. ಆದರೆ ನನ್ನ ತಾಯಿಯ ಅನ್ಯಾಯವಾಗಿ ಕೊಲೆಯಾಯಿತಲ್ಲ ಅದಕ್ಕೆ ಯಾರು ಕಾರಣರು ಎಂದು ತಿಳಿಯಬೇಕು. ನಿನಗೆ ನಾಚಿಕೆ ಎಂಬುದು ಇದ್ದರೆ ನಮ್ಮ ತಾಯಿಯ ಕೊಲೆಗಡುಕನನ್ನು ಗುರುತಿಸು. ಅವನ ಮೇಲೆ ಕಠಿಣ ಕ್ರಮ ಕೈಗೊಳ್ಳು. ಇದಾದನಂತರ ನಾನು ನಿನ್ನ ಜೊತೆಗೆ ಬರಲು ತಯಾರಾಗಿದ್ದೇನೆ' ಎಂದು ಬರೆದ. ಇದನ್ನು ಓದಿ ಹಂಝ ಮಿರ್ಜಾ ಚಡಪಡಿಸಿದ. ಒಳಗೊಳಗೆ ತನ್ನ ಕೃತ್ಯಕ್ಕೆ ನಾಚಿದ. ಒಮ್ಮೆ ದರ್ಬಾರು ಖಾಲಿಯಾಗಿದ್ದಾಗ

ಅಮೀರ್ ಖಾನನನ್ನು ಕರೆದು ನಾನು ನಿನ್ನ ಶಿರಚ್ಛೇದ ಮಾಡಲಿದ್ದೇನೆ ಎಂದು ಘೋಷಿಸಿದ. ಅಮೀರ್ ಖಾನ್ ತನ್ನ ಬಲ ಮತ್ತು ಅಹಂಕಾರದಿಂದ ಇದು ಸಾಧ್ಯವಾಗದು ಎಂದು ತಿಳಿದಿದ್ದ. ಆದರೆ ಹಂರ್ಝು ಮಿರ್ಜಾನ ಆಜ್ಞೆಯ ಮೇರೆಗೆ ಅಮೀರ್ ಖಾನನ ತಲೆಹಾರಿಸಿಬಿಡಲಾಗಿ ಸತ್ತುಬಿದ್ದ. ಹೀಗೆ ಅವನು ನಡೆಸಲೆಳೆಸಿದ ಕುತಂತ್ರವೂ ಕೊನೆಗೊಂಡಿತು. ಈ ಘಟನೆಯ ನಂತರ ಅಮೀರ್ ಖಾನನ ಪಂಗಡಕ್ಕೆ ಸೇರಿದ ಮೂರು ಸಾವಿರ ಸಂಖ್ಯೆಯ ಜನರು ಹಂರ್ಝು ಮಿರ್ಜಾನ ವಿರುದ್ಧ ದಾಳಿ ನಡೆಸಿದರು. ಹಂರ್ಝಾ ಮಿರ್ಜಾ ಕೂಡ ತನ್ನ ಶಕ್ತಿಶಾಲಿ ಸೈನ್ಯದೊಂದಿಗೆ ಸಶಕ್ತವಾಗಿ ಎದುರಿಸಿದ.

ಹಂರ್ಝು ಮಿರ್ಜಾನ ವಯಸ್ಸು ಆಗ ಬರಿಯ ಹದಿನೇಳು ವರ್ಷವಾಗಿತ್ತು. ಆದರೆ ಪರಿಣಿತ ಯೋಧನಂತೆ ಹೋರಾಡಿದ ಆತ ಅಮೀರ್ ಖಾನನ ಸೈನ್ಯವನ್ನು ಚೆಲ್ಲಪಿಲ್ಲಿಯಾಗಿ ಓಡುವಂತೆ ಮಾಡಿದ. ಇಸ್ಮೆ ಖಾನ್, ಅಲಿ ಖುಲಿ ಖಾನ್ ಮತ್ತು ಉಮ್ಮತ್ ಖಾನ್ ಮುಂತಾದ ಅಮೀರ್ ಖಾನನ ಸರದಾರರು ಯುದ್ಧದಲ್ಲಿ ಮಡಿದರು. ನಂತರ ಹಂರ್ಝು ಮಿರ್ಜಾ ಮೂರು ಸಾವಿರ ಹೊಸ ಸೈನಿಕರೊಂದಿಗೆ ತನ್ನ ದಂಡನ್ನು ಕಟ್ಟಿ ರೋಮಿಗೆ ಕಳುಹಿಸಿದ. ಸರಣಿ ವಿಜಯೋತ್ಸವ ಗಳಿಸಿದ ಹಂರ್ಝು ಮಿರ್ಜಾ ತನ್ನ ಬದುಕಿನ ಉದ್ದಕ್ಕೂ ಸಫಲ ಆಡಳಿತಗಾರನಾಗಿ ತನ್ನ ವಶದಲ್ಲಿದ್ದ ದೇಶಗಳನ್ನು ಆಳಿದ. ಸ್ವಲ್ಪ ಸಮಯದ ಬಳಿಕ ಅವನಿಗೆ ತನ್ನ ತಂದೆಯನ್ನು ಕಾಣುವ ಹಂಬಲವುಂಟಾಗಿ ಗರ್ಝ್‌ವೀನ್‌ಗೆ ಹೋದ. ಅಲ್ಲಿ ತಲಪಿದಾಗ ಅಬೂತಾಲಿಬ್ ಮಿರ್ಜಾ ಅವನ ವಿರುದ್ಧ ಬಂಡಾಯವೆದ್ದ. ಕೆಲವು ಸರದಾರರು ಇವರ ಮಧ್ಯೆ ಸಂಧಾನಮಾಡಲು ಯತ್ನಿಸಿದರು. ಹಂರ್ಝು ಮಿರ್ಜಾ ಎಳೆಯ ವಯಸ್ಸಿನ ಯುವಕನಾದುದರಿಂದ ಅವರ ಕುತಂತ್ರವನ್ನು ಅರಿಯಲಿಲ್ಲ. ಅವರ ಸಲಹೆಗಳಿಗೆ ಒಪ್ಪಿಕೊಂಡ. ಅಬೂ ತಾಲಿಬನನ್ನು ತನ್ನ ಮಂತ್ರಿಗಳಲ್ಲಿ ಒಬ್ಬನನ್ನಾಗಿ ನೇಮಿಸಿದ. ಇನ್ನಿತರ ಕೆಲವು ಸರದಾರರನ್ನು ಕೂಡ ತನ್ನ ರಾಜ್ಯಾಡಳಿತದಲ್ಲಿ ಸೇರಿಸಿಕೊಂಡ. ಒಂದು ದಿನ ಹಂರ್ಝು ಮಿರ್ಜಾನನ್ನು ಸ್ನಾನದ ಮನೆಗೆ ಕರೆಸಿ ಅಬೂತಾಲಿಬ್ ಮಿರ್ಜಾ ಕೊಂದುಹಾಕಿದ. ಮುಂದೆ ಹಂರ್ಝು ಮಿರ್ಜಾನ ಬೆಂಬಲಿಗರು ಮತ್ತು ಅಮೀರ್ ಖಾನನ ಪಂಗಡದವರ ಮಧ್ಯೆ ತಿಕ್ಕಾಟ ನಡೆಯಿತು. ಮತ್ತೆ ಯುದ್ಧ ನಡೆಯಿತು. ಎರಡೂ ಕಡೆಯ ಬಹಳಷ್ಟು ಸೈನಿಕರು ಹತರಾದರು. ತೀರಿಕೊಂಡವರಲ್ಲಿ ಕೆಲವು ಸರದಾರರು ಹಿಂದೆ ಷಾ ತಹಮಾಸ್ಫನನ್ನು ಕೊಲೆಮಾಡಿದವರೂ ಸೇರಿದ್ದರು. ಅವರ ಮಧ್ಯೆ ಸಂಧಾನ ನಡೆಯಿತು, ಮತ್ತೆ ವೈರಿಗಳಾದರು, ನಂತರ ಯುದ್ಧ ನಡೆದು ಕೊಲ್ಲಲ್ಪಟ್ಟರು. ಇದು ದೇವರ ಇಚ್ಛೆಯಲ್ಲದೆ ಇನ್ನೇನು? ಈ ಘಟನೆಗಳ ಸುದ್ದಿ ತಿಳಿದ ರೋಮನರಿಗೆ ಸಮಾಧಾನವಾಯಿತು. ಅವರು ತಬ್ರೇಜಿನ ಕಡೆ ದಾಳಿ ನಡೆಸಿದರು. ಅವರಿಗೆ ಅಲ್ಲಿ

ಕೋಟೆ ಇಲ್ಲದಿರುವುದು ಕಂಡುಬಂತು. ಇವರು ಹಿಂದಿನ ರಾಜರು ಕಟ್ಟಿಸಿದ್ದ ಕಟ್ಟಡಗಳನ್ನು ನಾಶಪಡಿಸಿ ಕೋಟೆಯನ್ನು ಕಟ್ಟಿಸಿದರು. ಮುಂದುವರಿದು ಆಜರ್‌ಬೈಜಾನ್, ಶೇರ್‌ವಾನ್ ದೇಶಗಳ ಮೇಲೆ ಆಕ್ರಮಣ ನಡೆಸಿ ತಮ್ಮ ವಶಕ್ಕೆ ಪಡೆದುಕೊಂಡರು. ಈ ದೇಶಗಳಲ್ಲಿ ತಮ್ಮ ಆಳ್ವಿಕೆಯನ್ನು ಗಟ್ಟಿಮಾಡಿಕೊಂಡರು. ಈ ಎಲ್ಲ ವಿಷಯಗಳು ಅಲಿ ಕುಲಿ ಖಾನ್ ಮತ್ತು ಅಬ್ಬಾಸ್ ಮಿರ್ಜಾರಿಗೆ ತಿಳಿದಾಗ ಬಹಳ ಸಂತಸಪಟ್ಟುಕೊಂಡರು.

**ಅಬ್ಬಾಸ್ ಮಿರ್ಜಾನ ರಾಜ್ಯಾಡಳಿತದ ವಿವರಗಳು:**

ಅಬ್ಬಾಸ್ ಮಿರ್ಜಾನ ಆಳ್ವಿಕೆಗೆ ಅಲಿ ಕುಲಿ ಖಾನ್ ಬೆಂಬಲನೀಡಿದ್ದ. ಅವನಿ ಸೈನಿಕ ಮತ್ತು ಶಸ್ತ್ರಾಸ್ತ್ರಗಳ ಸಹಾಯವನ್ನೂ ಮಾಡಿದ್ದ. ಅಬ್ಬಾಸ್ ಮಿರ್ಜಾನಿಗೆ ಶಿಕಾರಿ ಮಾಡುವ ಬಹಳ ಶೋಕಿಯಿತ್ತು. ಒಮ್ಮೆ ಶಿಕಾರಿಗಾಗಿ ಕಾಡಿಗೆ ಹೋದಾಗ ಮುರ್ಷದ್ ಕುಲಿ ಖಾನ್ ಮತ್ತು ಅವನು ಒಂದೇ ಕಾಡಿನಲ್ಲಿದ್ದದ್ದು ತಿಳಿಯಿತು. ಈ ಕಾಡು ಅವನ ಸುಪರ್ದಿಗೆ ಸೇರಿತ್ತು. ಅಬ್ಬಾಸ್ ಮಿರ್ಜಾನಿಗೆ ಶಿಕಾರಿ ಸಿಗದಿರುವುದರಿಂದ ವಾಪಸಾಗಿದ್ದ. ಒಬ್ಬನೇ ಕೂತಿದ್ದ. ಆ ಸಮಯದಲ್ಲಿ ಮುರ್ಷದ್ ಕುಲಿ ಖಾನ್ ಅಲ್ಲಿಗೆ ಬಂದ. ಅಬ್ಬಾಸ್ ಮಿರ್ಜಾನನ್ನು ಎಬ್ಬಿಸಿ ತನ್ನ ರಾಜ್ಯಕ್ಕೆ ಬಲಾತ್ಕಾರದಿಂದ ಕರೆದೊಯ್ದ. ಅಲೀ ಕುಲಿ ಖಾನನಿಗೆ ಅಬ್ಬಾಸ್ ಖಾನನು ಬರುವುದು ತಡವಾದದ್ದು ಕಂಡು ಅವನು ಸೈನ್ಯವನ್ನು ತೆಗೆದುಕೊಂಡು ಮುರ್ಷದ್ ಕುಲಿ ಖಾನನ ಮೇಲೆ ದಾಳಿ ನಡೆಸಿದ. ಮುರ್ಷದ್ ಕೂಡ ಎದುರಿಸಿದನಾದರೂ ಅವನು ಜಯಗಳಿಸಲಾಗಲಿಲ್ಲ. ಅಬ್ಬಾಸ್ ಮಿರ್ಜಾನನ್ನು ಅಲ್ಲಿಂದ ಬಿಡಿಸಿ ಅಲಿ ಕುಲಿ ಖಾನ್ ರಾಜ್ಯದ ದರ್ಬಾರಿನಲ್ಲಿ ಹಾಜರುಪಡಿಸಿದ. ಸೋತ ಮುರ್ಷದ್ ಕುಲಿ ಖಾನ್ ಈ ಘಟನೆಗೆ ಕ್ಷಮಾಪಣೆ ಕೇಳಿದಾಗ ಅವನನ್ನು ಕರೆದು ತನ್ನ ಆಸ್ಥಾನದ ಕೆಲಸ ಕಾರ್ಯಗಳ ಒಂದು ಪ್ರಮುಖ ಹುದ್ದೆಯಲ್ಲಿ ಸೇರಿಸಿಕೊಂಡ.

ಫಾರಸ್(ಇರಾನ್)ನ ಸರದಾರರಿಗೆ ಈ ವರ್ತಮಾನ ತಲಪಿದಾಗ ಶಾದಿ ಬೇಗ್‌ನ ಮಗ ಮೆಹದಿ ಕುಲಿ ತಮ್ಮ ಅಮೀರನನ್ನಾಗಿ ಮಾಡಿ ಅಬ್ಬಾಸ್ ಮಿರ್ಜಾನ ಸೇವೆಗೆ ಹಾಜರಾದರು. ತಮ್ಮ ಬೆಂಬಲವನ್ನು ನೀಡುವ ಆಶ್ವಾಸನೆಯನ್ನು ನೀಡಿದರು. ಸಮಯ ಸಾಗುತ್ತ ಅಬ್ಬಾಸ್ ಮಿರ್ಜಾ ತನ್ನ ಒಂದು ಬೃಹತ್ತಾದ ಸೈನ್ಯವೊಂದನ್ನು ಕಟ್ಟಿಕೊಂಡ. ಆರು ಸಾವಿರ ಸೈನಿಕರೊಂದಿಗೆ ತನ್ನ ತಂದೆಯ ಬಳಿ ಹೋಗಿ ಅವನ ಜೊತೆಗೆ ಆಳ್ವಿಕೆಯನ್ನು ನಡೆಸತೊಡಗಿದ. ನಂತರ ಮುರ್ಷದ್ ಕುಲಿ ಖಾನನನ್ನು ತನ್ನ ಪಂಗಡದ ನಾಯಕನನ್ನಾಗಿ ಮಾಡಿದ. ರಾಜ್ಯಾಡಳಿತದ ಕೆಲವು ಜವಾಬ್ದಾರಿಗಳನ್ನು ಇವನಿಗೆ ಒಪ್ಪಿಸಿದ. ಅಬ್ಬಾಸ್ ಮಿರ್ಜಾ ಬಾದಶಾಹಿ ಪಟ್ಟದಿಂದ ನಿವೃತ್ತನಾದ.

ಸುಲ್ತಾನ್ ಮುಹಮ್ಮದ್ ತನ್ನ ಮಗನನ್ನು ಫರ್‌ಹಾದ್ ಖಾನನ ಜೊತೆಗೆ ತಬರದ್ ಕೋಟೆಗೆ ಕಳುಹಿಸಿಕೊಟ್ಟ. ಮೆಹದಿ ಕುಲಿ ಖಾನ್ ಓರ್ವ ಬಹಳ ಬುದ್ಧಿವಂತ, ಶೂರ ವ್ಯಕ್ತಿಯಾಗಿ ಬಾದಶಾಹನ ಆಪ್ತರಲ್ಲಿ ಓರ್ವನಾಗಿದ್ದ. ಅವನ ಬಗ್ಗೆ ಬಾದಶಾಹರಿಗೆ ಬಹಳ ಗೌರವವಿತ್ತು. ಮುರ್ಷದ್ ಕುಲಿ ಖಾನ್ ಇವನ ಬಗ್ಗೆ ಅಸೂಯೆಪಟ್ಟುಕೊಂಡಿದ್ದ. ಇವನನ್ನು ಬಹಳ ಸಂಶಯದಿಂದ ನೋಡುತ್ತಿದ್ದ. ಇದರಿಂದಾಗಿ ಮೆಹದಿಯನ್ನು ದೂರವಿರಿಸುವುದಕ್ಕಾಗಿ ಇನ್ನಿತರ ಸರದಾರರೊಂದಿಗೆ ಸೇರಿ ಮಸಲತ್ತು ಮಾಡುತ್ತಿದ್ದ. ಹೀಗೆ ಈ ಸರದಾರರು ಇಬ್ಬರ ನಡುವೆ ವೈರತ್ವ ಹೆಚ್ಚಿಸುವುದಕ್ಕೆ ಅವಕಾಶವನ್ನು ಮಾಡಿಕೊಡುತ್ತಿದ್ದರು. ಒಮ್ಮೆ ಮೆಹದಿ ಕುಲಿ ಖಾನ್ ತನ್ನ ಮನೆಯಲ್ಲಿ ಒಂಟಿಯಾಗಿದ್ದ ವೇಳೆ ಮುರ್ಷದ್ ಅಲ್ಲಿಗೆ ಹೋದ. ಅವನನ್ನು ಒಂದು ಕೋಣೆಗೆ ಎಳೆದುಕೊಂಡು ಬಂದು ಕೊಂದುಹಾಕಿದ. ಅಬ್ಬಾಸ್ ಬಾದಶಾಹನಿಗೆ ಈ ವಿಚಾರವು ತಿಳಿದಾಗ ಮುರ್ಷದನನ್ನು ಯಾಕೆ ಹೀಗೆ ಮಾಡಿದೆ? ಎಂದು ಕೇಳಿದ. ಅವನು ಕುತಂತ್ರಗಳನ್ನು ಮಾಡುತ್ತಿದ್ದನಾದುದರಿಂದ ನಮ್ಮ ಮಧ್ಯೆ ಅವನನ್ನು ಇಲ್ಲವಾಗಿಸಿದೆ. ಅವನನ್ನು ಈ ಕೃತ್ಯಕ್ಕೆ ತಕ್ಕ ಶಿಕ್ಷೆಯಾಗಿ ಕೊಂದು ಹಾಕಿ ಎಂದು ಅಬ್ಬಾಸ್ ಮಿರ್ಜಾ ಆಜ್ಞೆಯಿತ್ತ. ಇದರಂತೆ ಮುರ್ಷಿದ್ ಕುಲಿ ಖಾನನ ತಲೆಯನ್ನು ಹಾರಿಸಲಾಯಿತು. ಈ ಇಬ್ಬರ ದೈನಂದಿನ ತಕರಾರಿನಿಂದ ಬಿಡುಗಡೆಯಾಯಿತು ಎಂದು ಉಳಿದ ಸರದಾರರು ಸಮಾಧಾನದ ಉಸಿರುಬಿಟ್ಟರು. ಇದರ ನಂತರ ತನ್ನ ತಂದೆಯ ತಲೆಮಾರಿನಿಂದ ಬಂದ ಸ್ಥಾನಮಾನದಂತೆ ಯಾಕೂಬ್ ಖಾನ್ ಪ್ರಧಾನ ಮಂತ್ರಿಯ ದರ್ಜೆಯನ್ನು ನೀಡಲು ಅಬ್ಬಾಸ್ ಮಿರ್ಜಾನಿಂದ ಅಪೇಕ್ಷಿಸಿದ. ಅವನ ಇಷ್ಟದಂತೆ ಅಬ್ಬಾಸ್ ಮಿರ್ಜಾ ಬಾದಶಾಹ ಯಾಕೂಬ್ ಖಾನನಿಗೆ ಈ ಸ್ಥಾನವನ್ನು ನೀಡಿದ. ಸ್ವಲ್ಪ ಸಮಯದ ಬಳಿಕ ಹಳೆಯ ಐದು ಸರದಾರರು ತಮ್ಮ ಹಕ್ಕನ್ನು ಕೇಳತೊಡಗಿದರು. ಈ ಬೇಡಿಕೆಯೊಂದಿಗೆ ಅಬ್ಬಾಸ್ ಮಿರ್ಜಾನನ್ನು ಒತ್ತಾಯಿಸತೊಡಗಿದರು. ಅವನು ಇವರ ಉದ್ಧಟತನಕ್ಕೆ ಪ್ರತಿಯಾಗಿ ಈ ಸರದಾರರನ್ನು ಕೊಂದುಹಾಕಿದ. ಈ ರೀತಿ ಸತ್ತವರಲ್ಲಿ ಓರ್ವ ಷಾ ಅಲಿ ಸುಲ್ತಾನ್ ಆಗಿದ್ದ. ಇವನು ಬಹಳ ಅಹಂಕಾರಿಯಾಗಿದ್ದ. ಅವನು ತನ್ನ ವಿರೋಧದ ಘೋಷಣೆಯನ್ನು ತನ್ನ ಕೋಮಿನ ಗುಂಪಿನಲ್ಲಿ ಘೋಷಿಸಿದ್ದ. ಒಂದು ದಿನ ಅಬ್ಬಾಸ್ ಬಾದಶಾಹನ ಬಳಿ ಬಂದಾಗ ಷಾ ವಿಹಾರಾರ್ಥ ಹೊರಗೆ ಹೋಗಿದ್ದಾರೆಂದು ತಿಳಿಯಿತು. ಷಾ ಅಲಿ ಸುಲ್ತಾನ್ ಕೂಡ ಅವರ ಹಿಂದೆ ನಡೆದ. ಇಬ್ಬರೂ ಒಂದೆಡೆ ಸೇರಿದರು. ಪರಸ್ಪರ ಖಾರವಾದ ಮಾತುಕತೆ ನಡೆಯಿತು. ಪರಸ್ಪರರ ಮಧ್ಯೆ ಕೆಟ್ಟ ಶಬ್ಧಗಳನ್ನು ಬಳಸಿದ ಬಯ್ಗುಳೊಂದಿಗೆ ಬಯ್ದಾಡಿದರು. ಆದರೆ ಷಾ ಅಬ್ಬಾಸ್ ಮಿರ್ಜಾ ತನ್ನನ್ನು ಸಮಾಧಾನ ಮಾಡಿಕೊಂಡು ಅರಮನೆಗೆ ಹಿಂತಿರುಗಿದ. ಕೆಲವು ದಿನಗಳ ಬಳಿಕ ಅಬ್ಬಾಸ್ ಮಿರ್ಜಾ ಅವನ ಮನೆಗೆ ಹೋಗಿ ನೋಡುವಾಗ

ಅವನು ಮಲಗಿರುವುದು ಕಂಡುಬಂತು. ಅಬ್ಬಾಸ್ ಮಿರ್ಜಾ 'ವಾತಾವರಣ ತುಂಬ ಚೆನ್ನಾಗಿದೆ' ಎಂದು ಅವನನ್ನು ತನ್ನೊಂದಿಗೆ ವಿಹಾರಕ್ಕೆ ಆಹ್ವಾನಿಸಿದ.

ಬಾದಶಾಹ ಅಬ್ಬಾಸನ ಕರೆಯನ್ನು ಆತ ಕೇಳದಂತೆ ಮಾಡಿ ನಿರಾಕರಿಸಿದ. ಬಾದಶಾಹ ಅಬ್ಬಾಸ್ ಮಿರ್ಜಾ ಅವನ ಉದ್ಧಟತನಕ್ಕೆ ಸಿಟ್ಟಾಗಿ ಖಡ್ಗ ಹಿರಿದು ಅವನ ಕುತ್ತಿಗೆಯ ಮೇಲೆ ಹೊಡೆದು ಕೊಂದು ಹಾಕಿದ. ಅಲ್ಲಿದ್ದ ಅವನ ಬೆಂಬಲಿಗರು ಇದನ್ನು ನೋಡಿ ಹೆದರಿ ಓಡಿದರು. ಅಬ್ಬಾಸ್ ಮಿರ್ಜಾ ಏನೂ ನಡೆಯದಂತೆ ಸಮಾಧಾನ ಚಿತ್ತದಿಂದ ಆಸ್ಥಾನಕ್ಕೆ ಬಂದು ಸಿಂಹಾಸನದಲ್ಲಿ ಕೂತ. ದರ್ಬಾರಿಗಳು ಗಡಿಬಿಡಿಯಿಂದ ಆಸ್ಥಾನಕ್ಕೆ ಧಾವಿಸಿದರು. ಹೀಗೆ ಅಬ್ಬಾಸ್ ಮಿರ್ಜಾ ಬಾದಶಾಹನಾಗಿ ತನ್ನ ಸ್ವಂತಿಕೆಯ ಘನತೆ ಗೌರವದೊಂದಿಗೆ ರಾಜ್ಯವಾಳಿದ. ಫರ್ಹಾದ್ ಖಾನನನ್ನು ಕರೆದು ಬಾದಶಾಹ ಆಡಳಿತದ ಕಾರ್ಯಕಲಾಪವನ್ನು ನಿರ್ವಹಿಸುವ ಜವಾಬ್ದಾರಿಯನ್ನು ಒಪ್ಪಿಸಿ, ಇರಾಕ್ ಕಡೆ ಪ್ರಯಾಣಿಸಿದ. ಆಗ ಅಬ್ಬಾಸ್ ಮಿರ್ಜಾನ ಆಳ್ವಿಕೆಯು ಅಸ್ಫಹಾನ ರಾಜ್ಯವನ್ನು ಒಳಗೊಂಡಿತ್ತು. ಅವನ ಘನತೆ ಗೌರವಗಳನ್ನು ಕೇಳಿ ಹಿರಿಮೆಗೆ ತಲೆದೂಗಿದ ಸುತ್ತ ಮುತ್ತಲಿನ ಸರದಾರರು, ಅಧಿಪತಿಗಳು, ನೆರೆ ರಾಜ್ಯದ ಬಾದಶಹರು ಕೊಡುಗೆಗಳನ್ನು ಉಡುಗೊರೆಗಳನ್ನು ನೀಡುವ ಮೂಲಕ ಅಭಿನಂದಿಸಿದರು. ನಂತರ ಅಲ್ಲಾವರ್ದಿ ಸುಲ್ತಾನನಿಗೆ ಆಜ್ಞೆ ನೀಡಿ ಸೈನ್ಯವನ್ನು ತಯಾರು ಮಾಡಿ ಲಾರ್ ಮತ್ತು ಹುರ್ಮುಸ್ ಪ್ರದೇಶದ ಕಡೆ ದಂಡಯಾತ್ರೆ ನಡೆಸಲು ಹೇಳಿದ. ಶಾಹೆ ರುಸ್ತುಂ ಕೂಡ ಆಗ ಬಾದಶಾಹನ ಬಳಿಗೆ ಬಂದು ಉಡುಗೊರೆಗಳನ್ನು ನೀಡಿ ಅಭಿನಂದನೆಯನ್ನು ಸಲ್ಲಿಸಿದ್ದ. ಅವನನ್ನು ಬಾದಶಾಹ ತನ್ನ ಪ್ರತಿನಿಧಿಯನ್ನಾಗಿ ನೇಮಿಸಿದ್ದ. ಕೆಲ ಕಾಲದ ನಂತರ ಶಾಹ ವರ್ದಿಯನ್ನು ಸ್ಥಾನದಿಂದ ವಜಾಮಾಡಬೇಕೆಂದು ಅಬ್ಬಾಸ್ ಬಾದಶಾಹ ನಿಶ್ಚಯಿಸಿದ.

**ಶಾಹೆ ರುಸ್ತುಮನ ಪಂಗಡವನ್ನು ಸೋಲಿಸಿ ವಶಪಡಿಸಿಕೊಳ್ಳುವ ವಿವರಗಳು:**

ಈ ಪಂಗಡವು ಬಗ್ದಾದಿನ ಸರಹದ್ದಿನ ಬಳಿಯ ಹಮ್ದಾನ್ ಮತ್ತು ಗುರ್ಝ್ಯಾನ್ ಪ್ರಾಂತ್ಯದಲ್ಲಿತ್ತು. ಮರುಭೂಮಿಯಾಗಿತ್ತು. ಶಾಹೆ ವರ್ದಿ ಬಿನ್ ಮುಹಮ್ಮದ್ ಬಿನ್ ಶಾಹೆ ರುಸ್ತುಮ್ ಈ ಪಂಗಡದ ದೊಡ್ಡ ನಾಯಕನಾಗಿದ್ದ. ಅವನ ನಾಲ್ಕು ದಿಕ್ಕಿನಲ್ಲೂ ಕುಟುಂಬ ಸಂಬಂಧಿಗಳು ವಾಸವಾಗಿದ್ದರು. ಇವರ ಸಂಖ್ಯೆ ಲಕ್ಷಕ್ಕೂ ಮೀರಿತ್ತು. ಇವನು ಬಾದಶಾಹನ ಕಡೆ ಹೆಚ್ಚಿನ ಅಸಕ್ತಿ ತೋರಲಿಲ್ಲ, ಸಲಾಮ್ ಕೂಡ ಸಲ್ಲಿಸುತ್ತಿರಲಿಲ್ಲ. ಬಾದಶಾಹನ ಅಧಿಕಾರಿಗಳು ಆಕಡೆಗೆ ಬಂದಾಗ ಅವರಿಗೆ ಏನಾದರೂ ಕೊಟ್ಟು ಕಳುಹಿಸುತ್ತಿದ್ದ. ಬಾದಶಾಹನ ಶೌರ್ಯ, ಸೈನಿಕ ಬಲವನ್ನು ಕಂಡಾಗ ಆತ ತನ್ನ ದೂತನೊಬ್ಬನನ್ನು ಕಳುಹಿಸಿದ. ಅವನ ಜೊತೆಗೆ ಕುದುರೆಗಳನ್ನು ಮತ್ತು ಉಡುಗೊರೆಗಳನ್ನು ಕಳುಹಿಸಿಕೊಟ್ಟಿದ್ದ. ಅಬ್ಬಾಸ್ ಬಾದಶಾಹ ಕೂಡ ಇವನ ಬಗ್ಗೆ

ಹೆಚ್ಚು ಅನಾಸಕ್ತಿ ತೋರಿದ್ದ. ಶಾಹ ವರ್ದಿಯು ಇರುವ ನಿವಾಸಸ್ಥಳವನ್ನು ತಿಳಿದು ಅಲ್ಲಿಗೆ ಹೋಗಬೇಕೆಂದು ನಿಶ್ಚಯ ಮಾಡಿಕೊಂಡ.

ಅಬ್ಬಾಸ್ ಮಿರ್ಜಾ ಒಂದು ಪರ್ವತದ ಬುಡದಲ್ಲಿ ಅವನನ್ನು ಹುಡುಕುತ್ತ ಹಾದಿ ಹಿಡಿದು ನಡೆದು ಶಾ ವರ್ದಿಯ ಮನೆಯನ್ನು ತಲಪಿದ. ಈ ಹಾದಿಯೆಂದರೆ ಎಂತಹಾ ಇಕ್ಕಟ್ಟಿನದ್ದಾಗಿತ್ತೆಂದರೆ ಸವಾರಿ ಕುದುರೆಯ ಮೇಲೆಕೂಡ ಸಾಗುವುದಕ್ಕೆ ಆಸ್ಪದವಿದ್ದಿರಲಿಲ್ಲ. ನಡೆದು ಹೋಗಿ ಬಾದಶಾಹ ಮತ್ತು ಸೈನಿಕರು ಅವನ ಮನೆಯನ್ನು ಘೇರಾಯಿಸಿದರು. ಮರುದಿನ ಬೆಳಿಗ್ಗೆ ಶಾಹ ವರ್ದಿ ನೋಡುವಾಗ ಅಬ್ಬಾಸ್ ಬಾದಶಾಹ ತನ್ನಲ್ಲಿಗೆ ಬಂದುಬಿಟ್ಟಿದ್ದಾನೆ. ಅವನ ದೃಷ್ಟಿ ಬಾದಶಾಹನ ಮೇಲೆ ಬೀಳುವಷ್ಟರಲ್ಲಿ ಕ್ಷಣಮಾತ್ರದಲ್ಲಿ ಆತ ಸಿಕ್ಕಿಬಿದ್ದ. ಅವನಿಗೆ ತನ್ನ ಮಡದಿ ಮಕ್ಕಳು, ತನ್ನ ಸಂಪತ್ತು ಧನ ಕನಕಗಳ ಬಗ್ಗೆ ಯೋಚಿಸುವ ಅವಕಾಶ ಸಿಗದೆ ಎಲ್ಲ ನಡೆದು ಹೋಗಿತ್ತು. ಎರಡು ಬಣಗಳ ನಡುವೆ ಯುದ್ಧ ಶುರುವಾಯಿತು. ಅವನ ಬಹಳಷ್ಟು ಜನಗಳನ್ನು ಬಾದಶಾಹ ಸೆರೆಹಿಡಿದಿದ್ದ. ಹೆಂಗಸರು ಮಕ್ಕಳು ಮತ್ತು ಖಜಾನೆಯನ್ನು ಅವರಿಗೇ ಬಿಟ್ಟು ಬಿಟ್ಟರು. ಶಾ ವರ್ದಿಯನ್ನು ಬಾದಶಾಹನ ಎದುರು ನಿಲ್ಲಿಸಲಾಯಿತು. ಆ ಸಮಯದಲ್ಲಿ ಆತ ಮೂವತ್ತು ವರ್ಷದ ಯುವಕನಾಗಿದ್ದ. ತುಂಬ ಸುಂದರ ವ್ಯಕ್ತಿತ್ವ ಹೊಂದಿದ್ದ. ಬಲಿಷ್ಠನೂ, ಧೀರನೂ, ಶೌರ್ಯವಂತನೂ ಆಗಿದ್ದ. ಅಬ್ಬಾಸ್ ಬಾದಶಾಹನಿಗೆ ಅವನ ವ್ಯಕ್ತಿತ್ವ ನೋಡಿ ಖುಶಿಪಟ್ಟಿದ್ದ. ಅವನಿಗೆ ಗೌರವ ನೀಡಿ, ರಾಜ ಮರ್ಯಾದೆಯ ಬಟ್ಟೆಬರೆಗಳನ್ನು ತೊಡಿಸಿದ. ಮೂರು ದಿನಗಳ ಕಾಲ ಶರಾಬು ಕುಡಿದು ಮಸ್ತಿ, ಮಜಾಮಾಡುತ್ತ ಕಾಲಕಳೆದ. ಅವನ ಸರದಾರರು ಬಾದಶಾಹನ ಪರಿಸ್ಥಿತಿಯನ್ನು ನೋಡಿ 'ಈ ಯುವಕ ಬಹಳ ಬಲಿಷ್ಠನಾಗಿದ್ದಾನೆ. ನೀವು ಮೂರುದಿನಗಳ ಕಾಲ ಸಲುಗೆಯಿಂದ ಅವನ ಜೊತೆಗೆ ಶರಾಬಿನ ನಶೆಯಲ್ಲಿದ್ದೀರಿ. ಅವನು ನಿಮಗೆ ಮತ್ತೇರಿದ ಸಮಯದಲ್ಲಿ ನಿಮ್ಮ ಮೇಲೆ ಎರಗಿದರೆ ಎಂಬ ಭಯ ನಮಗೆ ಉಂಟಾಗಿದೆ. ನೀವು ಒಂದೋ ಅವನನ್ನು ಕೊಂದುಬಿಡಬೇಕು, ಇಲ್ಲವೇ ಓಡಿಸಿಬಿಡಿ' ಎಂದು ಸಲಹೆ ನೀಡಿದರು. ಅವನ ಎಲ್ಲ ಸರದಾರರು, ಮಂತ್ರಿಗಳು ಪದೇಪದೇ ಈ ಎಚ್ಚರವನ್ನು ನೀಡುತ್ತಿದ್ದರು. ಕೊನೆಗೆ ಅಸಹಾಯಕನಾಗಿ ಮತ್ತು ಅನಿವಾರ್ಯವಾಗಿ ಅವನನ್ನು ಕೊಲ್ಲಬೇಕಾಯಿತು. ಅವನ ಕೋಮಿಗೆ ಸೇರಿದವರನ್ನು ಹೆದರಿಸಿ ಬೆದರಿಸಿ ಓಡಿಸಿದರು. ಅವನ ಗ್ರಾಮದಲ್ಲಿ ಅವನ ಪಂಗಡದವರು ಸಾಕಿದ್ದ ಆಡು ಕುರಿ ಜಾನುವಾರುಗಳನ್ನು ಹಿಡಿದು ತಮ್ಮ ವಶಕ್ಕೆ ತೆಗೆದುಕೊಂಡು ತನ್ನ ರಾಜಧಾನಿಗೆ ಸಾಗಿಸಿದ. ಈ ರೀತಿ ಹದಿನೈದು ಲಕ್ಷ ಜಾನುವಾರುಗಳು ಸರಕಾರದ ಖಜಾನೆಗೆ ಜಮಾ ಮಾಡಲಾಯಿತು. ಈ ವಿಜಯದ ನಂತರ ಬಾದಶಾಹ ತನ್ನ ರಾಜಧಾನಿ ಅಸ್ಫಹಾನಿಗೆ ಹಿಂತಿರುಗಿದ. ನಂತರ ತನ್ನ ಸಹೋದರ ಮಾವ ಮೀರ್ ಹುಸೈನ್ ಮಾಝುಂದಾನಿಯ ನೇತೃತ್ವದಲ್ಲಿ

ಯಾಕೆಂದರೆ ಈ ನೀಲಂ ಖಾನನನ್ನು ಅಲ್ಲಿ ಪಟ್ಟದರಸನನ್ನಾಗಿ ನೇಮಿಸುವುದಕ್ಕೆ ಅಬ್ಬಾಸ್ ಬಾದಶಾಹನ ಬೆಂಬಲಿಗರು ವಿರೋಧಿಸಿದ್ದರು. ಇದರಿಂದಾಗಿ ಎರಡೂ ಬಣಗಳ ನಡುವೆ ಘರ್ಷಣೆ ನಡೆದು ಯುದ್ಧ ಶುರುವಾಯಿತು. ನೀಲಂ ಖಾನ್ ಯುದ್ಧದಲ್ಲಿ ತೀವ್ರ ಗಾಯಗಳಾಗಿ ನಗರದ ಒಂದು ರಹಸ್ಯ ಜಾಗದಲ್ಲಿ ಅಡಗಿ ಕೂತ. ಹೀಗೆ ಅವನ ಹಿಡಿತದಿಂದ ಪ್ರಜೆಗಳು ಮುಕ್ತರಾದರು.

**ಫರ್ಹಾದ್ ಖಾನನನ್ನು ಸೈನ್ಯದೊಂದಿಗೆ ಹೇರಾತ್ ಪ್ರಾಂತ್ಯಕ್ಕೆ ಕಳುಹಿಸಿದ ವಿವರಗಳು:**

ಈ ಕಾಲಘಟ್ಟದಲ್ಲಿ ಬಾದಶಾಹ ಅಬ್ಬಾಸ್ ಮಿರ್ಜಾ ಒಂದು ಕನಸನ್ನು ಕಂಡಿದ್ದ. ಕನಸಲ್ಲಿ ತಾನು ರಿಜ್ವಯಾ ರೌಜಾ(ದರ್ಗಾ)ದಲ್ಲಿದ್ದಾಗ ನೀಲಂ ಖಾನನ ಓರ್ವ ಪ್ರತಿನಿಧಿ ಬಂದಿದ್ದ. ಅವನು ರಕ್ತದಲ್ಲಿ ಮುಳುಗಿದಂತೆ ಕಂಡುಬಂದಿದ್ದ. ಇದನ್ನು ನೋಡಿ ಬಾದಶಾಹ ನಿದ್ದೆಯಿಂದ ಎದ್ದುಬಿಟ್ಟಿದ್ದ. ಕೂಡಲೇ ಫರ್ಹಾದ್ ಖಾನನನ್ನು ಕರೆಸಿ ತಾನು ಕಂಡ ಕನಸಿನ ವಿವರಗಳನ್ನು ಹೇಳಿದ. ಅವನು ಕೂಡಲೇ ತನ್ನ ಕುದುರೆಯನ್ನೇರಿ ಅಲ್ಲಿಂದ ತನ್ನ ಸೈನ್ಯದೊಂದಿಗೆ ಹೇರಾತಿಗೆ ಪ್ರಯಾಣ ಬೆಳೆಸಿದ. ಅವನು ಹೇರಾತಿಗೆ ಹತ್ತಿರ ತಲಪಿದಾಗ ನೀಲಂ ಖಾನ್ ಒಂದು ದೊಡ್ಡ ಸೈನ್ಯದೊಂದಿಗೆ ಅಲ್ಲಿ ತಂಗಿರುವುದನ್ನು ಕಂಡ. ಎರಡೂ ಬಣಗಳ ಸೈನಿಕರು ಮುಖಾಮುಖಿಯಾಗಿ ನಿಂತು ಕಾದಾಟದಲ್ಲಿ ತೊಡಗಿತು. ಈ ಯುದ್ಧವು ಮೂರು ಹಗಲು ಮೂರು ರಾತ್ರಿ ನಡೆಯಿತು. ಆದರೆ ಬಾದಶಾಹ ಅಬ್ಬಾಸ್ ಮಿರ್ಜಾನ ಸೈನ್ಯವು ಬಲದಲ್ಲಿ, ಶೌರ್ಯದಲ್ಲಿ ಮತ್ತು ಸಂಖ್ಯೆಯಲ್ಲಿ ಮೇಲುಗೈ ಪಡೆದಿದ್ದರಿಂದ ನೀಲಂ ಖಾನನ ಸೈನಿಕರು ಸೋತು ಹಿಮ್ಮೆಟ್ಟಿದರು. ಈ ಯುದ್ಧದಲ್ಲಿ ಫರ್ಹಾದ್ ಖಾನನ ಬಾಯಿಯ ಕೆಲವು ಹಲ್ಲುಗಳು ಉದುರಿದ್ದವು. ನೀಲಂ ಖಾನ್ ಮತ್ತೆ ಹೊಸ ಸೈನ್ಯವನ್ನು ಕಟ್ಟಿಕೊಂಡ. ಐದು ಸಾವಿರ ಸವಾರ ಸೈನಿಕರೊಂದಿಗೆ ಮತ್ತೆ ಬಾದಶಾಹ ಅಬ್ಬಾಸನ ಸೈನಿಕರ ಮೇಲೇರಿ ಬಂದ. ಮತ್ತೆ ಇನ್ನೊಂದು ಯುದ್ಧ ನಡೆಯಿತು.

ಈ ಯುದ್ಧದಲ್ಲಿ ನೀಲಂ ಖಾನನ ಪರವಾದ ಅಫ್ಘಾನರು ಸೋಲೊಪ್ಪ ಬೇಕಾಯಿತು. ಅವಮಾನವನ್ನು ಸಹಿಸಿಕೊಳ್ಳಬೇಕಾಯಿತು. ಅಫ್ಘಾನರು ಸೋತಾಗ ಮರ್ಘಾಫ್ ನದಿಯ ಹಾದಿಯಲ್ಲಿ ಸಾಗಿ ಬಲಖನ್ನು ದಾಟಿ, ಸಮರ್‌ಖಂಡ್ ತಲಪಿದರು. ಗರ್ಘುಲ್ ಬಾಶನ ಸೈನ್ಯ ಹಿಂದಿನಿಂದ ಆಗಮಿಸಿತು. ನದಿಯ ಬಳಿಗೆ ಬಂದ ವೈರಿ ಸೈನ್ಯ ಅಫ್ಘಾನರನ್ನು ಅಟ್ಟಿಸಿಕೊಂಡು ಹೋಗಿ ಹಿಡಿದು ತರಿದುಹಾಕತೊಡಗಿದ. ಅಫ್ಘಾನರು ಮಧ್ಯೆ ಇಕ್ಕಟ್ಟಿನಲ್ಲಿ ಸಿಲುಕಿದಂತಾಗಿ ಹಲವರು ಹತರಾದರು. ಬದುಕಿ ಉಳಿದವರು ಅಲ್ಲಿಂದ ಜೀವ ಸಹಿತ ಪರಾರಿಯಾದರು.

ಬಾದಶಾಹ ಅಬ್ಬಾಸ್ ಮಿರ್ಜಾ ಹೇರಾತ್ ನಗರಕ್ಕೆ ಆಗಮಿಸಿದ. ಅಲ್ಲಿನ ಪ್ರಜೆಗಳು

ಅಬಾಲವೃದ್ಧರು ಅವನನ್ನು ಅಭಿನಂದಿಸಿ ಸ್ವಾಗತಿಸಿದರು. ಬಾದಶಾಹನಿಗೆ ಮತ್ತು ಗಝುಲ್ ಬಾಶನ ಕೈವಶವಾಗಿದ್ದ ಸಂಪೂರ್ಣ ಸಾಮಾನುಗಳು, ಸಂಪತ್ತನ್ನು ಖೊರಾಸಾನಿನ ಅಧಿಕಾರಿಗಳಿಗೆ ಒಪ್ಪಿಸಿದರು. ಹಾಜಿಂ ಖಾನ್ ಮತ್ತು ನೂರಮ್ ಖಾನ್‌ರಿಗೆ ಭಡ್ತಿ ನೀಡಿದ. ಅಧಿಕಾರಿಗಳಿಗೆ ಉಡುಗೊರೆಗಳನ್ನು ನೀಡಿದ. ಎಲ್ಲ ಸರದಾರರಿಗೂ ಇನಾಮುಗಳನ್ನು ನೀಡಿ ಖುಶಿಪಡಿಸಿದ.

**ಹಾಜಿಂ ಖಾನ್ ಮತ್ತು ನೂರಮ್ ಖಾನರನ್ನು ಖವಾಝಿಂ ಪ್ರದೇಶದತ್ತ ಕಳುಹಿಸಿದ ವಿವರಗಳು:**

ಈ ಇಬ್ಬರು ಸರದಾರರು ಒಂದು ಕಾಲದಲ್ಲಿ ತಮ್ಮ ಕುಟುಂಬದ ಹಿರಿಯರ ಊರುಗಳನ್ನು ಬಿಟ್ಟು ಬಾದಶಾಹ ಅಬ್ಬಾಸ್ ಮಿರ್ಜಾನ ಆಸ್ಥಾನದಲ್ಲಿ ಸೇರಿಕೊಂಡರು. ಬಾದಶಾಹ ಅಬ್ಬಾಸ್ ಗಝುಲ್ ಬಾಶ್ ಪಂಗಡದ ಸರದಾರರಲ್ಲಿ ಇಬ್ಬರು ಮಕ್ಕಳೊಂದಿಗೆ ಇವರಿಬ್ಬರ ವಿವಾಹ ಮಾಡಿಕೊಟ್ಟಿದ್ದ. ಬಾದಶಾಹರ ನೌಕರಿಯಲ್ಲಿ ಬಹಳ ಸಮಯ ಉಳಿದಿದ್ದರು. ಬಾದಶಾಹ ಅಬ್ಬಾಸ್ ನಿಮ್ಮ ಮೂಲದ ರಾಜ್ಯವನ್ನು ಮತ್ತೆ ವಶಪಡಿಸಿಕೊಳ್ಳುವುದಕ್ಕೆ ಸಹಾಯ ಮಾಡುತ್ತೇನೆಂದು ಮಾತುಕೊಟ್ಟಿದ್ದ. ಇವರು ಅದರ ಆಸೆಯಲ್ಲೇ ಕಾಲಕಳೆಯುತ್ತಿದ್ದರು. ಒಂದು ದಿನ ಈ ಇಬ್ಬರೂ ಬಾದಶಾಹರ ಮುಂದೆ ಅವನು ನೀಡಿದ ಮಾತನ್ನು ನೆನಪಿಸಿದರು. ಬಾದಶಾಹ ಅವರ ಮಾತನ್ನು ತನ್ನ ಮನಸ್ಸಿನಲ್ಲಿ ಇಟ್ಟುಕೊಂಡು ಅವರಿಬ್ಬರಿಗೂ ಉಡುಗೊರೆ ನೀಡಿದ ಮತ್ತು ಪ್ರತೀಯೊಬ್ಬನಿಗೂ ಎಂಟೆಂಟು ಸಾವಿರ ಸೈನಿಕರನ್ನು ನೀಡಿ ಗಝುಲ್ ಬಾಶನ ಜವಾಬ್ದಾರಿಯಲ್ಲಿ ಅವರ ದೇಶಕ್ಕೆ ಕಳುಹಿಸಿದ. ಅಲ್ಲಿನ ಜನರಿಗೆ ಈ ಹಿರಿಯರು ಊರಿಗೆ ಬರುತ್ತಿದ್ದಾರೆಂಬ ವರ್ತಮಾನ ಸಿಕ್ಕಾಗ ಅವರು ಊರ ಹೊರಕ್ಕೆ ಬಂದು ಸಂತೋಷದ ಘೋಷಣೆಗಳನ್ನು ಹಾಕಿ ಅವರನ್ನು ಸ್ವಾಗತಿಸಿದರು. ಅವರನ್ನು ಕರೆದುಕೊಂಡು ಹೋಗಿ ಸಿಂಹಾಸನದಲ್ಲಿ ಕೂರಿಸಿದರು. ಅವರನ್ನು ತಮ್ಮ ರಾಜರೆಂದು ಅವರ ಸೇವೆಯಲ್ಲಿ ನಿರತರಾದರು. ಹೀಗೆ ಅವರ ರಾಜ್ಯ ಯಾವುದೇ ಯುದ್ಧವಿಲ್ಲದೆ ಬಾದಶಾಹನ ಕೃಪೆಯಿಂದ ಸಲೀಸಾಗಿ ವಶಕ್ಕೆ ದೊರೆಯಿತು.

ಅವರು ತಮ್ಮ ರಾಜ್ಯವನ್ನು ತುಂಬ ಉತ್ತಮ ರೀತಿಯಲ್ಲಿ ಅಭಿವೃದ್ಧಿಪಡಿಸಿದರು. ಗಝುಲ್ ಬಾಶ್ ಮೂಲಕ ಷಾ ಅಲಂಪನಾಗೆ(ಬಾದಶಾಹ ಅಬ್ಬಾಸ್ ಮಿರ್ಜಾ) ಉಡುಗೊರೆ ಕಾಣಿಕೆಗಳನ್ನು ಕಳುಹಿಸಿದರು. ಹೀಗೆ ಇವರು ತಮ್ಮ ಸ್ವಂತ ಪರಿಶ್ರಮದಿಂದ ಸ್ವತಂತ್ರ ರಾಜ್ಯವನ್ನು ಕಟ್ಟಿಕೊಂಡರು. ನಂತರ ಕೆಲಕಾಲ ಕಳೆದ ಬಳಿಕ ಅವರಲ್ಲಿ ಅಹಂಕಾರ ಬೆಳೆದು ಬಿಟ್ಟಿತು. ಬಾದಶಾಹ ಅಬ್ಬಾಸ್ ಮಿರ್ಜಾನನ್ನು ಕೆಣಕುವ ಕೆಲಸ ಶುರುಮಾಡಿದರು. ಅವನ ವಿರೋಧ ಮಾಡುತ್ತ ರಾಜ್ಯದ ಗಡಿಯ ಹತ್ತಿರದ ಪ್ರಾಂತ್ಯ,

ಊರಿನ ಜನರಿಗೆ ಕಿರುಕುಳ ನೀಡತೊಡಗಿದರು. ಇವೆಲ್ಲ ಸುದ್ದಿಗಳು ಬಾದಶಾಹ ಅಬ್ಬಾಸ್ ಮಿರ್ಜಾನಿಗೆ ತಲಪಿದಾಗ ಅವನಿಗೆ ಕಸಿವಿಸಿಯಾಯಿತು. ಈ ಇಬ್ಬರು ಮೂರ್ಖರು ನಮ್ಮ ಮೇಲೆ ದಾಳಿ ನಡೆಸಲು ತಯಾರಿ ಮಾಡುತ್ತಿದ್ದಾರೆಂಬ ಸುದ್ದಿ ಸಿಕ್ಕಾಗ ಅವನು ಒಂದು ದೊಡ್ಡ ಸೈನ್ಯವನ್ನು ತಯಾರು ಮಾಡಿ ಖವಾಝಿಂ ಪ್ರಾಂತ್ಯಕ್ಕೆ ಕಳುಹಿಸಿದ. ಅವರ ಸೈನ್ಯವನ್ನು ಅರ್ಧದಾರಿಯಲ್ಲಿ ಬಾದಶಾಹನ ಸೈನಿಕರು ಹಿಡಿದುಕೊಂಡರು. ಅವರ ಅನೇಕ ಸೈನಿಕರನ್ನು ಕೊಂದು ಹಾಕಿದರು. ಬಹಳ ಸೈನಿಕರನ್ನು ಬಂಧಿಸಿ ಸೆರೆಮನೆಗೆ ಒಯ್ದರು. ಸೆರೆಯಾದವರಲ್ಲಿ ಹಾಜಿಂ ಖಾನ್ ಮತ್ತು ನೂರಂ ಖಾನ್ ಕೂಡ ಸೇರಿದ್ದರು. ಇವರನ್ನು ಬಾದಶಾಹ ಅಬ್ಬಾಸ್ ಮಿರ್ಜಾನ ಎದುರು ಆಸ್ಥಾನದಲ್ಲಿ ಹಾಜರು ಪಡಿಸಿದಾಗ ಅತ್ಯಂತ ನಾಚಿಕೊಂಡು ತಮ್ಮ ತಲೆಯನ್ನು ಎತ್ತಲಾರದಾಗಿದ್ದರು. ಆಲಂಪನಾ ಅವರಿಗೆ ಕ್ಷಮಾದಾನ ನೀಡಿ ಶೀರಾಜ್‌ಗೆ ಕಳುಹಿಸಿದ. ಘಾರಿಶ್‌ನ ಮುಖ್ಯ ಅಧಿಕಾರಿಯಾಗಿದ್ದ ಅಲ್ಲಾವರ್ದಿ ಖಾನ್‌ನಿಗೆ ಆಜ್ಞೆ ನೀಡಿ ಇವರನ್ನು ನಿನ್ನಲ್ಲಿನ ಒಂದು ನೌಕರಿಯಲ್ಲಿ ಸೇರಿಸಿಕೊಂಡಿರು. ಈ ಮೂಲಕ ತಮ್ಮ ಕುಟುಂಬವನ್ನು ನೋಡಿಕೊಳ್ಳಲಿ ಎಂದು ವ್ಯವಸ್ಥೆ ಮಾಡಿಕೊಟ್ಟ. ಈ ಕಾಲಘಟ್ಟದಲ್ಲಿ ಬಾದಶಾಹ ಅಬ್ಬಾಸ್ ಮಿರ್ಜಾ ಇಡೀ ಖೊರಸಾನ್ ರಾಜ್ಯವನ್ನು ತನ್ನ ಆಳ್ವಿಕೆಗೆ ಒಳಪಡಿಸಿಕೊಂಡಿದ್ದ. ಹುಸೈನ್ ಖಾನ್ ಅಫ್ಶಾರ್ ಆಗ ಮುಖ್ಯ ಮಂತ್ರಿಯಾಗಿದ್ದ. ಮಿರ್ಜಾ ಸೈಫಿ ಹೇರಾತಿನ ಅಧಿಕಾರಿಯಾಗಿ ನೇಮಕವಾಗಿದ್ದ.

**ಬಖ್ತಿಶ್ ಖಾನ್ ಅಫ್ಶಾರ್‌ನ ಬದುಕಿನ ಕೆಲವು ವಿವರಗಳು:**

ಇವನು ಬಹಳ ಕ್ರೂರ ಮನಸ್ಸಿನ ವ್ಯಕ್ತಿಯಾಗಿದ್ದ. ಇವನು ಕಿರ್ಮಾನಿನ ದೊಡ್ಡ ಜಾಗೀರುದಾರ ಖ್ವಾಜಾ ಅಬ್ದುಲ್ ರಶೀದ್‌ರನ್ನು ಕಾರಣವಿಲ್ಲದೆ ಸೆರೆಹಿಡಿದು ಅವರ ಜಾಗೀರು ಸಂಪತ್ತನ್ನು ಲೂಟಿಮಾಡಿ ವಶಪಡಿಸಿಕೊಂಡ. ಅವನ ಚಿಕ್ಕಪ್ಪ ಷಾ ಕುಲೀ ಸುಲ್ತಾನ್ ಅಫ್ಶಾರನನ್ನು ಬಂಧಿಸಿ ಲೂಟಿ ನಡೆಸಿದ. ಹೀಗೆ ತನ್ನದೇ ಆದ ಒಂದು ಸೈನ್ಯವನ್ನು ಕಟ್ಟಿಕೊಂಡು ತನ್ನ ಪ್ರಾಂತ್ಯವನ್ನು ಆಳುವ ಮೂಲಕ ತಾನು ರಾಜನೆಂದು ಘೋಷಿಸಿಕೊಂಡ.

ಮೀರ್ ಮೀರಾನ್‌ನ ಮಗಳನ್ನು ಮದುವೆಯಾಗುವ ಇಚ್ಛೆಯನ್ನು ಬಖ್ತಿಶ್ ಖಾನ್ ಅಫ್ಶಾರ್ ಪ್ರಕಟಿಸಿದ. 'ನಾವು ಸಯ್ಯದ್ ಷಾ ಕುಟುಂಬದವರು ಮತ್ತು ನಮ್ಮ ತಾತ ಮುತ್ತಾತಂದಿರು ಸೂಫಿ ಸಂತ ಪರಂಪರೆಯಲ್ಲಿ ಬಂದವರು. ನಾವು ಕಡು ಬಡವರು ಮತ್ತು ಸಾಮಾನ್ಯರು. ನೀನಾದರೋ ದೊಡ್ಡ ಶ್ರೀಮಂತ ಮತ್ತು ರಾಜನಾಗಿದ್ದವನು ನಮಗೂ ನಿನಗೂ ಸಂಬಂಧವು ಮೇಳೈಸದು' ಎಂದು ಹೆಣ್ಣಿನ ಕಡೆಯವರು ಹೇಳಿದರು. ಇದಕ್ಕೆ ಉತ್ತರಿಸಿದ ಬಖ್ತಿಶ್ ಕಾನ್ 'ನಾನು ಇವೆಲ್ಲ ಮಾತಿಗೆ ಒಪ್ಪಲಾರೆ. ನಾವು ಮುಸ್ಲಿಮರು. ಪ್ರವಾದಿ ಮುಹಮ್ಮದರ ಷರೀಯತ್

ಪ್ರಕಾರ ನಿಕಾಹ ಮಾಡಿಕೊಡಬೇಕು ಅಷ್ಟೇ ನನಗೆ ಬೇಕಿರುವುದು' ಎಂದು ಹೇಳಿದ. ಕಟ್ಟ ಕಡೆಗೆ ಅವರು ಹೆಣ್ಣನ್ನು ನಿಕಾಹ ಮಾಡಿಕೊಡಲೇ ಬೇಕಾಯಿತು. ವಧುವಿನ ಸಹೋದರ ಷಾ ಖಲೀಲುಲ್ಲಾಹ್‌ನಿಗೆ ಈ ಮದುವೆಯು ಒಪ್ಪಿಗೆಯಾಗಲಿಲ್ಲ. ಹೀಗೆ ಅಬ್ಬಾಸ್ ಬಾದಶಾಹನಿಗೂ ಈ ವಿವಾಹ ನಡೆದ ಬಲಾತ್ಕಾರದ ಕ್ರಮದ ಬಗ್ಗೆ ಸಮಾಧಾನವಿರಲಿಲ್ಲ. ಇದಲ್ಲದೆ ಅವನು ಬಾದಶಾಹನ ವಿರೋಧಿಗಳಲ್ಲಿ ಒಬ್ಬನಾಗಿದ್ದ. ಅವನು ಒಬ್ಬ ಕ್ರೂರ ಪ್ರವೃತ್ತಿಯ ವ್ಯಕ್ತಿಯೆಂಬುದು ತಿಳಿದಿತ್ತು. ಅವನು ಬಾದಶಾಹನ ವಿರುದ್ಧ ಒಂದು ಸೈನ್ಯವನ್ನು ಕಟ್ಟಿಕೊಂಡಿದ್ದನೆಂಬ ಸುದ್ದಿಯೂ ಬಂದಿತ್ತು. ಅವನ ಕ್ರೌರ್ಯ ಮುಗಿಲು ಮುಟ್ಟಿದಾಗ ಬಾದಶಾಹ ಮತ್ತೊಮ್ಮೆ ಫರ್ಮಾನು ಜಾರಿಮಾಡಿ, 'ಯಾರು ಬಖ್ತಶ್ ಖಾನನ ಶಿರಚ್ಛೇದ ಮಾಡಿ ನನ್ನ ಮುಂದೆ ಹಾಜರು ಪಡಿಸುತ್ತಾನೋ ಅವನಿಗೆ ನಾನು ಇನಾಮು ಕೊಡುತ್ತೇನೆ' ಎಂದು ಘೋಷಿಸಿದ. ಬಖ್ತಶ್ ಈ ಬಾದಶಾಹನ ಶಾಹಿ ಫರ್ಮಾನು ಘೋಷಣೆಯಾದಾಗಿನಿಂದ ಬಹಳ ಭಯಪಟ್ಟುಕೊಂಡಿದ್ದ. ತನ್ನ ಅಫ್ಶಾರ್ ಪಂಗಡದ ಮೂರು ಸಾವಿರ ಜನರನ್ನು ತನ್ನ ರಕ್ಷಣೆಗಾಗಿ ನೇಮಿಸಿಕೊಂಡಿದ್ದ. ಅವರಿಗೆ ಬೇಕಾದ ಜಮೀನು ಜಾಗೀರನ್ನು ನೀಡಿ ಕೈವಶಮಾಡಿಕೊಂಡಿದ್ದ. ಕೊನೆಯಲ್ಲಿ ಈತ ಯಾಕೂಬ್ ಖಾನನ ಕೈಯಲ್ಲಿ ಶಿರಚ್ಛೇದ ಮಾಡಿಸಿಕೊಂಡು ಸತ್ತುಹೋದ.

**ಯಾಕೂಬ್ ಖಾನ್ ಬಿನ್ ಇಬ್ರಾಹಿಂ ಖಾನನ ಬದುಕಿನ ವಿವರಗಳು:**

ಫಾರಿಶ್ ರಾಜ್ಯದ ಪ್ರತೀ ಪ್ರಾಂತ್ಯದಲ್ಲೂ ಸರದಾರರು ನೇಮಕವಾಗಿದ್ದರು. ಇವರೆಲ್ಲರೂ ತುಂಬ ಐಶೋ ಆರಾಮದಲ್ಲಿ ಬದುಕುತ್ತಿದ್ದರು. ಒಂದು ಬಾರಿ ಇಲ್ಲಿನ ಎಲ್ಲ ಸರದಾರರು ಸೇರಿ ಮೆಹದಿ ಕುಲೀ ಖಾನನನ್ನು ತಮ್ಮ ನಾಯಕನನ್ನಾಗಿ ಆರಿಸಿ ಬಾದಶಾಹ ಅಬ್ಬಾಸ್ ಮಿರ್ಜಾನ ಬಳಿಗೆ ಕಳುಹಿಸಿದರು. ಖೊರಸಾನ್ ರಾಜ್ಯವನ್ನು ತಮಗೆ ನೀಡಬೇಕೆಂಬುದು ಅವರ ಬೇಡಿಕೆಯಾಗಿತ್ತು. ಬಾದಶಾಹ ಈ ಬೇಡಿಕೆಯನ್ನು ಆಲಿಸಿ, 'ಇವನ ಶಿರಚ್ಛೇದ ಮಾಡಿ' ಎಂದು ಆಜ್ಞಾಪಿಸಿದ. ಯಾಕೂಬ್ ಖಾನ್ ಕೂಡಲೇ ಕತ್ತಿ ಹಿರಿದು ಮೆಹದೀ ಕುಲಿ ಖಾನನ ಶಿರಚ್ಛೇದ ಮಾಡಿದ. ಇದರಿಂದ ಬಾದಶಾಹ ಖುಶಿಯಾಗಿ ಯಾಕೂಬ್ ಖಾನನನ್ನು ಫಾರಿಸ್‌ನ ಮುಖ್ಯ ಅಧಿಕಾರಿಯನ್ನಾಗಿ ನೇಮಿಸಿ, ಎಲ್ಲ ಅಧಿಕಾರಿಗಳೂ ಇವನ ಆದೇಶದಂತೆ ನಡೆಯಬೇಕೆಂದು ಆಜ್ಞಾಪಿಸಿದ. ನಾನು ನಿಮ್ಮ ಮೇಲೆ ವಿಶ್ವಾಸವಿಟ್ಟುಕೊಂಡು ಈ ಕೆಲಸವನ್ನು ಒಪ್ಪಿಕೊಂಡಿದ್ದೇನೆ ಎಂದು ಯಾಕೂಬ್ ಖಾನ್ ಹೇಳಿದ.

'ನಾವಿಬ್ಬರೂ ಪರಸ್ಪರ ಸಹಕಾರದಿಂದ ಇರೋಣ. ಶೀರಾಜಿನಿಂದ ರೋಮ್, ರೋಮಿನಿಂದ ಶೀರಾಜಿಗೆ ಹೋಗಿ ಬರುವ ಅಗತ್ಯವಿಲ್ಲ ಜೊತೆಯಾಗಿರೋಣ' ಎಂದು ಹೇಳಿದ. ಸಲಹೆ, ವಿಚಾರ ವಿಮರ್ಶೆಯ ಬಳಿಕ ಯಾಕೂಬ್ ಖಾನನನ್ನು ಮುಖ್ಯ

ಅಧಿಕಾರಿಯ ಹುದ್ದೆಗೆ ನೇಮಿಸಲಾಯಿತು. 'ಮೊದಲು ನಾವಿಬ್ಬರೂ ರಿಜ್ವಿಯಾ ರೌಜಾಕ್ಕೆ ಹೋಗಿ ಕುರಾನಿನ ಮೇಲೆ ಆಣೆಇಡೋಣ. ನಂತರ ಶೀರಾಜಿಗೆ ಹೋಗಿ ಅಲ್ಲಿ ಆರಾಮದಿಂದ ಇರೋಣ' ಎಂದು ಯಾಕೂಬ್ ಖಾನ್ ಹೇಳಿದ. ಎಲ್ಲ ಅಧಿಕಾರಿಗಳು ಪ್ರಮಾಣವಚನ ಮಾಡಿಕೊಂಡರು. ಆ ಬಳಿಕ ಶೀರಾಜಿಗೆ ಪ್ರಯಾಣಿಸಿದರು. ಹಾದಿಯಲ್ಲಿ ಯಜ್ದ್ ಪ್ರದೇಶಕ್ಕೆ ತಲಪಿದಾಗ ಯಾಕೂಬ್ ಖಾನನನ್ನು ಬಖ್ತಿಶ್ ಖಾನ್ ಸ್ವಾಗತಿಸಿದ. ಅವನನ್ನು ಒಂದು ಮಹಲಿನಲ್ಲಿ ಆರಾಮ ಮಾಡಲು ಹೇಳಿದ. ಯಾಕೂಬ್ ಖಾನರ ಬೆಂಬಲಿಗ ಸರದಾರರಿಗೆ ಈ ಸ್ನೇಹ ಯೋಜನೆಯ ರೀತಿಯ ಬಗ್ಗೆ ಅನುಮಾನವಿದ್ದುದರಿಂದ ಸಂತಸಪಟ್ಟುಕೊಂಡಿರಲಿಲ್ಲ. ಒಳಗಿಂದೊಳಗೆ ಅತೃಪ್ತರಾಗಿದ್ದರು. ಈ ಬಗ್ಗೆ ಬಖ್ತಿಶ್ ಖಾನನಿಗೆ ದೂರು ನೀಡಿದರು. ಬಖ್ತಿಶ್ ಖಾನನೊಂದಿಗೆ ಸೇರಿ ಅತಿಥ್ಯದ ಮಹಲಿನಿಂದ ಹೊರಡುವ ದಿನ ಹಾದಿಯಲ್ಲಿ ಯಾಕೂಬ್ ಖಾನನನ್ನು ಕೊಂದು ಹಾಕುವ ಯೋಜನೆ ಮಾಡಿದರು. ಯಾಕೂಬ್ ಖಾನನಿಗೂ ಕೂಡ ಇದರ ಅನುಮಾನವಿದ್ದು, ದ್ವೇಷದಲ್ಲಿ ಏನಾದರೊಂದು ಘಟನೆ ಸಂಭವಿಸಬಹುದು ಎನ್ನುವುದನ್ನು ಊಹಿಸಿದ್ದ. ಅಲ್ಲಿಂದ ಹೊರಡುವ ದಿನ ಬಖ್ತಿಶ್ ಖಾನ್ ಅಲ್ಲಿಗೆ ಬಂದು ಔತಣದ ಆಹ್ವಾನವನ್ನು ನೀಡಿದ. ನನ್ನೊಂದಿಗೆ ಸರದಾರರು ಬಂದಿದ್ದಾರೆ ಬನ್ನಿ ಎಂದು ಕರೆದ. ಯಾಕೂಬ್ ಖಾನ್ ಒಂದು ನೆವ ಹೇಳಿ ಅವನ ಸರದಾರರಿಗೆ ನೀವು ಮುಂದೆ ಔತಣ ಕೂಟಕ್ಕೆ ಹೋಗಿ, ನಾನು ಹಿಂದಿನಿಂದ ಬರುತ್ತೇನೆಂದು ಹೇಳಿ ಅವರನ್ನು ಅಲ್ಲಿಗೆ ಸಾಗಹಾಕಿದ. ಅದರೂ ಇಬ್ಬರು ಸರದಾರರು ಅವನ ಬಳಿ ನಿಂತು ಬಿಟ್ಟಿದ್ದರು. ಅವರಿಬ್ಬರನ್ನು ಅಲ್ಲಿ ಕಟ್ಟಿಹಾಕಿದ. ಅವರ ಬಾಯಿ ಬಿಡಿಸಿ ಅವರು ಮಾಡಲಿರುವ ಯೋಜನೆಯ ಮಾಹಿತಿಯನ್ನು ಪಡೆದುಕೊಂಡ. ಎರಡು ಮೂರು ಗಂಟೆಗಳ ಕಾಲ ಬಖ್ತಿಶ್ ಖಾನ್ ಅವನನ್ನು ಕಾಯುತ್ತಿದ್ದ. ಕೊನೆಗೆ ಒಬ್ಬನನ್ನು ನೋಡಿ ಬರಲು ಕಳುಹಿಸಿದ. ಈ ಮನುಷ್ಯನಿಗೆ ದಾರಿಯಲ್ಲಿ ಯಾಕೂಬ್ ಖಾನ ಆಗಲೇ ಹೊರಟು ಬಖ್ತಿಶ್ ಖಾನನ ಔತಣ ಕೂಟಕ್ಕೆ ಹೋಗಿದ್ದಾನೆಂಬ ಸುದ್ದಿ ಸಿಕ್ಕಿತು. ಹೀಗೆ ಯಾಕೂಬ್ ಖಾನ್ ಬುದ್ಧಿವಂತಿಕೆಯನ್ನು ಉಪಯೋಗಿಸಿ ಬಖ್ತಿಶ್ ಖಾನನ ಕುಟಿಲ ಕಾರಸ್ಥಾನದಿಂದ ತಪ್ಪಿಸಿಕೊಂಡು ಶೀರಾಜಿಗೆ ತಲಪಿದ. ಅವನ ಪಂಗಡದವರು ಅಲ್ಲಿ ಆತ್ಮೀಯ ಸ್ವಾಗತವನ್ನು ನೀಡಿದರು. ಅವನನ್ನು ಗೌರವಿಸಿ ನಗರಕ್ಕೆ ಕರೆತಂದರು. ಅವನ ಜೊತೆಗಿದ್ದು ತಿರುಗಿ ಬಿದ್ದ ಕುತಂತ್ರಿ ಸರದಾರರನ್ನು ಶಿಕ್ಷಿಸುವ ಸಲುವಾಗಿ ಅವರ ಸಂಪೂರ್ಣ ಆಸ್ತಿ, ಸಂಪತ್ತುಗಳನ್ನು ಜಪ್ತಿಮಾಡಿದ. ಅವರ ಕುಟುಂಬದವರನ್ನು ಬಂಧಿಸಿ ಸೆರೆಮನೆಯಲ್ಲಿಟ್ಟ. ಅವನಿಗೆ ಕಷ್ಟಕಾಲದಲ್ಲಿ ಸಹಾಯ ಮಾಡಿದ್ದವರು ಮತ್ತು ಬೆಂಬಲಿಗರ ಮಕ್ಕಳಿಗೆ ಇನಾಮು ನೀಡಿ ಶೀರಾಜಿನಲ್ಲಿ ನೆಲಸಲು ಅನುಕೂಲ ಮಾಡಿಕೊಟ್ಟ.

ಉಳಿದವರೆಲ್ಲರೂ ಯಾಕೂಬ್ ಖಾನನ ಆಜ್ಞಾಪಾಲನೆ ಮಾಡುವ ನಿಷ್ಠಾವಂತರಾಗಿ ಬದಲಾದರು. ಹೀಗೆ ಅವನು ಫಾರಿಶ್ ದೇಶ ಮತ್ತು ಕಿರ್ಮಾನಿನ ಇತರ ಇಲಾಖೆಗಳನ್ನು ಅವನ ವಶಕ್ಕೆ ಮಾಡಿಕೊಂಡ. ಅಲ್ಲಿನ ಪಂಗಡಗಳು, ಸಂಬಂಧಿಗಳಿಗೆ ಆಸ್ಥಾನದಲ್ಲಿ ನೌಕರಿಯನ್ನು ನೀಡಿದ. ಇಪ್ಪತ್ತು ಸಾವಿರ ಸೈನಿಕರನ್ನು ಹೊಸತಾಗಿ ತರಬೇತಿ ನೀಡಿ ಸೈನ್ಯವನ್ನು ಕಟ್ಟಿಕೊಂಡ. ಸೆರೆಹಿಡಿದಿಟ್ಟಿದ್ದ ವೈರಿಗಳನ್ನು ಒಬ್ಬೊಬ್ಬರಿಗೆ ಶಿಕ್ಷೆ ನೀಡಿ ಕೊಂದುಹಾಕಲಾಯಿತು. ಅವರ ಮಕ್ಕಳನ್ನು ಹಟ್ಟಿಗಳಲ್ಲಿ ಜಾನುವಾರುಗಳನ್ನು ಸಾಕುವ ಕೆಲಸಕ್ಕೆ ಸೇರಿಸಿಕೊಂಡ. ಅಲ್ಲಿಂದ ಲಾರ್ ಕೋಟೆಯನ್ನು ವಶಪಡಿಸಿಕೊಳ್ಳಲು ಒಂದು ಸೈನ್ಯವನ್ನು ಕಳುಹಿಸಿದ. ಕೊನೆಯಲ್ಲಿ ಯಜ್ದ್ ಪ್ರದೇಶದ ಕಡೆ ಪ್ರಯಾಣಿಸಿದ.

**ಯಾಕೂಬ್ ಖಾನ್ ವೈರಿ ಬಖ್ತಿಶ್ ಖಾನನನ್ನು ಸೋಲಿಸಲು ಯಜ್ದ್ ಪ್ರದೇಶಕ್ಕೆ ದಾಳಿ ನಡೆಸಿದ ವಿವರಗಳು:**

ಯಾಕೂಬ್ ಖಾನ್ ಯಜ್ದ್‌ಗೆ ಹೋದಾಗ ಬಖ್ತಿಶ್ ಖಾನನಿಗೆ ಅವನ ಆಗಮನದ ಬಗ್ಗೆ ಸುದ್ದಿ ತಿಳಿಯಿತು. ಇವರಿಬ್ಬರ ಮಧ್ಯೆ ಕೆಲವುದಿನಗಳ ಕಾಲ ತಿಕ್ಕಾಟಗಳು ನಡೆದವು. ಪರಸ್ಪರ ಹೊಡೆದಾಟ ನಡೆಸಿದರು. ಯುದ್ಧ ನಡೆದು ಎರಡೂ ಕಡೆಗಳಲ್ಲಿ ಸೈನಿಕರು ಅಸುನೀಗಿದರು. ಈ ಯುದ್ಧದಲ್ಲಿ ಬಖ್ತಿಶ್ ಖಾನ್ ಜಯಗಳಿಸಿದ. ಯಾಕೂಬ್ ಖಾನನ ಸೈನ್ಯ ಒಡೆದು ಹೋಳಾದವು. ಬಖ್ತಿಶ್ ಖಾನ್ ಈ ವಿಜಯದ ನಂತರ ಯಜ್ದ್‌ನ ಕೋಟೆಯ ಮಹಾದ್ವಾರದಲ್ಲಿ ಹೆಚ್ಚುಕಮ್ಮಿ ಇಪ್ಪತ್ತು ಬಿಲ್ಲುಗಾರರನ್ನು ನಿಲ್ಲಿಸಿದ. ಆ ಹೆಬ್ಬಾಗಿಲಿನ ಹತ್ತಿರದ ಗಲ್ಲಿಯಲ್ಲಿ ಒಂದು ತೋಟವಿತ್ತು. ಅದರಲ್ಲಿನ ಮರಗಳ ಮರೆಯಲ್ಲಿ ಬಿಲ್ಲುಗಾರರನ್ನು ಅಡಗಿಸಿ ನಿಲ್ಲಿಸಿದ್ದ. ಯಾಕೂಬ್ ಖಾನನ ಸ್ನೇಹಿತ ಷಾ ಖಲೀಲುಲ್ಲಾ ಈ ವ್ಯವಸ್ಥೆಯ ಮಾಹಿತಿಯನ್ನು ಅವನಿಗೆ ನೀಡಿದ. ಅವರನ್ನು ಹೆದರಿಸಿ ಅಲ್ಲಿಂದ ಓಡಿಸಿದ. ಬಖ್ತಿಶ್ ಖಾನನಿಗೆ ಇದು ತಿಳಿಯಲಿಲ್ಲ. ಹೀಗೆ ಯಾಕೂಬ್ ಖಾನ್ ಆ ತೋಟದ ಹಾದಿಯಲ್ಲಿ ಸುರಕ್ಷಿತವಾಗಿ ಹೊರಬಂದ.

ಆ ತೋಟದ ಬಳಿ ಚಿಕ್ಕ ಬಾಗಿಲೊಂದು ಇತ್ತು. ಅಲ್ಲಿ ಬಹಳಷ್ಟು ಮರಗಳಿದ್ದವು. ಈ ಮರಗಳ ಮಧ್ಯಗಳಲ್ಲಿ ಓಡುತ್ತ ಹೊರಬಂದು ಮುನ್ನಡೆಯತೊಡಗಿದ. ಹಾದಿಯಲ್ಲಿ ಬಖ್ತಿಶ್ ಖಾನನ ಓರ್ವ ಸಂಬಂಧಿ ಸಿಕ್ಕಿದ. 'ನೀನೆಲ್ಲಿ ಹೋಗುತ್ತಿರುವೆ? ಅವನು ನಿನ್ನನ್ನು ಕೊಲ್ಲಲು ತಲ್ವಾರು ಹಿಡಿದುಕೊಂಡು ಅತ್ತಿತ್ತ ಓಡಾಡುತ್ತಿದ್ದಾನೆ. ಸಿಟ್ಟಿನಿಂದ ಹುಚ್ಚನಂತಾಗಿದ್ದಾನೆ. ನೋಡು ಅಲ್ಲಿ ಅವನ ಬೆಂಬಲಿಗರು ನಿನ್ನ ಕಡೆ ಬರುತ್ತಿದ್ದಾರೆ' ಎಂದು ಹೇಳಿದ. ಹಿಂತಿರುಗಿ ನೋಡುವಾಗ ಬಖ್ತಿಶ್ ಖಾನನ ಜನರು ಗುಂಪುಗಟ್ಟಿ ಅವನೆಡೆಗೆ ಬರುತ್ತಿದ್ದರು. ಇದನ್ನು ಕಂಡು ಬೇರೆ ದಾರಿ ಕಾಣದೆ ಹಿಂದೆ ತೋಟಕ್ಕೇ ಹಿಂತಿರುಗಿದ. ಈ ಸಮಯದಲ್ಲಿ ತನ್ನ ಬಿಲ್ಲುಗಾರರು ಬಾಣಗಳ ಮಳೆಗರೆಯುತ್ತಿರಬಹುದೆಂದು ಬಖ್ತಿಶ್ ಖಾನ್ ಯೋಚಿಸುತ್ತಿದ್ದ. ಆದರೆ ಯಾವ

ಸದ್ದೂ ಕೇಳಿಬರಲಿಲ್ಲ. ಬಖ್ತಿಶ್ ಖಾನ್ ಇದನ್ನು ಕಂಡು ತನ್ನ ಮನೆಗೆ ತೆರಳಿ ಊಟಮಾಡಲು ಕೂತ. ಈ ಮಧ್ಯೆ ಯಾಕೂಬ್ ಖಾನ್ ಬಖ್ತಿಶ್ ಖಾನನ ಸೈನಿಕರ ಮೇಲೆ ಎರಗಿ ಬೀಕರ ಯುದ್ಧದಲ್ಲಿ ತೊಡಗಿದ. ಬಖ್ತಿಶ್ ಖಾನ್ ಬಂದು ನೋಡುವಾಗ ಅವನ ಸೈನಿಕರು ಹಲವಾರು ಮಂದಿ ಈ ಹಲ್ಲೆಯಿಂದ ಸತ್ತು ಬಿದ್ದಿದ್ದರು. ಅವರು ರಕ್ತ ಮತ್ತು ಮಣ್ಣಿನಿಂದ ತೊಯ್ದು ಹೋಗಿ ಗುರುತು ಹಿಡಿಯಲು ಕೂಡ ಕಷ್ಟಸಾಧ್ಯವಾಗಿತ್ತು.

ಬಖ್ತಿಶ್ ಖಾನ್ ಈ ಬೀಭತ್ಸ ದೃಶ್ಯವನ್ನು ಕಂಡು ಹಿಂತಿರುಗಿದ. ಯಾಕೂಬ್ ಖಾನನ ಗೆಳೆಯ ಷಾ ಖಲೀಲುಲ್ಲಾ ಅವನ ಬಳಿ ಬಂದು ಯೋಗಕ್ಷೇಮವನ್ನು ವಿಚಾರಿಸಿದ. ಯಾಕೂಬ್ ಖಾನನನ್ನು ಅವನು ಕೋಟೆಯ ಒಳಗೆ ಕರಕೊಂಡು ಹೋದ. ಅಲ್ಲಿ ತನ್ನ ತಂದೆಯ ಜೊತೆ ಪರಿಚಯಮಾಡಿಸಿದ. ಬಖ್ತಿಶ್ ಖಾನನ ಮೇಲೆ ಮಾರಣಾಂತಿಕ ಹಲ್ಲೆ ಮಾಡಿ ಕೊಲ್ಲಲಾಯಿತು. ಬಖ್ತಿಶ್ ಖಾನನ ತಲೆ ಮತ್ತು ಅವನನ್ನು ಲೂಟಿ ಸಂಪತ್ತನ್ನು ಮತ್ತು ಈ ವಿಜಯದ ಪತ್ರವನ್ನು ಅಬ್ಬಾಸ್ ಖಾನನಿಗೆ ಕಳುಹಿಸಿ ಶೀರಾಜಿಗೆ ಹೋದ. ಅಬ್ಬಾಸ್ ಖಾನ್ ಸಾಮಾನುಗಳೊಂದಿಗೆ ಬಖ್ತಿಶ್ ಖಾನನ ಛೇದಗೊಂಡ ಶಿರವನ್ನು ಕಂಡು ತುಂಬ ಸಂತಸಗೊಂಡು ಯಾಕೂಬ್ ಖಾನನಿಗೆ ಬಹಳಷ್ಟು ಉಡುಗೊರೆ ಇನಾಮುಗಳನ್ನು ಕಳುಹಿಸಿಕೊಟ್ಟ. ಅವನಿಗೆ 'ಯಾಕೂಬ್ ಜಾನಿ' ಎಂಬ ಬಿರುದು ನೀಡಿ ಗೌರವಿಸಿದ. ಯಾಕೂಬ್ ಜಾನಿ ವಿಜಯ ಮತ್ತು ಗೌರವ ಪಡೆದ ಬಳಿಕ ತುಂಬ ಅಹಂಕಾರಪಟ್ಟುಕೊಂಡ. ಅವನು ಬಖ್ತಿಶ್ ಖಾನನ ವಶದಲ್ಲಿ ಕಿರ್ಮಾನ್ ಮತ್ತು ನೆರೆಯ ಪ್ರಾಂತ್ಯಗಳನ್ನು ತನ್ನ ವಶಕ್ಕೆ ಪಡೆದುಕೊಂಡ. ಈ ಪ್ರದೇಶಗಳಲ್ಲಿ ತನ್ನ ಕುಟುಂಬದವರು, ಸಂಬಂಧಿಗಳು ಮತ್ತು ಪಂಗಡದವರನ್ನು ಅಲ್ಲಿ ನೆಲೆಸಲು ವ್ಯವಸ್ಥೆ ಮಾಡಿದ. ಇದರಿಂದ ಅವನ ಹೆಸರು ಪ್ರಸಿದ್ಧವಾಯಿತು. ಜೊತೆಗೆ ತಾನು ಯಾರ ಹಂಗೂ ಇಲ್ಲದವನು ಮತ್ತು ಸ್ವತಂತ್ರ ಬಾದಶಾಹನೆಂದು ಘೋಷಿಸಿ ತನ್ನ ಧ್ವಜವನ್ನು ಹಾರಿಸಿ ಕುಣಿದ. ತನ್ನನ್ನು ಚಕ್ರವರ್ತಿ ಷಾ ತಹಮಾಸ್ಪನ ಮಗನೆಂದು ಹೇಳತೊಡಗಿದ. ಇದಕ್ಕೆ ಕಾರಣ ಷಾ ತಹಮಾಸ್ಫ್‌ನಿಗೆ ಓರ್ವ ತನ್ನ ಗುಲಾಮ ಹೆಣ್ಣನ್ನು ಇಬ್ರಾಹಿಂ ಖಾನ್ ನೀಡಿದ್ದ. ಇವಳಿಗೆ ಈ ಯಾಕೂಬ್ ಖಾನ್ ಹುಟ್ಟಿದ್ದರಿಂದ ತಾನು ಷಾ ತಹಮಾಸ್ಫನ ಮಗನೆಂದು ಘೋಷಿಸಿದ್ದ. ಅವನು ದಿನೇದಿನೇ ಬಾದಶಾಹ ಅಬ್ಬಾಸ್ ಮಿರ್ಜಾನ ಸಾಮ್ರಾಜ್ಯದಲ್ಲಿ ತನ್ನ ಹಸ್ತಕ್ಷೇಪ ಮಾಡುತ್ತಿದ್ದ. ಎಷ್ಟು ಸಾಧ್ಯವೋ ಅಷ್ಟು ತನ್ನದಲ್ಲದ ಪ್ರದೇಶಗಳನ್ನು ಒಳಗೆ ಸೇರಿಸಿಕೊಂಡ. ಈ ಎಲ್ಲ ಸಂಗತಿಗಳು ಬಾದಶಾಹನಿಗೆ ತಿಳಿದರೂ ಬಾದಶಾಹ ಹೇಳುತ್ತಿದ್ದ 'ಅವನು ನನ್ನ ಯಾಕೂಬ್ ಜಾನಿಯಾಗಿದ್ದಾನೆ ಅವನನ್ನು ಕ್ಷಮಿಸುತ್ತೇನೆ. ಯಾಕೆಂದರೆ ಅವನು ನನ್ನ ತಲೆಯಿಂದ ಎರಡು ಕಂಟಕಗಳನ್ನು ಮತ್ತು ಎರಡು ವೈರಿಗಳಿಂದ ಅಂದರೆ

ಮುರ್ಶದ್ ಕುಲಿ ಖಾನ್ ಮತ್ತು ಬಖ್ತಿಶ್ ಖಾನರಿಂದ ನನ್ನ ಪ್ರಾಣವನ್ನು ಕಾಪಾಡಿದ್ದಾನೆಂಬ ಕಾರಣಕ್ಕೆ ಸಲುಗೆ ನೀಡಿದ್ದ. ಇದರಿಂದಾಗಿ ಈ ಸಂಪೂರ್ಣ ದೇಶವು ಅವನ ತ್ಯಾಗದ ನೆಲೆಗಟ್ಟಿನ ಮೇಲೆ ನಿಂತಿದೆ. ಅಲ್ಲಾಹನ ಇಚ್ಛೆಯಿದ್ದಲ್ಲಿ ಮುಂದೆ ಫಾರಿಶ್ ದೇಶವನ್ನು ಕೂಡ ಗೆದ್ದು ನನ್ನ ಕಾಲಬುಡಕ್ಕೆ ತಂದು ಹಾಕಲಿದ್ದಾನೆ' ಎಂದಿದ್ದ. ಈ ವಿಶ್ವಾಸದಿಂದ ತನ್ನದೊಂದು ಫರ್ಮಾನು ಪತ್ರವನ್ನು ಅವನಿಗೆ ಕಳುಹಿಸಿದ. ಆದರೆ ಅವನಿಂದ ಯಾವ ಉತ್ತರವೂ ಬಾರದೇ ಹೋದುದರಿಂದ ಮತ್ತೆ ಫರ್ಮಾನನ್ನು ಕಳುಹಿಸಿದ. ಅವನಿಂದ ಉತ್ತರ ಬರಲಿಲ್ಲ. ಬಾದಶಾಹ ಯೋಚಿಸಿದ ನಾನೇ ಸ್ವತಃ ಫಾರಸ್ ದೇಶಕ್ಕೆ ಹೋಗಿ ಅಲ್ಲಿ ವಿಹಾರ ಮಾಡುವೆ ಮತ್ತು ಅವನ ಬಳಿ ಹೋಗಿ ಅವನ ಎಲ್ಲ ಭಯವನ್ನು ನಿವಾರಿಸುತ್ತೇನೆ. ಅವನಿಗೆ ಶಕ್ತಿನೀಡಲು ನಾನು ಸೈನ್ಯವನ್ನು ಕೂಡ ಅವನಿಗೆ ಕಳುಹಿಸುತ್ತೇನೆಂದು ಅವನು ಹೇಳುತ್ತಿದ್ದ. ಈ ಎಲ್ಲ ಮಾತುಗಳ ಸುದ್ದಿ ಯಾಕೂಬ್ ಖಾನನ ಕಿವಿಗೆ ತಲಪಿದಾಗ ಅಬ್ಬಾಸ್ ಬಾದಶಾಹ ಖಂಡಿತವಾಗಿಯೂ ಫಾರಸ್‌ಗೆ ಆಗಮಿಸುತ್ತಾನೆಂದು ತಿಳಿದುಕೊಂಡ. ಬಖ್ತಿಶ್ ಖಾನನ ಸಹೋದರ ಮತ್ತು ತಂದೆ ಬಾದಶಾಹನಿಗೆ ಶರಣಾಗತರಾಗಿ ನೌಕರಿಗೆ ಸೇರಿಕೊಂಡರು. ಹೀಗೆ ಅಫ್ಘಾರಿನಿಂದ ಬಂದ ಸೈನ್ಯ ಹತ್ತು ಅಥವಾ ಹದಿನೈದು ಸಾವಿರ ಸೈನ್ಯ ಅಲ್ಲಿ ಸೇರಿಕೊಂಡು ಯಾಕೂಬ್ ಜಾನಿಯ ವಿರುದ್ಧ ಮಾತಾಡತೊಡಗಿದ್ದರು. ಯಾಕೂಬ್ ಜಾನ್‌ನಿಗೆ ಈ ಎಲ್ಲ ಪರಿಸ್ಥಿತಿ ತಿಳಿದಾಗ ಬಾದಶಾಹನ ಆಗಮನದ ಬಗ್ಗೆ ಹೆದರ ತೊಡಗಿದ. ಅವನ ಸೈನ್ಯ ಮತ್ತು ಆಸ್ಥಾನದ ಅಧಿಕಾರಿಗಳು ಮಂತ್ರಿ ಮಂಡಳ ಒಟ್ಟಾಗಿ ಮುಂದಿನ ಭವಿಷ್ಯದ ಬಗ್ಗೆ ಯೋಚಿಸಿ ಉಸ್ತರಖ್‌ನ ಕೋಟೆಯನ್ನು ಮರುನಿರ್ಮಾಣಮಾಡಿದರು. ಅದರ ಕೆಲವು ಕೋಣೆಗಳಲ್ಲಿ ಎಲ್ಲ ರೀತಿಯ ಸಾಮಾನುಗಳನ್ನು ಶೇಖರಿಸಲು ಅನುಕೂಲವಾಗುವಂತೆ ಮಾಡಿಕೊಂಡರು. ಮುನ್ನೂರು ಮಣ ಅಫೀಮನ್ನು ನಾಲ್ಕು ಸಾವಿರ ಮಣ ಭಾಂಗ್ ಇನ್ನಿತರ ಸಾಮಾನುಗಳನ್ನು ಸೇರಿಸಿ ಇಟ್ಟುಕೊಂಡರು. ಹೀಗೆ ಫಾರಸಿನ ಲೂಟಿ ಸಾಮಾನು, ಸಂಪತ್ತುಗಳನ್ನು ತಂದು ರಾಶಿಹಾಕಿಕೊಂಡರು.

**ಯಾಕೂಬ್ ಜಾನನನ್ನು ಓಡಿಸಲು ಅಬ್ಬಾಸ್ ಬಾದಶಾಹ ಶೀರಾಜಿಗೆ ಹೋಗುವ ವಿವರಗಳು:**

ಯಾಕೂಬ್ ಜಾನನಿಗೆ ಬಾದಶಾಹ ಅಬ್ಬಾಸ್ ಮಿರ್ಜಾ ಫಾರಿಶ್ ಮತ್ತು ಶೀರಾಜಿಯ ಕಡೆ ದಂಡೆತ್ತಿ ಬರುತ್ತಿದ್ದಾನೆಂದು ತಿಳಿದಾಗ ತನ್ನ ಸೈನ್ಯವನ್ನು, ಸಂಬಂಧಿಕರು, ಮಕ್ಕಳನ್ನು ಸೇರಿಸಿಕೊಂಡು ಕೋಟೆಯ ಮೇಲ್ಭಾಗಕ್ಕೆ ಹೋಗಿ ನಿಂತ. ಬಾದಶಾಹನಿಗೆ ಅವನ ಕೋಟೆಯಲ್ಲಿ ಅವನು ಇರುವುದನ್ನು ತಿಳಿದಾಗ ಅವನು ತನ್ನನ್ನು ಭೇಟಿಯಾಗಲು ಬರಲು ಕರೆಯಲು ಪ್ರಯತ್ನಿಸಿದ. ಅವನು ಬರಲು ಒಪ್ಪಲಿಲ್ಲ. ಕೊನೆಯಲ್ಲಿ ಅವನು ಶೀರಾಜಿನಲ್ಲಿ ಬಂದು ಯಾಕೂಬ್ ಜಾನನ ಮನೆಯಲ್ಲಿ ಬಾದಶಾಹ ಉಳಿಯುವ

ವ್ಯವಸ್ಥೆಯನ್ನು ಮಾಡಿಕೊಂಡ. ಆಗ ಬಖ್ತಿಶ್ ಖಾನನ ತಂದೆ ಬಾದಶಾಹನಿಗೆ ತುಂಬ ಆದರ ಗೌರವ ತೋರಿ ಹೇಳಿದ, 'ನಾನು ಸೈನ್ಯವನ್ನು ತೆಗೆದುಕೊಂಡು ಕೋಟೆಗೆ ಹೋಗಿ ಅವನನ್ನು ಸೆರೆಹಿಡಿದು ತರಲು ಪ್ರಯತ್ನಿಸುತ್ತೇನೆ' ಎಂದು ಅನುಮತಿ ಕೇಳಿದ. ಬಾದಶಾಹನು ಯಾಕೂಬ್ ಖಾನನ ವೈರಿಗಳಾಗಿದ್ದ ಕೆಲವು ಅಫ್ಘಾರ್ ಪಂಗಡದ ಸರದಾರರೊಂದಿಗೆ ಹದಿನೈದು ಸಾವಿರ ಸೈನಿಕರನ್ನು ಕೋಟೆಯೊಳಗೆ ನುಗ್ಗಿಸಿದ. ಆಗ ಈ ಕೋಟೆ ಅಷ್ಟೊಂದು ಬಲಿಷ್ಠವಾಗಿರಲಿಲ್ಲ. ಈ ಕೋಟೆಗೆ ಆವರಣವೂ ಇರಲಿಲ್ಲ. ಕೋಟೆಯ ಒಳಗೆ ಒಂದು ಕೊಳವಿತ್ತು. ಅದರ ನಾಲ್ಕೂ ದಿಕ್ಕಿನಲ್ಲಿ ತೋಟವಿತ್ತು. ಯಾಕೂಬ್ ಖಾನ್ ಬುರುಜಿನ ಬಾಗಿಲಲ್ಲಿ ಬಹಳ ವೈಭವ ದೌಲತ್ತಿನಲ್ಲಿ ಕೂತಿದ್ದ. ಬಖ್ತಿಶ್ ಖಾನನ ತಂದೆ ಒಳಗೆ ಹೋಗಲು ಸಾಧ್ಯವಾಗದಂತೆ ಗಾರೆ ಸುಣ್ಣವನ್ನು ತರಿಸಿ ಒಂದು ತಡೆಗೋಡೆಯನ್ನು ಕಟ್ಟಿಸಲು ಯಾಕೂಬ್ ಖಾನ್ ತೊಡಗಿದ. ಪ್ರತೀ ದಿನ ಐವತ್ತು ಸಾವಿರ ಕೆಲಸಗಾರರು ಇಲ್ಲಿ ಕೆಲಸದಲ್ಲಿ ನಿರತರಾಗಿದ್ದರು. ಅವರೆಲ್ಲರಿಗೂ ಸರಕಾರದ ವತಿಯಿಂದ ಊಟ ಉಪಚಾರಗಳನ್ನು ಮಾಡುತ್ತಿದ್ದ. ಅದನ್ನು ಬಹಳ ಬಲಿಷ್ಠ ಬುರುಜನ್ನಾಗಿ ಕಟ್ಟಬೇಕೆಂದು ಹೇಳಿದ್ದ. ಕೋಟೆಯ ಹೊರಗಿನ ಪ್ರದೇಶವನ್ನು ಖಾಲಿ ಇಟ್ಟಿದ್ದ. ಯುದ್ಧ ಶುರುವಾದರೆ ಅವನ ಜನರು ಬಂದು ಅದರಲ್ಲಿ ಸುರಕ್ಷಿತರಾಗುವಂತೆ ಬುರುಜನ್ನು ಕಟ್ಟಬೇಕೆಂದು ಕೆಲಸಗಾರರಿಗೆ ನಿರ್ದೇಶಿಸಿದ್ದ. ಈ ಬುರುಜುಗಳು ತಯಾರಾಗಿ ಅವನ ಸೈನ್ಯ ಒಳಬರುವುದಕ್ಕೆ ಶುರುವಾಯಿತು. ಅವನು ರಾತ್ರಿಯ ಹೊತ್ತಿನಲ್ಲಿ ಬಖ್ತಿಶ್ ಖಾನನ ತಂದೆಯ ಸೈನ್ಯದ ಮೇಲೆ ದಾಳಿ ನಡೆಸಿ ಅವರು ಅಲ್ಲಿಂದ ಓಡುವಂತೆ ಮಾಡಿದ.

ಅಬ್ಬಾಸ್ ಬಾದಶಾಹ ಈ ಘಟನೆಯಿಂದ ಸ್ವಲ್ಪ ಸಮಯಾವಕಾಶ ದೊರೆತಾಗ ಯಾಕೂಬ್ ಜಾನನನ್ನು ಪತ್ರ ಬರೆದು ಅವನೊಂದಿಗೆ ತನ್ನ ಸ್ನೇಹ ಸಂಬಂಧಗಳ ಹಳೆಯ ನೆನಪುಗಳನ್ನು ಕೆದಕುತ್ತಾ 'ಈಗ ನಿನಗೇನಾಯಿತು? ನಿನ್ನ ಈ ತಪ್ಪಿನಿಂದಾಗಿ ಎಷ್ಟೊಂದು ಅಮಾಯಕರು ಸಾವಿಗೀಡಾದರು' ಎಂದು ಕೇಳಿ ಪತ್ರ ಬರೆದ. ಇದಕ್ಕೆ ಉತ್ತರವಾಗಿ 'ಯಾರು ನನ್ನಿಂದಾಗಿ ಸಾವಿಗೀಡಾಗಿದ್ದಾರೋ ಅವರು ಅಮಾಯಕರಲ್ಲ, ಬಾದಶಾಹರಾದ ನಿಮ್ಮ ವೈರಿಗಳು. ಬಾದಶಾಹರ ಸ್ವಾಮಿದ್ರೋಹಿಗಳಾಗಿದ್ದರು. ಬಖ್ತಿಶ್ ಖಾನರ ಜೊತೆಗೆ ಇದ್ದುದರಿಂದ ಈ ಸತ್ಯ ಬೆಳಕಿಗೆ ಬಂತು. ನಾನು ಹಿಂದೆ ಹೇಗಿದ್ದೆನೋ ಹಾಗೆಯೇ ಇದ್ದೇನೆ. ಯಾರು ನನ್ನ ಮೇಲೆ ಹಲ್ಲೆ ನಡೆಸಿದರೋ ಅವರ ಮೇಲೆ ನಾನು ಕೂಡ ಹಲ್ಲೆ ನಡೆಸಿದೆ' ಎಂದು ಪತ್ರಬರೆದ. ಮಂತ್ರಿಗಳು, ಸರದಾರರು ಅಧಿಕಾರಿಗಳು ಈ ಪತ್ರವನ್ನು ಓದಿದಾಗ 'ಇದುಕೂಡ ಯಾವುದೋ ಒಂದು ಕುತಂತ್ರದ ಭಾಗವಾಗಿ ಕಾಣಿಸುತ್ತದೆ. ಆದುದರಿಂದ ನಮಗೆ ಜಾಗರೂಕರಾಗಿರಬೇಕಾದ ಅವಶ್ಯಕತೆ ಇದೆ' ಎಂದು ಅಭಿಪ್ರಾಯಪಟ್ಟರು. ಯಕೂಬ್ ಜಾನನ ಮಂತ್ರಿ ಮತ್ತು ಸಲಹೆಗಾರ

ಮಿರ್ಜಾ ಜಾನ್ ಬೇಗ್ 'ನೀವು ಅನುಮತಿ ನೀಡಿದರೆ, ಬಾದಶಾಹನ ಮುಂದೆ ಹೋಗಿ ನಾನು ನಿಮ್ಮ ಪತ್ರದ ಮಾತುಗಳನ್ನು ಅವರಿಗೆ ಮನದಟ್ಟು ಮಾಡುತ್ತೇನೆ' ಎಂದ. ಯಾಕೂಬ್ ಜಾನ್ ಇದಕ್ಕೆ ಒಪ್ಪಿ ತನ್ನ ಕೆಲವು ಅಂಗರಕ್ಷಕರೊಂದಿಗೆ ಹಾಗೂ ಪತ್ರದೊಂದಿಗೆ ಬಾದಶಾಹನ ಬಳಿಗೆ ಕಳುಹಿಸಿಕೊಟ್ಟ. ಅವನು ಅಲ್ಲಿಗೆ ಹೋಗಿ ಏನೆಲ್ಲ ನಡೆಯಿತು ಎಂಬುದನ್ನು ವಿವರವಾಗಿ ತಿಳಿಸಿದ. ಮಿರ್ಜಾ ಜಾನನ ಉದ್ದೇಶವೇನಿತ್ತೆಂದರೆ ಬಾದಶಾಹನಿಂದ ಒಂದು ಕ್ಷಮಾಪಣಾ ಪತ್ರವನ್ನು ಯಾಕೂಬ್ ಜಾನನಿಗೆ ನೀಡುವಂತೆ ಒತ್ತಾಯಿಸುವುದಾಗಿತ್ತು. ಬಾದಶಾಹ ತನ್ನ ಮಂತ್ರಿ ಮಂಡಳದಲ್ಲಿ ಕೂಲಂಕುಶವಾಗಿ ಚರ್ಚಿಸಿದ ಬಳಿಕ ಕ್ಷಮಾಪಣಾಪತ್ರವನ್ನು ನೀಡಿದ. ಇದರಲ್ಲಿ ಇಬ್ಬರ ನಡುವೆ ಆಣೆ ಪ್ರಮಾಣಗಳ ಮಾತುಗಳೂ ಇದ್ದವು. ಕೋಟೆಯ ಬಳಿ ಇರುವ ಸೈನ್ಯವು ಬಾದಶಾಹನ ಮುಂದೆ ಶರಣಾಗತರಾಗಬೇಕು ಮತ್ತು ಯಾಕೂಬ್ ಜಾನ್ ಸ್ವತಃ ನಮ್ಮ ಮುಂದೆ ಹಾಜರಾಗ ತಕ್ಕದ್ದು ಎಂಬ ಶರತ್ತುಗಳು ಸೇರಿದ್ದವು. ಬಾದಶಾಹನು ಮಿರ್ಜಾ ಜಾನನ ಕೈಗೆ ಈ ಕ್ಷಮಾಪಣಾ ಪತ್ರವನ್ನು ಬರೆದು ನೀಡಿ ಗೌರವದಿಂದ ಅವನನ್ನು ಬೀಳ್ಕೊಟ್ಟ.

**ಯಾಕೂಬ್ ಜಾನ್ ಬಾದಶಾಹನ ಬಳಿಗೆ ಆಗಮಿಸುವ ವಿವರಗಳು:**

ಎರಡು ಮೂರು ದಿನಗಳ ಬಳಿಕ ಯಾಕೂಬ್ ಜಾನ್ ಎಲ್ಲ ತಯಾರಿಗಳೊಂದಿಗೆ ತನ್ನ ಸೈನ್ಯವನ್ನು ಕೂಡಿಕೊಂಡು ತನ್ನ ಕೋಟೆಯಿಂದ ಘನತೆ ಗಾಂಭೀರ್ಯದೊಂದಿಗೆ ಬಾದಶಾಹನ ಬಳಿಗೆ ಹೋದ. ಮರುದಿನ ಬಾದಶಾಹನೊಂದಿಗೆ ಭೇಟಿಯ ನಿಷ್ಕರ್ಷೆಯಾಗಿತ್ತು. ಅಬ್ಬಾಸ್ ಬಾದಶಾಹ ತನ್ನ ಮಹಡಿಯ ಮಹಲಿನಲ್ಲಿ ತನ್ನ ಕೊಠಡಿಯಲ್ಲಿ ಸುಸಜ್ಜಿತವಾಗಿ ಮಂತ್ರಿ ಮಂಡಳದವರು, ಆಪ್ತರು, ಸಲಹೆಗಾರರು ಸರದಾರರೊಂದಿಗೆ ಸೇರಿದ್ದ. ಒಳ್ಳೆಯ ಬಟ್ಟೆಗಳನ್ನು ತೊಟ್ಟು ಶಿಸ್ತಿನಿಂದ ದೂರದಿಂದ ನೋಡುವಾಗ ಸೈನ್ಯವು ನಿಂತಂತೆ ಕಂಡು ಬಂತು. ಹತ್ತು ಸಾವಿರ ಸೈನಿಕರ ದಂಡು ಕೂಡ ಅಲ್ಲಿ ಹೊರಗೆ ಹಾಜರಿತ್ತು. ಬಾದಶಾಹ 'ಅತ್ಯಂತ ವೇಗದ ಕುದುರೆ 'ಬುರ್ರಾಖ್' ನಂತಹ ಯಾಕೂಬ್ ಜಾನ್ ಎಲ್ಲಿದ್ದಾನೆ?' ಎಂದು ಕೇಳಿದ. ಯಾಕೂಬ್ ಜಾನ ಕೂಡ ತನ್ನ ಹನ್ನೆರಡು ತಂಡದ ಸಿಪಾಯಿಗಳ ಮಧ್ಯದಿಂದ ಹಾದು ತನ್ನ ಸಹೋದರರು, ಸಂಬಂಧಿಗಳೊಂದಿಗೆ ಪ್ರತಿಯೊಬ್ಬನೊಂದಿಗೂ ಶಂಶೀರ್ ತಲ್ವಾರು, ಹೊಳೆಯುವ ವಜ್ರ ವೈಢೂರ್ಯದ ಹರಳುಗಳನ್ನು ಕುಸುರಿಮಾಡಿದ ಒರೆಯೊಳಗೆ ಇಟ್ಟು ಸೊಂಟಕ್ಕೆ ಕಟ್ಟಿಕೊಂಡು ರೇಶ್ಮೆ ಮಕ್ಮಲಿನ ಬಟ್ಟೆಗಳನ್ನು ತೊಟ್ಟು ವೈಭವೋಪೇತ ಗಾಂಭೀರ್ಯದ ನಡೆಯಲ್ಲಿ ಸಭೆಯೊಳಗೆ ಪ್ರವೇಶಿಸಿದರು. ನಾಲ್ಕು ಸಾವಿರ ಕುದುರೆ ಸವಾರರೊಂದಿಗೆ ಬಂಗಾರ ಬೆಳ್ಳಿಯ ಬೆಲೆ ಬಾಳುವ ಉಡುಗೊರೆಯನ್ನೂ ತಂದಿದ್ದ. ಅಬ್ಬಾಸ್ ಬಾದಶಾಹ ಇವನ ವೈಭವವನ್ನು ನೋಡಿ ಬಹಳ ನಾಚಿಕೊಂಡ. ಇವನ ಬಳಿ ಇಷ್ಟೊಂದು ಸಂಪತ್ತು ವೈಭವ ಎಲ್ಲಿಂದ ಒಟ್ಟುಗೂಡಿಸಿದ್ದಾನೆ, ಇದು ಸರಕಾರಿ ಸಂಪತ್ತೋ ಇಲ್ಲ

ಇವನ ವೈಯಕ್ತಿಕವೋ ಎಂಬ ಜಿಜ್ಞಾಸೆ ಅವನಲ್ಲಿ ಮೂಡಿತು. ಅವನನ್ನು ಸ್ವಾಗತಿಸಲು ಪ್ರಮುಖರನ್ನು ಕಳುಹಿಸಲಾಯಿತು. ಯಾಕೂಬ್ ಜಾನ್ ಮತ್ತು ಅವನ ಜೊತೆಗೆ ಬಂದಿದ್ದ ಮಂತ್ರಿ ಪ್ರಮುಖರು, ಸಂಬಂಧಿಕರನ್ನು ಸೇರಿಕೊಂಡು ಬಾದಶಾಹನ ದರ್ಬಾರಿಗೆ ಹಾಜರಾದ. ಬಾದಶಾಹ ಗೌರವಾದರಗಳನ್ನು ತೋರಿಸಿ ಬರಮಾಡಿಕೊಂಡು ತನ್ನ ಸಮಾನ ವೇದಿಕೆಯಲ್ಲಿ ಕೂರಿಸುವ ವ್ಯವಸ್ಥೆಯನ್ನು ಮಾಡಿದ್ದ. ಅವನ ಜೊತೆಗೆ ಬಂದವರನ್ನು ಕೂಡ ಆದರಾತಿಥ್ಯಗಳನ್ನು ನೀಡಿ ಉಡುಗೊರೆ ಇನಾಮುಗಳನ್ನು ನೀಡಿ ಕೂರಿಸಲಾಯಿತು. ಹಾಗೆಯೆ ಪ್ರತೀದಿನವೂ ಬಾದಶಾಹನ ಕಡೆಯಿಂದ ಅವರಿಗೆ ಅತಿಥ್ಯ ನೀಡಲಾಯಿತು. ಅವನ ವೈಭವವನ್ನು ಕಂಡ ಅಲ್ಲಿನ ಜನರು ಅವನ ಮೇಲೆ ಅಸೂಯೆಪಡತೊಡಗಿದರು. ಹೆಚ್ಚಾಗಿ ಬಾದಶಾಹರ ಜೊತೆಯಲ್ಲೇ ಯಾಕೂಬ್ ಜಾನ್ ಇರುತ್ತಿದ್ದ. ಬಾದಶಾಹ ಶಿಕಾರಿಗೆ ಹೋದಾಗ, ವಿಹಾರಕ್ಕೆ ತೆರಳಿದಾಗ ಯಾಕೂಬ್ ಜಾನನ ಆರಾಮಕ್ಕೆ ಬೇಕಾದ ವ್ಯವಸ್ಥೆಯನ್ನು ಮಾಡಿ ಹೋಗುತ್ತಿದ್ದ. ಆದರೆ ಬಾದಶಾಹರ ಜನರು ಅವನ ಬಗ್ಗೆ ಕೆಟ್ಟದಾದ ಅಭಿಪ್ರಾಯ ನೀಡುತ್ತಿದ್ದರು. ಇದನ್ನು ತಿಳಿದ ನಂತರ ಬಾದಶಾಹ ಬಹಳ ಜಾಗರೂಕನಾಗಿರುತ್ತಿದ್ದ. ಅವನನ್ನು ಪರೀಕ್ಷಿಸಲು ಬಯಸಿದ್ದ.

ಒಂದು ದಿನ ನಗರದ ಗಡಿಯಲ್ಲಿ ಶಿಕಾರಿಗೆ ತೆರಳಿದ್ದರು. ಬಾದಶಾಹ ತನ್ನ ಕೆಲವು ಕುದುರೆಗಳನ್ನು ನದಿಯನ್ನು ದಾಟಲು ಬಿಟ್ಟಿದ್ದರು. ಯಾಕೂಬ್ ಜಾನನ ಜನರು ಬಾದಶಾಹನ ಸೈನಿಕರ ಜೊತೆಗೆ ಹೋದರು. ಯಾಕೂಬ್ ಜಾನ ಕೂಡ ಅವರ ಜೊತೆಯಲ್ಲಿದ್ದ. ನದಿಯ ಮಧ್ಯೆ ತಲಪಿದಾಗ ಯಾಕೂಬ್ ಜಾನ್ ತನ್ನ ಜನರೊಂದಿಗೆ ನದಿನೀರಿನ ಹಾದಿಯ ಮೂಲಕ ಬಾದಶಾಹನ ಕಡೆ ಓಡ ತೊಡಗಿದ. ನೀರಿಗೆ ಇಳಿಯದಿದ್ದ ಬಾದಶಾಹ ತನ್ನ ಕುದುರೆಯಲ್ಲಿ ವೇಗವಾಗಿ ನಗರದ ಕಡೆಗೆ ಧಾವಿಸಿದ. ಇವನ ವೇಗ ಯಾಕೂಬ್ ಖಾನನ ವೇಗಕ್ಕಿಂತ ಕಡಿಮೆ ಇದ್ದುದರಿಂದ ಅವನು ತೀರಾ ಹತ್ತಿರಕ್ಕೆ ಬಂದು 'ಯಾಕೆ ಓಡುತ್ತಿದ್ದೀರಿ?' ಎಂದು ಕೇಳಿದ. 'ನನಗೆ ಅದೇಕೋ ಸುಸ್ತಾಗಿ ತಲೆ ಸುತ್ತಿದಂತಾಯಿತು. ಅದಕ್ಕಾಗಿ ಹಿಂತಿರುಗಿದೆ. ನನ್ನ ಆರೋಗ್ಯ ಸರಿಯಿಲ್ಲ. ನಾನು ಆರಾಮ ಮಾಡಲು ಬಂದಿದ್ದೇನೆ' ಎಂದು ಬಾದಶಾಹ ಹೇಳಿದ. ಅವನಿಗೂ ಆರಾಮ ಮಾಡಲು ಹೇಳಿದ. ಎರಡು ಮೂರು ದಿನಗಳ ಕಾಲ ಬಾದಶಾಹ ಆರಾಮ ಮಾಡುತ್ತಲಿದ್ದ. ನಂತರ ಒಂದು ದಿನ ಯಾಕೂಬ್ ಖಾನನ ಬಳಿ ಹೋಗಿ ತನ್ನ ಸ್ನೇಹ, ಪ್ರೀತಿಯನ್ನು ವ್ಯಕ್ತಪಡಿಸಿ ಅವನ ಹೆಗಲ ಮೇಲೆ ಕೈಯಿಟ್ಟು ಅವನೊಂದಿಗೆ ಅನ್ಯೋನ್ಯತೆಯನ್ನು ವ್ಯಕ್ತಪಡಿಸುತ್ತ ಹೇಳಿದ, 'ನಡೆ ಮೈದಾನದಲ್ಲಿ ಉಯ್ಯಾಲೆ ಹಾಕಲಾಗಿದೆ, ನಾವಿಬ್ಬರೂ ಉಯ್ಯಾಲೆಯಲ್ಲಿ ಜೀಕೋಣ' ಎಂದ. ಆದರೆ ಬಾದಶಾಹ ಉಯ್ಯಾಲೆಯ ಕೆಲಸಗಾರರಿಗೆ ಚಾಕ ಚಕ್ಯತೆಯಿಂದ ಅವನು ಜೀಕುವಾಗ ಕುತ್ತಿಗೆಗೆ ಕುಣಿಕೆ ಹಾಕಿ ಎಳೆಯುವಂತೆ ಉಪಾಯ ಹೇಳಿಕೊಟ್ಟಿದ್ದ. ಅವನ ಯೋಜನೆಯಂತೆ ಜೀಕುವಾಗ ಯಾಕೂಬ್ ಖಾನನ ಕುತ್ತಿಗೆಗೆ ಕುಣಿಕೆ ಹಾಕಲು ತಯಾರಿ ನಡೆದಿತ್ತು.

**ಯಾಕೂಬ್ ಜಾನನ ಕುತ್ತಿಗೆಗೆ ನೇಣು ಬಿಗಿದು ಶಿರಚ್ಛೇದ ನಡೆಸಿದ ವಿವರಗಳು:**

ಒಂದು ದಿನ ಅಬ್ಬಾಸ ಬಾದಶಾಹ ತನ್ನ ಅಂತಃಪುರದ ತೋಟದಲ್ಲಿ ಅಡ್ಡಾಡುತ್ತಿದ್ದ. ಯಾಕೂಬ್ ಜಾನನನ್ನು ಕರೆಸಿ ಎಂದು ಆಜ್ಞಾಪಿಸಿದ. ನೌಕರರು ಹೋಗಿ ಯಾಕೂಬ್ ಜಾನನನ್ನು ಕರೆತಂದರು. ಅವನು ಮುಂದೆ ನಿಂತಾಗ ಬಾದಶಾಹ ಅವನ ಬಳಿ ಹೋಗಿ ಏನೋ ಹೇಳಿದ. ಅವನ ಹೆಗಲಮೇಲೆ ಕೈಯಿಟ್ಟ. ಅವನು ಎದೆಯಲ್ಲಿ ಕವಚವನ್ನು ಧರಿಸಿದ್ದನೆಂದು ತಿಳಿಯಿತು. ಈಗ ಎದೆಕವಚವನ್ನು ಧರಿಸುವ ಅಗತ್ಯವೇನಿದೆ ಎಂದು ಬಾದಶಾಹ ಕೇಳಿದ. 'ನನಗೆ ಬಹಳಷ್ಟು ವೈರಿಗಳಿದ್ದಾರೆ ಸುರಕ್ಷಿತವಾಗಿರಲು ಕವಚವನ್ನು ತೊಟ್ಟಿದ್ದೇನೆ' ಎಂದು ಯಾಕೂಬ್ ಜಾನ ಹೇಳಿದ. ಅಲ್ಲಿಂದ ಅವನನ್ನು ಹೊರಗೆ ಕರೆದುಕೊಂಡು ಹೋಗಿ ಗಟ್ಟಿಯಾಗಿ ಕಟ್ಟಿಹಾಕಲು ಆಜ್ಞೆ ಮಾಡಿದ. ಬಾದಶಾಹ ಅವನ ಎಷ್ಟೆಲ್ಲ ಸಂಬಂಧಿಕರು, ಬೆಂಬಲಿಗರಿದ್ದಾರೋ ಅವರೆಲ್ಲರನ್ನೂ ಬಂಧಿಸಿ ಲೂಟಿಮಾಡಿ ಎಂದು ಕೂಡ ತನ್ನ ಜನರಿಗೆ ಬಾದಶಾಹ ಆಜ್ಞಾಪಿಸಿದ. ನಗರದಲ್ಲಿ ಈ ಸುದ್ದಿ ತಲಪಿದಾಗ ಅಲ್ಲಿನ ಪ್ರಜೆಗಳು ಅಬ್ಬಾಸ್ ಬಾದಶಾಹನ ದೌಲತ್ ಮಹಲಿಗೆ ಬಂದರು. ಆಗ ಬಾದಶಾಹ ಅಬ್ಬಾಸ್ ತನ್ನ ಮಹಲಿನಿಂದ ಹೊರಬಂದ, ಯಾಕೂಬ್ ಜಾನನನ್ನು ಮತ್ತು ಅವನ ಖಾಸ ಬಂಧುಗಳನ್ನು ಹಗ್ಗದಿಂದ ಕಟ್ಟಲಾಗಿದ್ದಂತೆ ಅವರನ್ನು ಜನರೆದುರು ನಿಲ್ಲಿಸಿ ಶಿರಚ್ಛೇದ ಮಾಡಿರೆಂದು ಆಜ್ಞಾಪಿಸಿದ.

ಪಾಪ ಯಾಕೂಬ್ ಜಾನ್ ಬೇರೆ ವಿಧಿ ಇಲ್ಲದೆ ತನನ್ನು ತಾನು ಅವರ ವಶಕ್ಕೆ ಒಪ್ಪಿಸಿಕೊಂಡ. ಯಾಕೂಬ್ ಜಾನನಿಗೆ ತನ್ನ ಮಕ್ಕಳೊಂದಿಗೆ ಮಾತಾಡಲು ಕೂಡ ಅವಕಾಶ ನೀಡದೆ ಶಿರಚ್ಛೇದಕ್ಕೆ ಬಾದಶಾಹನ ಆಜ್ಞೆ ಹೊರಟಿತು. ತ್ವರಿತವಾಗಿ ಅವನ ಶಿರವು ದೇಹದಿಂದ ಬೇರ್ಪಡಿಸಲಾಯಿತು. ಅವನ ಸಂಪೂರ್ಣ ಆಸ್ತಿ ಸಂಪತ್ತನ್ನು ಜಪ್ತಿ ಮಾಡಿ ಸರಕಾರಿ ಖಜಾನೆಯಲ್ಲಿ ಜಮಾಮಾಡಲಾಯಿತು.

**ಶೀರಾಜಿನ ಸುತ್ತಮುತ್ತಲಿನ ಪ್ರದೇಶವನ್ನು ಖಾನ್ ಜಹಾಂಗೀರ್ ಅಲ್ಲಾವರ್ದಿ ಖಾನನಿಗೆ ಒಪ್ಪಿಸಿದ ವಿವರಗಳು:**

ಇವನು ಹಿಂದೆ ಷಾ ತಹಮಾಸ್ಫನ ಗುಲಾಮರಲ್ಲಿ ಒಬ್ಬನಾಗಿದ್ದ. ಇವನಿಗೆ ಮುಖ್ಯ ಅಧಿಕಾರಿಯ ಸ್ಥಾನವನ್ನು ನೀಡಲಾಯಿತು. ಈ ಕುಟುಂಬದ ವೈರಿಗಳಾಗಿದ್ದ ಹಳೆಯ ಸರದಾರರನ್ನು ಕೊಂದು ಹಾಕಿದ. ಪ್ರವಾದಿ ಸಲ್ಲಲ್ಲಾಹು ಅಲೈಹಿವ ಸಲ್ಲಮ್‌ರ ಕುಟುಂಬದವರಾದ ಷಾ ತಹಮಾಸ್ಫರ ವೈರಿಗಳ ಮತ್ತು ವೈರಿಗಳ ಕುಟುಂಬ, ಮರಿಮಕ್ಕಳನ್ನು ಕರೆದು ಕೊಂದು ಹಾಕಿದ. ಅಲ್ಲಾಹನ ಕೃಪೆಯಿಂದ ಈ ಕುಟುಂಬಗಳ ಮಧ್ಯೆ ಮತ್ತೆ ದ್ವೇಷ ಬೆಳೆದು ಹಳೆಯ ಸರದಾರರು ಪರಸ್ಪರ ಕೊಂದು ಹಾಕ ತೊಡಗಿದರು. ಹೆಚ್ಚುಕಮ್ಮಿ ಮೂರು ನಾಲ್ಕು ಸಾವಿರ ಜನರು ಸಂತ್ರಸ್ಥರಾಗಿ ಬೇರೆ

ಹಾದಿ ಕಾಣದೆ ಮತ್ತೆ ಗುಲಾಮರಾಗಿ ದುಡಿಯ ತೊಡಗಿದರು. ಅಲ್ಲಾವರ್ದಿ ಖಾನ್ ಈ ಸಂಕಷ್ಟಕ್ಕೊಳಗಾದ ಜನರಿಗೆ ನೌಕರಿ ನೀಡಿ ಸಲಹಿದ. ಯಾಕೆಂದರೆ ಈ ಜನರು ಪರಾಕ್ರಮಿಗಳಾಗಿದ್ದರು. ಅಲ್ಲಾಹನು ವರ್ದಿಖಾನನಿಗೆ ಪ್ರತೀ ಯುದ್ಧದಲ್ಲೂ ವಿಜಯಶಾಲಿಯನ್ನಾಗಿ ಮಾಡಿದ. ಇವರ ಸೈನ್ಯವು ಫಾರಸ್ ದೇಶದಲ್ಲಿ ಬಹುದೊಡ್ಡ ಮತ್ತು ಬಲಿಷ್ಠ ಸೈನ್ಯವಾಯಿತು. ಷಾ ತಹಮಾಸ್ಪನ ಅಸ್ಫಹಾನದಿಂದ ಹಿಂತಿರುಗಿದ ಬಳಿಕ ಲಾರ್ ಪ್ರದೇಶಕ್ಕೆ ಹೋದ. ಲಾರ್ ರಾಜ್ಯವು ಪುರಾತನ ಕಾಲದ ಇತಿಹಾಸದಲ್ಲಿ ಸೇರಿತ್ತು. ಕೈಕಾಹೂಸ್ ಮನೆತನದ ಅರಸರು ಹೆಚ್ಚು ಕಮ್ಮಿ ಮೂರು ಸಾವಿರ ವರ್ಷಗಳ ಕಾಲ ಆಳ್ವಿಕೆ ನಡೆಸಿದ್ದರು. ಈ ರಾಜ್ಯವನ್ನು ಯಾರೂ ಜಯಿಸಲಾಗಲಿಲ್ಲ. ಆದರೆ ಅಲ್ಲಾವರ್ದಿಯು ಲಾರ್‌ನ ಕೋಟೆಯನ್ನು ಕೆಲವೇ ದಿನಗಳಲ್ಲಿ ಮುತ್ತಿಗೆ ಹಾಕಿ ಜಯಿಸಿಕೊಂಡಿದ್ದ. ಅಲ್ಲಿನ ಬಾದಶಾಹನೊಂದಿಗೆ ಯುದ್ಧಹೂಡಿ ಜಯಿಸಿದ್ದ. ಅಲ್ಲಾವರ್ದಿಯ ಹಳೆಯ ಸೇವಕ ಷಾ ಕುಲಿ ಸುಲ್ತಾನ್‌ನನ್ನು ಹನ್ನೆರಡು ಸಾವಿರ ಸೈನಿಕರೊಂದಿಗೆ ಜರೂನ್ ಪ್ರಾಂತ್ಯಕ್ಕೆ ಕಳುಹಿಸಿದ. ಆರು ತಿಂಗಳ ಕಾಲದಲ್ಲಿ ಅವನು ಅಲ್ಲಿನ ಶುಮೈನ್ ಮತ್ತು ಮೀನಾದ ಕೋಟೆಯನ್ನು, ಇಬ್ರಾಹಿಂ ಬಂದರನ್ನು, ನಖಲಿಸ್ಥಾನವನ್ನು ಮತ್ತು ಮಕರಾನ್ ವರೆಗಿನ ಪ್ರಾಂತ್ಯಗಳನ್ನು ಜಯಿಸಿ ಅವನು ತನ್ನ ಮಗ ಇಮಾಮ್ ಕುಲಿ ಖಾನನಿಗೆ ನೀಡಿದ್ದ. ತಾರಿನ್ ಕೋಟೆ, ಸಮುದ್ರದಲ್ಲಿ ಬಹಳ ಅಮೂಲ್ಯವಾದ ಮುತ್ತುಗಳು ಸಿಗುವ ಬಹರೈನ್ ದೇಶವನ್ನು ಯಾವುದೇ ರೀತಿಯ ಘರ್ಷಣೆಯಾಗಲಿ, ಯುದ್ಧವಾಗಲೀ ಇಲ್ಲದೆ ಇಮಾಮ್ ಕುಲಿಯಿಂದ ಷಾ ಅಬ್ಬಾಸ್ ವಶಪಡಿಸಿಕೊಂಡಿದ್ದ.

ಪ್ರತೀವರ್ಷ ಈ ಪ್ರದೇಶದಿಂದ ವಸೂಲಿಯಾದ ಕರ, ಕಂದಾಯಗಳ ಬಹುದೊಡ್ಡ ಮೊತ್ತವೊಂದು ಸರಕಾರಕ್ಕೆ ಖಜಾನೆಯಲ್ಲಿ ಜಮಾ ಆಗುತ್ತಿತ್ತು. ಸಯ್ಯದ್ ಮುಬಾರಕ್ ಮಶ್ಹಸಿಯನ್ನು ಈ ರಾಜ್ಯಗಳ ಗಡಿಯನ್ನು ನೋಡಿಕೊಳ್ಳುವುದಕ್ಕೆ ನೇಮಿಸಿ, ಮೂರು ಸಾವಿರ ಸೈನಿಕರನ್ನು ನೀಡಲಾಗಿತ್ತು. ಹೀಗೆ ಅಲ್ಲಾವರ್ದಿ ಖಾನನು ಈ ಎಲ್ಲ ರಾಜ್ಯಗಳನ್ನು ಜಯಿಸಿ ವಶಪಡಿಸಿಕೊಂಡ. ಸಾವಿರಾರು ಒಂಟೆಗಳನ್ನು ಕೂಡ ಮಾಂಸಕ್ಕಾಗಿ ಮತ್ತು ಸವಾರಿ ಕೆಲಸಗಳಿಗಾಗಿ ಉಪಯೋಗಿಸಿಕೊಳ್ಳಲು ನೀಡಲಾಗಿತ್ತು.

**ಅಬ್ಬಾಸ್ ಬಾದಶಾಹನು ಶೀರಾಜಿಗೆ ಆಗಮಿಸಿದ ಸಂಗತಿಯ ವಿವರಗಳು:**

ಬಾದಶಾಹ ಅಬ್ಬಾಸ್ ಮಿರ್ಜಾ ಯಾಕೂಬ್ ಖಾನನ ಘಟನೆಯ ನಂತರ ಶೀರಾಜಿನಿಂದ ಅಸ್ಫಹಾನ್ ಪ್ರಯಾಣಕ್ಕೆ ಆಜ್ಞೆ ಮಾಡಿದ. ಅಲ್ಲಿನ ಎಲ್ಲ ಪ್ರದೇಶಗಳ ಸರದಾರರಿಗೆ ತನ್ನ ಪ್ರತಿನಿಧಿಗಳ ಮೂಲಕ ಇನಾಮು, ಉಡುಗೊರೆಗಳನ್ನು ನೀಡಿ ಸಂತೋಷಪಡಿಸಿದ್ದ. ಇದರಿಂದಾಗಿ ಮುಂದೆ ಅವರು ತನ್ನ ವಿರುದ್ಧ ದಂಗೆಯೇಳ

ಕೂಡದೆಂಬುದು ಅವನ ಉದ್ದೇಶವಾಗಿತ್ತು. ಹಾಜಂ ಖಾನ್ ಮತ್ತು ನೂರಂ ಖಾನರಿಗೆ ಯಾವುದೇ ರೀತಿಯ ಇನಾಮುಗಳನ್ನು ಕೊಡಲಿಲ್ಲ. ಯಾಕೆಂದರೆ ಇವರು ನಾಲ್ಕು ಬಾರಿ ಬಾದಶಾಹನ ವಿರುದ್ಧ ಬಂಡಾಯವೆದ್ದಿದ್ದರು. ಇವರು ಆಗ ಶೀರಾಜಿಯಲ್ಲೇ ಇದ್ದರು. ಇವರಿಗಿದ್ದ ಆಡಳಿತದ ಜವಾಬ್ದಾರಿಯು ಹಸನ್ ಖಾನನಿಗೆ ಸಿಕ್ಕಿತ್ತು.

**ಜೀಲಾನ್‌ನ ಬಾದಶಾಹ ಖಾನ್ ಅಹ್ಮದ್‌ನ ಬದುಕಿನ ಕೆಲವು ವಿವರಗಳು:**

ಗೀಲಾನ್ ಎಂಬ ಸ್ಥಳನಾಮವು ಈಗಿನ ಕಾಲದಲ್ಲಿ ಜೀಲಾನ್ ಎಂದು ಕರೆಯಲಾಗುತ್ತದೆ. ಷಾ ತಹಮಾಸ್ಫನಿಗೆ ಈ ಜೀಲಾನ್ ರಾಜ್ಯವನ್ನು ಗೆಲ್ಲುವ ಬಹಳ ಆಸೆಯಿತ್ತು. ಯಾಕೆಂದರೆ ಅಲ್ಲಿನ ಪ್ರದೇಶದಲ್ಲಿ ಕಾಡು, ನದಿ, ಬಯಲು ಪ್ರದೇಶಗಳಿದ್ದು ಫಲವತ್ತಾದ ಭೂಮಿಯಾಗಿತ್ತು. ಅವನು ಈ ರಾಜ್ಯವನ್ನು ವಶಪಡಿಸಿಕೊಂಡ ಬಳಿಕ ತಬ್ರೇಜಿನ ಕೋಟೆಯನ್ನು ಕೂಡ ವಶಪಡಿಸಿಕೊಂಡು ಜೀಲಾನಿಗೆ ಸಮೀಪ ಇರುವ ಫಝ್ವೀನನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡ. ಖಾನ್ ಅಹ್ಮದ್ ದೊಡ್ಡ ಸುಖಲೋಲುಪ, ವಿಲಾಸಪ್ರಿಯ ರಾಜನಾಗಿದ್ದ. ತನ್ನ ಇಡೀ ಬದುಕನ್ನು ಭೋಗವಿಲಾಸಗಳಲ್ಲಿ ತೀರಿಸಿಕೊಂಡಿದ್ದ. ಸಂಗೀತದಲ್ಲೂ ತುಂಬ ಆಸಕ್ತನಾಗಿದ್ದ. ದೊಡ್ಡದೊಡ್ಡ ಕವಿಗಳನ್ನು, ಸಾಹಿತಿ, ಉಲೇಮಾ, ಜ್ಞಾನಿ, ಪಂಡಿತರನ್ನು ತುಂಬ ಮೆಚ್ಚಿಕೊಂಡು ತನ್ನ ಬಳಿಯಲ್ಲಿರಿಸಿಕೊಂಡಿದ್ದ. ಇರಾಕ್ ಮತ್ತು ಖೊರಸಾನಿನ ಕುಸ್ತಿ ಮಾಡುವವರು, ತಲ್ವಾರು ಯುದ್ಧದ ಪಟುಗಳು ಅವನಲ್ಲಿಗೆ ಬಂದು ಹೋಗುತ್ತಿದ್ದರು.

ಷಾ ತಹಮಾಸ್ಫನಿಗೆ ಈ ಎಲ್ಲ ವಿಷಯಗಳಲ್ಲಿ ಆಸಕ್ತಿ ಇರಲಿಲ್ಲ. ಆದರೆ ಬಾದಶಾಹ ಮೇಲ್ದರ್ಜೆಯವನಾದುದರಿಂದ ಬುದ್ಧಿವಾದಗಳ ಪತ್ರವೊಂದನ್ನು ಬರೆದು ಕಳುಹಿಸಿದ. ಆದರೆ ಖಾನ್ ಅಹ್ಮದ್ ಯುವಕನಾಗಿದ್ದುದರಿಂದ ಅವನಿಗೆ ಭೋಗವಿಲಾಸಗಳಿಂದ ಹೊರಬರಲು ಸಾಧ್ಯವಿರಲಿಲ್ಲ. ಇದರಿಂದಾಗಿ ಷಾತಹಮಾಸ್ಫನು ಷಾ ಖಾನ್ ಅಹ್ಮದನ ರಾಜ್ಯವನ್ನು ವಶಪಡಿಸಿಕೊಳ್ಳುವ ಸಲುವಾಗಿ ಒಂದು ಸೈನ್ಯವನ್ನು ಕಳುಹಿಸಿದ. ಎರಡೂ ಕಡೆಯಿಂದ ಯುದ್ಧ ಭೀಕರವಾಗಿ ನಡೆಯಿತು. ಷಾ ತಹಮಾಸ್ಫನ ಸೈನ್ಯ ಸೋತುಹೋಯಿತು. ಜೀಲಾನ್ ರಾಜ್ಯದ ಹಳೆತಲೆಮಾರಿನ ಹಿರಿಯರು ಈ ಬಾದಶಾಹನ ಕೆಟ್ಟಚಾಳಿಯಿಂದಾಗಿ ಸಿಟ್ಟಾಗಿದ್ದರು. ಅವರನ್ನು ತನ್ನ ಕಡೆ ಸೆಳೆದುಕೊಂಡು ಜೀಲಾನಿನ ರಾಜಗದ್ದುಗೆಯ ಉಮೇದ್ವರರನ್ನಾಗಿ ಮಾಡುತ್ತೇನೆಂಬ ಆಶ್ವಾಸನೆ ನೀಡಿ ಹೆಚ್ಚು ಕಮ್ಮಿ ಇಪ್ಪತ್ತು ಸಾವಿರ ಕುದುರೆ ಸವಾರರನ್ನು ತಯಾರುಪಡಿಸಿ ಜೀಲಾನಿಗೆ ಮತ್ತೊಮ್ಮೆ ಕಳುಹಿಸಿದ. ಈ ಸೈನ್ಯ ಖಾನ್ ಅಹ್ಮದನ ಹತ್ತಿರ ಹೋಗಿ ಯುದ್ಧಕ್ಕೆ ತೊಡಗಿತು. ಖಾನ್ ಅಹ್ಮದ್ ಯುದ್ಧದ ಮಧ್ಯದಲ್ಲಿ ಸಿಕ್ಕಿಕೊಂಡ. ಇವರು ಅವನನ್ನು ಹಿಡಿದು ಬಂಧಿಸಿದರು. ಷಾ ತಹಮಾಸ್ಫನ ಮುಂದೆ ಹಾಜರುಪಡಿಸಿದರು. ಷಾ ಅವನನ್ನು

ಫಾರಸಿನ ಉಸ್ತರಖ್ ಕೋಟೆಯಲ್ಲಿ ಬಂದಿಯಾಗಿರಿಸಿದ. ಜೀಲಾನಿನ ಕೆಲವು ಪ್ರಾಂತ್ಯಗಳನ್ನು ತನಗೆ ಸಹಾಯ ಮಾಡಿದ ಹಿರಿಯ ಸರದಾರರಿಗೆ ಹಂಚಿದ. ಷಾ ತಹಮಾಸ್ಪನ ಮರಣಾನಂತರ ಇಸ್ಮಾಯಿಲ್ ಮಿರ್ಜಾ ತನ್ನ ತಂದೆಯ ಸ್ಥಾನದಲ್ಲಿ ಕೂತ. ಖಾನ್ ಅಹ್ಮದನನ್ನು ಫಾರಸ್‌ನಿಂದ ಕರೆಸಿದ. ಇಬ್ಬರೂ ಗೆಳೆತನದಲ್ಲಿ ಇರತೊಡಗಿದರು. ಈ ಇಬ್ಬರೂ ತಿಂಡಿಪೋತರಾಗಿದ್ದರು. ಹೀಗಾಗಿ ಆರೋಗ್ಯವೂ ಕೂಡ ಒಂದೇ ರೀತಿಯಲ್ಲಿತ್ತು. ಇಸ್ಮಾಯಿಲ್ ಮಿರ್ಜಾನಿಗೆ ಇವನ ಗೆಳೆತನ ಇಷ್ಟವಾಗಿತ್ತು. ಹೀಗಾಗಿ ಅವನ ರಾಜ್ಯವನ್ನು ಅವನಿಗೆ ಮತ್ತೆ ಹಿಂತಿರುಗಿಸಿದ. ಖಾನ್ ಅಹ್ಮದನ ಸಹಾಯಕರು ಅವನ ರಾಜ್ಯದ ಆಡಳಿತವನ್ನು ನೋಡಿಕೊಳ್ಳುತ್ತಿದ್ದರು. ಒಂದು ವರ್ಷಗಳ ಬಳಿಕ ಅವನ ಅನುಮತಿ ಪಡೆದು ತನ್ನ ರಾಜ್ಯಕ್ಕೆ ತೆರಳಿದ. ಅಬ್ಬಾಸ್ ಬಾದಶಾಹನ ಆಳ್ವಿಕೆಯ ಕಾಲದ ತನಕ ತನ್ನ ರಾಜ್ಯದಲ್ಲಿ ಸಂತೋಷವಾಗಿದ್ದ. ಷಾ ಅಬ್ಬಾಸ್ ಮಿರ್ಜಾ ಅಜ್ಬಗಾನರನ್ನು ಓಡಿಸಲು ಖೊರಸಾನಿನ ಕಡೆ ದಂಡೆತ್ತಿ ಹೋದಾಗ ಅವನು ಖಾನ್ ಅಹ್ಮದ್‌ನಿಗೆ ಪತ್ರಬರೆದು ನಿನ್ನ ಮತ್ತು ನಮ್ಮ ತಂದೆ ತಾಯಂದಿರು ಒಂದೇ ಕುಟುಂಬಕ್ಕೆ ಸೇರಿದವರಾಗಿ ಒಟ್ಟಾಗಿರುತ್ತಿದ್ದರು. ನಿಮ್ಮ ತಂದೆ ನಮ್ಮ ತಂದೆಯ ಮಾತನ್ನು ಕೇಳುತ್ತಿದ್ದರು. ಇಬ್ಬರೂ ಸೇರಿ ತಮ್ಮ ವೈರಿಗಳನ್ನು ಎದುರಿಸುತ್ತಿದ್ದರು. ನಿನಗೆ ಹಳೆಯ ಸಂಬಂಧ ಹಸಿಯಾಗಿಡುವ ಇಚ್ಛೆ ಇದ್ದರೆ ಫರ್ಹಾದ್ ಖಾನನನ್ನು ಅಜ್ಬೆಕ್‌ನ ಗಡಿಯಿಂದ ತೆಗೆದು ಹಾಕು. ಈ ಕೆಲಸವನ್ನು ನೋಡಿಕೊ ನಾನು ಈ ಕೆಲಸಕ್ಕೆ ನಿನಗೆ ಸೈನ್ಯವನ್ನು ಕಳುಹಿಸಿ ಸಹಾಯ ಮಾಡುತ್ತೇನೆ ಎಂದು ಪತ್ರ ಬರೆದ. ಅಹ್ಮದ್ ಖಾನ್ ಅವನ ಮನವಿಗೆ ಬೆಲೆನೀಡಲಿಲ್ಲ. ಷಾ ಅಬ್ಬಾಸ್ ಖಾನ್ ಮತ್ತ ಅಹ್ಮದ್ ಖಾನನ ಮಧ್ಯೆ ವಿರಸ ಬೆಳೆದು ಮತ್ತೆ ಯುದ್ಧ ನಡೆಯಿತು. ಜೀಲಾನಿನಲ್ಲಿ ಬಹಳಕಾಲ ವಾಸಿಸಿದ್ದ ಗರುಖಿಲ್ ಬಾಶ್ ಈ ವಿಷಯವನ್ನು ಅರ್ಥಮಾಡಿಕೊಂಡಿದ್ದ. ನಂತರ ಖಾನ್ ಅಹ್ಮದ್‌ನಿಗೆ ವಯಸ್ಸಾಗಿ ಅನಾರೋಗ್ಯದಿಂದ ಇದ್ದುದರಿಂದ ತನ್ನ ಖಜಾನೆ, ಸಿಲ್ಕ್ ಬಟ್ಟೆಬರೆಗಳು ಮತ್ತು ಹೆಂಡತಿ ಮಕ್ಕಳೊಂದಿಗೆ ಸಮುದ್ರದ ಹಾದಿಯಲ್ಲಿ ರೋಮ್ ನಗರಕ್ಕೆ ಪ್ರಯಾಣ ಮಾಡಿದ.

ಫರ್ಹಾದ್ ಖಾನ್ ಜೀಲಾನ್ ಮತ್ತು ಆಸುಪಾಸಿನ ಇಲಾಖೆಯನ್ನು ವಶಪಡಿಸಿಕೊಂಡ. ಸಂಪೂರ್ಣ ಸಾಮಾನು ಸರಂಜಾಮುಗಳು ಅವನ ವಶಕ್ಕೆ ಸಿಕ್ಕಿದ್ದನ್ನು ಎಲ್ಲವನ್ನೂ ಸೇರಿಸಿಕೊಂಡು ಬಾದಶಾಹ ಅಬ್ಬಾಸ್ ಮಿರ್ಜಾನ ಬಳಿಗೆ ಹೋದ. ಈ ವಿಜಯವು ಅಸಲಿನಲ್ಲಿ ಅವನನ್ನು ದೂರವಿಡುವ ಯೋಜನೆಯಾಗಿತ್ತು. ಬಾದಶಾಹ ಅವನನ್ನು ಕೂಡಲೆ ಹೊಡೆದು ಕೊಂದುಬಿಟ್ಟ. ಆಗ ಅವನ ಸಹೋದರ ಜುಲ್ಫಿಕಾರ್ ಖಾನ್ ಶೆರ್ವಾನ್ ಮತ್ತು ಆಜರ್ ಬೈಜಾನಿನ ಪ್ರಾಂತ್ಯದಲ್ಲಿದ್ದ. ಅವನು ತನ್ನ ಸಹೋದರರು ಮತ್ತು ಮಕ್ಕಳನ್ನು ತನ್ನ ರಾಜ್ಯದ ಗಡಿಯ ಸಂರಕ್ಷಣೆಗಾಗಿ

ನಿಲ್ಲಿಸಿದ್ದ. ಜುಲ್ಫಿಕಾರ್ ಖಾನ್ ಬಾದಶಾಹರ ಸೇವೆಯಲ್ಲೇ ಇರುತ್ತಿದ್ದ. ಬಾದಶಾಹ ಅಬ್ಬಾಸ್ ತನ್ನ ವಿರೋಧಿಗಳೊಂದಿಗೆ ಈಗಿನ ಮಟ್ಟಿಗೆ ಯಾವ ತಿಕ್ಕಾಟವೂ ಇರಲಿಲ್ಲ. ಅಸ್ಫಹಾನ್‌ನಲ್ಲಿ ಬಾದಶಾಹ ಆರಾಮವಾಗಿ ಕಾಲಕಳೆಯ ತೊಡಗಿದ. ತನ್ನ ಕೆಲವು ಸರದಾರರು ಮಂತ್ರಿಗಳಿಗೆ ತಮ್ಮ ತಮ್ಮ ಊರಿಗೆ ತೆರಳಿ ಆರಾಮದಿಂದಿರಿ ಎಂದು ಕಳುಹಿಸಿದ್ದ.

**ರೂಮಿಯಾನರೊಂದಿಗೆ ಯುದ್ಧ ಹಾಗೂ ಆಜರ್‌ಬೈಜಾನ್ ಮತ್ತು ತಬ್ರೇಜ್ ರಾಜ್ಯಗಳನ್ನು ವಶಪಡಿಸಿಕೊಂಡ ವಿವರಗಳು:**

ಹಂಝ ಮಿರ್ಜಾನ ಕೊಲೆಯಾದ ನಂತರ ರೋಮನರಿಗೆ ಕಾಲಾವಕಾಶ ದೊರೆತು ಎಲ್ಲ ಹಳೆಯ ಕಟ್ಟಡಗಳನ್ನು ಒಡೆದು ಹೊಸ ಕೋಟೆಯೊಂದನ್ನು ಕಟ್ಟಲು ತೊಡಗಿದರು. ಬಾದಶಾಹ ಅಬ್ಬಾಸ್ ಅಸ್ಫಹಾನಿನಲ್ಲಿ ಸ್ವಲ್ಪಕಾಲ ಶಾಂತಿಯಿಂದ ಆರಾಮ ಮಾಡಿದ ನಂತರ ತನ್ನ ರಾಜಧಾನಿಗೆ ಬಂದು ಸಿಂಹಾಸನಾರೂಢನಾದಾಗ ರೋಮಿನ ಸುಲ್ತಾನನ ಸಹೋದರಿಯ ಮಗಂದಿರಾದ ಅಲಿ ಪಾಶಾ ಮತ್ತು ಮುಹಮ್ಮದ್ ಅಮೀನ್ ತಬ್ರೇಜಿನ ಕೋಟೆಯಲ್ಲಿ ವಾಸವಾಗಿದ್ದರು. ಬಾದಶಾಹ ಅಬ್ಬಾಸ್‌ನಿಗೆ ಯಾವಾಗಲೂ ಇವರು ತನಗೆ ತಿರುಗಿನಿಲ್ಲುವ ಭಯವಿತ್ತು. ಈ ಮಧ್ಯೆ ನಜ್ವಾನ್‌ನ ಕೋಟೆಯಿಂದ ಅಲ್ಲಿನ ಕೋಟೆಯ ಪಾಲಕ ಬಂಡಾಯವೆದ್ದು ತಿರುಗಿ ನಿಂತಿದ್ದಾನೆಂದು ತಿಳಿದು ಬಂತು. ಅಲಿ ಪಾಶಾ ಮತ್ತು ಮುಹಮ್ಮದ್ ಅಮೀನ್ ಒಂದು ಸೈನ್ಯವನ್ನು ಕಟ್ಟಿಕೊಂಡು ಕೋಟೆಯ ಪಾಲಕನ ಬಳಿಗೆ ಹೋದರು. ಅವನನ್ನು ಸೆರೆಹಿಡಿದರು. ದೇವರ ದಯೆ ಎಂದ ಬಾದಶಾಹ ತನ್ನ ಪರವಾಗಿ ಯುದ್ಧಕ್ಕೆ ತಯಾರಾಗಿ ಕೋಟೆಯ ಪಾಲಕನ ಮೇಲೆ ದಂಡೆತ್ತಿ ಹೋದ ಸಂಗತಿ ಕೇಳಿ ಸಮಾಧಾನಪಟ್ಟುಕೊಂಡ. ಈಗ ತಕ್ಕಮಟ್ಟಿಗೆ ತನ್ನ ಸುತ್ತಮುತ್ತಲಲ್ಲಿ ಯಾರೂ ವಿರೋಧಿಗಳಿಲ್ಲವೆಂದುಕೊಂಡು ಸಮಾಧಾನವಾಯಿತು. ಬಾದಶಾಹ ತನ್ನ ಎಲ್ಲ ವೈಭವ, ಘನತೆ ಗೌರವದೊಂದಿಗೆ ಇರಾನಿನ ಸಿಂಹಾಸನದ ಮೇಲೆ ಶಕ್ತಿಶಾಲಿಯಾಗಿ ಕೂತಿದ್ದ. ನಾಲ್ಕೂ ನಿಟ್ಟಿನಲ್ಲಿದ್ದ ಅವನ ವೈರಿಗಳು ಅವಮಾನಗೊಂಡು ಅಲ್ಲಿಂದ ಓಡಿಹೋದರು. ಈಗ ಬಾದಶಾಹ ತಬ್ರೇಜಿಗೆ ಹೋಗಿ ಯಾವುದೇ ಕಷ್ಟವಿಲ್ಲದೆ ಕೋಟೆಯನ್ನು ಹಿಡಿದುಕೊಂಡ. ಕೆಲವು ರೋಮನರು ಕೋಟೆಯಲ್ಲಿ ಉಳಿದವರು, ಅವರಿಗೆ ಕೋಟೆಯ ಹೊರಬಾಗಿಲಿನಿಂದ ಹೊರಬರಿಸಿ ಓಡಿಸಿದ.

ಈ ಸುದ್ದಿ ಬಾದಶಾಹನಿಗೆ ತಲಪುವಾಗ ತಬ್ರೇಜಿಗೆ ಹೊರಟಿದ್ದ. ಮಂತ್ರಿಗಳು ಮತ್ತು ಸರದಾರರಿಗೆ ಬೇಗ ಸೈನ್ಯವನ್ನು ತಯಾರಿ ಮಾಡಿ ತಬ್ರೇಜಿಗೆ ತಲಪಬೇಕೆಂದು ನಿರ್ದೇಶಿಸಿದ್ದ. ಸೈನ್ಯವು ತಯಾರಾಗಿ ೪೦ ದಿನಗಳ ಪ್ರಯಾಣವನ್ನು ೯ ದಿನಗಳಲ್ಲಿ

ಮುಗಿಸಿ ಅಜೀಮ್‌ನ ಬಳಿ ಹೋಗಿ ತಂಗಿದರು. ರಾತ್ರಿ ಇಡೀ ತಬ್ರೇಜಿನ ಜನಗಳನ್ನು ತನ್ನೊಂದಿಗೆ ಸೇರಿಕೊಂಡು ಅವನ ಸೈನ್ಯವು ಕೋಟೆಯ ಒಳಗಿದ್ದ ರೋಮನರನ್ನು ಹೊರಗೆಳೆದು ಎಲ್ಲರ ಶಿರಚ್ಛೇಧಗೊಳಿಸಿದರು. ಈಟಿಗಳ ಮೊನೆಗೆ ಅವರ ಶಿರಗಳಿಗೆ ಚುಚ್ಚಿ ಬಾದಶಾಹ ಅಬ್ಬಾಸನ ಮುಂದೆ ತಂದರು. 'ಈಗ ನಿಮ್ಮ ಕೋಟೆಯಲ್ಲಿದ್ದ ವೈರಿಗಳನ್ನು ಖಾಲಿ ಮಾಡಿದ್ದೇವೆ. ನೀವು ನಿಮ್ಮ ಪರಿವಾರದೊಂದಿಗೆ ಒಳಗೆ ಹೋಗ ಬಹುದು' ಎಂದರು. ಬಾದಶಾಹ ಹೇಳಿದ, "ಇನ್ನೂ ಕೂಡ ಅಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಹಲ್ಲೆ ನಡೆಯುವ ಸಾಧ್ಯತೆ ಇದೆ".

ಇದರ ನಂತರ ಬಾದಶಾಹನ ಸೈನ್ಯ ಕೋಟೆಯ ಹಿಂಭಾಗದಿಂದ ಹೋಯಿತು. ಅದೇ ಸಮಯದಲ್ಲಿ ಮುಹಮ್ಮದ್ ಅಮೀನ್ ಮತ್ತು ಅಲೀ ಪಾಷಾರಿಗೆ ಈ ಬಗ್ಗೆ ತಿಳಿದಾಗ ಹೀಗೇಕಾಯಿತೆಂದು ಆಶ್ಚರ್ಯ ಚಕಿತರಾದರು. ಇಪ್ಪತ್ತೈದು ಸಾವಿರ ಸವಾರ ಸೈನಿಕರು, ಅವರಿಗೆ ಬೇಕಾದ ಆಹಾರ ಸಾಮಾಗ್ರಿಗಳೊಂದಿಗೆ ಯುದ್ಧದ ತಯಾರಿಯೊಂದಿಗೆ ಹಿಂತಿರುಗಿ ತಬ್ರೇಜಿಗೆ ಹೋದರು. ಅಬ್ಬಾಸ್ ಬಾದಶಾಹ ಇದರ ಸುದ್ದಿ ತಿಳಿದಾಗ ಕೂಡಲೇ ಜಬರದಸ್ತಾದ ಸೈನ್ಯ ಕಟ್ಟಿಕೊಂಡು ತಯಾರಾಗಿರಬೇಕೆಂದು ಆಜ್ಞಾಪಿಸಿದ. ಇಬ್ಬರ ಸೈನ್ಯಗಳ ನಡುವೆ ಜೋರಾದ ಕಾಳಗ ನಡೆಯಿತು. ಇದನ್ನು ಕಂಡು ಬಾದಶಾಹ ಅಬ್ಬಾಸನ ಪರವಾಗಿ ಕುರ್ದ್ ಸೈನ್ಯದ ಕೆಲವು ಸರದಾರರು ಬಂದು ಸೇರಿಕೊಂಡರು. ಹೀಗೆ ಯುದ್ಧ ಜೋರಾಗಿ ಬಹಳ ದಿನಗಳ ಕಾಲ ನಡೆಯಿತು. ಎರಡೂ ಕಡೆಯ ಬಹಳಷ್ಟು ಜನರು ಹತರಾದರು. ಆದರೆ ಕೊನೆಯಲ್ಲಿ ಬಾದಶಾಹ ಅಬ್ಬಾಸನ ಸೈನ್ಯವು ಜಯಗಳಿಸಿತು. ಮುಹಮ್ಮದ್ ಅಮೀನ್ ಮತ್ತು ಅಲೀ ಪಾಷಾ ಸೆರೆಯಾದರು. ಯುದ್ಧದಲ್ಲಿ ಗಂಭೀರರೀತಿಯಲ್ಲಿ ಗಾಯಗೊಂಡ ಮುಹಮ್ಮದ್ ಅಮೀನ್ ಮರುದಿನ ಅಸುನೀಗಿದ. ಅಲೀ ಪಾಷಾ ಈ ಎಲ್ಲ ಬೆಳವಣಿಗೆಯಿಂದ ನಾಚಿಗೆ ಪಟ್ಟುಕೊಂಡು ಕ್ಷಮೆ ಕೇಳಿ, ಬಾದಶಾಹ ಅಬ್ಬಾಸನ ಆಸ್ಥಾನದಲ್ಲಿ ಸೇರಿಕೊಂಡ. ಇದರ ನಂತರ ಬಾದಶಾಹ ಸೆರೆಯಾಗಿದ್ದ ಸಂಪೂರ್ಣ ರೋಮನರನ್ನು ಸ್ವತಂತ್ರಗೊಳಿಸಿದ.

**ಬಾದಶಾಹ ಅಬ್ಬಾಸ್ ಅಸ್ಫಹಾನಿನಿಂದ ಹಿಂತಿರುಗಿದ ವಿವರಗಳು:**

ಬಾದಶಾಹ ಅಬ್ಬಾಸ್ ತನ್ನ ಎಲ್ಲ ಜವಾಬ್ದಾರಿಯಿಂದ ಮುಕ್ತನಾದ ಬಳಿಕ ಆರಾಧನೆ(ಝಿಯಾರತ್)ಗಾಗಿ ಮಷ್ಹದ್ ಷರೀಫ್ ದರ್ಗಾಕ್ಕೆ ಹೋದ. ನಂತರ ಅಲ್ಲಿಂದ ಅಸ್ಫಹಾನಕ್ಕೆ ಹೋದ. ಜುಲ್ಫಿಕಾರ್ ಖಾನನನ್ನು ಅಜರ್ ಬೈಜಾನಿನ ಅಧಿಪತಿಯನ್ನಾಗಿ ಮಾಡಿ ಅಲ್ಲಾವರ್ದಿಯ ರಕ್ಷಣೆ ಮತ್ತು ಕೋಟೆಯನ್ನು ನೋಡಿಕೊಳ್ಳುವ ಜವಾಬ್ದಾರಿಯನ್ನು ವಹಿಸಿಕೊಟ್ಟ. ಅಮೀರ್ ಖೊತ್ತಾ ಖಾನ್

ಮತ್ತು ಗಂಜೇ ಅಲಿ ಖಾನ್‌ನಿಗೆ ನಲ್ವತ್ತು ಸಾವಿರ ಸೈನಿಕರೊಂದಿಗೆ ಹೇರಾತಿಗೆ ಕಳುಹಿಸಿದ.

ಹಿಜರಿ ವರ್ಷ ೧೦೧೨ರಲ್ಲಿ ಬಾದಶಾಹ ಅಬ್ಬಾಸ್ ಅಸ್ಫಹಾನಿನಲ್ಲಿ ಕೆಲಕಾಲ ಆರಾಮಕ್ಕಾಗಿ ಹೋಗಿದ್ದ. ಥಕ್ಕನೆ ಸುದ್ದಿಯೊಂದು ರೋಮನರ ದೊಡ್ಡ ಸರದಾರರಲ್ಲಿ ಒಬ್ಬನಾದ ಜಫ್ಘಾಲ್ ಒಬಲಾಯಿ ತನ್ನ ಜೊತೆಯಲ್ಲಿ ನಾಲ್ಕು ಲಕ್ಷ ಸೈನಿಕರ ದಂಡನ್ನು ಸೇರಿಸಿಕೊಂಡು ತನ್ನೊಂದಿಗೆ ಅಲ್ಲಿನ ಇಲಾಖೆಯ ೪೦ ದೊಡ್ಡ ಸರದಾರರನ್ನು ಕರೆದುಕೊಂಡು, ಕೋಟೆಯ ಬಳಿ ಹೋದ. ಇವರೆಲ್ಲ ಸರದಾರರ ಪೈಕಿ ಕೆಲವು ಹೆಸರುಗಳು ನನಗೆ ನೆನಪಿವೆ– ಉಸ್ಮಾನ್ ಪಾಷಾ ಬಿಲ್ಗರಾಮಿ, ಅಹ್ಮದ್ ಪಾಷಾ ಬಿಲ್ಗರಾಮಿ, ಖಾಜಿ ಹೈದರ್ ಪಾಷಾ· ಕುರ್ಜಿ ಬಿಲ್ಗರಾಮಿ, ಐವಾನ್ ಮುಹಮ್ಮದ್ ಪಾಷಾ ಜಲಾಲಿ, ಅಬ್ದುಲ್ಲಾ ಪಾಷಾ ದಮರ್‌ಖಾನಿ, ಅಲಿ ಪಾಷಾ ಮರ್ವಾನ್, ಫರ್ಮಾನ್ ಮುಹಮ್ಮದ್ ಪಾಷಾ, ಹೈದರ್ ಪಾಷಾ ಬಿನ್ ಅಲಿ ಪಾಷಾ ಬಲ್ದ್ರೇಮಿ ಮುಂತಾದವರು ಸೈನ್ಯದ ಜೊತೆಗೆ ಸೇರಿದ್ದರು. ಇವರೆಲ್ಲರೂ ಸೇರಿಕೊಂಡು ಯುದ್ಧಕ್ಕಾಗಿ ಕೋಟೆಯ ಕಡೆ ನಡೆದರು. ಖಾನ್ ಜಹಾಂಗೀರ್ ಅಲ್ಲಾವರ್ದಿ ಖಾನನಿಗೆ ಈ ಬಗ್ಗೆ ತಿಳಿದಾಗ ಕೂಡಲೇ ಬಾದಶಾಹನಿಗೆ ತಿಳಿಸಿದ. ಖೊರಾಸಾನ್ ಮತ್ತು ಅಜರ್ ಬೈಜಾನಿನ ಎಲ್ಲ ಸರದಾರರು ಪ್ರಮುಖರಿಗೆ ಕೂಡಲೇ ಅಲ್ಲಾವರ್ದಿ ಖಾನನ ಬಳಿಗೆ ಹೋಗುವಂತೆ ಆದೇಶವನ್ನು ಬಾದಶಾಹ ನೀಡಿದ. ಕೆಲವೇ ದಿನಗಳಲ್ಲಿ ಅಲ್ಲಾವರ್ದಿ ಖಾನನ ಬಳಿಗೆ ಹೋಗಿ ಸೇರಿಕೊಂಡರು. ಎರಡೂ ಕಡೆಯ ಸೈನಿಕರು ಎದುರುಬದುರಾಗಿ ನಿಂತರು. ಜಫ್ಘಾಲ್ ಒಗ್‌ಲಯೆ ತೋಫು ಮತ್ತು ಕೋವಿಗುಂಡುಗಳ ಸಾಮಾನುಗಳನ್ನು ಪಡೆದುಕೊಂಡು ಅಲ್ಲಾವರ್ದಿ ಖಾನನ ಬಳಿಗೆ ಬಂದ. ಅತ್ಯಂತ ಭೀಕರ ಯುದ್ಧ ನಡೆದು ಎರಡೂ ಕಡೆಯ ಬಹಳ ಸೈನಿಕರು ಹತರಾದರು. ಇದರ ಬಳಿಕ ಜಫ್ಘಾಲ್ ಕೋಟೆಯ ಆವರಣದ ಬಳಿಹೋಗಿ ಪಠಾತ್ತಾಗಿ ಅಲ್ಲಿನ ಎತ್ತರ ಕಮ್ಮಿ ಇದ್ದ ಗೋಡೆಯನ್ನು ಹಾರಿ ರೋಮನರು ಬೆಂಕಿ ಹೊತ್ತಿಸಿದರು. ಅದರ ಹೊಗೆಯು ದಟ್ಟವಾಗಿ ಒಬ್ಬರ ಮುಖ ಇನ್ನೊಬ್ಬರು ಕಾಣದಂತಾಯಿತು. ಆವರಿಸಿದ ಹೊಗೆಯು ಸರಿದಾಗ ಒಂದು ತಂಡ ಒಳಗೆ ಹೋಗಿ ಹೊಡೆಯಲು ತೊಡಗಿದರು. ಜಫ್ಘಾಲ್ ಒಗಲಾಯಿ ಕೋಟೆಯಿಂದ ಹೊರಗೆ ಓಡಲು ಶುರುಮಾಡಿದ. ಅವನ ಹಲವಾರು ಸೈನಿಕರು ಸತ್ತುಬಿದ್ದರು. ಅವನ ಯುದ್ಧದ ಸಾಮಾಗ್ರಿಗಳನ್ನು ಅಲ್ಲೇ ಬಿಟ್ಟು ಓಡಲು ತೊಡಗಿದ. ಕೊನೆಯ ದಿನ ಅಲ್ಲಾವರ್ದಿಗೆ ಜಫ್ಘಾಲ್ ಒಗಲಾಯಿಯ ಐದು ಪಾಷಾ ಸರದಾರರು ಬರುತ್ತಿದ್ದಾರೆಂದು ಸುದ್ದಿ ಸಿಕ್ಕಿತು.

ಅಲ್ಲಾವರ್ದಿ ಕೂಡಲೇ ಕುದುರೆಯ ಮೇಲೇರಿ ಸವಾರಿ ಮಾಡುತ್ತ ತನ್ನ ಸೈನ್ಯದೊಂದಿಗೆ ತೆರಳಿದ. ಅರ್ಧ ರಾತ್ರಿಯಲ್ಲಿ ವೈರಿ ಸೈನಿಕರು ಅಲ್ಲಿ ಮಲಗಿದ್ದರು. ಅಲ್ಲಾವರ್ದಿ

ಅವರನ್ನು ಸುತ್ತುವರಿದು ತಲ್ವಾರಿನಿಂದ ಹೊಡೆದು ಎಬ್ಬಿಸಿದ. ಈ ಸರದಾರರನ್ನು ಬಂಧಿಸಿ ಬಾದಶಾಹನ ಮುಂದೆ ತಂದೊಪ್ಪಿಸಿದ. ಬಾದಶಾಹ ಅವನಿಗೆ ಇನಾಮು ಜಾಗೀರುಗಳನ್ನು ನೀಡಿ ಸನ್ಮಾನಿಸಿದ. ರೋಮನರ ಸಾಮಾನುಗಳು ಸಿಕ್ಕಿದ್ದನ್ನು ಬಾದಶಾಹ ಕುರ್ದ್ ಸರದಾರರಿಗೆ ನೀಡಿದ. ಬಾಕಿ ಉಳಿದುದನ್ನು ಸೈನಿಕರಿಗೆ ನೀಡಿದ. ಈ ವಿಜಯದ ಬಳಿಕ ರೋಮನರು ಓಡಿಹೋದರು. ಬಾದಶಾಹನಿಗೆ ಮುಂದೆ ಇನ್ನಷ್ಟು ರಾಜ್ಯಗಳನ್ನು ವಶಪಡಿಸಿಕೊಳ್ಳುವ ಮಹತ್ವಾಕಾಂಕ್ಷೆ ಮೂಡಿತು. ಅವನು ಗಂಜ್, ಇರಾನ್, ಶೆರ್ವಾನ್, ಮರ್ವಾನ್ ಕೋಟೆಗಳನ್ನು ವಶಪಡಿಸಿಕೊಂಡ. ಮತ್ತೊಮ್ಮೆ ರೋಮನರ ವಿರುದ್ಧ ದೊಡ್ಡ ಯುದ್ಧ ನಡೆದು ರೋಮಿನ ಸುಲ್ತಾನನಿಗೆ ಈ ಎಲ್ಲ ಪರಿಸ್ಥಿತಿ ಅರ್ಥವಾಗಿ ಇರಾನಿನ ಬಾದಶಾಹ ಅತ್ಯಂತ ವೈಭವದ ಬಾದಶಾಹನಾಗಿದ್ದಾನೆ. ಅವನೊಂದಿಗೆ ಯುದ್ಧಮಾಡುವುದು ಅಪ್ರಯೋಜಕವಾದದ್ದು ಎಂದುಕೊಂಡ. ಎರಡು ವರ್ಷಗಳ ತನಕ ಅವನ ಸರಹದ್ದಿನ ಬಳಿ ರೋಮಿನ ಚಕ್ರವರ್ತಿ ದಾಳಿ ನಡೆಸದೆ ಸುಮ್ಮನಿದ್ದ. ಬಾದಶಾಹ ತನ್ನ ದೇಶದ ಅಭಿವೃದ್ಧಿಯ ವಿಷಯದಲ್ಲಿ ತೊಡಗಿಕೊಂಡ.

**ರೋಮ್‌ನ ಪ್ರಮುಖ ಸರದಾರ ಕೂಸಾ ಸಫಿ ಕುತಂತ್ರಗಳ ವಿವರಗಳು:**

ಕೂಸಾ ಸಫಿ ರೋಮನರ ಬಹು ಮುಖ್ಯ ಸರದಾರರಲ್ಲಿ ಒಬ್ಬನಾಗಿದ್ದ. ಅವನು ಆಜರ್‌ಬೈಜಾನಿಗೆ ತನ್ನ ಸೈನ್ಯವನ್ನು ಕಳುಹಿಸಿದ್ದ. ಇವನು ರೋಮಿನ ಚಕ್ರವರ್ತಿಗೆ 'ಬಾದಶಾಹನ ಸೈನ್ಯ ರೋಮನ ಸೈನ್ಯಕ್ಕೆ ಎದುರಲ್ಲ. ಇವೆಲ್ಲ ಆದದ್ದು ಜಫ್ಘಾಲ್ ಒಗಲಾಯಿಯ ತಪ್ಪುಗಳಿಂದಾಗಿ ಹಿಂದೆ ನಮಗೆ ಸೋಲಾಗಿತ್ತು. ನಮ್ಮ ಅನೇಕ ಪ್ರಾಂತ್ಯಗಳನ್ನು ಅವನು ವಶಪಡಿಸಿಕೊಳ್ಳಲು ಸಾಧ್ಯವಾಯಿತು. ಈಗ ಜಫ್ಘಾಲ್ ಒಗಲಾಯಿಯ ಸೈನ್ಯದ ಅಗತ್ಯವಿಲ್ಲ. ನಾನು ಸ್ವತಃ ಹೋಗಿ ಕೆಲವೇ ದಿನಗಳಲ್ಲಿ ಅವರನ್ನು ಸೋಲಿಸಿ ನಮ್ಮ ಪ್ರದೇಶಗಳನ್ನು ಹಿಂದಕ್ಕೆ ಪಡೆದು ನಮ್ಮ ಕಳೆದ ವರ್ಚಸ್ಸನ್ನು ಮತ್ತೆ ತರಿಸಲು ಇಚ್ಛಿಸುತ್ತೇನೆ. ನನಗೆ ಅನುಮತಿ ನೀಡಿ' ಎಂದು ಜಂಭ ಕೊಚ್ಚಿಕೊಂಡ.

ರೋಮ್‌ನ ಸುಲ್ತಾನ ತನ್ನ ಸಾಮ್ರಾಜ್ಯದ ಮಂತ್ರಿಗಳು, ಸರದಾರರು ಮತ್ತು ಅಧಿಕಾರಿಗಳ ಸಂಪೂರ್ಣ ಆಸ್ಥಾನಿಗರನ್ನು ಕರೆದು 'ಕೋಸಾ ಸಫಿ ತನ್ನ ಸ್ವತಃ ಇಚ್ಛೆಯಿಂದ ಯುದ್ಧಕ್ಕೆ ಇರಾನ್‌ಗೆ ಹೋಗುತ್ತಿದ್ದಾನೆ. ಇವನೊಂದಿಗೆ ಯುದ್ಧದ ಎಲ್ಲ ಸಾಮಾಗ್ರಿಗಳು ಪೂರ್ತಿಯಾಗಿಲ್ಲ. ಇದರಿಂದಾಗಿ ಮುಂದೆ ಕೆಲಸಗಳು ಎಣಿಸಿದಂತೆ ಆಗದಿದ್ದರೆ ಅದಕ್ಕೆ ನಾನು ಜವಾಬ್ದಾರನಲ್ಲ' ಎಂದು ಹೇಳಿದ. ಜಫ್ಘಾಲ್ ಒಗಲಾಯಿ ಕೂಡ ಯುದ್ಧದ ತಯಾರಿ ಮಾಡಿದ. ಕೋಸಾ ಸಫಿ ಕೂಡ ಅವನೊಂದಿಗೆ ಸೇರಿಕೊಂಡ. ನಾಲ್ಕು ತಿಂಗಳ ಅವಧಿಯಲ್ಲಿ ಸೈನ್ಯವನ್ನು ಸೇರಿಸಲಾಯಿತು. ಜಫ್ಘಾಲ್ ಒಗಲಾಯಿಯು ಒಂದು ಲಕ್ಷ ಕುದುರೆ ಸವಾರರು ಮತ್ತು ಎರಡು ಲಕ್ಷ ಕಾಲಾಳುಗಳ

ದಂಡನ್ನು ತೆಗೆದುಕೊಂಡು ಸಂಪೂರ್ಣ ಅಹಂಕಾರದಿಂದ ಹೂಂಕರಿಸುತ್ತ ಆಜರ್‌ಬೈಜಾನದಿಂದ ತಬ್ರೇಜಿಗೆ ಪ್ರಯಾಣ ಬೆಳೆಸಿದರು. ಆ ಕಡೆಯಲ್ಲಿ ಬಾದಶಾಹ ಅಬ್ಬಾಸ್ ಕೂಡ ಬಹಳ ಬುದ್ಧಿವಂತನಾಗಿದ್ದ ಯುದ್ಧದ ಕಾರ್ಯದಲ್ಲಿ ತುಂಬ ನೈಪುಣ್ಯತೆ ಹೊಂದಿದ್ದ. ಪ್ರತಿದಿನವೂ ವೈರಿಗಳ ಚಲನೆಯ ಬಗ್ಗೆ ರಹಸ್ಯ ಕಾರ್ಯಾಚರಣೆಯ ಮೂಲಕ ತಿಳಿದುಕೊಳ್ಳುತ್ತಿದ್ದ. ಅವನು ತನ್ನ ದೇಶದ ಗಡಿಯ ರಕ್ಷಣೆಯನ್ನು ಮಾಡುತ್ತಿರುವ ಎಲ್ಲ ಸರದಾರರನ್ನು ಕರೆದ. ಸಂಪೂರ್ಣ ತಯಾರಿಯೊಂದಿಗೆ ತಬ್ರೇಜಿನ ಕಡೆ ಕಳುಹಿಸಿದ. ವೈರಿಗಳ ಸೈನ್ಯ ಶುಸ್ತರ್ ಪ್ರಾಂತ್ಯಕ್ಕೆ ತಲಪಿದ ಸುದ್ದಿ ಬಂತು. ಸಂಪೂರ್ಣ ಸೈನ್ಯವನ್ನು ತಬ್ರೇಜಿಗೆ ಹೋಗಲು ಬಾದಶಾಹನ ಅನುಮತಿಯನ್ನು ಕೇಳಿದರು. ಯುದ್ಧ ಶುರುಮಾಡಲು ಪತ್ರಮೂಲಕ ಅನುಮತಿಯನ್ನು ಕೇಳಿದರು. ನೀವು ಈಗ ಆತುರ ಮಾಡದಿರಿ. ಮುಖ್ಯ ಸೇನಾನಿ ಖಾನ್ ಜಹಾಂಗೀರ್ ಫೈರೋಜ್ ಜಂಗ್ ನಿಮ್ಮಲ್ಲಿಗೆ ತಲಪಲಿದ್ದಾನೆ. ಅವನು ನಿಮ್ಮಲ್ಲಿಗೆ ಆಗಮಿಸಿದ ಕೂಡಲೇ ಯುದ್ಧ ಶುರುಮಾಡಿರೆಂದು ಬಾದಶಾಹ ಆದೇಶವನ್ನು ನೀಡಿದ. ಖಾನ್ ಜಹಾಂಗೀರ್ ತನ್ನೊಂದಿಗೆ ದೊಡ್ಡ ಸೈನ್ಯವೊಂದನ್ನು ಸೇರಿಸಿಕೊಂಡು ಶುಸ್ತರ್ ತಲಪಿದ. ಯುದ್ಧ ಶುರುವಾಯಿತು.

ಈ ಯುದ್ಧವು ಜಮಾದಿಲ್ ಆಖರ್ (ಜಮಾದುಸ್ಸಾನಿ) ತಿಂಗಳ ಹಿಜರಿ ವರ್ಷ ೧೧೧೬ರಲ್ಲಿ ತಬ್ರೇಜಿನ ಸಮೀಪದ ಶುಸ್ತರ್ ಪ್ರದೇಶದಲ್ಲಿ ಎರಡೂ ಕಡೆಯ ಸೈನ್ಯಗಳು ಮುಖಾಮುಖಿಯಾದವು. ಬೆಳಗ್ಗಿನಿಂದಲೇ ತೋಪುಗಳ ಅರ್ಭಟದಿಂದ ಭೂಮಿ ಎಷ್ಟೊಂದು ತೀವ್ರ ನಡುಗಿತೆಂದರೆ, ಖಿಯಾಮ(ಪ್ರಳಯಕಾಲ)ದ ಬೀಭತ್ಸ ದೃಷ್ಯಗಳು ಮೂಡಿದಂತಾಯಿತು. ಎರಡೂ ಕಡೆಯಲ್ಲಿ ತಲವಾರುಗಳು ಝಳಪಿಸುತ್ತ ಆಕಾಶದಲ್ಲಿ ಮೂಡಿದ ಮಿಂಚಿನಂತೆ ಪ್ರಖರವಾಗಿ ಕಿಡಿಗಳನ್ನು ಹಾರಿಸುತ್ತಿದ್ದವು. ಬೆಳಗ್ಗಿನ ಹೊತ್ತಾಗಿತ್ತು. ಖಡ್ಗಗಳು ರಕ್ತದಿಂದ ತೊಯ್ದು ಹೋಗಿತ್ತು. ಭೂಮಿಯಲ್ಲಿ ರಕ್ತದ ಕಾಲುವೆಗಳು ಹರಿಯುತ್ತಿದ್ದವು. ಅದರಲ್ಲಿ ವೈರಿಗಳ ದೇಹಗಳು ಚಡಪಡುತ್ತಿದ್ದವು. ಸಾವೆಂಬ ಹಕ್ಕಿಯು ತನ್ನ ಭಯಂಕರ ಕೊಕ್ಕಿನಲ್ಲಿ ಇವರ ಆತ್ಮಗಳನ್ನು ಕುಕ್ಕಿಕೊಂಡು ಆಕಾಶದತ್ತ ಹಾರಾಡುತ್ತಿತ್ತು. ವೈರಿಗಳ ಪ್ರಾಣ ಮಣ್ಣಿನ ಬೆಲೆಯಂತಾಗಿತ್ತು. ಬಾದಶಾಹನ ಸೈನ್ಯದ ಹಣೆಯು ಮಿನುಗುತ್ತಿತ್ತು. ಅವರ ಪರಿಶುದ್ದ ಆತ್ಮಗಳು ಶಾಂತಿಯನ್ನು ಅರಸುತ್ತ ಸ್ವರ್ಗದ ಕಡೆ ಸಫಲಯಾತ್ರೆಯಲ್ಲಿದ್ದವು. ಪ್ರತಿಯೊಂದು ಹೆಜ್ಜೆಯಲ್ಲೂ ವಿಜಯದ ಸುಗಂಧಬೀರುವ ಹೂಗಳು ಅರಳುತ್ತಿವೆ. ಬಾದಶಾಹರ ಸೈನ್ಯ ಮುಂದುವರಿಯುತ್ತ ವೈರಿಗಳ ಮೇಲೆ ಸೇಡು ತೀರಿಸಿಕೊಳ್ಳುತ್ತಿದೆ.

ಅವರ ಖಡ್ಗಗಳ ಬೀಸುಗಳಲ್ಲಿ ಕಣ್ಣುಮುಚ್ಚುವಷ್ಟರಲ್ಲಿ ಹದಿನೈದು ಹದಿನೈದು ಸಾವಿರ ರೋಮನರು ಹತರಾಗುತ್ತಿದ್ದಾರೆ. ಹೆಚ್ಚು ಕಮ್ಮಿ ಒಂದು ಸಾವಿರದ ಮುನ್ನೂರ

ಮೂವತ್ತು ಜನರು ಸೆರೆಯಾದರು. ಇವರ ಪೈಕಿ ಸನಾಜಿಕ್ ಮತ್ತು ಅಕ್ರಾದ್ ಪಂಗಡದ ದೊಡ್ಡದೊಡ್ಡ ಸರದಾರರು ಸೇರಿದ್ದರು. ಇವರ ಜೊತೆಗೆ ಕೂಸ ಸಫಿ ಕೂಡ ಸೆರೆಯಾಗಿದ್ದ. ಜಫ್ಘಾಲ್ ಒಂದು ತೋಪಿನ ಗಾಡಿಯ ಹಿಂದೆ ಅಡಗಿದ್ದ. ಅವನನ್ನು ಸಂಜೆಯ ಮಗ್ರಿಬ್ ನಮಾಜಿನ ಹೊತ್ತಿನ ತನಕ ಹುಡುಕುತ್ತಿದ್ದು ಸಿಕ್ಕಿಬಿದ್ದಾಗ ಕೊಂದುಹಾಕಲಾಯಿತು. ಯುದ್ಧ ಸಾಮಾಗ್ರಿಗಳು, ಖಜಾನೆ, ಸಂಪತ್ತುಗಳು, ಶಸ್ತ್ರಾಸ್ತ್ರಗಳು, ಹಣ, ಸಾಮಾನು ಸರಂಜಾಮುಗಳು, ಆಹಾರ ಸಾಮಾಗ್ರಿಗಳ ದಾಸ್ತಾನು ಯುದ್ಧದ ಲೂಟಿಯಾಗಿ(ಮಾಲೆ ಘನೀಮತ್) ಸೈನಿಕರ ಕೈವಶವಾಯಿತು. ಅವರ ಸೇನಾನಿ ತಪ್ಪಿಸಿಕೊಂಡು ಓಡಿಹೋಗಲು ಹಾದಿ ಹುಡುಕುತ್ತಿದ್ದ. ಆದರೆ ಬಾದಶಾಹರ ಸರದಾರ ಮಿಂಚುವ ಖಡ್ಗಗಳ ಪ್ರಭೆಯು ಅವನ ಹಾದಿಯನ್ನು ತಪ್ಪಿಸಿ ಅತ್ತಿತ್ತ ಚಡಪಡುವಂತೆ ಮಾಡಿತ್ತು. ಅವನ ಯಾವುದೇ ಷಡ್ಯಂತ್ರಗಳು ಅವನ ಸಹಾಯಕ್ಕೆ ಬಾರದೆ ಬಾದಶಾಹರ ಸರದಾರರ ಕೈಯಲ್ಲಿ ಹತನಾದ. ಹೀಗೆ ಈ ಪುಣ್ಯಭೂಮಿಯು ವೈರಿಗಳ ರಕ್ತದಿಂದ ತೊಯ್ದು ಸಫಾಯಿಗೊಂಡಿತು. ಸಮಸ್ತ ಸರದಾರರು, ಸೈನಿಕರು ವಿಜಯ ಧ್ವಜವನ್ನು ಹಾರಿಸಿಕೊಂಡು ವಿಜಯೋತ್ಸಾಹದಿಂದ ವಿಜೃಂಭಣೆಯೊಂದಿಗೆ ರಾಜಧಾನಿಗೆ ತೆರಳಿದರು. ಅಲ್ಲಿ ಬಾದಶಾಹ ಅವರಿಗೆ ಬಿರುದು ಬಾವಲಿಗಳು, ಉಡುಗೊರೆ, ಇನಾಮುಗಳನ್ನು ನೀಡಿ ಸತ್ಕರಿಸಿ ಅಭಿನಂದಿಸಿದ. ಈ ವಿಜಯೋತ್ಸವದ ನಂತರ ತನ್ನ ಅರಮನೆಯಲ್ಲಿ ಬಾದಶಾಹ ತನ್ನ ಬದುಕಿನ ಕೊನೆಯ ತನಕ ಸಂತೃಪ್ತಿಯಿಂದ ಬದುಕಿದ.

ನನ್ನ ಜೀವವು ಇನ್ನಷ್ಟು ಕಾಲ ಬದುಕಿದ್ದಲ್ಲಿ ಬಾದಶಾಹರ ಕಾಲದ ಇನ್ನಷ್ಟು ವಿಜಯದ ವಿವರಗಳನ್ನು ಇನ್ನೊಂದು ಪುಸ್ತಕವನ್ನು ಬರೆಯುವ ಸಂದರ್ಭದಲ್ಲಿ ಬರೆಯುತ್ತೇನೆ. ಇಲ್ಲಿಗೆ ಇಷ್ಟು ಸಾಕೆಂದು ತಿಳಿದಿದ್ದೇನೆ.

**(ಮಹಾರಾಷ್ಟ್ರದ)ಎಲ್ಲೋರಾದ ವಿಶಿಷ್ಟ ಕಟ್ಟಡಗಳ ವಿವರಗಳು:**

(ಹಿಜರಿ ವರ್ಷ ೧೦೧೮ರಲ್ಲಿ ಶಿರಾಜಿ ಈ ಪ್ರದೇಶಕ್ಕೆ ಭೇಟಿಯಾಗಿದ್ದನೆಂದು ತಿಳಿದುಬರುತ್ತದೆ) ನಾಲ್ಕು ಸಾವಿರ ವರ್ಷಗಳ ಹಿಂದೆ ಪರ್ಚಂದ್ ರಾವ್ ಎಂಬ ಹೆಸರಿನ ಹಿಂದೂ ಬಾದಶಾಹನ ರಾಜ್ಯದ ಗಡಿಗಳಲ್ಲಿ ಸಿಂಧ್, ಗುಜರಾತ್, ದಖನ್, ಮಲ್ನಾಡ್, ತೆಲಂಗಾಣ ಕೊನೆಯಲ್ಲಿ ಮಲಬಾರಿನ ತನಕ ಈತನ ಸಾಮ್ರಾಜ್ಯ ಹರಡಿತ್ತು. ರಾಜನು ಬಹಳ ನ್ಯಾಯ ಮತ್ತು ದಯಾಮಯನಾಗಿದ್ದ. ಅವನ ರಾಜ್ಯದಲ್ಲಿ ಪ್ರಜೆಗಳು ಬಹಳ ಸಂತೋಷದಲ್ಲಿದ್ದರು. ಅವನು ತನ್ನ ಸಂಪೂರ್ಣ ಬದುಕಿನಲ್ಲಿ ತನ್ನ ರಾಜ್ಯವನ್ನು ಇದೇ ರೀತಿ ಆಳಿದ.

ರಾಜಾ ಪರ್ಚಂದ್ ರಾವ್ ವಸಂತ ಋತುವಿನಲ್ಲಿ ತನ್ನ ರಾಜ್ಯದ ತುಂಬ ಪಯಣಿಸುತ್ತಿದ್ದ. ಅಲ್ಲೆಲ್ಲ ವಿಶೇಷ ಕಾರ್ಯಗಳನ್ನು ಮಾಡಿದ ಪ್ರಜೆಗಳಿಗೆ ಇನಾಮು

ಬಕ್ಷೀಸು ನೀಡುತ್ತಿದ್ದ. ತನ್ನ ರಾಜ್ಯದಲ್ಲಿ ಎಲ್ಲೆಲ್ಲ ಭೂಮಿಯಲ್ಲಿ ನೀರು, ಹಸಿರು ಇತ್ತೋ ಅಲ್ಲೆಲ್ಲ ಕಟ್ಟಡ ಕಟ್ಟಲು ಆದೇಶಿಸುತ್ತಿದ್ದ. ಇದೇ ರೀತಿಯಲ್ಲಿ ಒಂದು ಸಲ ಪ್ರಯಾಣಿಸುತ್ತ ಎಲ್ಲೋರಾದ ಬಳಿಯಿಂದ ಹಾದು ಹೋಗುತ್ತಿರುವ ಸಂದರ್ಭದಲ್ಲಿ ಇಲ್ಲಿ ಒಂದು ದೇವಾಲಯ ಮತ್ತು ತೋಟವನ್ನು ನಿರ್ಮಿಸಬೇಕೆಂದು ನಿರ್ಧರಿಸಿದ. ಯಾಕೆಂದರೆ ಈ ಪ್ರದೇಶವು ದೊಡ್ಡದೊಡ್ಡ ಬಂಡೆ ಕಲ್ಲುಗಳು ಮತ್ತು ಗುಡ್ಡ ಪರ್ವತಗಳಿಂದ ಆವೃತ್ತವಾಗಿತ್ತು. ಸಮೀಪದಲ್ಲಿ ಉದ್ದಗಲ ಹರಡಿರುವ ಪರ್ವತಗಳಿರುವ ಗ್ರಾಮವಿತ್ತು. ಅವನ ರಾಜಧಾನಿ ದೌಲತಾಬಾದಿಗೆ ಬಹಳ ಹತ್ತಿರವಿತ್ತು. ನಾಲ್ಕೂ ಕಡೆಯಲ್ಲಿ ವಾಸಿಸುತ್ತಿರುವ ಜನರು ಇಲ್ಲಿಗೆ ಬರುತ್ತಿದ್ದರು. ಯಾಕೆಂದರೆ ಇಲ್ಲಿ ರೇಶ್ಮೆ ಮತ್ತು ರೇಶ್ಮೆ ಬಟ್ಟೆಗಳ ವ್ಯಾಪಾರ ವಹಿವಾಟು ನಡೆಯುತ್ತಿತ್ತು. ವ್ಯಾಪಾರಿಗಳು ಇಲ್ಲಿಗೆ ಬಂದು ಹೋಗುತ್ತಿದ್ದರು. ಹಿಂದೂ ಮುಸ್ಲಿಮರು ಇಲ್ಲಿ ರೇಶ್ಮೆಯ ವ್ಯಾಪಾರ, ವ್ಯವಸಾಯ ಮಾಡಿಕೊಂಡು ಸೌಹಾರ್ದದಿಂದ ಬದುಕುತ್ತಿದ್ದರು. ಒಮ್ಮೆ ರಾಜಾ ಪರ್ಚಂದ್ ರಾವ್ ತನ್ನ ದರ್ಬಾರಿಗಳ ಸಭೆಯಲ್ಲಿ 'ನನ್ನ ರಾಜ್ಯದಲ್ಲಿ ಸಾಕಷ್ಟು ಕಟ್ಟಡಗಳನ್ನು ಕಟ್ಟಿಸಿದ್ದೇನೆ. ಆದರೆ ಈಗ ನಾನು ಒಂದು ಕಟ್ಟಡವನ್ನು ಕಟ್ಟಿಸಲು ಬಯಸುತ್ತೇನೆ. ಅದರ ವೈಶಿಷ್ಟ್ಯವು ಮುಂದಿನ ಅನೇಕ ಶತಮಾನಗಳ ಕಾಲ ಪ್ರೇಕ್ಷಣೀಯವೂ, ಪ್ರಸಿದ್ಧವಾಗಿ ಸ್ಥಿರಗೊಳ್ಳಬೇಕು. ಇದರ ಸೌಂದರ್ಯವು ವಿಶ್ವದಾದ್ಯಂತ ಪ್ರಸಿದ್ಧಿಹೊಂದಬೇಕು. ರಾಜನ ಕಟ್ಟಡದ ವಾಸ್ತುಶಿಲ್ಪಿಗಳು ನಗರದ ಸನಿಹದಲ್ಲಿರುವ ಬಂಡೆಗಳಿರುವ ಪರ್ವತದಲ್ಲಿ ದೇವಾಲಯವನ್ನು ಕಟ್ಟಲು ಸೂಕ್ತವಾಗಿದೆ ಎಂದು ಹೇಳಿದರು.

ರಾಜನು ಅಲ್ಲಿ ಕೆಲಸ ಶುರುಮಾಡಲು ನಾಲ್ಕೂ ನಿಟ್ಟಿನ ಕಲ್ಲಿನ ಕೆಲಸಗಾರರನ್ನು ಕರೆಸಿ ಹತ್ತಿರದ ಪ್ರದೇಶದಲ್ಲಿ ನೆಲೆಸಲು ಅನುಕೂಲ ಮಾಡಿಕೊಟ್ಟ. ನಂತರ ತನ್ನ ಯೋಜನೆಯನ್ನು ಅವರ ಮುಂದಿಟ್ಟ, ಈ ಕಲ್ಲನ್ನು ಸೂಕ್ಷವಾಗಿ ಕೆತ್ತುವ ಮೂಲಕ ಅದು ಆಕರ್ಷಕ ಆಕಾರಗಳನ್ನು ಹೊಂದುವಂತೆ, ಮನುಷ್ಯ, ಪ್ರಾಣಿಗಳು ನೈಜವೆಂಬಂತೆ ಮೂಡಿಬರುವಂತೆ ಮಾಡಿ, ಭೂಮಿಯಲ್ಲಿರುವ ಪ್ರಕೃತಿಯ ರೂಪದಂತೆ ಕಲ್ಲಿನಲ್ಲಿ ಪ್ರತಿಕೃತಿಯನ್ನು ಮಾಡಬೇಕೆಂದು ಆದೇಶಿಸಿದ್ದ. ಇದು ಸಂಪೂರ್ಣವಾಗಿ ಕಲ್ಲಿನ ಬಂಡೆಯಲ್ಲಿ ಕೆತ್ತಿ ಮಾಡಬೇಕೆಂದು ಸೂಚಿಸಲಾಯಿತು. ಈ ಕೆಲಸದ ಮುಹೂರ್ತವು ಪರ್ವತದ ಬಂಡೆಗಳನ್ನು ತೋಡುವ ಮೂಲಕ ಶುರುವಾಯಿತು. ಒಳಗಿಂದೊಳಗೆ ಉದ್ದಗಲಗಳಲ್ಲಿ ಕಲ್ಲುಗಳನ್ನು ಕೆತ್ತಿ ಪಡಿಗಟ್ಟಿ ಕಂಬಗಳನ್ನು ಮಾಡಲಾಯಿತು. ಕೋಣೆಗಳನ್ನು ಮಾಡಲಾಯಿತು. ಕೋಣೆಯಲ್ಲಿ ಕಿಟಿಕಿ, ಬಾಗಿಲುಗಳನ್ನು ಮಾಡಲಾಯಿತು. ಈ ಕಿಟಿಕಿಗಳಲ್ಲಿ ಕುದುರೆ, ಆನೆಗಳ ಸಾಲು, ಕೆಲವೆಡೆ ಇತರ ಪ್ರಾಣಿ ಪಕ್ಷಿಗಳು, ಕೆಲವೆಡೆ ಎದುರು ಬದುರಾಗಿ ಯುದ್ಧ ಮಾಡುತ್ತಿರುವ ಸಿಪಾಯಿಗಳು, ಹೊರಗಿನ ಮೈದಾನದಲ್ಲಿ

ಒಂದು ದೊಡ್ಡ ಹೆಬ್ಬಾಗಿಲು, ಅದರ ಎರಡೂ ಬದಿಗಳಲ್ಲಿ ಆನೆಗಳು ನಿಂತಿರುವಂತೆ, ಅವರ ಜೊತೆ ಮಾವುತರು ಇರುವಂತೆ ಕೆತ್ತಲಾಗಿತ್ತು.

**ದೇವಾಲಯದ ಮುಖ್ಯದ್ವಾರದ ನಕ್ಷೆಯ ವಿವರಗಳು:**

ದೇವಾಲಯದ ಮಹಾದ್ವಾರದ ಚೌಕಟ್ಟಿನ ನಾಲ್ಕೂ ಬದಿಯಲ್ಲಿ ಕೆತ್ತನೆಯ ಕೆಲಸವಿದ್ದು, ಎರಡೂ ಕಡೆಯಲ್ಲಿ ಕೆತ್ತಲಾದ ಮೂರ್ತಿಗಳಿವೆ. ಚೌಕಟ್ಟಿನ ಅಗಲ ಮತ್ತು ಉದ್ದ ಒಂದೇ ರೀತಿ ಇತ್ತು. ಪ್ರತಿಯೊಂದು ಬಾಗಿಲಿನ ಚೌಕಟ್ಟಿಗೆ ತಾಗುವಂತೆ ಚೌಕೀದಾರ ಕೂರುವ ಆಸನವಿತ್ತು. ಕಲ್ಲಿನ ಚೌಕಟ್ಟಿನಲ್ಲಿ ಮನುಷ್ಯರ ಮತ್ತು ಮೂರ್ತಿಯ ಪ್ರತಿಮೆಗಳಿವೆ. ಅವುಗಳ ಕೈಯಲ್ಲಿ ಖಡ್ಗ, ಬಿಲ್ಲು ಬಾಣ ಮತ್ತು ಭರ್ಚಿಗಳನ್ನು ಹಿಡಿದುಕೊಂಡಂತಿವೆ. ಇದು ಕೆತ್ತನೆಯ ಅತ್ಯಂತ ಸೂಕ್ಷ್ಮ ಕೆಲಸವಾಗಿದ್ದು ನೋಡಿದವರು ಮಂತ್ರಮುಗ್ಧರಾಗುವಂತಿವೆ. ಕಲ್ಲನ್ನು ಕೆತ್ತಿದ ಕಲಾವಿದರ ಅತ್ಯಂತ ನಾಜೂಕಿನ ಕೆಲಸದ ನಮೂನೆಯಾಗಿತ್ತು. ಬಾಗಿಲಿನ ಚೌಕಟ್ಟನ್ನು ದಾಟಿ ಒಳಗೆ ಹೋದರೆ ನಾಲ್ಕೂದಿಕ್ಕಿನಲ್ಲಿ ಚಿಕ್ಕ ಚಿಕ್ಕ ವೇದಿಕೆಗಳಿದ್ದವು. ಮುಂದೆ ಹೋದರೆ ಕೋಣೆಗಳು ಸಿಗುತ್ತವೆ. ಒಂದು ಕೋಣೆಯಲ್ಲಿ ದರ್ಬಾರಿನ ಚಿತ್ರವನ್ನು ಕೆತ್ತನೆಯ ಮೂಲಕ ರಚಿಸಲಾಗಿದೆ. ಸಿಂಹಾಸನ, ಹತ್ಯಾರುಗಳು, ಮಂತ್ರಿಗಳು ಕೂರುವ ಆಸನಗಳು, ಶರಬತ್ತು, ಶರಾಬುಗಳ ಕಿಂಡಿ, ಅಡುಗೆ ಕೋಣೆಯ ದೃಷ್ಯಗಳನ್ನು ಕಲ್ಲಿನಲ್ಲಿ ಕೆತ್ತಲಾಗಿವೆ. ಒಳಗೆ ಮಹಲಿನ ಭಾಗದಲ್ಲಿ ೫೦೦-೬೦೦ ಜನ ಕೆಲಸಗಾರರು ಕೆಲಸಮಾಡುತ್ತಿರುವ ದೃಶ್ಯವನ್ನು ಕಲ್ಲಿನಲ್ಲಿ ಕೆತ್ತಿ ರಚಿಸಲಾಗಿತ್ತು. ಇವೆಲ್ಲವೂ ಕೂಡ ನಿಜವಾದ ಪ್ರತಿಕೃತಿಯೆನಿಸುತ್ತದೆ. ಕೂಲಂಕುಷವಾಗಿ ದೃಶ್ಯಗಳನ್ನು ನೋಡುವುದೆಂದರೆ ಇವು ಮನುಷ್ಯನ ರಚನೆಯಲ್ಲವೆಂದು ಅನಿಸುತ್ತದೆ. ಈ ಕಟ್ಟಡವನ್ನು ಸರಿಯಾಗಿ ನೋಡುವುದೆಂದರೆ ಬಹಳ ಸಮಯ ತಾಗುತ್ತದೆ. ಯಾಕೆಂದರೆ ಮಹಲಿನ ಗೋಡೆಗಳಲ್ಲಿ ಪ್ರಾಣಿಗಳು, ಪಕ್ಷಿಗಳ ಹಾಗೂ ಮರಗಳ ಚಿತ್ರಗಳನ್ನು ಕೆತ್ತಲಾಗಿದೆ. ಸಭೆ, ಸಮಾರಂಭಗಳ ಮತ್ತು ವಿಜೃಂಭಣೆಯಿಂದ ನಡೆಯುವ ಹಬ್ಬಗಳ ವಾತಾವರಣವಿರುವ ದೃಶ್ಯಗಳು ಯಥಾವತ್ತಾಗಿ ನಡೆಯುತ್ತಿರುವಂತೆ ಅನಿಸುವಂತಿದೆ. ದರ್ಬಾರಿನ ದೃಷ್ಯದಲ್ಲಿ ರಾಜನ ಮೂರ್ತಿ ಇದ್ದು, ಸಿಂಹಾಸವನ್ನು ರಚಿಸಿರುವಂತೆ ಕಂಡುಬರುತ್ತದೆ. ರಾಜನ ಮೂರ್ತಿಯಲ್ಲಿ ಹಿಂದೂ ನಮೂನೆಯಲ್ಲಿ ಚಿತ್ರಕೊರೆಯಲಾಗಿತ್ತು. ಈ ರಾಜನ ನಾಲ್ಕೂ ಸುತ್ತಿನಲ್ಲಿ ದರ್ಬಾರಿಗಳು ಕೈಯೆತ್ತಿ ನಿಂತಿದ್ದ ದೃಶ್ಯವಿದೆ. ಹಿಂಬಾಗದಲ್ಲಿ ಕೆಲಸಗಾರರು ತಲೆ ತಗ್ಗಿಸಿ ಕೂತಿರುವುದು ಕಂಡುಬರುತ್ತದೆ.

ರಾಜನ ಹಿಂದೆ ಅವನ ಕೆಲಸಗಾರರು ಕೆಲವರು ಹೆಗಲಲ್ಲಿ ರುಮಾಲುಗಳನ್ನು ಹಾಕಿ ನಿಂತಿರುವುದನನ್ನು ಕಾಣುತ್ತದೆ. ಶರಾಬ್ ಕುಡಿಸುವವರು ಒಂದು ಲೈನಿನಲ್ಲಿ ನಿಂತಿದ್ದರು. ಪ್ರತಿಯೊಬ್ಬರ ಕೈಯಲ್ಲೂ ಶರಾಬಿನ ಬಾಟ್ಲಿ ಮತ್ತು ಲೋಟೆಯಿತ್ತು.

ಶರಾಬು ನೀಡುವವರು ಅಲ್ಲಿನ ನೌಕರರಾಗಿದ್ದರು. ಕೆಲವರ ಕೈಯಲ್ಲಿ ವೀಳ್ಯದ ಹರಿವಾಣಗಳಿದ್ದವು. ಕೆಲವರ ಕೈಯಲ್ಲಿ ಮುಷ್ಕ್ ಜಾಫ್ರಾನ್ ಸುಗಂಧದ ಬಟ್ಟಲನ್ನು ಹಿಡಿದಿರುವುದು ಕಂಡು ಬರುತ್ತದೆ. ಕೆಲವು ಹರಿವಾಣಗಳಲ್ಲಿ ಅಂಬರ್, ಶ್ರೀಗಂಧ ಮುಂತಾದವುಗಳನ್ನು ಹಿಡಿದು ನಿಂತಿರುವ ದೃಶ್ಯವು ಕಂಡುಬರುತ್ತಿದೆ. ಇದರಲ್ಲಿ ಕೆಲವರು ನರ್ತನ ಮಾಡುತ್ತಿರುವಂತೆ, ಕೆಲವರು ಕುಸ್ತಿ ಮಾಡುತ್ತಿರುವಂತೆ ಕಂಡುಬರುತ್ತಿವೆ. ರಾಜನ ಎದುರಲ್ಲಿ ಕೆಲವರು ಡೊಂಬರಾಟ, ಕುಸ್ತಿಗಳ ಪಟುಗಳು ಶಿಸ್ತಿನಲ್ಲಿ ಡೋಲು ವಾದ್ಯಗಳ ಜೊತೆಯಲ್ಲಿ ಮರೆವಣಿಗೆ ಹೋಗುವ ದೃಶ್ಯವಿದೆ. ಪ್ರತೀ ದೃಶ್ಯಗಳು ಒಂದಕ್ಕೊಂದು ಹೋಲಿಕೆಯಿಲ್ಲದೆ ಬೇರೆಯೇ ಆಗಿದ್ದವು. ದೊಡ್ಡ ಆನೆಯ ಕೆತ್ತನೆಯ ಚಿತ್ರವಿದೆ. ಇದು ರಾಜನ ಪ್ರೀತಿಯ ಆನೆಯಾಗಿತ್ತೆಂದು ಹೇಳಲಾಗುತ್ತದೆ. ಇನ್ನೊಂದೆಡೆ ಕೆಲವು ಕುದುರೆಗಳು ರಾಜನ ರಕ್ಷಣೆಗಾಗಿ ನಿಂತಿರುವಂತೆ ಕಂಡು ಬರುತ್ತವೆ. ಇವಲ್ಲದೆ ಇನ್ನೊಂದು ವಿಶೇಷವಾದ ದರ್ಬಾರಿನ ದೃಶ್ಯವಿದೆ. ಅದರ ಬಗ್ಗೆ ವಿವರಿಸಲು ನನ್ನ ಲೇಖನಿಗೆ ಅಸಾಧ್ಯವೆನಿಸುತ್ತದೆ. ಆ ದೃಶ್ಯವೆಂದರೆ ದರ್ಬಾರು, ಅದರಲ್ಲಿ ಮೂರು ನಾಲ್ಕು ಮಹಲುಗಳು ಕಂಡು ಬರುತ್ತವೆ. ಇವುಗಳಲ್ಲಿ ಗಂಡು ಹೆಣ್ಣು ಸೇರುವ ಚಿತ್ರಗಳು ಕಂಡುಬರುತ್ತವೆ. ಕೊನೆಯಲ್ಲಿ ಹೇಳುವುದಿದ್ದರೆ ಎಲ್ಲೋರಾದ ಇಮಾರತುಗಳ ಬಗ್ಗೆ ಬರೆಯುವುದೆಂದರೆ ಒಂದು ದೊಡ್ಡ ಕತೆಯಾಗಬಹುದು. ಈ ದೇವಾಲಯವನ್ನು ಬಿಟ್ಟು ಎರಡು ಫರ್ಲಾಂಗುಗಳನಂತರ ರಾಜನ ಶಿಕಾರಿಯ ಜಾಗವಿದೆ. ಇದರ ನಾಲ್ಕೂದಿಕ್ಕುಗಳಲ್ಲಿ ಎತ್ತರ ಮತ್ತು ಮಜಬೂತಾದ ಕಲ್ಲುಗಳಿಂದ ಕಟ್ಟಲಾದ ಆವರಣವಿದೆ. ಎಲ್ಲೋರ ಎಂಬ ಹೆಸರಿನ ಗ್ರಾಮ ಇಲ್ಲಿಂದ ಐವತ್ತು ಕೋಸ್ ದೂರದಲ್ಲಿದೆ. ಅಲ್ಲೂಕೂಡ ಇಂತಹ ಶಿಕಾರಿ ಮೈದಾನ, ಕಟ್ಟಡಗಳು ಕಟ್ಟಿಸಲಾಗಿದ್ದು ಇವು ಇಂದಿಗೂ ನಮಗೆ ಕಾಣಿಸುತ್ತವೆ.

**ವಿವಿಧ ರೀತಿಯ ಅನುಭವಗಳ ವಿವರಗಳು:**

ಶೀರಾಜಿನ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಎಲ್ಲೋರದಲ್ಲಿರುವಂತೆಯೇ ನಕ್ಷೆ ರುಸ್ತುಂ ಅಥವಾ ನಲ್ವತ್ತು ಮಿನಾರಗಳೆಂಬ ಸ್ಥಳದಲ್ಲಿ ಕಲ್ಲಿನ ಕೆತ್ತನೆಯ ಕಟ್ಟಡಗಳಿವೆಯೆಂದು ಹೇಳುತ್ತಾರೆ. 'ತಾರೀಖ್ ಎ ಫುರೂಸ್' (ತಾರೀಖ್ ಎ ಫರಿಶ್ತಾ?)ದಲ್ಲಿ ಹೇಳುವಂತೆ ಅಲ್ಲಿ ನಾಲ್ಕು ನೂರು ಮಿನಾರಗಳಿದ್ದವು. ಆ ಜಾಗವು ಒಂದು ಗೋಲದಂತಿತ್ತು. ಈ ಗೋಲದ ಸ್ಥಂಭಗಳು ಮಿನಾರಗಳಂತಿದ್ದವು. ಆ ಗೋಲಾಕಾರದ ಕಟ್ಟಡದ ಮಧ್ಯೆ ಒಂದು ವೇದಿಕೆಯಲ್ಲಿ ದೇವತೆಗಳ ಮೂರ್ತಿಗಳಿದ್ದವು ಎಂದು ಹೇಳಲಾಗುತ್ತದೆ. ಈ ಮೂರ್ತಿಗಳಿಗೆ ಜನಗಳು ಬಂದು ಸಾಷ್ಟಾಂಗ ನಮಸ್ಕಾರ, ಪೂಜೆ ಮಾಡುತ್ತಿದ್ದರೆಂದು ಹೇಳುತ್ತಿದ್ದರು. ಎಲ್ಲೋರಾದ ಕಟ್ಟಡದ ಮೇಲಿನ ಭಾಗವು ಮುಚ್ಚಿರುವುದರಿಂದ ಒಳಪ್ರವೇಶಿಸುವಾಗ ಕತ್ತಲೆ ಇದ್ದು ಬೆಳಕು ಹಿಡಿದು ಹೋಗಬೇಕಾಗುತ್ತದೆ. ಅಲ್ಲಿಗೆ

ಹೋಗುವ ರಸ್ತೆ ಕೂಡ ಕತ್ತಲೆಯಲ್ಲಿದೆ. ಆದರೆ ನಕ್ಷೆ ರುಸ್ತುಂನಲ್ಲಿನ ಕಲ್ಲಿನ ಕಟ್ಟಡಗಳಲ್ಲಿ ಪ್ರಾಕೃತಿಕ ಬೆಳಕು ಹಾದು ಹೋಗುವಂತಿದೆ. ನಾಲ್ಕು ಸಾವಿರ ವರ್ಷಗಳ ಹಿಂದಿನ ಜನರ ಆಯುಷ್ಯವೂ ನಾಲ್ಕು ಪಟ್ಟು ಹೆಚ್ಚಿದ್ದು ಬಲಿಷ್ಠರಾಗಿದ್ದರು. ಆದುದರಿಂದ ಈ ಕಟ್ಟಡಗಳನ್ನು ಕಟ್ಟುವ ಕೆಲಸ ಅವರಿಂದ ಸಾಧ್ಯವಾಯಿತೆನ್ನಬಹುದು. ಈಗ ಇದು ಅಷ್ಟು ಸುಲಭಸಾಧ್ಯ ಕೆಲಸವಲ್ಲ. ನಾವು ಈಗ ಈ ಕಟ್ಟಡಗಳ ವಿನ್ಯಾಸ, ಭವ್ಯತೆಯನ್ನು ನೋಡುವಾಗ ನಮಗೆ ಅತ್ಯದ್ಭುತವೆನಿಸಿ ಚಕಿತರಾಗುತ್ತೇವೆ. ಬುರ್ಹಾನ್ ನಿಜಾಂ ಷಾ ಮತ್ತು ಷಾ ತಾಹಿರ್ ಸೇರಿ ಎಲ್ಲೋರಾಕ್ಕೆ ಒಮ್ಮೆ ನೋಡಲು ಹೋಗಿದ್ದರು. ಮಾತುಮಾತಿಗೆ ನಿಜಾಂ ಷಾ 'ಸಲಿಂಗ ಪ್ರೇಮಿಗಳ ವಿಚಾರ ಬಂದದ್ದು ವಿದೇಶಗಳಿಂದ ದಕ್ಷಿಣ ಭಾರತಕ್ಕೆ ಬಂದಿದ್ದು' ಎಂದು ಹೇಳಿದ. ಷಾ ತಾಹಿರ್ ಈ ವಿಚಾರವನ್ನು ಒಪ್ಪಿರಲಿಲ್ಲ. ಎಲ್ಲೋರಾಕ್ಕೆ ಅವರು ಭೇಟಿ ನೀಡಿದಾಗ ಒಂದು ಕೆತ್ತನೆಯ ಶಿಲ್ಪವನ್ನು ತೋರಿಸಿ, 'ನೋಡು ಇಲ್ಲಿನ ಶಿಲ್ಪದಲ್ಲಿ ಇಬ್ಬರು ಪುರುಷರ ಕೂಡುವಿಕೆಯನ್ನು ತೋರಿಸುತ್ತದೆ. ಇದರಿಂದ ನಿನ್ನ ಅಭಿಪ್ರಾಯ ತಪ್ಪೆಂದು ಸಾಬೀತಾಗುತ್ತದೆ' ಎಂದ.

**ಬೆಂಗಳೂರಿನ ಸಮೀಪದ ಲಕ್ಮೀಸರ್ ಗ್ರಾಮದ ದೇವಾಲಯದ ವಿವರಗಳು:**

ಈ ಗ್ರಾಮ ಬೆಂಗಳೂರಿನ ಇಲಾಖೆಯಲ್ಲಿತ್ತು. ಇದು ಓರ್ವ ಹಿಂದೂ ಅರಸನ ರಾಜಧಾನಿಯಾಗಿತ್ತು. ಇಲ್ಲಿ ಒಂದು ದೊಡ್ಡ ದೇವಾಲಯವನ್ನು ಕಟ್ಟಿಸಲಾಗಿದ್ದು, ಇದರ ಕೆಲವು ಭಾಗಗಳು ತುಂಬ ಹಳೆಯದಾಗಿದ್ದರಿಂದ ಬಿದ್ದು ಶಿಥಿಲಗೊಂಡಿದ್ದು ಕೆಲವು ಭಾಗಗಳು ಇನ್ನೂ ಗಟ್ಟಿಯಾಗಿವೆ. ನನಗೆ ಸಿಕ್ಕಿದ ವಿವರಗಳಂತೆ ಇಲ್ಲಿ ಇನ್ನಷ್ಟು ದೇವಾಲಯಗಳೂ ಇದ್ದವಾದರೂ ಅವುಗಳ ಯಾವ ಕುರುಹೂ ಈಗ ಕಾಣುತ್ತಿಲ್ಲ. ನಾನು ನೋಡುವಾಗ ಒಂದು ದೊಡ್ಡ ದೇವಸ್ಥಾನವಿತ್ತು. ಉದ್ದಕ್ಕೆ ಎಪ್ಪತ್ತು ಗಜವಿದ್ದು ಅಗಲಕ್ಕೆ ಐವತ್ತು ಗಜ ವ್ಯಾಪ್ತಿಯಲ್ಲಿ ಹರಡಿತ್ತು.

ಈ ದೇವಸ್ಥಾನದ ಕಟ್ಟಡ ಅತ್ಯಂತ ಸುಂದರವಾಗಿದ್ದು ಇಲ್ಲಿನ ವಾಸ್ತು ಕಲೆಯ ವೈಭವ ನೋಡುಗರ ಕಣ್ಣಿಗೆ ಹಬ್ಬವಾಗಿದೆ. ಒಂದೊಂದು ಗೇಣಿನಲ್ಲೂ ಹತ್ತು ಮೂರ್ತಿಗಳು ಕಂಡು ಬರುತ್ತವೆ. ಇವುಗಳಲ್ಲಿ ಮನುಷ್ಯರು, ಹಕ್ಕಿಗಳು, ಮರಗಿಡಗಳು, ಪ್ರಾಣಿಗಳ ಸ್ವರೂಪಗಳನ್ನು ಕಲ್ಲಿನಲ್ಲಿ ಕೆತ್ತಿಟ್ಟ ಸುಂದರ ಕಲಾಕೃತಿಗಳು ಕಾಣಸಿಗುತ್ತವೆ. ಈ ದೇವಸ್ಥಾನದ ಒಳಗೆ ಮತ್ತು ಹೊರಗೆ ಎಂತಹ ಅದ್ಭುತ ಕಲಾನೈಪುಣ್ಯ ಕಂಡು ಬರುತ್ತದೆಂದರೆ ನಾವು ಇದು ಯಾವ ಕಾಲದಲ್ಲಿ ಕಟ್ಟಲಾಗಿದೆ ಎನ್ನುವುದನ್ನು ಯೋಚಿಸಲಾರಂದಂತೆ ಹೊಚ್ಚಹೊಸದಾಗಿದ್ದಂತೆ ಕಂಡುಬರುತ್ತದೆ. ದೇವರು ಜಹಾಂಪನಾರಿಗೆ ನೀಡಿದ ಬುದ್ಧಿಯಿಂದ ಅವರು ಹಿಂಪಾನಗರವನ್ನು ಜಯಿಸಿದ ಬಳಿಕ ಹೆಚ್ಚು ಕಮ್ಮಿ ಐದು ಸಾವಿರ ಮೂರ್ತಿಗಳನ್ನು ನಾಶಪಡಿಸಿದ್ದ. ಅನೇಕ ದೇವಾಲಯಗಳನ್ನು ಕೆಡವಿದ್ದ. ಆದರೆ ಎಲ್ಲೋರಾ ಹೋಗಿರಲಿಲ್ಲ!

**ಖಾನೆ ಖಾನಾನ್ ಆಗ್ರಾಕ್ಕೆ ಹಿಂತಿರುಗಿದ ಹಾಗೂ ಸುಲ್ತಾನ್ ಸಲೀಮ್ ತನ್ನ ಮಗ ಸುಲ್ತಾನ್ ಪರ್ವೇಜನನ್ನು ಅಲ್ಲಿಂದ ಕಳುಹಿಸಿದ ವಿವರಗಳು:**

ಖಾನೆ ಖಾನಾನ್ ಆಗ್ರಾದಿಂದ ದಕ್ಷಿಣ ಭಾರತಕ್ಕೆ ಹೋಗಿ ಅಲ್ಲಿದ್ದ ಸುಲ್ತಾನ್ ಸಲೀಮನಿಗೆ ದರ್ಬಾರಿಗಳು ಮಾಡುತ್ತಿದ್ದ ಟೀಕೆಯ ಸಂಗತಿಯನ್ನು ತಿಳಿಸಿದ. ಸುಲ್ತಾನ್ ಸಲೀಮ ದಕ್ಷಿಣದಲ್ಲಿದ್ದು ಯಾವುದೇ ಮಹತ್ವದ ಕೆಲಸವನ್ನು ಮಾಡದೆ ಸುಮ್ಮನೆ ಹನ್ನೆರಡು ವರ್ಷಗಳ ಕಾಲ ಸಮಯ ಹಾಳುಮಾಡಿದ್ದಾನೆಂದು ಸಮಸ್ತ ಸರಕಾರಿ ಅಧಿಕಾರಿಗಳು, ಮಂತ್ರಿಗಳು ವಿರೋಧ ವ್ಯಕ್ತಪಡಿಸುತ್ತಿದ್ದರು. ಈ ರೀತಿಯ ಟೀಕೆಗಳನ್ನು ದರ್ಬಾರಿನ ಎಲ್ಲರೂ ಮಾಡತೊಡಗಿದ್ದರು. ಸುಲ್ತಾನ್ ಸಲೀಮನಿಗೆ ಖಾನೆ ಖಾನಾನ್ ಈ ಸಂಗತಿಯನ್ನು ತಿಳಿಸಿದ. ಆಗ ದಕ್ಷಿಣದಲ್ಲಿ ಐದು ಬಾದಶಾಹರು ಒಂದಾಗಿ ಐಕ್ಯವಾಗಿ ಮೈತ್ರಿಕೂಟವನ್ನು ಮಾಡಿದ್ದರು. ಅವರ ಮೈತ್ರಿ ಕೂಟದಲ್ಲಿ, ಬಿಜಾಪುರದ ಇಬ್ರಾಹಿಂ ಆದಿಲ್ ಶಾಹ, ನಿಜಾಂ ಶಾಹ, ಮಲಿಕ್ ಬರೀದ್, ಖುತುಬ್ ಷಾ ಮತ್ತು ಹಿಂಪಾನಗರದ(ವಿಜಯನಗರದ) ಹಿಂದೂ ಬಾದಶಾಹರು ಒಂದಾಗಿದ್ದರು. ಈ ಐವರ ಒಕ್ಕೂಟವನ್ನು ಮಾಡಿಕೊಂಡು ತಾವು ಬಲಿಷ್ಠರಾಗಿ ರುಸ್ತುಂ ಎ ಜಮಾನ್ ಎಂದು ತಿಳಿದುಕೊಂಡು ಅಹಂಕಾರ ಪಟ್ಟುಕೊಂಡು ನನ್ನ ಮೇಲೆ ದಾಳಿ ನಡೆಸಲು ಹೊಂಚುಹಾಕುತ್ತಿದ್ದಾರೆ ಎಂದು ಖಾನೆ ಖಾನಾನ್(ಅಕ್ಬರ್ ಬಾದಶಾಹ)ನಿಗೆ ತಿಳಿದಿತ್ತು. ಈಗ ಖಾನೆ ಖಾನಾನ್ ಅಲ್ಲಿನ ಸೈನ್ಯಬಲದ ಆಗುಹೋಗುಗಳ ವಿಚಾರಣೆ ನಡೆಸಿ ಬಲಶಾಲಿಗಳಾಗಿ ಮಾರ್ಪಡಿಸುವ ಸಮಯ ಕೂಡಿ ಬಂದಿದೆ ಎಂದುಕೊಂಡಿದ್ದ. ಬಹಳಷ್ಟು ಇಲಾಖೆ ಪ್ರದೇಶಗಳು ಖಾನೆ ಖಾನಾನ್‌ರ ಸಾಮ್ರಾಜ್ಯಕ್ಕೆ ಸೇರಿತ್ತು.

ಮೊದಲು ದಕ್ಷಿಣದ ಬಾದಶಾಹರೊಂದಿಗೆ ಇದ್ದ ಆಂತೂರಿನ ಕೋಟೆ ಮತ್ತು ಅದರ ಗ್ರಾಮಗಳು ಖಾನೆ ಖಾನಾನನ ವಶಕ್ಕೆ ಸೇರಿತು. ಇದು ಆಲಂಪನಾ ಮತ್ತು ಅಂಬರ್ ಜಪ್ಪೂ ಬಂದು ಅಲ್ಲಿ ಲೂಟಿಮಾಡಿದ ಬಳಿಕ ನಡೆದ ಸಂಗತಿಯಾಗಿತ್ತು. ಖಾನೆ ಖಾನಾನ್ ಹಸ್ತಿನಾಪುರಕ್ಕೆ ಹೋಗಿ ಅಲ್ಲಿನ ಕೋಟೆ ಮತ್ತು ಅದಕ್ಕೆ ಸಂಬಂಧಿಸಿದ ಕೆಲಸಗಳನ್ನು ನೋಡಿಕೊಂಡರು. ಆಲಂಪನಾನ ಸೈನ್ಯ ಅಂಬರ್ ಜಪ್ಪೂನೊಂದಿಗೆ ಸೇರಿ ಖಾನೆ ಖಾನಾನನ್ನು ಸುತ್ತುವರಿದರು. ಖಾನೆ ಖಾನಾನ್ ನೋಡುವಾಗ ಆದಿಲ್ ಷಾ ಮತ್ತು ನಿಜಾಂ ಷಾರ ಸೈನ್ಯ ಬಹಳ ಬಲಿಷ್ಠವಾಗಿರುವುದನ್ನು ಕಂಡು ಇವರೊಂದಿಗೆ ರಾಜಿ ಒಪ್ಪಂದ ಮಾಡಿಕೊಳ್ಳುವುದರಲ್ಲಿ ತನ್ನ ಒಳಿತಿದೆ ಎಂದುಕೊಂಡ. ಇದರಂತೆ ಕೋಟೆಯನ್ನು ಖಾಲಿ ಮಾಡಿ ಆಮೇರ್ ಮತ್ತು ಬುರ್ಹಾನ್ ಪುರದ ಕಡೆ ಪ್ರಯಾಣ ಬೆಳೆಸಿದ. ಇದರ ಸುಳಿವು ಸುಲ್ತಾನ್ ಸಲೀಮ್‌ನಿಗೆ ಸಿಕ್ಕಾಗ ತನ್ನ ಮಗನನ್ನು ಸುಲ್ತಾನ್ ಪರ್ವೇಜನನ್ನು ಅಲ್ಲಿಗೆ ಕಳುಹಿಸಿದ. ಇವನ ಜೊತೆಗೆ ದೊಡ್ಡ ಸರದಾರರಾದ ಷರೀಫ್ ಖಾನ್, ಆಸಿಫ್ ಖಾನ್, ದೌಲತ್ ಖಾನ್ ಲೋದಿಯ ಮಗ ಪೀರ್

ಖಾನ್‌ನನ್ನು ಕೂಡ ಕಳುಹಿಸಿದ. ಬಂಗಾಲದ ರಾಜ್ಯದ ಅಧಿಪತಿಯಾಗಿ ನೇಮಿಸಲ್ಪಟ್ಟ ಮಾನ್ ಸಿಂಗ್ ರಾಜಪೂತ್ ತನ್ನೊಂದಿಗೆ ರಜಪೂತರು ಮತ್ತು ಮುಸ್ಲಿಮರು ಸೇರಿದ ಮೂರು ನಾಲ್ಕು ಸಾವಿರ ಕುದುರೆ ಸವಾರರ ಸೈನ್ಯವನ್ನು ಸೇರಿಸಿಕೊಂಡಿದ್ದ. ಹೀಗೆ ಒಟ್ಟು ಐವತ್ತು ಸಾವಿರ ಸೈನಿಕರ ದಂಡು ಒಂದರ ಹಿಂದೆ ಒಂದಾಗಿ ಪ್ರಯಾಣಿಸಿದರು. ಆಲಂಪನಾ ಮತ್ತು ಅಂಬರ್ ಜಪ್ಪೂನ ಸರದಾರರಿಗೆ ಮೊಘಲ್ ಸೈನ್ಯದ ಆಗಮನದ ಬಗ್ಗೆ ತಿಳಿದಾಗ ಆಲಂಪನಾರ ಬಳಿಗೆ ಸಂದೇಶ ಕಳುಹಿಸಿದರು. ಆಲಂಪನಾ ತನಗೆ ಸಾಧ್ಯವಾದಷ್ಟು ಶಸ್ತ್ರಾಸ್ತ್ರಗಳು, ಗುಂಡು ಸಿಡಿಮದ್ದುಗಳನ್ನು ಕಳುಹಿಸಿ ಅವರು ನಮ್ಮ ರಾಜ್ಯದ ಒಳಗೆ ಬಾರದಂತೆ ತಡೆಯಿರಿ ಎಂದು ಸಂದೇಶ ನೀಡಿದ. ಅಲಂಪನಾರ ಸೈನ್ಯದ ತುಕಡಿಗಳು ಮಲ್ನಾಡ್ ಮತ್ತು ಅದೋನಿಯಲ್ಲಿ ಇದ್ದುದನ್ನು ತುರ್ತು ಪರಿಸ್ಥಿತಿ ಉಂಟಾದ ಕಾರಣಕ್ಕೆ ವಾಪಾಸು ಕರೆಸಿ ಯುದ್ಧದ ಪ್ರದೇಶಕ್ಕೆ ಕಳುಹಿಸಿದ. ತನ್ನ ಎರಡು ಮೂರು ಮುಖ್ಯ ಸರದಾರರನ್ನು ಕೂಡ ಸೇರಿದಂತೆ ಹೆಚ್ಚುಕಮ್ಮಿ ಇಪ್ಪತ್ತು ಸಾವಿರ ಸೈನಿಕರ ದಂಡನ್ನು ಅವರ ಸಹಾಯಕ್ಕೆ ಕಳುಹಿಸಿದ. ಹೀಗೆಯೇ ಅಹ್ಮದ್ ನಗರದ ಸರದಾರರು ಕೂಡ ಸೇರಿಕೊಂಡು ಹತ್ತು ಸಾವಿರ ಸೈನಿಕರು ಕೂಡ ಮೊಘಲರ ಸೈನ್ಯವನ್ನು ಎದುರಿಸಲು ಪ್ರಯಾಣಬೆಳೆಸಿದರು. ಹೆಚ್ಚುಕಮ್ಮಿ ೨೦ ಫರ್ಲಾಂಗು ನಡೆದು ಪರ್ವತ ಮತ್ತು ಕಾಡಿನೊಳಗೆ ಹೋಗಿ ತಂಗಿದರು.

ಕಾಡುಗಳೊಳಗೆ ಅಡಗಿಕೊಂಡು ಗುಪ್ತವಾಗಿ ಅಹ್ಮದ್ ನಗರದ ಕಡೆ ಬಂದು ಸೇರಿದರು. ಇದೇರೀತಿ ಮಾನಸಿಂಗ್ ಕೆಲವು ದಿನಗಳ ಬಳಿಕ ಸೈನ್ಯದೊಂದಿಗೆ ಹೋಗಿ ಸೇರಿದ. ಅಲ್ಲಿಗೆ ಹೊರಡುವ ಮೊದಲು ಅವನು, 'ಈ ದಕ್ಷಿಣದವರಿಗೆ ಸರಿಯಾಗಿ ಬುದ್ಧಿ ಕಲಿಸಬೇಕು. ಅವರಿಗೆ ಅಹಂಕಾರ ಬಹಳ ಹೆಚ್ಚಿದೆ. ಅವರ ಅಹಂಕಾರವನ್ನು ತಗ್ಗಿಸಿ ಕಾಲಬುಡಕ್ಕೆ ತರಿಸುತ್ತೇನೆ. ಯುದ್ಧವೆಂದರೆ ಏನೆಂದು ತೋರಿಸುತ್ತೇನೆ. ತಮ್ಮನ್ನು ತಾವು ಬಹಳ ಬಹದ್ದೂರರೆಂದು ತಿಳಿದುಕೊಂಡ ಅವರಿಗೆ ತಕ್ಕ ಶಾಸ್ತಿಯನ್ನು ಮಾಡುತ್ತೇನೆ' ಎಂದು ತನ್ನ ತಾಯಿಯ ಮುಂದೆ ಕೊಚ್ಚಿಕೊಂಡಿದ್ದ. ಆಲಂಪನಾ ಅಂಬರ್ ಜಪ್ಪು ಯುದ್ಧದ ಸಂಪೂರ್ಣ ತಯಾರಿಯಲ್ಲಿ ಮುಳುಗಿದ್ದರು. ಮರುದಿನ ಮಾನ್ ಸಿಂಗ್ ಬೆಳಗ್ಗೆ ಸವಾರನಾಗಿ ತನ್ನ ಕೆಲವು ಸರದಾರರನ್ನು ಜೊತೆಯಲ್ಲಿ ಸೇರಿಸಿಕೊಂಡು ಪ್ರಯಾಣಿಸುತ್ತ ಬರುವಾಗ ಎದುರಲ್ಲಿ ಆಲಂಪನಾ ಮತ್ತು ಅಂಬರ್ ಜಪ್ಪು ತಮ್ಮ ಸೈನ್ಯವು ಯುದ್ಧ ಸಾಮಾಗ್ರಿಗಳನ್ನು ತರುತ್ತಿರುವುದು ಕಂಡು ಬಂತು. ಇಲ್ಲೇ ಯುದ್ಧ ಶುರುವಾಯಿತು. ಕೆಲವು ಮೊಘಲ ಸರದಾರರು ತಮ್ಮನ್ನು ಹಿಂದಕ್ಕೆ ಸರಿಸಿಕೊಂಡು ಹಿಂದಿನಿಂದ ಒಮ್ಮಲೇ ದಾಳಿ ಮಾಡುವುದಕ್ಕೆ ಹೊರಟರು. ಅಸರ್ ನಮಾಜ್‌ನ ಹೊತ್ತಿನ ತನಕ ಯುದ್ಧ ನಡೆಯಿತು. ಎರಡೂ ಕಡೆಯಲ್ಲಿ ಬಹಳ ಜನರು ಹತರಾದರು. ಈ ಮಧ್ಯೆ ಹತ್ತು ಸಾವಿರ ಮರಾಠರು ಹಿಂದಿನಿಂದ ಮಾನಸಿಂಗನ ಸೈನ್ಯದ ಕಡೆ

ಬಂದರು. ಮಾನಸಿಂಗನ ಬಹಳಷ್ಟು ಸೈನಿಕರನ್ನು ಕೊಂದುಹಾಕಿದರು. ಇದರಲ್ಲಿ ಮಾನಸಿಂಗನ ಹತ್ತಿರದ ಸಂಬಂಧಿಕರೂ ಸತ್ತುಬಿದ್ದಿದ್ದರು. ಮಾನಸಿಂಗನ ಪತ್ನಿಯ ಸಹೋದರ, ತಂಗಿಯ ಮಗ ಕೂಡ ಈ ಯುದ್ಧದಲ್ಲಿ ತೀರಿಕೊಂಡರು. ಬಹಳಷ್ಟು ಅವನ ಸೈನಿಕರು ಗಾಯಾಳುಗಳಾದರು. ಅರ್ಧರಾತ್ರಿ ಸರಿದಾಗ ಮತ್ತೆ ಭೀಕರವಾದ ಕಾಳಗ ಶುರುವಾಯಿತು. ಸುಲ್ತಾನ್ ಪರ್ವೇಜ್ 'ಹೀಗೆ ಯುದ್ಧದಲ್ಲಿ ಅವಸರಮಾಡಬೇಡಿ. ಇದರಿಂದ ನಷ್ಟವಾಗುವ ಸಂಭವ ಹೆಚ್ಚು' ಎಂದು ಸೈನಿಕರಿಗೆ ಹೇಳಿದ. 'ಯಾಕೆಂದರೆ ಮರಾಠರು ಸಾಕಷ್ಟು ಯುದ್ಧ ನಿಪುಣರು ಮತ್ತು ಮೊಘಲರನ್ನು ಸಾಕಷ್ಟು ರೀತಿಯಲ್ಲಿ ತೊಂದರೆ ಕೊಡುವವರು. ಸ್ವಲ್ಪ ತಾಳಿ, ವಾತಾವರಣದಲ್ಲಿ ಬಿಸಿಯೇರಲಿ. ಆಗ ಮರಾಠಿಗರು ಮೊಘಲರ ಬಳಿಗೆ ಬರಲಾರರು' ಎಂದ. ಆದರೆ ಬಿಸಿಲ ತಾಪದಿಂದ ಮೊಘಲರ ತಂಡದಲ್ಲಿ ಆಹಾರದ ಕೊರತೆಯುಂಟಾಯಿತು. ಅವರ ಸವಾರಿ ಕುದುರೆ ಮುಂತಾದವುಗಳಿಗೆ ಆಹಾರದೊರೆಯದೆ ಹೋಯಿತು.

**ಯುದ್ಧದ ಬಗ್ಗೆ ಸರದಾರರೊಳಗೆ ಸೇರಿ ಯೋಜನೆಗಳನ್ನು ತಯಾರಿಸುವುದು ಮತ್ತು ಸಲಹೆ ಪಡೆವ ವಿವರಗಳು:**

ಸೇನೆಯ ಸಮಸ್ತ ಸರದಾರರು ಒಂದೆಡೆ ಸೇರಿ ಯುದ್ಧ ನಡೆಯುತ್ತಿರುವ ಬಗ್ಗೆ ವಿಮರ್ಶೆ ನಡೆಸಿ ಇನ್ನಷ್ಟು ತೀವ್ರ ಮತ್ತು ವ್ಯಾಪಕವಾಗಿ ನಡೆಸುವ ಬಗ್ಗೆ ಸಲಹೆ ನೀಡಿದರು. ಸಭೆಯಲ್ಲಿ 'ನನ್ನ ರಾಜ್ಯದ ಗಡಿಯ ಬಗ್ಗೆ ಸಾಕಷ್ಟು ಮಾಹಿತಿ ಇರಲಿಲ್ಲ. ನಮ್ಮ ಸರಹದ್ದಿನಲ್ಲಿ ಸೈನ್ಯ ಬಂದು ನಿಂತಿದೆ. ಅಲ್ಲಿ ನಮ್ಮ ಸೈನಿಕರು ಅಲ್ಲಿನ ಬರಗಾಲದಿಂದಾಗಿ ಆಹಾರಕ್ಕಾಗಿ ಪರದಾಡುತ್ತಿದ್ದಾರೆ' ಎಂದು ಬಾದಶಾಹ ಹೇಳಿದ.

'ಹಸಿರು ಹುಲ್ಲು, ಪ್ರಾಣಿಗಳ ಆಹಾರಗಳು ಸಿಗುತ್ತಿಲ್ಲ. ದಖ್ಖಣಿಯ ಮರಾಠರು ಸೈನಿಕರ ಮಧ್ಯೆ ನುಸುಳಿದ್ದಾರೆ. ಒಂದು ಕಾಳು ಕೂಡ ಆಹಾರ ಸೈನಿಕರಿಗೆ ಒದಗುತ್ತಿಲ್ಲ. ನನ್ನ ಅಭಿಪ್ರಾಯದಂತೆ ನಾನು ನನ್ನ ಸ್ವದೇಶಕ್ಕೆ ಹೋಗಿ ಅಲ್ಲಿಂದ ಆಹಾರ ಸಾಮಾಗ್ರಿಗಳನ್ನು ಒದಗಿಸುತ್ತೇನೆ' ಎಂದು ತೀರ್ಮಾನಿಸಿ ಸುಲ್ತಾನ್ ಪರ್ವೇಜನಿಗೆ ಅಲ್ಲಿನ ಸಮಗ್ರ ಸಂಗತಿಗಳನ್ನು ತಿಳಿಸಿದ. ಖಾನೆ ಖಾನಾನ್ 'ಅಲ್ಲಿ ದಕ್ಷಿಣದ ಪ್ರದೇಶದಲ್ಲಿ ಬರಗಾಲವಿದೆ ಎಂಬುದು ನಿನ್ನ ತಪ್ಪು ಅಭಿಪ್ರಾಯವಾಗಿದೆ. ಈಗ ರಾಜಕುಮಾರ(ಶಹಜಾದ) ಸೈನ್ಯದ ತಯಾರಿ ಮಾಡಿಕೊಂಡು ಅಲ್ಲಿಗೆ ಹೋಗಿ ಸ್ವತಃ ನೋಡಲಿ' ಎಂದ. ರಾಜಕುಮಾರ ಸಲೀಮ್ ಆಹಾರ ಸಾಮಗ್ರಿಗಳು, ಪ್ರಾಣಿಗಳಿಗೆ ಬೇಕಾದ ಹುಲ್ಲು, ಮೇವು ಆಹಾರಗಳನ್ನು ಒಟ್ಟುಮಾಡಿ ತಯಾರಾದ. ಸುಲ್ತಾನ್ ಪರ್ವೇಜನಿಗೆ ಈ ವಿಷಯವನ್ನು ತಿಳಿಸಲು ದೂತನನ್ನು ಕಳುಹಿಸಿ, ಅವನು ಅಹ್ಮದ್‌ನಗರದ ಕಡೆಗೆ ಪ್ರಯಾಣ ಬೆಳೆಸಿದ. ದಕ್ಷಿಣದವರ ಸೈನ್ಯವು ರಸ್ತೆಯಲ್ಲಿ

ಆಹಾರ ಮತ್ತು ಮೇವು ತರುತ್ತಿದ್ದವರನ್ನು ತಡೆದು ನಿಲ್ಲಿಸಿ ಬೆಂಕಿ ಹಚ್ಚಿ ನಾಶಪಡಿಸಿದರು. ಬಿಸಿಲಲ್ಲಿ ಸವಾರಿ ಕುದುರೆಗಳು ಸುಸ್ತಾಗಿ, ಈ ಸೈನಿಕರು ಕೂಡ ಒಂದು ಎರಡು ಮೈಲು ನಡೆದು ನಿಂತು ಬಿಡುತ್ತಿದ್ದರು. ಬಹಳ ಕಷ್ಟಪಟ್ಟು ಅದಿಲಾಬಾದಿಗೆ ತಲಪಿದರು. ಸೈನಿಕರು, ಸವಾರಿಯ ಪ್ರಾಣಿಗಳು ಆಹಾರದೊರೆಯದೆ ಹತಾಶರಾದರು. ಒಂದು ತಿಂಗಳು ಕಷ್ಟಪಟ್ಟು ಕಟ್ಟಳ್ಳಿಗೆ ತಲಪಿದರು. ಈ ಕಟ್ಟಳ್ಳಿಯ ಹಾದಿ ಎತ್ತರತಗ್ಗು ಓರೆಕೋರೆಯದಾಗಿ ಬಹಳ ಕಷ್ಟದ ರಸ್ತೆಯಾಗಿತ್ತು. ಮರಾಠಿಗಳು, ಆಲಂಪನಾ, ಅಂಬರ್ ಜಪ್ಪುವಿನ ಜಂಟಿ ಸೈನ್ಯ ಅಲ್ಲೇ ನಿಂತುಬಿಟ್ಟರು. ರಾತ್ರಿಯ ಕತ್ತಲಲ್ಲಿ ಅವರ ಮೇಲೆ ಬಾಣಗಳು ಬಂದು ಬೀಳುತ್ತಿದ್ದವು. ಪ್ರತೀ ರಾತ್ರಿ ಒಬ್ಬನಲ್ಲ ಒಬ್ಬ ಸೈನಿಕ ಅಥವಾ ಕುದುರೆ, ಆನೆ ಯಾವುದಾದರೊಂದು ಇವಕ್ಕೆ ಬಲಿಯಾಗುತ್ತಿದ್ದವು. ಒಂದು ತಿಂಗಳ ಅವಧಿಯಲ್ಲಿ ೮೦೦ ರಿಂದ ೯೦೦ ತನಕ ಸೈನಿಕರು ಸಾಯುತ್ತಿದ್ದರು.

ಇಷ್ಟರಲ್ಲಿ, ದಿನವೊಂದಕ್ಕೆ ಏಳು ಸಾವಿರ ಕುದುರೆಗಳು ಹಸಿವು ಬಾಯಾರಿಕೆಯಿಂದ ಸತ್ತುಹೋದವು. ಮನುಷ್ಯರ ಸಾವಿನ ಲೆಕ್ಕವೇ ಸಿಗಲಿಲ್ಲ. ದಿನವೂ ಜನರು ಸಾಯುತ್ತಲೇ ಇದ್ದರೆಂಬ ಸುದ್ದಿ ಕೇಳಿಬಂತು. ಮನುಷ್ಯರು ಮತ್ತು ಪ್ರಾಣಿಗಳು ಸತ್ತುಬಿದ್ದುದರಿಂದ ಅಲ್ಲೆಲ್ಲ ಕೆಟ್ಟವಾಸನೆ ದಟ್ಟವಾಗಿ ಹರಡಿತ್ತು. ಹೀಗೆ ಈ ಜನ ಸಂಪೂರ್ಣವಾಗಿ ಹತಾಶರಾದರು. ಈ ಪರಿಸ್ಥಿತಿಯಲ್ಲಿ ಸಂಧಾನದ ಮಾತಿಗೆ ತಯಾರಾದರು. ದಕ್ಷಿಣದ ಸೈನ್ಯ ಸಂಧಾನಕ್ಕೆ ತಯಾರಾಗಿರಲಿಲ್ಲ. ಎಲ್ಲ ಸರದಾರರು ಖಾನೆ ಖಾನಾನನ ಮುಂದೆ ಹೋಗಿ ಹೇಳಿದರು, ‘ನಾವು ನಿಮ್ಮ ಮಾತನ್ನು ಕೇಳಲಿಲ್ಲ. ಆದುದರಿಂದ ಅದಕ್ಕೆ ಸರಿಯಾದ ಶಿಕ್ಷೆ ಸಿಕ್ಕಿತು. ನಾವು ಈ ಪರ್ವತಗಳ ಮಧ್ಯೆ ಕೆಟ್ಟವಾಸನೆಯಿಂದಾಗಿ ಸಂಪೂರ್ಣವಾಗಿ ನಾಶವಾದಂತಾಗಿದ್ದೇವೆ’. ಖಾನೇ ಖಾನಾನ್ ಕೂಡ ದಕ್ಷಿಣದ ಅಧಿಕಾರಿ ಸರದಾರರಿಗೆ, ‘ಈಗ ಇಷ್ಟಕ್ಕೆ ನಿಲ್ಲಿಸಿ! ಸಂಧಾನ ಮಾಡಿಕೊಳ್ಳೋಣ. ಈ ಸಂಕಷ್ಟಗಳಿಂದ ಬಿಡುಗಡೆಹೊಂದಿಕೊಳ್ಳೋಣ’ ಎಂದು ಹತಾಶನಾಗಿ ಹೇಳಿದ. ಸುಲ್ತಾನ್ ಸಲೀಮನಿಗೂ ತಿಳಿಸಿದ. ಖಾನೆಖಾನಾನನು ಈ ಜನಗಳಿಂದ ಬಿಡುಗಡೆಗೆ ಒಂದೇ ಹಾದಿಯೆಂದರೆ ನಾವು ಹಿಂತಿರುಗಿ ಸ್ವದೇಶಕ್ಕೆ ಹೋಗುವುದು ಎಂದು ಯೋಚಿಸಿದರು.

ಈ ಪರಿಸ್ಥಿತಿಯು ದಿನೇದಿನೇ ಬಿಗಡಾಯಿಸುತ್ತಿರುವುದನ್ನು ಕಂಡು ತಮ್ಮ ಎಲ್ಲ ಸೈನ್ಯವನ್ನು ಸೇರಿಸಿಕೊಂಡು ಹಿಂತಿರುಗಿ ಆಗ್ರಾಕ್ಕೆ ಪ್ರಯಾಣಿಸಿದರು. ಅಲ್ಲಿ ಬಾದಶಾಹ ತನ್ನ ಸಮಸ್ತ ಸರದಾರರನ್ನು ಸಂತೈಸಿ ಸ್ನೇಹದೋರಿ ಸಂತೈಸಿ ಬರಮಾಡಿಕೊಂಡ. ನಂತರ ಮಂತ್ರಿ, ಸರದಾರರು ಖಾನೆಖಾನಾನ್‌ನ ಮಾತಿನಿಂದ ಸಂತಸಗೊಂಡರು. ಕೊನೆಯ ರಾತ್ರಿಯಂದು ಬಹಳ ಶರಾಬು ಕುಡಿದುದರಿಂದ ತಲೆಯಲ್ಲಿ ಅತೀವ ನೋವುಂಟಾಗಿ ಸ್ವಲ್ಪಹೊತ್ತಿನಲ್ಲಿ ಬಿದ್ದುಬಿಟ್ಟ. ನಂತರ ತಯಾರಿ ಮಾಡಿಕೊಂಡು ಆಗ್ರಾದ ಕಡೆ ಪ್ರಯಾಣಿಸಿದ.

**ಖಾನೆ ಖಾನಾನ್ ಆಗ್ರಾಕ್ಕೆ ಹೋಗಿ ಸುಲ್ತಾನ್ ಸಲೀಮನ ಭೇಟಿಯ ವಿವರಗಳು:**

ಖಾನೆ ಖಾನಾನ್ ಆಗ್ರಾಕ್ಕೆ ಹತ್ತಿರ ತಲಪಿದಾಗ ಸುಲ್ತಾನ್ ಸಲೀಮನಿಗೆ ದೂತರು ಸುದ್ದಿಯನ್ನು ತಲಪಿಸಿದರು. ಸುಲ್ತಾನ್ ಸಲೀಮ ಅವನನ್ನು ಸಂಕೋಲೆ ಹಾಕಿ ಬಂಧಿಸಿ ನನ್ನ ಮುಂದೆ ತನ್ನಿ ಎಂದು ಆಜ್ಞೆಮಾಡಿ ತನ್ನ ಕೆಲವು ಸರದಾರರನ್ನು ಕಳುಹಿಸಿದ. ಖಾನೆ ಖಾನಾನನಿಗೆ ಈ ಸುದ್ದಿ ತಿಳಿದು ಕೂಡಲೇ ಫಕೀರರ ವೇಷ ಧರಿಸಿ ಅಕ್ಬರ್ ಬಾದಶಾಹನ ಗೋರಿಯ ಮುಂದೆ ಕೂತ. ಇದನ್ನು ತಿಳಿದ ಸಲೀಮನ ತಾಯಿಗೆ ತಿಳಿದು ಮಗನಿಗೆ, 'ನಿನ್ನ ತಂದೆಯ ಕಾಲದಿಂದ ನಿಯತ್ತಿನಿಂದ ಕೆಲಸ ಮಾಡಿದ, ಗುಜರಾತನ್ನು ವಶಪಡಿಸಿಕೊಂಡು, ಗುಜರಾತಿಗಳು ಸಿಡಿದಾಗ ಸಮಾಧಾನ ಮೂಡಿಸಿದ್ದ, ಅಲ್ಲಿನ ವೈರಿಗಳನ್ನು ಓಡಿಸಿದ ಖಾನೆ ಖಾನಾನಿಗೆ ಯಾಕೆ ಈ ರೀತಿ ಮಾಡಿದಿ? ಯಾಕೆ ಹೀಗೆ? ನೀನು ಅವನ ಜೊತೆಗೆ ಏನು ನ್ಯಾಯ ಮಾಡಿದೆ? ಅವನು ದಕ್ಷಿಣದಲ್ಲಿ ಕೂಡ ಸಮ್ರಾಜ್ಯದ ಘನತೆಯನ್ನು ಎತ್ತರಕ್ಕೆ ಏರಿಸಿದ. ಇಂತಹ ಸ್ವಾಮಿನಿಷ್ಠ ಸರದಾರನಿಗೆ ಯಾಕೆ ಅವಮಾನ ಮಾಡುತ್ತಿ? ನಿನ್ನ ಈ ರೀತಿಯ ವ್ಯವಹಾರದಿಂದ ನಮ್ಮ ಬಹಳಷ್ಟು ಸರದಾರರು ನಿನ್ನ ಬಗ್ಗೆ ಅತೃಪ್ತರಾಗಿದ್ದಾರೆ. ಸರದಾರರು ನಿನ್ನ ವೈರಿಗಳಾಗಿದ್ದಾರೆ. ನಿನ್ನ ಮೇಲೆ ತಿರುಗಿ ಬಿದ್ದಿದ್ದಾರೆ. ಅವನ ಸ್ವಾಮಿನಿಷ್ಠೆಗೆ ತಕ್ಕ ಗೌರವನೀಡು. ಅವನನ್ನು ಕರೆದು ಅವನಿಗೆ ತಕ್ಕ ಸನ್ಮಾನ ಮಾಡು. ಅವನು ಸ್ವಲ್ಪದಿನಗಳ ಕಾಲ ಆರಾಮ ಮಾಡಿ ಮತ್ತೆ ನಿನ್ನ ಸೇವೆಯಲ್ಲಿ ತಯಾರಾಗಿರುತ್ತಾನೆ' ಎಂದು ಹೇಳಿದಳು. ಸುಲ್ತಾನ್ ಸಲೀಮ ಓರ್ವ ದೊಡ್ಡ ಸರದಾರನನ್ನು ಅವನ ಬಳಿ ಕಳುಹಿಸಿ ಅವನ ಕ್ಷಮೆಯಾಚಿಸಿ ಕರೆದು ತನ್ನಿ ಎಂಬ ಸಂದೇಶವನ್ನು ಕಳುಹಿಸಿದ. ಆ ಸರದಾರ ತುಂಬ ಪ್ರಯತ್ನ ಪಟ್ಟರೂ ಖಾನೆ ಖಾನಾನ್ ಈ ರಾಜಿ ಸೂತ್ರಕ್ಕೆ ಒಪ್ಪಲಿಲ್ಲ.

ಮರುದಿನ ಬಾದಶಾಹ ತನ್ನ ತಂದೆ ಅಕ್ಬರ್ ಬಾದಶಾಹನ ಗೋರಿಯ ಬಳಿ ಝಿಯಾರತ್‌ಗೆ (ಆರಾಧನೆಗೆ) ಹೋಗಿದ್ದ. ಅವನ ಬಗ್ಗೆ ಖಾನೆಖಾನಾನ್ ಬಹಳ ಗೌರವಪಟ್ಟುಕೊಂಡಿದ್ದ. ಸುಲ್ತಾನ್ ಪರ್ವೇಜನ ಸೈನ್ಯವು ಕಾಲ್ನಡಿಗೆ ಮತ್ತು ಕೆಲವು ಸವಾರಿ ಕುದುರೆಗಳಲ್ಲಿ ಪ್ರಯಾಣಿಸುತ್ತ ಬಹಳ ಸಂಕಷ್ಟಪಟ್ಟುಕೊಂಡು ಆಮೇರ್ ಮತ್ತು ಬುರ್ಹಾನ್‌ಪುರ ಕಡೆ ತಲಪಿದರು. ಇವರು ಅನಾರೋಗ್ಯ ನಿತ್ರಾಣವಾಗಿ ಸೋತು ಸುಣ್ಣವಾಗಿದ್ದರು. ಸುಲ್ತಾನ್ ಪರ್ವೇಜ್ ತನ್ನ ಆಪ್ತರೊಂದಿಗೆ ಆಮೇರ್ ಕೋಟೆಯಲ್ಲಿ ನೆಲೆಸಿದ. ಸೈನಿಕರು ಕೋಟೆಯ ಬಳಿ ಬಂದು ತಲಪಿದಾಗ ದಕ್ಷಿಣದ ರಾಜರ ಸೈನ್ಯವು ಕೂಡ ವಾಪಸಾದವು. ತನ್ನ ಅಧಿಕಾರಿಗಳನ್ನು ಕೆಲಸಕಾರ್ಯಗಳಲ್ಲಿ ತೊಡಗಿರಲು ಆದೇಶಿಸಿದ. ಸುಲ್ತಾನ್ ಸಲೀಮನ ಕೊನೆಯ ಆದೇಶವನ್ನು ನಿರೀಕ್ಷಿಸುತ್ತಿದ್ದರು.

**ಅಹ್ಮದ್ ನಗರವನ್ನು ಜಯಿಸುವುದು ಮತ್ತು ನಿಜಾಂ ಶಾಹ ದೌಲತಾಬಾದಿಗೆ ಪ್ರಯಾಣ, ಅಲ್ಲಿದ್ದು ವೈರಿಗಳ ವಿರುದ್ಧ ಯುದ್ಧ ಹೂಡುವ ವಿವರಗಳು:**

ಬಹಳ ಕಾಲದ ತನಕ ಅಹ್ಮದ್ ನಗರವು ನಿಜಾಂ ಶಾಹನ ಆಳ್ವಿಕೆಯಲ್ಲಿ ಇತ್ತು. ಇದನ್ನು ಮೊಘಲರು ವಶಪಡಿಸಿಕೊಂಡಿದ್ದರು. ಆ ಕಾಲದಲ್ಲಿ ಇವರ ಪ್ರತಿನಿಧಿಯಾಗಿ ಖ್ವಾಜಾ ಬೇಗ್ ಮಿರ್ಜಾ ಅಲ್ಲಿನ ಆಳ್ವಿಕೆಯನ್ನು ನೋಡಿಕೊಳ್ಳುತ್ತಿದ್ದ. ಮೊಘಲರು ದಕ್ಷಿಣದ ಸುಲ್ತಾನರ ಮೇಲೆ ದಾಳಿನಡೆಸಿದಾಗ ಅವನನ್ನು ಅಹ್ಮದ್ ನಗರಕ್ಕೆ ಕಳುಹಿಸಲಾಗಿತ್ತು. ಪ್ರತೀದಿನ ಅಹ್ಮದ್ ನಗರದಲ್ಲಿ ಆಳುವ ಮೊಘಲರು ಮತ್ತು ದಕ್ಷಿಣದ ಸುಲ್ತಾನರ ಮಧ್ಯೆ ಯುದ್ಧ ನಡೆಯುತ್ತಲೇ ಇತ್ತು. ಬಹಳ ಕಾಲದಿಂದ ಯುದ್ಧ ನಡೆಯುತ್ತಿದ್ದರಿಂದ ಕೂಡಿಟ್ಟ ಆಹಾರ ದಾಸ್ತಾನು ಖಾಲಿಯಾಗಿ ಕೋಟೆಯವರು ಕೊನೆಯಲ್ಲಿ ಅತ್ಯಂತ ಹೆಚ್ಚು ಸಂಕಷ್ಟಕ್ಕೊಳಗಾದರು. ಹತಾಶರಾಗಿ ಈ ಸಂಕಷ್ಟದಿಂದ ಪಾರಾಗುವ ಸಲುವಾಗಿ ದಕ್ಷಿಣದ ಸುಲ್ತಾನರ ವಶಕ್ಕೆ ಮೊಘಲರು ಒಪ್ಪಿಸಬೇಕಾಗಿ ಬಂತು. ಈ ಕೋಟೆಯನ್ನು ಒಪ್ಪಿಸಿ ಮೊಘಲರು ಶಹಜಾದ(ರಾಜಕುಮಾರ)ನ ಬಳಿಗೆ ಹೋದರು.

ಅಹ್ಮದ್ ನಗರದವರು ಕೋಟೆಯನ್ನು ಪಡೆದ ಬಳಿಕ ಅಲ್ಲಿನ ಮೂಲಭೂತ ಅವಶ್ಯಕತೆಗಳನ್ನು ಪೂರೈಸುವ ಕಡೆ ಹೆಚ್ಚಿನ ಧ್ಯಾನ ನೀಡಿದರು. ನೀರಿನ ವ್ಯವಸ್ಥೆ ಮಾಡಿದರು. ಹಿಂದೆ ಮೊಘಲರು ಮತ್ತು ದಕ್ಷಿಣದ ಸುಲ್ತಾನರ ಮಧ್ಯೆ ಯುದ್ಧ ನಡೆಯುತ್ತಿದ್ದಾಗ ಷಾ ಅಲಿ ನಿಜಾಂ ಶಾಹನು ಜುನೇರ್ ಕೋಟೆಯಲ್ಲಿ ನೆಲೆಸಿದ್ದ. ಇದೇ ಸಮಯದಲ್ಲಿ ನಿಜಾಂ ಶಾಹ ದೌಲತಾಬಾದಿಗೆ ಪಯಣಮಾಡಿದ್ದ. ಆಗ ತನ್ನ ರಾಜಧಾನಿಯನ್ನಾಗಿ ಅಹ್ಮದ್ ನಗರವನ್ನು ಮಾಡಿಕೊಂಡಿದ್ದ. ಮೊಘಲರು ಅಹ್ಮದ್ ನಗರಕ್ಕೆ ದಾಳಿ ನಡೆಸುವುದು ಕಷ್ಟಸಾಧ್ಯವೆಂದು ಹೀಗೆ ವ್ಯವಸ್ಥೆ ಮಾಡಿಕೊಂಡಿದ್ದ. ದಕ್ಷಿಣದ ಸುಲ್ತಾನರು ಕೂಡ ತಮ್ಮ ಆಸುಪಾಸಿನ ಪ್ರದೇಶಗಳ ಇಲಾಖೆಯಲ್ಲಿ ಲೂಟಿ ನಡೆಸುತ್ತಿದ್ದರು. ಅಲ್ಲಿನ ಆಹಾರ ಧಾನ್ಯಗಳನ್ನು ಹೊತ್ತೊಯ್ಯುತ್ತಿದ್ದರು. ಮೊಘಲರ ವಶವಾಗಿದ್ದ ಪ್ರದೇಶಗಳ ತೆರಿಗೆಯನ್ನು ದಕ್ಷಿಣದವರು ನೀಡುತ್ತಿರಲಿಲ್ಲ. ಮೊಘಲರು ಬರಗಾಲದಿಂದಾಗಿ ಸಂಕಷ್ಟಕ್ಕೊಳಗಾದರು. ಅಲ್ಲಾಹನಿಂದ ದುವಾ ಪ್ರಾರ್ಥನೆ ಮಾಡುತ್ತಿದ್ದರು. ಈ ಬರಗಾಲ ಸಹಿಸಲಾರದ ಮೊಘಲರು ಬಾದಶಾಹನ ಬಳಿ ನಡೆದರು. ತಮಗೆ ಎದುರಾದ ಪರಿಸ್ಥಿತಿಗಳ ಬಗ್ಗೆ ಬಾದಶಾಹನಿಗೆ ತಿಳಿಸಿದರು. ದರ್ಬಾರಿಗಳು ಈ ಸಂಗತಿಗಳನ್ನು ಕೇಳಿ ಭಯಪಟ್ಟರು. ಇನ್ನು ಮುಂದೆ ಸೈನ್ಯವನ್ನು ಕಳುಹಿಸುವ ನಿರ್ಧಾರವನ್ನು ಕೈಬಿಟ್ಟರು. ಹೀಗೆ ಒಂದು ವರ್ಷಗಳ ತನಕ ಯಾರೂ ದಕ್ಷಿಣ ಭಾರತದ ಕಡೆ ದಂಡಯಾತ್ರೆಗೆ ಹೋಗುವ ವಿಚಾರ ಎತ್ತಿರಲಿಲ್ಲ. ಕೆಲವು ಕಾಲದ ನಂತರ ಸುಲ್ತಾನ್ ಸಲೀಮ್ ಶಿಕಾರಿಗಾಗಿ ಆಕಡೆಯ ಸರಹದ್ದಿನ ಬಳಿ

ಹೋದ. ಅಲ್ಲಿನ ಪರಿಸ್ಥಿತಿಯನ್ನು ಕೂಲಂಕುಷವಾಗಿ ತಿಳಿಯುವುದಕ್ಕೆ ಪ್ರಯತ್ನಪಟ್ಟ. ದರ್ಬಾರಿಗಳಿಗೆ 'ನಾನು ಅಲ್ಲಿಗೆ ಹೋಗುವ ತನಕ ಈ ದಕ್ಷಿಣದ ಸಮಸ್ಯೆ ಬಗೆಹರಿಯಲಾರದು' ಎಂದು ಹೇಳಿ ತನ್ನ ಮಹತ್ವಾಕಾಂಕ್ಷೆಯನ್ನು ತೋಡಕೊಂಡಿದ್ದ. ಅವನು ಖಾನೆ ಆಜಂ ಮಿರ್ಜಾ ಗೋಗನನ್ನು ಈ ಕೆಲಸದ ಜವಾಬ್ದಾರಿ ಹೊರಲು ಹೇಳಿದ. ಅವನು ಈ ಕೆಲಸಕ್ಕೆ ಒಪ್ಪಲಿಲ್ಲ. ಒಂದಲ್ಲ ಒಂದು ಸಬೂಬು ಹೇಳಿ ಜಾರಿಕೊಳ್ಳುತ್ತಿದ್ದ. ಸುಲ್ತಾನ್ ಸಲೀಮ ಅವನ ಮಾತಿನಿಂದ ನಿರಾಸೆಪಟ್ಟಿದ್ದ. ಸುಲ್ತಾನ ಸಲೀಮ್ ಯೋಚನೆಯಲ್ಲಿ ಬಿದ್ದುಕೊಂಡ. 'ದೊಡ್ಡ ದೊಡ್ಡ ಸರದಾರರು, ಸೇನಾನಿಗಳು ಆಸಿಫ್ ಖಾನ್, ಖಾನೆ ಖಾನಾನ್, ಖಾನ್ ಜಹಾನ್, ಮಾನ್‌ಸಿಂಗ್ ಸೈನ್ಯವನ್ನು ಹಿಡಿದುಕೊಂಡು ದಂಡಯಾತ್ರೆಗೆ ಹೋಗಿದ್ದಾರೆ. ಅವರು ಈಗಲೂ ಅಲ್ಲಿಯೇ ಇದ್ದಾರೆ. ಅವರು ಮುಂದೆಯಾಗಲಿ ಹಿಂದೆಯಾಗಲಿ ಬರುವಂತಿಲ್ಲ. ಅವರೀಗ ಯಾವ ಪರಿಸ್ಥಿತಿಯಲ್ಲಿದ್ದಾರೆನ್ನುವುದು ನಮಗೆ ತಿಳಿದಿಲ್ಲ. ದಕ್ಷಿಣದವರು ಒಂದು ವರ್ಷದಿಂದ ಬಹಳ ಆರಾಮವಾಗಿದ್ದಾರೆ. ಹಲವು ಕೋಟೆಗಳು ಕೂಡ ಅವರ ವಶದಲ್ಲಿವೆ. ತಮ್ಮ ರಾಜ್ಯಗಳಲ್ಲಿ ಅಭಿವೃದ್ಧಿ ಕೆಲಸಗಳನ್ನು ಮಾಡಿಕೊಂಡಿದ್ದಾರೆ' ಎಂದು ಸಲೀಮ್ ತನ್ನ ದರ್ಬಾರಿಗಳ ಮುಂದೆ ತೋಡಿಕೊಂಡಿದ್ದ.

ಖಾನೆ ಆಜಂನ ಜೊತೆಗಾರರು ಅವನಿಗೆ 'ನೀನು ಬಾದಶಾಹನ ಮಾತುಗಳನ್ನು ತಿರಸ್ಕರಿಸಿ ಅವನು ಸಿಟ್ಟಾಗಿ ನಿನ್ನ ಐವತ್ತು ವರ್ಷಗಳ ಕಾಲದ ಸೇವೆ ನಿರರ್ಥಕವಾಗಿ ಪರಿಣಮಿಸಬಹುದು. ನೀನು ಸ್ವಲ್ಪ ದಿನಗಳ ಕಾಲ ಸುಮ್ಮನಿದ್ದು ಕಾಯುತ್ತಿರು, ಮುಂದೇನಾಗುತ್ತದೆಂದು ನೋಡೋಣ' ಎಂದು ಸಲಹೆ ನೀಡಿದರು. ಕೊನೆಗೆ ಕೆಲವು ವಿಚಾರ ವಿಮರ್ಶೆ ಮಾಡಿ ನಿರ್ಧಾರಕ್ಕೆ ಬಂದ ಬಳಿಕ ಖಾನೆ ಆಜಂ 'ಜಿಹಾದ್ ಎ ದಖನ್' ಅಥವಾ ದಕ್ಷಿಣದ ಮೇಲೆ ಧರ್ಮಯುದ್ಧಕ್ಕೆ ಹೊರಡುವುದಕ್ಕೆ ಒಪ್ಪಿ ಪ್ರಯಾಣಕ್ಕೆ ಶುರುಮಾಡಿದ. ಈ ಕಾಲ ಹಿಜರಿ ವರ್ಷ ೧೦೨೦ರ ರಬೀಯುಲ್ ಅವ್ವಲ್ ತಿಂಗಳಾಗಿತ್ತು. ಮೊದಲು ಶಹಜಾದ ಪರ್ವೇಜ್‌ನನ್ನು ಭೇಟಿಯಾಗಲು ಆಮೇರ್‌ಗೆ ಹೋಗಿ ನಂತರ ಹತ್ತು ಸಾವಿರ ಸೈನಿಕರನ್ನು ತನ್ನಲ್ಲಿರುವ ಹಳೆಯ ಸೈನಿಕರನ್ನೂ ಜೊತೆಗೆ ಸೇರಿಸಿಕೊಂಡು ಹೊರಟ. ಈ ಮಧ್ಯೆ ನಾಲ್ಕೂ ನಿಟ್ಟಿನಲ್ಲಿರುವ ನದಿಗಳು ತುಂಬಿಕೊಂಡಿದ್ದವು. ಮುಂದುವರಿಯುವುದು ಕಷ್ಟವಾಗಿ ಅಲ್ಲಿ ನಿಂತುಬಿಟ್ಟ. ನಂತರ ಅಂಬರ್ ಜಪ್ಪು ಮತ್ತು ನಿಜಾಂ ಶಾಹರನ್ನು ಎದುರಿಸಲು ದೌಲತಾಬಾದಿಗೆ ತೆರಳಿದ. ಆ ಸಮಯದಲ್ಲಿ ನಿಜಾಂ ಶಾಹ ನಾರಿಕೋಟೆಯಲ್ಲಿದ್ದ. ನಾರಿಕೋಟೆಯ ಕಾವಲುಗಾರನ ಮೂಲಕ ಆಲಂಪನಾನಿಗೆ ಕೊಡುಗೆ ಇನಾಮುಗಳನ್ನು ಕಳುಹಿಸಿ ತಮ್ಮ ಮಧ್ಯೆ ಇರುವ ವೈರತ್ವವನ್ನು ತೆಳುವಾಗಿಸಲು ಪ್ರಯತ್ನಿಸಿದ. ಕೊನೆಯಲ್ಲಿ ತಮ್ಮ ಮಧ್ಯೆ ಸಂಧಾನಮಾಡಿಕೊಂಡು ಶಾಂತಿ ಸೌಹಾರ್ದತೆ ಕಾಪಾಡಿಕೊಳ್ಳುವ ನಿಟ್ಟಿನಲ್ಲಿ ಒಪ್ಪಿಕೊಂಡರು. ಅಲ್ಲಾಹನೇ ಬಲ್ಲ

ಅಲ್ಲಿ ನಡೆದ ಮುಂದಿನ ಸಂಗತಿಗಳ! ಅಲ್ಲಾಹನ ಕೃಪೆಯಿಂದ ಈ ಪುಸ್ತಕವನ್ನು ಇಲ್ಲಿಗೆ ಮುಗಿಸುತ್ತಿದ್ದೇನೆ. ರಮಜಾನ್ ೧೯ನೇ ದಿನಾಂಕ (ಹಿಜರಿ ವರ್ಷ ಇಲ್ಲಿ ನೀಡಿಲ್ಲ)

(ಪುಟ ೩೬೮ ಸಂಪೂರ್ಣ ಕಾಣಿಸದೆ ಕರ್‍ರಾಗಾಗಿದೆ)

**ಮುಕ್ತಾಯ**

ಇಲ್ಲಿ ನಾನು ನೋಡಿದ, ಕೇಳಿದ ವಿಶ್ವದ ಕೆಲವು ಸೋಜಿಗದ ಮತ್ತು ವಿಶಿಷ್ಠ ಸಂಗತಿಗಳನ್ನು ಇಲ್ಲಿ ದಾಖಲು ಮಾಡುತ್ತಿದ್ದೇನೆ. ಅವುಗಳಲ್ಲಿ ಹಫ್ತುವಾದ್ ಕಿರಮ್ ಮತ್ತು ದಾಸ್ತಾನೆ ಮಹಬೂದ್ ಜಹೂದರ ಕತೆ ಇದೆ. ಇದನ್ನು ಫಿರ್‌ದೌಸಿ ತನ್ನ 'ಶಾಹ ನಾಮಾ' ಕೃತಿಯಲ್ಲಿ ಬರೆದಿದ್ದಾನೆ. ಇದು ಐತಿಹಾಸಿಕ ಕತೆಯಾದುದರಿಂದ ಇದನ್ನು ನಾನಿಲ್ಲಿ ಬರೆಯುವ ಇಚ್ಛೆಯಾಯಿತು. 'ದಾಸ್ತಾನೆ ಹಫ್ತ್ ವಾದ್ ಒ ಕಿರಮ್' (ಹಫ್ತ್‌ವಾದ್ ಮತ್ತು ಕ್ರಿಮಿಯೊಂದರ ಕತೆ) ಎಂಬುದು ಬೈಬಲ್ಲಿನ ಕಾಲದ ಕತೆಯಾಗಿದೆ. ತೆಹರಾನ್ ನಗರ ಮತ್ತು ಫಾರಸ್(ಇರಾನ್) ದೇಶದ ಗಡಿಯ ಮಧ್ಯದಲ್ಲಿ ದೊಡ್ಡಮರುಭೂಮಿ ಇತ್ತು. ಈ ಮರುಭೂಮಿಯ ಮಧ್ಯದಲ್ಲಿ ತೆಹರಾನ್ ಎಂಬ ನಗರವಿದೆ. ಜನರು ಈ ನಗರಕ್ಕೆ ಕೂಲಿ ಕೆಲಸಕ್ಕಾಗಿ ದಿನವೂ ಹೋಗಿ ಬರುತ್ತಿದ್ದರು. ಅಲ್ಲೊಂದು ಪರ್ವತವಿತ್ತು. ಬಹಳಷ್ಟು ಸಂಖ್ಯೆಯಲ್ಲಿ ಯುವತಿಯರು ಈ ಪರ್ವತದತ್ತ ಕೆಲಸಕ್ಕಾಗಿ ಹೋಗುತ್ತಿದ್ದರು. ಹಿಂತಿರುಗಿ ಬರುವಾಗ ಆಹಾರವನ್ನು ತರುತ್ತಿದ್ದರು. ಆ ನಗರದಲ್ಲಿ ಓರ್ವ ವ್ಯಕ್ತಿ ಇದ್ದ. ಅವನು ಕೆಲಸಗಾರನಾಗಿ ಬಹಳ ದೀನಾವಸ್ಥೆಯಲ್ಲಿದ್ದ. ಅವನ ಹೆಸರು ಹಫ್ತವಾದ್ ಎಂದಾಗಿತ್ತು. ಇವನಿಗೆ ಏಳು ಗಂಡು ಮಕ್ಕಳಿದ್ದರು. ಹಳೆಯ ಫಾರಸಿಯಲ್ಲಿ ಗಂಡು ಮಗನನ್ನು 'ವಾದ್' ಎಂದು ಕರೆಯಲಾಗುತ್ತದೆ. ಅವನಿಗೆ ಒಬ್ಬಳು ಮಗಳಿದ್ದಳು. ಅವಳು ಯಾರಿಗೂ ಇಷ್ಟವಾಗಿರಲಿಲ್ಲ. ಒಂದು ದಿನ ಹಫ್ತ್‌ವಾದನ ಮಗಳು ಬೇರೆ ಇನ್ನಿತರ ಹುಡುಗಿಯರ ಜೊತೆಗೆ ಒಂಟೆಯ ಗಾಡಿಯಲ್ಲಿ ಕೂತು ಕೆಲಸಕ್ಕೆ ಹೋಗುತ್ತಿದ್ದಳು. ತನ್ನ ಬಳಿಯಲ್ಲಿದ್ದ ಆಹಾರವನ್ನು ತಿನ್ನುತ್ತಿದ್ದಳು. ಫಕ್ಕನೆ ಒಂದು ಸೇಬುಹಣ್ಣು ಮರದಿಂದ ಅವಳ ಮಡಿಲಿಗೆ ಬಿತ್ತು. ಅವಳು ಆ ಸೇಬನ್ನು ಚಾಕಿನಿಂದ ತುಂಡರಿಸುವಾಗ ಮಧ್ಯಭಾಗದಲ್ಲಿ ಒಂದು ಅತ್ಯಂತ ಸುಂದರ ಕ್ರಿಮಿಯೊಂದು ಹೊರಬಂತು. ಅದು ಆ ಕ್ರಿಮಿಯ ಮೇಲೆ ಕನಿಕರಪಟ್ಟು ಅದನ್ನು ನಾಜೂಕಾಗಿ ಹಿಡಿದು ತನ್ನ ಸರಗಿನ ಕೊನೆಯಲ್ಲಿ ಕಟ್ಟಿಕೊಂಡಳು. ಅವಳು ಆ ಕ್ರಿಮಿಯೊಂದಿಗೆ ಮಾತಾಡುತ್ತಿದ್ದಳು. ಅವಳ ಜೊತೆಗಿದ್ದ ಗೆಳತಿಯರು ಇದನ್ನು ಕಂಡು ಆಶ್ಚರ್ಯ ಪಟ್ಟುಕೊಂಡರು. ನಂತರ ಪರ್ವತದ ಮೂಲೆಯೊಂದರಲ್ಲಿರುವ ತನ್ನ ಮನೆಗೆ ಹೋಗಿ ತಾಯಿಯ ಬಳಿಗೆ ಬಂದಳು. ಮಗಳು ಎಂದಿನಂತೆ ಅನ್ಯಮನಸ್ಕಳಾಗಿರದೆ

ಸಂತೋಷದಲ್ಲಿರುವುದನ್ನು ಕಂಡು ತಾಯಿ ಸಂತಸಪಟ್ಟುಕೊಂಡಳು. ಅವಳು ತನ್ನ ಗೆಳತಿಯರೊಂದಿಗೆ ಮರುದಿನ ಎಂದಿನಂತೆ ಗಾಡಿಯಲ್ಲಿ ಕೂತು ಕೊಹಿಸ್ತಾನಕ್ಕೆ ಕೆಲಸಕ್ಕೆ ಹೊರಟಳು.

ಅವಳು ತನ್ನ ಜೊತೆಗೆ ಹತ್ತಿಯ ಉಂಡೆಯನ್ನು ನೂಲು ಮಾಡುವುದಕ್ಕಾಗಿ ಕೊಂಡುಹೋಗಿದ್ದಳು. ಕೆಲಸಕ್ಕೆ ಕೂತು ಹತ್ತಿಯಿಂದ ನೂಲು ಮಾಡುತ್ತಿರುವಾಗ ಅತ್ಯಂತ ಹೆಚ್ಚು ನೂಲು ಮಾಡಿದ್ದಳು. ಸಂಜೆ ತನ್ನ ಗೆಳತಿಯರು ಇಷ್ಟೊಂದು ನೂಲನ್ನು ಹೇಗೆ ಮಾಡಿದಿ ಎಂದು ಕೇಳಿದಾಗ ತನಗೆ ಸಿಕ್ಕಿದ ಕ್ರಿಮಿಯು ಇದನ್ನೆಲ್ಲ ಸಾಧ್ಯಮಾಡಿಕೊಟ್ಟಿದೆ. ನನಗೆ ಇನ್ನು ಮುಂದೆ ಹೆಚ್ಚು ಕೆಲಸ ಮಾಡಬೇಕಾಗಿಲ್ಲ. ನನಗೆ ಕ್ರಿಮಿಯ ಭಾಗ್ಯದಿಂದ ಬಹಳಷ್ಟು ಸಹಾಯವಾಗುತ್ತದೆ ಎಂದಳು. ಅವಳು ತಾನು ಮಾಡಿದ ನೂಲಿನ ಉಂಡೆಗಳನ್ನು ತನ್ನ ತಾಯಿಯ ಮುಂದೆ ಇಟ್ಟಳು. ಅವಳಿಗೆ ಮಗಳು ಇಷ್ಟೊಂದು ನೂಲನ್ನು ಮಾಡಿರುವುದು ಕಂಡು ಸಂತಸಪಟ್ಟಳು. ಹುಡುಗಿ ತನ್ನಲ್ಲಿದ್ದ ಕ್ರಿಮಿಗೆ ಬೆಳಿಗ್ಗೆ ಒಂದು ತುಂಡು ಸೇಬನ್ನು ತಿನ್ನಲು ಕೊಡುತ್ತಿದ್ದಳು. ಕ್ರಿಮಿಗೆ ಹೀಗೆ ತಿನ್ನಿಸಿದ್ದರಿಂದ ಅವಳಲ್ಲಿ ನೂಲಿನ ಉಂಡೆಗಳು ಹೆಚ್ಚುತ್ತ ಹೋದವು. ಅವಳ ತಂದೆ ತಾಯಿ ಬಹಳ ಆಶ್ಚರ್ಯ ಚಕಿತರಾಗುತ್ತಿದ್ದರು. ಅವರು ಇಷ್ಟೊಂದು ನೂಲಿನ ಉಂಡೆಗಳನ್ನು ಮಾಡಲು ನಿನಗೆ ಹೇಗೆ ಸಾಧ್ಯವಾಯಿತೆಂದು ವಿಚಾರಿಸಿದರು. ತನ್ನ ಬಳಿಗೆ ಒಬ್ಬ ಪರಿಝಾದ(ಗಂಧರ್ವಕುವರ) ತನ್ನ ಬಳಿಗೆ ದಿನವೂ ಬಂದು ನನಗೆ ನೂಲನ್ನು ಮಾಡಿಕೊಡುತ್ತಾನೆಂದು ಹೇಳಿದಳು. ಹೀಗೆ ಕ್ರಿಮಿ ಹಫ್‌ವಾದಾಳಿಗೆ ಸಹಾಯ ಮಾಡುತ್ತಿತ್ತು. ಹಫ್‌ದಾದ ಯಾವುದೇ ಕೆಲಸ ಮಾಡುವಾಗಲೂ ಕ್ರಿಮಿ ಸಹಾಯ ಮಾಡಿ ಕೆಲಸ ಸುಲಭಸಾಧ್ಯವಾಗುವಂತೆ ಮಾಡುತ್ತಿತ್ತು. ಅವಳು ಮಾಡುವ ಪ್ರತೀ ಕೆಲಸಗಳಲ್ಲೂ ವೃದ್ಧಿಯಾಗುತ್ತಿತ್ತು. ಅವಳು ತನ್ನ ಕೆಲಸ ಮುಗಿದ ನಂತರ ಒಂದು ಕೋಲಿನಲ್ಲಿ ಕೂರಿಸುತ್ತಿದ್ದಳು. ಆ ಕೋಲಿನಲ್ಲಿ ಒಂದು ಅದ್ಭುತವಾದ ಬೆಳಕು ಮೂಡುತ್ತಿತ್ತು. ಕ್ರಿಮಿಯ ದೆಸೆಯಿಂದ ಅವಳಿಗೆ ಬಹಳಷ್ಟು ಭಾಗ್ಯಗಳು ಒಲಿದು ಬರುತ್ತಿತ್ತು. ಅವಳು ಈ ಕ್ರಿಮಿಯನ್ನು ಬಹಳ ವಾತ್ಸಲ್ಯದಿಂದ ಲಾಲನೆ ಪಾಲನೆ ಮಾಡುತ್ತಿದ್ದಳು. ದಿನಗಳು ಕಳೆದಂತೆ, ವರ್ಷಗಳುರುಳಿದಂತೆ ಕ್ರಿಮಿಯು ಬೆಳೆದು ದೊಡ್ಡ ಜಿನ್(ಅದೃಷ್ಯ ಕಾಯ) ಆಯಿತು. ಈ ಜಿನ್ ವಾಸಿಸಲು ಒಂದು ದೊಡ್ಡ ಕಪ್ಪು ಪೆಟ್ಟಿಗೆಯನ್ನು ರಚಿಸಿದಳು. ಅವಳು ಈ ಜಿನ್ನನ್ನು ಪೆಟ್ಟಿಗೆಯೊಳಗೆ ಪೋಶಿಸಿ ಅದರಲ್ಲಿ ಅರೈಕೆ ಮಾಡುತ್ತಿದ್ದಳು. ಜಿನ್ ಆ ಪೆಟ್ಟಿಗೆಯೊಳಗೆ ತುಂಬ ಆರಾಮವಾಗಿ ಇರುತ್ತಿತ್ತು. ಹಫ್ತ್‌ವಾದನ ಬಗ್ಗೆ ನಗರದಲ್ಲಿ ಪ್ರಚಾರವಾಗಿ ಜನಪ್ರಿಯತೆ ಗೌರವ ಗಳಿಸಿದಳು. ನಗರದವರು ತಮ್ಮ ಸಂಕಷ್ಟಗಳನ್ನು ಹೇಳಿಕೊಂಡು ಬರುತ್ತಿದ್ದರು ಯಾಕೆಂದರೆ ಅವನ ಬಳಿ ಬಹಳ ಸಂಪತ್ತು ಜಮೆಯಾಗಿತ್ತು. ಅವನ ಏಳು ಮಕ್ಕಳು ಕೂಡ

ಶ್ರೀಮಂತರಾಗಿದ್ದರು. ಅಲ್ಲಿ ಓರ್ವ ಬಾದಶಾಹ ಅಲ್ಲಿನ ರಾಜ್ಯವನ್ನು ಆಳುತ್ತಿದ್ದ. ಅವನ ಬಳಿ ದೊಡ್ಡ ಸೈನ್ಯವಿತ್ತು. ಊರ ಶ್ರೀಮಂತನೆನಿಸಿದ ಹಫ್ತ್‌ವಾದನಿಂದ ಜಿಝಿಯಾ ತೆರಿಗೆ ವಸೂಲಿಮಾಡಲು ನಿಶ್ಚಯಿಸಿದ. ಹಫ್ತ್‌ವಾದನಿಗೆ ಇದು ತಿಳಿದಾಗ ತನ್ನ ಮಕ್ಕಳನ್ನು ಸೇರಿಸಿ ಒಂದು ದೊಡ್ಡ ಸೈನ್ಯ ಕಟ್ಟಿಕೊಂಡು ಅವನ ಮೇಲೆ ಯುದ್ಧಕ್ಕೆ ತಯಾರಾದ. ಎಲ್ಲರೂ ಸೇರಿ ಬಾದಶಾಹನನ್ನು ಸೋಲಿಸಿದರು ಮತ್ತು ಅವನ ತೆಹರಾನ್ ನಗರವನ್ನು ಲೂಟಿ ಮಾಡಿದರು. ಅವನ ಖಜಾನೆ, ಬೆಲೆಬಾಳುವ ವಜ್ರ ವೈಢೂರ್ಯ ಸಂಪತ್ತುಗಳನ್ನು ಲೂಟಿಮಾಡಿದರು. ತಾವಿರುವ ಪರ್ವತ ಪ್ರದೇಶಕ್ಕೆ ಕೊಂಡೊಯ್ದರು. ಅಲ್ಲಿ ಒಂದು ದೊಡ್ಡದಾದ ಬಲಿಷ್ಠ ಕೋಟೆಯೊಂದನ್ನು ಕಟ್ಟಿಕೊಂಡರು. ಅದರ ಗೋಡೆ ಆವರಣಗಳನ್ನು ಬಲಿಷ್ಠವಾಗಿ ಕಟ್ಟಿದರು. ಆ ಕ್ರಿಮಿಗಾಗಿ ಕೋಟೆಯೊಳಗೆ ಒಂದು ಮಹಲು ನಿರ್ಮಿಸಿ ಅದರೊಳಗೆ ಅದು ಆರಾಮವಾಗಿರುವಂತೆ ಮಾಡಿದರು. ಅಲ್ಲಿಗೆ ಯಾರೂ ಬಾರದಂತೆ ದಾಳಿ ನಡೆಸದಂತೆ ರಕ್ಷಣೆಯನ್ನೂ ನೀಡಿದ್ದರು.

ಮಹಲಿನಲ್ಲಿ ನೀರಿನ ಝುರಿ, ಕೊಳಗಳು, ಕಾಲುವೆಯನ್ನು ಆ ಕ್ರಿಮಿಗಾಗಿ ನಿರ್ಮಿಸಿದ್ದರು. ಇದಕ್ಕೆ ನಾಲ್ಕೂ ದಿಕ್ಕಿನಲ್ಲಿ ರಕ್ಷಣಾತ್ಮಕ ಗೋಡೆಗಳನ್ನು ನಿರ್ಮಿಸಿದ್ದರು. ಆ ಕ್ರಿಮಿಯು ದೊಡ್ಡದಾಗುತ್ತ ಬಂದು ಆ ಪೆಟ್ಟಿಗೆಯು ಅದಕ್ಕೆ ಜಾಗ ಸಾಲದೆ ಕೋಟೆಯೊಳಗೆ ಒಂದು ಕಲ್ಲು ಬಂಡೆಗಳಿಂದ ದೊಡ್ಡ ಸರೋವರವನ್ನು ನಿರ್ಮಿಸಿದರು. ಅದರ ಆರೈಕೆಗಾಗಿ ಅನೇಕ ನೌಕರರು ಚಾಕರರನ್ನು ಇರಿಸಿದ್ದರು. ಇದಾದ ಐದು ವರ್ಷಗಳ ಬಳಿಕ ಕ್ರಿಮಿಯು ಬೆಳೆದು ದೊಡ್ಡ ಆನೆಯಂತಾಯಿತು. ಇದರಿಂದಾಗಿ ಈ ಕ್ರಿಮಿಯ ಹೆಸರನ್ನು ಆ ಪ್ರದೇಶಕ್ಕೆ ಇಟ್ಟು 'ಕಿರ್ಮಾನ್' ಎಂದು ಕರೆಯಲಾಯಿತು. ಈ ಜನರು ಆ ಕ್ರಿಮಿಯ ಸರದಾರರಾಗಿ ಮಾರ್ಪಟ್ಟರು. ಆ ಕ್ರಿಮಿಯನ್ನು ದಿನವೂ ಸಿಂಗರಿಸಿದರು. ಅದಕ್ಕೆ ಹಾಲು, ಜೇನುಗಳನ್ನು ನೀಡತೊಡಗಿದರು. ಹಫ್‌ದಾದ್ ಈ ಕ್ರಿಮಿ ಮುಖ್ಯ ಸೇನಾನಿಯಾದ. ಅವನ ಘನತೆ ಗೌರವ ಎಷ್ಟೊಂದು ಬೆಳೆಯಿತೆಂದರೆ ಎಲ್ಲರೂ ಕೂಡ ಆ ಕೋಟೆಗೆ ಹೋಗಲು ಭಯಪಟ್ಟುಕೊಳ್ಳುತ್ತಿದ್ದರು. ಆ ಕ್ರಿಮಿಯ ಕೋಟೆಗೆ ಹೋಗುವುದಕ್ಕೆ ಸರಿಯಾದ ಹಾದಿಯೂ ಇರಲಿಲ್ಲ. ಅಲ್ಲಿನ ಸುಲ್ತಾನ ಅರದ್ ಶಿರಾಜ್‌ನಿಗೆ ಹಫ್ತ್‌ವಾದನ ಬೆಳವಣಿಗೆಯ ಬಗ್ಗೆ ಕೇಳಿ ಭಯಪಟ್ಟುಕೊಂಡ. ಅವನ ಬಳಿ ಬಹಳಷ್ಟು ದೊಡ್ಡ ಸೈನ್ಯವಿದೆ, ಸಂಪತ್ತು ಇದೆ ಮತ್ತು ಮಕರಾನ್ ಪ್ರಾಂತ್ಯವನ್ನು ವಶಪಡಿಸಿಕೊಂಡಿದ್ದಾನೆಂಬ ಸುದ್ದಿ ತಿಳಿದಾಗ ಸುಲ್ತಾನನಿಗೆ ಮತ್ತಷ್ಟು ಗಾಬರಿಯಾಯಿತು. ಹಫ್ತ್‌ವಾದನಿಗೆ ಕೂಡ ಒಂದು ಸಾವಿರ ಸೈನಿಕರು ತಲ್ವಾರು ಮತ್ತಿತರ ಹತ್ಯಾರುಗಳನ್ನು ಶೇಖರಿಸಿಟ್ಟಿದ್ದ. ಹಫ್ತ್‌ವಾದನಿಗೆ ಸುಲ್ತಾನ ಅರದ್ ಶಿರಾಜ್ ದಂಡತ್ತಿ ಬರುವುದನ್ನು ತಿಳಿದು ತನ್ನ ಸಂಪೂರ್ಣ ಬಲವನ್ನು ಹಾಕಿ ಅವನ ಸೈನ್ಯದ್

ಮೇಲೇರಿ ಹೋದರು. ಸುಲ್ತಾನನ ಸೈನ್ಯವನ್ನು ಸಂಪೂರ್ಣವಾಗಿ ಸುತ್ತುವರಿದುಕೊಂಡು ಅವರು ಆ ಕಡೆ ಈ ಕಡೆ ಹೋಗದಂತೆ ತಡೆದು ಬಹಳಷ್ಟು ಸೈನಿಕರನ್ನು ಕೊಂದು ಹಾಕಿದರು. ಬಹಳ ಸಂಖ್ಯೆಯಲ್ಲಿ ಸೈನಿಕರು ಗಾಯಗೊಂಡರು. ಹಲವರು ಓಡಿಹೋದರು. ಸುಲ್ತಾನ ಅರದ್ ಶಿರಾಜನಿಗೆ ಈ ವಿಷಯ ತಿಳಿದಾಗ ನಿರಾಸೆಗೊಂಡು ಕೂತುಬಿಟ್ಟ.

**ಸುಲ್ತಾನ್ ಅರದ್ ಶಿರಾಜನು ಹಫ್ತ್‌ವಾದನೊಂದಿಗೆ ಯುದ್ಧಕ್ಕೆ ಹೋದ ವಿವರಗಳು:**

ಸುಲ್ತಾನ ಅರದ್ ಶಿರಾಜನು ತಮ್ಮ ತಂದೆ ಹಫ್ತ್‌ವಾದನ ಜೊತೆಗೆ ಯುದ್ಧಕ್ಕೆ ಹೊರಟಿದ್ದಾನೆಂದು ತಿಳಿದ ಅವನ ಮಕ್ಕಳು ಒಂದು ಹಡಗಲ್ಲಿ ಕೂತು ಸಮುದ್ರದ ಹಾದಿಯಮೂಲಕ ತನ್ನ ತಂದೆಯ ಬಳಿಗೆ ಆಗಮಿಸಿದರು.

ಹಡಗಿನಿಂದ ಇಳಿದು ತಂದೆಯ ಬಳಿಗೆ ಬಂದ ಕೂಡಲೇ ಮಕ್ಕಳನ್ನು ತನ್ನ ಎದೆಗಪ್ಪಿಕೊಂಡು ಸಂತಸ ವ್ಯಕ್ತಪಡಿಸಿದ. ಅವರನ್ನು ತನ್ನ ಸ್ಥಾನದಲ್ಲಿ ಸರದಾರರನ್ನಾಗಿ ನೇಮಿಸಿದ. ತಂದೆ ಮಕ್ಕಳ ಸೈನ್ಯ ತಮ್ಮ ವಿರೋಧಿ ಸುಲ್ತಾನನ ಬಳಿಗೆ ಎದ್ದು ನಿಂತಾಗ ಜಿನ್ನ್‌ಗಳು ಕೂಡ ಪ್ರತ್ಯಕ್ಷವಾಗಿ ಅವರ ಜೊತೆಯಲ್ಲಿ ನಡೆದವು. ಅಲ್ಲಿನ ವಾತಾವರಣದಲ್ಲಿ ಜಿನ್ನ್‌ಗಳ ಗುಂಪು ತುಂಬಿ ಹೋದವು. ಕೈಯಲ್ಲಿ ತಲ್ವಾರನ್ನು ಹಿಡಿದುಕೊಂಡು ಆಕಾಶ ಕೂಡ ನಡುಗುವಂತೆ ಜೋರಾಗಿ ಕೂಗಿ ಬೊಬ್ಬೆಹೊಡೆಯುತ್ತಿದ್ದರು. ಎಲ್ಲರ ಶಿರಚ್ಛೇದ ಮಾಡುತ್ತಿದ್ದರು. ರಣರಂಗದ ತುಂಬ ದೇಹದಿಂದ ಬೇರ್ಪಟ್ಟ ಶಿರಗಳ ರಾಶಿ ಬಿದ್ದಿದ್ದವು. ಕುದುರೆಗಳು ಭಯದಿಂದ ಓಡುತ್ತಿದ್ದವು. ಹಫ್ತ್‌ವಾದನ ಸೈನ್ಯವು ಸುಲ್ತಾನ ಅರದ್ ಶಿರಾಜನ ಸೈನ್ಯವನ್ನು ನಾಲ್ಕೂ ನಿಟ್ಟಿನಿಂದ ದಾಳಿ ನಡೆಸುತ್ತಿತ್ತು. ಸುಲ್ತಾನನ ಸೈನ್ಯ ದಿಕ್ಕೆಟ್ಟು ಅಲ್ಲಿಇಲ್ಲಿ ಓಡುತ್ತಿದ್ದರು. ಇಡೀ ದಿನ ಈ ರೀತಿ ಭೀಕರವಾಗಿ ಯುದ್ಧ ನಡೆಯುತ್ತಲೇ ಇತ್ತು. ರಾತ್ರಿಯಾದರೂ ಕೂಡ ಯುದ್ಧ ನಿಂತಿರಲಿಲ್ಲ. ಹಫ್ತ್‌ವಾದನ ಸೈನ್ಯ ರಾತ್ರಿಹೊತ್ತು ಕೂಡ ದಾಳಿ ನಡೆಸಿತು. ಅವರೆಲ್ಲರನ್ನೂ, ಅವನ ನಗರವನ್ನೂ, ಅವನ ಖಜಾನೆಯನ್ನೂ ಲೂಟಿ ಮಾಡಿಕೊಂಡರು. ಸುಲ್ತಾನ ಅರದ್ ಶಿರಾಜನಿಗೆ ಈ ಸಂಕಷ್ಟದ ಬಿಸಿತಟ್ಟಿದಾಗ ಅವನು ತನ್ನ ಸರದಾರರ ಸಭೆ ಕರೆದು 'ನೀವು ನನ್ನನ್ನು ಯಾಕೆ ಈ ಸಂಕಷ್ಟಕ್ಕೆ ಸಿಲುಕಿಸಿದಿರಿ?' ಎಂದು ಕೇಳಿದ.

ಸರದಾರರು ಸುಲ್ತಾನನಿಗೆ ಸಮಾಧಾನ ಹೇಳಿದರು. ನಮಗೆ ನಿಮ್ಮನ್ನು ಅವನ ದಾಳಿಯಿಂದ ಬಚಾವು ಮಾಡುವುದು ಸಾಧ್ಯವಿಲ್ಲದ ಸಂದರ್ಭದಲ್ಲಿ ನಿಮ್ಮನ್ನು ಅವನ ಮೇಲಿನ ದಾಳಿಗಾಗಿ ಹುರಿದುಂಬಿಸಬೇಕಾಯಿತು ಎಂದರು. ಹೀಗೆ ಸುಲ್ತಾನ್ ಅರದ್ ಶಿರಾಜನನಲ್ಲಿ ಧೈರ್ಯವನ್ನು ತುಂಬಿಸಿ ಭಯನಿವಾರಣೆ ಮಾಡಿದರು. ಮಾತಾಡಿದ

ನಂತರ ಎಲ್ಲರೂ ಜೊತೆಯಲ್ಲಿ ಊಟಕ್ಕೆ ಕೂತರು. ಸುಲ್ತಾನನ ದರ್ಬಾರಿಗಳು, ಸರದಾರರು ಊಟಕ್ಕೆ ಕೂತರು. ಅದೇ ಸಮಯದಲ್ಲಿ ಹಠಾತ್ತಾಗಿ ಒಂದು ಬಾಣವು ಗಾಳಿಯಲ್ಲಿ ಹಾರಾಡುತ್ತಾ ಬಂದು ಊಟದ ಪಾತ್ರೆಯಲ್ಲಿ ಇಟ್ಟಿದ್ದ ಆಡಿನ ತಲೆಯ ಮೇಲೆ ನಾಟಿ ನಿಂತಿತು. ಅದನ್ನು ಕಂಡು ಊಟಕ್ಕಾಗಿ ಕೂತಿದ್ದ ಎಲ್ಲರೂ ಎದ್ದುಬಿಟ್ಟರು. ಬಾಣವನ್ನು ಆಡಿನ ತಲೆಯಿಂದ ಕಿತ್ತು ತೆಗೆದು ನೋಡವಾಗ ಒಂದು ಚೀಟಿ ಅದರಲ್ಲಿತ್ತು. ಆ ಚೀಟಿಯಲ್ಲಿ 'ಓ ಅರದ್ ಶಿರಾಜ್! ಈ ಬಾಣವು ನಿನ್ನ ತಲೆಯ ಮೇಲೆ ನಾಟಿದರೆ ನಿನ್ನ ಅವಸ್ಥೆ ಏನಾಗಬಹುದು ಎಂಬುದನ್ನು ಯೋಚಿಸು! ಆ ಕ್ರಿಮಿಯ ಮಹಿಮೆಯಿಂದ ನೀನು ಈ ಸಲ ಬಚಾವಾಗಿದ್ದಿ' ಎಂದು ಬರೆದಿತ್ತು. ಅರದ್ ಶಿರಾಜ್ ಈ ಪತ್ರವನ್ನು ಎಲ್ಲರೂ ಕೇಳುವಂತೆ ಓದಿ ಹೇಳಿದ. ಎಲ್ಲರೂ ಆಶ್ಚರ್ಯ ಚಕಿತರಾಗಿಬಿಟ್ಟರು. ಎಲ್ಲರೂ ನಾವು ವಿನಾಕಾರಣ ಹಫ್ತ್‌ವಾದನಿಗೆ ಕಿರುಕುಳ ನೀಡಿದೆವೆಂದು ಬೇಸರಪಟ್ಟುಕೊಂಡರು. ಸೂರ್ಯನು ಮುಳುಗಿದಾಗ ತನ್ನ ಸಿಪಾಯಿಗಳೊಂದಿಗೆ ಅರದ್ ಶಿರಾಜ್ ಫಾರಸಿಗೆ ಹೋದ. ಹಫ್ತ್‌ವಾದನ ಸೈನ್ಯ ಅವನ ಹಿಂದೆ ಓಡಿಸಿಕೊಂಡು ಹೋಗಿ ಅರದ್ ಶಿರಾಜನನ್ನು ಹಿಡಿದುಕೊಂಡರು. ಬಾದಶಾಹನ ಉಳಿದ ಸೈನ್ಯ ಚೆಲ್ಲಾಪಿಲ್ಲಿಯಾಗಿ ಓಡಿ ಹೋದರು. ಅರದ್ ಶಿರಾಜನು ಅವರಿಂದ ತಪ್ಪಿಸಿಕೊಂಡು ಹೋಗಿ ಕಾಡು ಮೇಡುಗಳಲ್ಲಿ ದಾರಿ ತಪ್ಪಿ ಸಂಚರಿಸುತ್ತಾ ಕಷ್ಟಪಟ್ಟು ತನ್ನ ಅರಮನೆಗೆ ತಲಪಿದ. ಅರದ್ ಶಿರಾಜನ ಮನೆಯಲ್ಲಿ ಇಬ್ಬರು ಯುವಕರಿದ್ದರು. ಅರದ್ ಶಿರಾಜ್ ಬಹಳ ಆಯಾಸ ಪಟ್ಟವನಾಗಿ, ಏದುಸಿರುಬಿಡುತ್ತಾ ಮೈಯ ಬಟ್ಟೆಯೆಲ್ಲ ಕೊಳೆಯಾಗಿ ಅರಮನೆಯ ಆವರಣದ ಒಳಗೆ ಪ್ರವೇಶಿಸಿದ್ದನ್ನು ಅವರು ಕಂಡು 'ಯಾಕೆ ಇಷ್ಟು ಏದುರುಸಿರುಬಿಡುತ್ತಿದ್ದೀರಿ? ಏನಾಯಿತು? ಎಲ್ಲಿಗೆ ಹೋಗಿದ್ದೀರಿ?' ಎಂದು ಕೇಳ ತೊಡಗಿದರು. ತಾನು ಒಂದು ಕ್ರಿಮಿಯಿಂದ ಮತ್ತು ಹಫ್ತ್ ವಾದನನ್ನು ತಪ್ಪಿಸಿಕೊಂಡು ಬಂದಿದ್ದೇನೆ ಎಂದು ಬಾದಶಾಹ ಹೇಳಿದ. ಅವನನ್ನು ಕುದುರೆಯಿಂದ ಇಳಿಸಿದ ಯುವಕರು ಸಮಾಧಾನ ಪಡಿಸಿದರು. ಅವನು ಸ್ನಾನ ಮಾಡಿ ಬಟ್ಟೆ ಬದಲಿಸಿಕೊಂಡು ಬಂದು ಎಲ್ಲರ ಜೊತೆಗೆ ಊಟಮಾಡಿದ. ಅವನ ಜೊತೆಗಾರರು ಕೂಡ ಅವನೊಂದಿಗೆ ಊಟಮಾಡಿ ಅವನ ಚಿಂತೆಯನ್ನು ಕಡಿಮೆ ಮಾಡಲು ಸಮಾಧಾನ ಪಡಿಸಲು ಪ್ರಯತ್ನಿಸಿದರು.

ಅರದ್ ಶಿರಾಜ್ ತನ್ನ ಸಂಗಾತಿಗಳ ಸಂತಸದ ಸಂಗತಿಗಳನ್ನು ಕೇಳಿ ತಿಳಿದು ಅವನ ಹೃದಯವು ಚಿಂತೆಯಿಂದ ತಿಳಿಯಾಯಿತು. ಅವನು ತನ್ನ ಮೌನ ಮುರಿದು 'ನಾನು ಅರದ್ ಶಿರಾಜ್, ನನ್ನ ತಂದೆಯ ಹೆಸರು ಸುಲ್ತಾನ್ ಎಂದಾಗಿದೆ. ನಾನು ಇಲ್ಲಿಯ ಬಾದಶಾಹನಾಗಿದ್ದೇನೆ. ಕ್ರಿಮಿ ಮತ್ತು ಹಫ್ತ್‌ವಾದನೊಂದಿಗಿನ ಯುದ್ಧದಲ್ಲಿ ಸೋತಿದ್ದೇನೆ. ಪರ್ವತದ ಮೇಲೆ ಕ್ರಿಮಿ ಮತ್ತು ಅದರ ಬೆಂಬಲಿಗರು ಹಾಗೂ

ಖಜಾನೆ ಇದೆ. ಆ ಪರ್ವತದ ಮೇಲೆ ಒಂದು ನಗರವಿದೆ. ಆದ ಹಿಂದೆ ನದಿಯು ಹರಿಯುತ್ತಿದೆ. ಅಲ್ಲಿನ ಕೋಟೆಗೆ ಹೋಗುವ ಹಾದಿ ಬಹಳ ಕಠಿಣವಾಗಿವೆ. ಆ ಕ್ರಿಮಿ ಜಿನ್ನ್‌ಗಳಲ್ಲಿ ಒಂದಾಗಿದ್ದು ಅಲ್ಲಾಹನ ವೈರಿಯಾಗಿದ್ದಾನೆ. ಈ ಕುತಂತ್ರ, ಯುದ್ಧ, ಕಲಹಗಳು ಅದರಿಂದಾಗಿ ಉಂಟಾಗಿವೆ' ಎಂದ. 'ನಮಗಿರುವ ಒಂದೇ ಹಾದಿಯೆಂದರೆ ನಾವೆಲ್ಲ ಒಟ್ಟಿಗೆ ಕ್ರಿಮಿಯ ಮತ್ತು ಹಫ್ತ್‌ವಾದನ ಆಸ್ಥಾನಕ್ಕೆ ಹೋಗಿ ಅದನ್ನು ನಾಶ ಮಾಡಬೇಕು' ಎಂದು ಬಾದಶಹನಿಗೆ ಅವನ ಸರದಾರರು ಸಲಹೆ ನೀಡಿದರು. ಇದರಿಂದ ಬಾದಶಾಹ ತುಂಬ ಉತ್ಸಾಹಿತನಾದ. ಅವನ ಬೆಂಬಲಿಗರು ಹಫ್ತ್‌ವಾದನ ಪ್ರಾಂತ್ಯಕ್ಕೆ ದಾಳಿ ನಡೆಸಿದರು.

**ಅರದ್ ಶಿರಾಜ್ ಜಾದೂಗಾರನ ಮಾರುವೇಷ ಧರಿಸಿ ಕ್ರಿಮಿಯ ಕೋಟೆ ಪ್ರವೇಶಿಸಿ ಅದನ್ನು ವಶಪಡಿಸಿಕೊಂಡ ವಿವರಗಳು:**

ಎರಡು ಪರ್ವತಗಳ ಮಧ್ಯೆ ಅರದ್ ಶಿರಾಜನ ಒಬ್ಬ ಸರದಾರ ವಾಸಿಸುತ್ತಿದ್ದ. ಆ ಊರಿನ ಹೆಸರು ಫೈಸರ್ ಎಂದಾಗಿತ್ತು. ಅವನು ಬಹಳ ಬುದ್ಧಿವಂತನೂ ಚಾಲಾಕಿನ ವ್ಯಕ್ತಿಯೂ ಆಗಿದ್ದ. ಅಸ್ಫಂದಿಯಾರನ(ಅಲೆಕ್ಸಾಂಡರನ) ಚಾಣಾಕ್ಷತನ ಅವನಲ್ಲಿತ್ತು. ಅವನ ಬಳಿ ಸೈನ್ಯವೂ ಇದ್ದು ಅದರಲ್ಲಿ ಬಹಳ ಬಲಿಷ್ಠ ಮತ್ತು ಬಹದ್ದೂರರೆನಿಸಲ್ಪಟ್ಟ ಏಳು ಮಂದಿ ಶೂರರಿದ್ದರು. ಅವನ ವಜ್ರ ವೈಢೂರ್ಯಗಳು, ಚಿನ್ನದ ನಾಣ್ಯಗಳು, ರೇಶ್ಮೆ ಬಟ್ಟೆಗಳು ತುಂಬಿದ ಅಪಾರ ಸಂಪತ್ತಿನ ಖಜಾನೆಯನ್ನು ಇವರು ವಶಪಡಿಸಿಕೊಂಡು ಹಿಂದೆ ಸಿಪಾಯಿಗಳನ್ನು ಇಟ್ಟುಕೊಂಡು ಕೆಲವು ತಾಮ್ರದ ದೊಡ್ಡ ಡೇಗ್ ಪಾತ್ರೆಗಳನ್ನು ಬಹಳ ಕಷ್ಟಪಟ್ಟು ಸಾಗಿಸಿದರು. ಇವನ್ನು ಕ್ರಿಮಿ ಸಿಂಹಾಸನದ ಬಳಿ ಕೊಂಡು ಹೋಗಿ ತಲಪಿಸಿದರು. ಮೊದಲು ಅದಕ್ಕೆ ನಮಸ್ಕರಿಸಿ ಪೂಜೆ ಸಲ್ಲಿಸಿದರು. ಇವೆಲ್ಲ ಸಂಪತ್ತುಗಳು ಕ್ರಿಮಿಯ ಕೃಪೆಯಿಂದ ದೊರತಿದೆ ಎಂದು ಘೋಷಿಸಿದರು. ಕ್ರಿಮಿಯ ಕೆಲಸಗಾರರಿಗೆ ಇದು ತಿಳಿದಾಗ ಅವರು ತಂದ ಸಂಪತ್ತನ್ನು ಆಸ್ಥಾನದ ಅಂಗಣದಲ್ಲಿ ಸುರಿದು ಹರಡಿಸಿದರು. ಅವರ ಜೊತೆಗೆ ಮಾರುವೇಷದಲ್ಲಿ ಬಂದಿದ್ದ ಬಾದಶಾಹ ಅರದ್ ಶಿರಾಜ್ ಅವುಗಳಲ್ಲಿ ಕೆಲವು ಬೆಲೆಬಾಳುವ ವಸ್ತುಗಳನ್ನು ಕ್ರಿಮಿಯ ಸೇವಕರಿಗೆ ನೀಡಿ ಅವರನ್ನು ಕೈವಶಮಾಡಿಕೊಂಡ. ಅವರೆಲ್ಲರಿಗೆ ಔತಣ ಕೂಟವೊಂದನ್ನು ಏರ್ಪಡಿಸಿ ಒಳ್ಳೊಳ್ಳೆಯ ಆಹಾರವನ್ನು ಬಡಿಸಿದ. ಕ್ರಿಮಿಗೆ ವಿಶೇಷವಾದ ಆಹಾರವಾಗಿ ಹಾಲು ಮತ್ತು ಜೇನನನ್ನು ನೀಡಿದ. 'ನೀವು ಮತ್ತು ಕ್ರಿಮಿ ನನ್ನ ಮೂರು ದಿನಗಳ ಕಾಲ ಅತಿಥಿಗಳು. ನಾನು ನನ್ನ ಗುರಿಯನ್ನು ತಲಪುವುದಕ್ಕೆ ನೆರವಾಗ ಬೇಕೆಂದು ಕ್ರಿಮಿಯನ್ನು ಬೇಡಿಕೊಳ್ಳುತ್ತಿದ್ದೇನೆ. ಇವೆಲ್ಲ ಸಂಪತ್ತು ಕ್ರಿಮಿಯ ಕೃಪೆಯಿಂದ ನನಗೆ ಪ್ರಾಪ್ತಿಯಾಗಿದೆ. ವಿಶ್ವದ ಎಲ್ಲೆಡೆಯಲ್ಲಿ ಇವೆಲ್ಲ ವಿಚಾರಗಳನ್ನು ಪ್ರಚಾರ ಮಾಡುತ್ತೇನೆ' ಎಂದ. ನಂತರ ದೊಡ್ಡ ಸಭೆಯನ್ನು ಸೇರಿಸಿ ಈ ಖಜಾನೆಯನ್ನು

ಮಾರಾಟಮಾಡುವ ಘೋಷಣೆಯನ್ನು ಮಾಡಿದ. ಇದರಿಂದ ಕ್ರಿಮಿಯ ಕೃಪೆಗೊಳಗಾಗಿ ನನಗೆ ಒಳಿತಾಗಲೆಂದು ಬಯಸಿದ.

**ಕ್ರಿಮಿ ಮತ್ತು ಹಫ್ತಾದನನ್ನು ಕೊಲ್ಲುವ ವಿವರಗಳು:**

ಆ ಏಳು ಯುವಕರ ಪ್ರಯತ್ನ ಹಾಗೂ ಸಹಾಯದಿಂದ ಅರದ್ ಶಿರಾಜ್ ಕ್ರಿಮಿಯನ್ನು ಕೊಂದು ಹಾಕಿದಾಗ, ತಲ್ವಾರನ್ನು ಹಿರಿದು ಝಳಪಿಸುತ್ತಾ ಉಳಿದವರನ್ನು ಸುಲಭವಾಗಿ ಕೊಂದುಬಿಡುವುದು ಸಾಧ್ಯವಾಯಿತು. ಅವನು ಕೋಟೆಯ ಮೇಲೆ ಹತ್ತಿದ. ಇವೆಲ್ಲ ವಿದ್ಯಮಾನಗಳು ಕ್ರಿಮಿಯ ಸೈನ್ಯಕ್ಕೆ ತಿಳಿದು ತಮ್ಮ ನಗರವಾಸಿಗಳಿಗೆ ಸುದ್ದಿಯನ್ನು ತಲಪಿಸಿದರು. ನಗರದ ಪ್ರಜೆಗಳು ತಮ್ಮೊಂದಿಗೆ ವಿವಿಧ ರೀತಿಯ ಮಾರಕ ಅಸ್ತ್ರಗಳನ್ನು ಹಿಡಿದುಕೊಂಡು ಅಲ್ಲಿಗೆ ಆಗಮಿಸಿದರು. ಆಗ ಬಾದಶಾಹ ಅರದ್ ಶಿರಾಜ್‌ನಿಗೆ ಇವರನ್ನು ಯದ್ಧದಲ್ಲಿ ಸೋಲಿಸಿ ಜಯಗಳಿಸಲಿದ್ದೇನೆಂಬ ಭರವಸೆ ಮೂಡಿತು. ನಗರವಾಸಿಗಳು ಹಫ್ತ್‌ವಾದನ ಬಳಿ ತುಂಬ ಭರವಸೆಯೊಂದಿಗೆ ಕೋಟೆಯನ್ನು ವಹಿಸಿಕೊಳ್ಳುವುದಕ್ಕೆ ತಯಾರಿ ಮಾಡಿಕೊಂಡರು. ಅರದ್ ಶಿರಾಜ್ ಕೋಟೆಯಿಂದ ಹೊರಟು ಬರುವಾಗ ಹಫ್ತ್‌ವಾದ್ ಎದುರಾಗಿ ಯುದ್ಧ ನಡೆಯಿತು. ಕೋಟೆಯಲ್ಲಿದ್ದ ಬಾದಶಾಹನನ್ನು ಎದುರಿಸಲು ಹಫ್ತ್‌ವಾದ ಮುಂದೊತ್ತಿ ಬಂದ. ಅರದ್ ಶಿರಾಜ್ ಎದುರಿಗೆ ಬಂದಾಗ ಯುದ್ಧವುಭೀಕರ ರೂಪಧಾರಣೆ ಯಾಯಿತು. ಕೊನೆಯಲ್ಲಿ ಯುದ್ಧದ ಮಧ್ಯೆ ಹಫ್ತ್‌ವಾದ್ ಬಿದ್ದುಬಿಟ್ಟು ಸೆರೆಯಾದ. ಅರದ್ ಶಿರಾಜ್ ಕೋಟೆಯಿಂದ ಬಂದು ನದಿಯ ಹಾದಿಯಾಗಿ ಗೀರ್ ಪಟ್ಟಣಕ್ಕೆ ತಲಪಿದ. ಅವನ ಉಳಿದ ಸಂಗಾತಿಗಳು ಕಾಲ್ನಡಿಗೆಯಲ್ಲಿ ಪ್ರಯಾಣ ಮಾಡಿದ. ಅಲ್ಲಿ ಸಿಕ್ಕ ಸಂಪತ್ತು, ನಗದು ಮುಂತಾದ ಬೆಲೆಬಾಳುವ ವಸ್ತುಗಳನ್ನು ಖಜಾನೆಗೆ ಜಮಾ ಮಾಡಿಸಿದ. ಉಳಿದವನ್ನು ಸೈನಿಕರಿಗೆ ಹಂಚಿದ. ತನ್ನ ಸೈನ್ಯವನ್ನು ಕಿರ್ಮಾನಿನ ಕಡೆ ಕಳುಹಿಸಿದ. ಈ ಸೈನ್ಯವು ಅಲ್ಲಿಂದ ತೈಫೂನ್ ನಗರಕ್ಕೆ ಪ್ರಯಾಣಿಸಿತು. ಈ ಕತೆಯನ್ನು ಓದಿ ದೇವರ ಕೃಪೆಯೂ ಕೂಡ ಬಹಳ ವಿಚಿತ್ರವಾಗಿರುತ್ತದೆ. ಕೆಲವೊಮ್ಮೆ ಭಾಗ್ಯ ಲಭಿಸಿದರೆ ಕೆಲವೊಮ್ಮೆ ನಿರಾಸೆ ಆಗುವುದಿದೆ ಎನ್ನುವುದನ್ನು ನಾವು ನೆನಪಿಟ್ಟು ಕೊಳ್ಳಬೇಕು.

**ಮಹಬೂದ್, ಝುದಾನ್ ಮತ್ತು ಜಾದುಗಾರ ಜಹೂದನ ಕತೆ.**

ನೌಶೇರ್‌ವಾನ್ ಎಂಬ ಬಾದಶಹನಿಗೆ ಓರ್ವ ಪುಣ್ಯಾತ್ಮ ವ್ಯಕ್ತಿ ಈ ಕತೆಯನ್ನು ಹೇಳಿದ. ಮಹಬೂದನಿಗೆ ಇಬ್ಬರು ಗಂಡು ಮಕ್ಕಳು. ಅವರಿಬ್ಬರೂ ಯುವಕಾರಾಗಿದ್ದು ತುಂಬ ಪ್ರಾಮಾಣಿಕರು ಮತ್ತು ವಿದ್ಯಾವಂತರಾಗಿದ್ದು ಆ ಕಾಲದಲ್ಲಿ ಇವರು ಬಹಳ ಪ್ರಖ್ಯಾತರಾಗಿದ್ದರು. ಬಾದಶಾಹ ನೌಶೇರ್‌ವಾನನಿಗೆ ಅವರ ಮೇಲೆ ಬಹಳ ವಿಶ್ವಾಸವಿತ್ತು.

ಬಾದಶಾಹನ ದರ್ಬಾರಿನ ಸಭೆಗಳಲ್ಲಿ ದರ್ಬಾರಿಗಳು ಉಪಸ್ಥಿತರಾಗಿರುವಾಗ ಅವರ ಸಮಾನ ಸ್ಥಾನಮಾನಗಳಲ್ಲಿ ಮಹಬೂದ್ ಮತ್ತು ಮಕ್ಕಳು ಕೂತಿರುತ್ತಿದ್ದರು. ಮಹಬೂದ್ ಮತ್ತು ಅವನ ಮಕ್ಕಳು ತಯಾರಿಸಿದ ಆಹಾರವನ್ನೇ ಬಾದಶಾಹ ಉಣ್ಣುತ್ತಿದ್ದ. ಬಾದಶಾಹ ತನ್ನ ಸ್ವಂತ ಅಡುಗೆ ಕೋಣೆಯನ್ನು ಅವನ ಮನೆಯಲ್ಲೇ ಮಾಡಿಕೊಂಡಿದ್ದನಲ್ಲದೆ ತನಗೆ ಊಟಮಾಡಬೇಕಾದಾಗ ಅವರು ಮಾಡಿದ ಊಟವನ್ನೇ ಉಣ್ಣುತ್ತಿದ್ದ. ಮಹಬೂದ್ ಮತ್ತು ಅವನ ಮಕ್ಕಳು ಬಾದಶಾಹನ ಜೊತೆಗೆ ಇಷ್ಟೊಂದು ಅನ್ಯೋನ್ಯತೆಯಲ್ಲಿರುವುದು ಕಂಡು ದರ್ಬಾರಿನ ಕೆಲವರು ಅಸೂಯೆಪಟ್ಟುಕೊಂಡಿದ್ದರು. ಆ ಬಾದಶಾಹನ ಓರ್ವ ದರ್ಬಾರಿಗಳಲ್ಲಿ ಒಬ್ಬ ಝುರಾನ್ ಎಂಬ ಚೌಕೀದಾರನಿದ್ದ. ಅವನು ಕೂಡ ಬಾದಶಾಹರ ಆಪ್ತರಲ್ಲಿ ಓರ್ವನಾಗಿದ್ದ. ಬಾದಶಾಹನ ಸರ್ಕಾರಿ ಕೆಲಸದಲ್ಲಿ ಕೂಡ ಈತ ಕೈಹಾಕುತ್ತಿದ್ದ. ಮಹಬೂದ್ ಮತ್ತು ಮಕ್ಕಳು ಬಾದಶಾಹನೊಂದಿಗೆ ಅನ್ಯೋನ್ಯರಾಗಿರುವುದನ್ನು ಝುರಾನ್ ಸಹಿಸಿಕೊಳ್ಳುತ್ತಿರಲಿಲ್ಲ. ಏನಾದರೂ ಉಪಾಯ ಮಾಡಿ ಅವರನ್ನು ದೂರಮಾಡಬೇಕೆಂದು ಅವನು ಯೋಜನೆಗಳನ್ನು ಸಿದ್ಧಪಡಿಸುತ್ತಿದ್ದ.

ಆದರೆ ಅವನ ಕುತಂತ್ರಗಳು ಯಶಸ್ವಿಯಾಗಲಿಲ್ಲ. ಅಲ್ಲಾಹನ ಕಡೆಯಿಂದ ಅವನಿಗೆ ಈ ಕುತಂತ್ರಕ್ಕೆ ಸರಿಯಾದ ಫಲವೂ ಸಿಕ್ಕಿತು. ಝುರಾನ್ ಬೇರೊಂದು ಉಪಾಯ ಮಾಡಿಕೊಂಡು ಜಾದೂಗಾರ ಜಹೂದನನ್ನು ತನ್ನ ಜೊತೆಗೆ ಸೇರಿಕೊಂಡು ಅವನೊಂದಿಗೆ ಈ ಬಗ್ಗೆ ಸಮಾಲೋಚನೆ ಮಾಡಿದ. 'ನೀನು ಚಿಂತೆ ಮಾಡಿಕೊಳ್ಳಬೇಡ. ನಾನು ಒಂದು ಉಪಾಯ ಹೂಡುತ್ತೇನೆ, ಈ ಉಪಾಯದಿಂದ ಬಾದಶಾಹ ಅವನಿಂದ ದೂರವಾಗುತ್ತಾನೆ' ಎಂದು ಜಹೂದ ಆಶ್ವಾಸನೆಗಳನ್ನು ನೀಡಿದ. ಎಂದಿನಂತೆ ಬಾದಶಾಹ ಊಟದ ಸಮಯದಲ್ಲಿ ಮಹಬೂದನ ಬಳಿ ಹೋಗಿದ್ದ. ಆದಿನ ಮಹಬೂದ ಅವನಿಗೆ ಗುಲಾಬಿ, ಹಾಲು, ಜೇನುಗಳಿಂದ ತಯಾರಾದ ಆಹಾರಗಳನ್ನು ನೀಡಿದ್ದ. ಅವನು ಗುಲಾಬಿ, ಹಾಲು, ಜೇನುಗಳಿಂದ ಮಾಡಿದ ಆಹಾರವನ್ನು ತಿನ್ನಲು ಶುರುಮಾಡುವ ಮುಂಚೆ ಅಲ್ಲಿರುವ ಯುವಕರಿಗೆ 'ಈ ಆಹಾರವನ್ನು ಬಾದಶಾಹ ತಿನ್ನುವ ಮುಂಚೆ ನೀವು ಸ್ವಲ್ಪ ತಿಂದು ನೋಡಿ' ಎಂದು ಹೇಳಿದ.

ಕೆಲವು ಯುವಕರು ಆಹಾರವನ್ನು ತಿಂದು ನೋಡಿದರು. ಅವರೆಲ್ಲರೂ ತಲೆ ಸುತ್ತಿಬಂದು ಬಿದ್ದರು. ಬಾದಶಾಹನಿಗೆ ಇವರ ಮಾತುಗಳಿಗೆ ಮರುಳಾಗಿ ಮಹಬೂದನ ಮೇಲೆ ಅನುಮಾನಪಡಲು ತೊಡಗಿದ. ಆದರೆ ಅವನ ಮನಸ್ಸು ಅವರ ಸ್ವಾಮಿನಿಷ್ಠೆಯ ಮೇಲೆ ಅನುಮಾನಿಸಲು ಮನಸ್ಸಾಗದೆ ತನಗಾದ ಆಘಾತವನ್ನು ಮರೆತು ಮತ್ತೆ ಎಂದಿನಂತಾದ.

ಈ ಕುತಂತ್ರದ ಕಾರಸ್ಥಾನದ ಹಿನ್ನೆಲೆಯಲ್ಲಿ ಯಾರ ಕೈವಾಡವಿದೆ ಎನ್ನುವುದು ಬಾದಶಾಹನಿಗೆ ತಿಳಿಯಲಿಲ್ಲ. ಬಾದಶಾಹ ಮಹಬೂದ ಮತ್ತು ಮಕ್ಕಳಮೇಲೆ ಸಂಶಯಪಡುವಂತೆ ಮಾಡುವುದರಲ್ಲಿ ತಾನು ಯಶಸ್ವಿಯಾದೆನೆಂದು ಜಹೂದ ತನ್ನ ತಲೆಯೆತ್ತಿ ಅಹಂಕಾರದಿಂದ ನಡೆಯುತ್ತಿದ್ದ. ಈ ಕುತಂತ್ರದ ಕೆಲಸ ಗುಟ್ಟಾಗಿ ಝುರಾನ್ ಹೇಳಿದಂತೆ ಜಹೂದ ಅದನ್ನು ಮಾಡಿ ಮುಗಿಸಿದ್ದ. ಆದರೆ ಬಾದಶಾಹ ಈ ವಿಷಯದ ಬಗ್ಗೆ ಯೋಚಿಸುವುದನ್ನು ಬಿಟ್ಟಿದ್ದ. ಈ ಜನರು ಆಗಾಗ ಆ ಬಗ್ಗೆ ಹೇಳುತ್ತ ನೆನಪಿಗೆ ತರುವುದರಿಂದ ಅವನು ವಿಚಲಿತನಾಗುತ್ತಿದ್ದ. ಒಂದು ದಿನ ನೌಶೇರ್‌ವಾನ್ ಬಾದಶಾಹ ಶಿಕಾರಿಯ ಉದ್ದೇಶದಿಂದ ಮರುಭೂಮಿಗೆ ಹೋಗಿದ್ದ. ತನ್ನ ಶಿಕಾರಿ ಕುದುರೆಗಳನ್ನು ನೋಡಿ ಅವುಗಳ ಮೇಲೆ ಸವಾರಿ ಮಾಡುವ ಉದ್ದೇಶದಿಂದ ಕರೆದ. ಆ ಕುದುರೆಗಳಲ್ಲಿ ಒಂದು ಕುದುರೆ ಮಹಬೂದನ ಸವಾರಿ ಕುದುರೆಯಾಗಿತ್ತು. ಆ ಕುದುರೆಯನ್ನು ನೋಡುವಾಗ ಮಹಬೂದನ ಸ್ವಾಮಿನಿಷ್ಠೆ ಮತ್ತು ಸ್ನೇಹದ ನೆನಪು ಬಾದಶಾಹನಿಗೆ ಮರುಕಳಿಸಿತು. ಬಾದಶಾಹ ಕರೆದರೂ ಆ ಕುದುರೆ ಅವನ ಬಳಿಗೆ ಬರಲಿಲ್ಲ. ಅದು ತನ್ನ ಮಾತುಗಳ ಮೂಲಕ ಬಾದಶಾಹನ ಮುಂದೆ ತನ್ನ ಯಜಮಾನ ಮಹಬೂದನ ಮೇಲಿನ ಅರೋಪಗಳನ್ನು ಸುಳ್ಳೆಂದು ಸಾಬೀತುಪಡಿಸುತ್ತ ಹೇಳತೊಡಗಿತು.

ಕುದುರೆಯ ಹಾವಭಾವವು ನಿಜವಾದ ಆರೋಪಿ ಜಹೂದನತ್ತ ಬೊಟ್ಟು ಮಾಡಿ ತೋರಿತ್ತು. ಈ ರೀತಿ ಕುದುರೆ ಮಾತಾಡಲು ಕಾರಣ ಅದರ ಮೇಲೆ ಝುರಾನನ ಜಾದೂವಿನ ಪ್ರಭಾವವಾಗಿತ್ತು. ಬಾದಶಾಹ ಈ ಕುದುರೆಯ ಮಾತುಗಳು ಮತ್ತು ಅದು ತೋರಿದ ಸಂಕೇತಗಳ ಮೂಲಕ ಬಾದಶಾಹ ಎಲ್ಲವನ್ನೂ ಅರಿತುಕೊಂಡ. ಬಾದಶಾಹ ನೌಶೇರ್‌ವಾನ್ ಈ ಮಾತುಗಳನ್ನು ಅರ್ಥಮಾಡಿಕೊಂಡ ಬಳಿಕ ಝುರಾನನನ್ನು ನೋಡಿ ಸುಮ್ಮನಾದ. ಒಳಗಿಂದೊಳಗೆ ದೇವರೊಂದಿಗೆ 'ನೀನು ನನಗೆ ಈ ಕುತಂತ್ರದ ಮೂಲವನ್ನು ತಿಳಿಯುವಂತೆ ಮಾಡಿದೆ, ಇಲ್ಲವಾಗಿದ್ದರೆ ಮಹಬೂದ್ ಮತ್ತು ಅವನ ಮಕ್ಕಳನ್ನು ಅಪರಾಧಿಗಳನ್ನಾಗಿ ಮಾಡಿ ನಾನೊಂದು ದೊಡ್ಡ ಪಾಪವನ್ನು ಮಾಡುವಂತೆ ಮಾಡುತ್ತಿದ್ದೆ. ಇದಕ್ಕೆ ನಿನಗೆ ಧನ್ಯವಾದಗಳು' ಎಂದು ಪ್ರಾರ್ಥಿಸಿದ. ಈ ವ್ಯಥೆಯೊಂದಿಗೆ ಅವನು ತನ್ನ ಅರಮನೆಗೆ ತೆರಳಿದ. ಒಮ್ಮೆ ಬಾದಶಾಹ ನೌಶೇರ್‌ವಾನ ತನ್ನ ಆರಾಮದ ಮಹಲಿನಲ್ಲಿ ಒಂಟಿಯಾಗಿ ಆರಾಮ ಮಾಡುತ್ತಿದ್ದಾಗ ಝುರಾನ್ ಬಾದಶಾಹನ ಬಳಿ ಬಂದ. ನಯವಾದ ಮತ್ತು ಪ್ರೀತಿಯಿಂದ ಬಾದಶಾಹನೊಂದಿಗೆ ಮಾತಾಡಿದ. ಬಾದಶಾಹ ಅವನ ಮಾತುಗಳನ್ನು ಕೇಳುತ್ತಿದ್ದಂತೆ ನಟಿಸಿದ. ಬಾದಶಾಹ ಝುರಾನನ್ನು ಆ ಘಟನೆಯ ಬಗ್ಗೆ ವಿಚಾರಿಸಲು ತೊಡಗಿದ. ಕೆಲವು ಮಂದಿಯನ್ನು ಕರೆಸಿ ಜಹೂದನನ್ನು ಮತ್ತು

ಕುದುರೆಯನ್ನು ವಿಚಾರಣೆಗಾಗಿ ಕರೆತರಲು ಹೇಳಿದ. ಅವನು ಜಹೂದನನ್ನು ಮತ್ತು ಕುದುರೆಯನ್ನು ಈ ಬಗ್ಗೆ ವಿಚಾರಿಸಿದ.

ಜಹೂದ ತನ್ನ ನಿರಪರಾಧಿತ್ವದ ಬಗ್ಗೆ ಹೇಳತೊಡಗಿದ. ತಾನು ಯಾವುದೇ ರೀತಿಯಲ್ಲೂ ಈ ಕೆಲಸಗಳನ್ನು ಮಾಡಿಲ್ಲವೆಂದೂ ತನಗೇನೂ ತಿಳಿದಿಲ್ಲವೆಂದೂ ಹೇಳತೊಡಗಿದ. ಕುದುರೆ ಮಾತಾಡತೊಡಗಿ ತನ್ನ ಸಾಕ್ಷಿಯನ್ನು ನೀಡಿ ಜಹೂದ ಮತ್ತು ಝುರಾನನ ಕುತಂತ್ರಗಳನ್ನು ಬಯಲು ಮಾಡಿತು. ಮಹಬೂದ ಮತ್ತು ಅವನ ಮಕ್ಕಳ ನಿರಪರಾಧಿತ್ವವನ್ನು ಸಾಬೀತು ಪಡಿಸಿದ್ದು ಕಂಡ ಅವರಿಬ್ಬರೂ ಭಯಗೊಂಡರು. ಅಲ್ಲಿ ಹಾಜರಾಗಿದ್ದ ಪ್ರಜೆಗಳ ಮುಂದೆ ಇವೆಲ್ಲವೂ ನ್ಯಾಯ ವಿಚಾರಣೆ ನಡೆದುದರಿಂದಾಗಿ ಪ್ರಜೆಗಳಿಗೆ ಸತ್ಯವೇನೆಂದು ತಿಳಿಯಿತು. ಬಾದಶಾಹ ನೌಶೇರ್‌ವಾನ್ ಜಹೂದ ಮತ್ತು ಝುರಾನರನ್ನು ಕೋಟೆಯ ಮಹಾದ್ವಾರದಲ್ಲಿ ಕಟ್ಟಿಹಾಕಲು ಆಜ್ಞಾಪಿಸಿದ. ನಂತರ ಪ್ರಜೆಗಳಿಗೆ ಹೇಳಿ ಅವರ ಮೇಲೆ ಬಾಣಗಳು ಮತ್ತು ಕಲ್ಲುಗಳ ಮಳೆ ಸುರಿಸಿ ಎಂದೂ ಆಜ್ಞಾಪಿಸಿದ. ಈ ದೃಷ್ಯವನ್ನು ನೋಡಲು ಸಮಸ್ತ ಪ್ರಜೆಗಳು ಅಲ್ಲಿ ಸೇರಿದ್ದರು.  ಹೀಗೆ ಸತ್ಯ ಮತ್ತು ಸುಳ್ಳಿನ ಫಲದ ಬಗ್ಗೆ ತಿಳುವಳಿಕೆ ಜನರಲ್ಲಿ ಮೂಡುವಂತಾಯಿತು. ಸತ್ಯವಂತನ ಸಹಾಯ ಮಾಡಲು ದೇವರು ಬಯಸಿದರೆ ಒಂದಲ್ಲ ಒಂದು ರೀತಿಯಲ್ಲಿ ದಾರಿಯನ್ನು ತೋರಿಸುತ್ತಾನೆ. ಈ ಕತೆಯು ಸತ್ಯ ಮತ್ತು ಸುಳ್ಳಿನ ಅಂತಿಮ ಫಲದ ಬಗ್ಗೆ ತಿಳಿಯುವುದಕ್ಕೆ ಸಾಕಾಗುತ್ತದೆ. ದೇವರಿಗೆ ಸಾವಿರಾರು ಸಲ ಧನ್ಯವಾದಗಳು ಎಂದು ಹೇಳುವುದರ ಮೂಲಕ ಕತೆಯು ಮುಕ್ತಾಯಗೊಳ್ಳುತ್ತದೆ.

(ಮೇಲಿನ ಕತೆಗಳ ಹೆಚ್ಚಿನ ಭಾಗವು ನಜ್ಮ್ ಅಥವಾ ಪದ್ಯ ರೂಪದಲ್ಲಿದೆ ಅದನ್ನು ಅನುವಾದಿಸುವಾಗ ಸಂಪೂರ್ಣ ಗದ್ಯ ರೂಪಕ್ಕೆ ತಂದಿದ್ದೇವೆ–ಅನುವಾದಕ)

**ಪೆಂಗೋ ದ್ವೀಪದ ರಾಜ್ಯ ಮತ್ತು ರಾಜರ ವಿವರಗಳು:**

ಪೆಂಗೋ ಒಂದು ದೊಡ್ಡ ದ್ವೀಪವಾಗಿದೆ. ಅಲ್ಲಿ ಒಬ್ಬ ರಾಜ ಆಡಳಿತವನ್ನು ನಡೆಸುತ್ತಿದ್ದಾನೆ.  ಈ ರಾಜ ಮತ್ತು ಕುತುಬ್ ಶಾಹನ ಮಧ್ಯೆ ಆಗಾಗ ಪತ್ರ ವ್ಯವಹಾರವು ನಡೆಯುತ್ತಿತ್ತು. ಈ ಕಾಲವು ಹೆಚ್ಚು ಕಮ್ಮಿ ಹಿಜರಿ ವರ್ಷ ೯೭೦ಕ್ಕೆ ಸಂಬಂಧಿಸಿದ್ದಾಗಿದೆ. ಈ ದ್ವೀಪವು 'ಅಮ್ಮಾನ್'(ಶಾಂತ ಸಮುದ್ರ) ಸಮುದ್ರದ ವ್ಯಾಪ್ತಿಯಲ್ಲಿದೆ. ಆಗ ಕುತುಬ್ ಶಾಹ ಗೋಲ್ಕೊಂಡ ರಾಜ್ಯವನ್ನು ಆಳುತ್ತಿದ್ದ. ಈ ರಾಜ್ಯದಿಂದ ದ್ವೀಪಕ್ಕೆ ಹೋಗುವಾಗ ಮಚಲಿಪಟ್ಟಣಂಗೆ ಹೋಗಿ ಅಲ್ಲಿಂದ ಸಮುದ್ರದಲ್ಲಿ ೮ ದಿನಗಳ ಕಾಲ ಪ್ರಯಾಣಿಸಬೇಕಾಗಿತ್ತು.

ಸಮುದ್ರದ ಮಧ್ಯದಲ್ಲಿರುವ ಈ ದ್ವೀಪ 'ಹಿಂಗೋ'( ರಂಗೂನ್, ಬರ್ಮಾ?)ವು

ಒಂದು ಬೇರೆಯೇ ರಾಜ್ಯವಾಗಿದೆ. ಇದರ ಪಶ್ಚಿಮದಲ್ಲಿ ಚೈನಾದ ಸಮುದ್ರ ಮತ್ತು ಪೂರ್ವದಲ್ಲಿ ತೆಲಂಗಾಣವಿದೆ. ದಕ್ಷಿಣದಲ್ಲಿ ದಕ್ಷಿಣಭಾರತದ ಭಾಗವಿದೆ. ಈ ರಾಜ್ಯದ ಬಾದಶಾಹ ಹಿಂದೂ ಧರ್ಮಕ್ಕೆ ಸೇರಿದವನಾಗಿದ್ದ. ಈ ದ್ವೀಪದಲ್ಲಿ ಬಹಳ ಆನೆಗಳು ವಾಸಿಸಿವೆ. ಅಲ್ಲಿನ ರಾಜನ ಬಳಿ ಹೆಚ್ಚು ಕಮ್ಮಿ ಐದು ಸಾವಿರ ಆನೆಗಳಿದ್ದವು. ಆ ರಾಜ್ಯದಲ್ಲಿ ಬಂಗಾರದ ಗಣಿಯೂ ಇತ್ತು. ಅಲ್ಲಿನ ಭೂಮಿಯ ಒಂದು ಭಾಗದಲ್ಲಿ ಬಂಗಾರ ಸಿಗುತ್ತಿತ್ತು. ಬಾದಶಾಹನು ಇದರ ರಕ್ಷಣೆಗಾಗಿ ನಾಲ್ಕೂ ದಿಕ್ಕಿನಲ್ಲಿ ಕಲ್ಲಿನ ಆವರಣದ ಗಟ್ಟಿಮುಟ್ಟಾದ ಗೋಡೆಗಳನ್ನು ಕಟ್ಟಿಸಿದ್ದ. ಅಲ್ಲಿ ಬಾದಶಾಹನ ಅರಮನೆಯೂ ಇತ್ತು. ಅದರ ಬಳಿಯಲ್ಲಿ ತಾಮ್ರದ ಗಣಿಯೂ ಇತ್ತು. ತಾಮ್ರವು ವಿಪುಲವಾಗಿ ಅಲ್ಲಿ ದೊರೆಯುತ್ತಿತ್ತು. ಅಲ್ಲಿ ಅತ್ಯಂತ ಉತ್ತಮ ಮತ್ತು ಬೆಲೆ ಬಾಳುವ ಮಾಣಿಕ್ಯದ ಹರಳುಗಳು (ಕೆಂಪು/ಪದ್ಮರಾಗ) ಇಲ್ಲಿ ದೊರೆಯುತ್ತವೆ. ಈ ಮಾಣಿಕ್ಯದ ಹರಳುಗಳ ಪೈಕಿ ಕೆಂಪು, ಹಳದಿ ಬಣ್ಣದವು ಕೂಡ ಇಲ್ಲಿ ದೊರೆಯುತ್ತವೆ. ಜಗತ್ತಿನಲ್ಲಿ ಎಲ್ಲೂ ಕಾಣಸಿಗದ ಬಿಳಿ ವರ್ಣದ ಆನೆಗಳು ಇಲ್ಲಿವೆ. ಇಲ್ಲಿನ ಬಾದಶಾಹನ ಆನೆಗಳ ತಂಗುದಾಣ ಲಾಯದಲ್ಲಿ ಬಿಳಿ ಆನೆಗಳು ಇರುತ್ತಿದ್ದವು. ಬಿಳಿಯ ಆನೆಗಳಲ್ಲಿ ಯಾವುದಾದರೂ ಸತ್ತರೆ ಕೂಡಲೇ ಇನ್ನೊಂದು ಬಿಳಿ ಆನೆಯನ್ನು ಕಾಡಿನಿಂದ ತಂದು ಕಟ್ಟುತ್ತಿದ್ದರು. ಇಲ್ಲಿನ ಪಶ್ಚಿಮದಲ್ಲಿನ ಚೈನಾದ ಸಮುದ್ರವಿದೆ. ಇಲ್ಲಿನ ಭವಿಷ್ಯ ನೋಡುವ ಪುರೋಹಿತರು 'ಈ ಸಮುದ್ರವನ್ನು ದಾಟಿದ ರಾಜರು ತಮ್ಮ ರಾಜ್ಯವನ್ನು ಕಳೆದುಕೊಳ್ಳುತ್ತಾರೆ' ಎಂದು ಹೇಳುತ್ತಿದ್ದರು. ಆದುದರಿಂದ ಅಲ್ಲಿನ ಜನರು ಈ ಸಮುದ್ರವನ್ನು ದಾಟುತ್ತಿರಲಿಲ್ಲ.

ಅಲ್ಲಿನ ಸರದಾರರಲ್ಲಿ ತುರ್ಕಾನ್ ಐಗೋರ್ ಒಬ್ಬನಾಗಿದ್ದ. 'ಐಗೋರ್' ಅವನ ಬಿರುದಾಗಿತ್ತು. ಈ ಸರದಾರ ಮತ್ತು ಅವನ ಚಿಕ್ಕಪ್ಪನ ಮಕ್ಕಳ ಮಧ್ಯೆ ಯುದ್ಧವು ನಡೆಯುತ್ತಲೇ ಇತ್ತು. ಈ ಯುದ್ಧದಲ್ಲಿ ಆ ಜನರು ಸೋತು ಸಮುದ್ರದ ಹಾದಿಯಲ್ಲಿ ಓಡಿಹೋದರು. ಅಲ್ಲಿನ ಕಿನಾರೆಯಲ್ಲಿ ನೆಲೆನಿಂತರು. ಇವರ ತಲೆಮಾರಿನಲ್ಲಿ ಹುಟ್ಟಿದವರು ತುರ್ಕಾನೆ ಬರ್ಮಿಯೋ ಎಂದು ಕರೆಯಲ್ಪಟ್ಟರು. ನಂತರ ಈ ಜನರು ರಂಗೂನಿನ ರಾಜನ ಜೊತೆಗೆ ಸಂಧಾನ ಮಾಡಿಕೊಂಡರು. ಬಾದಶಾಹ ಇವರೊಂಧಿಗೆ ಮಾಡಲಾದ ಕರಾರಿನಂತೆ ಈ ಜನರು ಆಮರಣ ಉಪರಾಂತ ತನ್ನ ಸೇವೆಯಲ್ಲಿ ನಿರತರಾಗಿರಬೇಕಾಗಿತ್ತು. ಇವರು ಐಗೋರಿ ಪಂಗಡದಲ್ಲಿ ಆರು ಸಾವಿರ ಮಂದಿ ಇದ್ದರು. ಇವರು ಬಹಳ ಸಂಕಷ್ಟಕ್ಕೊಳಗಾದ ತಮ್ಮ ಬದುಕನ್ನು ಗುಲಾಮರಂತೆ ಹತಾಶರಾಗಿ ಕಳೆಯುತ್ತಿದ್ದರು. ಈ ರಾಜ್ಯದಲ್ಲಿ ಇಂತಹ ಜನರ ಮೈಮೇಲೆ ಗುರುತಿಗಾಗಿ ನಾಣ್ಯದ ಅಗಲದ ಮಚ್ಚೆಯನ್ನು ಮಾಡುತ್ತಿದ್ದರು. ಅಲ್ಲಿನ ರಾಜ್ಯದಲ್ಲಿ ನಡೆಯುವ ಒಂದು ಉತ್ಸವದಲ್ಲಿ ಮಾಡಿಸಲಾಗುವ ಮಚ್ಚೆಯಲ್ಲಿ ನಾಯಿಯ ರೂಪದ ಚಿತ್ರ

ಮೂಡಿಸಲಾಗುತ್ತಿತ್ತು. ಈ ಮೂಲಕ ಅವರ ಪರಿಚಯ ಇತರರಿಗೆ ಆಗುತ್ತಿತ್ತು. ಇವರು ಇಜಾರು ಪೈಜಾಮ ತೊಡುವಂತಿರಲಿಲ್ಲ. ಇಲ್ಲಿನ ರಾಜ ಇವರು ಎಲ್ಲಾದರೂ ಸಮುದ್ರ ದಾಟಿ ಹೋದಲ್ಲಿ ತನಗೆ ಕೇಡಿದೆ ಎಂದು ಕೊಂಡಿದ್ದ. ಈ ಕಾರಣಕ್ಕಾಗಿ ಇವರಿಗೆ ಮರುಭೂಮಿಯ ಪ್ರದೇಶದಲ್ಲಿ ವಾಸಕ್ಕೆ ಏರ್ಪಾಡು ಮಾಡಲಾಗಿತ್ತು. ಬಹಳ ವರ್ಷಗಳ ತನಕ ಈ ಜನರು ಅಲ್ಲಿಯೇ ವಾಸಿಸುತ್ತಿದ್ದರು. ಆದರೆ ಬರ್ಮೀಯರ ಮುಂದಿನ ಜನಾಂಗದಲ್ಲಿ ಈ ಮಚ್ಚೆಯ ಕಲೆಯು ಮಾಸತೊಡಗಿತು. ಇವರ ತಲಾಂತರದ ಮೂರನೇ ಹಂತದಲ್ಲಿ ಅಲ್ಲಿನ ರಾಜರ ವಂಶವಾಹಿನಿಯನ್ನು ಸಂಪೂರ್ಣವಾಗಿ ನಾಶಪಡಿಸಿದರು.

ಈ ಬರ್ಮಾದ ಐಗೋರರು ಅಲ್ಲಿ ಜಯಗಳಿಸಿದಾಗ ಹಾಗೂ ಸಂಪೂರ್ಣವಾಗಿ ವಶಪಡಿಸಿಕೊಂಡು ಅವರ ರಾಜ್ಯಾಡಳಿತವನ್ನು ಕೈಗೆ ತೆಗದುಕೊಂಡಾಗ ಪದಿನೇಳು ವರ್ಷಗಳಲ್ಲಿ ಬದಲಾವಣೆಗೊಂಡಿತು. ಹೀಗೆ ಒಂದು ಇಪ್ಪತ್ತು ವರ್ಷಗಳ ಕಾಲಾವಧಿಯಲ್ಲಿ ನಾಯಿಯ ಚಿತ್ರದ ಮಚ್ಚೆ ಘನತೆ ಗೌರವದ ಚಿನ್ಹೆಯಾಗಿ ಬದಲಾಯಿತು. ಇವರ ಆಳ್ವಿಕೆಯು ಖಾಯಮ್ಮಾಗಿ ಉಳಿಯಿತು. ಈ ಸಂಪೂರ್ಣ ಪ್ರದೇಶವು ಅವರ ಕೈಯೊಳಗೆ ಸೇರಿಕೊಂಡಿತು. ಇವರೊಂದಿಗೆ ಸೈನ್ಯವೂ ಬಹಳಷ್ಟು ಜಮಾವಣೆಯಾಗಿ ಅವರ ಆಡಳಿತ ಶಾಶ್ವತಗೊಂಡಿತು. ಇವರ ಅರಮನೆಯ ದರ್ಬಾರಿನಲ್ಲಿ ಮೂರು ಸಾಲುಗಳು ಸಮಾನವಾಗಿ ಆಸನಗಳನ್ನು ಇಡಲಾಗಿತ್ತು. ಮೊದಲನೆಯ ಸಾಲಿನಲ್ಲಿ ಮಂತ್ರಿಗಳು, ಸರದಾರರು ಮಧ್ಯದ ವೇದಿಕೆಯಲ್ಲಿ ಬಾದಶಾಹ ಮತ್ತು ಪತ್ನಿ ಎರಡನೆಯ ಸಾಲಿನಲ್ಲಿ ಅರಮನೆಯ ರಾಜಕುಟುಂಬದ ಮಕ್ಕಳು ಕೂತಿದ್ದರು. ಇನ್ನೊಂದು ವೇದಿಕೆಯ ಆಸನದಲ್ಲಿ ಬಾದಶಾಹನ ಹಿರಿಯ ಮಗ ರಾಜಕುಮಾರ ಕೂತಿರುತ್ತಿದ್ದ. ಮಧ್ಯದಲ್ಲಿರುವ ರಾಜನ ಸಿಂಹಾಸನದಲ್ಲಿ ಬೆಲೆಬಾಳುವ ವಜ್ರ ವೈಢೂರ್ಯ, ಮಾಣಿಕ್ಯಗಳನ್ನು ಪೋಣಿಸಲಾದ ಕುಸುರಿ ಕೆಲಸ ಎದ್ದುಕಾಣುತ್ತಿತ್ತು. ಆದರೆ ಇವರ ವೇಷಭೂಷಣಗಳು ಹಳೆಯ ರೀತಿಯಲ್ಲಿತ್ತು. ಅವರ ಕೈ ಮತ್ತು ಭುಜಗಳ ಆಭೂಷಣಗಳಲ್ಲಿ ಹಲವು ವಿಧದ ಬೆಲೆಬಾಳುವ ಹರಳುಗಳು, ಮುತ್ತುಗಳು ಪೋಣಿಸಲಾಗಿತ್ತು. ತಮ್ಮ ದೇಹದಲ್ಲಿ ಕೆಂಪು ಚಂದನವನ್ನು ತೇಯ್ದು ಹಚ್ಚಿಕೊಳ್ಳುತ್ತಿದ್ದರು. ಬಾದಶಾಹನ ಸಿಂಹಾಸನದ ಬಳಿಯಲ್ಲಿ ನಾಲ್ಕು ಸುಂದರ ಯುವತಿಯರು ಆಕರ್ಷಕ ಬಟ್ಟೆಬರೆ ಮತ್ತು ಆಭರಣಗಳನ್ನು ಧರಿಸಿ ನಿಂತಿರುತ್ತಿದ್ದರು. ಅವರ ಕೈಯಲ್ಲಿ ಸಮುದ್ರದಲ್ಲಿ ದೊರೆಯುವ ದೊಡ್ಡ ಶಂಖಗಳಿದ್ದವು. ಅವರು ಸುಗಂಧವನ್ನು ಬಾದಶಾಹನ ಮೇಲೆ ಆಗಾಗ ಸಿಂಪಡಿಸುತ್ತಿದ್ದರು. ಆ ಮಹಲಿನಲ್ಲಿ ಮರದ ಪಟ್ಟಿಯೊಂದಿಗೆ ದೊಡ್ಡ ಕನ್ನಡಿಯಿತ್ತು. ಇದರಲ್ಲಿ ಹೊರಗಿನ ದೃಷ್ಯವನ್ನು ಬಾದಶಾಹ ಮತ್ತು ಅವನ ಪತ್ನಿ ಯಾವಾಗ ಬೇಕಾದರೂ ನೋಡಬಹುದಾಗಿತ್ತು.

**ಚಿನ್ನ ಮತ್ತು ಮಾಣಿಕ್ಯದ ಗಣಿಯಲ್ಲಿ ಒಂದು ದೇವಾಲಯವನ್ನು ನಿರ್ಮಿಸಿದ ವಿವರಗಳು:**

ಒಂದು ಕಾಲದಲ್ಲಿ ಈ ಐಗೋರ್ ಬರ್ಮೀಯ ಅರಸರ ಆಳ್ವಿಕೆಗೆ ಕೆಟ್ಟ ದೃಷ್ಟಿ ತಾಗಿತು. ಇವರು ಇಸ್ಲಾಮ್ ಧರ್ಮದ ಪ್ರಕಾರ ಬದುಕುವುದನ್ನು ತೊರೆದಿದ್ದರು. ಇದು ಹಿಜರಿ ವರ್ಷ ೧೧೧೩ನೆಯದಾಗಿತ್ತು. ಈ ಜನರು ಇಸ್ಲಾಮ್ ಧರ್ಮದ ಪಾಲನೆಯನ್ನು ಮಾಡುತ್ತಿರಲಿಲ್ಲ. ಒಟ್ಟಾರೆಯಾಗಿ ಅಲ್ಲಿನ ಇತಿಹಾಸ ಚುಟುಕಾಗಿ ಹೇಳುವುದಿದ್ದರೆ ಹೀಗಿದೆ:

ಈ ರಾಜ್ಯದ ಒಂದು ಭಾಗದ ಹಿಂದೂ ಮಹಾಸಾಗರಕ್ಕೆ ತಾಗಿದಂತೆ ಇರುವ ಸ್ಥಳದಲ್ಲಿ ಶ್ರೀಗಂಧ, ಊದ್, ಅಂಬರ್ ಮುಂತಾದ ಅಮೂಲ್ಯ ಮರಗಳ ಕಾಡು ಇದೆ. ಈ ಕಾಡಿನ ಮಧ್ಯದಲ್ಲಿ ಮೂರು ಮೈಲು ಉದ್ದ ಒಂದು ಮೈಲು ಅಗಲದ ಒಂದು ಕುಳಿ ಇದೆ. ಇದರಲ್ಲಿ ದೊಡ್ಡದೊಂದು ಮಾಣಿಕ್ಯದ ಕಲ್ಲು ಬಂಡೆ ಇದೆ. ಬಾದಶಾಹನಿಗೆ ಈ ಭಾಗದ ಭೂಮಿಯ ಬಗ್ಗೆ ತಿಳಿದು ಬಹಳ ಆಶ್ಚರ್ಯ ವಾಯಿತು. ಆದರೆ ಈ ಭಾಗವು ಮೂರ್ತಿಪೂಜೆ ಮಾಡುವ ಪಂಗಡಗಳ ಕ್ಷೇತ್ರವಾಗಿತ್ತು. ಬಾದಶಾಹ ಈ ಪ್ರದೇಶವನ್ನು ವಶಪಡಿಸಿಕೊಂಡು ಮೊದಲು ಈ ಗಣಿ ಪ್ರದೇಶದಲ್ಲಿ ಒಂದು ದೇವಾಲಯವನ್ನು ನಿರ್ಮಿಸಲು ಬಯಸುತ್ತೇನೆಂದು ಘೋಷಿಸಿದ. ಮೊದಲು ಆ ಗಣಿಪ್ರದೇಶದ ಬಳಿಯಲ್ಲಿ ಒಂದು ಸಾವಿರದ ಇನ್ನೂರು ಗಜಗಳ ಉದ್ದ ಮತ್ತು ನಾಲ್ಕು ನೂರು ಗಜಗಳ ಅಗಲದ ಒಂದು ದೇವಾಲಯವನ್ನು ನಿರ್ಮಿಸಿದ. ಒಳಗಿನ ಕಲ್ಲುಗಳಲ್ಲಿ ಕೆತ್ತನೆ, ಕುಸುರಿ ಕೆಲಸಗಳು, ಮೇಲ್ಭಾಗದ ಸೂರಿನಲ್ಲಿ ಸುಂದರ ಕೆತ್ತನೆಯ ಕೆಲಸಗಳನ್ನು ಮಾಡಿಸಿದ. ದೇವಾಲಯದ ದ್ವಾರದಲ್ಲಿ ಬೆಲೆಬಾಳುವ ಹರಳುಗಳ ಕುಸುರಿಕೆಲಸಗಳನ್ನು ಮಾಡಿಸಿದ್ದ. ಇವೆಲ್ಲ ಕೆಲಸಗಳನ್ನು ಬಾದಶಾಹ, ತನ್ನ ಮಕ್ಕಳು, ಮಂತ್ರಿಗಳ ಉಸ್ತುವಾರಿಯಲ್ಲಿ ಮೂರು ವರ್ಷಗಳ ಒಳಗೆ ಪೂರ್ಣಗೊಳಿಸಿದ. ಅಲ್ಲಿನ ರಾಜ್ಯದ ರಾಜನಿಗೆ ದೇವಾಲಯದ ಕೆಲಸಗಳು ಪೂರ್ಣಗೊಂಡಿತೆಂದು ತಿಳಿದಾಗ ದೇವಾಲಯಕ್ಕೆ ಪೂಜೆಮಾಡಲಿಕ್ಕಾಗಿ ಐದು ಸಾವಿರ ಆನೆಗಳ ಸೈನ್ಯದೊಂದಿಗೆ, ವೈಭವದ ಬಾಜಾಬಜಂತ್ರಿಗಳ ಜೊತೆಗೆ ಹೊರಟ. ದೇವಾಲಯ ಕಟ್ಟಿಸಿದ ಬಾದಶಾಹನಿಗಾಗಿ ಒಂದು ಅರಮನೆಯನ್ನೂ ಬಿಟ್ಟುಕೊಟ್ಟಿದ್ದ. ಅವನ ಜೊತೆಗೆ ಬುದ್ಧಿವಂತ, ವಿದ್ಯಾವಂತ, ಜ್ಯೋತಿಷಿಗಳಾದ ಒಂದು ಸಾವಿರ ಬ್ರಾಹ್ಮಣ ಪುರೋಹಿತರು ಈ ರಾಜನ ಜೊತೆಯಲ್ಲಿದ್ದರು. ರಾಜ ಮತ್ತು ಅವನ ಮಗ ಐಗೋರ್ ಬರ್ಮೀಯ ಬಾದಶಾಹನನ್ನು ಭೇಟಿಯಾಗಲು ಹೋದ. ರಾತ್ರಿ ಒಂಭತ್ತು ಗಂಟೆಯ ತನಕ ದೇವಾಲಯದಲ್ಲಿ ಭಜನೆಮಾಡುತ್ತ ಕೂತರು. ರಾಜ ತನ್ನ ಜೊತೆಯಲ್ಲಿ ತಂದಿದ್ದ ಉಡುಗೊರೆಗಳನ್ನು ಬಾದಶಾಹನಿಗೆ ನೀಡಿದ.

ಇವರ ಪರಿವಾರದವರು ಮತ್ತು ಈ ಅರಸರು ಮಾತುಕತೆಯಲ್ಲಿ ಮಗ್ನರಾಗಿದ್ದಾಗ ಬೆಳಗಾದದ್ದು ತಿಳಿಯಲಿಲ್ಲ. ದೇವಾಲಯದಲ್ಲಿ ಎಂತಹ ದೊಡ್ಡ ಚೀತ್ಕಾರ ಕೇಳಿಬಂತೆಂದರೆ ಅಲ್ಲಿದ್ದ ರಾಜರು, ಪರಿವಾರದವರು, ನೆರೆದಿದ್ದ ಜನರೆಲ್ಲ ಸ್ಮೃತಿತಪ್ಪಿ ಬಿದ್ದುಬಿಟ್ಟರು. ಐಗೋರ ಬರ್ಮಿ ಬಾದಶಾಹನ ಜೊತೆಗಿದ್ದ ಎಲ್ಲ ಜನರು ದೇವಾಲಯವನ್ನು ಬಲಿಷ್ಠವಾದ ಕಲ್ಲುಗಳಿಂದ ಕಟ್ಟಿಸಿದ್ದು ದೇವರ ಕೋಪಕ್ಕೆ ತುತ್ತಾಗಿ ಕಳಚಿಬಿದ್ದು ನಾಶವಾಗಿಬಿಟ್ಟಿತು! ದೇವಾಲಯದ ಸೂರು ಕಳಚಿ ನೆಲಕ್ಕೆ ಅಪ್ಪಳಿಸಲ್ಪಟ್ಟಿತ್ತು. ಅಲ್ಲಿ ಕಟ್ಟಿಸಲಾಗಿದ್ದ ಮಹಲು ಬೆಂಕಿಯಲ್ಲಿ ಕರಟಿ ನಾಶವಾದಂತೆ ದರದರನೆ ಉರುಳಿ ಬಿದ್ದು ಹೋಗಿತ್ತು. ದೇವರ ಪ್ರಕೋಪ ಎಂತಹ ಭಯಂಕರ ರೂಪತಾಳಿತೆಂದು ಪ್ರತ್ಯಕ್ಷವಾಗಿ ಕಂಡುಬಂತು. ಗೋಲ್ಕೊಂಡದ ಬಾದಶಾಹ ಕುತುಬ್ ಷಾ ಕೂಡ ತನ್ನ ಆತ್ಮಚರಿತ್ರೆಯಲ್ಲಿ ಈ ಘಟನೆಯ ಬಗ್ಗೆ ಬರೆದಿದ್ದ. ನಂತರ ಐತಿಹಾಸಿಕ ಸಂಶೋಧಕರ ಅಭಿಪ್ರಾಯದಲ್ಲಿ ಈ ಘಟನೆಯು ಇಲ್ಲಿರುವ ದ್ವೀಪದ ಪ್ರಭಾವದಿಂದ ಆಗಿತ್ತು. ಈ ದ್ವೀಪವನ್ನು ಈಗ ದೇವಮಹಲ್ ದ್ವೀಪವೆಂದು ಕರೆಯಲ್ಪಡುತ್ತಿದೆ. ಇದು ದಕ್ಷಿಣದಿಂದ ಪೋರ್ಚುಗಲ್ ದೇಶಕ್ಕೆ ಹೋಗುವ ಹಾದಿಯಲ್ಲಿ ಈ ದ್ವೀಪವಿತ್ತೆಂದು ಹೇಳಲಾಗುತ್ತದೆ. ಹಿಜರಿ ವರ್ಷ ೮೨೫ರಲ್ಲಿ ಪೋರ್ಚುಗಲ್‌ನ ಸಮುದ್ರದಲ್ಲಿ ಈ ದ್ವೀಪವಿತ್ತೆಂದೂ ಮೂವತ್ತು ವರ್ಷಗಳ ತನಕ ಇತ್ತೆಂದೂ ಪರಂಗಿ ರಾಜ ಅಲ್ಲಿ ಆಡಳಿತ ನಡೆಸಿದ್ದ. ಅದರ ಹಳೆಯ ಹೆಸರು 'ದೂದಿಯಾ' ಎಂದು ಹೇಳಲಾಗಿ, ಅದು ಅಲ್ಲಿ ಮುಳುಗಿ ಇಲ್ಲಿಗೆ ಬಂದು ಸೇರಿತೆಂದು ಕೂಡ ಹೇಳಲಾಗುತ್ತದೆ. ಇದೇ ದ್ವೀಪದಲ್ಲಿ ಇಂತಹದ್ದೇ ದೇವ ಮಹಲಿನ ಕುರುಹು ಇತ್ತು. ಇಲ್ಲಿ ಸಖೆಗಾಲ, ಚಳಿಗಾಲದ ಎಲ್ಲ ರೀತಿಯ ಹಣ್ಣು ಹಂಪಲುಗಳು ಸಿಗುತ್ತಿದ್ದವು ಎಂದು ಹೇಳುತ್ತಾರೆ. ಇಲ್ಲಿ ಬೆಳೆಯುತ್ತಿರುವ ಬೆಳೆಗಳಲ್ಲಿ ತೆಂಗಿನ ಕಾಯಿಯೂ ಒಂದಾಗಿದ್ದು ಇದನ್ನು ಸೇವಿಸುವುದರಿಂದ ಹಲವು ರೋಗಗಳು ನಿವಾರಣೆಯಾಗುತ್ತವೆಂಬ ಪ್ರತೀತಿ ಇದೆ.

ತೆಂಗಿನ ಚಿಪ್ಪಿನಿಂದ ನೀರು ಕುಡಿಯಲು ಉಪಯೋಗಿಸುತ್ತಿದ್ದರು. ಅದನ್ನು ಬೆಳ್ಳಿಯ ತಗಡಿನಿಂದ ಸುತ್ತಿ ಹಿಂದಿನ ಕಾಲದಲ್ಲಿ ಖಜಾನೆಯಲ್ಲಿ ಇಡುತ್ತಿದ್ದರೆನ್ನಲಾಗುತ್ತದೆ. ಬಾದಶಾಹ ಜಹಾಂಪನಾರ ಖಜಾನೆಯಲ್ಲಿ ಕೂಡ ಇಂತಹ ಮೂರು ನಾಲ್ಕು ಚಿಪ್ಪುಗಳು ಇದ್ದವು. ಇವನ್ನು ಯಾರೋ ಫಕೀರನೊಬ್ಬ ನೀಡಿದ್ದನೆನ್ನಲಾಗುತ್ತದೆ. ಚಿಕ್ಕ ಚಿಪ್ಪುಗಳು ಹೆಚ್ಚೇನೂ ಉಪಯೋಗಕ್ಕೆ ಬರುತ್ತಿರಲಿಲ್ಲ. ಬೆರಳುಗಳಷ್ಟು ಚಿಕ್ಕ ತೆಂಗಿನ ಚಿಪ್ಪುಗಳು ಕೂಡ ಕಾಣಸಿಕ್ಕಿವೆ. ಈ ದ್ವೀಪವು ವ್ಯಾಪಾರಕ್ಕೆ ಕೂಡ ಬಹಳ ಹೆಸರುವಾಸಿಯಾಗಿತ್ತು. ನಾಲ್ಕೂ ದೆಸೆಯಿಂದ ವ್ಯಾಪಾರಸ್ಥರು ಇಲ್ಲಿಗೆ ಬರುತ್ತಿದ್ದರು. ಈ ದ್ವೀಪದ ಬಂದರು ಕೂಡ ಹೆಸರುವಾಸಿಯಾಗಿತ್ತು. ಈ ದ್ವೀಪದ ವಾತಾವರಣವೂ ಕೂಡ ಹಿತಕರವಾಗಿದ್ದು ಜನರು ಈ ವಾತಾವರಣವನ್ನು ಬಹಳಷ್ಟು ಮೆಚ್ಚಿಕೊಂಡಿದ್ದರು.

**ಬಂಗಾರದ ಪರ್ವತದ ಆಸೆಯಿಂದ ಇಸ್ತಾಂಬೂಲಿನಿಂದ ಜನರು ಬಂದ ವಿವರಗಳು:**

ಬಹಳ ಕಷ್ಟಪಟ್ಟು ಕೆಲವರು ವ್ಯಾಪಾರದ ಉದ್ದೇಶದಿಂದ ಹಿಜರಿ ವರ್ಷದ ೯೫೫ರಲ್ಲಿ ರೂಹತಾಸಿನ ಕೋಟೆಯ ಬಳಿಯ ಆರಿ ಕೋಟೆಯಲ್ಲಿ ಬಂದು ನೆಲೆಸಿದ್ದರು. ಅವರ ಪೈಕಿ ಒಬ್ಬರು ಮೌಲನಾ ಇಸ್ಮಾಯಿಲ್ ರೂಮಿ ಕೂಡ ಇಲ್ಲಿನ ಆರಿ ಕೋಟೆಯಲ್ಲಿ ನಿಂತಿದ್ದರು. ನನಗೆ ಇವರ ಜೊತೆಗೆ ಕೆಲವು ದಿನಗಳ ಕಾಲ ನಿಲ್ಲುವ ಅವಕಾಶ ಸಿಕ್ಕಿತ್ತು. ಆಗ ಅವರು ತಮ್ಮ ಬಗ್ಗೆ ವಿಶಿಷ್ಟವಾದ ಸಂಗತಿಯನ್ನು ನನಗೆ ಹೇಳಿದ್ದರು. ಅದನ್ನು ಇಲ್ಲಿ ಪ್ರಸ್ತುತಪಡಿಸುತ್ತಿದ್ದೇನೆ:

ಕುಸ್ತುಂತುನಿಯಾ ಅಥವಾ ಈಗಿನ ಇಸ್ತಂಬೂಲ್ ಎಂಬ ಹೆಸರಲ್ಲಿ ಪ್ರಸಿದ್ಧ ಕ್ಷೇತ್ರದಲ್ಲಿ ನನ್ನ ಜನನವಾಯಿತೆಂದು ಹಿರಿಯರು ಹೇಳುತ್ತಾರೆ. ನಾವು ಕೆಲವು ಸಲ ಕೃಷಿಯ ಕೆಲಸಗಳಲ್ಲಿ, ಕೆಲವು ಸಲ ವ್ಯಾಪಾರ ವಹಿವಾಟು ಮಾಡುತ್ತಿದ್ದೆ. ವ್ಯಾಪಾರದ ಕಾರಣಕ್ಕೆ ನಾನು ಯಾವಾಗಲೂ ವ್ಯಾಪಾರಿಗಳ ಜೊತೆಗೆ ನನ್ನ ಸಂಪರ್ಕವನ್ನು ಇಟ್ಟುಕೊಂಡಿದ್ದೆ. ಒಂದು ಸಲ ವ್ಯಾಪಾರಿಗಳ ತಂಡವು ಬೇರೆ ವ್ಯಾಪಾರಿಗಳ ತಂಡದೊಂದಿಗೆ ಸೇರಿ ಸಭೆ ಸೇರಿ ನಾವೆಲ್ಲ ಒಟ್ಟಿಗೆ ಬಂಗಾರದ ಪರ್ವತವನ್ನು ನೋಡೋಣ ಎಂದು ತೀರ್ಮಾನಿಸಿದರು. ಒಂದು ಹಡಗನ್ನು ಖರೀದಿಸಿ ನಾವು ಎಪ್ಪತ್ತು ಜನ ವ್ಯಾಪಾರಿಗಳು, ನೌಕರರು, ಹಡಗಿನ ಕೆಲಸಗಾರರು ಸೇರಿ ಅಲ್ಲಿಗೆ ಪ್ರಯಾಣ ಬೆಳೆಸಿದೆವು'.

ನಾನು ಕೂಡ ಖರ್ಚಿಗೆ ಬೇಕಾದ ಹಣ ಹಿಡಿದುಕೊಂಡು ಈ ವ್ಯಾಪಾರಿಗಳೊಂದಿಗೆ ಪ್ರಯಾಣಿಸಿದೆ. ಸಮುದ್ರದಲ್ಲಿ ಎಂಟು ದಿನಗಳ ಪ್ರಯಾಣ ಮುಗಿಸಿ ಒಂಭತ್ತನೆಯ ದಿನದಂದು ನಾವು ಈ ಪರ್ವತ ಪ್ರದೇಶಕ್ಕೆ ತಲಪಿದೆವು. ಈ ದ್ವೀಪದಲ್ಲಿರುವ ಪರ್ವತವು ಸಂಪೂರ್ಣ ಹಾಲಗಲ್ಲುಗಳಿಂದ ಆವೃತವಾಗಿತ್ತು. ನಾವು ಆ ಪರ್ವತದ ಮೇಲೆ ಹತ್ತಿದೆವು. ಅಲ್ಲಿನ ಮಣ್ಣು ಕೂಡ ಬಿಳಿ ಬಣ್ಣದ ಹರಳುಗಳಿಂದ ಕೂಡಿತ್ತು. ನಾವೆಲ್ಲರೂ ಸೇರಿ ಬಂಗಾರದ ಬೆಟ್ಟವನ್ನು ಹತ್ತಲು ಯೋಜನೆಯನ್ನು ಹಾಕಿಕೊಂಡೆವು. ೪೧ದಿನಗಳ ಪ್ರಯಾಣದ ಬಳಿಕ ನಾವು ಬಂಗಾರದ ಬೆಟ್ಟದ ದ್ವೀಪಕ್ಕೆ ಬಂದು ತಲಪಿದೆವು. ಈ ಪರ್ವತವು ಸೂರ್ಯನ ಕಿರಣಗಳಿಂದ ಎಂತಹ ರೀತಿಯಲ್ಲಿ ಬೆಳಗುತ್ತಿತ್ತೆಂದರೆ, ಬೆಂಕಿಯ ಚೆಂಡುಗಳು ಒಳಗಿಂದ ಓಡಾಡುತ್ತಿರುವಂತೆ ಕಾಣಿಸುತ್ತಿತ್ತು! ಕಣ್ಣುಗಳನ್ನು ಕುಕ್ಕುವಂತಹ ಬೆಳಕು ಅಲ್ಲಿಂದ ಹೊರಡುತ್ತಿರುವುದರಿಂದ ಸೂರ್ಯನ ಬೆಳಕಿರುವಾಗ ಆ ಬೆಟ್ಟವನ್ನು ನೋಡುವುದು ಕಷ್ಟಕರವಾಗಿತ್ತು. ಹೀಗಾಗಿ ನಾವು ಮುಂಜಾನೆ ನಾವು ಹಡಗು ಹತ್ತಿ ಬೆಟ್ಟದ ಬಳಿಗೆ ಹೋದೆವು. ನಮಗೆ ಇದೊಂದು ಅವಿಸ್ಮರಣೀಯ ಅನುಭವವಾಗಿ ಅತ್ಯಂತ ಸಂತಸಪಟ್ಟುಕೊಂಡೆವು. ಮೂರು ನಾಲ್ಕು

ದಿನಗಳ ಕಾಲ ಅಲ್ಲಿದ್ದು ಹಡಗಿನಲ್ಲಿ ಬಂಗಾರದ ತುಂಡುಗಳನ್ನು ತಂದು ತುಂಬಿಸಲು ತೊಡಗಿದೆವು. ಹಡಗಿನಲ್ಲಿ ಬಂಗಾರವನ್ನು ತುಂಬಿದೆವು. ಹಡಗನ್ನು ಚಲಿಸಲು ಮುಂದಾದಾಗ ಒಂದು ಮಾರು ದೂರದಷ್ಟು ಹೋಗಿ ಹಡಗು ನಿಂತುಬಿಟ್ಟಿತು. ಮತ್ತೆ ಚಲಿಸಲಿಲ್ಲ. ಎಷ್ಟು ಪ್ರಯತ್ನಪಟ್ಟರೂ ಸಾಧ್ಯವಾಗಲಿಲ್ಲ. ನಮಗೆ ಮತ್ತೊಂದು ದಿನ ಅಲ್ಲಿ ನಿಲ್ಲಬೇಕಾಯಿತು. ಹಡಗನ್ನು ಖಾಲಿ ಮಾಡಿದೆವು. ಏನಾದರೂ ಉಳಿದಿರಬಹುದೆಂದು ಮತ್ತ ಹಡಗನ್ನು ಸಂಪೂರ್ಣವಾಗಿ ಶೋಧಿಸಿದೆವು. ಮತ್ತೆ ನಮ್ಮ ಪ್ರಯಾಣವನ್ನು ಮುಂದುವರಿಸಿದೆವು. ಅಷ್ಟರಲ್ಲಿ ಸಮುದ್ರದಲ್ಲಿ ತುಫಾನು ಎದ್ದು ಅಲ್ಲೋಲಕಲ್ಲೋಲವಾಗಿ ಮುಂದೆ ಹೋಗಲಾರದಾದೆವು. ನಾವು ಅಲ್ಲಿ ಹತ್ತು ದಿನಗಳ ಕಾಲ ಅಲ್ಲಿ ನಿಲ್ಲುವುದು ಅನಿವಾರ್ಯವಾಯಿತು. ತೆರೆ ಎದ್ದೆದ್ದು ಬೀಳಲು ತೊಡಗಿದಾಗ ಹಡಗು ಎದ್ದೆದ್ದು ಬೀಳತೊಡಗಿತು. ತೂಫಾನು ಮತ್ತೆ ಮತ್ತೆ ಹೆಚ್ಚುತ್ತಲೇ ಹೋಯಿತು. ಎಷ್ಟೊಂದು ಜೋರಾಗಿ ತೆರೆಗಳು ಮೇಲೇಳುತ್ತ ಹೋದುವೆಂದರೆ ಅದರಷ್ಟೇ ಎತ್ತರಕ್ಕೆ ನಮ್ಮ ಸಂಕಷ್ಟಗಳೂ ಬೆಳೆಯುತ್ತ ಹೆಚ್ಚುತ್ತ ಹೋಯಿತು.

ಈ ತೂಫಾನಿಗೆ ಸಿಕ್ಕ ಹಡಗು ಮತ್ತು ನಮ್ಮ ಜೀವವು ಉಳಿಯುವುದೆಂಬ ಧೈರ್ಯವು ನಮಗೆ ಇರಲಿಲ್ಲ. ಹಡಗಿನ ಪ್ರತಿಯೊಬ್ಬ ಕೆಲಸಗಾರನೂ ಸಂಕಷ್ಟಕ್ಕೆ ಸಿಕ್ಕಿಬಿದ್ದಿದ್ದ. ಕೆಲವರು ತಮ್ಮ ಸಾವು ಸಮುದ್ರದಲ್ಲೇ ಬರೆದಿದೆ ಎಂದರೆ, ಕೆಲವರು ನಾವು ಸಮುದ್ರದಿಂದ ಹೊರಬರುವುದೇ ಕಷ್ಟವೆಂದು ಹೇಳುತ್ತಿದ್ದರು. ತಮ್ಮ ಮನಸ್ಸಿಗೆ ಬಂದಂತೆ ಎಲ್ಲರೂ ಏನಾದರೊಂದು ಹೇಳಿ ಗುಣುಗುಟ್ಟುತ್ತಿದ್ದರು. ಈಗ ಹಡಗಿನಲ್ಲಿ ದಾಸ್ತಾನು ಮಾಡಿಟ್ಟ ಆಹಾರವೂ ಕಮ್ಮಿಯಾಗತೊಡಗಿತ್ತು. ಒಂದು ದಿನದ ಆಹಾರವನ್ನು ಮೂರು ನಾಲ್ಕು ದಿನ ಉಪಯೋಗಿಸಿ ಉಣ್ಣುತ್ತಿದ್ದೆವು. ಹೀಗೆ ದಿನಗಳುರುಳುತ್ತಲೇ ಇದ್ದವು. ಆದರೆ ಈ ಸಂಕಷ್ಟದಿಂದ ಪಾರಾಗುವ ಆಸೆಯೇ ಬತ್ತಿಹೋಗಿತ್ತು! ಹಡಗಿನ ಕೆಲಸಗಾರರು ಅತ್ತು ಕೂಗತೊಡಗಿದರು. ಎಲ್ಲರೂ ಶಕ್ತಿಹೀನರಾಗತೊಡಗಿದ್ದರು. ಹಡಗು ಪಶ್ಚಿಮದಿಂದ ಪೂರ್ವದ ಕಡೆ ನಡೆಯತೊಡಗಿತು. ಹಡಗಿನ ಕೆಲಸಗಾರರಲ್ಲಿ ತಾವು ಬಚಾವಾಗುವುದು ಸಾಧ್ಯವೆಂಬ ಆಸೆ ಚಿಗುರಿತು. ಐದನೆಯ ದಿನ ಬೆಳಿಗ್ಗೆ ನಿದ್ದೆಯಿಂದ ಎದ್ದಾಗ ಪೂರ್ವದ ಕಡೆಯಲ್ಲಿ ದಡಕಾಣತೊಡಗಿತ್ತು. ಎಲ್ಲರೂ ಬಹಳ ಸಂತಸ ಪಟ್ಟುಕೊಂಡರು ಮತ್ತು ಸಂತೋಷದಿಂದ ದಡದ ನೆಲದಲ್ಲಿ ಕಾಲಿಟ್ಟರು. ಅಲ್ಲಿ ನಾಲ್ಕೂ ದಿಕ್ಕಿನಲ್ಲಿ ನೋಡುವಾಗ ಅಲ್ಲಿ ಯಾವುದೇ ಜೀವ ಜಂತುಗಳ ಇರವಿನ ಸುಳಿವಿರಲಿಲ್ಲ. ಆದರೆ ಮತ್ತಷ್ಟು ಆಸೆಯೊಂದಿಗೆ ನಡೆಯುತ್ತಾ ಕಾಡಿನೊಳಗೆ ಸೇರಿದೆವು. ಕಾಡಿನ ಹಾದಿಯಲ್ಲಿ ಕಲ್ಲು ಮುಳ್ಳುಗಳನ್ನು ಮೆಟ್ಟುತ್ತ ನಡೆವಾಗ ನಮ್ಮ ಬಟ್ಟೆಗಳೆಲ್ಲವೂ ಹರಿದಿದ್ದವು. ಮುಳ್ಳುಗಳು ಚುಚ್ಚಿದ್ದರಿಂದ ದೇಹದಲ್ಲಿ ಅಲ್ಲಲ್ಲಿ ಗೀರು ಗಾಯಗಳಿಂದ ರಕ್ತ ಒಸರುತ್ತಿತ್ತು.

ಹತ್ತು ದಿನಗಳ ಬಳಿಕ ಒಂದು ಚಿಕ್ಕ ಗುಡ್ಡ ಕಣ್ಣಿಗೆ ಬಿತ್ತು. ಅಲ್ಲಿ ಮನುಷ್ಯರ ಮುಖದ ಪ್ರಾಣಿಗಳು ಕಂಡು ಬಂದವು. ಅವುಗಳ ಎತ್ತರ ಐದು ವರ್ಷ ಪ್ರಾಯದ ಮಕ್ಕಳಷ್ಟಿತ್ತು. ಅವರೆಲ್ಲ ವಯಸ್ಸಾದವರಾಗಿದ್ದರು. ಬಟ್ಟೆಗಳನ್ನು ತೊಟ್ಟುಕೊಳ್ಳದೆ ಅವರೆಲ್ಲ ನಗ್ನರಾಗಿದ್ದರು. ನಾಲ್ಕಾರು ಮಂದಿ ನಮ್ಮಕಡೆಯೇ ನೋಡುತ್ತಿದ್ದರು. ಮರದ ಒಂದು ಕೊಂಬೆಯಿಂದ ಇನ್ನೊಂದು ಕೊಂಬೆಗೆ ಹಾರುತ್ತಿದ್ದರು. ನಾವು ನೋಡುವಾಗ ಅವರ ಕುಟುಂಬ, ಮಕ್ಕಳು ಮರಿಗಳ ಜೊತೆಗೆ ಮರಗಳ ಮೇಲೆ ಕೂತಿದ್ದರು. ಅವರೆಲ್ಲರೂ ನಮ್ಮನ್ನು ದುರುಗುಟ್ಟಿ ನೋಡುತ್ತಿದ್ದರು. ಅವರ ತಾಯಿ ಅವರನ್ನು ಪ್ರೀತಿಯಿಂದ ಅಪ್ಪಿಕೊಂಡು ಕೂತಿದ್ದಳು. ಅವಳು ನಮ್ಮ ಕಡೆ ನೋಡುತ್ತ ನಮ್ಮಿಂದ ತಿಂಡಿಯನ್ನು ಕೇಳುತ್ತಿರುವಂತೆ ಸಂಕೇತ ಮಾಡಿ ಹೇಳುತ್ತಿದ್ದಂತೆ ಕಂಡುಬಂದಳು. ನಮ್ಮಲ್ಲಿ ಇದ್ದುದೆಂದರೆ ಕೆಲವು ಚಿಕ್ಕ ಒಣ ಮೀನುಗಳು ಮಾತ್ರ. ಅವುಗಳನ್ನು ಅವರ ಮುಂದೆ ಇಟ್ಟೆವು. ಅವರು ತಿನ್ನತೊಡಗಿದರು. ಹೀಗೆ ಹಾದಿ ಹುಡುಕುತ್ತಾ ಐವತ್ತು ದಿನಗಳ ಬಳಿಕ ಒಂದು ಹಳ್ಳಿಯನ್ನು ಸೇರಿದೆವು. ನಾವು ನೋಡುವಾಗ ಅಲ್ಲಿನ ಪುರುಷರು ಬಹಳ ಎತ್ತರಕ್ಕಿದ್ದು, ಬಲಿಷ್ಠರಾಗಿದ್ದರು. ಅವರು ನಮ್ಮನ್ನು ನೋಡಿದಾಗ ನಮ್ಮ ಬಗ್ಗೆ ವಿಚಾರಿಸಿದರು. ಅವರ ಜೊತೆಯಲ್ಲಿ ಸ್ವಲ್ಪ ಸಮಯ ಕಳೆದೆವು. ಆದರೆ ಅವರ ಭಾಷೆಯನ್ನು ನಾವು ಅರ್ಥಮಾಡಿಕೊಳ್ಳಲು ಸಾಧ್ಯವಾಗಲಿಲ್ಲ. ಆದರೆ ಅವರು ನಮ್ಮ ಜೊತೆಗೆ ತುಂಬ ಒಳ್ಳೆಯರೀತಿಯಲ್ಲಿ ನಡೆದುಕೊಂಡರು. ಅವರು ನಮ್ಮನ್ನು ಅವರ ಪೈಕಿ ಒಬ್ಬ ದೊಡ್ಡ ಮನುಷ್ಯನ ಬಳಿಗೆ ಕರೆದುಕೊಂಡು ಹೋದರು. ಅವನು ನೋಡಲು ತುಂಬ ಆಕರ್ಷಕನಾಗಿದ್ದ. ಅವನು ದಪ್ಪದಪ್ಪಗಿನ ಬಟ್ಟೆಗಳನ್ನು ಧರಿಸಿದ್ದ. ಅವನ ಜೊತೆಗೆ ಕೆಲವು ಜನರಿದ್ದರು. ಅವರು ಪ್ರಾಣಿಗಳ ಚರ್ಮವನ್ನು ಸೊಂಟಕ್ಕೆ ಸುತ್ತಿಕೊಂಡಿದ್ದರು. ಹೀಗೆ ಮೂರು ನಾಲ್ಕು ಜನರ ಪೈಕಿ ಓರ್ವ ತುಂಬ ಚೆನ್ನಾಗಿ ಮಾತಾಡುತ್ತಿದ್ದ. ಅವನು ನಮ್ಮನ್ನು ತನ್ನ ಸರದಾರನ ಬಳಿಗೆ ಕರೆದೊಯ್ದ.

ಅಲ್ಲಿ ಬಹಳಷ್ಟು ಜನರು ಅವನ ಬಳಿಯಲ್ಲಿ ಕೂತಿದ್ದರು. ಬಹಳ ಪ್ರಾಣಿಗಳು ಅವನ ಮುಂದೆ ಹಿಂದೆ ಕೂತಿದ್ದವು. ಹುಲ್ಲು ಮತ್ತು ಕಟ್ಟಿಗೆಯಿಂದ ಕಟ್ಟಲಾದ ಮಹಲಿನಂತಹ ಮನೆಯಲ್ಲಿ ಅವನು ವಾಸಿಸುತ್ತಿದ್ದ. ಒಳಗೆ ವಿಶಾಲವಾದ ಕೋಣೆಯಿದ್ದು ದರ್ಬಾರಿನಂತೆ ಕಾಣುತ್ತಿತ್ತು. ಅಲ್ಲಿ ಶಿಕಾರಿ ಮಾಡಲಾದ ಪ್ರಾಣಿಯ ಮಾಂಸ, ಚರ್ಮಗಳು, ಒಣ ಮೀನುಗಳು ಇದ್ದವು. ಆದರೆ ಅಲ್ಲಿ ಆಹಾರ ಧಾನ್ಯಗಳು ಇರಲಿಲ್ಲ. ಅವರು ಆ ಸರದಾರನಿಗೆ ನಮ್ಮ ಪರಿಸ್ಥಿತಿಯ ಬಗ್ಗೆ ತಿಳಿದುಕೊಂಡಾಗ ನಾವು ಅವನಲ್ಲಿ 'ನಮಗೆ ಇಲ್ಲಿಂದ ಅಜರ್‌ಬೈಜಾನಿಗೆ ಹೋಗುವ ದಾರಿ ತೋರಿಸುವ ಮೂಲಕ ನಮಗೆ ಸಹಾಯ ಮಾಡಿ' ಎಂದು ಕೇಳಿಕೊಂಡೆವು. ಅವನು ನಮ್ಮ ವಿನಂತಿಯನ್ನು ಮನ್ನಿಸಿದ. 'ಈಗ ಸಮುದ್ರದಲ್ಲಿ ನೀರು ತುಂಬಿರುವ ಭರತದ

ಹೊತ್ತು ಇಲ್ಲಿಂದ ಸಮುದ್ರಕ್ಕೆ ತಲಪುವ ಹಾದಿಯೂ ಕಷ್ಟ ಸಾಧ್ಯ. ನಾನು ನಿಮ್ಮನ್ನು ಕಾಡಿನ ಹಾದಿಯಲ್ಲಿ ದಾಟುವುದಕ್ಕೆ ಸಹಾಯವಾಗುವಂತೆ ನಮ್ಮ ಇಬ್ಬರು ಶಿಕಾರಿಗಳು ಮತ್ತು ಎರಡು ನಾಯಿಗಳು ನಿಮ್ಮ ರಕ್ಷಣೆಯೊಂದಿಗೆ ಕಾಡನ್ನು ದಾಟಿಸಿ ರಸ್ತೆಯ ಹಾದಿಯನ್ನು ತಲಪಿಸುತ್ತದೆ. ನನ್ನ ಹಡಗು ನಡೆಸುವವರು ನಿಮ್ಮನ್ನು ನಂತರ ನಿಮ್ಮ ಗುರಿಯನ್ನು ತಲಪಿಸಿ ಹಿಂದಕ್ಕೆ ಬರುತ್ತಾರೆ' ಎಂದು ಆಶ್ವಾಸನೆಯನ್ನು ಅವನು ನೀಡಿದ ನಂತರ ನಮಗೆ ಸಮಾಧಾನವಾಯಿತು. ಕೆಲವು ದಿನಗಳ ನಂತರ ಅವನ ಶಿಕಾರಿಯವರು ಮತ್ತು ಹಡಗಿನ ಕಳಾಸಿ ಕೆಲಸಗಾರರು ಬಂದರು. ಅವರ ಆಗಮನದ ನಂತರ ನಮ್ಮನ್ನು ತನ್ನ ಹಡಗುಗಳ ಮೂಲಕ ಪ್ರಯಾಣ ಮಾಡಲು ವ್ಯವಸ್ಥೆ ಮಾಡಿದ. 'ಈ ಎಲ್ಲ ಪಯಣಿಗರನ್ನು ಅಜರ್ ಬೈಜಾನಿನ ಕುಲ್ಲಾನ್ ಗ್ರಾಮಕ್ಕೆ ತಲಪಿಸಿರಿ. ಅವರ ಕುಟುಂಬದವರನ್ನು ಭೇಟಿಯಾಗಿರಿ. ಆದರೆ ನಿಮ್ಮ ಕಣ್ಣುಗಳು ನೆಲದ ಮೇಲಿರಲಿ. ನಿಮ್ಮ ಪ್ರಯಾಣದ ಅನುಭವವನ್ನು ವಿವರವಾಗಿ ಬಂದು ತಿಳಿಸಿ' ಎಂದು ತನ್ನ ಜನರಿಗೆ ಆದೇಶವನ್ನು ನೀಡಿದ. ಆ ಗ್ರಾಮದ ಹತ್ತಿರ ಒಂದು ಪೂಜಾ ಸ್ಥಳವಿತ್ತು. ಅಲ್ಲಿ ಅವರ ರೀತಿಯಲ್ಲಿ ದೇವರನ್ನು ನೆನೆದು ಪೂಜಿಸಿದೆವು. ಅವರ ದೇವರ ಮೂರ್ತಿಯೊಂದಿಗೆ ವಿದಾಯ ಹೇಳಿ ನಮ್ಮ ಪ್ರಯಾಣವನ್ನು ಮುಗಿಸಿದೆವು. ಹೀಗೆ ಅವರು ನಮ್ಮನ್ನು ನಮ್ಮ ಊರಿಗೆ ತಲಪಿಸಿದರು.

**ಪ್ರಯಾಣಿಕರು ದೇವಾಲಯಕ್ಕೆ ಆರಾಧನೆಗೆ ತೆರಳಿದ ವಿವರಗಳು:**

ಪ್ರಯಾಣಿಕರಲ್ಲಿ ಕೆಲವರು ದೇವಾಲಯಕ್ಕೆ ಹೋದರು. ಅವರಲ್ಲಿ ಕೆಲವರು ಶಿಕಾರಿಗಾಗಿ ಕಾಡಿನ ಕಡೆ ಹೋದರು. ಅವರ ಪತ್ನಿ ಮತ್ತು ಮಕ್ಕಳು ಸರದಾರರ ಬಳಿ ಉಳಿದಿದ್ದರು. ದೇವಾಲಯಕ್ಕೆ ಹೋದವರು ಹಿಂತಿರುಗಿ ಬರುವಾಗ ಬಹಳ ತಡವಾಯಿತು. ಹೆಚ್ಚು ಕಮ್ಮಿ ಇಪ್ಪತ್ತು ದಿನಗಳು ನಮಗೆ ಅವರು ಕಾಣದಾಗಿದ್ದರು. ಒಂದು ರಾತ್ರಿ ಯಾರೋ ಪ್ರಯಾಣಿಕರಲ್ಲಿ ಒಬ್ಬನ ತಲೆಯನ್ನು ಕತ್ತರಿಸಿ ಹಾಕಿದರು. ಮರುದಿನ ಅವರ ಜೊತೆಗಾರರಿಗೆ ಇದು ತಿಳಿದಾಗ ಅಲ್ಲಿನ ಸರದಾರರಿಗೆ ದೂರು ನೀಡಿ ತಮಗೆ ಸಹಾಯಮಾಡಬೇಕೆಂದು ಕೇಳಿಕೊಂಡರು. ಅವನು ಅಲ್ಲಿನ ಕೆಲವರನ್ನು ಕರೆದ. ನೀವು ಇವರ ಜೊತೆಗಾರನನ್ನು ಯಾಕೆ ಕೊಂದು ಹಾಕಿದಿರಿ? ಎಂದು ಕೇಳಿದ. 'ಈ ವ್ಯಕ್ತಿಯು ನಮ್ಮ ಹೆಂಗಸರ ಜೊತೆಗೆ ಕೆಟ್ಟದಾಗಿ ನಡೆದುಕೊಂಡಿದ್ದ' ಎಂದ. 'ನಿನಗೆ ಅದು ಹೇಗೆ ತಿಳಿಯಿತು?' ಎಂದು ಕೇಳಿದಾಗ. 'ನನ್ನ ದೇವರ ಮೂರ್ತಿ ನನಗೆ ಹೇಳಿದೆ. ನನ್ನ ಕುಟುಂಬಕ್ಕೆ ಏನಾದರೂ, ಏನು ನಡೆದರೂ ಅದು ನನಗೆ ತಿಳಿಸುತ್ತದೆ. ಅದು ಕರಡಿಯ ರೂಪದ ಬಂಗಾರದ ಮೂರ್ತಿಯಾಗಿದೆ. ನಾನು ಈ ಮೂರ್ತಿಗೆ ಒಂದು ಗುಡಿಯನ್ನು ಮಾಡಿ ಅದರಲ್ಲಿಟ್ಟಿದ್ದೇನೆ. ನಾನು ಆಗಾಗ ಆ ಗುಡಿಗೆ ಪೂಜೆ ಸಲ್ಲಿಸುವುದಕ್ಕಾಗಿ ಹೋಗುತ್ತಿರುತ್ತೇನೆ. ನನಗೇನಾದರೂ ಬೇಕಾದರೆ ನಾನು ಅದನ್ನು

ಕೇಳಿ ತಿಳಿದುಕೊಳ್ಳುತ್ತೇನೆ' ಎಂದು ಅವನು ಉತ್ತರಿಸಿದ. ಇದು ತಿಳಿದು ಬಂದಾಗ ಪ್ರವಾಸಿಗರೊಂದಿಗೆ ಆತ ಕ್ಷಮೆಯಾಚಿಸಿದ. ಅಲ್ಲಿನ ಸ್ಥಳೀಯರ ಮುಖಿಯಾ ಸರದಾರ ತೀರ್ಮಾನ ನೀಡುತ್ತ 'ನಿಮ್ಮ ಜೊತೆಗಾರನಿಂದ ಗುರುತರವಾದ ತಪ್ಪುಗಳಾಗಿವೆ. ಅದರಿಂದಾಗಿ ನಾನು ನಿಮ್ಮನ್ನು ಬಿಟ್ಟುಬಿಡಲಾರೆ. ನೀವು ಒಂದು ವರ್ಷಗಳ ಕಾಲ ಇಲ್ಲೇ ಇರಬೇಕಾಗುತ್ತದೆ' ಎಂದು ಹೇಳಿದ. ಅವನ ತೀರ್ಪಿನಂತೆ ಎಲ್ಲರೂ ಅಲ್ಲೇ ಉಳಿಯಬೇಕಾಯಿತು.

ಅವರ ಹೆಂಡಿರು ಮಕ್ಕಳು ಕೂಡ ಅವರ ಜೊತೆಗೆ ಅಲ್ಲೇ ಇರತೊಡಗಿದರು. ನಾಲ್ಕು ತಿಂಗಳ ಬಳಿಕ ಮತ್ತೆ ಪ್ರವಾಸಿಗರು ಮತ್ತು ಸ್ಥಳೀಯರ ನಡುವೆ ಸ್ನೇಹದ ವಾತಾವರಣ ಮೂಡಿತು. ಅವರು ಶಿಕಾರಿಯ ಮೂಲಕ ಪಡೆದ ಪ್ರಾಣಿಯನ್ನು ಅವರಿಗೆ ಉಡುಗೊರೆಯಾಗಿ ನೀಡಿದರು. ತಮ್ಮ ಪೂಜೆಯ ಸಮಯದಲ್ಲಿ ದೇವಾಲಯಕ್ಕೆ ಹೋಗುತ್ತಿದ್ದರು. ಹೀಗೆ ಕಾಲಕಳೆಯ ತೊಡಗಿದರು. ಮತ್ತೊಂದು ದಿನ ಹಠಾತ್ತಾಗಿ ಅವರ ಪೈಕಿ ಮತ್ತೆ ಕೆಲವರ ತಲೆಯನ್ನು ಕತ್ತರಿಸಿಹಾಕಲಾಯಿತು. ಮರುದಿನ ಈ ಪ್ರವಾಸಿಗರ ಕೊಲೆಯ ಬಗ್ಗೆ ತಿಳಿದಾಗ ಉಳಿದವರು ಅಲ್ಲಿನ ತಾಂಡಾದ ನಾಯಕ. ಸರದಾರನ ಮುಂದೆ ನಡುಗುತ್ತ, ಅಳುತ್ತ ದೂರು ಹೇಳಿದರು. 'ನಿಮ್ಮ ಸಂಗಾತಿಗಳು ಮಾನಗೆಟ್ಟ ಕೆಲಸ ಮಾಡಿದ್ದಕ್ಕೆ ಮತ್ತೆ ಒಂದು ವರ್ಷಗಳ ಕಾಲ ಇಲ್ಲೇ ನಿಲ್ಲ ಬೇಕಾಗುತ್ತದೆ' ಎಂದ. ಪ್ರವಾಸಿಗಳೆಲ್ಲರೂ ಇದಕ್ಕೆ ಒಪ್ಪದೆ ಅಳುತ್ತ, 'ಇದು ನಮ್ಮನ್ನು ಇಲ್ಲಿಂದ ಹೋಗಲು ಬಿಡದೆ ಇಲ್ಲೇ ಇರುವಂತೆ ಮಾಡುವ ನಿಮ್ಮ ಉದ್ದೇಶವಾಗಿದೆ. ಆದುದರಿಂದ ನೀವು ನಮ್ಮನ್ನು ಇಲ್ಲಿಂದ ಬಿಡುಗಡೆ ಮಾಡುತ್ತಿಲ್ಲ' ಎಂದು ಹೇಳಿದರು.

**ಪರದೇಶಿ ಪ್ರವಾಸಿಗರು ಅಜ್ಜೆಕ್ ಪ್ರಾಂತ್ಯಕ್ಕೆ ಹಿಂತಿರುಗಿ ಹೋಗುವ ವಿವರಗಳು:**

ಈ ಪ್ರವಾಸಿಗರು ಇಲ್ಲಿಂದ ಹೋಗುವುದಕ್ಕೆ ಹಟ ಹಿಡಿಯ ತೊಡಗಿದಾಗ ಅಲ್ಲಿನ ಸ್ಥಳೀಯರು 'ಈ ಜನ ಮುಂದೆ ಒಂದುದಿನ ನಮ್ಮ ಮೇಲೆ ಕೂಡ ದಾಳಿ ನಡೆಸಬಹುದು. ಬಲದಲ್ಲಿ ಈ ಜನರಲ್ಲಿ ಒಬ್ಬರು ನಮ್ಮ ಐದು ಮಂದಿಗೆ ಸಮಾನರು. ಈ ಜನರಲ್ಲಿ ತಪ್ಪು ಮಾಡಿದವನು ಈಗಾಗಲೇ ಶಿಕ್ಷೆಗೆ ಗುರಿಯಾಗಿದ್ದಾನೆ. ಆದುದರಿಂದ ಇವರಿಗೆ ಸ್ವಲ್ಪ ರಿಯಾಯತಿ ತೋರಿಸಿ ಅವರ ದೇಶಕ್ಕೆ ಅವರು ಹಿಂತಿರುಗುವ ವ್ಯವಸ್ಥೆಯನ್ನು ಮಾಡಿಕೊಡಬೇಕು' ಎಂದು ನಿಶ್ಚಯಿಸಿದರು. ಹೀಗೆ ನಿಶ್ಚಯಕ್ಕೆ ಬಂದ ಸ್ಥಳೀಯರು ಅವರೆಲ್ಲರನ್ನೂ ಹಡಗುಗಳಲ್ಲಿ ಕಳುಹಿಸುವ ತೀರ್ಮಾನ ಮಾಡಿದರು. ಈ ಪ್ರಯಾಸಿಗರು ಇಸ್ತಂಬೂಲಿನಿಂದ ಬರುವಾಗ ನೂರು ಮಂದಿ ಇದ್ದರು. ಈಗ ಹಿಂತಿರುಗುವಾಗ ೩೪ ಮಂದಿ ಮಾತ್ರ ಉಳಿದಿದ್ದರು. ಅವರಲ್ಲಿ ೫೬ ಮಂದಿ ತೀರಿಕೊಂಡಿದ್ದರು. ಇವರ ಪೈಕಿ ಹತ್ತು ಮಂದಿ ಪ್ರಕೃತಿ ಸಹಜ ಮರಣವನ್ನು

ಅಪ್ಪಿದ್ದರು. ಒಟ್ಟಾರೆಯಾಗಿ ನಲ್ವತ್ತು ದಿನಗಳ ಸಮುದ್ರಯಾನ ಮಾಡಿ ಒಂದು ದಡದ ನೆಲೆಗೆ ತಲಪಿದರು. ಈ ದಡದಲ್ಲಿ ಒಂದು ದೊಡ್ಡ ಗ್ರಾಮವಿತ್ತು. ಈ ಪ್ರವಾಸಿಗರು ತಮ್ಮ ಹಡಗಿನಿಂದ ಇಳಿದರು.

ಅಲ್ಲಿ ಇಳಿದ ಕೂಡಲೇ ಪ್ರಥಮವಾಗಿ ಅಲ್ಲಿನ ನೆಲಕ್ಕೆ ಸಾಷ್ಟಾಂಗ ನಮಸ್ಕಾರ ಮಾಡಿದರು. ನೋಡುವಾಗ ದೂರದಲ್ಲಿ ಒಂದು ಮನೆ ಕಾಣಸಿಕ್ಕಿತು. ಇವರು ಆ ಗ್ರಾಮದಲ್ಲಿ ನಡೆಯತೊಡಗಿದರೆ. ಅಲ್ಲಿನ ಸ್ಥಳೀಯರು ಇವರನ್ನು ಕಂಡು ಸತಾಯಿಸಲಿಲ್ಲ. ಗ್ರಾಮದೊಳಗೆ ಪ್ರವೇಶಿಸಿದಾಗ ಇಲ್ಲನ ಮನೆಯಲ್ಲಿ ಜನರಿದ್ದರು. ಜನರು ಪ್ರಾಣಿಗಳ ಚರ್ಮದ ಬಟ್ಟೆಗಳನ್ನು ತೊಟ್ಟಿದ್ದರು. ಹಕ್ಕಿಗಳ ಗರಿಗಳಿಂದ ಮಾಡಿದ ಬಟ್ಟೆಗಳಿಂದ ದೇಹಗಳನ್ನು ಮುಚ್ಚಿಕೊಂಡಿದ್ದರು. ಆದರೆ ಎಲ್ಲರೂ ಪ್ರಜ್ಞೆ ಇಲ್ಲದಂತೆ ಬಿದ್ದುಕೊಂಡಿದ್ದರು. ನಾವು ಅವರನ್ನು 'ನಿಮ್ಮ ಈ ರೀತಿಯ ವರ್ತನೆಗೆ ಕಾರಣವೇನು?' ಎಂದು ಕೇಳಿದಾಗ, 'ಇಲ್ಲಿನ ಜನಗಳು ಮೂರು ತಿಂಗಳುಗಳ ಕಾಲ ಕೊರೆಯುವ ಚಳಿಯನ್ನು ಎದುರಿಸಬೇಕಾದುದರಿಂದ ಹೀಗೆ ಇರುತ್ತೇವೆ. ಮತ್ತೆ ಚಳಿಗಾಲ ಕಳೆದ ನಂತರ ಎಲ್ಲ ಸರಿಯಾಗುತ್ತದೆ. ನಮ್ಮ ಬದುಕು ಸಾಗಿಸುವುದಕ್ಕಾಗಿ ಕೆಲಸವನ್ನು ಮಾಡತೊಡಗುತ್ತೇವೆ. ನಿಮಗೆ ನಮ್ಮಿಂದ ಏನು ರಕ್ಷಣೆಯಾಗಬೇಕೋ ಅವನ್ನು ನಾವು ಕೊಡಿಸುತ್ತೇವೆ. ಮನೆ ಸಾಮಾನುಗಳೇನಾದರೂ ಬೇಕಿದ್ದಲ್ಲಿ, ನಾವು ನಿಮಗೆ ಒದಗಿಸುತ್ತೇವೆ' ಎಂದರು. ಹೀಗೆ ಅಲ್ಲಿ ಈ ಪ್ರವಾಸಿಗರು ಕೆಲವು ದಿನಗಳ ಕಾಲ ವಾಸಿಸಿದರು. ಈ ಸಮಯದಲ್ಲಿ ಒಂದುರಾತ್ರಿ ನಮ್ಮ ಒಬ್ಬ ವ್ಯಕ್ತಿ ಹೊರಟು ಹೋಗಿದ್ದ. ಅಲ್ಲೇ ಒಂದೆಡೆ ಹನ್ನೆರಡು ವರ್ಷದ ಸುಂದರ ಹುಡುಗಿಯೊಬ್ಬಳು ಸ್ಮೃತಿತಪ್ಪಿ ಬಿದ್ದಂತೆ ಬಿದ್ದುಕೊಂಡಿದ್ದಳು. ಪ್ರವಾಸಿಗರಲ್ಲೊಬ್ಬ ಅವಳ ಬಳಿಗೆ ಹೋಗಿ ಬೆಂಕಿಹಾಕಿ ಹುಡುಗಿಯನ್ನು ಬೆಚ್ಚಗಾಗಿಸಿ ಪ್ರಜ್ಞೆ ಬರುವಂತೆ ಮಾಡಿದ. ಅವಳು ತನ್ನ ಕೈಗಳನ್ನು ಅವನೊಂದಿಗೆ ಸೇರಿಸಿ ಅಪ್ಪಿಕೊಂಡರು. ಅವಳು ತನ್ನ ಕಾಮೇಚ್ಛೆಯನ್ನು ಪೂರೈಸಿಕೊಳ್ಳಲು ಅವನನ್ನು ಹುರಿದುಂಬಿಸಿದಳು. ಈ ಮಧ್ಯೆ ಅವನು ಪರಿಸ್ಥಿತಿಯಲ್ಲಿರುವಾಗ ಯಾರೋ ಇದನ್ನು ನೋಡಿದರು. ನೋಡಿದವನು ಇಲ್ಲಿಗೆ ಬಂದು 'ಏನು-ಮಾಡುತ್ತಿರು‍ನೆ ನೀನು?' ಎಂದು ಕೇಳಿದ. 'ಈ ಹುಡುಗಿ ಚಳಿಯಿಂದ ನಡುಗುತ್ತ ಬಿದ್ದಿದ್ದಳು. ನಾನು ಅವಳ ಬಳಿ ಬೆಂಕಿ ಹಾಕಿ ಪ್ರಜ್ಞೆ ಬರುವಂತೆ ಮಾಡಿದೆ. ಆದರೆ ಈಗ ನಮ್ಮಿಬ್ಬರ ನಡುವೆ ಸಂಬಂಧವೇರ್ಪಟ್ಟಿದೆ. ಮೊದಲು ನಿಮ್ಮಲ್ಲಿನ ಹಿರಿಯರು ತೀರ್ಮಾನಿಸಿ ದ್ವೇಷ ಹುಟ್ಟಿಸಿಕೊಳ್ಳುವ ಬದಲಿಗೆ ನಾವಿಬ್ಬರೂ ಮದುವೆಯಾಗಿ ನನ್ನ ಊರಿಗೆ ಇವಳನ್ನು ಕರೆದುಕೊಂಡು ಹೋಗುತ್ತೇನೆ' ಎಂದ. ಅವನು ಇಪ್ಪತ್ತು ದಿನಗಳ ಕಾಲ ನಡೆಯುತ್ತಾ ಒಂದು ದೊಡ್ಡ ಹಳ್ಳಿಯನ್ನು ತಲಪಿದ. ಇಲ್ಲಿ ಬಹಳ ಜನಸಂಖ್ಯೆ ಹೆಚ್ಚು ಇತ್ತು ಹಾಗೂ ಇಲ್ಲಿಯ ಜನರು ಸಂತೋಷದಿಂದ ಕಾಲಕಳೆಯುತ್ತಿದ್ದರು. ಇಲ್ಲಿನ ಜನರು

ಅಜ್ಞಗಾನರಂತೆ ಬಟ್ಟೆ ಧರಿಸಿದ್ದರು. ನನ್ನನ್ನು ಕಂಡು ಬಹಳಷ್ಟು ಜನ ನನ್ನ ಬಳಿ ಬಂದರು. ನಾನು ಕೂಡ ಈ ಪಟ್ಟಣವನ್ನು ನೋಡಿ ಬಹಳ ಆಶ್ಚರ್ಯ ಚಕಿತನಾಗಿದ್ದೆ.

ನನಗಾದ ಅನುಭವವನ್ನು ನಾನು ಅವರಿಗೆ ಹೇಳಿದೆ. ಅವರು ನನ್ನನ್ನು ಅಲ್ಲಿನ ಮುಖಿಯಾನ ಮುಂದೆ ಕರೆದುಕೊಂಡು ಹೋಗಿ ನಿಲ್ಲಿಸಿ. ಅಲ್ಲಿ ಎಲ್ಲರೂ ಅಜ್ವೇಕರಾಗಿದ್ದರು. ಫಾರಸಿ ಭಾಷೆಯಲ್ಲಿ ಮಾತಾಡುತ್ತಿದ್ದರು. ಇಲ್ಲಿನ ಗ್ರಾಮದ ಮುಖಿಯಾ ನನ್ನ ಮಾತುಗಳನ್ನು ಸಮಾಧಾನದಿಂದ ಕೇಳಿದ. ನನಗೆ ತುಂಬ ಸಹಾಯ ಮಾಡಿದ. ಅವನು ನನಗೆ ಉಳಕೊಳ್ಳಲು ಒಂದು ಸ್ಥಳವನ್ನು ಮಾಡಿಕೊಟ್ಟ. ದಿನವೂ ತನ್ನ ಅಡುಗೆ ಮನೆಯಿಂದ ನನಗೆ ಆಹಾರವನ್ನು ಕಳುಹಿಸಿಕೊಡುತ್ತಿದ್ದ. ಈತ ನಮಗೆ ಹಲವು ಜೋಡಿ ಬಟ್ಟೆಯನ್ನೂ ನೀಡಿದ. ತನ್ನ ಸರದಾರರನ್ನು ಕರೆದು ಇವನನ್ನು ಇವನ ಊರಿಗೆ ಕಳುಹಿಸಿಕೊಟ್ಟು ಹಿಂದಕ್ಕೆ ಬನ್ನಿ ಎಂದು ಆದೇಶವನ್ನು ನೀಡಿದ. ಪ್ರಯಾಣದಲ್ಲಿದ್ದ ನನಗೆ ನೆನಪಿನ ಕಾಣಿಕೆಯಾಗಿ ಬಹಳಷ್ಟು ಉಡುಗೊರೆಗಳನ್ನು ನೀಡಿದ. ನನ್ನ ರಕ್ಷಣೆಗಾಗಿ ಕತ್ತಿ, ತಲವಾರುಗಳನ್ನು ನೀಡಿದ. ಯಾರಾದರೂ ನಿನ್ನ ಮೇಲೆ ದಾಳಿ ಮಾಡಿದಲ್ಲಿ ನಿನ್ನ ರಕ್ಷಣೆ ಮಾಡಿಕೊಳ್ಳಲು ಇವನ್ನು ಬಳಸಬಹುದಾಗಿದೆ ಎಂದ. ಹೀಗೆ ಅಲ್ಲಿನ ಮುಖಿಯಾ ನನ್ನನ್ನು ಅತ್ಯಂತ ಗೌರವದೊಂದಿಗೆ ತನ್ನದೊಂದು ಕುದುರೆಯನ್ನು ನೀಡಿ ತನ್ನ ಜನರನ್ನು ಜೊತೆಗೆ ಕಳುಹಿಸಿ ನನ್ನನ್ನು ಬೀಳ್ಕೊಟ್ಟ. ಅಲ್ಲಿಂದ ನಾನು ನನ್ನ ಊರಾದ ಖಬ್ಜಾನ್ ಕಡೆ ಪ್ರಯಾಣ ಮಾಡಿದೆ. ನನ್ನ ಗುರಿಯನ್ನು ತಲಪಿದೆ. ಈ ದಿನ ನಾನು ಬಂಗಾರದ ಪರ್ವತದ ಅತಿಯಾಸೆಯಿಂದ ಮುಕ್ತನಾಗಿ, ಹದಿಮೂರು ವರ್ಷಗಳ ಬಳಿಕ ನನ್ನ ಊರಿಗೆ ಹಿಂತಿರುಗಿ ಬಂದಿದ್ದೇನೆ.

**ಮಂಡಾವ, ಗುಜರಾತ್, ಸಿಂದ್, ದಕ್ಷಿಣದ ಮತ್ತು ಹಿಂದುಸ್ಥಾನದ ಕೆಲವು ನದಿಗಳ ವಿವರಗಳು:**

ದಕ್ಷಿಣದಲ್ಲಿ ಮೂರು ಬಹಳ ದೊಡ್ಡ ನದಿಗಳು ಹರಿಯುತ್ತಿವೆ. ಅವುಗಳಲ್ಲಿ ಒಂದು ಹೌರಾ ನದಿಯಾಗಿದೆ. ಇದು ಚೀನಾದ ಗಡಿಪ್ರದೇಶದಿಂದ ಹರಿದು ಬಂದು ಮೊದಲು ನಿಜಾಂ ಶಾಹನ ರಾಜ್ಯವಾಗಿದ್ದು ನಂತರದಲ್ಲಿ ಆಲಂಪನಾರ ವಶಕ್ಕೆ ಬಂದ ಪ್ರಾಂತ್ಯದಲ್ಲಿ ಹರಿಯುತ್ತದೆ. ಇಟ್ಟಗೇರಿ ಮತ್ತು ತೆಲಂಗಾಣದಲ್ಲಿ ಹರಿಯುತ್ತ ಈ ನದಿಯು ಕೃಷ್ಣಾ ನದಿಯನ್ನು ಸೇರುತ್ತದೆ. ಇದು ಪಾಟನ್ ಪ್ರಾಂತ್ಯದಲ್ಲಿ ಹರಿಯುತ್ತಾ ಗುಲ್ಬರ್ಗಾದ ಕಡೆ ತೆರಳಿದೆ. ಇದು ಹಿಂದಿಯಾಪುರ(ಬಿಜಾಪುರ)ಕ್ಕೆ ಅತ್ಯಂತ ಸಮೀಪವಾಗಿದೆ. ನಂತರ ತೆಲಂಗಾಣದಲ್ಲಿ ಹರಿದು ಮಾಪ್ರ ನದಿಯೊಂದಿಗೆ ಸೇರುತ್ತದೆ. ಈ ನದಿಯ ಮೂಲವು ತೆಲಂಗಾಣದ ಪರ್ವತ ಪ್ರದೇಶದಲ್ಲಿದೆ. ನಂತರ ಹರಿಯುತ್ತ ಚಿಕ್ಕಚಿಕ್ಕ ನದಿಗಳಾಗಿ ಬದಲಾವಣೆಹೊಂದುತ್ತವೆ. ಹೀಗೆ ಶಾಂತಿ ಸಾಗರದ ತಟದಲ್ಲಿರುವ

ಮಚಲೀಪಟ್ಣಂನ ಬಂದರು ಮತ್ತು ಅದರ ಇನ್ನೊಂದೆಡೆ ಹಿಂದೂ ಮಹಾಸಾಗರವಿದೆ. ಸೂರ್ಯನ ಕಿರಣಗಳು 'ಜೌಝಾದ್' ನಕ್ಷತ್ರದ ಬಳಿ ಹೋದಾಗ ಇಲ್ಲಿ ವಸಂತ ಋತು ಆರಂಭಗೊಳ್ಳುತ್ತದೆ.

ತೆಲಂಗಾಣದಲ್ಲಿ ಮಳೆಗಾಲದಲ್ಲಿ ರಾತ್ರಿ ಇಡೀ ಬಿಡದೆ ಜಡಿಮಳೆ ಹೊಡೆಯುತ್ತದೆ. ಈ ಮಳೆಯ ಮೇಲೆ ಇಲ್ಲಿನ ಕೃಷಿ ಅವಲಂಬಿಸಿದೆ. ಮಳೆಗಾಲದಲ್ಲಿ ಮೊದಲ ಮಳೆ ಬಂದ ಕೂಡಲೇ ನೆಲವನ್ನು ಉತ್ತು ಬೀಜಹಾಕುತ್ತಾರೆ. ನಂತರ ಒಂದೆರಡು ಮಳೆಗಳ ಬಳಿಕ ಬೀಜ ಮೊಳೆತು ಸಸಿಯಾಗುತ್ತದೆ. ಕೆಸರಿನ ಗದ್ದೆಯಲ್ಲಿ ಈ ಸಸಿಯನ್ನು ಕಿತ್ತು ಬೇರೆ ಬೇರೆಯಾಗಿ ಮುಷ್ಠಿಯಷ್ಟು ದೂರದಲ್ಲಿ ನೆಡುತ್ತಾರೆ. ಮಳೆಗಾಲ ಮುಗಿಯುವಾಗ ಈ ಭತ್ತದ ಸಸಿಗಳು ಬೆಳೆದು ತೆನೆಗಳು ಬಂದು ಬಲಿತಿರುತ್ತದೆ. ನಂತರ ಇವನ್ನು ಕೊಯ್ದು ಧಾನ್ಯವನ್ನು ಪ್ರತ್ಯೇಕಿಸುತ್ತಾರೆ. ಹೀಗೆ ಭತ್ತದ ದಾನ್ಯ ಬೆಳೆಯಲಾಗುತ್ತದೆ. ತೆಲಂಗಾಣದ ಪರ್ವತ ಬಯಲಲ್ಲಿ ವಾಸವಾಗಿರುವ ಎಲ್ಲ ಜನರ ಆಹಾರವು ಇದೇ ಧಾನ್ಯವಾಗಿದೆ. ಈ ಧಾನ್ಯವನ್ನು ಬೇಯಿಸಿ ಒಣಗಿಸಿ ಮತ್ತೆ ಕುಟ್ಟಿ ಅಕ್ಕಿಯನ್ನಾಗಿ ಮಾಡಲಾಗುತ್ತದೆ. ಇದರಿಂದ ಅನ್ನ ಮಾಡಿ ಜನರು ಆಹಾರವಾಗಿ ಬಳಸುತ್ತಾರೆ. ದಕ್ಷಿಣ ಭಾರತದಲ್ಲಿ ಚಿಕ್ಕ ಗಂಗಾನದಿ ಹರಿಯುತ್ತದೆ. ಈ ನದಿ ಖಾನ್‌ದೇಶದಲ್ಲಿ ಹರಿಯುತ್ತಾ ಪತನ್‌ನಲ್ಲಿ ಸರಿದು ಭದ್ರಾ ಇಲಾಖೆಯಲ್ಲಿ ಹರಿಯುತ್ತದೆ. ನರ್ಮದಾ ನದಿಯು ಮಂಡಾವಾ ಇಲಾಖೆಯಲ್ಲಿ ಹುಟ್ಟಿ ಗುಜರಾತಿನ ಮೂಲಕ ಭರೋಜ್ ನಗರದ ಸನಿಹದಲ್ಲಿ ಹರಿದು ಸಾಗುತ್ತದೆ. ತಿಬ್ಬತ್ ನದಿಯು ಉಜ್ಜೈನ್ ಮತ್ತು ಸಿರೋಂಜಿನ ಮೂಲಕ ಗುಜರಾತಿಗೆ ತಲಪುತ್ತದೆ. ಅಲ್ಲಿಂದ ಸಮುದ್ರದ ಕಡೆ ಹರಿದು ಸೇರುತ್ತದೆ. ಕೆಲವು ಕೆಳಜಾತಿಯ ಗುಲಾಮರು ಗುಜರಾತಿನಿಂದ ಜಹಾಂಪನಾರ ಆಸ್ಥಾನಕ್ಕೆ ಬಂದಿದ್ದರು. ಅವರಲ್ಲಿ ಒಬ್ಬ ಮುಸ್ಲಿಮನಿದ್ದ. ಅವನು ಹಿಂದೆ ಬಂಧನಕ್ಕೊಳಗಾಗಿದ್ದ. ಇವನು ಬಹಳ ಬುದ್ಧಿವಂತ ಮತ್ತು ಜ್ಞಾನಿಯಾದ ಗುಲಾಮನಾಗಿದ್ದ. 'ನಿನ್ನನ್ನು ಯಾಕೆ ಬಂಧಿಸಿದರು?' ಎಂದು ಬಾದಶಾಹ ಕೇಳಿದಾಗ ಆತ 'ನಾನು ಏತಮಾರ್ ಖಾನನ ಮಗನಾಗಿದ್ದೇನೆ. ನನ್ನನ್ನು ಮೊಘಲರು ಹಿಡಿದು ಕೆಲವು ವ್ಯಪಾರಸ್ಥರಿಗೆ ಮಾರಿದರು. ಈ ನದಿಯ ಪುಣ್ಯದಿಂದ ಇಂದು ನಿಮ್ಮನ್ನು ಭೇಟಿಯಾಗುವ ಭಾಗ್ಯ ನನಗೆ ಲಭಿಸಿದೆ' ಎಂದ. ಈ ಉತ್ತರದಿಂದ ಬಾದಶಾಹ ಬಹಳ ಸಂತಸಪಟ್ಟುಕೊಂಡ. 'ನೀನು ಇಷ್ಟಪಟ್ಟಲ್ಲಿ ಇಲ್ಲೇ ನಿಂತು ಆಸ್ಥಾನದ ಕೆಲಸಕಾರ್ಯ ಮಾಡುತ್ತಿರಬಹುದು' ಎಂದು ಬಾದಶಾಹ ಹೇಳಿದ. ಬಾದಶಾಹರ ಸೇವೆಯಲ್ಲಿದ್ದು ಆತ ವಿದ್ಯೆ ಕಲಿತು ಬುದ್ಧಿವಂತನಾದ.

**ಹಿಂದುಸ್ಥಾನದ ಚರಿತ್ರೆಗೆ ಸಂಬಂಧಿಸಿದ ಕೆಲವು ವಿವರಗಳು:**

ಇದರ ಸಂಬಂಧದ ಮೂಲ ಕಾಬೂಲಿನ ತನಕ ಇದೆ. ಲಾಹೋರ್, ದೆಹಲಿ, ಆಗ್ರಾ, ಶೇರ್ ಕೋಟ್ ಇತರ ಕಡೆಗಳಲ್ಲಿ ಹಾಜಿಪುರದಿಂದ ಕೌರೋ ಬಂಗಾಲ ತನಕ ಹಬ್ಬಿತ್ತು. ಬಂಗಾಲದ ಇಲಾಖೆಯಲ್ಲೂ ಬಹಳಷ್ಟು ನದಿಗಳು ಹರಿಯುತ್ತಿದ್ದವು. ಉದಾಹರಣೆಗೆ ನೈಲಾಬ್, ಪುಂಜ್ ಮತ್ತು ಕೆಲವು ನದಿಗಳು ಹಿಂದೂ ಮಹಾಸಾಗರದಲ್ಲಿ ಹೋಗಿ ಸೇರುತ್ತಿದ್ದವು. ಇನ್ನಿತರ ಕೆಲವು ನದಿಗಳು ಈ ದೇಶದಲ್ಲಿದ್ದವು ಇವುಗಳ ಸಂಬಂಧ ತಿಬ್ಬತ್ ಮತ್ತು ತುರ್ಕಿಸ್ಥಾನದ ಜೊತೆಗೆ ಇತ್ತು. ದೆಹಲಿಯೂ ಕೂಡ ನದಿಯ ತೀರದಲ್ಲಿದೆ. ಇದರ ಹತ್ತಿರದ ನಗರ ಆಗ್ರಾ ಇದೆ. ಜಮುನಾ ನದಿಯು ದೊಡ್ಡ ನದಿಗಳ ಗುಂಪಿಗೆ ಸೇರುತ್ತದೆ. ಗಂಗಾ ನದಿಯು ಆಗ್ರಾದಿಂದ ಇಪ್ಪತ್ತು ಮೈಲಿ ದೂರದಲ್ಲಿ ಹರಿಯುತ್ತದೆ. ಶೇರ್ ಶಾಹ ಸೂರಿ ಈ ಪ್ರಾಂತ್ಯದಲ್ಲಿ ಮೂರು ನಾಲ್ಕು ಕಡೆಗಳಲ್ಲಿ ತನ್ನ ಕೋಟೆಗಳನ್ನು ಕಟ್ಟಿಸಿದ್ದ. ಅವುಗಳ ಪೈಕಿ ಬಹಳ ಹೆಸರುವಾಸಿಯಾದ ಕೋಟೆ 'ಶೇರ್ ಘಡ'ವಾಗಿದೆ. ಈ ಶೇರ್ ಘಢದಲ್ಲಿ ಹಿಂದೆ ಹುಮಾಯೂನನ ಸೈನ್ಯ ಸೋಲುಂಡು ಶೇರ್ ಶಾಹ ಸೂರಿ ಅವನ ಸಾಮ್ರಾಜ್ಯವನ್ನು ಜಯಿಸಿದ್ದ. ಬನಾರಸಿನಲ್ಲೊಂದು ಬಂದರು ಇದೆ. ಈ ಪ್ರಾಂತ್ಯವನ್ನು ಹಿಂದೂಗಳ ಪವಿತ್ರ ಕ್ಷೇತ್ರ ಕಾಶಿ ಎಂದು ಪರಿಗಣಿಸುತ್ತಾರೆ. ತಮ್ಮ ದೇವರ ಆರಾಧನೆಗೆ ಕಾಬಾಕ್ಕೆ ಮುಸ್ಲಿಮರು ನೀಡುವಷ್ಟು ಮಹತ್ವದ ಸ್ಥಾನ ನೀಡುತ್ತಾರೆ. ಇಲ್ಲಿಗೆ ಆಗಮಿಸುವ ಹಿಂದುಗಳು ತಮ್ಮ ತಲೆಯ ಕೂದಲನ್ನು ಬೋಳಿಸಿ ಹರಕೆ ತೀರಿಸುತ್ತಾರೆ. ಬಹಳಷ್ಟು ಶ್ರೀಮಂತ ಹಿಂದೂಗಳು ಬದುಕಿನ ಕೊನೆಯಲ್ಲಿ ತಮ್ಮ ಗ್ರಹಸ್ಥ ಜೀವನವನ್ನು ತೊರೆದು ಸನ್ಯಾಸವನ್ನು ಸ್ವೀಕರಿಸುತ್ತಾರೆ. ಗಂಗಾ ನದಿಯ ದಡದಲ್ಲಿ ಅವರ ದೇವತೆಗಳ ದೇವಾಲಯಗಳಿವೆ. ಹಿಂದುಗಳು ಈ ಸ್ಥಾನವನ್ನು 'ಆಶ್ರಫುಲ್ ಮಕಾನ್' ಅಥವಾ ಪವಿತ್ರ ಕ್ಷೇತ್ರವೆಂದು ಪರಿಗಣಿಸುತ್ತಾರೆ. ಸರ್ವ ಹಿಂದೂ ಜನರು ಬಹಳ ಅಸ್ಥೆಯಿಂದ ಈ ಕ್ಷೇತ್ರಕ್ಕೆ ಭೇಟಿಯನ್ನು ನೀಡುತ್ತಾರೆ. ಅವರ ನಂಬಿಕೆಯೆಂದರೆ ರಾಮ್ ಆ ಕಾಲದ ವಿಶ್ವದ ಎಲ್ಲೆಡೆಯಲ್ಲಿ ಹಿರಿಯ ಪವಿತ್ರ ವ್ಯಕ್ತಿಯಾಗಿದ್ದ. ದೊಡ್ಡ ರಾಜ್ಯವನ್ನು ಕಟ್ಟಿಕೊಂಡಿದ್ದ. ಹಿಂದೂಗಳ ಪುರಾಣದಂತೆ ರಾವಣನೊಬ್ಬ ದರೋಡೆಕೋರ, ರಾಕ್ಷಸ ದೇವತೆಯಾಗಿದ್ದ. ಅವನು ಜಿನ್ನ್ (ಆಕಾಶ ಕಾಯ ಗಂಧರ್ವ)ಗಳ ರಾಜನಾಗಿದ್ದ. ಅವನು ಚಿತ್ರವಿಚಿತ್ರ ಕಾರ್ಯಗಳನ್ನು ಮಾಡುತ್ತಿದ್ದ. ಅವನಿಗೆ ಹಲವಾರು ಕೈಗಳು ಮತ್ತು ಹತ್ತು ತಲೆಗಳಿದ್ದವು. ಅವನ ಒಂದು ತಲೆ ಕತ್ತೆಯ ತಲೆಯಂತೆ ಇತ್ತೆನ್ನಲಾಗುತ್ತದೆ. ಆ ಕತ್ತೆಯ ಮುಖದಲ್ಲಿ ಯಾವಾಗಲೂ ಅಳುವ ಸದ್ದು ಕೇಳಿಬರುತ್ತಿತ್ತು. ರಾಮನಿಗೆ ಈ ಅಳುವ ಸದ್ದು ಸಹ್ಯವಾಗುತ್ತಿರಲಿಲ್ಲ. ಬಲಶಾಲಿ ರಾಮನು ರಾವಣನನ್ನು ಸೆರೆಹಿಡಿದ. ಅವನಲ್ಲಿರುವ ಕತ್ತೆಯ ತಲೆಯನ್ನು ಕತ್ತರಿಸಿಹಾಕಿದ.

ಅವನು ತನ್ನ ತಲೆಯನ್ನು ಹಿಡಿದುಕೊಂಡು ರಾಮನ ಕಾಲಿಗೆ ಬಿದ್ದ. 'ನನ್ನ ಮೇಲೆ ಅನ್ಯಾಯ ಮಾಡಿದೆ, ನನ್ನ ತಲೆಯನ್ನು ಕತ್ತರಿಸಿದೆ. ನಾನು ಸಮಸ್ತ ಮಾನವ ಕೋಟಿಯಲ್ಲಿ ಶಕ್ತಿಶಾಲಿಯಾಗಿದ್ದೇನೆ' ಎಂದ. ರಾಮ ಅವನ ಶಕ್ತಿಯನ್ನು ಎದುರಿಸಲಾರದಾದ. ಅವನು ಒಂದು ದೇಶದಿಂದ ಇನ್ನೊಂದು ದೇಶಕ್ಕೆ ಸಂಚರಿಸುತ್ತಿದ್ದ. ಅವನ ಸಂಗಾತಿಗಳು ಜೊತೆಗೆ ಹೋಗುತ್ತಿದ್ದರು. ಹೀಗೆ ಸಂಚರಿಸುತ್ತಾ ಕಾಶಿಗೆ ಆಗಮಿಸಿದ. ಅಲ್ಲಿ ಅವನಿಗೆ ಒಂದು ಅಶರೀರವಾಣಿ ಕೇಳಿಸಿತು, 'ರಾಮನು ನನ್ನ ಪವಿತ್ರ ಕ್ಷೇತ್ರಕ್ಕೆ ಬಂದು ಶರಣಾಗತನಾಗಿದ್ದಾನೆ. ಅವನು ತನ್ನ ಎಲ್ಲ ಪಾಪಗಳಿಂದ ಮುಕ್ತನಾಗಿ ಪಾವನನಾಗಿದ್ದಾನೆ! ಯಾರೇ ಪಾಪಿಗಳು ನನ್ನೀ ಪವಿತ್ರ ಕ್ಷೇತ್ರಕ್ಕೆ ಕಾಲಿಡುತ್ತಾನೋ ಅವನು ತನ್ನ ಪಾಪಗಳಿಂದ ಮುಕ್ತನಾಗುತ್ತಾನೆ'. ಈ ಅಶರೀರವಾಣಿಯನ್ನು ಅಲ್ಲಿದ್ದ ಇತರ ಜನರು ಕೂಡ ಕೇಳಿದ್ದರೆನ್ನಲಾಗುತ್ತದೆ. ಹಿಂದೂಗಳ ಪ್ರಕಾರ ಅವನು ಈ ಅಶರೀರವಾಣಿಯನ್ನು ಕೇಳಿದಾಗ ರಾವಣನ ಕತ್ತರಿಸಲ್ಪಟ್ಟ ತಲೆ ಬಂದು ಸೇರಿಕೊಂಡು ಹಿಂದಿನಂತಾದ. ಈ ಕಾರಣಕ್ಕಾಗಿ ಈ ಸ್ಥಳವು ಬಹಳ ಪವಿತ್ರವಾಗಿದೆ. ಹಿಂದೂಗಳು ಈ ಸಂಗತಿಯನ್ನು ನಂಬುತ್ತಾರೆ. ಶ್ರೀಮಂತ ಹಿಂದೂಗಳು ಇಳಿವಯಸ್ಸಿನವರಾದಾಗ ತಮ್ಮ ಪಾಪಗಳು ಸಂಪೂರ್ಣವಾಗಿ ಕ್ಷಮಿಸಲ್ಪಡಲೆಂದು ಈ ಕ್ಷೇತ್ರಕ್ಕೆ ಹೋಗುತ್ತಾರೆ.

ಅಲ್ಲಿ ಚಿಕ್ಕ ದೊಡ್ಡ ಕೆಲವು ನದಿಗಳೂ ಹರಿಯುತ್ತವೆ. ಉದಾಹರಣೆಗೆ ಜಮುನಾ, ಸರಸ್ವತಿ, ಸಾನ್. ಕೋಗರ್ (ಕೋಲ್‌ಕತಾ) ಇದು ಬಂಗಾಲದ ರಾಜಧಾನಿಯಾಗಿದೆ. ಇಲ್ಲಿ ಬಂದರುಗಳು ಇವೆ. ಕಾಶಿಯ ಬಳಿಯಲ್ಲಿ ನದಿ ಹರಿಯುತ್ತದೆ. ಈ ನದಿಯ ನೀರನ್ನು ಮುತಬರ್ರಿಕ್ ಅಥವಾ ಪುಣ್ಯದ ನೀರೆಂದು ಪರಿಗಣಿಸಲಾಗಿದೆ. ಈ ನೀರನ್ನು ಕುಡಿಯುತ್ತಾರೆ ಮತ್ತು ಪವಿತ್ರವೆಂದು ಧಾರ್ಮಿಕ ವಿಧಿವಿಧಾನಗಳಲ್ಲಿ ಬಳಸಲಾಗುತ್ತದೆ. ಜನರು ಈ ನೀರನ್ನು ಎಲ್ಲರೀತಿಯಲ್ಲೂ ಉಪಯೋಗಿಸುತ್ತಾರೆ. ತಮಗೆ ಪುಣ್ಯ ಲಭಿಸುತ್ತದೆಂದು ತಮ್ಮ ಪುರೋಹಿತರು ಹೇಳಿದಂತೆ ನಡೆದುಕೊಳ್ಳುತ್ತಾರೆ.

**ಕಾಬೂಲಿನ ನದಿಗಳ ಬಗ್ಗೆ ವಿವರಗಳು:**

ಕಾಬೂಲಿನಲ್ಲಿ ಬಹಳಷ್ಟು ಸಂಖ್ಯೆಯಲ್ಲಿ ಪರ್ವತ ಗುಡ್ಡ ಬೆಟ್ಟಗಳಿವೆ. ಮಳೆಗಾಲದಲ್ಲಿ ಈ ಎತ್ತರದಿಂದ ನೀರು ನದಿಯಂತೆ, ಝರಿಯಂತೆ ವಿಪುಲವಾಗಿ ಹರಿಯುತ್ತಿತ್ತು. ಈ ನದಿಗಳಲ್ಲಿ ನೆರೆಯಾಗಿ ನದಿ ನೀರು ಉಕ್ಕಿಹರಿಯುತ್ತವೆ. ಇವು ಸಿಸ್ತಾನದ ತನಕ ಹರಿಯುತ್ತವೆ. ಇವು ಮರಳು ಭೂಮಿಯಲ್ಲಿ ಹರಿದು ಒಂದು ದೊಡ್ಡ ನದಿಯಾಗುತ್ತದೆ. ಈ ನದಿಯು ತುಂಬಿ ಹರಿಯುತ್ತಾ ಇರಾನಿನ ಕಡೆಗೆ ಚಲಿಸಿ ಫಾರಸ್ ನದಿಯಲ್ಲಿ ಸೇರಿಕೊಳ್ಳುತ್ತದೆ. ಸಿಸ್ತಾನದಲ್ಲಿ ಬೇರೆ ಯಾವ ನದಿಯೂ ಇರಲಿಲ್ಲ. ಇದಕ್ಕೆ 'ಬೀರ್‌ಬನ್' ಎಂದೂ ಕರೆಯುತ್ತಾರೆ. ಈ ನದಿ ಹರಿಯುತ್ತಾ ಮಕರಾನ್ ಕಡೆ ಹೋಗಿ ಅಲ್ಲಿ ಸಮುದ್ರ ಸೇರುತ್ತದೆ.

**ನೀರಲ್ಲಿರುವ ಕೆಲವು ಪ್ರಾಣಿಗಳ ಬಗ್ಗೆ ವಿವರಗಳು:**

ಪಟನ್(ಮಚಲೀ ಪಟ್ಟನಂ) ಬಂದರ ಆ ಕಾಲದಲ್ಲಿ ದಕ್ಷಿಣದ ದೊಡ್ಡ ಬಂದರಗಳಲ್ಲಿ ಒಂದೆಂದು ಪರಿಗಣಿಸಲ್ಪಟ್ಟಿದೆ. ಇದು ಆಲಂಪನಾರ ರಾಜ್ಯದ ಭಾಗವಾಗಿದೆ. ಇದು ಹಿಜರಿ ವರ್ಷ ಸನ್ ೯೫೭ಕ್ಕೆ ಸಂಬಂಧಪಟ್ಟದ್ದಾಗಿದೆ. ಈ ಬಂದರಿನ ಹತ್ತಿರ ಸಮುದ್ರ ತಟದಲ್ಲಿ ಒಂದು ದೊಡ್ಡ ಮೀನು ಸತ್ತು ಬಿದ್ದಿತ್ತು. ಅದರ ದೇಹದಿಂದ ಎಷ್ಟೊಂದು ಚರ್ಬಿ ಕರಗಿ ಹರಿಯಿತೆಂದರೆ ಅಲ್ಲಿನ ನೆಲತುಂಬ ತುಂಬಿ ಹರಿಯಿತು! ಬಂದರಿನ ಕೆಲಸಗಾರರು ಆ ಮೀನಿನ ಚರ್ಬಿಯನ್ನು ಒಟ್ಟು ಮಾಡಿಕೊಂಡರು. ಈ ಚರ್ಬಿಯು ದೋಣಿ, ಹಡಗುಗಳಿಗೆ ಹಚ್ಚಲು ಉತ್ತಮವಾದದ್ದೆಂದು ಪರಿಗಣಿಸಲ್ಪಟ್ಟಿದೆ. ತುಂಬ ಜನರು ಬಂದು ಅದರ ಚರ್ಬಿಯನ್ನು ಚೀಲಗಳಲ್ಲಿ ತುಂಬಿಸಿಕೊಂಡರು. ಈ ಚರ್ಬಿಯನ್ನು ಸರಕಾರದ ಇಲಾಖೆಯಲ್ಲಿ ದಾಸ್ತಾನು ಮಾಡಿದರು. ಹೆಚ್ಚು ಕಮ್ಮಿ ಏಳುನೂರು ಕ್ವಿಂಟಲ್ ಚರ್ಬಿಯನ್ನು ಅವರು ಜಮಾ ಮಾಡಿಟ್ಟು ಕೊಂಡರು. ಬಹಳಷ್ಟು ಚರ್ಬಿಯು ನೆಲದೊಳಗೆ ಸೇರಿಕೊಂಡು ವ್ಯರ್ಥವಾಗಿತ್ತು. ಹೆಚ್ಚುಕಮ್ಮಿ ಇಪ್ಪತ್ತೈದು ತಬ್ರೇಜಿ ಮಣ ಚರ್ಬಿ ಆ ಮೀನಿನ ದೇಹದಲ್ಲಿದ್ದಿರಬಹುದೆಂದು ಅಂದಾಜು ಮಾಡಿಕೊಂಡಿದ್ದರು. ಸಮುದ್ರದಲ್ಲಿ ಒಂದು ಮೀನಿದೆ ಅದು ಒಂದು ಬೆರಳಿನಷ್ಟು ಉದ್ದವಿರುತ್ತದೆ. ಇದು ನೀರಿನಿಂದ ಹಾರಿ ಹೊರಗೆ ಕೂಡ ಬರುತ್ತದೆ. ಈ ಮೀನು ಹಾರು ಮೀನೆಂದು ಹೇಳಲಾಗುತ್ತದೆ. ಇದು ಬಹಳ ಬಲಿಷ್ಠವಾದ ಮೀನೆಂದು ಹೇಳಲಾಗುತ್ತದೆ. ಇದನ್ನು ತಿಂದರೆ ಶಕ್ತಿ ಹೆಚ್ಚುತ್ತದೆಂದು ಹೇಳಲಾಗುತ್ತದೆ. ಹಡಗಿನಲ್ಲಿ ಕೆಲಸಮಾಡುವವರು ಇದರ ಖರೀದಿ ಮಾರಾಟದ ವ್ಯಾಪಾರ ಮಾಡಿ ಹಣವನ್ನು ಸಾಕಷ್ಟು ಗಳಿಸುತ್ತಾರೆ. ಇದು ತುಂಬ ಬೆಲೆಯ ಮೀನೆಂದು ಹೇಳಲಾಗುತ್ತದೆ.

ಮೊಸಳೆಗಳು ನೀರಲ್ಲಿ ವಾಸಿಸುವ ಪ್ರಾಣಿಗಳಲ್ಲಿ ಒಂದು. ಇವು ಚಿಕ್ಕ ದೊಡ್ಡ ಆಕಾರದಲ್ಲಿ ಕಂಡುಬರುತ್ತವೆ. ಇವು ನೆಲದಲ್ಲೂ ನಡೆಯುತ್ತ ಬರಬಲ್ಲದಾಗಿವೆ. ಆದರೆ ನೆಲದ ಮೇಲೆ ಬಂದಾಗ ಅವುಗಳು ಶಕ್ತಿಹೀನವಾಗಿರುತ್ತವೆ. ನೀರಿನಲ್ಲಿರುವಾಗ ಬೇರೆಲ್ಲ ಪ್ರಾಣಿಗಳು ಅದಕ್ಕೆ ಹೆದರುತ್ತವೆ. ಅದು ನೀರಿನಲ್ಲಿ ಶಿಕಾರಿ ಮಾಡಿ ತನ್ನ ಹೊಟ್ಟೆ ತುಂಬಿಸಿಕೊಳ್ಳುತ್ತದೆ. ತಿಂದ ಬಳಿಕ ತನ್ನ ತಲೆಯನ್ನು ನೀರಿನಿಂದ ಹೊರಹಾಕುತ್ತದೆ. ಬಹಳ ದೊಡ್ಡದಾಗಿದ್ದರೆ ಸತ್ತ ಬಳಿಕ ಅದರ ದೇಹವನ್ನು ಖಾಲಿಮಾಡಿ ರೂಪವನ್ನು ಹಾಗೆಯೇ ಪ್ರದರ್ಶನಕ್ಕೆ ಇಟ್ಟುಕೊಳ್ಳುತ್ತಾರೆ. ಜಹಾಂಪನಾರ ಹಿಂದಿಯಾಪುರದ ಕೋಟೆಯ ಕಂದಕದಲ್ಲಿ ಬಹಳಷ್ಟು ಮೊಸಳೆಗಳಿದ್ದವು. ಅವನ್ನು ನೋಡಲು ಸ್ವತಃ ಕೆಲವು ಬಾರಿ ಜಹಾಂಪನಾ ಹೋಗುತ್ತಿದ್ದರು. ಒಂದು ಸಲ ದೊಡ್ಡ ನಾಯಿಯನ್ನು ಯಾರೋ ಬಿಸಾಡಿದ್ದರು. ಅಲ್ಲಿನ ಮೊಸಳೆಯು ಅದರ ತಲೆಯನ್ನು ತನ್ನ ಹಲ್ಲುಗಳಿಂದ ಕಚ್ಚಿಹಿಡಿದು ಕಂದಕದ ಮೇಲೆ ತಂದು ಹಾಕಿತ್ತು.

ಒಮ್ಮೆ ಗಂಗಾ ನದಿಯಲ್ಲಿ ಭೀಕರ ತೂಫಾನು ಜಡಿಮಳೆ ಉಂಟಾಗಿತ್ತು. ಆಗ ಖಾನೆ ಜಮಾನರ ಸೈನ್ಯ ನದಿಯನ್ನು ದಾಟುತ್ತಿತ್ತು. ಒಂದು ದೊಡ್ಡ ಆನೆ ನದಿ ನೀರಲ್ಲಿ ದಾಟುತ್ತ ನಡೆಯುತ್ತಿರುವಾಗ ವಿಲಿವಿಲಿ ಒದ್ದಾಡುತ್ತಾ ನೀರೊಳಗೆ ಮುಳುಗಿಬಿಟ್ಟಿತು! ಬಹಳ ಹೊತ್ತಿನ ತನಕ ಹುಡುಕಾಡಿದರೂ ಯಾರಿಗೂ ಆನೆಯ ಸುಳಿವು ಸಿಕ್ಕಿರಲಿಲ್ಲ. ಓರ್ವ ಬುದ್ಧಿವಂತ ಮನುಷ್ಯನೊಬ್ಬ ಅಲ್ಲಿಗೆ ಬಂದವನು 'ಆನೆಯನ್ನು ಮೊಸಳೆಯೊಂದು ಹಿಡಿದಿದೆ. ಅದನ್ನು ಎಳೆದುಕೊಂಡು ನೀರೊಳಗೆ ಹೋಗಿದೆ' ಎಂದ. ಬಹಳ ಸಮಯ ಕಳೆದ ನಂತರ ಆ ಆನೆಯ ಒಂದು ಕಾಲು ನೀರಿನ ಮೇಲೆ ತೇಲುತ್ತಿರುವುದು ಕಂಡುಬಂತು. ಆಗ ಎಲ್ಲರಿಗೂ ಮೊಸಳೆಯು ಆನೆಯನ್ನು ತಿಂದು ಹಾಕಿದೆ ಎನ್ನುವುದು ಅರ್ಥವಾಯಿತು. ಜನರು ಹೇಳುತ್ತಾರೆ 'ಅಂಬರ್'(ಪನ್ನಂಬರ) ಎಂಬ ಸುಗಂಧ ದೃವ್ಯವು ಮೊಸಳೆಯ ಮರಿಯಿಂದ ದೊರೆಯುತ್ತದೆಂದು ಜನ ಹೇಳುವುದಿದೆ. ಅದರ ಹಲ್ಲುಗಳು, ಎಲುಬುಗಳು ಮತ್ತು ಚರ್ಮ ಬಹಳ ರೋಗಗಳಿಗೆ ಔಷಧವಾಗಿವೆ. ಅದರ ತಲೆಯ ಮೆದುಳು ಬಹಳ ಸುವಾಸನೆಯುಳ್ಳದ್ದೆಂದು ಹೇಳುತ್ತಾರೆ.

**ಅಂಬರ್ ಸುಗಂಧ ದೃವ್ಯದ ಮೂಲದ ಬಗ್ಗೆ ವಿವರಗಳು:**

ಅಂಬರ್ ಸುಗಂಧವನ್ನು ಸಮುದ್ರದ ಹಸುವಿನಿಂದ ಪಡೆಯಲಾಗುತ್ತದೆ ಎಂದು ಜ್ಞಾನಿಗಳು ಹೇಳುತ್ತಾರೆ. ಇದು ಸಮುದ್ರದಲ್ಲಿ ಮೀನಿನ ಜಾತಿಗೆ ಸೇರಿದ ಶಂಖಾಕಾರದ ಮೂತಿಯುಳ್ಳ ಮೀನಿನಿಂದ ಪಡೆಯುತ್ತಾರೆನ್ನಲಾಗುತ್ತದೆ. ಇದು ಹೆಚ್ಚಾಗಿ ತುರ್ಕಿಸ್ಥಾನದಲ್ಲಿ ದೊರೆಯುತ್ತದೆಂದು ಹೇಳಲಾಗುತ್ತದೆ. ಅಂಬರ್ ಬಗ್ಗೆ ಔಷಧಗಳ ಪುಸ್ತಕಗಳಲ್ಲಿ ಬಹಳಷ್ಟು ವಿವರಗಳನ್ನು ಪಡೆಯ ಬಹುದು. ಕವಿಗಳು ಅಂಬರ್ ಸುಗಂಧವನ್ನು ಸಂಕೇತವಾಗಿ ಬಹಳ ವ್ಯಾಪಕವಾಗಿ ಬಳಸುತ್ತಾರೆ.

ಹಿಜರಿ ವರ್ಷ ೯೮೨ರಲ್ಲಿ ಜಹಾಂಪನಾ ಬಾತ್ವಲ್ಲಾ ಎಂಬ ಪ್ರಾಂತ್ಯವನ್ನು ತಮ್ಮ ವಶಮಾಡಿಕೊಂಡಿದ್ದರು. ಈ ವಿಜಯದ ಸಂತೋಷದಲ್ಲಿ ಒಂಭತ್ತು ಸೇರು ತುಂಬ ಶುದ್ಧರೀತಿಯ ಅಂಬರೇ ಖಶ್‌ಖಾಶ್ ಉಡುಗೊರೆ ದೊರೆತಿತ್ತು. ಅದೇ ಕಾಲದಲ್ಲಿ ಫ್ರೆಂಚರು ಇಲ್ಲಿನ ಬಾತ್ವಲ್ಲಾ ಬಂದರಿಗೆ ಬರುತ್ತಿದ್ದರು. ಅವರಿಗೆ ಪಾಯಿಖಾನೆಗೆ ಹೋಗಬೇಕಾದಾಗ ಸಮುದ್ರ ತೀರಕ್ಕೆ ಹೋಗುತ್ತಿದ್ದರು. ಗುಡ್ಡ, ಕಲ್ಲು ಬಂಡೆಗಳ ಎಡೆಗಳಲ್ಲಿ ಅವಿತು ಕೂತು ಬಹಿರ್ದೆಸೆಯನ್ನು ಪೂರೈಸುತ್ತಿದ್ದರು. ಸಮುದ್ರ ತೀರಕ್ಕೆ ಬಂದು ಸೇರಿದ್ದ ಕಲ್ಲು ತುಂಡುಗಳಂತಿದ್ದ ಒಂದು ವಸ್ತುವನ್ನು ಕಂಡು ಪರಂಗಿ ಹೆಕ್ಕಿದ್ದ. ಆದರೆ ಅದೇನೂ ಗಟ್ಟಿಯಾಗಿರದೆ ಮೆದುವಾಗಿತ್ತು. ಅವನು ಒಂದು ಚಾಕುವಿನಿಂದ ಅದನ್ನು ತುಂಡರಿಸಿ ನೋಡಿದ. ಅವನು ಎಂದೂ ಆಘ್ರಾಣಿಸಿರದಿದ್ದ ಅಪ್ಯಾಯಮಾನವಾದ ಸುಗಂಧವು ಅವನನ್ನು ಸಮ್ಮೋಹಿಸಿತು. ಈ ಪರಂಗಿ ಯಾರಿಗೂ

ಇದನ್ನು ಹೇಳದೆ ದಿನವೂ ಸಮುದ್ರ ತೀರಕ್ಕೆ ಹೋದಾಗ ತೆರೆಗಳು ತಂದು ಹಾಕಿದ ಕಸ ಕಡ್ಡಿಗಳನ್ನು ಅರಸತೊಡಗಿದ. ಅವನಿಗೆ ಈ ರೀತಿಯ ಕಲ್ಲುಗಳಲ್ಲದೆ ನೀಲವರ್ಣದ ಕಲ್ಲುಗಳನ್ನು ಹೆಕ್ಕಿ ಒಟ್ಟು ಮಾಡಿ ಕಸ ಸಮೇತ ಒಂದು ಹಡಗಲ್ಲಿ ತುಂಬಿಸಿಕೊಂಡು ತನ್ನ ದೇಶಕ್ಕೆ ಪ್ರಯಾಣಿಸಿದ.

ಅಲ್ಲಿ ಹೋದ ಕೂಡಲೇ ಅವನು ಹಡಗಲ್ಲಿ ತುಂಬಿಸಿ ಕೊಂಡುಹೋಗಿದ್ದ ಕಸವನ್ನು ಆರಿಸಿ ನೋಡುವಾಗ ಅಂಬರ್ ಸುಗಂಧದ ಜೊತೆಗೆ ಇದ್ದ ನೀಲಿ ವರ್ಣದ ಕಲ್ಲುಗಳು ಕೂಡ ಅತ್ಯಂತ ಬೆಲೆ ಬಾಳುವಂತಹದ್ದಾಗಿತ್ತು. ಇವೆಲ್ಲವನ್ನೂ ತಾನೆಣಿಸಿದ್ದಕ್ಕಿಂತ ಹೆಚ್ಚಿನ ಮೌಲ್ಯದ್ದಾಗಿದ್ದು ಸಾಕಷ್ಟು ದೊಡ್ಡ ಶ್ರೀಮಂತನಾದ. ಈ ಬಗ್ಗೆ ಜನರಿಗೆ ತಿಳಿದಾಗ ಈ ಬಂದರಿನ ಬಗ್ಗೆ ಎಷ್ಟೊಂದು ಗುಲ್ಲೆದ್ದಿತೆಂದರೆ ಜನರು ಹಿಂಡು ಕಟ್ಟಿಕೊಂಡು ಆಗಮಿಸಿ ಖರೀದಿ ವ್ಯಾಪಾರ ಮಾಡತೊಡಗಿದರು, ಕೆಲವರ ಮಧ್ಯೆ ಮಾರಾಮಾರಿಯೂ ನಡೆಯಿತು. ಗಲಾಟೆ ಎಷ್ಟೊಂದು ವಿಪರೀತಕ್ಕೆ ಹೋಯಿತೆಂದರೆ ಬಂದರಿನ ಅಧಿಕಾರಿಗಳ ಕಿವಿಗೂ ತಲಪಿತು. ಎಪ್ಪತ್ತರಿಂದ ಎಂಭತ್ತು ಸೇರಿನಷ್ಟು ಅಂಬರ್ ಅಲ್ಲಿ ಸಿಕ್ಕು ಅದನ್ನು ಅವರು ಹಂಚಿಕೊಂಡರು. ಒಂಭತ್ತು ಸೇರು ಉತ್ತಮ ರೀತಿಯ ಅಂಬರನ್ನು ಜಹಾಂಪನಾರಿಗೂ ಕೂಡ ತಲಪಿಸಲಾಯಿತು. ಅಲ್ಲಿನ ಚೌಧರಿಗಳು ಹೇಳುತ್ತಾರೆ, ಹಿಂಪಾನಗರ (ವಿಜಯನಗರ) ರಾಮರಾಜ(ರಾಮರಾಯ)ನ ಆಳ್ವಿಕೆಯ ಸಂದರ್ಭದಲ್ಲಿ ಹೀಗೆಯೇ ಇರುವ ಕಲ್ಲಿನ ಮೂರು ಮಣ ತೂಕದ ದೊಡ್ಡ ತುಂಡೊಂದು ಅದು 'ಮುಜವ್ವಫ್' ಪಟ್ಟೆಗಳಿರುವ ಜಾತಿಗೆ ಸೇರಿದ ನೀಲಂ (ಪಚ್ಚೆಕಲ್ಲು) ಆಗಿತ್ತು. ಇದು ರಾಮರಾಯನ ಖಜಾನೆಯಲ್ಲಿದೆ. ಇದರಿಂದಾಗಿ ಅವನ ತಾತ ಮುತ್ತಾತಂದಿರೆಲ್ಲರೂ ಕೂಡ ಕೊಲೆಯಾಗಿ ಬಿಟ್ಟರು.

ಈ ಇಲಾಖೆಯ ಹತ್ತಿರದಲ್ಲಿ ಒಂದು ದ್ವೀಪವಿದೆ. ಅಲ್ಲಿ ಜಂಗಿ ಚಿನಾರ್ ಮರಗಳು ಬಹಳವಾಗಿದ್ದವು. ಅವುಗಳ ಎಲೆಗಳಲ್ಲಿ ಬಹಳ ಸುಗಂಧವಿರುತ್ತಿತ್ತು. ಇದೇ ರೀತಿ ಈ ದ್ವೀಪದಲ್ಲಿ ದೊಡ್ಡ ದೊಡ್ಡ ನವಿಲುಗಳಿದ್ದವು. ಹೀಗೆ ಜೇನು ತುಪ್ಪವೂ ಇಲ್ಲಿ ವಿಪುಲವಾಗಿ ದೊರೆಯುತ್ತವೆ. ಚಿನಾರಿನ ಮರದ ಕೊಂಬೆಗಳಲ್ಲಿ ಜೇನು ಗೂಡುಗಳಿದ್ದವು.

ಆಗಾಗ ಸಮುದ್ರದ ತೆರೆಗಳಲ್ಲಿ ತೇಲುತ್ತ ಅಂಬರ್ ಸುಗಂಧದ ತುಂಡುಗಳು ತೀರದಲ್ಲಿ ಮರಳು ಮಣ್ಣಿನ ಮೇಲೆ ಬಿದ್ದಿರುತ್ತದೆ. ನಾನು ಕೂಡ ಒಮ್ಮೆ ಅಂಬರ್‌ನ ಒಂದು ತುಂಡು ನೋಡಿದ್ದೆ. ಮೂರು ದಿರ್ಹಮ್‌ಗೆ ಒಂದು ತೊಲದಂತೆ ಈ ದ್ವೀಪವಾಸಿಗಳು ಮಾರುತ್ತಾರೆ. ಈ ಅಂಬರ್‌ನ ವ್ಯಾಪಾರವು ದಿರ್ಹಮ್‌ನಲ್ಲಿ ನಡೆಯುತ್ತದೆ.

**ಶೆಹರ್ಝೂಜ್‌ನ ಬಂದರು ಪ್ರದೇಶದ ಅಂಬರ್‌ನ ವಿವರಗಳು:**

ಇದು ಅರಬಸ್ಥಾನದಲ್ಲಿ ಸಿಗುತ್ತದೆ. ಹಿಜರಿ ವರ್ಷ ೧೦೧೮ರಲ್ಲಿ ಅಲ್ಲಿನ ಬಂದರಿನ

ಹವಾಲ್ದಾರನಾಗಿದ್ದ ಉಮರ್ ಪಾಷಾ ಒಮ್ಮೆ ಮಕ್ಕಾದ ಪವಿತ್ರ ಯಾತ್ರೆಯನ್ನು ಮಾಡ ಬಯಸಿದ್ದ. ಅವನು ತನಗಾಗಿ ಒಂದು ಖಾಸಗಿ ವಿಶೇಷ ಹಡಗನ್ನು ತಯಾರಿಸಿದ್ದ. ತನ್ನೊಂದಿಗೆ ತನ್ನ ಕೆಲಸಗಾರರು, ಕಳಾಸಿಗಳನ್ನು ಕರೆದುಕೊಂಡಿದ್ದ. ಇವನ ಬಳಿ ಹೆಚ್ಚು ಕಮ್ಮಿ ಮೂರು ಪೆಟ್ಟಿಗೆ ಅಂಬರ್ ಮತ್ತು ಜೇನುತುಪ್ಪದ ಗಡಿಗೆಗಳು, ಎಣ್ಣೆ ಮುಂತಾದವನ್ನು ತೆಗೆದುಕೊಂಡು ಜಿದ್ದಾ ಬಂದರಿಗೆ ತಲಪಿದ. ತನ್ನ ಉಡುಗೊರೆಯ ರೂಪದಲ್ಲಿ, ಹದಿಯಾದ ರೂಪದಲ್ಲಿ ಮಕ್ಕಾದ ಷರೀಫನೆನಿಸಿದ ಷರೀಫ್ ಹಸನ್‌ನಿಗೆ ಅಂಬರಿನ ಒಂದು ತುಂಡು ನೀಡಿದ. ಮತ್ತೊಂದು ತುಂಡನ್ನು ರೋಮಿನ ಬಾದಶಾಹ ಸುಲ್ತಾನ್ ಮುರಾದ್‌ನಿಗೆ ರವಾನಿಸಿದ. ಹಜ್ ಯಾತ್ರೆ ಮುಗಿಸಿದ ನಂತರ ಮದೀನಾಕ್ಕೆ ಹೋದ. ಮದೀನಾದಲ್ಲಿ ದೊಡ್ಡ ದೊಡ್ಡ ಮನೆಗಳನ್ನು ಕಟ್ಟಿಸಿದ. ಬಹಳಷ್ಟು ದಿನಗಳ ಕಾಲ ಅಲ್ಲಿ ಆರಾಮವಾಗಿದ್ದ. ಶೆಹರ್ಝೂಜ್‌ನ ಬಂದರಿನಲ್ಲಿ ವಸೂಲಾದ ತೆರಿಗೆ ರೋಮಿನ ಸುಲ್ತಾನನ ಖಜಾನೆಯಲ್ಲಿ ಜಮಾ ಆಗುತ್ತಿತ್ತು.

**ಹಳೆಯ ಹಿಂಪಾನಗರದ ವಜ್ರದ ಗಣಿಯ ವಿವರಗಳು:**

ಈ ಗಣಿಯು ವಿಜಯನಗರದ ಅರಸ (ಅಳಿಯ)ರಾಮರಾಯನ ಆಳ್ವಿಕೆಯ ಕಾಲದಲ್ಲಿ ಅವನ ವಶದಲ್ಲಿತ್ತು. ಖ್ವಾಜಾ ನಸೀರುದ್ದೀನ್ ಮುಹಮ್ಮದ್ ತೂಸಿ ತನ್ನ 'ಜವಾಹರ್ ನಾಮಾ' ಕೃತಿಯಲ್ಲಿ ಬರೆದಿದ್ದ. 'ಹಳೆಯ ಹಿಂಪಾನಗರದ (ಹಂಪೆ) ಆಸುಪಾಸಿನಲ್ಲಿ ಎರಡು ದೊಡ್ಡ ಪರ್ವತಗಳಿದ್ದು ಅತ್ಯಂತ ನೇರಕ್ಕೆ ಎತ್ತರವಾಗಿದ್ದುದರಿಂದ ಯಾರೂ ಅಲ್ಲಿಗೆ ಹೋಗಲು ಸಾಧ್ಯವಾಗುತ್ತಿರಲಿಲ್ಲ. ಪರ್ವತದ ಎತ್ತರದ ಮೇಲ್‌ಮೈಯಲ್ಲಿ ವಜ್ರದ ತುಣುಕುಗಳು ಇವೆಯೆಂದು ಜನಕ್ಕೆ ತಿಳಿದಿತ್ತು. ವಜ್ರದ ಬಗ್ಗೆ ತಿಳಿದಿರುವವರು ವ್ಯಾಪಾರಿಗಳು ಒಂದು ಉಪಾಯ ಮಾಡಿದ್ದರು. ಆಡಿನ ಮಾಂಸದ ತುಂಡನ್ನು ಆ ಪರ್ವತದ ಮೇಲೆ ಎಸೆಯುತ್ತಿದ್ದರು. ನಂತರ ತಾವು ಸಾಕಿದ ಶಿಕಾರಿ ಗಿಡುಗಗಳನ್ನು ಹಾರಿಸಿ ಅವನ್ನು ಹೆಕ್ಕಿ ತರುವಂತೆ ಮಾಡಿದ್ದರು. ಗಿಡುಗಗಳು ತಂದ ಮಾಂಸದ ತುಣುಕಿನಲ್ಲಿ ವಜ್ರದ ಹರಳುಗಳು ಅಂಟಿಕೊಂಡಿವೆಯೇ ಎಂದು ಪರೀಕ್ಷಿಸಿ ನೋಡುತ್ತಿದ್ದರು. ಇದ್ದರೆ ಹೆಕ್ಕಿಕೊಂಡು ಈ ರೀತಿಯಲ್ಲಿ ವಜ್ರವನ್ನು ಪಡೆಯುತ್ತಿದ್ದರು. 'ಜವಾಹರ್ ನಾಮಾ'ದ ಇನ್ನೊಂದೆಡೆ 'ಹಿಂಪಾ ನಗರದ ಎರಡು ಭಾಗಗಳಲ್ಲಿ ವಜ್ರದ ಗಣಿ ಇದೆ' ಎಂದು ಬರೆಯಲಾಗಿದೆ.

ರಾಮರಾಯನ ಆಳ್ವಿಕೆಯ ಕಾಲದಲ್ಲಿ ಎರಡು ವಜ್ರದ ಗಣಿಗಳ ಪೈಕಿ ಒಂದನ್ನು ಅಲ್ಲಿನ ರಾಜ ನಾಲ್ಕು ಸಾವಿರ ಹವನ್‌ಗೆ ಗುತ್ತಿಗೆ ಕಂತ್ರಾಟು ನೀಡಿದ್ದ. ಆ ಗಣಿಯಿಂದ ಚಿಕ್ಕ ಚಿಕ್ಕ ವಜ್ರದ ಹರಳುಗಳು ದೊರೆತಿದ್ದವು. ಎರಡನೆಯ ಗಣಿಯನ್ನು ಎಪ್ಪತ್ತೈದು ಸಾವಿರ ಹವನ್‌ಗೆ ಗುತ್ತಿಗೆ ನೀಡಿದ್ದ. ಇದನ್ನು ಗುತ್ತಿಗೆಗೆ ನೀಡುವಾಗ ಕೆಲವು ಶರತ್ತುಗಳಿದ್ದವು.

ಎರಡೂವರೆ ಗಜ ಅಗಲಕ್ಕೆ ಗಣಿ ತೋಡುವುದಿದ್ದರೆ ಮಾತ್ರ ಗುತ್ತಿಗೆ ದಾರನಿಗೆ ಅದಕ್ಕಿಂತ ಹೆಚ್ಚು ಅಗೆದರೆ ಅದು ರಾಯನಿಗೆ ಒಪ್ಪಿಸತಕ್ಕದ್ದು ಎಂಬ ಶರ್ತವಿತ್ತು. ಬಹಳಷ್ಟು ಜನರನ್ನು ಅದರ ಕೆಲಸದ ಉಸ್ತುವಾರಿ ಮತ್ತು ರಕ್ಷಣೆಗಾಗಿ ರಾಯ ತನ್ನವರನ್ನು ನೇಮಿಸಿದ್ದ. ಅಲ್ಲಿಗೆ ನಾಲ್ಕೂ ದಿಕ್ಕಿನಲ್ಲಿ ಆವರಣದ ಗೋಡೆಯನ್ನು ಕಟ್ಟಿಸಿದ್ದ. ಒಂದು ಬಾಗಿಲನ್ನು ಕಟ್ಟಿ ಒಳಗೆ ಹೊರಗೆ ಹೋಗುವವರ ಮೇಲೆ ನಿಗಾ ಇಟ್ಟಿದ್ದ. ಇಲಜಪುರದಲ್ಲಿ ಕೂಡ ಒಂದು ಗಣಿ ಮಾಡಿದ್ದ. ಆದರೆ ಅದರಲ್ಲಿ ಏನೂ ದೊರೆತಿರಲಿಲ್ಲ.

**ರಾಯಚೂರಿನ ವಜ್ರದ ಗಣಿಯ ವಿವರಗಳು:**

ಹಿಜರಿ ವರ್ಷ ೧೧೧೫ರಲ್ಲಿ ಹಂಪೆಯಿಂದ ಪಶ್ಚಿಮ ದಿಕ್ಕಿನಲ್ಲಿರುವ ಹತ್ತು ಕೋಸ್ ದೂರದ ರಾಯಚೂರಿನ ಪ್ರದೇಶವು ಆಲಂಪನಾರ ವಶದಲ್ಲಿತ್ತು. ಇಲ್ಲಿನ ಒಂದು ಗಣಿಯಲ್ಲಿ ಚಿಕ್ಕ ಮತ್ತು ದೊಡ್ಡ ಬಹಳ ಶುದ್ಧವಾದ ವಜ್ರದ ಹರಳುಗಳು ಸಿಗುತ್ತಿದ್ದವು. ದೊಡ್ಡ ವಜ್ರಗಳು ಬಾದಶಾಹನ ಖಜಾನೆ ಸೇರುತ್ತಿದ್ದವು. ರಾಯಚೂರಿನ ಹತ್ತಿರ ಒಂದು ಸ್ಪಟಿಕದ ಗಣಿಯೂ ಇತ್ತು. ಅದರ ಹತ್ತಿರ ಕೆಂಪು ಸ್ಪಟಿಕದ ಗಣಿಯೂ ಇತ್ತು.

**ತೆಲಂಗಾಣದಲ್ಲಿ ಮಾಣಿಕ್ಯದ ಗಣಿಯ ವಿವರಗಳು:**

ಹಿಜರಿ ವರ್ಷದ ೧೧೧೧ರ ಕಾಲದಲ್ಲಿ ಕುತುಬ್ ಷಾನ ವಶದಲ್ಲಿ ಸಂಪೂರ್ಣ ತೆಲಂಗಾಣವಿತ್ತು. ತೆಲಂಗಾಣದಲ್ಲಿ ಒಂದು ಕುಂದವಲ್ಲು ಎಂಬ ಗ್ರಾಮವಿತ್ತು. ಈ ಗ್ರಾಮದಲ್ಲಿ ಮಾಣಿಕ್ಯದ ಗಣಿ ಇತ್ತು. ಇಲ್ಲಿನ ಗಣಿಯಲ್ಲಿ ಪಡೆದ ಸಂಪೂರ್ಣ ಮಾಣಿಕ್ಯವು ಬಾದಶಾಹನಿಗೆ ಸೇರುತ್ತಿತ್ತು. ಆದುದರಿಂದ ಜಗತ್ತಿನ ಮಾರುಕಟ್ಟೆಯಲ್ಲಿ ಈ ಗಣಿಯ ಬಗ್ಗೆ ಹೆಚ್ಚಿನ ಚರ್ಚೆಯಾಗಿರಲಿಲ್ಲ. ಕೆಂಪು ಹರಳು(ಪುಷ್ಪ ರಾಗ) ಉತ್ತಮ ಗುಣಮಟ್ಟದ್ದು ಯಾಂಗೋ(ಬರ್ಮಾ)ನಲ್ಲಿ ದೊರೆಯುತ್ತವೆ. ಹಳದಿ ಮತ್ತು ಬಿಳಿ ಹರಳು, ಪಚ್ಚೆ ಕೂಡ ಅಲ್ಲಿ ದೊರೆಯುತ್ತದೆ. ಜಹಾಂಪನಾರ ದರ್ಬಾರಿನಲ್ಲಿ ಕೂತಿರುವವರಲ್ಲಿ ಮೌಲಾನಾ ದೋಸ್ತ್ ಮುಹಮ್ಮದ್ ಸೌದಾಗರ್ ಇದ್ದರು. ಇವರು ಬಹಳ ಆಕರ್ಷಕ ಮತ್ತು ಸಂತಸ ಪ್ರವೃತ್ತಿಯ ವ್ಯಕ್ತಿಯಾಗಿದ್ದರು. ಬಾದಶಾಹ ಅವರನ್ನ ದಕ್ಷಿಣ ಭಾರತದ ಬಂದರು ಪ್ರದೇಶ ಕೋದಾಕ್ಕೆ ಅಲ್ಲಿನ ವಜ್ರ ಮಾಣಿಕ್ಯ ಮತ್ತಿತರ ಹರಳಿನ ಗುಣಮಟ್ಟವನ್ನು ಪರಿಶೀಲಿಸಲು ಕಳುಹಿಸಿದ್ದರು. ಆದರೆ ಪರಂಗಿಗಳು ಈ ಇಲಾಖೆಯನ್ನು ಸಂಪೂರ್ಣವಾಗಿ ಲೂಟಿ ಮಾಡಿದ್ದರು.

ಆಗಿನ ಸಂದರ್ಭದಲ್ಲಿ ಅಲ್ಲಿ ಬಹಳ ಬೆಲೆಬಾಳುವ ವಸ್ತುಗಳು ಅಂದರೆ ಬೆಲೆಬಾಳುವ ಆಭರಣಗಳು, ಬೆಲೆಬಾಳುವ ಬಟ್ಟೆಗಳು, ಬೆಲೆಯುಳ್ಳ ವಸ್ತುಗಳನ್ನು ಆ ಪರಂಗಿಗಳು

ಲೂಟಿ ಮಾಡಿದ್ದರು. ಒಮ್ಮೆ ಒಂದು ದೊಡ್ಡ ಕಲ್ಲು ಅಲ್ಲಿ ದೊರೆತಿತ್ತು. ಅದರ ಮಧ್ಯದಲ್ಲಿ ಒಂದೆಡೆ ಕೆಂಪು ಮಾಣಿಕ್ಯ, ಇನ್ನೊಂದು ಬದಿಯಲ್ಲಿ ಪುಷ್ಪರಾಗ, ಮತ್ತೊಂದೆಡೆ ಪಚ್ಚೆ, ಮುಂತಾದ ಕಲ್ಲುಗಳು ದೊರೆತವು. ಜಹಾಂಪನಾ ಈ ಅತ್ಯಂತ ವಿಶಿಷ್ಟವಾದ ಅಮೂಲ್ಯ ಕಲ್ಲನ್ನು ತನ್ನೊಂದಿಗೆ ಇಟ್ಟುಕೊಂಡರು. ಈಗ ಅದು ಸರಕಾರಿ ಖಜಾನೆಯಲ್ಲಿದೆ. ಹೀಗೆ ದೊಡ್ಡ ಆಕಾರದ ವಜ್ರಗಳು, ದೊಡ್ಡ ಪಚ್ಚೆ, ಪುಷ್ಪರಾಗ, ಮಾಣಿಕ್ಯದ ಹರಳುಗಳು ಬಾದಶಾಹರ ಖಜಾನೆಯಲ್ಲಿ ಅನೇಕ ಇದ್ದವು. ಶುಭ್ರವಾದ ಶುದ್ಧ ದೊಡ್ಡ ಪುಷ್ಪರಾಗ, ಮಾಣಿಕ್ಯಗಳು ವಿಶ್ವದಲ್ಲಿ ಬಹಳ ಕಮ್ಮಿ ಸಿಗುವುದು. ಆದರೆ ಇಂತವು ಎಲ್ಲಾದರೂ ಸಿಗುವುದಿದ್ದರೆ ಅಲ್ಲಿಗೆ ಹೋಗಿ ಯಾಂಗೋನ(ಬರ್ಮಾ) ಬಾದಶಾಹರು ಖರೀದಿಸಿಬಿಡುತ್ತಿದ್ದರು. ಜಹಾಂಪನಾರ ಖಜಾನೆಯಲ್ಲಿ ಬೆಲೆಬಾಳುವ ಆಭರಣಗಳ ನೋಡಿಕೊಳ್ಳುವ ಜವಾಬ್ದಾರಿ ನನ್ನ(ಶಿರಾಜಿಯ) ಮೇಲಿತ್ತು. ಅವುಗಳಲ್ಲಿ ಐದು ದೊಡ್ಡ ಆಕಾರದ ಮಾಣಿಕ್ಯವು ಜಹಾಂಪನಾರ ಖಜಾನೆಯಲ್ಲಿತ್ತು. ಒಮ್ಮೆ ಮಾತುಮಾತಿಗೆ ಜಹಾಂಪನಾ ಹೇಳುತ್ತಿದ್ದರು, 'ಮಾಣಿಕ್ಯವು ಬೆಂಕಿಯೊಳಗೆ ಬಿದ್ದರೂ ಕೆಡುವುದಿಲ್ಲ' ಎಂದು. ಅವರ ಬಳಿ ಒಂದು ದೊಡ್ಡ ಮಾಣಿಕ್ಯವಿತ್ತು. ಅವರು ಅದನ್ನು ಒಂದು ಧಗಧಗನೆ ಉರಿಯುವ ಬೆಂಕಿಯ ಸಿಗಡಿಯಲ್ಲಿ ಹಾಕಿಬಿಟ್ಟರು. ಹೆಚ್ಚುಕಮ್ಮಿ ಮೂರು ಗಂಟೆಯ ತನಕ ಅದರಲ್ಲಿ ಇತ್ತು. ಅದು ಸುಟ್ಟು ಕೆಂಪಗೆ ಕಾದು ಮುಂಜಾನೆ ಉದಯಿಸುವ ಸೂರ್ಯನಂತೆ ಇತ್ತು. ಅದನ್ನು ಸಿಗಡಿಯಿಂದ ಹೊರತೆಗೆದಾಗ ಇಡೀ ಮಹಲಿನಲ್ಲಿ ಅದರ ಕೆಂಪು ಬೆಳಕು ಬೆಳಗಿ ವಿಶೇಷ ಮೆರುಗು ಬಂದಿತ್ತು! ಮಾಣಿಕ್ಯದ ಸೌಂದರ್ಯ, ಮಿರುಗುವಿಕೆಯಲ್ಲಿ ಯಾವುದೇ ಬದಲಾವಣೆಯಾಗಿರಲಿಲ್ಲ. ಬೆಂಕಿಯಲ್ಲಿಟ್ಟ ಮಾಣಿಕ್ಯವನ್ನು ಒಂದೇ ಪೆಟ್ಟಿಗೆ ತಣ್ಣೀರಲ್ಲಿ ಅದ್ದಿದರೆ ಅದರ ಮೆರುಗು ಮಾಸಿಹೋಗುತ್ತದೆ. ತಣ್ಣಗಾದ ನಂತರವೇ ಅದನ್ನು ಬಳಸಬೇಕಾಗುತ್ತದೆ. ಹಳದಿ ಅಥವಾ ನೀಲಿ ವರ್ಣದ ಪುಷ್ಪರಾಗವನ್ನು ಬೆಂಕಿಗೆ ಹಾಕಿದರೆ ಅದರ ಬಣ್ಣ ಹಾರಿ ಹೋಗುತ್ತದೆ. ರೂಪ ಸೌಂದರ್ಯವನ್ನು ಕಳೆದುಕೊಳ್ಳುತ್ತದೆ. ಇದರ ಒಂದು ಉದಾಹರಣೆ ನನಗೆ ನೋಡಲು ಸಿಕ್ಕಿತು. ಕಂಡಾಲ್ ಪ್ರಾಂತ್ಯದ ಕೂಕನ್ ಗ್ರಾಮದಲ್ಲಿ ಮನೆಗಳು ಹುಲ್ಲುಛಾವಣಿಯ ಗುಡಿಸಲುಗಳಾಗಿದ್ದವು. ಇಲ್ಲಿನ ಮನೆಯೊಂದು ಅಕಸ್ಮಾತ್ತಾಗಿ ಸುಟ್ಟು ಹೋಯಿತು. ಆ ಮನೆಯಲ್ಲಿದ್ದ ಸಾಮಾನುಗಳು ಕೂಡ ಸುಟ್ಟುಹೋಗಿದ್ದವು. ಮನೆಯಲ್ಲಿ ಒಂದು ಪೆಟ್ಟಿಗೆಯಲ್ಲಿ ಕಲ್ಲುಗಳನ್ನು ಹಾಕಿಟ್ಟಿದ್ದರು. ಅದರಲ್ಲಿದ್ದ ಕೆಂಪು ಮಾಣಿಕ್ಯವು ಯಾವುದೇ ರೀತಿಯಲ್ಲಿ ಬಣ್ಣಬದಲಾಯಿಸಿರಲಿಲ್ಲ. ಬೇರೆ ಇನ್ನಿತರ ಕಲ್ಲುಗಳು, ಹರಳುಗಳು ಬೆಂಕಿಯಿಂದಾಗಿ ಬಣ್ಣಗೆಟ್ಟಿದ್ದವು.

**ಪೋರ್ಚುಗಲ್ಲಿನ ಹಳೆಯ ಮತ್ತು ಹೊಸ ಗಣಿಗಳ ವಿವರಗಳು:**

ಝುಮರುದ್(ಪಚ್ಚೆ)ಕೂಡ ಬಹಳ ಬೆಲೆಬಾಳುವ ಪ್ರಸಿದ್ಧ ಹರಳಾಗಿದೆ. ಈ ಪಚ್ಚೆ

ಹರಳಿನ ದೊಡ್ಡ ದೊಡ್ಡ (ಪದರದ)ಪ್ಲೇಟುಗಳಿದ್ದವು.

ಇದರ ಪುರಾಣ ಸಂಬಂಧಿತ ಹಿನ್ನೆಲೆ ಹೀಗಿದೆ: ಬನೀ ಇಸ್ರಾಯಿಲರು (ಯಹೂದ್ಯರು) 'ನಮಗೆ ಹಳೆಯ ಧಾರ್ಮಿಕ ಕಾನೂನು ಇಷ್ಟವಿಲ್ಲ, ನಮಗೆ ಹೊಸ ಧಾರ್ಮಿಕ ಕಾನೂನು ತೋರಿಸಿ ನಾವು ದೇವರನ್ನು ಒಪ್ಪಿಕೊಳ್ಳುತ್ತೇವೆ ಹಾಗೂ ಪೂಜಿಸುತ್ತೇವೆ' ಎಂದು ಹಜ್ರತ್ ಮೂಸಾರ(ಮೋಸೆಸ್) ಮುಂದೆ ಬೇಡಿಕೆ ಇಟ್ಟರು. ಮೂಸಾರವರು ಕೋಹೆ ತೂರ್ ಪರ್ವತದ ಮೇಲೆ ಹೋಗಿ ಅಲ್ಲಾಹನನ್ನು ಬೇಡಿಕೊಂಡು ಪ್ರಾರ್ಥಿಸಿದರು. ಅಲ್ಲಿ ಅವರಿಗೆ ತೌರಾತ್(ತೋರಾ) ಗ್ರಂಥವನ್ನು ದೇವರು ನೀಡಿದ. ತೋರಾಗ್ರಂಥವು ಬರೆಯಲ್ಪಟ್ಟ ಕಲ್ಲು ಹಲಗೆಗಳು ಪದರ ಪದರವಾಗಿ ನೀಡಲಾಗಿತ್ತು. ಈ ಕಲ್ಲುಗಳು ಪಚ್ಚೆ ಹರಳಿನ ಕಲ್ಲುಗಳಾಗಿದ್ದವು ಎಂದು ಹೇಳಲಾಗುತ್ತದೆ. ಹಜ್ರತ್ ಮೂಸಾರವರು ಪಚ್ಚೆಕಲ್ಲಿನ ಪದರಗಳಲ್ಲಿ ಬರೆಯಲಾದ ತೌರಾತಿನ ಗ್ರಂಥವನ್ನು ಸಾಗಿಸುತ್ತಾ ಬನೀ ಇಸ್ರಾಯೀಲ ಪಂಗಡದವರನ್ನು ಭೇಟಿ ಮಾಡಲು ಪ್ರಯಾಣಿಸುತ್ತಿದ್ದರು. ಹಾದಿಯಲ್ಲಿ ಸಾಮ್ರಿ ಜಾದೂಗಾರ ಬಂದು ಬನೀ ಇಸ್ರಾಯೀಲರನ್ನು ಹಾದಿತಪ್ಪಿಸುವ ಕುತಂತ್ರ ಮಾಡುತ್ತಿದ್ದಾನೆಂಬ ವರ್ತಮಾನ ಸಿಕ್ಕಿತು. ಹಜ್ರತ್ ಮೂಸಾ ತನ್ನ ಕೈಯಲ್ಲಿದ್ದ ಪಚ್ಚೆಕಲ್ಲಲ್ಲಿ ಬರೆದ ಗ್ರಂಥವು ಇನ್ನೇತಕ್ಕೆಂದು ಸಿಟ್ಟಾಗಿ ಬಿಸುಟರು. ತನ್ನ ಗೈರು ಹಾಜರಿಯಲ್ಲಿ ನೋಡಿಕೊಳ್ಳಲು ಬಿಟ್ಟಿದ್ದ ತನ್ನ ತಮ್ಮ ಹಾರೂನನ ದಾಡಿ ಹಿಡಿದು ಎಳೆದಿದ್ದರು. ಆ ಗ್ರಂಥವು ಪಚ್ಚೆ ಕಲ್ಲಿನಲ್ಲಿ ಕೊರೆದು ಬರೆದಿದ್ದರು. ಈ ಪಚ್ಚೆಕಲ್ಲಿನ ಹಲಗೆ ಬಹಳ ಕಾಲ ಕಳೆದ ನಂತರ ಯಾರೋ ಒಬ್ಬನ ಕೈಗೆ ಸಿಕ್ಕಿತ್ತು. ಹಜ್ರತ್ ಮೂಸಾರ ಕಾಲದಲ್ಲಿ ಕಾಣಸಿಗುತ್ತಿದ್ದ 'ಝುಮರೂದ್' ಪಚ್ಚೆ ಕಲ್ಲುಗಳು ಈಗ ಸಿಗುವುದಿಲ್ಲವೆಂದು ಹೇಳುತ್ತಾರೆ. ಈಜಿಪ್ಟ್‌ನಲ್ಲಿರುವ ಪಚ್ಚೆ ಕಲ್ಲಿನ ಗಣಿಯಲ್ಲಿ ಸಿಗುವ ಪಚ್ಚೆಯು ಶುದ್ಧ ಪಚ್ಚೆಯಾಗದೆ ಮರಕದ ಪಚ್ಚೆಯಾಗಿದೆ. ಇದು ಉತ್ತಮ ದರ್ಜೆಯದ್ದಾಗಿರದೆ ಎರಡನೆಯ ದರ್ಜೆಯದ್ದಾಗಿದ್ದು ತೆಳು ಬಣ್ಣದ್ದಾಗಿದ್ದು ಇದಕ್ಕೆ ಹೆಚ್ಚೇನೂ ಬೆಲೆ ಇರಲಿಲ್ಲ.

ಹಿಜರಿ ವರ್ಷ ೯೫೦ರಲ್ಲಿ ಪೋರ್ಚುಗಲ್ಲಿನಲ್ಲಿ ಒಂದು ಪಚ್ಚೆ ಕಲ್ಲಿನ ಗಣಿಯಿತ್ತು. ಇಲ್ಲಿ ಸಿಕ್ಕ ಹರಳು ಕಲ್ಲುಗಳು ಬಹಳ ಉತ್ತಮ ಬಣ್ಣ ಮತ್ತು ಉತ್ತಮ ಜಾತಿಯ ಪಚ್ಚೆ ಕಲ್ಲಾಗಿದ್ದವು. ಇದು ತುಂಬ ಶುದ್ಧವಾದ, ಗುಣದಲ್ಲಿ ಪರಿಶುದ್ಧತೆಯ ಉತ್ತಮ ಮಟ್ಟದ್ದಾಗಿವೆಯೆಂದು ವಿಶ್ವದೆಲ್ಲೆಡೆ ಪ್ರಸಿದ್ಧಿಪಡೆದಿತ್ತು. ಹಿಂದುಸ್ಥಾನದಲ್ಲೂ ಚಿಕ್ಕ ದೊಡ್ಡ ಪಚ್ಚೆಗಳು ಸಿಕ್ಕಿದ್ದವು. ಆದರೆ ಪುರಾತನ ಕಾಲದಲ್ಲಿ ಸಿಗುತ್ತಿದ್ದ ಪಚ್ಚೆಯು ಗುಣಮಟ್ಟದ್ದಾಗಿಲ್ಲವೆಂದು ಹೇಳಲಾಗಿದೆ.

**'ಪಾದೇ ಝುಹರ್'(ವಿಷಹಾರಿ/ವಿಷಹೀರುವ ಕಲ್ಲು) ಸಿಗುವ ವಿವರಗಳು:**

ವಿಷಹೀರುವ ಕಲ್ಲು ಇರಾನಿನ ಪರ್ವತದ ಪ್ರದೇಶಗಳಲ್ಲಿ ಕಾಡು ಕುರಿಗಳು (ಬುಝ್ ಕೋಹ್) ಕಾಣ ಸಿಗುತ್ತವೆ. ಈ ತಳಿಯ ಕುರಿ, ಆಡುಗಳ ಹೊಟ್ಟೆಯಲ್ಲಿ ಈ ವಿಷ ಹೀರುವ ಕಲ್ಲುಗಳು ದೊರೆಯುತ್ತವೆಂದು ಹೇಳಲಾಗುತ್ತದೆ. ಈ ಆಡು/ಕುರಿಗಳ ಪೈಕಿ ಈ ವಿಷಹಾರಿ ಕಲ್ಲುಗಳಿರುವ ಕುರಿ/ಆಡುಗಳು ದೇಹದಲ್ಲಿ ಬಹಳ ದುರ್ಬಲವಾಗಿರುತ್ತವೆಂದು ಹೇಳುತ್ತಾರೆ. ಇಂತಹ ಆಡು/ಕುರಿಗಳು ಬಾದಶಾಹರಿಗೆ ನೀಡುವ ಸಲುವಾಗಿ ಜನರು ಹಿಡಿದಿಡುತ್ತಿದ್ದರು. ಇವನ್ನು ಸರಕಾರದ ಲೆಕ್ಕಕ್ಕೆ ಸೇರಿಸುತ್ತಿದ್ದರು. ಉಳಿದವುಗಳು ಕೃಷಿಕರಿಗೆ ಬಿಟ್ಟುಬಿಡುತ್ತಿದ್ದರು. ಇದರಿಂದ ಬಹಳಷ್ಟು ಉಪಕಾರಿ ಮತ್ತು ಲಾಭಕಾರಿ ಅಂಶಗಳಿದ್ದವು. ಇದನ್ನು 'ತಿರಿಯಾಕೆ ಫಾರೂಕೆ ಬಸೀತ್' ಎಂಬ ಹೆಸರಿನಲ್ಲೂ ಕರೆಯಲಾಗುತ್ತಿತ್ತು. ದಕ್ಷಿಣ ಪ್ರಾಂತ್ಯದಲ್ಲಿ ಮುಸ್ಲಿಮರ ಆಳ್ವಿಕೆ ಇರುವಾಗ ವಿದೇಶದಿಂದ ಬರುತ್ತಿದ್ದ ಜನರು ಬಾದಶಾಹರ ಆಸ್ಥಾನಕ್ಕೆ ಬಂದವರು ತೆಲಂಗಾಣದ ಪ್ರದೇಶದಲ್ಲಿ ಸಿಗುವ ಒಂದು ತಳಿಯ ಹಸುಗಳ ಹಾಗೂ ದೊಡ್ಡ ಗಾತ್ರದ ಆಡಿನ ಹೊಟ್ಟೆಯಲ್ಲಿ ಈ ವಿಷಹಾರಿ ಕಲ್ಲುಗಳು ದೊರೆಯುತ್ತಿದ್ದವು. ಆದರೆ ಹಿಂದುಸ್ಥಾನದವರಿಗೆ ಇದರ ಪರಿಚಯವಿರಲಿಲ್ಲ. ವಿಷಹಾರಿ ಕಲ್ಲುಗಳು ವಿಶ್ವದ ಕೆಲವು ಕಡೆಗಳಲ್ಲಿ ದೊರೆಯುತ್ತವೆ. ಇದರ ಉಪಯೋಗದಿಂದ ವೃದ್ಧರನ್ನು ಯುವಕರನ್ನಾಗಿ (ಬಲವರ್ಧಕ)ಮಾಡಬಹುದಾಗಿದೆ, ಯುವಕರ ಪುರುಷತ್ವದ ಶಕ್ತಿಯನ್ನು ಹೆಚ್ಚಿಸಬಹುದಾಗಿದೆ. ಈ ವಿದೇಶೀಯರು ಇದರ ಮಹತ್ವವನ್ನು ಇಲ್ಲಿನ ಜನರಿಗೆ ತಿಳಿಸಿದ್ದರಿಂದ ಇದಕ್ಕೆ ವಿಶ್ವ ಮಾರುಕಟ್ಟೆಯಲ್ಲಿ ಬೇಡಿಕೆ ಹೆಚ್ಚಿ ತೆಲಂಗಾಣದ ವ್ಯಾಪಾರಸ್ಥರು ಇದರ ವ್ಯಾಪಾರದಲ್ಲಿ ತೊಡಗಿ ತುಂಬ ಆದಾಯಗಳಿಸಿದರು.

ಹಿಜರಿ ವರ್ಷ ೯೮೦ರಲ್ಲಿ ಕಾಶ್ಮೀರದ ಜನರು ದಕ್ಷಿಣ ಭಾರತದಲ್ಲಿ ಒಣ ಹಣ್ಣುಗಳು, ತುರ್ಕಿ ಲೋಬಾನ, ದಾಲ್ಚೀನಿ ಮುಂತಾದುವುಗಳ ಜೊತೆಗೆ ಹಳದಿ ಬಣ್ಣ ದೊಡ್ಡ ಆಕಾರದ ವಿಷಹಾರಿಯನ್ನು ಔಷಧದ ವಸ್ತುಗಳ ಜೊತೆಗೆ ವ್ಯಾಪಾರ ಮಾಡುತ್ತಿದ್ದರು. ತೆಲಂಗಾಣದ ವಿಷಹಾರಿ ಬಹಳ ಅಪರೂಪಕ್ಕೊಮ್ಮೆ ಮಾರುಕಟ್ಟೆಗೆ ಬರತೊಡಗಿದ್ದರಿಂದ ಕಾಶ್ಮೀರಿಗಳ ವ್ಯಾಪಾರ ಭರದಿಂದ ಸಾಗತೊಡಗಿತು. ವಿಷಹಾರಿಯ ಉಪಯೋಗ ಹಿಂದುಸ್ಥಾನದಲ್ಲಿ ಮುಖ್ಯವಾಗಿ ದಕ್ಷಿಣದಲ್ಲಿ ಗುಜರಾತ್ ವಿಷಹಾರಿ(ಪಾದೆ ಝುಹರ್) ಹೆಚ್ಚು ಔಷಧಕ್ಕಾಗಿ ಬಳಕೆಯಾಗತೊಡಗಿತು. ಖವಾಝುಂ ಶಾಹ ಇದಕ್ಕೆ 'ತ್ರಿಯಾಕ್ ಫಾರೂಖೆ ಬಸೀತ್' ಎಂದು ಹೆಸರಿಟ್ಟು ನಂತರ ಈ ಹೆಸರಲ್ಲಿ ಪ್ರಸಿದ್ಧವಾಯಿತು.

**‘ಕಿಲನ್‌ಫರ್’(ಜಾಯಿಕಾಯಿ)ಯ ವಿವರಗಳು:**

ಮಲಯಾದ ದನಾಸಿರ ದ್ವೀಪದ ಕಾಡಿನಲ್ಲಿ ದೊರೆಯುವ ಸಂಬಾರ ಜಿನಸುಗಳು, ಔಷಧಗಳಲ್ಲಿ ಬಳಕೆಂಬಾಗುವ ‘ಕಿಲನ್‌ಫರ್’ ಜಾಯಿಕಾಯಿ ಅತ್ಯಂತ ಸುಗಂಧಯುಕ್ತವಾದುದು. ಇದರ ಮರದಲ್ಲಿ ಆಗುವ ಹೂಗಳು ಕೂಡ ಅತ್ಯಂತ ಸುಗಂಧಯುಕ್ತವಾಗಿರುತ್ತದೆ. ಹೂ ದೊಡ್ಡದಾದಾಗ ಕೆಳಗೆ ಬೀಳುತ್ತವೆ. ಇದನ್ನು ಸೂರ್ಯನ ಬಿಸಿಲಲ್ಲಿ ಒಣಗಿಸುತ್ತಾರೆ. ಈ ಮರಗಳಿಂದ ಮಳೆಹೆಚ್ಚಿದ ಸಮಯದಲ್ಲಿ ಇವು ಬಿದ್ದು ನದಿಗಳಲ್ಲಿ ತೇಲುತ್ತವೆ. ನಂತರ ಸಮುದ್ರದ ತೆರೆಗಳ ಮೂಲಕ ದಡಗಳಲ್ಲಿ ಬಂದು ಸೇರುತ್ತವೆ. ಇವನ್ನು ಜನರು ಹೆಕ್ಕಿ ಬಳಸುತ್ತಾರೆ. ಈ ದ್ವೀಪದ ಆಸುಪಾಸಿನಲ್ಲಿರುವ ಮಲಯಾದ (ಮಲಯೇಶಿಯಾ) ಜನರು ಇದನ್ನು ಹೆಕ್ಕುವ ಮೂಲಕ ಶೇಖರಿಸಿ ಮಾರುತ್ತಾರೆ.

ಅದೇ ಕಾಲಘಟ್ಟದಲ್ಲಿ ಕಾಳು(ಕರಿ)ಮೆಣಸನ್ನು ಖರೀದಿ ಮಾಡುವ ಸಲುವಾಗಿ ಶಾಂತ ಸಮುದ್ರದ ಮೂಲಕ ವ್ಯಾಪಾರಿಗಳು ಮಲಬಾರ್ ಪ್ರದೇಶದ ಆಜಿ(ಕೊಚ್ಚಿನ್) ಬಂದರಿಗೆ ಆಗಮಿಸುತ್ತಿದ್ದರು. ಇವರಲ್ಲಿ ಹೆಚ್ಚಿನವರು ಅರ್ಮೇನಿಯನರು, ಪರಂಗಿ(ಫ್ರೆಂಚ್)ಗಳಾಗಿದ್ದರು. ಬಹಳಷ್ಟು ಸಲ ಇವರ ಮಧ್ಯೆ ಘರ್ಷಣೆ ಉಂಟಾಗಿ ಜಗಳಗಳಾಗುತ್ತಿದ್ದವು. ದ್ವೇಷ ಬೆಳೆದು ಹಲವು ಕೊಲೆಗಳು ನಡೆದಿದ್ದವು. ಅರ್ಮೇನಿಯನರು ಹಜ್ರತ್ ಈಸಾ ಅಲೈಹಿಸಲಾಮ್ ಅಲ್ಲಾಹನ ಪೈಗಂಬರನೆಂದು ನಂಬುವವರಾಗಿದ್ದರು. ಪರಂಗಿಗಳು ಹಜ್ರತ್ ಈಸಾನನ್ನು ದೇವರ ಮಗನೆಂದು ನಂಬಿದ್ದರು. ಇದರಿಂದಾಗಿ ಶಾಂತ ಸಮುದ್ರ ಮತ್ತು ಹಿಂದೂ ಮಹಾಸಾಗರದ ಮೂಲಕ ಬರುತ್ತಿರುವ ಪ್ರವಾಸಿ ವ್ಯಾಪಾರಿಗಳ ನಡುವೆ ದ್ವೇಷ ಹುಟ್ಟಿಕೊಂಡಿತ್ತು. ಹೆಚ್ಚಿನ ಬಾರಿ ಅರ್ಮೇನಿಯನ್ನರು ಅವರ ಎದುರು ಜಯಶೀಲರಾಗುತ್ತಿದ್ದರು. ಅವರ ಹಡಗುಗಳನ್ನು ವಶಪಡಿಸಿಕೊಂಡು ಅವರನ್ನು ಕೊಂದು ಹಾಕಿ, ಅವರ ಸಾಮಾನು ಸರಂಜಾಮುಗಳನ್ನು ಲೂಟಿಮಾಡುತ್ತಿದ್ದರು. ಬಹಳಷ್ಟು ಸಂಖ್ಯೆಯ ಫ್ರೆಂಚರು ಸೆರೆ ಹಿಡಿಯಲಾಗಿ ಆಜಿ ಬಂದರಿನ ಕೋಟೆಯೊಳಗೆ ಬಂಧಿಸಿ ಅವರು ಮತ್ತೆ ಈ ಕಡೆ ಬರದಂತೆ ನೋಡಿಕೊಂಡಿದ್ದರು. ಆದರೆ ಮುಂದೆ ಕೆಲವು ವರ್ಷಗಳುರುಳಿದಾಗ ಫ್ರೆಂಚರು ಮುಸ್ಲಿಮರೊಂದಿಗೆ ಸ್ನೇಹದೋರಿ, ಪುಸಲಾಯಿಸಿ ಅನೇಕ ಮುಸ್ಲಿಮರನ್ನು ಉಪಾಯದಿಂದ ತಮ್ಮೆಡೆ ಸೆಳೆದುಕೊಂಡರು. ಆಜಿ ಬಂದರಿನ ಮೇಲೆ ಮುಸ್ಲಿಮರ ಹಿಡಿತವು ಸಡಿಲಾಗತೊಡಗಿ ದುರ್ಬಲವಾಯಿತು. ಶಕ್ತಿ, ಶೌರ್ಯದಲ್ಲಿ ಮಲಬಾರಿನ ಸ್ಥಳೀಯರು ಶ್ರೇಷ್ಠರಾಗಿದ್ದರೂ ಕುತಂತ್ರದಲ್ಲಿ ಪರಂಗಿಗಳು ಮೇಲುಗೈ ಸಾಧಿಸಿದ್ದರು. ಪರಂಗಿಗಳು ಅಲ್ಲಿ ಒಂದು ರೀತಿಯಲ್ಲಿ ಬದಲಾವಣೆಮಾಡಿದಂತೆ ಉಪಾಯದಿಂದ ಆಜಿಯಾನ್ ಅಥವಾ ಮಲಬಾರಿಗಳನ್ನು ಒಂದೆಡೆ ಮೂಲೆಗೆ ತಳ್ಳಿಹಾಕಿದರು. ಇವರು

ಅನಿವಾರ್ಯವಾಗಿ ಸಮುದ್ರದ ಕೆಲಸ ಮೀನು ಹಿಡಿಯುವುದು, ಹಡಗಿನ ಕಳಾಸಿಗಳಾಗಿ ಕೆಲಸಗಾರರಾಗಿ ಉಳಿದರು. ಹೀಗೆಯೇ ಇಲ್ಲಿನ ಕೋದಾ ದ್ವೀಪವನ್ನು ಕೂಡ ಫ್ರೆಂಚರು ಕೈವಶಮಾಡಿಕೊಂಡರು.

**ಇಲ್ಲಿನ ಕರಡಿಗಳ ಬಗ್ಗೆ ವಿವರಗಳು:**

ನಾನು ಗೋಲ್ಕೊಂಡಾದ ಬಾದಶಾಹ ಇಬ್ರಾಹಿಂ ಕುತುಬ್ ಶಾಹರ ಆಸ್ಥಾನಕ್ಕೆ ಹೋದಾಗ ಅವರ ದರ್ಬಾರಿನಲ್ಲಿ ನಾಲ್ಕು ಮಂಚಗಳಿರುವುದನ್ನು ಕಂಡೆ. ಅಲ್ಲಿನ ಒಂದು ಚಬೂತರದಲ್ಲಿ ಹರಿವಾಣ ಇಡಲಾಗಿತ್ತು. ನಾನು ಕುತುಬ್ ಶಾಹರೊಂದಿಗೆ ಕೇಳಿದೆ, 'ಹರಿವಾಣದಲ್ಲಿ ಏನಿದೆ?'

ಅವರು ಅದಕ್ಕೆ 'ಇದೊಂದು ರೀತಿಯ ಎಲೆಗಳು. ಇದರ ನೀರನ್ನು ಗುಲಾಬಿ ಹೂವಿನ ಪಕಳೆಯೊಂದಿಗೆ ಸೇರಿಸಿ ಉಪಯೋಗಿಸುತ್ತೇನೆ. ಇದರಿಂದ ವಿಷಪ್ರಾಸನವಾದಲ್ಲಿ ವಿಷದ ಪ್ರಭಾವವನ್ನು ಇದು ತಡೆಹಿಡಿಯುತ್ತದೆ. ಈ ಎಲೆಯ ನೀರನ್ನು ಹಾಲಿನಲ್ಲಿ ಹಾಕಿದರೆ ಪನ್ನೀರಾಗಿ ಮಾರ್ಪಾಡಾಗುತ್ತದೆ' ಎಂದು ಹೇಳಿದರು. ಜಹಾಂಪನಾರು ಈ ಎಲೆಯ ಅನೇಕ ವಿಧಗಳನ್ನು ತನ್ನ ಖಜಾನೆಯಲ್ಲಿ ಶೇಖರಿಸಿಟ್ಟಿದ್ದರು.

ಹೀಗೆ ನಾನು ನೋಡುವಾಗ ಆಸ್ಥಾನದ ಒಂದು ವೇದಿಕೆಯ ಬಳಿಯಲ್ಲಿ ಖಡ್ಗ ಮೃಗಗಳಿರುವುದನ್ನು ಕಂಡೆ. ಈ ಅಪರೂಪದ ಪ್ರಾಣಿಯನ್ನು ಸಾಕುವುದು ನಾನು ಇದುವರೆಗೂ ಕಂಡವನಲ್ಲ. ಈ ಗಂಡು, ಹೆಣ್ಣು ಖಡ್ಗ ಮೃಗಗಳ ಜೋಡಿಯನ್ನು ಅಕ್ಬರ್ ಬಾದಶಾಹ ಇವರಿಗೆ ಉಡುಗೊರೆಯ ರೂಪದಲ್ಲಿ ನೀಡಿದ್ದರು. ಇಬ್ರಾಹಿಂ ಕುತುಬ್ ಶಾಹನ ಜೊತೆಯಲ್ಲಿ ಈ ಖಡ್ಗಮೃಗಗಳು ಅನ್ಯೋನ್ಯವಾಗಿದ್ದು ಅವರ ಲಾಲನೆ ಪಾಲನೆಯಲ್ಲಿ ಬೆಳೆದಿತ್ತು. ಅವರು ಕೋಟೆಯ ಕಡೆ ಹೋಗುವಾಗ ಜೊತೆಗೆ ಈ ಖಡ್ಗ ಮೃಗಗಳು ಹೋಗುತ್ತಿದ್ದವು. ಅಲ್ಲಿ ಕಾವಲಿಗಾಗಿ ಬೆಳೆಸಿದ್ದ ಸಿಂಹಗಳು ಅಕಸ್ಮಾತ್ತಾಗಿ ಮೈಮೇಲೇರಿ ಬರುವುದನ್ನು ತಡೆಯುವ ಮೂಲಕ ರಕ್ಷಣೆಗಾಗಿ ಈ ಖಡ್ಗಮೃಗಗಳನ್ನು ತನ್ನ ಜೊತೆಗೆ ಇರಿಸಿಕೊಂಡಿದ್ದರು. ಯಾಕೆಂದರೆ ಈ ಖಡ್ಗಮೃಗಗಳನ್ನು ಕಂಡಾಗ ಸಿಂಹಗಳು ಸುಮ್ಮನಾಗುತ್ತಿದ್ದವು. ಜಹಾಂಪನಾರ ಮರಣಾ ನಂತರ ಅವನ ನೌಕರರು ಖಡ್ಗ ಮೃಗಗಳನ್ನು ಅಶುಭ ಪ್ರಾಣಿಗಳೆಂದು ಕೊಂದುಹಾಕಿದ್ದರು. ಇವನ್ನು ಕೊಲ್ಲುವುದು ಸುಲಭಸಾಧ್ಯವಾಗಲಿಲ್ಲ. ಬಾಣಗಳು, ಈಟಿ ಭರ್ಚಿಗಳು ಅವುಗಳ ಮೇಲೆ ಯಾವ ಪರಿಣಾಮವೂ ಬೀರಿರಲಿಲ್ಲ. ಕೊನೆಗೆ ಅವರು ಕಬ್ಬಿಣದ ಮೊನಚಾದ ಕೊನೆಗಳಿರುವ ಈಟಿಯಿಂದ ತಿವಿದರು. ಅದರ ಪಂಜರದೊಳಗೆ ಕಬ್ಬಿಣದ ಸಲಾಕೆಗೆ ಬಟ್ಟೆ ಸುತ್ತಿ ಎಣ್ಣೆಗೆ ಅದ್ದಿ ಬೆಂಕಿ ಹಚ್ಚಿ ಕೊಂದು ಹಾಕಿದ್ದರು!.

ಆನೆಗಳಿರುವ ಕಾಡಿನಲ್ಲಿ ಈ ಖಡ್ಗಮೃಗಗಳು ಕೂಡ ಇರುತ್ತವೆ. ಎತ್ತರದಲ್ಲಿ

ಇವು ಆನೆಗಳಿಗಿಂತ ಚಿಕ್ಕದಾಗಿ ಕಾಣಿಸುತ್ತವೆ. ಆದರೆ ಅತ್ಯಂತ ದೊಡ್ಡ ಆನೆ ಕೂಡ ಇವುಗಳನ್ನು ಕಂಡರೆ ಭಯಪಡುತ್ತವೆ. ಆಗಾಗ ಇದು ಆನೆಯ ಮೇಲೆರಗಿ ಅದರ ಹೊಟ್ಟೆಯನ್ನು ತನ್ನ ಮೂತಿಯಲ್ಲಿರುವ ಖಡ್ಗದಂತೆ ಚೂಪಾದ ಕೊಂಬಿನಿಂದ ತಿವಿದು ಬಗೆಯುತ್ತದೆ. ತಲೆಯನ್ನು ಕೂಡ ಬಗೆದು ಹಾಕುತ್ತದೆ.

**ಅಸಮಾನ್ಯ ರೀತಿಯಲ್ಲಿ ಮಹಿಳೆಯರು ಹೆರುವ ವಿಧಾನಗಳ ವಿವರಗಳು:**

ಆಲಂಪನಾ ಇಬ್ರಾಹಿಂ ಆದಿಲ್ ಶಾಹನ ಆಳ್ವಿಕೆಯ ಕಾಲದಲ್ಲಿ ಅವರ ಜೊತೆಗೆ ಕಮಾಲುದ್ದೀನ್ ಎಂಬ ಹೆಸರಿನ ದರ್ಬಾರಿ ಇದ್ದರು. ಅವರೊಂದು ಸಂಗತಿಯನ್ನು ನನಗೆ ಹೇಳಿದ್ದರು. ಓರ್ವ ಮಹಿಳೆಯು ಒಮ್ಮೆ ಮೂರು ಹೆಣ್ಣು ಮಕ್ಕಳನ್ನು ಹೆತ್ತಿದ್ದಳು. ಅವು ಒಟ್ಟಾಗಿ ಹೆತ್ತ ಬಳಿಕ ಗಂಡು ಮಕ್ಕಳಾಗಿ ಪರಿವರ್ತನೆ ಹೊಂದಿದವು ಎಂದು ಹೇಳಿದ್ದರು. ಇದನ್ನು ಕೇಳಿ ಅಲ್ಲಿದ್ದ ಇನ್ನೊಬ್ಬ, 'ಇದಕ್ಕಿಂತಲೂ ವಿಚಿತ್ರವಾದ ಒಂದು ಸಂಗತಿ ಮಿಸ್ರ್(ಈಜಿಪ್ಟ್)ನ ನಗರದಲ್ಲಿ ನಡೆದದ್ದನ್ನು ಕೇಳಿದ್ದೇನೆ' ಎಂದ. 'ಈ ನಗರದ ಒಂದು ಮೊಹಲ್ಲಾ(ಕೇರಿ)ಕ್ಕೆ 'ಮೊಹಲ್ಲಾ ಎ ಅಶ್ರಾ' ಎಂಬ ಹೆಸರಿದೆ. ಈ ಮೊಹಲ್ಲಾದಲ್ಲಿ ಓರ್ವ ಮಹಿಳೆ ಇದ್ದಳು. ಇವಳು ಒಂದೇ ಸಲಕ್ಕೆ ಹತ್ತು ಗಂಡು ಮಕ್ಕಳನ್ನು ಹೆತ್ತಿದ್ದಳು. ಇದರಿಂದ ಈ ಕೇರಿಗೆ ಹತ್ತು ಮಕ್ಕಳ ತಾಯಿಯ ಮೊಹಲ್ಲಾ ಯಾ ಮೊಹಲ್ಲಾ ಎ ಅಶ್ರಾ ಎಂಬ ಹೆಸರು ಬಂದಿದೆ' ಎಂದ.

ಇಸ್ಮಾಯಿಲ್ ಆದಿಲ್ ಶಾಹನ ಆಳ್ವಿಕೆಯ ಕಾಲದಲ್ಲಿ ಅವನ ಬಳಿ ಪ್ರಖ್ಯಾತ ಸೂಫಿ ಸಂತ ಜುನೈದ್ ಬಗ್ದಾದಿಯವರ ಮಗ ಷೇಖ್ ಹಬೀಬುಲ್ಲಾ ಜುನೈದಿ ಇದ್ದರು. ಇವರು ಜುನೈದಿ ಪರಂಪರೆ(ಸಿಲ್‌ಸಿಲಾ) ಪೀರ್ ಮತ್ತು ಸಜ್ಜಾದ(ಅಧ್ಯಾತ್ಮವಾರೀಸುದಾರ)ರಾಗಿದ್ದರು. ಇವರು ಒಂದು ಸಂಗತಿಯನ್ನು ಹೇಳಿದ್ದರು. 'ಬಾದಶಾಹರ ಕೋಟೆಯಲ್ಲಿ ಓರ್ವ ಮಹಿಳೆ ಹದಿನೆಂಟು ಮಕ್ಕಳನ್ನು ಒಂದೇ ದಿನ ಹೆತ್ತಿದ್ದಳು. ಈ ಮಕ್ಕಳನ್ನು ಹೆತ್ತವರು ಚೆನ್ನಾಗಿ ಲಾಲನೆ ಪಾಲನೆ ಮಾಡಿದ್ದರಿಂದ ಒಳ್ಳೆಯ ಆರೋಗ್ಯದಲ್ಲಿ ಮಕ್ಕಳು ಬೆಳೆದಿದ್ದರು. ಅವರ ಪೈಕಿ ಇಬ್ಬರು ಗಂಡು ಮಕ್ಕಳು ಜಹಾಂಪನಾರ ಆಸ್ಥಾನದ ನೌಕರರಾಗಿ ಕೆಲಸ ಮಾಡುತ್ತಿದ್ದರು'. ಈ ಸಂದರ್ಭದಲ್ಲಿ ನಾನು ಕೇಳಿದ ಇನ್ನೊಂದು ವಿಚಿತ್ರ ಘಟನೆ ಹೀಗಿದೆ: ಅಹ್ಮದ್ ನಗರದಲ್ಲಿ ಸಯ್ಯದ್ ಅಲಿ ತಾರಿಖಿ ಎಂಬ ಹೆಸರಿನ ಸಾಹೇಬರು ಇದ್ದರು. ಇವರು ಎರಡನೇ ಬುರ್ಹಾನ್ ನಿಜಾಂ ಶಾಹನ ಆಪ್ತರಲ್ಲೊಬ್ಬರಾಗಿದ್ದರು. ಆ ಕಾಲದ ಪ್ರಸಿದ್ಧ ಇತಿಹಾಸಕಾರರಾಗಿದ್ದರು. ಮುಖ್ಯವಾಗಿ ಬಾದಶಾಹರ ಇತಿಹಾಸ ಬರೆಯುವುದರಲ್ಲಿ ಪ್ರಖ್ಯಾತರು. ಇವರ ಇತಿಹಾಸದ ಗ್ರಂಥಗಳು 'ರಝಾ' ಗ್ರಂಥಾಲಯದಲ್ಲಿ ದೊರೆಯುತ್ತವೆ. ಪುಸ್ತಕಗಳನ್ನು ಓದುವುದು ಇವರ ಹವ್ಯಾಸವಾಗಿತ್ತು.

ಇವರು ತಮ್ಮ ಇತಿಹಾಸ ಗ್ರಂಥವೊಂದರ ಟಿಪ್ಪಣಿಯಲ್ಲಿ ಹೀಗೆ ಬರೆದಿದ್ದರು: ಓರ್ವ ಬಡ ಮಹಿಳೆ ಒಂದು ಸಲಕ್ಕೆ ಹದಿನೆಂಟು ಮಕ್ಕಳನ್ನು ಜನ್ಮನೀಡಿದ್ದಳು. ಒಂದು ಮಗುವನ್ನು ತನ್ನೊಂದಿಗೆ ಇಟ್ಟುಕೊಂಡು ಉಳಿದ ಹದಿನೇಳು ಮಕ್ಕಳನ್ನು ಯಾರೂ ಇಲ್ಲದ ಸ್ಥಳದಲ್ಲಿ ಇಟ್ಟು ಬಂದಳು. ಅಲ್ಲಾಹನ ದಯೆಯಿಂದ ಆ ಹಾದಿಯಲ್ಲಿ ಓರ್ವ ನಡೆದು ಬಂದಿದ್ದ. ಅವನು ಈ ಮಕ್ಕಳ ಮೇಲೆ ಕನಿಕರಪಟ್ಟುಕೊಂಡು ಎತ್ತಿಕೊಂಡು ತನ್ನ ಮನೆಗೆ ಬಂದ. ಅವನು ಈ ಎಲ್ಲ ಮಕ್ಕಳನ್ನು ಚೆನ್ನಾಗಿ ಪಾಲನೆ ಮಾಡಿದ. ಇವರೆಲ್ಲರಿಗೂ ವಿದ್ಯಾಭ್ಯಾಸವನ್ನು ಆ ವ್ಯಕ್ತಿ ನೀಡಿದ. ಇವನ ಈ ಮಕ್ಕಳೆಲ್ಲರೂ ಆ ಕಾಲದ ದೊಡ್ಡ ಜ್ಞಾನಿಗಳೂ, ವಿದ್ವಾಂಸರೂ ಆದರು. ಅವನು ತನ್ನ ಮಕ್ಕಳು ಬಹಳ ಪ್ರಖ್ಯಾತರಾದಾಗ ಹೆಂಡತಿಯನ್ನು ಹೇಳಿದ, 'ಇವು ನೀನು ಬಿಟ್ಟು ಬಂದ ನಿನ್ನವೇ ಮಕ್ಕಳಾಗಿವೆ'.

**ದಕ್ಷಿಣದ ಒಂದು ನದಿಯಲ್ಲಿ ಅರ್ಧ ಬಿಸಿ ಅರ್ಧ ತಣ್ಣಗಿನ ನೀರಿನ ಬುಗ್ಗೆಯ ವಿವರಗಳು:**

ವಾಯ್ಲು ಎಂಬ ಬಂದರಿನ ಬಳಿಯಲ್ಲಿ ಒಂದು ಹಳ್ಳಿ ಇತ್ತು. ಅದರ ಹೆಸರು ಪರಾದಾ ಎಂದು. ಅಲ್ಲಿನ ಭೂಮಿಯಲ್ಲಿ ಒಂದು ನೀರಿನ ಒಸರಿನ ಬುಗ್ಗೆ ಇದೆ. ಅದರಲ್ಲಿ ತಣ್ಣಗಿನ ಮತ್ತು ಸಿಹಿಯಾದ ನೀರು ಸಿಗುತ್ತದೆ. ಅದರ ಪಕ್ಕದಲ್ಲಿರುವ ಇನ್ನೊಂದು ಒಸರಿನ ಬುಗ್ಗೆಯಲ್ಲಿ ಬಿಸಿಯಾದ ನೀರು ಒಸರುತ್ತದೆ. ಇದರ ಹತ್ತಿರದಲ್ಲಿ ಒಂದು ಪರ್ವತವಿದೆ. ಅದರ ಬುಡದಲ್ಲಿ ದೊಡ್ಡದೊಡ್ಡ ಮರಗಳಿವೆ. ವಾಯ್ಲು ಬಂದರಿನ ಅಧಿಕಾರಿ ಮುರಾದ್ ಖಾನ್ ಓರ್ವ ಪ್ರಖ್ಯಾತ ಬಲಿಷ್ಠ ಮನುಷ್ಯನಾಗಿದ್ದ. ಅವನು ಇದರ ಬಳಿಯಲ್ಲಿ ಒಂದು ದೊಡ್ಡ ಕೊಳವನ್ನು ನಿರ್ಮಿಸಿದ. ಇದರಿಂದ ಇಲ್ಲಿ ಹಾದುಹೋಗುವ ಜನರು ಅಲ್ಲಿ ಬಂದು ಸ್ನಾನ ಮಾಡುವುದು, ಕೈಕಾಲು ತೊಳೆಯುವುದಕ್ಕೆ ಅನುಕೂಲವಾಗುವಂತೆ ವ್ಯವಸ್ಥೆ ಮಾಡಿದ್ದ. ಅಲ್ಲಿನ ಇನ್ನೊಂದು ಬಿಸಿನೀರಿನ ಕೊಳದಲ್ಲಿ ನೀರು ಎಷ್ಟೊಂದು ಬಿಸಿಯಿದೆಯೆಂದರೆ ಮೊಟ್ಟೆಗಳನ್ನು ಬಟ್ಟೆಯಲ್ಲಿ ಸುತ್ತಿ ಕಟ್ಟಿ ಅದರಲ್ಲಿ ಅದ್ದಿ ಎತ್ತಿದರೆ ಬೆಂದು ತಿನ್ನಲು ಸಾಧ್ಯವಾಗುವಂತೆ ಆಗುತ್ತಿತ್ತು. ಹೀಗೆಯೇ ಮಹಮಲ್ಲಾಪುರಂ(ಮಹಾಬಲಿಪುರಂ)ನ ಹತ್ತಿರದಲ್ಲಿ ಸಂಗಮೇರ್ ಎಂಬ ಸ್ಥಳವಿದೆ. ಇಲ್ಲಿಯೂ ಕೂಡ ಬಿಸಿ ನೀರು ಮತ್ತು ತಣ್ಣೀರ ಬುಗ್ಗೆ ಹತ್ತಿರದಲ್ಲೇ ಇದೆ. ಫಾರಸ್ ದೇಶ(ಇರಾನ್)ದಲ್ಲಿ ಶೀರಾಜ್‌ನ ಬಳಿಯಲ್ಲಿ ಒಂದು ಪರ್ವತದ ಒಡಲಲ್ಲಿ ಒಂದು ನೀರಿನ ಒರತೆ ಇದೆ. ಇದರ ನೀರು ಎಂತಹ ಕಹಿಯೆಂದರೆ ಒಂದು ಲೋಟ ಈ ನೀರನ್ನು ಕುಡಿದರೆ ಅಗಾಗ ಜುಲಾಬು(ಬೇಧಿ) ಆಗುತ್ತಿರುತ್ತದೆ.

ಹೀಗೆ ಶೀರಾಜ್ ನಗರದ ಹತ್ತಿರದ ಇನ್ನೊಂದು ಪರ್ವತದ ಬುಡದಲ್ಲಿ ಒಂದು ಒಸರು ಇದೆ. ಇದರಲ್ಲಿ ಹೊರಬರುವ ನೀರಿಗೆ ಒಂದು ಸುಗಂಧವಿರುತ್ತದೆ. ಈ

ಸುವಾಸನೆ ಬದಲಾಗುತ್ತಿರುತ್ತದೆ ಕೆಲವು ಸಲ ಹೂವಿನ ಸುಗಂಧದಂತಿದ್ದರೆ, ಕೆಲವು ಸಲ ಯಾವುದೋ ಬಲಿತು ಮಾಗಿದ ಹಣ್ಣಿನ ಸುಗಂಧದಂತಿರುತ್ತದೆ. ಇದರ ನೀರನ್ನು ಕುಡಿದಲ್ಲಿ ಜಲಾಬು ಬೇಧಿಯು ಆಗಾಗ ಆಗುವುದು ನಿಲ್ಲುತ್ತದೆ. ಶೀರಾಜಿನ ಮೊಹಲ್ಲಾ ಒಂದರ ಹೆಸರು 'ಲೌದೆ ಖಾಝಿ' ಎಂದಾಗಿದೆ. ಇಲ್ಲಿ ಕೂಡ ಒಂದು ನೀರಿನ ಒಸರು ಬುಗ್ಗೆಯಾಗಿ ಎತ್ತರಕ್ಕೆ ಹಾರುತ್ತದೆ. ಅದರ ನಾಲ್ಕೂದಿಕ್ಕಿನಲ್ಲಿ ಕಟ್ಟಿಸಿದ ಆವರಣದ ಗೋಡೆಯ ಎತ್ತರಕ್ಕಿಂತ ಹೆಚ್ಚು ಎತ್ತರಕ್ಕೆ ಕಾರಂಜಿಯಂತೆ ಚಿಮ್ಮಿ ಹಾರುತ್ತದೆ. ಅಲ್ಲಿನ ಹತ್ತಿರದ ಗುಡ್ಡ ಪರ್ವತಗಳು ಕೂಡ ತೊಯ್ದು ಹೋಗುತ್ತವೆ.

**ಚಿತ್ರವಿಚಿತ್ರ ಥರದ ಮನುಷ್ಯರು ಮತ್ತು ಪ್ರಾಣಿಗಳ ವಿವರಗಳು:**

ಇತಿಹಾಸದಲ್ಲಿ ಕೆಲವೆಡೆ ಇಂತಹ ಚಿತ್ರವಿಚಿತ್ರ ಕುರುಹುಗಳು ಕಾಣಸಿಗುತ್ತವೆ. ಒಂದು ದಿನ ಆಲಂಪನಾರ ಬಳಿ ಒಂದು ಹಸುವಿನ ಕರುವನ್ನು ತಂದಿದ್ದರು. ಅದರ ಕಣ್ಣು, ಮೂಗು, ಬಾಯಿ ಎಲ್ಲವೂ ಕೂಡ ಸಾಮಾನ್ಯವಾಗಿತ್ತು. ಆದರೆ ಅದಕ್ಕೆ ಎರಡು ತಲೆಗಳಿದ್ದವು. ಹೀಗೆಯೇ ಶೀರಾಜಿನಲ್ಲಿ ಆಡಿನ ಎರಡು ಮರಿಗಳು ಒಂದಕ್ಕೊಂದು ಅಂಟಿಕೊಂಡಿದ್ದವು. ಅದಕ್ಕೆ ಎರಡು ತಲೆಗಳಿದ್ದವು. ಅವುಗಳ ಕಾಲುಗಳ ಪಾದವು ವಿಚಿತ್ರವಾಗಿದ್ದವು. ಇದರಿಂದಾಗಿ ತನ್ನ ಕಾಲುಗಳನ್ನು ಅದು ನೆಲದ ಮೇಲಿಡಲು ಸಾಧ್ಯವಾಗುತ್ತಿರಲಿಲ್ಲ. ಅದು ಕೂಗುವಾಗ ಕೂಗು ಬಾಯಿಯಲ್ಲಿ ಹೊರಡದೆ ಹಿಂಬದಿಯ ಪೃಷ್ಠದ ಭಾಗದಲ್ಲಿ ಹೊರಡುತ್ತಿತ್ತು! ಇನ್ನೊಂದು ಆಡು ಕೂಡ ವಿಚಿತ್ರವಾಗಿತ್ತು. ಅದಕ್ಕೆ ಮೂರು ಕಾಲುಗಳು ಮಾತ್ರ ಇದ್ದವು. ಹೀಗೆ ಒಬ್ಬ ಹುಡುಗನಿದ್ದ, ಅವನ ಎದುರಿಗಿರಬೇಕಾದ ಮುಖ, ತಲೆ, ಕುತ್ತಿಗೆಯ ಭಾಗವು ಬೆನ್ನಿನ ಭಾಗದಲ್ಲಿತ್ತು. ಇನ್ನೊಂದು ಆಡಿನ ಮರಿಯ ಮುಖ ಮನುಷ್ಯನಂತಿದ್ದು ಉಳಿದ ದೇಹದ ಭಾಗಗಳು ಆಡಿನಂತೆ ಸಾಮಾನ್ಯವಾಗಿತ್ತು! ಹುಟ್ಟಿದ ಒಂದನೆಯ ದಿನದಲ್ಲೇ ಸತ್ತ ಮಗುವಿನ ದೇಹವನ್ನು ನೋಡಿದ್ದೆ. ಅದರ ಹೊಟ್ಟೆ ಎದೆ ಎಲ್ಲವೂ ಸಾಮಾನ್ಯವಾಗಿತ್ತು. ಆದರೆ ಅದರ ಕಣ್ಣು ಮೂಗು ಬಾಯಿ ತುಟಿಗಳು ಎದೆಯಲ್ಲಿದ್ದವು. ಇನ್ನೊಂದೆಡೆ ಓರ್ವ ವ್ಯಕ್ತಿ ನನಗೆ ಕಾಣಸಿಕ್ಕಿದ್ದ. ಅವನಿಗೆ ಕೈ ಇರದೆ, ಹೆಗಲಿನಲ್ಲಿ ತೋಳಿರುವ ಜಾಗದಲ್ಲಿ ಬೆರಳುಗಳಿದ್ದವು. ಇದೇ ತರ ಹಿಂದಿಯಾಪುರ(ಬಿಜಾಪುರ)ದಲ್ಲಿ ಅವಳಿಜವಳಿ ಮಕ್ಕಳು ಹುಟ್ಟಿದ್ದು ಎರಡು ಮೂರು ವರ್ಷಗಳು ಮನೆಯಲ್ಲಿದ್ದವು. ಒಂದು ದಿನ ಆಶ್ಚರ್ಯಕರ ರೀತಿಯಲ್ಲಿ ಎರಡೂ ಮಕ್ಕಳು ಮಾಯವಾಗಿದ್ದವು! ಒಬ್ಬ ಹಬ್ಶಿ ಗುಲಾಮನನ್ನು ನಾನು ನೋಡಿದ್ದೆ. ಅವನು ನೋಡುವಾಗ ಸಾಮಾನ್ಯ ಮನುಷ್ಯನಾಗಿದ್ದ. ಅದರೆ ಅವನ ಬಾಯಿ ಮತ್ತು ನಾಲಗೆ ತುಂಬ ಚಿಕ್ಕದಾಗಿತ್ತು. ಆತನಿಗೆ ಸರಿಯಾಗಿ ಮಾತಾಡಲಾಗುತ್ತಿರಲಿಲ್ಲ. ಅವನ ಎರಡು ಹಲ್ಲುಗಳು ಉದ್ದವಾಗಿ ಹೊರಬಂದಿದ್ದವು. ಒಮ್ಮೆ ಅಲಂಪನಾರ ದರ್ಬಾರಿಗೆ ಓರ್ವ ವ್ಯಕ್ತಿ ಬಂದಿದ್ದ. ಅವನು ಎಲ್ಲರೂ

ನೋಡುವಂತೆ ಕೈಯಲ್ಲಿದ್ದ ಮೊಟ್ಟೆಯನ್ನು ಒಡೆದ. ಅದರೊಳಗೆ ಚಿಕ್ಕ ಹಕ್ಕಿಯ ಮೊಟ್ಟೆಯಂತಿರುವ ಇನ್ನೊಂದು ಮೊಟ್ಟೆಯಿತ್ತು!

**ಹಲವು ಚಿತ್ರ ವಿಚಿತ್ರ ಸಂಗತಿಗಳ ವಿವರಗಳು:**

ದಕ್ಷಿಣ ಭಾರತದ ಬೆಂಗಳೂರು ಪ್ರಾಂತ್ಯದ ಹತ್ತಿರದಲ್ಲಿ ಬಾದಕಲ್ಲ(ಭಟ್ಕಳ?) ಬಂದರದ ಹತ್ತಿರ ಒಂದು ಜಮೀನು ಇದೆ. ಅದರಲ್ಲಿ ಬೆಳೆದ ಜೊಂಡು ಹುಲ್ಲು ಮನುಷ್ಯನ ಆಕೃತಿಯಲ್ಲಿ ಬೆಳೆದಿತ್ತು. ನೋಡುವಾಗ ಹನ್ನೆರಡು ವರ್ಷದ ಮಗುವೊಂದು ಅಲ್ಲಿ ನಿಂತಿದೆ ಎಂಬಂತೆ ಕಂಡು ಬರುತ್ತದೆ. ಇದನ್ನು ಕತ್ತರಿಸಿದರೆ ಮತ್ತೆ ಬೆಳೆದು ಐದು ತಿಂಗಳಲ್ಲಿ ಮತ್ತೆ ಅದೇ ಆಕಾರಕ್ಕೆ ಬರುತ್ತಿತ್ತು! ಇದರ ಆಕಾರದಲ್ಲಿರುವ ಹೊಟ್ಟೆಯ ಭಾಗವು ಕುಂಬಳಕಾಯಿಯಂತೆ ಕಾಣಿಸುತ್ತಿತ್ತು! ಇದನ್ನು ಹಾಗೆಯೇ ಬಿಟ್ಟರೆ ಒಣಗಿಹೋಗುತ್ತದೆ. ಆದರೆ ಮರುವರ್ಷ ಮತ್ತೆ ಅದೇ ರೀತಿ ಹಸಿರಾಗಿ ಚಿಗುರುತ್ತದೆ. ಮತ್ತೆ ಅದೇ ರೀತಿ ಮನುಷ್ಯನ ಆಕೃತಿ ಮೂಡುತ್ತಿತ್ತು!

ಇದೇ ಪ್ರದೇಶದಲ್ಲಿ ಬೆಕ್ಕಿನಂತಹ ಮುಖದ ಹಕ್ಕಿಯೊಂದು ಕಾಣಸಿಗುತ್ತದೆ. ಇದು ಹೆಚ್ಚು ಎತ್ತರಕ್ಕೆ ಹಾರಲಾರದು. ಅದರ ಕಾಲುಗಳು ಮೆದುವಾಗಿದ್ದು ಮಧ್ಯದಲ್ಲಿ ಜಲ್ಲಿಯಂತಹ ಚರ್ಮವಿರುತ್ತದೆ. ಅದು ಹಾರುವಾಗ ಅದು ಅಗಲಕ್ಕೆ ಬಿರಿಯುತ್ತದೆ. ಇದು ಮರದ ಮೇಲೆಯೇ ಇರುತ್ತದೆ. ಒಂದು ಮರದಿಂದ ಇನ್ನೊಂದು ಮರಕ್ಕೆ ಹಾರುತ್ತಿರುತ್ತದೆ. ಯಾರೋ ಇದನ್ನು ಹಿಡಿದು ಜಹಾಂಪನಾರ ಮುಂದೆ ತಂದಿದ್ದ. ಅಲ್ಲಿ ನೀರಿನಲ್ಲಿ ಬಿಟ್ಟ. ಅದು ಆಗಾಗ ತನ್ನ ತಲೆಯನ್ನು ನೀರಿನೊಳಗೆ ಹಾಕುತ್ತಿತ್ತು. ನೀರಿನೊಳಗೆ ಹೊಕ್ಕು ಮೀನಿನ ಬೇಟೆಯಾಡುತ್ತಿತ್ತು ಮತ್ತು ಕೂಡಲೇ ನೀರಿನಿಂದ ಹೊರಗೆ ಬರುತ್ತಿತ್ತು! ನದಿಗಳ ಬಳಿ ಮತ್ತು ಗುಡ್ಡಗಳ ಸುತ್ತಮುತ್ತ ಒಂದು ಕೋಳಿಯಂತಹ ಹಕ್ಕಿ ಕಾಣಸಿಗುತ್ತದೆ. ಇದು ತನಗಾಗಿ ಗೂಡೊಂದನ್ನು ಕಟ್ಟುತ್ತದೆ. ಇದರ ಹೊಟ್ಟೆ ದೊಡ್ಡದಾಗಿದ್ದು ಕುತ್ತಿಗೆ ನೀಳವಾಗಿದೆ. ತನ್ನ ಗರಿಯಿಂದ ಮರದ ಕೊಂಬೆಗಳ ಮೇಲೆ ನೇತಾಡುತ್ತಿರುತ್ತದೆ. ಮರದ ಒಂದು ಕೊಂಬೆಯಿಂದ ಇನ್ನೊಂದಕ್ಕೆ ಹಾರಾಡುತ್ತದೆ. ಒಂದು ಕೊಂಬೆಯನ್ನು ಹಿಡಿದು ತಲೆಕೆಳಗಾಗಿ ನೇತಾಡುತ್ತಿರುತ್ತದೆ. ಮರದ ಮೇಲೆ ಅದರ ಸಂತಾನವಿರುತ್ತದೆ. ಅಲ್ಲೇ ಅದು ರಾತ್ರಿಯನ್ನು ಕಳೆಯುತ್ತದೆ.

ಮಿಂಚುಹುಳದ ಬಗ್ಗೆ ಬರೆಯುತ್ತ ಇದೊಂದು ಹಕ್ಕಿ ರಾತ್ರಿ ಹೊತ್ತು ನಕ್ಷತ್ರದಂತೆ ಮಿನುಗುತ್ತಿರುತ್ತವೆ ಎಂದು ಶೀರಾಜಿ ಬರೆಯುತ್ತಾನೆ. ಇವು ಕೃಷ್ಣಾ ನದಿಯ ತಟದಲ್ಲಿ ಗುಂಪುಗುಂಪಾಗಿ ಕಂಡುಬರುತ್ತದೆ. ಕೃಷ್ಣಾ ನದಿಯ ದಡದಲ್ಲಿರುವ ಒಂದು ಜಮೀನಿನಲ್ಲಿ ಮರಳು ಇದೆ. ಈ ನೆಲದ ವಿಶೇಷತೆಯೆಂದರೆ ಅದು ಅತ್ತಿತ್ತ ತೇಲಾಡುತ್ತಿರುವಂತೆ ಅನಿಸುತ್ತದೆ. ಇದರ ಮೇಲೆ ಕಾಲಿಟ್ಟಾಗ ಕಾಲು ಹುಗಿಯುತ್ತ ಹೋಗುತ್ತದೆ.

ರಾಮೇಶ್ವರಂನಲ್ಲಿ ಒಂದು ಗುಡ್ಡವಿದೆ. ಅದು ಒಂದು ನವಿಲಿನ ಆಕಾರದಲ್ಲಿದೆ. ಅದರ ಹಿಂದೆ ಒಂದು ನದಿ ಹರಿಯುತ್ತಿದೆ. ಈ ನೀರು ಎಲ್ಲಿಂದ ಬರುತ್ತಿದೆ ಎಂದು ತಿಳಿಯಲು ಸಾಧ್ಯವಾಗುವುದಿಲ್ಲ.

(ಈ ಪುಟದಲ್ಲಿ ಹೆಚ್ಚಿನ ಭಾಗ ಓದಲು ಸಾಧ್ಯವಾಗದಷ್ಟು ಕೆಟ್ಟಿದೆ)

ರಾಮೇಶ್ವರಂನ ಮಳೆಗಾಲದಲ್ಲಿ ಮಳೆಯ ರಭಸ, ಅಟ್ಟಹಾಸ ಬಹಳ ಜೋರಾಗಿ ಇರುತ್ತದೆ. ಇಲ್ಲಿನ ಕುಂದಾಲು ತಾಲೂಕು ಪ್ರದೇಶದಲ್ಲಿರುವ ಒಂದು ವಿಶಾಲವಾದ ಸುಂದರ ತೋಟದಲ್ಲಿ ಎಲ್ಲ ವಿಧದ ಹೂವುಗಳಿವೆ. ಇಲ್ಲಿನ ಪ್ರಾಣಿಗಳು ಮಾತ್ರ ತುಂಬ ದುರ್ಬಲವಾಗಿವೆ.

ಕಲ್ಲುಗಳಿಂದ ದೊಡ್ಡ ಕಟ್ಟಗಳು ನಿರ್ಮಿಸಲಾಗುತ್ತದೆ. ಆದರೆ ಒಂದು ದೊಡ್ಡ ಕಲ್ಲನ್ನು ಕೊರೆದು ಹಿಂದಿಯಾಪುರದ (ಬಿಜಾಪುರದ) ಜಾಮಿಯಾ ಮಸೀದಿಯನ್ನು ಕಟ್ಟಲಾಗಿದೆ. ಹಿಜರಿ ವರ್ಷ ಸನ್ ೧೦೧೭ ಬಾದಶಾಹನ ಹತ್ತಿರದ ಸಂಬಂಧಿಗಳು ಒಂದು ವಿಶಿಷ್ಟವಾದ ವಸ್ತುವನ್ನು ಅವನ ಮುಂದೆ ಪ್ರದರ್ಶಿಸಿದರು. ಇದನ್ನು ಕಂಡು ಜಹಾಂಪನಾ ತುಂಬ ಚಕಿತರಾಗಿದ್ದರು. ಒಂದು ಕಲ್ಲಿನ ದೊಡ್ಡ ತುಂಡಿನಲ್ಲಿ ಒಳಗೆ ಕೊರೆದು ಒಂದು ಪ್ರಾಣಿಯ ಪ್ರತಿರೂಪವನ್ನು ಕೆತ್ತಿದ್ದರು. ಬಾದಶಾಹ ಇದನ್ನು ಕಂಡು ಬಹಳ ಸಂತಸ ಪಟ್ಟುಕೊಂಡ.

ಹಿಜರಿ ವರ್ಷ ೯೮೫ರಲ್ಲಿ ಜಹಾಂಪನಾರ ಮಹಲಿನಲ್ಲಿ ಒಂದು ದೊಡ್ಡ ರೀತಿಯ ಔತಣಕೂಟವನ್ನು ಏರ್ಪಡಿಸಿದ್ದರು. ಈ ಸಮಾರಂಭದಲ್ಲಿ ದೇಶದ ವಿವಿಧ ಭಾಗಗಳಿಂದ ಗಾಯಕರು, ನರ್ತಕರು, ಸಂಗೀತ ವಾದ್ಯವೃಂದದವರು ಬಂದಿದ್ದರು. ಈ ಸಮಾರಂಭಕ್ಕೆ ಬಂದ ಈ ಸಂಗೀತಕಾರರು ಎಷ್ಟೊಂದು ತಂಡದ ಮಂದಿ ಬಂದಿದ್ದರೆಂದರೆ ಬಾದಶಾಹರಿಗೆ ತಮ್ಮ ಕಲಾನೈಪುಣ್ಯವನ್ನು ತೋರಿಸಲು ಒಂದೊಂದು ತಂಡದವರು ಒಂದೊಂದು ದಿನದಂತೆ ಮೂರು ತಿಂಗಳು ಸಂಗೀತ ಕಛೇರಿಯನ್ನು ಬಿಡದೆ ನಡೆಸಬೇಕಾಯಿತು. ಜಹಾಂಪನಾರ ಔತಣಕೂಟದ ದಿನ ಕುರಿಗಳನ್ನು ಮಾಂಸಕ್ಕಾಗಿ ಹಲಾಲ್ ಮಾಡಿದ್ದವುಗಳಲ್ಲಿ ಒಂದು ಕುರಿಗೆ ನಿಯಮದಂತೆ ಕುತ್ತಿಗೆಗೆ ಚಾಕು ಹಾಕಿದರೂ ಬಹಳ ಹೊತ್ತಿನ ತನಕವೂ ಜೀವಂತವಾಗಿತ್ತು. ಜಹಾಂಪನಾ ಇದನ್ನು ಕಂಡು 'ಇದನ್ನು ನೀನು ಹೇಗೆ ಜುಬಾಹ್ ಮಾಡಿದೆ? ಇನ್ನೂ ಜೀವಂತವಾಗಿದೆಯಲ್ಲಾ?' ಎಂದು ಕೇಳಿದರು. ಅದಕ್ಕೆ ಜುಬಾಹ್ ಮಾಡಿದ ವ್ಯಕ್ತಿ 'ನಾನು ಸರಿಯಾದ ರೀತಿಯಲ್ಲೇ ಜುಬಾಹ್ ಮಾಡಿದ್ದೇನೆ. ಆದರೆ ಈ ಕುರಿಯು ಬಹಳ ದುರ್ಬಲವಾಗಿದೆ' ಎಂದ. ಬಾದಶಾಹನಿಗೆ ಅದರ ಸ್ಥಿತಿ ಕಂಡು ಕನಿಕರವಾಯಿತು. ಅವನು ವೈದ್ಯರನ್ನು ಕರೆದು ಇದಕ್ಕೇನಾದರೂ ಚಿಕಿತ್ಸೆ ಸಾಧ್ಯವೇ? ಎಂದು ಕೇಳಿದ. ವೈದ್ಯರು ಇದಕ್ಕೆ ಸಾಧ್ಯವಿದೆ

ಎಂದು ಔಷಧೋಪಚಾರ ನಡೆಸಿದರು. ಇದರಿಂದ ಸ್ವಲ್ಪ ದಿನಗಳು ಕಳೆದ ನಂತರ ಗುಣಮುಖವಾಗಿ ಸಾಮಾನ್ಯ ರೀತಿಯಲ್ಲಿ ಬದುಕಿತು.

ಈ ಕಾಲಘಟ್ಟದಲ್ಲಿ ಒಂದು ವಿಶೇಷ ಹುಂಜವೂ ಇತ್ತು. ಅದು ಕೂಗುವಾಗ ಆದಾನ್(ನಮಾಜಿನ ಪ್ರಾರ್ಥನೆಯ ಕರೆ)ನಂತೆ ಕೇಳುತ್ತಿತ್ತು. ಅದು ಒಮ್ಮೊಮ್ಮೆ ಕಲ್ಮಾ ಕೂಡ ಹೇಳುತ್ತಿತ್ತು! ಇದನ್ನು ಕಾಣಲು ಜನರ ಹಿಂಡು ಧಾವಿಸುತ್ತಿತ್ತು. ಇದರಿಂದಾಗಿ ಅನೇಕರು ಇಸ್ಲಾಂ ಧರ್ಮವನ್ನು ಸ್ವೀಕರಿಸಿದರೆಂದೂ ಹೇಳಲಾಗಿದೆ.

ಈ ಕಿತಾಬ್ 'ತಝ್ಕಿರತುಲ್ ಮುಲುಕ್' ಇಲ್ಲಿಗೆ ಮುಕ್ತಾಯಗೊಂಡಿತು.
ಇದನ್ನು ಬರೆದವರು ರಫಿಯುದ್ದೀನ್ ಬಿನ್ ಇಬ್ರಾಹಿಂ ಶೀರಾಜಿ.
೨೪ನೇ ಜಮಾದಿಲ್ ಆಖರ್(ಜಮಾದಿಸ್ಸಾನಿ) ಹಿಜರಿ ವರ್ಷ ೧೧೪೮.

■ ■

ಆದಿಲಶಾಹಿ ಅರಸು ಮನೆತನ ವಿಜಾಪುರದವರಾದ ನಮಗೆಲ್ಲ ಒಂದು ಹೆಮ್ಮೆ. ರಾಜಕೀಯ ಇತ್ಯಾದಿಗಳನ್ನು ಬಿಟ್ಟರೂ ಶಿಲ್ಪ-ಸಾಹಿತ್ಯಕ್ಷೇತ್ರಗಳಿಗೆ ಅದು ನೀಡಿದ ಕೊಡುಗೆ ಲೋಕಮಾನ್ಯವಾದುದು. ಈ ಕೊಡುಗೆಗಳಲ್ಲಿ ಶಿಲ್ಪದ ಬಗ್ಗೆ ಆಗಾಗ ಆಸಕ್ತಿ ವಹಿಸಿದ ನಾವು, ಸಾಹಿತ್ಯವನ್ನು ಅಲಕ್ಷಿಸುತ್ತ ಬಂದಿದ್ದೇವೆ. ಇದಕ್ಕೆ ಕಾರಣ, ಈ ಸಾಹಿತ್ಯ ದಖಣಿ ಉರ್ದು, ಪರ್ಶಿಯನ್‌ಗಳೆಂಬ ಅಪರಿಚಿತ ಭಾಷೆಗಳಲ್ಲಿರುವುದು ಮತ್ತು ಬಹಳಷ್ಟು ಕೃತಿಗಳು ಅಪ್ರಕಟಿತವಾಗಿರುವುದು. ಹೀಗಿದ್ದೂ ನಮ್ಮ ಸಾಂಸ್ಕೃತಿಕ ಆಸ್ತಿಯಾಗಿರುವ ಈ ಸಾಹಿತ್ಯದ ರಕ್ಷಣೆ, ಅನುವಾದ, ಪ್ರಸಾರ ನಮ್ಮ ಕರ್ತವ್ಯವಾಗಿದೆ.

ಇಂತಹ ಕಾರ್ಯಗಳನ್ನು ಪೂರೈಸುತ್ತ ಬಂದ ನಮ್ಮ 'ವಚನಪಿತಾಮಹ ಡಾ॥ ಫ.ಗು. ಹಳಕಟ್ಟಿ ಸಂಶೋಧನ ಸಂಸ್ಥೆ'ಯ ಮೂಲಕ ಈ ಕರ್ತವ್ಯವನ್ನು ಈಡೇರಿಸಲು ಯೋಚಿಸಿದ ಫಲ 'ಆದಿಲಶಾಹಿ ಸಾಹಿತ್ಯ ಪ್ರಕಟನ ಯೋಜನೆ'. ಈ ಕಾರ್ಯ ಭಾವಿಸಿದಷ್ಟು ಸುಲಭವಲ್ಲ. ಅಲ್ಲಲ್ಲಿ ಚದರಿ ಹೋಗಿರುವ ಪ್ರಕಟಿತ-ಅಪ್ರಕಟಿತ ಕೃತಿಗಳನ್ನು ಶೋಧಿಸುವ, ಸಂಗ್ರಹಿಸುವ, ಅನುವಾದಿಸುವ, ಪರಿಷ್ಕರಿಸಿ ಪ್ರಕಟಿಸುವ ಹಂತಗಳಲ್ಲಿ ವಿದ್ವಾಂಸರು ಶ್ರಮಿಸಬೇಕಾಗುತ್ತದೆ. ನಮ್ಮ ಸುದೈವಕ್ಕೆ ಸಮರ್ಥ ಯೋಜಕರಾದ ಡಾ.ಎಂ.ಎಂ.ಕಲಬುರ್ಗಿಯವರು, ಆದಿಲಶಾಹಿ ಅಭ್ಯಾಸಿಗಳಾದ ಡಾ. ಕೃಷ್ಣ ಕೊಲ್ಹಾರಕುಲಕರ್ಣಿಯವರು ಈ ಯೋಜನೆಯ ಹೊಣೆಹೊತ್ತಿದ್ದಾರೆ. ಸಲಹಾಸಮಿತಿಯ ಸದಸ್ಯರು-ಅನುವಾದಕರು ಈ ಕಾರ್ಯದಲ್ಲಿ ಆಸ್ಥೆವಹಿಸಿದ್ದಾರೆ. ಇವರೆಲ್ಲರ ಸಹಯೋಗದಲ್ಲಿ ಕನ್ನಡಕ್ಕೆ ಹೊಸದೊಂದು ಆಕರ ಸಂಪತ್ತು ಹೊರಬರುತ್ತಲಿರುವುದು ಸಂತೋಷದ ಸಂಗತಿಯಾಗಿದೆ.

**ಎಂ. ಬಿ. ಪಾಟೀಲ**

ಅಧ್ಯಕ್ಷರು, ಬಿ.ಎಲ್.ಡಿ.ಇ ಸಂಸ್ಥೆ, ವಿಜಯಪುರ
ಜಲಸಂಪನ್ಮೂಲ ಸಚಿವರು, ಕರ್ನಾಟಕ ಸರಕಾರ

ಮುದ್ರಣ : ಪ್ರಿಂಟ್ ಪಾಯಿಂಟ್, ಮೊ : 97390 67359